ಕರ್ನಾಟಕ ಸರ್ಕಾರ

ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ಪದ್ಯ ಸಾಹಿತ್ಯ

೧೦



ಕರಾವಳಿ
ಬೇಸಾಯದ ಹಾಡುಗಳು

ಸಂ. ಶ್ರೀಮತಿ ಸಾಯಿಗೀತಾ

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ – ೩೯

ಪದ್ಯ ಸಾಹಿತ್ಯ ಪ್ರಕಾರ – ೨೦

ಕರಾವಳಿ ಬೇಸಾಯದ ಹಾಡುಗಳು

ಸಂಪಾದಕರು

ಶ್ರೀಮತಿ. ಸಾಯಿಗೀತಾ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು – ೫೬೦ ೦೦೨

'Karavali Besayada Hadugalu', Edited by **Smt. Sayigeeta,**
Published by K.A.Dayananda, Director, Dept. of Kannada and Culture, Kannada Bhavana, J.C.Road, Bangalore-560002.

© ಕಾಯ್ದಿರಿಸಿದೆ

ಆವೃತ್ತಿಯ ಹಕ್ಕು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಪ್ರಥಮ ಮುದ್ರಣ : ೨೦೧೪
ಪುಟಗಳು : 1 + ೬೦೬ = ೬೫೬
ಪ್ರತಿಗಳು : ೧೦೦೦
ಬಿಡಿ ಪ್ರತಿ ಬೆಲೆ : ರೂ. ೫೦/-
Print : 2014
Pages : 1 + 606 = 656
Copies : 1000
Price : Rs. 50/-

ಪ್ರಕಾಶಕರು :
ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ
ಶ್ರೀ ಕೆ.ಎ. ದಯಾನಂದ, ಕ.ಆ.ಸೇ. ಅವರಿಂದ ಪ್ರಕಟಿತ
ಸಹಕಾರ : ಶ್ರೀ ಬಿ.ಎನ್. ಪರಡ್ಡಿ, ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಸಂಯೋಜಕರು : **ಡಾ. ಚಕ್ಕೆರೆ ಶಿವಶಂಕರ್**

ಮುಖಪುಟ ವಿನ್ಯಾಸ : **ಪ. ಸ. ಕುಮಾರ್**

ಮುದ್ರಕರು :
ಗೀತಾಂಜಲಿ ಗ್ರಾಫಿಕ್ಸ್
ನಂ. ಬಿ–71, ನ್ಯೂ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್,
6ನೇ ಬಡಾವಣೆ, ರಾಜಾಜಿನಗರ, ಬೆಂಗಳೂರು – 560 010.
ದೂರವಾಣಿ : 23404232

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಸಮಿತಿ

ಅಧ್ಯಕ್ಷರು

ಪ್ರೊ. ಹಿ.ಶಿ. ರಾಮಚಂದ್ರೇಗೌಡ

ಸದಸ್ಯರು

ಡಾ. ಸೋಮಶೇಖರ ಇಮ್ರಾಪುರ

ಡಾ. ಎಚ್.ಜೆ. ಲಕ್ಕಪ್ಪಗೌಡ

ಡಾ. ಎಂ. ಪ್ರಭಾಕರ ಜೋಶಿ

ಡಾ. ತೀ.ನಂ. ಶಂಕರನಾರಾಯಣ

ಶ್ರೀಮತಿ ಶಾಂತಿನಾಯಕ

ಡಾ. ಅರವಿಂದ ಮಾಲಗತ್ತಿ

ಡಾ. ಮ.ಗು. ಬಿರಾದಾರ

ಪ್ರೊ. ಎ.ವಿ. ನಾವಡ

ಡಾ. ವೆಂಕಟೇಶ ಇಂದ್ವಾಡಿ

ಸದಸ್ಯ ಕಾರ್ಯದರ್ಶಿ

ಶ್ರೀ ಕೆ.ಎ. ದಯಾನಂದ, ಕ.ಆ.ಸೇ.,

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪದನಿಮಿತ್ತ ಸದಸ್ಯರು

ಶ್ರೀ ಪಿಚ್ಚಳ್ಳಿ ಶ್ರೀನಿವಾಸ

ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ನಾಡೋಜ ಬೆಳಗಲ್ಲು ವೀರಣ್ಣ

ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಟಿ. ತಿಮ್ಮೇಗೌಡ

ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು
ಶ್ರೀ ಪಿ.ಎನ್. ಶ್ರೀನಿವಾಸಚಾರಿ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು
ಶ್ರೀ ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀ ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂಚಾಲಕರು
ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ಜಂಟಿ ನಿರ್ದೇಶಕರು (ಆಡಳಿತ)

ಶ್ರೀ ಬಲವಂತರಾವ್ ಪಾಟೀಲ್
ಜಂಟಿ ನಿರ್ದೇಶಕರು (ಸು.ಕ.)

ಶ್ರೀ ಬಿ.ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

ಶ್ರೀ ಎನ್. ಹರಿಕುಮಾರ್
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಿದ್ಧರಾಮಯ್ಯ
ಮುಖ್ಯಮಂತ್ರಿಗಳು

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೨೮/೨೦೧೪

ದಿನಾಂಕ : ೦೪–೦೨–೨೦೧೪

ಸಂದೇಶ

ಸಮಾಜ ನಿಂತ ನೀರಲ್ಲ. ಎಲ್ಲ ಕಾಲಘಟ್ಟಗಳಲ್ಲಿ ಚಾರಿತ್ರಿಕ ಭೌಗೋಳಿಕ ಒತ್ತಡಗಳಿಂದ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದು ಎದ್ದು ಕಾಣಿಸುವ ವೇಗದಲ್ಲಿ ಆಗುವಂಥದ್ದೇನಲ್ಲ. ಮಂದಗತಿಯಲ್ಲಿಯೇ ಚಲನಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ.

ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವೂ ಇಂತಹ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿರುತ್ತದೆ. **ಬದಲಾವಣೆ ಜಗದ ನಿಯಮ** ಎಂಬ ಮಾತಿಗನುಗುಣವಾಗಿ ಎಲ್ಲ ಸೃಜನಶೀಲ ಕಲೆಗಳೂ ಆಯಾ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುತ್ತವೆ.

ಸಮುದಾಯ ಹಿತವನ್ನೇ ತನ್ನೊಡಲಲ್ಲಿ ತುಂಬಿಕೊಂಡಿರುವ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳಲ್ಲೂ ಇಂತಹ ಚಲನಶೀಲತೆ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುತ್ತದೆ. ಆಯಾಕಾಲದ ಸಮಾಜಕ್ಕೆ ಪ್ರಸ್ತುತವಲ್ಲದ್ದು ಮರೆಯಾಗಿ ಅದರ ಜಾಗದಲ್ಲಿ ಹೊಸದು ಸೃಷ್ಟಿಯಾಗುತ್ತಿದ್ದರೂ ಚಾರಿತ್ರಿಕ ದೃಷ್ಟಿಯಿಂದ, ಮೌಲಿಕ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನದ ಕಣಜವಾಗಿರುವ ಜನಪದ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯು ಹೊರತರುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ.

ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎಂಬ ವ್ಯಾಖ್ಯಾನ ನಮ್ಮ ಜನಪದ ಸಾಹಿತ್ಯ ಮತ್ತಿತರ ಸಂಗತಿಗಳ ಸಾರವಾಗಿದೆ. ಕನ್ನಡ ನೆಲ, ಜಲ, ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು

ನಿಜಕ್ಕೂ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿವೆ. **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ** ಯೋಜನೆಯ ಈ ಪುಸ್ತಕಗಳನ್ನು ನಾಡಿನ ಜನ ಸಮುದಾಯ ಆದರದಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನ್ನದು.

ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಹೊರತರಲು ಕರ್ನಾಟಕ ಸರ್ಕಾರದ ಜೊತೆ ಜೊತೆಗೆ ಯೋಜನೆಯ ಯಶಸ್ವಿಗಾಗಿ ಶ್ರಮಿಸುತ್ತಿರುವ ಯೋಜನೆಯ ಅಧ್ಯಕ್ಷರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಹಾಗೂ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಲು ಇಚ್ಛಿಸುತ್ತೇನೆ.

ನೂರು ಸಂಪುಟಗಳ ಈ ಯೋಜನೆಯಲ್ಲಿ ಈಗಾಗಲೇ ೩೬ ಸಂಪುಟಗಳು ಹೊರಬಂದಿವೆ. ಇನ್ನೂ ೬೪ ಸಂಪುಟಗಳು ಸದ್ಯದಲ್ಲಿಯೇ ಪ್ರಕಟಗೊಳ್ಳಲಿವೆ. ಈ ಮಹತ್ವದ ಯೋಜನೆಗೆ ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.



ಸಿದ್ಧರಾಮಯ್ಯ

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ :
೨೨೨೫೫೨೮೨, ೨೨೦೩೩೪೯೯

ಕೊಠಡಿ ಸಂಖ್ಯೆ : ೨೫೨, ೨ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ. ಮಮಕಸಂಸ/೨೮೨/೨೦೧೪

ದಿನಾಂಕ: ೨೮-೦೧-೨೦೧೪

ಸಂದೇಶ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ, ಉದ್ದೀಪನಗೊಳಿಸುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆ. ಕನ್ನಡ ಭಾಷೆ ಸಾಹಿತ್ಯ ಮತ್ತು ಇತರ ಎಲ್ಲಾ ಕಲೆಗಳ ಅಭಿವೃದ್ಧಿಗೆ ಅಂದಿನಿಂದ ಇಂದಿನವರೆಗೂ ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡು ಇಲಾಖೆ ಕಾರ್ಯಪ್ರವೃತ್ತವಾಗಿದೆ. ಈಗ **"ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"** ಎಂಬ ಬೃಹತ್ತಾದ ಯೋಜನೆ ರೂಪಿಸಿ ಜಾನಪದವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಜಾನಪದ ಮೌಖಿಕ ಪರಂಪರೆಯ ಮೂಲಕ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುವುದಾದರೂ ಕೆಲವು ಅಪರೂಪದ ಮಾಹಿತಿಗಳು, ಸಾಹಿತ್ಯಕ ಮಾದರಿಗಳು ಅದೇ ಪ್ರಮಾಣದಲ್ಲಿ ವರ್ಗಾವಣೆಯಾಗುವುದಿಲ್ಲ. ಒಬ್ಬ ಅಭಿಜಾತ ಕಲಾವಿದ ಹಾಡಿದಂಥ ರೂಪ ಮತ್ತು ಶೈಲಿಯನ್ನು ಆತನ ಸಂತತಿಯೇ ಅನುಸರಿಸಲಾಗಿರುವುದಿಲ್ಲ. ಆ ಒಂದು ಅನನ್ಯತೆ ಅವರಿಗೇ ಮೀಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಂಥ ಅಪರೂಪದ ಸಂಗತಿಯನ್ನು ಉಳಿಸಲು ಮತ್ತು ತೌಲನಿಕವಾಗಿ ಅಧ್ಯಯನ ಮಾಡಲು ದಾಖಲೀಕರಣಗೊಳಿಸುವುದು ಅನಿವಾರ್ಯವಾಗುತ್ತದೆ.

ಜಾನಪದ ಬದುಕಿನ ಅನಂತ ಮುಖಗಳನ್ನು ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ನಂಬಿಕೆ, ನಡವಳಿಕೆ, ಆಚರಣೆ, ಸಂಪ್ರದಾಯಗಳು, ಎಲ್ಲಕ್ಕಿಂತ ಹೆಚ್ಚಾಗಿ ಜೀವನ ಮೌಲ್ಯಗಳು ತುಂಬಿರುವ ಕ್ಷೇತ್ರ. ಅಪ್ರಸ್ತುತವಾಗಿರುವುದನ್ನು

ಇಂದಿನ ದಿನಮಾನಗಳಲ್ಲಿ ಅನುಸರಿಸಬೇಕಾಗಿರುವುದಿಲ್ಲ. ಅದು ಅಪ್ರಸ್ತುತವಾದುದು ಎಂದು ತಿಳಿದುಕೊಳ್ಳುವುದಕ್ಕಾದರೂ ಅದು ದಾಖಲೀಕರಣಗೊಳ್ಳಬೇಕು. ಯಾವುದೇ ಒಂದು ಮೌಲ್ಯ ಕೇವಲ ಒಬ್ಬರಿಂದ ಹೇರಲ್ಪಟ್ಟಿರುವುದಿಲ್ಲ. ಹಲವು ಜನ ಚಿಂತಕರು ಹಲವಾರು ವರ್ಷಗಳ ಕಾಲ ಅದನ್ನು ಜೀವನದಲ್ಲಿ ಅಳವಡಿಸಿ ಸಾಣೆ ಹಿಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎಂಬ ಮಾತು ಬಂದಿರುವುದು.

ಇಂತಹ ಅಪರೂಪದ ಮಾಹಿತಿಯ ಜಾನಪದವನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಕೆಲಸಕ್ಕೆ ಕೈಹಚ್ಚಿರುವ ಎಲ್ಲ ವಿದ್ವಾಂಸರಿಗೆ, ಎಲ್ಲ ಅಧಿಕಾರಿವರ್ಗದವರಿಗೆ ಅಭಿನಂದಿಸುತ್ತಾ ವಿದ್ವತ್‌ವಲಯ ಈ ಯೋಜನೆಯ ಸಂಪುಟಗಳನ್ನು ಸದುಪಯೋಗಪಡಿಸಿಕೊಳ್ಳಲೆಂದು ಆಶಿಸುತ್ತೇನೆ.



ಉಮಾಶ್ರೀ

ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಿಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ–ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ.ಹಿ.ಶಿ.ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ. ತೀ.ನಂ. ಶಂಕರನಾರಾಯಣ, ಶ್ರೀಮತಿ ಶಾಂತಿನಾಯಕ, ಡಾ.ಎಂ.ಪ್ರಭಾಕರ ಜೋಶಿ, ಶ್ರೀ ಅರವಿಂದ ಮಾಲಗತ್ತಿ, ಡಾ. ಮ.ಗು.ಬಿರಾದಾರ, ಪ್ರೊ. ಎ.ವಿ. ನಾವಡ, ಡಾ. ವೆಂಕಟೇಶ ಇಂದ್ವಾಡಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಸಲಹೆ–ಸಹಕಾರ ಅಮೂಲ್ಯವಾದುವು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಮತ್ತು ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'**ಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

ಕೆ.ಎ. ದಯಾನಂದ, ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದವೇ ಜಗತ್ತಿನ ಆದಿಮ ಉಸಿರು ಮತ್ತು ಸಂಸ್ಕೃತಿ. ಇಡೀ ಜಗತ್ತಿನ ಮೊಟ್ಟ ಮೊದಲ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮತ್ತು ಧರ್ಮವು ಕೂಡ ಜಾನಪದ ಮೂಲದ್ದೇ. ಜಗತ್ತಿನಾದ್ಯಂತ ಇಂದಿನ ಮುಖ್ಯ ಪ್ರವಾಹದ ಎಲ್ಲ ವೈವಿಧ್ಯಮಯ ಕಲೆ–ಧರ್ಮಗಳು ಕುಡಿಯೊಡೆದಿದ್ದು ಸಹ ಅಲ್ಲಲ್ಲಿನ ಜಾನಪದ ವೈಶಿಷ್ಟ್ಯಗಳಿಂದಲೇ ಎಂಬುದು ಎಲ್ಲ ಇತಿಹಾಸಕಾರರ ಮತ್ತು ಸಂಸ್ಕೃತಿ ಚಿಂತಕರ ಒಮ್ಮತಾಭಿಪ್ರಾಯವಾಗಿದೆ. ದುರಂತವೇನೆಂದರೆ ಜಾನಪದ ಪರಂಪರೆಯಲ್ಲಿನ ಅಲಿಪಿ ಮತ್ತು ಘೋಂಡಿ ಲಕ್ಷಣದ ಕಾರಣದಿಂದಾಗಿ ಜಾನಪದದ ಅನೇಕ ಸಾಂಸ್ಕೃತಿಕ ಮೂಲದ ಮಹತ್ವದ ಅಂಶಗಳು, ಆಚರಣಾತ್ಮಕ ಅಭಿವ್ಯಕ್ತಿಗಳು ಇಂದಿನವರೆಗೂ ಯಾವ ರೂಪದಲ್ಲೂ ದಾಖಲಾಗದೇ ಹೋದದ್ದು ಕೇವಲ ಜಾನಪದ ಜಗತ್ತು ಮತ್ತು ವಿದ್ವಾಂಸರಿಗಷ್ಟೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಕಾರರಿಗೂ ಆಗಿರುವ, ಎಂದೆಂದಿಗೂ ತುಂಬಲಾರದಂತಹ ಬಹುದೊಡ್ಡ ನಷ್ಟವಾಗಿದೆ. ಈ ಅಪಾಯ ಈ ಕ್ಷಣಕ್ಕೂ ಮುಂದುವರೆದಿದೆ ಯಲ್ಲದೇ ಇಂದಿನ ಅತ್ಯಾಧುನಿಕತೆಯ ವೇಗ ಮತ್ತು ಧಾವಂತದ ಸಂದರ್ಭದಲ್ಲಿ ಅಳಿದುಳಿದ ಮತ್ತೆಷ್ಟೋ ಸಾಹಿತ್ಯ, ಕಲೆ ಮತ್ತು ಆಚರಣೆಗಳು ಆಧುನಿಕತೆಯ ವೇಗ ಸಂಸ್ಕೃತಿಗೆ ಅನುಗುಣವಾದ ವೇಗದಲ್ಲೇ ನಮ್ಮಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಇದು ಇಡೀ ಜಗತ್ತಿನ ಜಾನಪದ ವಲಯದ ಎದುರಿರುವ ಬಹು ದೊಡ್ಡ ಸಂದಿಗ್ಧ ಮತ್ತು ಸವಾಲಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ವರ್ತಮಾನದ ಈ ಕ್ಷಣದಲ್ಲಿ ಜಾನಪದೀಯ ಅಭಿವ್ಯಕ್ತಿಗಳನ್ನೆಲ್ಲಾ ದಾಖಲಿಸಿಡುವುದರ ಮೂಲಕವೇ ನಾವು ರಕ್ಷಿಸಿ, ಮುಂದಿನ ತಲೆಮಾರುಗಳಿಗೆ ದಾಟಿಸಬೇಕಾದ ತುರ್ತು ಇದೆ.

ಜನಪದ ಸಾಹಿತ್ಯವೆಂಬುದು ಅಲಿಪಿ ಸಾಹಿತ್ಯ. ಅದನ್ನು ಸಂಗ್ರಹಿಸಿ ಲಿಪಿಬದ್ಧಗೊಳಿಸುವುದರ ಮೂಲಕ ಕಾಪಿಡಬಹುದಾಗಿದೆ. ಆದರೆ ಜಾನಪದದ ಬಹುತೇಕ ಕಲೆ ಮತ್ತು ಆಚರಣೆಗಳು ಲಿಪಿಬದ್ಧಗೊಳಿಸಲಾಗದಂತಹವು. ಅವು ಬಹುತೇಕ ಧಾರ್ಮಿಕ ನೆಲೆಯ ಶ್ರದ್ಧಾವಂತಿಕೆಯ ಅಭಿವ್ಯಕ್ತಿಗಳು. ಅಂತಹ

ಆಚರಣೆಗಳನ್ನು ಜಾನಪದ ವಿದ್ವಾಂಸನೊಬ್ಬ ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದು; ಇಲ್ಲವೇ ಅದನ್ನು ತನ್ನ ಗ್ರಹಿಕೆಯ ಅನುಸಾರವಾಗಿ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸಬಹುದು. ಆದರೆ ಅಂತಹ ನಿರ್ದಿಷ್ಟ ವಿದ್ವಾಂಸನೊಬ್ಬನ ಗ್ರಹಿಕೆ, ವಿಶ್ಲೇಷಣೆಗಳು ಅಂತಿಮವಾಗಿ ಆತನ ತಿಳಿವಳಿಕೆಯ ಮಿತಿಯೊಳಗಿನವೇ ಆಗಿರಬಲ್ಲದೇ ಹೊರತು ಅಂತಿಮ ಸತ್ಯವಲ್ಲದಿರಬಹುದು. ಜಾನಪದ ಆಚರಣೆಯೊಂದನ್ನು ಗಮನಿಸುವ ಕ್ರಮದಲ್ಲಿನ ಅನೇಕ ಸೂಕ್ಷ್ಮಗಳು ವಿದ್ವಾಂಸರಿಂದ ವಿದ್ವಾಂಸರಿಗೆ ಭಿನ್ನವೂ ಆಗಿರಬಲ್ಲವು. ಹಾಗಾಗಿ ಆಯಾಯಾ ಕಾಲದ ಪ್ರತಿಯೊಬ್ಬ ಆಸಕ್ತ ಜಾನಪದ ವಿದ್ವಾಂಸನೂ ತನಗೆ ಸಾಂಸ್ಕೃತಿಕವಾಗಿ ಮುಖ್ಯ ಎನಿಸುವ ಆಚರಣೆ, ಕಲೆಯಂತಹ ವಿವಿಧ ಪ್ರಕಾರಗಳ ವೈಶಿಷ್ಟ್ಯವನ್ನು ಪ್ರತ್ಯಕ್ಷವಾಗಿಯೇ ಕಂಡು ಅನುಭವಿಸಿ ಬರೆದಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇದ್ದೇ ಇದೆ.

ಆದರೆ ಈಗಾಗಲೇ ನಾವು ಗಮನಿಸಿರುವಂತೆ ಅನೇಕ ಅನನ್ಯವೆಂಬಂತಹ ಜಾನಪದೀಯ ಆಚರಣೆಗಳು ಆಧುನಿಕತೆಯ ಅನ್ಯಾಕ್ರಮಣಶೀಲತೆಯಿಂದಾಗಿ ನೆನಪುಗಳಿಂದಲೂ ಮಾಸಿ ಹೋಗುವಷ್ಟು ವಿನಾಶದ ಹಾಗೂ ಅಳಿವಿನ ಅಂಚಿನಲ್ಲಿವೆ. ಕೆಲವು ಜನಪ್ರಿಯವಾದ ಕಲೆಗಳನ್ನು ಕಲಿಕಾ ಶಿಬಿರಗಳ ಮೂಲಕ ಆಸಕ್ತ ಯುವಕ/ಯುವತಿಯರಿಗೆ ಕಲಿಸುವುದರ ಮೂಲಕವಾದರೂ ಮುಂದುವರೆಯುವಂತೆ ಮಾಡಬಹುದಾಗಿದೆ. ಆದರೆ ನಿರ್ದಿಷ್ಟ ಪಂಗಡದ ನಿರ್ದಿಷ್ಟ ವ್ಯಕ್ತಿಗಳೇ ಪಾತ್ರವಹಿಸುವುದರ ಮೂಲಕವಷ್ಟೇ ಮಂದುವರೆಯಬೇಕಾದ ಅನಿವಾರ್ಯತೆಯ ಆಚರಣೆಗಳನ್ನು ನಾವು ಉಳಿಸಿಕೊಳ್ಳುವ ಬಗೆಯಾದರೂ ಯಾವುದು? ಉದಾಹರಣೆಗೆ; ಈ ನೆಲದ ಆದಿಮ ಧರ್ಮದ ಬಗ್ಗೆ ಅನೇಕ ರಹಸ್ಯಗಳನ್ನು ಉಸುರುವ ಜೇನುಕುರುಬರ ಕೊಂಟು ಪೂಜೆಯ ಆಚರಣೆ, ದಕ್ಕಲರು, ಮಾಸ್ತೀಕರು ಮತ್ತು ಸಿಂಧ್‌ಮಾದಿಗರ ತಂಗಡಿ ದ್ಯಾವ್ರದ ಆಚರಣೆ, ಮೋಡಿ ಹಾಕುವವರ ತಂತ್ರಗಳು, ಮೇರರ ಕಾಡ್ಯಾನಾಟ ಇತ್ಯಾದಿಗಳು ಅಪರೂಪವಾಗುತ್ತಿದೆಯಷ್ಟೇ ಅಲ್ಲದೆ ಕೊಂಟು ಪೂಜೆ, ತಂಗಡಿ ದ್ಯಾವ್ರದಂತಹ ವಿಶಿಷ್ಟವೂ, ಮಹತ್ವದವೂ ಆದ ಆಚರಣೆಗಳು ಈಗಾಗಲೇ ಕಣ್ಮರೆಯಾಗುತ್ತಿವೆ. ಇಂತಹುದೇ ಮತ್ತೆಷ್ಟೋ ಸಾಂಸ್ಕೃತಿಕ ಮಹತ್ವದ ಆಚರಣೆಗಳ ಬಗೆಗಂತೂ ಮಾಹಿತಿ ಕೂಡ ಸಿಗದಂತಾಗಿದೆ. ಬಾಲ್ಯದಲ್ಲಿ ಸ್ವತಃ ನಾವೇ ಪ್ರತ್ಯಕ್ಷವಾಗಿ ಕಂಡುಂಡ ಅನೇಕ ಕಲಾತ್ಮಕ ಜಾನಪದೀಯ ಆಚರಣೆಗಳು ಇಂದು ನಮ್ಮ ನಂತರದ ಪೀಳಿಗೆಯವರ ಪಾಲಿಗೆ ಇಲ್ಲದಂತಾಗಿರುವುದನ್ನು ನಾವೇ ಕಾಣುತ್ತಿದ್ದೇವಲ್ಲ? ಈ ಹಿನ್ನೆಲೆಯಲ್ಲಿ ಈಗಾಗಲೇ ಅಳಿವಿನ ಅಂಚಲ್ಲಿರುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೂಲದ ಕೆಲವಾದರೂ ಅತಿ ಮುಖ್ಯ ಆಚರಣೆಗಳನ್ನು ನಾವು

ಈ ಡಿಜಿಟಲ್ ಯುಗದಲ್ಲಿ, ಯಾವ ತಂತ್ರಜ್ಞಾನ ಜಾನಪದದ ಅಳಿವಿಗೆ ಕಾರಣವಾಗುತ್ತಿದೆಯೋ ಅದೇ ತಂತ್ರಜ್ಞಾನದ ನೆರವಿನಿಂದಲೇ ದೃಶ್ಯೀಕರಿಸಿ ಮುಂದಿನ ತಲೆಮಾರಿನ ಅಧ್ಯಯನಕಾರರ ಪಾಲಿಗೆ ರಕ್ಷಿಸಿಡಬೇಕಾದ ತುರ್ತು ಮತ್ತು ಒತ್ತಡವೇರ್ಪಟ್ಟಿದೆಯೆಂಬುದೇ ನನ್ನ ಸ್ಪಷ್ಟ ತಿಳಿವಳಿಕೆ. ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೋರಿರುವ ಕಾಳಜಿಯನ್ನೇ ವಿಸ್ತರಿಸಿ, ಜಾನಪದ ಆಚರಣೆಗಳ ದೃಶ್ಯ ದಾಖಲಾತಿಯ ವಿಚಾರದಲ್ಲೂ ಮುಂದುವರೆಸಬೇಕೆಂಬುದು ನನ್ನ ವಿನಮ್ರ ಮನವಿ.

ಈ ಹಿನ್ನೆಲೆಯಲ್ಲಿ ಮೌಖಿಕ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಜಾನಪದ ಪರಂಪರೆಯನ್ನು ಜೀವಂತವಾಗಿಡುವ ಒಂದು ಪಾರ್ಶ್ವ ಪ್ರಯತ್ನ ಮಾತ್ರ. ಆದರೆ ಈ ಪ್ರಯತ್ನವು ಕೂಡ ತನ್ನದೇ ಆದ ಮಹತ್ವವನ್ನು ಒಳಗೊಂಡಿದೆಯಲ್ಲದೇ ಅದರ ಕೊಡುಗೆಯನ್ನು ಯಾವ ರೀತಿಯಲ್ಲೂ ನಗಣ್ಯವಾಗಿಸಲು ಸಾಧ್ಯವಿಲ್ಲ. ಆದರೆ ಬದಲಾಗುತ್ತಿರುವ ಅತ್ಯಾಧುನಿಕ ತಾಂತ್ರಿಕಾವಿಷ್ಕಾರಗಳಿಗೆ ಅನುಗುಣವಾಗಿಯೇ ಸ್ಪಂದಿಸಿ ನಾವು ಇನ್ನು ಮುಂದಿನ ಜಾನಪದೀಯ ಯೋಜನೆಗಳಲ್ಲಿ ಕಲೆ, ಕಲಾವಿದರು ಮತ್ತು ಆಚರಣೆಗಳನ್ನು ದೃಶ್ಯ ರೂಪದಲ್ಲಿಯೂ ದಾಖಲಿಸಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇರುವುದನ್ನು ಮನಗಾಣಬೇಕಾಗಿದೆ. ಈ ಬಗ್ಗೆ ತಜ್ಞ ವಿದ್ವಾಂಸರು ಇನ್ನಾದರೂ ಗಮನ ಹರಿಸಬೇಕಿದೆ.

ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಎಂಬ ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಅಡಿಯಲ್ಲಿ ೧೦೦ ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಲು ತೀರ್ಮಾನಿಸಿತು.

ಕರ್ನಾಟಕ ಜಾನಪದ ಅಕಾಡೆಮಿಯು ಸಹಜವಾಗಿಯೇ ಈ ಬೃಹತ್ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊತ್ತು ಅದನ್ನು ಕಾಲಾನುಕ್ರಮದಲ್ಲಿ ಅನುಷ್ಠಾನಗೊಳಿಸಿ, ಸಂಪುಟಗಳನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದೆ. ಜನಪದ ಸಾಹಿತ್ಯ ಪರಂಪರೆಯಲ್ಲಿನ ಪ್ರಕಾರ ವಿಶಿಷ್ಟತೆ, ಭೌಗೋಳಿಕ ವ್ಯಾಪ್ತಿ ಮತ್ತು ಇತಿಹಾಸವನ್ನು ಗಮನದಲ್ಲಿರಿಸಿಕೊಂಡೇ ನಿರ್ದಿಷ್ಟ ಸಂಪುಟಗಳ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ನಾಡಿನ ಹೆಸರಾಂತ ಜಾನಪದ ತಜ್ಞರು ಅಮೂಲ್ಯವಾದ ತಮ್ಮ ಸಮಯ ಮತ್ತು ಶ್ರಮಗಳೊಂದಿಗೆ ಈ ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಅವರೆಲ್ಲರ ಶ್ರಮ ಸಾರ್ಥಕವಷ್ಟೇ ಅಲ್ಲದೆ, ಸೃಜನಶೀಲ ಜಾನಪದ ಕ್ಷೇತ್ರಕ್ಕೆ

ಸಂದ ಅನನ್ಯ ಹಾಗೂ ಅಪರೂಪದ ಕೊಡುಗೆಗಳೆಂದೇ ನಾನು ಭಾವಿಸಿದ್ದೇನೆ. ಈ ಬೃಹತ್ ಯೋಜನೆಯನ್ನು ಆಗುಮಾಡಿಸುವಲ್ಲಿ ಹೀಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ಎಲ್ಲ ಮಹನೀಯರಿಗೂ ಅಕಾಡೆಮಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ಈ ಯೋಜನೆಯ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇ ಗೌಡ ಅವರಿಗೂ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಸಲ್ಲಲೇಬೇಕು.

ತಮ್ಮ ಉಚಿತವೂ, ವಿದ್ವತ್ಪೂರ್ಣವೂ ಆದ ನುಡಿಗಳೊಂದಿಗೆ ಸಂಪುಟಗಳ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಸಂಚಾಲಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಈ ಯೋಜನೆಯ ನಿರ್ವಹಣೆಯಲ್ಲಿ ತೋರಿದ ಅಪಾರ ಆಸಕ್ತಿ ಮತ್ತು ಶ್ರದ್ಧೆಗಳಿಗೆ ಇಡೀ ಕನ್ನಡ ನಾಡಿನ ಜಾನಪದ ಜಗತ್ತು ಋಣಿಯಾಗಿದೆ.

ಈ ಬೃಹತ್ ಯೋಜನೆಯ ಅನುಷ್ಠಾನದ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡು ತತ್ಪರತೆಯಿಂದ ಕಾರ್ಯ ನಿರ್ವಹಿಸಿದ ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ನೆನಕೆಗಳು.

ಮುಂದಿನ ತಲೆಮಾರಿನ ಸಂಸ್ಕೃತಿ ಚಿಂತಕರು, ಜಾನಪದ ಅಧ್ಯಯನ ಕಾರರ ಪಾಲಿಗೆ ಸಮೃದ್ಧ ಆಕರ ಗ್ರಂಥಗಳಾಗಬಲ್ಲ ಈ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಅಕ್ಷರ ಮಟ್ಟಿಗೆ ಜಾನಪದ ಅಕಾಡೆಮಿಯ ಆಶಯವನ್ನು ಈಡೇರಿಸಿದೆಯೆಂಬುದೇ ನನ್ನ ನಂಬಿಕೆ ಮತ್ತು ಅದೇ ನನ್ನ ನಿಜವಾದ ಸಂತೋಷಕ್ಕೆ ಕಾರಣವಾಗಿದೆ.

ಪಿಚ್ಚಳ್ಳಿ ಶ್ರೀನಿವಾಸ
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

ಅಧ್ಯಕ್ಷರ ಮಾತು

ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ

ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು,

ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ–ಚಿಂತಕರಿಗೆ ಒಂದು ಹೆದ್ದಾರಿಯಾಯಿತು. ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ

ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು. ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

ಮಾತಿನ ಸರಣಿ : ಮುತ್ತಿನ ಬೆಲೆ

ಬಿ. ಎಂ. ಶ್ರೀಕಂಠಯ್ಯ

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ

ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

ದ. ರಾ. ಬೇಂದ್ರೆ

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

ಮಾಸ್ತಿ ವೆಂಕಟೇಶ ಅಯ್ಯಂಗಾರ್

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೬)**

ಬೆಟಗೇರಿ ಕೃಷ್ಣಶರ್ಮ

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

ಬಿ. ಎಸ್. ಗದ್ದಿಗೀಮಠ

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

ದೇ. ಜವರೇಗೌಡ

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

ಎಚ್. ಎಲ್. ನಾಗೇಗೌಡ

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

ಜೀ.ಶಂ. ಪರಮಶಿವಯ್ಯ

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

– ૩ –

ಕಟ್ಟುವ ಕನಸು ; ನೆಟ್ಟ ಸಸಿ

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ, ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ

ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯ ಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯುಗಳು ಮೈಸೂರು ವಿಶ್ವವಿದ್ಯಾಲಯುದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯುವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ–ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಬಿ. ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವನ್ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ– ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ

ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ, ಧವಳಶ್ರೀ, ಸಿ. ವೀರಣ್ಣ, ಬಿ.ಎಸ್. ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ. ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ

ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿದ್ದಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇ ಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ

ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕ ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

– ರಾಘವಾಂಕ

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ–ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಥುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ

ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿ ಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೊಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು. ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು

ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು

ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ– ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ

ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ
ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ–ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ

ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ

'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು–ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು

ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ಯಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ

ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ - ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು; ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಹಾಗೂ ಸಾಹಿತಿಗಳಾದ ಶ್ರೀ ಕಾ.ತ.ಚಿಕ್ಕಣ್ಣರವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ.

ಈ ಸಂಪುಟಗಳು ಅಚ್ಚುಕಟ್ಟಾಗಿ ಹೊರಬರಲು ಜಾನಪದ ತಜ್ಞರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಅವಿರತ ಶ್ರಮ ನೆರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ.ಎನ್. ಪರಡ್ಡಿ ಮತ್ತು ಅಕಾಡೆಮಿ ಸಿಬ್ಬಂದಿ ವರ್ಗ ಶ್ರದ್ಧೆವಹಿಸಿ ಬೆಂಬಲಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

ಪ್ರೊ. ಹಿ. ಶಿ. ರಾಮಚಂದ್ರೇಗೌಡ
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

ಕಂಬಳದ ಗೆದ್ದಿನ ಮುಂದೆ ಹೂಡಿದವರ್ಯಾರು ....

ಜನಪದರ ಬದುಕಿನ ಸಾರ ಸತ್ವಗಳನ್ನು ಹೀರಿ ವಿಸ್ತಾರವಾಗಿ ಬೆಳೆದ ಜನಪದ ಸಾಹಿತ್ಯ ವೃಕ್ಷವು ಹಲವು ರೆಂಬೆಕೊಂಬೆಗಳನ್ನು ಪಡೆದು ಬೆಳೆದು ಬಂದಿದೆ. ಹಾಡುಗಳು, ಒಗಟುಗಳು, ಕತೆಗಳು, ಅಜ್ಜಿಕತೆಗಳು ಇತ್ಯಾದಿಯಾಗಿ ಈ ಶಾಖೆಗಳನ್ನು ಗುರುತಿಸಬಹುದು. ಹಾಡುಗಳಲ್ಲಿಯೂ ಕುಣಿತದ ಹಾಡುಗಳು, ಗೆಯ್ಮೆಯ ಹಾಡುಗಳು, ತಮಾಷೆಯ ಹಾಡುಗಳು, ಲಾಲಿ ಹಾಡುಗಳು, ದೇವರ ಪದಗಳು, ಆಚರಣೆಯ ಸಂದರ್ಭದ ಹಾಡುಗಳು, ಸಂಪ್ರದಾಯದ ಹಾಡುಗಳು ಎಂದು ಬಗೆಬಗೆಯಲ್ಲಿ ಗುರುತಿಸಬಹುದು. ತಮ್ಮ ನೋವನ್ನು ಕಳೆಯಲು, ಮನರಂಜನೆ ಪಡೆಯಲು, ಕೆಲಸದ ಕಷ್ಟವನ್ನು ತಿಳಿಗೊಳಿಸಲು, ದೇವರನ್ನು ಸ್ತುತಿಸಲು ಈ ಹಾಡುಗಳು ಜನಜೀವನದಲ್ಲಿ ಹಾಸುಹೊಕ್ಕಾಗಿ ಬಂದವು. ಮೂಲ ಕವಿಯ ಹೆಸರಿಲ್ಲದ ಜನಪದ ಹಾಡುಗಳನ್ನು, ಪ್ರತಿಯೊಬ್ಬ ಹಾಡುಗಾರನೂ ಸೃಜನಶೀಲತೆಯಿಂದ ತನ್ನ ಮನಸ್ಸಿನಲ್ಲಿ ಪ್ರತಿಸೃಷ್ಟಿ ಮಾಡುವ ಮೂಲಕ ಆ ಹಾಡುಗಳಿಗೆ ನಿತ್ಯ ನವೀನತೆಯನ್ನು, ಜೀವವನ್ನು ತುಂಬಿದರು. ಅನುಭವದ ‘ಕೊಪ್ಪರಿಗೆ’ಯಾಗಿಸಿದರು.

‘ಕರಾವಳಿಯ ಬೇಸಾಯದ ಹಾಡುಗಳು’ ಎಂಬ ಶೀರ್ಷಿಕೆಯಡಿಯಲ್ಲಿ ಬಂದಿರುವ ಕೃಷಿ ಕೆಲಸದ ಸಂದರ್ಭದಲ್ಲಿ ಹಾಡಲ್ಪಡುವ ಈ ಸಂಕಲನದಲ್ಲಿನ ಹಾಡುಗಳು ಅವಿಭಜಿತ ದಕ್ಷಿಣಕನ್ನಡಕ್ಕೆ, ಅಂದರೆ ಬ್ರಿಟಿಷರ ಕಾಲ. ಸೌತ್ ಕೆನರಾ/ತುಳುನಾಡಿಗೆ ಮಾತ್ರ ಸೀಮಿತವಾದವು. ಅದರಲ್ಲಿಯೂ ಜಾನಪದ ಅಕಾಡೆಮಿಯ ಆದೇಶದಂತೆ ಈ ಮೊದಲೇ ಬೇರೆ ಬೇರೆ ವಿದ್ವಾಂಸರಿಂದ ಸಂಗ್ರಹಿತವಾಗಿ, ಗ್ರಂಥಗಳಲ್ಲಿ ಪ್ರಕಟವಾದ ಬೇಸಾಯದ ಹಾಡುಗಳು ಮಾತ್ರ ಇಲ್ಲಿವೆ.

ಅವಿಭಜಿತ ದಕ್ಷಿಣ ಕನ್ನಡದ ನೆಲದ ಭಾಷೆ ತುಳು. ಇಲ್ಲಿ ಕುಂದಾಪುರ ವೊಂದನ್ನುಳಿದು ಉಳಿದೆಲ್ಲಾ ಕಡೆಯಲ್ಲಿ ಬೇಸಾಯದ ಹಾಡುಗಳಿರುವುದು ತುಳು ಭಾಷೆಯಲ್ಲಿ. ಕುಂದಗನ್ನಡದ ವಿದ್ವಾಂಸ ದಿ. ಡಾ. ಪಾ.ನ.ಮಯ್ಯ ಅವರು ಮೌಖಿಕ ಸಂದರ್ಶನದ ವೇಳೆ ವ್ಯಕ್ತಪಡಿಸಿದ ಅಭಿಪ್ರಾಯದಂತೆ

ಕುಂದಗನ್ನಡವೂ ತುಳು ಕನ್ನಡದ ಮಿಶ್ರಣವೇ. ಹಾಗಾಗಿ ದಕ್ಷಿಣಕನ್ನಡದ ಬೇಸಾಯದ ಹಾಡುಗಳಲ್ಲಿ ಮೊದಲಿಗೆ ಸಿಗುವುದು ತುಳು ಬೇಸಾಯದ ಹಾಡುಗಳ ಕನ್ನಡಾನುವಾದ.

ತುಳು ಭಾಷೆಯ ಪಾಡ್ದನಗಳು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. 'ತುಳುನಾಡಿನ ಬದುಕನ್ನು ಬಹು ಪುರಾತನಕಾಲದಿಂದಲೇ ನಿರ್ದೇಶಿಸುತ್ತ ಬಂದಿರುವ, ಭೂತಾರಾಧನೆಯ ಸಂದರ್ಭದಲ್ಲಿ ವಿಧಿವತ್ತಾಗಿಯೂ, ಇತರ ಸಂದರ್ಭಗಳಲ್ಲಿ ಹವ್ಯಾಸಕ್ಕಾಗಿಯೂ ನಿರೂಪಿಸುವ ವಿಶಿಷ್ಟ ಪಳಮೆಗಳೇ 'ಪಾಡ್ದನ' ಅಥವಾ 'ಸಂದಿ'ಗಳು. ಇವುಗಳನ್ನು ತುಳುನಾಡಿನ ವಿಶಿಷ್ಟ ಪುರಾಣಗಳೆನ್ನಲು ಅಡ್ಡಿಯಿಲ್ಲ' (ಸಂ: ಅಮೃತ ಸೋಮೇಶ್ವರ, ೧೯೯೭, ಪ್ರಸ್ತಾವನೆ) ಈ ಪಾಡ್ದನಗಳನ್ನು ವರ್ಷದ ಮೂರು ಬಾರಿಯ ಬತ್ತದ ಕೃಷಿಯ ಅನುಕ್ರಮದಲ್ಲಿಯೂ ನೇಜಿ ಕೀಳುವ, ನೆಡುವ ಮತ್ತು ಉಳುಮೆಯ ಸಂದರ್ಭಗಳಲ್ಲಿ ಹಾಡಲಾಗುತ್ತದೆ. ಆದರೆ ಕೊಯಿಲಿನ ಸಂದರ್ಭದಲ್ಲಿ ಪಾಡ್ದನಗಳ ಹಾಡುವಿಕೆ ನಿಷಿದ್ಧ. 'ಪಾಡ್ದನ ಅಥವಾ ಸಂದಿಗಳನ್ನು ಹೊಲಗಳಲ್ಲಿ ನೇಜಿ ತೆಗೆಯುವ ಸಂದರ್ಭದಲ್ಲಿ ಹಾಡುತ್ತಾರೆ. ಇದರಲ್ಲಿ ಭೂತದ ಸಂಧಿಗಳೂ ಇವೆ. ಭೂತದ ಸಂಧಿಗಳನ್ನು ಆಚರಣೆ (ritual) ಗಿಂತ ಹೊರಗೆ ಹಾಡಬಾರದು ಎಂಬ ನಿರ್ಬಂಧ ಇದ್ದ ಹಾಗೆ ಕಾಣುವುದಿಲ್ಲ. ನೇಜಿ ತೆಗೆಯುವಾಗ ಈ ಸಂದಿಗಳು ಪ್ರಯೋಗವಾದರೂ ಇವುಗಳನ್ನು ಶುದ್ಧ ಕೆಲಸದ ಹಾಡುಗಳು (work songs) ಎಂಬ ವರ್ಗಕ್ಕೆ ಸೇರಿಸುವುದು ಸರಿಯಾಗುವುದಿಲ್ಲ' (ವಿವೇಕ ರೈ, ೧೯೮೫, ೩೦). ಶುದ್ಧ ಕೆಲಸದ ಹಾಡುಗಳಲ್ಲದಿದ್ದರೂ, ಕೆಲಸದ ಸಮಯದಲ್ಲಿ ಹಾಡಲ್ಪಡುವುದನ್ನು ಗುರುತಿಸಿಕೊಂಡು ಇಲ್ಲಿ ಅವುಗಳಲ್ಲಿ ಕೆಲವನ್ನು ಸೇರಿಸಿಕೊಳ್ಳಲಾಗಿದೆ.

'ತುಳು ಭಾಷೆಯ ಕಬಿತಗಳನ್ನು ನೇಜಿ ನಾಟಿ ಮಾಡುವಾಗ ಮಾತ್ರ ಹಾಡಲಾಗುತ್ತದೆ. ನೇಜಿ ಕೀಳುವಾಗ ಕಬಿತಗಳನ್ನು ಹಾಡುವುದಿಲ್ಲ. 'ಸಂದಿ'ಗಳನ್ನು ಹಾಡುತ್ತಾರೆ' (ವಿವೇಕ ರೈ, ೧೯೮೫, ೩೨೭). ಕೆಲಸದ ಸಮಯದಲ್ಲಿ ಕಾರ್ಮಿಕರಲ್ಲೊಬ್ಬಳಾದ ಮುಖ್ಯ ಗಾಯಕಿ ಹಾಡಿನ ಚರಣವನ್ನು ಹಾಡಿದರೆ ಜೊತೆಗಾರರು ಪಲ್ಲವಿಯನ್ನು ಪ್ರತಿ ಸಾಲಿನ ನಂತರ ಹಾಡುವುದು ಈ ಕಬಿತಗಳ ವೈಶಿಷ್ಟ್ಯ. ಈಜೋ ಮಂಜೊಟ್ಟಿ ಗೋಣ, ಓಬೇಲೆ ಇತ್ಯಾದಿ ಕಬಿತಗಳು ಜನಪ್ರಿಯ ಕಬಿತಗಳಾಗಿವೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟಿತವಾದ 'ತುಳು ಪಾಡ್ದನ ಸಂಪುಟ' (ಸಂ:ಅಮೃತ ಸೋಮೇಶ್ವರ, ೧೯೯೭)ದಿಂದ ಬೇಸಾಯದ ಸಂದರ್ಭದಲ್ಲಿ ಹಾಡಲ್ಪಡುವ ಆಯ್ದ ಕೆಲವು ಪಾಡ್ದನ ಪಠ್ಯಗಳನ್ನು

ಇಲ್ಲಿ ಕೊಡಲಾಗಿದೆ. ಅವಕ್ಕೆ ಕನ್ನಡ ಅನುವಾದವನ್ನು ಸಂಗ್ರಾಹಕಾರರಾದ ಅಮೃತ ಸೋಮೇಶ್ವರರು ಅದೇ ಗ್ರಂಥದಲ್ಲಿ ನೀಡಿದ್ದಾರೆ. ಇದರಲ್ಲಿ ಬ್ರಿಟಿಷ್ ಕಾಲದ ಸೌತ್ ಕೆನರಾದಲ್ಲಿದ್ದು ಇಂದು ಕೇರಳರಾಜ್ಯದಲ್ಲಿ ಗುರುತಿಸಲ್ಪಡುವ ಕಾಸರಗೋಡು ಜಿಲ್ಲೆಯ ತುಳುಭಾಗದಲ್ಲಿ ಹಾಡಲ್ಪಡುವ ಬೇಸಾಯದ ಹಾಡುಗಳು ಇವೆಯೆಂಬುದನ್ನು ಮರೆಯುವಂತಿಲ್ಲ. ಇವು ಆ ಭಾಗಕ್ಕೆ ಮಾತ್ರ ಸೀಮಿತವಾಗಿರದೆ, ಅಲ್ಲಿ ಸಂಗ್ರಹಿತವಾಗಿದ್ದರೂ ಇಡಿಯ ತುಳುನಾಡಿನಲ್ಲಿ ಬಳಸಲ್ಪಡುವುದರಿಂದ ಈ ಸಂಗ್ರಹದಲ್ಲಿ ಅವನ್ನು ಸೇರಿಸಿಕೊಳ್ಳಲಾಗಿದೆ. ಬಲಿಯೇಂದ್ರ ಪಾಡ್ದನವು ಬೇಸಾಯಕ್ಕೆ ಸಂಬಂಧಪಟ್ಟ ಆಚರಣೆಯಲ್ಲಿ ಹಾಡಲ್ಪಡುವುದಾದರೂ ನೇರವಾಗಿ ಬೇಸಾಯದ ಕೆಲಸಗಳಲ್ಲಿ ಬಳಕೆಯಾಗುವುದಿಲ್ಲ ಎಂಬ ಕಾರಣಕ್ಕೆ ಅದನ್ನು ಕೊಟ್ಟಿಲ್ಲ.

ಅಮೃತ ಸೋಮೇಶ್ವರರ ಸಂಗ್ರಹದ 'ತುಳು ಪಾಡ್ದನ, ಕಬಿತ'ಗಳೆಂಬ ಬೇಸಾಯದ ಹಾಡುಗಳನ್ನು 'ಸುದರ್ಶನ' (ಸಂ: ಅಡ್ಯನಡ್ಕ ಕೃಷ್ಣಭಟ್ಟ, ೧೯೭೭) ದಿಂದ ಆಯ್ದುಕೊಂಡಿದೆ.

ಡಾ. ಬಿ.ಎ. ವಿವೇಕ ರೈ, ಯದುಪತಿಗೌಡ ಮತ್ತು ರಾಜಶ್ರೀಯವರಿಂದ ಸಂಪಾದಿಸಲ್ಪಟ್ಟ 'ಪುಟ್ಟು ಬಳಕೆಯ ಪಾಡ್ದನಗಳು' ಗ್ರಂಥದಿಂದ ಕರ್ನಗೆ ಪಾಡ್ದನದ ಅನುವಾದವನ್ನು ಇಲ್ಲಿ ಸೇರಿಸಲಾಗಿದೆ.

ಬಿ.ಎ. ವಿವೇಕ ರೈ ಅವರ ತುಳು ಜನಪದ ಸಾಹಿತ್ಯ (೧೯೮೫)ದಿಂದ ಕೃಷಿ ಕಾರ್ಯ ಸಂದರ್ಭ ಹಾಡಲಾಗುವ ಕಬಿತಗಳನ್ನು, ಉರಲ್‌ಗಳನ್ನು ಇಲ್ಲಿ ಪೋಣಿಸಲಾಗಿದೆ. ಅವುಗಳ ವಿಶ್ಲೇಷಣೆಗಳನ್ನು ಅಲ್ಲಿ ಮಾಡಲಾಗಿದ್ದರೂ, ಇದು ಕೇವಲ ಹಾಡುಗಳ ಸಂಗ್ರಹವೆಂಬ ದೃಷ್ಟಿಯಿಂದ ವಿಶ್ಲೇಷಣೆಯನ್ನು ಈ ಸಂಗ್ರಹದ ಸಂದರ್ಭದಲ್ಲಿ ಕೈಬಿಡಲಾಗಿದೆ. ಇದರಲ್ಲಿನ ಟ್ರುವೇಲೇ ಹಾಡು ಮತ್ತು ಗೋವಿಂದ ಬದನೆ ಹಾಡುಗಳ ಅನುವಾದವು ಸಂಗ್ರಹವಾಗಿ ಗದ್ಯದಲ್ಲಿರುವುದರಿಂದ ಅದನ್ನು ಈ ಸಂಗ್ರಹದ ಸಮಯದಲ್ಲಿ ಹಾಡಿನ ರೀತಿಯಲ್ಲೇ ಯಥಾವತ್ತಾಗಿ ಅನುವಾದಿಸಲಾಗಿದೆ.

'ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು' (ಟಿ. ಕೇಶವ ಭಟ್ಟ, ೧೯೯೬) ಗ್ರಂಥದಿಂದ 'ಓಬಲೇ' ಕಬಿತದ ಕನ್ನಡ ಅನುವಾದವನ್ನು ತೆಗೆದುಕೊಳ್ಳಲಾಗಿದೆ.

'ನಾಟಿ' (ರೂಪಕಲಾ ಆಳ್ವ, ೧೯೯೨) ಬೇಸಾಯದ ಹಾಡುಗಳು ಮತ್ತು ಅವುಗಳ ವಿಶ್ಲೇಷಣೆಯನ್ನೊಳಗೊಂಡ ಕೃತಿ. ಇದರಲ್ಲಿ ಹಾಡುಗಳ ತುಳು

ಸಾಲುಗಳೊಡನೆ ಕನ್ನಡ ಅನುವಾದವನ್ನೂ ಒದಗಿಸಲಾಗಿದೆ. ಅವನ್ನು ಇರುವಂತೆಯೇ ಇಲ್ಲಿ ಸೇರಿಸಿಕೊಳ್ಳಲಾಗಿದೆ. ವಿಶ್ಲೇಷಣೆಯನ್ನು ಕೈ ಬಿಡಲಾಗಿದೆ. ಈ ಹಿಂದಿನ ಸಂಗ್ರಹಗಳಿಂದ ತೆಗೆದುಕೊಂಡ ಹಾಡುಗಳ ಮರುಸೇರದಿರುವಿಕೆಯನ್ನು ಲಕ್ಷ್ಯದಲ್ಲಿರಿಸಿಕೊಂಡು ಕೆಲವು ಹಾಡುಗಳನ್ನು ಕೈ ಬಿಡಲಾಗಿದೆ (ಉದಾ: ಕೊಲ್ಲೂರ ಮೂಕಾಂಬಿ). ಆದರೆ ತುಳುವಿನ ಪಠ್ಯದೊಡನೆ ಕನ್ನಡಾನುವಾದವನ್ನು ಕೊಡುವುದು ಉಚಿತವೆಂದು ಅನಿಸಿದ್ದರಿಂದ ಹಾಗೇ ಕೊಡಲಾಗಿದೆ.

ಸಿರಿ ಪಾಡ್ದನ ಪಠ್ಯವನ್ನು ಅಮೃತ ಸೋಮೇಶ್ವರರ ಸಂಗ್ರಹದಿಂದ ತೆಗೆದುಕೊಳ್ಳುವ ಬದಲಿಗೆ ಅಶೋಕ ಆಳ್ವರ ಸಂಪಾದನೆಯ ಕರ್ಗಿ ಶೆಡ್ತಿಯವರದ್ದನ್ನು ತೆಗೆದುಕೊಳ್ಳಲಾಗಿದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಶ್ರೀಮತಿ ಕರ್ಗಿಶೆಡ್ತಿಯವರು ಸಿರಿ ಪಾಡ್ದನ ಪಠ್ಯದ ಬಗ್ಗೆ ವಿವರಿಸುತ್ತಾ, ಅದನ್ನು ಗದ್ದೆಗಳಲ್ಲಿ ಕೆಲಸ ಮಾಡುವಾಗ ಸಂದಿಗಳಾಗಿ ಹೇಳಲ್ಪಡುವುದನ್ನು ತಿಳಿಸಿದ್ದಾರೆ ಮಾತ್ರವಲ್ಲ, ಇಡಿಯ ಪಾಡ್ದನವು ಹಾಡಲ್ಪಡದೆ, ತುಂಡು ತುಂಡಾಗಿ ಪೂರ್ತಿಯಾಗಿ ಹಾಡಲ್ಪಡುವ ಕುರಿತು ಮತ್ತು ಕೃಷಿಕಾರ್ಯ ಸಮಯದಲ್ಲಿ ಸಿರಿ ಪಾಡ್ದನ ಹಾಡುವಾಗ ಜೊತೆಗಾರರು ಸಿರಿ ಆವೇಶಿತರಾದಲ್ಲಿ ಕೋಟಿ ಚೆನ್ನಯ ಪಾಡ್ದನ (ಬೈದ್ಯೆರೆ ಸಂದಿ) ಹಾಡುವುದನ್ನೂ ಅವರು ತಿಳಿಸಿದ್ದಾರೆ. ತುಳು ಪಾಡ್ದನದ ಕನ್ನಡಾನುವಾದವು ಆ ಗ್ರಂಥದ ಸಂಪಾದಕರಾದ ಡಾ. ಅಶೋಕ ಆಳ್ವರದು.

'ತುಳು ಕಬಿತಗಳು' (ಸಂ: ಬಿ.ಎ. ವಿವೇಕ ರೈ ಮತ್ತು ರಾಜಶ್ರೀ, ೧೯೮೭) ತುಳು ಬೇಸಾಯದ ಹಾಡುಗಳ, ಅದರಲ್ಲೂ ಕೇವಲ ಕಬಿತಗಳ ಸಂಗ್ರಹ. ಇದರಲ್ಲಿ ಕನ್ನಡ ಅನುವಾದಗಳಿದ್ದರೂ ಇತರ ಸಂಗ್ರಹಗಳಂತೆ ವಿಶ್ಲೇಷಣೆಗಳಿಲ್ಲ, ಜಾನಪದ ಅಕಾಡೆಮಿಯ ಆದೇಶದಂತೆ ಪುಟ ಮಿತಿಯನ್ನು ಗಮನಲ್ಲಿರಿಸಿಕೊಂಡು ಈ ಗ್ರಂಥದಿಂದ ಕಬಿತಗಳನ್ನು ತೆಗೆದುಕೊಂಡಿಲ್ಲ. ಮಾತ್ರವಲ್ಲ ಇನ್ನಿತರ ಹಲವು ಸಂಗ್ರಹಿತ ಬೇಸಾಯದ ಹಾಡುಗಳು ಇದೇ ಮೂಲ ಕಾರಣದಿಂದ ಈ ಸಂಗ್ರಹದಲ್ಲಿ ಬರದೆ, ಹೊರಗುಳಿದಿರುವುದನ್ನು ಇಲ್ಲಿ ಉಲ್ಲೇಖಿಸಲೇಬೇಕಾಗುತ್ತದೆ. ಹಾಗಾಗಿ ತುಳು ಬೇಸಾಯದ ಹಾಡುಗಳು ಈ ಸಂಗ್ರಹಕ್ಕೆ ಸೀಮಿತವಲ್ಲ, ಅವುಗಳ ಸಂಖ್ಯೆ ಬಹಳ ದೊಡ್ಡದು ಎಂಬುದು ಇಲ್ಲಿ ಸಂಪೂರ್ಣವಾಗಿ ಒಪ್ಪಿತವಾಗಿದೆ. ಆದರೆ 'ತುಳು ಕಬಿತ'ಗಳು ಪುಸ್ತಕದ ಪ್ರಸ್ತಾವನೆಯಲ್ಲಿ ಬರುವ ಒಂದು ಪ್ಯಾರಾವನ್ನು ಕಬಿತಗಳ ಹಾಡುವಿಕೆಯ ವಿಧಿನಿಷೇಧಗಳ ದೃಷ್ಟಿಯಿಂದ ಇಲ್ಲಿ ಉಲ್ಲೇಖಿಸಲೇಬೇಕಾಗುತ್ತದೆ.

"ಈ ಸಂಗ್ರಹಕ್ಕಾಗಿ ಕಬಿತಗಳನ್ನು ಹಾಡಿದ ಮಾಹಿತಿದಾರರು ಕಬಿತಗಳ ಬಗ್ಗೆ ಹೇಳಿದ ಕೆಲವು ವಿಚಾರಗಳು : ಕಬಿತಗಳನ್ನು ನೇಜಿ ನೆಡುವ ಸಂದರ್ಭದಲ್ಲಿ ಬೆಳಗಿನಿಂದ ಸಂಜೆಯವರೆಗೂ ಹಾಡುತ್ತಾರೆ. ಗದ್ದೆಗಳಲ್ಲಿ ಒಬ್ಬರು ಹೇಳಿದುದನ್ನು ಕೇಳಿ ಉಳಿದವರು ಕಬಿತಗಳನ್ನು ಕಲಿತುಕೊಳ್ಳುತ್ತಾರೆ. 'ದೂಜಿ ಕೆಮ್ಮೈರಾ' ಮತ್ತು 'ಚನಿಲಣ್ಣಾ' – ಈ ಕಬಿತಗಳನ್ನು ಮೂರು ಬಾರಿ ಹೇಳಿಯೇ ಮುಕ್ತಾಯಗೊಳಿಸಬೇಕು. ಈ ಕಬಿತಗಳನ್ನು ಕೊನೆಯಲ್ಲಿ ಹುಲಿ ಹಿಡಿಯುವ ಸಂದರ್ಭ ಬರುವುದರಿಂದ ಈ ಕಬಿತಗಳನ್ನು ಗದ್ದೆ ಉಳುವ ಸಂದರ್ಭದಲ್ಲಿ (ಎತ್ತುಗಳು ಗದ್ದೆಯಲ್ಲಿ ಇರುವಾಗ) ಹೇಳಬಾರದು. 'ಈಜೋ ಮಂಜೊಟ್ಟಿ ಗೋಣಾ' ಕಬಿತವನ್ನೂ ಗದ್ದೆ ಉಳುವ ಸಂದರ್ಭದಲ್ಲಿ ಹಾಡಬಾರದು. ಹುಲಿ ಹಿಡಿಯುವ ಸಂದರ್ಭದಲ್ಲಿ ಹೆಂಗುಸರು ಒಬ್ಬರ ಮೇಲೊಬ್ಬರು ಬೀಳುತ್ತಾ ನೀರೆರಚಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಗರ್ಭಿಣಿ ಸ್ತ್ರೀಯರನ್ನು ಮತ್ತು ಸಣ್ಣ ಮಕ್ಕಳ ತಾಯಂದಿರನ್ನು ಹಿಡಿಯಬಾರದು. ನೇಜಿ ನೆಡುವಾಗ ಪ್ರಾರಂಭದಲ್ಲಿ 'ಓಬೇಲೇ' ಕಬಿತವನ್ನು ಹಾಡುತ್ತಾರೆ. ಅನಂತರ ಯಾವ ಕಬಿತವನ್ನೂ ಹಾಡಬಹುದು. ಕೊನೆಯ ದಿನದ ನಾಟಿಯ ಸಂದರ್ಭದಲ್ಲಿ 'ಓಯ್ಯಾ'ವನ್ನು ಹಾಡುತ್ತಾರೆ. ಗದ್ದೆಯಲ್ಲಿ 'ಬಾಳೆ ಹಾಕುವ' ಸಂಪ್ರದಾಯವಿದ್ದರೂ 'ಓಯ್ಯಾ' ಹೇಳಿದ ಬಳಿಕವೇ ಬಾಳೆ ಹಾಕಬೇಕು. ಆಭರಣ, ಹೆಣ್ಣಿನ ಅಲಂಕಾರ ವಸ್ತುಗಳು, ಹೂವು, ಮರ, ತರಕಾರಿ, ಮನುಷ್ಯರ ಹೆಸರು, ಪ್ರಾಣಿಗಳ ಹೆಸರು, ಊರುಗಳ ಹೆಸರು, ಜಾತಿಗಳ ಹೆಸರು – ಇವುಗಳಿಗೆ ಸಂಬಂಧಿಸಿದ ಕಬಿತಗಳಲ್ಲಿ ಹೆಂಗಸರು ತಮ್ಮ ನೆನಪು ಶಕ್ತಿ, ಅನುಭವ, ಜಾಣ್ಮೆಗೆ ತಕ್ಕಂತೆ ಹೆಸರುಗಳನ್ನು ಸೇರಿಸುತ್ತಾ ಕಬಿತಗಳನ್ನು ಬೆಳೆಸುತ್ತಾ ಹೋಗುತ್ತಾರೆ." (ಸಂ: ವಿವೇಕ ರೈ, ರಾಜಶ್ರೀ, ೧೯೮೭).

ಕುಂದಾಪುರ ಕನ್ನಡದಲ್ಲಿ ಮೂಡಿಬಂದಿರುವ ಬೇಸಾಯದ ಹಾಡುಗಳನ್ನು ಅದೇ ಭಾಷೆಯಲ್ಲಿ ಕೊಡಲಾಗಿದೆ. ಶಿವರಾಮ ಐತಾಳ್ 'ದಕ್ಷಿಣ ಕನ್ನಡದ ಜನಪದ ಗೀತೆಗಳು' ಮತ್ತು ಗುಂಡ್ಮಿ ಚಂದ್ರಶೇಖರ ಐತಾಳ್ ಅವರ 'ಮದ್ದುಂಟೆ ಜನನ ಮರಣಕ್ಕೆ' ಎಂಬ ಜನಪದ ಗೀತೆಗಳ ಸಂಗ್ರಹ ಗ್ರಂಥದಿಂದ ಇಲ್ಲಿರುವ ಬೇಸಾಯದ ಹಾಡುಗಳು ಸಂಪಾದಿಸಲ್ಪಟ್ಟಿವೆ. ಲಭ್ಯ ಗೀತೆಗಳ ಮೂಲ ಪ್ರತಿಯನ್ನು ಒದಗಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಊಹಾತ್ಮಕ ಪರಿಷ್ಕರಣವಾಗಲೀ, ಪ್ರಾಸ ಪರಿಷ್ಕರಣವಾಗಲೀ ಇರುವುದನ್ನು ಆದಷ್ಟು ಹೊರತುಪಡಿಸಿ, ಜನಪದರ ಹಾಡುಗಳು ಪಂಡಿತ ಕೃತಿಗಳಲ್ಲ ಎಂಬುದನ್ನು ನೆನಪಿನಲ್ಲಿರಿಸಿಕೊಂಡು, ಮೂಲ ಹಾಡುಗಳಿಗೆ ಒತ್ತು ನೀಡಲಾಗಿದೆ.

ಈ ಸಂಕಲನದ ಹಾಡುಗಳ ಸಂಗ್ರಾಹಕರ ವಿದ್ವತ್ತಿಗೆ, ಆಸಕ್ತಿಗೆ, ಅಧ್ಯಯನಶೀಲತೆಗೆ, ಸಂಪನ್ಮೂಲ ವ್ಯಕ್ತಿಗಳ, ವಕ್ತೃಗಳ ಅನುಭವ ಮತ್ತು ಜೀವನ ಪ್ರೀತಿಗೆ ತುಂಬು ಮನದ ನಮನಗಳು. ಸಂಕಲನದ ಪ್ರಕಾಶಕ್ಕೆ ಮನಸ್ಸು ಮಾಡಿರುವ ಮೂಲಕ ಆಸಕ್ತರಿಗೆ ಅವಕಾಶವಿತ್ತಿರುವ ಕರ್ನಾಟಕ ಜಾನಪದ ಅಕಾಡೆಮಿಯ ಪ್ರಯತ್ನಕ್ಕೂ ನಮನಗಳನ್ನು ಸಲ್ಲಿಸಲೇಬೇಕಾಗುತ್ತದೆ.

ಹೆಸರರಿಯದ ಜನರಿಂದ ರಚಿಸಲ್ಪಟ್ಟು, ಅನೇಕ ತಲೆಮಾರುಗಳ ನಾಲಿಗೆಯಲ್ಲಿ ನಲಿದು, ಅನುಭವವನ್ನು ಮೈಗೂಡಿಸಿಕೊಂಡು ಬೆಳೆದು ಬಂದ ಜನಪದ ಹಾಡುಗಳಲ್ಲಿ ಉನ್ನತ ಜೀವನ ದೃಷ್ಟಿ, ರಸಿಕತೆ, ಜೀವನದೃಷ್ಟಿ, ಮನರಂಜನೆ, ಧಾರ್ಮಿಕ ಪ್ರಜ್ಞೆ, ಜೀವನ ಶ್ರದ್ಧೆಗಳನ್ನು ಗುರುತಿಸಬಹುದು. ದುಡಿಮೆಯನ್ನೇ ಜೀವನ ಮಂತ್ರವಾಗಿಸಿಕೊಂಡು, ದುಡಿದುಡಿಯುತ್ತಲೇ ಜೀವನದ ವಿವಿಧ ಅನುಭವಗಳನ್ನು ಹಾಡಿನ ಮೋಡಿಯ ಮೂಲಕ ಪ್ರತಿಪಾದಿಸಿದ ಮಣ್ಣಿನ ಮಕ್ಕಳ ಹಾಡಿನಲ್ಲಿ ಸಹಜ ರುಚಿ, ಒಗರು, ಸವಿ, ಲಾಲಿತ್ಯ ಎಲ್ಲವೂ ಸೇರಿಕೊಂಡಿದೆ. ಇಲ್ಲಿ ನಯ, ಹರಿತ ಭಾವನೆಗಳು, ಹಾಸ್ಯ, ತಮಾಷೆಗಳು ಎಲ್ಲವೂ ಇವೆ. ಇಂತಹ ಸಶಕ್ತ ಪರಂಪರೆಗೆ ದನಿಯಾಗುವ ಅವಕಾಶವನ್ನು ಇಂದು ಕಳೆದುಕೊಂಡು, ಅವರ ನೈಪುಣ್ಯತೆಗೆ ಬೆರಗಾಗುವಿಕೆಯನ್ನು ಮಾತ್ರ ಉಳಿಸಿಕೊಂಡಿದ್ದೇವೆ.

– ಸಾಯಿಗೀತಾ

ಮಂಗಳೂರು
೨–೧೦–೨೦೧೩

ಪರಿವಿಡಿ

೧.	ಈಜೋ ಮಂಜೊಟ್ಟಿ ಗೋಣ	೧
೨.	ಬಾಮ ಕುಮಾರ	೧೪
೩.	ಕೊಲ್ಲೂರ ಮುಕಾಂಬಿ	೩೨
೪.	ಮದನಗ	೪೪
೫.	ಬಳಜೇಯಿ ಮಾಣಿಗ	೫೧
೬.	ಹೊನ್ನಮ್ಮ ಜೇವು	೫೯
೭.	ಬಾಲೆ ಮಾಡೆದಿ	೬೫
೮.	ಪೆರಿಂಜಗುತ್ತು ದೇವು ಪೂಂಜ	೭೨
೯.	ಕಬಿತಗಳು	೮೧
೧೦.	ಕರ್ನಗೆ	೮೩
೧೧.	ಕಬಿತಗಳು	೮೯
೧೨.	ಡಿಂಬಿಸಾಲೇ	೯೮
೧೩.	ಉರಲ್	೧೦೦
೧೪.	ಗೋವಿಂದ ಬದನೆ	೧೦೫
೧೫.	ಓ ಬೇಲೆ	೧೦೮
೧೬.	ಬಾಲೆ ಜಕ್ಕಮ್ಮು	೧೧೧

೧೭.	ಬಾಲೆ ಮುಂಡ್ಯಾಪು	೧೨೩
೧೮.	ಪೆಂರ್ದದಿ	೧೨೮
೧೯.	ಬಾಲೆ ಕಾಂತಗೆ	೧೩೫
೨೦.	ಉರಲ್	೧೪೨
೨೧.	ಸಿರಿಕಾವ್ಯಲೋಕ	೧೪೫
೨೨.	ಈಶ್ವರದೇವರು ಪಟ್ಟೆ ಕೊಚ್ಚಿದ ಹಾಡು	೪೩೩
೨೩.	ಗೋವಿನ ಹಾಡು	೪೪೨
೨೪.	ಗೌರಮ್ಮ ಅಪ್ಪನ ಮನೆಗೆ ಹೋದ ಹಾಡು	೪೪೮
೨೫.	ಮಹಾಭಾರತ	೪೫೨
೨೬.	ಭಾಗವತ	೪೫೪
೨೭.	ಇತಿಹಾಸ	೪೫೫
೨೮.	ಒಗಟು	೪೫೬
೨೯.	ಲೋಕಾನುಭವ	೪೬೦
೩೦.	ಅನುಬಂಧ	೪೬೫
೩೧.	ಹರಕೆ, ತಾಯಿ, ಮಗು	೪೬೭
೩೨.	ತಾಯಿ, ಮಗಳು ತವರು	೪೬೯
೩೩.	ಗೋಮಾತೆ, ಸರಸ	೪೭೧
೩೪.	ವಿರಸ	೪೭೫
೩೫.	ದುಃಖನಿವೇದನೆ	೪೮೬
೩೬.	ಹಾಸ್ಯ	೫೦೦

೩೭.	ಸುಖನಿವೇದನೆ	೫೦೩
೩೮.	ವರ್ಣನೆ	೫೦೯
೩೯.	ಉಪದೇಶ	೫೨೮
೪೦.	ಸುಖನಿವೇದನೆ	೫೫೨
೪೧.	ವರ್ಣನೆ	೫೬೧
೪೨.	ಉಪದೇಶ	೫೮೩
೪೩.	ಪ್ರಣಯ	೫೮೬
೪೪.	ರಾಮಾಯಣ	೫೯೦
೪೫.	ತ್ರಿಪದಿಗಳು	೫೯೩

❀ ❍ ❀

ಈಜೋ ಮಂಜೊಟ್ಟಿ ಗೋಣ*

ಈಜೋ ಮಂಜೊಟ್ಟಿ ಗೋಣ
ರೆಂಜಲಡಿ ಬರಿಕೆಯಲ್ಲಿದ್ದಾರೆ ಮಂಜಣಾಳ್ವರು
ಬೆಟ್ಟುಗದ್ದೆ ಸಾವಿರ ಮುಡಿ ಬೈಲು ಗದ್ದೆ ಸಾವಿರ ಮುಡಿ ಇದೆ
ಮುಂಜಾನೆ ಎದ್ದರು ಮಂಜಣಾಳ್ವರು
ತನ್ನ ಸಿರಿ ಮೋರೆಯನ್ನು ತೊಳೆದುಕೊಂಡರು
ಹಾರೆ ಇರಿಸುವ ಕೊಟ್ಟಿಗೆಗೆ ಹೋದರು
ಬಸರೂರ ಪನ್ನೆ ಹಾರೆ ಬಲ ಹೆಗಲಲ್ಲಿರಿಸಿದರು
ಸಾವಿರ ಮುಡಿ ಗದ್ದೆಯ ಕಡೆ ಹೋದರು
ಹೆಚ್ಚಿದ ನೀರನ್ನು ತಗ್ಗಿಸಿದರು
ತಗ್ಗಿದ ನೀರನ್ನು ಹೆಚ್ಚಿಸಿದರು
ಅಲ್ಲಿಂದ ಹಾಗೇ ಬಂದರು
ಹಾರೆ ಇರಿಸುವ ಕೊಟ್ಟಿಗೆಯಲ್ಲಿ ಹಾರೆ ಇರಿಸಿದರು
ಮನೆಯೊಳಗಡೆ ಹೋದರು
ತೂಗುಯ್ಯಾಲೆಯಲ್ಲಿ ಕುಳಿತರು
ಅವರ ಮದುಮಗಳು ಅಕ್ಕಮಕ್ಕೆ ದೆಯ್ಯಾರನ್ನು
ಕರೆದರು ಮಂಜಣಾಳ್ವರು
ಯಾರು ಯಾರೇ ಮದುಮಗಳೇ ಎಂದು ಕರೆದರು
ಒಂದು ಕರೆಗೆ ಓಗೊಟ್ಟರು

---

* ಕರಾವಳಿಯ ಬೇಸಾಯದ ಹಾಡುಗಳು
ಸಂ: ಅಮೃತ ಸೋಮೇಶ್ವರ, ತುಳು ಪಾಡ್ದನ ಸಂಪುಟ, ಕನ್ನಡ ವಿ.ವಿ. ಹಂಪಿ, ೧೯೯೭.

ಎರಡನೇ ಕರೆಗೆ ದನಿಗೊಡುತ್ತಾ ಬಂದರು
ಯಾಕೆ ಕರೆದಿರಿ ಮದುಮಗ ಎಂದು ಕೇಳಿದರು
ಹೆಚ್ಚಿನ ಕಜ್ಜವೇನು ಇಲ್ಲ ಮದುಮಗಳೇ ಕೇಳಿದೆಯಾ
ಎರಡು (ಕೋಣ) ಕಟ್ಟಿ ಉಳಲು
ಎರಡು ಕೋಣ ಕರುಗಳು ಬೇಕು
ಒಂಟಿಯಾಗಿ ಕಟ್ಟಿ ಕರೆಯಲು
ನಾಲ್ಕು ಕಾಲ ಹಸು ಆಗಬೇಕು
ಸುಬ್ರಹ್ಮಣ್ಯ ಷಷ್ಠಿಗೆ ಹೋಗಬೇಕೆಂದರು
ಬೆಳಗಿನ ಅಡುಗೆ ಆರೋಗಣೆ ಬೆಳಗ್ಗೆ (ಬೇಗನೆ) ಆಗಬೇಕು
ವೇಳೆಯ ಬಿಸಿ ನೀರು ವೇಳೆಯಲ್ಲಿ ಆಗಬೇಕೆಂದರು
ಅಷ್ಟು ಮಾತು ಕೇಳಿದರು ಅಡುಗೆ ಆರೋಗಣೆ ಮಾಡಿದರು
ಅಡ್ಡಕೊಯ್ದು ನೀರಾರಿಸಿದ ಪಲ್ಯ ಮಾಡಿದರು
ನೀಟ ಕೊಯ್ದು ಹುಳಿಪದಾರ್ಥ ಮಾಡಿದರು
ಅದಕ್ಕೊಪ್ಪಿದ ಉಪ್ಪಿನಕಾಯಿ ಮಾಡಿದರು
'ಕಂಚೀರ ಮೆಂಚೀರ' ಬಿದಿರಮೊಳಕೆ ಕಾಮಟೆ
'ಪೊಟ್ಟೀರ' ಪೊಡಿಮಾಪಲ ಲಿಂಬೆಯ ಉಪ್ಪಿನಕಾಯಿ
ನೀಲ ಬಣ್ಣದ ತುಪ್ಪ
ಪಚ್ಚೆ ಬಣ್ಣದ ಪಸಂಗರಿ ಜೋಡಿಸಿಕೊಂಡರು
ಅನ್ನ ಪಲ್ಯ ಅದ ನಡುವೆ
ಕಲ್ಲು ಕಟ್ಟಿದ ಬಾವಿಯಲ್ಲಿಗೆ ಹೋದರು
ಆಕಾಶದ ಏತಮರ ಹಿಡಿದರು
ಪಾತಾಳದ ಹನಿನೀರು ಎತ್ತಿದರು
ಸಾವಿರ ಕೊಡ ಬಿಸಿನೀರು
ಸಾವಿರ ಕೊಡ ತಣ್ಣೀರ ಸನ್ನಾಹ ಮಾಡಿದರು
ಬೆಳ್ಳಿಯ ಸಿರಿಗಿಂಡೆ ಹಿಡಕೊಂಡರು
ಬೂದಿಯಿಂದ ಬೆಳ್ಳಗೆ ತೊಳೆದರು

ಗಿಂಡೆಯಲ್ಲಿ ನೀರು ತುಂಬಿಸಿದರು
ತುಳಸಿ ಕಟ್ಟೆಯಲ್ಲಿಟ್ಟರು
ಮನೆಯೊಳಗಡೆ ಬಂದರು
ಬೆಳ್ಳಿಯ ಎಣ್ಣೆಯ ಕುಡಿಕೆ ತೆಕ್ಕೊಂಡರು
ಬಂಗಾರದ ಚಿಕ್ಕ ಸೌಟು ಹಾಕಿದರು
ಯಾರು ಮದುಮಗ ಕೇಳಿದಿರಾ
ಎಣ್ಣೆ ಹಚ್ಚಿಕೊಳ್ಳಿ ನೀರ ಜಳಕ ತೀರಿಸಿರಿ ಎಂದಳು
ನೆತ್ತಿಗೆ ನೆಯ್ಯೆಣ್ಣೆ ಹಚ್ಚಿದರು
ಬೆನ್ನಿಗೆ ಬಿಸಿಯೆಣ್ಣೆ ಹಚ್ಚಿದರು
ಎದೆಗೆ ಮಿಂಚೆಣ್ಣೆ ಹಚ್ಚಿದರು
ಮೂಗಿಗೆ ನಸ್ಯದೆಣ್ಣೆ ಹಚ್ಚಿದರು
ಕಿವಿಗೆ ಕೀಲೆಣ್ಣೆ ಹಚ್ಚಿದರು
ಉಗುರಿಗೆ ಉರಿಯೆಣ್ಣೆ ಹಚ್ಚಿದರು
ಪಾದಕ್ಕೆ ಹನಿಯೆಣ್ಣೆ ಹಚ್ಚಿದರು
ಬಿಸಿನೀರ ಬಚ್ಚಲಿಗೆ ಬಂದರು
ಬಿಸಿನೀರಲ್ಲಿ ಬಿಸಿಯಾದರು
ತಂಪಿಗೆ ತಣ್ಣೀರಲ್ಲಿ ಮಿಂದರು
ತುಳಸಿಕಟ್ಟೆಯ ಬಳಿ ಬಂದರು
ಪುಣ್ಯಕ್ಕೆ ನೀರು ತಳಿದರು
ಮೂಡುಕಡೆಯ ಸೂರ್ಯನನ್ನು ಸ್ತುತಿಸಿದರು
ತುಳಸೀತೀರ್ಥ ಸ್ವೀಕರಿಸಿದರು
ತುಳಸಿಗೆ ಮೂರುಸುತ್ತು ಬಂದರು
ಗಂಧದ ಕೊಟ್ಟಿಗೆಗೆ ಬಂದರು ಗಂಧದ ಕೊರಡು ತೆಕ್ಕೊಂಡರು
ಗಂಧ ಅರೆದರು
ಹಣೆಗೆ ಸೂರ್ಯ ಬೊಟ್ಟು ಇಟ್ಟರು
ಎದೆಗೆ ಶ್ರೀಗಂಧ ಹಚ್ಚಿದರು

ಪುಣ್ಯಕ್ಕೆ ನಾಮ ಎಳೆದುಕೊಂಡರು
ಭಕ್ತಿಗೆ ವಿಭೂತಿ ಪೂಸಿದರು
ಅಲ್ಲಿಂದ ಬಂದರು ತೆಂಕಣ ಕೋಣೆಗೆ ಬಂದರು
ಕೊಟ್ಟುಮಣೆ ಇಟ್ಟು ಕುಳಿತರು
ಬಂಗ ಬಾಳೆಯ ತುದಿ ತುಂಡು ಎಲೆ ಹಾಕಿದರು
ಎಲೆಗೆ ನೀರು ಹನಿಸಿದರು
ಮುತ್ತುವರ್ಣದ ಅನ್ನ ಕಾಚಿ ವರ್ಣದ ಪಲ್ಯ
ನೀಲವರ್ಣದ ತುಪ್ಪ ಪಚ್ಚೆ ವರ್ಣದ ಪಸೆಂಗಿರಿ
ಅದಕ್ಕೊಪ್ಪಿದ ಉಪ್ಪಿನಕಾಯಿ ಬಡಿಸಿದರು
ಎಡದಲ್ಲಿ ಬೆಕ್ಕಿಗೆ ಹಾಕಿದರು
ಬಲದಲ್ಲಿ ನಾಯಿಗೆ ಹಾಕಿದರು
ಮೂರು ಸಲ ಮನದಲ್ಲಿ ಜಪಿಸಿದರು
ಬಿಸಿಬಿಸಿಯಾಗಿ ಉಂಡರು ಬಗ ಬಗ ಬೆವತರು
ಉಂಡ ಎಂಜಲು ತೊಳಕೊಂಡರು
ತೂಗುಯ್ಯಾಲೆಯಲ್ಲಿ ಕುಳಿತರು
ಅಡಿಕೆ ವೀಳ್ಯ ಮೆದ್ದರು
ಅಷ್ಟು ಹೊತ್ತಿಗೆ ಅವರ ಮೂಲದ ಬಬ್ಬುವನ್ನು ಕರೆದರು
ಒಂದು ಕರೆಗೆ ಓಗೊಟ್ಟ
ಎರಡನೆ ಕರೆಗೆ ದನಿಕೊಡುತ್ತ ಬೀಳುತ್ತೇಳುತ್ತ ಬಂದ
ನಡುವಂಗಳದಲ್ಲಿ ನಿಂತುಕೊಂಡ
ಕೈಮುಗಿದು ಉಪಚಾರ ಮನ್ನಿಸಿದ
ಒಡೆಯರೆಂದರು ಯಾರೋ ಬಬ್ಬು ಕೇಳಿದೆಯಾ
ಎರಡು ಕಟ್ಟಿ ಉಳಲಿಕ್ಕೆ ಎರಡು ಕೋಣಕರುಗಳನ್ನು
ಒಂದನ್ನು ಕಟ್ಟಿ ಕರೆಯಲಿಕ್ಕೆ ಒಂದು ಕಪಿಲೆ ಹಸುವನ್ನು
ತರಲು ಹೊರಟಿರುವೆ ಸುಬ್ರಹ್ಮಣ್ಯಕ್ಕೆ
ಬೇಗನೇ ಬರುವೆನೆಂದರು

ಅವರ ಮಡದಿಯನ್ನು ಕರೆದರು
ಯಾರೇ ಮದುಮಗಳೆ ಕೇಳಿದೆಯ
ಸುಬ್ರಹ್ಮಣ್ಯಕ್ಕೆ ಹೋಗುವೆ ನಾನು ಬೇಗನೆ ಬರುವೆ
ಜತನದಿಂದಿರು ಎಂದರು
ಕಲ್ಲಪೆಟ್ಟಿಗೆಯ ಬಾಗಿಲು ತೆರೆದರು
ಸರಪಳಿ ಅಂಚಿನ ಧೋತರ ಉಟ್ಟರು
ಪಚ್ಚೆ ಬಣ್ಣದ ಮಾಸಡಿಬಟ್ಟೆ ಕಟ್ಟಿದರು
ಕೋಲು ಕಂಬಿಯ ಶಾಲಿನಿಂದ ಚುಂಗು ಇಟ್ಟು ಮುಂಡಾಸು ಕಟ್ಟಿದರು
ಧೋತರದಲ್ಲಿ ಸಾವಿರ ವರಹ ಕಟ್ಟಿದರು
ಚುಂಗಿನಲ್ಲಿ ಮೂವತ್ತು ವರಹ ಕಟ್ಟಿದರು
ಅಂಗೈ ಬಳೆ ತೊಟ್ಟರು ಮುಂಗೈ ಸರಪಳಿ ಇಟ್ಟರು
ಮುತ್ತಿನ ಉಂಗುರವಿಟ್ಟರು
ಬೆಳ್ಳಿಯ ಚೂರಿ ಹಿಡಕೊಂಡರು
ಬಂಗಾರದ (ನಸ್ಯದ) ಬುರುಡೆ ಹಿಡಕೊಂಡರು
ಚಾವಡಿ ಇಳಿದರು ಮೂಡು ಮೊಗಸಾಲೆ ಇಳಿದರು
ಹೊರ ಅಂಗಳ ಕಳೆದರು
ಕಾಲಿಗೆ ಎಕ್ಕಡ ಹಾಕಿಕೊಂಡರು
ಬಿಸಿಲಿಗೆ ಕೊಡೆ ಹಿಡಕೊಂಡರು
ಆಳು ಮಂದಿಗೆಳನ್ನು ಕರಕೊಂಡರು
ಹೆಬ್ಬಾಗಿಲು ದಾಟಿದರು ಹತ್ತು ಹದಿನಾರು ಮೆಟ್ಟಿಲು ಇಳಿಯುತ್ತ
ಬಾಕಿತ್ತಿಮಾರಿಗೆ ಹೋದರು
ಅಡ್ಡವಿರುವ ಗುಜ್ಜದಣಪೆ ದಾಟಿದರು
ನೀಟವಾದ ದಾರಿಯಲ್ಲಿ ಹೋದರು
ಸತ್ಯ ಕಂಬಳ ಕಳೆದರು
ಕಲ್ಲ ಕಾಲು ಸಂಕ ನೂಲ ಕೈತಾಂಗು ಕಳೆದರು
ಒಂಟಿ ಮರುವ ಓರೆ ಮುಚ್ಚಿರು ಕಳೆದರು

ಕಹಿಕಾಸರಕ ಸಿಹಿಮಾವು ಕಳೆದರು
ಉಪ್ಪು ಇಳಿಸುವ ಉಪ್ಪುಂಗಳ ಅಕ್ಕಿ ಇಳಿಸುವ ಅಟ್ಟಂಗಳ
ದಾಟುತ್ತ ನಡೆದರು
ಕೆಳಗಣ ಪಂಜ ಕಳೆದರು ಮೇಗಣ ಪಂಜ ಕಳೆದರು
ಮಂದಿ ಹೋಗುವ ಮಾರ್ಗ ಕಳೆದರು
ಜಾನುವಾರು ಇಳಿಯುವ ಹೆದ್ದಾರಿ ಕಳೆದರು
ಅಲ್ಲಿಂದಲೂ ಮುಂದುವರಿದರು
ಸುಬ್ರಹ್ಮಣ್ಯದ ಸುಂಕದ ಕಟ್ಟೆಯೆಡೆಗೆ ಬಂದರು
ದಾರಿಯ ಸುಂಕವನ್ನು ತೆತ್ತರು
ಸುಬ್ರಹ್ಮಣ್ಯ ದೇವಸ್ಥಾನದ ಹದಿನಾರು ಮೆಟ್ಟಿಲು ಇಳಿದರು
ದೇವಸ್ಥಾನಕ್ಕೆ ಮೂರು ಸುತ್ತು ಬಂದರು
ಗರ್ಭಗುಡಿಯ ಬಾಗಿಲಲ್ಲಿ ನಿಂತರು
ಹರಿಕೆ ಕಾಣಿಕೆ ಸಲ್ಲಿಸಿದರು ದೇವರ ಪ್ರಸಾದ ಪಡೆದರು
ಅಲ್ಲಿಂದ ಹಿಂದಿರುಗಿ ಬಂದರು
ಕುಳುಕುಂದ ಬಯಲಿಗೆ ಬಂದರು
ಸಂತೆಗದ್ದೆ ಕಳೆದರು
ತುರುಕನಂಗಡಿ ಕಳೆದರು
ಸೂಳೆಯರ ನಾಟಕ ಕುಣಿತದವರ ವಿನೋದ ಕಳೆದರು
ಗುಬ್ಬಿಗಳ ನಾಟ್ಯ ಕಳೆದರು ಕೋಳಿಯಂಕ ಗದ್ದೆ ಕಳೆದರು
ತೆಂಗಿನಕಾಯಿ ತಪ್ಪಂಗಾಯಿ ನೋಡಿದರು
ಹಣದ ಜೂಜು ನೋಡಿದರು
ಜಾನುವಾರುಗಳ ಬಯಲಿಗೆ ಇಳಿದರು
ಕೋಣಗಳ ಹಿಂಡುಗಳ ನಡುವೆ ಹೋದರು
ಹೋರಿಗಳ ಚೆಂದ ನೋಡಿದರು
ಅಲ್ಲಿ ನಿಂತು ನೋಡುವಾಗ
ಕೋಣಗಳ ಹಿಂಡಿನಲ್ಲಿ ಕಾಣಿಸಿದವು

ಸುಲಕ್ಷಣವಾದ ಎರಡು ಮರಿಗೋಣಗಳು
ಭಾಗ್ಯ ಭವಿಷ್ಯವುಳ್ಳ ಕೋಣಗಳು
ಹೊಟ್ಟೆಯಡಿಯಲ್ಲಿ 'ಮಂಗಳ' ಮಚ್ಚೆ
ಬಾಲದಲ್ಲಿ ಬಿಳಿಯ ಬಣ್ಣ
ಹಣೆಯಲ್ಲಿ ನಾಮ ಕೊಕ್ಕೆ ಕೊಂಬು
ಕೋಣಗಳಲ್ಲಿ ಪ್ರೀತಿ ತೋರಿದರು
ತಟ್ಟಿ ಎಬ್ಬಿಸಿದರು
ಕಾಲ್ನಡೆಯ ಗೌಡನನ್ನು ಕರೆದರು
ಯಾರಯ್ಯ ಕಾಲ್ನಡೆಯ ಗೌಡ ಕೇಳಿದೆಯ
ಇವೆರಡು ಮರಿಗೋಣಗಳಿಗೆ ಕ್ರಯ ಹೇಳೆಂದರು
ಯಾರಯ್ಯ ಮಂಜಣಾಳ್ವರೆ ಕೇಳಿದಿರಾ
ಕೋಣದ ಕೊಂಬಿನಿಂದ ಬಾಲದ ತುದಿ ತನಕ
ವರಹ ನಾಣ್ಯ ಇಡಬೇಕೆಂದ
ಯಾರಯ್ಯ ಗೌಡ ಹರಿವಾಣ ಹಿಡಿಯೆಂದರು
ಬಂಗಾರದ ವರಹ ಸುರಿದರು ಮಂಜಣಾಳ್ವರು
ಕೋಣದ ಪ್ರೀತಿ ಬಿಟ್ಟ ಗೌಡ ವರಹದ ಪ್ರೀತಿ ತೋರಿದ
ಹರಿವಾಣದಲ್ಲಿ ಬಂಗಾರದ ವರಹ ಪಡೆದ
ಮತ್ತೆಂದ ಜಾನುವಾರುಗಳ ಗೌಡ
ಆರುಕಾಸಿನ ಕೋಣವಾದರೂ ಕೊಟ್ಟೇನು
ಮೂರು ಕಾಸಿನ ಹಗ್ಗ ಕೊಡಲಾರೆ
ಹುಲ್ಲು ಕಡ್ಡಿ ಬದಲಿಸಿಕೊಂಡರು
ಕೋಣಗಳಿಗೆ ಹಗ್ಗವಿಕ್ಕಿದರು ಮಂಜಣಾಳ್ವರು
ಯಾರಯ್ಯ ಆಳ್ವರೆ ಕೇಳಿದಿರಾ
ಭಾಗ್ಯ ಭವಿಷ್ಯದಲ್ಲಿ ಸಾಕಿರಿ ಒಳ್ಳೆಯ ಹೆಸರು ಕೇಳಿರೆಂದ ಗೌಡ
ಆಳು ಮಂದಿಗಳಲ್ಲಿ ಮಂಜಣಾಳ್ವರೆಂದರು
ಮೂರು 'ಉರಲ್' ಹಾಕಿರಿಯೆಂದರು

ಕೋಣಗಳನ್ನು ತಂದರು
ಕುಳುಕುಂದ ಬಯಲು ಕಳೆದರು
ಕೋಳಿಯಂಕದ ಗದ್ದೆ ಕಳೆದರು
ಸಂತೆ ಗದ್ದೆ ಕಳೆದರು
ತುರುಕನಂಗಡಿ ಕಳೆದರು
ಸಮಗಾರ ಕೇರಿ ಕಳೆದರು
ಸೂಳೆಯರ ಪೇಟೆ ಕಳೆದರು
ರಂಭೆಯರ ನಾಟಕ ಕಳೆದರು
ಗುಬ್ಬಿಗಳ ವಿನೋದ ಕಳೆದರು
ಮಲ್ಲಿಗೆ ಕೊಪ್ಪಳ ಕಳೆದರು
ಹೂವಿನ ಪೇಟೆ ಕಳೆದರು
ಸುಬ್ರಹ್ಮಣ್ಯ ದೇವಾಲಯದೆಡೆಗೆ ಬಂದರು
ಕೋಣಗಳನ್ನು ಎರಗಿಸಿದರು
ಅಲ್ಲಿಂದ ಮುಂದೆ ಬಂದರು
ಸುಂಕದ ಕಟ್ಟೆ ಕಳೆದರು
ಕಾಲ್ನಡೆ ಹೋಗುವ ಹೆದ್ದಾರಿ ಕಳೆದರು
ಮಂದಿ ಹೋಗುವ ಮಾರ್ಗ ಕಳೆದರು
ಕೆಳಗಣ ಪಂಜ ಕಳೆದರು ಮೇಗಣ ಪಂಜ ಕಳೆದರು
ಅಕ್ಕಿ ಇಳಿಸುವ ಅಟ್ಟಂಗಳ ಕಳೆದರು
ಉಪ್ಪು ಇಳಿಸುವ ಉಪ್ಪುಂಗಳ ಕಳೆದರು
ಒಂಟಿ ಮರುವ ಕಳೆದರು
ಓರೆ ಮುಚ್ಚಿರಿ ಕಳೆದರು
ಅಡ್ಡವಾದ ದಣಪೆ ಕಳೆದರು
ಕಲ್ಲ ಕಾಲು ಸಂಕ ಕಳೆದರು
ನೂಲ ಕೈತಾಂಗು ಕಳೆದರು
ಬಾಕಿತ್ತಿಮಾರು ಕಳೆದರು

ರೆಂಜಲಡಿ ಬರಿಕೆಗೆ ಕೋಣಗಳನ್ನು ತಂದರು
ಅರಸಿನ ನೀರು ಮಾಡಿ ಆರತಿಯೆತ್ತಿದರು
ಹಟ್ಟಿಯಲ್ಲಿ ಕಟ್ಟಿದರು
ಗುಂಡು ಸಂಕೋಲೆ ಬಿಗಿದರು
ಮರಿಗೆಯಲ್ಲಿ ಅಕ್ಕಚ್ಚು ಹೊಯ್ದರು
ಹುಲ್ಲು ಕೊಡಹಿ ಇಕ್ಕಿದರು
ಒಳಮನೆಗೆ ಬಂದರು
ತನ್ನ ದುಸ್ತು ಬದಲಾಯಿಸಿದರು
ಬೆಳಗ್ಗಿನ ಹಾಲುಗಂಜಿ ಉಂಡರು
ಮೂಲದ ಬಬ್ಬುವನ್ನು ಕರೆದರು
ಯಾರೋ ಬಬ್ಬು ಕೇಳಿದೆಯ ಈ ಕೋಣಗಳನ್ನು
ಪ್ರೀತಿ ಕೊಂಡಾಟದಿಂದ ಸಾಕೆಂದರು ಒಡೆಯರು
ಪ್ರೀತಿ ಕೊಂಡಾಟದಿಂದ ಸಾಕುತ್ತಿದ್ದಾನೆ ಬಬ್ಬು
ಆ ಸಮಯದಲ್ಲಿ ಬಾರದ ಓಲೆ ಬಂದಿತು
ಓಲೆ ಓದಿಕೆ ಮಾಡಿದರು
ಗುರುವಾರ ದಿನ ಸೀಮೆಯ ಅರಸು ಕಂಬಳವಂತೆ
ಕೋಣ ತರಬೇಕೆಂದು ಓಲೆ ಬರೆದಿದ್ದಾರೆ
ಆ ವೇಳೆಯಲ್ಲಿ ಹೇಳಿದ ಬಬ್ಬು
ಓ ಒಡೆಯರೆ ಕೇಳಿದಿರಾ
ಕೋಣಗಳನ್ನು ಸಿಂಗಾರ ಮಾಡಬೇಕು
ಹೆಗಲಿಗೆ ನೊಗ ಆಗಬೇಕು
ಕೊಂಬುಮರ ಆಗಬೇಕು ಮೂಗಿಗೆ ಹಗ್ಗ ಆಗಬೇಕು
ನೆತ್ತಿಗೆ ನೆತ್ತಿ ಹಗ್ಗ ಆಗಬೇಕು
ಬೆನ್ನಿಗೆ ಪಾವಡೆ ಆಗಬೇಕು
ಕಾಲಿಗೆ ಗಗ್ಗರ ಆಗಬೇಕು
ಹೆಗಲಿಗೆ ದಿಂಬು ಆಗಬೇಕು

ಕಿವಿಗೆ ಗುಬ್ಬಿ ಆಗಬೇಕು
ಕೊರಳಿಗೆ ಗೆಜ್ಜೆ ಮಾಲೆ ಆಗಬೇಕು
ಪೀಲಿಯ ಬೆತ್ತ ಆಗಬೇಕು
ಗೋರು ಹಲಗೆ ಆಗಬೇಕು
ಅಷ್ಟು ಮಾತು ಕೇಳಿದರು ಧನಿಗಳು
ಕೋಣಗಳ ಸಿಂಗಾರದ ಸನ್ನಾಹ ಮಾಡಿದರು
ಬೆಳಗು ಮುಂಜಾನೆ ಎದ್ದರು
ಯಾರೋ ಬಬ್ಬು ಕೇಳಿದೆಯ ನೀನು
ಸೀಮೆಯ ಅರಸು ಕಂಬಳಕ್ಕೆ ಹೋಗಬೇಕು ನಮಗೆ
ಊಟಮಾಡಿಕೊಳ್ಳು ಎಂದರು
ಅಕ್ಕಚ್ಚು ಕೊಟ್ಟಿಗೆಗೆ ಹೋದ ಬಬ್ಬು
ಯಾರಮ್ಮ ಒಡತಿ ಕೇಳಿದಿರಾ
ಕೊನೆಯ ಗಂಜಿ ನೀರೆಂದು ಎರೆಯಿರಿ ಒಡತಿ ಎಂದ
ಹಾಗೇಕೆ ಹೇಳುತ್ತಿ ಬಬ್ಬು ಎಂದು ಕೇಳಿದರು
ಮೊದಲ ಹೆಂಡತಿಯ ನ್ಯಾಯಕಾರರು
ಈಗಿನ ಹೆಂಡತಿಯ ಇಷ್ಟಗಾರರು
ನನ್ನಲ್ಲಿ ಹಗೆ ಸಾಧಿಸುತ್ತಾರೆಂದ ಬಬ್ಬು
ಕಣ್ಣಲ್ಲಿ ನೀರಿಳಿಸಿದ ಬಬ್ಬು
ಯಾರಮ್ಮ ಬೈದ್ಯೆತಿ ಕೇಳಿದಿರಾ
ಕೊನೆಯ ಕಳ್ಳೆಂದು ಎರೆಯಿರಿ ಬೈದ್ಯೆತಿಯವರೆ ಎಂದ
ಹಾಗೇಕೆ ಹೇಳುವೆ ಬಬ್ಬು ಎಂದು ಕೇಳಿದರು
ಅದು (ಏಕೆಂದರೆ) ಮೊದಲ ಹೆಂಡತಿಯ ನ್ಯಾಯಕಾರರು
ಈಗಿನ ಹೆಂಡತಿಯ ಇಷ್ಟಗಾರರು
ನನ್ನಲ್ಲಿ ಹಗೆ ಸಾಧಿಸುತ್ತಾರೆಂದ ಬಬ್ಬು
ಬೇಗನೆ ಕಳ್ಳು ಕುಡಿದ ಎಲೆಯಡಿಕೆ ಮೆದ್ದ
ತನ್ನ ಗುಡಿಸಲಿಗೆ ಹೋದ ಬಬ್ಬು

ಸೊಂಟಕ್ಕೆ ಕಾಂಗು ಬಟ್ಟೆ ಉಟ್ಟುಕೊಂಡ ಬಬ್ಬು
ಕಣ್ಣಿಯ ಮುಟ್ಟಾಳೆ ಇಟ್ಟುಕೊಂಡ ಬಬ್ಬು
ಕೈಯಲ್ಲಿ ಪೀಲಿಯ ಬೆತ್ತ ಹಿಡಕೊಂಡ
ಯಾರೇ ಹೆಣ್ಣೆ ಕೇಳಿದೆಯ
ಈ ಗಳಿಗೆಯೊಳಗೇ ಬರುತ್ತೇನೆಂದ ಬಬ್ಬು
ಹಾಗೇ ಅಲ್ಲಿಂದ ಹೊರಟು ಬಂದ
ಒಡೆಯರ ಮನೆಗೆ ಬಂದ
ಎಣ್ಣೆ ಹಚ್ಚಿ ಕೋಣಗಳನ್ನು ಮೀಯಿಸಿದರು
ಬೈಹುಲ್ಲು ಕೊಡಹಿದರು ಮರಿಗೆಯಲ್ಲಿ ಹುರುಳಿ ಇರಿಸಿದರು
ಹಿಂಡಿಕೊಟ್ಟರು ಹಾಲು ಗಂಜಿ ಎರೆದರು
ಕೋಣಗಳನ್ನು ಸಿಂಗರಿಸಿದರು
ಜುಮಾದಿ ಗುಡಿಗೆ ಸುತ್ತು ಬರಿಸಿದರು
ದೈವಸ್ಥಾನದ ಎದುರು ಡೊಗ್ಗಾಲು ಹಾಕಿಸಿದರು
ಕೋಣಗಳನ್ನು ನಡೆಯಿಸಿದ ಬಬ್ಬು
ಬೊಳ್ಳನನ್ನು ಎದುರಲ್ಲಿ ಹಿಡಕೊಂಡರು
ಕಾಳನನ್ನು ಹಿಂದುಗಡೆಯಲ್ಲಿ ಹಿಡಕೊಂಡ ಬಬ್ಬು
ಜೊತೆಗೆ ಜನಗಳು ಹೋದರು
ಕೊಂಬು ತಮ್ಮಟೆ ಸಿಡಿಮದ್ದುಗಳ ಅಬ್ಬರದಲ್ಲಿ ಹೋದರು
ಕಂಬಳಕ್ಕೆ ಕೋಣಗಳನ್ನು ಇಳಿಸಿದರು
ಸಾಲಾಗಿ ನಿಲ್ಲಿಸಿದರು
ಮೊದಲಿಗೆ ನಿಶಾನೆಗೆ ನೀರು ಹಾರಿಸಿದವರಿಗೆ
ಹಿರಿಯ ಮರ್ಯಾದೆ ಎಂದರು
ಕೋಣಗಳಿಗೆ ನೊಗಮರ ಕಟ್ಟಿದರು
ಗೋರು ಹಲಗೆ ಕಟ್ಟಿದರು
ಮಂಜಣಾಳ್ವರು ಕೋಣಗಳನ್ನು ಓಡಿಸಿದರು
ಅಡ್ಡಕ್ಕೆ ಓಡಿಸುವಾಗ ನೀಟಕ್ಕೆ ಹೋದ ಬೊಳ್ಳ

ನೀಟಕ್ಕೆ ಓಡಿಸುವಾಗ ಅಡ್ಡಕ್ಕೆ ಹಾದ ಕಾಳ
ಹುರುಳಿ ತಿಂದ ಕೋಣಗಳು ಸೊಕ್ಕು ಕಾಣಿಸಿದವು
ಕೊಂಕು ಕೊಂಬಿನಲ್ಲಿ ಬೆರಟಿದವು
ಆ ವೇಳೆಯಲ್ಲಿ ಹೇಳಿದ ಬಬ್ಬು
ಓ ಒಡೆಯರೆ ಕೇಳಿದಿರಾ
ನಾನೊಮ್ಮೆ ಬಿಡುತ್ತೇನೆ ನಾನೊಮ್ಮೆ ಓಡಿಸುತ್ತೇನೆ
ಅದಕೆಂದರು ಮಂಜಣಾಳ್ವರು
ಸೀಮೆಯ ಸತ್ಯದ ಅರಸು ಕಂಬಳವಿದು ಬಬ್ಬು
ನೀನು ಇಳಿಯಬೇಡ ಮುಟ್ಟಬೇಡ ಕೇಳಿದೆಯ
ಆಗೆಂದ ಬಬ್ಬು ಓ ಒಡೆಯರೆ ಕೇಳಿದಿರಾ
ಅವು ನಾನು ಸಾಕಿದ ಕರುಗಳು
ನಾನು ಇಳಿಯುತ್ತೇನೆ ನಾನು ಮುಟ್ಟುತ್ತೇನೆಂದು
ಹಿಡಿಯದ ಚಲ ಹಿಡಿಯುತ್ತಾನೆ ಬಬ್ಬು
ಸೀಮೆ ಅರಸು ಕಂಬಳಕ್ಕೆ ಇಳಿದ
ಬೊಳ್ಳನ ಬಾಲವನ್ನು ಹಿಡಿದ ಬಬ್ಬು
ಕಾಳನಿಗೆರಡು ಏಟು ಕೊಟ್ಟ
ಕಾಳನ ಬಾಲವನ್ನು ಹಿಡಿದ ಬೊಳ್ಳನಿಗೆ ಏಟು ಕೊಟ್ಟ
ಹಲಗೆಗೆ ತುದಿಗಾಲು ಇರಿಸಿದ ಬಬ್ಬು
ಮೂರು ಉರಲ್ ಹಾಕಿದ
ಅಡ್ಡಕ್ಕೆ ಓಡಿಸಿದ ನೀಟಕ್ಕೆ ಹೋದವು
ಪೂಕರೆ ಹಾಕುವ ಹೊಲಕ್ಕೆ ಮೂರು ಸುತ್ತು ಬಂದವು
ಕೊಕ್ಕೆ ಕೊಂಬಿನಲ್ಲಿ ಗೋರಿದ ಕೋಣ
ಕೆಂಚು ಮೀಸೆ ಕೆದರಿದ
ಕುಪ್ಪುಳು ಕಣ್ಣು ಕೆರಳಿಸಿದ
ಮೂರು ಬಾರಿ ಡೊಗ್ಗಾಲಿಕ್ಕಿದ
ಮಂಜಣಾಳ್ವರ ಕೊಂಡಾಟದ ಕೋಣ

ಬಬ್ಬುವೂ ಕೋಣಗಳೂ ಸೀಮೆಯ ಅರಸುಕಂಬಳದಲ್ಲಿ
ಮಾಯಾಸ್ವರೂಪ ಹೊಂದಿದರು
ಅದನ್ನು ಒಡೆಯರು ನೋಡಿದರು
ತಲೆತಲೆ ಬಡಿಸುಕೊಂಡರು
ಹೇಳಿದ್ದನ್ನು ಕೇಳದಾದೆ ಬಬ್ಬು
ಚಲವನ್ನೇ ಹಿಡಿದೆ ಎಂದು ಬಿಕ್ಕಳಿಸಿ ಅತ್ತರು
ಅಲ್ಲಿಂದ ರೆಂಜಲಡಿ ಬರಿಕೆಗೆ ಹಿಂದಿರುಗಿದರು
ಒಡೆಯನೂ ಒಡತಿಯೂ ಚಿಂತೆಯಲ್ಲಿ ಮುಳುಗಿದರು
ಈಜೋ ಮಂಜೊಟ್ಟಿ ಗೋಣ
ಈಜೋ ಮಂಜೊಟ್ಟಿ ಗೋಣ

ಬಾಮ ಕುಮಾರ

ಓಯೆ ಡೆನ್ನ ಡೆನ್ನಾನ ಡೆನ್ನ ಡೆನ್ನಾನಾ...
ಮೇಲೆ ಮಿರಿಲೋಕದಲ್ಲಿ ಈಶ್ವರ ದೇವರು ಉದ್ಭವವಾದರು
ಎಡಭಾಗದಲ್ಲಿ ಪಾರ್ವತಿಯನ್ನು ಉಂಟುಮಾಡಿದರು
ಕುಳ್ಳಿರಲು ಅರಮನೆಯನ್ನು ಸೃಷ್ಟಿಸಿದರು
ಬೀಡು ಮಾಡ ಕಟ್ಟಿಸಿದರು
ಮಾಡದ ಇದಿರುಬದಿಯಲ್ಲಿ ಮುತ್ತಿನ ಕೆರೆ ತೋಡಿಸಿದರು
ಹೂವಿನ ತೋಟವನ್ನು ನೆಡಿಸಿದರು
ಬೀಡಿನ ಎಡಬದಿಯಲ್ಲಿ ಹಿರಿದಾದ ಹಟ್ಟಿಯನ್ನು ಮಾಡಿದರು
ಬಿಸಿನೀರ ಕೊಟ್ಟಿಗೆಯನ್ನು ಮಾಡಿದರು
ಮೂಲದ ಮುಂಡಾಲ ಮನುಷ್ಯನನ್ನು ಉಂಟುಮಾಡಿದರು
ಆತ ಇದಿರಿನಲ್ಲಿ ನಿಂತು ತಲೆ ಬಾಗಿದ
ದಮ್ಮಯ್ಯ ದೇವರೆ, ದಕ್ಕಯ್ಯ ದೇವರೆ
ನನ್ನನ್ನು ಯಾಕಾಗಿ ಉಂಟು ಮಾಡಿದಿರಿ? ಎಂದು ಕೇಳಿದ
ನೀನು ಯಾವ ಕೆಲಸ ಮಾಡುವೆ ಎಂದು ಕೇಳಿದರು ದೇವರು
ಹಾರೆ ಹಿಡಿದು ಕಡಿದೇನು ಒಡೆಯಾ, ಬುಟ್ಟಿ ಹಿಡಿದು ಹೊತ್ತೇನು
ನಿಮ್ಮಂಥ ಬಲ್ಲಿದರ ಮೂಲಕ್ಕೆ ನೀರೆರೆದೇನು
ಊಳಿಗಕ್ಕೆ ನಿಂತೇನು
ನೀನು ಹೋಗು ಮೂಲದ ಹೈದ
ಸರಳೆಮ್ಮೆಗೆ ಮರೊಳಿ ಮಡ್ಡಿ ಇಕ್ಕು
ಸಾಕಿಕೊಂಡು ಸಲಹಿಕೊಂಡು ಇರು ಎಂದು ಕಳುಹಿಸಿದರು
ಆ ಬಳಿಕ ಪೂಜೆ ಜರುಗಿಸಲು

ಬ್ರಾಹ್ಮಣ ಮಾಣಿಯನ್ನು ಉಂಟು ಮಾಡಿದರು
ನನ್ನ ಹೊಟ್ಟೆ ಪಾಡನ್ನು ಬಗೆಹರಿಸುವುದು ಹೇಗೆ? ಎಂದು ಕೇಳಿದ
ಬಂಗಾರದ ಕೊಕ್ಕೆ ಬೆಳ್ಳಿಯ ಕುಕ್ಕೆ ಹಿಡಿದುಕೊಂಡು
ಹುಲ್ಲು ಪೊದರು ಹಿಡಿದು ಹೂಗಳನ್ನು ಕೊಯ್ಯು
ಬೆಳಿಗ್ಗೆ ಎದ್ದು ಮೂರು ಸಲ ಮುಳುಗು ಹಾಕು
ಒದ್ದೆ ಬಟ್ಟೆ ಉಟ್ಟುಕೋ
ಮುಂಜಾನೆಯ ಹನಿಪೂಜೆ, ಮಧ್ಯಾಹ್ನದ ಮಹಾಪೂಜೆ
ರಾತ್ರಿಯ ಶಾಂತಿಪೂಜೆ ಮಾಡು
ವರ್ಷದ ಹನ್ನೆರಡು ತಿಂಗಳಿಗೆ ಹನ್ನೆರಡು ಮುಡಿ ಅಕ್ಕಿ
ನಿನಗೆ ಉಂಬಳಿ ಎಂದರು

ಬಂಗಾರದ ಕೊಕ್ಕೆ ಬೆಳ್ಳಿಯ ಕುಕ್ಕೆ ಹಿಡಿದುಕೊಂಡು
ಬೋಳುಗುಡ್ಡಕ್ಕೆ ಹೂ ಕೊಯ್ಯಲು ಹೋದ ಮಾಣಿ
ಹೂಗಳೆಲ್ಲ ಬ್ರಾಹ್ಮಣ ಮಾಣಿಯನ್ನು ನೋಡಿ
ಕೊಯ್ಯಲು ಸಿಕ್ಕಬಾರದೆಂದು ಹಂಚಿಕೆ ಮಾಡಿದವು
ಓಡಿ ಮಲೆ ಹತ್ತಿದವು
ಅರಳಿ ಮರದ ಬುಡದಲ್ಲಿ ನಿಂತವು
ನಾನು ಮೇಲು ತಾನು ಮೇಲೆಂದು
ಹೂಗಳಿಗೆಲ್ಲಾ ನ್ಯಾಯ ಬಂತು
ಅಷ್ಟು ಹೊತ್ತಿಗೆ ಬ್ರಾಹ್ಮಣ ಮಾಣಿ ಅಶ್ವತ್ಥಕಟ್ಟೆಗೆ ಬಂದ
ಅವನನ್ನು ನೋಡಿ ಹೂಗಳು ಓಡಿದವು
ಓಡೋಡುತ್ತಾ ಸಿರಿಗಳ ನಾಡಿಗೆ ಬಂದವು
ನಂದನವನದಲ್ಲಾದವು
ಹೂಗಳ ಬೆನ್ನು ಹತ್ತಿ ಹೋದ ಬ್ರಾಹ್ಮಣ ಮಾಣಿ

ಆ ಸಮಯದಲ್ಲಿ ಸಿರಿಗಳ ನಾಡಿನಲ್ಲಿ
ಏಳು ಮಂದಿ ಸಿರಿಗಳು ಇದ್ದರು
ತಂದೆ ಹುಟ್ಟಿಸಲಿಲ್ಲ, ತಾಯಿ ಹೆರಲಿಲ್ಲ

ನೆತ್ತರಲ್ಲಿ ಹುಟ್ಟಲಿಲ್ಲ, ನೀರಲ್ಲಿ ಬಳೆಯಲಿಲ್ಲ
ಸತ್ಯದಲ್ಲಿ ಹುಟ್ಟಿ ಸದ್ದಿನಲ್ಲಿ ಬಳೆದರು
ಬಂಗಾರದ ಅರಮನೆ, ಬಂಗಾರದ ದಾರವಂದ
ಬಂಗಾರದ ಮೆಟ್ಟುಕಲ್ಲು
ಅಲ್ಲಿ ಏಳು ಮಂದಿ ಸಿರಿಗಳು ಇದ್ದಾರೆ
ಜಾನಗ ಜನಪಗ ದಾರಗ ಗಣಪಗ
ಉಮ್ಮಗ ಮಯ್ಯಗ ಮಯಿಸಗ ಎಂಬವರು
ಮೇಲು ಮಿಂಚಿನಲ್ಲಿ ಏಳುಪ್ಪರಿಗೆಯ ಮೇಲೆ
ಸೊಗದಿಂದ ಇದ್ದಾರೆ
ಮಯಿಸಗ ಎಂಬವಳು ಕೊನೆಯವಳು
ಅಂದು ಆಕೆಯೆಂದಳು ಅಕ್ಕಂದಿರೆ
ಬಿಸಿಲು ಕಾಯುತ್ತಿದೆ, ಸೆಕೆ ಆಗುತ್ತಿದೆ, ಬೆವರುತ್ತದೆ ಅಕ್ಕಂದಿರೆ
ಸೊಗಸಾಗಿ ಮಿಂದು ಬರೋಣ ಅಕ್ಕಂದಿರೆ
ಬೇಡ ಮಗು ಸಿರಿಯೆ, ಬೇಡ ಎಂದರು ಅಕ್ಕಂದಿರು
ನನಗೆ ಮಿಂದೇ ಬರಬೇಕು, ಹೋಗೋಣ ಎಂದು
ಚಲ ಹಿಡಿದಳು ಆ ಮಗಳು
ಹೇಳಿದ ಹಿತದ ನುಡಿ ಕೇಳುವುದಿಲ್ಲ ನೀನು
ಹೋದರೆ ನೋಡಿದ್ದನ್ನು ನೋಡಿದೆ ಎನ್ನುವೆ
ಕೇಳಿದ್ದನ್ನು ಕೇಳಿದೆ ಎನ್ನುವೆ ಎಂದರು
ನನಗೆ ಹೋಗದೆ ಆಗದು ಎಂದಳು ಮಯಿಸಗ
ಹೇಳಿದ್ದನ್ನು ಕೇಳುವುದಿಲ್ಲ, ನೀನು ಏಳು ಮಗು ಹೋಗೋಣ ಎಂದರು
ಎಡಗೈಯಲ್ಲಿ ರವಣ ಗೆಜ್ಜೆ ಕತ್ತಿ ಬಲಕೈಯಲ್ಲಿ ಓಲೆಕೊಡೆ ಕೊಟ್ಟರು
ಮುಂದೆ ಮೂರು ಮಂದಿ ಹಿಂದೆ ಮೂರು ಮಂದಿ
ಆರು ಮಂದಿ ಅಕ್ಕಂದಿರು ನಡುವೆ ತಂಗಿಯನ್ನು ಇರಿಸಿಕೊಂಡು
ಮುತ್ತಿನ ಕೆರೆಯ ಬಳಿಗೆ ತೆರಳಿದರು
ಹೂವಿನ ಹಿತ್ತಿಲಿನ ಹತ್ತಿರಕ್ಕೆ ಹೋಗುವಾಗ

ಓಯೋಯೆ ಅಕ್ಕಂದಿರೆ, ನರಹುಳು ಇಲ್ಲದಿರುವಲ್ಲಿ
ನಮ್ಮ ಸಿರಿನಾಡಿನಲ್ಲಿ ನರಹುಳುಗಳ ವಾಸನೆ ಬರುತ್ತದಲ್ಲ ಅಕ್ಕಂದಿರೆ
ಎಂದಳು ಮಯಿಸಗ
ಅಯ್ಯೋ ಮಗು, ನೋಡಿದ್ದನ್ನು ನೋಡದಿರೆಂದು ಆಡದಿರೆಂದು ಹೇಳಿದೆವು
ಪಾಪ ಕಟ್ಟಿಕೊಂಡೆ ಮಗು, ದೋಷ ಹೊಂದಿದೆ
ಹೂವಿನ ಹಿತ್ತಿಲಿಗೆ ಹೋಗಿ ನೋಡಿ ಬಾ ಎಂದರು
ಮಯಿಸಗ ಹೋಗುವಾಗ ಹೂವಿನ ಕೊಪ್ಪಳದ ನಡುವೆ
ಬ್ರಾಹ್ಮಣ ಮಾಣಿ ಉಂಟು
ಸಿರಿಯ ಪಾದದ ಉಂಗುಟ ನೋಡಿ
ಮುಖ ಮೂರ್ಛೆ ಹೊಂದಿ ಬಿದ್ದ ಮಾಣಿ
ಬೋಧ ತಪ್ಪಿ ಬೀಳುವುದನ್ನು ನೋಡಿದಳು
ಸಿರಿಗಿಂಡೆಯ ನೀರನ್ನೂ ಕೋಲು ದರ್ಭೆಯ ಕಡ್ಡಿಯನ್ನೂ ಹಿಡಿದುಕೊಂಡಳು
ಎಡಕ್ಕೆ ಹೋದಳು ಬಲಕ್ಕೆ ಬಂದಳು
ದರ್ಭೆಯ ಕಡ್ಡಿಯಿಂದ ನೀರು ಹನಿಯಿಸಿದಳು
ಗಡಬಡಿಸಿ ಬ್ರಾಹ್ಮಣ ಮಾಣಿ ಎದ್ದು ಕುಳಿತ
ಏನು ಮಾಣಿ, ಮುಖ ಮೂರ್ಛೆ ಹೋದೆ? ಎಂದು ಕೇಳಿದಳು
ನೀನು ಎಲ್ಲಿಂದ ಬಂದೆ? ಎಲ್ಲಿಗೆ ಹೋಗುವಾತ?
ಯಾಕಾಗಿ ನಮ್ಮ ನಾಡಿಗೆ ಬಂದೆ ಎಂದು ಕೇಳಿದಳು
ನಾನು ಮೇಲು ಮಿರಿಲೋಕದಿಂದ, ಈಶ್ವರನ ನಾಡಿನಿಂದ ಬಂದೆ
ಪೂಜೆ ಪುನಸ್ಕಾರ ನಡೆಸಲು ಹೂ ತಿರಿಯಲು ಬಂದೆ
ಹೂಗಳೆಲ್ಲ ನನಗೆ ಸಿಕ್ಕದೆ ಓಡಿ ಬಂದವು
ಅವುಗಳ ಬೆನ್ನು ಹಿಡಿದು ನಾನು ಬಂದೆ ಎಂದ ಮಾಣಿ
ಆ ಕಳ್ಳ ಈಶ್ವರನಿಗೆ ಪೂಜೆ ನಡೆಸುವವನೆ ನೀನು
ಆತ ಬೈಗಿನಲ್ಲಿ ನೋಡಿದ್ದನ್ನು ಬೆಳಿಗ್ಗೆ ಬಿಡಲಾರ
ಬೆಳಿಗ್ಗೆ ನೋಡಿದ್ದನ್ನು ಬೈಗಿನಲ್ಲಿ ಬಿಡಲಾರ
ಹೆಣ್ಣ ಮರುಳ ಕೋಳಿಯ(ಅಂಕದ) ಚಪಲಗಾರ

ಕಾಡಿಗೆ ಹೋದರೆ ಆತ ಕಪ್ಪು ಮುಗ್ಗೆರ
ಊರ ನಡುವೆ ಹೋದರೆ ನಿತ್ಯ ಮದುವಣಿಗ
ಓ ಮಾಣಿ, ಕೇಳಿದ್ದನ್ನು ಕೇಳಿದೆನೆಂದು ಹೇಳದಿರು
ನೋಡಿದ್ದನ್ನು ನೋಡಿದೆನೆಂದು ಹೇಳದಿರು
ಹೊಟ್ಟೆ ತುಂಬ ಹಣ್ಣು ತಿಂದು, ದೊನ್ನೆ ತುಂಬ ಹೂ ಕೊಯ್ಯು
ನೀನಾದರೋ ಹೋಗು ಎಂದಳು
ದೊನ್ನೆ ತುಂಬ ಹೂ ಕೊಯ್ದುಕೊಂಡ, ಹೊಟ್ಟೆ ತುಂಬ ಹಣ್ಣು ತಿಂದ
ತನ್ನ ಹಾದಿ ಹಿಡಿದುಕೊಂಡು ಹೋದ

ಸಿರಿಗಳು ಮುತ್ತಿನ ಕೆರೆಯ ಬಳಿಗೆ ಹೋದರು
ಆರು ಜನ ಅಕ್ಕಂದಿರು ಮೇಲೆ ನಿಂತರು
ತಂಗಿ ಚೆಂದವಾಗಿ ಮಿಂದು ಬಂದಳು
ಅಷ್ಟು ಹೊತ್ತಿಗೆ ಬ್ರಾಹ್ಮಣ ಮಾಣಿ
ಮೇಲು ಮಿರಿಲೋಕಕ್ಕೆ ಬಂದು ಮುಟ್ಟಿದ
ಬರುವಾಗ ವೇಳೆ ಹೋಯಿತು ಕಾಲ ಮೀರಿತು ಎಂದರು
ಈಶ್ವರ ದೇವರು ನಾಲ್ಕು ಕಡೆಯ ಬಾಗಿಲು ಹಾಕಿ
ಮೆಣಸನ್ನು ಅರೆದಿಟ್ಟು ಹುಣಿಸೆಯ ಬರಲನ್ನು ಇಟ್ಟುಕೊಂಡಿದ್ದರು
ಬ್ರಾಹ್ಮಣ ಮಾಣಿ ಓಡುತ್ತಾ ಬೀಳುತ್ತಾ ಬಂದ
ಹದಿನಾರು ಮೆಟ್ಟುಕಲ್ಲ ಕೆಳಗೆ ನಿಂತುಕೊಂಡ
ಓ ಈಶ್ವರ ದೇವರೆ ಯಾಕೆ ಬಾಗಿಲು ಹಾಕಿದ್ದೀರಿ? ಎಂದು ಕೇಳಿದ
ಬಾಗಿಲು ತೆಗೆಯಬೇಕಾದರೆ ಇಷ್ಟು ವೇಳೆಯಾದುದೇಕೆ ಹೇಳು
ನಿನಗೆ ಕೊಡಬಾರದ ಶಿಕ್ಷೆ ಕೊಡಬೇಕೆಂದರು ಈಶ್ವರ
ನೀವು ಕೊಡುವ ಶಿಕ್ಷೆಗೆ ನಾನು ಒಳಗಾಗುತ್ತೇನೆ ಈಶ್ವರ ದೇವರೆ
ನನ್ನ ಮೂರು ಮಾತುಗಳನ್ನು ಹೇಳಿಬಿಡುತ್ತೇನೆ
ಅಷ್ಟು ಹೊತ್ತಿಗೆ ಬಾಗಿಲು ತೆರೆದರು ಏನು ಹೇಳೆಂದರು
ಓಡಿದ ಹೂಗಳ ಬೆನ್ನು ಹಿಡಿದು
ಸಿರಿಗಳ ನಾಡಿಗೆ ಹೋಗಿ ಬಂದ ಕತೆಯನ್ನು

ಬ್ರಾಹ್ಮಣ ಮಾಣಿ ಹೇಳಿದ
ಹಾಗಿದ್ದರೆ ನೀನು ಹೋಗು, ಪೂಜೆ ಪುನಸ್ಕಾರ ಮಾಡು ಎಂದರು
ಅವರು ಹೊರಟರು ಸಿರಿನಾಡಿಗೆ ಬಂದರು
ಮಾರಿ ನೊಣದ ರೂಪವಾದರು
ಒಳ್ಳೊಳ್ಳೆಯ ಪರಿಮಳದ ಹೂವುಗಳ ಮೇಲೆ ಕೂತರು
ಹೂ ತಿರಿಯುತ್ತ ಬಂದರು ಸಿರಿಗಳು
ಮಾರಿನೊಣ ಕುಟುಕುವುದರಲ್ಲಿ ಹೂಕೊಯ್ಯಲು ಆಗುವುದಿಲ್ಲ
ಎಂದು ಹಿಂದೆ ಹೋದರು
ಬಿಳಿ ತಾವರೆಯ ಹೂ ಆದರು ಈಶ್ವರದೇವರು
ಮುತ್ತಿನ ಕೆರೆಯಲ್ಲಾದರು
ಆರು ಜನ ಅಕ್ಕಂದಿರು ನೀರಿಗೆ ಹೋದರು
ನಲಿಯುತ್ತ ಒಲೆಯುತ್ತ ಇತ್ತು ಬೆಳ್ದಾವರೆ ಹೂ
ಅದನ್ನು ನೋಡಿ ಗಡಿಗೆಯನ್ನು ಇಟ್ಟರು
ಹೂಕೊಯ್ಯಲೆಂದು ಇಳಿದರು
ಮೊಳಕಾಲಷ್ಟು ನೀರಿಗೆ ಇಳಿಯುವಾಗ
ಸೊಂಟದಷ್ಟು ನೀರಿಗೆ ಹೋಯಿತು ಹೂ
ಸೊಂಟದಷ್ಟು ನೀರಿಗೆ ಹೋಗುವಾಗ
ಕೊರಳಷ್ಟು ನೀರಿಗೆ ಹೋಯಿತು ಹೂ
ಕೊರಳಷ್ಟು ನೀರಿಗೆ ಹೋಗುವಾಗ
ನೆಲೆ ಇಲ್ಲದ ನೀರಿಗೆ ಹೋಯಿತು ಹೂ
ಕಣ್ಣಿಗೆ ಹತ್ತಿರ ಕೈಗೆ ದೂರ ಆಯಿತು
ನಮಗೆ ಈ ಹೂ ಸಿಕ್ಕುವುದಿಲ್ಲ
ನಮ್ಮ ತಂಗಿಯನ್ನು ಕರಕೊಂಡು ಬರೋಣ ಎಂದರು
ಅರಮನೆಗೆ ಹಿಂದೆ ಬಂದರು
ನಮ್ಮ ಮುತ್ತಿನ ಕೆರೆಯಲ್ಲಿ
ಬಿಳಿ ತಾವರೆಯ ಹೂವಿದೆ ಮಗು

ನಮಗೆ ಸಿಗುವುದಿಲ್ಲ ನಿನಗೆ ಸಿಗುತ್ತದೋ ನೋಡೋಣ ಎಂದರು
ಅವಳ ಎಡದ ಕೈಗೆ ಓಲೆ ಕೊಡೆ
ಬಲದ ಕೈಗೆ ರವಣ ಗೆಜ್ಜೆಕತ್ತಿ ಕೊಟ್ಟರು
ಮುತ್ತಿನ ಕೆರೆಯ ಕಡೆ ಬಂದರು
ಮಯಿಸಗ ಇಳಿದಳು ಮೊಣಕಾಲ ಮಟ್ಟ ನೀರಿಗೆ
ಹೂ ನಲಿಯುತ್ತ ನಗುತ್ತ ಬಂದು ಮಯಿಸಗನ ಕೈಗೆ ಸಿಕ್ಕಿತು
ಹೂವನ್ನು ಎತ್ತಿದಳು ಪರಿಮಳ ನೋಡಿದಳು
ಮೇಲೆ ಹತ್ತಿದಳು
ಹೂವನ್ನು ಒಯ್ದು ಅರಮನೆಗೆ ಬಂದರು
ಬಂಗಾರದ ಬಾಚಣಿಗೆ ಬೆಳ್ಳಿಯ ಸೀರಣಿಗೆ ತಂದರು
ನೆತ್ತಿಗೆ ನೆಯ್ಯೆಣ್ಣೆ, ಕೂದಲಿಗೆ ಕೂದಲೆಣ್ಣೆ ಹಾಕಿದರು
ತಲೆ ಬಾಚಿ ಬಲುಮುಡಿ ಕಟ್ಟಿದರು
ಹೂವನ್ನು ತಂದರು
ಆಗ ಮಯಿಸಗ ಸಿರಿ ಹೇಳಿದಳು
ಓ ಅಕ್ಕಂದಿರೆ ನೀವು ಆರು ಮಂದಿ
ಆರು ಎಸಳು ತೆಗೆದುಕೊಳ್ಳಿ, ಉಳಿದುದನ್ನು ನನಗೆ ಇಡಿರಿ
ಚೆಲುವು ಚೆಲ್ಲುವ ಪರಿಮಳದ ಹೂವು ಮಗು
ನಿನಗಿಟ್ಟು ನಿನ್ನ ಸೊಬಗನ್ನು ನಾವು ನೋಡುತ್ತೇವೆ ಎಂದರು
ಮಯಿಸಗೆಯ ತಲೆಗೆ ಹೂವಿಟ್ಟರು

ಅಂದಿನ ಹಗಲು ಹೊತ್ತು ಹೋಯಿತು

ಇರುಳು ಬೀಳುವ ಸಮಯ ಬಂತು
ಮೇಲುಪ್ಪರಿಗೆಯಲ್ಲಿ ಮಯಿಸಗ ಮಲಗಿದಳು
ಹೊತ್ತಿಸಿದ ನಂದಾದೀಪವನ್ನು ನಂದಿಸಿದ ವೇಳೆಯಲ್ಲಿ
ಮುಡಿಯ ಹೂ ಹೋಗಿ ನಿಜರೂಪ ಹೊಂದಿದರು ಈಶ್ವರ ದೇವರು
ಮಯಿಸಗೆಯ ಕೈ ಹಿಡಿದುಕೊಂಡರು
ತಲೆ ತಗ್ಗಿಸಿದಳು ಕಣ್ಣಲ್ಲಿ ಕಡುದುಃಖ ಸೂಸಿದಳು

ಕಣ್ಣಲ್ಲಿ ಕಡುದುಃಖ ಬಿಡಬೇಡ ಮಯಿಸಗ
ನಿನ್ನನ್ನು ನಾನು ಬಿಡಲಾರೆ ಎಂದು ಸಮಾಧಾನ ಹೇಳಿದರು
ಏಳು ದಿನ ಇರುಳಲ್ಲಿ ಎಂಟು ಹಗಲಲ್ಲಿ ಹಾಗಿದ ಬಾಗಿಲು ತೆರೆಯಲಿಲ್ಲ
ಎಂಟನೆ ದಿನ ಬಾಗಿಲು ತೆರೆದು ಇಳಿದು ಬಂದರು
ಆರು ಮಂದಿ ಅಕ್ಕಂದಿರು ಕಣ್ಣಲ್ಲಿ ಕಡುದುಃಖ
ಹೊಟ್ಟೆಯಲ್ಲಿ ಕಾವೇರಿ ತುಂಬಿಕೊಂಡು ತಲೆತಗ್ಗಿಸಿದ್ದರು
ಮಯಿಸಗ ಬರುವಾಗ ತಲೆಗೂದಲ ತುದಿ ಮಾಸಿತ್ತು
ಮೊಲೆತುದಿ ಬಾಗಿತ್ತು, ಬಟ್ಟಲು ಬಸಿರು ಆಗಿತ್ತು
ಹೋಗು ಸಿರಿಯೆ ನಿನ್ನ ಮೋಹದ ಅಕ್ಕಂದಿರಲ್ಲಿ
ನಾನು ಹೋಗುವೆನೆಂದು ಹೇಳು ಎಂದರು ಈಶ್ವರ ದೇವರು
ಬಾಗಿಲಿನ ಮರೆಯಲ್ಲಿ ಕುಳಿತಿದ್ದ ಅಕ್ಕಂದಿರ ಬಳಿಗೆ ಹೋದಳು
ಓ ಅಕ್ಕಂದಿರೆ ನಾನು ಹೋಗುತ್ತೇನೆ ಎಂದಳು
ಅಯ್ಯೋ ಮಗು, ಜಾತಿ ಕೆಡಿಸಿಕೊಂಡೆಯಲ್ಲಿ, ನೀತಿಗೆಟ್ಟೆಯಲ್ಲ!
ಜಪ ಜಾರಿತಲ್ಲ ಮಗು ವ್ರತ ಕೆಟ್ಟಿತಲ್ಲ!
ಚಂದದಲ್ಲಿ ಹೋಗು ಮಗು
ಈಶ್ವರನ ಎಡಭಾಗದಲ್ಲಿ ಬಾಳಿಕೊಂಡು ಬಳೆದುಕೊಂಡು
ಚೆನ್ನಾಗಿರು ಎಂದರು
ಈಶ್ವರನೂ ಮಯಿಸಗೆಯೂ ಸಿರಿಗಳ ನಾಡು ಬಿಟ್ಟರು
ಮೇಲು ಮಿರಿಲೋಕಕ್ಕೆ ಈಶ್ವರನ ನಾಡಿಗೆ ಬಂದರು
ಅಲ್ಲಿಗೆ ಬರುವಾಗ ಪಾರ್ವತೀ ದೇವಿ ನೋಡಿದರು
ಎದುರಿಗೆ ಬಂದು ಬಾರೇ ತಂಗಿ,
ನೀನೇ ತಂಗಿ, ನಾನೇ ಅಕ್ಕ ನಾವು ಓರಗೆಯಾಗಿರೋಣ
ಎಂದು ಮೇಲುಪ್ಪರಿಗೆಗೆ ಕರೆದರು
ಈಶ್ವರನೂ ಸಿರಿಯೂ ಒಟ್ಟಿಗೆ ಕುಳಿತರು
ಬಟ್ಟಲಲ್ಲು ಹಾಲು ಗಿಂಡೆಯಲ್ಲಿ ನೀರು ಹಿಡಿದುಕೊಂಡು ಬಂದರು ಪಾರ್ವತಿ
ನೀರು ತೆಕ್ಕೊಳ್ಳಿ ಮುಖ ಶುದ್ಧಿ ಮಾಡಿರಿ

ಹಾಲು ತೆಕ್ಕೊಳ್ಳಿ ಒಡಲು ತಂಪೇರಿಸಿಕೊಳ್ಳಿ ಎಂದರು
ನೀರನ್ನೆತ್ತಿ ಬಾಯಿ ತೊಳೆದುಕೊಂಡರು
ಅರೆವಾಸಿ ಹಾಲು ಕುಡಿದಾಗುವಾಗ ಬಟ್ಟಲ ಹಾಲು ತೆಕ್ಕೊಂಡರು ಪಾರ್ವತಿ
ಈಶ್ವರ ಕುಡಿದ ಹಾಲು ನೀನು ಕುಡಿ ಮಗು
ಈಶ್ವರ ತಿಂದು ಮಿಗಿಸಿದ್ದನ್ನು ಉಣ್ಣುತ್ತ ನಾವು ಇರೋಣ ಎಂದರು
ಹಾಗೆಯೆ ಅನ್ಯೋನ್ಯವಾಗಿ ಇದ್ದರು
ಮೂರು ತಿಂಗಳಾಯಿತು ಮಯಿಸಗಗೆ
ಮೂರು ಹೋಗಿ ನಾಲ್ಕು, ನಾಲ್ಕು ಹೋಗಿ ಐದು ಆಯಿತು
ಆರು ತಿಂಗಳು ಹಿಡಿಯುವಾಗ ಮುಂಜಾನೆ ಎದ್ದರು ಈಶ್ವರ ದೇವರು
ಕಲ್ಲು ಕಟ್ಟಿದ ಬಾವಿಯ ಬಳಿಗೆ ಹೋಗಿ
ಹಲ್ಲು ತೊಳೆಯಲು ಬಾವಿಯ ಬಳಿ ಕುಳ್ಳಿರುವಾಗ
ನಾಲ್ಕು ಮುಖದ ಮೂರು ಸುತ್ತಿನ ಓಲೆ ಬಂದು ಬಿತ್ತು
ಅತ್ತ ನೋಡಿದರು ಇತ್ತ ನೋಡಿದರು ಓಲೆ ಚಂದ್ರಿಕೆ ಬಿಡಿಸಿದರು
ಮಾರುದ್ದ ಬಿಡಿಸಿದರು ನೆನಪಿಗೆಂದು ಓದಿದರು
ಓದಿ ನೋಡುವಾಗ ನಾಲ್ಕು ಮುಖದ ಮೂರು ಸುತ್ತಿನ
ದಂಡನ್ನು ಸಾದಿಸಲು ಹೋಗಬೇಕೆಂಬ ಒಕ್ಕಣೆ ಓಲೆಯಲ್ಲಿತ್ತು
ಓಲೆಯನ್ನು ತಂದರು ಯೋಚನೆಯಲ್ಲಿ ಕುಳಿತರು
ಪಾರ್ವತಿಯನ್ನು ಕರೆದರು ಯಾರೇ ಪಾರ್ವತಿ
ಬೆಳಗ್ಗಿನ ಕಾಲದ ಅಡುಗೆ ಸಕಾಲದಲ್ಲಿ ಆಗಬೇಕು
ವೇಳೆಗಾಗುವ ಬಿಸಿನೀರು ವೇಳೆಗಾಗಬೇಕು
ನಾಲ್ಕು ಮುಖದ ಮೂರು ಸುತ್ತಿನ
ತೋರದೆ ಇರುವ ದಂಡು ನನಗೆ ಕಂಡಿದೆ
ದಂಡು ಸಾಧಿಸಿ ಬರಬೇಕು, ದಂಡಿಗೆ ಹೋಗಬೇಕು ಪಾರ್ವತಿಯೆ
ಈ ಕಾಲದಲ್ಲಿ ಗತಿಯಿಲ್ಲದ ಹೆಣ್ಣನ್ನು ತಂದು
ಸಿರಿಗೆ ಬಸುರಾಯಿತು, ನನಗೆ ದಂಡು ಒಡ್ಡಿತು
ಸಿರಿಯನ್ನು ಚೆನ್ನಾಗಿ ನೋಡಿಕೊಳ್ಳು ಎಂದರು

ನಿಮಗೆ ಆ ಚಿಂತೆ ಬೇಡವೆಂದರು ಪಾರ್ವತಿ
ವೇಳೆಯ ಅಡುಗೆಯನ್ನು ಸಕಾಲದಲ್ಲಿ ಮಾಡಿದರು
ಮೆಣಸು ಸೇರಿಸಿ ಮುನ್ನೂರು ಬಗೆಯ ಪಲ್ಯ
ಮಜ್ಜಿಗೆ ಸೇರಿಸಿ ಐನೂರು ಬಗೆಯ ಪಲ್ಯ ಮಾಡಿದರು
ಮುತ್ತು ಬಣ್ಣದ ಅನ್ನ ಮಾಡಿದರು
ಬಚ್ಚಲು ಮನೆಗೆ ಹೋದರು
ಸಾವಿರ ಕೊಡ ನೀರು ಬಿಸಿ ಮಾಡಿದರು
ಸಾವಿರ ಕೊಡ ತಣ್ಣೀರಿನಿಂದ ತಂಪು ಮಾಡಿದರು
ಒಳಗಿನ ಅಂಕಣಕ್ಕೆ ಹೋದರು ಪಾರ್ವತಿ
ಬಂಗಾರದ ಎಣ್ಣೆಯ ಕುಡಿಕೆ ಬೆಳ್ಳಿಯ ಸಕ್ಕಣ
ಈಶ್ವರನ ಬಳಿಗೆ ತಂದರು
ನೆತ್ತಿಗೆ ನೆಯ್ಯೆಣ್ಣೆ ಕಿವಿಗೆ ಕೀಲೆಣ್ಣೆ ಬಿಟ್ಟರು
ಬೆನ್ನಿಗೆ ಬಿಸಿಯೆಣ್ಣೆ ಎದೆಗೆ ತಂಪೆಣ್ಣೆ ಪಾದಕ್ಕೆ ಹನಿಯೆಣ್ಣೆ
ಉಗುರಿಗೆ ಉರಿಯೆಣ್ಣೆ ಪೂಸಿದರು
ಬಿಸಿನೀರ ಜಳಕ ಮಾಡಿ ಮದುಮಗ ಎಂದಳು
ಬಿಸಿನೀರ ಕೊಟ್ಟಿಗೆಗೆ ಹೋದರು ಈಶ್ವರ ದೇವರು
ಸಾವಿರ ಕೊಡ ಬಿಸಿನೀರಲ್ಲಿ ಬಿಸುಪು ಆದರು
ಸಾವಿರ ಗಡಿಗೆ ತಣ್ಣೀರಲ್ಲಿ ತಂಪಾದರು
ಕಟ್ಟಣದ ಬಾವಿಯ ಬಳಿಗೆ ಬಂದರು
ಆಕಾಶದ (ಎತ್ತರದ) ಏತದ ಮರ ಹಿಡಿದರು
ಪಾತಾಳದ ಹನಿನೀರು ಎತ್ತಿದರು
ಬೆಳ್ಳಿಯ ಸಿರಿಗಿಂಡೆಯಲ್ಲಿ ತುಂಬಿಸಿದರು
ತುಳಸೀ ಮಂಟಪದ ಬಳಿಗೆ ಬಂದರು
ತುಳಸಿಗೆ ನೀರು ಎರೆದರು ಮೂರು ಸುತ್ತು ಬಲವಂದರು
ಮೂಡು ದಿಕ್ಕನ್ನು ನೋಡಿದರು ಸೂರ್ಯಸ್ತುತಿ ಮುಗಿಸಿದರು
ಪಡುವಣಕ್ಕೆ ನೋಡಿದರು ಚಂದ್ರ ಜಪ ತೀರಿಸಿದರು

ತುಳಸೀತೀರ್ಥ ಸ್ವೀಕರಿಸಿದರು ಗಂಧದ ಸಾಲೆಗೆ ಹೋದರು
ಗಂಧದ ಕೊರಡನ್ನೂ ಸಾಣೆಯ ಕಲ್ಲನ್ನೂ ಹಿಡಿದರು
ಅಂಗೈಯ ಶಕ್ತಿಕೊಟ್ಟು ಮುಂಗೈಯ ಬಲ ಹಾಕಿ ಗಂಧ ತೇದರು
ಗಂಧವನ್ನು ಪೂಸಿದರು ಭಕ್ತಿಗೆ ವಿಭೂತಿ ಹಚ್ಚಿದರು
ಸೊಂಟದ ಮೇಲಕ್ಕೆ ಗಂಧಲೇಪನ ಮಾಡಿದರು
ಅಲ್ಲಿಂದ ಪಡುಮನೆಗೆ ಹೋದರು
ಹೋಗುವಾಗ ಬಂಗಬಾಳೆಯ ಎಲೆ ಬಾಡಿಸಿದ್ದರು
ಎತ್ತರದ ಮಣೆ ತಂದು ಇಟ್ಟಿದ್ದರು ಈಶ್ವರ ದೇವರು ಕುಳಿತರು
ಕಣಿಲೆ ಕರಂಡೆಕಾಯಿ ಕಾಮಟಿಕಾಯಿ ಮಾವಿನಕಾಯಿಗಳ ಉಪ್ಪಿನಕಾಯಿ ಬಡಿಸಿದರು
ಬೆಳ್ತಿಗೆ ಅಕ್ಕಿಯ ಮುತ್ತುವರ್ಣದ ಅನ್ನ ಬಡಿಸಿದರು
ಮೆಣಸು ಸೇರಿಸಿ ಮುನ್ನೂರು ಬಗೆ
ಮಜ್ಜಿಗೆ ಬೆರೆಸಿ ಐನೂರು ಬಗೆ
ತೆಂಗಿನಕಾಯಿ ಸೇರಿಸಿ ಸಾವಿರ ಬಗೆ
ಪಲ್ಯ ಇಕ್ಕಿದರು ಪಚ್ಚೆ ಬಣ್ಣದ ಪಸೆಂಗಿರಿ (ತಂಬುಳಿ) ಇಕ್ಕಿದರು
ಪಚ್ಚೆಸರಿನ ಪಾಯಸ ಬಡಿಸಿದರು
ನೀಲವರ್ಣದ ತುಪ್ಪ ಎರೆದರು
ಘನವಾದ ಭೋಜನ ಪೂರೈಸಿದರು ಈಶ್ವರ ದೇವರು
ತೂಗುಯ್ಯಾಲೆಯಲ್ಲಿ ಕುಳಿತರು ಸಂಚಿ ಬಿಚ್ಚಿ ವೀಳ್ಯ ಮೆದ್ದರು
ಯಾರೆ ಪಾರ್ವತಿ ನನ್ನ ಉಡುಗೆ ತೊಡುಗೆ
ಹಿರಿಯ ಸಿಂಗಾರದ ಒಡವೆ ತಾ ಎಂದರು
ತೆಂಕಣ ಸಿರಿಯಂಕಣಕ್ಕೆ ಕಲ್ಲ ಪೆಟ್ಟಿಗೆಯ ಬಳಿಗೆ ಹೋದರು ಪಾರ್ವತಿ
ಕಿರುಬೆರಳು ಕೊಟ್ಟರು ಹೆಬ್ಬೆರಳು ಒತ್ತಿದರು
ಕಲ್ಲ ಕಲೆಂಬಿಯ ಮುಚ್ಚು ಬಾಯಿ ಚಿಮ್ಮಿಸಿದರು
ಸೆಳೆನೂಲು ತೆಗೆದರು ಓರೆ ಸರಪಳಿ ತೆಗೆದರು
ಬಂದಿಕಟ್ಟ ದೋತರ ತೆಗೆದರು ಬೆಳ್ಳಿ ಕಟ್ಟಿದ ಚೂರಿ ತೆಗೆದರು

ತಂದು ಈಶ್ವರನ ಕೈಯಲ್ಲಿ ಕೊಟ್ಟರು ಪಾರ್ವತಿ
ವಸ್ತ್ರ ಒಡವೆಗಳಿಂದ ಹಿರಿದಾಗಿ ಸಿಂಗಾರವಾದರು ಈಶ್ವರದೇವರು
ನಾನು ಹೋಗುತ್ತೇನೆ ಪಾರ್ವತಿ, ದಂಡು ಸಾಧಿಸಿ ಬರುತ್ತೇನೆ
ನನ್ನ ಸಿರಿ ನಿನ್ನ ತಂಗಿ ಆರು ತಿಂಗಳ ಬಸುರಿ
ನಾನು ಇಲ್ಲವೆಂದು ನೆನೆಯದಿರು ನಾನಿದ್ದಂತೆ ಭಾವಿಸಿ
ದೊಡ್ಡ ಸಂಭ್ರಮದಿಂದ ಹೂಮುಡಿಸು ಬಾಯಿಯ ಆಸೆ ಪೂರೈಸು
ಆರು ವರ್ಷದ ದಂಡನ್ನು ಮೂರು ವರ್ಷದಲ್ಲಿ ಸಾಧಿಸುತ್ತೇನೆ
ಮೂರು ವರ್ಷದ್ದನ್ನು ಆರು ತಿಂಗಳಲ್ಲಿ ಸಾಧಿಸುತ್ತೇನೆ
ಆರು ತಿಂಗಳದ್ದನ್ನು ಮೂರು ತಿಂಗಳಲ್ಲಿ ಸಾಧಿಸುತ್ತೇನೆ
ಮೂರು ತಿಂಗಳಿದ್ದನ್ನು ಮೂರು ದಿನದಲ್ಲಿ ಸಾಧಿಸುತ್ತೇನೆ
ಮೂರು ದಿನದ್ದನ್ನು ಮುಕ್ಕಾಲು ಗಳಿಗೆಯಲ್ಲಿ ಸಾಧಿಸಿ ಬರುತ್ತೇನೆ
ಚೆನ್ನಾಗಿ ಅನ್ಯೋನ್ಯವಾಗಿ ಇದ್ದುಕೊಳ್ಳಿರಿ ಎಂದರು
ಚಂದ್ರಾಯುಧ ಧರಿಸಿದರು ದಂಡಿಗೆ ಹೊರಟರು

ಆರು ತಿಂಗಳು ಕಳೆಯಿತು ಸಿರಿಗೆ

ಏಳು ತಿಂಗಳು ಹಿಡಿಯಿತು
ನನಗೆ ಮಕ್ಕಳು ಬಂಧುಗಳಿಲ್ಲ ಅಕ್ಕರೆಯ ತಂಗಿ ಮಯಿಸಗಗೆ
ನಲ್ಮೆಯ ಬಸಿರು ಬಂದಿದೆ
ಭಾರೀ ಸಡಗರದ ಸೀಮಂತ ಮಾಡಬೇಕು ಎಂದರು ಪಾರ್ವತಿ
ದೂರದ ಕಡೆಗೆ ಓಲೆ ಬರೆದರು
ಕೇಳುವಲ್ಲಿಗೆ ದಿಡುಂಬು ವಾದ್ಯ ಮೊಳಗಿಸಿದರು
ಹತ್ತಿರದ ಕಡೆಗೆ ಮನೆಗೆ ಹೊಕ್ಕು ಹೇಳಿಕೆ ಮಾಡಿಸಿದರು
ಗುರುವಾರ ದಿನ ಇಟ್ಟುಕೊಂಡರು
ಇರುವೆ ಧಾರೆ ಹಿಡಿದಂತೆ ಜನ ಕೂಡಿದರು
ಬಸುರಿಗೆ ಉಡಿಸಿ ತೊಡಿಸಿದರು
ಹಳೆಯ ಬಟ್ಟೆ ಕಳಚಿದರು ಹೊಸ ಪಟ್ಟೆ ಸೀರೆ ಉಡಿಸಿದರು
ಪಟ್ಟೆ ರವಕೆ ತೊಡಿಸಿದರು ಹೂ ಮುಡಿಸಿದರು

ಬಂಗಾರದಲ್ಲಿ ಸಿಂಗಾರ ಮಾಡಿದರು
ಬೆಳ್ಳಿಯಿಂದ ಬೆಳಗಿಸಿದರು
ಮುತ್ತಿನ ಸೇಸೆ ಇಕ್ಕಿದರು ಹವಳದಲ್ಲಿ ಆರತಿ ಮಾಡಿಸಿದರು
ಬಸುರಿಯನ್ನು ಸೇಸೆ ಮಣೆಯಿಂದ ಏಳಿಸಿದರು
ಎತ್ತರದ ಮಣೆಯಿಟ್ಟು ಉಣ್ಣಲು ಕುಳ್ಳಿರಿಸಿದರು
ಬಂಗಬಾಳೆಯ ಅಗ್ರದ ಬಾಳೆಯೆಲೆ ಹಾಕಿ ಬಡಿಸಿದರು
ಮಾಡದಿದ್ದ ಸಮ್ಮಾನ ಮಾಡಿದರು
ಬಸುರಿಯನ್ನು ಮೇಲುಪ್ಪರಿಗೆಯಲ್ಲಿ ಕುಳ್ಳಿರಿಸಿದರು
ಸಭೆಗೆ (ಉಣ್ಣಲು) ನೀರು ಕೊಟ್ಟರು
ಊಟ ಉಪಚಾರ ಆಯಿತು
ವೀಳ್ಯ ಸವಿದರು ಬಂದ ಬಿದ್ದಿನರು ತೆರಳಿದರು

ಇವರು ತಂಗಿಯೂ ಅಕ್ಕನೂ ಓರಗೆಯ ಒಪ್ಪದಿಂದಿದ್ದರು

ಏಳು ತಿಂಗಳು ಹೋಯಿತು ಎಂಟಾಯಿತು
ಎಂಟು ಹೋಗಿ ಒಂಬತ್ತಾಯಿತು
ಒಂಬತ್ತು ತಿಂಗಳು ಒಂಬತ್ತು ದಿನ ಒಂಬತ್ತು ಗಳಿಗೆ
ಒಂಬತ್ತು ನಿಮಿಷ ಆಗುವಾಗ
ತಿಳಿಯಾದ ಮೋರೆಯಲ್ಲಿ ಹುಳಿಯುಳ್ಳ ಬೇನೆ ಹೊದ್ದಿತು
ಓ ಅಕ್ಕಾ ನನ್ನ ಪ್ರಾಣ ಕಳಚುತ್ತಿದೆ
ಏನೂ ಕೂಡುವುದಿಲ್ಲ ಎಂದಳು ಮಯಿಸಗೆ
ಬಂಗಾರದ ಸಕ್ಕಣ ಬೆಳ್ಳಿಯ ಎಣ್ಣೆ ಬಟ್ಟಲು
ಹಿಡಿದುಕೊಂಡು ಸಿರಿಯ ಬಳಿಗೆ ಹೋದರು ಪಾರ್ವತಿ
ಎಣ್ಣೆ ತೆಗೆದು ನೆತ್ತಿಗೆ ಎರೆದರು
ಅಂಗೈಗೆ ಎರೆದರು ಹೊಟ್ಟೆ ಹಿಡಿದು ನೀವಿದರು
ಹರಣಕ್ಕೆ ಆಯಾಸವಾಗದಂತೆ ಚೆಂದದಿಂದ
ಹೆರುವೆಯೆಂದು ವರವನ್ನು ಕೊಟ್ಟರು
ಅಂಗೈಗೆ ಎಣ್ಣೆ ಹಾಕಿ ಹೊಟ್ಟೆಗೆ ಪೂಸಿದರು

ಮೂರು ಸಲ ಸವರುವಾಗ ಗಂಡುಮಗು ಭೂಮಿಗೆ ಜನನವಾಯಿತು
ಮಗುವಿನ ಹೊಕ್ಕುಳು ಕತ್ತರಿಸಿದರು
ಮಗುವನ್ನು ಮೀಯಿಸಿದರು ಬಾಣಂತಿಯನ್ನು ಮೀಯಿಸಿದರು
ಹುಟ್ಟಿದ ಮಗುವಿಗೆ ಹೆಸರು ಹುಟ್ಟುಬಳಿ ಕರೆದರು
ಬಾಲ ಬಾಮಕುಮಾರ ಎಂದು ಮೂರು ಸಲ ಕರೆದರು
ಚೆನ್ನಾಗಿ ಸಾಕಿಕೊಂಡಿದ್ದಾರೆ ಪಾರ್ವತಿ
ಹತ್ತು ಹನ್ನೊಂದರಲ್ಲಿ ಹಿತ್ತಾಳೆಯ ತೊಟ್ಟಿಲಿಗೆ
ಕಬ್ಬಿಣದ ಸಂಕೋಲೆ ಹಾಕಿ ಅಟ್ಟದ ತೋಳಿಗೆ ಕಟ್ಟಿದರು
ತೊಟ್ಟಿಲಿಗೆ ಬಂಗಾರದ ಚೌಕವನ್ನು ಹಾಸಿದರು
ನಾಲ್ಕು ಮನೆಗಳ ಹೆಂಗಸರನ್ನು ಕರೆದುಕೊಂಡರು
ಹಸು ಕೊಟ್ಟಿಗೆಯ ಕಡೆ ಬರುವ ಹೊತ್ತಿಗೆ
ಹಸುಳೆಯನ್ನು ತೊಟ್ಟಿಲಲ್ಲಿರಿಸಿದರು
ಕೂಡಿದ ಮಂದಿಗೆ ಅವಲಕ್ಕಿ ಕಲಸಿ ಹಂಚಿದರು
ಊಟ ಉಪಚಾರ ನಡೆಯಿತು
ಮರುದಿನ ದಂಡಿನೆಡೆಗೆ ಓಲೆ ಬರೆದರು
ಬಹಳ ಸಂಭ್ರಮದಿಂದ ಸೀಮಂತ ಮಾಡಿದೆ ಗಂಡು ಮಗುವನ್ನು ಪಡೆದು
ಸಿರಿ ಸುಖವಾಗಿದ್ದಾಳೆಂದು ಈಶ್ವರನಿಗೆ ಓಲೆ ಕಳುಹಿಸಿದಳು
ಈಶ್ವರನಿಗೆ ಸಂತೋಷವಾಯಿತು
ನಾನು ಚೆನ್ನಾಗಿದ್ದೇನೆ ದಂಡು ಸಾಧಿಸಿ ಬರುವೆ ಎಂದು
ಪಾರ್ವತಿಗೆ ಮರು ಓಲೆ ಬಿಟ್ಟರು
ಮೂರು ತಿಂಗಳಾಯಿತು ಮಗುವಿಗೆ
ಮೂರು ತಿಂಗಳ ಮಗು ಆರು ತಿಂಗಳಷ್ಟು ದಷ್ಟಪುಷ್ಟವಾಯಿತು
ಆರು ತಿಂಗಳ ಮಗು ಒಂದು ವರ್ಷದ ಒಡ್ಡಾರವಾಯಿತು
ಮಗುವಿನ ಕಿವಿಗೆ ಅತ್ತಿಕಾಯಿ ಕುಂಡಲ
ಕಂಠಕ್ಕೆ ಕುರಿಜಾತು ಮಾಲೆ
ಕೈಗೆ ಮುರ್ಗಿ ಬಳೆ ಕಾಲಿಗೆ ಒತ್ತೊತ್ತಾಗಿ ಹುರಿಗೆಜ್ಜೆ

ಸೊಂಟಕ್ಕೆ ಪಟ್ಟಿ ಮಾಡಿಸಿದರು
ಮಗುವಿಗೆ ಆಡಲು ಮುತ್ತಿನ ಚೆಂಡು ಹವಳದ ಹರಳು ಮಾಡಿಸಿದರು
ಬಾಳುತ್ತ ಬಳೆಯುತ್ತ ಬೆಂಕಿ ನೀರಿನಂತೆ ಹೆಚ್ಚುತ್ತ
ಎರಡು ವರ್ಷದ ಮಗು ನಾಲ್ಕು ವರ್ಷದ ಬಳವಿ ಹೊಂದಿತು
ಚೆಂಡೆತ್ತಿಮಾರು ಬಯಲಿನ ಬದಿಯ ಕೂಟದ ಕಳದಿಂದ
ಗಂಡಿನ ಬೊಬ್ಬೆಯೂ ಹೆಣ್ಣಿನ ಮೊರೆಯೂ ಕೇಳಿಸಿತು
ಬಾಲ ಬಾಮಕುಮಾರ ತೊಟ್ಟಿಲಿನಿಂದ ಎದ್ದು
ನನ್ನ ಮುತ್ತಿನ ಚೆಂಡು ಹವಳದ ಹರಳು ಕೊಡಿ
ನಾನು ಚೆಂಡೆತ್ತಿಮಾರಿಗೆ ಆಡಲು ಹೋಗುವೆ ಎಂದು ಚಲ ಹಿಡಿದ
ನಿನ್ನ ಪ್ರಾಯದ ಮಕ್ಕಳ ನೆತ್ತಿಯ ಎಣ್ಣೆ ಜಿಗುಟು ಆರಲಿಲ್ಲ
ಕಂಕುಳಡಿಯ ಹುಟ್ಟು ಕೆಂಪು ಹೋಗಿಲ್ಲ ಮಗು ಎಂದರು
ಎಂತೆಂತು ಹೇಳಿದರೂ ಹೇಳಿದುದನ್ನು ಕೇಳಲಿಲ್ಲ
ಚೆಂಡೆತ್ತಿಮಾರಿಗೆ ಹೋಗುವುದು ಬೇಡ ಎಂದರು
ಅಬ್ಬೆ ಪಾರ್ವತಿ ಕಲ್ಲ ಕಲೆಂಬಿಯಿಂದ ಮುತ್ತಿನ ಚೆಂಡು
ಹವಳದ ಹರಳು ತಂದಿತ್ತರು
ಇಲ್ಲೇ ಆಡು ಎಂದರು
ಚೆಂಡನ್ನು ಒಮ್ಮೆ ಎತ್ತಿ ಚಿಮ್ಮಿಸಿದ ಒಂದು ಮೆಟ್ಟಿಲು ಇಳಿದ
ಎರಡು ಸಲ ಹಾರಿಸಿದ ಎರಡು ಮೆಟ್ಟಿಲು ಇಳಿದ
ಹದಿನಾರು ಸಲ ಹಾರಿಸಿದ ಹದಿನಾರು ಮೆಟ್ಟಿಲು ಇಳಿದ
ಹಾಗೆಯೇ ಚೆಂಡೆತ್ತಿಮಾರಿಗೆ ಹೋದ
ಅರುವತ್ತಾರು ಕೋಟಿ ಅಸುರರೊಟ್ಟಿಗೆ ಸೇರಿದ
ಅವರಿಂದಲೂ ಬಲಿಷ್ಠನಾದ
ಮೂವತ್ತಮೂರ್ಕೋಟಿ ದೇವರ್ಕಳೊಟ್ಟಿಗೆ ಕೂಡಿದ
ಒಂದು ಕಡಮೆ ನಲವತ್ತು ಭೂತಗಳೊಂದಿಗೆ ಕೂಡಿದ
ಎಲ್ಲರನ್ನೂ ಮೀರಿಸಿದ
ಇವನೊಬ್ಬ ಹಾದರದ ಪಿಳ್ಳೆ

ಅವನ ತಾಯಿಯನ್ನು ಈಶ್ವರ ಕದ್ದುಕೊಂಡು ಬಂದದ್ದು
ಇಂಥವನು ಎಲ್ಲರಿಗೂ ಮೀರಿದವನು!
ಎಂದು ಕಲೆ ಹೇಳಿ ಕುಲ ದೂಷಣೆ ಮಾಡಿದರು
ತಲೆ ತಗ್ಗಿಸಿಕೊಂಡು ಕುಮಾರ ಅಲ್ಲಿಂದ ಬಂದ
ತಾಯಿಯ ಮುಡಿ ಹಿಡಿದು
ನನಗೆ ತಂದೆ ಇದ್ದಾರೆಯೇ ಇಲ್ಲವೇ ಎಂದು ಕೇಳಿದ
ಆದ ಹೋದ ಕತೆ ಎಲ್ಲ ಕತೆ ತಾಯಿ ಹೇಳಿದರು
ತಂದೆ ಹಿಡಿಯುವ ಚಂದ್ರಾಯುಧ ಎತ್ತಿಕೊಂಡ
ಚೆಂಡೆತ್ತಿಮಾರಿನ ಕಡೆಗೆ ತೆರಳಿದ
ಅರುವತ್ತಾರು ಕೋಟಿ ಅಸುರರನ್ನು ಸಂಹರಿಸಿದ
ಮೂವತ್ತಮೂರು ಕೋಟಿ ದೇವರ್ಕಳನ್ನು ಗೆದ್ದ
ಒಂದು ಕಡಮೆ ನಲವತ್ತು ಭೂತಗಳನ್ನು ಸೋಲಿಸಿದ
ಅದರಿಂದ ಓಡಿ ಹೋದ ಒಬ್ಬ ಅಸುರ ಉಳಿದ
ಅಷ್ಟಾಗುವಾಗ ಈಶ್ವರ ದಂಡು ಸಾಧಿಸಿ ಬಂದರು
ಗಾಳಿಯ ಬರವಿಗೆ ಆಲದ ಬುಡದಲ್ಲಿ ಕುಳಿತರು
ಅಸುರ ಓಡಿಬಂದು ಕಾಲಿಗೆ ಅಡ್ಡನೀಟ ಬಿದ್ದ
ಆತನನ್ನು ಬೆನ್ನಟ್ಟುತ್ತ ಬಾಲಕ ಬಾಮಕುಮಾರ ಬಂದ
ಸೆಟ್ಟಿ ಮಗ ಸೇನವನಾದರೆ ಅತ್ತ ನಿಲ್ಲು
ಬಂಟ ಮಗ ಬಾರಗನಾದರೆ ಇತ್ತ ನಿಲ್ಲು
ಅರಸು ಮಗ ಮುದ್ದು ಕುಮಾರನಾದರೆ ಈ ಕಡೆ ನಿಲ್ಲು
ಎಂದರು ಈಶ್ವರ
ಹೇಳಿದ್ದನ್ನು ಕೇಳದೆ ಮುಂದೊತ್ತಿದ ಬಾಮಕುಮಾರ
ಅಸುರನನ್ನು ಕಡಿದುಕೊಂದ
ತನ್ನ ಕಾಲಡಿಯಲ್ಲಿ ಕೊಂದುದನ್ನು ನೋಡಿ
ಕೆರಳಿ ಕೆಂಡವಾದರು ಈಶ್ವರ
ನೀನು ಹೇಳಿದ ಪಾರಿ ಕೇಳಲಿಲ್ಲ ಎಂದರು

ತಾನು ಹಿಡಿದ ಚಂದ್ರಾಯುಧದಲ್ಲಿ ಇವನ ತಲೆ ಹಾರಿಸಿದರು
ತಲೆಯನ್ನು ಮೇಲೆ ಮಿರಿಲೋಕಕ್ಕೆ ಹಾರಿಸಿದರು
ಅಟ್ಟೆಯನ್ನು ಚೆಂಡೆತ್ತಿಮಾರಿನ ಮೂಲೆಗೆ ಹಾರಿಸಿದರು
ಈಶ್ವರ ತನ್ನ ಅರಮನೆಗೆ ಹೋದರು
ಹೋಗುವಾಗ ಪಾರ್ವತಿ ತಲೆ ಬಿಕ್ಕಿ ಹಾಕಿಕೊಂಡು
ಅಳುತ್ತಾ ಬರುತ್ತಿದ್ದಳು
ಹೀಗೇಕೆ ಅಳುವುದೆಂದು ಕೇಳಿದರು ಈಶ್ವರ
ಬಾಮಕುಮಾರ ಚೆಂಡೆತ್ತಿಮಾರಿಗೆ ಹೋಗಿದ್ದಾನೆ
ನೀವೇನಾದರೂ ಕಂಡಿರಾ ಎಂದು ಕೇಳಿದಳು
ಚೆಂಡೆತ್ತಿಮಾರಿನಲ್ಲಿ ಒಬ್ಬ ಹುಡುಗ
ಅರುವತ್ತಾರು ಕೋಟಿ ಅಸುರರನ್ನು
ಮೂವತ್ತಮೂರು ಕೋಟಿ ದೇವರ್ಕಳನ್ನು ಗೆದ್ದ
ಅವರಲ್ಲೊಬ್ಬ ಅಸುರ ಓಡಿ ಬಂದು
ನನ್ನ ಕಾಲಿಗೆ ಬಿದ್ದ
ಆ ಹುಡುಗ ಬಂದು ಅವನನ್ನು ಕೊಂದ
ಇದನ್ನು ನೋಡಿ ಕೋಪಿಸಿ
ನಾನು ಹುಡುಗನ ರುಂಡವನ್ನು ಹಾರಿಸಿದೆ
ತಲೆಯನ್ನು ಮೇಲೆ ಮಿರಿಲೋಕಕ್ಕೆ ಹಾರಿಸಿದ್ದೇನೆ
ಅಟ್ಟೆಯನ್ನು ಚೆಂಡೆತ್ತಿಮಾರಿಗೆ ಹಾರಿಸಿದ್ದೇನೆ
ನಿನ್ನ ಮಗನಾದರೆ ಹೋಗಿ ಗುರುತು ಹಿಡಿಯೆಂದರು
ತಲೆ ಬಿಕ್ಕಿ ಹಾಕಿಕೊಂಡು ಅಳುತ್ತ ಬಂದರು ಪಾರ್ವತಿ
ಚೆಂಡೆತ್ತಿಮಾರಿನಲ್ಲಿ ಅಟ್ಟೆಯಿದೆ ತಲೆಯಿಲ್ಲ
ಅಟ್ಟೆಯನ್ನು ಕಂಡು ಎದೆಎದೆ ಬಡಿದುಕೊಂಡರು
ತಲೆತಲೆ ಹೊಡೆದುಕೊಂಡರು
ಅಟ್ಟೆಯನ್ನು ಹೆಗಲಿಗೆ ಹಾಕಿಕೊಂಡು ಅಳುತ್ತಾ ಬಂದರು
ಈಶ್ವರನ ಕಾಲಡಿಯಲ್ಲಿ ಇರಿಸಿದರು

ನನ್ನ ಮಗನನ್ನು ಜೀವ ಮಾಡಿಕೊಡಿ ದೇವರೇ ಎಂದು ಬೇಡಿದರು
ನಿಲ್ಲು ಅಳಬೇಡ ಎಂದರು ಈಶ್ವರ ದೇವರು
ಮೇಲೆ ಮಿರಿಲೋಕದಿಂದ ತಲೆಯನ್ನು ಹುಡುಕಿ ತರಲು
ಮಂದಿಯನ್ನು ಕಳುಹಿಸಿದರು
ಎಲ್ಲಿ ಹುಡುಕಿದರೂ ತಲೆ ಸಿಕ್ಕಲಿಲ್ಲ
ಇಲ್ಲವೆಂದು ಬಂದು ಹೇಳಿದರು
ಬಡಗು ದಿಕ್ಕಿಗೆ ತಲೆ ಹಾಕಿ ಮಲಗಿರುವ ಮನುಷ್ಯನ
ತಲೆಯನ್ನು ಕಡಿದುಕೊಂಡು ಬನ್ನಿ ಎಂದರು
ಯಾವ ರಾಜ್ಯದಲ್ಲೂ ಅಂಥಾ ಮನುಷ್ಯ ಸಿಕ್ಕಲಿಲ್ಲ
ಒಂದು ದೇಶದಲ್ಲಿ ಅರಸನ ಪಟ್ಟದಾನೆ
ಬಡಗುದಿಕ್ಕಿಗೆ ತಲೆ ಹಾಕಿ ಮಲಗಿತ್ತು
ಅದರ ತಲೆ ಕಡಿದು ತಂದಿತ್ತರು
ಅಟ್ಟೆಗಿಟ್ಟು ಮಗನನ್ನು ಜೀವಕಲೆ ಮಾಡಿದರು
ನಿನ್ನ ಮಗ ಅಹುದೇ ಎಂದು ಪಾರ್ವತಿಯಲ್ಲಿ ಕೇಳಿದರು
ಸೊಂಟದಿಂದ ಕೆಳಗೆ ನನ್ನ ಮಗ ಹೌದು ದೇವರೆ
ಸೊಂಟದಿಂದ ಮೇಲೆ ಅಲ್ಲ ಎಂದರು
ಅವನ ಹೊಟ್ಟೆಯ ಪಾಡು ಹೇಗೆ ಎಂದು ಕೇಳಿದರು
ಬಾಲ ಬಾಮಕುಮಾರ ಹೋಗು ಮಹಾಗಣಪತಿಯಾಗು
ವರ್ಷಕ್ಕೊಂದು ದಿನ ಚೌತಿಯಂದು
ಬುಟ್ಟಿ ಹೆಣೆಯುವವರ ಕೊಪ್ಪವೆಂದು ಬಿಡಬೇಡ
ಮಣ್ಸರ ಕೇರಿಯೆಂದು ಬಿಡಬೇಡ ಬೈರರ ಗುಡಿಸಲೆಂದು ಬಿಡಬೇಡ
ಎಲ್ಲ ಜಾತಿಗಳವರ ಮನೆಗೆ ಹೋಗಿ
ನಿನ್ನ ಹೊಟ್ಟೆ ಹೊರೆದುಕೊಳ್ಳು
ಒಬ್ಬೊಬ್ಬನೂ ಒಂದು ತೆಂಗಿನಕಾಯಿ ಒಂದು ಸೇರು ಅಕ್ಕಿ ಇಟ್ಟು
ಸ್ವಾಮೀ ಗಣಪತಿಯೆ ಎಂದು ಹೇಳಿದಲ್ಲಿಗೆ ಸಹಾಯಕ್ಕೆ ಒದಗುತ್ತ ಇರು ಎಂದು
ವರ ಕೊಟ್ಟರು ಈಶ್ವರ ದೇವರು

ಕೊಲ್ಲೂರ ಮುಕಾಂಬಿ

ಕೊಲ್ಲೂರ ನೂರಾಳ ಪಟ್ಟದಲ್ಲಿ
ಕೋಣನ ಎಣೆ ತಪ್ಪಿತು
ಕೊಟ್ಟಿಗೆಯ ಕರು ಅಳಿಯಿತು
ಕಟ್ಟಿ ಹಾಕಿದ ಕೋಣಗಳು ಅರಚುತ್ತಾ ಸತ್ತವು
ಕಣಜದ ಬತ್ತ ನಾಶವಾಗಿ ಹೋಯಿತು
ತೊಟ್ಟಿಲ ಹಸುಳೆಗಳಿಗೆ ಅಳಿಗಾಲ ಬಂತು
ಇದೇನು ಸೋಜಿಗ ಕಲಿಯುಗ ಮಾಯ ಕಷ್ಟವೇ ಎಂದರು
ಬಲಿಮೆಯ (ಜ್ಯೋತಿಷ್ಯದ) ಬಲ್ಯಾಯನನ್ನು ಕರೆಸಿದರು
ನಡುಚಾವಡಿಯಲ್ಲಿ ಮಂಡಲ ಬರೆಸಿದರು
ಕವಡೆಗಳ ಸಾರಿಯನ್ನು ನೆರಹಿಸಿದರು
ಯಾರಯ್ಯ ಬಲ್ಯಾಯ ಕೇಳಿದೆಯ
ಕಂಡುಬಂದ ನಿಮಿತ್ತ ಹೇಳು ಎಂದರು
ಅದಕ್ಕೆಂದ ಬಲ್ಯಾಯ
ದೇವರಿಲ್ಲದ ಊರಲ್ಲಿ ದೇವರು ಉಂಟಾದರು
ಭೂತ ಇಲ್ಲದ ಊರಲ್ಲಿ ಭೂತ ಉಂಟಾಯಿತು
ದೇವರಿಗೆ ಗುಡಿ ಕಟ್ಟಿಸಬೇಕು
ಭೂತಕ್ಕೆ ಬದಿಮಾಡ ಆಗಬೇಕು
ಕೆಳಗೆ ಅಂಗಣ ಕೆತ್ತಿಸಬೇಕು ಮೇಲಕ್ಕೆ ಚಪ್ಪರ ಹಾಕಿಸಬೇಕು
ಬಾಳೆಗೊನೆ ಕಡಿಸಬೇಕು ಕೋಣೆಯಲ್ಲಿ ತೂಗಿಸಬೇಕು
(ಹೀಗೆ) ಕಂಡ ಒಂದು ನಿಮಿತ್ತ ಹೇಳಿದ ಬಲಿಮೆಯ ಬಲ್ಯಾಯ
ಬಲಿಮೆಯ ನಿಮಿತ್ತ ಫಲ ಕೇಳಿದರು

ದೇವರಿಗೆ ಗುಡಿ ಕಟ್ಟಿಸಿದರು
ಭೂತಕ್ಕೆ ಬದಿಮಾಡವಾಯಿತು
ದೇವರಿಗೆ ಮುಂಜಾನೆಯ ನೈವೇದ್ಯಕ್ಕೆ ಸಂಜೆಯ ಪೂಜೆಗೆ
ಜಂತಿರಿ ಪಡ್ವನರನ್ನು ನೇಮಿಸಿದರು
ಭೂತಗಳಿಗೆ ಬಂಡಿಯ ಬಲಿನೇಮ ಕೊಡಿಸಿದರು
ಆ ಕಾಲದಲ್ಲಿ ಜಂತಿರಿ ಪಡ್ವನರಿಗೆ
ಮದುವೆ ಆಗಬೇಕೆಂದರು
ಕೊಲ್ಲೂರ ಮುಕಾಂಬಿಯನ್ನು ನೋಡಿ ನೆಂಟತನ ಹಿಡಿದರು
ಮದುವೆಯಾದ ಕಾಲಕ್ಕೆ ಜಂತಿರಿ ಪಡ್ವನರಿಗೆ
ಬಲುದೊಡ್ಡ ಬಡತನ ಬಂದು ಮುಸುಕಿತು
ಮುಂಜಾನೆ ಎದ್ದರು ತನ್ನ ಸಿರಿಮೋರೆ ತೊಳೆದರು
ತನ್ನ ಮದುಮಗಳನ್ನು ಕರೆದರು
ಓಯೋಯೆ ಮುಕಾಂಬಿ ಕೇಳಿದೆಯ
ನಾನು ತೆಂಕಲಿನ ಶಾಂತಿ ಪೂಜೆಗೆ ಹೋಗುತ್ತೇನೆ
ನೀನು ನಿನ್ನ ತಾಯಿಮನೆಗೆ ಹೋಗಬೇಕು
ನಾನು ಹೋಗಲಾರೆ ಕೇಳಿದಿರಾ !
ನಿಮ್ಮ ಕೈ ಹಿಡಿದ ದೋಷಕ್ಕೆ ನಿಮ್ಮ ಬೆನ್ನು ಬಿಡಲಾರೆ ಎಂದಳು
ಹೇಳುವುದನ್ನು ಕೇಳುವುದಿಲ್ಲ ಕೊಟ್ಟುದನ್ನು ತಿನ್ನುವುದಿಲ್ಲ
ಹಟವನ್ನೆ ಹಿಡಿಯುತ್ತಾಳೆ ಮುಕಾಂಬಿ ಜೇವು
ಕಾಲದ ಅಡುಗೆ ಕಾಲದಲ್ಲಾಗಬೇಕು
ವೇಳೆಯ ಬಿಸಿನೀರು ವೇಳೆಯಲ್ಲಿ ಆಗಬೇಕು
ಕಾಲದ ಅಡುಗೆ ಕಾಲದಲ್ಲಿ ಮಾಡಿದಳು
ವೇಳೆಯ ಬಿಸಿನೀರು ವೇಳೆಯಲ್ಲಿ ಮಾಡಿದಳು
ಎಣ್ಣೆಯ ಜಳಕಕ್ಕೆ ಬನ್ನಿ ಎಂದಳು
ನೆತ್ತಿಗೆ ನೆರಿಯೆಣ್ಣೆ ಹಚ್ಚಿದಳು ಮುಕಾಂಬಿ
ಬೆನ್ನಿಗೆ ಬಿಸಿಯೆಣ್ಣೆ ಹಚ್ಚಿದಳು ಮುಕಾಂಬಿ

ಎದೆಗೆ ಸಿರಿಯೆಣ್ಣೆ ಹಚ್ಚಿದಳು ಮುಕಾಂಬಿ
ಎಣ್ಣೆಯ ಪೂಸುವಿಕೆ ಪೂರೈಸಿತು
ನೀರಿನ ಜಳಕ ಹಿಡಿದಳು ಮುಕಾಂಬಿ
ಮೈಲಿಗೆ (ಬಟ್ಟೆ) ಕಳೆದರು ಮಡಿಯುಟ್ಟರು
ಗಂಧದ ಸಾಲೆಗೆ ಬಂದರು ಪಡ್ವನರು
ಗಂಧದ ಕೊರಡು ಸಾಣೆಯ ಕಲ್ಲು ಹಿಡಿದರು
ಗಂಧ ಅರೆದರು ಅಂದಕ್ಕೆ ಗಂಧ ಹಚ್ಚಿದರು
ತುಳಸಿಯ ಹತ್ತಿರ ಬಂದರು ಪಡ್ವನರು
ಬೆಳ್ಳಿಯ ಸಿರಿಗಿಂಡೆ ಹಿಡಿದುಕೊಂಡರು ಪಡ್ವನರು
ಹಾಲುಗಂಜಿ ಬಡಿಸಿಕೊಡುತ್ತಾಳೆ ಮುಕಾಂಬಿ
ಬಡಿಸುವಾಗ ಕೇಳುತ್ತಾರೆ ಮುಕಾಂಬಿ ಹೆಣ್ಣೆ
ಇಂದು ಬಡಿಸುವ ಅನ್ನ ಇನ್ನು ಎಂದಿಗೆ ಬಡಿಸುವೆ
ಕಣ್ಣಿನಲ್ಲಿ ಕಡುದುಃಖದ ಕಣ್ಣೀರು ಮಿಡಿಯುತ್ತಾರೆ ಪಡ್ವನರು
ಯಾಕೆ ಇಂಥಾ ಮಾತು ಹೇಳುತ್ತೀರಿ
ಊಟ ಉಪಚಾರವಾಗಿ ನಿರಂಬಳವಾಗಿ ನಿದ್ರೆ ಮಾಡಿ ಎಂದಳು
ಉಂಡು ಎದ್ದರು ಪಡ್ವನರು
ಉಂಡ ಎಂಜಲಿಗೆ ವೀಳ್ಯದೆಲೆ ಹಾಕಿದರು ಪಡ್ವನರು
ನೆಮ್ಮದಿಯ ನಿದ್ರೆಯಲ್ಲಾದರು ಮುಕಾಂಬಿಯು ಉಂಡು ಒರಗಿದಳು
ಮುಕಾಂಬಿ ಜೇವಿಗೆ ನಿದ್ರೆ ಬರುವಾಗ
ಜಂತಿರಿ ಪಡ್ವನರು ಮೆಲ್ಲನೆ ಎದ್ದರು
ಕಲ್ಲ ಪೆಟ್ಟಿಗೆಯ ಬಾಗಿಲು ತೆಗೆದರು
ಪಟ್ಟೆಯ ಕಂಬಿ ಧೋತರವನ್ನು ಕತ್ತರಿ ಕಚ್ಚೆ ಹಾಕಿ ಉಟ್ಟರು
ಪಟ್ಟೆಯ ಶಾಲು ತೆಕ್ಕೊಂಡರು
ನೆರಿಗೆ ನೆರಹಿ ಮುಂಡಾಸು ಕಟ್ಟಿಕೊಂಡರು
ಬೆಳ್ಳಿ ಕಟ್ಟಿದ ಚೂರಿ ತೆಕ್ಕೊಂಡರು
ಬಂಗಾರದ ಬುರುಡೆ ತೆಕ್ಕೊಂಡರು

ಗೇಣುದ್ದದ ಎಕ್ಕಡ ಮೆಟ್ಟಿದರು ಪಡ್ವನರು
ಆಳುದ್ದದ ಕಾಲು ಕೊಡೆ ಹಿಡಕೊಂಡರು ಪಡ್ವನರು
ಹೊರಟು ಹೊರಪಯಣಕ್ಕಾಗುವಾಗ
ದಡಕ್ಕ ಎಚ್ಚರವಾಯಿತು ಮುಕಾಂಬಿ ಜೇವಿಗೆ
ಎಲ್ಲಿಗೆ ಪಯಣವೆಂದು ಕೇಳುತ್ತಾಳೆ
ನಾನು ತೆಂಕಣ ಶಾಂತಿ ಪೂಜೆಗೆ ಹೋಗುತ್ತೇನೆ
ಒಂದು ವರ್ಷ ಆರು ತಿಂಗಳ ಶಾಂತಿ ಪೂಜೆಯನ್ನು
ಆರು ತಿಂಗಳಲ್ಲಿ ತೀರಿಸಿ ಬರುವೆ
ಆರು ತಿಂಗಳ ಪೂಜೆಯನ್ನು
ಮೂವತ್ತು ದಿನಗಳಲ್ಲಿ ಪೂರೈಸಿ ಬರುವೆನೆಂದರು
ನೀನು ಇಕ್ಕಿದ ಬಾಗಿಲನ್ನು ತೆರೆಯದಿರು
ಹಚ್ಚಿದ ನಂದಾದೀಪ ನಂದಿಸದಿರು
ನಾನು ಬರುವಾಗ ಮುಕಾಂಬಿಯೇ
ಇಕ್ಕಿದ ಬಾಗಿಲು ತೆರೆದೀತು
ಹಚ್ಚಿದ ನಂದಾದೀಪ ನಂದೀತು
ಕೊಟ್ಟಿಗೆಯ ಕರುಗಳು ಕೂಗ್ಯಾವು
ಅಷ್ಟು ಮಾತು ಕೇಳಿದಳು ಮುಕಾಂಬಿ
ಕಣ್ಣಲ್ಲಿ ಕಡುದುಃಖ ಉಕ್ಕಿತು
ಓ ಮದುಮಗ ಕೇಳಿದಿರಾ
ನಾನೂ ಬರುತ್ತೇನೆ ಎಂದಳು ಹಿಡಿಯದ ಚಲ ಹಿಡಿದಳು
ತೆಂಕು ಸೀಮೆಗೆ ನೀನು ಬರಲಾಗದು ಮುಕಾಂಬಿ
ಗಂಡಸರು ಹೋಗತಕ್ಕ ರಾಜ್ಯಕ್ಕೆ
ಹೆಣ್ಣು ಹೆಂಗಸು ಬರಲಾಗದು ಕೇಳಿದೆಯಾ
ತೆಂಕಣ ರಾಜ್ಯವೆಂದರೆ ಕೇಳಿದೆಯಾ
ಒಂದು ಬಳ್ಳ ಬತ್ತಕ್ಕೆ ತಲೆ ಕಡಿವೆ ರಾಜ್ಯ ಎಂದರು
ನಿನ್ನ ತವರಿಗೆ ಕರೆದೊಯ್ಯುವೆಯೆಂದರು

ಮದುವೆಯಾಗುವುದಕ್ಕೆ ಮೊದಲು ಮದುಮಗ
ತಾಯ್ತಂದೆಗಳ ಮನೆಯ ಹಾಲನ್ನವಾದೀತು
ಮದುವೆಯಾದ ಮೇಲೆ ಗಂಡನ ಮನೆಯ
ಕಣ್ಣೀರು ಅನ್ನವೂ ಆದೀತು
ನಿಮ್ಮೊಂದಿಗೆ ಬರುವೆನೆಂದಳು ಮುಕಾಂಬಿ
ಹೇಳಿದ್ದನ್ನು ಕೇಳಲಿಲ್ಲ ಹಿಡಿಯದ ಚಲ ಹಿಡಿದಳು
ನನಗೆ ಹೋಗುವ ನೆಲೆ ಇಲ್ಲದೆ ನಿಲ್ಲುವ ನೆಲೆ ಇಲ್ಲವೆಂದು
ಮುಕಾಂಬಿ ಜೇವು ಹೇಳಿದಳು
ನೀನು ಬರಬೇಡ ಮುಕಾಂಬಿಯೇ ನಿನ್ನನ್ನು ಬಿಟ್ಟು ಹಾಕಲಾರೆ
ಇದ್ದರೆ ನಿನಗೂ ನನಗೂ ಒಂದು ಬೀಡು ಕೇಳಿದೆಯಾ
ಸತ್ತರೆ ನಿನಗೂ ನನಗೂ ಒಂದು ಚಿತೆಯೆಂದರು
ನನ್ನನ್ನು ಬಿಟ್ಟು ಹೋದಿರಾದರೆ
ನನ್ನ ಜೀವ ಇಟ್ಟುಕೊಳ್ಳಲಾರೆ ಎಂದಳು ಮುಕಾಂಬಿ ಜೇವು
ಒಟ್ಟಿಗೆ ಹೊರಡುತ್ತಾಳೆ ಮುಕಾಂಬಿ ಜೇವು
ದೇವರ ಗುಡಿಯ ಸನಿಯಕ್ಕೆ ಬಂದರು
ಯಾರು ದೇವರೆ ಕೇಳಿದಿರಾ
ನಿಮ್ಮ ಪೂಜೆ ನೈವೇದ್ಯ ಮಾಡಿದೆ
ಇಂದಿಗೆ ಬಡತನ ಬಂತು ನಾನು ತೆಂಕಣ ರಾಜ್ಯಕ್ಕೆ ಹೋಗುವೆನೆಂದರು
ಗುಡಿಗೆ ಬಾಗಿಲಿಕ್ಕಿದರು
ಭೂತದ ಬದಿಮಾಡದ ಬದಿಗೆ ಬಂದರು
ಯಾರು ಗುಳಿಗ ಕೇಳಿದೆಯಾ
ನನಗೆ ಭಾರೀ ಬಡತನ ಬಂತು
ನಾನು ತೆಂಕಣ ರಾಜ್ಯಕ್ಕೆ ಹೋಗುವೆನೆಂದರು
ಬದಿಮಾಡಕ್ಕೆ ಬಾಗಿಲು ಹಾಕಿದರು
ಇಳಿದು ಪಯಣ ಹೋದರು
ಜಂತಿರಿ ಪಡ್ವನರು ಮುಕಾಂಬಿ ಜೇವೂ

ಗುಡ್ಡ ಬಯಲು ದಾಟಿಕೊಂಡು ಹೋದರು
ಹೋಗು ಹೋಗುತ್ತಾ ಕಡಂಬಾರ ಮಯ್ಯರ
ಬಾಕಿತ್ತಿಮಾರಿಗೆ ಬಂದು ಮುಟ್ಟಿದರು
ಬಯಲಿನಲ್ಲಿ ಸಾವಿರ ಮುಡಿ ಗದ್ದೆ ಕಡಂಬಾರ ಮಯ್ಯರಿಗೆ
ಬೆಟ್ಟಿನಲ್ಲಿ ನೂರು ಮುಡಿ ಗದ್ದೆ ಕಡಂಬಾರ ಮಯ್ಯರಿಗೆ
ಹೊಲದ ಹುಣಿಯಲ್ಲಿ ತೆಂಗಿನ ಸಸಿ ನೆಡಿಸುತ್ತಾರೆ ಕಡಂಬಾರ ಮಯ್ಯರು
ದೂರದಿಂದ ಚೆನ್ನಾಗಿ ನೋಡಿದರು ಮಯ್ಯರು
ಪಡ್ವನರ ಎದುರಿಗೆ ಬಂದರು
ಎಲ್ಲಿಗೆ ಹೋಗುವವರು ಎಲ್ಲಿಂದ ಬರುವವರು ಎಂದು ಕೇಳಿದರು
ಆಗೆಂದರು ಪಡ್ವನರು
ಕೊಲ್ಲೂರ ನೂರಾಳ ಪಟ್ಟದಿಂದ ಬಂದೆವು
ನನಗೆ ಭಾರೀ ಬಡತನ ಬಂದು ಮುಸುಕಿತು
ಕೆಟ್ಟುಹೋದವನಿಗೆ ತೆಂಕಣ ರಾಜ್ಯ
ಬಾಳುವವನಿಗೆ ಬಡಗು ರಾಜ್ಯ
ತೆಂಕಣ ರಾಜ್ಯಕ್ಕೆ ಶಾಂತಿ ಪೂಜೆಗೆ ಹೋಗುವೆನೆಂದರು
ಅದಕ್ಕೆಂದರು ಕಡಂಬಾರ ಮಯ್ಯರು
ನನ್ನ ಬೀಡಿಗೆ ಬನ್ನಿ ಪಡ್ವನರೆ
ಬಾಯಾರಿಕೆ ತಗ್ಗಿಸಿಕೊಂಡು ಹೋಗಬಹುದು
ಬಿಸಿಲು ಆರಲಿ ಗಾಳಿ ಬೀಸಲಿ
ಅಷ್ಟು ಕೇಳಿದರು ಪಡ್ವನರು
ಕಡಂಬಾರ ಮಯ್ಯರ ಬೀಡಿಗೆ ಹೋದರು
ಆಸರು ಬೇಸರು ಹಸಿವು ಆಯಾಸ ತಗ್ಗಿಸಿಕೊಂಡರು
ಬಿಸಿಲು ಆರುವುದೆ ಗಾಳಿ ಬೀಸುವುದೆ
ನಾವು ಹೊರಡುತ್ತೇವೆ ಎಂದರು
ಆಗೆನ್ನುತ್ತಾರೆ ಕಡಂಬಾರ ಮಯ್ಯರು
ಓ ಪಡ್ವನರೆ ತೆಂಕಣ ರಾಜ್ಯವೆಂದರೆ

ಮನುಷ್ಯ ನುಡಿಯದ ರಾಜ್ಯ ಕೆಂಬೂತ ಉಲಿಯುವ ರಾಜ್ಯ
ಒಂದು ಬಳ್ಳ ಬತ್ತಕ್ಕೆ ತಲೆ ಕಡಿಯುವ ರಾಜ್ಯ
ನಿಮ್ಮ ಮದುಮಗಳನ್ನು ಕರಕೊಂಡು ಹೋಗಬೇಡಿ ಕೇಳಿದಿರಾ
ನನಗೆ ಆರು ಮಂದಿ ಸೊಸೆಯಂದಿರು ಇದ್ದಾರೆ
ಮುಕಾಂಬಿ ಜೇವನ್ನು ನನ್ನ ಸೊಸೆಯೆಂದು ಎಣಿಸುತ್ತೇನೆ
ಏಳು ನೆಲೆಯ ಬೀಡಿನಿಂದ ಒಂದು ಕೊಠಡಿ ಬಿಟ್ಟುಕೊಡುವೆ
ನೀವು ಬರುವವರೆಗೆ ಪಡ್ವನರೆ ಭಾರಿ ಜೋಕೆಯಿಂದ ನೋಡಿಕೊಳ್ಳುವೆ
ಆಗೆಂದಳು ಮುಕಾಂಬಿ ಜೇವು
ನಾನು ಕಡಂಬಾರ ಬೀಡಿನಲ್ಲಿ ನಿಲ್ಲುವುದಿಲ್ಲವೆಂದಳು
ನೀನು ಹೋಗಬೇಡ ಸೊಸೆ ಕೇಳಿದೆಯ
ಆರು ಮಂದಿ ಸೊಸೆಯಂದಿರು ನನಗಿದ್ದಾರೆ
ಅವರೊಂದಿಗೆ ಆಡುತ್ತ ನಲಿಯುತ್ತ ಇದ್ದುಕೋ
ಎಂದರು ಕಡಂಬಾರ ಮಯ್ಯರು
ಏಳು ನೆಲೆಯ ಬೀಡಿನಿಂದ ಒಂದು ಕೊಠಡಿ ಬಿಟ್ಟುಕೊಟ್ಟರು
ಜಂತಿರಿ ಪಡ್ವನರು ಮದುಮಗಳೊಡನೆಂದರು
ಯಾರೆ ಮುಕಾಂಬಿ ಕೇಳಿದೆಯ
ನಾನು ಬರುವಾಗ ಹೆಣ್ಣೆ ಬಂಗಾರದ ಬಾಚಣಿಗೆ
ಬೆಳ್ಳಿಯ ಸೀರಣಿಗೆ ತರುತ್ತೇನೆಂದರು
ಮದುಮಗಳನ್ನು ಬಿಟ್ಟು ಹೋದರು
ತೆಂಕಣ ಶಾಂತಿ ಪೂಜೆಗೆ ಹೋದರು
ಪಡ್ವನರು ಹೋಗಿ ಮೂರು ದಿನ ಆಗುವಾಗ
ಮುಕಾಂಬಿ ಜೇವಿಗೆ ಹನ್ನೆರಡು ವರ್ಷದ ಮೈಲಿಗೆ ಒದಗಿತು
ಮಾಡಿನಡಿ ಬಿಟ್ಟಳು ಕೊಟ್ಟಿಗೆಯಡಿಯಲ್ಲಿ ನಿಂತಳು
ಇದೊಂದು ಸುದ್ದಿ ಕೇಳಿದರು ಕಡಂಬಾರ ಮಯ್ಯರು
ಭಾರೀ ಸಂತಸವಾಯ್ತು ಮಯ್ಯರಿಗೆ
ನೆರೆಕರೆ ಹೆಣ್ಣುಗಳನ್ನು ಕರೆಸಿದರು ಮಯ್ಯರು

ಐವರು ಹೆಣ್ಣುಗಳು ತಲೆಗೆ ನೀರೆರೆದರು
ಮೂರು ಕಳೆದು ನಾಲ್ಕರಲ್ಲಿ ಮಿಂದಳು ಮುಕಾಂಬಿ ಜೇವು
ಅಂದಿನ ದಿನ ಸರಿಯಿತು ಮರುದಿನ ಬಂತು
ನಟ್ಟ ನಡುವಿರುಳು ಜಾವದ ಹೊತ್ತಿಗೆ
ಕಡಂಬಾರ ಮಯ್ಯರು ಬಂದರು
ಮುಕಾಂಬಿ ಜೇವನ್ನ ಕರೆದರು
ಯಾರೇ ಮುಕಾಂಬಿ ಕೇಳಿದೆಯ
ಬಾಗಿಲು ತೆರೆಯೇ ಎಂದರು
ನಾನು ನಿನ್ನ ಮದುಮಗನೆಂದರು
ನನ್ನ ಮದುಮಗನಲ್ಲ ಎಂದಳು ಮುಕಾಂಬಿ
ಯಾರೇ ಮುಕಾಂಬಿ ಕೇಳಿದೆಯ
ರಾತ್ರಿಯ ಇಬ್ಬನಿ ಬಿದ್ದು ಹಗಲಿನ ಬಿಸಿಲು ಹೊಡೆದು
ಸ್ವರ ಬದಲಿದೆಯೆಂದರು
ಸುಳ್ಳು ಕಪಟ ಬಿತ್ತಬೇಡಿ ಕೇಳಿದಿರಾ
ನನ್ನ ಮದುಮಗ ಬರುವಾಗ
ಬಾಗಿಲು ತೆರೆದುಕೊಂಡು ಬಂದೀತು
ಹಚ್ಚಿಟ್ಟ ನಂದಾದೀಪ ನಂದೀತು
ತೊಟ್ಟಿಲ ಹಸುಳೆಗಳು ಅತ್ತಾವು
ಕೊಟ್ಟಿಗೆಯ ಕರುಗಳು ಅರಚಿಯಾವು
ಬಂಗಾರದ ಬಾಚಣಿಗೆ ಬೆಳ್ಳಿಯ ಸೀರಣಿಗೆ
ತಂದೇನೆಂದು ಹೇಳಿದ್ದಾರೆ
ಮೂರು ಮೂರು ಮಾತಿಗೂ ಬಾಗಿಲು ತೆರೆಯಲಾರೆಯ
ಮೂರು ಮೂರು ಮಾತಿಗೆ ಬಾಗಿಲು ತೆರೆಯಲಾರೆ ಎಂದಳು
ಮೋಸಗಾತಕ ಮಾಡಿದಿರಿ ಮಯ್ಯರೆ ಕೇಳಿದಿರಾ
ಅಂದಿನ ದಿನ ಹೇಳಿದಿರಿ
ನನ್ನ ಸೊಸೆಯೆಂದು ತಿಳಿಯುತ್ತೇನೆಂದು

ಇಂದು ಬಲು ಮೋಸಗೈದಿರಿ
ಏಳು ಗಿಂಡೆ ಕೋಪದಲ್ಲಿ ಹಾರಿದರು ಮಯ್ಯರು
ಹಲ್ಲು ಮಟ್ಟಿ ಕಚ್ಚಿದರು
ಬಾಗಿಲಿಗೆ ಮೂರು ಪೆಟ್ಟು ತುಳಿದರು
ಬಾಗಿಲು ಹದಿನಾರು ಸೀಳಾಯಿತು
ಒಳಸೂತ್ರಕ್ಕೆ ಹೊಕ್ಕರು
ಮುಕಾಂಬಿ ಜೇವನ್ನು ಹಿಡಿಯಲು ಮುಟ್ಟಲು ಹೋದರು
ನನ್ನನ್ನು ಹಿಡಿಯಬೇಡಿ ಮುಟ್ಟಬೇಡಿ ಮಯ್ಯರೆ
ನನ್ನ ಕೈ ಮೆಯ್ ಮುಟ್ಟಿದಿರಾದರೆ ಮಯ್ಯರೆ
ನಿಮ್ಮ ತಾಯಿ ತಂಗಿ ಸೊಸೆಯನ್ನು ಮುಟ್ಟಿದ ಆಣೆ ಇದೆ
ಸರ್ಪವನ್ನು ಕೊಂದ ದೋಷವಿದೆ
ಕಾಶಿಗೆ ಹೋದ ಕಪಿಲೆ ದನದ ಆಣೆ ಇದೆ
ಯಾರೆ ಮುಕಾಂಬಿಯೆ ಕೇಳಿದೆಯ
ತಾಯಿಯನ್ನು ಹಿಡಿದ ಆಣೆಯಿದ್ದರೆ
ತಾಯಿಯ ಮೊಲೆಯುಣ್ಣುವಾಗ ಹೋಗಿದೆ
ತಂಗಿ ಸೊಸೆಯರನ್ನು ಹಿಡಿದ ಆಣೆಯಿದ್ದರೆ
ಎತ್ತಿ ಮುಂಡಾಡುವಾಗ ಹೋಗಿದೆ ಕೇಳಿದೆಯ
ಕಾಶಿಗೆ ಹೋದ ಹಸುವಿನ ಆಣೆಯಿದ್ದರೆ
ಕಾಶಿಗೆ ಹೋಗಿ ಸಲ್ಲಿಸುವೆ
ಸರ್ಪವನ್ನು ಕೊಂದ ದೋಷವಿದ್ದರೆ
ನಾಗನಿಗೆ ತಂಬಿಲ ಕಟ್ಟಿಸುತ್ತೇನೆ
ದಿಡಕ್ಕನೆ ನೆಗೆದರು ಕಡಂಬಾರ ಮಯ್ಯರು
ಮುಕಾಂಬಿ ಜೇವನ್ನು ಅಪ್ಪಿಕೊಂಡರು
ಬಾಯಾರೆ ಮುತ್ತನ್ನಿತ್ತರು
ತೋಳಾರೆ ಬಿಗಿದಪ್ಪಿದರು
ಮುಕಾಂಬಿಯ ದೇಹ ಸಂಗ ಮಾಡಿದರು

ಏಳು ಇರುಳು ಎಂಟು ಹಗಲು ಅಲ್ಲೆ ತಂಗಿದರು
ಓ ಮೋಸ ಮಾಡಿದಿರಿ ಗಾತಕ ಗೈದಿರಿ
ಅಂದಿನ ದಿನ ಸೊಸೆಯೆಂದಿರಿ
ನನ್ನ ಮದುಮಗ ಬಂದರೆ
ನಾನೆಂತು ಹಾಲು ನೀರು ನೀಡಬಲ್ಲೆ ಎಂದಳು ಮುಕಾಂಬಿ
ಅದಕ್ಕೆ ನೀನು ಅಂಜಬೇಡ ಮುಕಾಂಬಿ
ನನ್ನ ಒಂದು ಭೂತವುಂಟು ಮದುಮಗಳೆ
ಅಂತಹ ಕುಂದು ಬಂದರೆ ಕೇಳಿದೆಯ
ಕೆಂಗಿಡುಗ ಬಂದಂತೆ ಬಂದೀತು
ಬಿಳಿಯ ಕೋಳಿಯ ಮರಿಯನ್ನು ತುಡುಕಿದಂತೆ
ಕಚ್ಚಿ ಕೊಂಡೊಯ್ದೀತು ಎಂದರು ಮಯ್ಯರು
ಕಡಂಬಾರ ಅಣೆಕಟ್ಟೆಗೆ ಹೋದಳು ಮುಕಾಂಬಿ ಜೇವು
ಮೂರು ಸಲ ಮುಳುಗಿದಳು ಮೂರು ಸಲ ತೇಲಿದಳು
ನನ್ನ ಗುರುಹಿರಿಯರು ನಂಬಿದಂತಹ
ಮುಕಾಂಬಿ ಗುಳಿಗ ಇದ್ದಾನಾದರೆ ನನ್ನ ಪ್ರಾಣ ತೆಗೆಯಲಿ
ನನ್ನ ಮದುಮಗ ಬಂದ ಬಳಿಕ (ಸಾಕಿದ) ಅರಿಯ ಗಿಳಿ ನುಡಿದಂತೆ ನುಡಿಯಬೇಕು
ಎಂದು ನೀರಲ್ಲಿ ಮುಳುಗಿದಳು ಜೇವು
ಮುಕಾಂಬಿ ಜೇವಿನ ಪ್ರಾಣ ಹೋಯಿತು
ಕವುಂಗಿನ ಹೊಂಬಾಳೆ ತೇಲಿದಂತೆ ತೇಲಿದಳು ಮುಕಾಂಬಿ
ಮುಕಾಂಬಿ ಜೇವಿನ ತಂದೆ ಮುದ್ದುಲ್ಲ ಭಟ್ಟರಿಗೆ
ತಾಯಿ ಅರಸಕ್ಕೆ ಮದಿಮಾಲಿಗೆ
ಆಳನ್ನು ಅಟ್ಟಿದರು ಕಡಂಬಾರ ಮಯ್ಯರು
ಪಡ್ವನರು ಮುಕಾಂಬಿಯನ್ನು ಕಡಂಬಾರ ಬೀಡಿನಲ್ಲಿ ನಿಲ್ಲಿಸಿದ್ದರು
ಅವಳು ಹೆಣ್ಣು ಹೋಗಿ ಹೆಂಗಸಾಗಿದ್ದಾಳೆ
ನೀವು ಕರೆದುಕೊಂಡು ಹೋಗಿರೆಂದು ಹೇಳಿ ಕಳುಹಿಸಿದರು

ಅವರಿಗೆ ಸಂತೋಷವಾಯಿತು
ಅವಲಕ್ಕಿಯ ಮುಡಿ ಜೋಡಿಸಿ ಕಟ್ಟಿದ ತೆಂಗಿನಕಾಯಿ ತಂದರು
ಎಣ್ಣೆಯ ಪಾತ್ರ ತುಪ್ಪದ ಭರಣಿ ಹೊರಿಸಿದರು
ಅಷ್ಟರಲ್ಲಿ ಜಂತಿರಿ ಪಡ್ವನರಿಗೆ
ಕಣ್ಣಿಗೆ ಕನಸು ಕಟ್ಟಿಸಿದ ಮುಕಾಂಬಿ ಗುಳಿಗ
ಗಳಿಗೆಯೊಳಗೆ ಬರಬೇಕೆಂದು ಕನಸು ಕಟ್ಟಿಸಿದ
ಕಡಂಬಾರ ಬೀಡಿಗೆ ಬಂದು ನೋಡುವಾಗ
ಮುಕಾಂಬಿ ಜೇವಿನ ಜೀವ ಹೋಗಿದೆ
ದಿಡಕ್ಕನೆ ಶವವನ್ನು ತಬ್ಬಿಕೊಂಡರು ಪಡ್ವನರು
ಎದೆಯ ಮೇಲೆ ಹಾಕಿಕೊಂಡರು
ತಲೆ ತಲೆ ಹೊಡೆದುಕೊಂಡರು
ಅಯ್ಯಯ್ಯೊ ಮುಕಾಂಬಿ ಕೇಳಿದೆಯ
ಹೇಳಿದ್ದೇನನ್ನೊ ಕೇಳಲಿಲ್ಲವಲ್ಲ
ಹಿಡಿಯದ ಚಲ ಹಿಡಿದೆಯಲ್ಲ
ನನ್ನ ತಲೆಗೆ ಕಲ್ಲು ಹಾಕಿದೆಯಲ್ಲಾ ಎಂದು
ಬಿಕ್ಕಿ ಬಿಕ್ಕಿ ಅತ್ತರು ಪಡ್ವನರು
ಆ ಕರೆಯಲ್ಲಿ ಮಾವು ಈ ಕರೆಯಲ್ಲಿ ಹಲಸು ಕಡಿಸಿದರು ಪಡ್ವನರು
ಹೊಲದ ಮೂಲೆಯಲ್ಲಿ ಕಾಷ್ಠವನ್ನು ಹೂಡಿಸಿದರು
ಮುಕಾಂಬಿ ಜೇವಿನ ತಾಯಿತಂದೆ ಬರುವಾಗ
ಎದುರಿಗೆ ಬರುತ್ತದೆ ಕಟ್ಟಿಗೆಯ ಹೊರೆ
ಬೇಗ ಬೇಗನೆ ಕಡಂಬಾರ ಬೀಡಿಗೆ ಬಂದರು
ಪಡ್ವನರು ತುಳಸಿಯ ಚಿಗುರು ಗಿಂಡೆಯಲ್ಲಿ ನೀರು ಹಿಡಕೊಂಡರು
ಮುಕಾಂಬಿಯ ಶವವನ್ನು ಹೊತ್ತುಕೊಂಡರು
ಕಾಷ್ಠಕ್ಕೆ ಮೂರು ಪ್ರದಕ್ಷಿಣೆ ಬಂದರು
ಚಿತೆಯಲ್ಲಿ ಇರಿಸಿದರು ಪಡ್ವನರು
ಕಾಯ ಬಿಟ್ಟು ಕೈಲಾಸಕ್ಕೆ ಸಂದುಹೋಗು ಎಂದು

'ಕೊಳ್ಳಿ'ಯ ನೀರು ಬಿಟ್ಟರು
ಚಿತೆಗೆ ಬೆಂಕಿ ಕೊಟ್ಟರು
ಅಷ್ಟರಲ್ಲಿ ಬಂದು ಮುಟ್ಟುತ್ತಾರೆ
ಮುಕಾಂಬಿ ಜೇವಿನ ತಾಯಿತಂದೆ
ಮುಕಾಂಬಿ ಜೇವಿಗೆ ಚಿತೆ ಹೂಡುವುದನ್ನು ಕಂಡರು
ದಡ್ಡನೆ ಕುಸಿದರು ಎದೆ ಎದೆ ಬಡಿದುಕೊಂಡರು
ಮಮ್ಮಲ ಮರುಗಿದರು
ಮುಡಿಮುಡಿ ಅವಲಕ್ಕಿ ಬೆಲ್ಲ ಹಾಡದ ಎಣ್ಣೆ
ಭರಣಿಯ ತುಪ್ಪ ಚಿತೆಗೆ ಸುರಿದರು
ಆಗೆಂದರು ಜಂತಿರಿ ಪಡ್ವನರು
ಯಾರು ಮುಕಾಂಬಿಯೆ ಕೇಳಿದೆಯ
ಇದ್ದರೆ ನಿನಗೂ ನನಗೂ ಒಂದು ಬೀಡು
ಸತ್ತರೆ ನಿನಗೂ ನನಗೂ ಒಂದು ಕಾಷ್ಠ
ನಿನ್ನ ಕೈ ಹಿಡಿದ ದೋಷಕ್ಕೆ ಮೈ ಕೈ ಮುಟ್ಟಿಲ್ಲ
ಮೋಸ ಗಾತಕ ಮಾಡಿದ ಮಯ್ಯರ ಬೀಡಿಗೆ ಹಾರೆ ಗುದ್ದಲಿ ಬೀಳಲಿ!
ತಗಚೆ ಮೊಳೆಯಲಿ ಎಂದು
ಕೊಡಬಾರದ ಶಾಪ ಕೊಟ್ಟರು ಜಂತಿರಿ ಪಡ್ವನರು
ಚಿತೆಗೆ ಮೂರು ಸುತ್ತು ಬಂದರು
ಚಿತೆಗೆ ದಿಡಕ್ಕನೆ ಹಾರಿದರು
ಚಿತೆಯಲ್ಲಿ ಪಡ್ವನರೂ ಮುಕಾಂಬಿಯೂ ಉರಿದರು
ಇದನ್ನು ನೋಡಿದರು ಮುಕಾಂಬಿಯ ತಾಯಿತಂದೆ
ದುಃಖ ತಡೆಯದೆ ಅವರೂ ಚಿತೆಗೆ ಬಿದ್ದರು
ಆಗಸಕ್ಕೆ ಹೊಗೆ ಎರಗಿತು
ಮುಕಾಂಬಿ ತೀರಿಕೊಂಡ ಕ್ರಿಯೆ ಕಳೆದ ಮೂರನೆಯ ದಿನ
ಕಡಂಬಾರ ಮಯ್ಯರ ಬೀಡಿಗೆ ಹಾರೆ ಗುದ್ದಲಿ ಬಿತ್ತು
ತಗಚೆ ಮೊಳೆಯುತ್ತ ಬಂತು

ಮದನಗ

ಚಿಕ್ಕದೊಂದು ಹರೆಯದಲ್ಲಿ ದೊಡ್ಡದೊಂದು ಕಾರ್ಯಗೈದರು ಕುಂಞಣಪ್ಪರು
ಹಿರಿಯರ ಕಾಲದ ಹಳೆಯ ಬೀಡು ಕೆಡವಿಸಿದರು
ಹೊಸ ಬೀಡು ಕಟ್ಟಿಸಿದರು ನಾಡು ಬೆಳಗಿಸಿದರು
ಬೀಡಿನ ದೈವ ಜುಮಾದಿಗೆ ದೈವಸ್ಥಾನ ಕಟ್ಟಿಸಿದರು
ಪೀಠ ಹಾಕಿಸಿದರು
ಊರಿನ ಮಂದಿ ಹೇಳುತ್ತಾರೆ
ಹೊಸ ಬೀಡು ಆಯಿತು ಕುಂಞಣಪ್ಪರೆ
ದೈವಕ್ಕಾಗುವ ಸ್ಥಾನ ಪೀಠವೂ ಆಯಿತು
ಬೀಡಿಗಾಗುವ ಹೆಣ್ಣು ಆಗಬೇಕು
ತೆಂಕು ರಾಜ್ಯದಲ್ಲಿ ನಾಡಿಗೆ 'ನಲ್ಪ ಬಾರಿನಾಕುಳು' ಇದ್ದಾರಂತೆ
ಅವರ ತಂಗಿ ಬಾಲಕಿ ಮದನಗ ಇದ್ದಾಳೆ
ಅವಳ ನೆಂಟಸ್ತಿಕೆ ಮಾತು ಆಡಬೇಕು
ಜಾತಿಯ ನಾಲ್ವರು ಕೂಡಿದರು ಕುಟುಂಬದ ಇಷ್ಟರು ಕೂಡಿದರು
ಮಧ್ಯಾಹ್ನದೊಂದು ಊಟ ಮಾಡಿದರು
ತೆಂಗಾಳಿ ಬೀಸುವಾಗ ಬಿಸಿಲು ಆರುವಾಗ
ವೀಳ್ಯವಿಕ್ಕಿ ಹೊರಟರು
ಹೋಗಹೋಗುತ್ತಾ ಮುಟ್ಟಿದರು ನಲ್ಪ ಬಾರಿನಾಕುಳ ಅರಮನೆಗೆ
ದೂರದಿಂದ ಚೆನ್ನಾಗಿ ನೋಡಿದರವರು
ಆಕಾಶದ ಏತದ ಮರ ಹಿಡಿದರು
ಪಾತಾಳದ ಹನಿನೀರು ಎತ್ತಿದರು
ಕಲ್ಲಿನ ಮರಿಗೆಗೆ ತುಂಬಿಸಿದರು

ಕೈವರಂಕ ಹಾಕಿಸಿದರು
ಬಂದ ನೆಂಟರಿಗೆ ನೀರಿತ್ತರು
ಕಾಲ ಎಕ್ಕಡವನ್ನು ಮೆಟ್ಟಲಲ್ಲಿ ಕಳೆದರು
ಹಿಡಿದ ಕೊಡೆಯನ್ನು ಗೋಡೆಗೊರಗಿಸಿದರು
ಕಾಲಿನ ಹುಡಿ ಧೂಳು ತೊಳೆದರು ನೆಂಟರು
ಮೋರೆಯ ಮುತ್ತು ಬೆವರು ತೊಳೆದರು
ಹುಲ್ಲ ಕಿರುಚಾಪೆಯಲ್ಲಿ ಕುಳಿತರು
ಆಸರಿಗೆ ಹಾಲು ಬಂತು
ಬೇಸರಕ್ಕೆ ವೀಳ್ಯ ಮೆದ್ದರು
ಅಡಿಕೆ ತಿಂದರು ಅಮಲಾದರು
ಸುಣ್ಣ ಸವಿದರು ಉಗ್ರವಾದರು
ಹೊಗೆಸೊಪ್ಪು ತಿಂದರು ಪಂಚಮಿ ಭೋಗ ಹೊಂದಿದರು
ಎಲ್ಲಿಗೆ ಹೋಗುವ ನೆಂಟರು ನೀವು
ಎಲ್ಲಿಂದ ಬರುವ ನೆಂಟರೆಂದು ಕೇಳಿದರು
ಎಲ್ಲಿಗೂ ಹೋಗುವವರಲ್ಲ ನಾವು
ಇಲ್ಲಿಗೇ ಬಂದವರು ಕೇಳಿದಿರಾ
ಕೊಡುವ ಹೆಣ್ಣಿದೆಯೆ ಮಾರುವ ಕೋಣ ಇದೆಯೆ ಎಂದು ಕೇಳಿದರು
ಕೊಡುವ ಹೆಣ್ಣು ಕೊಟ್ಟು ಹೋಗಿದೆ
ಮಾರುವ ಕೋಣ ಮಾರಿ ಹೋಗಿದೆ
ಮಾರಿದ ಕೋಣನ ಹೆಗಲು ಪೂಸಲು ಬರಲಿಲ್ಲ
ಕೊಟ್ಟ ಹೆಣ್ಣ ಹೆಸರು ಕೇಳಲು ಬರಲಿಲ್ಲ
ಮನೆಯಲ್ಲಿರುವ ಹೆಣ್ಣ ಸುದ್ದಿ ಮಾತಾಡಲು ಬಂದುದು
ಇರಲಿಕ್ಕೆ ಹೆಣ್ಣೊಂದು ಇದೆಯಂತೆ
ಮನೆಯೊಳಗೆ ಇರತಕ್ಕ ಹೆಣ್ಣು
ಬಿಚ್ಚಿದ ತಲೆಕೂದಲು ಕಟ್ಟಲು ತಿಳಿಯುವುದಿಲ್ಲ
ನಾಲ್ಕು ಮೂಲೆಯ ಕಸ ಉಡುಗಲು

ನಮ್ಮ ಹೆಣ್ಣಿಗೆ ತಿಳಿಯದು
ಅಂಥಾ ಹೆಣ್ಣು ನಮಗೆ ಆದೀತಂತೆ
ನಮ್ಮರಮನೆಯಲ್ಲಿ ಹೇಳಿ ಕಲಿಸಿಯಾರು ಜೊತೆಗೆ ನಡೆಯಿಸಿಯಾರು
ಹೋದ ನಂಟರು ನಿಶ್ಚಯ ತಾಂಬೂಲ ಮಾಡಿದರು
ನಮ್ಮ ಜಾತಿ ಕಟ್ಟಳೆಯಲ್ಲಿ ಮದುಮಗಳಿಗೆ ಸೀರೆಯೊಡನೇನು ಬರುತ್ತದೆ?
ಅರಸು ಬಲ್ಲಾಳರ ಕಟ್ಟಳೆಯಲ್ಲಿ ಎಣ್ಣೆ ಓಲೆ ಆಗಬೇಕು
ಎಸಳು ಬುಗುಡಿ ಕಲ್ಲಕೊಪ್ಪು ಆಗಬೇಕು
ಮುಳ್ಳ ಬಳಸರ ಬಂಗಾರದ ಒಡ್ಡಿ ಉಂಗುರ ಆಗಬೇಕು
ದೂರದ ಸರದಿ ಕೇಳಿದರು ಹತ್ತಿರದ ದಿನವಿಟ್ಟರು
ಪಗ್ಗು ತಿಂಗಳ ಹದಿನೆಂಟು ಹೋಗುವಾಗ
ಸಡಗರದ ದಿಬ್ಬಣ ಬರಬೇಕೆಂದರು
ದೂರದ ಮಂದಿಗಾದರೋ ಕೈವೋಲೆ ಕೊಟ್ಟರು
ಹತ್ತಿರದ ಮಂದಿಗೆ ಮನೆಗೆ ಹೋಗಿ ಹೇಳಿದರು
ಗಂಡಿನ ಮನೆಯಲ್ಲಿ ಮುಹೂರ್ತದ ಗೆಲ್ಲು ನೆಟ್ಟರು
ಚಪ್ಪರದ ಕೆಲಸವಾಯಿತು
ಹೆಣ್ಣ ಕಡೆಯಲ್ಲಿ ಕವುಂಗು ಕಡಿದರು ಚಪ್ಪರ ಹಾಕಿದರು
ವೈಭವದ ದಿಬ್ಬಣ ಕೊಂಡೊಯ್ದರು
ದಿಬ್ಬಣದ ಎದುರಿಗೆ ಆರತಿ ಬಂತು
ಆರತಿ ಕೈಕೊಂಡರು ಬೇಗ ಚಪ್ಪರ ಹೊಕ್ಕರು
ಚೌಕದಲ್ಲಿ ಕುಳಿತರು ಚೌಕದ ವೀಳ್ಯ ಹಂಚಿ ಮೆದ್ದರು
ಊಟ ಮೊದಲೋ ಧಾರೆ ಮೊದಲೋ ಎಂದು ಕೇಳಿದರು
ಆಗೆಂದರು ದಿಬ್ಬಣಿಗರು ಊಟ ಮೊದಲಾಗಲಿ
ಧಾರೆ ಮತ್ತಾಗಲಿ
ಮೂಡಲಲ್ಲಿ ಬೆಳ್ಳಿ ಉದಿಸುವಾಗ
ಬೊಳ್ಳರೆ ಮಾಣಿಗ ಹಕ್ಕಿಯ ದನಿ ಕೇಳುವಾಗ
ಗಂಡಿಗೂ ಹೆಣ್ಣಿಗೂ ಕೈಮುಟ್ಟಿ ಕೈದಾರೆ

ಮೈ ಮುಟ್ಟಿ ಮೈ ಸೇಸೆ ಆಗಬೇಕು
ಕೈಮುಟ್ಟಿ ಕೈದಾರೆ ಆಯಿತು
ಮೆಯಿ ಮುಟ್ಟಿ ಮೆಯಿ ಸೇಸೆ ಆಯಿತು
ಸಡಗರದ ದಿಬ್ಬಣ ಹೋಯಿತು

ಮದುವೆಯಾದ ಕಾಲದಲ್ಲಿ ಕುಂಞಣಪ್ಪರಿಗೆ

ಏಳುವರ್ಷದ ದಂಡು ಒದಗಿತು
ಆ ಸಮಯದಲ್ಲಿ ಮಡದಿಯನ್ನು ಕರೆದರು
ಯಾರೇ ಮದನಗ ಕೇಳಿದೆಯ
ಏಳು ವರ್ಷದ ದಂಡೊಂದು ಒದಗಿದೆ
ಏಳು ತಿಂಗಳಲ್ಲಿ ಸಾಧಿಸುತ್ತೇನೆ
ಏಳು ತಿಂಗಳ ದಂಡನ್ನು ಮೂರು ತಿಂಗಳಲ್ಲಿ ಸಾಧಿಸುತ್ತೇನೆ
ಇಕ್ಕಿದ ಬಾಗಿಲನ್ನು ತೆರೆಯದಿರು ಮದನಗ
ನಂದಿಸಿದ ನಂದಾದೀಪವನ್ನು ಹಚ್ಚದಿರು
ಊಟ ಮಾಡಿದರು ಉಡುಗೆತೊಡುಗೆ ತೊಟ್ಟರು
ಹದಿನಾರು ಮೆಟ್ಟುಕಲ್ಲು ಇಳಿದರು
ದಂಡು ಸಾಧಿಸಲು ಹೋದರು

ಆ ಕಾಲದಲ್ಲಿ ಅದೊಂದು ಸುದ್ದಿ ಸಿಕ್ಕಿತು

'ರಾಜ್ಯಕ್ಕೆ ದೊಡ್ಡ' ಬಂಡಾರಿಗೆ
ನಟ್ಟ ನಡುವಿರುಳ ಜಾವದ ಹೊತ್ತಿಗೆ
ಬರುತ್ತಾರೆ ಅವರು ರಾಜ್ಯಕ್ಕೆ ದೊಡ್ಡ ಬಂಡಾರಿ
ಯಾರೇ ಮದನಗ ಕೇಳಿದೆಯ ನೀನು
ಬಾಗಿಲು ತೆರೆ ಮದನಗ
ನಾನು ದಂಡಿಗೆ ಹೋದ ಕುಂಞಣಪ್ಪರು
ನಿನ್ನ ಮದುಮಗ ಕೇಳಿದೆಯಾ
ಆ ವೇಳೆಯಲ್ಲಿ ಹೇಳುತ್ತಾಳೆ ಮದನಗ
ನನ್ನ ಮದುಮಗನ ದನಿಯಲ್ಲ

ನಿನ್ನ ಮದುಮಗನ ದನಿಯಲ್ಲೆಂದು ಹೇಳದಿರು
ಆರು ದಿನದ ಇಬ್ಬನಿಗೆ ಏಳುದಿನದ ಬಿಸಿಲಿಗೆ
ನನ್ನ ಸ್ವರವೇ ಬದಲಾಗಿದೆಯೆಂದರು
ಹಾಗಿದ್ದರೆ ನನ್ನ ಮದುಮಗನ ಬಲಗೈಯಲ್ಲಿ
ಬಂಗಾರದ ಸಿಂಗಾರದ ಉಂಗುರವಿದೆ
ಮುತ್ತು ಮುದ್ರೆಯ ಉಂಗುರ
ಅದನ್ನೊಮ್ಮೆ ತೋರಿಸಬೇಕೆಂದಳು ಮದನಗ
ಗಿಳಿಕಂಡಿಯಿಂದ ಕೈ ಹಾಕಿ ತೋರಿಸುವಾಗ
ಕುಂಞಣಪ್ಪರ ಉಂಗುರವಲ್ಲವಂತೆ!
ಬಾಗಿಲು ತೆಗೆಯಲಾರೆ ನಾನು ಎಂದಳು
ಏಳು ಗಿಂಡೆ ಕೋಪ ತಳೆದರು ಬಂಡಾರಿ
ಬತ್ತ ಕುಟ್ಟುವ ಬರಕಳಕ್ಕೆ ಹೋದರು
ಬತ್ತ ಕುಟ್ಟುವ ತಾಳಿಮರದ ಒನಕೆ ತಂದರು
ಬಾಗಿಲಿಗೆ ಮೂರು ಪೆಟ್ಟು ಹೊಡೆದರು
ಬಾಗಿಲು ಹದಿನಾರು ಸೀಳಾಗಿ ಹಾರಿತು
ಏಳು ಇರುಳಲ್ಲಿ ಎಂಟು ಹಗಲಲ್ಲಿ
ಮದನಗನ ಕೈಸಂಗ ಮೆಯ್ಸಂಗ ಮಾಡಿದರು
ಆ ವೇಳೆಯಲ್ಲಿ ಹೋಗುತ್ತಾನೆ ದೈವ
ಕುಂಞಣಪ್ಪರು ಇದ್ದ ನಾಡಿಗೆ
ಮಲಗಿದ್ದಲ್ಲಿಗೆ ಕಣ್ಣಿಗೆ ಕನಸು ಕಟ್ಟಿಸಿದ
ಯಾರಯ್ಯ ಕುಞಣಪ್ಪರೆ ಕೇಳಿದಿರಾ
ನಿಮ್ಮ ಹೆಣ್ಣನ್ನು ಕೆಡಿಸಿ ಬಿಟ್ಟರು
ರಾಜ್ಯಕ್ಕೆ ದೊಡ್ಡ ಬಂಡಾರಿ
ಆ ವೇಳೆಯಲ್ಲಿ ಹೊರಟರು ಕುಞಣಪ್ಪರು
ಮನೆಯ ಹಾದಿ ಹಿಡಿದರು
ಜವುಳಿಯ ಬಂಡಸಾಲೆಗೆ ಬಂದರು ಕುಞಣಪ್ಪರು

ಹದಿನಾರು ಮೊಳದ ಚಿಕ್ಕೋಡಿ ಬಣ್ಣದ
ಸೀರೆಯನ್ನು ಕೊಂಡು ತಂದರು
ದೂರದಿಂದ ಚೆನ್ನಾಗಿ ನೋಡುತ್ತಾಳೆ ಮದನಗ
ನನ್ನ ಮದುಮಗ ಬಂದರೆಂದಳು
ಬಟ್ಟಲಿನಲ್ಲಿ ಹಾಲು ಚೊಂಬಿನಲ್ಲಿ ನೀರು
ಹಿಡಕೊಂಡು ಬಂದಳು ಮದನಗ
ನೀರನ್ನೂ ಮುಟ್ಟಲಿಲ್ಲ ಹಾಲನ್ನೂ ಮುಟ್ಟಲಿಲ್ಲ ಕುಞಣಪ್ಪರು
ಹದಿನಾರು ಮೊಳ ಚಿಕ್ಕೋಡಿ ಬಣ್ಣದ ಸೀರೆಯನ್ನು
ಜುಮಾದಿಯ ಗದ್ದಿಗೆಯಲ್ಲಿ ಇಟ್ಟರು
ನಿನ್ನ ಹಾಲು ಅಲ್ಲಿರಲಿ ಮದನಗ
ತಲೆಗೂ ಮೈಗೂ ನೀನು ಮೀಯು
ನಿನ್ನ ಕುಟುಂಬಿಕರನ್ನು ಕರೆ
ಕಪಿಲೆ ಹಸುವಿನ ಬೆಣ್ಣೆಯನ್ನು ತಾ
ಹತ್ತಿಯ ಬತ್ತಿ ಹಾಕಿ ಸೊಡರು ಹಚ್ಚು
ನನಗೆ ಬೇಕಾದ ಸತ್ಯ ದೃಷ್ಟಾಂತ ಹೇಳು
ನೀ ತಂದ ಹಾಲು ತೆಕ್ಕೊಳ್ಳುವೆ
ತಲೆಗೂ ಮೈಗೂ ಮಿಂದಳು ಮದನಗ
ತನ್ನ ಕುಟುಂಬಿಕರನ್ನು ಕರೆದಳು
ಕಪಿಲೆ ದನದ ಬೆಣ್ಣೆ ತಂದಳು
ಹತ್ತಿಯ ಬತ್ತಿಯನ್ನಿಕ್ಕಿ ಸೊಡರು ಹಚ್ಚಿದಳು
ಓ ಮದುಮಗ ಕೇಳಿದಿರಾ ನೀವು
ನಿಮ್ಮ ಕೈಮೆಯ್ ಮುಟ್ಟಿದುದಲ್ಲದೆ
ಬೇರೊಬ್ಬನ ಕೈಮೆಯ್ ನಾನು ಮುಟ್ಟಿಲ್ಲ
ಎಂದಳು ಮದನಗ ಜುಮಾದಿ ಗದ್ದಿಗೆಯಿಂದ
ಸೀರೆಯನ್ನು ಎತ್ತಿ ಹಿಡಿದುಕೊಂಡಾಗ
ದಡ್ಡನೆ ಮಗುಚಿಕೊಂಡಳು ಮದನಗ

ಕಾರಿದಳು ಬಿಳಿನೊರೆ ಕರಿನೆತ್ತರು
ಆಗ ದೈವದೊಡನೆ ಹೇಳಿಕೊಂಡರು ಕುಞಣಪ್ಪರು
ಮದನಗನ ಅಮೂಲ್ಯ ಪ್ರಾಣ ಉಳಿಸಿಕೊಟ್ಟರೆ
ಪಂಜದ ಗುಡ್ಡೆ ಸ್ಥಾನಕ್ಕೆ ಕಂಚಿನ 'ಮೊಗ'ವೊಂದು ಎರಕ ಹೊಯ್ಯಿಸುವೆ
ಹೇಳಿದ್ದನ್ನು ಕೇಳಲಿಲ್ಲ ಆ ದೈವ
ಮದನಗನನ್ನು ಸ್ವಾಧೀನ ಮಾಡಿಕೊಂಡ

ಬಳಜೇಯಿ ಮಾಣಿಗ

ಆಟಿ ತಿಂಗಳು ಅಶುಭ ದಿನ
ಸೋಣ ತಿಂಗಳು ಪುಣ್ಯದ ದಿನ
ಚೆನ್ನೆಯಾಡೋಣವೇ ಮಾಣಿಗ ಎಕ್ಕಡಿಯಾಡೋಣವೇ
ಎಂದರು ಪರಿಮಾಲೆ ಬಲ್ಲಾಳರು
ಎಕ್ಕಡಿ ಸುಮ್ಮನೆ ಚೆನ್ನೆ ಬುದ್ಧಿಗೊಳ್ಳೆಯದು ಕೇಳಿದಿರಾ
ಮರದ ಮಣೆಯಲ್ಲಿ ಬಲ್ಲಾಳರೆ ಹೊಂಗಾರಕನ ಕಾಯಿಯಲ್ಲಿ
ಆಡಲು ನನಗೆ ತಿಳಿಯದೆಂದಳು ಬಳಜೇಯಿ ಮಾಣಿಗ
ನನ್ನ ಮಾವನ ಮನೆಯಲ್ಲಿ ಬಂಗಾರದ ಮಣೆಯಿದೆ
ಮುತ್ತಿನ ಹರಳುಗಳಿವೆ
ನಾನು ತರುತ್ತೇನೆ ಬಲ್ಲಾಳರೆ ಎಂದಳು ಬಳಜೇಯಿ ಮಾಣಿಗ
ನಿನ್ನ ಮಾವನ ಮನೆಯಲ್ಲಿ ಆಲೋಕ ಮೂಲೋಕ ಇದ್ದರೆ
ನನ್ನೊಂದು ಬೀಡಿನಲ್ಲಿ ಬರವೇನೂ ಬಂದಿಲ್ಲ ಹೆಣ್ಣೆ
ನೀನು ಹೋಗು ಮಾಣಿಗ ತೆಂಕು ಸಿರಿ ಕೊಠಡಿಯಲ್ಲಿ
ಕಲ್ಲ ಕಲೆಂಬಿಯ ಒಳಗಿದೆ
ಬಂಗಾರದ ಮಣೆ ಮುತ್ತಿನ ಹರಳು
ತಾರೆಂದರು ಪರಿಮಾಲೆ ಬಲ್ಲಾಳರು
ಹಾಗೆಂದೊಡನೆ ಮಾಣಿಗ ಹೋದಳು
ಕಲ್ಲ ಕಲೆಂಬಿಯ ಬೀಗ ತೆಗೆದೊಗೆದಳು
ಬಂಗಾರದ ಮಣೆಯನ್ನು ಮಾಣಿಗ ಅಂಗೈಯಲ್ಲಿಟ್ಟಳು
ಮುತ್ತಿನ ಹರಳು ತೆಗೆದಳು ಸೆರಗಿನಲ್ಲಿಕ್ಕಿದಳು
ಕಲ್ಲ ಕಲೆಂಬಿಯ ಭಾರೀ ಬೀಗವನ್ನು ಇಕ್ಕಿ ಬಂದಳು ಮಾಣಿಗ

ಇಬ್ಬರೂ ಆಟಕ್ಕೆ ಸರಿಯಾಗಿ ಕುಳಿತರು
ನೀವು ಮೊದಲಾಗಿ ಆಡಿ ಬಲ್ಲಾಳರೆ
ನಾನು ಮತ್ತೆ ಆಡುತ್ತೇನೆಂದಳು ಮಾಣಿಗ
ಮೊದಲಿಗೆ ಆಡಿದರು ಪರಿಮಾಲೆ ಬಲ್ಲಾಳರು
ಮತ್ತೆ ಆಡಿದಳು ಬಳಜೇಯಿ ಮಾಣಿಗ
ಒಂದಾಟ ಆಡುವಾಗ ಬಲ್ಲಾಳರಿಗೆ ಒಂದು ಕುಡುತೆ ಅರಳಾಯ್ತು
ಎರಡಾಟ ಆಡುವಾಗ ಬಲ್ಲಾಳರಿಗೆ ಎರಡು ಕುಡುತೆ ಅರಳಾಯ್ತು
ಮೂರಾಟ ಆಡುವಾಗ ಬಲ್ಲಾಳರಿಗೆ ಮೂರು ಕುಡುತೆ ಅರಳಾಯ್ತು
ನಿಮ್ಮ ಕುಟುಂಬದಲ್ಲಿ ಬಸುರಿ ಹೆಂಗಸರಿದ್ದರೆ ಬಲ್ಲಾಳರೆ
ಅರಳು ಕಲಸಿ ಔತಣ ಮಾಡಿಸಿರೆಂದಳು ಮಾಣಿಗ
ಐದಾಟ ಆಡುವಾಗ ಬಲ್ಲಾಳರು
ಬಾಯಾರಿಕೆಯಾಗುವುದೆಂದರು
ನಾನು ಆಸರು ತರಲೆಂದು ಹೋದರೆ ಬಲ್ಲಾಳರೆ
ಮಣೆಯ ತುದಿಯನ್ನು ತಿರುಗಿಸುತ್ತೀರಿ ಆಟ ತಪ್ಪಿಸುತ್ತೀರಿ
ಎಂದಳು ಬಳಜೇಯಿ ಮಾಣಿಗ
ಮಣೆಯ ತುದಿ ಬದಲಿಸುವುದಿಲ್ಲ ಆಟ ತಪ್ಪಿಸುವುದಿಲ್ಲ ಮಾಣಿಗ
ಬೇಗನೆ ಆಸರು ತಾರೆಂದರು ಪರಿಮಾಲೆ ಬಲ್ಲಾಳರು
ಅಷ್ಟನ್ನು ಕೇಳಿದಳು ಮಾಣಿಗ ತಟ್ಟನೆ ಎದ್ದಳು
ಆಸರು ತರಲು ಒಳಗೆ ಹೋದಳು
ಚೆನ್ನೆ ಮಣೆ ತಿರುಗಿಸಿದರು ಬಲ್ಲಾಳರು ಆಟ ತಪ್ಪಿಸಿದರು
ಬಳಜೇಯಿ ಮಾಣಿಗ ಪಿಂಗಾಣಿಯಲ್ಲಿ ಹಾಲೂ ಗಿಂಡೆಯಲ್ಲಿ ನೀರೂ
ಹಿಡಕೊಂಡು ಬೇಗ ಬರುವಾಗ
ಹೊಸ್ತಿಲ ಮೇಲುಪಡಿ ತಾಗಿತ್ತು ಹೊಸ್ತಿಲು ಎಡವಿತು
ಓ ಬಲ್ಲಾಳರೆ ಹೊಸ್ತಿಲ ಮೇಲುಪಡಿ ತಾಗಿತು
ಹೊಸ್ತಿಲು ಎಡವಿತು ಎಂದಳು ಮಾಣಿಗ
ಹೊಸ್ತಿಲ ಮೇಲುಪಡಿ ತಾಗುವುದಾದರೆ ಹೆಣ್ಣೆ

ತುಸು ಬಗ್ಗಿ ಬರಬೇಕು
ಹೊಸ್ತಿಲು ಎಡಹಿದರೆ ಕಾಲೆತ್ತಿ ನಡೆಯಬೇಕೆಂದರು ಬಲ್ಲಾಳರು
ಆ ವೇಳೆಯಲ್ಲಿ ಬಾಜಿರದ ಕಂಬದಿಂದ ಹಲ್ಲಿ ನುಡಿಯಿತು
ಒಳ್ಳೇದಕ್ಕೆ ನುಡಿದೆಯಾ ಹಲ್ಲಿ ಹಾಳಿಗೆ ನುಡಿದೆಯಾ
ಹೋಗಲು ನುಡಿದೆಯಾ ಹಲ್ಲಿ ಇರಲಿಕ್ಕಾಗಿ ನುಡಿದೆಯಾ
ಎಂದಳು ಬಳಜೇಯಿ ಮಾಣಿಗ
ಹೊಟ್ಟೆಗಿಲ್ಲದ ಹಲ್ಲಿ ಎಂದರು ಬಲ್ಲಾಳರು
ಬಲ್ಲಾಳರ ಬಳಿಗೆ ಪಿಂಗಾಣಿಯ ಹಾಲೂ ಗಿಂಡೆಯ ನೀರೂ
ತಂದಳು ಮಾಣಿಗ
ಚೆನ್ನೆಯ ಮಣೆಯನ್ನು ನೋಡುತ್ತಾಳೆ ಮಾಣಿಗ
ಮಣೆಯ ತುದಿ ತಿರುಗಿಸಿದ್ದಾರೆ ಆಟ ಕೆಡಿಸಿದ್ದಾರೆ ಬಲ್ಲಾಳರು
ಮಾಣಿಗ ಕೋಪಿಸಿದಳು ಕೆರಳಿ ಕೆಂಡವಾದಳು
ಮಣೆ ತಿರುಗಿಸಿದ್ದೀರಿ ಬಲ್ಲಾಳರೆ ಆಟ ಕೆಡಿಸಿದ್ದೀರೆಂದಳು
ಮಣೆಯನ್ನು ಒದ್ದು ಮಗುಚಿ ಹಾಕಿದಳು
ಅದನ್ನು ನೋಡಿದರು ಬಲ್ಲಾಳರು
ಮಾಣಿಗನ ಜುಟ್ಟು ಹಿಡಿದರು ಕೈ ದಣಿಯುವಂತೆ ಗುದ್ದಿದರು
ಕಾಲು ದಣಿಯುವಂತೆ ಒದ್ದರು
ಓಡುತ್ತಾ ಬೀಳುತ್ತಾ ಹೋದಳು ಜೇವು
ತೆಂಕು ಸಿರಿ ಕೊಠಡಿಗೆ
ಸೊಗಸಿನ ಹಾಸುಗೆ ಬಿಟ್ಟಳು ಬರಿ ನೆಲದಲ್ಲಿ ಕತ್ತಲೆಯಲ್ಲಿ
ಕವಚಿ ಮಲಗಿದಳು
ಅದನ್ನು ನೋಡಿದರು ಬಲ್ಲಾಳರು
ಮಾಣಿಗ ಮಲಗಿದ್ದಲ್ಲಿಗೆ ಹೋದರು
ಎಲ್ಲಿದ್ದೀಯಾ ಹೆಣ್ಣೆ ಬಳಜೇಯಿ ನಾನು ವಿನೋದಕ್ಕೆಂದು
ಹೊಡೆದೆನೆಂದು ನಿನಗೆ ಇಷ್ಟು ಕೋಪವೇ ಮಾಣಿಗ
ಎಂದರು ಬಲ್ಲಾಳರು

ಮೂಗಿನಿಂದ ಮುಲುಗಲಿಲ್ಲ ಬಾಯಿ ತೆರೆಯಲಿಲ್ಲ ಮಾಣಿಗ
ನೆರೆಕರೆಯಿಂದ ಇರ್ವರು ಹೆಂಗಸರನ್ನು ಕರೆದರು ಬಲ್ಲಾಳರು
ಹೊಟ್ಟೆಯ ಹಸಿವಿಗೆ ಉಣ್ಣುವುದಿಲ್ಲ ಮಾಣಿಗ
ಮೆಯ್ಯ ಕೊಳೆಗೆ ಮೀಯುವುದಿಲ್ಲ
ಅವಳನ್ನೊಮ್ಮೆ ಸಾಂತ್ವನಗೊಳಿಸಿರೆಂದು ಬಲ್ಲಾಳರು
ಮಾಣಿಗ ಮಲಗಿದಲ್ಲಿಗೆ ಹೋದರು ನೆರೆಕರೆ ಹೆಣ್ಣುಗಳು
ಯಾರೇ ಬಳಜೇಯಿ ಮಾಣಿಗ ಕೇಳಿದೆಯ
ಗಂಡ ಎರಡು ಪೆಟ್ಟು ಹೊಡೆದರೆಂದು
ಕೋಪದಲ್ಲಿ ಮಲಗದಿರು ಮಾಣಿಗ
ನಮ್ಮ ಗಂಡಂದಿರು ನಮಗೆ ಹೊಡೆಯುವುದಿಲ್ಲವೆ?
ನಿನಗೊಂದು ಹೆಚ್ಚೇನು ಮಾಣಿಗ ಎಂದರು ನೆರೆಕರೆ ಹೆಂಗುಸರು
ಏಳು ಬಲ್ಲಾಳರಿಗೆ ಬಡಿಸು ನೀನೂ ಉಣ್ಣು ಎಂದರು
ಅದನ್ನು ಕೇಳಿದಳು ಮಾಣಿಗ
ಮಾನದಲ್ಲಿ ಬಂದಿರುವಿರಾದರೆ ಮರ್ಯಾದೆಯಲ್ಲಿ ಹೋಗಿರೆಂದಳು
ನೆರೆಯ ಹೆಂಗುಸರು ಹೊರಟು ಬಂದರು
ಓ ಬಲ್ಲಾಳರೆ ಕೇಳಿದಿರಾ
ನಿಮ್ಮ ಮಡದಿಯ ಶಾಂತಿ ಮಧ್ಯಸ್ತಿಕೆಗೆ ಬಂದರೆ
ನಮ್ಮ ಮರ್ಯಾದೆ ಹೋದೀತೆಂದರು
ಅವರಯ ಹೊರಟು ಹೋಗುವುದನ್ನು ನೋಡಿದರು ಬಲ್ಲಾಳರು
ಮಾಣಿಗ ಮಲಗಿದಲ್ಲಿಗೆ ಹೋಗುತ್ತಾರೆ
ನಾನೊಂದು ಹೊಡೆದೆನೆಂದು ಕೋಪದಲ್ಲಿ ಮಲಗದಿರು ಮಾಣಿಗ
ನೀನು ಎರಡು ತುತ್ತು ಉಣ್ಣು ಮಾಣಿಗ ನನಗೆ ಎರಡು ತುತ್ತು ಬಡಿಸೆಂದರು
ಚಪ್ಪರಕ್ಕೆ ಭಾರವಾದರೆ ಬಲ್ಲಾಳರೆ ಬೀಳಲಿಗೆ ಭಾರವಾಗದು
ನನ್ನ ಮಾವನ ಮನೆಗೆ ಮಟ್ಟ ಮಡಂದೂರಿಗೆ
ನನ್ನನ್ನು ಕೊಟ್ಟು ಕಳುಹಿರಿ ಬಲ್ಲಾಳರೆ ಎಂದಳು ಮಾಣಿಗ
ಆಗೆಂದರು ಬಲ್ಲಾಳರು ಹೋಗುವುದಾದರೆ ಹೋಗಬಹುದು ಮಾಣಿಗ

ಈಗಾದರೋ ಏಳು ನನಗೆರಡು ತುತ್ತು ಬಡಿಸು
ನೀನೆರಡು ತುತ್ತು ಉಣ್ಣು ಎಂದರು
ಆಗ ತಟ್ಟನೆದ್ದಳು ಮಾಣಿಗ
ಬಲ್ಲಾಳರಿಗೆ ಬಡಿಸಿದಳು ಅವಳು ಎರಡು ತುತ್ತು ಉಂಡಳು
ಉಂಡು ಕೈ ಮೋರೆ ತೊಳೆದಳು
ನನ್ನನ್ನು ಕಳುಹಿರಿ ಬಲ್ಲಾಳರೆ ಎಂದಳು
ಇಷ್ಟದಲ್ಲಿ ಹೋಗುವವಳೋ ಹೆಣ್ಣೆ ಕಷ್ಟದಲ್ಲಿ ಹೋಗುವವಳೋ
ಎಂದು ಕೇಳಿದರು ಪರಿಮಾಲೆ ಬಲ್ಲಾಳರು
ಇಷ್ಟಕ್ಕೆ ಇಷ್ಟವೂ ಉಂಟು ಬಲ್ಲಾಳರೆ
ಕಷ್ಟಕ್ಕೆ ಕಷ್ಟವೂ ಉಂಟು ಎಂದಳು ಮಾಣಿಗ
ಇಷ್ಟದಲ್ಲಿ ಹೋಗುವುದಾದರೆ ಹೆಣ್ಣೆ
ಬಿಳಿಕುದುರೆ ಬೆಳ್ಗೊಡೆ ಸತ್ತಿಗೆ ಉಂಟು
ಕಷ್ಟದಲ್ಲಿ ಹೋಗುವವಳಾದರೆ ಹೆಣ್ಣೆ
ಕಾಲ ನಡಿಗೆಯೂ ಉಂಟೆಂದರು ಬಲ್ಲಾಳರು
ಬಿಳಿಕುದುರೆಯೂ ಬೇಡ ಬೆಳ್ಗೊಡೆಯೂ ಬೇಡ ಬಲ್ಲಾಳರೆ
ದಂಡಿಗೆಯ ಬೋವರನ್ನು ಕರೆಸಿರಿ ಬಲ್ಲಾಳರೆ
ದಂಡಿಗೆ ಸಿಂಗಾರ ಮಾಡಿಸಿರಿ
ದಂಡಿಗೆಯಲ್ಲಿ ನನ್ನನ್ನು ಕೊಟ್ಟು ಕಳುಹಿಸಿರೆಂದಳು ಬಳಜೇಯಿ ಮಾಣಿಗ
ದಂಡಿಗೆಯ ಬೋವರನ್ನು ಕರೆಸಿದರು ಪರಿಮಲೆ ಬಲ್ಲಾಳರು
ದಂಡಿಗೆ ಸಿಂಗಾರ ಮಾಡಿಸಿದರು
ಒಳಗೆ ಉಟ್ಟುತೊಟ್ಟುಕೊಂಡಳು ಮಾಣಿಗ
ದಂಡಿಗೆಯಲ್ಲಿ ಹೋಗಿ ಕುಳಿತಳು ಮಾಣಿಗ
ಇಂದು ಹೋದ ಮಾಣಿಗ ನೀನು
ಎಂಟರಂದು ಬಾರೆಂದರು ಬಲ್ಲಾಳರು
ಇಲ್ಲಿ ಹೊತ್ತ ಪಲ್ಲಕ್ಕಿಯನ್ನು ಬೋವರೆ
ಮಟ್ಟ ಮಡಂದೂರಿನಲ್ಲಿ ಇಳಿಸಿರಿ ಎಂದರು

ಮಾಣಿಗನ ದಂಡಿಗೆ ಹೋಗುತ್ತದೆ ಮಟ್ಟ ಮಡಂದೂರಿಗೆ
ಮಾಣಿಗನ ದಂಡಿಗೆ ಬರುವುದನ್ನು ನೋಡುತ್ತಾರೆ ಮಾವ ಪಡ್ಡೊಳೆಯರು
ಯಾರು ಮಾಣಿಗ ಕೇಳಿದೆಯ ಒಳ್ಳೆಯದರಲ್ಲಿ ಬಂದಿದ್ದರೆ
ದಂಡಿಗೆ ಆನೆ ಬಾಗಿಲಲ್ಲಿ ಹೊಗಲಿ
ಕಷ್ಟದಲ್ಲಿ ಬಂದಿದ್ದರೆ ಕುರುಬಾಗಿಲಲ್ಲಿ ಹೊಗಲಿ ಎಂದರು
ಮಾಣಿಗನ ದಂಡಿಗೆ ಕುರುಬಾಗಿಲಲ್ಲಿ ಹೊಕ್ಕಿತು
ಯಾವ ಕಷ್ಟದಲ್ಲಿ ಬಂದೆ ಮಾಣಿಗ ಎಂದು ಕೇಳಿದರು
ಮಾವ ಬಕ್ಕರಂದ ಪಡ್ಡೊಳೆಯರು
ಗಂಡನ ಕೈದಣಿವಷ್ಟು ಗುದ್ದು ಕಾಲು ದಣಿವಷ್ಟು ಒದೆತ ತಿಂದು
ನಾನಲ್ಲಿ ಇರಲಾರೆ ಇನ್ನು ಹೋಗಲಾರೆ ಎಂದಳು ಮಾಣಿಗ
ನೀನು ಹೋಗದಿದ್ದರೆ ಹೋಗೆಂದು ನಾನು ಹೇಳಲಾರೆ
ನಿನಗೆ ಇಲ್ಲಿ ಕಡಿಮೆಯೇನು ಎಂದರು ಮಾವ
ಹಾಗೆ ಇದ್ದಳು ಮಾಣಿಗ ಮಟ್ಟಮಡಂದೂರಿನ ಬೀಡಿನಲ್ಲಿ

ಎಂಟು ದಿನ ಆಗುವಾಗ ಪರಿಮಾಲೆ ಬಲ್ಲಾಳರು
ನನ್ನ ಮಾಣಿಗ ಯಾಕೆ ಬರಲಿಲ್ಲವೆಂದು
ಚಿಂತೆಯಲ್ಲಿ ತಲ್ಲಣಿಸಿದರು
ಅಂದಿನ ದಿನ ಕಳೆಯಿತು ಬಲ್ಲಾಳರಿಗೆ
ಮರುದಿನ ಬಂದಾಗ
ಭೂತದ ಸ್ಥಾನದ ಬಾಗಿಲು ತೆರೆದರು ಬಲ್ಲಾಳರು
ಕೈಮುಗಿದು ಹೇಳಿಕೊಂಡರು
ನನ್ನ ಮಾಣಿಗನನ್ನು ಮಂಕುಮರುಳು ಮಾಡಿ ತಂದರೆ
ಅವಳ ಮೆಯ್ ಮುಟ್ಟುವುದಕ್ಕೆ ಮೊದಲು
ನಿನಗೆ ವಿಶೇಷ ನೇಮ ಕೊಡುವೆನೆಂದರು

ಅದನ್ನು ಕೇಳಿದ ದೈವ ನಟ್ಟ ನಡುವಿರುಳಿನಲ್ಲಿ
ಮಟ್ಟ ಮಡಂದೂರಿಗೆ ಹೋದ
ಮಾಣಿಗ ಮಲಗಿದ್ದಲ್ಲಿಗೆ ಹೋದ ಮಂಕುಮರುಳುಗೈದ

ದಿಕ್ಕನೆ ಎದ್ದು ಕುಳಿತಳು ಮಾಣಿಗ
ದೈವ ಕನಸು ಕಟ್ಟಿದುದನ್ನು ಎಣಿಸಿದಳು
ಮಾವ ಮಲಗಿದ್ದಲ್ಲಿಗೆ ಹೋದಳು ಮಾಣಿಗ
ದಂಡಿಗೆ ಸಿಂಗಾರ ಮಾಡಿಸಿರಿ ಮಾವಯ್ಯ
ನಾನು ಗಂಡನ ಮನೆಗೆ ಹೋಗುವೆನೆಂದಳು ಮಾಣಿಗ
ಹೋಗಲಾರೆಯೆಂದು ಹೇಳಿದೆಯಲ್ಲ ಮಾಣಿಗ
ಈಗ ನಟ್ಟನಡುವಿರುಳಿನಲ್ಲಿ ಹುಚ್ಚುಗಟ್ಟಬೇಡ ಎಂದರು ಮಾವ
ಹೋಗದೆ ಆಗದೆಂದಳು ಮಾಣಿಗ
ಹಿಡಿಯದ ಚಲ ಹಿಡಿದಳು
ದಂಡಿಗೆ ಸಿಂಗಾರ ಮಾಡಿಸಿದರು ಪಡ್ಡೊಳೆಯರು
ಮಾಣಿಗನನ್ನು ಎತ್ತಿ ದಂಡಿಗೆಯಲ್ಲಿ ಕುಳ್ಳಿರಿಸಿದರು
ಚೆಂದದಲ್ಲಿ ಹೋಗೆಂದರು
ಮಾಣಿಗನ ದಂಡಿಗೆ ಬರುತ್ತದೆ ಬಲ್ಲಾಳರ ಬೀಡಿಗೆ
ಮಾಣಿಗನ ದಂಡಿಗೆ ಬಂದುದನ್ನು ನೋಡಿದರು ಬಲ್ಲಾಳರು
ನನ್ನ ಮಾಣಿಗ ಬಂದಳೆಂದು ಮನದುಂಬಿ ಸಂತೋಷಗೊಂಡರು
ಓಡಿಹೋಗಿ ಬಲ್ಲಾಳರು ದಂಡಿಗೆಯನ್ನು ನಿಲ್ಲಿಸಿದರು
ಮಾಣಿಗನನ್ನು ಎತ್ತಿ ಕೆಳಕ್ಕಿಳಿಸಿದರು
ಬಳಜೇಯಿ ಮಾಣಿಗ ಒಳಹೊಗಲೆಂದು
ಒಂದು ಕಾಲು ಒಳಗಿಟ್ಟಾಗ
ದಡ್ಡನೆ ಮಗುಚಿ ಬಿದ್ದಳು
ಬಿಳಿನೊರೆ ಕರಿನೆತ್ತರು ಕಾರಿದಳು
ಕಾಯ ಬಿಟ್ಟು ಕೈಲಾಸ ಜೀವ ಬಿಟ್ಟು ವೈಕುಂಠ ಸೇರಿದಳು
ತಲೆತಲೆ ಬಡಿದುಕೊಂಡರು ಬಲ್ಲಾಳರು
ಎದೆ ಎದೆ ಹೊಡೆದುಕೊಂಡರು
ನನ್ನ ಮಾಣಿಗನನ್ನು ನನ್ನ ಕೈಯಾರೆ ತೆಗೆದೆನೆಂದು
ಮಮ್ಮಲ ಮರುಗಿದರು

ಆಚೆ ಕರೆಯಲ್ಲಿ ಮಾವು ಈಚೆ ಕರೆಯಲ್ಲಿ ಹಲಸಿನ ಮರ ಕಡಿಸಿದರು
ಹೊಲದ ಬದಿಯಲ್ಲಿ ಚಿತೆಯನ್ನು ಹೂಡಿದರು
ಮಾಣಿಗನ ಶವವನ್ನು ಮೀಯಿಸಿ ಸಿಂಗಾರ ಮಾಡಿಸಿದರು
ಕಾಷ್ಠಕ್ಕೆ ಹೊರಿಸಿದರು
ಚಿತೆಗೆ ಮೂರು ಸುತ್ತು ಬಂದು ಬೆಂಕಿ ಕೊಳ್ಳಿ ಮುಟ್ಟಿಸಿದರು

ಹೊನ್ನಮ್ಮ ಜೇವು

ಬೈಗಿಗೆ ಧಾರೆಯಾಯ್ತು ಮಾಲಿಂಗ ಸೆಟ್ಟಿಗೆ
(ಮರು) ಮುಂಜಾನೆ ದಂಡೊದಗಿತು
ಆಗೆಂದನು ಅಬ್ಬೆ ಅರಸಂತಾರ ಕೂಡೆ
ಓ ತಾಯೆ ಕೇಳಿದಿರಾ
ನನ್ನ ಮಡದಿ ನಿಮ್ಮ ಸೊಸೆಯನ್ನು
ತೆಂಗಿನಚಿಪ್ಪು ಕೊಟ್ಟು ಬೆಂಕಿಗೆಂದು ಕಳಿಸಬೇಡಿ ತಾಯಿ
ಕೊಡವನ್ನು ಕೊಟ್ಟು ನೀರಿಗೆಂದು ಕಳಿಸಬೇಡಿ ತಾಯಿ
ನಾನು ಹನ್ನೆರಡು ವರ್ಷದ ದಂಡನ್ನು
ಹನ್ನೆರಡು ತಿಂಗಳಲ್ಲಿ ಸಾಧಿಸಿ ಬರುವೆ
ಹನ್ನೆರಡು ತಿಂಗಳ ದಂಡನ್ನು ತಾಯಿ
ಹನ್ನೆರಡು ದಿನದಲ್ಲಿ ಸಾಧಿಸಿ ಬರುವೆ
ಎಂದ ಮಾಲಿಂಗ ಸೆಟ್ಟಿ
ಕಲ್ಲು ಕಡಿಸಿದ ಕಲ್ಲ ಕೋಣೆ ಕಟ್ಟಿಸಿದ
ಹೊನ್ನಮ್ಮ ಜೇವನ್ನು ಕಲ್ಲ ಕೋಣೆಯೊಳಗಿರಿಸಿದ
ಒಳಗೆ ಚಿಲಕ ಹೊರಗೆ ಬೀಗ ಹಾಕಿದ
ದಂಡು ಸಾಧಿಸಲು ಹೋದ ಮಾಲಿಂಗ ಸೆಟ್ಟಿ
        ಅವನು ಹೋದ ಸುದ್ದಿ ಸಿಕ್ಕಿತು
ಪುತ್ತೂರು ಮನೆಯ ಜಾಗಣಂತೋಡೆಯರಿಗೆ
ನಡುಬೈಲಿನಲ್ಲಿ ಬಟ್ಟೆಯೊಗೆಯುವ ಕಲ್ಲ (ಬಳಿಯ)
ಮಡಿವಾಳ್ತಿ ಅಬ್ಬಕ್ಕನನ್ನು ಕರೆದಿಂತೆಂದರು ಜಾಗಣಂತೋಡೆಯರು
ಹೌದೇನೆ ಹೌದೇನೆ ಮಡಿವಾಳ್ತಿ ಅಬ್ಬಕ್ಕ

ಹೊನ್ನಮ್ಮ ಜೇವನ್ನು ಕರೆತಂದು
ನನಗೆ ನೀನು ಕೊಡುವೆಯೇನೆ?
ಅವಳನ್ನು ತಂದುಕೊಟ್ಟರೆ ಕೇಳಿದೆಯಾ
ಕಳಸೆಯಲ್ಲಿ ಹಿಡಿಯುವಷ್ಟು ರೂಪಾಯಿ ಕೊಡುವೆ
ಎಂದರು ಜಾಗಣಂತೋಡೆಯರು
ಅಷ್ಟೊಂದು ಮಾತು ಕೇಳುತ್ತಾಳೆ ಮಡಿವಾಳ್ತಿ ಅಬ್ಬಕ್ಕ
ಮಾಲಿಂಗ ಸೆಟ್ಟಿಯ ಬೀಡಿಗೆ ಬಂದಳು
ಮಾಲಿಂಗ ಸೆಟ್ಟಿಯ ತಾಯಿಯನ್ನು ಕರೆದಳು
ಒಯೆ ಅಕ್ಕನವರೆ ಓಯೆ ಅಕ್ಕನವರೆ ಕೇಳಿದಿರಾ
ನಿಮ್ಮ ಸೊಸೆ ಮದುಮಗಳಕ್ಕ ಎಲ್ಲಿದ್ದಾರೆ?
ಮೊನ್ನೆ ಬಂದ ಮದುಮಗಳು ಅಕ್ಕನನ್ನು
ನನಗೊಮ್ಮೆ ನೋಡಬೇಕು
ನನಗೊಮ್ಮೆ ಮಾತನಾಡಬೇಕು ಅಕ್ಕನವರೆ
ಎಂದಳು ಮಡಿವಾಳ್ತಿ ಅಬ್ಬಕ್ಕ
ಅದಕೆಂದರು ಅವರು ಅರಸಂತಾರ್ ಹೆಂಗಸು
ಅಬ್ಬಕ್ಕ ಕೇಳಿದೆಯಾ ನನ್ನ ಮಗ
ಕಲ್ಲು ಕಡಿದು ಕಲ್ಲ ಕೋಣೆಯೊಳಗೆ
ಹೊನ್ನಮ್ಮ ಜೇವನ್ನು ಇರಿಸಿದ್ದಾನೆ ಕೇಳಿದೆಯಾ
ಕಲ್ಲ ಕೋಣೆಯ ಬಾಗಿಲು ತೆರೆಯಿರಿ ಅಕ್ಕನವರೆ
ನಾನೊಮ್ಮೆ ನೋಡುವೆ ನಾನೊಮ್ಮೆ ನುಡಿಸುವೆ ಅಕ್ಕನವರೆ
ಅಷ್ಟೊಂದು ಮಾತು ಕೇಳಿದಾಗ ಹೆಂಗಸು
ಕಲ್ಲ ಕೋಣೆಯ ಬಾಗಿಲು ತೆರೆದರು
ಅರ್ತಿ ಅಕ್ಕರೆಯಿಂದ ಮಾತನಾಡಿದಳು ಅಬ್ಬಕ್ಕ
ಓಯೆ ಅಕ್ಕನವರೆ ಓಯೆ ಅಕ್ಕನವರೆ
ಜಾಗಣಂತೋಡೆಯರ ಬಾಕಿಮಾರಿನಲ್ಲಿ
ಡೊಂಬರಾಟ ಗುಬ್ಬಿಗಳ ಕಾಳಗ

ಸೂಳೆಯರ ಆಟ ಆಗುತ್ತದೆ ಅಕ್ಕನವರೆ
ಆಗೆಂದರು ಅರಸಂತಾರ್ ಹೆಂಗಸು
ನೀನು ಹಾಗೆಲ್ಲ ಹೇಳದಿರು ಮಡಿವಾಳ್ತಿ ಅಬ್ಬಕ್ಕ
ನನ್ನ ಮಗ ಕಲ್ಲು ಕಡಿದು ಕಲ್ಲ ಕೋಣೆಯೊಳಗಿರಿಸಿದ್ದಾನೆ
ಎಲ್ಲಿಗೂ ಕಳಿಸಬಾರದೆಂದಿದ್ದಾನೆ ಅವಳನ್ನು
ನೀನು ಮರುಳುಕಟ್ಟಿಸಬೇಡ ಎಂದರು
ಆಗೆಂದಳು ಮಡಿವಾಳ್ತಿ ಅಬ್ಬಕ್ಕ
ಓಯೋಯೆ ಅಕ್ಕನವರೆ ಕೇಳಿದಿರಾ
ಅವರ ಹಾಗೇ ಹೆಣ್ಣು ಸಂಸಾರ ನಾನಲ್ಲವೇ?
ನನ್ನೊಂದಿಗೆ ಬರಲಿಕ್ಕೆ ಏನೊಂದೂ ಭಯವಿಲ್ಲ
ಇರುಳೇ ಹೋಗಿ ನಾವು ಇರುಳೇ ಬಂದೇವು
ಇಷ್ಟಲ್ಲದೆ ಕೇಳಿದಿರಾ
ಕಂಚಿನಡ್ಕದಲ್ಲಿ ಮಿಂಚಿನ ಕೋಟೆಯೇರಿಸಿದ್ದಾರೆ
ಪುತ್ತೂರು ಮನೆಯ ಜಾಗಣಂತೋಡೆಯರು
ಅದರ ಚಂದವನ್ನು ನೋಡಿ ಬರುತ್ತೇವೆ
ಅಷ್ಟು ಮಾತು ಕೇಳುವಾಗ
ಹೊನ್ನಮ್ಮ ಜೇವಿಗೆ ಮರುಳಾಯ್ತು
ನಾವು ಇರುಳೇ ಹೋಗಿ ಇರುಳೇ ಬರುತ್ತೇವೆ ಅತ್ತೆಯವರೆ
ನಾವು ಹೋಗುತ್ತೇವೆಂದಳು
ನನಗೊಂದೂ ಗೊತ್ತಿಲ್ಲ ಹೊನ್ನಮ್ಮ
ಹೋಗುವೆಯಾದರೆ ಹೋಗು ಕುಳ್ಳಿರುವೆಯಾದರೆ ಕುಳ್ಳಿರು
ಎಂದರು ಅರಸಂತಾರ್ ಹೆಂಗಸು
ಹೊರಟು ಹೋಗುತ್ತಾರೆ ಒಟ್ಟಿಗೆ
ಹೊನ್ನಮ್ಮನೂ ಮಡಿವಾಳ್ತಿ ಅಬ್ಬಕ್ಕನೂ
ಜಾಗಣಂತೋಡೆಯರ ಬಾಕಿಮಾರಿಗೆ ಮುಟ್ಟಿದರು
ಎಲ್ಲಿ ಆಟವಾಗುತ್ತದೆಂದು ಕೇಳಿದಳು ಹೊನ್ನಮ್ಮ

ಜಾಗಣಂತೋಡೆಯರ ನಡುವಂಗಳದಲ್ಲಿ
ಆಟವಾಗುತ್ತದೆಂದಳು ಮಡಿವಾಳ್ತಿ ಅಬ್ಬಕ್ಕ
ನಡುವಂಗಳದಲ್ಲಿ ಬಂದು ನೋಡುವಾಗ
ಅಲ್ಲಿ ಆಟವಾಗುವುದಿಲ್ಲ
ಎಲ್ಲಿ ಮಡಿವಾಳ್ತಿ ಆಟವಾಗುವುದೆಂದು ಕೇಳಿದಳು
ಜಾಗಣಂತೋಡೆಯರ ಮೇಲುಪ್ಪರಿಗೆಯ ಮೇಲೆ
ಆಟವಾಗುತ್ತದೆಂದಳು
ಓಯೋಯೆ ಜಾಗಣಂತೋಡೆಯರೆ ಕೇಳಿದಿರಾ
ಹೊನ್ನಮ್ಮ ಜೇವನ್ನು ಕರೆತಂದಿದ್ದೇನೆ
ಕಳಸೆಯಲ್ಲಿ ಹಿಡಿಯುವ ರೂಪಾಯಿ ಕೊಡಿರೆಂದಳು
ಕಳಸೆಯಲ್ಲಿ ಹಿಡಿಯುವ ರೂಪಾಯಿ ಕೊಟ್ಟರು
ಹೊನ್ನಮ್ಮ ಜೇವನ್ನು ಅಲ್ಲಿ ಬಿಟ್ಟಳು
ಅಬ್ಬಕ್ಕ ಹಿಂದೆ ಹೋದಳು
ಹನ್ನೆರಡು ದಿನ ದಂಡು ಸಾಧಿಸಿ ಬಂದ ಮಾಲಿಂಗಸೆಟ್ಟಿ
ಓಯೆ ತಾಯಿಯವರೆ ನನ್ನ ಮಡದಿ ನಿಮ್ಮ ಸೊಸೆ
ಹೊನ್ನಮ್ಮ ಜೇವು ಎಲ್ಲಿದ್ದಾಳೆ ತಾಯಿಯವರೇ ಎಂದು ಕೇಳಿದ
ಅದಕೆಂದರು ಅರಸಂತಾರ್ ಹೆಂಗಸು
ನೀನು ಹೋದ ಬೆನ್ನಿಗೆ ಕೇಳಿದಯಾ ಮಗ
ಮಡಿವಾಳ್ತಿ ಅಬ್ಬಕ್ಕ ಬಂದಳು
ಮಂಕು ಮರುಳು ಮಾಡಿ
ಜಾಗಣಂತೋಡೆಯರ ಬಾಕಿಮಾರಿನಲ್ಲಿ
ಆಟ ಉಂಟೆಂದು ಕರೆದೊಯ್ದಿದ್ದಾಳೆ
ಕಂಚಿನಡ್ಕದಲ್ಲಿ ಮಿಂಚಿನ ಕೋಟೆಯೇರಿಸಿದ್ದಾರಂತೆ
ಕೋಟೆಯ ಚಂದ ನೋಡಿ ಬರೋಣವೆಂದಳು
ಮಡಿವಾಳ್ತಿ ಕರಕೊಂಡು ಹೋಗಿದ್ದಾಳೆ
ಹೋದದ್ದಲ್ಲದೆ ಹಿಂದಿರುಗಿ ಬರಲಿಲ್ಲ

ಎಂದರು ತಾಯಿ ಅರಸಂತಾರ್ ಹೆಂಗುಸು
ಅಷ್ಟು ಮಾತು ಕೇಳಿದ ಮಾಲಿಂಗ ಸೆಟ್ಟಿ
ಬಳೆಗಾರ ಹುಡುಗನ ವೇಷ ತಳೆದ
ಗಾಜು ಬಳೆಯ ಮಾಲೆ ಹೊತ್ತುಕೊಂಡು
ಜಾಗಣಂತೋಡೆಯರ ಬೀಡಿಗೆ ಬಂದ
ಜಗಲಿಯಲ್ಲಿ ಕುಳಿತು ಬಳೆ ಬೇಕೆ ಎಂದು ಕೇಳಿದ
ಬಂಗಾರದ ಬಳೆ ಇಡುವವರಲ್ಲದೆ
ಇಲ್ಲಿ ಮಣ್ಣಿನ ಬಳೆಯಿಡುವವರು
ಇಲ್ಲವೆಂದರು ಜಾಗಣಂತೋಡೆಯರು
ಮೊನ್ನೆ ಬಂದ ಅಕ್ಕನವರಿದ್ದಾರೆ
ಅವರಿಗೆ ಬಳೆಯಿಡಲು ಮನಸ್ಸಾಗಿದೆ
ಬಂಗಾರದ ಬಳೆಗಳ ಎಡೆಗೆ ಮಣ್ಣಿನ ಬಳೆಯಿಟ್ಟರೆ
ಎಂಥಾ ಚಂದ ನೋಡಿದಿರಾ?
ತಲೆಯಿಂದ ತೊಡಗಿ ಕಾಲಿನ ವರೆಗೆ ಮುಸುಕು ಹಾಕಿ
ಒಂದು ಕೈಯನ್ನು ನೀವು ಹಿಡಕೊಂಡು ಬನ್ನಿ
ಎಂದ ಬಳೆಗಾರ ಹುಡುಗ
ಅಷ್ಟು ಮಾತು ಒಳಕೋಣೆಯಲ್ಲಿದ್ದ
ಹೊನ್ನಮ್ಮ ಜೇವಿಗೆ ಕೇಳಿಸಿತು
ಬಳೆಯಿಡಲು ಹುಚ್ಚುಗಟ್ಟಿದಳು ಹೊನ್ನಮ್ಮ ಜೇವು
ನನಗೊಂದು ಬಳೆಯಿಡಬೇಕು ಎಂದಳು
ಬಟ್ಟೆ ಮುಸುಕು ಹಾಕಿಕೊಂಡು
ಮೇಲುಪ್ಪರಿಗೆಯಿಂದ ಕೆಳಗೆ ಚಾವಡಿಗೆ ಬಂದಳು

ಬಳೆಯ ಎಡೆಯಲ್ಲಿ ಚಂದ್ರಾಯುಧ ಇಟ್ಟುಕೊಂಡಿದ್ದಾನೆ ಮಾಲಿಂಗ ಸೆಟ್ಟಿ

ಕೈ ಹಿಡಕೊಂಡ ಕೈ ಎಳೆದುಕೊಂಡ
ಬಳೆಯಿಟ್ಟ ಬಳೆಗಾರ ಹುಡುಗ
ಚಂದ್ರಾಯುಧ ತೆಗೆದ ಜಾಗಣಂತೋಡೆಯರಿಗೆ

ಒಂದು ಕಡಿತ ಕಡಿದ
ಹೊನ್ನಮ್ಮ ಜೇವು ಒಳಿತೋ
ಚಂದ್ರಾಯುಧದ ಹೊಡೆತ ಒಳಿತೋ ಎಂದು ಕೇಳಿದ
ಒಂದು ಕಡಿತದಲ್ಲಿ ಇಕ್ಕಡಿ ಮಾಡಿದ
ಅಲ್ಲಿಂದ ಅವಳನ್ನು ಎಳೆದುಕೊಂಡು ಬಂದ
ಮಡಿವಾಳ್ತಿಯ ಮನೆಗೆ ಬಂದ
ಬಳೆ ಬೇಕೇ ಎಂದು ಕೇಳಿದ
ಬಳೆಯಿಡಬೇಕು ಎಂದಳು
ಕೈಹಿಡಿದುಕೊಂಡ ಬಳೆಗಾರ ಹುಡುಗ
ಮಡಿವಾಳ್ತಿಗೊಂದು ಹೊಡೆತ ಹೊಡೆದ
ಕಳಸೆಯಲ್ಲಿ ಹಿಡಿಯುವ ರೂಪಾಯಿ ಒಳಿತೋ
ನಿನಗೆ ಚಂದ್ರಾಯುಧದ ಗಾಯ ಒಳಿತೋ ಎಂದು ಕೇಳಿದ
ಒಂದು ಕಡಿತದಲ್ಲಿ ಇಕ್ಕಡಿಯಾಗಿ ಕತ್ತರಿಸಿದ
ಅಲ್ಲಿಂದ ಹಾಗೆ ಬಂದ ಮಾಲಿಂಗ ಸೆಟ್ಟಿ
ತನ್ನೊಂದು ಬೀಡಿಗೆ ಬಂದ
ತಾಯಿಯನ್ನು ಕೇಳಿದ ನೀವು ಕಳುಹಿದ್ದೋ ತಾಯಿಯವರೆ
ನಿಮ್ಮ ಸೊಸೆ ಅವಳಷ್ಟಕ್ಕೆ ಹೋದದ್ದೇ?
ನಾನು ಕಳುಹಿದ್ದಲ್ಲ ಮಗಾ
ಅವಳಷ್ಟಕ್ಕೆ ಹೋದದ್ದೆಂದರು ತಾಯಿ ಅರಸಂತಾರ್ ಹೆಂಗಸು
ನಾನು ಹೇಳಿದ್ದೇನು ತಾಯಿಯವರೆ
ನೀವು ಮಾಡಿದ್ದೇನು ಎಂದ ಮಾಲಿಂಗ ಸೆಟ್ಟಿ
ತಾಯಿಯನ್ನೂ ಕೊಲ್ಲಲು ಹೋದ
ಅವರು ಕುರುಬಾಗಿಲಿಂದ ಓಡಿದರು
ಹೊನ್ನಮ್ಮ ಜೇವನ್ನು ಮೂರು ತುಂಡು ಮಾಡಿ
ಮೂರು ಹಾದಿ ಕೂಡುವಲ್ಲಿ ಇಟ್ಟ ಮಾಲಿಂಗ ಸೆಟ್ಟಿ

ಬಾಲೆ ಮಾಡೆದಿ

ಸೊರಲ ಗುತ್ತಿನಲ್ಲಿ ಬಾಳಿಕೊಂಡಿದ್ದಾರೆ ಸೊರಲ ಮಾಡರು
ಸೊರಲ ಮಾಡರ ಮಡದಿ ದೇಯಿ ಮಾಡೆದಿ
ಅವರಿಗೆ ಏಳು ಗಂಡುಮಕ್ಕಳು
ಓದು ಬರಹದ ಶಾಲೆಗೆ ಹೋಗುತ್ತಿದ್ದಾರೆ
ಆಕಾಲದಲ್ಲಿ ಮತ್ತೆ ಬಸುರಿಯಾದಳು ಮಾಡೆದಿ
ಐದಾರು ಏಳೆಂಟು ತಿಂಗಳು ತುಂಬುತ್ತಾ ಬಂತು
ಒಂದು ದಿನ ಮಾಡೆದಿ ಕೊಡ ಹಿಡಕೊಂಡಳು
ಸೊರಲ ಒಡ್ಡಿನೆಡೆಗೆ ನಡೆದಳು
ಒಡ್ಡಿನ ಮೇಲೆ ನಿಂತುಕೊಂಡು ಕೆಳಗೆ ಬಗ್ಗಿ ನೋಡಿದಳು
ನೀರಲ್ಲಿ ನಲಿಯುತ್ತಿದ್ದ ಎರಡು ಮೀನುಗಳ
ಚೆಲುವನ್ನು ನೋಡಿದಳು
ನಾಗಬ್ರಹ್ಮರ ಮೀನುಗಳನ್ನು ನೋಡಿ ಮರುಳಾದಳು
ಆಗೆಂದಳು ಮಾಡೆದಿ
ಓ ಮೀನುಗಳೇ ಕೇಳಿದಿರಾ
ಮುಳುಗಿಸಿದ ಕೊಡದಲ್ಲಿ ನೀವು ಬಂದಿರಾದರೆ
ನಾನು ಗಂಡು ಹೆತ್ತರೆ ಸೊರಲ ಅಣೆಕಟ್ಟು ಕಟ್ಟುವಾಗ
ಹಾರೆ ಬುಟ್ಟಿ ಕೊಟ್ಟು ಮಣ್ಣು ಹೊರಿಸುವೆ
ಹೆಣ್ಣು ಹೆತ್ತರೆ ಆ ಹೆಣ್ಣನ್ನು ಸೊರಲ ಒಡ್ಡಿಗೆ ಒಡ್ಡುತ್ತೇನೆ
ಹೇಳಿದ ನಾಲಗೆ ಗಂಟಲಲ್ಲಿ ವಿರಮಿಸುವುದರೊಳಗೆ
ಎರಡು ಮೀನುಗಳು ಕೊಡದೊಳಗಾದವು
ಕೊಡವನ್ನು ಸೊಂಟದೊಳಗಿರಿಸಿಕೊಂಡು

ಹರುಷದ ನಗು ಸೂಸುತ್ತಾ ಮನೆಗೆ ಬಂದಳು ಮಾಡೆದಿ
ಮನೆಗೆ ಬಂದು ಕೊಡವನ್ನಿಳಿಸಿದಳು
ಮೀನನ್ನು ತೆಗೆದು ಪಾತ್ರಕ್ಕೆ ಹಾಕಿದಳು
ಮೆಟ್ಟುಗತ್ತಿ ಇಟ್ಟುಕೊಂಡಳು ಮೀನನ್ನು ತುಂಡು ಮಾಡಲು ಕುಳಿತುಕೊಂಡಳು
ಮೀನಿಗೆ ಕತ್ತಿ ತಗುಲುವಾಗ
ಧಾರೆ ಕಟ್ಟಿ ತುಳುಕಿತು ನೆತ್ತರು
ಮೀನು ನೆತ್ತರಲ್ಲಿ ಮುಳುಗಿತು
ಅಷ್ಟರಲ್ಲಿ ಬರಹದ ಸಾಲೆಗೆ ಹೋದ ಮಕ್ಕಳು
ಮನೆಗೆ ಬಂದರು
ತಾಯಿ ಮೀನು ತುಂಡುಮಾಡುವುದನ್ನು ನೋಡಿದರು
ಇದು ಯಾವೊಂದು ಮೀನು ಅಮ್ಮಾ
ಇಷ್ಟೊಂದು ನೆತ್ತರು ಹರಿಯುವುದು ಏನೆಂದು ಕೇಳಿದರು
ಒಳ್ಳೆಯ ಮೀನು ಮಕ್ಕಳೆ ಸೊರಲ ಒಡ್ಡಿನದು
ಬೇಗನೆ ಪಲ್ಯ ಮಾಡಿ ಬಡಿಸುತ್ತೇನೆಂದಳು ಮಾಡೆದಿ
ಅದಕೆಂದರು ಮಕ್ಕಳು
ಇದೊಂದು ಮೀನಿನ ಪಲ್ಯ ನಮಗೆ ಬೇಡಮ್ಮಾ
ನಮಗೆ ಗಂಜಿ ಬಡಿಸಿ ಎಂದರು
ಮೀನಿನ ಪಾತ್ರವನ್ನು ಅಲ್ಲೇ ಬಿಟ್ಟಳು ಮಾಡೆದಿ
ಮಕ್ಕಳಿಗೆ ಅನ್ನ ಬಡಿಸಿದಳು
ಬೇಗನೆ ಉಂಡು ಮಕ್ಕಳು
ಬರಹದ ಸಾಲೆಗೆ ಹೋದರು
ಮಕ್ಕಳು ಹೋದ ಬೆನ್ನಿಗೇ
ಪಾತ್ರದಲ್ಲಿದ್ದ ಮೀನನ್ನು ತುಂಡು ಮಾಡಿ ತೊಳೆದಳು ಮಾಡೆದಿ
ಎಷ್ಟು ತೊಳೆದರೂ ನೆತ್ತರು ಜಿನುಗುತ್ತಿತ್ತು
ಹೇಗೂ ತೊಳೆದಳು ಮಾಡೆದಿ
ತೆಂಗಿನಕಾಯಿ ಮೆಣಸು ಕಡೆಯುವ ಕಲ್ಲಿಗೆ ಹಾಕಿ

ಕಡೆದಳು ಮಾಡೆದಿ
ಆ ವೇಳೆಯಲ್ಲಿ ಹೊಟ್ಟೆಯಲ್ಲಿ ಹೆರಿಗೆಯ ಬೇನೆ
ತೊಡಗಿತು ಮಾಡೆದಿಗೆ
ಪಲ್ಯದ ಪಾತ್ರವನ್ನು ಒಲೆಯಲ್ಲಿಟ್ಟಳು ಮಾಡೆದಿ
ಅರೆದ ಕಾರ ಸೇರಿಸಿದಳು
ಕಾರ ಕುದಿಯುವಾಗ ಮೀನಿನ ತುಂಡುಗಳನ್ನು ಹಾಕಿದಳು
ಮೇಲಿಂದ ಮೇಲೆ ಬಂತು ಹೆರಿಗೆಯ ಬೇನೆ
ನಿಲ್ಲಲು ಆಗುವುದಿಲ್ಲ ಮಾಡೆದಿಗೆ
ಕೂರಲು ಕೂಡುವುದಿಲ್ಲ
ಮೈಯೆಳೆದುಕೊಂಡು ಒಳಕೋಣೆಗೆ ಹೋದಳು
ಮಣ್ಣ ನೆಲದಲ್ಲಿ ಮಲಗಿ ನರಳಿದಳು
ಮಡದಿ ನರಳುವುದು ಕೇಳಿತು ಮಾಡರಿಗೆ
ಅಟ್ಟದ ತೋಳಿಗೆ ನೇಲೆ ಹಗ್ಗ ಹಾಕಿದರು
ಓಡಿಹೋಗಿ ಸೂಲಗಿತ್ತಿಯನ್ನು ಕರಕೊಂಡು ಬಂದರು
ಬೆನ್ನು ಪೂಸಿದಳು ಸೂಲಗಿತ್ತಿ ಬಸಿರು ಈಸಿದಳು
ಮಗು ಜನನಕ್ಕೆ ಬರಲಿಲ್ಲ
ಮೇಲೆ ಮೇಲೆ ಬರುವ ಬೇನೆಯಲ್ಲಿ ನರಳಿದಳು ಮಾಡೆದಿ
ನರಳಬೇಡಿ ಅಕ್ಕನವರೆ ಮುಲುಗಬೇಡಿ
ಚೆಂದದಲ್ಲಿ ಮಗುವನ್ನು ಹೆತ್ತುಕೊಳ್ಳಿ
ಎಂದಳು ಸೂಲಗಿತ್ತಿ
ಆಗೆಂದಳು ಮಾಡೆದಿ
ಓ ಸೂಲಗಿತ್ತಿ ಕೇಳಿದೆಯ
ನಾನು ಒಲೆಯಲ್ಲಿಟ್ಟಿದ್ದೇನೆ ಮೀನಿನ ಪಲ್ಯ
ಅದರ ನೆನಪಾಗಿತ್ತದೆ ನನಗೆಂದಳು
ತಟ್ಟನೆ ಎದ್ದಳು ಸೂಲಗಿತ್ತಿ ಅಡುಗೆ ಮನೆಗೆ ಹೋದಳು
ಒಲೆಯ ಪಾತ್ರದಿಂದ ಒಂದು ತುಂಡು ಮೀನು ತಂದಳು

ಮಾಡೆದಿಯ ಬಾಯಿಗೆ ಇಕ್ಕಿದಳು
ಆಗಲೆ ತೋರಿದ ಹೆರಿಗೆಯ ಬೇನೆಗೆ
ಹೆಣ್ಣು ಮಗುವನ್ನು ಹಡೆದಳು ಮಾಡೆದಿ
ಹುಟ್ಟಿದ ಮಗುವಿನ ಹೊಕ್ಕುಳು ಕತ್ತರಿಸಿ
ಹೊಂಬಾಳೆಯಲ್ಲಿ ಮಲಗಿಸಿದರು
ಚೆಂದದಲ್ಲಿ ಸಾಕಿದರು
ಮಗುವಿಗೆ ಬಾಲೆ ಮಾಡೆದಿ ಎಂದು ಹೆಸರಿಟ್ಟರು
ಚಿಕ್ಕವಳು ಹೋಗಿ ದೊಡ್ಡವಳಾದಳು ಮಗಳು
ಸೊರಲ ಮಾಡರ ಸೋದರಳಿಯನಿಗೆ
ಹೆಣ್ಣು ನೋಡಬೇಕು ನೆಂಟಸ್ತಿಕೆ ಹಿಡಿಯಬೇಕೆಂದರು
ಮಾವನ ಮಗಳು ಬಾಲೆ ಮಾಡೆದಿಯನ್ನು
ನೆಂಟಸ್ತಿಕೆ ಮಾತನಾಡಿಸಿದರು ಹೆಣ್ಣು ನಿಶ್ಚಯ ಮಾಡಿದರು
ಈ ಗುರುವಾರ ಅಲ್ಲ ಮೇಲಿನ ಗುರುವಾರ
ಮದುವೆಗೆ ದಿನವಿಟ್ಟರು
ಆ ಕಾಲದಲ್ಲಿ ಸೊರಲ ಹೊಳೆಗೆ
ಅಣೆಕಟ್ಟು ಕಟ್ಟುತ್ತಾ ಇದ್ದರು
ಒಂದು ತಿಂಗಳಾದರೂ ಒಡ್ಡು ನಿಲ್ಲಲಿಲ್ಲ
ಎಷ್ಟು ಮಣ್ಣು ತುಂಬಿದರೂ ಒಡ್ಡು ಬಿರಿಯುವುದಲ್ಲದೆ
ನಿಲ್ಲಲು ಕೇಳುವುದಿಲ್ಲ ಒಮ್ಮೆ ನಿಲ್ಲುತ್ತದೆ ಒಮ್ಮೆ ಕುಸಿಯುತ್ತದೆ
ಹಾಗೆಯೆ ಒಡ್ಡು ಕಟ್ಟುವುದರಲ್ಲೆ ಇದ್ದರು ಹಲವು ಮಂದಿ
ಸೊರಲಗುತ್ತಿನಿಂದ ಹೆಣ್ಣ ದಿಬ್ಬಣ
ಬಾರೀ ಸಡಗರದಿಂದ
ಮದುಮಗನ ಮನೆಗೆ ಹೊರಟಿತು
ಸಿಂಗರಿಸಿದ ಪಲ್ಲಕ್ಕಿಯಲ್ಲಿ ಕುಳಿತಿದ್ದಾಳೆ ಬಾಲೆ ಮಾಡೆದಿ ಮದುಮಗಳು
ಸೊರಲ ಅಣೆಕಟ್ಟು ದಾಟಿಕೊಂಡು ಹೋದರು
ಚಪ್ಪರ ಹೊಕ್ಕರು ಬಂದ ಬಿದ್ದಿನರನ್ನು ಮನ್ನಿಸಿದರು

ಊಟ ಮೊದಲೋ ಧಾರೆ ಮೊದಲೋ ಎಂದು ಕೇಳಿದರು
ಊಟ ಮೊದಲು ಧಾರೆ ಮತ್ತೆಂದರು
ಊಟಕ್ಕೆ ಕುಳಿತರು
ಮುತ್ತು ಬಣ್ಣದ ಅನ್ನ ಕಾಚಿ ಬಣ್ಣದ ಪಲ್ಯ
ಮಜ್ಜಿಗೆ ಸೇರಿಸಿ ಐನೂರು ಬಗೆ
ಹುಳಿ ಸೇರಿಸಿ ಮುನ್ನೂರು ಬಗೆ
ಹೆಸರು ಪಾಯಸ
ಬಿದಿರ ಮೊಳಕೆ ಕಾಮಟೆ ಲಿಂಬೆಯ
ಉಪ್ಪಿನಕಾಯಿ ಬಡಿಸಿದರು
ಊಟ ಉಪಚಾರವಾಯಿತು
ಬೆಳ್ಳಿ ಮೂಡಿ ಬೆಳಕು ಹರಿಯುವಾಗ
ಬೊಳೆರಿ ಮಾಣಿಗ ಹಕ್ಕಿ ಸ್ವರ ಹೊರಡಿಸುವಾಗ
ಗಂಡಿಗೂ ಹೆಣ್ಣಿಗೂ ಕೈಮುಟ್ಟಿ ಕೈ ದಾರೆ
ಮೆಯ್ ಮುಟ್ಟಿ ಸೇಸೆ ನಡೆಯಿತು
ಧಾರೆಯಾಗಿ ಹೆಣ್ಣನ್ನು ಒಪ್ಪಿಸಿಕೊಟ್ಟರು
ದಿಬ್ಬಣ ಹಿಂತಿರುಗಿತು
ಮದುಮಗಳ ಪಲ್ಲಕ್ಕಿ ಸೊರಲ ಒಡ್ಡಿನ ಮೇಲಿಂದ ಹೋಗುವಾಗ
ಒಡ್ಡು ಕಡಿದುಹೋಯಿತು
ಮಣ್ಣು ಜರಿದು ನೀರು ನುಗ್ಗಿತು
ಆ ಕರೆಯಲ್ಲಿದ್ದವರು ಆ ಕರೆಯಲ್ಲಾದರು
ಈ ಕರೆಯಲ್ಲಿದ್ದವರು ಈ ಕರೆಯಲ್ಲಾದರು
ಮದುಮಗಳ ಪಲ್ಲಕ್ಕಿ ಸೊರಲ ಹೊಳೆಯಾಳದ ಹೊಂಡಕ್ಕೆ ಬಿತ್ತು
ಹೆಣ್ಣುಗಳ ಅಳಲು ಗಂಡುಗಳ ಬೊಬ್ಬೆ ಎದ್ದಿತು
ಮದುಮಗಳ ಪಲ್ಲಕ್ಕಿ ಆಳದ ಹೊಂಡದಲ್ಲಿ
ಮೂರು ಸಲ ಮುಳುಗಿತು ಮೂರು ಸಲ ತೇಲಿತು
ಅದೊಂದು ಸುದ್ದಿ ಮುಟ್ಟಿತು ಸೊರಲ ಗುತ್ತಿಗೆ

ಓಡುತ್ತಾ ಬಿದ್ದೇಳುತ್ತಾ ಬರುತ್ತಾನೆ ಮದುಮಗ
ಹೊಂಡಕ್ಕೆ ಹಾರಲು ಹೋಗುವಾಗ ತಡೆದರು
ಸೊರಲ ಗುಂಡಿಗೆ ಇಳಿಯಲು ಯಾರಿಗೂ ಧೈರ್ಯ ಬರಲಿಲ್ಲ
ಬಾಲು ಮಾಡೆದಿಯ ತಂದೆ ತಾಯಿ
ಏಳು ಮಂದಿ ಅಣ್ಣಂದಿರು
ಅತ್ತು ಕರೆದು ಗೋಳಾಡಿದರು
ಪ್ರಾಣ ಹೋಗುವ ಸಮಯದಲ್ಲಿ ಹೇಳುತ್ತಾಳೆ ಬಾಲೆ ಮಾಡೆದಿ
ಓ ಅಮ್ಮಾ ಕೇಳಿದಿರಾ
ಅಂದಿನ ದಿನ ನೀವು ಸೊರಲ ಒಡ್ಡಿನ ಮೀನುಗಳನ್ನು ಕಂಡು
ಯಾವ ಹರಕೆ ಹೇಳಿಕೊಂಡಿದ್ದಿರಿ?
ಇಂದಿಗಾಗುವಾಗ ಸೊರಲ ಹೊಂಡದ ತೆರಪು ಮುಚ್ಚುವ
ಕಾಲ ಬಂತು ಅಮ್ಮಾ
ನಾನು ಸೊರಲ ತೆರಪಿಗೆ ಆಹುತಿಯಾಗುತ್ತೇನೆ
ಇನ್ನಾದರೂ ಸೊರಲ ಒಡ್ಡು ಕಡಿಯದು ಅಮ್ಮಾ
ನಿಮ್ಮ ಬಸುರಿಂದ ಬಂದ ದೋಷಕ್ಕೆ
ಸಾಕಿ ಸಲಹಿದ ದೋಷಕ್ಕೆ
ಒಂದು ಹಾರೆ ಮಣ್ಣು ನನ್ನ ತಲೆಗೆ ಹಾಕಿರಿ ಅಮ್ಮಾ ಎಂದಳು
ಹಾಗೇ ತಂದೆಯನ್ನು ಕರೆದೆಂದಳು ಬಾಲೆ ಮಾಡೆದಿ
ಓ ಅಪ್ಪಾ ಕೇಳಿದಿರಾ
ಪಾಪಕ್ಕೆ ಹುಟ್ಟಿಸಿದಿರಿ ದೋಷಕ್ಕೆ ಸಾಕಿದಿರಿ
ಒಂದು ಹಾರೆ ಮಣ್ಣು ನನ್ನ ತಲೆಗೆ ಹಾಕಿರೆಂದಳು
ಅಣ್ಣಂದಿರಲ್ಲಿ ಹೇಳುತ್ತಾಳೆ ಬಾಲೆ ಮಾಡೆದಿ
ಓ ಅಣ್ಣಂದಿರೆ ಕೇಳಿದಿರಾ
ಸೊರಲ ಒಡ್ಡಿಗೆ ಸೇರಿ ಹೋಗುತ್ತೇನೆ ನಾನು
ನನಗಿಂತ ಮೊದಲು ಹುಟ್ಟಿ ಬಳೆದಿರಿ
ನಿಮ್ಮ ಬೆನ್ನಲ್ಲಿ ಹುಟ್ಟಿದ ದೋಷಕ್ಕೆ

ಏಳು ಹಾರೆ ಮಣ್ಣು ನನ್ನ ತಲೆಗೆ ಹಾಕಿರೆಂದಳು
ತನ್ನ ಮದುಮಗನನ್ನು ಕರೆದೆಂದಳು ಬಾಲೆ ಮಾಡೆದಿ
ಓ ಮದುಮಗ ಕೇಳಿದಿರಾ
ಕೈ ಹಿಡಿದ ದೋಷಕ್ಕೆ ಮೆಯ್ ಮುಟ್ಟಲಿಲ್ಲ
ಕೈ ಹಿಡಿದ ದೋಷಕ್ಕೆ ಒಂದು ಹಾರೆ ಮಣ್ಣು
ನನ್ನ ತಲೆಗೆ ಹಾಕಿರೆಂದಳು
ಆಗೆಲ್ಲರೂ ಅತ್ತು ಗೋಳಾಡಿದರು
ಒಂದು ಹಾರೆ ಮಣ್ಣು ಎತ್ತಿದಳು ತಾಯಿ
ಮಗಳ ತಲೆಗೆ ಇಕ್ಕಿದಳು
ಒಂದು ಹಾರೆ ಮಣ್ಣು ಎತ್ತಿದರು ಮಾಡರು
ಮಗಳ ತಲೆಗೆ ಇಕ್ಕಿದರು
ಏಳು ಹಾರೆ ಮಣ್ಣು ಎತ್ತಿದರು ಅಣ್ಣಂದಿರು
ತಂಗಿಯ ತಲೆಗೆ ಇಕ್ಕಿದರು
ಸೊರಲ ಹೊಂಡದ ತೆರಪು ತುಂಬುತ್ತ ಬಂತು
ಬಾಲೆ ಮಾಡೆದಿಯ ಕೊರಳವರೆಗೆ ಮಣ್ಣು ತುಂಬಿತು
ಓ ಮದುಮಗ ಒಂದು ಹಾರೆ ಮಣ್ಣು
ನನ್ನ ತಲೆಗೆ ಇಕ್ಕಿರಿ ಬನ್ನಿರೆಂದಳು ಮಾಡೆದಿ
ಒಂದು ಹಾರೆ ಮಣ್ಣು ತೆಗೆದ ಮದುಮಗ
ತನ್ನ ಮದುಮಗಳ ತಲೆಗೆ ಇಕ್ಕಿದ
ಅಷ್ಟಾಗುವಾಗ ಸೊರಲ ತೆರಪಿಗೆ ಅಡಕವಾದಳು
ಬಾಲೆ ಮಾಡೆದಿ
ಹರಕೆಯೂ ಸಂದಾಯವಾಯಿತು
ಸೊರಲ ಒಡ್ಡೂ ನಿಂತಿತು

ಪೆರಿಂಜಗುತ್ತು ದೇವು ಪೂಂಜ

ಪೆರಿಂಜಗುತ್ತಿನಲ್ಲಿದ್ದಾನಂತೆ ಬಾಲಕ ದೇವು ಪೂಂಜ
ವೇಣೂರಲ್ಲಿ ಆಳಿಕೊಂಡಿದ್ದಾರೆ ಅಜಿಲರಸು
ನಂದಾವರ ಬಂಗರ ಬಲು ದಂಡು ಬರುವ ಸುದ್ದಿ ಬಂತು
ವೇಣೂರ ಚೆಂಡತಿಮಾರಿನಲ್ಲಿ ಕೂಡದಿರುವ ಸಭೆ ಕೂಡುತ್ತದೆ
ಚದರುವ ಸಭೆ ಚದರುತ್ತದೆ
ಭಾವ ದೇರಮು ಕೊಟ್ಟಾರಿ ಕೂಟದ ಕಳಕ್ಕೆ ಬಂದ
ಪೆರಿಂಜ ಗುತ್ತಿನ ಬಂಟ ಬರುತ್ತಿದ್ದಾನೆ
ಕಳದಲ್ಲಿ ಅವಕಾಶ ಮಾಡಿಕೊಳ್ಳಿ ಎಂದರು ಸಭೆಯಲ್ಲಿ
ಕೂಟದ ಕಳದಲ್ಲಿ ಕುಳಿತ ದೇರಮು ಕೊಟ್ಟಾರಿ
ಏನು ದೇಲಮು ಕೊಟ್ಟಾರಿಯೆ ಕೇಳಿದೆಯ
ನಂದಾವರ ಬಂಗರ ಬಲುದಂಡು ಎದ್ದಿದೆ
ದಂಡಿಗೆ ದಳವಾಯಿಯಾಗಿ ನಿಲ್ಲುವೆಯಾ
ಗದ್ದಿಗೆಯಲ್ಲಿ ಗಡಿಯಿಟ್ಟು ಹೋಗುವೆಯಾ ಎಂದರು
ಬಂಗರ ಬಲುದಂಡಿಗೆ (ಎದುರಾಗಿ) ನಿಲ್ಲಲು
ನನ್ನಿಂದಂತೂ ಸಾಧ್ಯವಿಲ್ಲ ಎಂದ
ನಾನು ಗದ್ದಿಗೆಯಲ್ಲಿ ಗಡಿಯಿಟ್ಟು ಹೋಗುವೆನೆಂದ ದೇಲಮು
ಅಲ್ಲಿಂದ ಹಾಗೇ ಹೊರಟು ಪೆರಿಂಜ ಗುತ್ತಿಗೆ ಬಂದ
ಏನು ಹೇಳಿ ಬಂದೆ ದೇಲಮು ಎಂದು ಕೇಳಿದರು ತಂಕರು ಹೆಂಗಸು
ಹಾಗಿದ್ದರೆ ನಾನು ವೇಣೂರಿನ ಚಂಡತಿಮಾರಿನಲ್ಲಿ
ದಂಡಿಗೆ ನಿಲ್ಲಲು ಸಾಧ್ಯವಿಲ್ಲೆಂದು ಹೇಳಿ ಬಂದೆ ಎಂದ ದೇಲಮು

ದೇವುಪೂಂಜ ಓದು ಬರಹದ ಶಾಲೆಗೆ ಹೋಗಿದ್ದಾನೆ

ತಾಯಿ ವ್ಯಥೆ ಯೋಚನೆಯಲ್ಲಿ ಏಲು ಕೋಣೆಯೊಳಗಿನ ಯಮಗುಂಡದಲ್ಲಿ
ಹಿರಿಯ ಹಾಸುಗೆ ತೊರೆದು ಮಣ್ಣ ಹಾಸು ಹಿಡಿದು
ಕಣ್ಣಲ್ಲಿ ಕಂಬನಿಗರೆಯುತ್ತಾರೆ
ಶಾಲೆಗೆ ವಿದ್ಯೆ ಬುದ್ಧಿಗೆ ಹೋದವನು
ಮುದ್ದು ಕರುವಿಗೆ ಚಿಗುರು ಹುಲ್ಲು ಕಿತ್ತುಕೊಂಡು ಬರುತ್ತಾನೆ
ಅಮ್ಮ ಅಮ್ಮಾ ಎಂದು ಕರೆದ
ಒಮ್ಮೆ ಕರೆಯುವಾಗ ಇಮ್ಮೆ ಓಗೊಟ್ಟು ಬರುವ ತಾಯಿ
ಎಲ್ಲಿಗೆ ಹೋದರೆಂದು ಕೇಳಿದ
ಏಳು ಕೋಣೆಯೊಳಗಿನ ಯಮಗುಂಡ ಹೊಕ್ಕು ಹುಡುಕಿದ
ಏನಮ್ಮ ನಿನಗೆ ಈ ತರದ ಕಷ್ಟ ಬಂತು?
ಬಂಟನ ಮಗ ಬಾರಗ (ಅಲ್ಲದ್ದನ್ನು) ಆಡಿದರೆ
(ಅವನ) ಬಾರಗತನ ಕಳೆಯುತ್ತೇನೆ
ಸೆಟ್ಟಿಯ ಮಗ ಸೇನವನೆಂದರೆ
ಅವನ ಸೇನವತನವನ್ನು ಕಳೆಯುತ್ತೇನೆ
ಕಾರ್ಯವೇನು ಹೇಳಿ ಎಂದ
ಹಾಗಾದರೆ ಮಗ ವೇಣೂರಲ್ಲಿ ದೇಲಮು ಕೊಟ್ಟಾರಿ ಹೋಗಿ
ನಂದಾವರದ ಬಂಗರ ಬಲುದಂಡಿಗೆ (ಎದುರಾಗಿ)
ದಳವಾಯಿಯಾಗಿ ನಿಲ್ಲಲಾಗದೆ
ಗದ್ದಿಗೆಯಲ್ಲಿ ಗಡಿಯಿಟ್ಟು ಬಂದ
ಹಾಗೆ ವ್ಯಥೆ ಯೋಚನೆಯಲ್ಲಿ ನಾನಿದ್ದೇನೆ ಎಂದರು
ನೀವು ಇಟ್ಟ ಗಂಜಿ ಉಣ್ಣಿರಿ ಅಮ್ಮಾ
ಯಾವ ಆಲೋಚನೆಯಾದರೂ ನಾನು ಮಾಡುತ್ತೇನೆಂದ
ಕಡೆ ಕಾರ್ಲದಲ್ಲಿದ್ದಾರೆ ಮಾವ ಕಾಂತಣ ಕರುವಾಳರು
ಮಾವನ ಬಳಿಗೆ ಹೋದ ದೇವು ಪೂಂಜ
ಮಾವಯ್ಯ ನಂದಾವರ ಬಂಗರ ದಂಡೆದ್ದಿದೆ
ಕಾಳಗದ ವಿದ್ಯೆ ಬುದ್ಧಿ ಕಲಿಸಬೇಕೆಂದ

ಸರ್ವ ಸಾಧಕ ವಿದ್ಯೆ ಬುದ್ಧಿ ಕಲಿಸಿದರು ಕಾಂತಣ ಕರುವಾಳರು
ದಂಡಿಗೆ ಸಹಾಯ ಕೊಡಬೇಕೆಂದ
ನಾನು ಮುದುಕ ನಾನೇನು ಸಹಾಯ ನೀಡಬಹುದು?
ನನಗೆ ತಿಳಿದ ವಿದ್ಯೆ ಹೇಳಿಕೊಟ್ಟೆ
ಸಹಾಯಕ್ಕೆ ಕಾಂತಣ ಅತಿಕಾರಿ ಜುಮಾದಿಯನ್ನು ಕೊಡುವೆನೆಂದರು
ತಕ್ಕೆಯಲ್ಲಿಟ್ಟು ಕಾಯುವ ತಾಯಿಯಂತಹ ದೈವವೆಂದರು
ಆದೀತೆಂದ ಪೆರಿಂಜ ಗುತ್ತಿಗೆ ಬಂದ
ಭೂತ ಬಂದ ಸಂಗತಿಯನ್ನು ತಾಯಿಯೊಡನೆ ಹೇಳಿದ
ಆಗೆಂದರು ತಾಯಿ ಗಟ್ಟದ ಮೇಲೆ ಗರುಡ ರಾಜ್ಯದಲ್ಲಿ
ಇದ್ದಾನೆ ಜಿಂಗ್ರೋಡಿ ಬರಣಾಚಾರಿ
ಹೆಣಿಗೆಯ ಕಿರುಬುಟ್ಟಿಯಲ್ಲಿ ನಿನಗೆ (ತಿನಿಸು) ಕೊಡುವಾಗ
ದಡ್ಡೋಲಿಯ ಕಿರುಬುಟ್ಟಿಯಲ್ಲಿ ಅವನಿಗೆ ತಿನ್ನಲು ಕೊಟ್ಟಿದ್ದೇನೆ
ಬಲದ ಮೊಲೆ ನಿನಗೆ ಕೊಡುವಾಗ
ಎಡದ ಮೊಲೆ ಅವನಿಗೆ ಕೊಟ್ಟಿದ್ದೇನೆ
ನೀನು ಹೋಗಿ ಗುರುತು ಹೇಳೆಂದರು
ಹಾಗೆಯೆ ಹೋದ ದೇವು ಪೂಂಜ
ಜಿಂಗ್ರೋಡಿ ಬರಣಾಚಾರಿಯನ್ನು ನೋಡಿದ
ಗುರುತು ಹೇಳಿದ
ಬಹಳ ಸಂತೋಷದಿಂದ ಮನ್ನಿಸಿದ ಆಚಾರಿ
ಒಂದು ಕಾಸುವಿಕೆಯಲ್ಲಿ ಒಂದು ಬಡಿತದಲ್ಲಿ
ಉಕ್ಕಿನ ಪಾಂಡಿ ಬಾಳು ಮಾಡಿಕೊಟ್ಟ
ನಿನಗೆ ಜಯವಾಗಲೆಂದು ಹೇಳಿದ
ಅಲ್ಲಿಂದ ಹಾಗೆ ಬಂದ ದೇವುಪೂಂಜ
ತಾಯಿಗೆ ಪಾಂಡಿಬಾಳು ತೋರಿಸಿದ
ಪೆರಿಂಜ ಗುತ್ತಿಗೆ ಬಂಗರ ಕಡೆಯ
ಮಂದೆಯನ್ನು ಹಿಡಿತರಿಸಿದ

ಹೆಂಗುಸರ ಕೈಗೆ ಹಿಡಿಸೂಡಿ ಕೊಡಿಸಿದ
ಗಂಡುಸರ ಕೈಗೆ ನೀರು ಕೊಡಿಸಿದ
ಅಂಗಳಕ್ಕೆ ಸಗಣಿ ಸಾರಿಸಿಸಿದ
ಮೂರು ಬಳ್ಳ ಬತ್ತ ಅಳೆದರು
ಸಣ್ಣ ತಾಳೆ ಮರದ ಹೆಡೆಯ ಬಡಿಗೆಯಿಂದ
ಬೆನ್ನಿಗೆ ನಾಲ್ಕು ಬಾರಿಸಿದರು
ನಂದಾವರದ ಬಂಗರ ಬಳಿಗೆ ಅಳುತ್ತಾ ಹೋದವು
ದೂರೆಲ್ಲಾ ಹೇಳಿದರು
ಧಾರೆ ತೆಗೆಯದ ಕೊತ್ತಳಿಂಗೆಯಲ್ಲಿ
ಕೊಟ್ಟರು ಎಂದರು
ಬಂಗರಿಗೆ ವ್ಯಥೆ ಯೋಚನೆಗಿಟ್ಟುಕೊಂಡಿತು
ಇಷ್ಟು ಚಿಕ್ಕ ಇಕ್ಕೆಯಲ್ಲಿ ಇಷ್ಟು ದೊಡ್ಡ ಪಿಳ್ಳೆಯುಂಟೆಂದು ತಿಳಿಯಲಿಲ್ಲ
ಇನ್ನು ಯಾವ ಉಪಾಯದಲ್ಲಿ ಸೋಲಿಸಲಿ ಎಂದರು
ಗುತ್ತಿನ ಬಾರಗರಿಗೆ ಓಲೆ ಕಳುಹಿಸಿದರು
ಕೂಟ ಕಳ ಮಾಡಿಸಿದರು
ವೇಣೂರ ಅಜಿಲರು ಈ ಸುದ್ದಿ ಕೇಳಿದರು
ಕೂಟಕಳ ಮಾಡಿಸಿದರು
ಮರುದಿವಸ ಎಲ್ಲರೂ ಕೂಡಿದರು
ಗುತ್ತು ಬಾರಗರು ಕೂಡಿದ ಬಳಿಕ
ಪೆರಿಂಜ ಗುತ್ತಿನಿಂದ ದೇವು ಪೂಂಜ ಹೊರಟ
ಸನ್ನೆಯ ಕೊಂಬು ಶಬ್ದದ ಬೆಡಿಯೊಡನೆ
ದಂಡು ತಕ್ಕೊಂಡು ಹೊರಟ
ದೂರದಿಂದ ನೋಡಿದರು ಪೆರಿಂಜಗುತ್ತಿನ ಬಂಟ ಬರುತ್ತಾನೆ
ಕಳದಲ್ಲಿ ಅವಕಾಶ ಮಾಡಿ ಎಂದರು
ಇಷ್ಟು ಚಿಕ್ಕ ಇಕ್ಕೆಯಲ್ಲಿ ಇಷ್ಟು ದೊಡ್ಡ ಪಿಳ್ಳೆ ಉಂಟೇ
ಎಂದು ಪ್ರತಿಯೊಬ್ಬರೂ ಬೆಕ್ಕಸಗೊಂಡರು

ಕಳ ಬಿಟ್ಟುಕೊಟ್ಟರು ದೇವುಪೂಂಜ ಕುಳಿತುಕೊಂಡ
ಗುತ್ತು ಬಾರಗರು ಕೇಳಿದರು
ಏನು ದೇವುಪೂಂಜ ನೀನು ದಂಡಿಗೆ ದಳವಾಯಿಯಾಗಿ ನಿಲ್ಲುವೆಯ
ಜಾರಿ ಹೋಗುವೆಯ
ಎರಡರಲ್ಲಿ ಒಂದನ್ನು ಹೇಳಬೇಕೆಂದರು
ನಾನು ಜಾರಿ ಹೋಗಲು ಬಂದವನಲ್ಲ
ಎದುರಿಸಲು ಬಂದವನೆಂದು ಹೇಳಿದ
ಕಾಳಗಕ್ಕೆ ದಿನವಿಟ್ಟರು
ಮರುದಿನ ದಂಡಿನ ದುಸ್ತು ತೊಟ್ಟುಕೊಂಡ
ದಂಡು ತಕ್ಕೊಂಡು ಹೋದ ದೇವುಪೂಂಜ
ಹೋಗುವಾಗ ಜುಮಾದಿ ದೈವದೊಡನೆ ಬೇಡಿಕೊಂಡ
ನನಗೆ ಬೆಂಗಾವಲಾಗಿ ನನಗಿದರಲ್ಲಿ ಗೆಲವು ಕೊಟ್ಟರೆ
ಪೆರಿಂಜಗುತ್ತಿನಲ್ಲಿ ನಿನಗೆ ನೇಮ ನೆರಿ ಕೊಡುವೆ
ಎಂದು ಜುಮಾದಿಗೆ ಹರಕೆ ಹೇಳಿದ
ಜನಮಂದೆ ಸೇರಿಸಿಕೊಂಡು ವೇಣೂರ ಚಂಡತಿಮಾರಿಗೆ
ದಂಡು ಸಾಧಿಸಲು ಹೋದ
ಆಗ ಎದುರಿಗೆ ಬಂದ ದುಗ್ಗಣ ಕೊಂಡೆ
ಪೂಂಜ ಪೂಂಜನೆಂದರೆ ನೀನೇಯೇನೋ
ಕೋಳಿಯಂಕದಲ್ಲಿ ನಾಲ್ಕರ ಲೆಕ್ಕದ ಹುಂಜನೇನೋ
ಎಂದು ಕೇಳಿದ ದುಗ್ಗಣ ಕೊಂಡೆ
ಕೊಂಡೆ ಕೊಂಡೆಯೆಂದರೆ ನೀನೇಯೇನೋ
ಬಳ್ಳದಲ್ಲಿ ಆರಕ್ಕೊಂದು ಕೊಂಡೆಯೇನೋ
ಎಂದು ಕೇಳಿದ ಪೂಂಜ
ನಿನ್ನಂಥ ಹುಡುಗರು ನನ್ನ ಮನೆಯಲ್ಲಿ ಸೆಗಣಿ ಹೆಕ್ಕುತ್ತಾರೆ
ನಿನ್ನಂಥ ಮುದಿ ಮುಜುಡರು ನನ್ನ ಮನೆಯಲ್ಲಿ
ತೆಂಗಿನ ಸಿಪ್ಪೆ ಗುದ್ದುತ್ತಾ ಹಗ್ಗ ಹುರಿ ಮಾಡುತ್ತಾರೆ

ನಿನ್ನ ಮೋರೆಯಲ್ಲಿ ಮೀಸೆಯ ಕುರುಹು ಹುಟ್ಟಿಲ್ಲ ಕೇಳಿದೆಯಾ
ಮೊಟ್ಟೆಯಲ್ಲಿ ಕೆಲೆಯಬೇಡಲಾ ಸೀಯಾಳದಲ್ಲಿ ತುಳುಕಬೇಡ
ಎಂದು ದುಗ್ಗಣಕೊಂಡೆ ಕೆಂಗಿಡುಗನಂತೆ ಹಾಯ್ದು
ದೇವು ಪೂಂಜನ ತಲೆಯನ್ನು ತನ್ನ ತೋಳಡಿಯಲ್ಲಿ ಅಮುಕಿದ
ಬಿಡಿಸಲು ಆಗದ ಕಾಲದಲ್ಲಿ
ಮಾವ ಸಹಾಯಕ್ಕೆ ಕೊಟ್ಟ ದೈವ ಜುಮಾದಿಯ
ನೆನವರಿಕೆ ಮಾಡಿದ
ನೆನವರಿಕೆ ಮಾಡಿದಲ್ಲಿಗೆ ಸಾರತಿಯಾದ ದೈವ
ಕೊಂಡೆಯ ಹಿಡಿತ ಸಡಿಲಾಯಿತು
ಹಲಸಿನ ಬೀಜ ಹಾರಿದಂತೆ ಹಾರಿದ ದೇವುಪೂಂಜ
ಆನೆಯ ಒತ್ತು ಒತ್ತಿದ ಪೂಂಜ
ಕುದುರೆಯ ನೆಗೆತ ನೆಗೆದ
ಮೊಲದ ತಲೆಕೆಳಗೆ ಹಾರು ಹಾರಿದ
ಹೆಬ್ಬುಲಿ ತುಡುಕಿದಂತೆ ತುಡುಕಿದ
ಜುಟ್ಟು ಹಿಡಿದು ತಲೆಯ ಚೆಂಡು ಕೊಚ್ಚಿದ
ಹಾಗೆಯೇ ಮುನ್ನಡೆದ ಪೂಂಜ
ಬಂಗರ ಬಲು ದಂಡನ್ನು ಸಂಹಾರ ಮಾಡಿದ
ದಂಡು ಸಾಧಿಸಿ ಬಂದ

ಆಕಡೆ ವ್ಯಥೆ ಯೋಚನೆಯಲ್ಲಿ ಬಿದ್ದರು ಬಂಗರು
ಮರುದಿನ ಬಂಟವಾಳ ಪೇಟೆಯ ಬೀದಿಯಲ್ಲಿದ್ದ
ಸೂಳೆ ಸಿದ್ದುವಿನ ಬಳಿಗೆ ಹೋದರು
ಯಾಕೆ ಇಷ್ಟು ವ್ಯಥೆ ಮೋರೆ ಬಾಡಿದೆ
ಎಂದು ಕೇಳಿದಳು
ಪೆರಿಂಜೆಗುತ್ತಿನಲ್ಲೊಂದು ಪಿಳ್ಳೆ ಉಂಟಾಗಿದೆ
ನನ್ನನ್ನು ಸೋಲಿಸಿಬಿಟ್ಟ ಹಾಗಿದ್ದರೆ ಇವನನ್ನು
ಯಾವ ಪರಿಯಿಂದಲಾದರೂ ಸೋಲಿಸಬೇಕೆಂದರು

ಆಗಲಿ ಎಂದಳು ಸೂಳೆ ಸಿದ್ದು
ಪೆರಿಂಜೆ ಗುತ್ತಿನಲ್ಲಿ ಜುಮಾದಿಗೆ ನೇಮ ಕೊಡಬೇಕಾಯ್ತು
ನೇಮಕ್ಕೆ ದಿನವಿಟ್ಟರು
ಚಪ್ಪರವೇರಿಸಿದರು ನೇಮದ ಸನ್ನಾಹ ಮಾಡಿದರು
ಬಂಟವಾಳ ಪೇಟೆಗೆ ನೇಮದ ಸನ್ನಾಹಕ್ಕೆ
ಬಂದ ದೇವುಪೂಂಜ
ಏಳುಪ್ಪರಿಗೆಯ ಮೇಲುಮೆಂಚಿನಲ್ಲಿ ಕುಳಿತು
ಪೂಂಜ ಬರುವ ಚಂದ ನೋಡಿದಳು ಸೂಳೆ ಸಿದ್ದು
ಬಂಟವಾಳ ಪೇಟೆಯ ಅಂಗಡಿಗಳಿಗೆ ಬಾಗಿಲು ಹಾಕಿಸಿದಳು
ಕಡೆಯಂಗಡಿಯಲ್ಲಿ ಕೊಡಿ ವ್ಯಾಪಾರ ಸಾಪಾರ ಮಾಡಿಸಿದಳು
ಏಳುಪ್ಪರಿಗೆಯಿಂದ ಬಂದಳು ಕೆಳಗೆ ಬಾಗಿಲಲ್ಲಿ ನಿಂತಳು
ಕಣ್ಣ ಭಾಷೆಯಲ್ಲಿ ಕೈಯ ಸನ್ನೆಯಲ್ಲಿ ಕರೆದಳು
ಕೈಯ ಬಳೆ ಅಲುಗಿದಳು ಸೀರೆ ನೆರಿಗೆ ತೀಡಿದಳು
ಸೆರಗು ಸರಿಸಿ ಮೊಲೆತುದಿ ತೋರಿದಳು
ಅದನ್ನು ಗಣಿಸದೆ ಮುಂದೊತ್ತಿದ ದೇವುಪೂಂಜ
ಓಯೋಯೆ ದೇವುಪೂಂಜರೆ ಕೇಳಿದಿರಾ
ಆಸರಿಗೆ ಸೀಯಾಳ ಕುಡಿಯಿರಿ ಬೇಸರಿಗೆ ವೀಳ್ಯ ಹಾಕಿರಿ
ಇಲ್ಲಿಗೊಮ್ಮೆ ಬಂದು ಹೋಗಿರೆಂದು ಕರೆದಳು
ನಿಮ್ಮ ತಂದೆ ಬಂದರೆ ಎಲೆಯಡಕೆ ಹಾಕದೆ ಹೋಗುತ್ತಿರಲಿಲ್ಲ ಎಂದಳು
ಹೋಗುವಾಗ ಹೋಗುತ್ತೇನೆ ಬರುವಾಗ ಬರುತ್ತೇನೆ
ಎಂದ ಪೂಂಜ
ನಿಮಗೆನ್ನುವ ಮಾತಿದ್ದರೆ ಕಾಡಿನ ಕಾಸರ್ಕನ ಮರಕ್ಕೆನ್ನುತ್ತಿದ್ದರೆ
ಹಣ್ಣೆಲೆಯುದುರುತ್ತಿತ್ತು ಚಿಗುರೆಲೆ ನಗುತ್ತಿತ್ತು
ನನ್ನಂಥ ಹೆಣ್ಣನ್ನು ಕಂಡರೆ
ಹಿಡಮಾಡಿದ ಎತ್ತು ಕೂಡಾ ಬಂದೀತೆಂದಳು
ಅಷ್ಟು ಹೇಳುತ್ತಲೆ ಹಟ ತೋರಿತು ಪೂಂಜನಿಗೆ

ಇಷ್ಟು ಸೊಕ್ಕಿದ ಹೆಣ್ಣನ್ನು ನೋಡಬೇಕೆಂದ
ಏಳುಪ್ಪರಿಗೆಯ ಮೇಲಕ್ಕೆ ಕರೆದೊಯ್ದಳು
ಆಸರಿಗೆ ಸೀಯಾಳವಿತ್ತಳು ಬೇಸರಕ್ಕೆ ಹರಿವಾಣದ ವೀಳ್ಯವಿತ್ತಳು
ಪೂಂಜರೆ ನಾವು ಒಂದಾಟ ಪಾರ್ ಪಗಡೆಯಾಟ
ಚೆನ್ನೆಯಾಟ ಆಡಬೇಕೆಂದಳು
ನೇಮಕ್ಕೆ ಹೋಗಿ ಮುಟ್ಟಬೇಕೆಂದರೆ ಬಿಡದಾದಳು
ಬೆಳ್ಳಿಯ ಮಣೆ ಬಂಗಾರದ ಹರಳು ತಂದಳು
ಶರ್ತವೆಂದರೆ ನಂದಾವರ ಬಂಗರು ಕೊಟ್ಟ
ಏಳಡಿ ಭೂಮಿ ನಿಮಗೆ
ನಾನೂ ನಿಮಗೆ ಕೇಳಿದಿರಾ
ನೀವು ಸೋತರೆ ನಿಮ್ಮ ಕೈಯಲ್ಲಿ ಮೈಯಲ್ಲಿ ಇದ್ದುದು ನನಗೆ
ಚೆನ್ನೆಯಾಟ ಆಡಿದರು
ಗೆಲುವಿನ ಬದಿ ತನಗಿರಿಸಿಕೊಂಡಳು
ಸೋಲಿನ ಬದಿ ಪೂಂಜನಿಗೆ ಇಟ್ಟಳು
ಒಂದಾಟವಾಡಿದ ಪೂಂಜ ಅಂಗೈ ಬಳೆ ಕಳೆದುಕೊಂಡ
ಎರಡಾಟವಾಡಿದ ಮುಂಗೈ ಸರಪಳಿ ಕಳೆದುಕೊಂಡ
ಉಡಿದಾರ ಕೊರಳಸರ ಕೈಯ ಉಂಗುರ
ಪಟ್ಟೆ ಧೋತರ ಪಟ್ಟೆಯಂಗಿ ತಲೆವಸ್ತ್ರವೆಲ್ಲಾ ತೆಗೆದಳು
ಬಂಟ್ವಾಳ ಪೇಟೆಯಿಂದ ಮೂರು ತುಂಡು ಎಲವಸ್ತ್ರ ತರಿಸಿದಳು
ಪೂಂಜನಿಗೆ ಕೊಡಿಸಿದಳು
ಪೆರಿಂಜಗುತ್ತಿನಲ್ಲಿ ಜುಮಾದಿ ದೈವಕ್ಕೆ ನೇಮವಾಗುತ್ತದೆ
ನೀವು ಬರಬೇಕಂತೆ ಆಗಾಗ ಜನ ಬಂತು
ದೈವ ವಸಯ ಆಗಲಿ ನಾನು ಬರುತ್ತೇನೆಂದ ಪೂಂಜ
ವಸಯವಾಗಿ ಜುಮಾದಿ ಜನವನ್ನಟ್ಟಿದ
ಮತ್ತೆ ಮತ್ತೆ ಜನ ಬರುತ್ತದೆ
ಮೂರು ಮುಗ್ಗೆ ಬೈರಾಸ ಕಟ್ಟಿಕೊಂಡು

ಚಪ್ಪರದ ಮರೆಮರೆ ಅವಿತುಕೊಂಡು
ಎಲೆಮರೆಯ ಕಾಯಿಯಾಗಿ ಬಂದ
ಜುಮಾದಿ ನೇಮದಲ್ಲಿದ್ದಾನೆ
ಆಗೆಂದ ಜುಮಾದಿ
ಅಂದಿನ ಕಾಲದಲ್ಲಿ ನಂದಾವರ ಬಂಗರ ಬಲುದಂಡಿಗೆ
ದಳವಾಯಿಯಾಗಿ ನಿಲ್ಲಲು ನಾನು ಬೇಕಾಯಿತು ಪೂಂಜರೆ
ಇಂದಿನ ಕಾಲದಲ್ಲಿ ಬಂಟವಾಲ ಪೇಟೆಯ
ಸೂಳೆ ಸಿದ್ದು ಬೇಕಾಯಿತು ನಿಮಗೆ ನಾನು ಬೇಡವಾಯಿತು
ಅಂದಿನ ಕಾಲದಲ್ಲಿ ಸಹಾಯದ ವೀಳೆಯ ಕೊಟ್ಟೆ
ಇಂದಿನ ಕಾಲದಲ್ಲಿ ಸ್ವರ್ಗದ ವೀಳೆಯ ಹಿಡಿಯಿರೆಂದು
ಆ ಬಳಿಕ ಉಚ್ಚಿಲದ ಕಗ್ಗಲ್ಲ ಕೋಟೆಯಲ್ಲಿ
ದೇವುಪೂಂಜನ ತಲೆಯನ್ನು ಕೊಂಡ ದೈವ
ಗೋಪಾಲಕೃಷ್ಣ ದೇವರ ದೇಗುಲದ ಕಲಶದ ಮೇಲೆ
ಬಿಳಿಯ ಹುಂಜವಾಗಿ ಕೆಲೆದ

ಕಬಿತಗಳು*

ಓ ನಿಮ್ಮ ಸ್ವರ ಓ ಬೇಲೆ
ಓ ಕಾವಿನ ಹೇಟೆ ಓ ಬೇಲೆ
ಓ ನರಳಿದಂತೆ ಕೇಳುತ್ತದಲ್ಲ ಓ ಬೇಲೆ
ಓ ಗದ್ದೆಯ ಹುಣಿಗೆ ಓ ಬೇಲೆ
ಓ ಒಡೆಯನ ಕಿವಿಗೆ ಓ ಬೇಲೆ
ಓ ಸ್ವಾರಸ್ಯವಾಗಲಿ ಓ ಬೇಲೆ

****

ಚೆಂದ ನೋಡಿದಾ ಈಶ್ವರ ಹೂವ ಕೊಯ್ದಾ
ಕೈಯಲ್ಲಿ ಹೂವಾಯಿತು–ಈಶ್ವರಗೆ ಕಣ್ಣಲ್ಲಿ ದುಃಖವಾಯಿತು

****

ಕಸ್ತೂರಿ ಎಂಬ ಗಾಳಿ ಬೀಸಿತು
ಕುಂಕುಮ ಎಂಬ ಮಿಂಚಾಯಿತು
ಜಾಂಬವ ಎಂಬ ಸಿಡಿಲಾಯಿತು
ಬಿಳಿಯ ಕಿಸಗಾರ ಮರ ಮಾಲಿತು
ಪೂವೊರಿ ಹುತ್ತ ಕುಸಿಯಿತು
ಅದೊಂದು ಕೆರೆಯಲ್ಲಿ ಉಂಟಾಯಿತು
ಮುತ್ತು ತಾವರೆಯ ಹೂವಾಯಿತು

****

ಹಾಲು ಕುಡಿಯಿರಿ ಹಾಲು ಕುಡಿಯಿರಿ ಲೋಕಂದ ಈಶ್ವರ
ಮುದ್ದು ಕರುಗಳ ಎಂಜಲು ಹಾಲು ನಾನು ಕುಡಿಯೆನು
ಮುದ್ದು ಕರುಗಳ ಎಂಜಲನ್ನು ಕಾಯಿಸಿ ಕಳೆದಿದ್ದೇನೆ
ಮೋರೆ ತೊಳೆಯಿರಿ ಮೋರೆ ತೊಳೆಯಿರಿ ಲೋಕಂದ ಈಶ್ವರ

ಸಂ: ಅಡ್ಯನಡ್ಕ ಕೃಷ್ಣ ಭಟ್, ಸುದರ್ಶನ, ವಿಜಯಾ ಕಾಲೇಜ್ ಟ್ರಸ್ಟ್ ಮುಲ್ಕಿ, ೧೯೭೭
ತುಳುಪಾಡ್ದನಗಳು, ಕಬಿತಗಳು– ಅಮೃತ ಸೋಮೇಶ್ವರ

ಮೀನುಗಳ ಎಂಜಲು ನೀರು ನಾನು ತೊಳೆಯೆನು
ಮೀನುಗಳ ಎಂಜಲು ನೀರನ್ನು ಸೋಸಿ ಕಳೆದಿದ್ದೇನೆ

****

ಪೊಲಿ ಪೊಲಿ ಪೊಲಿ ಪೊಲಿ ಹೆಚ್ಚಾಗು
ಪಂಚ ಪಾಂಡವರ ಪೊಲಿ ನಿತ್ಯ ದೇವರ ಪೊಲಿ
ಕಣಜ ಕಟ್ಟಬೇಕು ಐಸಿರಿ ನೋಡಬೇಕು
ಆ ಅಂಗಳದ ಪೊಲಿ ಈ ಅಂಗಳದ ಪೊಲಿ
ಅರುವತ್ತಾರು ಅಂಗಳದಷ್ಟು ಪೊಲಿ
ಎಪ್ಪತ್ತೇಳು ಕೋಟಿ ಪೊಲಿ
ನಮ್ಮ ಅಂಗಳಕ್ಕೆ ಬಾ ಪೊಲಿ
ತಾಯ ಬೆನ್ನಲ್ಲಿ ಮಕ್ಕಳು ಬರುವ ಹಾಗೆ ಬರಬೇಕು
ಹಸುವಿನ ಬೆನ್ನಲ್ಲಿ ಕರು ಬರುವ ಹಾಗೆ ಬರಬೇಕು
ಹೇಟೆಯ ಹಿಂಗಡೆ ಮರಿಗಳು ಬರುವಂತೆ ಬರಬೇಕು
ನಾಗರ ಹಾವಿನ ಹಿಂದೆ ಅದರ ಮರಿಗಳು ಬರುವಂತೆ ಬರಬೇಕು
ಹುಲಿಯ ಬೆಂಗಡೆ ಹುಲಿ ಮರಿಗಳು ಬರುವಂತೆ ಬರಬೇಕು
ಮದುಮಗಳು ಹೆಣ್ಣಿಗೆ ತಲೆಕೂದಲು ಬರುವಂತೆ ಬರಬೇಕು
ಹೊಲತಿ ಹೆಣ್ಣಿಗೆ ಮೊಲೆ ಬರುವಂತೆ ಬರಬೇಕು
ಇರುವೆಯ ಸಾಲು ಬರುವಂತೆ ಬರಬೇಕು
ಸೂಜಿಯ ಹಿಂದೆ ನೂಲು ಬರುವಂತೆ ಬರಬೇಕು
ಹಕ್ಕಿಗಳ ಬಾಯಲ್ಲಿ ಬರಬೇಕು
ಹೆಬ್ಬುಲಿಯ ನಾಲಿಗೆಯಲ್ಲಿ ಬರಬೇಕು
ನರಿಯ ಬಾಲದಲ್ಲಿ ಬರಬೇಕು
ಹಾಲು ಉಕ್ಕಿದಂತೆ ಉಕ್ಕಬೇಕು
ಕಡಲ ತೆರೆ ಮಗುಚಿದಂತೆ ಮಗುಚಬೇಕು
ನೀರು ಹೆಚ್ಚುವಂತೆ ಹೆಚ್ಚಬೇಕು

****

ಕರ್ನಗೆ*

ಆ...ಆ...ಆಲಂದಡ್ಕ ಐನೂರಾಳು
ಮುಗೇರ ನಾಡು ಮುನ್ನೂರಾಳು
ಓ ಎರಡೂರು ನಾಲ್ಕು ಗುತ್ತಿನಲ್ಲಿ ಇದ್ದಾರೆ ಅವರು
ಓ ಬೀಡು ಆಳುವ ಬಲ್ಲಾಳರು
ಆ...ಆ...ಬಲ್ಲಾಳರ ಹೆಸರು ಎಂದರೆ ಇದ್ದಾರವರು
ಓ ಕಾಂತ ಅತಿಕಾರಿ ಬಲ್ಲಾಳರು
ಆ...ಆ...ಕಾಂತ ಅತಿಕಾರಿ ಕನ್ಯಾ ಅತಿಕಾರಿ ಬಲ್ಲಾಳರು
ಓ...ಅವರ ಪ್ರೀತಿಯ ಸೊಸೆ
ಆ...ಆ...ಅವರ ಪ್ರೀತಿಯ ಸೊಸೆ ಎಂದರೆ ಇದ್ದಾಳೆ
ಓ...ಕರ್ನಗ ಜೇವೂ ಇದ್ದಾಳೆ
ಆ...ಆ...ಕರ್ನಗ ಜೇವು ಇರುವ ಕಾಲದಲ್ಲಿ
ಓ ಬಲ್ಲಾಳರಿಗೆ ಕಾಲವು ಸರಿಯಿತು
ಆ...ಆ...ಕಾಲ ಸರಿಯಿತು ಬಲ್ಲಾಳರಿಗೆ
ಕೂಟ ಇನ್ನೂ ಮುಗಿಯಲಿಲ್ಲ
ಓ ಅದೊಂದು ಬೀಡು ಆಳುವ ಬಲ್ಲಾಳರಿಗೆ
ಆ...ಆ... ಆಗ ಹೇಳಿದರು ಬಲ್ಲಾಳರು
ಓ ಎಲ್ಲಿ ಹೋದೆಯೋ ನನ್ನ ಪ್ರೀತಿಯ ಸೊಸೆಯೇ
ಓ 'ಕರ್ನಗಾ ಕರ್ನಗಾ' ಎಂದು ಕರೆದರು

ಸಂ : ಡಾ.ಬಿ.ಎ.ವಿವೇಕ ರೈ, ಯದುಪತಿ ಗೌಡ, ರಾಜಶ್ರೀ
ಪುಟ್ಟು ಬಳಕೆಯ ಪಾಡ್ದನಗಳು, ಶ್ರೀ ಮಂಜುನಾಥೇಶ್ವರ ತುಳು ಪೀಠ, ಮಂಗಳೂರು ವಿ.ವಿ., ೨೦೦೪.

ಆ...ಆ...ಕರ್ನಗಾ ಕರ್ನಗಾ ಎಂದು ಕರೆದರು ಬಲ್ಲಾಳರು
ಓ... ಕಾಲದ ಅಡುಗೆ ಕಾಲದಲ್ಲಿ ಆಗಬೇಕು
ಆ...ಆ... ಕಾಲದ ಅಡುಗೆ ಕಾಲದಲ್ಲಿ ಆಗಬೇಕು
ಕರ್ನಗ ಜೇವು ಕೇಳು
ಓ ವೇಳೆಯ ಬಿಸಿನೀರು ವೇಳೆಯ ಬಿಸಿನೀರು ವೇಳೆಯಲ್ಲಿ ಆಗಲಿ
ಆ...ಆ... ಅಷ್ಟು ಮಾತು ಕೇಳಿದಳು ಕರ್ನಗ ಜೇವು
ಓ... ಅಟ್ಟಕ್ಕೆ ಏಣಿ ಇಟ್ಟಳು
ಆ...ಆ...ಅಟ್ಟಕ್ಕೆ ಏಣಿ ಇಟ್ಟಳು ಕರ್ನಗ ಜೇವು ಅವಳು
ಓ ಕಳಮ್ಮೆಯ ಕಡಿಯಕ್ಕಿ ತೆಗೆದಳು
ಆ...ಆ...ಕಳಮೆಯ ಕಡಿಯಕ್ಕಿ
ತೆಗೆದಳು ಕರ್ನಗ ಜೇವು
ಓ ಆಕಾಶದಷ್ಟೆತ್ತರದ ಏತವನ್ನು ಇಳಿಸಿದಳು
ಆ...ಆ...ಆಕಾಶದಷ್ಟೆತ್ತರದ ಏತವನ್ನು ಕೆಳಗೆ ಇಳಿಸಿದಳು ಜೇವು
ಓ ಪಾತಾಳದ ಹನಿನೀರು ತೆಗೆದಳು
ಆ...ಆ...ನೀರಿನಲ್ಲಿ ಅಕ್ಕಚ್ಚು ತೆಗೆದಳು ಕರ್ನಗ ಜೇವು
ಓ ಹಾಲಿನಲ್ಲಿ ಅನ್ನ ಬೇಯಲು ಇಟ್ಟಳು
ಆ...ಆ... ಅಡಿಭಾಗದಲ್ಲಿ ನಂದಾದೀಪ ಇಟ್ಟಳು ಕರ್ನಗ ಜೇವು
ಓ ಮೇಲೆ ಮುಚ್ಚಳ ಮುಚ್ಚಿದಳು
ಆ...ಆ... ಮುತ್ತುವರ್ಣದ ಅನ್ನ ಉಕ್ಕಿ ಬರುವಾಗ
ಓ ಪದಾರ್ಥದ ಸನ್ನಾಹ ಮಾಡಬೇಕು
ಆ...ಆ...ಗೆಜ್ಜೆ ಕತ್ತಿ ಎಸರು ತಟ್ಟೆ ಸಣ್ಣ ಕುಕ್ಕೆ ಹಿಡಿದಳು
ಓ ಮೂಡಣ ನಂದನದ ಹಿತ್ತಲಿಗೆ ಬಂದಳು
ಆ...ಆ...ನಂದನದ ಹಿತ್ತಲಿಗೆ ಬಂದಳು ಕರ್ನಗೆ ಜೇವು
ಓ ಹದವಾಗಿ ಬೆಳೆದ ಅಲಸಂಡೆ ಓ ಕಿತ್ತಳು
ಆ...ಆ...ಅಳಿಲು ಬಣ್ಣದ ಸೌತೆ
ಬೂದು ಕುಂಬಳವನ್ನು ಕೊಯ್ದಳು

ಓ ಎಸರುತಟ್ಟೆ ಚಿಕ್ಕ ಕುಕ್ಕೆಗೆ ತುಂಬಿಸಿಕೊಂಡು
ಓ ತನ್ನದೊಂದು ಬೀಡಿಗೆ ಬಂದಳು
ಆ...ಆ... ತನ್ನದೊಂದು ಬೀಡಿಗೆ ಬಂದಳು ಕರ್ನಗೆ ಜೇವು
ಓ ನಡುವಿನ ಚಾವಡಿಯಲ್ಲಿ ಇಟ್ಟಳು
ಆ...ಆ... ಬೆಳ್ಳಿಯ ಸಿರಿಗಿಂಡೆಯನ್ನು ತೆಗೆದಳು ಕರ್ನಗ ಜೇವು
ಓ ಗಿಂಡೆಯಲ್ಲಿ ಒಂದು ಗಿಂಡೆ ನೀರು ತೆಗೆದುಕೊಂಡು ಬಂದಳು
ಆ...ಆ...ಗಿಂಡೆಯಲ್ಲಿ ಒಂದು ಗಿಂಡೆ ನೀರು ತೆಗೆದುಕೊಂಡು ಬಂದಳು ಕರ್ನಗ
ಓ ತೊಂಡೆಕಾಯಿಯ ಚಪ್ಪರದ ಬುಡಕ್ಕೆ
ಆ...ಆ... ಚಪ್ಪರಕ್ಕೆ ನೀರನ್ನು ಎರಚಿದಳು ಕರ್ನಗ ಜೇವು
ಸೆರಗು ಹಿಡಿದು ತೊಂಡೆಕಾಯಿ ಕೊಯ್ದಳು...
ಓ ಚಾವಡಿಗೆ ತೆಗೆದುಕೊಂಡು ಬಂದಳು
ಆ...ಆ... ಉದ್ದಕ್ಕೆ ತುಂಡು ಮಾಡಿ ನೀರಾರಿಸಿದ ಪಲ್ಯ ಮಾಡಬೇಕು
ಓ ಅಡ್ಡ ಹಿಡಿದು ತುಂಡು ಮಾಡಿ ಮಜ್ಜಿಗೆ ಹುಳಿ ಆಗಬೇಕು
ಆ...ಆ... ಮೆಣಸು ಸೇರಿಸಿ ಮುನ್ನೂರು ವಿಧದ ಪದಾರ್ಥ
ತೆಂಗಿನಕಾಯಿ ಹಾಕಿ ಐನೂರು ವಿಧದ
ಓ ಪದಾರ್ಥ ಬೇಗನೇ ಮಾಡಿದಳು
ಆ...ಆ... ನನ್ನ ಮಾವನವರಿಗೆ
ಇಷ್ಟೆಲ್ಲ ಪದಾರ್ಥ ಇದ್ದರೆ ಸಾಲದು
ಓ ಲಿಂಬೆಯೇ (ನಾರಂಗಾಯಿ) ಉಪ್ಪಿನಕಾಯಿ ಆಗಬೇಕು
ಆ...ಆ...ಅಂದದ ಸಣ್ಣ ಲಿಂಬೆಯೂ
ಸಣ್ಣ ಮಾದಳವೂ
ಓ ಲಿಂಬೆಯ ಉಪ್ಪಿನಕಾಯಿ ಮಾಡಿದಳು
ಆ...ಆ... ಕಾಲದ ಅಡುಗೆ ಕಾಲದಲ್ಲಿ ಮಾಡಿದಳು
ಕರ್ನಗ ಜೇವು ಅವಳು
ಓ ಮೂಡಣ ಸ್ವರ್ಣ ಕೇದಿಗೆಯ ಬುಡದಲ್ಲಿ
ಆ...ಸ್ವರ್ಣ ಕೇದಿಗೆಯ ಬುಡದಲ್ಲಿ ಕರ್ನಗ ಜೇವು

ಓ ನಾಲ್ಕು ಕೈಯ ಕೊಪ್ಪರಿಗೆ
ಓ ಇಡಿಸಿದಳು
ಓ ನಾಲ್ಕು ಕೈಯ ಕೊಪ್ಪರಿಗೆಯನ್ನು ಇಡಿಸಿದಳು ಕರ್ನಗ ಜೇವು
ಓ ತಂಪಿಗೆಂದು ಸಾವಿರ ಬಿಂದಿಗೆ ನೀರು ತುಂಬಿದಳು
ಆ ತಂಪಿಗೆ ಸಾವಿರ ಬಿಂದಿಗೆ ನೀರು
ಬಿಸಿಗೆ ಸಾವಿರ ಬಿಂದಿಗೆ ನೀರು
ಓ ಸ್ವರ್ಣ ಕೇದಿಗೆಯ ಬುಡದಲ್ಲಿ
ಆ...ಆ...ಅಯ್ಯಾ ಅಯ್ಯಾ ನನ್ನ ಪ್ರೀತಿಯ ಮಾವಯ್ಯಾ
ಓ ಕಾಲದ ಅಡುಗೆ ಕಾಲದಲ್ಲಿ ಆಗಿದೆ
ಆ...ಆ... ಕಾಲದ ಅಡುಗೆ ಕಾಲದಲ್ಲಿ ಆಗಿದೆ ಮಾವಯ್ಯಾ
ವೇಳೆಯ ಬಿಸಿನೀರು ವೇಳೆಯಲ್ಲಿ ಆಗಿದೆ
ಓ ಮಿಂದು ಮೈ ಶುದ್ಧ ಆಗಿರೆಂದು
ಆ...ಆ... ನೆತ್ತಿಗೆ ತಂಪೆಣ್ಣೇ ಎದೆಗೆ ಮಿಂಚೆಣ್ಣೆ
ಓ ಉಗುರಿಗೆ ಉಗುರೆಣ್ಣೆ ಹಾಕಿದರು
ಆ...ಆ... ನಾಲ್ಕು ಕೈಯ ಕೊಪ್ಪರಿಗೆ ಇರುವಲ್ಲಿಗೆ
ಬರುತ್ತಾರೆ ಅವರು ಬಲ್ಲಾಳರು
ಓ ತಂಪಿಗೆ ಸಾವಿರ ಬಿಂದಿಗೆ ನೀರು ಮಿಂದರು
ಬಿಸಿಗೆ ಸಾವಿರ ಬಿಂದಿಗೆ ನೀರು ಮಿಂದರು
ಓ ಮಿಂದು ಮೈ ಶುದ್ಧವಾಗಿ ಬರುತ್ತಾರೆ
ಆ...ಆ... ಮಿಂದು ಮೈಶುದ್ಧ
ಆಗಿಕೊಂಡು ಬರುತ್ತಾರೆ ಬಲ್ಲಾಳರು
ಓ ತುಲಸಿ ಮಂಟಪದಲ್ಲಿಗೆ ಬರುವಾಗ ಬಲ್ಲಾಳರು
ಓ ಸಿರಿಗಿಂಡೆಯಲ್ಲಿ ನೀರು ತೆಗೆದುಕೊಂಡು ಕೊಟ್ಟಳು
ಆ...ಆ... ಸಾಣೆಕಲ್ಲು ಹಿಡಿದರು ಗಂಧವನ್ನು ತೇದರು
ಓ ಮೂಡಣದಲ್ಲಿ ಸೂರ್ಯನನ್ನು ನೋಡಿದರು
ಆ...ಆ... ಮೂಡಣದಲ್ಲಿ ಸೂರ್ಯನನ್ನು ನೋಡಿದರು ಬಲ್ಲಾಳರು

ಓ ಸೂರ್ಯ ನಾಮ ಹಾಕಿದರು
ಆ...ಆ... ಸಿರಿಗಿಂಡೆಯ ನೀರು ಹಿಡಿದರು ಬಲ್ಲಾಳರು
ಓ ತುಲಸಿಗೆ ನೀರು ಎರೆದರು
ಆ...ಆ... ತುಲಸಿಗೆ ನೀರು ಎರೆದರು
ಬಡಗು ದಿಕ್ಕಿಗೆ ಬಾಗಿದ ಸಣ್ಣ ಎಲೆ ತೆಗೆದರು
ಓ ಎಡದ ಕಿವಿಗೆ ಇಡುತ್ತಾ ಬರುತ್ತಾರೆ
ಆ...ಆ...ಊಟದ ಶಾಲೆಗೆ ಬಂದರು ಬಲ್ಲಾಳರು
ಓ 'ಕೊಟ್ಟು ಮಣೆ'ಯಲ್ಲಿ ಕುಳಿತರು
ಆ...ಆ... ಬಂಗ ಬಾಳೆಯ ತುದಿಯೆಲೆ
ಹಾಕಿದಳು ಕರ್ನಗ ಜೇವು
ಓ ಮುತ್ತು ವರ್ಣದ ಅನ್ನ ಬಡಿಸಿದಳು
ಆ... ಮುತ್ತು ವರ್ಣದ ಅನ್ನ
ಕಾಚು ವರ್ಣದ ಪದಾರ್ಥ
ಓ ಅದಕ್ಕೆ ಒಪ್ಪುವ ಉಪ್ಪಿನಕಾಯಿ ಬಡಿಸಿದಳು
ಆ...ಆ...ಒಂದು ಹಿಡಿ ಅನ್ನ ತೆಗೆದರು ಬಲ್ಲಾಳರು
ಓ ಬಲಕ್ಕೆ ನಾಯಿಗೆ ಹಾಕಿದರು
ಆ...ಆ... ಎರಡು ಅನ್ನ ತೆಗೆದರು ಬಲ್ಲಾಳರು
ಓ ಎಡಕ್ಕೆ ಬೆಕ್ಕಿಗೆ ಹಾಕಿದರು
ಆ...ಆ... ಮೂರು ಹಿಡಿ ಅನ್ನ ತೆಗೆದು ಬಲ್ಲಾಳರು
ಓ ಎಡಕ್ಕೆ ಬೆಕ್ಕಿಗೆ ಹಾಕಿದರು
ಓ ತಾನು ಊಟೋಪಚಾರ ಮಾಡುವಾಗ
ಆ...ಆ...ಕೈಯ ಅನ್ನದಲ್ಲಿ ಕಲ್ಲು ಇತ್ತೆಂದು
ಬಾಯಿಯ ಅನ್ನದಲ್ಲಿ ಬತ್ತ ಇತ್ತೆಂದು
ಓ ಕರ್ನಗಾ ಕರ್ನಗಾ ಎಂದು ಓ ಕರೆದರು...
ಆ...ಆ... ಕರ್ನಗಾ ಕರ್ನಗಾ ಎಂದು
ಕರೆದರು ಬಲ್ಲಾಳರು

ಓ ಕರ್ನಗನಗ ಸೆರಗು ಹಿಡಿದರು
ಬೀಡು ಆಳುವ ಬಲ್ಲಾಳರು
ಬೆನ್ನಿಗೆ ಶಿಕ್ಷೆ ಕೊಡುವಾಗ
ಆ...ಆ...ಅಯ್ಯಾ ಅಯ್ಯಾ ನನ್ನ ಪ್ರೀತಿಯ ಮಾವಯ್ಯಾ
ಸೆರಗು ಹಿಡಿದು ಬೆನ್ನಿಗೆ ಶಿಕ್ಷೆ
ಕೊಟ್ಟಿರಾದರೆ ಮಾವಯ್ಯಾ
ಓ ಮಲಾರಿನ ಮಲಾರ ಜುಮಾದಿಯ ಆಣೆಯಿದೆ
ಆ...ಆ...ಮಲಾರಿನ ಜುಮಾದಿಯ
ಆಣೆ ಹಾಕಿದಳು ಕರ್ನಗ
ಓ ಕಣ್ಣಂಚಿನಲ್ಲಿ ಕಣ್ಣೀರುಡುತ್ತಾ
ಓ ಬರುತ್ತಾಳೆ
ಆ...ಆ...ಕಡೆಕಣ್ಣಿನಲ್ಲಿ ಕಣ್ಣೀರು ಇಡುತ್ತಾ ಬರುತ್ತಾಳೆ ಕರ್ನಗ
ಓ ನನ್ನ ಮಾವ ನಂಬಿದಂತಹ ಜುಮಾದಿ ಇದ್ದರೆ
ಓ ಜುಮಾದಿಯ ಆಧೀನದಲ್ಲಿ ನಿಲ್ಲುವೆ ಎಂದಳು ಕರ್ನಗ
ಓ ಕರ್ನಗ ಗುಂಡಿಗೆ ಹಾರಿ ಬಿದ್ದಳು
ಆ...ಆ... ಕರ್ನಗ ಗುಂಡಿಗೆ ಹಾರಿ ಬಿದ್ದಾಗ ಅವರು
ಕೂಡಲೇ ಹೇಳಿದರು ಬೀಡು ಆಳುವ ಬಲ್ಲಾಳರು
ಓ ನನ್ನ ಸೊಸೆ ಎಲ್ಲಿಗೆ ಹೋದಳು
ಆ...ಆ... ಮಲಾರಿನ ಐವತ್ತೊಂದು ಒಕ್ಕಲನ್ನು ಕರೆದರು
ಓ ನೂರಒಂದು ತೆಂಗಿನ ಗರಿಯ ದೊಂದಿ ಕಟ್ಟಿಸಿದರು
ಆ...ಆ... ಐವತ್ತೊಂದು ಒಕ್ಕಲಿನಲ್ಲಿ ನೂರಒಂದು ದೊಂದಿ ಕಟ್ಟಿಸಿದರು
ಓ ಕರ್ನಗನನ್ನು ದೊಂದಿ ಹಿಡಿದು ಹುಡುಕಿಸಿದರು
ಆ...ಆ... ದೊಂದಿ ಹಿಡಿದು ಕರ್ನಗನನ್ನು ಹುಡುಕುವಾಗ ಒಕ್ಕಲಿನವರು
ಓ ಆಗ ಹೇಳಿದರು ಮಲಾರಿನಲ್ಲಿ ಮಲಾರ ಜುಮಾದಿ
ಓ ಕರ್ನಗನನ್ನು ಹುಡುಕದಿರಿ ಹುಡುಕದಿರಿ ಒಕ್ಕಲಿನವರೇ ನೀವು
ಓ ನನ್ನ ಆಧೀನದಲ್ಲಿ ಓ ಇದ್ದಾಳೆ

ಕಬಿತಗಳು*

ಹೇ ದಾ ಬಾ ಮಗನೇ ಚೆಲುವ ಕೆಮ್ಮ್ಹುರಾ
ಯಾವ ದನದ ಮಗನೋ ಅವನು ಚೆಲುವ ಕೆಮ್ಮ್ಹುರಾ
ಹೆಜ್ಜೆಗೊಂದು ಹೂಂಕುರವಗೆ ಚೆಲುವ ಕೆಮ್ಮ್ಹುರಗೆ
ಬಲ್ಲ ಮಲೆಯ ಹುಲ್ಲು ಅವಗೆ ಚೆಲುವ ಕೆಮ್ಮ್ಹುರಗೆ
ಸುಲ್ಲ ಮಲೆಯ ನೀರು ಅವಗೆ ಚೆಲುವ ಕೆಮ್ಮ್ಹುರಗೆ
ಹೊಟ್ಟೆಯಡಿಗೆ ಮಂಗಲ(=ಬಿಳಿಮಚ್ಚೆ)ನವಗೆ ಚೆಲುವ ಕೆಮ್ಮ್ಹುರಗೆ
ಹಣೇಲಿ ಬಿಳಿ ಮಚ್ಚೆಯವಗೆ ಚೆಲುವ ಕೆಮ್ಮ್ಹುರಗೆ
ಬಾಲದಲಿ ಬಿಳಿಬಣ್ಣವವಗೆ ಚೆಲುವ ಕೆಮ್ಮ್ಹುರಗೆ
ಬಡವರ ಪೈರು ತಿನಬೇಡ ಚೆಲುವ ಕೆಮ್ಮ್ಹುರಾ
ಬದೀಲೆ ಹೋಗಿ ಬದೀಲೆ ಬಾ ಚೆಲುವ ಕೆಮ್ಮ್ಹುರಾ
ಗುಂಪಿನಲಿ ಹೋಗಿ ಗುಂಪಿನಲಿ ಬಾ ಚೆಲುವ ಕೆಮ್ಮ್ಹುರಾ
ಮಾದೇರೆನ ಕಾಡಿನಲ್ಲಿ ಅಡಗಿರುತ್ತಾನೆ ಚೆಲುವ ಕೆಮ್ಮ್ಹುರಾ
ಓಣಿ ಓಣಿಲಿ ಅಡಗಿರುತ್ತಾನೆ ಚೆಲುವ ಕೆಮ್ಮ್ಹುರಾ
ಒಳ್ಳೆ ಒಳ್ಳೆಯ ಕಡಸುಗಳಿವೆ ಚೆಲುವ ಕೆಮ್ಮ್ಹುರಾ
(ಹುಲಿ ಹಿಡಿಯುವುದು)
ಹೇ ದಾ ಬಾ ಮಗನೇ ಚೆಲುವ ಕೆಮ್ಮ್ಹುರಾ

****

ಯಾರಮ್ಮ ಮನೇಲಿ?
ನಾನಲ್ವೇ ಹೇಳಿದ್ಲು

---

* ಡಾ. ಬಿ.ಎ. ವಿವೇಕ ರೈ, ತುಳು ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ೧೯೮೫

ಬೆಲ್ಲ ಹುಡಿ ಬೇಕೇನೆ?
ಬೇಕಾಗ್ಲಿಕ್ಕೇನೋ ಬೇಕಲ್ಲಾ
ಕೊಡಲು ಏನೂ ಇಲ್ವಲ್ಲಾ
ಬೆಲ್ಲ ಹುಡಿ ಕೊಟ್ಕೊಂಡ
ಬರುವಾಗ ನಾ ಬರ್ತೇನಂದ
ಸಾಮಾನ್ ಗೀಮಾನ್ ಮಾರ್ಕೊಂಡ
ಕತ್ತಲೆ ಹೊತ್ತಿಗೆ ಬಂದ್ಕೊಂಡ
ಯಾರಮ್ಮಾ ಮನೇಲಿ
ನಾನಲ್ವೇ ಹೇಳಿದ್ಲು
ತಂಗಲು ಬಿಡಾರ ಕೊಡ್ತೀಯೇನೆ?
ತಂಗಲು ಬಿಡಾರ ಕೊಡೆ ಎಂದ್ಲು
ಬೆಲ್ಲ ಕಾಯಿ ಸಿಹಿಯೇನೆ?
ನಾ ಮಾತ್ರ ಕಹಿಯೇನೆ?
ತಂಗಲು ಬಿಡಾರ ಕೊಡ್ತೇನಂದ್ಲು
ಕಟ್ಟಿಗೆ ಕೊಟ್ಗೆಗೆ ಹೋಕ್ಕೊಂಡ್ಲು
ಹರಕು ಚಾಪೆ ಕೊಟ್ಕೊಂಡ್ಲು
ಹರಕು ಕಂಬ್ಳಿ ಕೊಟ್ಕೊಂಡ್ಲು
ಕೊಳೆತ ತಂಗಳನ್ನು ಕೊಟ್ಕೊಂಡ್ಲು
ಹುಳುಬಿದ್ದ ಉಪ್ಪಿನಕಾಯಿ ಕೊಟ್ಕೊಂಡ್ಲು
ಅದನ್ನೆಲ್ಲ ಕಟ್ಕೊಂಡ
ಅದನ್ನೆಲ್ಲಾ ಮುದ್ದೆ ಮಾಡ್ದ
ಥೀ ಸೊಳ್ಳೆ ಕಚ್ತಾದೆ
ಬರ್ತಿಲ್ಲ ಏನೂ ನಿದ್ದೆ
ನಡುರಾತ್ರಿ ಎದ್ಕೊಂಡ
ಓರೆ ಬಾಗ್ಲು ಮಾಡ್ಕೊಂಡ
ಚಾಪೆನೆಲ್ಲಾ ತಡವರಿಸಿದ

ಛೀ ತೊಲಗಿ ಆ ಕಡೆ
ಬೆಲ್ಲ ಕಾಯಿ ಸಿಹಿಯೇನೇ
ನಾ ಮಾತ್ರ ಕಹಿಯೇನೇ
ಅಷ್ಟೊತ್ತಿಗೆ ನೋಡ್ಕೊಂಡ
ಆಕೆ ಗಂಡ ನೋಡ್ಕೊಂಡ
ಓಡು ಬ್ಯಾರಿ ಓಡು ಬ್ಯಾರಿ ಹೇಳ್ಕೊಂಡ
ಬೆತ್ತ ಹಿಡಿದು ಬೆನ್ನಟ್ಟ
ಯಾರಮ್ಮಾ ಮನೇಲಿ

****

ತೇರಿನಲ್ಲಿ ತೇರು ಒಳ್ಳೆಯದೋ
ಓ ಬಡಿಯಾ ಯಾವ ತೇರು ಒಳ್ಳೆಯದೋ
ತೇರಿನಲ್ಲಿ ತೇರು ಒಳ್ಳೆಯದೋ
ಮದೂರ ತೇರು ಒಳ್ಳೆಯದೋ
ಗೊಲ್ಲರ ನೂಲು ಹಿಡಿದದ್ದೋ ಬಡಿಯಾ
ಸೂಳೆಗಳ ಮೈ ಮುಟ್ಟಿದ್ದೋ
ತೇರಿನಲ್ಲಿ ತೇರು ಒಳ್ಳೆಯದೋ
ಕದ್ರಿಯ ತೇರು ಒಳ್ಳೆಯದೋ
ಉಡುಪಿಯ ತೇರು ಒಳ್ಳೆಯದೋ
ಗೊಲ್ಲರ ನೂಲು ಹಿಡಿದದ್ದೋ ಓ ಬಡಿಯಾ
ಸೂಳೆಗಳ ಮೈ ಮುಟ್ಟಿದ್ದೋ
ಮಂಜೇಶ್ವರದ ತೇರು ಒಳ್ಳೆಯದೋ
ಕುಂಬಳೆಯ ತೇರು ಒಳ್ಳೆಯದೋ
ಸುಬ್ರಹ್ಮಣ್ಯದ ತೇರು ಒಳ್ಳೆಯದೋ

****

ಹೋಯ್ಯ ಹೋಯ್ಯ ॥ಪಲ್ಲವಿ॥
ಓ ನಟ್ಟಿ ಒಂದು ನಾಟಿ

ಬಿದಿರಿನ ಹಿಂಡಲಿನಂತೆ
ಎದ್ದು ಬರಬೇಕು
ದೊಡ್ಡದೊಂದು ಗದ್ದೆ
ಹೆಚ್ಚು ಭತ್ತವಾಗುವ ಗದ್ದೆ
ಕೇಳಿದ್ದೀರೋ ಜನಗಳೇ
ನಮಗಾದರೇ ಹೋಗಬೇಕು
ಕಣಂದೂರ ಕಟ್ಟಕ್ಕೆ
ಒಂದು ಹುಳಿಯ ಚಬಟೆಯನ್ನೇ ಹಿಡಿಯಬೇಕು
ನಮಗಾದರೇ ಹೋಗಬೇಕು
ಕಡೇಶ್ವಾಲ್ಯ ದೇವರ
ದೇವಸ್ಥಾನ ಮಗುಚಿ
ಆರು ಮೂರು ಹನ್ನೆರಡು
ವರ್ಷವೇ ಆಯಿತು
ಕುಡುಂಬನ ಇಗರ್ಜಿ
ಮಗುಚಿ ಆರು ಮೂರು ವರ್ಷವೇ
ಭೂತಗಳ ಬದಿಮಾಡ
ಮಗುಚಿ ಆರುಮೂರು ವರ್ಷವೇ ಆಯಿತು
ನಮಗಾದರೆ ಹೋಗಬೇಕು
ಒಂದು ಕಿಸಗಾರದ ಮರ
ಕಡಿಯಲೆಂದು ಹೋಗಬೇಕು
ಒಂದು ಕಿಸಗಾರದ ಮರ
ಕಡಿಯಲೆಂದು ಹೋಗಬೇಕು
ಕುದುರೆವರ್ಗದ ಗಡಿಯು
ಅಲ್ಲಾದರೆ ಇಡುವಾಗ
ಆನೆ ವರ್ಗದ ಗಡಿಯೆ ಏಳುತ್ತದೆ
ಅದರ ಒಂದು ನಡುತುಂಡು

ತೆಗೆದು ದೇವರಿಗೆ ದೇವಸ್ಥಾನ ಕಟ್ಟಬೇಕು
ಅದರ ಕಡೆತುಂಡು ತೆಗೆದು
ಭೂತಗಳಿಗೆ ಬದಿಮಾಡ
ಮಗುಚಿ ಆರುಮೂರು ವರ್ಷವೇ ಆಯಿತು
ನಮಗಾದರೆ ಹೋಗಬೇಕು
ಒಂದು ಕಿಸೆಗಾರದ ಮರ
ಕಡಿಯಲೆಂದು ಹೋಗಬೇಕು
ಕುದುರೆ ವರ್ಗದ ಗಡಿಯು
ಅಲ್ಲಾದರೆ ಇಡುವಾಗ
ಆನೆ ವರ್ಗದ ಗಡಿಯೇ ಏಳುತ್ತದೆ
ಆದರೆ ಒಂದು ನಡುತುಂಡು
ತೆಗೆದು ದೇವರಿಗೆ ದೇವಸ್ಥಾನ ಕಟ್ಟಬೇಕು
ಅದರ ಕಡೆತುಂಡು ತೆಗೆದು
ಭೂತಗಳಿಗೆ ಬದಿಮಾಡ ಕಟ್ಟಿಸಬೇಕು
ತುದಿಯ ತುಂಡು ತೆಗೆದುಕೊಂಡು
ಕುಡುಂಬನಿಗೆ ಇಗರ್ಜಿ ಕಟ್ಟಿಸಬೇಕು
ನಮ್ಮದೇ ನಟ್ಟ ಒಂದು ನಾಟಿ
ಬಂಗಬಾಳೆ ಸಿಂಗಬಾಳೆ
ಸಿಹಿಯಾದರೆ ಎಳೆದು
ಗೊನೆಯನ್ನೇ ಹಾಕಿದಂತೆ
ಭತ್ತದ ತೆನೆಯೇ ಬರಬೇಕು
ಹೋಯ್ಯ ಹೋಯ್ಯ ॥

****

ಹೋಯ್ಯಾ ॥ ಹೊಯ್ಯಾ ॥
ಓ ಎಲ್ಲಮ್ರ ಹೇಳಿ ॥ ಹೋಯ್ಯಾ॥
ಗಟ್ಟದ ಮೇಲೆ ।

ಈ ಊರ ಬಾಲೆ ।
ಅಟ್ಟದ ಮೇಲೆ ।
ಬಂಗಾರದ ವಾಲೆ ।
ಬೀರಾ ಸಾಲೆ ।
ಗಂಧ ಸಾಲೆ ।
ರಾಜಾ ಕಯಮೆ ।
ದಕ್ಕಯ್ಯ ಬಾರೋ ।
ದಮ್ಮಯ್ಯ ಬಾರೋ ।
ನಾಟೀಯ ಕೆಲಸ ।
ಮುಗಿಯುವ ಸರಸ ।

****

ಹೋಲಿಯೇ ಹೊಲಿಯೆರೆ ಹೊಲೆ ಹೂವೆ ಹೋಯಿತೆ ಒಡೆಯಾ
ಮಾಯಿಯ ಹುಣ್ಣಿಮೆ, ಒಡೆಯಾ ಮಾಯದಲ್ಲೇ ಹೋಯಿತೇ
ಸುಗ್ಗಿಯ ಹುಣ್ಣಿಮೆ, ಒಡೆಯಾ ಸುಗ್ಗಿಯಲ್ಲೇ ಹೋಯಿತೇ
ಕರೆಂಗೋಲು ಹುಟ್ಟಿದ್ದು ಎಲ್ಲೋ ಕಾಂತಕ್ಕ
ಮೂಡು ದಿಕ್ಕಿನಲ್ಲಿ, ಒಡೆಯಾ, ಹೊಳೆಯ ಹೊಯಿಗೆಯಲ್ಲಿ
ಹೊಳೆಯ ಹೊಯಿಗೆಯಲ್ಲಿ, ಒಡೆಯಾ, ನೀರಿನ ಬದಿಯಲ್ಲಿ
ನೀರಿನ ಬದಿಯಲ್ಲಿ, ಒಡೆಯಾ, ಮಾದೇರಿನ ಕಾಡಿನಲ್ಲಿ
ಮಾದೇರಿನ ಕಾಡಿನಲ್ಲಿ, ಒಡೆಯಾ, 'ನೆಕ್ಕಿ' ಸೊಪ್ಪಿನ ಪೊದರಿನಲ್ಲಿ,
ಕರಂಗೊಲು ತರುವುದು ಯಾರೇ ಕಾಂತಕ್ಕ ?
ಆ ಕರಂಗೋಲು ತರುವ ಕುಶಲತೆ ಏನು?

ಆ ಕರಂಗೋಲು ತರುವ ಮಕ್ಕಳು ತಿಳಿದಿದ್ದಾರೆ
ಒಡತಿಯನ್ನು ಎಚ್ಚರಿಸು ಚಿಕ್ಕ ಮದುಮಗಳೇ
ಒಡತಿಯನ್ನು ಎಚ್ಚರಿಸುವ ಕುಶಲತೆ ಗೊತ್ತಿದೆಯೇ?
'ಕುಡುಪು'ವಿಗೆ ಕೈ ಕೊಟ್ಟು ಎಚ್ಚರಿಸು

ಒಡೆಯನನ್ನು ಎಚ್ಚರಿಸು ಚಿಕ್ಕ ಮದುಮಗಳೇ
ಒಡೆಯನನ್ನು ಎಚ್ಚರಿಸುವ ಕುಶಲತೆ ಗೊತ್ತಿದೆಯೇ?
ಚೆಂಬಿನಲ್ಲಿ ನೀರು ಹಿಡಿದು ಎಚ್ಚರಿಸು
ಮಗುವನ್ನು ಎಚ್ಚರಿಸು ಚಿಕ್ಕ ಮದುಮಗಳೇ
ಮಗುವನ್ನು ಎಚ್ಚರಿಸುವ ಕುಶಲತೆ ಗೊತ್ತಿದೆಯೇ?
ಬಟ್ಟಲಿಗೆ ಹಾಲು ಅನ್ನ ಹಾಕಿ ಎಚ್ಚರಿಸು.
ಒಡೆಯಾ ಇದ್ದಾರೋ ಇಲ್ಲವೋ ಹುಡುಗಿ ಮದುಮಗಳೇ
ಕರೆಯದವರು
ಅಳದವರು ಕೂಟಕ್ಕೆ ಹೋಗಿದ್ದಾರೆ
ಕೂಟದಿಂದ ಹೊರಡುವಾಗ ಏನನ್ನು ತಂದರು?
ಗಿಂಡಿ ಹಿಡಿದು ಕರೆಯಲು ಎಮ್ಮೆ ತಂದರು
ಹಂಡೆ ಕೊಂಡೊಯ್ದು ಕರೆಯಲು ಎಮ್ಮೆ ತಂದರು
ಅಡ್ಡಾದಿಡ್ಡಿಯ ಹೊಲ ಮಾಡಿದರು
ಮಜಲು ಬೊಟ್ಟು ಗದ್ದೆ ಮಾಡಿದರು
ಕಟ್ಟ ಹುಣಿಯಲ್ಲಿ ಉತ್ತಮವಾದ ತೆಂಗಿನಮರ ಇಟ್ಟಿದ್ದಾರೆ.
ತೋಟದಲ್ಲಿ ಉತ್ತಮವಾದ ಅಡಕೆ ಮರ ಇಟ್ಟಿದ್ದಾರೆ
ಬಳ್ಳಿಯಲ್ಲಿ ಉತ್ತಮವಾದ ವೀಳ್ಯದೆಲೆ ಬಳ್ಳಿ ಇಟ್ಟಿದ್ದಾರೆ
ಕಾಡಿನಲ್ಲಿ ಉತ್ತಮವಾದ 'ಇರುವೆ ಮರ' ಇಟ್ಟಿದ್ದಾರೆ
ಬೆಟ್ಟಿನಲ್ಲಿ ಉತ್ತಮವಾದ ಹಲಸಿನ ಮರ ಇಟ್ಟಿದ್ದಾರೆ
ಎಡೆ ಮೋಡೆ ಕೋಣಗಳನ್ನು ಮಾಡಿದರು
ಕಾಳ ಕಬುಲ (ಎತ್ತು)ಗಳನ್ನು ಜೊತೆ ಮಾಡಿದರು
ಅಂಗಾರ ಮತ್ತು ಬಾಕುಡನನ್ನು ಜೊತೆ ಮಾಡಿದರು
ಕಾನದ ಮತ್ತು ಕಟದರನ್ನು ಆಳು ಮಾಡಿದರು
ಯಾರೋ, ಅಂಗರ, ಬಾಕುಡ ನಾಲ್ಕೆತ್ತು ತಿರುಗಿಸಬೇಕಲ್ಲ
ನಾಲ್ಕೆತ್ತು ತಿರುಗಿಸಲು, ಒಡೆಯಾ, ನೇಗಿಲು ಮೊನೆಯ ಕಬ್ಬಿಣ (ಪನೊರು) ಇಲ್ಲವಲ್ಲ,
ಪಾವಲಿ ಹಿಡಿಯಬೇಕಲ್ಲ, ಒಡೆಯಾ, 'ಪನೊರು' ಹೊಡೆಸಬೇಕಲ್ಲ

ಯಾರೋ, ಅಂಗರ, ಬಾಕುಡ ನಾಲ್ಕೆತ್ತು ತಿರುಗಿಸಬೇಕಲ್ಲ,
ನಾಲ್ಕೆತ್ತು ತಿರುಗಿಸಲು, ಒಡೆಯಾ, 'ಹಿಡಿ' (ನೇಗಿಲಿನ) ಇಲ್ಲವಲ್ಲ,
ಎರೆಹುಳ ಹಿಡಿಯಬೇಕಲ್ಲ, ಒಡೆಯಾ, ಹಿಡಿಯೊಂದು ಹೊಡೆಸಬೇಕಲ್ಲ,
ಯಾರೋ, ಅಂಗರ,ಬಾಕುಡ ನಾಲ್ಕೆತ್ತು ತಿರುಗಿಸಬೇಕಲ್ಲ,
ನಾಲ್ಕೆತ್ತು ತಿರುಗಿಸಲು ಒಡೆಯಾ, ನೊಗವೊಂದು ಇಲ್ಲವಲ್ಲ,
ಹೊನ್ನೆಮರ ಕಡಿಯಬೇಕಲ್ಲ, ಒಡೆಯಾ, ನೊಗ ಕೆತ್ತಬೇಕಲ್ಲ,
ಯಾರೋ, ಅಂಗರ, ಬಾಕುಡ, ನಾಲ್ಕೆತ್ತು ತಿರುಗಿಸಬೇಕಲ್ಲ,
ನಾಲ್ಕೆತ್ತು ತಿರುಗಿಸಲು, ಒಡೆಯಾ, ಜೋಡಿ ಹಗ್ಗ ಇಲ್ಲವಲ್ಲ,
ಕೇರೆ ಹಾವನ್ನು ಹಿಡಿಯಬೇಕಲ್ಲ, ಒಡೆಯಾ, ಜೋಡಿ ಹಗ್ಗ ಹಾಕಬೇಕಲ್ಲ,
ಯಾರೋ, ಅಂಗರ, ಬಾಕುಡ, ನಾಲ್ಕೆತ್ತು ತಿರುಗಿಸಬೇಕಲ್ಲ,
ನಾಲ್ಕೆತ್ತು ತಿರುಗಿಸಲು, ಒಡೆಯಾ, ಕೊಂಟಿ ಹಗ್ಗ ಇಲ್ಲವಲ್ಲ,
ಹನಿ 'ಹರಂಬೋಲೆ' ಹಿಡಿಯಬೇಕಲ್ಲ, ಒಡೆಯಾ, ಕೋಂಟಿ ಹಗ್ಗ ಹಾಕಬೇಕಲ್ಲ,
ಯಾರೋ, ಅಂಗರ, ಬಾಕುಡ, ನಾಲ್ಕೆತ್ತು ತಿರುಗಿಸಬೇಕಲ್ಲ,
ನಾಲ್ಕೆತ್ತು ತಿರುಗಿಸಲು, ಒಡೆಯಾ, ಕಟ್ಟುವ ಹಗ್ಗ ಇಲ್ಲವಲ್ಲ,
ಒಣಗಿದ 'ಹರಂಬೋಲೆ' ಹಿಡಿಯಬೇಕಲ್ಲ, ಒಡೆಯಾ ಕಟ್ಟುವ ಹಗ್ಗ ಹಾಕಬೇಕಲ್ಲ,
ಯಾರೋ, ಅಂಗರ, ಬಾಕುಡ, ನಾಲ್ಕೆತ್ತು ತಿರುಗಿಸಬೇಕಲ್ಲ,
ನಾಲ್ಕೆತ್ತು ತಿರುಗಿಸಲು, ಒಡೆಯಾ, ಹಲಗೆ ಒಂದು ಇಲ್ಲವಲ್ಲ,
ಯಾರೋ, ಅಂಗರ, ಬಾಕುಡ, ನಾಲ್ಕೆತ್ತು ತಿರುಗಿಸಬೇಕಲ್ಲ,
ನಾಲ್ಕೆತ್ತು ತಿರುಗಿಸಲು, ಒಡೆಯಾ, 'ಪುಡ್ಕಾಯಿ' (ಹಿಡಿಕೋಲು) ಒಂದು ಇಲ್ಲವಲ್ಲ,
ಬಿದಿರನ್ನು ಕಡಿಯಬೇಕಲ್ಲ, ಒಡೆಯಾ, 'ಪುಡ್ಕಾಯಿ' (ಹಿಡಿಕೋಲು) ಹಾಕಬೇಕಲ್ಲ,
ಹೊಲೆಯೇ ಹೊಲೆಯರೆ ಹೊಲಿ ಹೂವೆ ಹೋಯಿತು ಒಡೆಯಾ
ಯಾರೋ, ಅಂಗರ, ಬಾಕುಡ, ನಾಲ್ಕೆತ್ತು ತಿರುಗಿಸಬೇಕಲ್ಲ,
ನಾಲ್ಕೆತ್ತು ತಿರುಗಿಸಲು, ಒಡೆಯಾ, ಎತ್ತನ್ನು ತರಬೇಕಲ್ಲ,
ಬಾಳೆಯ ಹಗ್ಗದಲ್ಲಿ, ಒಡೆಯಾ, ಬಂಧಿಸಿ ತರಬೇಕಲ್ಲ,
ಜರಡಿಯಲ್ಲಿ ಜಾಳಿಸಿ ತರಬೇಕಲ್ಲ, ಒಡೆಯಾ,
ಗೆರಸೆಯಲ್ಲಿ ಹಾರಿಸಿ ತರಬೇಕಲ್ಲ, ಒಡೆಯಾ

ತೆಂಗಿನ ಹಿಡಿಸೂಡಿಯಲ್ಲಿ, ಒಡೆಯಾ, ಬೀಸಿ ತರಬೇಕಲ್ಲ,
ಗಿಡ್ಡ ಹಿಡಿಸೂಡಿಯಲ್ಲಿ, ಒಡೆಯಾ, ಗುಡಿಸಿ ತರಬೇಕಲ್ಲ,
'ನೆಡಿಲ' ಕೋಲಿನಲ್ಲಿ, ಒಡೆಯಾ, ನೆಟ್ಟು ತರಬೇಕಲ್ಲ,
ನೆಕ್ಕಿಯ ಕೋಲಿನಲ್ಲಿ, ಒಡೆಯಾ, ಹೊಡೆದು ತರಬೇಕಲ್ಲ,
ಚಿಟ್ಟೆ ಸೊಪ್ಪಿನಲ್ಲಿ, ಒಡೆಯಾ ತಿಕ್ಕಿ ತರಬೇಕಲ್ಲ,
ಹೊಲಿಯೇ ಹೊಲಿಯರೆ ಹೊಲಿ ಹೂವೆ ಹೋಯಿತು ಒಡೆಯಾ
ಹಾಗೆ ಹೇಳುವುದಾದರೆ ಬೆಳಗ್ಗಿನವರೆಗೆ ಇದೆ, ಒಡೆಯಾ
ಹೊಲಿ ಹೊಲಿಯರೆ ಹೊಲಿ ಹೂವೆ ಹೋಯಿತು ಒಡೆಯಾ

ಡಿಂಬಿಸಾಲೇ

ಡಿಂಬಿಸಾಲೇ ಡಿಂಬಿಸಾಲೇ ॥ ಪಲ್ಲವಿ ॥

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಕಿವಿಯ ಓಲೆ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಸೊಂಟದ ಪಟ್ಟಿ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಕುತ್ತಿಗೆಯ ಹಾರ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಕೈಯ ಬಳೆ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಕೈಯ ಉಂಗುರ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ತಲೆಯ ಗುಲಾಬಿ ಹೂ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಕುತ್ತಿಗೆಯ ಗೆಜ್ಜೆಟಿಕ್ ಹಾರ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಕುತ್ತಿಗೆಯ ಮಿಸಿರಿಮಾಲೆ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಕಿವಿಯ ಕೊಪ್ಪು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಕುತ್ತಿಗೆಯ ಕರಿಮಣಿಸರ ಮಾರಿ ಉಂಡಳೋ

ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ
ಡಿಂಬಿಸಾಲೆ ಮಗಳು ಅವಳು ಕುತ್ತಿಗೆಯ ಚಕ್ರ ಸರ ಮಾರಿ ಉಂಡಳೋ
ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ
ಡಿಂಬಿಸಾಲೆ ಮಗಳು ಅವಳು ಕಾಲಿನ ಕಾಲುಂಗುರ ಮಾರಿ ಉಂಡಳೋ
ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ
ಡಿಂಬಿಸಾಲೆ ಮಗಳು ಅವಳು ಕಾಲಿನ ಪೈಜಣಿಗೆ ಮಾರಿ ಉಂಡಳೋ
ಡಿಂಬಿಸಾಲೆ ಮಗಳು ಅವಳು ಏನು ಮಾರಿ ಉಂಡಳೋ

****

ಖಮ್ ಡಿಮಿಡಿಮಿ ಹೇಳಿರೋ ಎಲ್ಲವರು ಹೇಳಿರೋ
ಎಲ್ಲವರು ಹೇಳಿದರೆ ಚೆಂದಾಗಿ ಕೇಳುತದೆ
ಡಿಂಬಿಸಾಲೆ ಮಗಳು ಏನು ಮಾರ್ಕೊಂಡಳು
ಡಿಂಬಿಸಾಲೆ ಮಗಳು ಕೊಪ್ಪು ಮಾರ್ಕೊಂಡಳು
ರಾಮಣ್ಣ ಭೀಮಣ್ಣ ಒಂದೇ ತಾಯ ಮಕ್ಕಳು
ರಾಮನ ಮಗಳಿಗೆ ಕಂಚಿನ ಬಟ್ಟಲು
ಭೀಮನ ಮಗನಿಗೆ ಚಿನ್ನದ ಬಟ್ಟಲು
ಕಾಮನೋ ಭೀಮನೋ ಕಳ್ಳಬಡ್ಡಿ ಮಕ್ಕಳೋ ದಿಮ್‌ಸಾಲೇ
ಕಾಮಣ್ಣ ಭೀಮಣ್ಣ ಹೆಣ್ಣು ಕೇಂಬುಕೆ ಹೋದರೋ
ಈ ಕಾಮಣ್ಣ ಮಕ್ಕಳೋ ಮಾಕಳ್ಳಗಾರರೋ
ದಿಮ್ಸಾಲೆ ಎನ್ನಿರೋ ದಿಮ್‌ಗುಟ್ಟಿ ಕುಣಿಯಿರೋ
ಹಬ್ಬು ಬೆಳ್ದೆ ಮರುದಿನ ಎನ್ ತಿಂಬ್ರಿ ಮಕ್ಕಳೆ
ಹಿಟ್ ಮಾಡ್ದೆ ಅಕ್ಕಿನ ಕುಟ್ಕಂಡೇ ತಿನ್ನಿರೋ

ಉರಲ್

೧. ಕದಿರೆಯ ಪದವಿನಲ್ಲಿ ರಣಹದ್ದು ಹಾರುತಿದೇ
ಬ್ಯಾರೀಯ ತಲೆಗೆ ಸಿಡಿಲೂ ಹೊಡೆಯಿತೂ ಓ ಓ ಓ ಓ ವ್ವಾ ॥
೨. ಗಾಳಿಗೇ ಹೋಗುತ್ತದೆ ಗೋಳಿಯ ಗೆಲ್ಲು
ದೋಲಿಗೆ ನಲಿಯುತಿಹನು ತರುಣ ಹೊಲೆಯನು ಓ ಓ ಓ ಓ ವ್ವಾ ॥
೩. ನಮ್ಮ ಬೊಳ್ಳ (ಬಿಳಿಯ ಎತ್ತು) ಹೋಗದ ಕಂಬಳ ಇಲ್ಲ
ನಮ್ಮ ಒಡೆಯ ಹೋಗದ ಹೆಣ್ಣು ಇಲ್ಲ ಓ ಓ ಓ ಓ ವ್ವಾ ॥
೪. ನನಗೊಂದು ಭೂತವಿದೆ ಲೆಕ್ಕೇಸಿರಿ
ನಾನು ಮಾಡಿದ್ದೆಲ್ಲವೂ ಅದಕ್ಕೇ ಸರಿ ಓ ಓ ಓ ಓ ವ್ವಾ ॥
೫. ನಮ್ಮ ಒಡೆಯ ಊರಿಗಾಗುವ ಯಜಮಾನ
ಅವರಿಗೊಂದು ಕಾಣಿಕೆ ಹೊಟ್ಟು ತೆಂಗಿನಕಾಯಿ ಓ ಓ ಓ ಓ ವ್ವಾ ॥
೬. ಮರ್ಯಾದೆಗೆ ಬಲ್ಲಾಳರನ್ನು ಮದುವೆಯಾದೆನೇ
ಗಂಜಿಯ ದಪ್ಪ ತಿಳಿಗೆ ಉಪ್ಪು ಹಾಕಿ ಕುಡಿದೆನೇ ಓ ಓ ಓ ಓ ವ್ವಾ ॥

ಟ್ರುವೇಲೇ ಹಾಡು (ಅನುವಾದ : ಸಾಯಿಗೀತಾ)

ಟ್ರುವೇಲೇ ಮಗು ಮಗು ಹೊಲಿಯೇ ॥ ಪಲ್ಲವಿ ॥
ಮೇಲೆ ಒಂದು ಮಿರಿಲೋಕದಲ್ಲಿದ್ದಾರೆಯೋ
ಕೆಳಗೊಂದು ಸಿರಿ ಲೋಕದಲ್ಲಿದ್ದಾರೆಯೋ
ಈಗಲಾದರೋ ಈಶ್ವರ ಲೋಕ ಈಶ್ವರಾ
ಮೇಲಿನ ಮಿರಿ ಲೋಕದಲ್ಲಿದ್ದವರೋ
ಬೆಟ್ಟಿನಲ್ಲಿ ಸಾವಿರ ಮುಡಿ ಗದ್ದೆಯೋ ಈಶ್ವರನಿಗೆ
ಬಯಲಿನಲ್ಲಿ ನೂರು ಮುಡಿ ಗದ್ದೆಯೋ ಈಶ್ವರನಿಗೆ
ಹಾರೆ ಇಡುವ ಹಾರೆಯ ಕೋಣೆಗೆ

ಈಗ ಬೇಗ ಹೋದರೋ ಈಶ್ವರಾ
ಗದ್ದೆಯ ನೀರು ಹಾಲು ಕಟ್ಟಿಸಿದರು
ತಗ್ಗಿದ ನೀರನ್ನು ಏರಿಸಿದರು ಈಶ್ವರ
ಏರಿದ ನೀರನ್ನು ತಗ್ಗಿಸಿದರು
ಇದ್ದಾರೆ ಈಶ್ವರ ಕೇಳಿದಿರಾ
ಕೆರೆಗೆ ಹೋಗಿ ಕೈಕಾಲು ತೊಳೆದು
ಒಮ್ಮೆ ಬನ್ನಿ ಈಶ್ವರಾ
ಕೈಮುಖ ತೊಳೆಯಲು ಕೆರೆಗೆ ಹೋಗುವೆನೆಂದು
ಒಮ್ಮೆಗೆ ಹೋದರು ಲೋಕ ಈಶ್ವರ
ಕೆರೆಯೆಡೆಗೆ ಹೋಗುವಾಗ ಈಗ ಈಶ್ವರಾ
ತಾವರೆಯ ಹೂ ಅಲ್ಲಿ ಇದೆ
ಆವೊಂದು ಹೂವನ್ನು ಹಿಡಿಯಲೆಂದು
ಒಮ್ಮೆಲೆ ಹೋಗುತ್ತಾರೆ ಈಶ್ವರಾ
ಹಿಡಿಯಲು ಹೋದಾಗ ದೂರ ಹೋಗುತ್ತದೆ
ಕೊಯ್ದು ಕಿಸೆಗೆ ಹಾಕುತ್ತಾರೆ
ಇಗೊ ಕೇಳಿ ಈಶ್ವರ ಕೇಳಿದಿರೋ
ನಗುಮುಖದಿಂದ ಬಂದನೆ ಹೂವು ಅದು
ಅಲ್ಲದಿದ್ದರೆ ಬೇಗ ಬರುತ್ತಾರೋ
ಮನೆಗೆ ತಲುಪಿ ಕರೆಯುತ್ತಾರೆ
ಇಗೋ ಹೌದೇ ಪಾರ್ವತೀ
ಹಾಕಿಕೊಂಡು ಅಡಿಗೆ ಕಾಲಿಯಾಯಿತೋ
ಬಿಸಿನೀರು ಮುಗಿಯಿತೋ
ಇದೊಂದು ಹೂವನ್ನು ಮುಡಿಯಬೇಕು
ತಲೆಕೂದಲು ಕಟ್ಟಬೇಕು ಪಾರ್ವತೀ
ನಿನ್ನೊಂದು ಸೊಬಗನ್ನು ನೋಡಬೇಕು
ಆ ವೊಂದು ಹೂವನ್ನು ತೆಗೆದಳು

ಗಿಳಿಸೂವೆ ಬಾಗಿಲಲ್ಲಿ ಇಟ್ಟಳು
ಮರುದಿನದ ದಿನದಲ್ಲಿ
ಗಲ್ಲನೆ ಕಲೆಂಬಿಯಲ್ಲಿ ಹಾಕಿದಳು
ಅಂದಿನ ದಿನಮಾನ ಕಳೆಯಿತು
ಮರುದಿನದ ದಿವಸದಲ್ಲಿ
"ಮಗುವಿನ ಸ್ವರ ಎನಗೆ ಕೇಳಿಸುತ್ತಿದೆ
ಹೌದಾ ಪಾರ್ವತಿ ಕೇಳಿದೆಯಾ
ಮಕ್ಕಳು ಬಂಧುಗಳು ಇಲ್ಲದ ಅರಮನೆಯಲ್ಲಿ
ಮಗುವಿನ ಸ್ವರ ಎನಗೆ ಕೇಳಿಸುತ್ತಿದೆ"
"ಏನನ್ನು ಹೇಳುವಿರಿ ಈಶ್ವರಾ
ನಮ್ಮ ಅರಮನೆಯಲ್ಲಿ ಮಕ್ಕಳಿಲ್ಲ"
"ಮಗುವಿನ ಅಳು ಕೇಳಿಸುತ್ತಿದೆ"
ಪಾರ್ವತಿ ನಂದಾದೀಪ ಉರಿಸಿದಳು
ಒಳಸೂತ್ರಕ್ಕೆ ಹೋದಳು
"ಹೆಣ್ಣು ಮಗಳು ಉದಯಿಸಿದ್ದಾಳೆ
ಎದ್ದಿದೆ ಮಗು ಕೇಳಿದಿರಾ"
"ಹೊರಗಿನ ಸೂತ್ರಕ್ಕೆ ತಾ"
ಮಗುವಿನ ಸೊಬಗನ್ನು ನೋಡುತ್ತಾರೆ ಈಶ್ವರಾ
ಸೊಂಟಕ್ಕೆ ನೇವಳ ಎಳೆಸುತ್ತಾರೆ
ಸಣ್ಣ ಮಗಳು ದೊಡ್ಡವಳಾದಳೋ
ಹೆಣ್ಣು ಹೋಗಿ ಹೆಂಗಸಾದಳೋ
ಅಹುದೇ ತಾಯಿ ಕೇಳಿದಿರಾ
ಉಡಲು ಸೀರೆ ನನಗೆ ಬೇಕು
ಮಂಗಳೂರಿನ ಬಂದರಿಗೆ ಹೋಗುತ್ತಾರೆ
ಸೀರೆಯನ್ನು ಅಲ್ಲಿಂದ ತರುತ್ತಾರೆ
ಮತ್ತೆಯೂ ದುಃಖಿಸಿ ಅಳುತ್ತಾಳೆ ಮಗಳು

ಹಾಕಲು ರವಿಕೆ ಬೇಕೆಂದು
ರವಿಕೆಯನ್ನೂ ಕೊಂಡು ತರುತ್ತಾರೆ
ಮತ್ತೆಯೂ ದುಃಖಿಸಿ ಅಳುತ್ತಾಳೆ ಮಗಳು
ಕಿವಿಗೆ ಬೆಂಡೋಲೆ ಆಗಬೇಕೆಂದು
ಮಂಗಳೂರ ಪೇಟೆಗೆ ಹೋಗಿ
ಒಂದು ತೂಕ ಚಿನ್ನ ತೂಗಿಸುತ್ತಾರೆ
ಕೃಷ್ಣಯ್ಯ ಆಚಾರಿಯಲ್ಲಿ ಕೊಡುತ್ತಾರೆ
ಒಂದನೇ ಬಿಸಿಗೆ ಎರಡನೇ ಹೊಡೆತಕ್ಕೆ
ಕಿವಿಗೆ ಬೆಂಡೋಲೆ ಮಾಡಬೇಕೆಂದು
ಮತ್ತೆಯೂ ದುಃಖಿಸಿ ಅಳುತ್ತಾಳೆ ಮಗಳು
ಮೂಗಿಗೆ ಟಿಕ್ಕಿ ಆಗಬೇಕೆಂದು
ಮಂಗಳೂರ ಪೇಟೆಗೆ ಹೋಗಿ
ಒಂದು ತೂಕ ಚಿನ್ನ ತೂಗಿಸುತ್ತಾರೆ
ಕೃಷ್ಣಯ್ಯ ಆಚಾರಿಯಲ್ಲಿ ಕೊಡುತ್ತಾರೆ
ಒಂದನೇ ಬಿಸಿಗೆ ಎರಡನೇ ಹೊಡೆತಕ್ಕೆ
ಮೂಗಿಗೆ ಟಿಕ್ಕಿ ಮಾಡಬೇಕೆಂದು
ಮತ್ತೆಯೂ ದುಃಖಿಸಿ ಅಳುತ್ತಾಳೆ ಮಗಳು
ಕುತ್ತಿಗೆಗೆ ಹಾರ ಆಗಬೇಕೆಂದು
ಮಂಗಳೂರ ಪೇಟೆಗೆ ಹೋಗಿ
ಒಂದು ತೂಕ ಚಿನ್ನ ತೂಗಿಸುತ್ತಾರೆ
ಕೃಷ್ಣಯ್ಯ ಆಚಾರಿಯಲ್ಲಿ ಕೊಡುತ್ತಾರೆ
ಒಂದನೇ ಬಿಸಿಗೆ ಎರಡನೇ ಹೊಡೆತಕ್ಕೆ
ಕುತ್ತಿಗೆಗೆ ಹಾರ ಮಾಡಬೇಕೆಂದು
ಮತ್ತೆಯೂ ದುಃಖಿಸಿ ಅಳುತ್ತಾಳೆ ಮಗಳು
ಕಂಚು ಮಿಂಚಿನ ಕಲಶ ಕನ್ನಡಿ
ಗಂಗೆ ತಾಗಿದ ಗುಮರೆ ಹುಟ್ಟಿದ ಮಗು

ಎಲ್ಲಿ ಅಂದರೆ ಒಳಗಿನ ಸೂತ್ರದಲ್ಲಿ ಹೊರಗಿನ ಪಾತ್ರದಲ್ಲಿ
ಎಣ್ಣೆ ಓಲೆಯಲ್ಲಿ ಎಸಳು ಬುಗುಡಿಯಲ್ಲಿ
ಕಲ್ಲುಳ್ಳ ಕೊಪ್ಪಿನಲ್ಲಿ ಮುಳ್ಳುಳ್ಳ ಬಾಲೆ ಸರದಲ್ಲಿ
ಮೂರು ಕೈಯ ಕೊಪ್ಪರಿಗೆಯಲ್ಲಿ ಬಿಸಿನೀರು ಕಾಯಿತು ಮಗಾ
ನಾಲ್ಕು ಕೈಯ ಕೊಪ್ಪರಿಗೆಯಲ್ಲಿ ಪುರುಗು ಮಾಸಿತು ಮಗಾ
ಮಕ್ಕಳು ಎಲ್ಲರೂ ಪರಮೇಶ್ವರ ದೇವಸ್ಥಾನಕ್ಕೆ
ಹರಕೆ ಹಾಕಲು ಹೋಗಿದ್ದಾರೆ ಮಗಾ
ಮಗುವೇ ನಾವೂ ಹೋಗುವ ಜೋ ಜೋ॥ಪಲ್ಲವಿ॥

ಗೋವಿಂದ ಬದನೆ

ಗೋವಿಂದ ಬದನೆ ॥ ಪಲ್ಲವಿ ॥
ಗೋವಿಂದ ಬದನೇ
ಬದನೆ ಎಲ್ಲಿದೆಯೇ
ಮಂಗಳೂರ ಪೇಟೆಯಲ್ಲಿ ಬದನೆ ಅಲ್ಲವೇ
ಅಷ್ಟು ಹೊತ್ತಿಗೆ ಹೇಳುತ್ತಾರೆ
ಜನಗಳನ್ನು ಮತ್ತೆ ಕರೆದರೋ
ಮಂಗಳೂರ ಪೇಟೆಯ ಬಾಯಿ (ಕ್ರಿಶ್ಚಿಯನ್ ಹೆಂಗಸು) ಅಲ್ಲವೇ
ಬದನೆ ಸಾಲು ತೆಗೆಸಬೇಕೆಂದು
ಬದನೆ ಸಾಲು ತೆಗೆಸಿದರೋ
ಬದನೆ ಸಾಲನ್ನು ಸುಡಿಸಿದರು
ಬದನೆ ಸಾಲನ್ನು ಸುಡಿಸಿ
ಬದನೆ ಬೀಜ ಹಾಕಿದರೊ
ಮರುದಿನ ಅಲ್ಲಿಗೆ ಹೋಗುವಾಗ
ಎರಡು ಎಲೆ ಎದ್ದಿತ್ತು
ಇಷ್ಟು ಇನ್ನು ಆಗುವಾಗ
ಅದಕ್ಕೆ ಗೊಬ್ಬರ ಹಾಕಿದರೊ
ಮಂಗಳೂರ ಪೇಟೆಯ ಬಾಯಿ
ಮರುದಿನ ಅಲ್ಲಿಗೆ ಹೋಗುವಾಗ
ಬದನೆ ಗಿಡ ಎದ್ದಿತ್ತು
ಬದನೆ ಹಿತ್ತಲು ಆಗಿತ್ತು
ಇದು ಒಂದು ಬದನೆ ಕೊಯ್ಯಬೇಕೆಂದು
ಬುಟ್ಟಿ ಈಗ ಕೊಂಡೊಯ್ದು

(ಅನುವಾದ : ಸಾಯಿಗೀತಾ)

ಬದನೆ ಕೊಯ್ದು ಬುಟ್ಟಿಗೆ ಹಾಕಿದರೋ
ಮತ್ತೆ ಬೇಗ ಹೊರಟರೋ
ತಲೆ ಬಾಚಿ ಕಟ್ಟಿದರೋ
ಬುಟ್ಟಿಯ ಅಡಿಗೆ ಬೇಗನೆ
ಬೆನ್ನು ಮತ್ತೆ ಮಾಡಿದರೋ
ಬದನೆ ಬುಟ್ಟಿ ತಲೆಗಿಟ್ಟರೋ
ಅಲ್ಲಿಂದ ಮತ್ತೆ ಹೊರಟರೋ
ಅಲ್ಲಿಂದ ಇನ್ನು ಹೊರಟರೋ
ಇನ್ನು ಎಲ್ಲಿ ಬರುವುದು
ಮಂಗಳೂರ ಪೇಟೆಗೆ
ಮತ್ತೆ ಎಲ್ಲಿ ಬಂದುದು
ವಿಟ್ಲ ಪೇಟೆಗೆ ಬಂದರೊ
ಅಲ್ಲಿನ ಬ್ರಾಹ್ಮಣರು ಕೇಳಿದರು
ಬುಟ್ಟಿಯಲ್ಲೇನು ಬಾಯಿಯೇ
ಬುಟ್ಟಿಯಲ್ಲಿ ಬದನೆ ಅಣ್ಣನವರೆ
ಬದನೆ ಮತ್ತೆ ಮಾರುವಂತದೋ
ಬೇಗನೇ ಕೇಳಿದರೋ
ಬದನೆ ಮಾರುವಂಥದು ಎಂದಳು
ದುಡ್ಡಿಗೆ ಎಷ್ಟು ಬದನೆ
ದುಡ್ಡಿಗೆ ಎರಡು ಬದನೆ
ಆ ಬಾಯಿ ಹೇಳಿದರು
ಕೊಡುವುದನ್ನು ಇನ್ನು ಕೊಡು
ಅಲ್ಲಿ ತಲೆಗೆ ಇಟ್ಟುಕೊಂಡಳು
ಎಲ್ಲಿಗೆ ಇನ್ನು ಬರುವುದು
ಎಲ್ಲಿಗೆ ಈಗ ಹೋಗುವುದು
ಅಡ್ಯನಡ್ಕದ ಪೇಟೆಗೆ
ಅಲ್ಲಿ ಒಂದು ಕೇಳಿದರು
ಬುಟ್ಟಿಯಲ್ಲಿ ಏನು ಬಾಯಮ್ಮ

ಬುಟ್ಟಿಯಲ್ಲಿ ಬದನೆ ಮಾರುವಂಥದು
ಹೌದೇ ಇನ್ನು ಎಂದು
ದುಡ್ಡಿಗೆಷ್ಟು ಬದನೆ ಎಂದರೆ
ದುಡ್ಡಿಗೆ ಮೂರು ಬದನೆಯೆಂದರು
ಅಲ್ಲಿಂದ ಹೊರಟರು
ಅಲ್ಲಿಂದ ಎಲ್ಲಿಗೆ ಬರುವುದು
ಅಲ್ಲಿಂದ ಬರುವಾಗ
ಹೋಗುವುದೆಲ್ಲಿಗೆ ಎಂದರು
ಇನ್ನು ಬರುತ್ತಿದ್ದಾರೆ
ಪೇಟೆಗೆ ಹೋಗುತ್ತಿದ್ದಾರೆ
ಬದನೆ ಬಾಯಿ ಹೋಗುತ್ತಿದ್ದಾರೆ
ಅಲ್ಲಿ ಇನ್ನು ಕೇಳಿದರು
ಬದನೆಯನ್ನು ಕೊಡುವಿರಾ
ಕೊಡಲು ಕೊಡಬಹುದೇ
ಅಲ್ಲಿಂದ ಹೊರಟರು
ಎಲ್ಲಿಗೆ ಹೋಗುವುದು
ಅಜ್ಜಿನಡ್ಕಕ್ಕೆ ತಲುಪಿದರು
ಎಲ್ಲಿ ಮತ್ತೆ ಹೋಗುತ್ತಾರೆ
ನಡುಚ್ಚಾರಿನ ಬ್ರಾಹ್ಮಣನಲ್ಲಿಗೆ
ಕುಪ್ಪುಳು ಚಾರೆಗೆ ತಲುಪುವಾಗ
ಅಲ್ಲಿಯ ಬ್ರಾಹ್ಮಣ ಕೇಳಿದರು
ಏನು ಬಾಯಿ ಎಂದರು
ಇದು ಬದನೆ ಅಣ್ಣನವರೇ ಎಂದರು
ಬದನೆ ಕೊಡುತ್ತೀರಾ
ಕೊಡಬಹುದು ಅಣ್ಣನವರೇ
ನಮಗೆ ಬೇಕು ಎಂದು
ನಡುಚ್ಚಾರ ಬ್ರಾಹ್ಮಣ ಹೇಳಿದರು
ಗೋವಿಂದ ಬದನೇ॥

ಓ ಬೇಲೆ*

ಓ ಎಲ್ಲರೂ ಹೇಳಿ ಓ ಬೇಲೆ
ಓ ನಮ್ಮ ಒಡೆಯರು
ಓ ನೇಜಿ ಹಾಕಿಸಿದರು
ಓ ನಮ್ಮಲ್ಲಿ ಹೇಳ್ವರು
ಓ ನೇಜಿ ತೆಗೆಯಲು (ಕೀಳಲು)
ಓ ಬಿಚ್ಚಿದ ಸೀರೆಯ
ಕೊಡವುತ ಧರಿಪರು
ಕೈಮೋರೆ ತೊಳೆಯರು
ತುಳಸಿಗೆ ಕೈಮುಗಿದು
ತೀರ್ಥವ ಕುಡಿವರು
ಮಡಕೆಯ ತಂಗಳು
ಮಡಕೆಯುಪ್ಪಿನಕಾಯಿ
ಪಾತ್ರೆಯ ತುಪ್ಪವ
ಹಾಕುತ್ತ ಉಣುವರು ॥
ಓ ತಲೆಯ ಬಾಚುವರು
ಹೂವನ್ನು ಮುಡಿವರು
ಕಣ್ಣಿಗೆ ಕಾಡಿಗೆ
ಹಣೆಗೆ ತಿಲಕವಿಟ್ಟು
ಕಣ್ಣಿಯ ಮುಟ್ಟಾಳೆ

---

* ಟಿ. ಕೇಶವ ಭಟ್ಟ, ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು, ಕನ್ನಡ ಸಾಹಿತ್ಯ ಪರಿಷತ್ತು ೧೯೯೬

ತಲೆಗೊಳ್ಳೆ ಗೊರಬೆಯ
ಹಾಕುತ್ತ ಬರುವರು
ಹನೆಗರಿಯ ಕೊಡೆಯನ್ನು
ಹಿಡಿಯುತ ಬರುವರು
ಓ ನಮ್ಮ ಒಡೆಯರು
ಗದ್ದೆಗೆ ಹೋದಾಗ
ಹೆಣ್ಣೊಳು ಕೋಪವು
ಮನೆಯತ್ತ ಬಂದಾಗ
ಮಡದಿಯೊಳ್ ಕೋಪ
ಓ ಕೋಪಿಸಿ ಕೋಪಿಸಿ
ಓ ಮಡದಿಗೆ ಬಸಿರಾಯ್ತು॥
ಓ ಚೊಚ್ಚಿಲ ಕುವರನು
ಹುಟ್ಟಲು ತಂದೆಗೆ
ತಂದೆಗೆ ಆಧಾರ
ಹಾರೆಯ ಹಿಡಿವನು
ಗೇಯತ್ತ ಇರುವನು
ಓ ಚೊಚ್ಚಿಲ ಕುವರಿಯು
ಹುಟ್ಟಲು ತಾಯಿಗೆ
ನೆರವಪ್ಪಳಾಕೆಯು
ಪ್ರಾತಃಕಾಲದಲ್ಲಿ
ಏಳ್ವಳು ಮಗಳು
ಒಲೆಯಿಂದ ಬೂದಿಯು
ತೆಗೆವಳು ಮಗಳು.
ಈ ಹಿರಿಯರಮನೆ ಯಾವುದಕ್ಕೆ?
ಈ ಹಿರಿಬೀಡು ಇನ್ನೇತಕಿದು?
ಮಕ್ಕಳಿಲ್ಲದುದರಮನೆಯೆ ಅಲ್ಲ

ಮುದುಕರಿಲ್ಲದೆಯಿರೆ ಬೀಡೇ ಅಲ್ಲ.
ಹಾರುವ ಕಾಗೆಗೆ ಮರಿಗಳಿವೆ
ಹರಿಯುವ ಇರುವೆಗೆ ಮರಿಗಳಿವೆ
ಹಾರುವ ಹಾತೆಗೆ ಮರಿಗಳಿವೆ
ನಮಗೂ ಮಕ್ಕಳು ಇಲ್ಲದಿರೆ?
ಗೂಡಿನ ಗುಬ್ಬಿಗೆ ಮರಿಗಳಿವೆ.
ಬಿಳಿದಾದ ಕುದುರೆಯ ಮೇಲೇರುತ
ಬಿಳಿದಾದ ಕೊಡೆಯನ್ನು ಹಿಡಿದುಕೊಂಡು
ಮೇಲೂರ ಬೋಳುಗುಡ್ಡವ ಹತ್ತುತ
ಎಡದ ದಾರಿಯ ಬಿಟ್ಟು ಮುಂಬರಿದು
ಬಲದ ದಾರಿಯ ಬಿಟ್ಟು ಮುಂಬರಿದು
ನಡುವಣ ಹೆದ್ದಾರಿಯಲಿ ನಡೆದು
ಯಾರೇ ಅಕ್ಕಂದಿರಾ ಕೇಳಿದಿರೇ
ನಮ್ಮ ಬೀಡಿಗೆ ನಂಟರು ಬಂದರು

* * * *

ಬಾಲೆ ಜಕ್ಕಮ್ಮ*

ಮುಂಜಾನೆ ಎದ್ದಳು ಮಗಳು ಬಾಲೆ ಜಕ್ಕಮ್ಮ
ಇಡೀ ಸೀರೆಯನ್ನು ಕೊಡಹಿ ಉಟ್ಟುಕೊಂಡಳು ಬಾಲೆ ಜಕ್ಕಮ್ಮ
ಕಿಂಡಿಯಲ್ಲಿ ಕೈ ಹಾಕಿ ಗಿಂಡೆ ತೆಗೆದುಕೊಂಡಳು ಬಾಲೆ ಜಕ್ಕಮ್ಮ
ಗಿಂಡೆಯಲ್ಲಿ ನೀರು ತೆಗೆದುಕೊಂಡಳು ಬಾಲೆ ಜಕ್ಕಮ್ಮ
ತನ್ನೊಂದು ಸಿರಿಮೋರೆ ತೊಳೆದುಕೊಂಡಳು ಬಾಲೆ ಜಕ್ಕಮ್ಮ
ಒಳಗಿನ ಸೂತ್ರಕ್ಕೆ ಹೋದಳು ಬಾಲೆ ಜಕ್ಕಮ್ಮ
ಬೂದಿಯ ಪಾತ್ರೆ ತೆಗೆದುಕೊಂಡಳು ಬಾಲೆ ಜಕ್ಕಮ್ಮ
ಎಡದ ಕೈಯಲ್ಲಿ ಚೆಂಬಿನ ಕೊಡ ತೆಗೆದುಕೊಂಡಳು ಬಾಲೆ ಜಕ್ಕಮ್ಮ
ಬಲದ ಕೈಯಲ್ಲಿ ಬೂದಿಯ ಪಾತ್ರೆ ಹಿಡಿದುಕೊಂಡಳು ಬಾಲೆ ಜಕ್ಕಮ್ಮ
ಕೆತ್ತಿ ಕಟ್ಟಿದ ಕೆರೆಯ ಹತ್ತಿರ ಹೋದಳು ಬಾಲೆ ಜಕ್ಕಮ್ಮ
ಒಂದು 'ತೋಟೆ' ನೀರು ತೆಗೆದಳು ಬಾಲೆ ಜಕ್ಕಮ್ಮ
ಬೂದಿಯನ್ನು ಕೊಂಡುಹೋಗಿ ಗೆಂದಾಳಿ ತೆಂಗಿನಮರದ ಬುಡಕ್ಕೆ ಹಾಕಿದಳು
ಬಾಲೆ ಜಕ್ಕಮ್ಮ
ಒಂದು 'ತೋಟೆ' ನೀರು ತೆಗೆದಳು ಬಾಲೆ ಜಕ್ಕಮ್ಮ
ಬೂದಿಯ ಪಾತ್ರೆ ತೊಳೆದು ಚೆಲ್ಲಿದಳು ಬಾಲೆ ಜಕ್ಕಮ್ಮ
ಮತ್ತೊಂದು ತೋಟೆ ನೀರು ತೆಗೆದಳು ಬಾಲೆ ಜಕ್ಕಮ್ಮ
ಬೆಳ್ಳಿಯ ಕೊಡವನ್ನು ಕೆಂಪನೆ ಹೊಳಪಿಸಿದಳು ಬಾಲೆ ಜಕ್ಕಮ್ಮ
ಕೊಡವನ್ನು ಕೆಂಪನೆ ಹೊಳಪಿಸಿದಳು ಬಾಲೆ ಜಕ್ಕಮ್ಮ
ಮತ್ತೊಂದು ತೋಟೆ ನೀರು ತೆಗೆದಳು ಬಾಲೆ ಜಕ್ಕಮ್ಮ
ಚೆಂಬಿನ ಕೊಡಕ್ಕೆ ತುಂಬಿಸಿದಳು ಬಾಲೆ ಜಕ್ಕಮ್ಮ
ಅರಮನೆಗೆ ತೆಗೆದುಕೊಂಡು ಬಂದಳು ಬಾಲೆ ಜಕ್ಕಮ್ಮ
ನೀರನ್ನು ತೆಗೆದುಕೊಂಡು ಒಳಗಿನ ಸೂತ್ರಕ್ಕೆ ಹೋದಳು ಬಾಲೆ ಜಕ್ಕಮ್ಮ
ಒಳಗಿನ ಸೂತ್ರದಲ್ಲಿ ನೀರಿಡುವ ಹಲಗೆಯಲ್ಲಿ ನೀರನ್ನು ಇಟ್ಟಳು
ನೀರಿಡುವ ಹಲಗೆಯಲ್ಲಿ ನೀರು ಇಟ್ಟಳು ಬಾಲೆ ಜಕ್ಕಮ್ಮ
ಕೆಳಗೆ ನಂದಾದೀಪ ಹೊತ್ತಿಸಿದಳು ಬಾಲೆ ಜಕ್ಕಮ್ಮ

---

* ರೂಪಕಲಾ ಆಳ್ವ, 'ನಾಟಿ', ಸಂದೇಶ ಪ್ರಕಾಶನ, ಮಂಗಳೂರು, ೧೯೯೨

ಮೇಲೆ ನೀರು ಇಟ್ಟಳು ಬಾಲೆ ಜಕ್ಕಮ್ಮು
ಮೇಲೆ ನೀರು ಇಟ್ಟಳು ಮಗಳು ಬಾಲೆ ಜಕ್ಕಮ್ಮು
ಅಟ್ಟಕ್ಕೆ ಸಣ್ಣ ಏಣಿ ಇಟ್ಟಳು ಬಾಲೆ ಜಕ್ಕಮ್ಮು
ತುದಿಭತ್ತದ ಅಕ್ಕಿಯನ್ನು ಎಳೆದಳು ಬಾಲೆ ಜಕ್ಕಮ್ಮು
ಕುಟ್ಟಿ ಗೇರಿ 'ಹೊದಳಿನಂತ ಅಕ್ಕಿ' ಮಾಡಿದಳು ಬಾಲೆ ಜಕ್ಕಮ್ಮು
ನೀರಲ್ಲಿ ಕಲಗಚ್ಚು ತೆಗೆದಳು ಬಾಲೆ ಜಕ್ಕಮ್ಮು
ಹಾಲಲ್ಲಿ ಒಲೆಗೆ ಇಟ್ಟಳು ಬಾಲೆ ಜಕ್ಕಮ್ಮು
ಮೇಲೆ ಮುಚ್ಚಳ ಮುಚ್ಚಿದಳು ಬಾಲೆ ಜಕ್ಕಮ್ಮು
'ಮಡ್ಡಿ'ಯ ಮರಿಗೆ ತೆಗೆದುಕೊಂಡಳು ಬಾಲೆ ಜಕ್ಕಮ್ಮು
ಹಟ್ಟಿಗೆ ಹೋದಳು ಬಾಲೆ ಜಕ್ಕಮ್ಮು
ಕೆಳಗಿನ ನೆಲ ತೊಳೆದಳು ಬಾಲೆ ಜಕ್ಕಮ್ಮು
ಮೇಲಿನ ಬಾಗಿಲನ್ನು ತೆರೆದಳು ಬಾಲೆ ಜಕ್ಕಮ್ಮು
ಕಪಿಲೆ ದನವನ್ನು ಕತ್ತಲೆ ಕೋಣೆಯಿಂದ ಕರೆದಳು ಬಾಲೆ ಜಕ್ಕಮ್ಮು
ಮರಿಗೆಯ ಮಡ್ಡಿಯನ್ನು ಇಟ್ಟುಳು ಬಾಲೆ ಜಕ್ಕಮ್ಮು
ಎಡದ ಕೈಯಲ್ಲಿ ಅಂಡೆ ಹಿಡಿದುಕೊಂಡಳು ಬಾಲೆ ಜಕ್ಕಮ್ಮು
ಬಲದ ಕೈಯಲ್ಲಿ ಗಿಂಡೆ ತೆಗೆದುಕೊಂಡಳು ಬಾಲೆ ಜಕ್ಕಮ್ಮು
ಮುದ್ದು ಕರುಗಳನ್ನು ಉದ್ಯ-ಉದ್ಯ ಹೇಳಿದಳು ಬಾಲೆ ಜಕ್ಕಮ್ಮು
ಬಾಲೆ ಕರುಗಳನ್ನು ಎಳೆದು ಕಟ್ಟಿ ಹಾಲು ಕರೆದಳು ಬಾಲೆ ಜಕ್ಕಮ್ಮು
ಮುದ್ದು ಕರುಗಳನ್ನು ಎಳೆದು ಕಟ್ಟಿ ಹಾಲು ಕರೆದಳು ಬಾಲೆ ಜಕ್ಕಮ್ಮು
ಅಂಡೆಯಲ್ಲಿ ಗಿಂಡೆಯಲ್ಲಿ ಹಾಲು ತೆಗೆದುಕೊಂಡಳು ಬಾಲೆ ಜಕ್ಕಮ್ಮು
ಅರಮನೆಗೆ ಹಾಲನ್ನು ತಂದಳು ಬಾಲೆ ಜಕ್ಕಮ್ಮು
ಮೇಲೆ ಮುಚ್ಚಳ ಹಾಕಿದಳು ಬಾಲೆ ಜಕ್ಕಮ್ಮು
ಹಾಲನ್ನು ಒಲೆಗೆ ಇಟ್ಟಳವಳು ಬಾಲೆ ಜಕ್ಕಮ್ಮು
ಅಡಿಗೆ-ಆರೋಗಣೆ ಆಗುವುದವಳಿಗೆ ಬಾಲೆ ಜಕ್ಕಮ್ಮುವಿಗೆ
ಪಲ್ಯ ಜೋಡಣೆ ಜೋಡಿಸಿದಳು ಬಾಲೆ ಜಕ್ಕಮ್ಮು
ಸಾವಿರ ಬಗೆ ಪಲ್ಯ ಜೋಡಿಸಿದಳು ಬಾಲೆ ಜಕ್ಕಮ್ಮು
ಉಪ್ಪಿನಕಾಯಿ 'ಅಡ್‌ಂಗಾಯಿ' ಹಾಕಿದಳು ಬಾಲೆ ಜಕ್ಕಮ್ಮು
ಉಪ್ಪಿನಕಾಯಿ ಅಡ್‌ಂಗಾಯಿ ಜೋಡಿಸಿದಳು ಬಾಲೆ ಜಕ್ಕಮ್ಮು
ಚಿನ್ನದ ಚೂರಿ ತೆಗೆದುಕೊಂಡಳು ಬಾಲೆ ಜಕ್ಕಮ್ಮು
ಕತ್ತಿ ತೆಗೆದುಕೊಂಡು ಚಿಗುರುಹುಲ್ಲು ಹರೆದಳು ಬಾಲೆ ಜಕ್ಕಮ್ಮು
ಚಿಗುರುಹುಲ್ಲು ತೆಗೆದುಕೊಂಡು ಬಂದಳು ಬಾಲೆ ಜಕ್ಕಮ್ಮು
ಕರುಗಳಿಗೆ ಹುಲ್ಲು ಹಾಕಿದಳು ಬಾಲೆ ಜಕ್ಕಮ್ಮು
ಎಲ್ಲಿರಿರುವಿರಮ್ಮ ನೀವು ಕೇಳಿದಿರಾ ಅಮ್ಮಾ ಕೇಳಿದಿರಾ

ಕೊಡುವಿರಾ ನೀವೊಮ್ಮೆ ಅನ್ನವನ್ನು ಅಮ್ಮ
ನನಗೊಮ್ಮೆ ನೀವೊಮ್ಮೆ ಅನ್ನವನ್ನು ಅಮ್ಮ
ನನಗೊಮ್ಮೆ ತಂಗಳನ್ನ ಬಡಿಸಿರಮ್ಮ ನೀವು ಕೇಳಿದಿರಾ
ನಾನು ಕರುಗಳನ್ನು ಮೇಯಿಸಲು ಹೋಗುವೆನೆಂದು ತಾಯಿಯಲ್ಲಿ ಹೇಳಿದಳು
ಒಮ್ಮೆಗೆ ಸುಮ್ಮನಿದ್ದರು ಎರಡನೇ ಸಲ ಹೇಳಿದರು
ಯಾತಕೆ ಮಗಳೆ ನೀನು ಕರೆದೀಯಾ ನೀ ಬಾಲೆ ಜಕ್ಕಮ್ಮು ಎಂದು
ಬೇಗನೆ ಕೇಳಿದರು ತಾಯಿ
ದಢಕ್ಕನೆ ಎದ್ದರು ಕೊಡಹಿ ಕುಳಿತರು ತಾಯಿ
ಯಾತಕೆ ನೀನು ಕರೆದುದು ಮಗ ಬಾಲೆ ಜಕ್ಕಮ್ಮು
ಹೌದಾ ಅಮ್ಮ, ಹೌದಾ ಅಮ್ಮ ನೀವಾದರೂ ಕೇಳಲಿಲ್ಲವೋ
ಒಂದು ತಾಯಿಗೆ ಎಷ್ಟು ಜನ ಮಕ್ಕಳು ನಾವು ಅಮ್ಮ
ಯಾತಕೆ ಕೇಳಿದಿ ಮಗ ಯಾತಕೆ ಕೇಳಿದಿ ನೀನು ಬಾಲೆ ಜಕ್ಕಮ್ಮು
ಎಷ್ಟು ಜನ ಮಕ್ಕಳೆಂದು ಹೇಳಬೇಕು ಅಮ್ಮ
ಒಂದು ತಾಯಿಗೆ ನಾಲ್ಕು ಜನ ಮಕ್ಕಳು ಮಗಳೆ ಬಾಲೆ ಜಕ್ಕಮ್ಮು
ಬಾಯಿಯ ಹಲ್ಲನ್ನು ತೆಗೆಯದ ಮಗುವನ್ನು, ಮಗಳೆ ಕೇಳಿದಿಯೊ
ನಿನ್ನಯ ಅಕ್ಕನನ್ನು ಕೊಟ್ಟಿದೆ ಮಗಳೆ ಬಾಲೆ ಜಕ್ಕಮ್ಮು
ಬಾಯಿಯ ಹಲ್ಲು ತೆಗೆಯದ ಮಗಳನ್ನು ದೇವಸಿರಿ ಮಗುವನ್ನು
ಉಡುವ ಸೀರೆಯನ್ನು ಉಡಲು ತಿಳಿಯದ ಮಗಳವಳು ದೇವಸಿರಿ ಬಾಲೆಯು
ದೆಬ್ಬೆಲಿ ಬೀಡಿನ ಬಲ್ಲಾಳನಿಗೆ ಕೊಟ್ಟಿದೆ ಅವಳನ್ನು
ನನ್ನ ಅಕ್ಕನನ್ನು ನೋಡಲು ನನಗೆ ಕಣ್ಣು ಬಯಸುತ್ತಿದೆ
ಅಕ್ಕನಲಿ ಮಾತನಾಡಲು ಬಾಯಿ ಚಡಪಡಿಸುತ್ತಿದ್ದೆ ಅಕ್ಕನಿಗೆ ಹೇಗಾಗಬಹುದು?
ನನ್ನಯ ಅಕ್ಕನನು ನೋಡದೆ ನನಗೆ ಸಾಧ್ಯವೇ ಇಲ್ಲ
ಅಕ್ಕನನ್ನು ನೋಡದೆ ನೆಲೆಯಿಲ್ಲ ಅಕ್ಕನಿಗೆ ಹೇಗಾಗಬಹುದು?
ನನ್ನಲ್ಲಿ ಹಠ ಹಿಡಿಯಬೇಡ ಮಗಳೆ ಬಾಲೆ ಜಕ್ಕಮ್ಮು
ನಿನ್ನ ಅಣ್ಣನವರು ಕಂಚಿನಡ್ಕ, ಮಿಂಚಿನ ಪದವಿಗೆ ಹೋಗಿದ್ದಾರೆ
ಅವರಲ್ಲಿ ಹೋಗಿ ಕೇಳಿ ಬಾ ಮಗಳೆ ಬಾಲೆ ಜಕ್ಕಮ್ಮು
ನನ್ನ ಅಕ್ಕನನ್ನು ನೋಡದೆ ಸಾಧ್ಯವಿಲ್ಲ
ಕಣ್ಣು ಹುಡುಕುತ್ತಿದೆ ಅಕ್ಕನನ್ನು ಹಿಡಿಯಲು ಕೈ ತುಡಿಯುತ್ತಿದೆ
ನಿನ್ನ ಅಣ್ಣನವರಲ್ಲಿ ಹೋಗಿ ಹೇಳು ಮಗಳೆ ಬಾಲೆ ಜಕ್ಕಮ್ಮು
ಅಷ್ಟು ಮಾತು ಕೇಳಿದಳು ಮಗಳು ಬಾಲೆ ಜಕ್ಕಮ್ಮು
'ಕದಳಿ'ಯ ತಂಗಳನ್ನ ಕುಡಿಕೆಯ ಮೊಸರು ಬಡಿಸಿದರು ತಾಯಿ
ಕುಪ್ಪಿಯ ಉಪ್ಪಿನಕಾಯಿ ಬಡಿಸಿ ಅಮ್ಮಾ
ಒಂದು ಸಲದ ಅನ್ನ-ಪಲ್ಯ ತನ್ನಿ ಅಮ್ಮಾ

ಅಷ್ಟು ಮಾತು ಕೇಳಿದರವರು ತಾಯಿ
'ಕದಳಿ'ಯ ತಂಗಳನ್ನ ಬಡಿಸಿದರವರು ತಾಯಿ
'ಕುಡಿಕೆ'ಯ ಮೊಸರು ಬಡಿಸಿದರು ತಾಯಿ
ಗಡದ್ದಿನ ಊಟ ಮಾಡಿಕೊಂಡಳು ಬಾಲೆ ಜಕ್ಕಮ್ಮ
ಗಡದ್ದಿನ ಊಟ ಮಾಡಿಕೊಂಡಳು ಬಾಲೆ ಜಕ್ಕಮ್ಮ
ಒಂದು ಸಲದ ಉಡುಪು (ದುತ್ತು) ಕೊಂಡುಹೋಗಿ ಕೊಟ್ಟರು ತಾಯಿ
ಒಂದು ಸಲದ ಉಡುಪು ಕೊಂಡುಹೋಗಿ ಕೊಟ್ಟರು ತಾಯಿ
ಒಂದು ಸಲದ ಉಡುಪು ತೆಗೆದುಕೊಂಡಳು ಮಗಳು ಬಾಲೆ ಜಕ್ಕಮ್ಮ
ಕಂಚಿನಡ್ಕಕ್ಕೆ ಮಿಂಚಿನ ಪದವಿಗೆ ಬೇಗನೆ ಹೊರಟಳು
ಓಡಿಕೊಂಡು ಬಿದ್ದುಕೊಂಡು ಹೋಗುವಳವಳು ಬಾಲೆ ಜಕ್ಕಮ್ಮ
ಪಂತಿನಡ್ಕದಲ್ಲಿ ಮೆಂಚು ಕೋದುಕೊಳ್ಳುತ್ತಾ ಇದ್ದಾರೆ
ಇಬ್ಬರು ಅಣ್ಣಂದಿರು ನೋಡಿದರು ಬಾಲೆ ಜಕ್ಕಮ್ಮನನ್ನು
ಓಡಿಕೊಂಡು ಬಿದ್ದುಕೊಂಡು ಕಾಲು ಸವೆಸಿಕೊಂಡು ಬೇಗನೆ ಬಂದಳು
ಯಾತಕೆ ಮಗಳೆ ನೀನು ಬಂದುದು ಮಗಳೆ ಬಾಲೆ ಜಕ್ಕಮ್ಮ
ನಾವು ಒಬ್ಬ ತಾಯಿಗೆ ಎಷ್ಟು ಜನ ಮಕ್ಕಳು ಅಣ್ಣನವರೆ
ಒಬ್ಬ ತಾಯಿಗೆ ಎಷ್ಟು ಜನ ಮಕ್ಕಳು ಅಣ್ಣನವರೆ
ಒಬ್ಬ ತಾಯಿಗೆ ನಾಲ್ಕು ಜನ ಮಕ್ಕಳು ಮಗಳೆ ಬಾಲೆ ಜಕ್ಕಮ್ಮ
ಒಬ್ಬ ತಾಯಿಗೆ ನಾಲ್ಕು ಜನ ಮಕ್ಕಳು ಮಗಳೆ ಬಾಲೆ ಜಕ್ಕಮ್ಮ
ಏತಕೆ ಕೇಳಿದಿ ಮಗಳೆ ಏತಕೆ ಕೇಳಿದಿ ಬಾಲೆ ಜಕ್ಕಮ್ಮ
ನಮ್ಮಯ ಅಕ್ಕನನು ಎಲ್ಲಿಗೆ ಕೊಟ್ಟಿಹುದು ಅಣ್ಣನವರೆ
ನಮ್ಮಯ ಅಕ್ಕನನು ಎಲ್ಲಿಗೆ ಕೊಟ್ಟಿಹುದು ಅಣ್ಣನವರೆ
ದೆಬ್ಬೆಲಿ ಬೀಡಿನ ಬಲ್ಲಾಲರಿಗೆ ಮಗಳೆ ಬಾಲೆ ಜಕ್ಕಮ್ಮ
ನಿನ್ನಯ ಅಕ್ಕನನ್ನು ನಮ್ಮ ತಂಗಿಯನ್ನು ಕೊಟ್ಟು ಕಳಿಸಿದ್ದು
ಬಾಯಿಯ ಹಲ್ಲನ್ನು ತೆಗೆಯದ ಮಗಳನ್ನು ಬಾಲೆ ಪದ್ಮಕ್ಕೆಯನ್ನು
ನನ್ನಯ ಅಕ್ಕನನ್ನು ನೋಡಲು ನನಗೆ ಕಣ್ಣು ಹುಡುಕುತ್ತಿದೆ
ಅಕ್ಕನನ್ನು ಮುಟ್ಟಲು, ಹಿಡಿಯಲು ನನಗೆ ಕೈ ತುಡಿಯುತ್ತಿದೆ
ಅಕ್ಕನನ್ನು ನೋಡದೆ ಸಾಧ್ಯವೆ ಇಲ್ಲ
ಹೋಗದೆ ನನಗೆ ನಿಲ್ಲಲು ನೆಲೆಯೆ ಇಲ್ಲವೆಂದು ಹೇಳಿದಳು
ಅಯ್ಯಯ್ಯೊ ಮಗಳೆ ನೀನು ಕೇಳುವುದಿಲ್ಲವೊ ಬಾಲೆ ಜಕ್ಕಮ್ಮ
ನಿನ್ನ ಅಕ್ಕನನ್ನು ನೋಡಲು ನೀನು ಹಠ ಹಿಡಿಯಬೇಡ
ಛಲ ಹಿಡಿಯಬೇಡ ಮಗಳೆ, ಹಟ ಹಿಡಿಯಬೇಡ ಬಾಲೆ ಜಕ್ಕಮ್ಮ
ಈ ದಿನ ಬೆನ್ನು ಹಾಕಿ ಹೋದರೆ ಮಗಳೆ ಬಾಲೆ ಜಕ್ಕಮ್ಮ
ಹೊಟ್ಟೆ ತೋರಿಸಿಕೊಂಡು ಬರಲಾರೆ ಮಗಳೆ ಬಾಲೆ ಜಕ್ಕಮ್ಮ

ಛಲ ಹಿಡಿಯಬೇಡ ಮಗಳೆ ಹಟ ಹಿಡಿಯಬೇಡ ಬಾಲೆ ಜಕ್ಕಮ್ಮು
ದೆಬ್ಬೆಲಿ ಬೀಡಿನ ಬಲ್ಲಾಳ ಮಗಳೆ ಪೋಲಿ 'ದಡ್ಡಿರ'
ಹೆಣ್ಣಿನ ಹುಚ್ಚ ಮಗ ನಿನ್ನನ್ನು ಬರಲು ಬಿಡಲಾರ
ಹೋಗದೆ ನನಗೆ ಸಾಧ್ಯವೇ ಇಲ್ಲ ಅಣ್ಣನವರೆ ಕೇಳಿದಿರಾ
ನಿಲ್ಲಲು ನನಗೆ ನೆಲೆಯಿಲ್ಲವೆಂದು ಜಕ್ಕಮ್ಮು ಹೇಳುವಳು
ಹೇಳಿದ್ದನ್ನು ಕೇಳು ಮಗಳೆ, ಕೊಟ್ಟದ್ದನ್ನು ತಿನ್ನು ಮಗಳೆ ಬಾಲೆ ಜಕ್ಕಮ್ಮು
ಹೇಳಿದ್ದನ್ನು ಕೇಳಲಾರೆ, ಕೊಟ್ಟದ್ದನ್ನು ತಿನ್ನಲಾರೆ ಅಣ್ಣನವರೆ
ನನ್ನಯ ಅಕ್ಕನಲ್ಲಿಗೆ ನನ್ನನ್ನು ಕಳಿಸದಿದ್ದರೆ ಇಬ್ಬರು ಅಣ್ಣಂದಿರು
ನಿಮ್ಮ ತಲೆಕೆಳಗೆ ನನ್ನ ಜೀವನವನ್ನು ನಾನು ಬಿಡುವೆನು
ಅಷ್ಟು ಹೊತ್ತಿಗೆ ಹೇಳಿದರು ಅವರು ಇಬ್ಬರು ಅಣ್ಣಂದಿರು
ತಾಯಿಯಲ್ಲಿ ಹೋಗಿ ಹೇಳು ಮಗಳೆ ಬಾಲೆ ಜಕ್ಕಮ್ಮು
ನಾವು ಹಿಂದಿನಿಂದ ಬರ್ತೇವೆ ಮಗಳೆ ಬಾಲೆ ಜಕ್ಕಮ್ಮು
ದಂಡಿಗೆಯ ಬೋವಿಗಳನ್ನು ತರಿಸಲಿ ಮಗಳೆ ಬಾಲೆ ಜಕ್ಕಮ್ಮು
ತನ್ನದೊಂದು ದಂಡಿಗೆಯನ್ನು ಶೃಂಗಾರ ಮಾಡಲಿ ಬಾಲೆ ಜಕ್ಕಮ್ಮು
ಒಂದು ಸಲದ ಅಲಂಕಾರ ನಿನ್ನನ್ನು ಮಾಡಲಿ ಬಾಲೆ ಜಕ್ಕಮ್ಮು
ಒಂದು ಸಲದ ಚಿನ್ನ ನಿನಗೆ ಇಡಲಿ ಬಾಲೆ ಜಕ್ಕಮ್ಮು
ಅಷ್ಟು ಮಾತು ಕೇಳಿದಳವಳು ಬಾಲೆ ಜಕ್ಕಮ್ಮು
ಓಡಿಕೊಂಡು ಬಿದ್ದುಕೊಂಡು ಬಂದಳವಳು ಬಾಲೆ ಜಕ್ಕಮ್ಮು
ಓಡಿಕೊಂಡು ಬಿದ್ದುಕೊಂಡು ಹೋದಳವಳು ಬಾಲೆ ಜಕ್ಕಮ್ಮು
ದಂಡಿಗೆಯ ಬೋವಿಗಳನ್ನು ಕರೆದಳು ತಾಯಿ
ಒಮ್ಮೆಗೆ ವಿಶೇಷ ಅಲಂಕಾರ ಮಾಡಿಸಿ ಅಮ್ಮಾ
ನನ್ನ ಅಕ್ಕನಲ್ಲಿಗೆ ನಾನು ಹೋಗುವೆನು ಅಮ್ಮಾ
ದಂಡಿಗೆಯ ಬೋವಿಗಳನ್ನು ಕರೆದರು ತಾಯಿ
ತನ್ನೊಂದು ದಂಡಿಗೆಯನ್ನು ಶೃಂಗಾರ ಮಾಡಿದರು ತಾಯಿ
ತಲೆಯನ್ನು ಬಾಚಿದರವರು ಬಾಲೆ ಜಕ್ಕಮ್ಮುವಿನ
ಒಮ್ಮೆಗೆ ಸೊಗಸಾಗಿ ಚಿನ್ನವಿಟ್ಟರು ತಾಯಿ
ಅಷ್ಟು ಹೊತ್ತಿಗೆ ಓಡಿಕೊಂಡು ಬಂದರು ಇಬ್ಬರು ಅಣ್ಣಂದಿರು
ಊಟ–ಉಪಚಾರ ಮಾಡಿಕೊಂಡರು ಇಬ್ಬರು ಅಣ್ಣಂದಿರು
ದಂಡಿಗೆಯಲ್ಲಿ ಎತ್ತಿ ಕುಳ್ಳಿರಿಸಿದರು ಇಬ್ಬರು ಅಣ್ಣಂದಿರು
ದಂಡಿಗೆಗೆ ಮುಸುಕು ಹಾಕಿದರವರು ಇಬ್ಬರು ಅಣ್ಣಂದಿರು
ಬೆನ್ನು ಹಾಕಿ ಹೋದರೆ ಮಗಳೆ ಬಾಲೆ ಜಕ್ಕಮ್ಮು
ಹೊಟ್ಟೆ ತೋರಿಸಿಕೊಂಡು ಬರಲಾರೆ ಮಗಳೆ ಬಾಲೆ ಜಕ್ಕಮ್ಮು
ಕಡೆ ಕಣ್ಣಲ್ಲಿ ದುಃಖ ಪಟ್ಟರು ಇಬ್ಬರು ಅಣ್ಣಂದಿರು

ಕಡೆ ಕಣ್ಣಲ್ಲಿ ದುಃಖ ಪಟ್ಟರು ಇಬ್ಬರು ಅಣ್ಣಂದಿರು
ಬಿಕ್ಕಿ ಬಿಕ್ಕಿ ಅಳುತ್ತಿದ್ದಾರೆ ಇಬ್ಬರು ಅಣ್ಣಂದಿರು
ದಂಡಿಗೆಯ ಬೋವಿಗಳು ದಂಡಿಗೆ ತೆಗೆದುಕೊಂಡು ಬೇಗನೆ ಹೋದರು
ಪಂಜನಾಂತ ಬೀಡಿನಿಂದ ದೆಬ್ಬೆಲಿ ಬೀಡಿಗೆ ದಂಡಿಗೆ ಕೊಂಡುಹೋದರು
ದಂಡಿಗೆ ತೆಗೆದುಕೊಂಡು ಹೋಗುವಾಗ ಬಲ್ಲಾಳರು
ಗದ್ದೆಯನ್ನು ಗೋರುತ್ತಾ ಉಳುತ್ತಿದ್ದಾರೆ ದೆಬ್ಬೆಲಿ ಬೀಡಿನ ಬಲ್ಲಾಳರು
ದೂರದಿಂದಲೇ ಹೋಗುವುದನ್ನು ನೋಡುತ್ತಾರೆ ಬಲ್ಲಾಳರು, ಕೇಳುತ್ತಾರೆ
ಎತ್ತು ಹೋಗುವ ಹೆದ್ದಾರಿಯಲ್ಲಿ ಮಾರ್ಗದಲ್ಲಿ ಹೋಗುತ್ತಿದೆ
ಇದೊಂದು ದಂಡಿಗೆಯೋ
ಎಡದಾರಿಯಲ್ಲೇ ಹೋಗುತ್ತಿದೆ ಬಲದಾರಿಯಲ್ಲಿ ಹೋಗುತ್ತಿದೆಯೆಂದು
ಬೇಗನೆ ನೋಡಿದರು
ಎಡದಾರಿ ಬಿಟ್ಟಿತು ಬಲದಾರಿ ಬಿಟ್ಟಿತು ಅದೊಂದು ದಂಡಿಗೆಯೋ
ಎರಡು ಸಲ ಉಳುವುದನ್ನು ಒಮ್ಮೆಲೇ ಉಳುತ್ತಾರೆ ಬಲ್ಲಾಳರು
ಎರಡು ಸಲ ಹಲಗೆ ಮೆಟ್ಟುವುದನ್ನು ಒಂದೇ ಸಲ ಮೆಟ್ಟಿಸಿದರು ಬಲ್ಲಾಳರು
ಗದ್ದೆಯ ಹುಣಿಯಲ್ಲೇ ಹೋಗುತ್ತಿದೆ ಅದೊಂದು ದಂಡಿಗೆಯು
ನಿಂತಿತು ಇದು ಬಂದಿತು ಎಲ್ಲಿಂದ ಎಂದು ಕೇಳಬೇಕು
ದೆಬ್ಬೆಲಿ ಬೀಡಿನ ಬಲ್ಲಾಳರ ಅರಮ್ಮನೆಗೆ ಬೇಗನೆ ಹೋಗಿದೆ
ಹಾರೆಯ 'ಪೂಕರೆ' ಗದ್ದೆಗೆ ಎಳೆಸಿದರು ದೆಬ್ಬೆಲಿ ಬೀಡಿನ ಬಲ್ಲಾಳರು
ಹುಣಿಯಲ್ಲಿದ್ದ ಬೀಜವನ್ನು ಗದ್ದೆಗೆ ಬಿತ್ತಿಸಿದರು ಬಲ್ಲಾಳರು
ಅರಮನೆಗೆ ಹೋಗಿ ಹತ್ತಿದರು ಬಲ್ಲಾಳರು
ದೂರದಿಂದಲೇ ಬರುವುದನ್ನು ನೋಡಿದರವರು ಬಾಲೆ ಪದ್ಮಕ್ಕೆ
ನನ್ನ ತಾಯಿ ಬಂದರು ಎಂದು ಬೇಗನೆ ನೋಡಿದಳು
ಕವುಚಿ ಇಟ್ಟಿದ್ದ ಕಲ್ಲಿನ ಮರಿಗೆ ತಿರುಗಿಸಿ ಇಡಿಸಿದಳು
ಕಲ್ಲಿನ ಮರಿಗೆಗೆ ನೀರು ತುಂಬಿಸಿದಳು ಬಾಲೆ ಪದ್ಮಕ್ಕೆ
ನನ್ನ ಅಣ್ಣನವರು ಇಬ್ಬರು ಅಣ್ಣಂದಿರು ಬಂದರೆಂದು ಬಾಲೆ ಪದ್ಮಕ್ಕೆ
ಬಹಳ ಒಂದು ಪ್ರೀತಿಯಲ್ಲಿ ಬಂದಳು ಬಾಲೆ ಪದ್ಮಕ್ಕೆ
ಕಲ್ಲಿನ ಮರಿಗೆಗೆ ನೀರು ತುಂಬಿಸಿದಳು ಬಾಲೆ ಪದ್ಮಕ್ಕೆ
ಕಂಚಿಯ 'ಕೈರಂಕ' ಹಾಕಿಸಿದಳು ಬಾಲೆ ಪದ್ಮಕ್ಕೆ
ಬಂದು ದಂಡಿಗೆಯ ಬೋವಿಗಳು ಹಿಂದಿನ 'ಮುಂದಿಲ್'ಗೆ
ದಂಡಿಗೆಯನ್ನು ತೆಗೆದುಕೊಂಡು ಬಂದರು
ಓಡಿಕೊಂಡು ಬಿದ್ದುಕೊಂಡು ಬಂದಳವಳು ಬಾಲೆ ಪದ್ಮಕ್ಕೆ
ದಂಡಿಗೆಯ ಮುಸುಕನ್ನು ತೆಗೆದು ನೋಡಿದಳು ಬಾಲೆ ಪದ್ಮಕ್ಕೆ
ಮುಸುಕು ತೆಗೆದು ನೋಡುವಾಗ ಜಕ್ಕಮ್ಮು ಬಾಲೆಯದು

ಏಳುಗಿಂಡೆ ಕೋಪದಲ್ಲಿ ನಡುಗುತ್ತಾ ಬಂದಳು ಬಾಲೆ ಪದ್ಮಕ್ಕೆ
ಮೇಲಿನ ಉಪ್ಪರಿಗೆಗೆ ಹೋದಳವಳು ಬಾಲೆ ಪದ್ಮಕ್ಕೆ
ಕೊಳಕು ಬಟ್ಟೆ ತೆಗೆದುಕೊಂಡಳು ಬಾಲೆ ಪದ್ಮಕ್ಕೆ
ಜಕ್ಕಮ್ಮುವಿಗೆ ಮುಸುಕು ಹಾಕಿಕೊಂಡಳು ಬಾಲೆ ಪದ್ಮಕ್ಕೆ
ಮೇಲಿನ ಉಪ್ಪರಿಗೆಗೆ ಅಲ್ಲಿಂದ ಹೋದಳು ಬಾಲೆ ಪದ್ಮಕ್ಕೆ
ಉಪ್ಪರಿಗೆಗೆ ಕೊಂಡುಹೋಗಿ ಕುಳಿತುಕೊಳ್ಳಿಸಿದಳು ಬಾಲೆ ಪದ್ಮಕ್ಕೆ
ಯಾರಪ್ಪ ನೆಂಟರು ಬಂದದ್ದೆಂದು ಬಲ್ಲಾಳರು
ಯಾರೇ ಪದ್ಮಕ್ಕೆ ನೆಂಟರು ಬಂದದ್ದು ಬಾಲೆ ಪದ್ಮಕ್ಕೆ
ನನ್ನ ತಾಯಿ ನಿಮ್ಮ ಅತ್ತೆ ಬಲ್ಲಾಳರೆ
ನಮ್ಮ ಅರಮನೆಗೆ ಆ ನೆಂಟರು ಬಂದದ್ದು ಬಲ್ಲಾಳರೆ ಕೇಳಿದಿರಾ
ಅಷ್ಟು ಮಾತಿಗೆ ಹೇಳಿದರವರು ಬಲ್ಲಾಳರು
ನನ್ನ ನಾದಿನಿ, ನಿನ್ನ ತಂಗಿ ಪದ್ಮಕ್ಕೆ ಕೇಳು
ಸುಳ್ಳು ಹೇಳಬೇಡ ಕಪಟ ಆಡಬೇಡ ಬಾಲೆ ಪದ್ಮಕ್ಕೆ
ಸುಳ್ಳು ಹೇಳಬೇಡ ಕಪಟ ಆಡಬೇಡ ಬಾಲೆ ಪದ್ಮಕ್ಕೆ
ಹಾಗಿದ್ದರೆ ನನ್ನ ಅಣ್ಣನವರು ಬಲ್ಲಾಳರೆ ಕೇಳಿದಿರಾ
ಇಬ್ಬರು ಅಣ್ಣಂದಿರು ಬಂದದ್ದು ಬಲ್ಲಾಳರೆ ಕೇಳಿದಿರಾ
ಮೇಲಿನ ಮಾಳಿಗೆಗೆ ಹತ್ತಿಕೊಂಡು ಹೋದರು ಬಲ್ಲಾಳರು
ಮೇಲಿನ ಮಾಳಿಗೆಗೆ ಹತ್ತಿಕೊಂಡು ಹೋಗುವಾಗ ಜಕ್ಕಮ್ಮು ಕಾಣುವಳು
ಏಳುಗಿಂಡೆ ಕೋಪದಲ್ಲಿ ಇಳಿದುಕೊಂಡು ಬಂದರು ಬಲ್ಲಾಳರು
ಸುಳ್ಳು ಹೇಳಿದಿಯಾ ಕಪಟ ಆಡಿದಿಯಾ ಬಾಲೆ ಪದ್ಮಕ್ಕೆ
ನನ್ನ ನಾದಿನಿ ನಿನ್ನ ತಂಗಿಯಲ್ಲವೆ ಬಾಲೆ ಪದ್ಮಕ್ಕೆ
ಪ್ರೀತಿಯ ನಾದಿನಿಯಲ್ವೆ ಪ್ರೀತಿಯ ನಿನ್ನ ತಂಗಿಯಲ್ವೆ ಬಾಲೆ ಪದ್ಮಕ್ಕೆ
ಸುಳ್ಳನ್ನು ಹೇಳಿದೆ ನೀನು ಕಪಟವಾಡಿದೆ ಬಾಲೆ ಪದ್ಮಕ್ಕೆ
ಬಚ್ಚಲ ಕೊಟ್ಟಿಗೆಗೆ ಸ್ನಾನಕ್ಕೆ ಹೋಗುವ ಬಾಲೆ ಪದ್ಮಕ್ಕೆ
ಎಣ್ಣೆ ಕುಡಿಕೆ ಹಿಡಿದಳು ಬಾಲೆ ಪದ್ಮಕ್ಕೆ ಎಣ್ಣೆ ಹಚ್ಚಿದಳು
'ಉರ್ಲಿ'ಗೆ ಎಣ್ಣೆ ಸುರಿದಳು ಬಾಲೆ ಪದ್ಮಕ್ಕೆ
ಎಣ್ಣೆ ಬಲ್ಲಾಳರಿಗೆ ಹಚ್ಚಿದಳು ಬಾಲೆ ಪದ್ಮಕ್ಕೆ
ಉಗುರಿಗೆ ತಿಗ್‌ರೆಣ್ಣೆ ಹಾಕಿದಳವಳು ಬಾಲೆ ಪದ್ಮಕ್ಕೆ
ನೆತ್ತಿಗೆ ನೆಂಯ್ಯೆಣ್ಣೆ ಹಾಕಿದಳವಳು ಬಾಲೆ ಪದ್ಮಕ್ಕೆ
ಎದೆಗೆ ಬಿಸಿಯೆಣ್ಣೆ ಹಾಕಿದಳವಳು ಬಾಲೆ ಪದ್ಮಕ್ಕೆ
ಬಚ್ಚಲ ಕೊಟ್ಟಿಗೆಗೆ ಕರೆದುಕೊಂಡು ಹೋದಳು ಬಲ್ಲಾಳರನ್ನು
ಬಚ್ಚಲ ಗುಂಡಿಯಲ್ಲಿ ಎತ್ತಿ ಕೂರಿಸಿದಳು ಬಲ್ಲಾಳರನ್ನು
ಬಿಸಿನೀರು ಎರೆದಳು ಬಾಲೆ ಪದ್ಮಕ್ಕೆ

ಸೀಗೆ–ಬಾಗೆ ಹಾಕಿ ತೊಳೆದಳು ಬಾಲೆ ಪದ್ಮಕ್ಕೆ
ಎಣ್ಣೆಯ ಉರಿಯನ್ನು 'ಸರೂಳಿ'ಯಲ್ಲಿ ತೆಗೆದಳು ಬಾಲೆ ಪದ್ಮಕ್ಕೆ
ತಣ್ಣೀರು ಬಿಸಿನೀರೆಂದು ಎರೆದಳವಳು ಬಾಲೆ ಪದ್ಮಕ್ಕೆ
ಕಪ್ಪಿನ ಪಟ್ಟೆಯಲ್ಲಿ ಒದ್ದೆ ಒಡೆಸಿದಳು ಬಾಲೆ ಪದ್ಮಕ್ಕೆ
ಬಿಳಿಯ ಪಟ್ಟೆಯನ್ನು ಉಡಲು ಕೊಟ್ಟಳು ಬಾಲೆ ಪದ್ಮಕ್ಕೆ
ಅರಮನೆಗೆ ಕರೆದುಕೊಂಡು ಬಂದಳು ಬಾಲೆ ಪದ್ಮಕ್ಕೆ
ಬೆಳ್ಳಿಯ ಸಿರಿಗಿಂಡೆಯಲ್ಲಿ ನೀರು ತೆಗೆದುಕೊಂಡಳು ಬಾಲೆ ಪದ್ಮಕ್ಕೆ
ತುಳಸಿಯ ಪೂಜೆ ಮುಗಿಸಿದರು ಬಲ್ಲಾಳರು
ನನ್ನನ್ನು ಇನ್ನು ಕುಳಿತುಕೊಳ್ಳಲು ಬಾಲೆ ಪದ್ಮಕ್ಕೆ
ನಿನ್ನ ತಂಗಿಯನ್ನು ಸ್ನಾನ ಮಾಡಿಸಿಕೊಂಡು ಬಾ ಬಾಲೆ ಪದ್ಮಕ್ಕೆ
ಊಟ ನಮಗೆ ಮೂರು ಜನರಿಗೂ ಪದ್ಮಕ್ಕೆ ಒಟ್ಟಿಗೆ ಆಗಬೇಕು
ಊಟ ನಮಗೆ ಒಟ್ಟಿಗೇ ಆಗಬೇಕು ಬಾಲೆ ಪದ್ಮಕ್ಕೆ
ಏಳುಗಿಂಡ ಕೋಪ ತೆಗೆದುಕೊಂಡಳು ಬಾಲೆ ಪದ್ಮಕ್ಕೆ
'ಉರ್ಲಿ'ಗೆ ಹಾಡ ಹಿಡಿದು ಎಣ್ಣೆ ಸುರಿದಳು ಬಾಲೆ ಪದ್ಮಕ್ಕೆ
ಜಕ್ಕಮ್ಮುವಿಗೆ ಎಣ್ಣೆ ಹಚ್ಚಿದಳು ಬಾಲೆ ಪದ್ಮಕ್ಕೆ
ಎಣ್ಣೆ ಹಚ್ಚಿ ಕಪ್ಪು ಪಟ್ಟೆ ಉಟ್ಟುಕೊಂಡಳು ಬಾಲೆ ಪದ್ಮಕ್ಕೆ
ಬಚ್ಚಲ ಕೊಟ್ಟಿಗೆಗೆ ಎತ್ತಿಕೊಂಡು ಹೋದಳು ಬಾಲೆ ಪದ್ಮಕ್ಕೆ
ಬಿಸಿನೀರು ತಣ್ಣೀರು ಎರೆದಳು ಬಾಲೆ ಪದ್ಮಕ್ಕೆ
ಕಪ್ಪು ಪಟ್ಟೆಯಲ್ಲಿ ಒದ್ದೆ ತೆಗೆದಳು ಬಾಲೆ ಪದ್ಮಕ್ಕೆ
ಬಿಳಿ ಪಟ್ಟೆಯನ್ನು ಉಡಲು ಕೊಟ್ಟಲು ಬಾಲೆ ಪದ್ಮಕ್ಕೆ
ಕೊಳಕು ಬಟ್ಟೆಯನ್ನು ಮುಸುಕು ಹಾಕಿದಳು ಬಾಲೆ ಪದ್ಮಕ್ಕೆ
ಎತ್ತಿಕೊಂಡು ಇನ್ನು ಬಂದಳು ಬಾಲೆ ಪದ್ಮಕ್ಕೆ
ಮಧ್ಯದ ಚಾವಡಿಯಲ್ಲಿ ಕೊಂಡುಹೋಗಿ ಕೂರಿಸಿದಳು ಬಾಲೆ ಪದ್ಮಕ್ಕೆ
ಬಲ್ಲಾಳರಿಗೂ, ಜಕ್ಕಮ್ಮುವಿಗೂ ಉಜ್ಜಿದ ಎಲೆ ಹಾಕಿದಳು ಬಾಲೆ ಪದ್ಮಕ್ಕೆ
ಉಜ್ಜಿದ ಎಲೆ ಹಾಕಿದಳು, ಮಣೆ ಇಟ್ಟಳು ಬಾಲೆ ಪದ್ಮಕ್ಕೆ
ಬಲ್ಲಾಳರಿಗೂ, ಜಕ್ಕಮ್ಮುವಿಗೂ ಅನ್ನ ಬಡಿಸಿದಳು ಬಾಲೆ ಪದ್ಮಕ್ಕೆ
ಊಟ–ಪಲ್ಯ ಬಡಿಸಿದಳು ಬಾಲೆ ಪದ್ಮಕ್ಕೆ
ಊಟ ಮಾಡಿದರವರು ಬಾವನು–ನಾದಿನಿಯ
ಏಳುಗುಂಡಿ ಕೋಪ ತೆಗೆದಳು ಬಾಲೆ ಪದ್ಮಕ್ಕೆ
ಜೀವಂತ ಕೊಲ್ಲುವಿರಾ, ಬಂದವಳಲ್ಲಪ್ಪಾ ಬಾಲೆ ಜಕ್ಕಮ್ಮು
ಏಳುಗಿಂಡಿ ಕೋಪದಲ್ಲಿ ಕುಳಿತುಕೊಳ್ಳುವಳು ಬಾಲೆ ಪದ್ಮಕ್ಕೆ
ನೀನು ಊಟ ಮಾಡು ಬಾಲೆ ಪದ್ಮಕ್ಕೆ
ಊಟ ಮಾಡೆಂದು ಹೇಳುವರು ಬಲ್ಲಾಳರು

ಊಟ ಒಡನೇ ಮಾಡಿಕೊಂಡಳು ಬಾಲೆ ಪದ್ಮಕ್ಕೆ
ಕಣ್ಣಿನ ಕಣ್ಣೀರು ಅಂಗಿಗೆ ಉಜ್ಜಿದಳು ಬಾಲೆ ಪದ್ಮಕ್ಕೆ
ಊಟ ಮಾಡಿಕೊಂಡಳು ಬಾಲೆ ಪದ್ಮಕ್ಕೆ
ಒಡನೆಯೇ ಕೈಯನ್ನು ತೊಳೆದಳು ಬಾಲೆ ಪದ್ಮಕ್ಕೆ
ಅಷ್ಟರಲ್ಲಿ ಬಂದರವರು ಇಬ್ಬರು ಅಣ್ಣಂದಿರು
ಬೆನ್ನು ಹಾಕಿ ಹೋದ ಬಾಲೆ ಜಕ್ಕಮ್ಮ ಹೊಟ್ಟೆ ತೋರಿಸಿಕೊಂಡು ಬರಲಿಲ್ಲವೆಂದು
ಹುಡುಕಿಕೊಂಡು ಬಂದರು ಇಬ್ಬರು ಅಣ್ಣಂದಿರು
ಹುಡುಕುತ ಬರಲು ಜಕ್ಕಮ್ಮ ಮತ್ತು ಬಲ್ಲಾಳರು ಕುಳಿತಿದ್ದರು
ಜಕ್ಕಮ್ಮ, ಬಲ್ಲಾಳರು ಕುಳಿತಿರುವುದನವರು ಒಡನೆ ನೋಡಿದರು
ಬೆನ್ನು ಹಾಕಿ ಬಂದರೆ ಹೊಟ್ಟೆ ತೋರಿಸಿಕೊಂಡು ಬರಲಾರೆ ಎಂದು ಹೇಳಿದೆವು ಜಕ್ಕಮ್ಮ
ಹೇಳಿದ್ದನ್ನು ಕೇಳಲಿಲ್ಲ, ಕೊಟ್ಟದ್ದನ್ನು ತಿನ್ನಲಿಲ್ಲ ನೀನು ಮಗಳೆ
ನಿನ್ನ ಅಕ್ಕನ ಚಂದ ನೋಡುವಿಯಾ ಬಾಲೆ ಜಕ್ಕಮ್ಮ
ಅಷ್ಟರಲ್ಲಿ ಹೇಳಿದರು ದೆಬ್ಬೆಲಿ ಬೀಡಿನ ಬಲ್ಲಾಳರು
ಬಾಲೆ ಜಕ್ಕಮ್ಮವನ್ನು ಮಾತು ಕೊಡಿ ಇಬ್ಬರು ಅಣ್ಣಂದಿರು
ನನಗೆ ಮದುವೆ ಮಾಡಿ ಕೊಡಿ ಎಂದರು ಬಲ್ಲಾಳರು
ಹೆಣ್ಣಿನ ಮೇಲೆ ಇನ್ನೊಂದು ಹೆಣ್ಣು ಕೊಡಲಾರೆವು ಭಾವನವರೆ ಕೇಳಿದಿರಾ
ಹೆಣ್ಣಿನ ಮೇಲೆ ಹೆಣ್ಣು ಕೊಡದಿದ್ದರೆ ಭಾವನವರೆ ನೀವು
ಹೇಳಿದ ನಾಲಿಗೆ ಗಂಟಲಲ್ಲಿ ವಿರಮಿಸಬೇಕಾದರೆ
ಅಡ್ಡಕ್ಕೆ ನಾಲಿಗೆ ನಾನು ಕೊಚ್ಚಿಕೊಳ್ಳುವೆ ಭಾವನವರೆ
ನನ್ನ ಪ್ರಾಣವ ತೆಗೆದುಕೊಳ್ಳುವೆ ನಾನು ಭಾವನವರೆ
ಹೇಳಿದ ನಾಲಿಗೆ ಗಂಟಲಲ್ಲಾಗಲು ಇಬ್ಬರು ಅಣ್ಣಂದಿರು
ಮಾತು ಕೊಡೋಣವೆಂದು ಅಣ್ಣ-ತಮ್ಮ ಮಾತಾಡಿಕೊಂಡರು
ಮಾತು ಒಡನೆಯೇ ಕೊಟ್ಟರು ಇಬ್ಬರು ಅಣ್ಣಂದಿರು
ಬಂದ ಭಾವನವರು ನೀವು ಹೋಗುವ ಮೊದಲು ಭಾವನವರೆ
ಮದುವೆ ಮಾಡಿಯೆ ಹೋಗಬೇಕು ನಮಗೆಂದರು ಬಲ್ಲಾಳರು
ಮದುವೆಗೆ ಜನ-ಜಂಗುಳಿ ಸೇರಿತಂತೆ ಬಲ್ಲಾಳರ ಅರಮನೆಯಲ್ಲಿ
ಮದುವೆಗೆ ಜನ-ಜಂಗುಳಿ ಸೇರಿತಂತೆ ಬಲ್ಲಾಳರ ಅರಮನೆಯಲ್ಲಿ
ದೆಬ್ಬೆಲಿ ಬೀಡಿನ ಬಲ್ಲಾಳರಿಗೂ ಬಾಲೆ ಜಕ್ಕಮ್ಮವಿಗೂ
ಮದುವೆ ಕಲ್ಯಾಣ ಬೇಗನೆ ನಡೆಯುವುದು
ಕಣ್ಣಲ್ಲಿ ಕಣ್ಣೀರು ಹರಿಸಿದರು ಇಬ್ಬರು ಅಣ್ಣಂದಿರು
ಹೊರಟು ಒಡನೆ ಹೋದರವರು ಇಬ್ಬರು ಅಣ್ಣಂದಿರು
ಹೊರಟು ತಾ ಹೋಗುವಾಗ ಇಬ್ಬರು ಅಣ್ಣಂದಿರು
ಬಿಕ್ಕಿ ಬಿಕ್ಕಿ ಅಳುತ್ತಾ ಹೋಗುವರು ಇಬ್ಬರು ಅಣ್ಣಂದಿರು

ಬೆನ್ನು ಹಾಕಿ ಬಂದ ಬಾಲೆ ಜಕ್ಕಮ್ಮುವನ್ನು ಹೊಟ್ಟೆ ತೋರಿಸಿಕೊಂಡು
ಬರಲು ಬಿಡಲಿಲ್ಲವೆಂದು ಅಳುತ್ತಾ ಹೋಗುವರು
ಅವರ ತಲೆ–ಕಾಲು ಮಾಸುವ ತನಕ ನೋಡುವಳು ಬಾಲೆ ಪದ್ಮಕ್ಕೆ
ಬಿಕ್ಕಿ ಅಳುತ್ತಾ ಬೀಳುವಳು ಮಗಳು ಬಾಲೆ ಜಕ್ಕಮ್ಮು
ಬಿಕ್ಕಿ ಬಿಕ್ಕಿ ಕುಳಿತುಕೊಳ್ಳುವಳು ಮಗಳು ಬಾಲೆ ಜಕ್ಕಮ್ಮು
ಮೇಲಿನ ಮಾಳಿಗೆಗೆ ಹತ್ತಿಕೊಂಡು ಹೋದರು ಬಲ್ಲಾಳರು
ಕಲೆಂಬಿಯ ಬೀಗವನ್ನು ಬೇಗನೆ ಒಡೆದರು ಬಲ್ಲಾಳರು
ಸಾವಿರ ವರಹದ ಸರಮಾಲೆ ತೆಗೆದರು ಬಲ್ಲಾಳರು
ಜಕ್ಕಮ್ಮುವಿನ ಕೊರಳಿಗೆ ತಂದು ತಾ ಹಾಕಿದರು ಬಲ್ಲಾಳರು
ಅದನ್ನು ಒಡನೆ ಇಟ್ಟಳು ಮಗಳು ಬಾಲೆ ಪದ್ಮಕ್ಕೆ
ಬಾಯಿಯ ಹಲ್ಲನ್ನು ತೆಗೆಯದ ಮಗಳನ್ನು ಬಾಲೆ ಪದ್ಮಕ್ಕೆಯನ್ನು
ನಿಮ್ಮ ಅರಮನೆಯ ಮುತ್ತನ್ನು ಹಂಚಿದೆ ಬಲ್ಲಾಳರೆ ಕೇಳಿದಿರಾ
ಸಾವಿರ ವರಹದ ಸರಮಾಲೆ ಬಲ್ಲಾಳರೆ ನೀವು ಕೇಳಿಲಿಲ್ಲವೇ
ಕಣ್ಣು ಹೋಯ್ತು ಕೊಡಲಿಲ್ಲ, ಕೈ ಹೋಯ್ತು ಕೇಳಲಿಲ್ಲ ಬಲ್ಲಾಳರೆ
ನೀವಾದರೂ ಕೇಳಿದಿರಾ
ನಿನ್ನೆ ಬಂದ ಮಗಳು ಜಕ್ಕಮ್ಮುವಿಗೆ ಸರಮಾಲೆ ಕೊಟ್ಟಿರಲ್ಲಾ?
ಕೋಪದಲ್ಲಿ ಏಳುಗಿಂಡಿ ಕೋಪ ತೆಗೆದಳು ಬಾಲೆ ಪದ್ಮಕ್ಕೆ
ಏಳುಗಿಂಡಿ ಕೋಪದಿ ತಾ ಹೊರಟಳು ಬಾಲೆ ಪದ್ಮಕ್ಕೆ
ಜುಮಾದಿ ಸ್ಥಾನದ ಬಾಗಿಲು ತೆಗೆದಳು ಬಾಲೆ ಪದ್ಮಕ್ಕೆ
ಜಮಾದಿಗೆ ಹರಕೆಯ ಹೊತ್ತಳು ಬಾಲೆ ಪದ್ಮಕ್ಕೆ
ಬೆನ್ನು ಹಾಕಿ ಹೋದ ಬಾಲೆ ಜಕ್ಕಮ್ಮು ತಿರುಗಿ ಬಾರದಿರೆ
ಜೋಡು ನೇಮ ನಿನಗೆ ಕೊಡುತ್ತೇನೆ ಜಮಾದಿಯೇ ಎಂದು
ಕೈ ಮುಗಿದು ಹರಕೆ ಹೊತ್ತಳು ಬಾಲೆ ಪದ್ಮಕ್ಕೆ
ಅಷ್ಟರಲಿ ಬಲ್ಲಾಳರು ದಂಡಿಗೆ ಸಿಂಗರಿಸಿದರು
ದಂಡಿಗೆಗೆ ಎತ್ತಿ ಕೂರಿಸಿದರು ಬಾಲೆ ಜಕ್ಕಮ್ಮುವನ್ನು
ಒಡನೆ ಹೋಗಿ ತಾವೂ ಕುಳಿತರು ಬಲ್ಲಾಳರು
ದಂಡಿಗೆಗೆ ಬೇಕಾದ ಸಾಮಾನು ತುಂಬಿಸಿದರು ಬಲ್ಲಾಳರು
ಕೆತ್ತಿದ ಎಳನೀರು ದಂಡಿಗೆಗೆ ಕಟ್ಟಿ ಬೇಗನೆ ಹಾಕಿದರು
ದೆಬ್ಬೆಲಿ ಬೀಡಿನಿಂದ ಪಂಜನಂತ ಬೀಡಿಗೆ ದಂಡಿಗೆ ಕೊಂಡೊಯ್ದರು
ಅರ್ಧ ದಾರಿಗೆ ಮುಟ್ಟಲು ಬಾಲೆ ಜಕ್ಕಮ್ಮುವಿಗೆ
ಸಂಕಟ ಬೇನೆ ಪ್ರಾರಂಭವಾಯಿತು ಬಾಲೆ ಜಕ್ಕಮ್ಮುವಿಗೆ
ನೀವು ನನ್ನ ಕೈ ಹಿಡಿದುದಕ್ಕೆ ಬಲ್ಲಾಳರೆ ಕೇಳಿದಿರಾ
ಎಳನೀರು ಕೆತ್ತಿ ನೀರು ಕೊಡಿ ಬಲ್ಲಾಳರೆ

ಒಮ್ಮೆಲೇ ಜೀವಂತ ಇಬ್ಬರ ಕೊಂದಿರಿ ಬಲ್ಲಾಳರೆ ನೀವು
ಅಷ್ಟರಲ್ಲಿ ಒಡನೇ ಬೊಂಡ ಕೆತ್ತಿದರು ಬಲ್ಲಾಳರು
ಜಕ್ಕಮ್ಮುವಿನ ಕೈಯಲಿ ಎಳನೀರು ಕೊಟ್ಟರು ಬಲ್ಲಾಳರು
ಎಳನೀರು ಎತ್ತಿ ಹಿಡಿದಾಗ ಬಾಲೆ ಜಕ್ಕಮ್ಮು
ಕಣ್ಣಾಲಿಯ ಕಪ್ಪು ಜಾರಿತು, ಬಿಳಿಯು ಮೂಡಿತು ಬಾಲೆ ಜಕ್ಕಮ್ಮುವಿನದು
ದಂಡಿಗೆ ತೆಗೆದುಕೊಂಡು ಹೋದರು ಬಲ್ಲಾಳರು ಬೇಗನೆ
ದೆಬ್ಬೆಲಿ ಬೀಡಿನಿಂದ ಪಂಜನಂತ ಬೀಡಿಗೆ ದಂಡಿಗೆ ಕೊಂಡೊಯ್ದರು
ದೂರದಿಂದಲೇ ಹೋಗುವುದನ್ನು ನೋಡಿದರು ಇಬ್ಬರು ಅಣ್ಣಂದಿರು
ನನ್ನ ಮಗಳು ಬಂದಳೆಂದು ತಾಯಿಯೂ ಒಡನೇ
ಬಟ್ಟಲಲ್ಲಿ ಹಾಲು, ಗಿಂಡಿಯಲ್ಲಿ ನೀರನ್ನು, ಆರತಿ ಹಿಡಿಯುತ
ಎದುರಿಗೆ ಓಡುತ ಬೀಳುತ ಬಂದರು ತಾಯಿ
ಇಬ್ಬರು ಅಣ್ಣಂದಿರು ದಂಡಿಗೆಯ ಮುಸುಕನ್ನು ತೆಗೆದು ನೋಡಲು
ಹೆಣವು ಕಾಣುವುದ ಜಕ್ಕಮ್ಮುವಿನ ಇಬ್ಬರು ಅಣ್ಣಂದಿರಿಗೆ
ಹೆಣವ ನೋಡಲು ತಲೆ ಬಡಿಯುತ ಅತ್ತರು ಅವರು
ಮಡಿವಾಳರ ಹುಡುಗನನ್ನು ಕರೆದರು ಇಬ್ಬರು ಅಣ್ಣಂದಿರು
ಬಾಲೆ ಜಕ್ಕಮ್ಮು ಮದುಮಗಳಾಗಿದ್ದಳೆಂದು ಮಡಿವಾಳ ನೀನು
ದೆಬ್ಬೆಲಿ ಬೀಡಿನಲ್ಲಿ ಹೋಗಿ ಹೇಳಬೇಕು ಬಾಲೆ ಪದ್ಮಕ್ಕೆಯಲ್ಲಿ
ಬೇಗನೆ ಹೇಳಿ ಕಳಿಸಿದರು ಇಬ್ಬರು ಅಣ್ಣಂದಿರು
ಓಡುತ್ತಾ ಬೀಳುತ್ತಾ ಹೋದನವನು ಮಡಿವಾಳರ ಹುಡುಗ
ದೆಬ್ಬೆಲಿ ಬೀಡಿಗೆ ಓಡುತ್ತಾ ಬೀಳುತ್ತಾ ಬೇಗನೆ ಹೋದನು
ನಿಮ್ಮಯ ತಂಗಿ ಮದುಮಗಳಾಗಿದ್ದಾರೆ ಪದ್ಮಕ್ಕೆ ಕೇಳಿದಿರಾ
ಮಾಡಿನ ಆಡಿ ಬಿಟ್ಟಿದ್ದಾರೆ ಮರದಡಿ ಸೇರಿದ್ದಾರೆ ಬಾಲೆ ಪದ್ಮಕ್ಕೆ
ಅಷ್ಟು ಮಾತು ಕೇಳಿದಳು ಬಾಲೆ ಪದ್ಮಕ್ಕೆ
ಮುಡಿ–ಮುಡಿ ಅವಲಕ್ಕಿ, ಹಾಲು–ಹಾಲು ತುಪ್ಪ ಬೇಗನೆ ತೆಗೆದಳು
ಕಟ್ಟು–ಕಟ್ಟು ಬೆಲ್ಲ, ಬಾಳೆ ಗೊನೆ ಬೇಗನೆ ಕೊಟ್ಟಳು
ದಂಡಿಗೆಯ ಬೋವಿಗಳನ್ನು ಕರೆದಳವಳು ಬಾಲೆ ಪದ್ಮಕ್ಕೆ
ದಂಡಿಗೆಯಲ್ಲಿ ಎಲ್ಲವ ಹಾಕಿಕೊಂಡು ಬಂದಳು ಪಂಜನಂತ ಬೀಡಿಗೆ
ಪಂಜನಂತ ಬೀಡಿಗೆ ಪದ್ಮಕ್ಕೆಯ ದಂಡಿಗೆಯು ಬರುತಿರಲು
ಆಚೆ ಬದಿ ಹಲಸಿನ ಮರ ಕಡಿಸುತ್ತಿದ್ದಾರೆ ಇಬ್ಬರು ಅಣ್ಣಂದಿರು
ಈಚೆ ಬದಿ ಮಾವಿನ ಮರ ಕಡಿಸಿದ್ದಾರೆ ಇಬ್ಬರು ಅಣ್ಣಂದಿರು
ಬಾಕಿತ್ತಿ ಮಾರಿನಲ್ಲಿ ಅಗ್ನಿಯ ಕಾಷ್ಠ ಬೇಗನೆ ಇಡಿಸಿಹರು
ಹೆಣವನು ಕಾಷ್ಠಕ್ಕೆ ತೆಗೆದುಕೊಂಡು ಹೋದರು ಇಬ್ಬರು ಅಣ್ಣಂದಿರು
ಬಾರೀ ಪ್ರೀತಿಯ ತಂಗಿಯು ಪ್ರಾಣ ಬಿಟ್ಟಳು

ಪ್ರಾಣ ಬಿಟ್ಟಳು ಕೈಲಾಸ ಸೇರಿದಳು ಬಾಲೆ ಜಕ್ಕಮ್ಮ
ಜೀವ ಬಿಟ್ಟು ವೈಕುಂಠ ಸೇರಿದಳು ಬಾಲೆ ಜಕ್ಕಮ್ಮ
ಮನೆಯ ಮಾಡನ್ನು ಕಡಿದರು ಇಬ್ಬರು ಅಣ್ಣಂದಿರು
ಬಾರೀ ಪ್ರೀತಿಯ ತಂಗಿಯು ಪ್ರಾಣ ಬಿಟ್ಟಳು
ಪ್ರಾಣ ಬಿಟ್ಟಳು ಕೈಲಾಸ ಸೇರಿದಳು ಬಾಲೆ ಜಕ್ಕಮ್ಮ
ಜೀವ ಬಿಟ್ಟು ವೈಕುಂಠ ಸೇರಿದಳು ಬಾಲೆ ಜಕ್ಕಮ್ಮ
ಮನೆಯ ಮಾಡನ್ನು ಕಡಿದರು ಇಬ್ಬರು ಅಣ್ಣಂದಿರು
ಅಡ್ಡವನ್ನು ಮಾಡನ್ನು ಕಾಷ್ಠಕ್ಕೆ ಹಾಕಿದರು ಇಬ್ಬರು ಅಣ್ಣಂದಿರು
ಅಷ್ಟರಲ್ಲಿ ಕಾಷ್ಠಕ್ಕೆ ಹಾರಿದರು ಬಲ್ಲಾಳರು
ಬಲ್ಲಾಳರು ಹಾರಿದ್ದನ್ನು ನೋಡಿದರವರು ಇಬ್ಬರು ಅಣ್ಣಂದಿರು
ಇಬ್ಬರು ಅಣ್ಣಂದಿರು ಒಡನೆಯೆ ತಾವೂ ಕಾಷ್ಠಕ್ಕೆ ಹಾರಿದರು
ಅಣ್ಣಂದಿರು ಕಾಷ್ಠಕ್ಕೆ ಬಿದ್ದುದನ್ನು ನೋಡಿದರು ಅವರ ತಾಯಿ
ತಾಯಿ ಕೂಡ ಕಾಷ್ಠಕ್ಕೆ ಬಿದ್ದರು ಒಡನೆಯೇ
ತಾಯಿ ಬಿದ್ದುದನ್ನು ನೋಡಿದಳು ಮಗಳು ಬಾಲೆ ಪದ್ಮಕ್ಕೆ
ನನ್ನ ಜೀವವಾದರೂ ಇನ್ನು ಯಾತಕೆ ಎಂದಳು ಬಾಲೆ ಪದ್ಮಕ್ಕೆ
ಮೂರು 'ಆರ್ಭಟ' ಕೊಟ್ಟಳವಳು ಬಾಲೆ ಪದ್ಮಕ್ಕೆ
ಕಾಷ್ಠಕ್ಕೆ ಧಬಕ್ಕೆಂದು ಹಾರಿದಳವಳು ಬಾಲೆ ಪದ್ಮಕ್ಕೆ

* * * *

ಬಾಲೆ ಮುಂಡ್ಯಾಪು

ಓಽ ಡೆನ್ನಾನ ಡೆನ್ನನಯ್ಯೋಽ
ಬಡಗು ಬಡಕೆರೆಯೆಂಬ ಗುತ್ತಿನಲ್ಲಿ ಇರುವಳು ಮಗಳು
ಮಗಽಳು ಮುಂಡ್ಯಾಪುಽ
ನುಸುಕು ಬೆಳಕಿನಲ್ಲಿ ಎದ್ದಳು ಮಗಳು
ಮಲಗಿದ್ದ ಹಾಸಿಗೆ ಮಡಚಿದಳು, ತಲೆಕೂದಲು ಕಟ್ಟಿಕೊಂಡಳು
ಹೊರಗೆ ಹೊರಟು ಹೋಗುವಳು ಮಗಳು
ತನ್ನ ಸಿರಿಮೊಗವ ತೊಳೆದುಕೊಂಡು ಬರುವಳು
ಬಡಕಾರೆಗುತ್ತಿಗೆ ಹೊಕ್ಕಳು ಮಗಳು ಬಾಲೆ ಮುಂಡ್ಯಾಪು
ಸೊಪ್ಪಿನ ಪರಕೆಯ ಹಿಡಿದಳು ಮಗಳು
ಒಳ ರಾಜಾಂಗಣದಿಂದ ಬೀಸುತ್ತಾ ಬರುವಳು
ಅಪ್ಪರೊಳು ಬರುವರು ಅತ್ತೆ
ಉಜ್ಜಿದ ಬಾಜಿರದಿ ಕೂರುವರು
ಯಾರು ಮಗಳೆ ಕೇಳು ವೀಳ್ಯದ ಹರಿವಾಣ ತೆಗೆದುಕೊಂಡು ಬಾ ಎಂದು
ಅತ್ತೇಽ ಹೇಳುವರು
ಪೊರಕೆ ಕೆಳಗೆ ಹಾಕಿದಳು ಮಗಳು
ವೀಳ್ಯದ ಹರಿವಾಣ ತೆಗೆದುಕೊಂಡು ಬರುವಳು
ಬರುವಾಗ ಸೊಸೆಯ ಮುಖಕ್ಕೆ ನೋಡುವರು ಹೆಂಗಸು
ಪೂವಕ್ಕೆ ಹೆಂಗಸದೊಽ
ತಲೆ ತುದಿಯು ಮಾಸಿಹುದು ಮಗಳದು
ಮೊಲೆ ತುದಿಯ ಅಡಗಿಹುದು
ಬಟ್ಟಲು ಹೊಟ್ಟೆಯು ಕಂಡಿತು ಅತ್ತೆಗೆ ಪೂವಕ್ಕೆ ಹೆಂಗಸಿಗೆಽ
ಯಾರು ಮಗ ಮಗಳೆ ಮುಂಡ್ಯಾಪು ಕೇಳಿದಿಯಾ ಎಂದು
ನೀನು ಸೂತಕ ಆಗದೆ ಮಗಳೆ ಎಷ್ಟು 'ಕುದಿ' ತಪ್ಪಿತೆಂದು
ನುಂಗುರಗುತ್ತಿನಲ್ಲಿ ಮಿಂದದ್ದು ಅತ್ತೆಯವರೆ
ಇಲ್ಲಿ ಬಂದ ಅನಂತರ ಮೀಯಲಿಲ್ಲವೆಂದು
ಮನದ ಸಂತಸದಲ್ಲಿ ಹೋದರು ಅತ್ತೆ
ಕುಳಿತಲ್ಲಿಂದ ಎದ್ದುಕೊಂಡು ಹೋಗುವರು

ಹೊರ ಚಾವಡಿಗೆ ಹೋಗಿಹರು ಹೆಂಗಸು
ಮದುಮಗ ಕುಳಿತಲ್ಲಿಗೆs
ನಮ್ಮ ಸೊಸೆ ಬಸುರಿಯು ಅಣ್ಣನವರು ಬರಲಿಲ್ಲ
ನಾವಾಗಿ ಹೋಗಲಿಲ್ಲವೆಂದು ಅತ್ತೆಯವರು ಹೇಳುವರು
ಮದುಮಗಳೇ ನೀ ಕೇಳು
ಭೂಮಿ ಅದುರುವ ಹಾಗೆ ನಡೆಸಬೇಡ ಉಟ್ಟ ಬಟ್ಟೆಯನ್ನು ಒಗೆಸಬೇಡವೆಂದು
ಮಾವನವರು ಹೇಳುವರು
ಅಣ್ಣನವರಿಗೊಂದು ಜನವಾದರೂ ಕಳಿಸಬೇಕೆಂದು
ಓಲೆಯ 'ಬಗ್ಗ'ನನ್ನು ಕರೆಸುವರು
ಹೊಟ್ಟೆಯ ಹಸಿವಿಗೆ ಬಡಿಸಿದರು ಕೆಲಸದ ಸಂಬಳ ತೀರಿಸಿದರು
ಬಡಕೆರೆಗುತ್ತಿಗೆ ಹೋಗಿ ಬಾ ಎಂದು ಓಲೆಯ ಮಾಣಿಯನು ಕಳಿಸಿದರು
ಬೆಳಗ್ಗಿನ ಕೆಲಸಗಳನ್ನು ಮಾಡಿತು ಹೆಂಗಸು
ನುಂಗುರಗುತ್ತಿsನ ಹೆಂಗಸು
ಕೆರೆಯಲ್ಲಿ ಕೈಕಾಲು ತೊಳೆಯುವಾಗ ಎಲ್ಲಿಗೆ ಹೋಗುವುದು
ಎಲ್ಲಿಂದ ಬರುವುದೆಂದು ಉಂಞಕ್ಕೆ ಹೆಂಗಸು ಕೇಳುವಳು
ಬಡಕೆರೆಗುತ್ತಿನಿಂದ ಬಂದುದು ಹೆಂಗಸೆ ಎಂದು ಹೇಳಲು ಕೇಳುವರು
ನಮ್ಮ ಮಗುವನ್ನು ನೋಡಿದಿಯಮ್ಮ ನೀನು ಮಾತನಾಡಿಸಿರುವೆಯಾ?
ಎಂದು ಕೇಳುವರು
ನಿಮ್ಮ ಮಗಳು ಬಸುರಿ ನೋಡಿ ಮಾತಾಡಿಸಿ ಬಂದುದೆಂದು
ಓಲೆಯ ಮಾಣಿಯನು ಕರೆದುಕೊಂಡು ಹೋಗುವರು
ನುಂಗುರಗುತ್ತಿನಲ್ಲಿ ಕುಳಿತರು
ಬಾಯಾರಿಕೆ ತಗ್ಗಿಸಿದರು ಮೇಲು ಮಾಳಿಗೆಗೆ ಹೋದರು
ಮದುಮಗನ ತಲೆಯ ಬಳಿ ನಿಂತಿದ್ದಾರೆ ಹೆಂಗಸು
ಏನಪ್ಪಾ ಮದುಮಗ ನಮ್ಮ ಮಗಳು ಗರ್ಭಿಣಿಯಂತೆ
ಯಾವ ಕಷ್ಟದಲ್ಲಿ ತೊಂದರೆಯಲ್ಲಿ ಇರುವಳೊ
ಮನೆಯ ಬೂಟುಗಾರಿಗೆ ಮಾತನಾಡುವಳು ಉಂಞಕ್ಕೆ ಹೆಂಗಸು
ನನ್ನ ತಂಗಿ ನೋಡಿಯಾಳು ಕೇಳಿಯಾಳು ಎಂದು ತಂದೆ ಹೇಳುವರು
ಅಲ್ಲಿಂದ ಹೊರಟು ಬಂದಿಹರು ಬಡಕರೆಗುತ್ತಿsಗೆ ಬರುವರು
ದೂರದಲ್ಲಿ ಬರುವಾಗ ನೋಡುವರು ಅಣ್ಣನಿಗೆ ಹೇಗೆ ದಾರಿಯಾದರೂ ಸಿಕ್ಕಿತೆಂದು
ನಾನೊಂದು ಬಂದು ಹೆಚ್ಚೇನು ಮಗಳೆ
ಬಾರದಿರೆ ಕುಂದೇನು ಎಂದು ಹೇಳುವರು
ನಮ್ಮ ಮಗಳು ಗರ್ಭಿಣಿ ಅಣ್ಣನವರೆ
ಸೀಮಂತಕ್ಕೆ ದಿನ ಕೇಳಬೇಕೆಂದು

ಬಾಳೆಯಡಿ ಭಟ್ಟರಲ್ಲಿ ಹೋಗಿ ಎಂದು
ಭಾವ-ಭಾವ ಜತೆ ಕೂಡಿ ಹೋಗುವರು
ಬಾರದ ನೆಂಟರು ಬಂದಿರೆಂದು ಬಾಳೆಯಡಿ ಭಟ್ಟರು ಕೇಳುವರು
ಕೂರಲು ಗದ್ದಿಗೆ ಇಡುವರು ನಮಗೊಂದು ದಿನ ಹೇಳಬೇಕೆಂದು
ಆರು ಹಿಡಿ ಕೌಡಿಗೆ ಮೌರು ಹಿಡಿ ಗ್ರಂಥ
ಪಂಚಾಂಗದ ಪಟ್ಟಿ ತಂದರು
ಬೆಳ್ಳಿ 'ಕದೊಳಿ'ಯ ಮಣೆ ತಂದರು
ಚಾವಡಿಯ ನಡುವೆ ಕುಳಿತರುs ಬಯಕೆಯ ದಿನ ಹೇಳುವರು
ಈ ವಾರವಲ್ಲ ಮುಂದಿನ ವಾರ ಬೇಕು
ಬೆಳಿಗ್ಗೆ ಎಂಟುಗಂಟೆಗೆ ಕೋಳಿ ಬಿಡಬೇಕು
ಸಂಜೆ ನಾಲ್ಕು ಗಂಟೆಗೆ ಗರ್ಭಿಣಿಯ ಇಳಿಸಿಕೊಡಬೇಕು
ದಿನ ಒಳ್ಳೇದಿದೆ ಎಂದುs ಎದ್ದು ಬೇಗನೆ ಬರುವರು
ಬಡಕಾರೆಗುತ್ತಿsಗೆ ಸೇರಿದರು
ಹೊರ ಚಾವಡಿಯಲ್ಲಿ ಅತ್ತೆ-ಮಾವ ಕುಳಿತಲ್ಲಿಗೆ
ತಂದೆಯ ಬಳಿಗೆ ಬರುವಳು ಮಗಳು ಬಾಲೆ ಮುಂಡ್ಯಾಪು
ಬಿಕ್ಕಿ ಬಿಕ್ಕಿ ಕಣ್ಣೀರು ಬಿಡಲು ತಂದೆಯವರು ಹೇಳುವರು
ಇಷ್ಟು ಸಮಯ ಬಿಟ್ಟೆಯೆಂದು ಮಗಳೆ ಇನ್ನು ಬಿಡಲಾರೆ
ಈ ಒಂದು ವಾರವಲ್ಲ ಮಗಳೆ ಮುಂದಿನ ವಾರ ದಾಟಬೇಕು
ನಾನು ನಿನ್ನ ಕರೆದೊಯ್ಯುವೆನೆಂದು ತಂದೆಯವರು ಹೇಳುವರುs
ಕಣ್ಣಿನ ಕಣ್ಣೀರು ಉಜ್ಜಿದರು ತಂದೆಯವರು ಹೊರಟುಹೋಗುವಾಗ
ಮಾವ ಎತ್ತಿ ಮಡಿಲಲ್ಲಿ ಕುಳ್ಳಿರಿಸಿದರು
ನಿನಗೆ ಯಾವುದರಲ್ಲಿ ಆಸೆ ಇದೆ ಮಗಳೆ
ಯಾವ ತರದ ಸೀರೆ-ರವಿಕೆ ಆಗಬೇಕೆಂದು ಸೊಸೆಯನು ಕೇಳುವರು
ಯಾವ ಸೀರೆ ರವಿಕೆಯೂ ಬೇಡ ನನಗೆ
ಮುಂದಲೆ ಸರ ಹೇಳುವಂತಹ
ಒಂದು ಮಾಲೆ ಇದೆ ಮಾವನವರೆ ಹೇಳಿದ್ದು ಕೇಳಿದ್ದೇನೆ ನಾನು
ಕಣ್ಣಾರೆ ನೋಡಲಿಲ್ಲ, ಕೈಯಲ್ಲಿ ಹಿಡಿಯಲಿಲ್ಲವೆಂದು
ಮಡಿಲಿಂದ ಕೆಳಗೆ ಇಳಿಸಿದರು ಕಲ್ಲಿನ ಕಲೆಂಬಿಯ ಮುಚ್ಚಳ ಒಡೆದರು
ಅರುವತ್ತು ತೂಕ ಬಂಗಾರ ತೆಗೆದರು ಮಾವನವರು
ಹೂವಿರುವ ಶಾಲಿನಲ್ಲಿ ಹೊದ್ದುಕೊಂಡು
ಆಚಾರಿ ಕೊಟ್ಟಿಗೆಗೆ ತಂದರು ಮಾವನವರು
ಈ ವಾರವಲ್ಲ ಬರುವ ವಾರದಲ್ಲಿ ಮಾಡಿ ತರಬೇಕು ಬಂಗಾರವನ್ನು
ಹಿಂದಕ್ಕೊಬ್ಬ ಈ ತರದ ಚಿನ್ನ ಮಾಡಿಸಿದ್ದೂ ಇಲ್ಲ

ಮುಂದಕ್ಕೊಬ್ಬ ಚಿನ್ನ ಮಾಡಲೂ ಬಾರದು ಎಂದು
ಬಂಗಾರ ಕೊಟ್ಟು ಬಂದಿಹರುಽ ಸೀಮಂತ ದಿನ ಬರುವುದು
ನುಂಗುರಗುತ್ತಿನ ನೆಂಟರು ಬಂದಿಹರು
ಬೆಳಿಗ್ಗೆ ಎಂಟು ಗಂಟೆಗೆ ಕೋಳಿ ಬಿಟ್ಟಿದ್ದಾರೆ
ಮಧ್ಯಾಹ್ನದ ಹೊತ್ತು ಆಗಿದೆ
ಹೂ ಸೀರೆ ಕೊಡುವರು ಅತ್ತೆಯವರು
ಯಾರು ಮಗಳೆ ನೀನು ಹೂ ಸೀರೆಗೆ ಕೈ ಕೊಡು ಎಂದು
ಯಾವ ಲೆಕ್ಕದ ಹೂ ಸೀರೆ ಅತ್ತೆಯವರೆ ನನಗೆ
ಕೊನೆ ಗಳಿಗೆಯ ಸೀರೆಯಾ ಎಂದು
ಶುಭ ಗಳಿಗೆಯಲ್ಲಿ ಮಗಳೆ ಕೆಟ್ಟ ಮಾತು ಆಡಬೇಡ
ಹೂ ಸೀರೆಗೆ ಕೈ ನೀಡಿದಳು ಮಗಳು
ಅತ್ತೆಯವರ ಕಾಲಿಗೆ ಅಡ್ಡ ಬಿದ್ದಳು
ಚಿನ್ನದ ಆಸನ ಇಟ್ಟಿದ್ದಾರೆ ಬೈರಾಸು ಕಟ್ಟು ಬಿಡಿಸಿದ್ದಾರೆ
ಬಸುರಿಯ ಶೃಂಗಾರ ಮಾಡುವಾಗಽ ಆಚಾರಿ ಚಿನ್ನವ ತರುವಽನು
ಮಾವನ ಕೈಯಲ್ಲಿ ಚಿನ್ನ ಕೊಟ್ಟನು
ಕೂಡಿದ ಸಭೆಗೆ ತೋರಿಸಿದರು ಬಸುರಿಯ ಕೊರಳಿಗೆ ತೊಡಿಸಿದರು
ಬಸುರಿಯನ್ನು ಸಿಂಗರಿಸಿದರು
ಅಂಗಳದ ಮಧ್ಯದಲ್ಲಿ ಇದೆ ಜುಮಾದಿಯ ಸಾನವದು
ಬಸುರಿಯ ಮೇಲೆ ದೃಷ್ಟಿ ಇಡುವುದು
ಸೀಮಂತ ವಿಧಿ ಮುಗಿಸಿದರು
ಸಂಭ್ರಮದ ಊಟವಾಗುವುದು ಬಡಕಾರೆಗುತ್ತಿನಲ್ಲಿ
ನುಂಗುರಗುತ್ತಿನ ನೆಂಟರು ಕೇಳುವರು
ನಮಗೆ ಗರ್ಭಿಣಿಯನ್ನು ಇಳಿಸಿ ಕೊಡಿರೆಂದು
ಸಂಜೆ ನಾಲ್ಕು ಗಂಟೆಗೆ ಗರ್ಭಿಣಿಯನು ಇಳಿಸಿ ಅತ್ತೆ ಮಾವ ಕೊಡುವರುಽ
ದಂಡಿಗೆ ಸಿಂಗರಿಸಿದರು
ಅತ್ತೆಯ ಬಳಿ ನಿಲ್ಲುವಳು ಮಗಳು ಬಾಲೆ ಮುಂಡ್ಯಾಪು
ಬಿಕ್ಕಿ ಬಿಕ್ಕಿ ಕಣ್ಣೀರು ಬಿಡುವಳು ಅತ್ತೆಯವರ ಬಳಿಯಲ್ಲಿ
ಶಾಸ್ತ್ರಕ್ಕಾಗಿ ಒಮ್ಮೆ ಹೋಗು ಮಗಳೆ ಹೋದ ದಂಡಿಗೆಯಲ್ಲೆ ಮರಳಿ ಬಾ ಎಂದು
ಅಷ್ಟರಲ್ಲೆ ಕರೆಯುವರು ಅತ್ತೆ ಯಾರು ಮಗ ಮಾಡಾಪುಽ
ನೀನೂ ದಂಡಿಗೆಯಲ್ಲಿ ಹೋಗು
ಹೋದ ದಂಡಿಗೆಯಲ್ಲೆ ಕರೆದು ತಾ ಎಂದು
ಅಮ್ಮಾ, ಈಗ ದಂಡಿಗೆ ಹೋಗಲಿ
ಕೂಡಿದ ಸಭೆಯನು ಕಳಿಸಿ ಮತ್ತೆ ನಾ ಹೋಗುವೆನೆಂದು
ಬಿಕ್ಕಿ ಬಿಕ್ಕಿ ಅಳುವಳು ಮಗಳು ದಂಡಿಗೆಯಲ್ಲಿ ಕುಳಿತುಕೊಂಡು ಹೋಗುವಳು

ಕಂಬಳದ ಕಟ್ಟ ಹುಣಿಯಲೆ ಹೋಗುತಿರಲು ತಂದೆಯವರೆ
ನನ್ನ ತಲೆ ಉರಿ ಬರುತ್ತಿದೆಃ
ನನ್ನ ತಲೆ ಜಲ್ಲಿಯೊಮ್ಮೆ ತೆಗೆಯಿರಿ ಎಂದು
ಬಸುರಿಯ ನೋಡಲು ಈಗಲೆ ಇರಬಹುದು ಮಗಳೆ
ನುಂಗುರಗುತ್ತಿನಲ್ಲಿ ನೆರೆಕರೆಯ ಹೆಂಗಸರು ಕೂಡಿರಬಹುದೆಂದು
ಹೇಗಾದರೂ ಹೋಗುವುದು ದಂಡಿಗೆ
ನುಂಗುರಗುತ್ತಿಗೆ ಮುಟ್ಟಿತದೊಃ
ದಂಡಿಗೆಯಿಂದ ಇಳಿಸಿದರು ಬಸುರಿಯನ್ನು ಕರೆದುಕೊಂಡು ಹೋಗುವರು
ನುಂಗುರಗುತ್ತಿನಲ್ಲಿ ಇಳಿಸಿದರು ದಂಡಿಗೆಯಿಂದ ಮಗಳನ್ನು
ನುಂಗುರಗುತ್ತಿಗೆ ಹೊಕ್ಕಳು ಮಗಳು ಚಾವಡಿಯೆಡೆ ಹೊರಳುವಳು
ನನ್ನ ಜಲ್ಲಿಯ ತೆಗೆಯಿರಿ ತಂದೆಯವರೆ ಎಂದು ಬಾಲೆ ಮುಂಡ್ಯಾಪು
ಹೇಳಿ ಹೇಳಿ ಕಾಯ ಬಿಟ್ಟು ಕೈಲಾಸಕ್ಕೆ ಸಂದಳು
ಜೀವ ಬಿಟ್ಟು ವೈಕುಂಠ ಸೇರಿದಳು ಮಗಳು ನಂಗುರಗುತ್ತಿನಲ್ಲಿ
ಸಾವು ಸಂಬಂಧ ಕೂಡಿದೆ
ಗಂಡು ಬೊಬ್ಬೆ, ಹೆಣ್ಣು ಅಳು ಎದ್ದಿದೆ
ಆ ಕಡೆ ಮಾವಿನ ಮರ ಕಡಿಸಿದ್ದಾರೆ ಈ ಕಡೆ ಹಲಸಿನ ಮರ ಬೀಳಿಸಿದ್ದಾರೆ
ಮಸಣದ ಕಡೆಯಲ್ಲಿ ಜೋಡಿಸಿದ್ದಾರೆ
ಮಸಣದ ಕಾಷ್ಠವನ್ನು ಏರಿಸಿದ್ದಾರೆ
ಹಾಕಿದ ಜಲ್ಲಿಯಲ್ಲಿ, ಮಾಡಿದ ಸಿಂಗಾರದಲ್ಲಿ
ಬಾಲೆ ಮುಂಡ್ಯಾಪುವನ್ನು ಕರೆತಂದರು
ಎಡಬದಿಗೆ ಪ್ರದಕ್ಷಿಣೆ ಮಾಡಿಸಿದರು
ಕಾಷ್ಠದಲ್ಲಿ ಇಟ್ಟರು ನೀರು ಕುಡಿಸಿದರು
ಕೆಳಗಿಂದ ಕೊಳ್ಳಿ ಇಟ್ಟರು ಅಷ್ಟರೊಳು ಬರುವರು
ಬಾಲೆ ಮುಂಡ್ಯಾಪುವಿನ ಗಂಡ ಬರುವಾಗಲೇ
ನೆರೆಕರೆಯಲ್ಲಿ ಕೇಳುವರು ನುಂಗುರಗುತ್ತಿನಲ್ಲಿ ಏನು ಹೊಗೆ ಏಳುವುದೆಂದು
ನಿನ್ನೆ ಸುಡುಮಣ್ಣು ಒಟ್ಟು ಮಾಡುತ್ತಿದ್ದರು
ಇಂದು ಬೆಂಕಿ ಕೊಟ್ಟರು ಎಂದು
ನೆರೆಕರೆಯವರು ಹೇಳುವರು ಗಂಡಸು ಮಾಡಾಪುವಿನಲ್ಲಿ
ಚಿತೆ ಹತ್ತಿರ ಬರುವಾಗ ಮಾವ ಬಂದಿಹರು
ನಿನಗೊಂದು ಹೆಂಡತಿ ಹೆಚ್ಚಿಗೆಯಲ್ಲ
ನನಗೊಂದು ಮಗಳು ಕಡಿಮೆ ಅಲ್ಲವೆಂದು
ಕರೆದುಕೊಂಡು ಬರುವರು ಮಾಡಾಪುವನ್ನು
ನುಂಗುರಗುತ್ತಿನಲ್ಲಿ ಇದ್ದಾರೆ ಮಾಡಾಪುಃ ಮಾವನ ಮನೆಯಲ್ಲಿ

ಪೆಂರ್ದದಿ

ಮಟ್ಟಾರ ಬೀಡಿನಿಂದ ಹೊರಟು
ಮಲಾರ ಬೀಡಿಗೆ ಮುಟ್ಟಿಹರು
ಸಂತಾನ ಸಂತತಿ ಇಲ್ಲವಲ್ಲ ಅಣ್ಣ
ನಾವೊಂದು ಹರಕೆಯನು ಹೇಳಬೇಕು
ಅಣ್ಣ–ತಂಗಿ, ಭಾವ–ಭಾವ ಹೊರಟು
ಮಲಾರ ಬೀಡಿನಿಂದ ಇಳಿದಿಹರು
ಕೋಳ್ಯೂರ ಬಯಲಿಗೆ ಹೋಗಿಹರು
ಕೆರೆಯಲ್ಲಿ ಮಿಂದು ಬಂದಿಹರು
ಚಾವಡಿ ದಾಟಿ ಮೆಲ್ಲನೆ ಇಳಿದು
ದೇವರಿಗೆ ಮುಖ ಹಾಕಿ ನಿಂತಿಹರು
ಪಂರ್ದೆದಿಗೆ ಹರಕೆ ಹೇಳುವರು ಬಲ್ಲಾಳರು
ಮಲಾರ ಬೀಡಿನ ಬಲ್ಲಾಳರು
ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು ಕೊಡುವೆವೆಂದು
ಹರಕೆ ಹೇಳಿದರು ಬಲ್ಲಾಳರು
ಪಂರ್ದೆದಿಯ ಒಡಲಿಗೆ ಅಂಗೈ ತುಂಬ ತೀರ್ಥ
ದೇವರ ಹರಿವಾಣದಿಂದ ನೀಡಿಹರು
ಹರಕೆ ಸಲ್ಲಿಸಿ ಕೈ ಮುಗಿದು
ಅಂಗಣವನಿಳಿದು ಬಂದಿಹರು
ದಾರಿಯುದ್ದಕ್ಕೂ ಅಳುಕುತ್ತಾ ಬಳುಕುತ್ತಾ
ಮಲಾರ ಬೀಡಿಗೆ ಬಂದಿಹರು
ಯಾರಣ್ಣ ನೀವು, ಅಣ್ಣ ನೀವು ಕೇಳಿ
ಬೀಡಿಗೆ ನಾ ದೂರವಾಗಿಹೆನು
ಕರಿಯಕ್ಕೆ ಹತ್ತಿರವಾಗಿಹೆನು ಅಣ್ಣ ಎನುತ
ಬಚ್ಚಲ ಕೊಟ್ಟಿಗೆಗೆ ಹೋಗಿಹರು
ಬಚ್ಚಲ ಕೊಟ್ಟಿಗೆಗೆ ಹೋಗಲು ಪಂರ್ದೆದಿ
ಬಲ್ಲಾಳರು ಮನೆಯೊಳಗೆ ಹೊಕ್ಕಿಹರು
ಎಲ್ಲಿರುವೆ ಕಾಪುರ ಮದುಮಗಳೆ ನೀ ಕೇಳು
ನನ್ನಯ ತಂಗಿ ಸೂತಕವಾಗಿಹಳು
ಬದಲಿಸೆ ಪಟ್ಟೆ ಸೀರೆ ಕೊಡು ನೀ ಕಾಪುರ

ಬಿಸಿಯಾದ ಅಡುಗೆಯನು ಮಾಡೆಂದರು
ಹೆಂಗಸರ ಸೇಲೆಗೆ ಗಂಡಸರ ಒಪ್ಪಸಾಲೆ
ಹರಕೆ ಹೇಳಿ ಸೂತಕವಾಯಿತೇನೊ?
ಬಿಸಿಯಾದ ಅಡುಗೆ ಮಾಡಿ ಬಡಿಸೆಂದು ಹೇಳಿದರು
ಮಲಾರ ಬಲ್ಲಾಳರು ಮಡದಿಯಲಿ
ಹಳಸಿಹ ತಂಗಳನ್ನವನು ಹಾಳಾದ ಉಪ್ಪಿನಕಾಯನು
ಸೂತಕದ ಮಗಳಿಗೆ ಬಡಿಸಿದಳು
ಉಂಡ ಹಾಗೆ ನಟಿಸಿದಳು ಮಗಳು ಪಂರ್ದೆದಿ
ಎಲ್ಲಿದ್ದೀರಿ ಮದುಮಗ ಕೇಳಿ ನೀವಿಲ್ಲಿ
ನಾವೀಗಲೇ ಹೋಗೋಣವೆಂದು ಗಂಡನಲಿ ಹೇಳುವಳು
ಮಟ್ಟಾರ ಬೀಡಿಗೆ ಹೊರಟಿಹರು
ಮಟ್ಟಾರ ಬೀಡಿಗೆ ಹೊರಡಲು ಹೇಳುವರು ಬಲ್ಲಾಳರು
ಯಾರಮ್ಮ ಮಗಳೆ ತಂಗೀ ನೀ ಕೇಳು
ಇಂದು ನೀ ಹೊರಟು ಹೋದರೆ ಮಗಳೆ
ಜೀವದಿ ನಿನ್ನ ಮುಖ ನಾ ನೋಡೆನೆಂದು
ಮಲಾರ ಬೀಡಿಳಿದು ಹೊರಟೆ ಹೋದರು ಅವರು
ಮಟ್ಟಾರ ಬೀಡಿಗೆ ಮುಟ್ಟಿದರು
ಅಂದಿನ ದಿನಗಳು ಉರುಳಿಹುದು ಪಂರ್ದೆದಿಗೆ
ಸಮಯ ದಾಟಿ ಬಂದಿಹುದು
ಆರೇಳು ತಿಂಗಳು ಆಯಿತದೊ ಮಗಳಿಗೆ
ನನ್ನ ಮದುಮಗ ನೀವು ಕೇಳಿದಿರಾ
ನನ್ನ ಅಣ್ಣನನೊಮ್ಮೆ ಬರಹೇಳಬೇಕು
ಸೀಮಂತಕ್ಕೆ ದಿನವಿಡಬೇಕೆಂದಳು
ಮಲಾರ ಬೀಡಿಗೆ ಬಂದಿಹರು ಆ ಗಂಡಸು
ಬಂದು ತೂಗುಯ್ಯಾಲೆಯಲಿ ಭಾವನ ಬಳಿ ಕುಳಿತಿಹರು
ಭಾವ ಕೇಳಿ, ನಿಮ್ಮ ತಂಗಿ, ನನ್ನ ಹೆಂಡತಿ
ಸೀಮಂತಕ್ಕೆ ದಿನವಿಡಲು ನೀವು ಬರಬೇಕು
ಅದನು ಕೇಳುವಳು ಕಾಪುರ ಮದುಮಗಳು
ಹೆಂಗಸಿಗೆ 'ಬಯಕೆ'ಗೆ ದಿನವಿಡಲು
ಗಂಡಸು ಯಾಕೆಂದು ಹೇಳುವಳು
ಮಲಾರ ಬೀಡಿನಿಂದ ಇಳಿದಿಹರು ಗಂಡಸು
ಮಟ್ಟಾರ ಬೀಡಿಗೆ ಬಂದಿಹರು
ಸೀಮಂತಕ್ಕೆ ದಿನವಿಡೆ ನಾವಂದು ಹೋಗಿಲ್ಲ

‘ಮರ್ಯಾದೆ’ ಕೊಂಡು ತಾ ಹೋಗಬೇಕು
ಬಂಗಾರ ತೆಗೆದು ತಾ ಹೋಗೋಣವಾ ಎಂದು
ಮಲಾರ ಬಲ್ಲಾಳರು ಕೇಳುವರು
ಪಂರ್ದೆದಿಗೆ ಬಂಗಾರ ಕೊಂಡುಹೋಗಲು ಮದುಮಗ
ನನ್ನ ಓಲೆಗೇ ‘ತಾಂಗು’ ಇಲ್ಲವಲ್ಲ
ಸೀಮಂತ ಮರ್ಯಾದೆ ಕೊಂಡುಹೋಗುವುದಕ್ಕಿಂತ ಬಲ್ಲಾಳರೆ
ಮೂಗುತಿಗೆ ಕುಸುರು ಇಲ್ಲವೆಂದಳು
ಮಟ್ಪಾರ ಬೀಡಿನಲಿ ಶುಭ ಗಳಿಗೆಯಲಿ ಮಾಡಿಸಿಹರು ‘ಸೀಮಂತ’
ಸೀಮಂತ ದಿನವು ಕಳೆದಿಹುದು
ಎಂಟು ತಿಂಗಳು ದಾಟಿಹುದು ಮಗಳಿಗೆ
ಹತ್ತು ‘ಪಾದಾಪ್ಯ’ ತಿಂಗಳಿನಲ್ಲಿ
‘ಸೆಲಿವುಲ್ಲ’ ಮುಖದಲ್ಲಿ ಕಾಣುವುದು ಪಂರ್ದೆದಿಗೆ
‘ಪುಲಿವುಲ್ಲ’ ನೋವು ಕಾಣುವುದು
ನನ್ನಯ ಅಣ್ಣಗೆ ಜನವೊಂದ ಕಳಿಸಿ ಎಂದು
ಪಂರ್ದೆದಿ ಒಡನೆಯೇ ಹೇಳಿದಳು
ಹಾಕಿಹ ‘ನೇಲೆ’ಯಲ್ಲಿ ಇಹಳು ಮಗಳು
ಒಂದಲ್ಲ ಎರಡು ಜನವ ಕಳಿಸಿಹರು
ಹೆಂಗಸಿಗೆ ನೋವು ಬರುವಾಗ
ಗಂಡಸಿವರು ಯಾಕೆಂದು ಕಾಪುರ ಒಡನೆ ಹೇಳಿದಳು
ಮೂರನೆ ಜನವ ಕರೆಸಿಹಳು ಪಂರ್ದೆದಿ
ನನ್ನಣ್ಣನ ಮುಖ ನೋಡದೆ ನನ್ನ ಜೀವವದು ಹೋಗದೆಂದು
ಪಂರ್ದೆದಿ ಹೇಳಿ ಕಳಿಸಿದಳು
ಹೋದ ಜನ ಹೇಳಿಹುದು ಅಲ್ಲಿ
ಮಲಾರ ಬೀಡಿನಲಿ ಹೇಳಿರುವರು
ನಿಮ್ಮ ಮುಖವ ನೋಡದೆ ಬಲ್ಲಾಳರೆ
ನಿಮ್ಮ ತಂಗಿಯ ಜೀವ ಹೋಗದೆಂದು
ಥಟಕ್ಕನೆ ಎದ್ದು ಹೊರಟಿಹರು ಬಲ್ಲಾಳರು
ಮಟ್ಪಾರ ಬೀಡಿಗೆ ಬಂದಿಹರು
ನನ್ನಣ್ಣ ಬಂದರೇ ಬಂದರೇ ಎಂದು
ಇಣುಕಿ ತಾ ನೋಡುವಳು ಪಂರ್ದೆದಿಯು
ಅಣ್ಣನ ಮುಖ ತಾ ನೋಡಿತಿರೆ ಮಗಳು
ಅತ್ತ ಕಡೆ ಮಗುವು ಬೀಳುವುದು
ಹೆಣ್ಣು ಮಗುವನು ಹೆತ್ತಿಹಳು ಪಂರ್ದೆದಿಯ

ಇತ್ತ ಕಡೆ ಅವಳ ಪ್ರಾಣ ಹೋಗಿಹುದು
ಮಲಾರ ಬಲ್ಲಾಳರು ತೆಗೆಸಿಹರು ಮರಣವನು
ಪೆಂರ್ದೆದಿಯ ಹೆಣವನು ಸುಟ್ಟು ಆಗಿಹುದು
ಆಕಾಶಕ್ಕೆ ಹೊಗೆ ಭೂಮಿಗೆ ಬೂದಿ ಸೇರಿಹುದು
ತಣ್ಣೀರು ಮಿಂದು ಬಲ್ಲಾಳರು ಒಳಬಂದರು
ಪಟ್ಟೆಯ ಶಾಲು ಹಿಡಿದಿಹರು ಬಲ್ಲಾಳರು
ಭಾವನ ಕರೆದು ಹೇಳುವರು
ನನ್ನ ತಂಗಿಯ ಮಗುವ ನನಗೆ ಕೊಡಿರೆಂದು ಕೇಳಿ
ಪಟ್ಟೆಯ ಶಾಲಿನಲಿ ಹೊದ್ದು ತಾ ಮಗುವನ್ನು
ತೆಗೆದುಕೊಂಡು ಬರುವರು ಬಲ್ಲಾಳರು
ದೂರದಿಂದಲೇ ತಾ ನೋಡುವಳು ಮಗಳು
ಕಾಪುರ ಮದುಮಗಳು ನೋಡುವಳು
'ಮಂಗು' ಸತ್ತರೂ ಮಂಗುವಿನ ಸಂತತಿ
ಮುಗಿದಿಲ್ಲವೆಂದು ಕಾಪುರ ಹೇಳುವಳು
ಊರವರ ಮಗುವ ಎತ್ತಿದೊಡೆ ಮದುಮಗ
ಸೊಂಟದಲಿ ಕಜ್ಜಿಯಾಗುವುದೆಂದಳು
ಮಲಾರ ಬಲ್ಲಾಳರು ಚಂದದಲಿ ಬೆಳೆಸಿಹರು
ಬಹಳ ಪ್ರೀತಿಯಲಿ ಮಗುವ ಸಾಕಿಸಿಹರು
ಮಲಾರ ಬೀಡಿನಲಿ ಸಾಕಿಹರು ಬಲ್ಲಾಳರು
ಚೆಲುವೆ ಹುಡುಗಿ ಕರ್ನಗಳನ್ನು
ಎಳೆ ಹರೆಯ ದಾಟಿ ದೊಡ್ಡವಳಾಗಿಹಳು ಕರ್ನಗ
ಮಾವ ಬಲ್ಲಾಳರು ಕರೆಯುವರು ಅವಳನೂ
ಯಾರಮ್ಮ ಕಾಪುರ ಮದುಮಗಳೆ ನೀನು
ಅಡುಗೆ–ಆರೋಗಣೆ ಮಾಡುವಿಯಾ?
ಬಿಸಿನೀರು ಕಾಯಿಸಿ ಕೊಡುವಿಯಾ ಎಂದು
ಮಲಾರ ಬಲ್ಲಾಳರು ಕೇಳಿಹರು
ನನ್ನ ಮದುಮಗ ಬಲ್ಲಾಳರೆ ಕೇಳಿ
ಅಡುಗೆ ಆರೋಗಣೆ ನಾ ಮಾಡಲಾರೆ
ಬಿಸಿನೀರು ಕಾಯಿಸಿ ನಾ ಕೊಡುವೆನೆಂದು
ಕಾಪುರ ಒಡನೆ ಹೇಳಿದಳು
ಸೊಸೆ ಕರ್ನಗಳ ಕರೆದು ಕೇಳುವರು ಬಲ್ಲಾಳರು
ಅಡುಗೆ–ಆರೋಗಣೆ ಮಾಡುವೆಯೋ ಮಗಳೆ
ಬಿಸಿನೀರು ಕಾಯಿಸಿ ಕೊಡುವೆಯೋ ಎಂದು

ಅಡುಗೆ–ಆರೋಗಣೆ ನಾ ಮಾಡುವೆನು ಮಾವ
ಎಂದು ಕರ್ನಗ ಒಡನೆ ಹೇಳುವಳು
ಬೆಳಗ್ಗಿನ ಹೊತ್ತಲಿ ಎದ್ದಳು ಮಗಳು
ಹುಡುಗಿ ಕರ್ನಗ ಎದ್ದಳು
ಶುದ್ಧವಾಗಿ ನೆಲ ಸಾರಿಸಿದಳು ಕರ್ನಗ
ಮೆಟ್ಟಿಲು ಕಟ್ಟಿದ ಬಾವಿಯಲ್ಲಿಗೆ ಹೋಗುವಳು
ಆಕಾಶದ ರಾಟೆಮರ ಹಿಡಿಯುವಳು ಕರ್ನಗ
ಅನ್ನದ ಪಾತ್ರೆಯಲಿ ನೀರು ತುಂಬಿಸಿದಳು
ತನ್ನೊಂದು ಚೆಲುವಾದ ಸೊಂಟದಲಿ ಇಡುವಳು
ಮಲಾರ ಬೀಡಿನ ಒಳ ಹೊಕ್ಕಳು
ಅನ್ನದ ಪಾತ್ರೆಯನು ಇಡುವಳು ಮಗಳು
ತುದಿಯೊಂದು ಒಲೆಯಲ್ಲಿ ಇಟ್ಟಿಹಳು
ಕೆಳಗೆ ಕೆಂಡ–ಧೂಪ ಹಾಕಿಹಳು ಕರ್ನಗ
ಮೇಲೆ ಮುಚ್ಚಳ ಮುಚ್ಚಿಹಳು
ಮುಡಿಯಿಂದ ಬಿಳಿ ಅಕ್ಕಿ ತೆಗೆದಳು ಕರ್ನಗ
ಮೇಲಿನಿಂದ ಕಲಗಚ್ಚು ತೆಗೆದಳು
ಅಡಿಯಲ್ಲಿದ್ದ ಕಲ್ಲು–ಹೊಯಿಗೆ ತೆಗೆದಳು ಮಗಳು
ಹುಡುಗಿ ತಾ ಕರ್ನಗ ತೆಗೆದಳು
ಅನ್ನದ ಮಡಕೆಗೆ ಹಾಕಿದಳು
ಕೆಳಗೆ ಕೆಂಡ–ಧೂಪ ಹಾಕಿದಳು
ಕಿರಿದಾದ ಕತ್ತಿಯ, ಪಂಚ ಕುಕ್ಕೆಯ
ಹಿಡಿಯುತ ಕರ್ನಾಗ ಹೋಗುವಳು
ಮಾವನು ನೆಡಿಸಿದ ನಂದನದ ಹಿತ್ತಲಿಗೆ
ಕರ್ನಗ ಒಡನೆಯೆ ಹೋಗಿಹಳು
ಕಂಚಿನ ಕಣೆಬೇಲಿ ಸರಿಸಿದಳು ಕರ್ನಗ
ಕಂಚಿನ ಬೀಗವ ತೆಗೆದಿಹಳು
ತರಕಾರಿ ಹಿತ್ತಲ ಒಳ ಹೊಕ್ಕು ಮಗಳು
ಮರೆಯಲ್ಲಿದ್ದ ಅಲಸಂಡೆ, ಕೋಡು ಬೆಂಡೆ
ಉದ್ದವಿಹ ಪಡುವಳ, ಬಣ್ಣದ ಸೌತೆ
ಬಟ್ಟಲು ಚೀನಿ, ಗೆಜ್ಜೆಯಿಹ ಹಾಗಲ
ತರಕಾರಿ ಕೊಯ್ದು ತಾ ಬಂದಿಹಳು
ಹಿತ್ತಲ ಒಳಗಿಂದ ಹೊರ ಬಂದಳು ಕರ್ನಗ
ಕಂಚಿನ ಕಣೆಬೇಲಿ ಹಾಕಿದಳು

ತೊಂಡೆಯ ಚಪ್ಪರಕ್ಕೆ ಹಾರಿಸಿ ನೀರನು
ಬಿಳಿ ಹರಿವೆ, ಒಂದು ಸೇರು ತೊಂಡೆ ಕೊಯ್ದಿಹಳು
ತಲೆ ಎತ್ತಿ ನೋಡಲು ಕಾಣುವುದು ಕರ್ನಗಳಿಗೆ
ಬಂಗಬಾಳೆಯ ಗೊನೆಯು ಕಾಣುವುದು
ಇದರೊಂದು 'ಪಣ್ಣೆ' ತೆಗೆದು ತಾ ಹೋಗುವೆನು
ನನ್ನ ಮಾವನಿಗೇ ಪಲ್ಯಕೆಂದು
ಅಷ್ಟರಲ್ಲೆ ಕೇಳುವುದು ಕರೆಯೊಂದು ಮೇಲಿಂದ
'ಕೊಡಿ ಕಟ್ಟಿಹುದು' ಎಂದು ಹೇಳುವುದು
ಮಲಾರ ಜಮಾದಿಗೆ 'ಕೊಡಿ ಕಟ್ಟಿದೆಯೆಂದು' ಹೇಳಿದುದು
ಹುಡುಗಿ ಕರ್ನಗಳಿಗೆ ಕೇಳಿಸಿತು
ಕೊಡಿ ಕಟ್ಟಿದೊಡೆ ಭಯವಿಲ್ಲ, ಇರಲಿ ಎಂದೆನುವಳು
ಕೆಳಗಿಂದ ತಾನೆ ನಾ ತೆಗೆಯುವುದೆಂದು
ಒಂದು 'ಪಣ್ಣೆ' ಕಿತ್ತು ತಾ ಬಂದಳು ಕರ್ನಗ
ಮಲಾರ ಬೀಡಿಗೆ ನುಗ್ಗಿದಳು
ಚಾವಡಿ ಮಧ್ಯದಿ ಹಾಕಿಹಳು ತರಕಾರಿ
ಬೆಂದ ಅನ್ನವನವಳು ಸೋಸಿದಳು
ಮೊನೆಯುಳ್ಳ ಮೆಟ್ಟುಕತ್ತಿ, ದೊಡ್ಡ ಮಡಕೆಯನೊಂದ
ಚಾವಡಿ ಮಧ್ಯಕೆ ತಂದಿಹಳು
ಅಡ್ಡನೆ ತುಂಡರಿಸಿ ಪಲ್ಯಕ್ಕೆ ಇಟ್ಟಿಹಳು
ಉದ್ದನೆ ತುಂಡರಿಸಿ ಕೊದಿಳಿಗೆ
ಅಡುಗೆಯ ಕೋಣೆಗೆ ತುಂಡರಿಸಿ ಕೊಂಡೊಯ್ದು
ಅಡುಗೆ–ಆರೋಗಣೆ ಮಾಡುವಳು
ಬಿಸಿನೀರು ಹದವಾಗಿ ಕಾಯಿಸುವಳು ಕಾಪುರ
ಬಲ್ಲಾಳರ ಸ್ನಾನವು ಆಗಿಹುದು
ಊಟಕ್ಕೆ ಕುಳಿತಿಹರು ಬಲ್ಲಾಳರು
ಮಲಾರ ಬೀಡಿನ ಬಲ್ಲಾಳರು
ಪಲ್ಯವ ಬದಿಯಲ್ಲಿ ಬಡಿಸಿದಳು
ಅನ್ನದ ಬದಿಗೆ ಬಡಿಸೆ ಬೀಳುವುದು
ತಲೆಗೂದಲು–ಹೊಯಿಗೆ ಬೀಳುವುದು
ಅನ್ನವ ತೆಗೆಯುತ ಬಾಯಿಗೆ ಇಡಲು
ಹಿಡಿ ಹಿಡಿ ಕೂದಲು ಸಿಗುವುದು
ಯಾರಮ್ಮ ಕರ್ನಾಗ ಕರ್ನಾಗ ನೀ ಕೇಳು
ಈ ರೀತಿ ಅಡುಗೆ ಮಾಡುವುದೇನು?

ಎನುತಲಿ ಊಟ ಬಿಟ್ಟು ಎದ್ದರು ಬಲ್ಲಾಳರು
ಸೊಸೆಯ ಜುಟ್ಟು ತಾ ಹಿಡಿದರು
ಕೈ ಬಳಲುವಷ್ಟು ಕೈಯಲ್ಲಿ ಗುದ್ದಿದರು
ಕಾಲು ಬಳಲುವಷ್ಟು ಕಾಲಲ್ಲಿ ಒದೆದರು
ಬಲ್ಲಾಳರು ಮಣೆಯಿಂದ ಎದ್ದಿಹರು
ಅಷ್ಟರಲ್ಲಿ ಬರುವುದು ಓಲೆಯೊಂದವರಿಗೆ
ಮಲಾರ ಬಲ್ಲಾಳರಿಗೆ ಬರುವುದು
ಮಲಾರ ಗೋಳಿಯ ಬುಡದಲ್ಲಿ ಜನ ಸೇರಿಹುದು
ಏಳು ರಾತ್ರಿ ಎಂಟು ಹಗಲು
ಕೂಟದ ಕಳ ಕೂಡಿಹುದು
ನ್ಯಾಯ ಹುಟ್ಟುವುದಿಲ್ಲ,
ಕೂಟ ಮುಗಿಯುವುದಿಲ್ಲವೆಂದು ಹೇಳುವರು
ಮಲಾರ ಬೀಡಿಗೆ ಬಂದಿಲ್ಲ ಮಾಣಿಯು
ಬಾರದೆ ಉಳಿದಿಹುದೊ ಹೇಳದೆ ಉಳಿದಿಹುದೊ ಎಂದು
ಕೂಟದ ಕಳದಲ್ಲಿ ಕೇಳುವರು
ಅಲ್ಲಿಂದ ಬಂದಿಹ ಓಲೆಯೊಂದ ನೋಡಿದೊಡನೆ
ಧಿಡಕ್ಕನೆದ್ದು ಬಲ್ಲಾಳರು ತಾ ಹೋಗಿಹರು
ಮಲಾರ ಗೋಳಿಯ ಬುಡಕ್ಕೆ ಹೋಗಿಹರು
ಮಲಾರ ಬಲ್ಲಾಳರು ಮುಟ್ಟಿಹರು
ನನ್ನ ಮಾವ ಬಂದೊಡೆ ಬಿಡಲಾರರೆಂದು
ಕರ್ನಗ ಮಲಾರ ಬಾವಿಗೆ ಹಾರಿದಳು
ಮಲಾರ ಬೀಡಿನಲಿ ನಂಬುತ ಇರಬೇಕೆನ್ನ
ಸೇವೆಯ ನೀಡಬೇಕೆಂದು ಹೇಳಿದಳು
ಗೋಳಿಯ ಬುಡದಿಂದ ಬರವರು ಬಲ್ಲಾಳರು
ನನ್ನ ಸೊಸೆ ಎಲ್ಲೆಂದು ಹುಡುಕುವರು
ಎಲ್ಲೆಲ್ಲು ಹುಡುಕದರೂ ಕರ್ನಗ ಸಿಗಲಿಲ್ಲ
ತಲೆಗೆನ್ನ ಕಲ್ಲು ಹಾಕಿದಳೆಂದು
ಮಲಾರ ಬಲ್ಲಾಳರು ತೆಗೆಸಿದರು ಮರಣ
ಕರ್ನಗಳ ಸುಟ್ಟು ಬೂದಿ ಮಾಡಿಸಿಹರು
ಮಲಾರ ಬೀಡಿನಲಿ ನಂಬುವರು
ಮಲಾರ ಜುಮಾದಿಯೆಂದು ನಂಬುವರು

* * * *

ಬಾಲೆ ಕಾಂತಗೆ

ಮೂಡಣ ಮುಡರೆಗುತ್ತಿನಲ್ಲಿ ಇಹಳು
ಮಗಳು ಕಾಂತಗ ಇಹಳು
ಮೊದಲಿಗೆ ಗಂಡುಮಗು ಹೆತ್ತಳು ಕಾಂತಗ
ಬಳಿಕ ಹೆಣ್ಣು ಮಗು ಹೆತ್ತಳು
ದೊಡ್ಡ ಮಗನು ಬರಹದ ಶಾಲೆಗೆ ಹೋಗಿಹನು
ಹೆಣ್ಣು ಮಗು ಹೆತ್ತು ಮೂರು ದಿವಸವಾಗಿಹುದು
ಅತ್ತೆಯವರು ಇಹರು
ಸೊಸೆಯನ್ನು ಬಚ್ಚಲಿಗೆ ಕರೆದೊಯ್ದು
ಬೆನ್ನಿಗೆ ಎಣ್ಣೆಯ ಹಚ್ಚುವರು
ಬಚ್ಚಲ ಹಳ್ಳದಲಿ ಕೂರಿಸಿಹರು ಅತ್ತೆ
ಪೂವಕ್ಕೆ ಹೆಂಗಸು ಕುಳ್ಳಿರಿಸಿಹರು
ಒಂದು 'ರೋಂಕ' ನೀರು ಎರೆಯುವರು ಅತ್ತೆ
ಬಾಣಂತಿ ಬೆನ್ನಿಗೆ ಎರೆಯುವರು
ಅತ್ತೇ, ಅತ್ತೇ ಬಿಸಿನೀರು ಸುಡುತ್ತಿದೆ
ನಾನು ಸತ್ತೇನು ಎನುವಳು ಮಗಳು
ಮಗಳು ಕಾಂತಗ ಹೇಳುವಳು
ಕಾಲಿನ 'ಕರ್ಕಡ'ದಲ್ಲೇ ಕಿವಿಯ ಕುಂಡಲದಲ್ಲೇ
ಎಳೆ ವಯಸ್ಸಿನಲ್ಲೇ ನೀ ಬಂದಿಹೆ
ಬೆಳೆದು ದೊಡ್ಡವಳಾಗಿರುವಿ ಕಾಂತಗ
ಒಂದಲ್ಲ ಎರಡು ನೀ ಹೆತ್ತಿರುವೆ
ನಿನ್ನ 'ಕೂಟ–ಕುಟುಂಬ' ಕೇಳು
ನಾಯಿ ಮರಿಯೋ, ಬೆಕ್ಕು ಮರಿಯೊ ಎಂದು ನೋಡಿಲ್ಲ
ಇಂದು ನಿನಗೆ ಬಿಸಿನೀರು ಸುಡುವುದೋ ಎಂದಳು
ರೋಂಕದ ತುದಿ ಬದಲಿಸಿ ಹೊಡೆದಳು
ಬಚ್ಚಲ ಕೊಟ್ಟಿಗೆಯಿಂದ ಬಂದಳು ಕಾಂತಗ
ಸೆರಗಿನಿಂದ ಬೆನ್ನ ನೊರಸಿದಳು
ಕಾದ ಬಿಸಿನೀರು ಹಂಡೆಯಲ್ಲಾಯಿತು

ಹಚ್ಚಿದ ಎಣ್ಣೆಯು ಮೈಯಲ್ಲೆ ಉಂಟಪ್ಪ
ಮೂಡಣ ಮುಡರೆಗುತ್ತಿಗೆ ಹೊಕ್ಕಳು
ಅಷ್ಟರ ಹೊತ್ತಿಗೆ ಬರುವನು ಮಗನು
ಬರಹದ ಶಾಲೆಯಿಂದ ಬರುವನು
ಎಡಗೈಯಲಿ ಪುಸ್ತಕದ ಕಟ್ಟು ಹಿಡಿದಿಹನು
ಬಲಗೈಯಲಿ ಚಿಗುರು ಹುಲ್ಲು ಕಿತ್ತಿಹನು
ಚಿಗುರುಹುಲ್ಲು ತಂದು ಕರುಗಳಿಗೆ ಹಾಕಿಹನು
ಹೊತ್ತಗೆಯಿಡುವ ಹಲಗೆಯಲಿ ಹೊತ್ತಗೆಯನಿಟ್ಟನು
ತಾಯಿ ಮಲಗಿರುವಲ್ಲಿಗೆ ಬರುವನು ಮಗನು
ಯಾರಮ್ಮ ನೀವು, ಅಮ್ಮ ಕೇಳಿದಿರೇ
ನನಗಿರನಿತು ಅನ್ನವ ಬಡಿಸಿರಮ್ಮಾ ಎಂದು
ಮಗನು ಒಡನೆಯೇ ಕೇಳಿದನು
ಮೂರು ದಿನಗಳ ಬಾಣಂತಿ ಮಗ ನಾನು
ಹೇಗೆ ಅನ್ನವನು ಬಡಿಸಲೆಂದು ಹೇಳುವಳು
ಕಾದ ನೀರು ಹಂಡೆಯಲ್ಲಿದೆ ಮಗ
ಹಚ್ಚಿದ ಎಣ್ಣೆಯದು ಮೈಯಲ್ಲಿದೆಯೆಂದು
ತಾಯಿ ಹೇಳಿದೊಡೆ ಹೇಳುವನು ಮಗ ಕಾಂತಣ
ಯಾರಮ್ಮ ನೀವು ಕೇಳಿದಿರೇ
ತಾಯೊಬ್ಬಳಿಗೆ ನೀವೊಬ್ಬರೇ ಮಗಳೋ
ಒಡಹುಟ್ಟಿದವರಾರೂ ಇಲ್ಲವೇನಮ್ಮ?
ಯಾವ ಕುಲದೇವರೂ ನಮಗಿಲ್ಲವೆ?
ಕೂಟ, ಕುಟುಂಬ ಎಲ್ಲಿದೆಯಮ್ಮಾ?
ಆದಿ ಆಲಡೆಯೆಲ್ಲೆಂದು ಕೇಳುವನು
ಮಗ ನಿಂತು ಕೇಳಲು ಹೇಳುವಳು ತಾಯಿ
ಕಾಂತಗೆ ಒಡನೆಯೇ ಹೇಳುವಳು
ತಾಯವಳಿಗೆ ಮಗಳೊಬ್ಬಳೇ ಅಲ್ಲ ಮಗು ನಾನು
ನಿನ್ನ ಮಾವನಿಹನು
ಪಲ್ಲೆಜಾಲಗುತ್ತಿನಲಿ ಮಾನ್ಯೊಟ್ಟು ಬರ್ಕೆಯಲಿ
ಪೂವಣಿ ಪೂಂಜರವರು ಇದ್ದಾರೆ
ಬಾಯ 'ಹಾಲು-ಹಲ್ಲು' ಉದುರುವ ಮೊದಲೇ ಮಗು
ನನ್ನನು ಅನ್ಯರ ವಶ ಮಾಡಿ ಕೊಟ್ಟಿಹರು
ಅವರಾಗಿ ಬಂದುದೂ ಇಲ್ಲ ಮಗು
ನಾನಾಗಿ ಹೋದುದೂ ಇಲ್ಲವೆನಲು

ಅಮ್ಮ ನೀವೇಳಿ, ಏಳಿ ನೀವು
ಒಂದಿಷ್ಟು ಅನ್ನವನು ಬಡಿಸಿ ನನಗೆಂದು
ಉಂಡು ನಾನೊಮ್ಮೆ ಅಮ್ಮ ಹೋಗುವೆನು
ನನ್ನ ಮಾವನ ಬಳಿ ಹೋಗುವೆನು
ಏನಿದು ಮಗು ಕಾಂತಣ ಕೇಳು
ಇನಿತು ಎಳೆಹರೆಯದ ಮಗನಾದ ನೀನು
ಹೋಗುವುದೆಂತು ಮಗು ಎನುವಳು
ಅಮ್ಮ ನೀವೇಳಿ ನನಗಿಷ್ಟು ಅನ್ನವನು
ಬಡಿಸಿರೆಂದನು ಮಗು ಕಾಂತಣನು
ತಾಯಿಯೆದ್ದು ಹೋಗಿಹಳು ಒಳಗೆ
ಒಂಗ ಕಂಗಣ ಅನ್ನ ಬಡಿಸಿ ತರುವಳು
ಇಂದು ನಾವುಂಡದ್ದೆ ಮಗು
ಮುಂದೆ ನೀ ಬಂದ ಮೇಲೆಯೇ ನಾವುಣ್ಣುವುದು
ಉಡುಪುಟ್ಟು ಸಿದ್ದನಾದನು ಮಗನು
ಬಡವರ ಮಕ್ಕಳ ತೆರದೊಂದುಡುಪಿನಲಿ
ಕುರ್‌ಜಾತ್ ಮಾಲೆಯನು ಕೊರಳಿಗೆ ಹಾಕಿ
ಮೂಡಣ ಮುಡರೆಗುತ್ತಿನಿಂದ ಇಳಿದಿಹನು
ಪಲ್ಲೆಜಾಲಗುತ್ತು ಮಾನ್ಯೊಟ್ಟು ಬರ್ಕೆಯ ಬಳಿ
ಬಂದಿಹನು ಮಗು ಕಾಂತಣನು
ಪೂವಣೆ ಪೂಂಜರದೊ ದೂರದಿ ನೋಡುವರು
ಕೆಲಸ ಕಾರ್ಯಗಳ ಮಾಡಿಸುತಿಹರು
ಆ ಹುಡುಗನಾತನೆಲ್ಲಿಗೆ ಹೋಗುತಿಹನು
ಪೂವಣಿ ಪೂಂಜರದೊ ಹೇಳುವರು
ಉಡುಪು ಸಡಗರವ ನೋಡಲು ಪೂಂಜರಿಗೆ
ಬಡಕುಲದ ಮಕ್ಕಳಂತೆ ಕಾಣುವುದು
ಮೊಗದ ಕಳೆಯ ನೋಡಲನಿಸುವುದು
ಬಂಟಬಾರಗರ ಮಗುವಿನಂತೆ
ಪೂಂಜರ ಬಳಿಗೆ ಬಂದಿಹನು ಕಾಂತಣ
ಮಗು ಕಾಂತಣನು ಬಂದಿಹನು
ಹೋಗುವುದೆಲ್ಲಿಗೆ ಹುಡುಗನೆ ನೀನು
ಬರುತಿಹುದೆಲ್ಲಿಂದವೆಂದು ಕೇಳುವನು
ಉಣ್ಣಲಷ್ಟು ಅನ್ನ ದುಡಿಯಲಿನಿತು ಕೆಲಸ ಎಲ್ಲಿಹುದೋ ಅಲ್ಲಿಗೆ
ಎಲೆ ಹುಡುಗ ನೀ ಕೇಳು

ತೋಟಕ್ಕೆ ಹೋಗೆಂದು ಹೇಳುವರು
ಮುಂಡಿ ಎಲೆಯೊಂದ ಹುಡುಗ ನೀ ತಾರೆಂದು
ಕಿರುಬಾಗಿಲಿಗೆ ಬಾ ಎಂದು ಹೇಳುವಳು ಪೂವಗ
ಊಟವಿಕ್ಕುವ ಹೆಂಗಸಿಗೆ ಎಲೆ ತರುವುದಕ್ಕಾಗದೆಯೆಂದು
ಕೆಲಸಕ್ಕೆ ಹೋದ ಹುಡುಗನವ ಕೇಳುವನು
ನಾದಿನಿಯರಿಲ್ಲದಿರೆ ಕೆಲಸಕ್ಕೆ ಜನವೊಂದ
ನನ್ನೊಡೆಯ ತಂದಿಹರೆಂದು
ಮುಂಡಿ ಎಲೆಯ ತರುವಳಾಕೆ ಪೂವಗ
ಕಿರುಬಾಗಿಲಿಗೆ ಉಣಲು ಕರೆದಿಹಳು
ಹಳಸಿಹ ತಂಗಳನ್ನವನು ಹಾಳಾದ ಉಪ್ಪಿನಕಾಯನು
ಕೆಲಸದ ಹುಡುಗನಿಗೆ ಬಡಿಸಿದಳು
ಉಂಡ ಹಾಗೆ ನಟಿಸಿದನು ಮಗು ಕಾಂತಣನು
ಮನೆಮಾಡ ಸಂದಿನಲಿ ಎಲೆಯೂಟ ತುರುಕಿಟ್ಟನು
ಒಳಮನೆಗೆ ಸೂತ್ರಕ್ಕೆ ಬಂದನು ಮಗನು
ತೂಗುಯ್ಯಾಲೆಯಲಿ ಕುಳಿತಿಹನು
ಮಧ್ಯಾಹ್ನದೂಟಕ್ಕೆ ಬರುವರು ಪೂಂಜರು
ಕೈ ಕಾಲು ತೊಳೆದೊಳಗೆ ಬಂದಿಹರು
ತೂಗುಯ್ಯಾಲೆಯಲಿ ಕುಳಿತ ಹುಡುಗನ ನೋಡೆ
ಪೂಂಜರಿಗೆ ಸಿಡುಕು ತಾ ಬಂದಿಹುದು
ಕುತ್ತಿಗೆಗೆ ಕೈ ಹಾಕಿ ದೂಡಿಹರು ಮಗುವನ್ನು
ಬಾಗಿಲ ಮೂಲೆಗೆ ಬಿದ್ದಿಹನು
ಬಾಗಿಲ ಮೂಲೆಗೆ ಬೀಳಲು ಕಾಣುವುದು ಪೂಂಜರಿಗೆ
ಕೊರಳಲ್ಲಿ ಕುರ್ಜಾತ್ ಸರಪಳಿಯದು
ಹೊರಳುತಿರೆ ಕೇಳುವರು ಪೂಂಜರು ಹುಡುಗನಲಿ
ನಿನ್ನ ತಾಯಿ ಯಾರು ತಂದೆ ಯಾರೆಂದು ಕೇಳುವರು
ಕುತ್ತಿಗೆಗೆ ಕೈ ಹಾಕಿ ದೂಡಿರುವ ಗಂಡಸೇ
ತಾಯಿ–ತಂದೆ ಯಾರಾದರೆ ನಿಮಗೇನೆಂದು
ಅಷ್ಟು ಹೇಳಿದ ಮಗು ಕಾಂತಣ ಕೇಳುವನು
ತಾಯೊಬ್ಬಳಿಗೆ ನೀವ ಓರ್ವನೇ ಮಗನೇನು?
ಒಡಹುಟ್ಟಿದವರಾರೂ ಇಲ್ಲವೇನು?
ಒಡಹುಟ್ಟಿದವರು ಇರಲೆನಗೆ ಇದ್ದಾರೆ
ಮದುವೆಗೈದೆನ್ನನ ತಂಗಿಯನು ಕೊಟ್ಟಿಹುದು
ಮೂಡಣ ಮುಡರೆಗುತ್ತಿಗೆ ಬಲುವೊಂದು

ಎಳೆಹರೆಯದಲ್ಲಿ ಕೊಟ್ಟಿಹುದು
ಅದೇಕೆ ಒಡೆಯರೆ ನೀವಲ್ಲಿ ಹೋಗುವುದಿಲ್ಲ
ನೀವಾಗಿ ಹೋಗದಿಹುದೇ, ನಿಮ್ಮಾಕೆ ಬಿಡದಿಹುದೇ?
ಕೇಳುವನು ಮಗು ಕಾಂತಣನು
ಎಳೆಯೊಂದು ಹರೆಯದಲಿ ತಂಗಿಯನ್ನು ಕೊಟ್ಟಿಹುದೆಂದೆನಲು
ಹೇಳುವನು ಮಗು ಕಾಂತಣನು
ನಿಮ್ಮ ತಂಗಿಯೆಂದರೆ ಕೇಳಿ ಒಡೆಯರೆ
ನನ್ನ ತಾಯಿಯೆಂದು ಹೇಳಿದೊಡನೆಯೇ
ಎತ್ತಿ ತೂಗುಯ್ಯಾಲೆಯಲಿ ಕುಳ್ಳಿರಿಸಿದರು
ಮದುವೆ ಮಾಡಿ ತಂಗಿಯನು ಕೊಟ್ಟ ಬಳಿಕ ಮಗನೆ
ದೈವಕ್ಕೆ ಹಾಲಂತು ಕೊಟ್ಟಿಲ್ಲ
ಕಣ್ಣಿನ ದೃಷ್ಟಿಯು ನಿಂತಹುದು ಮಗ ನನದು
ಕಾಲಿನ ನಡಿಗೆಯು ಉಡುಗಿಹುದು
ಬಂದವನು ನೀ ಮರಳಿ ಹೋಗುವ ಮೊದಲು
ದೈವಕ್ಕೆ ಗೊನೆ ಕಡಿದಿಡಬೇಕು ಮಗನೆ
ಗೊನೆ ಕಡಿದು 'ಪದೊಳಿ'ಯಲ್ಲಿಡಬೇಕು ಮಗ ನೀನು
ದೈವದ ನೇಮಕ್ಕೆ ದಿನವಿಡಬೇಕು
ನಮ್ಮ ದೈವಕ್ಕೆ ಹಾಲನ್ನು ನೀಡಬೇಕು
ದೈವದ 'ಕಡೆಬೂಳ್ಯ' ನೀನೇ ಹಿಡಿಯಬೇಕು
ನನ್ನ ಕಣ್ಣ ಸೆಳೆತ ನಿಲ್ಲುತಿಹುದು
ನಿನ್ನ ತಂದೆಯನು ನೀ ಕರೆದು ತಾ ಅಳಿಯನೇ
ನನ್ನ ತಂಗಿಯನು ನಾನು ಕರೆತರುವೆನು
ತಂದೆಯನು ಕರದದು ಮಗನು ತಾ ಬಂದಿಹನು
ತಂಗಿಯನು ಕರೆದು ಅಣ್ಣ ತಾ ಬಂದಿಹನು
ದೈವಕ್ಕೆ ನೇಮವನು ಕೊಡಿಸಿಹರು
'ದೈವದ ಗಡಿ' ಕಾಂತಣನಿಗಾಗಿಹುದು
ಬಹು ಸೊಗದಲಿ ಕೂಡಿಹ ಸಭೆ ಚದುರಿಹುದು
ಮನೆಯೊಳಗಿನಧಿಕಾರ ತಾಯಿಗೆ ಕೊಟ್ಟಿಹರು
ಮನೆ ಹೊರಗಿನ ಕೆಲಸವದು ಹೆಂಡತಿ ನೀಡಿಹರು
ಪಲ್ಲೆ ಜಾಲಗುತ್ತಿನಲಿ ಮಾನ್ಯೊಟ್ಟು ಬರ್ಕೆಯಲಿ
ಬಹುವೊಂದು ಸೊಗದಲ್ಲಿ ಬಾಳುತಿಹರು

* * * *

ಕಬಿತದ ಕನ್ನಡ ಭಾಷಾಂತರ :

ಡಿಂಬಿಸ್ಯಾಲೆ ಡಿಂಬಿಸಾಲೆ ॥ ಪಲ್ಲವಿ ॥
ಡಿಂಬಿಸಾಲೆ ಹೇಳಿರೇ ಚಂದಕ್ಕೆ ಬಾಯಿಬಿಡ್ರೋ
ರಾಮಾಽನ ಕೈಯೊಳಗೆ ಬಂಗಾರಿನ ಸತ್ತಿಗೆ
ಭೀಮಾಽನ ಕೈಯೊಳಗೆ ಕೋಲಿನ ಸತ್ತಿಗೆ
ಅರಸ್‌ರಪ್ಪಾ ಪುರುಸುರು ಬೂದಿಽ ಪುರುಸ್ತು
ಯಾವೂರ ಪುರುಸುರು ಕದ್ರ ಮಂಜುನಾಥ ಪುರುಸ್ರೇ
ಅರಸ್‌ರಪ್ಪಾ ಪುರುಸುರು ಬೂದಿಽ ಪುರುಸ್ತು
ಡಿಂಬಿಸಾಽಲೆ ಡಿಂಬಿಸ್ಯಾಲೆ ॥
ಡಿಂಬಿಸಾಲೆ ಮಗಳು ಏನು ಮಾರಿಕೊಂಡು ಉಂಡಳು
ಡಿಂಬಿಸಾಲೆ ಮಗಳು ನೆಕ್‌ಲೀಸು ಮಾರಿಕೊಂಡು ಉಂಡಳು
ಹಾಡಿರೊ ಮಽಡಿರೋ ಧಿಮಕೊಯ್ ಕೊಂಡಾಡಿರೊ
ಡಿಂಬಸಾಲೆ ಮಗಳಿಗೆ ಏನೊಂದು ಕುಂದು–ಕೊರತೆ
ಡಿಂಬಿಸಾಲೆ ಮಗಳಿಗೆ ಹಲ್ಲು ಸ್ವಲ್ಪ ಕೋರೆ
ಡಿಂಬಿಸಾಲೆ ಮಗಳು ಏನು ಮಾರಿಕೊಂಡು ಉಂಡಳು
ಡಿಂಬಿಸಾಲೆ ಮಗಳು ಕಿವಿಯ ಬೆಂಡೋಲೆ ಮಾರಿಕೊಂಡು ಉಂಡಳು
ಅರಸ್‌ರಪ್ಪಾ ಪುರುಸರು ಬೂದಿಽ ಪುರುಸ್ತು
ಹಾಡಿರೋ ಮಽಡಿರೋ ಧಿಮಕೊಯ್ ಕೊಂಡಾಡಿರೊ
ರಾಮಣ್ಣ ಭೀಮಣ್ಣ ಒಂದೇ ತಾಯಿ ಮಕ್ಳು
ಡಿಂಬಿಸಾಲೆ ಮಗಳು ನೆಕ್‌ಲೇಸ್ ಮಾರಿಕೊಂಡು ಉಂಡಳು
ಡಿಂಬಿಸಾಲೆ ಮಗಳು ಮೂಗಿನ ಬುಳಕ್ ಮಾರಿಕೊಂಡು ಉಂಡಳು
ಡಿಂಬಿಸ್ಸಾಲೆ ಮಗಳಿಗೆ ಏನೊಂದು ಕುಂದು–ಕೊರತೆ
ಡಿಂಬಿಸಾಲೆ ಮಗಳಿಗೆ ತಲೆಕೂದಲು ಸ್ವಲ್ಪ ಗುಂಗುರು
ಡಿಂಬಿಸಾಲೆ ಮಗಳಿಗೆ ಬಾಯಿ ಸ್ವಲ್ಪ ಅಗಲ
ಡಿಂಬಿಸಾಲೆ ಹೇಳಿರೇ ಚಂದಕ್ಕೆಽ ಬಾಯಿಬಿಡ್ರೋಽ
ಡಿಂಬಿಸಾಲೆ ಮಗಳು 'ಕೊಪ್ಪು' ಮಾರಿಕೊಂಡು ಉಂಡಳು
ಡಿಂಬಿಸಾಲೆ ಮಗಳಿಗೆ ಕಿವಿ ಒಂದು ಕಿವುಡು
ರಾಮಣ್ಣ ಭೀಮಽಣ್ಣ ಒಂದೇ ತಾಯಿ ಮಕ್ಳು
ಅರಸ್‌ರಪ್ಪಾ ಪುರುಸುರು ಬೂದಿಽ ಪುರುಸ್ರು
ಯಾವೂರ ಪುರುಸುರು ಕದ್ರ ಮಂಜುನಾಥ ಪುರುಸ್ರು
ಡಿಂಬಿಸಾಽಲೆ ಡಿಂಬಿಸಾಽಲೆ ॥
ಡಿಂಬಿಸಾಲೆ ಮಗಳು ಏನು ಮಾರಿಕೊಂಡು ಉಂಡಳು

ಡಿಂಬಿಸಾಲೆ ಮಗಳು ಕೈಯ ಬಳೆ ಮಾರಿಕೊಂಡು ಉಂಡಳು
ಡಿಂಬಿಸಾಲೆ ಮಗಳಿಗೆ ಏನೊಂದು ಕುಂದು-ಕೊರತೆ
ಡಿಂಬಿಸಾಲೆ ಮಗಳಿಗೆ ಕಾಲೊಂದು ಹುಟ್ಟು ಕುಂಟು
ಅರಸ್‌ರಪ್ಪಾ ಪುರುಸುರು ಬೂದಿಃ ಪುರುಸ್ರು
ರಾಮಾನಾಃ ಕೈಯೊಳಗೆ ಬಂಗಾರದ ಒಂದು ಸತ್ತಿಗೆ
ಭೀಮನ ಕೈಯೊಳಗೆ ಬೆಳ್ಳಿಯ ಒಂದು ಸತ್ತಿಗೆ
ಅರಸ್‌ರಷ್ಟಾ ಪುರುಸುರು ಬೂದಿಃ ಪುರುಸ್ತು
ಹಾರಿರೋ ಮಃಡಿರೋ ಧಿಮಕೊಯ್ ಕೊಂಡಾಡಿರೊ
ಡಿಂಬಿಸಾಲೆ ಹೇಳಿರೇ ಚಂದಕ್ಕೆ ಬಾಯಿಬಿಡ್ರೋ
ಡಿಂಬಿಸಾಲೆ ಹೇಳಿರೇ ಚಂದಕ್ಕೆ ಬಾಯಿಬಿಡ್ರೋ
ಯಾವೂರ ಪುರುಸುರು ಕದ್ರ ಮಂಜುನಾಥ ಪುರುಸ್ತು
ಯಾರ ಮನೆಗೆ ಹೋಗಿರಯ್ಯಾ ಕದ್ರ ಮಂಜುನಾಥ ಪುರುಸ್ರೆ
ನಾಗಪ್ಪ ಮನೆಗೆ ಬರುವಿರಯ್ಯಾ ಕದ್ರ ಮಂಜುನಾಥ ಪುರುಸ್ರೆ
ನಾಗಪ್ಪ ಗೌಡ್ರು ಭಾಳ ಹರ್ತಿಕ್ಕಾರ್ರೀ ಭಾಳ ಪಿರ್ತಿಕ್ಕಾರ್ರೀ
ಮುಡಿ ಮುಡಿ ಅಕ್ಕಿ ವರಣ್ ವರಣ್ ರುಪಾಯಿ ಕೊಡುದಂತಯ್ಯಾ
ಕುಣಿರೆ ಪುರುಸ್ರೆ ಕುಣಿರೆ ಕುಣಿರೆಃ
ಯಾರ ಮನೆಗೆ ಹೋಗಿರಯ್ಯಾಃ
ಕೋಡಿಜಾಲ ಮನೆಗೆ ಹೋಗಿರಿ
ಒಂದೊಂದಾಟ ಆಡ್ಬೇಕಯ್ಯಾ
ಕೋಡಿಜಾಲ್ ಮನೆಯಲ್ಲಿ
ವಿಶ್ವನಾಥ ಗೌಡ್ರು
ಭಾಳ ಹರ್ತಿಕ್ಕಾರ್ರೀ
ಭಾಳ ಪಿರ್ತಿಕ್ಕಾರ್ರೀ
ಭಾಳ ಕುಶಾಲ್‌ಕ್ಕಾರ್ರೀ
ಒಂದೊಂದಾಟ ಕುಣಿರೇ ಪುರುಸ್ರೆ ಕುಣಿರೇ
ಮುಡಿ ಮುಡಿ ಅಕ್ಕಿ
ವರಣ್ ವರಣ್ ರುಪಾಯಿ
ಕೆತ್ತಿ ಕೆತ್ತಿ ತೆಂಗಿನಕಾಯಿ
ಕೊಡುದಂತಯ್ಯಾ
ಒಂದೊಂದಾಟ ಆಡ್ಬೇಕಯ್ಯಾ
ಯಾರ ಮನೆಗೆ ಹೋಗಿರಯ್ಯಾ ....
ಕದ್ರಿ ಮಂಜುನಾಥ ಪುರುಸ್ರು ....

* * * *

ಉರಲ್

೧. ಓ....ಬೊಳ್ಳೆ ಪುಟ್ಟಿನೇ ಗಟ್ಟದ ಮಿತ್ತ್‌ಗೆವು
ಓ....ಪುದ ಪುಟ್ಟಿನೇ ಪುತ್ತೂರ ಗೋಳಿಡ್‌ಂದ್
ಓ....ಹೊಡ್ತೋ....

(ಬೊಳ್ಳ ಹುಟ್ಟಿದ್ದು ಘಟ್ಟದ ಮೇಲಂತೆ, ಪಾರಿವಾಳ ಹುಟ್ಟಿದ್ದು ಪುತ್ತೂರ ಗೋಳಿಯಲ್ಲೆಂದು).

೨. ಓ....ಪಟ್ಟೆ ಪರಿತೆರ್ ಪಾವಡೆ ಪಾಡ್ಯೆರ್ ಬೊಳ್ಳಗವು
ಓ....ಕಂಚಿ ದರಿತೆರ್ ಕನ್ನಡಿ ಮುಚ್ಚಾದೆರ್
ಓ....ಹೋಯ್

(ಪಟ್ಟೆ ಹರಿದರು ಶಾಲು ಹೊದೆಸಿದರು ಬೊಳ್ಳನಿಗೆ, ಕಂಚಿ ಒಡೆದರು ಕನ್ನಡಿ ಮುಚ್ಚಿಸಿದರು)

೩. ಓ....ಕಂಬುಲಾಗೆ ಪೋನಾಗ ಬೊಳ್ಳೆ ಮದಿಮ್ಮಾಯೆ
ಓ.... ಇಲ್ಲಾಡೆ ಬನ್ನಗವು ದೆತ್ತಿ ಮದಿಮಾಲಾತೆರ್
ಓ....ಹೊಡ್ತೋ....

(ಕಂಬಕ್ಕೆ ಹೋಗುವಾಗ ಬೊಳ್ಳ ಮದುಮಗ, ಮನೆಗೆ ಬರುವಾಗ ಒಡತಿ ಮೈನೆರೆದಿದ್ದಾಳೆ)

೪. ಓ....ಕಾಯೆರಡ್ಕದ ಬಡುಗೆ ಬೊಳ್ಳ ನಂಕ್
ಓ....ಕುಮೆರಡ್ಕದ ಕುಡುಗೆ ಬೊಳ್ಳ ನಂಕ್
ಓ....ಹೋಯ್

(ಕಾಸರಕನ ಗುಡ್ಡೆಯ ಬೆತ್ತ ಬೊಳ್ಳನಿಗೆ, ಕುಮೇರಿನಲ್ಲಿ ಬೆಳೆದ ಹುರುಳಿ ಬೊಳ್ಳನಿಗೆ)

೫. ಓ....ನಮ್ಮಾ ಗೋಣೆವು ಗೋದಿ ಕುಡು ತಿಂದೆಗೆವು
ಓ....ಗೋದಿಕುಡು ತಿಂದ್‌ದ್ ದರಿಕುಂಟ ಪೊರ್ಬುವೆವು
ಓ....ಹೋಯ್

(ನಮ್ಮ ಕೋಣ ಗೋಧಿ–ಹುರುಳಿ ತಿಂದನಂತೆ, ಗೋಧಿ–ಹುರುಳಿ ತಿಂದು ಕಟ್ಟಿದ ಗೂಟ ಕೀಳುತ್ತಾನೆ)

೬. ಓ....ಗಾಳಿಗಪ್ಪಾ ಪೋಪುಂಡೋ ಗೋಳಿದಾ ಗೆಲ್ಲವುs
ಓ....ದೋಲುಗಪ್ಪಾ ನೆಲಿಪ್ಪುವೆ ಜವ್ವನ್ಯ ದಿಕ್ಕೆಂದ್
ಓ....ಹೊಡ್ತೋ....

(ಗಾಳಿಗೇ ಹೋಗುತ್ತಿದೆ ಗೋಳಿಯ ಗೆಲ್ಲದು, ದೋಲಿಗೆ ನಲಿಯುತ್ತಿಹನು ತರುಣ ಹೊಲೆಯನು)

೭. ಓ....ಬೆರಣ ಬಂಜಿಯವು ಎರ್ಮೆದ ಕಂಜಿಗೆ
ಓ....ಬ್ಯಾರಿನ ಮಂಡೆವು ತಾರಿದಾs ಕಂಡೆವು
ಓ....ಹೊಡ್ತೋ....
(ಬ್ರಾಹ್ಮಣನ ಹೊಟ್ಟೆ, ಎಮ್ಮೆಯ ಕರುವಂತೆ, ಬ್ಯಾರಿಯ ತಲೆ ತಾಳೆಯ ಗೆಡ್ಡೆಯು)

೮. ಓ....ಬಾರೆದ ಪುಂಡುಡೂs ಬಾವೊಲಿ ರಾಪುಂಡು
ಓ.....ಬ್ಯಾರಿನ ಮಂಡೆಗ್ ತೆಡಿಲ್ ಬೂರ್‌ದ್‌ಂಡ್
ಓ....ಹೋಯ್
(ಬಾಳೆಯ ಹಿಂಡಿನಲ್ಲಿ ಬಾವಲಿ ಹಾರುತ್ತಿದೆ. ಬ್ಯಾರಿಯ ತಲೆಗೆ ಸಿಡಿಲು ಬಿದ್ದಿದೆ)

೯. ಓ....ತೆಲಿ ಮೈಪಿ ದೆತ್ತಿಗ್ ಕುಲೆ ದರಿಪ್ಪುಂಡೋ
ಓ.....ದರಿತ್ತ್‌ಂಡಲ ದಿರಪ್ಪಡ್ ತೆಲಿ ಮಯಿಪೊಲೆ
ಓ....ಹೋಯ್
(ತಿಳಿ ಎರೆಯುವ ಒಡತಿಗೆ ಪ್ರೇತ ಹಿಡಿದಿದೆ, ಹಿಡಿದರೆ ಹಿಡಿಯಲಿ ತಿಳಿ ಎರೆಯಿರಿ)

೧೦. ಓ....ದೆಕ್ಕುಲೆ ಬಾರ್ ದಡ್ಡ್ ಬಾರ್‌ಗೆವು
ಓ....ಬೈದ್ಯೆಲೆ ಕಲಿಯೆ ನೀರ್ ಕಲಿಂದ್
ಓ....ಹೋಯ್
(ಒಡೆಯನ ಭತ್ತ ಹೊಟ್ಟು ಭತ್ತವಂತೆ, ಬೈದ್ಯರ ಶೇಂದಿ ನೀರು ಶೇಂದಿಯಂತೆ)

೧೧. ಓ....ಜಟಿದ ಜದ್ರೆಗೇ ಸೋಣದ ಬೊಳಿಕ್ಕಿರವು
ಓ....ಕುಂಞ ದೆಕ್ಕುಲೆ ಕುಂಟು ಬೊಲ್ಲೊಡು ಪೋಪುಂಡು
ಓ....ಹೊಡ್ತೋ....
(ಆಟಿಯ ಆರ್ದ್ರೆಗೆ ಶ್ರಾವಣದ ಬಿಸಿಲು, ಕುಂಞ ಒಡೆಯನ ಬಟ್ಟೆ ನೆರೆಯಲ್ಲಿ ಹೋಗುತ್ತಾ ಇದೆ)

೧೨. ಓ....ಇಲ್ಲ ಬಾಕಿಲ್‌ಡೇ ನೆಲ್ಲಿದ ಮರವು
ಓ....ಬತ್ತಿ ಬತ್ತಿ ಜವನ್ಯೆರ್ ನೆಲ್ಲಿ ಕುರ್ಕಾವೆರ್
ಓ....ಹೋಯ್
(ಮನೆಯ ಬಾಗಿಲಲ್ಲಿ ನೆಲ್ಲಿಯ ಮರ, ಬಂದ ಬಂದ ತರುಣರು ನೆಲ್ಲಿ ಅಲ್ಲಾಡಿಸುವರು)

೧೩. ಓ....ಇಲ್ಲ ಬೆರ್ತಲೆ ಬೂತದ ಸಾನ ಉಂಡವು
ಓ...ಬಂಜೆ ಬಂಜರೆ ಉನಿಯೆರವು ಬೂತ ಬುಡ್ಪುಜಿ
ಓ....ಹೊಡ್ತೋ....
(ಮನೆಯ ಹಿಂದುಗಡೆ ಭೂತದ ಸ್ಥಾನವಿದೆ, ಹೊಟ್ಟೆ ತುಂಬ ಉಣ್ಣಲು ಭೂತ ಬಿಡುವುದಿಲ್ಲ)

೧೪. ಓ....ಆಚಾರ್ಯೆ ಬೂತೊಗು ಮಜಿ ಪರಕ್ಕೆಗೆವು
ಓ....ಒಡ್ಯಾರ್ಯ ಬೂತೊಗು ಓಡು ಪರಕ್ಕೆಗೆವು
ಓ....ಹೊಡ್ತೋ....
(ಆಚಾರಿಯ ಭೂತಕ್ಕೆ ಮಸಿ ಹರಕೆಯಂತೆ, ಕುಂಬಾರನ ಭೂತಕ್ಕೆ ಓಡು ಹರಕೆಯಂತೆ)

೧೫. ಓ....ನಮ್ಮಾ ಉಲ್ಲಯೆ ಊರುಗಾಪಿ ಬಾರಗೆವು
ಓ–ಅರೆಗೊಂಜಿ ಕಾಣಿಕೆ ಪೊಟ್ಟು ತಾರಾಯಿ
ಓ....ಹೋಯ್
(ನಮ್ಮ ಒಡೆಯ ಊರಿಗಾಗುವ ಯಜಮಾನ, ಅವರಿಗೊಂದು ಕಾಣಿಕೆ ಹೊಟ್ಟು ತೆಂಗಿನಕಾಯಿ)

೧೬. ಓ....ಸಮ್ಮಾಲೆ ಮಗಲ್ ಧರ್ಮದಾರಗೆವು
ಓ....ಪಂಚೊಲಿ ಬಚ್ಚಿರೆವು ಪಂಜದಾರಯವು
ಓ....ಹೋಯ್
(ಮಾವನ ಮಗಳು ಧರ್ಮಧಾರೆಯಂತೆ, ಪಂಚೊಲಿ ವೀಳ್ಯವದು 'ಪಂಜದಾರಿಯ'ವು)

೧೭. ಓ....ಕಲಿಪರಿ ಮುಟ್ಟಾಲೆ ಮಂಜಡೊರಿಂಡವು
ಓ....ನಿಕ್ಕ್ ತೊಯಿ ದಿಕ್ಕಲ್ ಕೇರಿಡೊರಿದ್ಂಡ್
ಓ....ಹೋಯ್
(ಕಳ್ಳು ಕುಡಿದ ಗೋಂಪಾರು ಮಂಜದಲ್ಲುಳಿಯಿತು, ನಿನಗೆ ನೋಡಿದ ಹೊಲೆತಿ ಕೇರಿಯಲ್ಲುಳಿಯಿತು)

೧೮. ಓ....ಮಂಗಾರಗ್ ಸಿಂಗಾರ ಗುಜ್ಜೆರೆ ಕೆದುಗೆವು
ಓ....ಕದ್ರಗ್ ಸಿಂಗಾರ ಕಂಚಿ ದೀಪಲಂದ್
ಓ....ಹೋಯ್
(ಮಂಗಾರಕ್ಕೆ ಸಿಂಗಾರ ಗುಜ್ಜರ ಕೆರೆಯಂತೆ, ಕದಿರೆಗೆ ಸಿಂಗಾರ ಕಂಚಿಯ ದೀಪದಂತೆ)

* * * * *

ಸಿರಿಕಾವ್ಯಲೋಕ*

ನಾರಾಯಣಾ.........ನಾರಾಯಣಾ......
ಓ ಸತ್ಯನಾಪುರದ ಅರಮನೆಯಲ್ಲಿ ಓ ಅಜ್ಜನವರು...... ಓ......
ಆರ್ಯಬನ್ನಾರು ಓ...... ಬಿರ್ಮು ಮಾಲವರು......
ಮೇಲಿನ ಮೇಲ್ತರಲೋಕದ ಒಬ್ಬ ಬೆರ್ಮರ ಪಾದಕ್ಕೆ ಒಂದು ನಾರಾಯಣಾ......
ಕೆಳ ಸಿರಿಬಾಳಿದ ಉಳ್ಳಾಕುಲು ಪಾದಕ್ಕೆ ಒಂದು ನಾರಾಯಣಾ....
ನಡು ನರಲೋಕ ನರಜಂತುಗಳ ಪಾದಕ್ಕೆ ಒಂದು ನಾರಾಯಣಾ.....
ಇಂದಾದರು ಸತ್ಯನಾಪುರದ ಅರಮನೆಯಲ್ಲಿ ಆರ್ಯಬನ್ನಾರು ಬಿರ್ಮುಮಾಲವರು ಓ......
ಒಂದಾನೊಂದು ದಿನದಲ್ಲಿ ....
ಬಾಲ್ಯದಲ್ಲಿಯೇ ತಾಯಿ ತೀರಿಕೊಂಡರು
ತಂದೆಯೂ ತೀರಿಕೊಂಡರು
ಓ ಕಣ್ಣಲ್ಲಿ ಕಡುದುಃಖ ಹೊಟ್ಟೆಯಲ್ಲಿ ವೇದನೆಯ ನಿಟ್ಟುಸಿರು ಬಿಟ್ಟರು ಓ ಅವರು ಬಿರ್ಮು ಮಾಲವರು.......
ಆ ಹೊತ್ತಿಗೆ ಅಜ್ಜನವರ ಹೊಟ್ಟೆಯ ವೇದನೆಯ ಉರಿ ಕಣ್ಣಿನ ಕಣ್ಣೀರನ್ನು ಪರೀಕ್ಷಿಸಿದರು ಇಂದು ಓ.....
ಕೈ ಅಡುಗೆ ಮಾಡಿ ಊಟ ಮಾಡುವ ಬಿರ್ಮು ಮಾಲವರಿಗೆ ಓ ಕಷ್ಟವಾಯಿತೆಂದರು
ಕಣ್ಣಲ್ಲಿ ಕಡುದುಃಖ ತೆಗೆಯುವ ಆ ಸಮಯದಲ್ಲಿ
ಏಳು ಅಂತರಗಳ ಯಮದೇವಿ ಗುಂಡದಲ್ಲಿ ಕತ್ತಲೆಯ ಕೋಣೆಯಲ್ಲಿ ಇರುವಾಗ ಓ.....
ಬಳೆಯ ಸದ್ದು ಕಾಲುಂಗುರದ ಸಪ್ಪಳ ಕೇಳಿತು ಓ.....
ಅಜ್ಜನವರು ಓ ಪಟ್ಟಮಂಚದಲ್ಲಿ ಇದ್ದ ಅಜ್ಜನವರು ಒಳಗೆ ಹೋದರು ಓ.....
ಒಳಹೋಗಿ ನೋಡಲು ಹೆಣ್ಣೊಬ್ಬಳು ಕಾಣಿಸುತ್ತಾಳೆ.....
ಅಯ್ಯಯ್ಯೋ ಪಾಪವೇ ಎಲಾ ಎಳಾ ದೋಷವೇ ರಾಮ ಕಾಲವೇ ನನ್ನ ತಾಯಿ ಓ.....
ನನ್ನಲ್ಲಿಗೆ ಬಂದರೆಂದರು ಓ ಬಿರ್ಮುಮಾಲವರು.....
ಬಿರ್ಮುಮಾಲವರು ಹೋಗಿ ನೋಡಲು

---

* ಸಂ : ಅಶೋಕ ಆಳ್ವಿಕೆ. ಕರ್ಗಿ ಶೆಡ್ತಿ ಹಾಡಿದ 'ಸಿರಿ ಪಾಡ್ದನ'

ಎಲ್ಲಿಂದ ಬಂದೆ ಮಗಾ ಎಲ್ಲಿಗೆ ಹೋಗುವವಳೆಂದು ಕೇಳಲು ಹೇಳುತ್ತಾಳೆ ಹೆಣ್ಣು ಆಕೆ ದಾರು ಹೆಣ್ಣು.....
ನಾರಾಯಣಾ ಓ ಅಜ್ಜನವರೇ
ನನಗೆ ತಂದೆ ಇಲ್ಲ ತಾಯಿ ಇಲ್ಲ ಯಾರೂ ಗತಿ ಇಲ್ಲದ ಮಗಳು ನಾನು ಅಜ್ಜನೋರೇ....
ನನಗೆ ನೀವು ಹೊಟ್ಟೆಗೆ ಅನ್ನ ದುಡಿಮೆಗೆ ಕೆಲಸ ಕೊಟ್ಟರೆ ಸಾಕೆಂದು
ಹೇಳುತ್ತಾಳೆ ಆಕೆ ಕನ್ಯೆ ಹುಡುಗಿ....
ಆ ಹೊತ್ತಿಗೆ, ಯಾರು ಮಗ ಓ ಹೆಣ್ಣೇ, ಈಚೆ ಕೇಳು....
ಉಣ್ಣುವಷ್ಟು ಅನ್ನ, ದುಡಿಯುವಷ್ಟು ಕೆಲಸ ನಾನು ಕೊಟ್ಟೇನು ಮಗಾ.....
ಹೊರಹೊರಟು ಹೋಗಬೇಡ ಮಗಾ ನೀನು....
ನನಗೊಂದಿಷ್ಟು ಬಾಯಿಗೆ ನೀರು ಕೊಟ್ಟುಬಿಡು ಮಗಾ ಎಂದರು ಅಜ್ಜನವರು....
ಹೆಣ್ಣಿಗೆ ಹೆಸರಿಡಬೇಕು ವಂಶಾವಳಿ ಹೇಳಿ ಕರೆಯಬೇಕೆಂದರು.....ಓ.....
ತೋರುಗ್ಯೆ ನೀನೆನಗೆ ಸೇವಕಿ ಹೆಣ್ಣು 'ದಾರು' ಎಂದು ಹೆಸರಿಟ್ಟರು....
ನಡ್ತಾರೆಯಲ್ಲಿ ನಾಲ್ಕೆಡೆಗಳಲ್ಲಿ ಬಾಳಿದ ದಾರು ಎಂದರು......
ಇಂದಾದರೂ ಸತ್ಯನಾಪುರದಮನೆಯಲ್ಲಿ ಆರ್ಯಬನ್ನಾರ್ ಬಿರ್ಮುಮಾಲವರೂ....
ನಿಂತು ಸಾವಿರವರ್ಷ ಪಟ್ಟ ಆಳಿದರು ಕುಂತು ಮುನ್ನೂರು ವರ್ಷ ಪಟ್ಟ ಆಳಿದರು
ಪಟ್ಟಸೂಡ ಮಂಚದಲ್ಲಿ ಕುಳಿತರು ಅಜ್ಜನವರು.....
ನಡ್ತಾರೆಗೆ ನಾಲ್ಕೆಡೆಗೆ ತೋರುಗ್ಯೆ ನೀನೆನಗೆ ಓ ಸೇವಕಿ ಹೆಣ್ಣನ್ನು ಕರೆದರು
ನಾರಾಯಣಾ ಅಜ್ಜನವರೇ, ಇಂದು ಯಾಕಾಗಿ ನನ್ನನ್ನು ಕರೆದರೆಂದು ಹೇಳುತ್ತಾ ಬಂದಳು
ಓ ಸೇವಕಿ ದಾರು ಹೆಣ್ಣು.....
ಇಂದಾದರೂ ದಾರು ಬಂದು ಹೊಸ್ತಿಲಿಗೆ ಕಾಲು ಕೊಟ್ಟು ಬಾಗಿಲುವಾಡದ ಮೇಲೆ ಕೈಕೊಟ್ಟು ನಿಂತು.....
ಓ ನಾರಾಯಣಾ, ಅಜ್ಜನವರೇ ಯಾಕೆ ಕರೆದಿರೆಂದು ಕೇಳಲಿ ದಾರು ಹೆಣ್ಣು.....
ಇಂದಿನವರೆಗೆ ದಾರು ಕೇಳಿದ್ದಯೆ ನೀನು ...... ಓ......
ಈ ಸತ್ಯ ನಾಪುರದರಮನೆಯಲ್ಲಿ ಓ ನಾನು
ಕಳಸಿಗೆಯಲ್ಲಿ ಅಳೆಯುವಷ್ಟು, ಬೆರಣಿಯಂತೆ ಬಾಚಿ ತೆಗೆಯುವಷ್ಟು ಸಂಪತ್ತು
ಎಮ್ಮೆಯ ಮೇಲೆ ಹೇರುವಷ್ಟು, ದನದ ಮೇಲೆ ಹೇರುವಷ್ಟು ಇತ್ತು ಸಂಪತ್ತು ನನ್ನಲ್ಲಿ .....
ಆ ಹೊತ್ತಲ್ಲಿ ಓ..... ನನಗೆ......
ಇಂದಾದರೂ ಯಾವ ರೀತಿಯಲ್ಲಿ ಪಾಪ, ಪುಣ್ಯ, ದಾನಧರ್ಮ ನಿಂತು ಹೋಯಿತೆಂದರು....

ಇಂದಿನವರೆಗೆ ಸತ್ಯನಾಪುರದಮನೆಯಲ್ಲಿ ಹೊಟ್ಟೆ ನೋಡಿ ಅನ್ನದಾನ ಮಾಡಿದೆ, ಉಡಿ ನೋಡಿ
ವಸ್ತ್ರದಾನ ಮಾಡಿದೆ, ಅಂಗೈ ಚಾಚಿದವನಿಗೆ ದುಡ್ಡುದಾನ ಮಾಡಿದೆ ..... ಓ ನೆತ್ತಿ ನೋಡಿದವನಿಗೆ ಎಣ್ಣೆದಾನ ಮಾಡಿದೆ ನಾನು......
ಒಂದಿನಿತೂ ಪಾಪಪುಣ್ಯ ಸೇರಿ ಬರಲಿಲ್ಲ.....
ಸತ್ಯನಾಪುರದರಮನೆಯಲ್ಲಿ ಆರ್ಯಬನ್ನಾರು ಬಿರ್ಮುಮಾಲವರಿಗೆ....ಓ......
ದಿಕ್ಕು ಇಲ್ಲದಾಯಿತು ದೆಸೆ ಅಳಿದುಹೋಯಿತು.....
ಕಾಡು ಕರೆಯುತ್ತದೆ ಊರು ಅಳುತ್ತದೆ ಇಂದು......
ಹೊಳೆಗೆ ಬಾಗಿದ ಮರ, ಮರಳಡಿಗೆ ಹೋದ ಬೇರಾಗಿದ್ದಾರೆ ಇಂದು ಅಜ್ಜನವರು ಓ.......
ನಾರಾಯಣಾ ಅಜ್ಜನವರೇ.......
ಇಂದಾದರೂ ಅವರು ನಿಂತು ಸಾವಿರವರ್ಷ ಪಟ್ಟ ಆಳಿದ್ದಾರೆ ಅರು
ಕುಳಿತು ಮುನ್ನೂರು ವರ್ಷ ಪಟ್ಟ ಆಳಿದ್ದಾರೆ.....
ಅಧಿಕಾರದ ಪಟ್ಟದ ಮಂಚದಲ್ಲಿ ಕುಳಿತ ಅಜ್ಜನವರು ಇಂದು ದಾರುವಿನೊಡನೆ ಹೇಳಿದರು
ಓ..... ಅವವರು ಬಿರ್ಮುಮಾಲವರು.....
ಓ ಇಂದಾದರೂ ಅಜ್ಜನವರ ತಲೆ ಹೋಗಿ
ತಗ್ಗೀ ಗಿಡದ ಪುಷ್ಪಕ್ಕೆ ಸರಿಸಮನಾಗಿ ಕಾಣಿಸುತ್ತಿದೆಯಂತೆ
ಕಣ್ಣು ಹೋಗಿದೆಯಂತೆ ಮಣ್ಣಿನ ಹೂಜೆಯ ಹಾಗೆ ಕಾಣಿಸುತ್ತಿದೆಯಂತೆ
ಅಜ್ಜನವರ ಕೈ ಹೋಗಿದೆಯಂತೆ ಸಟ್ಟುಗದ ಹಿಡಿಗೆ ಸರಿಸಮನಾಗಿದೆಯಂತೆ
ಅಜ್ಜನವರ ಬೆನ್ನು ಹೋಗಿದೆಯಂತೆ ಬೆನ್ನು ತೊಲೆಗೆ ಸಮನಾಗಿದೆಯಂತೆ
ಕಾಲಿನ ಹಿಂಬದಿ ಹೋಗಿದೆಯಂತೆ ದೊಡ್ಡ ಗೆರಟೆಯ ಸೌಟಿನ ಹಿಡಿಯಂತಾಗಿದೆ ಕೈಕಾಲ
ನರಗಳು ಹೋಗಿ....
ಕಾಡಲ್ಲಿರುವ ಕಾಟರಿಕೆ ಬಳ್ಳಿಗೆ ಸರಿಸಮನಾಗಿದೆ ಅಜ್ಜನವರೆ ಓ ಅಜ್ಜನವರೇ....
ಆರ್ಯಬನ್ನಾರು ಓ ಬಿರ್ಮುಮಾಲವರು.....
ಇಂದಾದರೂ ಅಜ್ಜನವರ ಕಣ್ಣು ಹೂಜೆಯಂತಾದ ಸಮಯದಲ್ಲಿ
ಕಂಕುಳಡಿಯಲ್ಲಿ ಕೇಂಜವ ಹಕ್ಕಿಗಳ ಗೂಡು....
ಮೂಗಲ್ಲಿ ಸಿಂಬಳ ಗಟ್ಟಿಕಟ್ಟಿದೆ ಅಜ್ಜನವರಿಗೆ.....
ನಾರಾಯಣಾ ಓ ನಾರಾಯಣಾ.....
ಇಂದಿನವರೆಗೆ ಆನೆಬಾಗಿಲಲ್ಲಿ ನಿಂತು ದಾನಧರ್ಮ ನಾನು ಮಾಡಿದೇ

ಇನ್ನು ಮುಂದೆ ದಾರು ನೀನೇ....
ತೋರುಗೈಯೆನಗೆ ಸೇವಕಿ ಹೆಣ್ಣು ದಾರು ......ಓ......
ಇಂದಿನಿಂದ ಆನೆಬಾಗಿಲನ್ನು ಗಟ್ಟಿಯಾಗಿ ಮುಚ್ಚಿಬಿಡು ದಾರು
ಹಿಂಬಾಗಿಲನ್ನು ತೆರೆ, ಒದ್ದೆ ಕೈಯಲ್ಲಿ ಮುಷ್ಟಿಭಿಕ್ಷೆ ಓ ನೀಡುತ್ತಿರು ಎಂದರು
ಆರ್ಯಬನ್ನಾರು ಬಿರ್ಮುಮಾಲವರು......ಓ........
ನಾರಾಯಣಾ ಓ ನಾರಾಯಣಾ ...... ಓ...... ದೇವರು ಬೆರ್ಮರು....
ಇಂದಾದರೂ ಅಷ್ಟು ಹೇಳಿದ್ದನ್ನು ಕೇಳಿದಳು ದಾರು
ಕಣ್ಣಲ್ಲಿ ಕಡು ದುಃಖ ದುಃಖಿಸಿದಳು
ಮೇಲು ಮೇಲ್ತರ ಲೋಕದ ದೇವರು ಬೆರ್ಮೆಲ್ಲಿ ಓ ಅರ್ಪಣೆ ಮಾಡಿದಳು.....
ಇಂದಾದರೋ ಸತ್ಯನಾಪುರದ ಮನೆಯಲ್ಲಿ ಇಂದು ಓ ಆರ್ಯಬನ್ನಾರು ಬಿರ್ಮು ಮಾಲವರು....
ನಿಂತು ಸಾವಿರ ವರ್ಷ ಪಟ್ಟ ಆಳಿದ ಪಟ್ಟದ ಮಂಚ ಬಿಟ್ಟರು......
ಕುಳಿತು ಮುನ್ನೂರು ವರ್ಷ ಪಟ್ಟ ಆಳಿದ ಪಟ್ಟದ ಮಂಚ ಬಿಟ್ಟರು.....
ಇಂದು ಆಳುದ್ದ ಇದ್ದ ಆಧಾರ ದಂಟೆಯನ್ನು ಹಿಡಿದರಜ್ಜನವರು....ಓ....
ಚಿಕ್ಕ ಚಾವಡಿ ಸಿದ್ರ ಮಂಟಪ ಹಿಂದೆ ಬಿಟ್ಟರು ಅಜ್ಜನವರು......
ಏಳು ಅಂತರದ ಯಮದೇವಿ ಗುಡಿ (ಕತ್ತಲಕೋಣೆ)ಗೆ ಹೋದರು ಮರಣಶಯ್ಯೆ ಬಿಟ್ಟರು
ನೆಲದ ಮೇಲೆ ಕವುಚಿ ಓ ಮಲಗಿದರಜ್ಜನವರು.....
ಓ ಅಜ್ಜನವರು ಆರ್ಯಬನ್ನಾರು.....
ಇಂದಾದರೋ ಅಜ್ಜನವರು ಕಣ್ಣಲ್ಲಿ ಕಡುದುಃಖ ಬಿಟ್ಟದ್ದು ಕಾಣಿಸುತ್ತಿದೆಯಂತೆ
ಇಂದು ಓ ಅಜ್ಜನವರ ಕಣ್ಣಿನ ಕಣ್ಣೀರು ಓ.....
ಮೇಲಿನ ಮೇಲ್ತರಲೋಕದ ಒಬ್ಬ ಬೆರ್ಮೆರ್ ದೈವದ ಪಾದಕ್ಕೆ ಓ
ಕುಂಕುಮದ ಹರಳಾಗಿ ಓ ಬಿತ್ತಂತೆ ಓ....
ಆ ಹೊತ್ತಿಗೆ ಮೇಲೆ ಮೇಲ್ತರಲೋಕದ ದೇವರು ಬೆರ್ಮರು ಓ.
ಒಬ್ಬ ನಾರಾಣ ದೇವರ ಓ ಪಾದಕ್ಕೆ ಮಲ್ಲಿಗೆಯ ಚೆಂಡಾಗಿ ಬಿತ್ತಪ್ಪಾ ......ಓ.....
ಆ ಹೊತ್ತಿಗೆ ಇಂದು ಜಪ ಕೆಟ್ಟಿತು ತಪ ಕೆಟ್ಟಿತೆಂದು ಹೇಳಿದರು ಇಂದು ಅಲ್ಲಿ ಓ.....
ಮಲ್ಲಿಗೆಯ ಚೆಂಡನ್ನು ಅಂಗೈಯಲ್ಲಿ ಹಾಕಿದರಪ್ಪಾ ಇಂದು ನಾರಾಯಣಾ.... ನಾರಾಯಣಾ.....
ಇದು ಯಾರ ಕಣ್ಣಿನ ಕಣ್ಣೀರೆಂದು ಶೋಧಿಸಬೇಕೆಂದು ಹೇಳಿದರು ......ಓ......
ಅಂಗೈಯಲ್ಲಿಟ್ಟು ಕಣ್ಣೀರನ್ನು ಶೋಧಿಸಲು ಒಬ್ಬ ನಾರಾಯಣದೇವರು ಓ ಬೆರ್ಮರು....
ಇಂದಾದರೋ ಅಂಗೈಯಲ್ಲೊ ಹಾಕಿ ಶೋಧಿಸಲು ಇಂದು

ಕೆಳಗೆ ಸಿರಿ ಬಾಳಿದ ಲೋಕದಲ್ಲಿ ಸತ್ಯನಾಪುರದರಮನೆಯಲ್ಲಿ
ಆರ್ಯಬನ್ನಾರಿಬೆರ್ಮುಮಾಲವನ ಕಣ್ಣಿನ ಕಣ್ಣೀರಪ್ಪಾ ಇದೆಂದು
ಏನು ಬರ ಬಂತಪ್ಪಾ ಆತನಿಗೆ....
ಇಂದಾದರೋ ಸತ್ಯನಾಪುರದರಮನೆಯಲ್ಲಿ ಕಳಸಿಗೆಯಲ್ಲಿ ಅಳೆಯುವಷ್ಟು, ಬೆರಣಿಯಂತೆ
ಬಾಚಿ ತೆಗೆಯುವಷ್ಟು, ಎಮ್ಮೆಯಲ್ಲಿ ಹೇರುವಷ್ಟು, ದನದಲ್ಲಿ ಹೇರುವಷ್ಟು ಇತ್ತಪ್ಪಾ.....
ಇಂದು ಯಾವುದರಲ್ಲಿ ಬರ ಬಂತು ಆತನಿಗೆ....
ಯಾವುದರಿಂದಾಗಿ ಈ ಕಣ್ಣಲ್ಲಿ ಕಣ್ಣೀರೆಂದು ......ಓ
ನನಗೆ ಶೋಧಿಸಬೇಕೆಂದರು ದೇವರು...
ಇಂದಾದರೋ ಅಷ್ಟು ಹೇಳಿದರು ಇಂದು
ಮೇಲಿನ ಮೇಲ್ತರ ಲೋಕದಿಂದ ಇಂದು ನೋಡಬೇಕು, ಕಂಡುಹಿಡಿಯಬೇಕು
ಆತನ ಕಷ್ಟವನ್ನು ನಾನು ಕೇಳಬೇಕು, ನನ್ನ ಕಷ್ಟವನ್ನು ಆತನಿಗೆ ತಿಳಿಸಬೇಕೆಂದು ಇಂದು....
ಒಬ್ಬ ಬೆರಮ್ಮದೇವರು ಇಂದು....
ಮೇಲಿನ ಮೇಲ್ತರಲೋಕ ಬಿಟ್ಟರು
ನಡು ನರಲೋಕಕ್ಕೆ ಬಂದರಂತೆ ಇಂದು ಓ....
ಒಬ್ಬ ಬೆರಮ್ಮದೇವರು.....
ಇಂದಾದರೋ ಆ ಸಮಯದಲ್ಲಿ
ಒಬ್ಬ ಬೆರಮ್ಮದೇವರು ಬಂದರಂತೆ ಇಂದು
ನಡು ನರಲೋಕದಲ್ಲಿ ನಿಂತರಂತೆ.....ಓ.....
ದೇವರ ಅವತಾರ ಬಿಟ್ಟರು ಓ..... ಬಡ ಬ್ರಾಹ್ಮಣನ ರೂಪ ತಾಳಬೇಕೆಂದರು......
ನವಿಲು ಮೇಯುವ ಮೈರಪಲಿಕ್ಕೆಗೆ ಬಂದರು ಇಂದು....
ಬೆರಣಿ ಹೆಕ್ಕಿದರು ಇಂದು ಬೆರಣಿಯಿಂದ ವಿಭೂತಿ ಮಾಡಿದರು.....
ಸೋರೆ ಕತ್ತರಿಸಿ ಬುರುಡೆಯಿಂದ ತಂಬೂರಿ ರಚಿಸಿದರು ಇಂದು
ಚೀನಿಕಾಯಿ ಕತ್ತರಿಸಿ ಇಂದು ಭಿಕ್ಷಾಪಾತ್ರೆ ಮಾಡಿದರಂತೆ ಇಂದು
ಕಬ್ಬು ಕತ್ತರಿಸಿ ಊರುಗೋಲು ಮಾಡಿದರಂತೆ ಇಂದು.....
ಮೂಗಲ್ಲಿ ಕರಲೇ (?) ಬಾಯಲ್ಲಿ ಬಿಗಿಲು (?)
ಕೈಯಲ್ಲಿ ತಾಳ ಕಾಲಲ್ಲಿ ಹುರಿಗೆಜ್ಜೆ ಕಟ್ಟಿಕೊಂಡ ರೂಪ ತಾಳಿದರು......ಓ.....
ಒಬ್ಬ ಬೆರಮ್ಮದೇವರು......ದೇವರ ರೂಪ ಬಿಟ್ಟರಂತೆ ಇಂದು ಬಡಬ್ರಾಹ್ಮಣನ ರೂಪ ತಾಳಿದರು.....
ನಡುನರಲೋಕ ಬಿಟ್ಟರು ಕೆಳಗಿನ ಸಿರಿಲೋಕಕ್ಕೆ ಬಂದರು ದೇವರು....

ನಾರಾಯಣಾ....ನಾರಾಯಣಾ.....
ಇಂದಾದರೋ ಕೆಳಗೆ ಸಿರಿಲೋಕಕ್ಕೆ ಬರುವಾಗ ಇಂದು
ಸತ್ಯನಾಪುರದಮನೆಯಲ್ಲಿ ಆನೆಬಾಗಿಲು ಗಟ್ಟಿಯಾಗಿ ಮುಚ್ಚಿದೆಯಂತೆ ಇಂದು
ಹಿಂಬಾಗಿಲು ತೆರೆದಿದೆಯೆಂದರು ಇಂದು......
ಕಡುಮಂಗಳವಾರ ನಡು ಮಧ್ಯಾಹ್ನದ ಮಟಮಟ ಬಿಸಿಲಿಗೆ ಓ....
ಬಡಬ್ರಾಹ್ಮಣ ಓ......
ಮನೆಯ ಮುಂದಿನ ಅಂಗಳದಲ್ಲಿ ಇಂದು
ನಲಿಯುತ್ತಾ ನಾಲ್ಕಾಟ ಹೋಗುತ್ತದೆ, ಕುಣಿಯುತ್ತಾ ಮೂರಾಟ ಹೋಗುತ್ತದೆ ಬ್ರಾಹ್ಮಣ
ಅಷ್ಟು ಹೊತ್ತಿಗೆ ಇಂದು ಕೈಯ ತಾಳದ, ಕಾಲಿನ ಶಬ್ದವನ್ನು ಕೇಳಿ ಇಂದು......
ಏಳು ಅಂತರಗಳ ಯಮದೇವಿ ಗುಂಡದಿಂದ ಇಂದು ಹೊರ ಹೊರಟು ಬಂದಳು ದಾರು....
ಬಂದು ಅಂಗಳಕ್ಕೆ ಇಣಿಕಿದಳಪ್ಪಾ ಸೇವಕಿ ಹೆಣ್ಣು ದಾರು ....ಓ.....
ಇಂದಾದರೋ ಅಂಗಳಕ್ಕೆ ಇಣಿಕಿ ನೋಡಲು ಇಂದು ಬಡಬ್ರಾಹ್ಮಣ.....
ಕಡು ಮಂಗಳವಾರ ನಡುಮದ್ಯಾಹ್ನದ ಮಟಮಟ ಬಿಸಿಲಿಗೆ ಇಂದು
ನಲಿದು ನಾಲ್ಕಾಟ, ಕುಣಿದು ಮೂರಾಟ ತೋರಿಸುವಾಗ ನೋಡುತ್ತಾಳೆ ದಾರು.....
ನಾರಾಯಣಾ ಅಜ್ಜನವರೇ ಇಂದು ಓ ನಾರಾಯಣಾ ಅಜ್ಜನವರೇ ನೀವೂ.....
ಇಂದಾದರೋ ನಮ್ಮ ಅರಮನೆಯಲ್ಲಿ ಇಂದು
ಆನೆಬಾಗಿಲು ಪೂರ್ತಿ ಮುಚ್ಚಿರಲು ಅಜ್ಜನವರೇ ಇಂದು
ಬಡಬ್ರಾಹ್ಮಣ ಬಂದು ಅಂಗಳದಲ್ಲಿ ನಲಿದು ನಾಲ್ಕಾಟ, ಕುಣಿದು ಮೂರಾಟ ಹೋಗುತ್ತಿದೆಯೆಂದು ಹೇಳಿದಳಪ್ಪಾ ದಾರು....
ಅಷ್ಟು ಹೇಳಲು ಇಂದು ಅಜ್ಜನವರು ತೂರಾಡುತ್ತಾ, ಓಲಾಡುತ್ತಾ ಬಂದು ಹೇಳುತ್ತಾರೆ
ನಾರಾಯಣ ದಾರು ಓ..... ನಾರಾಯಣ ದಾರು ....ಓ.....
ಬೆತ್ತದ ಸಣ್ಣ ಬುಟ್ಟಿ ಹಿಡಿ ಒಂದು ಸೇರಕ್ಕಿ, ಒಂದು ಕಾಯಿ
ಒಂದು ಕವಳೆ ವೀಳ್ಯದೆಲೆ, ಒಂದು ಅಡಕೆ ಇಟ್ಟು....
ಬಡಬ್ರಾಹ್ಮಣನಿಗೆ ಕೊಟ್ಟುಬಿಡಪ್ಪಾ ಎಂದರು....ಓ....
ಅಜ್ಜನವರು ಆರ್ಯಬನ್ನಾರು ಬಿರ್ಮುಮಾಲವರೂ.....
ಅಷ್ಟು ಹೇಳುವುದನ್ನು ಕೇಳಿದಳು ಇಂದು ಏಳು ಅಂತರಗಳ ಯಮಗುಡಿಗೆ ಹೋದಳಂತೆ
ಬುಟ್ಟಿಗಳ ರಾಶಿಗೆ ಕೈ ಹಾಕಿದಳು ಬೆತ್ತದ ಸಣ್ಣ ಬುಟ್ಟಿಯನ್ನು ತೆಗೆದಳು ಇಂದು
ಒಂದು ಬಳ್ಳ ಅಕ್ಕಿ, ಒಂದಿ ತೆಂಗಿನಕಾಯಿ, ಒಂದು ಕಣ್ಣಿನ ಅಡಕೆ

ಒಂದು ಕವಳೆ ವೀಳ್ಯ ಇಂದು ಆ ಸಣ್ಣಬುಟ್ಟಿಗೆ ಹಾಕಿಕೊಂಡು ಇಂದು
ಬಾ ಬ್ರಾಹ್ಮಣಾ ಕೊಂಡುಹೋಗು ನಿನ್ನ ದಾನವನ್ನು (ಭಿಕ್ಷೆಯನ್ನು) ಎಂದು ದಾರು ಹೇಳಿದಳೂ.....
ಅಷ್ಟು ಹೇಳಲು ಬಡಬ್ರಾಹ್ಮಣ ಇಂದು ಹೇಳುತ್ತಾನೆ....
ನೀನು ಕೊಟ್ಟ ಭಿಕ್ಷೆಯನ್ನು ದಾರು ನಿನ್ನ ಮಗ ಸೇವಕ ಕೊಂಡುಹೋದಾನು
ನಾನು ಕೊಂಡುಹೋಗಲಾರೆ ಎಂದು ಓ ಬ್ರಾಹ್ಮಣ ಹೇಳುತ್ತಾನೆ......
ಬ್ರಾಹ್ಮಣ ಹೇಳಲು, ಹೇಳುತ್ತಾಳೆ ದಾರು....
ನಾರಾಯಣ ಅಜ್ಜನವರೇ ನಾನು ಕೊಟ್ಟ ಭಿಕ್ಷೆಯನ್ನು ಇಂದು
ನನ್ನ ಮಗ ಸೇವಕ ಕೊಂಡುಹೋದಾನು ಎಂದು ಬ್ರಾಹ್ಮಣ ಹೇಳಿದನಜ್ಜನವರೇ
ಎಂದು ಕಣ್ಣಲ್ಲಿ ಕಡುದುಃಖ ದುಃಖಿಸಿದಳು ದಾರು....
ನಾನೇ ಭಿಕ್ಷೆ ಹಿಡಿಯಬೇಕಾದರೆ ದಾರು.....
ಸತ್ಯನಾಪುರದಮನೆಯ ಆರ್ಯಬನ್ನಾರು ಬಿರ್ಮುಮಾಲವರು ಅಜ್ಜನವರು ಕೊಡಬೇಕು
ನಾನು ಕೊಂಡುಹೋಗಬೇಕು, ನನ್ನ ಜೋಳಿಗೆ ತುಂಬಬೇಕು
ನನ್ನ ಕಷ್ಟವನ್ನು ಅವರಲ್ಲಿ ಹೇಳಬೇಕು ಎಂದು ಬಡಬ್ರಾಹ್ಮಣ ಹೇಳುತ್ತಾನಂತೆ......
ನಾರಾಯಣ ಅಜ್ಜನವರೇ ನೀವು ಬಿಕ್ಷೆ ಕೊಡಬೇಕಂತೆ ಇಂದು
ಆತನ ಜೋಳಿಗೆ ತುಂಬಬೇಕಂತೆ ಇಂದು
ಆತನ ಕಷ್ಟವನ್ನು ನಿಮ್ಮೊಡನೆ ಹೇಳಿದಾಗ ನಿಮ್ಮ ಕಷ್ಟವನ್ನು ಆತನಲ್ಲಿ ಹೇಳಬೇಕೆಂದು ದಾರು ತಿಳಿಸಲು ಓ ಅಜ್ಜನವರು ಹೇಳುತ್ತಾರೆ....
ನಾರಾಯಣಾ ನಾರಾಯಣಾ ಓ......
ಯಾಕೆ ದೇವರೇ ನನಗೆ ದಾನವೂ ಬೇಡ ನನಗೆ ಧರ್ಮವೂ ಬೇಡ ಪುಣ್ಯವೂ ಬೇಡವೆಂದು ನಾನು ಕುಳಿತಿದ್ದೆ....ಓ.....
ನನ್ನನ್ನು ಪರೀಕ್ಷೆಗೆ ಒಳಪಡಿಸಿದಿರೇ ದೇವರೇ ಎಂದರು ಅಜ್ಜನವರು.....
ಮಾಲುತ್ತಾ ವಾಲುತ್ತಾ ಇಂದು
ಆಳುದ್ದದ ಊರುಗೋಲನ್ನು ಹಿಡಿದುಕೊಂಡು
ಕಣ್ಣಲ್ಲಿ ಕಡುದುಃಖವನ್ನು ತೆಗೆಯುತ್ತಾ ಹೊಟ್ಟೆಯಲ್ಲಿ ಸಂಕಟಪಡುತ್ತಾ ಓ.....
ಹೊರಗೆ ಬರುತ್ತಾರೆ ಅಜ್ಜನವರು....
ನಾರಾಯಣಾ.....ನಾರಾಯಣಾ .....ಓ....
ಮಾಲುತ್ತಾ ಓಲಾಡುತ್ತಾ ಬಂದರಂತೆ ಹೊರಗೆ
ಚಿಕ್ಕಚಾವಡಿ ಸಿದ್ರಮಂಟಪದಲ್ಲಿ ಕುಳಿತರಂತೆ ಇಂದು
ಬನ್ನಿಯಪ್ಪಾ ಬ್ರಾಹ್ಮಣಾ ಬನ್ನಿ ನೀವೆಂದು.........
ಕಡುಮಂಗಳವಾರ ಮಟ ಮಟ ಬಿಸಿಲಿಗೆ ಬಂದವರು ಬನ್ನಿ ಬ್ರಾಹ್ಮಣರೇ ಎಂದರು.....

ಇಂದಾದರೋ ತಗ್ಗಿರುವ ನೆಲದಲ್ಲಿ ಇಂದು
ತಂಡುಮಣೆ ಕೊಡಿಸಿದರಂತೆ ಅಜ್ಜನವರು ಇಂದು
ತುಂಡುಮಣೆಯಲ್ಲಿ ಬಡಬ್ರಾಹ್ಮಣ ಕುಳಿತರಂತೆ ಇಂದೂ......ಓ.....
ಏನು ಬ್ರಾಹ್ಮಣ ಏನೆಂದು
ಅಜ್ಜನವರು ಕೇಳುತ್ತಾಳೆ..... ಓ......
ಇಂದಾದರೋ ಅಜ್ಜನವರು ಕೇಳುವಾಗ ಹೇಳುತ್ತಾರಂತೆ ಇಂದು
ಏನು ಬಿರ್ಮುಮಾಲವರೇ......ಓ......
ನಿಮಗೆ ಏನು ಕಷ್ಟ ಬಂತೆಂದು ಕೇಳಿದರು........
ನಾರಾಯಣ ಬ್ರಾಹ್ಮಣಾ ಓ..... ನಾರಾಯಣಾ ಬ್ರಾಹ್ಮಣಾ.....ಓ.....
ನಿಂತು ಸಾವಿರವರ್ಷ ಪಟ್ಟವಾಳಿದೆನು ನಾನು
ಕುಂತು ಮನ್ನೂರು ವರ್ಷ ಪಟ್ಟವಾಳಿದೆನು ನಾನು
ಆದರೆ ದಾನಧರ್ಮದಲ್ಲಿ ಈವರೆಗೂ ನಾನು
ಅಂಗೈ ನೋಡಿದವನಿಗೆ ಹಣ ದಾನ ಮಾಡಿದೆನು......
ಉಡಿ ನೋಡಿ ವಸ್ತ್ರ ದಾನ ಮಾಡಿದೆನು
ಹೊಟ್ಟೆ ನೋಡಿ ಅನ್ನದಾನ ಮಾಡಿದೆನು
ನೆತ್ತಿ ನೋಡಿ ಎಣ್ಣೆ ದಾನ ಮಾಡಿದೆನು.....
ಒಂದು ದಾನ ಒಂದು ಧರ್ಮವೂ ನನಗೆ ಫಲಿಸಲಿಲ್ಲ..... ಇಂದು....
ಇಂದಿನವರೆಗೆ ದಿಕ್ಕು ದೆಸೆ ಇಲ್ಲವಾಯಿತು....
ಕಾಡು ಕರೆಯುತ್ತದೆ ಊರು ಅಳುತ್ತದೆ.....
ಮೊದಲು ಹುಟ್ಟಿದ ಮಾವಂದಿರಿಲ್ಲ ನನಗೆ
ಪಕ್ಕದಲ್ಲಿ ಹುಟ್ಟಿದ ಸೊಸೆಯಂದಿರಿಲ್ಲ ಎನಗೆ
ಮೊಣಕಾಲಲ್ಲಿ ಹುಟ್ಟಿದ (ಕೂರುವ) ಮೊಮ್ಮಕ್ಕಳಿಲ್ಲ ನನಗೆ
ಬೆನ್ನಲ್ಲಿ ಬಂದ (ಬಳಿಕ ಹುಟ್ಟಿದ) ತಮ್ಮ ತಂಗಿಯಂದಿರಿಲ್ಲ ನನಗೆಂದರು....ಓ.....
(ನಾನು) ಕಾಡಲ್ಲಿರುವ ಮರದಂತೆಂದರು....ಓ.....
ಆರ್ಯಬನ್ನಾರು ಬಿರ್ಮುಮಾಲವರು.....ಓ.....
ನಾರಾಯಣಾ ಬಿರ್ಮುಮಾಲವಾ....ಓ.....
ನಿನ್ನ ಆದಿ ಎಲ್ಲಿ ಆಲಡೆ ಎಲ್ಲೀ.....
ನಾಗ ಎಲ್ಲಿ, ಮೂಲ ಎಲ್ಲಿ ಎಂದು ಬ್ರಾಹ್ಮಣ ಕೇಳುತ್ತಾನಪ್ಪಾ.....ಓ.....
ನಾರಾಯಣ ಬ್ರಾಹ್ಮಣಾ.....ಓ.....ನಾಗ ಎಲ್ಲಿ ಮೂಲ ಎಲ್ಲೆಂದೂ.....ಓ.....
ನನಗೆ ಗೊತ್ತಿಲ್ಲಪ್ಪಾ,......
ನಾನು ಎಲ್ಲೆಂದು ಹೇಳಲಿ ಎಂದರು.....

ಅಷ್ಟು ಹೇಳಲು ಹೇಳುತ್ತಾರೇ.....
ಹಿಂದೆಯೇ ನನಗೆ ಓ ಕುಟುಂಬ ಇಲ್ಲ......
ತಾಯಿಯ ತುತ್ತು ತಿನ್ನುವಷ್ಟು ಆಗುವಾಗಾ.....
ತಾಯಿ ತೀರಿಕೊಂಡರು ಓ ಬ್ರಾಹ್ಮಣಾ.....
ತಂದೆಯ ಓ ಬಿಸಿನೀರು ಸ್ನಾನ ಮಾಡುವಷ್ಟಾಗುವಾಗ ಓ ತಂದೆ ತೀರಿಕೊಂಡರು.....
ಒಂದು ಒಂದಾನೊಂದು ದಿನದಲ್ಲಿ ಓ.....
ನಾಲ್ಕು ಊರು ನಾಲ್ಕು ದೇಶ ಪಟ್ಟಕಟ್ಟಿ ಓ ಪಟ್ಟದರಸು ಎಂದು ಓ
ಪಟ್ಟದ ಮಂಚದಲ್ಲಿ ಕುಳ್ಳಿರಿಸಿದ್ದಾರೆ ಇಂದು
ಊರು ಮಾಗಣೆ ಸೇರಿ ಹತ್ತು ಸಮಸ್ತರೂ.....ಓ......
ಆ ರೀತಿಯ ಮನುಷ್ಯ ನಾನು ಓ ಎಂದು
ಬಿರ್ಮುಮಾಲವ ಹೇಳಿದರು.....
ಅಷ್ಟು ಹೇಳಲು ಬಡಬ್ರಾಹ್ಮಣ ಹೇಳುತ್ತಾನಂತೆ ಇಂದು
ನನ್ನ ಹಿರಿಯರ ಕಾಲದಿಂದಲೇ.....ಓ.....
ಹೇಳುವುದನ್ನು ನಾನು ಕೇಳಿದ್ದೇನೆ....
ನಿನ್ನ ಆದಿ ಆಲಡೇ ಓ ನಾಗಮೂಲವನ್ನು ಹೇಳುವುದನ್ನು ನಾನು
ಕೇಳಿದ್ದೇನೆಂದು ಬಡಬ್ರಾಹ್ಮಣ ಹೇಳುತ್ತಾನೆ.....
ಇಂದಾದರೋ ಬಡಗಣ ಲಂಕೆಲೋಕನಾಡಂತೆ
ನಿನ್ನ ಆದಿ ಆಲಡೆಯಂತೆ.....
ಇಂದು ನೋಡಿದರೆ ಬಡಗಣ ಲಂಕೆಲೋಕನಾಡಿನಲ್ಲಿ.....
ಪೊದರು ಬಳ್ಳಿ ಹಬ್ಬಿದೆಯಂತೆ ತುಂಬೆ ನೆಕ್ಕಿಗಿಡ ಬೆಳದಿದೆಯಂತೆ.....
ಪಾಳುಬಿದ್ದು ಹೋಗಿದೆಯೆಂದು.....
ಬಡಬ್ರಾಹ್ಮಣ ಹೇಳುತ್ತಾನಂತೇ......
ಬಡಬ್ರಾಹ್ಮಣ ಅಷ್ಟು ಹೇಳುವುದನ್ನು ಕೇಳಿಸಿಕೊಂಡು ಇಂದು
ಅಜ್ಜನವರು ಕೇಳುತ್ತಾರಂತೆ ಬಡಬ್ರಾಹ್ಮಣ, ಇಂದಿನಿಂದ ನಾನು
ಏನು ಮಾಡಬೇಕು, ಎಂತಹ ಕೆಲಸ ಮಾಡಬೇಕೆಂದು ಬ್ರಾಹ್ಮಣನಲ್ಲಿ ಇಂದು
ಅಜ್ಜನವರು ಕೇಳಲು ಬಡಬ್ರಾಹ್ಮಣ ಹೇಳುತ್ತಾನಂತೆ.....
ಇಂದಿನಿಂದ ಬಿರ್ಮುಮಾಲವಾ ಓ ನೀನೂ......
ಬಡಗಣ ಲಂಕೆಲೋಕನಾಡಿಗೆ ನಿನ್ನ ಒಕ್ಕಲುಸಕ್ಕಲನ್ನು ಕರೆಯಬೇಕು
ಬಡಗಣ ಲಂಕೆಲೋಕನಾಡಿಗೆ ಕರೆದುಕೊಂಡು ಹೋಗಬೇಕು.....
ಪೊದರು ಬಳ್ಳಿ ಕಡಿಸಬೇಕು ತುಂಬೆನೆಕ್ಕಿ ತೆಗೆಸಬೇಕು.....
ಮಣ್ಣಗೋಡೆ ಕಟ್ಟಿಸಬೇಕು, ಹಲಗೆಗೆ ಮರ ಕಡಿಸಬೇಕು

ದೇವರಿಗೆ ದೇವಸ್ಥಾನ ಕಟ್ಟಿಸಬೇಕು, ಬೆರ್ಮೆರಿಗೆ ಬದಿಮಾಡ ಕಟ್ಟಿಸಬೇಕು ಇಂದು ಪ್ರದಕ್ಷಿಣಪಥದಲ್ಲಿ ಬರುವ ಸೇಮಕಲ್ಲ ಪಂಜುರ್ಲಿದೈವಕ್ಕೆ ಬದಿಮಾಡ ಕಟ್ಟಿಸಬೇಕು ಇಂದು.....

ಅರುವತ್ತಾರು ಕೋಟಿ ನಾಗಬ್ರಹ್ಮರನ್ನು ಓ..... ಸ್ಥಾಪಿಸಬೇಕು..... ಎಂದು ಓ ಹೇಳುತ್ತಾರಂತೆ.....ಓ.....ಬ್ರಾಹ್ಮಣಾ.....

ಅಷ್ಟು ಹೇಳುವುದನ್ನು ಕೇಳಿದರಂತೆ ಇಂದು ನಾರಾಯಣಾ ನಾರಾಯಣಾ ಬ್ರಾಹ್ಮಣಾ ಓ....

ಸಾವಿರವರ್ಷ ವಯಸ್ಸಾದ ಅಜ್ಜನವರು ಇಂದು ಹದಿನಾರು ವರ್ಷದ ಯುವಕರಾದರು ಇಂದು....

ಏಳು ಅಂತರಗಳ ಯಮಗುಡಿಗೆ ಹೋದರು ಇಂದು

ತೆಂಕಣ ಮನೆಯ ಅಡುಗೆ ಕೋಣೆಗೆ ಹೋದರು ಇಂದು ಕಲ್ಲಿನ ದೊಡ್ಡ ಪೆಟ್ಟಿಗೆಯ ಬಾಯಿಬೀಗ ತೆಗೆದರು

ಕಂಚಿನ ಬೀಗಕ್ಕೆ ಮಿಂಚುವ ಕೋಲಿಕೈ ಹಾಕಿದರು ಬಂಗಾರದ ಹರಿವಾಣ ಹಿಡಿದರು ಇಂದು....

ಒಂದು ಬಳ್ಳ ಮುತ್ತು ಅಳೆದುಕೊಂಡು ಇಂದು ಬಡಬ್ರಾಹ್ಮಣನಿಗೆ ನಾನು ಕೊಡುತ್ತೇನೆಂದು ಹೇಳಿಕೊಂಡು ಇಂದು......

ಮನೆಯ ತೆಂಕಣ ಸಿರಿಚಾವಡಿಯಿಂದ ಇಳಿದು ಚಿಕ್ಕಚಾವಡಿ ಸಿದ್ರಮಂಟಪಕ್ಕೆ ಬಂದು

ತಾಳೆಗರಿಯ ಚಾಪೆ ಹಾಸಿ ಕುಳಿತು ಬನ್ನಿ ಬ್ರಾಹ್ಮಣಾ ಬನ್ನಿ ಎಂದು ಕರೆಯಲು

ಬ್ರಾಹ್ಮಣ ಮಾಯವಾಗಿದ್ದಾನಪ್ಪಾ......ಓ......

ಬ್ರಾಹ್ಮಣ ಓ ಮಾಯವೇ ಆಗಿದ್ದಾರೆ.....

ನಾರಾಯಣಾ....ನಾರಾಯಣಾ....ಓ.....

ಅಷ್ಟು ಹೇಳಿ ಇಂದು ನೈಜ ಬ್ರಾಹ್ಮಣನೆಂದು ನಾನು ತಿಳಿದನಪ್ಪಾ ಓ.....

ಮಾಯದ ಬ್ರಾಹ್ಮಣನೆಂದು ತಿಳಿಯದಾದೆ ಎಂದರು ಅಜ್ಜನವರು.....

ಹದಿನಾರು ವರ್ಷದ ಯುವಕನ ರೂಪ ತಾಳಿದರಂತೆ ಇಂದು.....

ಹಾರೆ ಗುದ್ದಲಿ ಹೊರಗಿರಿಸಿದರು ಇಂದು ಆಳುಮಕ್ಕಳನ್ನು ಕರೆಸಿದರು

ಸತ್ಯನಾಪುರದರಮನೆಯಲ್ಲಿ ಗುಲ್ಲುಗದ್ದಲದೊಂದಿಗೆ ಓ ಆಳುಗಳನ್ನು ಕರೆದುಕೊಂಡು

ಕೆಲಸದಾಳುಗಳನ್ನು ಕೂಡಿಕೊಂಡು ಇಂದು.....

ಬಡಗಣ ಲಂಕೆಲೋಕನಾಡಿಗೆ ಹೊರಟರು ಇಂದು.....

ಪಾಳುಬಿದ್ದ ಜಾಗವನ್ನು ನೋಡಿದರು ಇಂದು

ಅಜ್ಜನವರು .....ಓ.....ಆರ್ಯಬನ್ನಾರು .....ಓ.....ಬಿರ್ಮುಮಾಲವರು....

ಹೋದರಂತೆ ಇಂದು ಪೊದರುಬಳ್ಳಿ ಕಡಿಸಿದರಂತೆ ತುಂಬೆ, ನೆಕ್ಕಿ ಕೀಳಿಸಿದರಂತೆ

ಇಂದು ದೇವರಿಗೆ ಓ ದೇವಸ್ಥಾನ ಆಗಬೇಕೆಂದರು ಇಂದು ಭೂತಗಳಿಗೆ
ಆಲಯಗಳಾಗಬೇಕೆಂದರು......
ಮೂವತ್ತು ದಿನದ ಕೆಲಸ ಮಾಡಬೇಕೆಂದರು.....
ಇಂದಾದರೋ ಮೂವತ್ತು ದಿನದ ಕೆಲಸ ಮಾಡಿಸಿದರು....
ಮಾಡಿಸಿ, ಮೂವತ್ತೊಂದನೆಯ ದಿನದಂದು ಸಂತಾನದ ಫಲ ನನಗೆ ದೊರೆಯುತ್ತದೆ
ಎಂದರು ಓ ಅಜ್ಜನವರು....
ಓ ಆರ್ಯಬನ್ನಾರು ಬಿರ್ಮುಮಾಲವರು.....
ಅಷ್ಟು ಹೇಳಲು ಇಂದು ಅಜ್ಜನವರು ಇಂದು
ಮೂವತ್ತು ದಿನದ ಕೆಲಸ ಆಗಬೇಕೆಂದು ಹೇಳಿದರು ಇಂದು
ದೇವರಿಗೆ ದೇವಸ್ಥಾನ ಕಟ್ಟಿಸಿದರು ಭೂತಗಳಿಗೆ ಮಾಡ (ಆಲಯ) ಕಟ್ಟಿಸಿ ಇಂದು
ನಾಗಕಲ್ಲು ದಿನದ ಶುದ್ಧ ಮಾಡಿಸಿದರು, ನಾಗಕಲ್ಲಿಗೆ ಜೀವಕಳೆ ಹುಟ್ಟಿತಂತೆ ಇಂದೊ.....
ನಲ್ವತೆಂಟರ ಜೀವಕಳೆ ಬೇಡಪ್ಪಾ ಎಂದರು
ಇಪ್ಪತ್ತೊಂದು ದಿನದ ಜೀವಕಳೆ ಹುಟ್ಟಿಸಿದರು
ಬಡಗಣ ಲಂಕೆಲೋಕನಾಡಲ್ಲಿ ಇಂದು ಬೆರ್ಮದೇವರನ್ನು ಇಂದು
ಸ್ಥಾಪನೆಗೊಳಿಸಿದರು ಓ ಆಯಬನ್ನಾರು ಬಿರ್ಮುಮಾಲವರು.....
ಇಂದಾದರೋ ದೂರದೂರಿಗೆ (ತಿಳಿಸಲು) ನಗಾರಿ ಬಾರಿಸಿದರಂತೆ
ಸಮೀಪದವರಿಗೆ ಮನೆಮನೆಗೆ ಓಲೆ ಕಳುಹಿಸಿದರಂತೆ
ಡಂಗುರ ಹೊಡೆಸಿದರಂತೆ ಇಂದು ಸತ್ಯನಾಪುರದರಮನೆಯಲ್ಲಿ
ಆರ್ಯಬನ್ನಾರು ಬಿರ್ಮುಮಾಲವರು......
ಸಂತಾನದ ಫಲ ಓ ದೊರೆಯುತ್ತದೆ ಎಂದು....ಓ.....
ಡಂಗುರ ಹೊಡೆಸಿಯೇ ಬಿಟ್ಟರು......ಓ......ಅಜ್ಜನವರು.....
ಇಂದಾದರೋ ಮೂವತ್ತು ದಿನದ ಕೆಲಸ ಮಾಡಿಸಿದರು
ಮೂವತ್ತೊಂದನೇ ದಿನಾಗುವಾಗ ಇಂದು
ಸತ್ಯನಾಪುರದರಮನೆಯಲ್ಲಿ ಗೌಜಿಗದ್ದಲ ಗುಲ್ಲುಗುಂಪು ಸೇರಿಸಿದ್ದಾರೆ.....
ಇಂದಾದರೋ ಇಂದು ಸತ್ಯನಾರದರಮನೆಯಲ್ಲಿ
ಗೌಜಿಗದ್ದಲ ಗುಲ್ಲುಗುಂಪಲ್ಲಿ ಇಂದು
ಅಜ್ಜನವರು ಸತ್ಯದಂಡಿಗೆಯಲ್ಲಿ ಸರ್ವ ಬಿರುದಾವಳಿಗಳೊಂದಿಗೆ ಸಾವಿರ ವಾದ್ಯಗಳೊಡನೆ
ಹೊರಡಬೇಕೆಂದು ಹೇಳಿದರು.....
ಇಂದಾದರೋ ಇಂದು ಅಟ್ಟದಿಂದ ಪಲ್ಲಕ್ಕಿ ಕೆಳಗಿಳಿಸಿದರಂತೆ
ದಂಡಿಗೆ ಹೊರುವ ಬೋವಿಗಳನ್ನು ಕರೆಸಿದರು ಇಂದು ದಂಡಿಗೆ ಸಿಂಗಾರ
ಮಾಡಿಸಿದರಂತೆ

ಸತ್ಯನಾಪುರದರಮನೆಯಲ್ಲಿ .....ಓ.....ಬೆರ್ಮದೇವರನ್ನು ವಂದಿಸಿ ಓ.....
ಆರ್ಯಬನ್ನಾರು ಓ ಬಿರ್ಮುಮಾಲವರು.....
ಇಂದಾದರೋ ಇಂದು ಬಿರ್ಮುಮಾಲವರಂತೆ
ಸತ್ಯನಾಪುರದರಮನೆಯಲ್ಲಿ ಸಾವಿರಾರು ಮಂದಿಯ ಸಭೆ ಕೂಡಿಕೊಂಡು ಇಂದು
ಸತ್ಯನಾಪುರದರಮನೆ ಇಳಿದರಪ್ಪಾ.....
ಮುಂಭಾಗದ ಕಲ್ಲಿನ ಸಣ್ಣ ಕಟ್ಟಡ ದಾಟಿದರು ಕಂಚಿನ ದಾರಂದ ಹಿಂದೆ ಬಿಟ್ಟರು ಓ.....
ಹಾಕಿಸಿರುವ ಏತ, ತೋಡಿಸಿರುವ ಬಾವಿಯನ್ನು ದಾಟಿ ಮುಂದೆ ಹೋದರು
ಹುರುಳಿ ಬಿತ್ತಿದ ಗದ್ದೆಯನ್ನು ಹಿಂದೆ ಬಿಟ್ಟರು ಇಂದು
ಹೂಹಾಕುವ ಪೂಕರೆ ಕಂಬಳ ಗದ್ದೆಯನ್ನು ದಾಟ ಮುಂದೆ ಹೋದರು
ಬಾಳೆ ನೆಡುವ ಮುಂದಣ ಗದ್ದೆಯನ್ನು ಹಿಂದೆ ಹಾಕಿಕೊಂಡು ಇಂದು
ಜಾನುವಾರು ದಾಟುವ ಹೆದ್ದಾರಿ ದಾಟಿ ಮಾನವರು ಹೋಗುವ ಮಾರ್ಗ ಹಿಡಿದುಕೊಂಡು
ಸತ್ಯದಂಡಿಗೆ (ಪಲ್ಲಕ್ಕಿ) ಸರ್ವ ಬಿರುದಾವಳಿ ಸಾವಿರಾರು ವಾದ್ಯಗಳೊಂದಿಗೆ
ಸೂಳೆಯರ ಮೇಳದಲ್ಲಿ, ತೆಂಗಿನಕಾಯಿಯ ತಪ್ಪಂಗಾಯಿಯಲ್ಲಿ ಅಡಿಕೆ ಜೂಜಿನಲ್ಲಿ
ಕೋಳಿ ಅಂಕದೊಂದಿಗೆ, ಸೂಳೆಯರ ಮೇಳದೊಂದಿಗೆ ಓ..... ಹೊರಟರು ಅಜ್ಜನವರು....
ನಾರಾಯಣಾ....ಓ...... ನಾರಾಯಣಾ.....ಓ......
ಇಂದಾದರೋ ಹೋದರಂತೆ ಹೋಗುತ್ತಾ ಹೋಗುತ್ತಾ ಇಂದು
ಆನೆ ಕಟ್ಟುವ ಅಶ್ವತ್ಥ, ಕುದುರೆ ಕಟ್ಟುವ ಕಿನ್ನಿಗೋಳಿ
ಸೆಳೆಗೊಂಬು ಅಲಿಮ್ಮರ್, ಮಾದೆರಿ ಬಳ್ಳಿ, ಎಂಜಿರ್ ಎಲಿಮಲೆ ಹೀಗೆ
ಏಳು ಮಲೆಗಳನ್ನು ಹಿಂದೆ ಹಾಕಿಕೊಂಡು ಎತ್ತು ಹೋಗುವ ಹೆದ್ದಾರಿಯನ್ನು ಹಿಂದಕ್ಕೆ ಹಾಕಿಕೊಂಡು
ಮನುಷ್ಯರು ಹೋಗುವ ಮಾರ್ಗ ಹಿಡಿದುಕೊಂಡು ಓ ಹೋಗುತ್ತಾರಂತೆ ಅಜ್ಜನವರು....
ಹೋಗಿಹೋಗಿಯಂತೆ ಇಂದು ಬಡಗಣ ಲಂಕೆಲೋಕನಾಡಿಗೆ ಹೋದರಂತೆ ಇಂದು
ಗೋಪುರದಲ್ಲಿ ಸತ್ಯದಂಡಿಗೆಯಲ್ಲಿ ಕೆಳಗಿಳಿಸಿದರಂತೆ ಇಂದು ಅಜ್ಜನವರು ಹೋಗಿ....
ಗೌಜಿ ಗದ್ದಲ ಗುಂಪಲ್ಲಿ ಇಂದು ತೆಂಗಿನ ಮರಕ್ಕೆ ಕಟ್ಟಿದ ತಂಬೂರಿಯನ್ನು
ಮಾವಿನ ಮರಕ್ಕೆ ಕಟ್ಟಿದ ನಗಾರಿಯನ್ನು ಇಂದು
ಸರ್ವ ಬಿರುದಾವಳಿ ಡೋಲು ಕುಣಿತದಲ್ಲಿ ..... ಓ ಬೇಂಡು ವಾಲಗದಲ್ಲಿ.....
ಬೆರ್ಮರಿಗೆ ಮಹಾಪೂಜೆ ಮಾಡಿಕೊಂಡು ಇಂದು
ಓ ಬ್ರಾಹ್ಮಣ ಇದ್ದಾರಂತೆ ಅಲ್ಲಿ.....ಓ.....ಅಜ್ಜನವರು ಓಆರ್ಯಬನ್ನಾರಂತೇ....

ಇಂದಾದರೋ ಅಜ್ಜನವರಂತೆ ಇಂದು ಗೋಪುರದಲ್ಲಿ
ಇಂದು ದಂಡಿಗೆ ಇಳಿಸಿದರಂತೆ ಮೂಡಣ ನಂದನಕೆ ಹೋದರಂತೆ
ತಾವರೆಯ ಕೆರೆಯಲ್ಲಿ ಇಂದು ಅಡಿಮೊಗವಾಗಿ ಮುಳುಗಿ ಮೇಲ್ಮೊಗವಾಗಿ ಎದ್ದು ಗೋಚರಿಸಿದರಂತೆ
ಮೂರುಬಾರಿ ಮುಳುಗಿ ಮೂರುಬಾರಿ ಎದ್ದು ಗೋಚರಿಸಿದರಂತೆ
ಮೈಲಿಗೆ ಕಲ್ಲಲ್ಲಿ ನಿಂತು ಮೈಲಿಗೆ ಬಟ್ಟೆ ತೆಗೆದರಂತೆ ಮಡಿಯ ಕಲ್ಲಲ್ಲಿ ನಿಂತು ಮಡಿಬಟ್ಟೆ ಉಟ್ಟರಂತೆ ಅಜ್ಜನವರು
ಹತ್ತು ಬೆರಳು ಜೋಡಿಸಿ ವಂದಿಸಿದರಂತೆ ಅಜ್ಜನವರು
ಇಂದಾದರೋ ಹತ್ತುಬೆರಳು ಜೋಡಿಸಿ ವಂದಿಸಿದರು ಓ ಅಜ್ಜನವರು
ಬಡಗಣ ಲಂಕೆಲೋಕನಾಡಿನಲ್ಲಿ......
ಇಂದಾದರೋ ಆನೆಕಲ್ಲಿನ ಮರೆಯಲ್ಲಿ ದಂಬೆಕಲ್ಲಿನ ಎದುರಿನಲ್ಲಿ
ಆನೆಕಲ್ಲಿನ ಮರೆಯಲ್ಲಿ ದಂಬೆಕಲ್ಲಿನ ಎದುರಿನಲ್ಲಿ ಧ್ವಜಕಂಬದ ತುದಿ ನೆರಳಿನಲ್ಲಿ
ಬುಟ್ಟಿಯ ಅಯ್ಯೋಜಿಯಲ್ಲಿ (?), ಹೆಡಿಗೆಯ ಪುಷ್ಪದಲ್ಲಿ, ಗಂಧದ ಗುಳಿಗೆಯಲ್ಲಿ, ಹೋಮದ ಕಪ್ಪು ಹೊಗೆಯಲ್ಲಿ
ಒಕ್ಕೆತ್ತಿರಿ ವಂಶದ ಪಾರ್ವತಿ ಜನನ ಈಶ್ವರನ ತೊಡೆಯ ಭಾಗದಿಂದ
ಹುಟ್ಟಿ ಬಂದು ಓ......ಬಂಗಾರದ ಪಿಂಗಾಣಿಯಲ್ಲಿ
ಪಿಂಗಾರದ ಎಸಳಿನಲ್ಲಿ ಓ......ಕುಂಕುಮದ ಹರಳಾಗಿ......ಓ......ಅಜ್ಜನವರ ಹಚ್ಚಡದ ತುದಿಯಲ್ಲಿ......
ಉದಯ ಓ......ಆಗಿದೆಯಪ್ಪಾ......ಓ......
ಇಂದಾದರೋ ಅಜ್ಜನವರ ಓ ಹಚ್ಚಡದ ತುದಿಯಲ್ಲಿ
ಉದಯವಾದಾಗ ಹೇಳುತ್ತಾರಂತೆ ಇಂದು
ನಾರಾಯಣಾ ನಾರಾಯಣಾ ಬಿರ್ಮೂಮಾಲವಾ......
ಹಚ್ಚಡದ ತುದಿ ಓ
ಹಿಡಿಯೋ ಬಿರ್ಮುಮಾಲವಾ......ಓ......
ಸೆರಗಿನ ತುದಿಗೆ ಸಂತಾನದ ಫಲ ನಿನಗೆ ಓ ಸಿಗುತ್ತದೆ......
ಇಂದಾದರೋ ಇಂದು ಬ್ರಾಹ್ಮಣನಂತೆ ಇಂದು
ಹತ್ತು ಬೆರಳು ಜೋಡಿಸಿ ವಂದನೆ ಮಾಡಿ ಇಂದು
ಅಜ್ಜನವರು ಹಚ್ಚಡದ ತುದಿ ಕೊಟ್ಟರಂತೆ
ಕೊಟ್ಟಾಗ ಇಂದು ಅಜ್ಜನವರ ಹಚ್ಚಡದ ತುದಿಯಲ್ಲಿ
ಕುಂಕುಮದ ಹರಳಾಗಿಯೇ ಓ ಸಂತಾನದ ಫಲ ಓ ಬೀಳುತ್ತದಪ್ಪಾ......
ನಾರಾಯಣಾ......ನಾರಾಯಣಾ......ಓ......ಬ್ರಾಹ್ಮಣಾ......

ಮೂವತ್ತೆಂದು ದಿನದ ಸೇವೆ ದೇವರಿಗಾಗಿ ಮಾಡಿಸಿದೆ
ಇವತ್ತು ದೇವರಿಗೆ ದೇವಸ್ಥಾನ ಕಟ್ಟಿಸಿದೆ ಭೂತಗಳಿಗೆ ಬದಿಮಾಡ ಕಟ್ಟಿಸಿದೆ......
ಕಲ್ಲು ಕಡಿಸಿ ನಾಗನಕಲ್ಲು ಸ್ಥಾಪಿಸಿ......
ಅರುವತ್ತಾರು ಕೋಟಿ ಓ ನಾಗಬೆರ್ಮರು......
ಆನೆಕಲ್ಲ ಮರೆಯಲ್ಲಿ ನಿಮಗಿಂದು ಕುದುರೆಕಲ್ಲಿನ ಉದ್ದಕ್ಕೆ
ದಂಬೆಕಲ್ಲಿನ ಎದುರುಗಡೆ ಇಂದು ಓ......
ಧ್ವಜಕಂಬದ ತುದಿನೆರಳಲ್ಲಿ ಇಂದು ಬುಟ್ಟಿಯ ಅಯ್ಯೋಜಿ(?)ಯಲ್ಲಿ
ಹೆಡಿಗೆಯ ಪುಷ್ಪದಲ್ಲಿ ಗಂಧದ ಗುಳಿಗೆಯಲ್ಲಿ ಹೋಮದ ಕಪ್ಪು ಹೊಗೆಯಲ್ಲಿ
ಅರುವತ್ತಾರು ಕೋಟಿ ನಾಗಬ್ರಹ್ಮರ ಬಲಭಾಗದಲ್ಲಿ
ದೇವರ ಎಡಭಾಗದಲ್ಲಿ ಇಂದು ಸಂತಾನದ ಫಲ ನಿನಗೆ ಓ......
ಬಿದ್ದಿತಲ್ಲವೇ ಬಿರ್ಮುಮಾಲವಾ......ಓ......
ಹೇಗೆ ಕೊಂಡುಹೋಗುತ್ತೀ ಓ ಎಂದು ಕೇಳಿದರು ಬ್ರಾಹ್ಮಣ......
ಅಂಗೈಯಲ್ಲಿ ಕೊಂಡುಹೋದರೆ ಅಂಗೈ ಜಗ್ಗಿ ಹೋದೀತು ಬಿರ್ಮುಮಾಲವಾ......
ಇಂದು ಬೆನ್ನಲ್ಲಿ ಕೊಂಡುಹೋದರೆ ಬೆನ್ನ ಬಾಗೀತು ನಿನಗೆ......
ತಲೆಯಲ್ಲಿ ಇಟ್ಟರೆ ತಲೆ ಒಡೆದು ಹೋದೀತು ಓ......
ಎದೆ ತೊಟ್ಟಿನಲ್ಲಿ ಓ......ಹಿಡಿದುಕೊಂಡು ಹೋಗು ಬಿರ್ಮುಮಾಲವಾ......
ಇಂದಾದರೋ ಅಜ್ಜನವರ ಸೆರಗಿನ ತುದಿಯಲ್ಲಿ
ಇಂದು ಹಿಂಗಾರದ ಹಾಳೆಯನ್ನು ಕೊಟ್ಟರಂತೆ, ಅಜ್ಜನವರಂತೆ
ಇಂದು ಹಿಂಗಾರದ ಹಾಳೆಯನ್ನು ಹಿಡಿದುಕೊಂಡರಂತೆ ಬಡಗಣ
ಲಂಕೆಲೋಕನಾಡಿನಿಂದ ತಂದ ಸತ್ಯದಂಡಿಗೆಯಲ್ಲಿ ಇಟ್ಟರು.
ಹೋದ ದಂಡಿಗೆಯಲ್ಲಿಯೇ ಓ ಸಂತಾನದ ಫಲ ಓ ಸಿಕ್ಕಿತಜ್ಜನವರಿಗೇ......
ಇಂದಾದರೋ ಬಡಗಣ ಲಂಕೆಲೋಕನಾಡು ಹಿಂದೆಬಿಟ್ಟರು
ಅಲ್ಲಿ ಪೂಜೆಗೆ ಅರ್ಚಕನನ್ನು ನೇಮಿಸಿದರು
ಓ ನಾರಾಯಣಾ ನಾರಾಯಣಾ ಬ್ರಾಹ್ಮಣಾ......ಓ......
ವಾರ್ಷಿಕ ಸಾವಿರಮುಡಿ ಉಂಬಳಿ ನಿನಗೆ
ಒಂದು ಸಾವಿರ ತೆಂಗಿನಕಾಯಿ, ಒಂದು ಸಾವಿರ ಮುಡಿ ಉಂಬಳಿ ಬಿಟ್ಟೆ ನಿನಗೆಂದರು
ಬಡಗಣ ಲಂಕೆಕೋಕನಾಡಿನಲ್ಲಿ ನಿತ್ಯಪೂಜೆ ಮಾಡುತ್ತಿರು ಬ್ರಾಹ್ಮಣ ಎಂದರು......
ಓ......ಅಜ್ಜನವರು ಓ......ಆರ್ಯಬನ್ನಾರು ಬಿರ್ಮೂಮಾಲವರು......
ಇಂದಾದರೋ ಹೋದ ದಂಡಿಗೆಯಲ್ಲಿಯೇ ಹಿಂತಿರುಗಿದರು ಇಂದು
ಸತ್ಯನಾಪುರದರಮನೆ ಹೊಕ್ಕರು ಅಜ್ಜನವರು ಹರ್ಷದ ದೇಹವಾಯಿತಿಂದು
ಮುತ್ತಿನ ನಗುವಾಯಿತಿಂದು ಓ ಅಜ್ಜನವರಿಗೆ......

ಚಿಕ್ಕಚಾವಡಿ ಸಿದ್ರಮಂಟಪಕ್ಕೆ ಹೋದರು ತಾಳೆಗರಿಯ ಚಾಪೆ ಹಾಸಿ ಕುಳಿತರು
ಹಿಂಗಾರದ ಹಾಳೆಯನ್ನು ಇಟ್ಟು ಕುಳಿತರು......ಓ......ಹರುಷದ ದೇಹವಾಯಿತಿಂದು
ಇಂದಾದರೋ ಅಜ್ಜನವರು ಓ ಆರ್ಯಬನ್ನಾರು ಬಿರ್ಮೂಮಾಲವರು......
ಏಳು ಅಂತರದ ಯಮಗಂಡಕ್ಕೆ ಹೊಕ್ಕರಂತೆ ಅರುವತ್ತು ತೂಕ ಬಂಗಾರ ತೆಗೆದರಂತೆ
ಮೂವತ್ತು ತೂಕ ಬೆಳ್ಳಿ ತೆಗೆದರಂತೆ ಇಂದು ಆಚಾರಿ ಕೊಟ್ಟಿಗೆಗೆ ಹೋದರಂತೆ
ಒಂದು ಬಡಿತಕ್ಕೆ ಒಮ್ಮೆ ಕಾಯಿಸುವಿಕೆಗೆ ಇಂದು ಅರುವತ್ತು ತೂಕದ ಬಂಗಾರದ ತೊಟ್ಟಿಲು
ಆಗಬೇಕು, ಮೂವತ್ತು ತೂಕ ಬೆಳ್ಳಿಯ ಹರಿದಾರ ಕೋದರಂತೆ ಇಂದು
ಏಳು ಕೋಣೆಯ ಯಮದೇವಿ ಗುಡಿಯ ಬೆಳ್ಳಿಮಾಡದಲ್ಲಿ ಓ ಹಕ್ಕಿ ಹಲಗೆಯಲ್ಲಿ......
ವಜ್ರದ ಹಲಗೆಯಲ್ಲಿ ಇಂದು ಮಗುವಿಗೆ ತೊಟ್ಟಿಲು ಕಟ್ಟಬೇಕೆಂದರು......ಓ......
ನಾರಾಯಣಾ ಓ ನಾರಾಯಣಾ......
ಆ ದಿನ ಹೋಯಿತು ಅಜ್ಜನವರಿಗೆ ಮಾರನೆ ದಿನ ಬರಲು
ನಾರಾಯಣ ದಾರು ದಾರು ಕೇಳಿದಿಯಾ......ಓ......
ತೊಟ್ಟಿಲಲ್ಲಿಟ್ಟ ಹಿಂಗಾರದ ಹಾಳೆ ಏನಾಯಿತೆಂದು......
ಓ ಕೇಳಿದರಜ್ಜನವರು......
ಅಷ್ಟು ಹೇಳಲು ಇಂದು ಓಡೋಡುತ್ತಾ ಹೋಗಿ ನೋಡಲು ಇಂದು
ಹಿಂಗಾರದ ಹಾಳೆ ಒಡೆದು ಇಂದು ಹೆಣ್ಣುಮಗು ಕರಿಂಕ್ ಕಿರಿಂಕೆಂದು ಅಳುವ ಅಂದ
ಓ ಅಜ್ಜನವರು ನೋಡಿದರು......
ಹರುಷದ ಮೈ(ದೇಹ) ಮುತ್ತಿನ ನಗುವಲ್ಲಿ......
ನಾರಾಯಣಾ......ನಾರಾಯಣಾ......
ಸತ್ಯನಾಪುರದರಮನೆಯಲ್ಲಿ ಆರ್ಯಬನ್ನಾರು ಬಿರ್ಮೂಮಾಲವರಿಗೆ......ಓ......
ಸಂತಾನದ ಫಲ ಸಿಕ್ಕಿತೆಂದು ಹೇಳಿದರು
ಹರುಷದ ದೇಹ ಮುತ್ತಿನ ನಗು ಆಗುವಾಗ ಇಂದು
ಮನಸ್ಸಲ್ಲಿ ಬಲು ಸಂತೋಷ ಪಡೆದರು......
ಅಷ್ಟು ಹೊತ್ತಿಗೆ ಅಂದಿನ ದಿನ ಕಳೆಯಿತು
ಓ ಸೇವೆಗೆ ಓ ಸೇವಕಿ ಹೆಣ್ಣು ದಾರು......ಓ......
ಅಂದಿನ ದಿನ ಕಳೆದು ಮರುದಿನ ಬರುವಾಗ ಹೀಗೆ
ಮೂರು ದಿನ ಆಗುವಾಗ......
ಮೂರು ದಿನದ ಸೂತಕ ಕಳೆಯಬೇಕೆಂದರು ಅಜ್ಜನವರು ಇಂದು ಓ......
ಸಸಿ ಅಡಿಕೆಮರದ ಹಾಳೆ ತಂದರಜ್ಜನವರು

ಹಾಳೆಯ ತುದಿಕೊನೆ ಕತ್ತರಿಸಿದರು ಇಂದು......
ಮಗುವಿಗೆ ಇಂದು ಸೂತಕ ಕಳೆಯಬೇಕೆಂದರು
ಮೂರನೆಯ ದಿನದ ಸೂತಕ ಕಳೆಯಬೇಕೆಂದರು
ಓ ಅಜ್ಜನವರು ಆರ್ಯಬನ್ನಾರರು......
ಮೂರರ ಸೂತಕ ಕಳೆದರಂತೆ ಇಂದು ನಾಲ್ಕು ದಿನ ಕಳೆಯಿತು......
ಮಗು ತೊಟ್ಟಿಲಲ್ಲಿ ಹಾಕಬೇಕೆಂದರಜ್ಜನವರು......
ಶುಭವಾರ ಅಜ್ಜನವರೆ ಶುಭದಿನ ಶುಭ ಗಳಿಗೆ ಇಂದು
ಜಾನುವಾರುಗಳು ಹಟ್ಟಿಗೆ ಬರುವ ಹೊತ್ತು
ಮಗುವನ್ನು ತೊಟ್ಟಿಲಲ್ಲಿ ಮಲಗಿಸಬಹುದೆಂದು ಓ ದಿನಮಾನ ಹೇಳಿದರು......
ಬರುವ ಗುರುವಾರವಲ್ಲ ಓ ಮುಂಬರುವ ಗುರುವಾರದಂದು
ಉದಯವಾದ ಸೂರ್ಯ ಅಸ್ತಮನಾಗುವ ಸಮಯದಲ್ಲಿ
ಹಟ್ಟಿಗೆ ಜಾನುವಾರುಗಳು ಸೇರುವ ವೇಳೆಯಲ್ಲಿ ಮಗುವನ್ನು ತೊಟ್ಟಿಲಲ್ಲಿ ಓ
ಮಲಗಿಸುವ ಹೊತ್ತೆಂದು ಓ ಜ್ಯೋತಿಷಿ ಹೇಳಿದನಪ್ಪಾ......
ಅಲ್ಲಿಂದ ಹೊರಟು ಬಂದರು ಅಜ್ಜನವರು
ಕೆಳ ಭಾಗದ ಪಾಲವರಿಗೆ ಮೇಲಿನ ಭಾಗದ ಪಾಲವರಿಗೆ
ನಡು ನಕರೆಯ ಪಾಲವರಿಗೆ ಇಂದು ಮುಲ್ಕಿ ಸೇರಿಸಿ ಒಂಬತ್ತು ಮಾಗಣೆ
ಬಂಗರೊಟ್ಟು, ಬೊಲ್ಯೊಟ್ಟು, ಮುಲ್ಕಿಗೆ ಓ ಹೇಳಿಕೆ ನೀಡಿದರಜ್ಜನವರು......
ಮುಲ್ಕಿ ಸೇರಿಸಿ ಒಂಬತ್ತು ಮಾಗಣೆ ಕಕ್ಯೊಟ್ಟು, ಕಾರ್ಯೊಟ್ಟು ಕಾಳನಾಯಕನ ಮನೆಗೆ
ಓ ಹೋದರಜ್ಜನವರು......ಓ......
ಅಲ್ಲಿಂದ ಹೊರಟು ಬಂದರಜ್ಜನವರು......ಓ......
ಇಂದಾದರೋ ಓ ಅಷ್ಟು ಹೊತ್ತಿಗೆ ಇಂದು ಓ......
ಸಮೀಪದ ಮನೆಮನೆಗಳಿಗೆ ಹೋಗಿ ಆಮಂತ್ರಿಸಿದರು ದೂರದೂರಿಗೆ......
ಓಲೆ ಕಳುಹಿಸುವಲ್ಲಿಗೆ ಓಲೆ ಕಳುಹಿಸಿದರಂತೆ......
ಡಂಗೂರ ಸಾರುವಲ್ಲಿಗೆ ಡಂಗೂರ ಸಾರಿಸಿ ಬಿಟ್ಟರಜ್ಜನವರು......
ಆ ದಿನ ಹೋಯಿತು ಮರುದಿನ ಬಂತು ಅಜ್ಜನವರಿಗೆ......ಓ......
ಹರುಷದ ಮೈ ಮುತ್ತಿನ ನಗುವಾಯಿತು ಅಜ್ಜನವರಿಗೆ......
ಅರುವತ್ತು ತೂಕ ಬಂಗಾರದ ತೊಟ್ಟಿಲಲ್ಲಿ ಮೂವತ್ತು ತೂಕದ ಬೆಳ್ಳಿಯ ಹರಿದಾರದಲ್ಲಿ
ಏಳು ಅಂತರಗಳ ಯಮದೇವಿ ಗುಂಡದ ಬೆಳ್ಳಿಮಾಡದಲ್ಲಿ ಕಟ್ಟಿರುವ ತೊಟ್ಟಿಲಲ್ಲಿ
ಮಲಗಿಸಿದರು......
ಇಂದಾದರೋ ಮಗುವಿಗೆ ಆಭರಣವೆಂದು ಓ ಹೇಳಿದರಜ್ಜನವರು......ಓ......
ಸೊಂಟಕ್ಕೆ ಡಾಬು ನೂಲೂ......ಓ......

ಕೈಯ ಬಂಗಾರವೆಂದರು ಕೈಗೆ ಚಲಾಕಿ ಹಾಕಿದರು......
ಕಾಲಿಗೆ ಉರಿಗೆಜ್ಜ ಕುತ್ತಿಗೆಗೆ ಓ ಕಂಬೊಲು ಉಂಗುರ......ಓ......
ಮಗುವಿಗೆ ಓ ಹೆಸರಿಡಬೇಕೆಂದರೂ......
ಇಂದಾದರೋ ಸತ್ಯದಲ್ಲಿ ಹುಟ್ಟಿದವಳು
ತಂದೆ ಹುಟ್ಟಿಸಲಿಲ್ಲ ತಾಯಿ ಹೆರಲಿಲ್ಲ
ರಕ್ತದಲ್ಲಿ ಹುಟ್ಟಲಿಲ್ಲ ನೀರಲ್ಲಿ ಬೆಳೆಯಲಿಲ್ಲ ಓ...... ಮಗುವಂತೆ ಅವಳು......
ಬಡಗಣ ಲಂಕೆಲೋಕನಾಡಿನಲ್ಲಿ ......ಓ......
ಅರುವತ್ತಾರು ಕೋಟಿ ನಾಗಬೆರ್ಮರ ಬಲಭಾಗದಲ್ಲಿ
ಮೂವತ್ತಮೂರು ಕೋಟಿ ದೇವರ ಎಡಭಾಗದಲ್ಲಿ
ಉದಯವಾದ ಮಗಳು ಅವಳು...... ಬಾಳಿದವಳು ಬಾಲಕ್ಕೆ ಸಿರಿ......ಓ......
ಸತ್ಯನಾಪುರದರಮನೆಯಲ್ಲಿ ಓ ಸತ್ಯಮಹಾಲೋಕದ ಸಿರಿ ಎಂದು ಹೆಸರಿಟ್ಟರು......
ಓ ಹೆಸರು ಕರೆದರಜ್ಜನವರು......
ಅಷ್ಟು ಹೊತ್ತಿಗೆ ಇಂದು ಆಗಮಿಸಿದ ನೆಂಟರು ಇಂದು ಓ......
ಊಟೋಪಚಾರ ಮಾಡಿದರು ಓ......ಹೊರಟು ನಿಂತರು......
ಹೊರಟು ಇಂದು ಅಂದಿನ ದಿನ ಕಳೆಯಿತು
ಮರುದಿನವೂ ಕಳೆದು ಹೋಗಿರಲು
ಹದಿನಾರು ದಿನದ ಮಗು ಕಳೆದು ಸಿರಿ
ತಿಂಗಳ ಮಗುವಾಗಿ ಬೆಳೆದಳು, ತಿಂಗಳ ಮಗು ದಾಟಿ ಓ
ವರ್ಷದ ಮಗಳಾಗಿ ಬೆಳೆದಳು......ಓ......
ಒಂದು ವರ್ಷ ಒಂದು ದಿನ ಓ ಆಗುವ ಕಾಲಕ್ಕೆ......ಓ......
ಸತ್ಯಮಹಾಲೋಕದ ಸಿರಿಗೆ......
ನಾರಾಯಣ ಓ ನಾರಾಯಣಾ......ಓ......
ಬಸರೂರ ಅರಮನೆಯಲ್ಲಿ ಬತ್ತಕೇರಿ ಬಸರೂರಲ್ಲಿ ಓ ಇದ್ದಾನೆ ಕಾಂತಾಳ್ವ......
ಬಸರೂರ ಅರಮನೆಯಲ್ಲಿ ಅಂದಿನ ದಿನದಲ್ಲಿ ಓ
ತಾಯಿ ಇದ್ದಾರೆ ಸಂಕಾರು ಪೂಂಜೆದಿ ಓ......
ಅವರ ಮಗನಂತೆ ಓ......ಬಸರೂರ ಕಾಂತಾಳ್ವ......
ನಾರಾಯಣ ಮಗ ಓ ಮಗ ಕಾಂತನ, ಕೇಳಿದ್ದೀಯೆ ನೀನು......
ಏಳು ಏಳೂವರೆ ವರ್ಷದ ಮಗ ನೀನು, ಈವರೆಗೆ
ಗದ್ದೆಯ ಬದು ಎಲ್ಲೆಂದು ನೀನು ನೋಡಲಿಲ್ಲ ಮಗ......
ನಿನ್ನ ವಯಸ್ಸಿನ ಮಕ್ಕಳು ಇಂದು ಗದ್ದೆ ದಾಟಿ ಹೋಗಿ
ಗುಡ್ಡೆಯಲ್ಲಿ ಇಂದು ಆಡುತ್ತಾ ಮೆರೆದಾಡುತ್ತಾ ಓ ಇದ್ದಾರೆಂದು ಹೇಳಿದರು ತಾಯಿ

ಅವರು......
ಅಂದಿನ ದಿನ ಹೋಗಿ ಮರುದಿನ ಬರಲು ಇಂದು
ಮುಂಜಾವದಲ್ಲಿ ಎದ್ದನಂತೆ ಕಾಂತಾಳ್ವ ಇಂದು
ಕಿಟಕಿಗೆ ಕೈ ಕೊಟ್ಟು ಗಿಂಡಿಯಲ್ಲಿರುವ ನೀರು ತೆಗೆದನಂತೆ
ಬಾಯಿಯ ನಾತ ಕಣ್ಣಿನ ಮಂಪರು ಕಳೆದನಂತೆ ಅವನು......
ಹೀಗೆ ಕಳೆದು ಗಿಂಡಿ ಕೊಂಡುಹೋಗಿ ಕಿಟಕಿಯಲ್ಲಿ ಇಟ್ಟನಂತೆ
ಹೊರಹೊರಟು ಬಂದನಂತೆ ಇಂದು......
ಹೊರಗಣ ಸೂತ್ರಕ್ಕೆ ಬಂದು ಬಟ್ಟೆ ಹಾಕುವ ಕೋಲಿಗೆ ಕೈ ಹಾಕಿದನಂತೆ
ಮೂರು ಮೊಳ ಬಟ್ಟೆ ತೆಗೆದು ಸೊಂಟದ ಸುತ್ತ ಕಟ್ಟಿಕೊಂಡನಂತೆ ಮಗ ಇಂದು
ಓ ಬಸರೂರ ಅರಮನೆ ಓ ಇಳಿದನಂತೆ ಇಂದು......
ಹಾರೆ ಇಡುವ ಕೊಟ್ಟಿಗೆಗೆ ಹೋದನಂತೆ ಇಂದು
ಬಸರೂರ ಚಿಕ್ಕ ಹಾರೆ ತೆಗೆದನಂತೆ ಎಡದ ಹೆಗಲಲ್ಲಿ ಇಟ್ಟುಕೊಂಡು
ಇಂದು ಬಸರೂರ ಗದ್ದೆಯ ಬದುವಿಗೆ ಬಂದನಂತೆ ಮಗೂ ಅವನು......
ಇಂದಾದರೋ ಇಂದು ಹಳೆಯ ತೆರಪು ಮುಚ್ಚಿದನಂತೆ ಇಂದು
ಹೊಸ ತೆರಪು ತೆರೆಯುತ್ತಾ ತಗ್ಗು ಪ್ರದೇಶದ ನೀರನ್ನು ಎತ್ತರಕ್ಕೆ ಹಾಯಿಸುತ್ತಾ
ನೀರು ಕಡಿಮೆಯಾದ ಗದ್ದೆಗೆ ನೀರು ಕಟ್ಟುತ್ತಾ ಹೆಚ್ಚು ನೀರಿದ್ದ ಗದ್ದೆಯ ನೀರನ್ನು ಕಡಿಮೆಗೊಳಿಸುತ್ತಾ......
ಕಂಬಳ ಗದ್ದೆಯ ತುದಿಗೆ ಓ ಬಂದನಂತೆ ಮಗ ಅವನು......
ಕಂಬಳಗದ್ದೆಯ ತುದಿಯಲ್ಲಿ ಇಂದು ಮಾವಿನ ಮರದ ಬುಡದಲ್ಲಿ ನಿಂತು
ಹಾರೆ ಕೆಳಗೆ ಇಟ್ಟು ಸೊಂಟಕ್ಕೆ ಕೈಕೊಟ್ಟು ನಿಂತು ಓ......
ಕಿವಿ ಕೊಟ್ಟು ಕೇಳಲು......ಓ ಸತ್ಯನಾಪುರದರಮನೆಯಲ್ಲಿ ಓ ಮಗು ಅಳುವ ಚಂದ ಓ ಕೇಳುತ್ತದೆ ಮಗನಿಗೆ......
ಅಷ್ಟು ಹೊತ್ತಿಗೆ ಆ ಕಡೆ ಈ ಕಡೆ ನೋಡಿದನಂತೆ ಇಂದು
ಹಾರೆಯನ್ನು ಕೈಯಿಂದ ಕೆಳಗಿರಿಸಿದನಂತೆ ಇಂದು ಒಂದು ದೊಡ್ಡ ಹಜ್ಜೆಯಲ್ಲಿ ಒಂದು ಜಿಗಿತದಲ್ಲಿ ಓ ಸತ್ಯನಾಪುರದರಮನೆಗೆ ಹೋದ......
ಸತ್ಯನಾಪುರದಮನೆಯಲ್ಲಿ ಇಂದು ಓ ಕಲ್ಲಿನ ಬೇಲಿ, ಕಂಚಿನ ದಾರಂದ ದಾಟಿಕೊಂಡು ಹೋಗಿ ಇಂದು
ಆರೂವರೆ ಅಂಗಣ ಮೂರುವರೆ ಅಂಗಳವನ್ನು ಏರಿ ಚಿಕ್ಕ ಚಾವಡಿ ಸಿದ್ರ ಮಂಟಪಕ್ಕೆ ಹೋಗಿ......
ತಾಳೆಗರಿಯ ಚಾಪೆಯಲ್ಲಿ ಓ ಹೋಗಿ ಉಯ್ಯಾಲೆಯಲ್ಲಿ ಕುಳಿತ......
ನಾರಾಯಣ ಮಗ ಓ ಕಾಂತಾಳ್ವಾ......

ಓ ಏನು ಬಂದಿ ಮಗಾ ನೀನು ಈಗ ಎಲ್ಲಿಂದ ಬಂದೆ......ಎಂದು ಅಜ್ಜನವರು ಕೇಳಿದರು
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ......ಓ......
ಗದ್ದೆಯ ಬದುವಲ್ಲೇ ಬಂದೆ ಓ ಅಜ್ಜನವರೇ......
ಅಷ್ಟು ಹೊತ್ತಿಗೆ ಮಗು ಅಳುವುದು ಕೇಳಿತು ಅಜ್ಜನವರೇ......
ಓ ಮಗುವನ್ನು ತೋರಿಸಿ ಅಜ್ಜನವರೇ......
ನಾರಾಯಣ ಮಗ ಕಾಂತನ ಕೇಳಿದ್ದೀಯೆ ನೀನು...... ಇಂದು......
ಸತ್ಯನಾರಾಪುರದಮನೆಯಲ್ಲಿ ಹೆಣ್ಣು ಹೆಂಗಸರು ಇಲ್ಲದ ಮನೆಯಲ್ಲಿ
ಎಲ್ಲಿಂದ ಮಗು ಓ ಅಳುವುದು ಮಗಾ......
ನಾರಾಯಣ ಅಜ್ಜನವರೆ ಇಂದು
ಸತ್ಯನಾಪುರದರಮನೆಯಲ್ಲಿ ಹೆಣ್ಣು ಹೆಂಗಸರು ಇಲ್ಲದಿದ್ದರೆ ಓ
ಮರ ಹೆತ್ತ ಮಗುವನ್ನು ಓ ತೋರಿಸುವುದು ಬೇಡ ಅಜ್ಜನವರೆ......ಓ
ಕಲ್ಲು ಒಡೆದು ಬಂದ ಮಗುವನ್ನು ತೋರಿಸುವುದು ಬೇಡ ನನಗೆ
ಸತ್ಯನಾಪುರದರಮನೆಯಲ್ಲಿಯೇ ಇರುವ ಓ ಸತ್ಯಮಹಾಲೋಕದ ಸಿರಿಯನ್ನು ಓ
ಮಗುವನ್ನು ತೋರಿಸಿ ಅಜ್ಜನವರೇ......
ಅಷ್ಟು ಹೇಳಲು ಅಜ್ಜನವರು ಕಿಸ್ಕ ನಕ್ಕರಂತೆ ಬಡ್ಕ ಎದ್ದರಂತೆ
ಇಂದು ಏಳು ಅಂತರಗಳ ಯಮದೇವಿ ಗುಡಿಗೆ ಹೋದರಜ್ಜನವರು......ಓ......
ಅರುವತ್ತು ತೂಕ ಬಂಗಾರದ ತೊಟ್ಟಿಲಿಗೆ ಕೈ ಕೊಟ್ಟರು ಇಂದು ಓ ಅಜ್ಜನವರು...... ಓ......
ಮಗುವನ್ನು ಎತ್ತಿಕೊಂಡೂ......
ಹೆಗಲಲ್ಲಿ ಹಾಕಿಕೊಂಡು ಆಡಿಸಿಕೊಂಡು ಬಂದರಂತೆ ಇಂದು
ಚಿಕ್ಕ ಚಾವಡಿ ಸಿದ್ರ ಮಂಟಪದಲ್ಲಿ ತಾಳೆಗರಿಯ ಚಾಪೆ ಹಾಸಿ
ಒತ್ತಿ ಕುಳಿತಿದ್ದಾನೆ ಉಯ್ಯಾಲೆಯಲ್ಲಿ ಮಗಾ......
ಅಷ್ಟು ಹೊತ್ತಿಗೆ ಮಗುವನ್ನು ತಂದರು ಓ......
ಕಾಂತಾಳ್ವನ ಕೈಯಲ್ಲಿ ಓ ಕೊಟ್ಟರು ಅಜ್ಜನವರು......
ಕಾಂತಾಳ್ವ ಇಂದು ಬಲದ ಅಂಗೈ ಕೊಟ್ಟನಂತೆ
ಮಗ್ಗುಲಲ್ಲಿ ಹಿಡಿದು ಮಗುವಿನ ಎರಡು ಕೈಯಲ್ಲಿ ಹಿಡಿದು ಓ
ಮಡಿಲಲ್ಲಿ ಮಲಗಿಸಿಕೊಂಡ......ಓ......
ತಲೆಯಿಂದ ಕಾಲಿನವರೆಗೆ ಮಗುವಿನ ಅಂದ ನೋಡಿದ ಮಗ ಅವನು......
ಅಂದ ನೋಡಿ ಹೇಳಿದನಂತೆ ಇಂದು ಓ......
ನಾರಾಯಣ ನಾರಾಯಣ......ಓ ಅಜ್ಜನವರೇ ಓ......

ಆರ್ಯಬನ್ನಾರು ಓ ಬಿರ್ಮೂಮಾಲವರೇ......
ಸೊಂಟದಿಂದ ಅನಿಸೀರೆ(?) ತೆಗೆದು ಮಗುವಿನ ಸೊಂಟಕ್ಕೆ ಅನಿಸೀರೆ ಹಾಕಿದ ನಾರಾಯಣ ಅಜ್ಜನವರೇ......
ಈ ಒಂದು ಮಗುವನ್ನು ಅನ್ಯರ ಕೈ ಸೇರಿಸಬೇಡಿ ಓ......
ಮಾಲೋಕದ ಎಂಜಲು ತಿನ್ನಿಸಬೇಡಿ......ಓ......
ಅನ್ಯರ ಮಾನ್ಯರ ಕೈಸೇರಿಸಿ ಬಿಡಬೇಡಿ ಅಜ್ಜನವರೆ ಓ ಇಂದೂ......
ನನಗೇ ಧರ್ಮಧಾರೆ ಓ ಎರೆದು ಕೊಡಿ ಓ ಅಜ್ಜನವರೆ......
ಸೊಂಟದಿಂದ ಅನಿಸೀರೆ ತೆಗೆದು ಓ ಅಜ್ಜನವರ ಕೈಯಲ್ಲಿ ಕೊಟ್ಟನಂತೇ......
ನಾರಾಯಣ ಮಗ ಓ ಕಾಂತಾಳ್ವಾ......ಓ......
ನೀನು ಮಾನವ ಹತ್ಯೆ ಮಾಡಿದೆ ಮಗಾ ಓ ಬ್ರಹ್ಮಹತ್ಯೆ ಮಾಡಿದೆ ಎಂದರು......
ಅಲ್ಲಿಂದ ಹಾಗೆಯೇ ಸತ್ಯನಾಪುರದರಮನೆಯಿಂದ......ಓ ಇಳಿದುಕೊಂಡು ಮಗ ಓ......
ಬಸರೂರ ಬೈಲುಗದ್ದೆಗೆ ಬಂದಾ......
ಹಾರೆಯನ್ನು ಕೊಂಡುಹೋಗಿ ಮಗ ಓ ಹಾರೆ ಇಡುವ ಕೊಟ್ಟಿಗೆಯಲ್ಲಿಟ್ಟ
ಕಲ್ಲಿನ ಬೇಲಿ ಕಂಚಿನ ದಾರಂದ ಮೇಲೇರಿದ
ಆರೂವರೆ ಅಂಗಣ ಮೂರುವರೆ ಅಂಗಳವನ್ನು ಏರಿ ಹೊಕ್ಕನಲ್ಲಾ ಮಗ ಅವನು ಓ......
ಅಷ್ಟು ಹೊತ್ತಿಗೆ ಇಂದು ತಾಯಿ ಸಂಕಾರು ಪೂಜೆದಿ
ಪಿಂಗಾಣಿಯಲ್ಲಿ ಹಾಲು, ಗಿಂಡಿಯಲ್ಲಿ ನೀರು ಹಿಡಿದುಕೊಂಡು ಓ......
ಎದುರಿಗೆ ಬಂದರು......
ನಾರಾಯಣ ಮಗ ಓ ಕಾಂತಣಾ......
ಹಾಲು ತೆಗೆದುಕೋ ಮಗಾ ಓ ನೀರು ತೆಗೆದುಕೋ......
ನೀರು ತೆಗೆದುಕೊಂಡು ಮುಖದ, ಮುತ್ತಿನಂತೆ ಹನಿಹನಿಯಾಗಿರುವ ಬೆವರನ್ನು ತೊಳೆ ಮಗಾ
ಹಾಲು ತೆಗೆದುಕೊಂಡು ಒಡಲು ತಂಪುಮಾಡು......ಓ ಮಗಾ......ಓ......
ನೀರು ಎರೆದಾಗ ನೀರಿಗೆ ಕೈಕೊಡುವುದಿಲ್ಲ ಮಗ ಓ......
ಹಾಲು ಬಗ್ಗಿಸಿದಾಗ ಹಾಲಿಗೆ ಕೈ ಕೊಡುವುದಿಲ್ಲ......ಓ......
ಮಗ ಕಾಂತಣಾ......
ನಾರಾಯಣ ಮಗ ಕಾಂತಣ ಇಂದು
ಬತ್ತಕೇರಿ ಬಸ್ರೂರ ಬೈಲುಗದ್ದೆಯಲ್ಲೇ ಹೋದವ ನೀನು ಕಪ್ಪೆ ನೋಡಿ ಹೆದರಿದೆಯಾ ಮಗ ಓ
ನೀರು ಹಾವು ನೋಡಿ ಚೀರಿದೆಯೋ
ಎತ್ತು ನೋಡಿ ಮರುಳಾದೆಯೋ ಮಗ ಓ ಹೆಣ್ಣು ನೋಡಿ ಕುಪ್ಪಳಿಸಿದೆಯೋ......

ನಾರಾಯಣ ತಾಯಿಯವರೇ ಓ ನಾರಾಯಣ ತಾಯಿಯವರೇ......
ಬತ್ತಕೇರಿ ಬಸ್ರೂರ ಬೈಲುಗದ್ದೆಯಲ್ಲಿ ಕಂಬಳದ ಗದ್ದೆ ಬದುವಿನ ಮೂಲಕ ಹೋಗುವಾಗ ಏರಿದ (ಮಿಕ್ಕ) ನೀರನ್ನು ತಗ್ಗಿಸಿಕೊಂಡು, ತಗ್ಗಿದ (ಕಡಮೆಯಾದ) ನೀರನ್ನು ಏರಿಸಿಕೊಂಡು ಓ ನಾನು ಹೋಗುತ್ತಿರಲು......
ಸತ್ಯನಾಪುರದರಮನೆಯಲ್ಲಿ ಮಗು ಅಳುವ ಸ್ವರ ಓ ಕೇಳಿಸಿತು ತಾಯಿಯವರೇ ಓ......
ಅಜ್ಜನವರಲ್ಲಿಗೆ ಹೋಗಿ ಮಗುವನ್ನು ತೋರಿಸಿ ಅಜ್ಜನವರೇ ಎಂದು ಓ ನಾನು ಹೇಳಿದೆ......
ಅಷ್ಟು ಹೇಳಲು ಅಜ್ಜನವರು ಓ ಹೇಳಿದರು......
ಅಜ್ಜನವರು ಹೇಳುವುದನ್ನು ಕೇಳದೆ ಓ......
ಮಗುವನ್ನು ನೋಡಿದೆ ಓ ಸೊಂಟದಿಂದ ಅನಿಸೀರೆ ತೆಗೆದು ಮಗುವಿಗೆ ಹಾಕಿದೆ......
ಅಜ್ಜನವರಿಗೆ ಮೂರು ಉತ್ತರ ನಾನು ಕೊಟ್ಟೆ ತಾಯಿಯವರೇ......ಓ......
ಮಾಲೋಕದ ಎಂಜಲು ತಿನ್ನಿಸಬೇಡಿ, ಅನ್ಯರ ಕೈ ಸೇರಿಸಬೇಡಿ
ಅನ್ಯರ ಮಾನ್ಯರ ಓ ಕೈಗೆ ಸೇರಿಸಬೇಡಿ ಎಂದೂ......
ಸತ್ಯಮಹಾಲೋಕದ ಸಿರಿಯನ್ನು ನನಗೆ ಧರ್ಮಧಾರೆ ಎರೆದುಕೊಡಬೇಕೆಂದು
ಓ ಅಜ್ಜನವರಿಗೆ ಮೂರು ಉತ್ತರ ನಾನು ಕೊಟ್ಟಿದ್ದೇನೆ ತಾಯಿಯವರೇ......
ನಾರಾಯಣ ಮಗ ಓ ಕಾಂತಾಳ್ವಾ......ಓ......
ಸತ್ಯನಾಪುರದರಮನೆಯಲ್ಲಿ ಆರ್ಯಬನ್ನಾರು ಬಿರ್ಮುಮಾಲವರಿಗೆ ಓ......
ಸತ್ಯದಲ್ಲಿ ಹುಟ್ಟಿ ಸತ್ಯದಲ್ಲಿ ಬೆಳೆದವಳು......
ತಂದೆ ಹುಟ್ಟಿಸಲಿಲ್ಲ ತಾಯಿ ಹೆರಲಿಲ್ಲ
ರಕ್ತದಲ್ಲಿ ಹುಟ್ಟಲಿಲ್ಲ ನೀರಲ್ಲಿ ಬೆಳೆಯಲಿಲ್ಲ ಗಾಳಿ ಗೆಲ್ಮೆಯ ಮಗಳು ಅವಳು......
ಬಡಗಣ ಲಂಕೆಕೋಕನಾಡಿನಲ್ಲಿ
ಅರುವತ್ತಾರು ಕೋಟಿ ನಾಗಬ್ರಹ್ಮರ ಬಲಭಾಗದಲ್ಲಿ ಮೂವತ್ತಮೂರು ಕೋಟಿ ದೇವರುಗಳ ಎಡಭಾಗದಲ್ಲಿ......
ಒಕ್ಕೆತ್ತಿರಿ (ಬಂಟ)ವಂಶ ಪಾರ್ವತಿ ಜನನ (?) ಈಶ್ವರನ ತೊಡೆ ಭಾಗದಿಂದ ಬೆಳೆದು ಬಂಗ ಬಲಭಾಗದಲ್ಲಿ......
ಓ ಜನ್ಮವೆತ್ತಿ ಬಂದವಳು......ಓ......
ಸತ್ಯಮಹಾಲೋಕದ ಸಿರಿಯನ್ನು......
ಓ ನಮ್ಮಂಥ ಅರಮನೆಗೆ ಕೊಟ್ಟಾರೆಯೇ ಮಗಾ ಎಂದಳು......
ನಾರಾಯಣ ತಾಯಿಯವರೇ ನೀವು ಭಯಪಡಬೇಡಿ ಹೆದರಬೇಡಿ
ಇಂದು ಸ್ವಾಮಿ ಬೆರ್ಮೆರ್ ಇದ್ದಾರಾದರೆ
ನನ್ನ ಅಜ್ಜನವರು ಆರ್ಯಬನ್ನಾರು ಬಿರ್ಮುಮಾಲವರು ನನಗೆ ಧರ್ಮಧಾರೆ

ಎರೆದು ಓ......
ಕೊಟ್ಟಾರೆಂದು ಹೇಳಿದಾ......
ನಾರಾಯಣಾ ಓ ನಾರಾಯಣಾ......ಓ......
ಅಷ್ಟು ಹೊತ್ತಿಗೇ ಸತ್ಯನಾಪುರದರಮನೆಯಲ್ಲೀ......ಓ......
ಸಿರಿಗೆ ಆರು ವರ್ಷ ಕಳೆದು ಏಳನೆ ವರ್ಷ ಪ್ರಾರಂಭವಾಯಿತು ಮಗಳಿಗೆ
ಏಳು ವರ್ಷ ಕಳೆದು ಒಂಬತ್ತು ವರ್ಷ ತುಂಬಿತು, ಹತ್ತು ವರ್ಷ ತುಂಬಿ ಹನ್ನೊಂದನೆ ವರ್ಷ ನಡೆಯಿತು ಮಗಾ
ನಾರಾಯಣಾ ಓ ನಾರಾಯಣ......ಓ......ಸಂಕಾರು ಪೂಂಜೆದೀ......
ಮುಂಜಾವದಲ್ಲಿ ಓ ಎದ್ದರು ಹೆಂಗುಸು ಅವರು ಓ......
ಮುಚ್ಚಿದ ಬಾಗಿಲು ತೆರೆದರು ಓ......
ಬತ್ತಕೇರಿ ಬಸರೂರ ಅರಮನೆಯಲ್ಲಿ ಇಂದು......
ಮುಚ್ಚಿದ ಬಾಗಿಲು ತೆರೆದರಂತೆ ಇಂದು......
ಬಂಗಾರದ ಬಣ್ಣದ ಸೊಪ್ಪುಗಳಿರುವ ಪೊರಕೆ ಹಿಡಿದರು ಹೆಂಗಸು ಅವರು ಓ
ಏಳು ಅಂತರಗಳ ಯಮದೇವಿ ಗುಡಿಯನ್ನು ಗುಡಿಸಿದರು......
ನಾರಾಯಣ ಓ ನಾರಾಯಣ ಕಾಂತಾಳ್ವಾ......ಓ......
ಒಂದು ಕವಳೆ ಓ ಒಂದು ಸೂಡಿ ವೀಳ್ಯದೆಲೆ ತಯಾರಿಸು......
ನಾಲ್ಕು ಅಡಿಕೆ ಇಂದು ಓ......
ಕೆಳಗಿನ ಕರೆಯಿಂದ ಎರಡು ಜನ ಮೇಲಿನ ಕರೆಯಿಂದ ಎರಡು ಜನವನ್ನು ಬರಮಾಡು......
ಅಷ್ಟು ಹೊತ್ತಿಗೆ ಇಂದು ಓಡೋಡುತ್ತಾ ಕಾಂತಾಳ್ವ ಹೋದನಂತೆ
ಕೆಳ ಕರೆಯಿಂದ ಎರಡು ಜನರನ್ನು ಬರಮಾಡಿದ ಮೇಲಿನ ಕರೆಗೆ ಹೋದ ಎರಡು ಜನರನ್ನು ಬರಮಾಡಿದ......
ನಾಲ್ಕು ಜನರನ್ನು ಒಟ್ಟು ಸೇರಿಸಿದರು......
ಬಸರೂರ ಅರಮನೆಯಿಂದ ನಾಲ್ಕು ಜನ ನೆಂಟರೆಂದು ಇಂದು......
ಸಂಕರು ಪೂಂಜೆದಿ ಹೇಳಿದರು ಇಂದು ಬಸರೂರ ಅರಮನೆ ಓ ಇಳಿಯುವ ಎಂದರು......
ಯಾಕಾಗಿ ನಮ್ಮನ್ನು ಬರಮಾಡಿದಿರಿ ಹೆಂಗುಸೇ ಎನ್ನಲು ಹೇಳಿದರು......
ನನ್ನ ಮಗು ಓ ಮಗ ಕಾಂತಣನಿಗೆ
ಹುಡುಗಿ ಓ ನೋಡಬೇಕು ನಮಗೆ......ಓ......
ಹೆಣ್ಣು ನೋಡಬೇಕು ಸಂಬಂಧ ಹಿಡಿಯಬೇಕೆಂದು ಓ ಹೇಳಿದರು......
ಅಷ್ಟು ಹೊತ್ತಿಗೆ ನಾಲ್ಕು ಜನ ನೆಂಟರು ಓ ಹೇಳಿದರಂತೆ

ಹೆಣ್ಣು ನೋಡಲು ಹೋಗುವ ಉಡುಗೆ ತೊಡುಗೆ ನಾವು ತರಲಿಲ್ಲ......
ನಾವು ತರಲಿಲ್ಲ ಎಂದರು......
ಅಷ್ಟು ಹೇಳಲು ಇಂದು ನಾಲ್ಕುಜನ ನೆಂಟರು ಇಂದು ಒಂದು ಬಾರಿ ಉಡುವ ಉಡುಗೆ ತೊಡುಗೆಗಳು ಉಂಟಪ್ಪಾ ಎಂದರಂತೆ......
ಏಳು ಅಂತರಗಳ ಯಮದೇವಿ ಗುಡಿ (ಒಳಕೋಣೆ) ಹೊಕ್ಕರು ಓ ಸಂಕರು ಪೂಂಜೆದಿ......
ಕಲ್ಲಿನ ಕಲೆಂಬಿಯ ಬಾಯಿಯ ಬೀಗ ಒಡೆಸಿದರಂತೆ......
ಕಂಚಿನ ಬೀಗಕ್ಕೆ ಮೆಂಚಿನ್ನ ಕೀಲಿಕೈ ಹಾಕಿದರಂತೆ
ಹೂವಿನ ಎಲವಸ್ತ್ರದ ಗಂಟು ತಂದರು ಹೆಂಗುಸು ಅವರು......ಓ......
ಚಿಕ್ಕ ಚಾವಡಿ ಸಿದ್ರ ಮಂಟಪಕ್ಕೆ......ಓ......
ತಂದು ಇಂದು ಒಬ್ಬನ ಆಭರಣಗಳನ್ನು ನೀವು ನಾಲ್ಕು ಜನ ಹಂಚಿ ತೊಟ್ಟುಕೊಂಡು ಹೋಗಿರಪ್ಪಾ ಎಂದರಂತೆ......
ಹೂವಿನ ಎಲಸ್ತ್ರದ ಓ ಗಂಟು ಬಿಡಿಸಿ......ಓ......
ಒಬ್ಬನ ಆಭರಣಗಳನ್ನು ನೀಡಿದರು......
ನಾಲ್ಕು ಜನ ಹಂಚಿಕೊಂಡು ಓ ತೊಟ್ಟುಕೊಳ್ಳೀ ಎಂದರು
ಅಂಗೈಯ ಓ ಆಭರಣ ಎಂದರು......ಓ......
ಅಂಗೈ ಬಳೆಯಂತೇ ಓ ಮುಂಗೈ ಸರಪಳೀ......ಓ......
ಗಾಲಿ, ಪೆಂಟಿಗೆ ಓ ಪರಂಗಿಕೊಡೆಯಂತೇ......
ಬೆಳ್ಳಿ ಕಟ್ಟಿದ ಚೂರಿ ಓ ಕೊಟ್ಟರು ಹೆಂಗುಸೂ......
ಒಬ್ಬನ ಆಭರಣಗಳನ್ನು ನಾಲ್ಕುಜನ ಹಂಚಿಕೊಂಡು ತೊಟ್ಟರು......
ಎಲೆಯಡಿಯ ಗಂಟು ಹಿಡಿದರು......
ಬಸ್ರೂರು ಅರಮನೆ ಇಳಿದರು......
ಬಸ್ರೂರ ಅರಮನೆಯ ಇಳಿದರಂತೆ ಇಂದು......
ಸತ್ಯನಾರಪುರದಮನೆಗೆ ಹೋಗಲು ಬಾಳೆ ಹಾಕುವ ಬಾಕಿತಿಮಾರು ಗದ್ದೆ ಹಿಂದೆ ಬಿಟ್ಟರಂತೆ ಇಂದು......
ಓ ಹೂ ಹಾಕುವ ಮುದ್ವಾರ ಕಂಬಳದ ದಾರಿ ಹಿಡಿದುಕೊಂಡು ಓ......
ಹುರುಳಿ ಬಿತ್ತುವ ತಿಮಾರುಗದ್ದೆ ಓ ಹಿಂದೆ ಬಿಡುತ್ತಾ ಓ......
ನಾಲ್ಕುಜನ ನೆಂಟರು ಬರುವ ಅಂದ ಓ ನೋಡೀ......
ಸತ್ಯನಾಪುರದರಮನೆಯಲ್ಲಿ ಓ ಇಂದು ಓ
ಸಿರಿ ಹೇಳುತ್ತಾಳಂತೆ ಓ ಅಜ್ಜನವರಲ್ಲಿ......

ನಾರಾಯಣ ಮಗ ಸಿರಿ ಕೇಳಿದ್ದೀಯೆ ನನ್ನ ತಲೆಯಲ್ಲಿ ಸೀರು ಹೇನು ಉಂಟು ಮಗಾ......
ಅಷ್ಟು ಹೊತ್ತಿಗೆ ಸಿರಿ ರಾವಿನ್ನ ಗೆಜ್ಜೆತ್ತಿ ಹಿಡಿದಳು ಮಗಳೂ......
ಓ ಬನ್ನಿ ಅಜ್ಜನವರೇ ಎಂದಳು ಅಜ್ಜನವರನ್ನು ಓ ಮಲಗಿಸಿಕೊಂಡಳು......ಓ......
ಸಿರಿ ಮಡಿಲಲ್ಲಿ ಅಜ್ಜನವರ ತಲೆಯನ್ನು ಇರಿಸಿದಳು......
ಎಡದಿಂದ ಬಲಭಾಗದವರೆಗೆ ಹೆಕ್ಕಿ ಸೀರುಹೇನು ಕುಟ್ಟುತ್ತಿರಲು ಸಿರಿಗೆ......
ಓ ಕತ್ತು ನೋಯುತ್ತದೆ ಓ ಬೆನ್ನು ಮುರಿಯುತ್ತದೇ......
ಬೆನ್ನು ಮುರಿಯಲು ಓ ಕತ್ತು ನೋಯಲು......ಓ......
ಇಂದು ಕತ್ತು ಮೇಲೆತ್ತಿ ನೋಡಲು......
ನಾರಾಯಣ ಓ ನಾರಾಯಣ ಅಜ್ಜನವರೇ......ಓ......
ಅಜ್ಜನವರೇ ನೀವು ಓ ಕೇಳಿ ಅಜ್ಜನವರೇ......
ನಮ್ಮ ಓ ಬಾಳೆ ಹಾಕುವ ಬಾಕಿತಿಮಾರಿನಲ್ಲೆ......
ನಾಲ್ಕು ಜನ ನೆಂಟರು ಬರುವ ಚಂದ ನೋಡಿ ಅಜ್ಜನವರೇ......
ಆ ಹೊತ್ತಿಗೆ ಓ ಹೇಳುತ್ತಾರೆ ಅಜ್ಜನವರು......
ಏಳು ಏಳೂವರೆ ಪ್ರಾಯದ ಮಗಳು ಮಗ ಸಿರಿಯೆ ನೀನು......
ದಾರಿಗೆ ಕಣ್ಣಾಯಿತೇ ಓ ಬೀದಿಗೆ ದೃಷ್ಟಿಯಾಯಿತೆ......ಓ...... .
ನಾರಾಯಣ ಅಜ್ಜನವರೇ ಓ ದಾರಿಗೆ ಕಣ್ಣಲ್ಲಪ್ಪಾ ಬೀದಿಗೆ ದೃಷ್ಟಿಯೂ ಅಲ್ಲ ಓ......
ನಮ್ಮ ಮನೆಗೆ ಬರುವ ನಾಲ್ಕುಜನ ನೆಂಟರ ಚಂದ......ಓ......
ನೀಡು ನೋಡಿ ಅಜ್ಜನವರೆ......
ಅಷ್ಟು ಹೇಳಲು ಬಡಕ್ಕನೆ ಎದ್ದು ದಿಡ್ಕನೆ ನಿಂತು ಓ ನೆಂಟರು ಬರುವ ಚಂದ ನೋಡಿದರು......
ಇಂದಾದರೋ ಓಡಿದರು ಅಜ್ಜನವರು, ಕವುಚಿ ಹಾಕಿರುವ ಕಲ್ಲಮರಿಗೆಯನ್ನು ನೆಟ್ಟಗೆ ಇಟ್ಟರು......
ಒಂದು ಮರಿಗಿ ನೀರು ಓ ಸೇದಿ ಹಾಕಿದರು......
ಕಂಚಿನ ಕೈಸೌಟು ಓ ಹಾಕಿದರಜ್ಜನವರು......
ಕೈಸೌಟು ಹಾಕಿ ಓ ಒಳಗೆ ಹೋಗಿ ನಾಲ್ಕು ಕೈಯಲ್ಲಿ ನಾಲ್ಕು ತಂಬಿಗೆ ನೀರು ಓ ಹಿಡಿದರಜ್ಜನವರು......
ಬಂದ ನೆಂಟರಿಗೆ ಇಂದು ಆಕಾಶದೆತ್ತರದ ಏತದಿಂದ
ಪಾತಾಳದಲ್ಲಿರುವ ಹನಿನೀರನ್ನು ತೆಗೆಯಲು ಹಾಕಿರುವ ಏತ, ತೋಡಿಸಿರುವ ಬಾವಿಯಲ್ಲಿಗೆ ಕರೆದುಕೊಂಡು ಹೋಗಿ
ಕಲ್ಲಿನ ಮರಿಗೆಗೆ ಹಾಕಿರುವ ಕಂಚಿನ ಕೈಸೌಟಿಗೆ ಕೈಕೊಟ್ಟು

ಕೈಕಾಲುಗಳನ್ನು ತೊಳೆಯಲು ನೀರು ಕೊಟ್ಟರು......
ಎದೆಯ ಯಮಧೂಳನ್ನು ಓ ತೊಳೆದುಕೊಂಡರು......
ಮುಖದ ಮುತ್ತಿನ ಹನಿಯಂತಹ ಬೆವರನ್ನು ಓ ತೊಳೆದರು ಇಂದು ನೆಂಟರು......
ಆರೂವರೆ ಅಂಗಣ ಏರಿದರು ಮೂರೂವರೆ ಅಂಗಳ ಹಿಂದಿಕ್ಕೀ
ಚಿಕ್ಕಿ ಚಾವಡಿಯನ್ನು ಹೋಗಿ ಹೊಕ್ಕಾಗ
ಮೆಟ್ಟಲಲ್ಲಿ ಚಪ್ಪಲಿ ಕಳಚಿದರು
ಹೊರ ಆವರಣದಲ್ಲಿ ಕೊಡೆ ಇರಿಸಿದರು ಇಂದು
ಮೆಟ್ಟಿಲು ಹತ್ತುವಾಗ ನಾಲ್ಕು ತಂಬಿಗೆ ನೀರು ಕೊಟ್ಟರು ಅಜ್ಜನವರು......
ತಂಬಿಗೆಯ ನೀರು ತೆಗೆದು ಆಚೆಗಿರಿಸಿದರು
ತಟ್ಟೆಯಲ್ಲಿ ವೀಳ್ಯ, ಪಿಂಗಾಣಿಯಲ್ಲಿ ಹಾಲೆಂದು ಅಜ್ಜನವರು ತಂದಿರಿಸಿದರು......
ಓ ತೂಗುವ ಉಯ್ಯಾಲೆಯಲ್ಲಿ ತಾಳೆಗರಿಯ ಚಾಪೆಯೆಂದು ಹಾಸಿದರು......
ಹಾಸಿದ ಚಾಪೆಯಲ್ಲಿ ಒತ್ತಿ ಕುಳಿತರು ಅಜ್ಜನವರು ಓ ನಾಲ್ವರು ನೆಂಟರು......
ಇಂದಾದರೋ ಇಂದು ಎಲ್ಲಿಂದ ಬಂದ ನೆಂಟರು
ಓ ಯಾವ ಕಡೆಗೆ ಹೋಗುವವರು......
ಎಂದು ಕೇಳಲು ಹೇಳುತ್ತಾರಂತೆ ಇಂದು ಓ......
ಬತ್ತಕೇರಿ ಬಸರೂರಿನಿಂದ ಓ ಬಂದ ನೆಂಟರು ನಾವು......ಓ......
ನಾಲ್ಕುಜನ ನೆಂಟರು ನಾವೆಂದು ಹೇಳುತ್ತಾರೆ......
ಅಷ್ಟು ಹೇಳಲು ಇಂದು ಓ......
ಕುಳಿತುಕೊಳ್ಳುವ ಕೆಲಸ ಆಮೇಲೆ ಅಜ್ಜನವರೆ......
ಬಂದ ಕೆಲಸ ಮೊದಲೆಂದು ನೆಂಟರು ತಿಳಿಸಿ ಹೇಳುತ್ತಾರೆ......
ಹೆಣ್ಣು ನೋಡಲು, ಓ ಮದುವೆ ಸಂಬಂಧ ಬೆಳೆಸಲು ಓ ನಾನು ಬಂದವರು......
ಓ ಎಂದು ನೆಂಟರು ಹೇಳುತ್ತಾರೆ......
ಸಣ್ಣ ಪ್ರಾಯದ ಓ ಮಗಳು ಅವಳು......
ಓ ಹಾಕಿದ ಅಂಗಿಯನ್ನು ತೆಗೆಯಲು ತಿಳಿಯದೂ......
ತೆಗೆದ ಅಂಗಿಯನ್ನು ಹಾಕಲು ಬಾರದು
ಎಂದು ಓ ಅಜ್ಜನವರು ಹೇಳಿದರು......
ಓ ಅಜ್ಜನವರು ಆರ್ಯಬನ್ನಾರು ಬಿರ್ಮುಮಾಲವರು......
ನಾರಾಯಣ ಓ ನಾರಾಯಣ ಅಜ್ಜನವರೆ......ಓ......
ನಮ್ಮ ಹುಡುಗನಿಗೂ ಇಂದು ಓ
ಶಾಲೆಗೆ ಹೋಗಿ ಬಂದು ಓ ಅಂಗಿಯನ್ನು......
ಹಾಕಿರುವ ಅಂಗಿಚಡ್ಡೀ ತೆಗೆಯಲು ಬಾರದು......

ತೆಗೆದ ಅಂಗಿಚಡ್ಡೀ ಹಾಕಲು ಬಾರದು
ಮಂಡೆಯ ಟೊಪ್ಪೀ ಓ ಕೆಳಗೆ ಬಿದ್ದರು ಓ
ಮತ್ತೆ ತಲೆಗಿಡಲು ತಿಳಿಯದು ಓ ಅಜ್ಜನವರೇ......
ನಮ್ಮ ಹುಡುಗನೂ ಓ
ಹತ್ತು ಹನ್ನೆರಡು ವರ್ಷದ ಮಗು ಎಂದು ಓ
ನೆಂಟರು ಹೇಳಿದರು......
ಅಷ್ಟು ಹೇಳುವುದನ್ನು ಕೇಳಿದರಂತೆ ಇಂದು ಓ......
ದೇವರು ಓ ಬಿರ್ಮೆರಲ್ಲಿ......ಓ......
ಮಾತುಕತೆ ನಿಲುಗಡೆ ಓ ಮಾಡಿದರು......
ನಿಶ್ಚಯದ ನಿಲುಗಡೆ (ತೀರ್ಮಾನ) ಓ ಮಾಡಿದರು......
ಅವರು ಅಜ್ಜನವರು ಆರ್ಯಬನ್ನಾರು......
ಅಷ್ಟು ಹೊತ್ತಿಗೆ ನಿಶ್ಚಯ ಅಂತಿಮಗೊಳಿಸಿದರು ಓ ಅಜ್ಜನವರು......
ಬಂದ ಓ ನೆಂಟರು ಹಿಂತಿರುಗಿ ಓ ಹೋದರು......
ನಾರಾಯಣ ಓ ನಾರಾಯಣ......ಓ......
ನಾಲ್ಕು ಜನ ನೆಂಟರು......
ಸತ್ಯನಾಪುರದರಮನೆಯಿಂದ ಓ ನೆಂಟರಂತೆ ಓ
ಹಿಂತಿರುಗಿ ಓ ಹೊರಟರು......
ನಾರಾಯಣ ಓ ನಾರಾಯಣ......ಓ......
ಹತ್ತು ಹನ್ನೆರಡು ವರ್ಷದ ಮಗಳಿಗೆ ಮದುವೆಯ ಸಂಭ್ರಮ ಎಂದರು ಓ......
ಸತ್ಯನಾಪುರದಮನೆಯಲ್ಲಿ ಓ......
ಇಂದಾದರೋ ಓ ಹೇಳುತ್ತಾರೆ......ಓ......
ಜಾತಕದ ಫಲ ಓ ನೋಡಬೇಕೆಂದರು......ಓ......
ದೇವರು ಬಿರ್ಮೆರಲ್ಲಿ ಓ ನೆನವರಿಕೆಯ ಮೂಲಕ......
ಇಂದಾದರೋ ದಿನಮಾನ ನೋಡಬೇಕೆಂದು ಓ ಹೇಳಿದರು......ಓ......
ಬಲ್ಯಾಯನ ಕೊಟ್ಟಿಗೆಗೆ ಓ......
ಹೋದರು ದಿನಮಾನ ನೋಡಲು ಇಂದು ಅಜ್ಜನವರು ಓ ಕೇಳಬೇಕು......
ಒಳ್ಳೆಯ ವಾರ ಒಳ್ಳೆಯ ಮುಹೂರ್ತ ಓ
ಮುಹೂರ್ತದ ವೇಳೆ ಸಿಗಬೇಕು ನಮಗೆಂದರು ಅಜ್ಜನವರು
ಓ ಹೇಳಿದರಂತೆ......
ಇಂದಾದರೋ ದಿನಮಾನ ನೋಡುತ್ತಾ......
ಈ ಬರುವ ಗುರುವಾರ ಅಲ್ಲ ಮೇಲೆ ಬರುವ ಗುರುವಾರಕ್ಕೆ

ಸಿಂಹರಾಶಿಯಲ್ಲಿ ನಡುರಾತ್ರಿಗೆ ಓ......
ಬೊಲ್ಲೆರ್ಮಾಲ(?) [ಬೊಳ್ಳೆರೆಮಾಣಿಕೊ] ಹಕ್ಕಿಯು ಸ್ವರಕೊಡುವ ಹೊತ್ತಿಗೆ......
ದಿಬ್ಬಣ ಓ ಹೊರಡಬೇಕು......ಓ......ಎಂದರು ಜ್ಯೋತಿಷಿ......
ಇಂದಾದರೋ ಅಲ್ಲಿಂದ ಹಿಂತಿರುಗಿ ಬಂದರು
ಅಜ್ಜನವರು ಹಿಂತಿರುಗಿ ಬಂದು ಓ......
ನಾರಾಯಣ ಓ ನಾರಾಯಣ......ಓ......ನಾರಾಯಣ
ಅಲ್ಲಿಂದ ಹಾಗೆ ಬಂದು ಇಂದು
ಒಕ್ಕಲು ಮಕ್ಕಳನ್ನು ಕರೆಸಿದರಂತೆ ಇಂದು
ಸತ್ಯನಾಪುರದರಮನೆಯಲ್ಲಿ ಇಂದು ಓ......
ಈವರೆಗೆ ಹಾಕದಿರುವಂಥ ಚಪ್ಪರ ಹಾಕಿಸಬೇಕು......
ನಡೆಯದೆ ಇರುವಂಥ ಮದುವೆ ಕಾರ್ಯ ನಡೆಸಬೇಕೆಂದರು ಅಜ್ಜನವರು......ಓ......
ವೀಳ್ಯದೆಲೆಯಲ್ಲಿ ಹನಿದೊಂಪ (ಚಪ್ಪರ) ಹಾಕಬೇಕೆಂದರು ಓ......
ಹಿಂಗಾರದಲ್ಲಿ ತಡಿಕೆ ಕಟ್ಟಬೇಕು ಲಾವಂಚದಲ್ಲಿ ಕಟ್ಟಿಹಾಕಬೇಕು ಇಂದು......
ಕಬ್ಬಿನಲ್ಲಿ ಕಂಬ ಹಾಕಿಸಬೇಕು......
ಅಚ್ಚುಬೆಲ್ಲದಿಂದ ಒಲೆ ನಿರ್ಮಿಸಬೇಕೆಂದರು......ಓ......
ಓಲೆಬೆಲ್ಲದಲ್ಲಿ ಓ ಒಲೆದಿಣ್ಣೆ(?) ಎಂದರು......
ಇಂದಾದರೋ ಕೆಳ ಭಾಗದ ಪಾಲವರು ಮೇಲ್ಭಾಗದ ಪಾಲವರು
ನಡು ನಕರೆಯ ಪಾಲವರನ್ನು ಇಂದು ಮದುವೆ ಮನೆಗೆ ಕರೆಡಬೇಕೆಂದರು......
ಬುಗರ ಬೆಟ್ಟು ಬೊಳಿಯ ಬೆಟ್ಟು ಮುಲ್ಕಿ ಸೇರಿಸಿ ಒಂಬತ್ತು ಮಾಗಣೆ
ಕಕ್ಕೆಬೆಟ್ಟು ಕಾರಿಬೆಟ್ಟು ಓ ಕಾಳು ನಾಯಕನ ಮನೆಗೆ......ಓ......
ಹೀಗೆ ಒಂಬತ್ತು ಮಾಗಣೆಯನ್ನು ಓ ಕರೆಸಿದರು......
ಇಂದಾದರೋ ಕೆಳಭಾಗದ ಪಾಲವರು ಮೇಲ್‌ಭಾಗದ ಪಾಲವರು
ನಡುನಕೆರೆಯ ಪಾಲವರು ನಾಲ್ಕುಗುತ್ತು ನಾಲ್ಕು ಬರಿಕೆಯ ಹೆಂಗುಸರನ್ನು ಕರೆಸಿದರು ಅಜ್ಜನವರು......
ನಾರಾಯಣ......ಓ ನಾರಾಯಣಾ......ಓ......ಹೆಂಗುಸರೇ......
ತಂದೆ ಹುಟ್ಟಿಸಲಿಲ್ಲ ತಾಯಿ ಹೆರಲಿಲ್ಲ ರಕ್ತದಲ್ಲಿ ಹುಟ್ಟಲಿಲ್ಲ, ನೀರಲ್ಲಿ ಬೆಳೆಯಲಿಲ್ಲ......
ಗಾಳಿ ಗೆಲ್ಮೆಯ ಮಗಳೂ......ಓ......ಸಿರಿ ನನ್ನಾ ಓ......
ನಿಮ್ಮ ಮಗುವಂತೆ ನನ್ನ ಮಗು ಸಿರಿಯನ್ನು ಅಂದದಲ್ಲಿ ಅಲಂಕಾರ ಶೃಂಗಾರ......ಓ......
ಮಾಡಿಬಿಡಿ ಎಂದರಜ್ಜನವರು ಕಣ್ಣಲ್ಲಿ ಕುಡುದುಃಖ ದುಃಖಿಸಿದರು ಹೊಟ್ಟೆಯಲ್ಲಿ ಸಂಕಟಪಟ್ಟರು......
ನಾರಾಯಣಾ ನಾರಾಯಣಾ ಎಂದರು......

ಇಂದಾದರೋ ಸಿರಿ ಕಣ್ಣಲ್ಲಿ ಕಡುದುಃಖ ಬಿಟ್ಟಳು ಹೊಟ್ಟೆಯಲ್ಲಿ ಸಂಕಟಪಟ್ಟಳು ಇಂದು......
ಒಬ್ಬಳು ತಾಯಿಗೆ ಒಬ್ಬಂಟಿ ಓ ಹೆಣ್ಣುಮಗಳೆಂದು......ಓ ಇದೆಯಪ್ಪಾ......ಓ.......
ತಾಯಿ ಇಲ್ಲ ತಂದೆ ಇಲ್ಲ ನನಗೆ ಓ......
ತಂದೆ ಹುಟ್ಟಿಸಲಿಲ್ಲ ತಾಯಿ ಹೆರಲಿಲ್ಲ......
ರಕ್ತದಲ್ಲಿ ಹುಟ್ಟಲಿಲ್ಲ ನೀರಲ್ಲಿ ಬೆಳೆಯಲಿಲ್ಲ
ಅಜ್ಜನವರ ಆಶ್ರಯದಲ್ಲಿ ಓ ಇದ್ದವಳು ನಾನು......ಓ......
ಎನ್ನುತ್ತಾ ಓ ಮನಸ್ಸಿನ ಚಂಚಲತೆಯಲ್ಲಿ......ಓ......
ಕಣ್ಣಲ್ಲಿ ಕಡುದುಃಖ ಓ ಸುರಿಸುತ್ತಾಳೆ ಮಗಳೂ......
ಅಷ್ಟು ಹೊತ್ತಿಗೆ ಇಂದು ಬೆಳ್ಳಿ ಮೂಡಿ ಬೆಳಕು ಹರಿಯಿತು
ಬೊಲ್ಲೆರ್ಮಲ (ಬೊಳ್ಳರೆಮಾಣಿಕೊ) ಹಕ್ಕಿಯ ಸ್ವರದಲ್ಲಿ ಕಡು ಮಂಗಳವಾರ ಸಿಂಹರಾಶಿಯಲ್ಲಿ ಓ ಇಂದೂ......ಓ......
ಬೊಲ್ಲೆರ್ಮಲ ಹಕ್ಕಿಯ ಸ್ವರಕ್ಕೆ......ಓ......ಇಂದೂ......
ಸಿರಿಯ ದಿಬ್ಬಣ ಹೊರಟಿತೊ......
ಸತ್ಯದಂಡಿಗೆ, ಸರ್ವ ಬಿರುದಾವಳಿ, ಸಾವಿರ ಬಗೆಯ ಪ್ರದರ್ಶನಗಳೊಂದಿಗೆ ಓ......
ಸೂಳೆಯರ ಮೇಳದಲ್ಲಿ ಓ......
ಗುಬ್ಬಿಗಳ ನಾಟಕ, ತೆಂಗಿನಕಾಯಿ ತಪ್ಪಂಗಾಯಿ, ಅಡಿಕೆ ಜೂಜು
ಕೋಳಿ ಅಂಕದೊಂದಿಗೆ ಓ......ಬೇಂಡು ಬಿಗಿಲು ಓ ಗೌಜಿ ಗದ್ದಲದಲ್ಲಿ
ಮಾವಿನ ಮರಕ್ಕೆ ಕಟ್ಟಿದ ನಗಾರಿಯಲ್ಲಿ, ತೆಂಗಿನ ಮರಕ್ಕೆ ಕಟ್ಟಿದ ತಂಬೂರಿಯಲ್ಲಿ
ಶಕುನದ ಕೊಂಬು, ಉತ್ಸವದ ಸಿಡಿಮದ್ದುಗಳೊಂದಿಗೆ ಪಲ್ಲಕ್ಕಿಯಲ್ಲಿ ಓ......
ಸಾಗುತ್ತದೆ ದಿಬ್ಬಣ......ಓ......
ಬತ್ತಕೇರಿ ಓ ಬಸ್ರೂರಿನರಮನೆಗೇ......
ಇಂದಾದರೋ ಹೋದ ದಿಬ್ಬಣ ತಲುಪುತ್ತಿದ್ದಂತೆ
ಸ್ವಾಗತಿಸಿ ಆಯಿತು ಇಂದು ಓ
ಮದುಮಗಳ ದಿಬ್ಬಣವನ್ನು ಹಾಕಿದ ಚಪ್ಪರದೊಳಗೆ......ಓ ಸ್ವಾಗತಿಸಿದರು......
ಓ......ಮದುಮಗನಿಗೆ ಮುಹೂರ್ತ ಮಾಡಿಸಿದರು ಅಡಿಕೆ–ವೀಳ್ಯ ಓ ಬದಲಾಯಿಸಿ ಕೊಂಡರು
ಓ ಧಾರೆಯ ಗಿಂಡಿ ಓ ಹಿಡಿಯುವಾಗ ಹೇಳುತ್ತಾರೆ......
ನಾರಾಯಣಾ ನಾರಾಯಣಾ ಮಗ ಕಾಂತಾಳ್ವಾ......
ದಿಕ್ಕುದೆಸೆ ಇಲ್ಲದೇ ಓ ಇದ್ದವ ನಾನು......
ನನ್ನ ಮೊಮ್ಮಗಳು ಓ ಸಿರಿಯನ್ನು ಧರ್ಮಧಾರೆ ನಿನಗೆ ಓ ಎರೆದು ಕೊಡುವಾಗ...... ಓ......

ಸತ್ಯನಾಪುರದರಮನೆಯಲ್ಲಿ ಹೆಣ್ಣನ್ನು ಮಣ್ಣನ್ನು ನಿನಗೆ ಧರ್ಮಧಾರೆ ಎರೆದುಕೊಡುತ್ತೇನೆ ಕಾಂತಾಳ್ವಾ......
ಸತ್ಯನಾಪುರದರಮನೆ ಬಾಳಿಸಿದರೆ ಬಸರೂರ ಅರಮನೆ ಬೆಳಗಿಸಬೇಕು......
ಬಸರೂರ ಅರಮನೆ ಬಾಳಿಸಿದರೆ ಸತ್ಯನಾಪುರದರಮನೆ ಬೆಳಗಿಸಬೇಕು......
ಸತ್ಯಮಹಾಲೋಕದ ಸಿರಿಯನ್ನು ಓ ಧರ್ಮಧಾರೆ ಎರೆದು ಓ ನಿನಗೆ ಕೊಡುತ್ತೇನೆಂದರು ಅಜ್ಜನವರು......
ನಾರಾಯಣಾ ನಾರಾಯಣಾ......ಓ......
ಸಂಕರುಪೂಂಜೆದಿಯನ್ನು ಓ ಕರೆದರು ಅಜ್ಜನವರು......
ನಾರಾಯಣ ಮಗ ತಂಗಿಯೇ ಓ ಸಂಕರುಪೂಂಜೆದಿ
ಓ ಇಂದಿನವರೆಗೆ ಓ ಸೆರಗಲ್ಲಿ ಹಾಕಿ ನನ್ನ ಮಗುವನ್ನು ಸಾಕಿ
ಬಾಲ್ಯ ಕಳೆದು ದೊಡ್ಡದಾಗುವ ತನಕದ ರಕ್ಷಣೆಯನ್ನು ನಾನು ನೋಡಿದೆ ಮಗಾ......
ಇವತ್ತಿನಿಂದ ಇವಳು ನನ್ನ ಮಗುವಲ್ಲ ನಿನ್ನ ಮಗು ಎಂದರು
ಸತ್ಯನಾಪುರದರಮನೆಯಲ್ಲಿ ಮಣ್ಣನ್ನೂ ಕೊಡುತ್ತೇನೆ ಹೆಣ್ಣನ್ನೂ ಕೊಡುತ್ತೇನೆ ಮಗ ಧರ್ಮಧಾರೆಯೆರೆದು ಕೊಟ್ಟೆ
ಇದುವರೆಗೆ ತಾಯಿ ಇಲ್ಲದಿದ್ದರೂ ಓ ನಾನಾದರೋ ಮಗಾ ಓ
ಎದೆಯೆ ತೊಟ್ಟಿಲೆಂದು ನಾನು ಕಟ್ಟಿ, ಕಿರುಬೆರಳಿಗೆ ಬಟ್ಟೆ ಸುತ್ತೀ
ತಾಯ ಮೊಲೆಹಾಲೆಂದು ಕುಡಿಸಿದೆ ಓ......
ಇವತ್ತಿನಿಂದ ನೀನು ಕುಡಿಸು ಮಗಾ......
ಸತ್ಯಮಹಾಲೋಕದ ಸಿರಿಯ ಕಣ್ಣಲ್ಲಿ ಕಣ್ಣೀರು ತರಿಸಬೇಡ ಓ ತಂಗಿ ಸಂಕಾರು ಪೂಂಜೆದಿಯೇ......
ಓ ನಿನ್ನ ಸೆರಗಿಗೆ ಹಾಕಿಬಿಟ್ಟೆನೆಂದರಜ್ಜನವರು......ಓ......
ತಿರುಗಿ ನಿಂತು ಅಜ್ಜನವರು ಕಣ್ಣಲ್ಲಿ ಕಡುದುಃಖ ದುಃಖಿಸಿದರು......
ಮೇಲೆ ಮೇಲ್ತರಲೋಕ ಉರಿಬೆರ್ಮೆರ ಪಾದಕ್ಕೆ ಶರಣು ನಮಸ್ಕಾರ ಸಲ್ಲಿಸಿದರು......
ಅಕಲು ಕೆಟ್ಟಿತು ಅಜ್ಜನವರಿಗೆ ಸ್ಮೃತಿ ತಪ್ಪಿತು ಓ ನಾರಾಯಣಾ......ಓ......
ನಾರಾಯಣಾ ಓ ದೇವರೆ ಬಿರ್ಮರೇ ಎಂದರು......
ನಾರಾಯಣಾ ಓ ನಾರಾಯಣಾ ಓ......
ಅಷ್ಟು ಹೊತ್ತಿಗೆ ಬಸರೂರ ಕಾಂತಾಳ್ವ ಓ......
ತಲೆಯ ಧೋತರದಲ್ಲಿ ವೀಳ್ಯ ತೆಗೆದೊ......
ನಾರಾಯಣ ಅಜ್ಜನವರೆ, ಅಕಲು ಕೆಡಬೇಡಿ ಸ್ಮೃತಿ ತಪ್ಪಬೇಡಿ ಇಂದು......ಓ......
ನಿಮ್ಮ ಮೊಮ್ಮಗಳನ್ನು ಓ ನೀವು ಸಾಕಿ ಸಲಹಿದಂತೇ ಓ......
ನಮ್ಮ ಅರಮನೆಯಲ್ಲಿ ನನ್ನ ತಾಯಿಯವರೂ ನಾನೂ ಸಾಕಿಯೇವು......

ಓ ನಿಮ್ಮ ಮೊಮ್ಮಗಳ ಸರ್ವಭಾರ ನನ್ನ ನೆತ್ತಿಯಲ್ಲಿರಲಿ......
ಎದೆ ತೊಟ್ಟಿಲೆಂದು ಓ ನನ್ನ ತಾಯಿಯವರು ಕೊಡುತ್ತಾರೆ......
ಸಣ್ಣ ಬೆರಳಿಗೆ ಓ ಪಟ್ಟಿಸುತ್ತೀ ಓ......
ತಾಯ ಮೊಲೆಹಾಲೆಂದು ನನ್ನ ತಾಯಿಯವರು ಕುಡಿಸಿಯಾರು ಅಜ್ಜನವರೆ......ಓ......
ಸಿರಿಯ ಸರ್ವಭಾರ ನಮ್ಮ ಮೇಲೆಂದು ಹೇಳುತ್ತಾನೆ ಮಗ ಅವನೂ......ಓ......
ಹಾಕಿರುವ ಧೋತರ ಹೆಗಲ ಧೋತರ ತೆಗೆದು ಅಜ್ಜನವರ ಮುಖದ ಮುತ್ತಿನಂಥ
ಬೆವರು ಒರೆಸುತ್ತಾನೆ......
ಸ್ಮೃತಿ ಬಂತು ಅಜ್ಜನವರಿಗೆ ಓ ದಡಕ್ಕನೆ ನಿಂತರು......ಓ......
ಧಾರೆ ದತ್ತ ಆಗಿ ಓ ಮದುಮಗ ಮದುಮಗಳನ್ನು ಬಸರೂರ ಅರಮನೆಗೆ ಓ......
ಕರೆದುಕೊಂಡು ಹೋಗಿ ಓ......
ಒಟ್ಟೊಟ್ಟಿಗೆ ಕುಳಿತುಕೊಳ್ಳಿಸಿದರು ಅಜ್ಜನವರು......ಓ......
ಗಿಂಡಿಯ ಹಾಲು ಕೊಟ್ಟರು ಅಜ್ಜನವರು......
ಕೊಟ್ಟ ಹಾಲು ಸ್ವೀಕರಿಸಿದರು......
ಹೋದ ದಿಬ್ಬಣದವರು ಊಟ ಮುಗಿಸಿ ಓ......
ಬಸರೂರ ಅರಮನೆಯಿಂದ ಹೊರಟರು......
ಬಸರೂರ ಅರಮನೆಯಿಂದ ಹೊರಟೂ......
ಸತ್ಯನಾಪುರದರಮನೆಗೆ ಓ ಹೋದ ನೆಂಟರು ಓ ಹಿಂತಿರುಗಿ ಬಂದು ಹೊಕ್ಕರು......
ನಾರಾಯಣಾ ಓ ನಾರಾಯಣ ಅಜ್ಜನವರೇ......
ನಿನ್ನೆಯವರೆಗೆ ಓ ನಿಮ್ಮ ಮೊಮ್ಮಗಳು ಓ ನನ್ನ ಅಕ್ಕನವರು
ಬಲದ ಕೈಯಲ್ಲಿ ನನ್ನ ಅಕ್ಕನವರನ್ನು ಹಿಡಿದುಕೊಂಡು
ನನ್ನ ಸೆರಗಿನ ಓ ಬೆನ್ನಲ್ಲೇ......
ಸೆರಗಿನ ತುದಿಯಲ್ಲಿ ಓ ಹಿಡಿದುಕೊಂಡು......
ನಿನ್ನೆಯವರೆಗೆ ಓ ಸಿರಿ ಇದ್ದಳೂ......
ನನ್ನ ಅಕ್ಕನವರು ಓ ಇದ್ದರು......
ನನ್ನ ಅಕ್ಕನವರಿಲ್ಲದೆ ಓ ಬಿಟ್ಟು ಅಜ್ಜನವರೇ......
ನಾನು ಹೇಗೆ ಕುಳಿತುಕೊಳ್ಳಲಿ ಓ ಎಂದಳು ದಾರು......ಓ......
ತೋರುಗೈ ನನಗೆ ನೀನು ಓ ಸೇವಕಿ ಹೆಣ್ಣು ದಾರು......
ನಾರಾಯಣ ನಾರಾಯಣ ಓ ದಾರು......
ಮಮತೆಯ ಮೊಮ್ಮಗಳು ಪ್ರೀತಿಯ ಸಿರಿಯನ್ನು
ಅನ್ಯರ ಮಾನ್ಯರ ಕೈಸೇರಿಸಿ ಬಿಟ್ಟಿದ್ದೇನೆ ಮಗಾ......
ಹಿಂದೆ ನಾವು ಸತ್ಯನಾಪುರದರಮನೆಯಲ್ಲಿ

ಅಜ್ಜ ಮೊಮ್ಮಗಳು ಹೇಗಿದ್ದವೋ......
......ಮದುವೆಮಾಡಿಕೊಡಬೇಕಾದ ಹೆಣ್ಣನ್ನು ಕೊಡದೆ ಇರಲು ಆಗುತ್ತದೆಯಾ ಮಗಾ......
ಎಂದು ಅಜ್ಜನವರು ಉತ್ತರ ಕೊಟ್ಟರು......
ಒಂದು ಬಾರಿ ಹೋದ ಮದುಮಗಳು ಎರಡನೇ ಬಾರಿಗೆ ಬಂದು ಹೊಕ್ಕಳು......ಓ......
ಎರಡನೇ ಬಾರಿ ಹೊರಟುಹೋದ ಮದುಮಗಳು
ಮೂರನೇ ಬಾರಿಗೆ ಬತ್ತಕೇರಿ ಬಸರೂರಲ್ಲಿ......
ಹನ್ನೆರಡು ವರ್ಷ ಕಳೆಯಿತು ಮಗಳಿಗೇ......ಓ......
ಹದಿಮೂರು ವರ್ಷ ತುಂಬಲು......ಓ......
ಹದಿಮೂರನೆ ವರ್ಷ ಓ ದಾಟಿತು ಮಗಳಿಗೆ
ಹದಿನಾಲ್ಕನೆ ವರ್ಷ ಹಿಡಿದ ಕಾಲಕ್ಕೆ......
ಸಣ್ಣವಳು ಹೋಗಿ ದೊಡ್ಡವಳಾಗಿ......
ಒಂದು ಬಾರಿಯ, ಎರಡು ಬಾರಿಯ
ಮನೆಕೆಲಸ ಮಾಡುತ್ತಾ ಓ ಅತ್ತೆಯ ಜೊತೆಯಲ್ಲಿ......
ಅತ್ತೆಯ ಜೊತೆಯಲ್ಲಿ ಕಾಲಕಳೆಯುತ್ತಾ ಓ......
ಇದ್ದಾಳೆ ಮಗಳು ಸಿರಿ......
ಒಂದಾನೊಂದು ಓ ದಿನದಲ್ಲಿ......
ಅತ್ತೆಯವರು ಹೆಂಗುಸು ಹೇಳುತ್ತಾರೆ......
ನಾರಾಯಣ ನಾರಾಯಣ ಮಗ ಸಿರಿಯೇ......
ನಿನ್ನೆಯವರೆಗೆ ನಾನು ಮಗಾ......
ಹಂಡೆ ಗಿಂಡೆ ಹಿಡಿದುಕೊಂಡು ಹಾಲು ಕರೆದು
ಹಾಲು ಹಿಡಿದುಕೊಂಡು ಓ ನಾನು ಬರುತ್ತಿದ್ದೆ ಮಗಾ......
ಇಂದಿನಿಂದ ಓ ಹಂಡೆಗಿಂಡೆ ಓ ಹಿಡಿ ಮಗಾ......
ದನವನ್ನೇ ಕಟ್ಟಿಹಾಕಿ ಓ ಹಾಲು ಕರೆಯೆಂದೊ ಓ
ಹೇಳುತ್ತಾರೆ ಅತ್ತೆಯವರು......
ಆ ಸಮಯದಲ್ಲಿ ಇಂದು
ಮುಂಜಾವದಲ್ಲಿ ಓ ಎದ್ದಳು ಮಗಳು......
ಮುಚ್ಚಿರುವ ಬಾಗಿಲನ್ನು ತೆರೆದಳು ಓ......
ಹೊರ ಆವರಣಕ್ಕೆ ಬಂದಳು ಮಗಳು......
ಕೂದಲು ಜಾಡಿಸಿ ಬಲಬದಿಗೆ ಸೇರಿಸಿ ಕಟ್ಟಿದಳು......ಓ......
ಬಿಚ್ಚಿಹೋದ ಸೀರೆಯನ್ನು ನೆರಿಗೆ ಹಿಡಿದು ಉಟ್ಟಳು......ಓ......
ಏಳು ಅಂತರಗಳ ಯಮದೇವಿ ಗುಡಿಯನ್ನೂ ಹೊಕ್ಕಳು......ಓ......

ಬಂಗಾರದ ಸೊಪ್ಪಿನ ಹಿಡಿಸೂಡಿ ಹಿಡಿದು......
ತೂತು ಇರುವ ಗೆರಟೆ ಹಿಡಿದಳು ಮಗಳು......
ಬಂಗಾರದ ಪಾತ್ರೆ ಹಿಡಿದಳು
ಒಲೆಯ ಬೂದಿ ತೆಗೆದಳು......
ಒಲೆಯ ಕರಿಬೂದಿ ತೆಗೆದಳು ಮಗಳು
ಸೊಪ್ಪಿರುವ ಹಿಡಿಸೂಡಿ ಹಿಡಿದಳು ಇಂದು......
ಏಳು ಅಂತರಗಳ ಕತ್ತಲಕೋಣೆ ಗುಡಿಸಿದಳೂ......ಓ......
ಏಳು ಅಂತರಗಳ ಕತ್ತಲಕೋಣೆ ಗುಡಿಸಿದಳು
ಅಡಿಯಿಂದ ಕೊಳ್ಳಿ ಉರಿಸಿದಳು ಮೇಲಿನಿಂದ ಪಾತ್ರೆ ಇಟ್ಟಳು ಮಗಳು......
ಓ ಸಿರಿ......ಸತ್ಯಮಹಾಲೋಕದ ಸಿರೀ......
ಇಂದಾದರೋ ಹೊರಕೋಣೆ(ಚಾವಡಿ)ಗೆ ಬಂದಳಂತೆ ಇಂದು
ಪಶುಆಹಾರ (ನುಚ್ಚಕ್ಕಿಗಂಜಿ) ಹಿಡದಳು ಹಟ್ಟಿಯ ಕಡೆಗೆ ಹೋದಳಂತೆ ಇಂದು
ದನಗಳಿಗೆ ಕಡಸುಗಳಿಗೆ ಓ
ನುಚ್ಚಕ್ಕಿ ಗಂಜಿ (ಪಶು ಆಹಾರ) ಇಟ್ಟಳಂತೆ ಇಂದು ಹಿಂಡಿಮೊದಲಾದ ಪಶುಆಹಾರ ಕೊಟ್ಟಳಂತೆ ಇಂದು
ಹಂಡೆ ಹಿಡಿದಳಂತೆ ಗಿಂಡಿಯನ್ನು ಹಿಡಿದುಕೊಂಡು ಓ ಹಟ್ಟಿ ಕಡೆಗೆ ಹೋದಳು ಓ......
ಕರುಗಳ ಹಟ್ಟಿಕಡೆಗೆ ಹೋದಳಂತೆ
ಕಂಚಿನ ಉಣುಗೋಲು ಜಾರಿಸಿದಳು ಮಗಳು......ಓ......
ಮುದ್ದು ಕುಮಾರನನ್ನು ಹಿಡಿದಳೂ......
ಕಾಶಿಗೆ ಹೋದ ಕಪಿಲೆ ದನವನ್ನು ಹಿಡಿದಳು......
ಮುದ್ದುಕರುವನ್ನು ಮೊಲೆ ತಿನ್ನಲು ಬಿಟ್ಟಳು ಇಂದು
ಒಂದು ಬಾರಿಗೆ ಎಳೆದು ಕಟ್ಟಿದಳು ಮಗಳು
ಹಂಡೆಯಲ್ಲಿ ಹಾಲು ಗಿಂಡಿಯಲ್ಲಿ ಹಾಲೆಂದೂ
ಕರೆದಳು ಮಗಳೂ......
ಹಂಡೆಯ ಹಾಲು ಗಿಂಡಿಯ ಹಾಲು ಹಿಡಿದು ಓ ಕರೆದಾಗುವಾಗ
ಕಣ್ಣಲ್ಲಿ ಕಡುದುಃಖ ಓ ಬಿಡುತ್ತಾಳೆ ಮಗಳೂ......
ಹೊಟ್ಟೆಯಲ್ಲಿ ಉರಿ (ಸಂಕಟ) ಅನುಭವಿಸುತ್ತಾ......
ಕಾಲು ತುರಿಸುತ್ತಾ ಉಗುರು ಚಿವುಟುತ್ತಾ ಓ
ಹಟ್ಟಿಯಲ್ಲೇ ನಿಂತಳು ಮಗಳೂ......
ನಾರಾಯಣಾ ನಾರಾಯಣಾ......

ಹಾಲು ಕರೆಯಲು ಹೋದ ಸಿರಿ ಎಲ್ಲಿಗೆ ಹೋದಳೆಂದೂ......
ಅತ್ತೆಯರು ಹೆಂಗುಸು ಹುಡುಕುತ್ತಾ ಹೋದರು
ನೋಡುವಾಗ ಇಲ್ಲಪ್ಪಾ ಹಂಡೆಯು, ಇಲ್ಲ ಗಿಂಡಿಯೂ ಇಲ್ಲವಂತೇ......ಓ......
ಸಿರಿ ಎಲ್ಲಿಗೆ ಹೋದಳೆಂದರು......
ಹಟ್ಟಿಕೊಟ್ಟಿಗೆಗೆ ಹುಡುಕುತ್ತಾ ಹೋಗುವಾಗ ಇಂದು ಅತ್ತೆಯವರೂ ಹೆಂಗುಸೂ ಹೋಗುವಾಗ
ಕಣ್ಣಲ್ಲಿ ಕಡುದುಃಖ ದುಃಖಿಸುತ್ತಾ ಹೊಟ್ಟೆಯಲ್ಲಿ ಸಂಕಟಪಡುತ್ತಾ
ಉಗುರು ಚಿವುಟುತ್ತಾ ಕಾಲಲ್ಲಿ ನೆಲ ಕೆರೆಯುತ್ತಾ ಓ
ಅಳುತ್ತಾಳಲ್ಲವೇ ಮಗಳೂ......
ನಾರಾಯಣ ಮಗಾ ನಾರಾಯಣ ಮಗಾ ಓ......
ಯಾಕಾಗಿ ಅಳುತ್ತಿರುವೆ ಮಗಾ
ಯಾಕಾಗಿ ದುಃಖಿಸುತ್ತಿರುವೆ ಮಗಾ ನೀನು......
ನಿನಗೆ ತಾಯಿಯೂ ನಾನೆ ಮಗಾ ಅತ್ತೆಯೂ ನಾನೇ
ನಿನಗೊಬ್ಬಳಿಗೇ ಹೆಚ್ಚಿಗೆ (ವಿಶೇಷ) ಅಲ್ಲ ಮಗಾ......
ಇಂದಿನವರೆಗೆ ನೀನು ಮಗುವಾಗಿದ್ದೆ
ಇಂದಿನಿಂದ ನೀನು ಹೆಣ್ಣುಹೋಗಿ ಹೆಂಗುಸಾದೆ ಮಗಾ......
ಋತುಮತಿಯಾದೆ, ನೀನು ಮುಟ್ಟಾದೆ ಇಂದು ಎಂದು
ತಾಯಿ ಸಂಕರು ಪೂಂಜೆದಿ ಹೇಳಿದರು......
ಇಂದಾದರೋ ಇಂದು ಹಂಡೆಯ ಹಾಲು ಹಿಡಿದರಂತೆ
ಗಿಂಡಿಯ ಹಾಲು ಹಿಡಿದುಕೊಂಡು ಒಳಗೆ ಕೊಂಡುಹೋದರಂತೆ ಇಂದು
ನಾಲ್ಕು ಮನೆಗಳಿಗೆ ಹೇಳಿಕೆ ಮಾಡಿದರಂತೆ ಓ......
ನಾಲ್ಕು ಮನೆಯ ಹೆಂಗುಸರನ್ನು ಕರೆಸಿದಂತೆ......ಓ......
ಕರೆಯಲು ಹೋದಾಗ ಹೇಳುತ್ತಾರಂತೇ......
ಏನು ಬಂದಿರಿ ಅಕ್ಕನವರೆ ನೀವೆಂದು
ಕೆಳ ಭಾಗದ ಪಾಲವರ ಹೆಂಗುಸರು
ಮೇಲಿನ ಭಾಗದ ಪಾಲವರ ಹೆಂಗುಸರು
ಕರೆಯುವಾಗ ಹೇಳುತ್ತಾರಂತೆ ಸಂಕರುಪೂಂಜೆದೀ......
ನಾರಾಯಣ ಮಗ ಓ ಹೆಣ್ಣುಗಳೇ ಓ
ನನ್ನ ಸೊಸೆ ಓ ಅಜ್ಜನವರ ಮೊಮ್ಮಗಳು......
ಋತುಮತಿಯಾದಳು, ಮುಟ್ಟು ಆದಳು......
ಹೆಣ್ಣು ಹೋಗಿ ಹೆಂಗುಸಾದಳು......

ನೀರ ಹೊಯ್ಯಬೇಕು ನೀರ ಪ್ರಸ್ತ (ನೀರು ಹೊಯ್ಯುವ ಆಚರಣೆ)
ಮಾಡಬೇಕೆಂದು ಹೇಳಿದರು ಹೆಂಗುಸರು......ಓ......
ತಾಯಿ ಸಂಕರು ಪೂಂಜೆದೀ......
ಅಲ್ಲಿಂದ ಹಾಗೆ ಬಂದರಂತೆ, ಬರುವಾಗ ಇಂದು ಏಳು ಅಂತರಗಳ ಕತ್ತಲು ಕೋಣೆಯಲ್ಲಿ
ತೆಂಕಣಮನೆ ಸಿರಿಪಡುಸಾಲೆಯಲ್ಲಿ ಇಂದು ಸುಪ್ಪತ್ತಿಗೆಯಲ್ಲಿ ನಿದ್ರೆ
ಮಾಡುತ್ತಾ ಇದ್ದಾನೆ ಮಗ ಓ ಬಸರೂರ ಕಾಂತಾಳ್ವ......
ನಾರಾಯಣ ಮಗ ನಾರಾಯಣ ಮಗ ಕಾಂತ್ವಾಳ ಓ......
ನಿನ್ನ ಮದುಮಗಳು ನನ್ನ ಸೊಸೆ
ಹೆಣ್ಣು ಹೋಗಿ ಹೆಂಗುಸಾದಳು ಓ......
ಅಜ್ಜನವರಲ್ಲಿಗೆ ಹೋಗಬೇಕು, ಮಡಿವಾಳನನ್ನು ಬರಮಾಡಬೇಕೆಂದರು......
ಅಷ್ಟು ಹೇಳುವುದನ್ನು ಕೇಳಿದನಂತೆ ಇಂದು ಬಡಕ್ಕನೆ ಎದ್ದು ದಿಡಕ್ಕನೆ ನಿಂತನಂತೆ ಇಂದು
ಕಿಟಕಿಗೆ ಕೈಕೊಟ್ಟನಂತೆ ಗಿಂಡಿಯ ನೀರು ತೆಗೆದು ಇಂದು
ಕಣ್ಣಿನ ನಿದ್ರೆ ತಿಳಿಯಾಗಿಸಿದ ಬಾಯಿಯ ವಾಸನೆ ಕಳೆದನಂತೆ ಇಂದು
ಗಿಡಿ ಕೊಂಡುಹೋಗಿ ಕಿಟಕಿಯಲ್ಲಿ ಇಟ್ಟು ಇಂದು
ಆರು ಮೊಳ ಬಟ್ಟೆ ತೆಗೆದು ಸೊಂಟದ ಸುತ್ತ ಬಿಗಿಯುತ್ತಾ
ಉಟ್ಟನು ಮಗ ಓ ಮಗು ಕಾಂತಣ......
ಇಂದಾದರೋ ಇಂದು ಮಡಿವಾಳರ ಮಾಬುಕರಿಯಕ್ಕೆ ಹೋದರಂತೆ ಇಂದು
ಮಡಿವಾಳರು ಮಡಿಮಾಡುವ ಓ ಮಾಬುಕರಿಯಕ್ಕೆ ಓ ಹೋದರಂತೆ
ಮಡಿವಾಳಗಿತ್ತಿ ಚೆಲುವೇ ಓ ಬರಬೇಕಂತೆ
ನನ್ನ ತಾಯಿಯವರು ಹೇಳಿದರೆಂದು ಮಡಿವಾಳಗಿತ್ತಿ ಚೆಲುವೆಗೇ ಹೇಳಿದರಂತೇ...... ಓ......
ಹೇಳಿ ಹಿಂತಿರುಗಿದರಂತೆ ಇಂದು
ಬಸರೂರಿನ ಅರಮನೆಗೆ ಓ ಬಂದನಂತೆ ಕಾಂತಾಳ್ವನು......
ನಾರಾಯಣಾ ಓ ನಾರಾಯಣ, ಹೆಂಗುಸೇ......
ಮಡಿವಾಳಗಿತ್ತಿ ಚೆಲುವೇ ಬಂದಳಂತೆ......
ಈ ಕಡೆಯಿಂದ ಇಂದು ನಾಲ್ಕು ಮನೆಯ ಹೆಂಗುಸರೂ ಬಂದರಂತೆ ಇಂದು
ಮಡಿವಾಳಗಿತ್ತಿ ಚೆಲುವೆಯೂ ಬಂದಳಂತೆ ಇಂದು......
ಕಳಸೆ ಭತ್ತದ ಸಣ್ಣ ಮುಡಿಯನ್ನು ಇಟ್ಟಳಪ್ಪಾ......ಓ......
ಒಂದು ಬಳ್ಳ ಭತ್ತ ತೆಗೆದಳಂತೆ ಇಂದು ದಡ್‌ದಡ್ ಎಂದು ಕುಟ್ಟಿದಳಂತೆ

ಮುಡಿಮುಡಿ ಮಾಡಿದಳಂತೆ ಇಂದು ಅಂಗಳದಲ್ಲಿ ಇಂದು ಓ......
ಆರೂವರೆ ಅಂಗಣದಲ್ಲಿ ಮೂರೂವರೆ ಅಂಗಳದಲ್ಲಿ
ದೊಡ್ಡ ಅಂಗಳದಲ್ಲಿ ಇಂದೂ......
ಅಕ್ಕಿ (ಹುಡಿ)ಯಿಂದ ಓ ಮಂಡಲವನ್ನು ಓ ಬರೆದಳಂತೆ......
ಮಂಡಲ ಹಾಕಿದಳಂತೆ ಓ ನಾಲ್ಕು ಮೂಲೆಗಳಲ್ಲಿ
ನಾಲ್ಕು ಸಿಂಬಿ ರಚಿಸಿದಳಂತೆ ಚೆಲುವೆ ಓ
ಮಡಿವಾಳಗಿತ್ತಿ ಚೆಲುವೆಯಂತೇ......
ಕಳಸಿಗೆ ಭತ್ತದ ಸಣ್ಣ ಮುಡಿಯನ್ನು ಓ
ಅಂಗಳದಲ್ಲಿ ಇಟ್ಟಳಂತೆ ಇಂದು
ಜೋಡಿ ತೆಂಗಿನಕಾಯಿ ಹಾಕಿದಳಂತೆ ಇಂದು
ಮಡಿವಾಳಗಿತ್ತಿ ಹೆಣ್ಣು ಹೇಳಿದಳಂತೆ ಇಂದು
ನಾರಾಯಣ ಹೆಂಗುಸರೇ ನನ್ನ ಕೆಲಸ ಆಯಿತೆಂದು ಓ
ಮಡಿವಾಳಗಿತ್ತಿ ಹೇಳಲು ಹೇಳುತ್ತಾರೆ......
ಕೆಳ ಭಾಗದ ಪಾಲವರು ಮೇಲಿನ ಭಾಗದ ಪಾಲವರು ನಡುನಕರದ ಓ
ನಾಲ್ಕು ಮನೆಯ ಓ ಹೆಂಗುಸರಂತೆ......ಓ......
ಮಡಿವಾಳಗಿತ್ತಿ ಹೆಣ್ಣನ್ನು, ಉಡಲು ಹೇಳಿದರಂತೆ ಇಂದು......
ಬಂಗಾರದ ಎಣ್ಣೆಯ ಪಾತ್ರೆ ಓ ಬೆಳ್ಳಿಯ ಚಮಚ ಹಿಡಿದರಂತೆ ಇಂದು ಓ......
ಹಟ್ಟಿ ಕಡೆಗೇ ಓ ಹೋದರು ಹೆಂಗುಸರು......
ಹಟ್ಟಿಗೆ ಹೋದ ಹೆಂಗುಸರಂತೆ ಇಂದು
ನೆತ್ತಿಗೆ ಒಂದು ಚಮಚ ತುಪ್ಪ ಹಾಕಿದರಂತೆ ಇಂದು
ಮದುಮಗಳಾದ ಹೆಣ್ಣನ್ನು ಓ ಕೈಯಲ್ಲಿ ಹಿಡಿದು ಕರೆದುಕೊಂಡು ಬಂದರಂತೆ ಇಂದು
ಕರೆದುಕೊಂಡು ಬಂದರಂತೆ ಇಂದೂ......
ಆರೂವರೆ ಅಂಗಣ ಮೂರುವರೆ ಅಂಗಳದಲ್ಲಿಯಂತೆ
ದೊಡ್ಡ ಅಂಗಳದಲ್ಲಿ ಇಂದು ಕಳಸಿಗೆ ಭತ್ತದ ಅಕ್ಕಿಯ ಕುರುಂಟಲ್ಲಿ ಓ
ಭತ್ತದ ಕುರುಂಟಲ್ಲೀ ಇಂದು ಜೋಡಿ ತೆಂಗಿನ ಕಾಯಿಗಳಲ್ಲಿ ಇಂದು
ಹೆಣ್ಣನ್ನು ಕೂತುಕೊಳ್ಳಿಸಿದರಂತೆ ಇಂದು
ನಾಲ್ಕು ಮನೆಯ ಹೆಂಗುಸರು ನಾಲ್ಕು ತಂಬಿಗೆ ನೀರು ಓ ಹೊಯ್ದರಂತೆ......ಓ......
ಮೈಲಿಗೆ ಹೆಣ್ಣನ್ನು ಶುದ್ದ ಮುದ್ರಿಕೆಗೇ
ಕರೆದುಕೊಂಡು ಅತ್ತೆಯವರು ಓ ಹೋದರಂತೆ......ಓ......
ಮುಂದಿನಿಂದ ಸಂಗಾತಿ ಓ ಹಿಂದಿನಿಂದ ಸಂಗೀತವಂತೆ

ಬಳ್ಳದಲ್ಲಿ ಬಾಗೆ, ಗೆರಟೆಯಲ್ಲಿ ಸೀಗೆ ಕೊಟ್ಟರು ಅತ್ತೆಯವರು ಹೆಂಗುಸಂತೆ
ಮಡಿವಾಳರ ಮಾಬುಕರಿಯಕ್ಕೆ ಓ ಕರೆದುಕೊಂಡು ಹೋದರು......
ಮಡಿವಾಳರ ಮಾಬುಕರಿಯದಲ್ಲಿ ಇಂದು ಮಿಂದು ಶುದ್ಧವಾಗಲು
ಸಿರಿಗೆ ಹೇಳಿದರಂತೆ ಸಿರಿಯನ್ನು ಕರೆದುಕೊಂಡು ಬಂದರಂತೆ ಇಂದು......
ಕೊಟ್ಟಿಗೆಗೆ ಹೋದರಂತೆ ಕೊಟ್ಟಿಗೆಯಲ್ಲಿ ಕುಳ್ಳಿರಿಸಿದರಂತೆ
ಹಸಿ ಮಡಲಿನಿಂದ ಗುಡಿ (ಕೋಣೆ) ಕಟ್ಟಿಸಿದರಂತೆ......ಓ......
ಹಸಿ ಮಡಲಿನಲ್ಲಿ ಕುಳ್ಳಿರಿಸಿದರಂತೆ ಓ......
ಸಿರಿಗೆ ಊಟವನ್ನು ಕೊಟ್ಟರಂತೆ......ಓ......
ಅತ್ತೆಯವರು ಓ ಹೆಂಗುಸು......ಅವರೂ......ಓ......
ನಾರಾಯಣಾ ಓ ನಾರಾಯಣಾ......
ನಾಲ್ಕು ಮನೆಯ ಹೆಂಗುಸರಂತೆ ಇಂದು ಬಂದ ಹೆಂಗುಸರು ಊಟ ಮಾಡಿದರಂತೆ
ಇಂದು ಅವರವರ ಮನೆಗೆ ಹೋಗುವುದನ್ನು ನೋಡಿದರಂತೆ ಇಂದು......
ಸಿರಿಗೆ ಇಂದು ಬಂಗಬಾಳೆಯ ತುದಿ ಎಲೆ ತಂದರಂತೆ ಅತ್ತೆಯವರು ಇಂದು
ಮಡಕೆಯ ತಂಗುಳನ್ನ, ಕುಡಿಕೆಯ ಮೊಸರು, ಮರಿಗೆಯ ಉಪ್ಪು ಉಪ್ಪಿನಕಾಯಿ
ತೆಂಗಿನಕಾಯಿ ಸೇರಿಸಿ ಸಾವಿರ ಬಗೆಯ ಪದಾರ್ಥ
ಹುಣಸೆ ಬೆರಸಿ ಮುನ್ನೂರು ಬಗೆಯ ಪದಾರ್ಥ ಇಂದು
ಸಿರಿಗೆ ಭೋಜನವೆಂದು ಕೊಟ್ಟರು ಅತ್ತೆಯವರು......ಓ......
ಸಂಕರು ಪೂಂಜೆದೀ......
ನಾರಾಯಣಾ ನಾರಾಯಣಾ ಓ......
ಮಡಿವಾಳನನ್ನು ಬರಮಾಡಿದರು......ಓ......
ಬಸ್ರೂರ ಕಾಂತಾಳ್ವರು......
ಏನು ಹೇಳಬೇಕು ಏನು ತರಬೇಕೆಂದು ಕೇಳುವಾಗ ಓ......
ಹೇಳುತ್ತಾರಂತೆ ಇಂದು ಬಸರೂರ ಕಾಂತಾಳ್ವ......ಓ......
ತಾಯಿಯಲ್ಲಿಗೆ ಬಂದು ಓ ಕೇಳುತ್ತಾರೆ......
ಏಳು ಅರೆ (ಅಂತರ)ಗಳ ಯಮದೇವಿ ಗುಡಿ (ಕತ್ತಲಕೋಣೆ)ಯಲ್ಲಿ ಇದ್ದವರಂತೆ ಇಂದು
ತಾಯಿಯವರು ಹೆಂಗುಸು ಸಂಕರುಪೂಂಜೆದಿ ಹೊರಗೆ ಬಂದರಂತೆ......
ಇಂದು ಹೋಗಬೇಕು ಮಡಿವಾಳ ನೀನು ಇಂದು
ಸತ್ಯನಾಪುರದಮನೆಗೆ ಹೋಗಬೇಕು......
ಆರ್ಯಬನ್ನಾರ್ ಬಿರ್ಮುಮಾಲವರು ಓ ನಮ್ಮಜ್ಜನವರಲ್ಲಿ ಓ ಹೇಳಬೇಕು ಮಡಿವಾಳಾ......ಓ......

ನಿಮ್ಮ ಮೊಮ್ಮಗಳು ಓ ಸಿರಿಯಂತೆ ಇಂದು
ಋತುಮತಿಯಾದಳು ಓ ಮುಟ್ಟಾದಳೆಂದು ಇಂದು ಓ
ಓಲೆ ಕಳುಹಿಸಿದ್ದು ಎಂದು ತಿಳಿಸಬೇಕು ಮಡಿವಾಳ ಎಂದರು......
ದಾರಿ ಖರ್ಚಿಗೆ ಸಂಬಳ ಕೊಟ್ಟರು
ಹೊಟ್ಟೆಗೆ ಆಹಾರ ಓ ನೀಡಿದರು ಇಂದು
ಬತ್ತಕೇರಿ ಬಸರೂರಿನಿಂದ ಮಡಿವಾಳ ಹೋಗುತ್ತಾನೆ......ಓ......
ಬತ್ತಕೇರಿ ಬಸರೂರಿನಿಂದ ಮಡಿವಾಳ ಬರುವುದನ್ನು ಇಂದು ಅಜ್ಜನವರು ನೋಡಿದರಂತೆ
ಸತ್ಯನಾಪುರದರಮನೆಯಲ್ಲಿ ಕಲ್ಲಿನ ಮುಖಮಂಪಟ ಓ ಕಂಚಿನ ದಾರಂದದಲ್ಲಿ ಓ ಕುಳಿತು ನೋಡುತ್ತಿರಲು ಓ ಹೋಗುತ್ತಾನಂತೇ......
ಹೋಗಿ ಹೋಗಿ ಇಂದು ಮಡಿವಾಳ ಹೋಗುತ್ತಾನಂತೆ
ಎಲ್ಲಿಂದ ಬರುವ ಮಡಿವಾಳ ಎಲ್ಲಿಗೆ ಹೋಗುವವನೆಂದು ಓ ಅಜ್ಜನವರು ಕೇಳಲು ಓ ಹೇಳುತ್ತಾನಂತೆ......ಅಜ್ಜನವರಲ್ಲಿ ಆರ್ಯಬನ್ನಾರು ಬಿರ್ಮುಮಾಲವರಿಗೆ......
ಎಲ್ಲಿಂದಲೋ ಬಂದದ್ದಲ್ಲ ಎಲ್ಲಿಗೋ ಹೋಗುವವನಲ್ಲ ಇಂದು ಬತ್ತಕೇರಿ ಬಸರೂರಿನಿಂದ ಬಂದದ್ದು
ಬಸರೂರ ಕಾಂತಾಳ್ವನ ಓ ಮಡದಿ ಮದುಮಗಳಾದಳು; ಮುಟ್ಟಾದಳೆಂದು ಇಂದು ನಿಮಗೆ ಓಲೆ ಬಿಟ್ಟರೆಂದು (ರವಾನಿಸಿದರೆಂದು) ಓ ಹೇಳುತ್ತಾನೇ......ಓ......
ಬತ್ತಕೇರಿ ಬಸರೂರ ಕಾಂತಾಳ್ವ ಕಳುಹಿಸಿದ ಆಳು ನಾನೆಂದು ಓ ಹೇಳುತ್ತಾನೆ ಮಡಿವಾಳ......
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು ಹರುಷದ ಮೈಯ್ಯಾಯಿತು ಇಂದು ಮುತ್ತಿನಂಥ ನಗುವಾಯಿತು
ಇಂದು ಏಳು ಅಂತರದ ಯಮದೇವಿ ಗುಡಿ (ಕತ್ತಲಕೋಣೆ)ಗೆ ಹೋದರಂತೆ ಇಂದು
ತಾನು ಊಟ ಮಾಡುವ ಕಂಚಿನ ಬಟ್ಟಲು ತಂದರಂತೆ ಇಂದು
ಮಡಿವಾಳನಿಗೆ ಮರ್ಯಾದೆಯಾಗಿ ಓ ಅಜ್ಜನವರು ಕೊಟ್ಟರು......ಓ......
ದಾರಿಯ ಸಂಬಳ ಓ ಕೊಟ್ಟರು.....
ನಾರಾಯಣ ಮಗ ದಾರು ಓ......
ನನ್ನ ಮೊಮ್ಮಗಳು ಓ ನಿನ್ನ ಅಕ್ಕನವರು ಇಂದು
ಹೆಣ್ಣು ಹೋಗಿ ಹೆಂಗುಸಾದಳಂತೆ ಇಂದು
ಕಲ್ಪಡ ಕಲ್ಪಡ (ಗಡಿಗೆ)ದಲ್ಲಿ ತುಪ್ಪ ಕೊಂಡುಹೋಗಬೇಕು ಮಗಾ ಓ......
ಅವಲಕ್ಕಿ ಕೊಂಡುಹೋಗಬೇಕು ಮಗಾ ಎಂದರು......ಓ......

ಪಡುವಣ ಪಡುಸಾಲೆಯ ಓ ಕಣಜದ ಭತ್ತ ಓ ಜಾರಿಸಿ(ತೆಗೆ)ದರು ಅಜ್ಜನವರು ಇಂದು
ಅವಲಕ್ಕಿ ಭತ್ತ ಕಳುಹಿಸಿದರಂತೆ ಇಂದು ಕ್ವಿಂಟಾಲು ಅವಲಕ್ಕಿ ಮಾಡಿಸಿದರಂತೆ ಇಂದು
ಕಣಜದ ಅವಲಕ್ಕಿಯಂತೆ ಇಂದು ಎಣ್ಣೆಯ ಪಾತ್ರೆ ಓ ತುಪ್ಪದ ಕಲ್ಪಡ (ಗಡಿಗೆ) ಎಂದು ಹೇಳಿದರಜ್ಜನವರು
ಸ್ವಲ್ಪ ಸ್ವಲ್ಪ ಎಂದು ಏಳು ಆಳು (ಹೊರುವಷ್ಟು) ಹೊರೆ ಓ......
ಸತ್ಯನಾರಾಪುರದ ಮನೆಯಿಂದ ಹೋಗುತ್ತದೆ......ಓ......
ಇಂದಾದರೋ ಇಂದು ಏಳು ಆಳು ಹೊರೆ ಹೋಗುತ್ತದೆಯಂತೆ
ಅಜ್ಜನವರೂ ಹೋಗುತ್ತಾರಂತೆ, ಏಳು ಆಳು ಹೊರೆ ಹೋಗುತ್ತದಂತೆ ಇಂದು
ಸತ್ಯನಾರಾಪುರ ಅರಮನೆಯಿಂದ ಓ ಬತ್ತಕೇರಿ ಬಸ್ರೂರಿಗೆ ಓ
ಏಳಾಳು ಹೊರೆ ಹೋಗುತ್ತದೆಯಂತೆ......ಓ......
ಇಂದಾದರೂ ಇಂದು ಏಳಾಳು ಹೊರೆ ಹೊರುವ ಆಳುಗಳಿಗೆ ಇಂದು
ದಾರಿಯ ಖರ್ಚಿಗೆ ಸಂಬಳ, ಬೀದಿಗೆ ಸಿದ್ದೆ (ಧಾನ್ಯ ಭತ್ತೆ?) ಇಂದು ಕೊಟ್ಟರಂತೆ ಇಂದು
ಸಂಕರುಪೂಂಜೆದಿ ಇಂದು ಕೊಟ್ಟು ಕಳುಹಿಸಿದರಂತೆ ಇಂದು
ಹೀಗೆ ಓ ಹತ್ತು ಹನ್ನೆರಡು ದಿನ ಕಳೆದು ಹೋಗಿದೆಯಲ್ಲಾ......ಓ......
ಸಂಕರುಪೂಂಜೆದಿಗಾದರೋ......
ಇಂದಾದರೋ ಇಂದು ಋತುಮತಿಯಾದ ಹೆಣ್ಣಿಗೆ ನೀರ ಪ್ರಸ್ತ (ಮೀಯಿಸುವ ಹಬ್ಬ) ಕರೆದು ಇಂದು
ಕಲಶಸ್ನಾನ ಮಾಡಿಸಿ ಇಂದು
ಹತ್ತು ಹದಿನಾಲ್ಕು ದಿನದಲ್ಲಿ ಇಂದು ಹೆಣ್ಣನ್ನು ಕರೆದುಕೊಂಡು ಓ ಇಂದು
ಬತ್ತಕೇರಿ ಓ ಬಸರೂರಿನಿಂದ......
ನಾರಾಯಣ ಓ ಸಂಕರುಪೂಂಜೆದಿಯೇ......ಓ......
ನನ್ನ ಹೆಣ್ಣನ್ನು ಓ ನಾನು ಕರೆದುಕೊಂಡು
ಹೋಗುತ್ತೇನೆಂದು ಓ ಅಜ್ಜನವರು ಹೇಳುತ್ತಾರೆ......
ನಾರಾಯಣ ಅಜ್ಜನವರೆ ನೀವು ಹೇಳಿದ ಮಾತನ್ನು ನಾನು ಹಿಂದಕ್ಕೆ ತೆಗೆಯಲು ಇಲ್ಲ
ಇಂದಿಗೆ ಹದಿಮೂರು ದಿನ ಆದಾಗ ನೀವು ಕರೆದುಕೊಂಡು ಹೋಗಿರೆಂದು ಓ
ಅತ್ತೆಯವರು ಓ ಸಂಕಾರುಪೂಂಜೆದಿ ಹೇಳಲು......
ಇಂದಾದರೋ ಇಂದು ಕಾಂತಾಳ್ವನು ಇಂದು ಮೂಡಣದ ಕಿರುಅಟ್ಟಕ್ಕೆ ಕಳುಹಿಸಿದನಂತೆ ಇಂದು

ಸತ್ಯದಂಡಿಗೆಯನ್ನು ತೆಗೆಸಿದನಂತೆ ದಂಡಿಗೆ ಹೊರುವ ಬೋವಿಗಳನ್ನು ಕರೆಸಿದನಂತೆ ಇಂದು......
ದಂಡಿಗೆ ಸಿಂಗಾರ ಮಾಡಿಸಿದನಂತೆ ದಂಡಿಗೆ ಶೃಂಗಾರ ಮಾಡಿಸಿ ಇಂದು
ದಂಡಿಗೆಯ ಬೋವಿಗಳನ್ನು ಕರೆಸಿದರು, ಮದುಮಗಳನ್ನು ಶೃಂಗಾರ ಮಾಡಿಸಿದರು ಇಂದು
ಬೆಳ್ಳಿಯಲ್ಲಿ ಬಿಳಿಯಂತೆ, ಬಂಗಾರದಲ್ಲಿ ಶೃಂಗಾರ ಎಂದು ಇಮದು
ಬಯಲಿನ ಹಾಳೆ ತೋಟದ ಪುಷ್ಪ ಓ
ಅಡಕೆ ಸಸಿಯಿಂದ ಹಾಳೆ ಹಿಂಗಾರ ತೆಗೆಸಿ ಇಂದು......
ಹೂವಿನ ಜಲ್ಲಿ ಹಾಕಿದರಂತೆ ಸಿರಿಗೆ......ಓ......
ದಂಡಿಗೆಯಲ್ಲಿ ಎತ್ತಿ ಓ ಅತ್ತೆಯವರು ಕುಳ್ಳಿರಿಸಿದರು......
ಬೆಳಗ್ಗೆ ಹೋದರೆ ಓ ಸಿರಿಯೇ ಸಂಜೆಗೆ ಬರಬೇಕು ಓ
ಸಂಜೆಗೆ ಹೋದರೆ ಬೆಳಗ್ಗೆ ಬರಬೇಕೆಂದರು......
ಅತ್ತೆಯವರು ಹೆಂಗುಸು ಓ ದಂಡಿಗೆಯಲ್ಲಿ ಎತ್ತಿ ಕುಳ್ಳಿರಿಸಿದರು......
ಬಸರೂರ ಅರಮನೆಯಲ್ಲಿ ಏರಿದ ದಂಡಿಗೆ ಓ
ಸತ್ಯನಾಪುರದರಮನೆಯ ಓ ಕಲ್ಲಿನ ಮುಖಮಂಟಪ ಓ
ಕಂಚಿನ ದಾರಂದದಲ್ಲಿ ಓ ತಂಗಿತು......
ಆರೂವರೆ ಅಂಗಣ ಮೂರೂವರೆ ಅಂಗಳದಲ್ಲಿ ಓ ಇಟ್ಟರು......
ನಾರಾಯಣಾ ಓ ನಾರಾಯಣಾ......ಓ......
ದಾರು ಬಂದಳು ನಗುತ್ತಾ ನಲಿಯುತ್ತಾ ಅಂದದಲ್ಲಿ
ಅಂದಚಂದದ ಶೃಂಗಾರದಲ್ಲಿ ಬಂದಳಂತೆ ಇಂದು......
ನಾರಾಯಣ ಅಕ್ಕನವರೇ ಅಕ್ಕನವರೇ ಅಂದಳು......ಓ......ದಾರು......
ಬಲದ ಕೈ ಕೊಟ್ಟಳು ಎತ್ತಿ ಆಧರಿಸಿ ಒಳಗೆ ಕೊಂಡುಹೋದಳು......
ಚಕ್ಕಚಾವಡಿ ಸಿದ್ರಮಂಪಟದಲ್ಲಿ ತೂಗುತ್ತಿರುವ ಉಯ್ಯಾಲೆಯಲ್ಲಿ
ತಾಳೆಗರಿಯ ಚಾಪೆಯಲ್ಲಿ ಸಿರಿಯನ್ನು ಕುಳ್ಳಿರಿಸಿದಳು ದಾರು......ಓ......
ಒಟ್ಟೊಟ್ಟಿಗೆ ಕುಳಿತುಕೊಂಡು ಓ
ಆಡುತ್ತಾ ಕುಣಿದಾಡುತ್ತಾ ಇದ್ದಾರೆ ಹೆಣ್ಣುಗಳು......
ನಾರಾಯಣಾ ಓನಾರಾಯಣಾ......ಓ......
ಅಂದಿನ ದಿನ ಹೋಗಿದೆ ಮರುದಿನ ಬರುವಾಗ ಹೇಳುತ್ತಾರಂತೆ ಇಂದು
ನಾರಾಯಣಪ್ಪ ದೇವರೇ ನಾರಾಯಣ ಅಜ್ಜನವರೆ ಓ ಅಜ್ಜನವರೆ ಎಂದಳು ...... ಓ...... ಸಿರಿ......
ಬಾಳಿದವಳು ಓ ಬಾಲಕ್ಕ ಸಿರಿ......

ಇಂದಿನ ದಿನ ಓ ಹೋಯಿತಜ್ಜನವರೆ ಓ
ನಾಳೆಯ ದಿನ ನಮಗೆ ಬಡಗಣಕ್ಕೆ ಹೋಗಬೇಕಜ್ಜನವರೆ
ಬಡಗಣ ಲಂಕೆಲೋಕನಾಡಿಗೆ ಹೋಗಬೇಕು ನಮಗೆ......
ದೇವರ ಮುಖ ನೋಡಬೇಕು, ದೇವರ ದರ್ಶನ ಮಾಡಿ ದೇವರಿಗೊಂದು ಕಾಣಿಕೆ ಓ
ಹಣ್ಣುಕಾಯಿ ಮಾಡಿಸಬೇಕು......
ಗಂಧಪ್ರಸಾದ ಓ ಹಿಡಿಯಬೇಕು ಅಜ್ಜನವರೆ ಎಂದು ಓ ಹೇಳುತ್ತಾಳೆ ಸಿರಿ......
ಓ......
ಬಾಳಿದವಳು ಬಾಲಕ್ಕೆ ಸಿರೀ......
ನಾರಾಯಣ ಮಗ ಸಿರಿಯೇ......
ಹೋಗಬೇಕಾದರೆ ಏನಾಗಬೇಕು ನಮಗೆ
ಬರಬೇಕಾದರೆ ಏನಾಗಬೇಕು ನಮಗೆ
ನಾವು ಕಟ್ಟಿದ ದೇವಾಲಯ ನಮಗೆ ಏನಾಗಬೇಕು ಎಂದು
ಅಜ್ಜನವರು ಹೇಳಲು......
ಏನು ಅಜ್ಜನವರೆ ಓ ಏನು ಆಗಬೇಕು
ಏನು, ಹೋಗಬೇಕೆಂದು ಯಾಕೆ ಹೇಳುತ್ತೀರಿ ಓ
ನಾವು ಹೋಗಬೇಕೆಂದು ಹೇಳುತ್ತಾಳೆ ಸಿರಿಯೇ......
ನಾರಾಯಣ ಅಕ್ಕನವರೇ ಓ
ಕೊಪ್ಪರಿಗೆ(ನೀರಿಗೆ)ಗೆ ಓ ಬೆಂಕಿ ಹಾಕಿದ್ದೇನೆ ಅಕ್ಕನವರೇ ಓ
ಬಿಸಿನೀರ ಜಳಕ ಆಗೋಣ ಅಕ್ಕನವರೇ ನಾವು
ಮತ್ತೆ ದೇವಸ್ಥಾನಕ್ಕೆ ಹೋಗೋಣ ನಾವೆಂದು ಹೇಳಲು
ದಾರು ಹೇಳಲು ಹೇಳುತ್ತಾರೆ......
ನಾರಾಯಣ ಓ ದಾರು......ಓ......
ಕೊಪ್ಪರಿಗೆಯ ಬಿಸಿನೀರು ಕೊಪ್ಪರಿಗೆಯಲ್ಲೆ ಇರಲಿ......
ಬಡಗಣಕ್ಕೆ ಹೋಗಬೇಕು ಲಂಕೆಲೋಕನಾಡಿಗೆ......
ಮೂಡಣ ನಂದನದಲ್ಲಿ ಕೆರೆ ಉಂಟಂತೆ
ಆ ಕೆರೆಯಲ್ಲಿ ನನಗೆ ಸ್ನಾನಮಾಡಿ ಶುದ್ಧ ಆಗಬೇಕು
ದೇವರಿಗೆ ಹಣ್ಣುಕಾಯಿ (ಮಾಡಿಸಿ)
ಗಂಧಪ್ರಸಾದ ಓ ಹಿಡಿಯಬೇಕೆಂದರು......ಓ......
ಬಡಗಣ ಲಂಕೆಲೋಕನಾಡಿಗೆ ಹೋಗಬೇಕೆಂದರು......
ಸತ್ಯದ ದಂಡಿಗೆಯಲ್ಲಿ ಸರ್ವ ಬಿರುದಾವಳಿಗಳಲ್ಲಿ
ಸಹಸ್ರ ವಾದ್ಯಗಳೊಂದಿಗೆ ಇಂದು ಬಡಗಣ ಲಂಕೆಲೋಕನಾಡಿಗೆ ಹೋಗಿ ಇಂದು

ಗೋಪುರದಲ್ಲಿ ದಂಡಿಗೆ ಇಳಿಸಿದರು ಇಂದು ಹೋಗಿ......
ಮೂಡಣದ ನಂದನದ ಹಿತ್ತಿಲಲ್ಲಿರುವ ತಾವರೆಯ ಕೆರೆಯಲ್ಲಿ ಇಂದು
ಅಡಿಮೊಗವಾಗಿ ಮುಳುಗಿದಳು ಮೇಲ್ಮೊಗವಾಗಿ ತೇಲಿದಳು
ಮೈಲಿಗೆ ಮಾರ್ಪಡಿಸಿದಳು ಮಡಿ ಉಟ್ಟಳು ದೇವರಿಗೆ ಶರಣು (ನಮಸ್ಕಾರ) ಹಾಕಿದಳು ಇಂದು
ಬ್ರಾಹ್ಮಣನಲ್ಲಿ ಹೇಳಿದಳು – 'ಅಯ್ಯೋ ಬ್ರಾಹ್ಮಣಾ ಓ ದೇವರೇ ಬ್ರಹ್ಮರೇ ಬ್ರಾಹ್ಮಣೋ......ಓ......
ಹಣ್ಣುಕಾಯಿ ಮಾಡಿರಿ, ಓ ಗಂಧಪ್ರಸಾದ ಕೊಟ್ಟುಬಿಡಿ ಎಂದಳು......ಓ......
ಇಂದಾದರೋ ಇಂದು ತೆಂಗಿನಕಾಯಿ ಕೊಟ್ಟಳಂತೆ
ನಾಗಕಲ್ಲಿನ ಸಮೀಪ ಹೋದಳಂತೆ ದೇವರಿಗೆ ಪ್ರಸಾದ ಹಾಕಿದಳಂತೆ......
ನಾಗನ ಗಂಧ ಎಂದು ಹೇಳಿದಳಂತೆ, ಇಂದು ಕ್ಷೇಮಕಲ್ಲ ಪಂಜುರ್ಲಿ ಇದ್ದಲ್ಲಿಗೆ ಹೋದಳಂತೆ
ಇಂದು ಕ್ಷೇಮಕಲ್ಲ ಪಂಜುರ್ಲಿಯ ಗಂಧವೆಂದು ಹಾಕಿದಳಂತೆ ಇಂದು......
ಬಡಗಣ ಲಂಕೆಲೋಕನಾಡಿನಿಂದ ಓ ಬರುತ್ತಾರಂತೆ ಸಿರಿ......ಓ......
ಸತ್ಯಮಹಾಲೋಕದ ಸಿರಿ ಬರುತ್ತಾರೆ......
ಇಂದಾದರೋ ಇಂದು ಸತ್ಯಮಹಾಲೋಕದ ಅರಮನೆಗೆ ಬಂದರಂತೆ ಇಂದು ಜೊತೆಜೊತೆಗೆ ಕುಳಿತು ಊಟ ಉಪಚಾರದಲ್ಲಿ
ಊಟ ಗಡದ್ದಾಗಿ ಮಾಡಿದರಂತೇ......
ನಾರಾಯಣ ಓ ನಾರಾಯಣಾ......ಓ......
ದೇವರ ಬೆರ್ಮರೇ ಓ ಒಂದು ನಾರಾಯಣವಂತೇ......
ಊಟ ಮಾಡುತ್ತಾ ಸುಖಕಷ್ಟ ಮಾತನಾಡುತ್ತಾ
ಇರುವ ಸಮಯದಲ್ಲಿ ಇಂದು ಆ ವೇಳೆಯಲ್ಲಿ ಆ ಹೊತ್ತಲ್ಲಿ......ಓ......*
ಬತ್ತಕೇರಿ ಓ ಬಸರೂರ ಕಾಂತಾಳ್ವ ಬರುವ ಚಂದ ನೋಡುತ್ತಾರೆ......
ನಾರಾಯಣ ಅಜ್ಜನವರೆ ಓ
ನಿಮ್ಮ ಮೊಮ್ಮಗ ಓ ನನ್ನ ಗಂಡ
ಬಂದರೆಂದು ಹೇಳು ಹರುಷದ ಒಡಲಾಯಿತಂತೆ ಇಂದು ಮುತ್ತಿನ ನಗುವಾಗಿ ಓ ಸಿರಿ ಹೇಳುತ್ತಾಳೆ......
ಪಿಂಗಾಣಿಯಲ್ಲಿ ಹಾಲು ಗಿಂಡಿಯಲ್ಲಿ ನೀರು ಹಿಡಿದುಕೊಂಡು ಇಂದು
ಎದುರಿಗೆ ಹೋಗುತ್ತಾಳೆ ಓ ಸಿರಿಯೇ ಓ......

* 'ಟಯಿಮುಡು' ಎಂಬುದನ್ನು 'ಸಮಯದಲ್ಲಿ' ಎಂದು ಬದಲಿಸಲಾಗಿದೆ.

ಸತ್ಯಮಹಾಲೋಕದ ಸಿರಿಯಂತೇ......
ಇಂದಾದರೋ ಇಂದು ಗಿಂಡಿಯ ನೀರು ತೆಗೆದು ಆಚೆಗೆ ಇಟ್ಟರಂತೆ
ಇಂದು ಪಿಂಗಾಣಿಯ ಹಾಲು ಕುಡಿದರಂತೆ ಇಂದು ತಟ್ಟೆಯ ಅಡಕೆ ವೀಳ್ಯ ತಿಂದರಂತೆ
ಅಡಕೆ ತಿಂದರಂತೆ ಅಮಲಾದರಂತೆ ಹೊಗೆಸೊಪ್ಪು ತಿಂದರಂತೆ ತಲೆತಿರುಗಿದರಂತೆ
ಇಂದು ಸುಣ್ಣ ತಿಂದು ಉಗ್ರರಾದರು......ಓ......
ಬಸರೂರ ಕಾಂತಾಳ್ವ......
ಇಂದಾದರೋ ಒಟ್ಟೊಟ್ಟಿಗೆ ಕುಳಿತು ಮಾತನಾಡುತ್ತಾ ಇರಲು
ಅಂದಿನ ದಿನಮಾನ ಹೋಗಿ ಮರುದಿನ ಬರಲು ಹೇಳುತ್ತಾರಂತೆ ಇಂದು
ನಾರಾಯಣಾ ನಾರಾಯಣಾ ಅಜ್ಜನವರೆ......ಓ......
ನಾನು ಸಿರಿಯನ್ನು ಕರೆದುಕೊಂಡು ಹೋಗಲು ಬಂದವನೆಂದು ಓ ಕಾಂತಾಳ್ವ ಹೇಳುತ್ತಾನೆ......
ಆಯಿತು ಮದಮಗ ಓ ನೀನು ಕರೆದುಕೊಂಡು ಹೋಗೆಂದು ಓ ಅಜ್ಜವನವರು ಹೇಳಿದರಂತೆ ಓ......
ಅಷ್ಟು ಹೇಳಲು ಸಿರಿ ಇಂದು......
ಅಟ್ಟದಿಂದ ದಂಡಿಗೆ ಇಳಿಸಿದರಂತೆ ಇಂದು ದಂಡಿಗೆಯ ಬೋವಿಗಳನ್ನು ಕರೆಸಿದರಂತೆ ಇಂದು
ಅಟ್ಟದಿಂದ ದಂಡಿಗೆ ಇಳಿಸಿ ಇಂದು ದಂಡಿಗೆ ಸಿಂಗಾರ ಮಾಡಿಸಿದರಂತೆ......
ದಂಡಿಗೆಯಲ್ಲಿ ಇಂದು ಮದುಮಗ ಮದುಮಗಳನ್ನು ಓ
ದಂಡಿಗೆಯ ಮೇಲೆ ಎತ್ತಿ ಕುಳ್ಳಿರಿಸಿದರು ಓ......
ಆರ್ಯಬನ್ನಾರ್ ಓ ಬಿರ್ಮುಮಾಲವರಂತೇ......
ಇಂದಾದರೋ ಇಂದು ಸತ್ಯನಾಪುರದರಮನೆಯಲ್ಲ ಏರಿದ ದಂಡಿಗೆಯಂತೆ
ಇಂದು ಬತ್ತಕೇರಿ ಬಸರೂರಲ್ಲಿ ಹೋಗಿ ನಿಂತಿತಂತೆ ಇಂದು
ದಂಡಿಗೆ ನಿಂತು ಇಂದು ಆರೂವರೆ ಅಂಗಣ ಮೂರೂವರೆ ಅಂಗಳದಲ್ಲಿ
ದೊಡ್ಡ ಅಂಗಳದಲ್ಲಿ ದಂಡಿಗೆ ಇಳಿಸುವಾಗ ಇಂದು
ಎದುರಿಗೆ ಓ ಬರುತ್ತಾರೆ ಅತ್ತೆಯವರು......ಓ......
ಅತ್ತೆಯವರು ಓ ಸಂಕರು ಪೂಂಜೆದೀ......
ಇಂದಾದರೋ ಇಂದು ದಂಡಿಗೆಯಿಂದ ಎತ್ತಿ ಇಂದು
ಚಾವಡಿಯಲ್ಲಿ ಕೊಂಡುಹೋಗಿ ಇಂದು ಮಗ ಸೊಸೆಯನ್ನು ಕುಳ್ಳಿರಿಸಿ ಇಂದು
ನಾರಾಯಣ ಮಗ ಸಿರಿ......ಓ......ಕೇಳಿದ್ದೀಯೆ ನೀನು......ಓ......
ನಿನ್ನ ಅಜ್ಜನವರು ಓ ದಾರು ಏನು ಮಾಡುತ್ತಾರೆ (ಹೇಗಿದ್ದಾರೆ)......
ಸೌಖ್ಯವಾಗಿದ್ದಾರೆಯೇ ಓ ಎಂದು ಕೇಳುತ್ತಾರೆ......

ಇಂದಾದರೋ ಅಂದಿನ ದಿನ ಹೋಗಿದೆಯಂತೆ
ಅಂದಿನ ದಿನ ಹೋಗಿ ಮರುದಿನ ಬಂತಂತೆ ಇಂದು
ಕಾಲದ ಪಾಲಿನಲ್ಲಿ ಓ ವರ್ಷ ದಾಟಿ ಆರು ತಿಂಗಳು ಓ ಕಳೆಯುವಾಗ......
ವರ್ಷ ಆರು ಕಾಲ ಓ ತಿಂಗಳು ದಾಟುವಾಗ ಓ
ಹೆಣ್ಣು ಹೋದಳು ಹೆಂಗುಸಾದಳಂತೆ
ಋತುಮತಿಯಾದಳು ಮುಟ್ಟಾದಳಂತೆ ಇಂದು......
ನನ್ನ ಸೊಸೆ ಓ ಕೇಳಬೇಕೆಂದರು......
ಬತ್ತಕೇರಿ ಓ ಬಸರೂರ ಅರಮನೆಯಲ್ಲಿ......ಓ......
ಮಕ್ಕಳು ಓ ಇಲ್ಲದ ಮನೆಯಪ್ಪಾ ಓ......
ದೇವರು ಬೆರ್ಮರ ಪ್ರೀತಿಯ ಮಗಳೂ......
ಸೊಸೆಯೂ ಆಕೆಯೇ ಮಗಳೂ ಆಕೆಯೇ......ಓ......ದೇವರು ಬೆರ್ಮರೇ......
ಸಂತಾನದ ಫಲ ನಮಗೆ ಇದೆಯೋ ಇಲ್ಲವೋ ದೇವರೇ ಎಂದು ಓ......
ಬತ್ತಕೇರಿ ಬಸರೂರಲ್ಲಿ ಸಂಕಾರು ಪೂಂಜೆದಿ
ಸ್ವಾಮಿ ಬೆರ್ಮರಲ್ಲಿ ಓ ಕೇಳಿಕೊಂಡೂ......
ರಾತ್ರಿ ಹಗಲು ಏಳುರಾತ್ರಿ ಎಂಟು ಹಗಲಲ್ಲಿ
ಭೂಮಿಗೆ ಬೆನ್ನು ಕೊಡಲು ಓ......
ಸಂತಾನವನ್ನು ಬೇಡುತ್ತಾಳೆ ಓ ದೇವರು ಬೆರ್ಮರಲ್ಲೀ......
ಮಕ್ಕಳು ಇತ್ಯಾದಿ ಇಲ್ಲದ ಮನೆಯಲ್ಲಪ್ಪ ಇದೂ
ಸಂತಾನದ ಫಲ ನಮಗೆ ಸಿಗಬೇಕೆಂದು
ಏಳು ರಾತ್ರಿ ಎಂಟು ಹಗಲಲ್ಲಿ ಓ
ಅತ್ತೆಯವರು ಓ ಸಂಕರುಪೂಂಜೆದಿ ಓ ಕೇಳುತ್ತಾರೆ......
ನಾರಾಯಣಾ ಓ ನಾರಾಯಣಾ......
ನಾರಾಯಣಾ......
ವರ್ಷ ಕಳೆದು ಆರು ತಿಂಗಳು ಕಳೆಯುವಾಗಂತೆ ಓ......
ಒಂದಾನೊಂದು ದಿನದಲ್ಲಿ ಓ......
ತಿಂಗಳಾಗಿ ಮುಟ್ಟಾದಳು ಓ ಮಗಳೂ......
ತಿಂಗಳಾಗಿ ಓ ಮುಟ್ಟಾಗುವಾಗ......
ಬಳ್ಳದಲ್ಲಿ ಬಾಗೆ ಗೆರಟೆಯಲ್ಲಿ ಸೀಗೆ
ಮುಂದಿನಿಂದ ಸಂಗೀತ ಹಿಂದಿನಿಂದ ಸಂಗಾತಿ ಇಂದು
ಸಿರಿಗೆ ನೀಡುತ್ತಾರೆ ಅತ್ತೆಯವರು ಓ ಸಂಕಾರುಪೂಂಜೆದಿ......
ಕೆಳಗಿನ ಗುಂಡಿಗೆ ಓ ಹೋಗಬೇಡಿ ಮಗ ಓ

ಕೆಳಗಿನ ಗುಂಡಿ ಅದು ಭೂತಗಳ ಗುಂಡಿಯಂತೆ ಓ
ಮೇಲಿನ ಗುಂಡಿಗೆ ಓ ಹೋಗಬೇಡಿ ಮಗ ಓ
ಮೇಲಿನ ಗುಂಡಿ ಅದು ದೇವರ ಗುಂಡಿಯಂತೆ......
ನಡು ಮಡಿವಾಳರ ಮಾಪು ಕರಿಯವಂತೆ
ಆ ಗುಂಡಿಯಲ್ಲಿ ಸ್ನಾನಮಾಡಿ ಶುದ್ಧ ಆಗಿರೆಂದು
ಹೇಳುತ್ತಾರೆ...... ಓ ಅತ್ತೆಯವರು ಓ ಸಂಕರು ಪೂಂಜೆದಿಯವರು......
ಇಂದಾದರೋ ಇಂದು ಮಡಿವಾಳರ ಮಾಬುಕರಿಯಕ್ಕೆ ಹೋದರಂತೆ ಇಂದು
ಶುದ್ಧಮುದ್ರಿಕೆ ಅದರಂತೆ ಇಂದು ಶುದ್ಧಮುದ್ರಿಕೆ ಆಗಿಕೊಂಡು ಇಂದು
ಹಿಂತಿರುಗಿ ಬಂದರಂತೆ ಇಂದು......
ಒಂದು ಹಿಡಿ ಅಕ್ಕಿ ಹಿಡಿಸಿದರಂತೆ......ಓ...... ಸಿರಿಯ ಕೈಯಲ್ಲೀ......
ಇಂದಾದರೋ ಮಿಂದು ಶುದ್ಧವಾಗಿ ಬರುವಾಗಂತೆ
ಇಕೋ ಮಗ ಸಿರಿಯೇ ಇದೊಂದು ಹಿಡಿ ಅಕ್ಕಿಯನ್ನು ಹಿಡಿದುಕೋ ಇಂದು
ಮಡಿವಾಳರ ಮಾಬುಕರಿಯಕ್ಕೆ ಇದನ್ನು ಹಾರಿಸಿಬಿಡೆಂದು ಓ
ಹೇಳಿದರು ಹೆಂಗಸು......ಓ......ಸಂಕರುಪೂಂಜೆದಿ......
ಇಂದಾದರೋ ಇಂದು ಕೊಟ್ಟ ಅಕ್ಕಿಯನ್ನು
ಅತ್ತೆಗೆ ಏನಾಗಿದೆ ಮಂಕು ಬಡಿದು ಹುಚ್ಚು ಆವರಿಸಿದೆಯೋ ಎಂದಳು ಇಂದು
ಒಂದು ಹಿಡಿ ಅಕ್ಕಿ ಕೊಟ್ಟದ್ದನ್ನು ಸೊಸೆ ಇಂದು ಗುಂಡಿಗೆ ಹಾರಿಸಿಬಿಟ್ಟಳಂತೆ ಇಂದು
ಮೇಲಿನ ಗುಂಡೀ ಓ ದೇವರ ಗುಂಡಿಯಂತೆ ಇಂದು ಕೆಳಗಿನ ಗುಂಡಿ ಓ ಭೂತಗಳ ಗುಂಡಿಗೆ
ನಡುಗುಂಡಿ ಮಡಿವಾಳರ ಮಾಬುಕರಿಯಕ್ಕೆಂದಳು ಓ ನಡುಗುಂಡಿಗೆ......
ಮಡಿವಾಳರ ಮಾಬುಕರಿಯ ಇಂದು
ಅಶುದ್ಧದ (ಮೈಲಿಗೆಯ) ನೀರೆಂದು ಹೇಳಿದಳು ಸಿರಿ ಓ
ಮಡಿವಾಳರ ಗುಂಡಿಗೆ ಹಾರಿಸದೆ ಬಿಟ್ಟಳಂತೆ
ಒಂದು ಹಿಡಿ ಅಕ್ಕಿಯನ್ನು ತೆಗೆದು ಸಿರಿ ಇಂದು
ಮೇಲಿನ ಗುಂಡಿ ದೇವರ ಗುಂಡಿಗೆ ಓ ಹಾರಿಸಿದಳು ಸಿರಿ......
ಇಂದಾದರೋ ಇಂದು ಮಿಂದು ಶುದ್ಧವೆಂದಳು ಇಂದು
ಅಂದಿನ ದಿನ ಹೋಗಿ ಮರುದಿನ ಬಂತು ಇಂದು
ಅತ್ತೆ ಸೊಸೆ ಅಲ್ಲವಂತೆ ಇಂದು ಬತ್ತಕೇರಿ ಬಸರೂರ ಅರಮನೆಯಲ್ಲಿ
ತಾಯಿಮಗಳೆಂದು ನಾಲ್ಕು ಊರು ನಾಲ್ಕು ದೇಶಕ್ಕೆ ಓ ಹೆಸರು ಹರಡಿತಪ್ಪಾ......
ಓ ಸಂಕರುಪೂಂಜೆದಿಗೆ......
ಇಂದಾದರೋ ಇಂದು ಅದೊಂದು ತಿಂಗಳು ಕಳಿಯಿತಂತೆ ಇಂದು

ಮರುತಿಂಗಳು ಬಂತಂತೆ ಇಂದು ಸಿರಿಗೆ
ಇಂದು ತಿಂಗಳಾಗಿ ಮುಟ್ಟು ನಿಂತು ವರ್ಷದ ಬಸಿರು ಬಂತಪ್ಪಾ......ಓ.......ಸಿರಿಗೆ......
ಬಾಳಿದವಳು ಬಾಲಕ್ಕ ಸಿರಿಯೇ......
ಅಷ್ಟು ಹೊತ್ತಿಗೆ ಅಂದಿನ ತಿಂಗಳು ಹೋಗಿದೆ ಇಂದು
ಮರು ತಿಂಗಳು ಬಂತಂತೆ ಇಂದು ಆ ತಿಂಗಳೂ ತುಂಬಿ ಹೋಯಿತು ಇಂದು
ಎರಡು ತಿಂಗಳು ಕಳೆಯಿತು ಸಿರಿಗೆ ಇಂದು ಮೂರು ತಿಂಗಳು ಹಿಡಿಯಿತು ಇಂದು
ಮೂರನೆ ತಿಂಗಳು ಕಳೆದು ನಾಲ್ಕನೆ ತಿಂಗಳು ತುಂಬಲು ಇಂದು
ಸಿರಿಯ ರೂಪ ಬದಲಾಗುತ್ತಾ ಹೋಯಿತಪ್ಪಾ......
ನಾರಾಯಣ ನಾರಾಯಣ......ಓ......
ಏನು ಕಾಂತ ಕಾಂತಾಳ್ವಾ......ಓ......
ಮುಂಜಾನೆ ಹೋದರೆ ಸಂಜೆ ಹಿಂತಿರುಗುತ್ತಿ ಮಗಾ ಓ......
ಸಂಜೆಗೇ ಹೋದರೆ ಮುಂಜಾನೆ ಬರುತ್ತಿ ಕಾಂತಾಳ್ವ ನೀನು......
ಎಲ್ಲಿಗೆ ಹೋದುದು ಎಲ್ಲಿಂದ ಬಂದುದು ಮಗ ನೀನೇ
ಓ ಎಂದು ಓ ತಾಯಿ ಕೇಳಲು......
ತಾಯಿಗೆ ಉತ್ತರ ಓ ಕೊಡುತ್ತಾನೆ ಮಗಾ......
ನಾರಾಯಣ ತಾಯಿಯವರೇ ಓ......
ಎಲ್ಲಿಗೆ ಹೋದದ್ದು ಓ ಎಲ್ಲಿಂದ ಬಂದದ್ದೆಂದು......
ಯಾಕಾಗಿ ಕೇಳುತ್ತೀರಿ ಓ ತಾಯಿಯವರೇ ನೀವೂ......
ನಿಮ್ಮ ಬುದ್ಧಿಯಲ್ಲೇ ಓ ನೀವು ಕೇಳುವುದೋ ಓ
ನಿಮ್ಮ ಸೊಸೆ ಅಂದರೆ ನನ್ನ ಮಡದಿ ಓ ಹೇಳುವುದೋ ಓ......
ಎಂದು ಉತ್ತರ ಓ ಕೊಡುತ್ತಾನೆ ಮಗಾ......
ನಾರಾಯಣ ಓ ಅತ್ತೆಯವರೇ......ಓ......
ಎಲ್ಲಿಗಿ ಹೋಗಿ ಎಲ್ಲಿಂದ ಬಂದರೂ......
ಸತ್ಯ ತಿಳಿದುಹೋದೀತು ಅತ್ತೆಯವರೇ......
ಅನ್ಯಾಯ ಮುಳುಗಿ ಹೋದೀತು ಅತ್ತೆಯವರೇ
ಯಾಕಾಗಿ ಓ ನಿಮ್ಮ ಮಗನಲ್ಲೀ
ಅಂತಹ ಉತ್ತರ ಕೇಳುತ್ತೀರಿ ಅತ್ತೆಯವರೇ ಎಂದು ಓ......
ಸೊಸೆ ಸಿರಿ ಓ ಉತ್ತರ ಓ
ಅತ್ತೆಯವರಿಗೆ ಕೊಡುತ್ತಾಳಪ್ಪಾ......
ಕಲೆಯಿಲ್ಲದ ಮೆಯ್‌ಗೆ ಕಲೆ ಮಾಡಬೇಡಿ ಓ ಗಂಡ ನೀವೂ......
ನಾನು ಯಾಕೆ ಅತ್ತೆಯವರಲ್ಲಿ ಕೇಳುತ್ತೇನೆ ಓ

ನಿಮ್ಮಲ್ಲಿ ಕೇಳುವ ಉತ್ತರವನ್ನು ಓ ನಿಮ್ಮಲ್ಲಿಯೇ ನಾನು
ಕೇಳಿ ಬಿಡುತ್ತಿದ್ದೆನಲ್ಲ ಓ ಗಂಡನೇ ಓ......
ಕಲೆಯಿಲ್ಲದ ಮೆಯ್‌ಮೇಲೆ ಕಲೆ ಮಾಡಬೇಡಿ......
ಆಯಸ್ಸು ಇಲ್ಲದ ಮಾತಿಗೆ ಭವಿಷ್ಯ ನಿರ್ಮಿಸಬೇಡಿ ಎಂದು
ಸಿರಿಯೇ ಉತ್ತರ ಗಂಡನಿಗೆ
ದೂರದಿಂದಲೇ ಕೊಟ್ಟುಬಿಡುತ್ತಾಳಂತೇ......ಓ......
ಇಂದಾದರೋ ಇಂದು ಮೂರು ತಿಂಗಳು ಕಳೆದುಹೋಗಿದೆಯಂತೆ ಸಿರಿಗೆ
ನಾಲ್ಕನೆ ತಿಂಗಳು ತುಂಬಿದೆಯಂತೆ ನಾಲ್ಕನೆ ತಿಂಗಳು ಕಳೆದು ಇಂದು
ಐದನೆ ತಿಂಗಳು ತುಂಬಿ ಬಂತು ಇಂದು ಐದನೇ ತಿಂಗಳು ಕಳೆದು
ಆರನೇ ತಿಂಗಳು ತುಂಬಿ ಬಂದಿದೆ ಸಿರಿಗೇ......
ಆ ಹೊತ್ತನಲ್ಲಿ ಇಂದು ಮುಂಜಾವದ ಹೊತ್ತಲ್ಲಿ ಅತ್ತೆಯವರು ಎದ್ದು
ಹೊರ ಚಾವಡಿಯಲ್ಲಿ ಕುಳಿತುಕೊಂಡು ಇಂದು
ವೀಳ್ಯದ ತಟ್ಟೆ ಹಿಡಿದುಕೊಂಡು ವೀಳ್ಯ ಮೆಲ್ಲುತ್ತಾ ಇರುವಾಗ......
ಇಂದಾದರೋ ಇಂದು ಆರೂವರೆ ಅಂಗಣವಂತೆ ಇಂದು ‘ಮೂರೂವರೆ ಅಂಗಳದಲ್ಲಿ
ಇಂದು
ಬಂಗಾರದ ಗಿಡ್ಡ ಕಸಬರಿಕೆ ಹಿಡಿದುಕೊಂಡು ಇಂದು
ಗುಡಿಸಿಕೊಂಡು ಬೀಸುತ್ತಾ ಹೋಗುವಾಗಂತೆ ಓ ಸಿರೀ
ಅತ್ತೆಯವರು ನೋಡಿದರು......ಓ......
ಅತ್ತೆಯವರು ನೋಡಿದರು (ಬಳಿಗೆ) ಹೋದರು ಓ ಮಗ ಸಿರಿಯೇ......ಓ......
ಕಸಬರಿಕೆ ಹಾಕಿ ಮಗಾ ಇಲ್ಲಿಗೆ ಬಾ ಎಂದು
ಅತ್ತೆಯವರು ಕರೆಯಲು ಓ......
ಬಡಕ್ಕನೆ ಪೊರಕೆ ಹಾಕಿದಳು ಇಂದು ದಿಡಕ್ಕನೆ ಓಡಿ ಬಂದಳಂತೆ ಇಂದು......
ನಾರಾಯಣ ಓ ನಾರಾಯಣ ಅತ್ತೆಯವರೇ......ಓ......
ಯಾಕಾಗಿ ಕರೆದಿರೆಂದು ಕೇಳುತ್ತಾಳೆ......
ನಾರಾಯಣ ಓ ನಾರಾಯಣ ಮಗ ಓ......ಸಿರಿಯೇ
ಬಂದು, ನಾರಾಯಣ
ತಲೆ ತುದಿ ಬಾಗಿತು ಮಗ ನಿನ್ನದು ಮೊಲೆ ತುದಿ ಮಾಸಿತು ತಲೆ ತುದಿ ಬಾಗಿತು ಮಗಾ
ಎಷ್ಟನೆ ತಿಂಗಳು ಹಿಡಿಯಿತು ಮಗ ಎಂದು
ಅತ್ತೆಯವರು ಕೇಳುತ್ತಾರೆ......
ಇಂದಾದರೋ ಇಂದು ಅತ್ತೆಯವರು ಕೇಳುವಾಗಂತೆ ಇಂದು
ಕಾಲು ಕೆರೆಯುತ್ತಾ ಕಣ್ಣಲ್ಲಿ ಕಡುದುಃಖ ದುಃಖಿಸುತ್ತಾಳೆ ಇಂದು ಸಿರಿ

ಏನು ಮಗಾ ನನ್ನಲ್ಲಿ ಉತ್ತರ ಓ ಕೊಡು ಮಗಾ ನೀನು ಓ
ನನ್ನೊಡನೆ ಹೇಳು ಓ ನನ್ನೊಡನೆ ಹೇಳು ಮಗಾ ಎಂದರು......
ಇಂದಾದರೋ ನಿನಗೆ ತಾಯಿಯು ನಾನೇ ಮಗ ಅತ್ತೆಯೂ ನಾನೇ
ನನ್ನಲ್ಲಿ ಹೇಳು ಸಿರಿ ಹೇಳೆಂದರು......
ನಾರಾಯಣ ನಾರಾಯಣ ಸಿರಿಯೇ ಓ......
ನನ್ನಲ್ಲಿ ಯಾಕಾಗಿ ಹೇಳುವುದಿಲ್ಲ ಮಗಾ ನೀನು
ಅಕ್ಕನಂತಹ ಅತ್ತೆಯೂ ನಾನೇ ಮಗಾ ಓ......
ತಾಯಿಯಂತಹ ಅತ್ತೆಯೂ ನಾನೇ
ನನ್ನಲ್ಲಿ ಹೇಳು ಹೇಳೆಂದರು......
ನಾರಾಯಣ ನಾರಾಯಣ ಮಗ ಸಿರಿಯೇ......ಓ......
ನನ್ನಲ್ಲಿ ಹೇಳಲು ನಾಚಿಕೆ ಆಗುವುದಾದರೆ ಓ
ನನ್ನ ಮಗ ಓ ನಿನ್ನ ಗಂಡನಲ್ಲಿ ಹೇಳೆಂದರು......
ಅಷ್ಟು ಹೇಳುವುದನ್ನು ಕೇಳಿದಳಂತೆ ಇಂದು
ನಾರಾಯಣಾ ನಾರಾಯಣ ಅತ್ತೆಯವರೇ ಓ
ಕಳೆದದ್ದು ಐದು ತಿಂಗಳೂ ಅತ್ತೆಯವರೇ
ಇದು ಆರನೇ ತಿಂಗಳು ಎಂದು ಹೇಳಿದಳು ಸಿರೀ......
ಇಂದಿನಿಂದ ಆರು ತಿಂಗಳು ಕಳೆದು
ಏಳು ತಿಂಗಳು ಬಂತು ಅತ್ತೆಯವರೆ ಎಂದು ಹೇಳಿದಳು ಸಿರಿ......
ಅಷ್ಟು ಹೇಳುವುದನ್ನು ಕೇಳಿದರಂತೆ ಇಂದು
ಹರ್ಷದ ಮೆಯ್ಯಾಯಿತು ಮುತ್ತಿನ ನಗುವಾಯಿತಂತೆ ಇಂದು......
ನಾನು ನಂಬಿದಲ್ಲಿಗೇ ಇಂಬು ಉಂಟಪ್ಪಾ......
ದೇವರು ಬೆರ್ಮರು ಜಯವಾಗಿ ಇದ್ದಾರೆಂದರು......ಓ......
ಅತ್ತೆಯವರು ಓ ಸಂಕರುಪೂಂಜೆದೀ......
ಇಂದಾದರೋ ಹೋದರು ಅವರು ವೀಳ್ಯದ ತಟ್ಟೆಯನ್ನು ಕೊಂಡುಹೋಗಿ ಕಿಟಕಿಯಲ್ಲಿ ಇಟ್ಟರಂತೆ
ಮಗ ಮಲಗಿರುವ ಕೋಣೆಗೆ ಹೋದರಂತೇ......
ಮೇಲು ಬಾಗಿಲುವಾಡಕ್ಕೆ ಕೈಕೊಟ್ಟರು ಕೆಳ ಬಾಗಿಲುವಾಡಕ್ಕೆ ಕಾಲು ಕೊಟ್ಟರಂತೆ
ನಾರಾಯಣ ಓ ನಾರಾಯಣ ಕಾಂತಾಳ್ವಾ......ಓ......ನಿನ್ನಾ......
ನಿದ್ದೆ ಬಿಡೆಂದರು......ಓ......ಮಗಾ......ಓ......
ಇಂದಾದರೋ ಇಂದು ನಿನ್ನ ಮದುಮಗಳು ನನ್ನ ಸೊಸೆಯಂತೆ ಇಂದು
ಗರ್ಭಿಣಿಯಾದಳಂತೆ ಇಂದು ಬಯಕೆ ಹಾಕಬೇಕು ಬಾಯಿಯ ಆಸೆ ಕಳೆಯಬೇಕು

ಅಜ್ಜನವರಿಗೆ ತಿಳಿಸಬೇಕು ಓ ನೀನು ಹೋಗಬೇಕೆಂದು ಹೇಳುತ್ತಾರೇ......
ಅಷ್ಟು ಹೇಳುವುದನ್ನು ಕೇಳಿದನಂತೆ ಇಂದು ಬಡ್ಕ ಎದ್ದು ದಿಡ್ಕ ನಿಂತನಂತೆ
ಇಂದು ಮಲಗಿದ್ದ ಹಾಸಿಗೆಯನ್ನು ಮಡಚಿ ಹೊರ ಚಾವಡಿಗೆ ಬಂದನಂತೆ......
ಕಿಟಕಿಗೆ ಕೈಕೊಟ್ಟು ಗಿಂಡಿಯ ನೀರು ತೆಗೆದು ಇಂದು
ಕಣ್ಣಿನ ನಿದ್ರೆ ದೂರಮಾಡಿದನಂತೆ ಇಂದು ಬಾಯಿಯ ವಾಸನೆ ಕಳೆದನಂತೆ ಇಂದು
ಗಿಂಡಿ ಕೊಂಡುಹೋಗಿ ಕಿಟಕಿಯಲ್ಲಿ ಇಟ್ಟನಂತೆ ಇಂದು......
ಏಳು ಅಂತರಗಳ ಯಮದೇವಿ ಗುಡಿ(ಕತ್ತಲ ಕೋಣೆ)ಗೆ ಹೋದನಂತೆ ಇಂದು
ಮಡಕೆಯ ತಂಗುಳನ್ನ ಮರಿಗೆಯ ಉಪ್ಪಿನಕಾಯಿ ತೆಗೆದು
ಬೆಳಗ್ಗಿನ ಹಾಲನ್ನ ಓ ಉಂಡನಂತೇ......ಓ ಮಗ......ಅವನೂ......
ಇಂದಾದರೋ ಇಂದು ಬೆಳಗ್ಗಿನ ಹಾಲನ್ನ ಉಂಡು
ಉಂಡ ಎಂಜಲಿಗೆ ಎಲೆಯಡಕೆ ತಿಂದು ಬಾಯಿಯ ವಾಸನೆ ಕಳೆದನಂತೆ......
ಹೊಗೆಸೊಪ್ಪು ತಿಂದು ಅಮಲಾದನಂತೆ ಇಂದು
ಸುಣ್ಣ ತಿಂದು ಕೆಂಪೇರಿದರು ಇಂದುಉಂಡ ಎಂಜಲಿಗೆ ವೀಳ್ಯ ತಿಂದೂ......
ಇಂದಾದರೋ ಇಂದು ಏಳು ಅಂತರದ ಯಮದೇವಿ ಗುಡಿಗೆ ಹೋದನಂತೆ ಇಂದು
ಹೋಗಿ ಇಂದು ಕಲ್ಲಿನ ಕಲೆಂಬಿ(ದೊಡ್ಡ ಪೆಟ್ಟಿಗೆ)ಯ ಬಾಯಿಬೀಗ ತೆಗೆದನಂತೆ
ತೆಂಕಣ ಮನೆಯ ಸಿರಿಚಾವಡಿಯೊಳಗೆ ಹೋಗಿ ಇಂದು ಕಲ್ಲಪೆಟ್ಟಿಗೆಯ ಬಾಯಿಬೀಗ ತೆಗೆದು ಇಂದು
ಕಚ್ಚೆ ಹಾಕುವ ಬಿಳಿ ವಸ್ತ್ರ ತೆಗೆದು ಇಂದು
ಸೊಂಟದಿಂದ ಕೆಳಗೆ ಕಚ್ಚೆ ಹಾಕಿ ತಯಾರಾದನಂತೆ......ಓ.......ಮಗಾ......
ಓ ಬಸರೂರ ಕಾಂತಾಳ್ವಾ......
ಇಂದಾದರೋ ಇಂದು ತಾಯಿಯಲ್ಲಿ ಬಸರೂರ ಅರಮನೆಯಲ್ಲಿ ಇಂದು
ತಾಯಿಯನ್ನು ಕರೆದನಂತೆ ಇಂದು ಏನು ಹೇಳಬೇಕು ತಾಯಿಯವರೇ ಏನು ಬಿಡಬೇಕು ಓ ಅಜ್ಜನವರಲ್ಲಿ ಎಂದು......
ಕೇಳುತ್ತಾನೆ ಕಾಂತಣಾ......
ಇಂದಾದರೋ ಇಂದು ಯಾರು ಮಗ ಕಾಂತಣ ಕೇಳಬೇಕು ನೀನು
ಇಂದಿನವರೆಗೆ ನೀನು ಮಕ್ಕಳಾಟಿಕೆಯ ಹುಚ್ಚು ಬುದ್ದಿಯ ಮಗ ನೀನು
ಇಂದಿನಿಂದ ಮುಂದಕ್ಕೆ ನೀನು ಒಂದು ಮಗುವಿನ ತಂದೆ ಆದಿಯಲ್ಲವೇ ಮಗ ಕಾಂತಣ ಕೇಳಬೇಕು ಇಂದು......
ಅಜ್ಜನವರಲ್ಲಿ ಹೇಗೆ ಹೇಳಬೇಕು ಹೇಗೆ ಉತ್ತರ ಕೊಡಬೇಕೆಂದು ನನ್ನಲ್ಲಿ ಕೇಳುತ್ತಿಯಲ್ಲವೇ ಎಂದರು ಅತ್ತೆಯವರು......
ಇಂದಾದರೋ ಇಂದು ಅತ್ತೆಯವರು ಹೆಂಗುಸು ಹೇಳುವುದನ್ನು ಕೇಳಿದನಂತೆ ಇಂದು

ಹೋದನಂತೆ ಇಂದು ಬತ್ತಕೇರಿ ಬಸರೂರ ಅರಮನೆ ಹಿಂದಕ್ಕೆ ಬಿಟ್ಟನಂತೆ ಇಂದು
ಸತ್ಯನಾಪುರದರಮನೆಗೆ ಓ ಹೋಗುತ್ತಾನಂತೆ ಮಗ ಅವನು......
ಸತ್ಯನಾರಾಪುರದರಮನೆಯ ಬೈಲುಗದ್ದೆಯ ಮೂಲಕ ಹೋಗುವಾಗಂತೆ ಇಂದು
ದೂರದಿಂದ ಬರುವುದನ್ನು ಓ ಅಜ್ಜನವರು ನೋಡುತ್ತಾರೆ......
ಇಂದಾದರೋ ಅಜ್ಜನವರು ದೂರದಲ್ಲಿ ಬರುವುದನ್ನು ನೋಡಿಯಂತೆ ಇಂದು
ಹರುಷದ ಮೆಯ್ಯಾಯಿತಂತೆ ಅವರಿಗೆ ಮುತ್ತಿನ ನಗುವಾಯಿತಂತೆ
ನನ್ನ ಮೊಮ್ಮಗ ಏನಪ್ಪಾ ಒಬ್ಬನೇ ಬರುತ್ತಿದ್ದಾನೆ ಇಂದು......
ನನ್ನ ಮೊಮ್ಮಗಳು ಸಿರಿ ಏನು ಇಲ್ಲಪ್ಪಾ ಎಂದು ಓ ಕೇಳುತ್ತಾರೆ ಓ ಅಜ್ಜನವರಂತೆ ಓ......
ಅಜ್ಜನವರು ಓ ಆರ್ಯಬನ್ನಾರು ಓ ಬಿರ್ಮುಮಾಲವರು......
ನಾರಾಯಣಾ ಓ ನಾರಾಯಣಾ ಅಜ್ಜನವರೆ......ಓ......
ನನ್ನ ತಾಯಿಯವರು ಓ ಕಳುಹಿಸಿದ್ದಾರೆ......ಓ......
ನಿಮ್ಮ ಮೊಮ್ಮಗಳು ಜೋಕೆಯಾಗಿ ಸುರಕ್ಷಿತವಾಗಿದ್ದಾಳಪ್ಪಾ......
ಸೌಖ್ಯವಾಗಿಯೇ ಇದ್ದಾಳೆಂದು ಓ ಉತ್ತರ ಕೊಡುತ್ತಾನೆ......
ಅಡಿಗೆ ತಲೆ ಬಗ್ಗಿಸಿ ಓ ಕಾಲಿನಿಂದ ನೆಲ ಕೆರೆಯುತ್ತಾ ಇದ್ದಾನಂತೇ
ಏನು ಮಗಾ ಓ ಕಾಂತಾಳ್ವಾ......ಓ......
ಏನೆಂದು ಓ ಅಜ್ಜನವರು ಕೇಳಿದಾಗ......ಓ......
ಒಂದು ಬಾರಿ ಕೇಳುತ್ತಾರೆ ಓ ಅಜ್ಜನವರು......
ಎರಡನೆ ಬಾರಿ ಕೇಳುತ್ತಾರೆ ಓ ಅಜ್ಜನವರು......
ಮೂರು ಬಾರಿ ಓ ಕೇಳುತ್ತಾರೆ......
ಮೂರು ಬಾರಿ ಕೇಳುವಾಗ ಓ ಅಜ್ಜನವರಿಗೆ ಉತ್ತರ ಓ ಕೊಡುತ್ತಾನಂತೆ ಮಗಾ......
ನಿಮ್ಮ ಮೊಮ್ಮಗಳು ಓ ನನ್ನ ಮಡದಿ
ಬಸುರಿ ಓ ಬಯಕೆ (ಸೀಮಂತ) ಮಾಡಬೇಕು
ಬಾಯಿಯ ಆಸೆ ಓ ಕಳೆಯಬೇಕು
ದಿನ ನಿಶ್ಚಯ ಓ ಮಾಡಬೇಕೆಂದೂ ಓ ಹೇಳುತ್ತಾನೆ ಮಗಾ......
ನಾರಾಯಣಾ ಓ ನಾರಾಯಣಾ ಓ......ಮಗಾ......
ದಿನ ಕೇಳಬೇಕಾದರೆ ಏನಾಗಬೇಕು ಮಗಾ ನಮಗೆ ಓ......
ಬಲ್ಯಾಯ ಕೊಟ್ಟಿಗೆ(ಜ್ಯೋತಿಷಿಯ ಮನೆ)ಗೆ ಓ ಹೋಗುವ ನಾವು......ಓ......
ಹಾಲು ಕುಡಿ ಮಗಾ ಊಟ ಮಾಡು ಎಂದು ಓ ಅಜ್ಜನವರು ಹೇಳುತ್ತಾರೆ......
ಇಂದಾದರೋ ಇಂದು ಸತ್ಯನಾಪುರದರಮನೆಯಲ್ಲಿ
ಚಿಕ್ಕಚಾವಡಿ ಸಿದ್'ರ ಮಂಟಪದಲ್ಲಿ ತಾಳೆಗರಿಯ ಚಾಪೆಯಲ್ಲಿ

ಜೊತೆಜೊತೆಗೆ ಇಂದು ಅಜ್ಜನವರು ಹಾಗು ಕಾಂತಾಳ್ವ ಕುಳಿತುಕೊಂಡರಂತೆ ಇಂದು ಹಾಲು ಕುಡಿದರಂತೆ ಇಂದು
ಸುಖಸಂತೋಷದಲ್ಲಿ ಹಾಲು ಕುಡಿದು ಓ......
ಏಳು ಅಂತರದ ಯಮಗುಂಡಿಗೆ ಹೋದರು ಅಜ್ಜನವರು......
ಇಂದಾದರೋ ಹೋಗಿ, ಅಜ್ಜನವರು ಹೋಗಿ ಓ
ಕಲ್ಲಿನ ಕಲೆಂಬಿ(ಪೆಟ್ಟಿಗೆ)ಯ ಮುಚ್ಚಳದ ಬೀಗ ತೆಗೆಯಲು ಕಂಚಿನ ಬೀಗಕ್ಕೆ ಮಿಂಚುವ ಕೀಲಿಕೈ ಹಾಕಿದರಂತೆ......
ಬಾಯಿಯ ಬೀಗ ತೆಗೆದರಂತೆ ಇಂದು......
ಸೆರಗಲ್ಲಿ ಐನೂರು, ಬಟ್ಟೆಯ ತುದಿಯಲ್ಲಿ ಮುನ್ನೂರು ಓ......
ಅಜ್ಜನವರು ಕಟ್ಟಿದರಂತೇ......ಓ......
ಇಂದಾದರೋ ಅಜ್ಜನವರು ಕಟ್ಟಿಯಾಗುವಾಗ ಇಂದು ಓ ಇಂದೂ
ಸತ್ಯನಾಪುರದರಮನೆಯಲ್ಲಿ ಓ ಅಜ್ಜನೂ ಓ ಮೊಮ್ಮಗನೂ......ಓ......
ಜೊತೆಯಾಗಿ ಓ ಹೊರಡುತ್ತಾರೆ......
ಇಂದಾದರೋ ಇಂದು ಸತ್ಯನಾಪುರದರಮನೆಯಿಂದ ಹೊರಟುಕೊಂಡು ಓ
ಹೊರಡುತ್ತಾ ಜೊತೆಯಾಗಿ ಓ ನಗುನಲಿವಿನಲ್ಲಿ......ಓ ಹೋಗುತ್ತಾರಂತೆ......
ಇಂದಾದರೋ ಓ ಹೋಗುತ್ತಾ ಹೋಗುತ್ತಾ ಓ ಹೋಗಿದ್ದಾನಂತೆ......ಓ......
ಜ್ಯೋತಿಷಿಯ ಮನೆಗೆ ಓ ಹೋದರಂತೇ......
ಇಂದಾದರೋ ಜ್ಯೋತಿಷಿಯಲ್ಲಿಗೆ ಇಂದು ಅಜ್ಜನೂ ಮೊಮ್ಮಗನೂ ಹೋಗುವುದನ್ನು ದೂರದಿಂದ
ನೋಡಿದನಂತೆ ಜ್ಯೋತಿಷಿ ಇಂದು ಮೂರುಕಾಲಿನ ಮುಕ್ಕಾಲಿಯನ್ನು ತಂದು ಕೊಟ್ಟನಂತೆ ಇಂದು......
ಮೂರುಕಾಲಿನ ಮುಕ್ಕಾಲಿಯಲ್ಲಿ ಇಂದು ಅಜ್ಜನವರೂ ಮೊಮ್ಮಗನೂ ಕುಳಿತು ಕೊಂಡರು......
ಏನು ಬಂದಿರಿ ಅಜ್ಜನವರೆ ಓ ಏನು ಬಂದಿರೆಂದು ಓ ಕೇಳಲು......
ನಮಗೆ ಓ ಕೇಳಿದೆಯಾ ಬಲ್ಯಾಯಾ (ಜ್ಯೋತಿಷಿಯೇ)......ಓ......
ನಮಗಿಂದು ಶುಭವಾರ ಶುಭದಿನ ಓ ದೊರಕಬೇಕು......
ನನ್ನ ಮೊಮ್ಮಗಳು ಬಸುರಿಯಂತೆ ಓ ಸತ್ಯಮಹಾಲೋಕದ ಸಿರಿ ಬಸುರಿಯಂತೆ
ಆಕೆಗೆ ಬಯಕೆ ಹಾಕಬೇಕು ಓ ಬಾಯಿಯ ಆಸೆ ಕಳೆಯಬೇಕು......ಓ......
ಶುಭದಿನ ಹೇಳಬೇಕೆಂದರು......
ಅಷ್ಟುಹೊತ್ತಿಗೆ ಒಳ್ಳೆಯ ದಿನ ಒಳ್ಳೆಯ ವಾರ ಓ ಹೇಳಿದರಂತೇ ಓ......
ಈ ಗುರುವಾರವಲ್ಲ ಮುಂದೆ ಬರುವ ಗುರುವಾರದಂದು ಒಂಬತ್ತು ಗಂಟೆಯ

ಹೊತ್ತಿಗೆ ಒಂಬತ್ತು ಗಂಟೆ ಒಂಬತ್ತು ಗಳಿಗೆ ಒಂಬತ್ತು ನಿಮಿಷದ ಹೊತ್ತಿಗೆ ಸರಿಯಗಿ ಓ......
ಕೋಳಿ ಬಿಡಬೇಕು, ಹೂಸೀರೆ ಕೊಡಲು ಬೇಳೆ ಓ ಶುಭವೇಳೆ ಎಂದು ಓ ಹೇಳುತ್ತಾನೆ ಬಲ್ಯಾಯಾ (ಜ್ಯೋತಿಷಿ)......
ಇಂದಾದರೋ ಬಲ್ಯಾಯ ಅಷ್ಟು ಹೇಳುವುದನ್ನು ಓ ಕೇಳಿದರು......ಓ......
ಅವಳ ಸಂಬಳ ಓ ಕೊಟ್ಟರು......
ಅವಳ ಸಂಬಳ ಕೊಟ್ಟರಂತೇ ಬಲ್ಯಾಯನಲ್ಲಿಂದ ಹೊರಟು ಬಂದರು ಇಂದು ಓ......
ಕಡೇರಿ ಕಾರ್ಲದ ಓ ತುದಿ ಪೇಟೆಗೇ......
ಹೇಗೂ ಬಂದೆವಲ್ಲ ಮಗ ನಾವು ಬಂದವರು ಹಿಂತಿರುಗುವಾಗಲೇ......ಓ......
ಬಯಕೆಯ (ಸೀಮಂತದ) ಸೀರೆ ಓ ತೆಗೆಯೋಣ......ಓ......
ತೆಗೆಯೋಣವೇ ಎಂದು ಓ ಅಜ್ಜನವರು ಕೇಳುತ್ತಾರೆ......
ಆಯಿತು ಅಜ್ಜನವರೆ, ಬಂದವರು ಹೋಗುವಾಗಲೇ ಜವುಳಿಯೂ ತೆಗೆದುಕೊಂಡು ಹೋಗೋಣ ಓ ಎಂದರಂತೆ......
ಓ ಅಲ್ಲೀ......
ಅಷ್ಟು ಹೊತ್ತಿಗೆ ಜೊತೆಜೊತೆಯಾಗಿ ಜವುಳಿ ಅಂಗಡಿಗೆಂದು ಓ
ಕಡರಿ ಕಾರ್ಲದ ಓ ತುದಿ ಪೇಟೆಗೆ ಓ ಹೋದರು......ಓ......
ಜವುಳಿ ಅಂಗಡಿಗೆ ಹೊಕ್ಕರು......ಓ...... ಜವುಳಿಯ ಧಾರಣೆ ಕೇಳಿದರು......
ಧಾರಣೆ ಕೇಳಲು ಓ ಹೇಳಿದರು......ಓ......
ಎಷ್ಟಯ್ಯಾ ಎಂದು ಕೇಳಿದಾಗ......
ಇಂದಾದರೋ ಓ ಆಕಾಶ ಓ ಸೀರೆಯನ್ನು
ದೇವರು ಬಿರ್ಮೆರಲ್ಲಿ ಓ ಹೇಳಿದರಂತೇ
ಅಜ್ಜನವರು ಇಂದು ಆರ್ಯಬನ್ನಾರು ಬಿರ್ಮುಮಾಲವರು ಅವರು......
ಸತ್ಯಮಹಾಲೋಕದ ಸಿರಿಗೆ (ಸೀಮಂತದ) ಔತಣ ಹಾಕಿ ಬಾಯಿಯ ಆಸೆ ಕಳೆಯಲು ತೆಗೆಯುವ ಸೀರೆ ಇದೂ......
ಅಂಗೈ ತುಂಬುವ ಓ ಹಿಡಿಯೊಳಗೆ ಮುಚ್ಚುವ ಓ
ಉಗುರಿನೆಡೆಯಲ್ಲಿ ನಿಲ್ಲುವ ಪಟ್ಟೆಸೀರೆ ಇದು ಇಂದು ಭೂಮಿಗೆ ಎರಗುವ ಪಟ್ಟೆ
ಆಕಾಶಕ್ಕೆ ಹಾರುವ ಪಟ್ಟೆ, ಕಣ್ಣೀರು ಒರಸುವ ಪಟ್ಟೆಸೀರೆ
ಹಿಡಿ ತುಂಬುವ, ಅಂಗೈಯಲ್ಲಿ ಹಿಡಿಯುವ ಪಟ್ಟೆ
ಕಣ್ಣೀರು ಒರಸುವ ಪಟ್ಟೆ, ಪಟ್ಟೆಗಳಲ್ಲಿ ಮೇಲಾದ ಪಟ್ಟೆಸೀರೆ ಓ
ಆಗಬೇಕೆಂದರು......

ಇದೊಂದು ಅಂಗಡಿಯಲ್ಲಿ ಅದೊಂದು ಇಲ್ಲವಲ್ಲಾ ಅಜ್ಜನವರೇ ಓ ಬಿರ್ಮು ಮಾಲವರಲ್ಲಿ ಹೇಳಿದರು......
ಓ ಬೇರೊಂದು ಮೇಲಿನ ಅಂಗಡಿಗೆ ಹೋದರು......
ಅಲ್ಲಿ ಕೇಳಿದರಂತೆ, ಇಂದು ಸತ್ಯಮಹಾಲೋಕದ ಸಿರಿಗೆ ಇಂದು
ಔತಣ ಹಾಕಿ ಬಾಯಿಯ ಆಸೆ ತೀರಿಸಲು ನಮಗೆ ಪಟ್ಟಸೀರೆ ಆಗಬೇಕು......
ಪಟ್ಟೆಯ ಹೆಸರು ಹೇಳಿರಿ ಬೆರ್ಮುಮಾಲವರೇ ಎಂದರು......
ಪಟ್ಟೆಯ ಹೆಸರಂತೆ ಅಂಗೈಯಲ್ಲಿ ತುಂಬುವ ಪಟ್ಟಿ
ಹಿಡಿಯಲ್ಲಿ ಹಾರುವ (ಹಿಡಿಯುವ?) ಪಟ್ಟಿ ಭೂಮಿಗೆ ಎರಗುವ ಪಟ್ಟಿ
ಆಕಾಶದಲ್ಲಿ ಹಾರುವ ಪಟ್ಟಿಯಂತೆ ಪಟ್ಟಿಯಲ್ಲಿ ಶ್ರೇಷ್ಠ ಪಟ್ಟೆ
ಕಣ್ಣೀರು ಒರಸುವ ಪಟ್ಟೆ ಓ......
ಪಟ್ಟಿಯಲ್ಲಿ ಶ್ರೇಷ್ಠವಾದ ಪಟ್ಟೆ ಓ ಆಗಬೇಕೆಂದರು......
ಇಂದಾದರೋ ಪಟ್ಟೆಯಲ್ಲಿ ಮೇಲಾದ ಪಟ್ಟಿಯನ್ನು ತೆಗೆದರಂತೆ ಇಂದು......
ತ್ರಾಸಿನಲ್ಲಿ ತೂಕ ಮಾಡುವಾಗ ಓ ಹೇಳಿದರಂತೆ ಓ
ನಾರಾಯಣಾ ಓ ನಾರಾಯಣಾ ಬಿರ್ಮುಮಾಲವರೇ......ಓ......
ಸತ್ಯಮಹಾಲೋಕದ ಸಿರಿಗೆ ತೆಗೆಯುವ ಪಟ್ಟೆ ಓ
ವರಣ್‌ನಲ್ಲಿ (ವರಹದಲ್ಲಿ) ಓ ತೂಕ ಮಾಡುವಂತಹದ್ದು......
ಒಂದು ತುದಿಯಲ್ಲಿ ವರಹ ತೂಗುವುದು
ಒಂದು ತುದಿಯಲ್ಲಿ ಓ ಪಟ್ಟಿ ತೂಗುವುದೆಂದು ಹೇಳಿದನು ಕೊಂಕಣೀ......
ಅಷ್ಟಾಗುವಾಗ ಇಂದು ಸೆರಗಿನಿಂದ ಐನೂರು ತೆಗೆದರಂತೆ
ಸೆರಗಿನ ತುದಿಯಿಂದ ಮುನ್ನೂರು ತೆಗೆದರಂತೆ ಇಂದು ಓ ಪಟ್ಟೆ ತೂಕ ಮಾಡಿದರಂತೆ...
ಓ......
ಪಟ್ಟಿಯನ್ನು ಓ ಗಂಟು ಕಟ್ಟಿದರು......ಓ......
ಕಣ್ಣೀರು ಒರಸುವ ಓ ಪಟ್ಟಿಯನ್ನು ತೆಗೆದರು......
ಅಲ್ಲಿಂದ ಹಾಗೆ ಓ ಬಂದರು......ಓ......
ಮಲ್ಲಿಗೆಯ ಬಾಯಿ ಓ ಇರುವಲ್ಲಿಗೆ ಬಂದರು......
ನಾರಾಯಣ ಓ ನಾರಾಯಣ......ಬಾಯೀ......ಓ......
ಇಂದೇ ನಮಗೆ ಓ ಸತ್ಯಮಹಾಲೋಕದ ಸಿರಿಗೇ ಓ ಮಲ್ಲಿಗೆಯ ಚೆಂಡಾಗಬೇಕು......
ಔತಣ ಹಾಕಿ ಬಾಯಿಯ ಆಸೆ ತೀರಿಸುವ ಓ ಮಲ್ಲಿಗೆ
ಮಲ್ಲಿಗೆಯ ಓ ಚೆಂಡು (ಮಡಚಿಟ್ಟ ಮಲ್ಲಿಗೆ ಹೂವಿನ ಹಾರ) ಕೊಡುವಾಗ ವರಹ ಕೊಟ್ಟರು ಮಲ್ಲಿಗೆಚೆಂಡಿನ ಅಟ್ಟಿಗೆ ಕೈಕೊಡುವಾಗ

ವರಹಕ್ಕೆ ಕೈಕೊಡುವಾಗ ಹೇಳುತ್ತಾಳೆ ಓ......
ಇದೆರಡು ಚೆಂಡುಮಲ್ಲಿಗೆ ಓ
ಹೆಚ್ಚಾದ ಮಲ್ಲಿಗೇ ಓ ಇದು ಓ
ಸಿರಿಗೆ ಮುಡಿಸಿರಿ ಅಜ್ಜನವರೇ ಓ
ಮಗು ಬಾಲಕ್ಕೆ ಸಿರಿಗೆ ಎಂದಳೂ......ಓ......
ಅಷ್ಟು ಹೊತ್ತಿಗೆ ಇಂದು ನಾರಾಯಣ ನಾರಾಯಣ ಮಗ ಕಾಂತಾಳ್ವಾ......ಓ......
ಚಪ್ಪರ ಎಲ್ಲ ಹಾಕಿಸು ಮಗ ಓ......
ಈ ಕಡೆಯಿಂದ ನಾನು ಹೋಗುತ್ತೇನೆ ಮಗ ಓ......
ಆಳುಗಳನ್ನು ಕರೆದುಕೊಂಡುಹೋಗು......ನಾನು......
ಇನ್ನ ಮುಂಡೇರು ಬೋಳ ಬೊಳ್ಮಾನ ಕಾಪು ಕಡಂದಲೆ
ಮುಲ್ಕಿ ಸೇರಿ ಒಂಬತ್ತು ಮಾಗಣೆ ಬಂಗರ ಬೆಟ್ಟು ಬೊಳಿಯಬೆಟ್ಟು ಓ
ಕಕ್ಕೆಬೆಟ್ಟು ಕಾರಿಬೆಟ್ಟು ಓ ಕಾಳು ನಾಯಕನ ಮನೆಗೇ
ಹನ್ನೆರಡು ಮಾಗಣೆ ಓ ಹನ್ನೆರಡು ಬರ್ಕೆ ಗುತ್ತುವಿಗೆ......ಓ......
ನಾನು ಹೇಳಿಕೆ ಕೊಡುತ್ತಾ ಹೋಗುತ್ತೇನೆ ಎಂದರು ಅಜ್ಜನವರು......
ಓ ಅಜ್ಜನವರು ಆರ್ಯಬನ್ನಾರು ಬಿರ್ಮುಮಾಲವರು......
ನಾರಾಯಣಾ ನಾರಾಯಣಾ ಓ......ಕಾಂತಾಳ್ವಾ......
ನೀನು ನಿನ್ನ ಅರಮನೆಗೆ ಈ ಕಡೆಯಿಂದಲೇ ಹೋಗು ಮಗಾ......
ನಾನು ಈ ಕಡೆಯಿಂದ ಹೋಗುತ್ತೇನೆ......
ಮುಲ್ಕೆ ಸೇರಿಸಿ ಒಂಬತ್ತು ಮಾಗಣೆಗೆ ನಾನು ಹೇಳಿಕೆ ಕೊಟ್ಟು ಹೋಗುತ್ತೇನೆ ಮಗಾ......
ಜಾಗ್ರತೆಯಾಗಿ ಸುರಕ್ಷಿತವಾಗಿ ಅರಮನೆಗೆ ಹೋಗು ಮಗಾ......
ಪಟ್ಟೆಸೀರೆಯ ಗಂಟನ್ನು ಓ ನೆಲದಲ್ಲಿ ಇಡಬೇಡ ಓ
ಕಲ್ಲಿನ ಕಲೆಂಬಿ (ಪೆಟ್ಟಿಗೆ)ಯಲ್ಲಿ ಕೊಂಡುಹೋಗಿ (ಇಟ್ಟು) ಬೇಗ ಹಾಕಿಡು ಮಗಾ......
ಓ ಮನುಷ್ಯರ ಕಣ್ಣಿಗೆ ಓ ತೋರಿಸಬೇಡ......ಓ......
ಕಾಂತಾಳ್ವಾ ಎಂದು ಹೇಳಿದರಜ್ಜನವರು......
ಆಯಿತು ಅಜ್ಜನವರೆ ಓ ಇಂದಿನವರೆಗೆ ಓ ಮಕ್ಕಳಾಟಿಕೆ, ಹುಡುಗ (ಹುಚ್ಚು) ಬುದ್ಧಿ ಆದರೂ ಅಜ್ಜನವರೆ......
ನಾನು ಇಂದು ಜಾಗ್ರತೆಯಾಗಿಯೇ ಅರಮನೆಗೆ ಹೋಗುತ್ತೇನೆ ಓ ಎಂದನು ಕಾಂತಾಳ್ವ......
ಅಜ್ಜನವರು ಒಂದು ದಾರಿಯಲ್ಲಿ ಸತ್ಯನಾಪುರದರಮನೆಗೆ ಬರುತ್ತಾರೆ ಓ
ಬಸರೂರ ಕಾಂತಾಳ್ವ ಇಂದು ಬರುವಾಗ......ಓ......

ಕಡೆರಿ ಕಾರ್ಕಳದಲ್ಲಿ ತುದಿ ಪೇಟೆಯಲ್ಲಿ ಬರುವಾಗ ಓ......
ಮಧ್ಯದ ಪೇಟೆಯಲ್ಲಿ ಇದ್ದಾಳೆ ಓ ಸೂಳೆ ಸಿದ್ದು......ಓ......
ಕಣ್ಣಸನ್ನೆಯಲ್ಲಿ ಓ ಕರೆಯುತ್ತಾಳೆ......ಓ......
ಸೆರಗನ್ನೇ ಓ ಹಾರಿಸಿ ಕರೆಯುತ್ತಾಳೆ......ಓ......
ಹೋಗುವಾಗ ಓ ಬರುತ್ತೇನೆ ಸೂಳೆ ಸಿದ್ದೂ ಓ......
ಬರುವಾಗ ಓ ಬರುತ್ತೇನೆ......
ಹೋಗುವಾಗ ನನ್ನ ಅರಮನೆಗೆ ಓ ಹೋಗಿ ಹೊಕ್ಕುಬಿಡುವೆನೆಂದರು......
ನಾರಾಯಣ ಗಂಡಸೇ ನೀವು ಓ
ಬಂಟಮಗ ಬಾರಗನಲ್ಲವೇ ಓ ಸೆಟ್ಟಿಮಗ ಓ ಸೇನವ ಅಲ್ಲವೇ......
ಹೋಗುವಾಗ ಓ ಬನ್ನಿ ಮಾನ್ಯರೇ ಎಂದು ಸಿದ್ದು ಕರೆಯುತ್ತಾಳೆ......
ಒಂದಲ್ಲ ಓ ಎರಡು ಬಾರಿ ಕರೆಯುವಾಗಲೂ ಓ......
ಮೂರುಬಾರಿ ಕರೆಯುವಾಗಲೂ ಹೋಗುವುದಿಲ್ಲ, ನಾಲ್ಕನೆ ಬಾರಿ ಓ ವೀಳ್ಯದೆಲೆಯಲ್ಲಿ ಓ ಲಾಲಿಸಿದಳು......
ನಾರಾಯಣ ಗಂಡುಸೇ ಬನ್ನಿಯಪ್ಪ ಗಂಡುಸೇ
ಮೇಲುಮಾಳಿಗೆಗೆ ಮಲಗುವ ಮಂಚಕ್ಕೆ ಓ ಬನ್ನಿಯೆಂದಳೂ......
ಇಂದು ಬಸರೂರ ಕಾಂತಾಳ್ವನಂತೆ ಇಂದು ಮೇಲುಪ್ಪರಿಗೆಗೆ ಹೋದನಂತೆ
ಮಲಗುವ ಮಂಚದಲ್ಲಿ ಕುಳಿತುಕೊಂಡರಂತೆ ಇಂದು ಒಂದು ಗಿಂಡಿ ಹಾಲು ತಂದು ಕೊಟ್ಟಳು ಓ ಸೂಳೆ ಸಿದ್ದು......
ಕೊಟ್ಟ ಹಾಲನ್ನು ಓ ತೆಗೆದರು ಕಾಂತಾಳ್ವರು......ಓ......ಕುಡಿದರಂತೇ......
ಓ ಕಣ್ಣಿಗೆ ನಿದ್ದೆ ಓ ಆವರಿಸಿತು......
ಸೂಳೆ ಸದ್ದುವಿನ ಮಡಿಲಿಗೆ ತಲೆ ಇಟ್ಟು ಮಲಗಿದ ಕಾಂತಾಳ್ವನಿಗೆ
ಕಣ್ಣಿಗೆ ನಿದ್ದೆ ಆವರಿಸಿರುವುದನ್ನು ಕಂಡಳಂತೆ ಸೂಳೆ ಸಿದ್ದು
ತಲೆಯನ್ನು ಎತ್ತಿ ಓ ಮಂಚದಲ್ಲಿ ಇರಿಸಿದಳು......ಓ......
ಕಟ್ಟು ಬಿಚ್ಚಿದಳಂತೆ ಕಟ್ಟು ಬಿಚ್ಚಿದಾಗ ಕಾಣಿಸುತ್ತದೆಯಂತೆ
ಹರುಷದ ಮೆಯ್ ಮುತ್ತಿನ ನಗುವಾಯಿತಂತೆ ಇಂದು
ಕಟ್ಟಿನಿಂದ ಸೀರೆಯನ್ನು ತೆಗೆದಳು ಓ ಸೂಳೆಸಿದ್ದೂ......
ನಿರಿಗೆ ಹಾಕಿದಳು ಓ ಉಟ್ಟಳು......
ಚಂಡಿನ (ಮಡಚಿಟ್ಟ) ಮೊಗ್ಗುಮಲ್ಲಿಗೆ ತೆಗೆದಳಂತೆ ಇಂದು ತಲೆ ಬಾಚಿದಳಂತೆ ಇಂದು ತಲೆಗೇ ಓ ಹೂ ಮುಡಿದಳು......ಓ......
ಕಾಂತಾಳ್ವ ಮಲಗಿದಲ್ಲಿಗೇ ಮುಖದ ಮೇಲೆ ಮುಖವಿರಿಸಿದಳು......
ನಾರಾಯಣ ಓ ನಾರಾಯಣ ಕಾಂತಾಳ್ವರೇ......ಓ......

ಅಕ್ಕನವರು ಚಂದವೇ ಓ ನಾನು ಚಂದವೇ......ಓ......
ನೋಡಿರಿ ಎಂದು ಹೇಳಿದಳಲ್ಲಾ ಸೂಳೆಸಿದ್ದು......
ಕಣ್ಣು ಬಿಟ್ಟು ನೋಡುವಾಗಂತೆ......ಓ......
ಸಿದ್ದು ಸೀರೆ ಉಟ್ಟು ಮಲ್ಲಿಗೆಯ ಜಲ್ಲಿ ಬಿಟ್ಟಿದ್ದಾಳೆ......
ನಾರಾಯಣ ಓ ನಾರಾಯಣ ಸೂಳೆಸಿದ್ದೂ......ಓ......
ಆಳನ್ನು ಕೊಂದೆ ಓ ಬ್ರಹ್ಮಹತ್ಯೆ ಮಾಡಿದೆಯಲ್ಲಾ......ನನ್ನನ್ನು......
ನನ್ನ ಮಾನ ತೆಗೆದ ಓ ಮರ್ಯಾದೆ ತೆಗೆದೆಯಲ್ಲಾ ಎಂದರು......
ಬಡಕ್ಕನೆ ಎದ್ದರು ದಿಡಕ್ಕನೆ ಕುಳಿತರಂತೆ ಇಂದು ಉಟ್ಟ ಸೀರೆಯನ್ನು ಕಳಚಿಸಿದರು ಓ...
ಮಡಕೆ ಮಡಚಿದರು ಓ......
ಮಡಿಕೆ ಮಡಚಿದರು ಓ ಗಂಟು ಕಟ್ಟಿದರು
ಚೆಂಡು ಮಲ್ಲಿಗೆಯನ್ನೂ ಹಿಡಿದುಕೊಂಡರು ಓ......
ಗಂಟುಕಟ್ಟೆ ಓ ಹಿಡಿದುಕೊಂಡು ಬಂದರು ಓ......
ತಾಯಿಯವರು ಇಂದು ಬೆಳಗ್ಗಿನ ಹೊತ್ತಿಗೇ ಹೊರಟುಹೋದವ ಕಾಂತಾಳ್ವ
ಏನು ಹಿಂತಿರುಗಿ ಬರಲಿಲ್ಲ, ಯಾಕೆ ತಡವಾಯಿತೆಂದು ಓ ದಾರಿ ನೋಡುತ್ತಾ......ಓ......
ಮಧ್ಯಾಹ್ನದ ಹೊತ್ತಿನವರೆಗೆ ಅತ್ತೆಸೊಸೆಯರಿಬ್ಬರೂ
ದಾರಿಗೆ ಕಣ್ಣು ಓ ಬೀದಿಗೆ ದೃಷ್ಟಿ ಓ ಹಾಯಿಸಿದರು......
ಮಧ್ಯಾಹ್ನದ ಹೊತ್ತು ದಾಟಿದ ಅನಂತರ ದಾರಿಯ ಕಣ್ಣು ತೆಗೆದಳು ಸಿರಿ
ಬೀದಿಯಿಂದ ದೃಷ್ಟಿ ತೆಗೆದಳು......ಓ......ಅಕೆಯ ಕೆಲಸ ಮಾಡುತ್ತಾ
ಒಳಗೆ ಅಡ್ಡಾಡುವೆಡೆಯಲ್ಲಿ ಅಡ್ಡಾಡುತ್ತಾ ಓ ಇದ್ದಾಳಪ್ಪಾ......
ನಾರಾಯಣ ಕಾಂತಾಳ್ವ ಇಷ್ಟು ಹೊತ್ತು ಯಾಕೆ ಆಯಿತು, ಏನು ಅಡೆತಡೆಯಾಯಿತು
ಎಂದು ಓ ತಾಯಿಯವರು ಕೇಳಿದರು......
ತಾಯಿಯವರು ಕೇಳಲು ಇಂದು ಓ ತಾಯಿಯವರಂತೆ ಇಂದು
ಅಜ್ಜನವರು ನಾನೂ ಬಲಿಮೆಯವನ (ಜ್ಯೋತಿಷಿಯ) ಕೊಟ್ಟಿಗೆಗೆ ಹೋಗಿದ್ದೆವು......
ಅಲ್ಲಿ (ಶುಭ)ದಿನ ನೋಡಿದೆವು
ಜವುಳಿ ಅಂಗಡಿಗೆ ಹೋಗಿ ಜವುಳಿ ತೆಗೆದುಕೊಂಡು ನಾವು ಬಂದದ್ದೆಂದು ಹೇಳಿದ
ಇಂದು
ಕಲ್ಲಿನ ಕಲೆಂಬಿ(ಪೆಟ್ಟಿಗೆ)ಯ ಬಾಯಿಯ ಬೀಗ ತೆಗೆದನಂತೆ ಇಂದು
ಕಂಚಿನ ಬೀಗಕ್ಕೆ ಮಿಂಚುವ ಕೀಲಿಕೈ ಓ ಹಾಕಿದರು......ಓ......
ಬಟ್ಟೆಯ ಗಂಟನ್ನು ಪೆಟ್ಟಗೆಯೊಳಗಿಟ್ಟು ಬೀಗ ಹಾಕಿ ಬಂದೋಬಸ್ತು ಮಾಡಿಟ್ಟರು......
ಒಕ್ಕಲು ಮಕ್ಕಳನ್ನು ಓ ಕರೆಸಿದ ಕಾಂತಣಾ......ಓ......
ವೀಳ್ಯದೆಲೆಯಲ್ಲಿ ಹನಿ ಚಪ್ಪರ......ಓ......

ಕಬ್ಬು ಕಡಿದು ಕಬ್ಬಿನಲ್ಲಿ ಕಂಬ ಓ ಹಾಕಿಸಿದನು......
ಹಿಂಗಾರದಲ್ಲಿ ಓ ತಡಿಕೆಯೆಂದು ಓ ಕಟ್ಟಿಸಿ......ಓ......
ಲಾವಂಚ(ಮುಡಿವಾಳ)ದಿಂದ ಅಲ್ಲಲ್ಲಿ ಕಟ್ಟು ಹಾಕಿಸಿದ......
ಅಚ್ಚುಬೆಲ್ಲದಿಂದ ಒಲೆ ಹಾಕಿಸಿದ......
ಓಲೆಬೆಲ್ಲದಿಂದ ಒತ್ತು ಕೊಡಿಸಿ......
ಗುಬ್ಲು ಗದ್ದಲದಲ್ಲಿ......ಓ......
ಚಪ್ಪರ ಓ......ಹಾಕಿಸಿದಾ......
ಅಂದಿನ ದಿನ ಓ ಹೋಗಿದೆಯಂತೇ......
ಮತ್ತೆ ಮರುದಿನ ಓ ಆಗುವಾಗ ಇಂದು ಬಸರೂರ ಕಾಂತಾಳ್ವರ ಅರಮನೆಯಲ್ಲಿ
ಓ ಸಭೆ, ಸಾವಿರ ಆಳು ಓ ಸೇರಿದೇ......
ಒಂಬತ್ತು ಗಂಟೆಯ ಓ ಹೊತ್ತಿಗೇ ಓ......
ಸತ್ಯನಾಪುರದರಮನೆಯಲ್ಲಿ ಸತ್ಯದಂಡಿಗೆ ಸರ್ವಬಿರುದಾವಳಿ ಸಹಸ್ರ
ವಾದ್ಯವಿನೋದಗಳೊಂದಿಗೆ ಓ
ಅಜ್ಜನವರು ಓ ಬರುತ್ತಾರಂತೆ......
ಅಜ್ಜನವರು ಓ ಬಂದರಂತೆ ನೆಂಟರು ಬಂದರಂತೆ
ಹಾಕಿರುವ ಚಪ್ಪರದೊಳಗೆ ಇಂದು ನೆಂಟರನ್ನು ಬರಮಾಡಿಕೊಂಡರಂತೆ......
ಬಂದ ನೆಂಟರಿಗೆ ಇಂದು ಬೆಲ್ಲನೀರು ಕೊಟ್ಟರಂತೆ
ಚಾಪೆ ಹಾಕಿಸಿದಂತೆ ಇಂದು ಕುಳಿತುಕೊಳ್ಳಿಸಿದರೂ......
ಅಜ್ಜನವರು ಓ ಬಂದರಂತೆ ಒಳಗಿನ ಚಾವಡಿಗೆ
ನಾರಾಯಣ ಓ ನಾರಾಯಣ ಕಾಂತಾಳ್ವಾ......
ವೇಳೆ ಬಂತು ಕಾಲ ಹೋಗುತ್ತದೆ ಓ......
ಕೋಳಿ ಬಿಡುವ, ಹೂ ಮತ್ತು ಸೀರೆ ಕೊಡುವ ವೇಳೆ ನಮಗೆ ಬಂತೆಂದರು......
ಅಷ್ಟು ಹೊತ್ತಿಗೆ ಇಂದು ಕಾಂತಾಳ್ವನಂತೆ ಇಂದು
ಏಳು ಅಂತರಗಳ ಯಮದೇವಿ ಗುಡಿ ಹೊಕ್ಕನಂತೇ......
ಕಲ್ಲಿನ ಕಲೆಂಬಿ(ಪೆಟ್ಟಿಗೆ)ಯ ಓ ಕಮಚಿನ ಬೀಗಕ್ಕೆ ಮಿಂಚುವ ಕೀಲಿಕೈ ಹಾಕಿ ಓ......
ಬಾಯಿಬೀಗ ತೆಗೆಸಿ ಇಂದು......
ಜವುಳಿಯ ಗಂಟು ಓ ಹಿಡಿದುಕೊಂಡು ಓ ಬರುತ್ತಾನಂತೆ ಕಾಂತಣ......
ಓ ಬಸರೂರ ಕಾಂತಾಳ್ವ......
ಇಂದಾದರೋ ಇಂದು ಕಾಂತಾಳ್ವ ಬಂದು ಚಪ್ಪರಕ್ಕೆ ಬರುವಾಗ ಇಂದು ಓ......
ಅಡ್ಕ(ಮೈದಾನ) ಅಡಕೆಸಸಿಯ ಹಾಳೆಹಿಂಗಾರ ಓ ತೆಗೆಸಿದರಂತೆ......
ಅಡಕೆಯ ಹೀಚುಗಳಿರುವ ಹಾಳೆಹಿಂಗಾರ ತೆಗೆಸಿ ಬಂಗಾರದ ಹರಿವಾಣದಲ್ಲಿ

ಬಂಗಾರದ ಹರಿವಾಣದಲ್ಲಿ ಹಾಳೆಹಿಂಗಾರವಂತೆ, ಕಟ್ಟಿನಿಂದ ತೆಗೆದ ಪಟ್ಟೆಸೀರೆಯಂತೆ
ಮಲ್ಲಿಗೆಚೆಂಡು ಹಿಡಿದು ಓ ಅತ್ತೆಯವರು ನಿಂತಿದ್ದಾರಂತೇ......
ಅಷ್ಟು ಹೊತ್ತಿಗೆ ಇಂದು ಓ ಕೋಳಿ ಬಿಡಲು ಇಂದು ಓ ಅಜ್ಜನವರು ಓ......
ಕೋಳಿಮರಿ ಓ ಕೊಂಡುಹೋದರಂತೆ ಇಂದು ಅಜ್ಜನವರು ಬಿಡಿಸಿದರಂತೆ......
ಇಂದು ಕೆಳ ಭಾಗದ ಓ ಪಾಲವರ ಹೆಣ್ಣುಗಳಲ್ಲಿ......
ಪಾಲವರ ಹೆಣ್ಣುಗಳು ಓ ಬಂದರಂತೆ ಇಂದು ನಾಲ್ಕು ಜನ ಹೆಣ್ಣುಗಳು......
ಹೆಣ್ಣುಗಳು ಬಂದು ಓ ಇಂದು ವೇಳೆ ಬರುವಾಗ ಓ ಕಾಲದಲ್ಲಿ......
ಅಷ್ಟು ಹೊತ್ತಿಗೆ ಗಂಟುಬಿಡಿಸಿ ಓ ಹೂಸೀರೆ ಕೊಡುವಾಗ......ಓ......
ಮುಡುಪಡುವಾಗಿ ಓ ಸಿರಿಯನ್ನು ನಿಲ್ಲಿಸಿದ್ದಾರೆ......
ಅತ್ತೆಯವರು ಸೀರೆ ಕೊಡುವಾಗ ಓ ಬಂಗಾರದ ಹರಿವಾಣದಲ್ಲಿ ಓ ಸೀರೆ ರವಿಕೆ ಕೊಡುವಾಗ......
ಸಿರಿ ಕೈ ಕೊಡು(ತೆಗೆದುಕೊಳ್ಳು)ವುದಿಲ್ಲಪ್ಪಾ......
ನಾರಾಯಣ ಮಗ ಸಿರಿಯೇ ಓ ಕೊಟ್ಟ ಸೀರೆಗೆ ಕೈ ಕೊಡು ಮಗಾ......
ಇತ್ತ ಒಡ್ಡಿ(ಹಿಡಿ)ದಾಗ ಸಿರಿ ಅತ್ತ ತಿರುಗುತ್ತಾಳೆ......
ಅತ್ತೆ ಒಡ್ಡಿ(ಹಿಡಿ)ದಾಗ ಸಿರಿ ಇತ್ತ ತಿರುಗುತ್ತಾಳೆ......ಓ......
ಬೇಡ ಅತ್ತೆಯವರೇ ಓ......ನಾರಾಯಣ ಅತ್ತೆಯವರೇ......ಓ......
ಆ ಸೀರೆ ರವಿಕೆ ಓ ನನಗೆ ಬೇಡ......
ಏನು ಮಗ ಸಿರಿಯೇ, ಓ ಅಷ್ಟು ಹೊತ್ತಿಗೆ ಹೇಳುತ್ತಾರಂತೆ ಅಜ್ಜನವರು ಆರ್ಯ ಬನ್ನಾರು ಓ ಬಿರ್ಮುಮಾಲವರು......
ನಾರಾಯಣ ಮಗ ಸಿರಿಯೇ ಕೇಳಿದಿಯೋ ಮಗಾ
ಗಂಡನ ಮನೆಯ ಸೀರೆ ಔತಣ ಹಾಕಿ ಬಾಯಿಯಾಸೆ ಕಳೆಯಲು ತೆಗೆದ ಪಟ್ಟೆಸೀರೆ ಮಗಾ......
ಸ್ವೀಕರಿಸಬೇಕೆಂದು ಕೇಳಿದೆಯಾ ಸಿರಿಯೇ......
ನಾರಾಯಣ ಅಜ್ಜನವರೆ, ಒಂದು ಹೇಳಿದರೆ ಕಡಮೆಯಾದೀತು, ಎರಡು ಹೇಳಿದರೆ ಹೆಚ್ಚಾದೀತಲ್ಲವೇ ಅಜ್ಜನವರೆ......
ಏನು ಮಾಡಬೇಕು ಅಜ್ಜನವರೆ......
ನಾರಾಯಣ ಓ ನಾರಾಯಣ ಅತ್ತೆಯವರೇ......ಓ......
ನನಗೆ ಯಾಕಾಗಿ ನೀವು ಸೀರೆ ಕೊಡುತ್ತಿದ್ದೀರಿ......
ಕಡೆರಿ ಕಾರ್ಕಳದ ಸೂಳೆಸಿದ್ದು ಉಟ್ಟ ಮೈಲಿಗೆ ಸೀರೆಯನ್ನು ನಾನು ಉಡಲಾರೆ......
ನಾನು ಕೈಕೊಳ್ಳಲಾರೆ ಅತ್ತೆಯವರೇ......
ಸತ್ಯನಾಪುರದರಮನೆಯಲ್ಲಿ ಓ ಬರ ಬರಲಿಲ್ಲ ನನಗೆ ಓ......

ಬಸರೂರ ಅರಮನೆಯಲ್ಲಿ ಓ ಬರ ಬಂದರೂ ಓ......
ತಂದೆ ಹುಟ್ಟಿಸಲಿಲ್ಲ ತಾಯಿ ಹೆರಲಿಲ್ಲ ನೆತ್ತರಲ್ಲಿ ಹುಟ್ಟಲಿಲ್ಲ ನೀರಲ್ಲಿ ಬೆಳೆಯಲಿಲ್ಲ ಅತ್ತೆಯವರೇ......
ಗಾಳಿ ಗೆಲ್ಮೆಯ ಮಗಳಿಗೇ ಓ......
ಸೂಳೆಸಿದ್ದ ಉಟ್ಟ ಓ ಮೈಲಿಗೆ ಬಟ್ಟೆ ಓ ನನಗೆ ಬೇಡ......
ನಾರಾಯಣ ನಾರಾಯಣ ಅಜ್ಜನವರೆ ಓ......
ಸತ್ಯನಾಪುರದರಮನೆಯಲ್ಲಿ ಬರ ಬರಲಿಲ್ಲ ನನಗೇ......
ಬಸರೂರ ಅರಮನೆಯಲ್ಲಿ ಬರ ಬಂದರೂ ಸತ್ಯನಾಪುರದರಮನೆಯಲ್ಲಿ ಬರ ಬರಲಿಲ್ಲ......
ಕಡೆರಿ ಕಾರ್ಕಳದ ಓ ಸೂಳೆಸಿದ್ದು ಉಟ್ಟ ಓ ಮೈಲಿಗೆ ಬಟ್ಟೆ ಉಡಲು......ಓ......
ಅವಳನ್ನು ಓ ತಂದೆ ಹುಟ್ಟಿಸಿದ್ದಾನೆ ತಾಯಿ ಹೆತ್ತಿದ್ದಾಳೆ ನೆತ್ತರಲ್ಲಿ ಹುಟ್ಟಿದ್ದಾಳೆ
ನೀರಲ್ಲಿ ಬೆಳೆದಿದ್ದಾಳೆ ಓ ಸೂಳೆಸಿದ್ದು......ಓ......
ನನಗೆ ಓ ಬೇಡಾ......
ನಾರಾಯಣ ಮಗ ಸಿರಿಯೇ......ಓ......
ಪಟ್ಟೆಯಲ್ಲಿ ಮಿಗಿಲಾದ ಪಟ್ಟೆ ಸತ್ಯನಾಪುರದರಮನೆಯಲ್ಲಿ ನಿನ್ನ ಧರ್ಮದ ಮಣ್ಣಲ್ಲಿ ಮಗ ಓ ನಿನ್ನ ಸತ್ಯದ ಕಲೆಯಲ್ಲಿ......ಓ......
ಹೇರುವಷ್ಟು ಇದೆ ಮಗಾ ಕಳಸೆಯಲ್ಲಿ ಅಳೆಯುವಷ್ಟು ಬೆರಣಿಯಂತೆ ಬಾಚಿ ತೆಗೆಯುವಷ್ಟು
ಎಮ್ಮೆಯಲ್ಲಿ ಹೇರುವಷ್ಟು ದನದಲ್ಲಿ ಹೇರುವಷ್ಟು ಉಂಟು ಮಗಾ ನಮಗೆ ಓ ಸಿರಿಯೇ
ಓ ಗಂಡನ ಮನೆಯ ಮೈಲಿಗೆ ಬಟ್ಟೇ ಓ......
ಔತಣ ಹಾಕಿ ಬಾಯಿಯಾಸೆ ತೀರಿಸಲು (ಉಡಲಿಕ್ಕಾಗಿ) ತೆಗೆದ ಸೀರೆ ಮಗಾ......
ಹೆಗಲಿಗಾದರೂ ಇರಲಿ ಓ......
ನನ್ನ ಮಾತನ್ನು ಮಣ್ಣು ಮಾಡದಿರು ಸಿರಿಯೇ ಎಂದು ಓ
ಕಣ್ಣೀರು ಓ ಅಜ್ಜನವರು ತೆಗೆಯು(ಇಳಿಸು)ತ್ತಾರೇ......
ನಾರಾಯಣ ಓ ನಾರಾಯಣ ಅಜ್ಜನವರೆ......ಓ......
ಕಣ್ಣಲ್ಲಿ ಕಣ್ಣೀರು ಓ ತೆಗೆಯಬೇಡಿ ಅಜ್ಜನವರ......
ಧರ್ಮಧಾರೆಯ ಸಂದರ್ಭ ಉಟ್ಟ ಪಟ್ಟೆ ಇದೆ ಅದನ್ನು ನನಗೆ ನೀಡಿ......
ಸತ್ಯನಾಪುರದರಮನೆಯಲ್ಲಿ ಹೆಣ್ಣಿಗೂ ಧಾರೆ ಮಾಡಿದ ಓ ಸೀರೆ ಇದೆ......
ಅದನ್ನು ನಾನು ಉಡುತ್ತೇನೆ ಅಜ್ಜನವರೆ, ಈ ಹೆಗಲಿಗೆ ನೀವು ಹಾಕಿಬಿಡಿ ಹಾಗಾದರೆ......
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು......

ಧಾರೆಯ ಸೀರೆಯನ್ನು ಉಡಿಸಿದರಂತೆ ಇಂದು ಗಂಡನ ಮನೆಯಾ ಓ ಸೀರೆಯನ್ನು......
ಅಂಗೈ ತುಂಬುವಂತಹ ಪಟ್ಟಿಯನ್ನೂ......
ಮುಷ್ಟಿಯಲ್ಲಿ ಹಿಡಿಯುವಂತಹ ಪಟ್ಟಿ, ಭೂಮಿಗೆ ಎರಗುವಂತ ಪಟ್ಟೆ, ಆಕಾಶದಲ್ಲಿ ಓ ಹಾರುವಂತಹ ಪಟ್ಟೆ......
ಕಣ್ಣೀರು ಒರಸುವಂತಹ ಪಟ್ಟಿ, ಪಟ್ಟಿಯಲ್ಲಿ ಮಿಗಿಲಾದ ಪಟ್ಟಿಯನ್ನು ತೆಗೆದರು ಅಜ್ಜನವರು......
ಎಡದ ಹೆಗಲಿಗೆ ಓ ಹಾಕಿಬಿಟ್ಟರು......
ನಾರಾಯಣ ಅತ್ತೆಯವರೇ ಕಣ್ಣಲ್ಲಿ ಕಡುದುಃಖ ದುಃಖಿಸಬೇಡಿ ಅತ್ತೆಯವರೇ
ಹೊಟ್ಟೆಯಲ್ಲಿ ಸಂಕಟಪಡಬೇಡಿ ಅತ್ತೆಯವರೇ
ನಾನು ಕೊಟ್ಟ ಸೀರೆಯನ್ನು ಓ ತೆಗೆದುಕೊಳ್ಳುವುದಿಲ್ಲ ನನ್ನ ಸೊಸೆಯೆಂದೂ......
ಕಡರೆ ಕಾರ್ಕಳದ ತುದಿ ಪೇಟೆಯಿಂದ ಜವುಳಿ ತೆಗೆದುಕೊಂಡು ಬರುವಾಗ ಕಣ್ಣ ಸನ್ನೆಯಲ್ಲಿ ಓ ಕೈಭಾಷೆಯಲ್ಲಿ......
ಓ ಸೆರಗಿನ ತುದಿಯಲ್ಲಿ ಕರೆಯುವಾಗ ಇಂದು ಓ
ನನ್ನ ಗಂಡ ಓ ನಿಮ್ಮ ಮಗ
ಸೂಳೆಸಿದ್ದುವಿನ ಅರಮನೆಗೆ ಹೋದರು, ಮೇಲಂತಸ್ತಿನ ಏಳು ಉಪ್ಪರಿಗೆಗೆ ಹೋಗಿ ಓ ಮಲಗುವ ಮಂಚದಲ್ಲಿ ಕುಳಿತರು ಒಟ್ಟೊಟ್ಟಿಗೇ......
ಒಟ್ಟೊಟ್ಟಿಗೆ ಕುಳಿತರು, ಆಕೆ ಕೊಟ್ಟ ಹಾಲನ್ನು ಕುಡಿದರು, ಅವಳ ಮಡಿಲ ಮೇಲೆ ತಲೆಯಿಟ್ಟು ಮಲಗಿದರು ನನ್ನ ಗಂಡ
ಹತ್ತು ಜನ ಸೇರಿದ ಸಭೆಯ ಮುಂದೆ ಓ ಅತ್ತೆಯವರೇ......ಓ......
ಕಟ್ಟಿನ ಸೀರೆ ತೆಗೆದಳು ಬಿಡಿಸಿ ನೆರಿಗೆ ಹಿಡಿದು ಓ ಉಟ್ಟಳು ಓ ಸೂಳೆಸಿದ್ದೂ......
ಚೆಂಡುಮಲ್ಲಿಗೆಯನ್ನು ಮುಡಿದಳು......
ನನ್ನ ಗಂಡ, ಓ ನಿನ್ನ ಮಗ ಮಲಗಿದ್ದಲ್ಲಿಗೆ ಬಂದು ಓ......
ಮುಖಕ್ಕೆ ಕೈಕೊಟ್ಟಳೂ ನಾರಾಯಣ ಅಣ್ಣನವರೇ......ಓ ಗಂಡಸೇ
ಅಕ್ಕನವರು ಚಂದವೇ ಓ ನಾನು ಚಂದವೇ ಎಂದು ಕೇಳಿದಳು ಓ ಅತ್ತೆಯವರೇ......
ಅಷ್ಟು ಹೊತ್ತಿಗೆ ಬಡ್ಕನೆ ಎದ್ದರು ದಿಡ್ಕನೆ ಕುಳಿತರು ಕಟ್ಟನ್ನು ಮಡಚಿ ತಂದಿಟ್ಟರು......
ದಾರಿಗೆ ಕಣ್ಣು ಹಾಕಿದೆವು ಬೀದಿಗೆ ದೃಷ್ಟಿ ಹಾಯಿಸಿದೆವು ನಾವೂ......
ಹನ್ನೆರಡು ಗಂಟೆಯ ಹೊತ್ತಿಗೆ ಓ......
ಸೂರ್ಯ ನಡು ನೆತ್ತಿಗೆ ಆಗು(ಬರು)ವ ಹೊತ್ತಿಗೆ ಓ......
ಏಳು ಉಪ್ಪರಿಗೆಯ ಮೇಲಂತಸ್ತಿನಲ್ಲೀ......
ಜೊತೆಜೊತೆಯಾಗಿ ಕುಳಿತುಕೊಳ್ಳುವ ವೇಳೆಯಲ್ಲಿ ಓ......
ಒಳಗಿನ ಅಡ್ಡಾಡುವೆಡೆಗೆ ಹೋದೆವು ಒಂದು ಬಾರಿ ಎರಡು ಬಾರಿ ಕೆಲಸ

ಮುಗಿಸಿಕೊಂಡೆ......
ನಿಮ್ಮಲ್ಲಿಗೆ ಬಂದು ಉತ್ತರ ಕೇಳುವಾಗ
ನಿಮಗೆ ಉತ್ತರ(ಪ್ರಶ್ನೆ) ನಿಮ್ಮ ಮಗ ನನ್ನ ಗಂಡ ಹಾಕಿದರಲ್ಲ ಓ ಅತ್ತೆಯವರೇ ಓ......
ನಾರಾಯಣ ಅತ್ತೆಯವರೇ ಓ ಕೇಳಿದಿರೇ......
ಒಂದಲ್ಲ ಒಂದು ದಿನ ನೀನು ಹೆಣ್ಣು ಸಿರಿಯೇ
ನಾನು ಗಂಡಸು ಎಂದರು ಏಳೇಳು ಲೋಕದ ಕೋಪ ಓ
ಬಸರೂರ ಕಾಂತಾಳ್ವ ಓ ಕೋಪಿಸಿದರು......
ಇಂದಾದರೋ ಔತಣ ಹಾಕಿಸಿ ಬಾಯಿಯ ಆಸೆ ತೀರಿಸಿ
ಶುಭ ವೇಳೆ ಶುಭ ಮುಹೂರ್ತದಲ್ಲಿ ಓ ಸತ್ಯನಾಪುರದರಮನೆ ಪ್ರವೇಶಿಸಬೇಕೆಂದು ಓ ಅಜ್ಜನವರು ಹೇಳುವಾಗ......ಓ......
ಬತ್ತಕೇರಿ ಬಸರೂರ ಅರಮನೆಯಲ್ಲೇ ಅತ್ತೆಯವರ ಕಾಲು ಹಿಡಿದು ಓ ಗಂಡನ ಕಾಲು ಹಿಡಿಯುವಾಗ......ಓ......
ಕಾಲು ಹಿಡಿಯಬೇಕೆಂದು ಹೇಳುವಾಗ......
ಹಾಕಿದ ಚಪ್ಪರದಲ್ಲಿ ಇದ್ದ ಕಾಂತಾಳ್ವರು......ಓ ಅರಮನೆಗೆ ಹೋದರು......
ಅರಮನೆಗೆ ಹೋಗಿ ಇಂದು ಹುಡುಕುತ್ತಾ ಹುಡುಕುತ್ತಾ ಬರುವಾಗ
ಸಾಸಿವೆ ಮೆಣಸು ಓ ಕೊಟ್ಟರಂತೇ......
ಕೊಟ್ಟ ಸಾಸಿವೆ ಮೆಣಸನ್ನು ಬಲದ ಸೆರಗಲ್ಲಿ ಕಟ್ಟಿದಳು ಸಿರಿ......
ನಾರಾಯಣ ಅತ್ತೆಯವರೇ ಓ ಅತ್ತೆಯವರೇ ಕೇಳಿದಿರೇ
ಸತ್ಯನಾಪುರದರಮನೆಯಲ್ಲಿ ಸತ್ಯಮಹಾಲೋಕದ ಸಿರಿಯನ್ನು ಓ......
ತಂದೆ ಹುಟ್ಟಿಸಲಿಲ್ಲ ತಾಯಿ ಹೆರಲಿಲ್ಲ ರಕ್ತದಲ್ಲಿ ಹುಟ್ಟಲಿಲ್ಲ ನೀರಲ್ಲಿ ಬೆಳೆಯಲಿಲ್ಲ
ಗಾಳಿ ಗೆಲ್ಮೆಯ ಬೆಳೆದು ಇಂದು......
ಅಜ್ಜನವರ ಮಗ್ಗುಲನ್ನು ಬಿಟ್ಟು ಅತ್ತೆಯವರೆ ನಿಮ್ಮ ಮಗ್ಗುಲನ್ನು ಸೇರಿ ಓ......
ನಿಮ್ಮ ಮಗ ನನ್ನ ಗಂಡ ಓ......
ಬತ್ತಕೇರಿ ಬಸರೂರ ಅರಮನೆಯಿಂದ......ಓ......
ದೇವರು ಬೆರ್ಮರು ಓ ಇದ್ದಾರಲ್ಲಾ......ಓ......
ಗರ್ಭದ ಜನನವಾದೀತೆಂದು ಮನಸ್ಸಲ್ಲಿ ನುಡಿದಳು ಸಿರಿಯೇ......ಓ......
ಬಾಯಿ ಬಿಡಲಿಲ್ಲ......
ಬತ್ತಕೇರಿ ಬಸರೂರಿನಿಂದ ಓ ಇಳಿದಳಂತೆ......ಓ......
ಸತ್ಯನಾಪುರದರಮನೆ ಓ ಹೊಕ್ಕರಂತೇ......
ಇಂದಾದರೂ ಸಾಸಿವೆ ಮೆಣಸು ಕೊಂಡುಹೋದದ್ದನ್ನು ಮಲಗುವ ಮಂಚದಲ್ಲಿ

ಇಟ್ಟರಂತೆ ಲೆಕ್ಕ ಮಾಡಿದರಂತೆ ಓ......
ಗಂಟು ಕಟ್ಟಿದರಜ್ಜನವರು......ಓ......ಒಳಗೆ ಇಟ್ಟರೂ......
ಅಂದಿನ ದಿನ ಹೋಯಿತು ಮರುದಿನ ಬಂತು......ಓ......
ಮೊದಲನೆ ಗರ್ಭಕ್ಕೆ ಪೂರ್ತಿ ತಿಂಗಳು ತುಂಬಿತಂತೆ......
ಹೆರಿಗೆಯ ತಿಂಗಳು ತುಂಬಿದಾಗ ಇಂದು
ಹಾದಿ ಬೀದಿಯಲ್ಲಿ ಹೋಗುವಾಗ ಇಂದು ಬಸರೂರ ಬತ್ತಕೇರಿ ಕಾಂತಾಳ್ವರು ಓ
ಅಜ್ಜನವರಿಗೆ ಸಿಕ್ಕರೂ......ಓ......
ಅಜ್ಜನವರಲ್ಲಿ ಉತ್ತರ(ಪ್ರಶ್ನೆ) ಕೇಳುತ್ತಾರೇ......ಓ......
ಉತ್ತರಕ್ಕೆ ಉತ್ತರ ಓ ಬಾಯಿಮಾತು ಕಾಂತಾಳ್ವರು ಮಾತನಾಡುತ್ತಾರಂತೆ......
ಆದರೂ ನಿಮ್ಮ ಮೊಮ್ಮಗಳು ನನ್ನ ಮದುಮಗಳು ಎಲ್ಲಿದ್ದಾಳೆ ಹೇಗಿದ್ದಾಳೆ ಎಂದು
ಬಾಯಿಮಾತನ್ನೂ ಓ ಕೇಳದೆ ಇದ್ದಾರೆ......
ಒಂದಾನೊಂದು ದಿನದಲ್ಲಿ......ಓ......
ಮೊದಲನೇ ಗರ್ಭಕ್ಕೆ ಪೂರ್ತಿ ತಿಂಗಳು ಓ ತುಂಬಿಬಂದು ಸಿರಿಗೇ......
ನಾರಾಯಣ ಓ ನಾರಾಯಣ ಅಜ್ಜನವರೆ......ಓ......
ತಿಳಿಯಾದ ಮುಖದಲ್ಲಿ ಹುಳಿಯಂತಹ ಬೇನೆ(ನೋವು) ಕಾಣಿಸುವಾಗ......
ನಿಮ್ಮ ಮೊಮ್ಮಗನಿಗೆ ನನ್ನ ಗಂಡನಿಗೆ ಓ ಬತ್ತಕೇರಿಗೆ
ಒಂದು ಓಲೆಯಾಳು ಓ ಕಳುಹಿಸಿ ಅಜ್ಜನವರೆ......
ನನ್ನ ಮದುಮಗ ಬರಬೇಕು ಅವರ ಮುಖ ನನಗೆ ನೋಡಬೇಕಂದಳು......
ಒಬ್ಬ ಆಳು ಹೋಗುವಾಗ......ಓ......
ಎಲ್ಲಿಂದ ಬಂದೆ ಓ ನೀನೆಲ್ಲಿಗೆ ಹೋಗುವವನೆಂದು ಸಂಕರಪೂಂಜೆದಿ ಕೇಳಲು......
ಸತ್ಯನಾರಾಪುರದಿಂದ ಬಂದದ್ದು ಹೆಂಗುಸೇ......
ಬಸರೂರು ಕಾಂತಾಳ್ವರು ಇದ್ದಾರೋ ಇಲ್ಲವೋ ಎಂದು ಕೇಳಲು ಹೇಳಿದರು ಇಂದು
ಸತ್ಯಮಹಾಲೋಕದ ಸಿರಿಗಂತೆ ಇಂದು......
ತಿಳಿಯಾಗಿರುವ ಮುಖದಲ್ಲಿ ಹುಳಿಯಾದ ನೋವು ಕಾಣಿಸಿಕೊಂಡಿತೆಂದ......
ಇಂದು ಕೇಳಿದರೆ ಹೇಳಬಿಡು ಆಳೇ, ಕಡೆರಿ ಕಾರ್ಕಳದ ತುದಿ ಪೇಟೆಗೆ ಕಿಸ್ತಿನ
ಹಣ ಕಟ್ಟಲು ಹೋಗಿದ್ದಾರೆ ಕಾಂತಾಳ್ವ ಎಂದು ಹೇಳಬಿಡೆಂದರು......
ಅಷ್ಟು ಹೊತ್ತಿಗೆ ಏನು ಹೇಳಿದರು ಓಲೆಗಾರ ಓ ಎಲ್ಲಿಗೆ ಹೋಗಿದ್ದಾರೆಂದು ಓ ಸಿರಿ
ಕೇಳುತ್ತಾಳೆ
ನಾರಾಯಣ ಅಕ್ಕನವರೇ, ಬಸರೂರ ಕಾಂತಾಳ್ವ ನಿಮ್ಮ ಗಂಡ ಕಡೆರಿ ಕಾರ್ಕಳದ
ತುದಿ ಪೇಟೆಗೆ
ಕಿಸ್ತಿನ ಹಣ ಕಟ್ಟಲು ಹೋಗಿದ್ದಾರಂತೆ ಓ......ಅಕ್ಕನವರೇ ಎಂದು ಹೇಳಲು......

ಇನ್ನೊಬ್ಬ ಸೇವಕನನ್ನು ಓ ಕಳುಹಿಸಿ ಅಜ್ಜನವರೇ......ಓ......
ಅವರು ಬರಬೇಕೆಂದು ಹೇಳಿ ಕಳುಹಿಸಿ ಅಜ್ಜನವರೆ ಎಂದಳು......
ಎರಡನೇ ಆಳು ಕಳುಹಿಸಿದರಂತೆ
ಎರಡನೇ ಸೇವಕನಿಗೂ ಅದೇ ಉತ್ತರವನ್ನು ಕೊಟ್ಟು ಹಿಂದೆ ಕಳುಹಿಸಿದರು......
ಮೂರನೇ ಸೇವಕನನ್ನು ಕಳುಹಿಸುವುದು ಬೇಡ ಎಂದಳು......ಓ......
ನಾರಾಯಣಾ ಓ ನಾರಾಯಣ ಅಜ್ಜನವರೆ......ಓ......
ತನ್ನ ಸೊಂಟದ ನೇವಳ (ಉಡಿದಾರ) ತೆಗೆದಳು ಸಿರಿ......
ಬಡಗಣ ಲಂಕೆಲೋಕನಾಡು ಓ ಲೋಕನಾಥೇಶ್ವರ ಸ್ವಾಮಿಗಂತೆ ಇಂದು ಓ......
ಬಡ್ಡಿ (ನಾಲ್ಕೆಳೆಯ) ನೇವಳವನ್ನು ಹರಕೆಯಾಗಿ ಮುಡಿಪಿಡಿ......
ಅಜ್ಜನವರು ಇಂದು ಕಣ್ಣಲ್ಲಿ ಕಡುದುಃಖ ದುಃಖಿಸಿದರು......
ಹೊಟ್ಟೆಯಲ್ಲಿ ಸಂಕಟಪಟ್ಟರು ಹತ್ತು ಬೆರಳುಗಳ (ಜೋಡಿಸಿ) ವಂದನೆ ಮಾಡಿದರು ಇಂದು......
ಆರ್ಯಬನ್ನಾರು ಓ ಬಿರ್ಮುಮಾಲವರೂ......ಓ......
ಅಜ್ಜನವರಂತೆ......
ಅಷ್ಟು ಹೊತ್ತಿಗೆ ಇಂದು ಬರುವಾಗ ಹೇಳಿದರಂತೆ......
ನಾರಾಯಣ ಓ ನಾರಾಯಣಾ......
ನನ್ನ ಪ್ರೀತಿಯ ಮೊಮ್ಮಗಳಂತೆ ಇಂದು ಅಂದಚಂದದದಲ್ಲಿ ಇಂದು
ಹೆರಿಗೆಯನ್ನು ಪೂರೈಸಿದರೆ
ಕಂಡುಬಂದ ನೋವಿಗೆ ಹಾಕಿರುವ ನೇಲೆಗೆ (ಆಧಾರಕ್ಕೆ) ಕೈಕೊಡುವಾಗ ಹೇಳುತ್ತಾರಂತೆ ಇಂದು
ಸೌಖ್ಯದಿಂದ ಹೆರಿಗೆ ಆದರೆ
ಬಡಗಣ ಲಂಕೆಲೋಕನಾಡು ದೇವರು ಬೆರ್ಮೆರ ಪಾದಕ್ಕೆ
ಬಂಗಾರದ ಮಗು, ಬೆಳ್ಳಿಯ ತೊಟ್ಟಿಲು, ಮುಷ್ಟಿ ಹಣ, ದಂಡು ಕುಂಬಳ ಓ ಹಾಕಿಸುತ್ತೇನೆಂದು ಹೇಳಿದರಜ್ಜನವರು......
ಹೇಳಿದ ನಾಲಿಗೆ ಗಂಟಲಲ್ಲಾಗಬೇಕಾದರೆ (ಮಾತು ಮುಗಿಯುವಷ್ಟರಲ್ಲಿ) ತುಳುವ (ಮೆದು ಜಾತಿಯ) ಹಲಸಿನ ಸೋಳೆಯಿಂದ ಹಲಸಿನ ಬೀಜ ಹೊರಬಂದಂತೆ
ಮಗು ಭೂಮಿಗೆ ಜನನವಾಯಿತು......
ನಾರಾಯಣ ಓ ನಾರಾಯಣಾ......ಓ......
ಮಗು ಅಳುವ ಸದ್ದು ಓ ಕೇಳಿಸಿತು......
ನಾರಾಯಣ ದಾರೂ ದಾರು ಕೇಳಿದೆಯೋ ಮಗು ಏನೆಂದು ಕೇಳಲು
ಇಂದು ಅಜ್ಜನವರೆ ಅಜ್ಜನವರೆ ಓ ಹರುಷದ ಮೈಯ್ಯಲ್ಲಿ (ಪುಳಕಿತರಾಗಿ)

ಮುತ್ತೀನಂತಹ ನಗುವಿನಲ್ಲಿ
ನಗುತ್ತಾ ನಗುತ್ತಾ ನನ್ನ ಅಕ್ಕನವರು ಹೆತ್ತರು ಗಂಡುಮಗು ಭೂಮಿಗೆ
ಜನನವಾಗಿ ಬಂತೆಂದು ಓ ಹೇಳಿದರಂತೇ......
ಇಂದಾದರೋ ಇಂದು ಹೆತ್ತ ಸ್ಥಳದಲ್ಲಿ ಹುಟ್ಟಿದ ಮಗುವಿಗೆ ಹೊಕ್ಕುಳ ಬಳ್ಳಿ ಕತ್ತರಿಸಿದರಂತೆ
ಹುಟ್ಟಿದ ಸ್ಥಳದಲ್ಲಿ ಹೆಸರಿಟ್ಟರಂತೆ ಓ ಮುದ್ದು ಕುಮಾರ ಎಂದರು
ಹೆತ್ತಲ್ಲಿ ಸ್ಥಳ ಒರೆಸಿದರಂತೆ ಇಂದು ಸಿರಿಯನ್ನು ಸ್ನಾನ ಮಾಡಿಸಿಕೊಂಡು
ಮಗು ಬಾಣಂತಿಯನ್ನು ಸ್ನಾನ ಮಾಡಿಸಿದರು ಓ ಅಜ್ಜನವರು......
ಸೇವೆಗೆ ಓ ಜನ ಇಟ್ಟರು......ಓ......
ಕೆಲಸಕ್ಕೆ ಆಳುಗಳನ್ನು ನೇಮಿಸಿದರು......
ಅಂದಿನ ದಿನ ಹೋಗಿ ಮರುದಿನ ಬರುವಾಗ ಒಬ್ಬ ಆಳನ್ನು ಓ
ಸತ್ಯನಾಪುರದರಮನೆಗೆ ಓ ಕರೆಸಿದರೂ......
ಕರೆಸಿದ ಆಳನ್ನು ಬರಮಾಡಿಕೊಂಡರು ಬಂದ ಆಳಿಗೆ ದಾರಿಯ ಖರ್ಚಿಗೆ ಸಂಬಳ ಕೊಟ್ಟರು ಹೊಟ್ಟೆಯ ಹಸಿವು ತೀರಿಸಿದರು......
ಬತ್ತಕೇರಿ ಬಸರೂರಿಗೆ ಹೋಗಬೇಕು ಕಾಂತಾಳ್ವನಿಗೆ ತಿಳಿಸಬೇಕು
ನಿನ್ನ ಮಡದಿ ಸಿರಿಗೆ ಹೆರಿಗೆಯಾಗಿದೆ ಗಂಡುಮಗುವೆಂದು ತಿಳಿಸಬೇಕೆಂದರು......
ಓ ಆಳನ್ನು ಕಳುಹಿಸಿಕೊಟ್ಟರು......
ಸತ್ಯನಾಪುರದರಮನೆಯಿಂದ ಓ ಆಳು ಹೋಗುತ್ತದೆ......ಓ......
ಬಸರೂರಿನರಮನೆಗೇ......
ಬಸರೂರಿನರಮನೆಗೆ ಹೋಗಿ ಸಂಕರುಪೂಂಜೆದಿಯಲ್ಲಿ ಹೇಳಲು......
ಹರುಷದ ಮೆಯ್ಯಾಯಿತು ಮುತ್ತೀನ ನಗುವಾಯಿತು ಓ......ಪೂಂಜೇದಿಗೆ......
ಅಂದಿನ ದಿನಾ ಓ ಹೋಗಿದೆ ಅಜ್ಜನವರಿಗೆ......ಓ......
ಮಗು ಹುಟ್ಟಿದ ಜಾತಕ ಓ ನಕ್ಷತ್ರ ಕೇಳಬೇಕೆಂದರಜ್ಜನವರು......
ಮುಂಜಾನೆ ಹೊತ್ತಲ್ಲೇ ಎದ್ದರು ಅಜ್ಜನವರು......
ಮುಚ್ಚಿರುವ ಬಾಗಿಲು ತೆರೆದರಜ್ಜನವರು ಉರಿಸಿದ ನಂದಾದೀಪವನ್ನು ಆರಿಸಿದರಜ್ಜನವರು......
ಹೊರಗೆ ಹೊರಟರು......ಓ......
ಬಯಲುಗದ್ದೆಯಲ್ಲಿ ಹೋದವರು ಇನ್ನು ಬೆಟ್ಟುಗದ್ದೆಯಲ್ಲಾಗಿ ಬಂದರು......ಓ......
ಬೆಳಗ್ಗಿನ ಹಾಲನ್ನ ಓ ಊಟಮಾಡಿದರಜ್ಜನವರು......
ಬಲ್ಯಾಯ ಕೊಟ್ಟಿಗೆ(ಜ್ಯೋತಿಷಿಯಮನೆ)ಗೆ ಓ ಹೋಗುತ್ತೇನೆಂದರು......
ಇಂದಾದರೋ ಬಲ್ಯಾಯ ಕೊಟ್ಟಿಗೆಗೆ ಅಜ್ಜನವರು ಹೊರಟು ಹೋದರಂತೆ ಇಂದು......

ಹೋಗುತ್ತಾ ಹೋಗುತ್ತಾ ಹೋಗುವಾಗಂತೇ......ಓ......
ದೂರದಿಂದಲೇ ನೋಡುತ್ತಾಳೆ ಬಲ್ಯಾಯ......
ಅಜ್ಜನವರು ಬಂದರು ಇಂದು ಓ......
ಏನು ಕೆಲಸದಲ್ಲಿ ಬಂದರಪ್ಪಾ ಎಂದು ದೂರದಲ್ಲಿ ಬರುವುದನ್ನು ನೋಡಿದನಂತೆ
ಮೂರು ಕಾಲಿನ ಮುಕ್ಕಾಲಿಯನ್ನು ತಂದು ಕೊಟ್ಟನಂತೆ ಓ......
ಬಲ್ಯಾಯ ಕೊಟ್ಟಿಗೆಯನ್ನು ಹೊಕ್ಕು ಓ ಹೇಳುತ್ತಾರಂತೆ ಓ ಬಲ್ಯಾಯ......
ಕುಳಿತುಕೊಳ್ಳುವ ಕೆಲಸ ಆಮೇಲೆ ನನಗೆ ಮೊದಲು ಬಂದ ಕೆಲಸ ಎಂದರು......
ನನ್ನ ಮೊಮ್ಮಗಳು ಸಿರಿ ಹತ್ತಿದ್ದಾಳೆ ಗಂಡು ಮಗು ಜನನವಾಗಿದೆ......ಓ......
ಓ ನಕ್ಷತ್ರ ಕೇಳಬೇಕು ನನಗೆ ನೀನು ಹೇಳಬೇಕಂದರೂ......
ನಾರಾಯಣಾ ಓ ನಾರಾಯಣ ಅಜ್ಜನವರೇ......ಓ......
ಪಂಚಾಂಗ ಬಿಡಿಸೀ ಓ ರಾಶಿ ನೋಡುವಾಗಾ......
ಒಳ್ಳೆಯ ವೇಳೆ ಒಳ್ಳೆಯ ಗಳಿಗೆ ಶುಭ ಜನನ ಓ ಅಜ್ಜನವರೆ......ಓ......
ತಾಯಿಗೂ ತೊಂದರೆಯಿಲ್ಲ ತಂದೆಗೂ ಜವಾಬ್ದಾರಿ ಇಲ್ಲ ಅಜ್ಜನವರೆ......
ಆದರೆ ಇದರಲ್ಲಿ ನಿಮಗೇ ತೊಂದರೆ ಅಜ್ಜನವರೆ......ಓ......
ಮಗುವಿನ ಮುಖ ನೀವು ನೋಡಿದರೆ ನಿಮಗೆ ಮರಣ ಅಜ್ಜನವರೆ......
ಅಷ್ಟು ಹೇಳುವುದನ್ನು ಕೇಳಿದರಜ್ಜನವರು ಮುಖ ಚಿಕ್ಕದು ಮಾಡಿಕೊಂಡರು ಓ......
ನನ್ನ ಮಗುವಿಗೆ ಓ ಒಂದೇ ಮಗು ಎಂದರು......
ಬಲ್ಯಾಯ ಕೊಟ್ಟಿಗೆಯಿಂದ ಹೊರ ಹೊರಟು ಬಂದರು......ಓ......
ಸತ್ಯನಾರಪುರದರಮನೆಗೇ ಬಂದರು ಓ ಚಿಕ್ಕಚಾವಡೀ ಸಿದ್ರಮಂಟಪದಲ್ಲಿ ತಾಳೆಗರಿ
ಚಾಪೆಯಲ್ಲಿ ಜೊತೆಜೊತೆಗೆ ಕುಳಿತರು......ಓ
ಉಯ್ಯಾಲೆಯಲ್ಲಿ ಕುಳಿತು......
ನಾರಾಯಣ ಓ ನಾರಾಯಣ ಅಜ್ಜನವರೆ......ಓ......
ಏನು ಹೇಳಿದ ಓ ಬಲ್ಯಾಯ ಅಜ್ಜನವರೆ......ಓ......
ಏನು ಹೇಳಿದ ಎಂದು ಕೇಳುವಾಗ......ಓ......
ಮತ್ತೆ ಮತ್ತೆ ಓ ಅಕ್ಷರಕ್ಷರ ಓ ಸಿರಿ ಕೇಳುತ್ತಾಳೆ......
ಸಿರಿ ಕೇಳಲು ಹೇಳುತ್ತಾರಪ್ಪಾ ಒಳ್ಳೆ ವೇಳೆ, ಒಳ್ಳೆಯ ಗಳಿಗೆ ಓ ತೊಂದರೆ ಇಲ್ಲ ಮಗಾ ಎಂದು
ಸಿರಿಗೆ ಮೂರು ಉತ್ತರ ಅಜ್ಜನವರು ದಯಪಾಲಿಸುತ್ತಾರೆ......
ಅಜ್ಜನವರ ಮುಖ ನೋಡುವಾಗ ಓ ಸಿರಿಗೆ ಸಂಶಯ ಓ ಹೊಗುತ್ತದೇ......
ನಾರಾಯಣ ಅಜ್ಜನವರೆ ಓ ನನ್ನಲ್ಲಿ ಯಾಕೆ ಸುಳ್ಳು ಹೇಳುತ್ತೀರಿ ಓ ನನಗೇ......
ಸತ್ಯ ಹೇಳಿ ಅಜ್ಜನವರೆ ಓ ಸತ್ಯ ಹೇಳಿಬಿಡಿ......

ನಿಮ್ಮ ಮೊಮ್ಮಗನಂತೆ ಸುಳ್ಳು ಹೇಳಬೇಡಿ, ಓ ಅಜ್ಜನವರೆ......ನನ್ನಲ್ಲೀ......
ತಂದೆ ಹುಟ್ಟಿಸಲಿಲ್ಲ ತಾಯಿ ಹೆರಲಿಲ್ಲ ನೆತ್ತರಲ್ಲಿ ಹುಟ್ಟಲಿಲ್ಲ ಅಜ್ಜನವರೆ ನೀರಲ್ಲಿ ಬೆಳೆಯಲಿಲ್ಲ ಗಾಳಿ ಗೆಲ್ಮೆಯಲ್ಲಿ ಇದ್ದವಳಿಗೆ ಓ......
ಸತ್ಯ ಹೇಳಿಬಿಡಿ ಅಜ್ಜನವರೇ......
ಅಷ್ಟು ಹೇಳುವಾಗ ಹೇಳುತ್ತಾರೆ ನಾರಾಯಣ ಓ ಮಗ ಸಿರಿಯೇ......ಓ......
ನಿನ್ನಲ್ಲಿ ಯಾವುದನ್ನು ಹೇಳಲಿ, ಯಾವುದನ್ನು ಬಿಡಲಿ ಮಗಾ ಗ್ರಹಚಾರ......
ಮಗುವನ್ನು ದೂರಬೇಡ ಓ ಮಗಾ......
ಅಂದಿನ ಕಾಲದಲ್ಲಿ ನೀನು ಹುಟ್ಟುವ ಮೊದಲು ಓ......
ಕಾಡು ಕರೆಯುತ್ತಿತ್ತು ಮಗ ಊರು ಅಳುತ್ತಿತ್ತು ಹೊಳೆಗೆ ಬಾಗಿದ ಮರವಾಗಿದ್ದೆ ಹೊಯ್ಗೆಗೆ ಹೋದ ಬೇರಾಗಿದ್ದೆ......
ನಿಂತು ಸಾವಿರ ವರ್ಷ ಪಟ್ಟ ಆಳಿದ್ದೇನೆ ಕುಂತು ಮುನ್ನೂರು ವರ್ಷ ಪಟ್ಟ ಆಳಿದ್ದೇನೆ ಪಟ್ಟ ಆಳುತ್ತಾ ಇರುವಾಗಲೂ......ಓ......
ದೇವರು ಬೆರ್ಮೆರು ನನಗೇ......
ಅರುವತ್ತಾರು ಕೋಟಿ ನಾಗಬೆರ್ಮೆರೂ......ಓ......
ಮೂವತ್ತಮೂರು ಕೋಟಿ ದೇವರುಗಳೂ......ಓ......
ನಿನ್ನನ್ನು ಜನನಕ್ಕೆ ಕೊಟ್ಟರು ಮಗಾ ಅದರಿಂದ ನಾನು ಓ ತಾಳಿಕೊಂಡಿದ್ದೇನೆ
ನಾರಾಯಣಾ ಓ ನಾರಾಯಣಾ ಮಗಾ......
ಭಯಪಡಬೇಡ, ಹೆದರಬೇಡ ಮಗ ನೀನು......
ಮಗುವಿನ ಮುಖ ನಾನು ನೋಡಿದರೆ ನನಗ ಮರಣವೆಂದು ಕಾಣಿಸಿದೆ ಮಗಾ......
ನಾರಾಯಣ ಓ ನಾರಾಯಣ ದೇವರು ಬೆರ್ಮೆರೇ ಓ......
ನನಗೆ ಯಾಕಾಗಿ ಓ ನೆತ್ತಿಗೆ ಬಲವಾದ ಪೆಟ್ಟೊಂದು ಕೊಟ್ಟರೀ......
ಅಗ್ನಿ ಅರಳುವಂತೆ ಯಾಕಾಗಿ ಮಾಡಿದಿರಿ ಸ್ವಾಮಿ ಬೆರಮ್ಮೆರೆ ನೀವೂ ಹೀಗಿರುವ ಬೆಂಕಿಯ ಕೆಂಡ ಯಾಕಾಗಿ ಹಾಕಿದಿರಿ ನನಗೇ......ಓ......
ವಿವೇಕ ಕೆಟ್ಟು ಸ್ಮೃತಿತಪ್ಪಿ ಕಣ್ಣಲ್ಲಿ ಕಡುದುಃಖ ದುಃಖಿಸಿ ಹೊಟ್ಟೆಯಲ್ಲಿ ಸಂಕಟ ಪಡುತ್ತಾ...... ಇದ್ದಾಳೆ ಸಿರಿ......
ಆದರೂ ಇಂದು ಅಜ್ಜನವರೆ ಮುಖ ಮಗು ನೋಡಲು ಬಿಡದೆ ಇಂದು ಓ......
ಕಾಲ ಕಳೆಯುತ್ತಾ ಓ ದಿನ ತೆಗೆಯುತ್ತಾ ಇದ್ದಾಳೆ ಸಿರಿ......
ಆದರೂ ಇಂದು ಮೂರರಲ್ಲಿ ಮೂರನೆ ದಿನದ ಪುರುಡು ತೆಗೆಸಿದಳು......
ಹನ್ನೆರಡರಲ್ಲಿ ಹನ್ನೆರಡರ ಪುರುಡು ತೆಗೆಸೀ......
ಹದಿನಾರರಲ್ಲಿ ಮಗುವನ್ನು ತೊಟ್ಟಿಲಲ್ಲಿ ಹಾಕುವ ಕಾರ್ಯ ಮಾಡಬೇಕಂದರಳು ......ಓ......

ಮಗುವನ್ನು ತೊಟ್ಟಿಲಲ್ಲಿ ಓ ಹಾಕಿಸಿದರಜ್ಜನವರು......
ಒಬ್ಬ ಆಳು ಒಂದು ಓಲೆ ಓ ಸತ್ಯನಾಪುರದರಮನೆಯಿಂದ
ಬತ್ತಕೇರಿ ಬಸರೂರಿಗೆ ಓ ಕಳುಹಿಸುವಾಗ......
ಮಗುವನ್ನು ನೀವು ತೊಟ್ಟಿಲಲ್ಲಿ ಮಲಗಿಸಬೇಕೆಂದು ಓ ಹೇಳುತ್ತಾಳೆ......ಓ......
ಸಂಕರು ಪೂಂಜೆದೀ ಓ ಹೇಳುತ್ತಾಳೆ......
ಅವನಾಗಿಯೇ ಬರುವುದಿಲ್ಲ ಮಗನಾಗಿಯೇ ಕಳುಹಿಸುವುದಿಲ್ಲ
ತಾಯಿಯವರೇ ನೀವು ಹೋಗಿರೆಂದು ಅವನ ಬಾಯಲ್ಲಿ ಬರುವುದಿಲ್ಲ ಕಾಂತಾಳ್ವನಿಗೆ......
ಓ ಕಾಂತಾಳ್ವ ಓ ಹೇಳುವುದಿಲ್ಲ......
ನಾರಾಯಣಾ ನಾರಾಯಣಾ ಓ......
ಕೆಳಗಿನ ಭಾಗದ ಪಾಲವರು ಮೇಲಿನ ಬದಿಯ ಪಾಲವರು ನಡುನರಕದ ಪಾಲವರನ್ನು
ಕರೆದು ಇಂದು ಮಗುವನ್ನು ತೊಟ್ಟಿಲಲ್ಲಿ ಹಾಕಿಸಿದರು ಅಜ್ಜನವರು......
ಮಗುವಿನ ಮುಖ ಓ ಅಜ್ಜನವರು ನೋಡದೆಯೂ......ಓ......
ಶುಭವಾರ ಶುಭಗಳಿಗೆಯಲ್ಲಿ ಓ ಕುಮಾರನನ್ನು......
ಕುಂದಣದ ತೊಟ್ಟಿಲಲ್ಲೀ ಓ ಹಾಕಿದರು......
ಸತ್ಯಮಹಾಲೋಕದ ಸಿರಿಯ ಮಗನಂತೆ ಇಂದು ಓ ಮುದ್ದಾದ ಕುಮಾರ ಎಂದರು......
ಓ ನಾಮಕರಣ ಮಾಡಿದರು ಓ ವಂಶಾವಳಿಯಲ್ಲಿ ಕರೆದರು......
ಕುಮಾರನಂತೆ ಇಂದು ಅಂದಿನ ದಿನ ಹೋಗುವಾಗ ಇಂದು ಓ......
ಒಂದಾನ ಒಂದು ದಿನದಲ್ಲಿ......ಓ......
ಮಗುವಿಗೆ ಮೂವತ್ತು ದಿನ ಆಗುವಾಗ......
ಇಂದಾದರೋ ಇಂದು ಮೂವತ್ತು ದಿನ ಆಗುವಾಗ ಮೂವತ್ತೊಂದರಲ್ಲಿ ಇಂದು ದೇವಸ್ಥಾನಕ್ಕೆ
ಹೋದಳಂತೆ ಇಂದು ಶುದ್ಧ ಮುದ್ರಿಕೆ ಮಾಡಿದಳಂತೆ ಇಂದು ವೀಳ್ಯ ಅಡಕೆ ಹಿಡಿದುಕೊಂಡು
ಬಂದಳಂತೆ ಇಂದು ಹಾಕಿರುವ ಏತ, ತೋಡಿಸಿರುವ ಬಾವಿಯಲ್ಲಿಗೆ
ಹೋದಳಂತೆ ಬಾವಿಗೆ ಅಡಕೆವೀಳ್ಯ ಹಾಕಿದಳಂತೆ ಸಿರಿಯೇ......
ಒಂದು ತಂಬಿಗೆ ನೀರು ಬಾವಿಯಿಂದ ತೆಗೆದಳು ಮೂಡಣದ ಕೆಂದಾಳಿ ತೆಂಗಿನ ಸಸಿಗೆ ಎರೆದಳೂ......
ಬಂದು ಒಳಹೊಕ್ಕಳು......ಓ ಮಗುವಿಗೆ ಎದೆಹಾಲು ಕೊಟ್ಟಳೂ......
ಅಂದಿನ ದಿನಮಾನ ಹೋಗಿದೆಯಂತೆ ಸಿರಿಗೆ ಮರುದಿನ ಬರುವಾಗ......
ಮಗುವನ್ನು ಓ ತೊಟ್ಟಿಲಲ್ಲಿ ಮಲಗಿಸಿದಳು......ಓ......
ತೊಟ್ಟಿಲಲ್ಲಿ ಮಲಗಿಸಿಯಾಗುವಾಗ ಇಂದು ಸಿರಿ ಓ ಕೇಳಬೇಕೂ......

ನಾರಾಯಣ ಓ......ದಾರೂ......ಓ......
ಜಾಗ್ರತಯಾಗಿರುವ ಓ ದಾರೂ......ಓ......
ನಾರಾಯಣ ಅಜ್ಜನವರೆ ಓ ದೇವರು ಬೆರ್ಮೆರು ಸತ್ಯದಲ್ಲಿ ಓ......
ಮಗುವಿಗೆ ಮುಖ ನೀವು ನೋಡಿದಿರಿ ಅಜ್ಜನವರೆ ನನಗೆ ನಾಲ್ಕುದಿನ ಕರೆಯುವ ಋಣಭಾಗ್ಯ
ಇರಲಿ ಅಜ್ಜನವರೆ ಎಂದು ಹೇಳಿದಳು......
ಮಗುವಿನ ಎರಡು ಓ ಮೈಲಿಗೆ ಬಟ್ಟೆ ಓ ಹಾಸುಸೀರೆ ಒಗೆದುಕೊಂಡು ಬರುತ್ತೇನೆಂದು ಓ ಹೋದಳು ಮಗಳೋ......
ಸರಿ ಹೋಗುತ್ತಾಳೇ......ಓ......
ಚಿಕ್ಕ ತೋಡಿಗೆ ಚಿಕ್ಕ ಸಂಕದಲ್ಲಿ ಹೋಗಿ ಒಂದು ಬಟ್ಟೆ ಒದ್ದೆಮಾಡಿ ಎರಡನೇ ಬಟ್ಟೆಗೆ ಕೈಕೊಡುವಾಗ ಮಗು ಕಿಟಾರನೆ ಅಳುವ, ಓ ಪುಟಿದುಪುಟಿದು ಅಳುವ ಸದ್ದು ಕೇಳಿಸುತ್ತದೆ
ಅಯ್ಯಯ್ಯೋ ಪಾಪವೆ ಎಲ ಎಲ ದೋಷವೇ ರಾಮಕಾಲವೆ ಬ್ರಹ್ಮಹತ್ಯೆ ಮಾಡಿದೆನೆ
ಮಗು ಅಳುತ್ತಿದೆ ಎಂದರು ಚಿಕ್ಕ ಚಾವಡಿ ಸಿದ್‌ರಮಂಟಪದಿಂದ ತಾಳೆಗರಿ
ಚಾಪೆಯಲ್ಲಿ ಒರಗಿ ಕುಳಿತಿದ್ದ ಅಜ್ಜನವರು......
ಬಡಕ್ಕನೆ ಎದ್ದು ದಿಡ್ಕನೆ ನಿಂತರು ಏಳು ಅಂತರಗಳ ಯಮದೇವಿ ಗುಡಿ (ಕತ್ತಲ ಕೋಣೆ)ಗೆ ಓ ಹಗ್ಗ ಹಾಕಿರುವ ಬೆಳ್ಳಿಮಾಡಕ್ಕೆ ಓ ಹೋದರಜ್ಜನವರು......
ಕುಮಾರನ ಕುಂದಣದ ತೊಟ್ಟಲಿಗೇ ಓ......
ಮಗುವನ್ನು ಎಬ್ಬಿಸುತ್ತೇನೆಂದು ಕೈಕೊಡುವಾಗ ಅಜ್ಜನವರು ಓ......
ಮಗುವಿನ ಮುಖ ಅಜ್ಜನವರು ನೋಡಲು ಕಿಟಕ್ಕನೆ ನಕ್ಕ ಕುಮಾರ......ಓ......
ಕಿಟಕ್ಕನೆ ನಗುವಾಗ ಇಂದು ಅಜ್ಜನವರಂತೆ ಇಂದು ಒಂದುಕಾಲು ಹೊಸ್ತಿಲ ಒಳಗೆ ಆಗಿದೆ
ದಡಕ್ಕನೆ ಬಿದ್ದರಜ್ಜನವರು ಕಾಯ ಬಿಟ್ಟರು ಕೈಲಾಸ ಸೇರಿದರೂ......
ಜೀವ ಬಿಟ್ಟರು ವೈಕುಂಠ ಸೇರಿದರು, ಕಪ್ಪಾಲಿ ಮುಳುಗಿತು ಬಿಳಿಯಾಲಿ ಮೇಲಕ್ಕೆದ್ದು ತೋರಿತು
ನಾರಾಯಣ ಓ ನಾರಾಯಣ ಅಕ್ಕನವರೇ......ಓ......
ಅಜ್ಜನವರು ಪ್ರಾಣ ಬಿಟ್ಟರು ಎಂದಳು ಸಿರಿ......ಓ......
ಇಂದಾದರೋ ತಲೆಗೆ ತಲೆ ಹೊಡೆದುಕೊಂಡಳಂತೆ ಎದೆಗೆ ಎದೆ ಬಡಿದುಕೊಂಡಳಂತೆ
ನಾರಾಯಣ ಅಜ್ಜನವರೆ ನನಗೆ ನರಹತ್ಯೆ ಮಾಡಿದ, ಬ್ರಹ್ಮಹತ್ಯೆ ಮಾಡಿದಂತಹ ರೀತಿ ಆಯಿತಲ್ಲಾ

ನನಗೆ ದಿಕ್ಕು ದೆಸೆ ಅಳಿಯಿತಲ್ಲ ನನಗೆ
ಮುಂದಾಳುತ್ವ ವಹಿಸುವ ಗಂಡುಸು ಇಲ್ಲ ಹಿಂದಿನಿಂದ ಬರುವ ಹೆಣ್ಣು ಇಲ್ಲ ಅಜ್ಜನವರೆ ಓ......
ತಲೆಗೆ ತಲೆ ಹೊಡೆದುಕೊಂಡಳು ಎದೆಗೆ ಎದೆ ಗುದ್ದಿಕೊಂಡಳಪ್ಪಾ ಸಿರಿಯೇ......
ಮತಿ ಕೆಟ್ಟಿತು ಸ್ಮೃತಿ ತಪ್ಪಿತು ಸಿರಿಗೆ......
ಅಷ್ಟು ಹೇಳುವುದನ್ನು ಕೇಳಿದರಂತೆ ಸೇರಿದ ಸಭೆ ಸಾವಿರಾಳು......
ಒಬ್ಬ ಆಳನ್ನು ಕಳುಹಿಸಿದಂತೆ ಇಂದು ಸತ್ಯನಾಪುರದರಮನೆಯಿಂದ ಬತ್ತಕೇರಿ ಬಸರೂರಿಗೇ......ಓ......
ಒಬ್ಬ ಆಳನ್ನು ಕಳುಹಿಸಿದರು......
ಹೋದ ಆಳಿನಲ್ಲಿ ಕೇಳಿದರಂತೆ ಎಲ್ಲಿಂದ ಬಂದೆ ಆಳೇ ಎಲ್ಲಿಗೆ ಹೋಗುವವನೆಂದು ಕೇಳುವಾಗ ಇಂದು ಆಳು ಹೇಳಿದನಂತೆ......
ಸತ್ಯನಾಪುರದ ಅಜ್ಜನವರು ಜೀವ ಬಿಟ್ಟರಂತೆ ವೈಕುಂಠ ಸೇರಿದರಂತೆ ಇಂದು
ನೀವು ಬರಬೇಕಂತೆ ಎಂದು ಹೇಳುತ್ತಾನಪ್ಪ ಆಳು......
ನಾರಾಯಣ ಆಳೇ ಕೇಳು ಇಂದು
ಕಾಂತಾಳ್ವರು ಎಲ್ಲಿಗೆ ಹೋಗಿದ್ದಾರೆಂದು ಕೇಳಿದರೆ ಹೇಳಬೇಕು ನೀನು
ಕಡೆರಿ ಕಾರ್ಕಳದ ತುದಿ ಪೇಟೆಗೆ ಕಿಸ್ತಿನ ಹಣ ಕಟ್ಟಲು ಹೋಗಿದ್ದಾರಂತೆ
ಅವರ ಮನೆಯಲ್ಲಿ ಗಂಡುಸರು ಯಾರೂ ಇಲ್ಲ ಎಂದು ಓ
ಹೇಳಿಬಿಡು ಆಳೇ ಓ ಎಂದು ಕಾಂತಾಳ್ವ ಹೇಳಿದನು......
ಇಂದಾದರೋ ಇಂದು ಹೋದ ಆಳು ಹಿಂತಿರುಗಿ ಬಂದನಂತೆ ಇಂದು
ಕಾಂತಾಳ್ವರು ಇಲ್ಲಂತೆ ಇಂದು ಬತ್ತಕೇರಿ ಬಸರೂರಿಂದ ಬಂದದ್ದು ನಾನು ಅವರು......
ಬತ್ತಕೇರಿ ಬಸರೂರಿನಿಂದ ಕಡೆರಿ ಕಾರ್ಕಳದ ತುದಿಪೇಟೆಗೆ ಓ ಹೋಗಿದ್ದಾರೆಂದು ಹೇಳುತ್ತಾನೆ......
ಅಷ್ಟು ಹೊತ್ತಿಗೆ ಇಂದು ಇನ್ನೊಬ್ಬ ಆಳನ್ನು ಕಳುಹಿಸಿದಳಂತೆ ಇಂದು
ಅಜ್ಜನವರು ತೀರಿಕೊಂಡರಂತೆ ಇಂದು ನನ್ನ ಮದುಮಗ ಬರಬೇಕು ಬರಬೇಕೆಂದು ಓ ಹೇಳಿ ಕಳುಹಿಸಿದಳು ಸಿರಿ......
ಇಂದಾದರೋ ಇಂದು ಎರಡನೇ ಆಳಿನಲ್ಲಿಯೂ ಇಂದು ಕಾಂತಾಳ್ವರು ಹೇಳಿ ಕಳುಹಿಸುತ್ತಾರಂತೆ ಇಂದು
ನಾರಾಯಣ ಆಳೇ ನಾರಾಯಣ ಆಳೇ......ಓ......
ಹೆಣವನ್ನು ಸ್ನಾನ ಮಾಡಿಸಬೇಕು, ಸೌದೆ ಮಾಡಿಸಬೇಕು, ಅಸನದ (ಗದ್ದೆಯ?) ಮೂಲೆಯಲ್ಲಿ ಮಸಣದ ಕಾಷ್ಠ ಪೇರಿಸಬೇಕು ಇಂದು......
ಬಿಸಿನೀರು ಕಾಯಿಸಲು ಹೇಳು ನಾನು ಬರುತ್ತೇನೆಂದು ಓ ಹೇಳುತ್ತಾನೆ ಕಾಂತಾಳ್ವ.....

ಓ......
ಬತ್ತಕೇರಿ ಓ ಕಾಂತಾಳ್ವ......
ಅಷ್ಟು ಹೇಳುವುದನ್ನು ಕೇಳಿದಳಂತೆ ಇಂದು ಆ ಬದಿಯ ಮಾವಿನಮರ ಕಡಿಸಿದಳಂತೆ ಈ ಬದಿಯ ಹಲಸಿನಮರ ಕಡಿಸಿದಳಂತೆ ಇಂದು (ಭತ್ತದ ಗದ್ದೆಯ) ಅಸನದ ಮೂಲೆಯಲ್ಲಿ ಮಸಣದ ಕಾಷ್ಠ ಪೇರಿಸಿದರಂತೆ ಇಂದು......
ಪೇರಿಸಿದ ಆನಂತರ ಕೊಪ್ಪರಿಗೆಯಲ್ಲಿ ಬಿಸಿನೀರು ಕಾಯಿಸಿದಳು ಸಿರಿ......
ಇಂದಾದರೋ ಅಷ್ಟುಹೊತ್ತಿಗೆ ಇನ್ನೊಬ್ಬ ಆಳನ್ನು ಕರೆದಳು......
ನಾರಾಯಣ ಆಳೇ ನೀನು ಕೇಳಿದ್ದೀಯೇ......
ಒಬ್ಬಾಳನ್ನು ಕಳುಹಿಸಿದ್ದಕ್ಕೆ ಬರಲಿಲ್ಲ ಇನ್ನೊಬ್ಬನನ್ನು ಕಳುಹಿಸಿದ್ದಕ್ಕೆ
ಬಿಸಿನೀರು ಕಾಯಿಸಬೇಕು ಇಂದು ಕಟ್ಟಿಗೆ ತಯಾರಿಸಬೇಕೆಂದು ಹೇಳಿ ಕಳುಹಿಸಿದರು ಇಂದು
ಮೂರನೇ ಆಳು ಹೋಗು, ನೀನು ಹೋಗಿ ಬಾ ಎಂದು ಸಿರಿ ಹೇಳುತ್ತಾರೆ......ಓ......
ಮೂರನೇ ಆಳು ಹೋದದ್ದಕ್ಕೆ ಇಂದು ಹೇಳುತ್ತಾರಂತೆ ಇಂದು
ಹೆಣ ತೆಗೆಯಲಿ ಆಮೇಲೆ ನಾನು ಬರುತ್ತೇನೆಂದು ಓ
ಹೇಳುತ್ತಾನೆ ಕಾಂತಾಳ್ವ ಅವನೂ......
ನಾರಾಯಣ ನಾರಾಯಣ......ಓ......
ನಾರಾಯಣ ದೇವರೆ ಬೆರ್ಮರೇ......
ಅಯ್ಯಯ್ಯೋ ಪಾಪವೇ ಎಲಎಲಾ ದೋಷವೇ ನಾನು ಹೇಗಪ್ಪಾ ಈ ಉತ್ತರವನ್ನು ಓ......
ಸಿರಿಯಲ್ಲಿ ಹೇಳುವುದೆಂದು ಹೇಳಿ ಆಳು ಕಣ್ಣಲ್ಲಿ ಕಡುದುಃಖ ದುಃಖಿಸಿದ
ಹೊಟ್ಟೆಯಲ್ಲಿ ಸಂಕಟಪಡುತ್ತಾ ಇಂದು ಬತ್ತಕೇರಿ ಬಸರೂರಿನಿಂದ
ಸತ್ಯನಾಪುರದರಮನೆಗೆ ಓ ಬರುತ್ತಾನೆ ಆಳು......
ಅಷ್ಟು ಹೊತ್ತಿಗೆ ಆಳು ಬಂದು ಕೇಳುವಾಗ ಹೇಳುತ್ತಾರಂತೆ
ನಾರಾಯಣ ಓ ನಾರಾಯಣ ಆಳೇ ಓ ಕೇಳಿದೆಯಾ
ಏನು ಹೇಳಿದರು ಏನು ಹೇಳಿದರೆಂದು ಓ ಸಿರಿ ಕೇಳುತ್ತಾಳೆ ಓ......
ನಾರಾಯಣ ಅಕ್ಕನವರೇ ಓ ನಾರಾಯಣ ಅಕ್ಕನವರೇ......ಓ......
ಹೆಣ ಸ್ನಾನ ಮಾಡಿಸಬೇಕಂತೆ ಹೆಣ ಸುಡಬೇಕಂತೆ
ಆನಂತರ ಓ ಅವರು ಬರುತ್ತಾರಂತೆ ಎಂದು ಹೇಳಿದರು ನಿಮ್ಮ ಮದುಮಗ ಓ ನಮ್ಮ ಕಾಂತಾಳ್ವರು ಎಂದ......
ನಾರಾಯಣ ಓ ನಾರಾಯಣ......ಓ......
ದೇವರು ಬೆರ್ಮರಂತೆ......ಓ......

ದೇವರು ಬೆರ್ಮೆರೂ......
ಬಡಗಣ ಲಂಕೆಲೋಕನಾಡಲ್ಲಿ ಆನೆಕಲ್ಲಿನ ಅಡ್ಡ (ಹಿಂಭಾಗ)ದಲ್ಲಿ ದಂಬೆಕಲ್ಲಿನ ಮುಂಭಾಗದಲ್ಲಿ
ಗಜಮರದ ತುದಿ ನೆರಳಲ್ಲಿ ಬುಟ್ಟಿಯ ಅಯ್ಯೋಜಿಯಲ್ಲಿ (?) ಹೆಡಿಗೆಯ ಪುಷ್ಪದಲ್ಲಿ
ಗಂಧದ ಗುಳಿಗೆಯಲ್ಲಿ ಹೋಮದ ಕಪ್ಪು ಹೊಗೆಯಲ್ಲೀ......
ಅರುವತ್ತಾರು ಕೋಟಿ ನಾಗಬೆರ್ಮೆರ ಮೂವತ್ತಮೂರು ಕೋಟಿ ದೇವರುಗಳ......
ಬೆರ್ಮೆರ ಬಲಭಾಗದಲ್ಲಿ ದೇವರ ಎಡಭಾಗದಲ್ಲಿ ಒಕ್ಕೆತ್ತಿರಿ ವಂಶ
ಪರ್ವತಿ ಜನನ ಈಶ್ವರನ ತೊಡೆಯ ಭಾಗದಿಂದ ಬಂಗಾರದ ಪಿಂಗಾಣಿಗೆ
ಹಿಂಗಾರದ ಎಸಳಿನಲ್ಲಿ ಕುಂಕುಮದ ಹರಳಾಗಿ
ನಿನ್ನೆಗೆ ಜನನಕ್ಕೆ ಬಂದ ಮಗಳಾಗಿದ್ದೇನಾದರೆ ಓ......
ನನ್ನ ಅಜ್ಜನವರ ಹೆಣ ಓ ಮಲ್ಲಿಗೆಯ ಚೆಂಡಿನಂತಾಗಬೇಕು ಓ......
ಇಂದಾದರೋ ಕೊಪ್ಪರಿಗೆಯಲ್ಲಿ ಬಿಸಿನೀರು ಕಾಯಿಸಿದಲ್ಲಿಗೆ ಇಂದು ಅಜ್ಜನವರ ಹೆಣ ಕೊಂಡುಹೋದಳಂತೆ ಇಂದು ನಾಲ್ಕು(ಕಾಲಿನ) ಮಂಚ ಕೊಂಡುಹೋಗಿ ಅಂಗಳದಲ್ಲಿಟ್ಟಳಂತೆ......
ಮಲ್ಲಿಗೆಯ ಚೆಂಡಿನಂತೇ ನನ್ನ ಕೈಗೆ ನನ್ನ ಅಜ್ಜನವರು (ಹಗುರ) ಆಗಬೇಕು......
ಸತ್ಯದಲ್ಲಿ ಹುಟ್ಟಿ ಸತ್ಯದಲ್ಲಿ ಬೆಳೆದಿದ್ದೇನಾದರೆ ಗಾಳಿ ಗೆಲ್ಮೆಯ ಮಗಳು ಹೌದಾದರೆ...... ಓ......
ನಾಗಬ್ರಹ್ಮರ ಸತ್ಯದಲ್ಲಿ......
ಇಂದಾದರೋ ಇಂದು ನನ್ನ ಅಜ್ಜನವರು ಮಲ್ಲಿಗೆಯ ಚೆಂಡಿನಂತೆ ನನಗೆ ಆಗಬೇಕೂ......
ನಡು ಅಂಗೈ ಕೊಟ್ಟಳಂತೆ ಸಿರಿ ಇಂದು ಅಂಗಳಕ್ಕೆ ಕೊಂಡುಹೋಗಿ ಹೆಣವನ್ನು ಮಂಚದಲ್ಲಿ
ಮಲಗಿಸಿದಳಂತೆ ಇಂದು ಸೀಗೆಬಾಗೆ ಸವರಿದಳಂತೆ ಇಂದು......
ಎಣ್ಣೆ ಅರಿಶಿಣ ಓ ಸವರಿದಳು......ಓ......
ಕೊಪ್ಪರಿಗೆಯ ಬಿಸಿನೀರಲ್ಲಿ ಓ ಅಜ್ಜನವರ ಹೆಣವನ್ನು ಸ್ನಾನ ಮಾಡಿಸಿದಳು......
ಮೂಡಣ ನಂದನಕ್ಕೆ ಹೋದಳು ಬಂಗಬಾಳೆಯ ತುದಿ ಎಲೆ ತಂದಳಂತೆ......
ಚಾವಡಿಯಲ್ಲಿ ಮಲಗಿಸಿದಳಂತೆ ದಕ್ಷಿಣ ಉತ್ತರವಾಗಿ ಇಂದು
ಹೆಣವನ್ನು ಕೊಂಡುಹೋಗಿ ಮಲಗಿಸಿದಳಂತೆ......ಓ......
ಅಜ್ಜನವರ ಓ ಉಡುಗೆಯನ್ನೂ......
ತಲೆಯ ಮೇಲು ಭಾಗದಲ್ಲಿ ಭತ್ತ ಹಾಕಿದಳಂತೆ ಕಾಲ ಕೆಳಭಾಗದಲ್ಲಿ ಭತ್ತ ಹಾಕಿದಳಂತೆ
ತೆಂಗಿನಕಾಯಿ ತೆಗೆದಳಂತೆ ಎರಡು ಭಾಗಮಾಡಿ ದೀಪ ಉರಿಸಿಟ್ಟಳಂತೆ ಇಂದು
ಅಜ್ಜನವರ ಆಭರಣಗಳನ್ನು ಅವರ ಹೆಣಕ್ಕೆ ತೊಡಿಸಬೇಕೆಂದಳು ಇಂದು

ನಾರಾಯಣ ಓ ನಾರಾಯಣ ಸಿರಿಯಂತೇ......
ಅಜ್ಜನವರ ಆಭರಣ ಅಂಗೈ ಬಳೆ ಮುಂಗೈ ಸರಪಳಿ ಓ......
ಗಾಳಿಪೆಂಟೀ ಓ ಪರಂಗಿಕೊಡೆ, ಬೆಳ್ಳಿ ಕಟ್ಟಿದ ಚೂರಿ ಓ
ಮುತ್ತು (ತೆತ್ತಿಸಿದ) ಮುದ್ರೆಯ ಉಂಗುರವಂತೆ ಇಂದು
ನಿಂತು ಸಾವಿರವರ್ಷ ಪಟ್ಟವಾಳಿದ ಓ
ಕುಳಿತು ಮುನ್ನೂರು ವರ್ಷ ಪಟ್ಟವಾಳಿದ ಓ
ಆಳುದ್ದ ಇದ್ದ ಅಲವಿನ ದಂಟೆಯನ್ನು ಅಜ್ಜನವರ ಹೆಣದ ಸಮೀಪವಿರಿಸಿದಳು......
ಅಜ್ಜನವರ ಬಾಯಿಗೆ ತುಳಸಿ ಕುಡಿಯಲ್ಲಿ ಓ ಎಳನೀರನ್ನು ಬಿಟ್ಟಳಂತೆ ಇಂದು
ನಾರಾಯಣ ಅಜ್ಜನವರೆ ಓ ನಾರಾಯಣ ಅಜ್ಜನವರೆ......ಓ......
ಮೇಲೆ ಮೇಲ್ತರಲೋಕ ಓ ದೇವರು ಬೆರ್ಮರ ಪಾದಕ್ಕೆ ಓ
ಸ್ವರ್ಗಕ್ಕೆ ಹೋಗಿ ಓ ನಿಮ್ಮ ಮೊಮ್ಮಗ ಓ ನನ್ನ ಗಂಡನ
ಧರ್ಮದ ಮಣ್ಣಿನ ಓ ಧರ್ಮದಲ್ಲಿ ತಲೆಬಾಗಿಸಿ ಓ
ಅಂದಿಗೆ ಉತ್ತರ ನಿಡಿದ ಓ ಅಜ್ಜನವರೆ ನೀವೂ......ಓ......
ಸ್ವರ್ಗಲೋಕಕ್ಕೆ ಹೋಗಿ ಅಜ್ಜನವರೆ ಹಾಲಾಗಿ ಬೆಳೆಯಿರಿ ಓ ನೀರಾಗಿ ತುಂಬಿರಿ......ಓ......
ಹಾಲಾಗಿ ಹೆಪ್ಪಾಗಿ ಎಂದು ಓ ಮೂರು ಹನಿ ನೀರು ಓ ಬಿಟ್ಟಳು ಸಿರಿಯು......
ನಾರಾಯಣ ಓ ನಾರಾಯಣ ಅಜ್ಜನವರೇ......ಓ......
ನಿಮ್ಮ ಮೊಮ್ಮಗ ಓ ದುಂಡುದುಂಡಗಿನ ಓ ಮುದ್ದು ಕುಮಾರಾ......
ಅವನು ಭೂಮಿಗೆ ಜನನವಾಗಬೇಕಾದರೆ ಅಜ್ಜನವರೆ......
ಓ ನಿಮಗೆ ಮರಣವಾಯಿತಲ್ಲ ಅಜ್ಜನವರೇ......
ದಿಕ್ಕಿದೆಸೆ ಇಲ್ಲದ ಕಾಲ ನನಗೆ ಬಂತಲ್ಲ ಅಜ್ಜನವರೆ......
ಆ ರೀತಿಯ ಉತ್ತರ (ಪ್ರಶ್ನೆ) ಹಾಕಿಕೊಂಡಳು ಓ......
ಮೂರು ಹನಿ ನೀರು ಬಿಟ್ಟಳಪ್ಪಾ......
ನಾರಾಯಣಾ ನಾರಾಯಣ ಅಜ್ಜನವರೆ......ಓ......ಅಜ್ಜನವರೆ......
ಕೆಳಗಣ ಸಿರಿಲೋಕ ಮೇಲು ಮೇಲಣ ಲೋಕ ಓ......
ನಡು ನರಲೋಕ ದೇವರು ಬೆರ್ಮರ ಪಾದಕ್ಕೆ ಓ......
ತುಳಸಿಯ ತುದಿಯಲ್ಲೀ ಓ ಎಳನೀರು ನೀರೂ
ಸ್ವರ್ಗಲೋಕಕ್ಕೆ ಹೋಗಿ ಅಜ್ಜನವರೆ ನೀವೂ......ಓ......
ಕೆಳಗಣ ಸಿರಿಲೋಕದಿಂದಾ ಓ......
ಮೇಲಿನ ಮೇಲಣಲೋಕದ ದೇವರು ಬಿರ್ಮೆರು ಪಾದಕ್ಕೇ......ಓ......
ಶರಣು ಹಾಕಿ ಅಜ್ಜನವರೇ......

ನಾರಾಯಣಾ ನಾರಾಯಣಾ......ಓ......
ಮೇಲು ಮೇಲ್ತರಲೋಕದ ಒಬ್ಬ ಬೆರ್ಮೆರ ಪಾದಕ್ಕೇ ಓ......
ಇಂದಾದರೋ ಅಜ್ಜನವರನ್ನು ಇಂದು ಅಂಗೈ ಕೊಟ್ಟಳಂತೆ ಇಂದು ಆ ಬದಿಯ ಮಾವಿನಮರ
ಈ ಬದಿಯ ಹಲಸಿನ ಮರ ಕಡಿಸಿದರಂತೆ ಇಂದು ಅಸನದ ಮೂಲೆಯಲ್ಲಿ
ಮಸಣದ ಕಾಷ್ಠ ಪೇರಿಸಿ......
ನನ್ನ ಅಜ್ಜನವರ ಗುಣ ಗಂಡುಸಿನಲ್ಲಿ ನಾನೇ ಓ ಹೆಂಗುಸಿನಲ್ಲಿ ನಾನೇ
ಒಂದು ತಾಯಿಗೇ ಎರಡು ಗಂಡುಮಕ್ಕಳೆಂದಳು......
ಅಂತಿರುವ ವರಹದಂತಿರುವ (?) ಅಜ್ಜೇರಿಗೇ
ನಾನೊಬ್ಬಳೇ ಮೊಮ್ಮಗಳೆಂದಳು......ಓ......
ತಂದೆ ಹುಟ್ಟಿಸಲಿಲ್ಲ ಅಜ್ಜನವರೆ, ತಾಯಿ ಹೆರಲಿಲ್ಲ, ನೆತ್ತರಲ್ಲಿ ಹುಟ್ಟಲಿಲ್ಲ, ನೀರಲ್ಲಿ ಬೆಳೆಯಲಿಲ್ಲ
ಗಾಳಿ ಗೆಲ್ಮೆಯ ಮಗಳು ನಾನು......
ಹೌದಾದರೆ ನನ್ನ ಅಜ್ಜನವರು......
ಮಲ್ಲಿಗೆಯ ಚೆಂಡಿನಂತೆ ನನ್ನ ಕೈಗೆ ಬರಬೇಕು......ಓ ಹೇಳಿದಳಂತೆ ಸಿರಿ ಇಂದು......
ಅಂಗೈ ಕೊಟ್ಟಳು ಹೆಣ ಎತ್ತಿದಳು ತಲೆ ಕೊಟ್ಟಳು ಸಿರಿಯೇ......ಓ......
ಅಸನದ ಮೂಲೆಯಲ್ಲಿ ಮಸಣದ ಕಾಷ್ಠಕ್ಕೆ ಓ
ಮೂರು ಸುತ್ತು ಪ್ರದಕ್ಷಿಣೆ ಬಂದಳು ಸಿರಿಯೇ......
ಮೂರು ಸುತ್ತು ಪ್ರದಕ್ಷಿಣೆ ಬಂದು ಅಪ್ರದಕ್ಷಿಣೆ ಬಂದಳು ಇಂದು......
ಹೆಣವನ್ನು ಕಾಷ್ಠದ ಮೇಲೆ ತೆಂಕುಬಡಗಾಗಿ ಮಲಗಿಸಿದಳು......
ಸೂರ್ಯನ ದಿಕ್ಕು ನೋಡಿದಳು ಸಿರಿ......
ಹಣ ಮಲಗಿಸಿ ಬೆಂಕಿ ಕೊಟ್ಟಳು ಇಂದು ತುದಿಬುಡವೆಲ್ಲ ಬೆಂಕಿ ಕೊಟ್ಟಳು......
ಕಾಷ್ಠದಿಂದ ಆ ಕಡೆಗೆ ತೆಂಗಿನಕಾಯಿ ಎಸೆದಳೂ......
ಅಜ್ಜನವರ ಹೆಣವನ್ನು ಓ ಉರಿಸಿದಳು ಸಿರಿಯು......ಓ......
ಭೂಮಿಗೆ ಬೂದಿ ಓ ಆಕಾಶಕ್ಕೆ ಹೊಗೆ ಬಿಟ್ಟಳೂ......ಓ......
ಇಂದಾದರೋ ಓ ಹೋದಳು ಓ ಸಿರಿಯಂತೆ ಇಂದೂ......
ಆಸನದ ಮೂಲೆ ಮಸಣದ ಕಾಷ್ಟದಲ್ಲಿಂದ ಓ ಬಂದಳು ಸಿರಿ......
ಸತ್ಯನಾಪುರದರಮನೆ ಹೊಕ್ಕಳೂ......
ಸತ್ಯನಾಪುರದರಮನೆ ಹೊಕ್ಕು ಇಂದೂ......
ತಣ್ಣೀರು ಮಿಂದಳೂ ಓ ಒಳಗೆ......
ಮಗುವನ್ನು ಮುಳುಗಿಸಿ ಶುದ್ಧ ಮುದ್ರಿಕೆ ಎಂದಳು......

ಅಜ್ಜನವರ ಬೂದಿ ಭೂಮಿಗೆ, ಅಕಾಶಕ್ಕೆ ಹೊಗೆ ಓ ಬಿಟ್ಟೆ ಎಂದಳೂ......ಓ......
ಸಿರಿಯೇ ಓ ಹೇಳುತ್ತಾಳಪ್ಪಾ......
ನಾರಾಯಣಾ ಓ ನಾರಾಯಣಾ......ಓ......
ನಾರಾಯಣಾ......
ಇಂದಾದರೋ ಸತ್ಯನಾಪುರದರಮನೆಗೆ ಬಂದಳಂತೆ ಇಂದು
ದಾರುವಿನೊಡನೆ ಹೇಳಿದಳಂತೆ ಓ ದಾರೂ ಹೋಗು ದಾರು ಕಾಶಿಗೆ ಹೋದ
ಕಪಿಲೆದನದ ಹಸಿ* ಸೆಗಣಿ ತೆಗೆದುಕೊಂಡು ಬಾ
ಕಂಚಿನ ಮರಿಗೆಗೆ ಹಾಕಿ ತೆಳ್ಳಗೆ ಕದಡಿಸೂ......
ಮಂದ(ದಪ್ಪ)ವಾಗಿ ಅದನ್ನು ಹರಡು......ಓ......
ಅಜ್ಜನವರ (ಹೆಣ ಇದ್ದ) ಜಾಗಕ್ಕೆ ಓ ಬಳಿಯು......
ಅಷ್ಟು ಹೇಳುವುದನ್ನು ಕೇಳಿದಳಂತೆ ಕಾಶಿಗೆ ಹೋದ ಕಪಿಲೆದನದ ಹಸಿ ಸೆಗಣಿ ತಂದಳಂತೆ ಇಂದು
ಕಲ್ಲಿನ ಮರಿಗೆಗೆ ಹಾಕಿದಳಂತೆ ತೆಳ್ಳಗೆ ಕದಡಿಸಿ ಮಂದ(ದಪ್ಪ)ವಾಗಿ ಓ ಹರಡಿದಳು...... ಓ......
ಮಂದವಾಗಿ ಹರಡಿದಳಂತೆ ಇಂದು ಹರಡಿ ಇಂದು
ಓ ಶುದ್ಧಮುದ್ರಿಕೆಯಾಗಬೇಕೆಂದು ಹೇಳಿದಳು......
ಮೂಡಣ ತಾವರೆಕೆರೆಗೆ ಹೋದಳಂತೆ ದಾರು......
ಅಡಿಮೊಗವಾಗಿ ಮುಳುಗಿ ಮೇಲ್ಮೊಗವಾಗಿ ಕಾಣಿಸಿಕೊಂಡಳು......
ಮೈಲಿಗೆ ಕಳಚಿ ಮಡಿ ಉಟ್ಟಳು ಓ ದಾರು......
ನಾರಾಯಣ ಅಕ್ಕನವರೇ ಓ ನಾರಾಯಣ ಅಕ್ಕನವರೇ......
ನನ್ನ ಅಜ್ಜನವರಿಗೆ ಓ ಸಂತಾನ ಇಲ್ಲ ಓ...... ಕುಟುಂಬ ಇಲ್ಲಾ......
ಕೈಯಡುಗೆ ಮಾಡುತ್ತಾ ಓ ಸೋತುಸುಣ್ಣವಾಗಿ ಇರುವಾಗ ಅಂದು ನನ್ನ ಅಜ್ಜನವರು......
ಕಣ್ಣಲ್ಲಿ ಕಣ್ಣೀರು ಬಿಟ್ಟ(ಸುರಿಸಿದ)ರಂತೆ ಸತ್ಯನಾಪುರದರಮನೆಯಲ್ಲಿ ಒಬ್ಬಳು ಓ ಒಂದೇ ಒಂದು ಜೀವ ಓ......
ಇರುವ ವೇಳೆಯಲ್ಲಿ......
ಕಣ್ಣಲ್ಲಿ ಕಡುದುಃಖ ದುಃಖಿಸುವಾಗಿ ಹೊಟ್ಟೆಯಲ್ಲಿ ಉರಿಸಂಕಟಪಡುವಾಗ ಅಂದು ಓ......
ಏಳು ಅಂತರಗಳ ಯಮದೇವಿ ಗುಡಿ(ಕತ್ತಲಕೋಣೆ)ಯಲ್ಲಿ ಕಾಲುಂಗುರದ ಶಬ್ದದಲ್ಲಿ ಬಳೆಯ ಕಿಣಿಕಿಣಿ ನಾದದಲ್ಲಿ......

---

* ಪಚ್ಚೆ~ಪಂಚ. ಉದಾ : ಪಚ್ಚೆರಂಗಿ~ಪಂಚರಂಗಿ; ಗೊತ್ತು~ಗೊಂತು, ಮಾತ~ಮಾಂತ–ಇತ್ಯಾದಿ. ಹೊಸ ತುಳು–ಪಚ್ಚೆ ಅಂಬಿ. [ಪಚ್ಚೆ ಅರಿ (ಮಲಯಾಳ) = ಹಸಿಅಕ್ಕಿ = ಬೆಳ್ತಿಗೆ ಅಕ್ಕಿ.]

ಒಳಗೆ ಅಡ್ಡಾಡುವೆಡೆಯಲ್ಲಿ ಓ...... ಉದಯ ನಾನಾದೆ ಅಕ್ಕನವರೇ......
ಎಲ್ಲಿಂದ ಬಂದವಳು ಮಗ ಎಲ್ಲಿಗೆ ಹೋಗುವವಳೆಂದು ನನ್ನ ಅಜ್ಜನವರು ಓ ಕೇಳಲು......ಓ......
ಉಣ್ಣುವಷ್ಟು ಅನ್ನ ದುಡಿಯುವಷ್ಟು ಕೆಲಸ ಇರುವಲ್ಲಿಗೆ ನಾನು ಹೋಗುವವಳು ಅಜ್ಜನವರೆ ಎಂದು ಹೇಳಿದೆ......
ಅಂದಿಗೆ ನನ್ನ ಅಜ್ಜನವರು ಹೇಳಿದರು......ಓ......
ಉಣ್ಣುವಷ್ಟು ಅನ್ನ ದುಡಿಯುವಷ್ಟು ಕೆಲಸ ನಾನೇ ಕೊಡುವೆನೆಂದು ಓ ಅಜ್ಜನವರು ಹೇಳಿದ್ದರು......
ಅಂದಿನಿಂದ ಇಂದಿನವರೆಗೆ ಓ ನನ್ನ ಅಜ್ಜನವರು ನನ್ನನ್ನು ಸಾಕಿದರು......
ಸಣ್ಣವಳು ಹೋಗಿ ದೊಡ್ಡವಳಾದೆ, ಹೆಣ್ಣು ಹೋಗಿ ಹೆಂಗುಸಾದೆ ಅಕ್ಕನವರೇ......
ಅಂದಿನಿಂದ ಇಂದಿನವರೆಗೆ ಓ ನನ್ನ ಅಜ್ಜನವರು ನನಗೆ ಹೇಳಿದ್ದರು......ಓ......
ನಡ್ತರೆಯಲ್ಲಿ ನಾಲ್ಕು ಎಡೆಯಲ್ಲಿ ಬಾಳಿದವಳು ತೋರುಗ್ಯೆ ನೀನೆನಗೆ ಸಖಿ, ಕನ್ಯೆ ಹೆಣ್ಣು ದಾರು ಎಂದು ನನಗೆ ನಾಮಕರಣ ಮಾಡಿದರು......
ಆ ಹೆಸರಲ್ಲಿ ನಿನ್ನೆಯವರೆಗೆ ನನ್ನ ಅಜ್ಜನವರು ನನ್ನನ್ನು......
ನಡ್ತರೆಯಲ್ಲಿ ನಾಲ್ಕು ಎಡೆಯಲ್ಲಿ ಓ ಬಾಳುತ್ತಿರು ಎಂದರು......
ಅಂದಿಗೆ ಉತ್ತಾರ ಓ ನಮಗೆ ಬಿಟ್ಟರು......ಓ......
ದಾರುವಿಗೆ ಓ ಜೊತೆಯೆಂದರು......ಓ......
ಸಿರಿ ಜನನಕ್ಕೆ ಬಂದಳೆಂದರು......
ನಿಮ್ಮ ಬೆವರು ಬಿದ್ದಲ್ಲೆ ಅಕ್ಕನವರೆ ನನ್ನ ನೆತ್ತರೆಂದಳು
ನನ್ನ ಬೆವರು ಬಿದ್ದಲ್ಲೇ ಅವರ ನೆತ್ತರೆಂದು ಅಂದಿಗೆ ನಮಗೆ ಅಜ್ಜನವರು ಶಾಪ(=ವರ) ಕೊಟ್ಟಿದ್ದಾರೆ ಅಕ್ಕನವರೇ......
ಓ ಎಂದು ಓ ಹೇಳಿದಳು ದಾರೂ......
ಹೋಗಮ್ಮಮ ದಾರು ಇಮದು ಯಾಕಾಗಿ ಅತ್ತುಕರೆದು ಏನು ಮಾಡುವುದು......
ನಮಗೆ ಸಾರಿ ಹೇಳಿ ಸಮಾಧಾನಿಸಲು ಯಾರಿದ್ದಾರೆ? ತಾಯಿ ಇದ್ದಾರೆಯೇ?
ತಂದೆ ಇದ್ದಾರೆಯೇ ಓ ಮವಂದಿರು, ತಂಗಿ, ತಮ್ಮ ಇದ್ದಾರೆಯೇ ನನಗೆ......
ನನಗೆ ಸಮಾಧಾನ ನೀನೆ ಹೇಳಬೇಕು ದಾರು......ನಿಮಗೆ ಸಮಾಧಾನ ನಾನೇ ಹೇಳಬೇಕು......
ಓ ನಮಗೆ ನಮ್ಮ ಒಡಲು ತಂಪು ಓ ಸ್ವಾಮಿ ಬೆರ್ಮೆರು ಮಾಡಬೇಕೆಂದರು......
ಇಂದಾದರೋ ದಾರು ಹೋದಳಂತೆ ಇಂದು ಒಂದು ಬಳ್ಳ ಅಕ್ಕಿ ಓ ತೊಳೆದು ಇಟ್ಟಳಂತೆ ಇಂದು ಓ ಅಜ್ಜನವರ ಸಾವಿನ ಗಂಜಿ ಎಂದಳು......ಓ......
ಒಂದು ತೆಂಗಿನಕಾಯಿ ಒಡೆದಳಂತೆ ಚಟ್ನಿ ಮಾಡಿದಳಂತೆ ಗಂಜಿ ಮಾಡಿದರಂತೆ

ಇಂದು......
ದಾರುವೂ ಸಿರಿಯೂ ಓ ಅಜ್ಜನವರ ದುಃಖದ ಗಂಜಿ ಎಂದು ಊಟಮಾಡಿದರೂ......
ಅಂದಿನ ದಿನ ಹೋಗಿದೆ ಮರುದಿನ ಬರುವಾಗ ಓ ಮೂರನೇ ದಿನದಂದು ಓ ಅಜ್ಜನವರಿಗೆ......ಓ.......
ಬೂದಿ ಮುಚ್ಚಬೇಕು ಓ ಉತ್ತರಕ್ರಿಯೆ ಮಾಡಬೇಕೆಂದಳು......
ಇಂದಾದರೋ ಭಂಡಾರಿಯನ್ನು (ಕ್ಷೌರಿಕನನ್ನು) ಬರ ಹೇಳಿದಳು ಮಡಿವಾಳನನ್ನು ಬರಹೇಳಿ ಇಂದು ಓ
ಬೂದಿ ರಾಶಿ ಓ ಮಾಡಿಸಿದದಳು ಓ......
ಭಂಡಾರಿಯಿಂದ (ಕ್ಷೌರಿಕನಿಂದ) ಓ ಶುದ್ಧ ಮಾಡಿಸಬೇಕೆಂದಳೂ......
ಇಂದಾದರೋ ಭಂಡಾರಿ ಎಲ್ಲಿದ್ದಾನೆಂದು ಕೇಳಲು ಹೇಳುತ್ತಾರಂತೆ ಇಂದು
ದಾರು ಹೇಳಿದಳಂತೆ ಇಂದು ಚಿಕ್ಕಮ್ಮನ ಮಗ ಸಿದ್ದುಲ್ಲ ಭಂಡಾರಿಯಂತೆ ಇಂದು
ದೊಡ್ಡಮ್ಮನ ಮಗ ಪೆರ್ನುಲ್ಲ ಭಂಡಾರಿಯಂತೆ ಇಂದು ಗಟ್ಟದ ಮೇಲಂತೆ
ಮೇಲಿನಂದು ರಾಜ್ಯದಲ್ಲಿ ತುರ್ಕರ ತೋಟದಲ್ಲಿ ಬ್ಯಾರಿಯ ಪಳ್ಳಿ(ಮಸೀದಿ)ಯಲ್ಲಿ
ಕುಡುಂಬರ ಇಂಗ್ರೋಜಿಯಲ್ಲಿ ಇಂದು......
ಆ ಕಡೆ ನಾಡು ಈ ಕಡೆ ಕುದುರುನಲ್ಲಿ
ಆರು ಎಸಳಿನಲ್ಲಿ ಮೂರು ಕುಸುಮದಲ್ಲಿ ಓ ಇದ್ದಾನಪ್ಪಾ ಓ ಚಿಕ್ಕಮ್ಮನ ಮಗ ಸಿದ್ದುಲ್ಲ ಭಂಡಾರೀ......
ಇಂದಾದರೋ ಇಂದು ಆತನನ್ನು ಬರಮಾಡಬೇಕೆಂದು ಹೇಳಿದರು......
ಓಲೆಯ ಆಳನ್ನು ಕರೆಸಿದಳು ಇಂದು ಓಳೆ ಕಳುಹಿಸಬೇಕೆಂದರು......
ಬೆಟ್ಟು ಮನೆಯ ಒಕ್ಕಲು ಬಿರ್ಮಣ ಬೈದನನ್ನು ಕರೆಸಿದರಂತೆ......ಇಂದು......
ಮೇಲಿನ ಉದ್ದದ ಬೆಟ್ಟುಗದ್ದೆಯಲ್ಲಿರುವ ಗುಜ್ಜು ತಾಳೆಮರಕ್ಕೆ ಓ ಸಣ್ಣ ಏಣಿ ಇರಿಸಿದರು......
ಸಣ್ಣ ಏಣಿ ಇರಿಸಿದರು ಕಟ್ಟುಕಟ್ಟು ಎಳೆಗರಿ ಕಡಿಸಿದರು......ಇಂದು......
ಕಟ್ಟಿಗೆ ಮಿಗಿಲಾದ ಓ ಗರೀ ತೆಗೆಸಿದರೂ......
ಮುಂಜಾವದ ಎಳೆಬಿಸಲಿಗೆ ಹಾಕಿಸಿದಂತೆ ಸಂಜೆಯ ಹನಿ(ಕಿರು)ಬಿಸಿಲಿನ ಮಡಚಿಸಿದರಂತೆ ಇಂದು......
ಕಟ್ಟೆಗೆ ಮಿಗಿಲಾದ ಓ ಗರಿ ತೆಗೆದರೂ......
ಗರಿಯ ಬುಡ ಕತ್ತರಿಸಿದರು ತುದಿ ತುಂಡರಿಸಿದರು ವಕ್ರತೆಯನ್ನು ಸರಿಪಡಿಸಿದಂತೆ......
ಬೆನ್ನಿಗೆ ಇನ್ನೊಂದು ಗರಿ ಎಳೆದರಂತೆ ಇಂದು......
ಅಂದಕ್ಕೆ ಎಣ್ಣೆ ಅರಿಶಿಣ ಓ ಒಪ್ಪವೆಂದು ಕೊಡಿಸಿದರಂತೆ
ಇಂದಾದರೋ ಒಪ್ಪವೆಂದು ಕೊಡಿಸಿ ಓಲೆ ಬರೆಸಿದರಂತೆ

ಎಡದ ಕೈಯಲ್ಲಿ ಮಸಿ(ಶಾಯಿ)ಯ ಬರುರುಡೆಯಂತೆ ಬಲದ ಕೈಯಲ್ಲಿ ಕಂಟ ಹಿಡಿದರಂತೆ ಓಲೆ ಹಿಡಿದರಂತೆ ಇಂದು ಓಲೆಯ ಅಕ್ಷರ ಬಾಯಿಯಲ್ಲಿ ಗುಣುಗುಣಿಸಿದರಂತೆ ಬಾಯಿಯಕ್ಷರ ಓಲೆಯಲ್ಲಿ ಬರೆದರಂತೆ......

ಓಲೆಯಲ್ಲಿ ಕಾಣಿಸಿ ಓ ಓಲೆ ಬಿಟ್ಟರಂತೆ ಓ......

ಓಲೆಯ ಆಳನ್ನು ಓ ಕರೆಸಿದರೂ......

ಓಲೆಯ ಆಳಿಗೆ ದಾರಿಯ ಖರ್ಚಿಗೆ ಸಂಬಳ ಕೊಟ್ಟರೂ......

ಹೊಟ್ಟೆಯ ಹಸಿವು ನೀಗಿಸಿದರು, ಸೆರಗು ಎಳೆದರಂತೆ ಓಲೆಯ ಗಂಟು ಕಟ್ಟಿದರು......

ಓಲೆಯ ಆಳು ಹೋಗುತ್ತಾ ಹೋಗುತ್ತಾ ಇಂದು ಓ ಗಟ್ಟದ ಮೇಲಕ್ಕೆ ಓ ಹೋಗಿದ್ದಾನೆ ಆಳು......

ಗಟ್ಟದ ಮೇಲಕ್ಕೆ ಮೇಲ್ ರಾಜ್ಯದಲ್ಲಿ ತುರ್ಕರ ತೋಟದಲ್ಲಿ, ಬ್ಯಾರಿಗಳ ಮಸೀದಿಯಲ್ಲಿ, ಕುಡುಂಬರ ಇಂಗ್ರೇಜಿಯಲ್ಲಿ, ಆ ಕಡೆಯ ನಾಡಲ್ಲಿ, ಈ ಕಡೆಯ ಕುದುರುವಿನಲ್ಲಿ ಆರು ಎಸಳಲ್ಲಿ ಮೂರು ಕುಸುಮಗಳಲ್ಲಿ

ಚಿಕ್ಕಪ್ಪನ ಮಗ ಸಿದ್ದುಲ್ಲ ಭಂಡಾರಿಯನ್ನು ಬರುವಂತೆ ಮಾಡಿದರಂತೆ ಓಲೆಯ ಬರವಣಿಗೆಯನ್ನು ಓದಲು

ಓಲೆಯನ್ನು ಸೆರಗು ಎಳೆದು ಓಲೆಯ ಗಂಟನ್ನು ಭಂಡಾರಿಯ ಕೈಯಲ್ಲಿ ಓ ಕೊಟ್ಟಿದ್ದಾನೆ ಆಳು......

ಕೊಟ್ಟ ಓಲೆಯನ್ನು ಮಾರುದ್ದ ಓ (ಬಿಡಿಸಿ) ಬಿಟ್ಟನಂತೇ

ಓಲೆಯ ಅಕ್ಷರವನ್ನು ಬಾಯಲ್ಲಿ ಓದಿದ, ಬಾಯಿಯ ಅಕ್ಷರವನ್ನು ಓಲೆಯಲ್ಲಿ ಕಾಣಿಸಿಬಿಟ್ಟ......

ಓಲೆಯ ಓದುವಿಕೆ ಓದಿದನಂತೆ......ಓ......

ಓಲೆಯ ಆಳಿನ ಓ ಬೆನ್ನುಹಿಡಿದು ಓ ಬರುತ್ತಾನಂತೇ ಭಂಡಾರಿ......

ಅಯ್ಯಯ್ಯೋ ಪಾಪವೇ ಎಲಎಲಾ ದೋಷವೇ ರಾಮಕಾಲವೇ ಇಂದು ಸತ್ಯನಾಪುರದ ಅರಮನೆಯಲ್ಲಿ ಇಂದು ಆರ್ಯಬನ್ನಾರು ಬಿರ್ಮುಮಾಲವರು

ಓ ಭೂಮಿಗೆ ಓ ಬೂದಿ ಅದರಂತೆ......

ಓ ಆಕಾಶಕ್ಕೆ ಹೊಗೆ ಓ ಏರಿತಂತೆ......

ಸತ್ಯನಾಪುರದ ಅರಮನೆಗೆ ಭಂಡಾರಿ ಬಂದು ಇನ್ನು ಓ ಅಕ್ಕನವರೇ ಓ ಅಕ್ಕನವರೇ ಎಂದು ಮೂರು ಬಾರಿ ಕರೆಯಲು......

ಒಳಗಣ ಚಾವಡಿಯಲ್ಲಿ ಓ ಒಂಟಿ ಬಟ್ಟೆ ಉಟ್ಟುಕೊಂಡು ಕಣ್ಣಲ್ಲಿ ಕಡುದುಃಖ ಬಿಡುತ್ತಾ ಹೊಟ್ಟೆಯಲ್ಲಿ ಸಂಕಟಪಡುತ್ತಾ ಓ ಹೊರಗಡೆ ಬರುತ್ತಾಳೆ ಸಿರಿ......

ಓ ಸಿರಿ ತಾನು ಓ ಬರುವಾಗಲಂತೆ......

ನಾರಾಯಣ ಓ ನಾರಾಯಣ ಹೆಂಗುಸೇ ಓ......

ಅಶನದ ಮೂಲೆಯಲ್ಲಿ ಮಸಣದ ಕಾಷ್ಠ ಪೇರಿಸಿದಲ್ಲಿಗೆ ಓ ಹೋಗಪ್ಪ ಭಂಡಾರೀ ಓ......
ಬೂದಿ ರಾಶಿ ಮಾಡು ಎಂದರೂ......
ಇಂದಾದರೋ ಇಂದು ಒಂದು ತೆಂಗಿನಕಾಯಿ ಹಿಡಿದುಕೊಂಡು ಹೋದನಂತೆ ಭಂಡಾರಿ ಮಡಿವಾಳ ಹೋದನಂತೆ, ಇಂದು ಬೂದಿ ರಾಶಿ ಮಾಡಿದನಂತೆ,
ಬೂದಿ ಮುಚ್ಚಬೇಕೆಂದು ಹೇಳಿದನಂತೆ, ಇಂದು ಸರಳಿ ಸೊಪ್ಪು (ಗೋರಿಯ ಸುತ್ತು) ಊರಿದರಂತೆ......
ಎಳನೀರು ತೂತು ಮಾಡಿ ಓ ಇಟ್ಟಳಂತೆ ಸಿರಿಯೇ......
ನಾರಾಯಣ ಓ ನಾರಾಯಣ......
ಅಜ್ಜನವರೆ ನಿಮಗೆ ಓ
ತಂದೆ ಹುಟ್ಟಿಸಲಿಲ್ಲ ಓ ತಾಯಿ ಹೆರಲಿಲ್ಲ
ಆ ರೀತಿಯ ಮಗಳು ನಾನೂ......ಓ......
ಉತ್ತರಕ್ರಿಯೆ ಓ ಮಾಡುತ್ತೇವೆ ಅಜ್ಜನವರೆ ಓ......
ಅಶನದ ಮೂಲೆಯ ಮಸಣದ ಕಾಷ್ಠಕ್ಕೆ
ಮೂರು ಸುತ್ತು ಪ್ರದಕ್ಷಿಣೆ ಬಂದಳು ಸಿರಿ ಇಂದೂ......
ಎಳನೀರು ತೂತು ಮಾಡಿ ಇಟ್ಟಳಂತೆ ಸಿರಿ
ಹಿಂತಿರುಗಿ ಓ ಬಂದಳು ಸಿರಿಯೇ......
ಇಂದಾದರೋ ಸಿರಿ ಬಂದು ಇಂದು ಮಗು ಕುಮಾರನಿಗೆ ಓ......
ಹೊಟ್ಟೆತುಂಬ ಹಾಲು ಕುಡಿಸಬೇಕೆಂದು ಓ ಮಗುವನ್ನು ಹಿಡಿದು ಓ ಕುಳಿತು ಕೊಂಡಿದ್ದಾಳೆ ಸಿರಿ......
ಅಷ್ಟು ಹೊತ್ತಿಗೆ ಇಂದು ಬರುತ್ತದಪ್ಪಾ ಓ ಬಹಿರಂಗದ ಓಲೆ ಓ ಬಹಿರಂಗದ ಆಳು ಓ ಅಂತರಂಗ(ರಹಸ್ಯ)ದ ಓಲೆ......
ಇಂದಾದರೋ ಇಂದು ಬತ್ತಕೇರಿ ಬಸರೂರಿನ ಕಾಂತಾಳ್ವನಂತೆ ಇಂದು ಸೂಡದಣ್ಣು ಮಗ ಶಂಕರಾಳ್ವನನ್ನಂತೆ ಇಂದು
ಒಟ್ಟು ಸೇರಿಸಿ ಓ ಸೂಡದಣ್ಣು ಮಗ ಓ ಸತ್ಯನಾಪುರ ಆಳಬೇಕು
ಒಳಗೇ ಸಿರಿ ಇರಬೇಕು ಎಂದು ಓ......
ಬಸರೂರ ಕಾಂತಾಳ್ವಾ ಓ ಎದುರು ಹಾಕಿಕೊಳ್ಳುತ್ತಾನೆ ಓ......
ಕೆಳ ಭಾಗದ ಪಾಲವರು ಮೇಲ್ಭಾಗದ ಪಾಲವರು ನಡುನಕರದ ಪಾಲವರಂತೆ ಇಂದು
ನಾಗಸಂಪಿಗೆಯ ಬುಡದಲ್ಲಿ ಓ ನಾಗರಿಕರ ಕೂಟ ಓ ಸಸಿ ಮಾವಿನ ಬುಡದಲ್ಲೀ ಓ......
ಅಸುರರ ಕೂಟ ಓ ಕರೆಯಬೇಕೆಂದರು......
ಇಂದಾದರೋ ಇಂದು ಅಷ್ಟು ಮಾಡಿಯಾಗುವಾಗ ಇಂದು
ರಹಸ್ಯದ ಓಲೆ ಓ ಹೊರಗಿನ ಆಳು ಓ ಕಳುಹಿಸುತ್ತಾರೆ
ಓಲೆಯ ಆಳು ಓ ಬಂದು......

ಓಲೆ ಬಿಚ್ಚಿ ಕೊಡಬೇಕೆಂದು ಹೇಳುತ್ತದೆ ಮಾನ್ಯನಿಗೆ
ನಾರಾಯಣ ನಾರಾಯಣ ಓ......
ಬಳಸಿಕೊಂಡು ಬಂದಿದೆ ವಕ್ರವಾದ ಬೇಲಿಯನ್ನು
ದಾಟಿಕೊಂಡು ಬಂದಿದೆ ದಾಟುಬೇಲಿಯನ್ನು
ಶರೀರವನ್ನು ಓಲೆಮಾಡಿ ನಿಂತು ಒಂದು ಕಾಲಲ್ಲಿ ಮೆಟ್ಟಿ ನಿಂತು ಕೈಕೊಡುವಾಗ......ಓ......
ನಾರಾಯಣ ನಾರಾಯಣಾ......ಓ......
ಒಂದು ಶರಣು ಶರಣಂತೇ......ಓ......
ಮೇಲು ಲೋಕ ಮೇಲಣಲೋಕ ಒಬ್ಬ ಬೆರ್ಮೆರ ಪಾದಕ್ಕೆ ಒಂದು ಶರಣೂ......
ಒಂದು ಶರಣೂ ಒಂದು ಶರಣೂ......ಓ......
ಕೆಳಗೆ ಸಿರಿಲೋಕ ಸಿರಿಬಾರಿ ಉಳ್ಳಾಕ್ಲು ಪಾದಕ್ಕೆ ಒಂದು ಶರಣೂ......
ಶರಣೂ ಓ ಶರಣೂ......ಓ......
ನಡು ನರಲೋಕ ಓ ನರಜಂತುಗಳ ಪಾದಕ್ಕೆ ಒಂದು ಶರಣೂ......
ಶರಣೂ ಓ ಶರಣೂ......ಓ......
ಈ ಸ್ಥಳದ ಓ ದೇವರು ಬಿರ್ಮೆರು
ರಾಜಂದೈವ ಓ ಕೊಡಮಣಿತ್ತಾಯ ಪಾದಕ್ಕೇ ಓ ಒಂದು ಶರಣೂ......
ನಾರಾಯಣಾ ಓ ನಾರಾಯಣಾ......ಓ......
ಎಲ್ಲಿಂದ ಬಂದದ್ದು ಓ ಮಾನವ ನೀನು......ಓ......
ಎಲ್ಲಿಗೆ ಹೋಗುವುದೆಂದು ಓ ಕೇಳುತ್ತಾಳೆ ಸಿರಿ......ಓ......
ಸತ್ಯಮಹಾಲೋಕದ ಓ ಸಿರಿ......
ನಾರಾಯಣ ಓ ನಾರಾಯಣ ಅಕ್ಕನವರೇ......
ಎಲ್ಲಿಂದ ಬಂದದ್ದು ಆಳು ಓ ಎಲ್ಲಿಗೆ ಹೋಗುವವನೆಂದು ನಾನು ಹೇಳುವುದಿಲ್ಲಪ್ಪಾ
ಈ ಓಲೆ ತಿಳಿಸುತ್ತದೆ ಎಂದ ಓ......
ಓಲೆಯ ಆಳು ಓ ಹೇಳುತ್ತಾನೆ......
ಅಷ್ಟು ಹೊತ್ತಿಗೆ ಇಂದು ಸೆರಗು ಎಳೆದನಂತೆ ಆಳು ಓ ಓಲೆಯ ಗಂಟು ಬಿಚ್ಚಿ ಇಂದು
ಓಲೆಯನ್ನು ಓ ಸಿರಿಯ ಮಡಿಲಿಗೇ ಓ ಹಾಕಿಬಿಟ್ಟನು......
ಅಷ್ಟು ಹೊತ್ತಿಗೆ ಇಂದು ಸಿರಿಯಂತೆ ಇಂದು ಮಡಿಲಲ್ಲಿರುವ ಓಲೆಯನ್ನು ಕೈಯಲ್ಲಿ
ಹಿಡಿದಳಂತೆ
ಮೊಳ ಉದ್ದ ಓ ಬಿಡಿಸಿದಳಂತೆ ಓ......
ಓ ನೆನಪಿನ ಓದು ಓ ಓಲೆಯ ಓದನ್ನೂ ಓದಿದರಂತೆ ಸಿರಿ......
ಇಂದಾದರೋ ಇಂದು ಓಲೆಯ ಓದು ಓ ಓದುವಾಗ ಸಿರಿಗೆ......ಓ......
ಕಣ್ಣಲ್ಲಿ ಕಡುದುಃಖ ಓ ಹೊಟ್ಟೆಯಲ್ಲಿ ಸಂಕಟ......ಓ......ಪಡುತ್ತಾರೆ ಸಿರಿ......

ಇಂದಾದರೋ ಇಂದು ನನ್ನ ಅಜ್ಜನವರು ಸತ್ಯನಾಪುರದರಮನೆಯಲ್ಲಿ
ಆರ್ಯಬನ್ನಾರು ಬಿರ್ಮುಮಾಲವರೂ ಓ ನಿನ್ನೆಗೆ ಸಾಯಬೇಕಿತ್ತೇ......ಓ......
ಅಜ್ಜನವರ ಎದೆಯ ಬೆಂಕಿ ಓ ಆರಲಿಲ್ಲಪ್ಪಾ......ಓ......
ನನ್ನ ಕಣ್ಣೀರು ಓ ನಿಲ್ಲಲಿಲ್ಲಪ್ಪಾ......
ಇಂದಿಗೆ ನನಗೆ ಓ ಗಂಡುಸು ಓ
ಹೋಗುವ ಕೆಳಕ್ಕೆ ಓ ಹೆಣ್ಣುಹೆಂಗುಸೂ
ಹೋಗುವ ವೇಳೆ ಓ ಬಂತು ನನಗೆಂದರು......
ಇಂದಾದರೋ ಇಂದು ಬತ್ತಕೇರಿ ಓ......
ನನ್ನ ಮದುಮಗನಂತೆ ಇಂದು ಸೂಡದಣ್ಣು ಮಗ
ಎದುರು ಕುಳಿತುಕೊಂಡು ಓ......ಓಲೆಯನ್ನು ಓ ಕಳುಹಿಸಿದರಪ್ಪಾ......ಓ......
ಹಿಂದೆ ನನ್ನ ಗಂಡ ಕುಳಿತರಲ್ಲಾ......
ಎಂದು ಹೇಳಿದರು ಸಿರಿ, ಓಲೆಯನ್ನು ಗಂಟು ಕಟ್ಟಿದರು......ಓ ಓಲೆಯ ಮಾಣಿಯ ಕೈಯಲ್ಲಿತ್ತರು......
ಇಂದಾದರೋ ಇಂದು ಮಗುವನ್ನು ಎತ್ತಿದರು ಇಂದು
ಮಡಿಲಲ್ಲಿ ಹಾಕಿಕೊಂಡು ಇಂದು ಬಲದ ಸಿರಿಮೊಲೆ ಉಣಿಸುವಾಗ ಹೇಳುತ್ತಾರೆ ಸಿರಿ ಓ......ಕೇಳಬೇಕೂ......
ಹೊಟ್ಟೆತುಂಬ ಹಾಲುಣ್ಣು ಓ ಮಗ ಕುಮಾರಾ......
ಈ ಭೂಮಿಗೇ ನೀನು ನನ್ನ ಹೊಟ್ಟೆಯಲ್ಲೇ ಓ ಜನನ ಆಗಬೇಕೊ......
ನನ್ನ ಅಜ್ಜನವರಿಗೆ ಓ ಮರಣ ಬರಬೇಕು......ಎಂದು......
ಆ ರೀತಿಯ ಯೋಗ ಓ ಹಾಕಿದರಲ್ಲಪ್ಪಾ ಎಂದು......ಓ......
ಮಗುವನ್ನೆತ್ತಿ ತೊಟ್ಟಿಲಲ್ಲಿ ಮಲಗಿಸಿದರು......ಓ......
ನಾರಾಯಣಾ ಓ ನಾರಾಯಣ ದಾರು......ಓ......
ಕೂಟದ ಕೆಳಕ್ಕೆ ಓ ನಾನು ಹೋಗಿ ಬರುತ್ತೇನೆ
ಕುಮಾರನನ್ನು ಜೋಕೆಯಿಂದ ಓ ನೋಡಿಕೋ ಎಂದರು......ಓ......
ಸಿರಿ ಹೇಳುತ್ತಾರಪ್ಪಾ ಓ ಸತ್ಯಮಹಾಲೋಕದ ಸಿರಿ......
ನಾರಾಯಣಾ ಓ ನಾರಾಯಣ ಅಕ್ಕನವರೇ......ಓ......
ಗಂಡುಸರು ಹೋಗುವ ಕೂಟದ ಕಣಕ್ಕೆ
ಹೆಣ್ಣುಹೆಂಗುಸು ನೀವು ಹೋಗುವುದೇ ಎಂದಳು......
ನಾರಾಯಣ ಸಿರಿಯೇ ಓ ದಾರು ಕೇಳಿದ್ದೀಯೇ ನೀನೂ ಓ......
ಆ ವೇಳೆ ಬಂದೊದಗಿದೆ ನನಗೆಂದರು......ಓ......
ಏಳು ಅಂತರಗಳ ಯಮಗುಡಿ (ಕತ್ತಲಕೋಣೆ)ಗೆ ಹೋದರು ಸಿರಿ ಓ......
ರಾವಿನ(?) ಗೆಜ್ಜೆಕತ್ತಿ ತೆಗೆದರು ಇಂದು ಮಡಿಲಲ್ಲಿಟ್ಟುಕೊಂಡರಂತೆ ಇಂದು

ಹನೆ(ಒಲಿಯ) ಕೊಡೆ ಹಿಡಿದರು ಸತ್ಯನಾಪುರದರಮನೆ ಓ ಇಳಿದರು ಸಿರಿಯೇ......
ಸತ್ಯನಾಪುರದರಮನೆ ಇಳಿದರು ಸಿರಿಯೇ ಓ......
ಬಾಳೆ ಹಾಕಿದ ಬಾಕಿತಿಮರು ಹಿಂದೆ ಹಾಕಿ ನಡೆದರು ಇಂದು
ಹುರುಳಿ ಬಿತ್ತುವ ಗದ್ದೆಯನ್ನು ಹಿಂದಿಕ್ಕುತ್ತಾ ಹೂಹಾಕುವ ಪುದ್ದರ ಕಿಂಬಳಗದ್ದೆಯನ್ನು ಹಿಂದೆ ಹಾಕಿ ಮುನ್ನಡೆದರು......
ಚಿಕ್ಕ ತೋಡು ಸಣ್ಣ ಕಾಲುಸಂಕ ಓ ಹಿಂದೆ ಹಾಕಿ ಹೋದರೂ ಓ......
ಜಾನುವಾರುಗಳು ಹೋಗುವ ಹೆದ್ದಾರಿ ಬಿಟ್ಟರು
ಮನುಷ್ಯರು ಹೋಗುವ ಮಾರ್ಗ ಹಿಡಿದರು......
ಮನುಷ್ಯರು ಹೋಗುವ ಓ ಮಾಗ ಹಿಡಿದುಕೊಂಡು......ಓ......
ಹೋಗುತ್ತಾ ಹೋಗುತ್ತಾ ಹೋಗುತ್ತಾರೆ ಓ ಸಿರಿಯೇ......ಓ......
ಬತ್ತಕೇರಿ ಬಸರೂರ ಓ......
ಸಣ್ಣ ಮಾವಿನ ಸಸಿಯ ಬುಡದಲ್ಲಿ......
ನಾಗಸಂಪಿಗೆಯ ಓ ಬುಡದಲ್ಲಿ ಓ......
ನಾಗರಿಕರ ಕೂಟ ಓ......
ಇಂದಾದರೋ ಇಂದು ದೂರದಲ್ಲಿ ಬರುವುದನ್ನು ನೋಡಿದರಂತೆ......
ನೋಡಿಯಂತೆ ಇಂದು ಓ
ಪಂಚಾಯತಿ ಕೂಟದ ಕಣದಲ್ಲಿ......
ಮೂರುಕಾಲಿನ ಓ ಮುಂಡು ಮುಕ್ಕಾಲಿಯನ್ನೂ ತಂದಿಟ್ಟರಂತೆ ಇಂದು
ಕೆಳ ಭಾಗದ ಪಾಲವರು ಮೇಲ್‌ಭಾಗದ ಪಾಲವರು ನಡುನಕರೆಯ ಓ ಪಾಲವರು ಇದ್ದವರು ಓ......
ಇಂದಾದರೋ ದೂರದಿಂದ ಇಂದು ಪಿಸುಮಾತನ್ನಾಡಿಕೊಂಡು ಇಂದು......
ಸೂಡದಣ್ಣ ಮಗನನ್ನು ಎದುರು ಕುಳ್ಳಿರಿಸಿ ಓ ಸೂಡದಣ್ಣ ಮಗ ಸಂಕರಾಳ್ವನನ್ನು ಎದುರೇ ಕುಳಿತುಕೊಳ್ಳಿಸಿದ್ದಾರೆ......
ಇಂದಾದರೋ ಇಂದು ಬತ್ತಕೇರಿ ಬಸರೂರ ಕಾಂತಾಳ್ವನಂತೆ ಇಂದು......
ಹಿಂದಿನಿಂದ ನಿಂತುಕೊಂಡು ಎಲೆಮರೆ ಕಾಯಿಯಂತೆ ಇದ್ದಾನಪ್ಪಾ ಅಲ್ಲಿ......
ನಾರಾಯಣ ನಾರಾಯಣ ಮಗ ಸಿರಿಯೇ ಓ......
ಎಲೆಮರೆ ಕಾಯಿ ಆಗಬೇಡಪ್ಪ......ಓ......ಬಾ ಸಿರಿಯೇ ಓ......
ನಿನ್ನಂಥ ಸಹೋದರಿ ಸೊಸೆಯಂದಿರು ನಮಗೂ ಇದ್ದಾರೆಂದು ಓ ಹೇಳುತ್ತಾರೆ ಪಾಲವರು......
ಇಂದಾದರೋ ಇಂದು ಅಷ್ಟು ಹೊತ್ತಿಗೆ ಹೇಳುತ್ತಾಳೆ ಸಿರಿ......
ನಾರಾಯಣ ನಾರಾಯಣ ಓ ಗಂಡುಸೇ......
ನನ್ನಂತೆ ಸಹೋದರಿ ಸೊಸೆಯಂದಿರಿದ್ದರೆ

ನಿಮ್ಮ ನಿಮ್ಮ ಮನೆಯಲ್ಲಿ ಬಿಟ್ಟು ಬರಲಿಲ್ಲವೇ......ಓ......
ಗಂಡುಸು ಹೋಗುವ ಓ ಕೂಟದ ಕಳಕ್ಕೆ ಹೆಣ್ಣುಹೆಂಗುಸನ್ನು ಓ ಬರಲು ಹೇಳುತ್ತೀರಾ.....
ಓ......
ಅಂತ ಕರುಣೆ ಹುಟ್ಟಿದೆಯಾ ಓ ಗಂಡುಸೇ ಎಂದಳು......
ಇಂದಾದರೋ ಬಾ ತಾಯಿ ಸಿರಿಯೇ ಓ ಪಾಲವರ ಮಧ್ಯೆ
ನಡುನಕರದಲ್ಲಿ ಓ ಕುಳಿತುಕೋ ಮಗಾ......
ಮೂರುಕಾಲಿನ ಮುಂಡು ಮುಕ್ಕಾಲಿಯನ್ನು ನಿನಗೆ ತಂದಿಟ್ಟಿದ್ದೇನೆ ಎಂದು ಹೇಳಿದರು....
ನಾರಾಯಣ ನಾರಾಯಣ ಗಂಡುಸೇ ಓ......
ಕುಳಿತುಕೊಳ್ಳುವ ಕೆಲಸವನ್ನು ಹಿಂದೆ (ಬಳಿಕ) ಇಡಿರಪ್ಪಾ......
ಬಂದ ಕಾರ್ಯ ಮುಂದೆ (ಮೊದಲು) ಎಂದಳು......
ನಾರಾಯಣ ಓ ನಾರಾಯಣ ಸಿರಿಯೇ......
ಇಂದಿನವರೆಗೆ ಓ ಸತ್ಯನಾಪುರದಲ್ಲಿ ಅಜ್ಜನವರು......
ನಿಂತು ಸಾವಿರ ವರ್ಷ ಕುಳಿತು ಮುನ್ನೂರು ವರ್ಷ
ಪಟ್ಟವನ್ನು ಆಳಿ ಪಟ್ಟಸೂಡ ಮಂಚದಲ್ಲಿ
ರಾಜ್ಯ ಆಳಿಕೊಂಡು ಓ ಇದ್ದರಪ್ಪ ಸಿರಿಯೆ......
ಇಂದಿಗೆ ಅಜ್ಜನವರು ಮರಣವಾದರು......
ಬೂದಿ ಮಾಡಿದೆ ಮಗಾ ಓ ಆಕಾಶಕ್ಕೆ ಹೊಗೆ ಆಯಿ(ಹೋಯಿ)ತು......
ಎಂದೂ ಓ ಹೇಳುತ್ತಾರಪ್ಪಾ......
ಇಂದಿನವರೆಗೆ ಅವರಾದರೋ (ಇದ್ದರು) ......ಓ......
ಇಂದಿನಿಂದ ಮುಂದಕ್ಕೆ ಮಗಾ ಹೊರಗೆ ರಾಜ್ಯವಾಳಲು ಓ......
ಪಟ್ಟ ನೋಡಿಕೊಳ್ಳಲೂ ಸೂಡದಣ್ಣು ಮಗಾ ಸಂಕರಾಳ್ವ ಇರಲಿ ಮಗಾ ಸಿರಿ ಎಂದರೂ......
ಒಳಗಡೆ ನೀನೇ ಓ ರಾಜ್ಯವಾಳಿಕೊಂಡು ಓ
ಅರಸ್ತಾನ ನೋಡಿಕೊಂಡಿರು ಮಗಾ ಎಂದು
ಬೀಗದ ಕೈ ನಿನ್ನಲ್ಲಿಯೇ ಇರಲೆಂದು ಓ ಹೇಳುತ್ತಾರೆ......
ನಾರಾಯಣ ಓ ನಾರಾಯಣ ಗಂಡುಸೇ ಓ
ಕೆಳಭಾಗದ ಪಾಲವರ ಮೇಲ್ಬಾಗದ ಪಾಲವರ ನಡುನಕರ ಪಾಲವರು......
ಬಂದು ಬಾರಿ ಓ ಎರಡು ಬಾರಿ
ಮೂರ ಬಾರಿ ಓ ನಾಲ್ಕು ಬಾರಿ
ನನ್ನ ಅಜ್ಜನವರು ಓ ಇರುವಾಗ ಓ......
ಸೂಡದಣ್ಣು ಮಗಾ ಸಂಕರಾಳ್ವಾ......

ಕೋಳಿಗೂಟದಿಂದ ಹಿಡಿದು ಕರುವಿನ ಹಗ್ಗ ತನಕ
ಉಪ್ಪಿನ ಗೆರಟೆಯಿಂದ ಓ ಹಿಡಿಸೂಡಿವರೆಗೆ......
ಸಿಂಬಿಯಿಂದ ಹಿಡಿದು ಎಲ್ಲ ವಸ್ತುಗಳ ಪಾಲು ಕೊಂಡುಹೋದ
ಸೂಡದಣ್ಣು ಮಗ ಸಂಕರಾಳ್ವ
ಇನ್ನೂ ಅವನ ಪಾಲು ಮುಗಿಯಲಿಲ್ಲವೇ......ಓ
ಎಂದು ಕೇಳುತ್ತಾಳೆ ಸಿರಿಯೆ......
ನಾರಾಯಣ ಓ ನಾರಾಯಣ......ಓ......
ಏಳೇಳು ಹದಿನಾಲ್ಕು ಲೋಕದ ಕೋಪ ಕೋಪಿಸಿದಳು ಸಿರಿಯೆ......
ಈ ರೀತಿಯ ನ್ಯಾಯ ಪಂಚಾಯತಿಯನ್ನು
ಕೇಳಲೆಂದೇ ಬರಮಾಡಿದಿರೇ ನನ್ನನ್ನು
ಏನು ಮಾಡುತ್ತಿ ಏನು ಬಿಡುತ್ತೀ ಓ ಎಂದು
ಕೇಳುತ್ತಾರೆ ಸಿರಿಯನ್ನು......
ನಾರಾಯಣ ಓ ನಾರಾಯಣ ಗಂಡುಸೇ......ಓ......
ಬಾಳಿದವನಿಗೆ ಬಡಗಣ ರಾಜ್ಯವಂತೆ......ಓ......
ಹಾಳಾದವನಿಗೆ ಓ ತೆಂಕಣ ರಾಜ್ಯವಂತೆ......
ಸೆಟ್ಟಿ ಬ್ರಾಹ್ಮಣನ ಓ ಅಂಗಳ ಗುಡಿಸಿಕೊಂಡಾದರೂ ಓ
ನನ್ನ ಹಸಿವು ನೀಗಿಸಿಕೊಳ್ಳುತ್ತೇನೆಂದಳು......ಓ......
ಸತ್ಯನಾಪುರದರಮನೆಯ ಪಟ್ಟವೇ ನನಗೆ ಬೇಡವೆಂದು......
ಓ ಹೇಳುತ್ತಾಳೆ ಸಿರಿಯು......
ಕೂಟದ ಕಣದಿಂದಾ ಓ ಏಳೇಳು ಲೋಕದ ಕೋಪ ಕೋಪಿಸಿಕೊಂಡು ಓ ಸಿಟ್ಟಿನಿಂದ
ಹೊರ ಹೊರಟು ಓ ಬರುತ್ತಾಳೆ ಸಿರಿಯು......
ಇಷ್ಟು ಜೋರಿನ ಓ ವಿಪರೀತ ಬೆಳೆದ
ಹೆಣ್ಣನ್ನು ನಾನು ನೋಡಬೇಕೆಂದ ಕಾಂತಾಳ್ವ......
ನಿಮ್ಮ ನಿಮ್ಮ ಓ ಮನೆಗೆ
ನೀವು ಹೋಗಿರೆಂದು ಓ ಉತ್ತರ ಓ
ಕೊಟ್ಟರು ಕಾಂತಾಳ್ವ......ಓ......
ಬತ್ತಕೇರಿ ಓ ಬಸರೂರಿನಾ......
ಇಂದಾದರೋ ಇಂದು ಕೂಟದ ಕಣಕ್ಕೆ ಹೋದ ಹೆಂಗುಸಂತೆ ಇಂದು
ಹಿಂತಿರುಗಿ ಬಂದಳಂತೆ
ಬಂದು ಬಂದು ಓ ಸತ್ಯನಾಪುರದರಮನೆಯ ಓ ಕಿರುಬಾಗಿಲಲ್ಲಿ (ಹಿಂಬಾಗಿಲಲ್ಲಿ)
ನಿಂತಳು......

ನಾರಾಯಣ ಓ ನಾರಾಯಣ ದಾರು......ಓ......ನೀನೇ
ಎಲ್ಲೆಂದು ಕರೆದರು ಓ ಸಿರಿಯು......
ಒಂದಕ್ಕೇ ಎರಡಕ್ಕೆ ಓ ವಿವರವಾಗಿ ಕೇಳಿಸಿಕೊಂಡು ಮೂರಕ್ಕೆ ಸ್ವರಧ್ವನಿ ಕೊಡುತ್ತ......
ನಾರಾಯಣ ಅಕ್ಕನವರೆ ಓ ಕರೆದಿರೇ ಓ ಎಂದು ಕೇಳುತ್ತಾಳೆ ದಾರು......ಓ......
ಇಂದಾದರೋ ಓ ಕೇಳು ದಾರು ಕೇಳು ಓ......
ಕುಮಾರನ ಕುಂದನಂದ ತೊಟ್ಟಿಲೂ ಓ......
ಹೊರಗಿಡು ಎಂದಳೂ......ಓ......
ಅಂಡೆಯನ್ನು ಕೊಡು ಗಿಂಡಿಯನ್ನೂ ಕೊಡೆಂದಳು ಓ ಸಿರೀ......
ನಾರಾಯಣ ಓ ನಾರಾಯಣ ಅಕ್ಕನವರೆ......ಓ......ನಿಮಗೆ
ಕೂಟದ ಕಣಕ್ಕೇ ಓ ಹೋದ ಅಕ್ಕನವರಿಗೆ
ತುರಿಕೆಯ ಊಬು ತಾಗಿತೇ ಹುಚ್ಚು ಹಿಡಿಯಿತೇ ಅಕ್ಕನವರೆ......ಓ......
ಎಂದು ಓ ಹೇಳಿದಳು ದಾರು......
ಒಂದು ಬಾರಿಯ ಕೋಪಕ್ಕೇ ಓ ಅಕ್ಕನವರೆ ಓ
ಒಮ್ಮೆ ಬಾವಿಗೆ ಬಿದ್ದರೆ ಅಕ್ಕನವರೆ
ಎಷ್ಟು ಬಾರಿ ಸಿಟ್ಟು ಬರಲಿಕ್ಕಿಲ್ಲ ನಮಗೆ ಓ
ಎಷ್ಟು ಬಾರಿ ಮುಳುಗಬಹುದು ಅಕ್ಕನವರೆ
ಎಷ್ಟು ಬಾರಿ ಮೇಲೆ ಬರಬಹುದು ಎಂದಳು......
ಒಂದು ಮಳೆಗೆ ಒಂದು ಛತ್ರಿ
ನಾವು ಹರಿದರೆ ಅಕ್ಕನವರೆ
ದಿನಕ್ಕೆ ಎಷ್ಟು ಬಾರಿ ಮಳೆ ಬಂದೀತಕ್ಕನವರೆ
ಎಷ್ಟು ಛತ್ರಿ ಹರಿಯಬೇಕಾದೀತೆಂದಳು......ಓ......
ನಾರಾಯಣ ದಾರು......ಓ......
ನಿನಗೇನು ನನ್ನ ಬದುಕೇ(?) ಬಾಗಿದರು
ನಿನ್ನ ತಲೆಯೇ ಬಾಗಲಿಲ್ಲವೇ ಎಂದು ಹೇಳಿದರು
ನೀನು ಇಲ್ಲೇ ಕುಳಿತುಕೊಳ್ಳುವುದಾದರೆ ಕುಳಿತುಕೋ ದಾರು......ಓ......
ಸೂಡದಣ್ಣು ಮಗ ಸಂಕರಾಳ್ವನ ಹೆಂಡತಿಯ
ಗೌಡಿ ಚಾಕರಿ ಮಾಡುತ್ತಿರು......
ಒಳ ಉಡುಪುಗಳನ್ನು ತೊಳೆದುಕೊಂಡು......
ಹೊಟ್ಟೆ ತುಂಬಿಸಿಕೊಂಡಿರು ಎಂದರು ಸಿರಿಯೆ......
ನಾರಾಯಣ ಓ ನಾರಾಯಣ ಅಕ್ಕನವರೆ......ಓ......
ಕಲೆಯಿಲ್ಲದ ಮೆಯ್‌ಗೆ ಕಲೆ ಹೇಳಬೇಡಿ ಅಕ್ಕನವರೆ......

ಅಂದೇ ನಮ್ಮ ಅಜ್ಜನವರು ವರ ಕೊಟ್ಟಿದ್ದಾರೆ ನಮಗೆ......
ನಿಮ್ಮ ಬೆವರು ಬಿದ್ದಲ್ಲೆ ನನ್ನ ನೆತ್ತರು ಅಕ್ಕನವರೆ......
ನನ್ನ ನೆತ್ತರು ಬಿದ್ದಲ್ಲೆ ನಿಮ್ಮ ಬೆವರೆಂದು ನಮಗೆ
ಅಜ್ಜನವರು ವರ (ಶಾಪ) ಕೊಟ್ಟಿದ್ದಾರೆ ಅಕ್ಕನವರೆ......
ಅಷ್ಟು ಹೇಳುವುದನ್ನು ಕೇಳಿದಳಂತೆ ಒಳ ಹೋದಳಂತೆ ಹಂಡೆ ತಂದಳಂತೆ ದಾರು ಗಿಂಡಿ ತಂದು ಇಂದು ಚೆಂದೆಂಗಿನ ಮರದ ಪದ್ಮಕಟ್ಟಿಯ ಬುಡದಲ್ಲಿ ನಿಂತ ಅಕ್ಕನವರಿಗೆ ತೆಗೆದುಕೊಳ್ಳಿ ಅಕ್ಕನವರೆ ಎಂದು ಕೊಡುತ್ತಾಳೆ ದಾರು......
ಇಂದಾದರೋ ಹಂಡೆಯನ್ನು ಗಿಂಡಿಯನ್ನು ಹಿಡಿದರಂತೆ ಇಂದು ಕಾಶಿಗೆ ಹೋದ ಕಪಿಲೆ ದನವನ್ನು ಹಿಡಿದರಂತೆ ಇಂದು......
ಗೂಟಕ್ಕೆ ಕಟ್ಟಿ ಹಾಲು ಕರೆದರಂತೆ ಓ......
ಹಂಡೆ ತುಂಬಾ ಗಿಂಡಿ ತುಂಬಾ......ಹಾಲು ಕರೆದು......
ಹುಲ್ಲು ಹಿಡಿದರು ಸಿರಿಯೆ ಓ ನಾರಾಯಣ ಕಪಿಲೆಯೇ......
ಇಂದಿನವರೆಗೆ ನೀನೇ ಒಂದು ಹಂಡೆ ಒಂದು ಗಿಂಡಿ ಹಾಲುಕೊಡುವ ಕಪಿಲೆ ನೀನಾದೆ...
ಇನ್ನುಮೇಲೆ ಓ ಸಂಕರಾಳ್ವಾ......
ಗಿಂಡಿ ತರುವಾಗ ಎತ್ತಾಗಬೇಕು
ನೊಗ ಹಿಡಿದು ಬರುವಾಗ ದನ ಆಗಬೇಕು ನೀನೂ......
ಕಾಡಿನ ಸೊಪ್ಪು ತೋಡಿನ ನೀರು ಕುಡಿಯುತ್ತಾ ಓ......
ಇಂದಿನಿಂದ ಗೊಡ್ಡ ದನವಾಗಿ (ಕಡವೆಯಾಗಿ?) ಓ ಕಾಡು ಹಿಡಿಯಬೇಕು ಎಂದರು ಓ ಸಿರಿಯೆ......
ಆ ರೀತಿಯ ವರ(ಶಾಪ) ಹಾಕಿದರಪ್ಪ......
ನಾರಾಯಣಾ ಓ ನಾರಾಯಣಾ ಓ......
ಗಿಂಡಿಯ ಹಾಲು ಹಂಡೆಯ ಹಾಲನ್ನು ಹಿಡಿದರಂತೆ ಇಂದು ಚೆಂದೆಂಗಿನ ಬುಡದಲ್ಲಿ ನಿಂತರಂತೆ ಇಂದು ಕುಮಾರನಿಗೆ ಹೊಟ್ಟೆತುಂಬ ಹಾಲು ಕೊಟ್ಟರಂತೆ......
ಇಂದು ತಾನು ಹೊಟ್ಟೆತುಂಬ ಹಾಲು ಕುಡಿದರಂತ ಇಂದು ದಾರುವಿಗೂ ಕೊಟ್ಟರಂತೆ ಇಂದು
ಕೊಟ್ಟು ಓ ಹೇಳುತ್ತಾರೆ ಸಿರಿಯು......
ನಾರಾಯಣ ಓ ನಾರಾಯಣ ದಾರು......ಓ......
ನನ್ನ ಮುದ್ದು ಕುಮಾರನ ಓ ಚಿನ್ನದ ತೊಟ್ಟಿಲು......
ಏಳು ಅಂತರದ ಯಮದೇವಿ ಗುಡಿ (ಕತ್ತಲಕೋಣೆ) ಹೊಕ್ಕು......ಓ......
ಹಕ್ಕಿ ಹಲಗೆ (ಕಿಟಕಿಯ ಕದ) ಓ ತಪ್ಪಿಸಿ......
ಬಂಗಾರದ ತೊಟ್ಟಿಲು ಬೆಳ್ಳಿಯ ಹುರಿದಾರ......

ಕೊಳಿಕೆ ತಪ್ಪಿಸಿ ತೂಗುಹಗ್ಗ ತೆಗೆದುಕೊಂಡು......
ಬಾ ಎಂದು ಓ ಹೇಳಿದರು ಸಿರಿಯೆ......
ನಾರಾಯಣ ಓ ನಾರಾಯಣ ಅಕ್ಕನವರೆ
ಹೇಗೆ ತಪ್ಪಿಸುವುದು ಓ ಅಕ್ಕನವರೆ ಕಟ್ಟಿರುವ ಓ
ತೊಟ್ಟಿಲನ್ನು ಓ ಅಕ್ಕನವರೆ ಹೇಗೆ ಕೊಳಿಕೆ ನಾನು ತಪ್ಪಿಸುವುದೆಂದು ಓ
ಕಣ್ಣಲ್ಲಿ ಕಡುದುಃಖ ಓ ದುಃಖಿಸುತ್ತಾಳೆ ದಾರು......ಓ......
ಅಂಥ ವೇಳೆ ನನಗೆ ಬಂದಿದೇ......
ಕಾಲ ಮೀರುತ್ತಿದೆ ಓ ವೇಳೆ ಹೋಗುತ್ತಿದೆ......
ಮುಕ್ಕಾಲು ಮೂರ ಘಳಿಗೆ ಓ ಗಳಿಗೆ ನಿಮಿಷಕ್ಕೇ
ಸತ್ಯನಾಪುರದರಮನೆ ಓ ಇಳಿಯುವ ಕಾಲ
ಓ ಬಂತಲ್ಲ ದಾರು ಎಂದರು......
ನಾರಾಯಣ ಅಕ್ಕನವರೆ......ನಿಮ್ಮ ವರ ಓ ಅಜ್ಜನವರ ಸತ್ಯದಲ್ಲಿ
ಬೆಳ್ಳಿಯ ತೂಗಹಗ್ಗದ ಓ ಕೊಳಿಕೆ ತಪ್ಪಿಸಬೇಕು
ಬಾಜಿರದ ಹಲಗೆ ತಪ್ಪ (ಕಳಚ)ಬೇಕೆಂದಳು......
ಕುಮಾರನ ಚಿನ್ನದ ತೊಟ್ಟಿಲು ಓ ಕೆಳಗಿಟ್ಟಳಪ್ಪ......
ಕುಮಾರನ ಚಿನ್ನದ ತೊಟ್ಟಿಲು ಕೆಳಗಿರಿಸಿದಳು ದಾರು......ಓ ಹಿಂಬಾಗಿಲಲ್ಲಿ
ಆನೆ ಬಾಗಿಲ ಮೂಲಕ ಓ ತರಬೇಕಾ ಅಕ್ಕನವರೆ ಅಥವಾ ಕಿರುಬಾಗಿಲ ಮೂಲಕ
ತರಬೇಕಾ ಎಂದಳು......
ನಾರಾಯಣ ಓ ನಾರಾಯಣ ದಾರು......ಓ......
ಆನೆಬಾಗಿಲ ಮೂಲಕ ತರಲು ದಾರು......
ಅವರ ಅಪ್ಪನ ಮನೆಗೆ ಸುಖಸಂತೋಷದಲ್ಲಿ
ತೊಟ್ಟಿಲಮಗು ಹೋಗುವುದಾದರೆ ಆನೆಬಾಗಿಲಲ್ಲೆ ತೊಟ್ಟಿಲು ಹೊರಗಿಡಬಹುದು......
ಹಿಂಬಾಗಿಲಲ್ಲೆ ತೊಟ್ಟಿಲು ಹೊರಗಿಡು ದಾರು......
ಓ ದೇಶಾಂತರ ಹೋಗುವವರು......ಓ ಎಂದು ಹೇಳುತ್ತಾರೆ ಸಿರೀ......
ಅಷ್ಟು ಹೇಳುವುದನ್ನು ಕೇಳಿದಳಂತೆ ಇಂದು ಮುದ್ದು ಕುಮಾರನ ಚಿನ್ನದ
ತೊಟ್ಟಿಲನ್ನು ಎತ್ತಿಕೊಂಡು ಇಂದು ಹಿಂಬಾಗಿಲಲ್ಲೆ ಹೊರತಂದಳಂತೆ ಇಂದು
ಚೆಂದೆಂಗಿನ ಪದ್ಮಕಟ್ಟೆಯ ಬುಡದಲ್ಲಿಟ್ಟಂತೆ ಇಂದು......
ಹೊತ್ತುಕೋ ದಾರು ಅದನ್ನೆಂದು ಓ ಹೇಳುತ್ತಾರೆ ಸಿರೀ......
ನಾರಾಯಣ ಓ ನಾರಾಯಣ ಅಕ್ಕನವರೆ ಓ......
ಸತ್ಯನಾಪುರಮನೆಯಲ್ಲೇ ಓ ಇಂದಿಗೆ......ಓ......
ತಲೆಯ ಸಿಂಬಿಗೆ ಓ ತತ್ವಾರ ಬಂತೆಂದು ಓ

ಹೇಳುತ್ತಾಳೆ ದಾರು......ಓ......
ನಾರಾಯಣ ಮಗ ದಾರು ಓ......
ನನ್ನ ಗಂಡ ಓ ಬತ್ತಕೇರಿ ಬಸರೂರ ಅರಮನೆಯಲ್ಲಿ
ಬಯಕೆ (ಔತಣ) ಹಾಕಿ ಬಾಯಿಯ ಆಸೆ ತೀರಿಸುವಾಗ
ತೆಗೆದ ಪಟ್ಟೆ ಇದೆಯಪ್ಪ......
ಆಯದ ಮೂಲೆಯಲ್ಲಿ ಸೋಯದ (?) ನೇಲುಹಗ್ಗದಲ್ಲಿ ಓ
ನೇಲು ಹಗ್ಗದಲ್ಲಿ ಮೇಲ್ಕಾಪಿನಲ್ಲಿ ಅರುವತ್ತು ಮೊಳದ ಪಟ್ಟೆ ಇದೆಯಪ್ಪ ದಾರು
ಅದನ್ನೇ ತಾ ಎಂದರು......
ಇಂದಾದರೋ ಹೋದಳಂತೆ ದಾರು ಏಳು ಅಂತರದ ಯುಮದೇವಿಗುಡಿ ಹೊಕ್ಕಳಂತೆ ಇಂದು
ಹಾಕಿರುವ ನೇಲೆಯ ಓ ಮೇಲ್ಕಾಪಿನಿಂದ ಇಂದು ಅರುವತ್ತು ಮೊಳ ಪಟ್ಟೆಯನ್ನು ತೆಗೆದುಕೊಂಡು ಬಂದಳಂತೆ ಇಂದು......
ತೆಗೆದುಕೊಂಡು ಬಂದು ಓ ಸಿರಿಯ ಕೈಯಲ್ಲಿ ಓ ನೀಡಿದಳು ದಾರು......
ಇಂದಾದರೋ ಇಂದು ಅರುವತ್ತು ಮೊಳ ಪಟ್ಟಿಯನ್ನು ತೆಗೆದಳಂತೆ ಇಂದು
ಮೂವತ್ತು ಮೊಳ ಪಟ್ಟಿಯನ್ನು ಹರಿದರಂತೆ ಇಂದು
ಮೂವತ್ತು ಮೊಳ ಪಟ್ಟಿಯನ್ನು ಹರಿದರಂತೆ ಇಂದು ದಾರುವಿಗೆ ಸಿಂಬೆಯಾಗಿ ಕೊಟ್ಟರಂತೆ ಇಂದು
ಉಳಿದ ಮೂವತ್ತು ಮೊಳ ಪಟ್ಟಿಯನ್ನು ಓ ತೊಟ್ಟಿಲಿನ ಮೆಲೆ ಓ ಹಾಕಿಬಿಟ್ಟರಂತೆ ಸಿರೀ......
ನಾರಾಯಣಾ ಓ ನಾರಾಯಣ......ಓ......
ದಾರುವಿನ ತಲೆಯ ಮೇಲೆ ತೊಟ್ಟಿಲು ಹೊರಿಸಿದರು......
ನಾರಾಯಣಾ ಓ ನಾರಾಯಣಾ......ಓ......
ಸತ್ಯನಾಪುರದರಮನೆಗೆ ಬೆನ್ನು ಹಾಕುವಾಗ ಹೇಳುತ್ತಾರೆ
ಚೆಂದೆಂಗಿನ ಓ ಪದ್ಮಕಟ್ಟೆಯ ಮೇಲೆ ನಿಂತೂ......ಓ......
ಮೇಲೆ ನೋಡಿದರು ಓ ನಾರಾಯಣ ಅಜ್ಜನವರೆ......
ಇಂದಿನವರೆಗೆ ಓ ನಮ್ಮ ಅರಮನೆಯಲ್ಲಿ
ಇದೊಂದು ಚೆಂದೆಂಗಿನ ಮರದಲ್ಲಿ ಬೇಕಾದಷ್ಟು ಕಾಯಿ ಆಗುವ ಮರದಲ್ಲಿ
ಇಂದಿನಿಂದ ಮುಂದಕ್ಕೆ ಕೊಂಬು ಬಂದಷ್ಟು ಕುರುವಾಯಿ(ತೆಂಗುಕೊರೆಕ) ತಿನ್ನಬೇಕು ಓ......
ಹೀಚುಗಾಯಿ ಮೂಡಿದಷ್ಟು ಓ ಬಿದ್ದು ಹೋಗಬೇಕು......
ಆ ರೀತಿಯ ಉತ್ತರ ಕೊಟ್ಟರು ಸಿರಿ
ನಾರಾಯಣ ಓ ನಾರಾಯಣ ದಾರು......ಓ......
ಬೆನ್ನುಹಾಕಿ ಇಳಿದವರು......ಓ......

ಹಿಂಗಿರುಗಿ ಮತ್ತೆ ಸತ್ಯನಾಪುರದರಮನೆ ಓ ನೋಡಬೇಡ ದಾರು......
ನೋಡಿದ್ದನ್ನು ನೋಡಿದೆಯೆಂದು ಹೇಳಬೇಡ......
ಕೇಳಿದ್ದನ್ನು ಕೇಳಿದೆ ಎಂದು ಹೇಳಬೇಡೆಂದರು
ಅಷ್ಟು ಹೊತ್ತಿಗೆ ಇಂದು ಚೆಂದೆಂಗಿನ ಪದ್ಮಕಟ್ಟೆಯನ್ನು ಹಿಂದೆ ಬಿಟ್ಟರು ಇಂದು
ಆರೂವರೆ ಅಂಗಣ ಮೂರುವರೆ ಅಂಗಳ ಹಿಂದೆ ಹಾಕಿ ಬಂದರು......
ಹಾಕಿರುವ ಏತ ತೋಡಿಸಿರುವ ಬಾವಿಯನ್ನು ದಾಟಿ ಮುಂದೆ ಸಾಗಿದರು......
ಸಣ್ಣ ತೋಡು ಸಣ್ಣ ಕಾಲುಸಂಕ ದಾಟಿಕೊಂಡು ಮುಂದೆ ಸಾಗಿದರು ಇಂದು
ಬೆಳೆಹಾಕುವ ಬಾಕಿತಿಮಾರು ಗದ್ದೆಯನ್ನು ಹಿಂದೆ ಹಾಕಿದರು ಇಂದು
ಹುರುಳಿ ಬಿತ್ತುವ ತಿಮಾರು ಗದ್ದೆಯನ್ನು ಹಿಂದೆ ಹಾಕಿಕೊಂಡು
ಹೂಹಾಕುವ ಪುದ್ದಾರ ಕಂಬಳ ಗದ್ದೆಯ ಬದುವಿಗೆ (ಹುಣಿಗೆ) ಹೋದರು......
ನಾರಾಯಣ ಓ ನಾರಾಯಣ ದೇವರು ಬೆರ್ಮರೇ ಓ
ಇಂದಿನವರೆಗೆ ಓ ನನ್ನ ಅಜ್ಜನವರು......
ಮೂರುಬಳ್ಳಹುರುಳಿ ಬಿತ್ತಿದರೆ ಮುನ್ನೂರುಮುಡಿ ಹುರುಳಿ ಬೆಳೆಯುತ್ತಿದ್ದ ತಿಮಾರುಗದ್ದೆ..
ಮಾಯ ಆಗಬೇಕೆಂದು ಓ ಸಿರಿ......
ಶಾಪ ಕೊಟ್ಟರು......
ಕಂಬಳದ (ಗದ್ದೆಯ) ಅಂಚಿನ ಬದುವಿನಲ್ಲೇ ನಿಂತರಪ್ಪ......
ನಾರಾಯಣ ಓ ನಾರಾಯಣಾ......
ನನ್ನ ಅಜ್ಜನವರು ಓ ಐದು ಬಳ್ಳ ಬಿತ್ತುವಲ್ಲಿ ಓ ಐನೂರು (ಮುಡಿ ಧಾನ್ಯ) ಬೆಳೆಯುತ್ತಿತ್ತೂ......
ಇಂದಿನವರೆಗೆ ಓ ಮೂರು ಬಳ್ಳ ಬಿತ್ತುವಲ್ಲಿಗೆ ಓ ಮುನ್ನೂರು (ಮುಡಿ ಧಾನ್ಯ) ಬೆಳೆಯುವಲ್ಲಿಗೆ......
ಇಂದಿನಿಂದ ಮುಂದಕ್ಕೇ ಓ ಸೂಡದಣ್ಣು ಮಗಾ ಓ ಸಂಕರಾಳ್ವಾ......
ಅಯ್ದು ಬಳ್ಳ ಬಿತ್ತಿದರೇ ಓ ಜೀರಿಗೆ ಬಿತ್ತಿದರೇ ಓ ಕೌಡಿಗೆ ಬೆಳೆಯಬೇಕು......
ಕೌಡಿಗೆ ಬಿತ್ತಿದರೇ ಓ ಜೀರಿಗೆ ಬೆಳೆಯಬೇಕು......
ಮಣ್ಣು ಮುಟ್ಟಿದರು ಅಕ್ಕನವರು ಹೆಣ್ಣ ಶಾಪ ಕೊಟ್ಟರು......ಓ......
ತೆಂಗಿನ ಮರದ ಬುಡಕ್ಕೇ ಹೋದರು ಸಿರಿಯೆ....ಓ.... ತೆಂಗಿನಮರವನ್ನೂ ನೋಡಿದರು
ಇಂದಿನವರೆಗೆ ಓ ಸತ್ಯನಾಪುರದರಮನೆಯಲ್ಲಿ
ಸಾವಿರ ಜನರ ಖರ್ಚು ಹೋಗೀ ಓ ಹುಟ್ಟುವಳಿ ಉಳಿಯುತ್ತಿತ್ತು......
ಇಂದಿನಿಂದ ಮುಂದಕ್ಕೇ ಓ ತೆಂಗಿನ ಹೀಚು ಬಿಟ್ಟಷ್ಟೂ ಓ ಬಿದ್ದು ಹೋಗಬೇಕು......
ಕೊಂಬು ಬಿಟ್ಟಷ್ಟು ಓ ತೆಂಗುಕೊರೆಕ ತಿಂದು ಹೋಗಬೇಕು......
ಮಣ್ಣು ಮುಟ್ಟಿದರು ಹೆಣ್ಣ ಶಾಪ ಹಾಕಿದರು ಸಿರಿಯೆ......
ಆ ತುದಿಯಿಂದಾ ಓ ಈ ತುದಿ ತನಕಾ......ಓ......
ಕಂಬಳದ ಮೂಲೆಗೆ ಓ ಬಂದರು ಸಿರಿಯೆ......

ಹೊನ್ನೆಯ ಮರದ ಬುಡದಲ್ಲಿ ನಿಂತರೂ......
ಹೊನ್ನೆಯ ಮರವನ್ನೇ ಓ ನೋಡಿದರು ಸಿರಿಯೆ......
ನಾರಾಯಣ ಓ ನಾರಾಯಣ......ಓ......
ಇಂದಿನವರೆಗೆ ಓ ಸತ್ಯನಾಪುರದರಮನೆಯಲ್ಲಿ......
ಸಾರಮಾನ್ಯ (ಸಾವಿರಗಟ್ಟಲೆ?) ಭೂತಗಳಿಗೆ ಓ ಧೂಮ್ರಧೂಮಾವತಿಗೆ
ನಂದಾದೀಪ ಉರಿಸುತ್ತಿದ್ದು ಓ ಹೊನ್ನೆ ಎಣ್ಣೆಯಲ್ಲಿ
ಖರ್ಚು ಕಳೆದು ಹುಟ್ಟುವಳಿ ಉಳಿಯುವಲ್ಲಿಗೆ
ಇಂದಿನಿಂದ ಮುಂದಕ್ಕೇ ಹೊನ್ನೆಯ ಮರದಲ್ಲಿ
ಹೂ ಬಿಟ್ಟಷ್ಟನ್ನೂ ಹಕ್ಕಿಗಳು ತಿನ್ನಬೇಕು......
ಹೊನ್ನೆಕಾಯಿ ಬೆಳೆದಷ್ಟನ್ನೂ ಬಾವಲಿಗಳು ತಿಂದು ಹೋಗಬೇಕಂದು......
ಹೊನ್ನೆಯ ಮರಕ್ಕೇ ಶಾಪಕೊಟ್ಟರು......
ಮಣ್ಣು ಮುಟ್ಟಿದರು ಹೆಣ್ಣು ಶಾಪ ಕೊಟ್ಟರು ಸಿರಿಯೆ......
ಹೂಹಾಕುವ ಪುದ್ದಾರ ಕಂಬಳ (ಹೊಸ ಅಕ್ಕಿಗಾಗಿ ಭತ್ತ ಬೆಳೆಯುವ ಗದ್ದೆ?) ಹಿಂದೆ ಹಾಕುತ್ತಾ ಓ
ಜಾನುವಾರುಗಳು ಸಾಗುವ ಹೆದ್ದಾರಿ ಓ ಮನುಷ್ಯರು ನಡೆಯುವ ಮಾರ್ಗ ಹಿಡಿದು ಕೊಂಡು ಓ ಹೋಗುತ್ತಾರೆ ಸಿರಿಯೆ......
ಇಂದಾದರೋ ಇಂದು ಮಗುವನ್ನು ಹಿಡಿಸಿಕೊಂಡು ತೊಟ್ಟಿಲು ಹೊರಿಸಿಕೊಂಡೂ ಸಿರಿ
ಕಡು ಮಂಗಳವಾರ ಸುಡುಬಿಸಿಲಲ್ಲಿ ಹೋಗುವಾಗ ಇಂದು
ದಾರು ಹಿಂದೆ ತಿರುಗಿ ನೋಡುವಾಗ......ಓ......
ಸತ್ಯನಾಪುರದರಮನೆ ಉರಿದು ಸುಟ್ಟು ಕರಿಕಲಾಗಬೇಕೆಂದು ಹೇಳಿದರು ಓ
ವರ (ಶಾಪ) ಕೊಟ್ಟರಂತೆ......
ಇಂದಾದರೋ ಹೇಳುವಾಗ ಹೇಳಿ ದಾರುವನ್ನು ಕರೆದರಂತೆ
ನಾರಾಯಣ ದಾರು ನೀನೇ......
ನೋಡಿದ್ದನ್ನು ನೋಡಿದೆ ಎಂದು ಹೇಳಬೇಡ ಇಂದು ಕೇಳಿದ್ದನ್ನು ಕೇಳಿದೆ ಎಂದು ಹೇಳಬೇಡ
ದಾರುವಿಗೆ ಇಂದು ಉತ್ತರ ಹೇಳಿದ್ದಾರಪ್ಪ......
ಸತ್ಯಮಲೋಕಂದ ಓ ಸಿರಿಯೆ......
ನಾರಾಯಣಾ ಓ ನಾರಾಯಣ......ಓ......ನಾರಾಯಣಾ......
ಇಂದಾದರೋ ದಾರು ಇಂದು ಹಿಂತಿರುಗಿಯಂತೆ ಇಂದು
ನಾರಾಯಣ ಅಕ್ಕನವರೆ ಓ ನಾರಾಯಣ ಅಕ್ಕನವರೆ
ನಮ್ಮ ಸತ್ಯನಾಪುರದರಮನೆ ಉರಿದು ಸುಟ್ಟು ಕರಿಕಲಾಗುವ ಚಂದವನ್ನು ನೋಡಿ ಅಕ್ಕನವರೆ ಎಂದಳು......
ನಾರಾಯಣ ಓ ನಾರಾಯಣ ದಾರು......ಓ......

ನಿನ್ನಲ್ಲಿ ಓ ನೋಡಿದ್ದನ್ನು ನೋಡಿದಂತೆ ಕೇಳಿದ್ದನ್ನು ಕೇಳಿದಂತೆ ಹೇಳಬೇಡ ಎಂದೆನೇ
ನನಗೊಂದು ಪಾಪ ಕಟ್ಟಿಬಿಟ್ಟೆ ದೋಷ ತಂದುಬಿಟ್ಟೆ ಎಂದರು
ಇಂದು ಸಿರಿ ಹಿಂತಿರುಗಿದರಂತೆ ಇಂದು......
ನಾರಾಯಣಾ ಓ ನಾರಾಯಣ ದೇವರೆ......ಓ......
ಸತ್ಯನಾಪುರದರಮನೆಯಲ್ಲಿ ನನ್ನ ಅಜ್ಜನವರು......
ನಿಂತು ಸಾವಿರ ವರ್ಷ ಕುಳಿತು ಮುನ್ನೂರು ವರ್ಷ
ಪಟ್ಟವಾಳಿದರು ಪಟ್ಟಸೂಡ ಮಂಚದ
ಜಾಗ ಉಳಿದು ಬರಲಪ್ಪಾ ಎಂದರು......
ಏಳು ಅಂತರಗಳ ಯಮದೇವಿ ಗುಂಡ ಬೆಳ್ಳಿ ಹಿಡಿದ ಬೆಳ್ಳಿಮಾಡ ಓ
ಆಯದ ತುದಿ ಸೊಯದ ನೇಲೆ (ಹಗ್ಗ)
ನನ್ನ ಕುಮಾರನ ಕುಂದಣದ ತೊಟ್ಟಿಲು ಕಟ್ಟಿದ ಸ್ಥಳ
ಉಳಿದು ಬರಲೆಂದು ವರ (ಶಾಪ) ಕೊಟ್ಟರು......
ಹೇಳಿದ ನಾಲಗೆ ಗಂಟಲಲ್ಲಾಗಬೇಕಾದರೆ ಓ
ಸತ್ಯನಾಪುರದರಮನೆ ಓ ಎರಡು ಜಾಗ ಉಳಿದುಬಂದು......
(ಉಳಿದ ಜಾಗ) ಸುಟ್ಟು ಕರಕಲಾಗಿ ಹೋಯಿತಪ್ಪ......
ಅಲ್ಲಿಂದ ಹಾಗೆ ಏಳು ಹೆಜ್ಜೆ ಮುಂದೆ ಹೋಗುವಾಗ ಇಂದು
ಹೂಹಾಕುವ ಪುದ್ದಾರ (ಹೊಸ ಭತ್ತದ) ಕಂಬಳದಲ್ಲಿ ಓ
ಕಾರಿ ಮೇಯುತ್ತಾ ಕಂದುಬಣ್ಣದ ಹಾಗು ಕಪ್ಪು ಬಣ್ಣದ ಎತ್ತುಗಳು ಜೊತೆಯಾಗಿ
ಮೇಯುತ್ತಾ ಇದ್ದಾವೆಂದು ಹೇಳುತ್ತಾಳೆ ದಾರು......
ನಾರಾಯಣ ಓ ನಾರಾಯಣ ದಾರು ಓ......
ನೋಡಿದ್ದನ್ನು ನೋಡಿದ ಹಾಗೆ ಕೇಳಿದ್ದನ್ನು ಕೇಳಿದ ಹಾಗೆ......
ಹೇಳಬಾರದೆಂದು ಓ ನಾನು ಹೇಳಿದ್ದೆನಲ್ಲಾ ದಾರು ನಿನಗೆ
ನಿನ್ನ ನಾಲಗೆ ಗಂಟಲಲ್ಲಿ ನಿಲ್ಲುವುದಿಲ್ಲ ಎಂದು ಓ ಹೇಳಿದರು ಸಿರಿಯು......
ಓ ಹಿಂತಿರುಗಿದರಂತೆ......
ಇಂದಿನವರೆಗೆ ಓ ಕಾರಿಕಬುಲ ಓ ಗೆಂದಮ್ಮೆರ ಓ ಮೇಯುತ್ತಿದ್ದ ಹೊಲ
ಇಂದಿನಿಂದ ಮುಂದಕ್ಕೆ ಕಾರಿ ಮಲಗಬೇಕು ಓ ಗೆಂದ ಮೇಯಬೇಕೆಂದರು......ಓ......
ಮಣ್ಣು ಮುಟ್ಟಿದರು ಹೆಣ್ಣು ಶಾಪ ಕೊಟ್ಟರು......
ಇಂದಾದರೋ ಇಂದು ಸತ್ಯನಾಪುರದರಮನೆಯಲ್ಲಿ ಮಗು ಹಿಡಿಸಿಕೊಂಡು ತೊಟ್ಟಿಲು
ಹೊರಿಸಿಕೊಂಡು ಕಡುಮಂಗಳವಾರ ಸುಡುಬಿಸಿಲಿಗೆ ಓ......
ನಾವು ಎಲ್ಲಿಗೆ ಓ ಹೋಗುವುದು ಅಕ್ಕನವರೆ ಓ
ಎಲ್ಲಿಗೆ ಹೋಗುವುದೆಂದು ದಾರು ಕೇಳುವಾಗ

ನಾರಾಯಣ ಓ ನಾರಾಯಣ ದಾರು......ಓ......
ಇಂದಾದರೋ ನಮಗೆ ಓ......
ಬಾಳಿದವನಿಗೆ ಓ ಬಡಗಣ ರಾಜ್ಯ......
ಕೆಟ್ಟವನಿಗೆ ಓ ತೆಂಕಣ ರಾಜ್ಯ......
ಕಡುಮಂಗಳವಾರ ಸುಡುಸುಡು ಬಿಸಿಲಿಗೆ
ಓ ಹೊರಟು ಹೋಗೋಣವೆಂದರು......
ಏಳೇಳು ಹದಿನಾಲ್ಕು ಲೋಕದ ಕೋಪ ಕೋಪಿಸಿಕೊಂಡು
ನಾವು ಎಲ್ಲಿಗೆ ಹೋಗುವುದು ಅಕ್ಕನವರೇ ಎಂದು ಓ ದಾರು ಕೇಳುವಾಗ......
ದಾರುವಿಗೆ ಉತ್ತರ ಕೊಡುತ್ತಾರೆ ಸಿರಿಯೆ......
ನಾರಾಯಣ ಮಗ ಓ ಸಿರಿ ಕೇಳಿದ್ದೀಯೇ ಓ......
ಬಾಳಿದವನಿಗೆ ಬಡಗಣ ರಾಜ್ಯವಂತೆ ಮಗಾ......
ಕೆಟ್ಟವನಿಗೆ ತೆಂಕಣ ರಾಜ್ಯವಂತೆ......
ಸೆಟ್ಟಿ ಬ್ರಾಹ್ಮಣರ ಅಂಗಳ ಗುಡಿಸಿಕೊಂಡಾದರೂ......
ನಮ್ಮ ಹೊಟ್ಟೆಯ ಹಸಿವೂ ತೀರಿಸುವ ಎಂದು......
ಓ ಸಿರಿ ಹೇಳುತ್ತಾರಂತೆ......
ನಾರಾಯಣ ಅಕ್ಕನವರೆ ಓ ನೀವು ಹೇಗೆ ಹೇಳುತ್ತಿರೋ ಹಾಗೆ ನಾನು
ಇದ್ದರೆ ನಾವು ಒಂದೇ ಹೂವಲ್ಲಿ ಅಕ್ಕನವರೆ ಓ
ಸತ್ತರೂ ಒಟ್ಟಿಗೆ ಸಾಯೋಣವೆಂದರು......ಓ......
ನಾರಾಯಣ......
ಬತ್ತ ಕಟ್ಟಬೇಕು ಬಳಿ(ಗೋತ್ರ) ಹೇಳಬೇಕು
ಆರ್ಯಬನ್ನಾಯ ಬಳಿ ಬದಲಿಸಬೇಕು ಓ......
ಪುತ್ರಬನ್ನಾಯ ಗೋತ್ರ ಬದಲಿಸಬೇಕು......ಓ......
ಅವನ ತಂದೆಯ ಮನೆಗೆ ಹೋಗಬೇಕೆಂದು
ಹೇಳುತ್ತಾರೆ ಸಿರಿಯೆ......
ಅಷ್ಟು ಹೇಳುವುದನ್ನು ಕೇಳುತ್ತಾಳೆ ಇಂದು......
ಹೋಗುತ್ತಾ ಹೋಗುತ್ತಾ ಹೋಗುತ್ತಾರೆ ಸಿರಿಯೆ ಓ......
ಜಾನುವಾರುಗಳು ಹೋಗುವ ಹೆದ್ದಾರಿ ಬಿಟ್ಟರಪ್ಪ
ಮನುಷ್ಯರ ಹೋಗುವ ಮಾರ್ಗ ಹಿಡಿದರು ಸಿರಿ......
ನಾರಾಯಣ ಓ ನಾರಾಯಣಾ
ಇಂದಾದರೋ ಇಂದು ಕಹಿ ಕಾಸರಕನ ಹಿಂದೆ ಬಿಟ್ಟರಂತೆ
ಸಿಹಿಮಾವನ್ನೂ ಹಿಂದೆ ಹಾಕಿಕೊಂಡು ಇಂದು......

ಅಕ್ಕಿ ಇಳಿಸುವ ಅಟ್ಟೆಕಲ್ಲು ಉಪ್ಪು ಇಳಿಸುವ ಗುಂಡುಕಲ್ಲು ಓ ಹಿಂದೆ ಬಿಟ್ಟರು ಸಿರೀ......
ಓ ಸರಿ ಹೋಗುತ್ತಾರೇ......ಓ......
ನವಿಲು ಇರುವ ಮೈರೆಪಲಿಕ್ಕೆ ಜಿಂಕೆ ಮೇಯುವ ಉರೆಪಲ್ಕೇ
ಆನೆ ಕಟ್ಟುವ ಅಶ್ವತ್ಥ ಓ ಕುದುರೆ ಕಟ್ಟುವ ಕಿರುಗೋಳಿ ಹಿಂದಿಕ್ಕಿ ಮುನ್ನಡೆದರಂತೆ ಓ....
ಸೆಳೆಗೊಂಬು ಅಳಿಮ್ಮಾರು ಓ ಬಿಳಲು ಮಾದೇರಿಯ ಕಾಡು ಹಿಂದಿಕ್ಕಿದರಂತೆ ಓ.....
ಎಂಜಿರು ಏಳುಮಲೆ ಹಿಂದೆ ಹಾಕಿದರಂತೆ...... ಇಂದು
ಮಾದೆರಿ ಮಲೆಕಾಡು ಹಿಂದೆ ಹಾಕಿಕೊಂಡು......
ಹೋಗುತ್ತಾ ಹೋಗುತ್ತಾ ಓ ಬತ್ತಕೇರಿ ಬೈಲುಗದ್ದೆಯಲ್ಲಿ ಓ ಹೋಗುತ್ತಾರಂತೆ ಸಿರಿಯೆ......
ಇಂದಾದರೋ ಇಂದು ಬತ್ತಕೇರಿ ಬಸರೂರಿನ ಕಂಬಳದ ಕಟ್ಟಹುಣಿಯಲ್ಲಿ (ಬದುವಿನಲ್ಲಿ) ಹೋಗುವುದನ್ನು ನೋಡಿದರಂತೆ ಇಂದು......
ಓರಗೆಯ ಹುಡುಗಿಯರು ಹೋಗಿ ಓ ನಾರಾಯಣಾ ಓ ನಾರಾಯಣ ಅಕ್ಕನವರೆ ಓ......
ನಮ್ಮ ಅರಮನೆಗೆ ಓ ನಿಮ್ಮ ಸೊಸೆ ಓ
ನಮ್ಮ ಅಕ್ಕನವರು ಬರುವ ಅಂದ ನೋಡಿ ಅಕ್ಕನವರೇ ಎಂದರು......
ನಾರಾಯಣ ಹೆಣ್ಣುಗಳೇ......
ಬತ್ತಕೇರಿ ಬಸರೂರ ಅರಮನೆಯಾ......
ಅನ್ನ ಕಣ್ಣಿಗೆ ನಿಮಗೆ ನಿದ್ರೆ ಆವರಿಸಿರುವಂತೆ ಮಾಡಿತೇ ಹೆಣ್ಣುಗಳೇ
ನನ್ನ ಸೊಸೆ ಸತ್ಯಮಹಾಲೋಕದ ಸಿರಿ ಓ ಅರಮನೆಗೆ ಬರುವುದು ಇದೆಯಾ......
ನಾನು ನೋಡಲು ಇದೆಯಾ ಎಂದು ಕಣ್ಣಲ್ಲಿ ಕಡುದುಃಖಿಸುತ್ತಿದ್ದಾರೆ ಅತ್ತೆಯವರು......
ಅತ್ತೆಯವರು ಹೆಂಗುಸೂ ಸಂಕರು ಪೂಂಜೆದೀ......
ನಾರಾಯಣ ಅಕ್ಕನವರೆ ಓ ತಾಯಿಯವರೆ ಓ ತಾಯಿಯವರೆ
ನಿಮ್ಮ ಸೊಸೆ ನನ್ನ ಹೆಂಡತಿ
ಮಗು ಹಿಡಿಸಿಕೊಂಡು ತೊಟ್ಟಿಲು ಹೊರಿಸಿಕೊಂಡು
ಬರುವ ಅಂದ ನೊಡಿ ತಾಯಿಯವರೆ ಎಂದು ಓ ಹೇಳುತ್ತಾನೆ ಮಗಾ ಓ ಕಾಂತಾಳ್ವ.....
ನಾರಾಯಣ ಮಗ......
ಏನು ನಿನಗೆ ಓ ನನ್ನ ಸೊಸೆ ಓ ನಿನ್ನ ಮಡದಿ ಬರುತ್ತಾ ಹೋಗುತ್ತಾ ಇರಬೇಕೆಂದಿದ್ದರೆ ಮಗ......ಓ......
ಈ ರೀತಿಯ ಬುದ್ಧೀ ಓ ತೋರಿಸುತ್ತಿದ್ದೀಯೆ ಕಾಂತಾಳ್ವ ನೀನೇ......
ಒಂದೆ ಗಿಂಡಿಯ ಹಾಲು ಕುಡಿಯುವದಲ್ಲದೆ ಎರಡು ಲೋಟೆಯ ಹಾಲನ್ನು ಬಯಸುತ್ತಿದೆಯಾ......

ಓ ಮಗಾ ಎಂದು ಹೇಳುತ್ತಾರೆ ತಾಯಿಯವರು
ತಾಯಿಯವರು ಓ ಸಂಕಾರು ಪೂಂಜೆದೀ......
ನಾರಾಯಣ ತಾಯಿಯವರೆ......
ನಿಮ್ಮ ಕಟ್ಟುವಾಲಗ (ಅತಿಯಾದ ಮಾತು) ಕಡಿಮೆ ಮಾಡಿ......
ಹಾಕಿರುವ ಏತದಲ್ಲಿಗೆ ಓ ತೋಡಿಸಿರುವ ಬಾವಿಯಲ್ಲಿಗೆ ಓ ಬಂದಳಪ್ಪ ಎಂದರು
ನನ್ನನ್ನು ಕೇಳಿದರೆ ಓ ತಾಯಿಯವರೆ
ಕಡೆರಿ ಕಾರ್ಕಳದ ತುದಿ ಪೇಟೆಗೆ ಕಿಸ್ತಿನ ಹಣ ಕಟ್ಟಲು ಹೋಗಿದ್ದಾನೆಂದು
ಹೇಳಿಬಿಡಿ ತಾಯಿಯವರೆ ಎಂದು ಹೇಳಿದ ಕಾಂತಾಳ್ವ......
ಏಳು ಅಂತಸ್ತಿನ ಮೇಲು ಉಪ್ಪರಿಗೆಗೆ
ಹೋದ ಕಾಂತಾಳ್ವ, ಓ ಹೋಗಿ ಕುಳಿತುಕೊಂಡನಂತೆ......ಓ......
ಇಂದಾದರೋ ಇಂದು ಆರೂವರೆ ಅಂಗಣ ಮೂರುವರೆ ಅಂಗಳಕ್ಕೆ ಬಂದಳಂತೆ ಇಂದು
ದೊಡ್ಡ ಅಂಗಳದಲ್ಲಿ ಓ ಕುಂದಣದ ತೊಟ್ಟಿಲು ಇಳಿಸಿದಳಂತೆ ದಾರು......ಓ......
ದಾರುವಿನ ತಲೆಯಿಂದ ತೊಟ್ಟಿಲು ಇಳಿಸಿದಳಂತೆ ದಾರು......ಓ......
ದಾರುವಿನ ತಲೆಯಿಂದ ತೊಟ್ಟಿಲು ಇಳಿಸಿದಳಂತೆ ಸಿರಿ
ನಾರಾಯಣ ಓ ನಾರಾಯಣ ಅತ್ತೆಯವರೇ ಓ ಅತ್ತೆಯವರೇ
ನಿಮ್ಮ ಮಗ ನನ್ನ ಗಂಡ
ಎಲ್ಲಿಗೆ ಹೋಗಿದ್ದಾರೆ ಎಂದು ಓ ಕೇಳುತ್ತಾಳೆ ಸಿರಿ......
ನಾರಾಯಣ ಓ ನಾರಾಯಣ ಮಗ ಎಂದರು
ಏಳು ಅಂತರದ ಯಮದೇವಿ ಗುಂಡಕ್ಕೆ ಹೋದರಂತೆ ಇಂದು ಬಂಗಾರದ ಕಂಚಿನ (ಊಟದ) ಬಟ್ಟಲಲ್ಲಿ
ಇಂದು (ಗಂಜಿಯ) ತಿಳಿ ಹಾಗು ಇದ್ದಿಲು ಹಿಡಿದುಕೊಂಡು ಮಗುವಿಗೆ ನಿವಾಳಿಸಿ
ತೊಟ್ಟಿಲು ಮಗುವನ್ನು ಒಳಗೆ ಬರಮಾಡಿಕೊಳ್ಳುತ್ತೇನೆಂದು
ಗಂಜಿತಿಳಿ ಹಾಗೂ ಇದ್ದಿಲು ಹಿಡಿದುಕೊಂಡು......
ನಿವಾಳಿಸಲು ಬರುವಾಗ ಸಿರಿಯೆ
ನಾರಾಯಣ ಓ ನಾರಾಯಣ ಅತ್ತೆಯವರೆ ಓ
ಗಂಜಿತಿಳಿ ಹಾಗೂ ಇದ್ದಿಲು ಹಿಡಿದುಕೊಂಡು
ಎಡದಿಂದ ನಿವಾಳಿಸುವಾಗ ಮಗುವನ್ನು ಬಲಭಾಗಕ್ಕೆ ಬಾಗಿಸಿದಳು......
ಬಲದಿಂದ ನಿವಾಳಿಸುವಾಗ ಸಿರಿ ಎಡಕ್ಕೆ ಬಾಗಿಸುತ್ತಾಳೆ......ಓ ಅತ್ತೆಯವರೇ......
ನನ್ನ ಮಗನಿಗೆ, ಕುಮಾರನಿಗೆ
ತಿಳಿ ಹಾಗೂ ಇದ್ದಿಲು ಹಿಡಿದು ನಿವಾಳಿಸಬೇಡಿ ಅತ್ತೆಯವರೇ
ಕಡೆರಿ ಕಾರ್ಕಳದ ಸೂಳೆಸಿದ್ದುವಿನ ಮಗನಿಗೆ
ಗಾಳಿಕುಮಾರನಿಗೆ ಗಂಜಿತಿಳಿ, ಇದ್ದಿಲಿನಿಂದ ನಿವಾಳಿಸಿ ಅತ್ತೆಯವರೇ
ತೊಟ್ಟಿಲು ಮಗುವನ್ನು ಒಳಗೆ ತೆಗೆದುಕೊಳ್ಳಿ ಎಂದು
ಅತ್ತೆಯವರಿಗೆ ಉತ್ತರ ಹೇಳುತ್ತಾಳಪ್ಪ ಸಿರಿಯೆ......ಓ......

ಸತ್ಯಮಹಾಲೋಕದ ಸಿರಿಯಂತೆ......
ನಾರಾಯಣಾ ಓ ನಾರಾಯಣಾ ಅತ್ತೆಯವರೆ......ಓ......
ಸತ್ಯ ಹೇಳಿ ಓ ಸುಳ್ಳು ಹೇಳಬೇಡಿ ಅತ್ತೆಯವರೇ......
ಕಪಟ ತೋರಿಸಬೇಡಿ ಓ ಸತ್ಯ ನುಡಿಯಿರೀ......
ನಿಮ್ಮ ಮಗ ನನ್ನ ಗಂಡ
ಎಲ್ಲಿಗೆ ಹೋಗಿದ್ದಾರೆಂದು ಓ ಹೇಳಿಬಿಡಿ ಅತ್ತೆಯವರೆ
ಕಡೆರಿ ಕಾರ್ಕಳದ ತುದಿ ಪೇಟೆಗೆ ಮಗಾ
ಕಿಸ್ತಿನ ಹಣ ಕಟ್ಟಲು ಹೋಗಿದ್ದಾನೆಂದು
ಓ ಹೇಳುತ್ತಾರೆ ಅತ್ತೆಯವರು......
ನಾರಾಯಣ ಅತ್ತೆಯವರೇ
ಇಂದಿನವರೆಗೆ ಈ ಕ್ಷಣದವರೆಗೆ ಓ ಸತ್ಯ ಹಳಬೇಕೆಂದು
ಸಾರುತ್ತ ಸಾರುತ್ತಾ ಇದ್ದೇನೆ ಅತ್ತೆಯವರೇ
ಸಾರಿ ನಾಗರಹಾವನ್ನೂ ಹೊಡೆಯಬಹುದಂತೆ......
ಇಂದಿನವರೆಗೆ ಓ ಕೇಳಿಕೊಂಡೆ ಅತ್ತೆಯವರೆ
ಒಂದು ಬಾರಿ ಹೇಳಿಯೇನು ಅತ್ತೆಯವರೆ ಎಂದು
ಎರಡು ಬಾರಿ ಹೇಳಿಯೇನು ಅತ್ತೆಯವರೆ ಎಂದು
ಮೂರು ಬಾರಿ ಅತ್ತೆಯವರೆ ಎಂದು ಹೇಳಿಯೇನು
ನಾಲ್ಕನೇ ಬಾರಿಗೆ ಸಂಕರುಪೂಂಜೆದಿ ಎಂದು
ಹೇಳಿಯೇನೆಂದು ಹೇಳಿದಳು, ಏಳೇಳು ಲೋಕದ
ಕೋಪ ಕೋಪಿಸಿದಳು ಸಿರಿ......
ಕಡೆರಿ ಕಾರ್ಕಳದ ತುದಿಪೇಟೆಗೆ
ಕಿಸ್ತಿನ ಹಣ ಕಟ್ಟಲು ಹೋಗಿದ್ದಾರೆಯೇ ಅತ್ತೆಯವರೆ ಓ
ಸೂಳೆ ಸಿದ್ದುವಿನ ಒಳ ಉಡುಪು ಕಾಯಲು ಹೋಗಿದ್ದಾರೆಯೇ ಎಂದು
ಓ ಕೇಳುತ್ತಾಳೆ ಸಿರೀ......
ಇಂದಾದರೋ ಇಂದು ಅಷ್ಟು ಹೊತ್ತಿಗೆ ಆ ಒಂದು ಉತ್ತರ ಕೇಳುವಾಗ
ಕಿಸಕ್ಕನೆ ನಕ್ಕನಂತೆ ಇಂದು ಕಾಂತಾಳ್ವ......
ಏನು ತಾಯಿಯವರೆ, ಏನು ತಾಯಿಯವರೆ ನೀವು
ಬತ್ತಕೇರಿ ಬಸರೂರ ಅರಮನೆಯಲ್ಲಿ
ಹುಂಜ ರೆಕ್ಕಬಡಿದು ಕೂಗುವಲ್ಲಿಗೆ
ಹೇಂಟೆ ಏನು ಕೂಗುತ್ತದೆ ತಾಯಿಯವರೆ ಎನ್ನುತ್ತಾ ಏಳು ಮೆಟ್ಟಿಲು
ಇಳಿದುಕೊಂಡು ಬರುತ್ತಾನೆ ಮಗ ಓ ಮಗ ಕಾಂತಾಳ್ವ......
ನಾರಾಯಣ ಓ ನಾರಾಯಣ ಸಿರಿಯೆ

ಎಲ್ಲಿಗೆ ಹೋಗುವವಳು ಎಲ್ಲಿಂದ ಬಂದವಳೆಂದು
ಕಾಂತಾಳ್ವ ಕೇಳುವಾಗ ಉತ್ತರ ಕೊಡುತ್ತಾಳಂತೆ
ಆರ್ಯಬನ್ನಾಯ ಗೋತ್ರ ಬದಲಿಸಬೇಕೆಂದು ನಾನು ಬಂದದ್ದು
ಬಳಿ (ಗೋತ್ರ) ಬದಲಾಯಿಸಿ ಎಂದು
ಸಿರಿ ಕೇಳುವಾಗ, ಹೇಳುತ್ತಾರಂತೆ – ಇಂದು ನಿನ್ನ ತವರುಮನೆಯವರನ್ನೂ ಕರೆದು ಕೊಂಡು ಬಾ......
ಬಾ ಎಂದು ಕಾಂತಾಳ್ವ ಹೇಳುತ್ತಾನೆ......
ಇಂದಾದರೋ ಇಂದ ಅಷ್ಟು ಹೊತ್ತಿಗಂತೆ ಇಂದು ಏಳೇಳು ಹದಿನಾಲ್ಕು ಲೋಕದ ಕೋಪ
ಕೋಪಿಸಿದಳಂತೆ ಇಂದು ಆ ಕಡೆ ನೋಡಿದಳಂತೆ ಈ ಕಡೆ ನೋಡಿದಳಂತೆ ಇಂದು ತವರು (ಮನೆಯವರು) ಬೇಕೇ ಎಂದು ಕೇಳಿದಳಂತೆ ಬೇಲಿಯ ಗೂಟ ಎಳೆದಳಂತೆ ನೋಡಿ ನನಗೆ ತವರುಮನೆಯವರು ಇದೇ ಎಂದು ತೋರಿಸಿದಳಂತೆ ಸಿರೀ......
ನಾರಾಯಣ ಸಿರಿಯೆ......
ನಾನು ಒಕ್ಕಲುಮಕ್ಕಳನ್ನು ಕರೆಸಿ ಭತ್ತೆ ಅಳೆದು (ಕೂಲಿ ಕೊಟ್ಟು) ಓ
ಬೇಲಿಗೆ ಗೂಟ ಹಾಕಿಸಿದ್ದನ್ನು ನನಗೇ ತವರುಮನೆಯವರೆಂದು ಓ ತೋರಿಸುತ್ತಿಯೇ ಎಂದರು......
ನಾರಾಯಣ ಗಂಡುಸೇ......
ನೀವು ಕೆಲಸಕ್ಕೆ ಓ ಕೂಲಿ ಕೊಟ್ಟೊ
ಕಡಿಸಿದ ಗೂಟ ತವರುಮನೆಯವರು ಬೇಡವೆಂದಾದರೆ ಓ
ಕತ್ತಿನ ಕಿಲಬಂದಿ (ಮಂಗಳಸೂತ್ರ) ತೆಗೆದರು ಸಿರಿಯಂತೆ ಇಂದು ಬೋದಿಗೆಯ ಕಂಬಕ್ಕೆ ಕಟ್ಟಿದರಂತೆ
ಇಕೊಳ್ಳಿ ಗಂಡುಸೇ ನಾರಾಯಣ ಗಂಡುಸೇ ನಿಮಗೆ ತವರು ಇದುವೆ ಎಂದು
ಓ ಬೋದಿಗೆ ಕಂಬಕ್ಕೆ ಕತ್ತಿನ ಕಿಲಬಂದಿ (ಮಂಗಳಸೂತ್ರ) ಕಟ್ಟಿದಳು ಸಿರಿಯೆ......
ನಾರಾಯಣ ಸಿರಿಯೆ......
ನಾನು ಜೀವಂತವಾಗಿರುವಾಗಲೇ
ನಾನು ಕಟ್ಟಿರುವ ಮಂಗಲಸೂತ್ರ ತೆಗೆದುಬಿಟ್ಟೆಯಾ......
ರಂಡೆ ಕಳೆದು ಮುಂಡೆ ಮುಚ್ಚುವೆಯಾ (ವಿಧವೆಯಾಗುವೆಯಾ) ಸಿರೆಯೆಂದರು......
ತವರನ್ನು ಕರೆದುಕೊಂಡು ಬಾ ನಿನಗೆ
ಆರ್ಯಬನ್ನಾಯ ಬಳಿ (ಗೋತ್ರ) ಬದಲಾಯಿಸಿಕೊಡುತ್ತೇನೆ
ಪುತ್ರಬನ್ನಾಯ ಗೋತ್ರ ಬದಲಾಯಿಸಿಬಿಡುತ್ತೇನೇ......
ನಿನ್ನ ತವರನ್ನು ಓ ತೋರಿಸೆಂದರು......
ನಾರಾಯಣ ಗಂಡುಸೇ......
ತವರು ಇಕೊಳ್ಳಿ ಎಂದಳಂತೆ ಬಡಕ್ಕನೆ ಎದ್ದಳಂತೆ ದಿಡಕ್ಕನೆ ನಿಂತಳಂತೆ

ಏಳೇಳು ಹದಿನಾಲ್ಕು ಲೋಕದ ಕೋಪ ಕೋಪಿಸಿದಳು ದಿಂಡುರುಳಿದಳು
ತೊಟ್ಟಿಲಿಗೆ ಕೈ ಹಾಕಿದಳಂತೆ ಓ ಸಿರಿಯೆ
ಮಗುವನ್ನು ತೆಗೆದಳು ನಾರಾಯಣ ಗಂಡನೇ
ಇಗೋ ನನ್ನ ತವರು ಎಂದಳು......ಓ......
ಅರುವತ್ತು ಬಾಳಿದ(ವಯಸ್ಸಾದ)ವಳಿಗೆ ಏಳು ವಯಸ್ಸಿನ ಹಸುಳೆ ತವರು ಎಂದಳು......
ನಾರಾಯಣ ಓ ನಾರಾಯಣ ಸಿರಿಯೆ......ಓ......
ನನ್ನ ನೆತ್ತರನ್ನೇ ಓ ನನಗೆ ತವರು ಎಂದು ಓ ತೋರಿಸುತ್ತೀಯೇ ಸಿರಿ ಎಂದರು......
ಆರ್ಯಬನ್ನಾಯ ಬಳಿ (ಗೋತ್ರ) ಬದಲಿಸಿದರು......
ಪುತ್ರಬನ್ನಾಯ ಸೆರೆ (ಗೋತ್ರ) ಬದಲಿಸಿದರು ಇಂದು......
ಕುಳಿತುಕೊಳ್ಳುತ್ತೀಯೋ ಹೋಗುತ್ತಿಯೋ ಎಂದು ಕೇಳಿದರು ಕಾಂತಾಳ್ವ......
ನಾರಾಯಣ ಗಂಡುಸೇ
ಸೆಟ್ಟಿ ಬ್ರಾಹ್ಮಣನ ಅಂಗಳ ಗುಡಿಸಿ ಭಿಕ್ಷೆ ಬೇಡಿ ತಿಂದರೂ......ಓ......
ನಿಮ್ಮ ಅರಮನೆಯಲ್ಲಿ ನಾನು ಕುಳಿತುಕೊಳ್ಳಲಾರೆನೆಂದಳು......
ನನ್ನ ಮಗ ಮುದ್ದುಕುಮಾರನಿಗೆ
ಬತ್ತಕೇರಿ ಬಸರೂರಲ್ಲಿ ಪಟ್ಟ ಕಟ್ಟಬೇಕು ಪಟ್ಟದುಂಗುರ ಇಡಬೇಕೆಂದರು ಓ ಬಸರೂರ ಕಾಂತಾಳ್ವ......
ನಾರಾಯಣ ಮದುಮಗಾ (ಗಂಡನೇ)......
ನಿಮ್ಮ ಮಗನಿಗೆ ಪಟ್ಟ ಕಟ್ಟಬೇಡಿ
ಪಟ್ಟದುಂಗುರ ಇಡಬೇಡಿ ಗಂಡನೇ......
ಮುದ್ದುಕುಮಾರನಿಗೆ ಇಡುವುದು ಬೇಡ ಓ......
ಕಡೆರಿ ಕಾರ್ಕಳದ ಸೂಳೆ ಸಿದ್ದುವಿನ ಮಗನಿಗೆ......
ಗಾಳಿಕುಮಾರನಿಗೆ ಪಟ್ಟ ಕಟ್ಟಿರಿ ಪಟ್ಟದುಂಗುರ ಇಟ್ಟು ಓ......
ಪಟ್ಟವಾಳಿಸಿ......ಓ ಎಂದಳು ಸಿರಿಯೆ......
ಬಸರೂರ ಅರಮನೆ ಓ ಇಳಿದಳು ಸಿರಿಯೇ......
ನಾರಾಯಣ ಓ ನಾರಾಯಣ ಸಿರಿಯೆ......ಓ......
ಹೋದವಳು ನೀನು ಎಲ್ಲಿಗೆ ಹೋಗುತ್ತೀಯೇ ನೀನೂ......
ಮಡಿವಾಳರ ಮಾಬುಕರಿಯ ಓ ಮದನ ಕುದುರು ಓ ದಾಟದೆ ಇದ್ದಲ್ಲಿ ಓ......
ಉದಯಿಸಿದ ಸೂರ್ಯ ಓ ಅಸ್ತವಾಗಬೇಕಾದರೆ ಓ
ಎಂದು ಭಾಷೆ ಕೊಟ್ಟರು ಆಳ್ವರೂ ಓ......
ಬಸರೂರ ಕಾಂತಾಳ್ವರೂ......
ನಾರಾಯಣ ಗಂಡುಸೇ

ಉದಯಿಸಿದ ಸೂರ್ಯ ಅಸ್ತವಾಗಬೇಕಾದರೆ
ಮಡಿವಾಳರ ಮಾಬುಕರಿಯ ದಾಟದೆ ಇದ್ದಲ್ಲಿ
ಏನು ಕಷ್ಟ ನೀವು ಕೊಡುತ್ತೀರೆಂದಳು
ನಾರಾಯಣ ಸಿರಿ......
ಮಡಿವಾಳರ ಮಾಬುಕರಿಯ ಮದನ ಕುದುರು ದಾಟದೆ ಇದ್ದಲ್ಲಿ
ಅಲ್ಲಿ ತಲೆಜುಟ್ಟಿಗೆ ಕೈಕೊಟ್ಟರೆ ಓ
ಬಸರೂರಿಗೇ ತಂದು ಬಿಟ್ಟೇನು ಓ
ಕುದುರೆಗಳಿಗೆ ಹುರುಳಿ ಬೇಯಿಸಬೇಕು
ಕಾಟಿ ಕರ್ಬಾಸು (ಜಾನುವಾರು)ಗಳಿಗೆ ಪಶುಆಹಾರ ಬೇಯಿಸಿಕೊಂಡು
ಓರೆಗೆಯ ಹೆಣ್ಣುಗಳ ಗೌಡಿ (ಬಿಟ್ಟಿ?) ಚಾಕರಿ ಮಾಡುತ್ತ
ಮಾನ್ಯರು ಮಕ್ಕಳಿಗೆ (ಕೆಲಸದಾಳುಗಳಿಗೆ) ಕೂಲಿ ಅಳೆದುಕೊಟ್ಟದ್ದನ್ನು ಕೊಡಿಸುತ್ತಾ
ಹೊರಗಿನಿಂದಲೇ ನೀನು ಇರಬೇಕು ಸಿರಿ ಎಂದರು......ಓ......
ಬತ್ತಕೇರಿ ಓ ಬಸರೂರ ಕಾಂತಾಳ್ವರು......
ನಾರಾಯಣ ಗಂಡುಸೇ......
ಅಂತಹ ಪಂಥವನ್ನು (ಪ್ರತಿಜ್ಞೆಯನ್ನು) ತೆಗೆದುಕೊಂಡಳು ಸಿರಿಯೆ......ಓ......
ಬತ್ತಕೇರಿ ಬಸರೂರು ಇಳಿದಳು ಸಿರಿಯೆ
ಆನೆ ಬಾಗಿಲಲ್ಲಿ ಓ ದೊಡ್ಡ ಅಂಗಳದಲ್ಲಿ ಓ ಸಿರಿ ಹೊರಡುವಾಗ ಓ......
ಹಿಂಬಾಗಿಲಲ್ಲಿ ಓ ಹೊರಟರು ಕಾಂತಾಳ್ವರು......
ಮುಂದಿನಿಂದ ಹೊರಟುಹೋದರು ಕಾಂತಾಳ್ವರು ಓ......
ಸೂಳೆಯರ ಬಯಲುಗದ್ದೆಯಲ್ಲಿ ಹೋದರು ಕಾಂತಾಳ್ವರು ಓ......
ಯಾರು ಹೆಣ್ಣುಗಳೇ ಓ ಯಾರ ಹೆಣ್ಣುಗಳೇ
ಇಂದಿಗೆ ಹೊತ್ತು ಕಳೆಯಿಸಿ ತಡ ಮಾಡಿಸಬೇಕು
ಮಗು ಹಿಡಿಸಿಕೊಂಡು ತೊಟ್ಟಿಲು ಹೊರಿಸಿಕೊಂಡು ಸಿರಿ ಬರುತ್ತಾಳೆ
ಅವಳನ್ನು ಮಾತನಾಡಿಸಿ ವೇಳೆ ಕಳೆಯಬೇಕೆಂದರು......
ಕಳಸಿಗೆಯಲ್ಲಿ ಅಳೆಯುವ ಹಾಗೆ, ಬೆರಣಿ ಹೇರುವ (ರಾಶಿ ಒಟ್ಟುವ) ಹಾಗೆ (ಧಾರಾಳವಾಗಿ ನಾನು ಕೊಡುತ್ತೇನೆಂದರು ಓ......
ಅಲ್ಲಿಂದ ಹಾಗೆ ಕಾಂತಾಳ್ವರು ಹೋದರಂತೆ ಓ......
ಮಲ್ಲಿಗೆಯ (ಮಾರುವ) ಬಾಯಿ (ಕ್ರಿಶ್ಚಿಯನ್ ಹೆಂಗುಸು) ಓ ಹೂ ಕೀಳುತ್ತಾ
ವೀಳ್ಯದೆಲೆ (ತೊಟ್ಟನ್ನು) ಚಿವುಟಿ ಕೀಳುತ್ತಾ ಇರುವಾಗ
ಬಾಯಿಯೊಡನೆ (ಕ್ರಿಶ್ಚಿಯನ್ ಹೆಂಗುಸಿನೊಡನೆ) ಹೇಳುತ್ತಾರಂತೆ ಕಾಂತಾಳ್ವರೂ......
ನಾರಾಯಣ ಬಾಯಿಯೇ......
ನಿಮ್ಮಂತಹ ಹೆಣ್ಣು ಬರುತ್ತಾಳೆ ಈಗ

ಅಂತಪಂಥ (ಪ್ರತಿಜ್ಞೆ) ಹಾಕಿ ಹೊರಟಿದ್ದಾಳೆ......
ಅವಳನ್ನು ಮಾತನಾಡಿಸಿ ಅವಳಿಗೆ ತಡವಾಗುವಂತೆ ಮಾಡು......
ಕಳಸಿಗೆಯಲ್ಲಿ ಅಳೆಯುವಂತೆ ಬೆರಣಿ ಗೋರುವಂತೆ (ಧಾರಾಳವಾಗಿ)
ನಾನು ಕೊಡುತ್ತೇನೆಂದು ಓ ಕಾಂತಾಳ್ವರು ಹೇಳಿದರು......
ನಾರಾಯಣಾ ಓ ನಾರಾಯಣಾ......ಓ......
ದೇಶಾಂತರ ಹೋಗುವವಳಿಗೆ ಸ್ವತಂತ್ರ ಆಗಬೇಕೆಂದು
ಅಂತಪಂಥ (ಪ್ರತಿಜ್ಞೆ) ಹಾಕಿ ಬಂದಿದ್ದಾಳೆ ಸಿರಿಯೆ......
ಬಡಗಣ ಲಂಕೆಲೋಕನಾಡಿಗೆ ಹೋದರಂತೆ ಓ ಬ್ರಾಹ್ಮಣನಿಗೆ ಹೇಳಿದರಂತೆ......
ಇಂದು ಸಿರಿ ಬರುತ್ತಾಳಪ್ಪ......
ಸಿರಿಗೆ ಇಂದು ತೆಂಗಿನಕಾಯಿ ಒಡೆದು
ಹರಕೆ ತೆಗೆದುಕೊಳ್ಳಬೇಡಿ ಎಂದರು......
ಸಾವಿರ ಮುಡಿ ಉಂಬಳಿ ನಾನು ಕೊಡುತ್ತೇನೆಂದು ಭಟ್ಟರಿಗೆ
ಬ್ರಾಹ್ಮಣನಿಗೆ ಲಂಚದ ಆಮಿಷ ತೋರಿಸಿದರು
ಬ್ರಾಹ್ಮಣನಿಗೆ ಹೇಳಿದರಪ್ಪ ಓ ಕಾಂತಾಳ್ವರು......
ಬತ್ತಕೇರಿ ಬಸರೂರಿನ ಗಂಡುಸಿಗೆ
ಅಲ್ಲಿಂದ ಹಾಗೆ ಓ ಹೋದರಂತೆ......ಓ ಕಾಂತಾಳ್ವ
ಮಡಿವಾಳರ ಮದನಕುದುರುವಿನ ಓ ದೋಣಿಯ ಕುಂಞನಿಗೆ ಓ ಹೇಳಿದರಂತೆ ಇಂದು
ನಾರಾಯಣ ದೋಣಿಯ ಕುಂಞ ಓ......
ದೋಣಿಯ ಕುಂಞಾ ನೀನೂ......
ಮಗುವನ್ನು ಹಿಡಿದುಕೊಂಡು ತೊಟ್ಟಿಲು ಹೊರಿಸಿಕೊಂಡು ಓ ಬರುತ್ತಾಳಪ್ಪ ಸಿರಿಯೆ...
ಅವಳ ಪಂಥ (ಪ್ರತಿಜ್ಞೆ) ಗೆಲ್ಲಿಸಬೇಡಪ್ಪ
ನನ್ನ ಪಂಥ ಗೆಲ್ಲಬೇಕೆಂದರು......
ದೋಣಿ ಬಿಡಬೇಡಪ್ಪ ಎಂದರು......
ನಿನಗೆ ಸಾವಿರ ಲಂಚ ಕೊಡುವೆನೆಂದರು......
ಬತ್ತಕೇರಿ ಬಸರೂರ ಕಾಂತಾಳ್ವರು ಓ......
ದೋಣಿಯ ಕುಂಞನಿಗೆ ಉತ್ತರ ಕೊಟ್ಟರು......
ಅಲ್ಲಿಂದ ಹಿಂತಿರುಗಿ ಕಾಂತಾಳ್ವರು ಬರುತ್ತಾರಪ್ಪ......
ನಗು ನಲಿವಿನಲ್ಲೇ ಓ ಬರುತ್ತಾರಪ್ಪ ಕಾಂತಾಳ್ವರೂ......
ಬತ್ತಕೇರಿ ಬಸರೂರ ಓ ಕಾಂತಾಳ್ವರೂ......
ನಾರಾಯಣಾ ಓ ನಾರಾಯಣಾ ಓ......
ಬತ್ತಕೇರಿ ಓ ಬಸರೂರಿನರಮನೆಯಲ್ಲಿ

ಚೆಂದೆಂಗಿನ ಓ ಪದ್ಮಕಟ್ಟೆಯ ಬುಡದಲ್ಲಿ
ದೊಡ್ಡ ಅಂಗಳ ದಾಟಿ ಬರುವಾಗ......
ಎಲ್ಲಿಗೆ ಹೋಗುತ್ತಿಯೇ ಮಗ ಸಿರಿ ಎಂದು ಓ
ಅತ್ತೆಯವರು ಕೇಳುವಾಗ ಓ ಹೇಳುತ್ತಾಳೆ......
ನಾರಾಯಣ ಓ ನಾರಾಯಣ ಅತ್ತೆಯವರೆ ಓ......
ನಾನು ದೇಶಾಂತರ ಹೋಗುವುದಾದರು ಸ್ವತಂತ್ರ ಆಗಬೇಕು ನಾನು ಓ
ಸೆಟ್ಟಿ ಬ್ರಾಹ್ಮಣರ ಅಂಗಳವನ್ನು ಗುಡಿಸಿಕೊಂಡೂ ಹೊಟ್ಟೆಯ ನೀಗಬೇಕು......
ಓ ಅತ್ತೆಯವರೆ ಎಂದು ಹೇಳುತ್ತಾಳೆ ಸಿರಿ......ಓ......
ನನ್ನ ಮಗನ ಓ ಮುದ್ದುಕುಮಾರನ
ಹರಕೆ ಓ ಸಲ್ಲಿಸಬೇಕು ನನಗೆ
ಹಾಕಿರುವ ನೇಲೆಯಲ್ಲಿ ಕಂಡ ಹೆರಿಗೆನೋವಿಗೆ ಓ
ಹೇಳಿರುವ ಹರಕೆ ಅದು ಓ ನನ್ನ ಅಜ್ಜನವರು......ಓ......
ಸಿರಿಮೊಗದಲ್ಲಿ ಹುಳಿ(ಹಿಂಡುವಂತೆ) ನೋವು ಕಂಡಾಗ
ಸೊಂಟದ ನಾಲ್ಕೆಳೆ ಉಡಿದಾರ ಅಜ್ಜನವರು ಅಂದು ತೆಗೆದರು......
ತೆಗೆದು ಹೇಳಿದ್ದಾರಪ್ಪ ಅಜ್ಜನವರು
ಬಂಗಾರದ ಮಗು ಬೆಳ್ಳಿಯ ತೊಟ್ಟಿಲು
ಹಿಡಿಹಣ ದಂಡು ಕುಂಬಳ ಓ
ಮಗುವಿನ ಕೈಯಲ್ಲಿ ಹಿಡಿಹಣ
ಬಡಗಣ ಲಂಕೆಲೋಕನಾಡು
ಲೋಕನಾಥೇಶ್ವರ ಸ್ವಾಮಿಯ ಗುಡಿಗೆ ಓ
ಹರಕೆ ಓ ಸಲ್ಲಿಸಬೇಕೆಂದು
ಅಜ್ಜನವರು ಹೇಳಿರುವ ಹರಕೆ ಉಂಟು ಅತ್ತೆಯವರೆ ಎಂದು......ಓ......
ಅದನ್ನು ಒಪ್ಪಿಸಿ ಗಂಧಪ್ರಸಾದ ಹಿಡಿಯಬೇಕೆಂದರು ಸಿರಿ......
ನಾರಾಯಣ ಓ ನಾರಾಯಣ ಓ......
ದಾರು ಮುಂದಿನಿಂದ ಓ ಸಿರಿ ಹಿಂದಿನಿಂದ......ಓ......
ಮಗುವನ್ನು ಹಿಡಿಸುತ್ತಾ ತೊಟ್ಟಿಲು ಹೊರಿಸುತ್ತಾ ಓ ಹೋಗುತ್ತಾರಪ್ಪ......
ಸಿರಿಯ ತಲೆತುದಿ ಮಾಯವಾಗುವವರೆಗೂ ಓ......
ಅತ್ತೆಯವರು ಬಾವಿಯ ದಂಡೆಯಲ್ಲಿ ಕುಳಿತು ಓ
ಕಣ್ಣೀರು ಒರಸುತ್ತಾ ಓ ಬಾಯಾರಿ
ಬಿಕ್ಕಿಬಿಕ್ಕಿ ಅಳುತ್ತಾ ಇದ್ದಾರಪ್ಪ ಪೂಂಜೆದಿ ಓ ಸಂಕರುಪೂಂಜೆದಿ......
ನಾರಾಯಣಾ ಓ ನಾರಾಯಣಾ ಓ......

ಸಿರಿ ಹೊರಟು ಓ ಹೋದರಂತೆ......ಓ......
ಬಸರೂರಾ ಬಯಲುಗದ್ದೆ(ಯ ದರಿ) ಹಿಡಿದರಂತೆ ಸಿರಿಯೆ......ಓ......
ಕಂಬಳದ ಒಂದು ತುದಿ(ಮೂಲೆ)ಗೆ ಹೋದರಂತೆ......
ನಾರಾಯಣ ಓ ನಾರಾಯಣಾ ಎಂದರು......ಓ......
ಚೆಂದೆಂಗಿನ ಮರದ ಪದ್ಮಕಟಿಯ ಬುಡದಲ್ಲಿ ನಿಂತರು......
ಇಂದಿನವರೆಗೆ ಓ ನನ್ನ ಗಂಡ ಓ
ಬತ್ತಕೇರಿ ಬಸರೂರ ಬಯಲುಗದ್ದೆಯಲ್ಲಿ
ಐದು ಬಳ್ಳ ಬಿತ್ತಿದರೆ ಐನೂರು ಮುಡಿ ಓ ಬೆಳೆಯುತ್ತಿತ್ತಂತೆ......
ಇನ್ನು ಮುಂದಕ್ಕೆ ಮೂರು ಬಳ್ಳ ಬಿತ್ತಬೇಕು ಓ
ಮುನ್ನೂರು ಮುಡಿ ಪೊಳ್ಳುಜಳ್ಳು ಓ ಬೆಳೆಯಬೇಕು
ಬತ್ತಕೇರಿ ಬಸರೂರಾ ಓ ನನ್ನ ಗಂಡ, ಓ ಕಾಂತಾಳ್ವ
ದಿಕ್ಕು ಕೆಟ್ಟಿತು ನನಗೆ ಓ ದೆಸೆ ಅಳಿಯಿತು......ಓ
ತೆಂಕಣ ರಾಜ್ಯ, ಓ ಬಾಳಿದವಳಿಗೆ ಬಡಗಣರಾಜ್ಯ......
ದೇಶಾಂತರ ಹೋಗುವವಳು ಓ ಸ್ವತಂತ್ರಳಾಗಬೇಕು ನನಗೆ....ಓ ಹೇಳಿದರು ಸಿರಿ....
ಮಣ್ಣು ಮುಟ್ಟಿದರು ಓ ಹೆಣ್ಣು ಶಾಪ ನೀಡಿದರು......
ಒಂದಲ್ಲ ಒಂದು ದಿನದಲ್ಲಿ
ನನ್ನ ಗಂಡ ನೇಗಿಲು (ಮಾಡಲು ಮರ) ಕಡಿಯಬೇಕು
ನೇಗಿಲು ಕೆತ್ತಿ ಓ ನೇಗಿಲನ್ನು (ಎತ್ತುಗಳ) ಕತ್ತಿಗೆ ತೊಡಿಸಿ
ಅಂದಿಗೆ ಓ ನಾಲ್ಕು ಮನೆ(ಗಳಲ್ಲಿ) ಬೇಡಬೇಕು......ಓ......
ಅಂದಿಗೆ ಓ ಮೂರು ಮನೆ(ಗಳಲ್ಲಿ) ಬೇಡಬೇಕು ಓ
ನಾಲ್ಕು ಮನೆ ಬೇಡುತ್ತ ಮೂರು ಮನೆಗಳ ಭಿಕ್ಷೆ ಎತ್ತುತ್ತಾ
ನನ್ನ ಮನೆಗೆ ಓ ಗುಡಿಸಲಿಗೆ
ನೆಕ್ಕಿಸೊಪ್ಪಿನ ಓ ಬಿಡಾರಕ್ಕೇ ಓ
ಅಂದಿಗೆ ಬರಬೇಕು ಓ ಅಂದಿಗೆ
ನನ್ನ ಬಿಡಾರದಿಂದ ಒಂದು ಹಿಡಿ ಭಿಕ್ಷೆ ಓ
ನಾನು ನೀಡಬೇಕೆಂದು ಓ
ಮಣ್ಣು ಮುಟ್ಟಿದರು ಓ ಹೆಣ್ಣು ಶಾಪ ಕೊಟ್ಟರು ಸಿರಿಯೇ......
ಅವರನ್ನು ತಂದೆ ಹುಟ್ಟಿಸಿದರು ಓ ತಾಯಿ ಹೆತ್ತರು......
ನೆತ್ತರಲ್ಲಿ ಹುಟ್ಟಿದರು ನೀರಲ್ಲಿ ಬೆಳೆದರು......
ತಾಯಿಯ ಮೊಲೆಹಾಲು ಹಾಲನ್ನದಲ್ಲಿ ಬೆಳೆದಿದ್ದಾರೆ......
ಆದರೆ ನನ್ನನ್ನು ತಂದೆ ಹುಟ್ಟಿಸಲಿಲ್ಲ ತಾಯಿ ಹೆರಲಿಲ್ಲ......

ನೆತ್ತರಲ್ಲಿ ಹುಟ್ಟಲಿಲ್ಲ ನೀರಲ್ಲಿ ಬೆಳೆಯಲಿಲ್ಲ ನಾನು
ಗಾಳಿಗೆಲ್ಮೆಯಲ್ಲಿ ಅಜ್ಜನವರ ಹಚ್ಚಡದ ತುದಿಯಲ್ಲಿ
ಜನನಕ್ಕೆ ಬಂದವಳು ಮೂಲಸಿರಿ ಎಂದರು......
ಅಲ್ಲಿಂದ ಹಿಂತಿರುಗಿ ಓ......
ಮಗು ಹಿಡಿಸಿ ತೊಟ್ಟಿಲು ಹೊರಿಸುತ್ತಾ ಓ ಹೋಗುತ್ತಾರಂತೆ ಓ ಕಾರ್ಕಳದ ಬೈಲಲ್ಲೇ......
ದೂರದಲ್ಲಿ ಬರುವುದನ್ನು ನೋಡಿದ್ದಾರೆ ಹೆಣ್ಣುಗಳು ಓ......
ದೂರದಿಂದ ನೋಡಿ ಓಡಿ ಬಂದರಂತೆ
ನಾರಾಯಣ ಓ ನಾರಾಯಣ ಅಕ್ಕನವರೆ
ಬನ್ನಿ ಅಕ್ಕನವರೆ ಓ ಕುಳಿತುಕೊಳ್ಳಿರಿ......
ಬಿಸಿಲು ಆರಲಿ ಓ ಗಾಳಿ ಬೀಸಲಿ
ಹಸಿವೆಗೆ ಮಗುವಿಗೆ ಹಾಲು ಕುಡಿಸಿ ಓ
ಹಸಿವೆಗೆ ಬಾಳೆಹಣ್ಣು ತಿನ್ನಿ ಅಕ್ಕನವರೆ ಎಂದು
ಹೇಳುತ್ತಾರೆ ಹೆಣ್ಣುಗಳು......ಓ...... ಸೂಳೆಸಿದ್ದುಗಳು......
ಬರುವಾಗ ಹಾಲು ಕುಡಿಸಿ ಬಂದಿದ್ದೇನೆ ಇನ್ನು ಹಿಂತಿರುಗಿ ಹೋಗಿ ಹಾಲು ಕುಡಿಸುತ್ತೇನೆ..
ಹಸಿವೆ ಆಗುವುದಿಲ್ಲವೆಂದು ಹೇಳಿದರು ಸಿರಿ......
ನಾರಾಯಣ ಅಕ್ಕನವರೇ, ಬಿಸಿಲಿಗೆ ಮಗು ಬಾಡಿ ಹೋಗಿದೆ
ಮಾವಿನ ಚಿಗುರಿನಂತೆ ಬಾಡಿಹೋಗಿದೆ ಅಕ್ಕನವರೆ
ಹಾಲು ಕುಡಿಸಿ ಎಂದರು ಹೆಣ್ಣುಗಳು......ಓ......
ಇಲ್ಲಿ ಸ್ವಲ್ಪ ವಿಶ್ರಾಂತಿ ಮಾಡಿಕೊಂಡು ಹೋಗಿ ಎಂದರು......ಓ......
ನಾರಾಯಣ ಹೆಣ್ಣುಗಳೇ......
ನಿಮಗೆ ನಾನು ಏನಾಗಬೇಕು ಇದುವೇ ಪ್ರಶ್ನೆ
ನನ್ನ ಗಂಡ ಓ ನಿಮ್ಮ ಗಂಡುಸು
ಆ ರೀತಿಯ ಉತ್ತರ (ಪ್ರಶ್ನೆ) ನಿಮಗೆ ಹೇಳಿ(ಕೇಳಿ)ದ್ದಾರಾ ಎಂದು
ಸಿರಿ ಕೇಳಿದರು......
ಸಿಟ್ಟಿನಲ್ಲಿ ಹೋಗುತ್ತೀರಾ ಅಕ್ಕನವರೆ ಎಂದು ಹೇಳಲು
ಸಿಟ್ಟಿನಲ್ಲಿ ಹೊರಡುತ್ತಾ ಹೋಗುತ್ತಾರೆ ಸಿರಿ......
ನಾರಾಯಣ ಅಕ್ಕನವರೆ......
ನೀವು ಹೋಗುವುದಾದರೂ ನಿಮ್ಮ ಅಂದಚಂದ
ಕಿರುಬೆರಳಿನಷ್ಟಾದರೂ ಅಂದ ಕೊಟ್ಟುಬಿಡಿ ಎಂದರು......
ನಮಗೊಂದು ವರ ಕೊಡಿ ಎಂದರು......ಓ......

ಸೂಳೆಸಿದ್ದನವರು ಹೇಳುತ್ತಾರೆ......
ನಾರಾಯಣ ಹೆಣ್ಣುಗಳೇ
ನಿಮಗೊಂದು ವರ ಕೊಡುತ್ತೇನೆ ನಾನು......
ನೀವು ಕೇಳಿದಿರಿ ನಾನು ಕೊಡುತ್ತೇನೆ ನಿಮಗೆ......
ಸಾವಿರ ರೋಗ ಸಾವಿರದೊಂದು ಕಾಯಿಲೆ ಓ ನಿಮಗಿರಲಿ......
ಹತ್ತು ಸಾಯುತ್ತಾ ಬರುವಾಗ
ಹನ್ನೊಂದು ಚಿಗುರುತ್ತಾ ಬರಲೆಂದರು
ನನ್ನ ಎಡದ ಕಾಲಿನ ಕಿರುಬೆರಳಿನ ಓ ಉಗುರಿನ ಅಂದ ನಿಮಗಿರಲೆಂದರು......
ನಾರಾಯಣ ಹೆಂಗುಸು......
ಅದನ್ನು ತೆಗೆದುಕೊಂಡು ಹಿಂತಿರುಗಿ ಹೋದರು......
ಬಾರೀ ಜೋರಿನ ಸತ್ಯಮಹಾಲೋಕದ ಸಿರಿ ಎಂದರು
ಅಲ್ಲಿಂದ ಹಾಗೆ ಹೊರಟರು ಸಿರಿಯೆ......ಓ......
ಹೋಗುತ್ತಾ ಹೋಗುತ್ತಾ ಹೋಗುವಾಗಂತೇ
ಕಂಬಳದ (ಗದ್ದೆಯ) ಬದುವಿನಲ್ಲಿ ಬಾಯಿ (ಕ್ರಿಶ್ಚಿಯನ್ ಹೆಂಗುಸು) ಓ......
ವೀಳ್ಯ ತೋಟದಲ್ಲಿ ಎಳತು ಕೊಯ್ಯುತ್ತಾ ತುದಿ ಚಿವುಟುತ್ತಾ ಬಾಯಿ ಇದ್ದಾಳಪ್ಪ....
ನಾರಾಯಣ ಸಿರಿಯೆ ಓ ನಾರಾಯಣ ಸಿರಿಯೆ......
ಎಲ್ಲಿಗೆ ಹೋಗುವುದಪ್ಪ ನೀನು......?
ಎಲ್ಲಿಂದ ಬಂದದ್ದು ಯಾಕಾಗಿ ನಿನಗೆ ಸಿಟ್ಟೆಂದು ಬಾಯಿ ಕೇಳಲು
ಹೇಳುತ್ತಾರಂತೆ ಸತ್ಯಮಹಾಲೋಕದ ಸಿರಿ
ನಾರಾಯಣ ಓ ನಾರಾಯಣ ಬಾಯಿ......
ಬಾಳಿದವನಿಗೆ ಬಡಗಣ ರಾಜ್ಯವಂತೆ
ಹಾಳಾದವನಿಗೆ ತೆಂಕಣ ರಾಜ್ಯವಂತೆ
ಸೆಟ್ಟಿ ಬ್ರಾಹ್ಮಣರ ಅಂಗಳ ಗುಡಿಸಿಕೊಂಡೂ
ಹೊಟ್ಟೆಯ ಹಸಿವು ಕಳೆಯಲು ನಾನು ಹೋಗುವುದೆಂದು
ಹೇಳುತ್ತಾರೆ ಸಿರಿ......
ಯಾರು ಮಗ ಸಿರಿಯೆ
ಬಾ ತಾಯಿ ಸಿರಿಯೆ ಹಾಲು ಕುಡಿ ಮಗಾ
ಹಸಿವೆಗೆ ಹಣ್ಣು ತಿನ್ನೆಂದು ಹೇಳಲು ಹೇಳುತ್ತಾರೆ
ನಾರಾಯಣ ಬಾಯಿ......
ಬರುವಾಗಲೇ ಹಾಲು ಕುಡಿದು ಬಂದಿದ್ದೇನೆ ನಾನು
ಇನ್ನು ಹೋಗಿ ಕುಡಿಯುವೆನೆಂದರು......

ಇಂದಾದರೋ ಇಂದು ಓಡುತ್ತ ಓಡುತ್ತ ಹೋದರು ಬಾಯಿ
ಇಂದು ಗಿಂಡಿಯ ಹಾಲು ತಣಿಸುತ್ತಾ ತಂದರಂತೆ
ಗೊನೆ(ಹಣಿಗೆ)ಯಿಂದ ಹಣ್ಣು ತೆಗೆದುಕೊಂಡು ಬಂದರಂತೆ ಇಂದು
ಹೋಗುತ್ತಾ ಹೋಗುತ್ತಾ ತಿನ್ನುತ್ತಾ ಹೋಗು ಮಗ ಸಿರಿ......ಓ......
ಇಲ್ಲಿ ತಡಮಾಡಬೇಡ ಮಗಾ ಎಂದು
ಬಾಯಿ ಹೇಳುತ್ತಾ ಕಣ್ಣಿನ ಕಣ್ಣೀರು ಒರಸಿದರು......
ನಾರಾಯಣ ಓ ನಾರಾಯಣ ಬಾಯಿ......ಓ......ನೀನೇ
ಗುಡ್ಡದ ತುದಿಯಲ್ಲಿ ಮನೆಮಾಡಿ ಕುಳಿತರು ಬಾಯಿ ಓ......
ಸುವರ್ಣಗಡ್ಡೆ ಗೆಣಸು ನೆಡುತ್ತಾ (ಬೆಳೆಸಿಕೊಂಡು) ಓ
ಬಾಳೆ ವೀಳ್ಯ ನೆಡುತ್ತ(ಬೆಳೆಯಿಸುತ್ತ)ಲಾದರೂ ಓ ನಿನ್ನ ಹೊಟ್ಟೆಯ ಪಾಡು ಓ
ತೀರಿಸಿಕೊಂಡಿರು ಬಾಯಿ......
ಇನ್ನೊಂದು ನಿನಗೆ ಅಂದ ಚಂದ ಕೊಡುವೆನು ಓ ಬಾಯಿ ನಿನಗೆ
ಹೇಳುತ್ತಾರಪ್ಪ ಓ ಸಿರಿಯೆ ಓ......
ಸತ್ಯಮಹಾಲೋಕದ ಸಿರಿ ಓ ಹೇಳುತ್ತಾರಪ್ಪ......
ನಾರಾಯಣಾ ಓ ನಾರಾಯಣಾ ಓ......
ಯಾರು ಬಾಯಿ ಕೇಳಿದ್ದೀಯೇ ನೀನೂ......
ಯಾರು ಬಾಯಿ ಕೇಳಿದ್ದೀಯೇ ನೀನೂ......
ಕಟ್ಟಿರುವ ತಲೆ ಮಾಸಬಾರದು ನಿನ್ನದು......
ಉಟ್ಟಸೀರೆ ಹಾಳಾಗಬಾರದು
ಅಂಥ ಒಂದು ಚಂದ ನಿನಗೆಂದರು ಬಾಯಿಗೆ
ಬಾಯಿಗೆ ಒಂದು ವರ ಕೊಟ್ಟರು ಸಿರಿ
ಮಗು ಹಿಡಿಯುತ್ತಾ ತೊಟ್ಟಿಲು ಹೊರಿಸುತ್ತಾ
ಕಡುಮಂಗಳವಾರ ಸುಡುಬಿಸಿಲಿಗೆ......
ಮಟ ಮಧ್ಯಾಹ್ನ ಓ ಹೋಗುತ್ತಾರಂತೆ ಸಿರೀ......ಓ......
ಬಾಯಿ ನೋಡುತ್ತಾಳೆ ಕಣ್ಣಲ್ಲಿ ಕಡುದುಃಖ ಬಿಡುತ್ತಾಳಂತೆ
ಹೊಟ್ಟೆಯಲ್ಲಿ ಸಂಕಟಪಡುತ್ತಾಳಪ್ಪ......
ಹೆಣ್ಣಾಗಿ ಭೂಮಿಗೆ ಜನನವಾಗಬಾರದು
ದೇವರುಗಳಿಗೆ ಬರುವ ಕಷ್ಟ, ನನ್ನ ಅಜ್ಜನವರು ಸಾಯಬೇಕಿತ್ತಾ?
ನನ್ನ ಸಿರಿಗೆ ಇಂತಹ ಕಷ್ಟ ಸಿಗಬೇಕಿತ್ತಾ ಎಂದು
ಕಣ್ಣಲ್ಲಿ ಕಡುದುಃಖ ದುಃಖಿಸುತ್ತಾಳೆ ಬಾಯಿ......
ನಾರಾಯಣ ಓ ಬಾಯಿಯೇ ಕೇಳಿದ್ದೀಯೇ ನೀನೂ......
ಕಣ್ಣಲ್ಲಿ ಕಡುದುಃಖ ಬಿಡಬೇಡ ಬಾಯಿ......ಓ......
ಹೊಟ್ಟೆಯಲ್ಲಿ ಸಂಕಟಪಡಬೇಡ ಬಾಯಿ......

ಬಾಳಿದವನಿಗೆ ಬಡಗಣ ರಾಜ್ಯವಂತೆ......
ಕೆಟ್ಟುಹೋದವ(ದಿವಾಳಿಯಾದವ)ನಿಗೆ ತೆಂಕಣ ರಾಜ್ಯವಂತೆ......
ಸೆಟ್ಟಿ ಬ್ರಾಹ್ಮಣರ ಅಂಗಳ ಗುಡಿಸಿಕೊಂಡೂ
ಹೊಟ್ಟೆಯ ಹಸಿವು ತೀರಿಸಲು ನಾನೂ
ಹೋಗುವವಳೆಂದು ಬಾಯಿಯೊಡನೆ ಸಿರಿ ಹೇಳುತ್ತಾರಂತೆ......
ಹೋಗುತ್ತಾ ಹೋಗುತ್ತಾ ಓ ಹೋಗುತ್ತಾರಂತೆ ಸಿರಿ......
ಪುಣ್ಕೆದೊಟ್ಟು (ಹುಣಸೆಬೆಟ್ಟು) ಓ ತಂಬೂರಿ ನಾರಾಯಣ ಓ ಭಟ್ಟರ ಮನೆಗೆ....
ನಾರಾಯಣ ಓ ನಾರಾಯಣ......
ಹೂವಿನಪೂಜೆ ಓ ಆಯಿತಾ ಭಟ್ರೇ ಓ......
ಹೇಳಿಕೊಂಡ ಹರಕೆ ಓ ತೆಗೆದುಕೊಳ್ಳಿ ಭಟ್ರೇ......
ಗಂಧಪ್ರಸಾದ ಓ ಕೊಡಿ ಭಟ್ರೇ ಎಂದು......
ಸಿರಿಯೆ ಓ ಉತ್ತರ ಹೇಳಿದರು......
ನಾರಾಯಣಾ ಓ ನಾರಾಯಣಾ ಹೆಣ್ಣುಗಳೇ
ದೇವರಿಗೆ ಓ ಹೂವಿನಪೂಜೆ ಆಗಿ ಓ
ಭೂತಗಳಿಗೆ ಓ ಧೂಪ ತೋರಿಸಿ
ನಾಗನಿಗೆ ಓ ಅರಸಿನಹುಡಿ ಓ ಹಾಕಿ ಬಂದಾಯ್ತು......
ಮುಚ್ಚಿರುವ ಬಾಗಿಲು ಓ ತೆರೆಯಲಾರೆ ಇನ್ನು......
ಆರಿಸಿರುವ ನಂದಾದೀಪ ಮತ್ತೆ ಉರಿಸಲಾರೆ
ಮನೆಯ ಮನೆದೇವರ ಪೂಜೆಗೆ ಪುಷ್ಪವನ್ನು ಹೆಕ್ಕುವುದೆಂದು
ಪುಣ್ಕೆದೊಟ್ಟು (ಹುಣಸೆಬೆಟ್ಟುಗದ್ದೆ) ತಂಬೂರೀ ನಾರಾಯಣ ಭಟ್ರು ಕೊಡುತ್ತಾರಂತೆ
ಸಿರಿಗೆ ಉತ್ತರಾ......
ನಾರಾಯಣಾ ನಾರಾಯಣ ಭಟ್ರೇ ಓ......
ನಮ್ಮ ಅಜ್ಜನವರ ದೇವಸ್ಥಾನದಲ್ಲಿ
ನನಗೆ ಹಣ್ಣುಕಾಯಿ ಮಾಡಿ ಕೊಡಲಾರಿರೇ
ನನ್ನ ಹರಕೆಯನ್ನೇ ತೆಗೆದುಕೊಳ್ಳುವುದಿಲ್ಲವೇ ಭಟ್ರೇ ನೀವೆಂದು......
ಸಿರಿ ಉತ್ತರ (ಪ್ರಶ್ನೆ) ಕೇಳುವಾಗ ಹೇಳುತ್ತಾರಂತೆ
ನಾಳೆಯ ದಿನ ತೆಂಗಿನಕಾಯಿ ಒಡೆಯುವೆನು ಓ ಹರಕೆ ತೆಗೆದುಕೊಂಡೇನು......
ಗಂಧಪ್ರಸಾದ ಕೊಡುತ್ತೇನೆ ನಾನು......
ಇಂದಿನ ದಿನ ಆಗದು ಎಂದರು......
ಅಡುಗೆ ಮಾಡಲು ಮಡಕೆಸೌಟು (ಪಾತ್ರೆಸಾಮಾನು) ಕೊಡುತ್ತೇನೆ ನಾನು......
ತಡೆಯಲು ಜಾಗ ನಾನು ಕೊಡುತ್ತೇನೆಂದರು......
ಕಡುಮಂಗಳವಾರ ಸುಡುಬಿಸಿಲಿಗೆ

ಎಲ್ಲಿಂದ ಬಂದ ಓ ಒಡೆತನವಿಲ್ಲದ ಓ ಸರ್ಕಾರೀ ಕುದುರೆಗಳು ನೀವು......
ಅಯ್ಯೊಲಿ ಪಯ್ಯೊಲಿಯ (ನಾಗಾಲೋಟದ) ಹೆಣ್ಣುಗಳು ನೀವು
ಯಾವ ಊರು ನಾಶಮಾಡಿ ಬಂದಿರಪ್ಪ......
ಯಾವ ಊರು ನಾಶಮಾಡಲು ಹೋಗುವವರು
ಯಾವೊಂದು ಮನೆ ತೆಗೆದಿರಿ (ನಾಶಮಾಡಿದಿರಿ) ನೀವೆಂದು......
ಹೆಣ್ಣುಗಳಿಗೆ ಇಂದು ಬಿಸಿಬಿಸಿ (ಕಟುವಾದ) ಉತ್ತರ ಕೊಡುತ್ತಾನಪ್ಪ ಭಟ್ಟ
ಪುನ್ಕೆದೊಟ್ಟು (ಹುಣಸೆಬೆಟ್ಟುಗದ್ದೆ) ಕಿರಿಯ ನಾರಾಣ ತಂಬೂರಿ (ನಂಬೂರಿ <ನಂಬೂದಿರಿ?) ಭಟ್ಟ ಓ ಕೊಡುತ್ತಾನಂತೇ......
ನಾರಾಯಣಾ ಓ ನಾರಾಯಣ ಭಟ್ರೇ......ಓ......ಎಂದರು ಸಿರಿಯೆ......
ನನ್ನಂತಿರುವ ಒಕ್ಕೆತ್ತಿರಿ ವಂಶದಾ ಓ ಹೆಣ್ಣುಗಳಿಗೆ ನೀವು
ಅಡುಗೆಗೆ ಪಾತ್ರೆ ಸಾಮಾನು, ಓ ನಿಲ್ಲಲು ಜಾಗ ಕೊಡುತ್ತೇನೆಂದಿರಿ......
ಶುಂಠಿ ಮೀರಿದ (ಹೆಚ್ಚಾದ) ಕಷಾಯ ನೀವೆಂದಿರಿ ಉಪ್ಪು ಮೀರಿದ (ಹೆಚ್ಚಾದ) ಉಪ್ಪಿನ ಕಾಯಿ ಎಂದಿರಿ
ಓ ರಕ್ಷಕರಿಲ್ಲದ ಹೆಣ್ಣುಗಳೆಂದಿರಿ ಓ
ಗಂಡನನ್ನು ಬಿಟ್ಟು ಬಂದ ಹೆಣ್ಣೆಂದು ಭಟ್ರೇ ಇಂದು
ಸಿರಿಗೆ ಉತ್ತರ ನೀಡಿದಿರಿ......
ನಾರಾಯಣಾ ಓ ನಾರಾಯಣಾ ಎಂದರು......ಓ......
ಏಳೇಳು ಹದಿನಾಲ್ಕು ಲೋಕದ ಕೋಪ ಕೋಪಿಸಿದರು, ಸಿಟ್ಟುಗೊಂಡರು ಸಿರಿ......
ಹಿಂತಿರುಗಿದರು ಓ ಬಡಗಣ ಲಂಕೆಲೋಕನಾಡಿಗೆ ಬಂದರು......
ಬಡಗಣ ಲಂಕೆಕೋಕನಾಡಿಗೆ ಬಂದರು ಸಿರಿಯೆ......ಓ......
ಅಂಗಣ ಹಿಡಿದರು (ಅಂಗಣದ ಮೂಲಕ) ಓ ಗೋಪುರಕ್ಕೆ ಹೋದರು......
ಕುಮಾರನ ಕುಂದಣದ ತೊಟ್ಟಿಲು ಇಳಿಸಿದರು ಅಕ್ಕನವರು......
ಮಗುವನ್ನು ಎತ್ತಿದರು ಓ ಕುಮಾರನನ್ನು ಹಿಡಿದುಕೊಂಡರೂ
ಪೂರ್ವಕ್ಕೆ ತಿರುಗಿದರು ಮೂಡಣ ನಂದನಕ್ಕೆ ಹೋದರು
ತಾವರೆಯ ಕೆರೆಗೆ ಇಳಿದರು ಸಿರಿಯೆ
ಅಡಿಮೊಗವಾಗಿ ಮುಳುಗಿದರು ಮೇಲ್ಮೊಗವಾಗಿ ತೇಲಿದರು
ಮೂರುಬಾರಿ ಮುಳುಗಿದರು ಮೂರುಬಾರಿ ಮೇಲೆದ್ದರು......
ಮೈಲಿಗೆ ಕಲ್ಲಲ್ಲಿ ನಿಂತರು ಸಿರಿಯೆ......
ಓ ಮೈಲಿಗೆ ಕಳಚಿದರು ಮಡಿಕಲ್ಲಲ್ಲಿ ನಿಂತು ಸಿರಿಯೆ ಮಡಿ(ಬಟ್ಟೆ) ಉಟ್ಟರು......
ಹತ್ತು ಬೆರಳು ಜೋಡಿಸಿ ವಂದನೆ (ನಮಸ್ಕಾರ) ಮಾಡಿದರು......
ಧ್ವಜಕಂಬದ ಬುಡದ ನೆರಳಿಗೆ (ಬುಡಕ್ಕೆ) ಬಂದರು ಸಿರಿ......
ನಾರಾಯಣ ದೇವರೆ ಬೆರ್ಮರೇ ಎಂದರು
ಅಂದಿನ ಕಾಲದಲ್ಲಿ ಧ್ವಜಕಂಭದ ನೆರಳಲ್ಲಿ

ಬುಟ್ಟಿಯ ಅಯ್ಯೊಜಿಯಲ್ಲಿ(?) ಹೆಡಿಗೆಯ ಹೂವಿನಲ್ಲಿ ಎಂದರು
ಆನೆಕಲ್ಲಿನ ಮರೆಯಲ್ಲಿ ದಂಬೆಕಲ್ಲಿನ ಎದುರಿನಲ್ಲಿ ಗಜಕಂಭದ ತುದಿನೆರಳಿನಲ್ಲಿ......
ಬುಟ್ಟಿಯ ಅಯ್ಯೋಜಿಯಲ್ಲಿ ಹೆಡಿಗೆಯ ಹೂವಿನಲ್ಲಿ
ಗಂಧದ ಗುಳಿಗೆಯಲ್ಲಿ ಹೋಮದ ಕರಿಹೊಗೆಯಲ್ಲಿ
ಅರುವತ್ತಾರು ಕೋಟಿ ನಾಗಬ್ರಹ್ಮರು ಮೂವತ್ತಮೂರು ಕೋಟಿ ದೇವರುಗಳು
ಬೆರ್ಮೆರ ಬಲಭಾಗದಲ್ಲಿ ಎಡಭಾಗದಲ್ಲಿ
ಒಕ್ಕೆತ್ರಿ ವಂಶ ಪಾರ್ವತಿ ಜನನದಲ್ಲಿ
ಈಶ್ವರನ ತೊಡೆಯ ಭಾಗದಿಂದ ಉತ್ಪನ್ನವಾಗಿ ಬಂದ ಕುಂಕುಮದ ಹರಳು
ಬೆಳ್ಳಿಯ ದಂಟು ಬಂಗಾರದ ಎಸಳಿನಲ್ಲಿ
ಅಜ್ಜನವರ ಹಚ್ಚಡದ ತುದಿಯಲ್ಲಿ ನಿನ್ನೆಗೆ ಜನನಕ್ಕೆ ಬಂದ ಮಗಳು
ಸತ್ಯ ಮಹಾಲೋಕದ ಸಿರಿ ಹೌದಾದರೆ ಓ......
ನಾರಾಯಣ ನಾರಾಯಣಾ......
ಅಂತಹ ಸತ್ಯದಲ್ಲಿ ಜನನಕ್ಕೆ ಬಂದಿದ್ದೇನಾದರೆ
ಇಂದು ಬಡಗಣ ಲಂಕೆಲೋಕನಾಡಲ್ಲಿ
ಹಾಕಿದ (ಮುಚ್ಚಿದ) ಬಾಗಿಲು ತೆರೆದು ಬರಬೇಕು, ನಂದಿಸಿರುವ ನಂದಾದೀಪ ಬೆಳಗಬೇಕು
ತೆಂಗಿನಮರಕ್ಕೆ ಕಟ್ಟಿದ ತುಂಬುರೀ ಮಾವಿನಮರಕ್ಕೆ ಕಟ್ಟಿದ ನಗಾರಿ
ಶಕುನದ ಕೊಂಬು ಶಯನ(?)ದ ಸಿಡಿಮದ್ದು
ಪಲ್ಲಕ್ಕೀ ಓ ಸರ್ವ ಬಿರುದಾವಳಿ ಓ ಸಹಸ್ರ ವಾದ್ಯವಿನೋದ
ಗೌಜಿಗದ್ದಲ ಓ ಗುಲ್ಲುಗುಂಪು
ಸತ್ಯನಾಪುರದರಮನೆಯಲ್ಲಿ ಕೇಳಿಬರಬೇಕೆಂದರು......
ಓ ಬಡಗಣ ಲಂಕೆಲೋಕನಾಡಲ್ಲಿ ಕೇಳಿಬರಬೇಕೆಂದು ವರ ದಯಪಾಲಿಸಿದರಂತೆ...
ಹೇಳಿದ ನಾಲಗೆ ಗಂಟಲಲ್ಲಾಗಬೇಕಾದರೆ (ಮಾತಾಡಿದ ನಾಲಗೆ ಸ್ವಸ್ಥಾನಕ್ಕೆ ಬರುವಷ್ಟರಲ್ಲಿ)
ಹಾಕಿರುವ (ಮುಚ್ಚಿರುವ) ಬಾಗಿಲು ತೆರೆದು ಬಂತಂತೆ (ತೆರೆಯಲ್ಪಟ್ಟಿತು)
ನಂದಿರುವ ನಂದಾದೀಪಾ ಉರಿದು ಬಂತು (ಉರಿಯಿತು)
ಬಂಗಾರದ ಹರಿವಾಣ ಹೊಸ್ತಿಲಲ್ಲಾಗಿದೆಯಂತೆ ಓ......
ಬಡಗಣ ಲಂಕೆಲೋಕನಾಡಲ್ಲಿ ಓ ಗೌಜಿಗದ್ದಲ ಓ ಗುಲ್ಲುಗುಂಪು ಆಗಿದೆಯಪ್ಪ......
ಬ್ಯಾಂಡು ಬಿಗಿಲು ಡೋಲಿನ ಕುಣಿತ ಕೇಳಿಸುತ್ತಿದೆಯಪ್ಪ ಬ್ರಾಹ್ಮಣನಿಗೆ
ಬ್ರಾಹ್ಮಣ ಮನೆಯ ಮನೆದೇವರಿಗೆ ಪೂಜೆ ಮಾಡಿಯಂತೆ ಇಂದು
ಅಡ್ಡವಾಗಿ ಎಲೆ ಹಾಕಿ ಊಟಕ್ಕೆ ಕುಳಿತುಕೊಂಡಿದ್ದಾನಂತೆ......
ಒಂದು ಅಗುಳು ಅನ್ನ ಬಾಯಿಗಿಟ್ಟಿದ್ದಾನಂತೆ

ಒಂದು ಅಗುಳು ಅನ್ನ ಕೈಯಲ್ಲಿ ಹಿಡಿದಿದ್ದಾನಪ್ಪ......
ಕಿವಿಗೆ ಗೌಜಿಗದ್ದಲ ಗುಲ್ಲುಗುಂಪು ಕೇಳುವಾಗಪ್ಪ......
ಬಾಯಿಯ ಅನ್ನವನ್ನು ನೆಲಕ್ಕೆ ಉಗುಳಿದನು
ಕೈಯ ಅನ್ನವನ್ನು ಎಲೆಗೆ ಹಾಕಿದನಪ್ಪ......
ಯಾವ ಊರು ನಾಶಪಡಿಸಬಂದ ಹೆಣ್ಣುಗಳಪ್ಪ ಇವರು
ಯಾವ ಊರು ನಾಶಪಡಿಸಲು ಹೋಗುವವರು
ನನ್ನ ಮಡದಿಮಕ್ಕಳ ಉಪ್ಪು ಅನ್ನ ತೆಗೆದವಳು ಯಾರಪ್ಪ ಎಂದು
ಬಾಯಲ್ಲಿ ಬೈಯುತ್ತಾ ಮಾತನಾಡುತ್ತ ಓಡೋಡುತ್ತ
ಬಂದು ಬಡಗಣ ಲಂಕೆಲೋಕನಾಡಲ್ಲಿ ಬಂದು ನೋಡುವಾಗ ಓ
ಗೌಜಿ ಗದ್ದಲ ಗುಲ್ಲುಗುಂಪು ಬ್ಯಾಂಡುಬಿಗಿಲಲ್ಲಿ ಓ ಸರ್ವಬಿರುದಾವಳಿಗಳು ಕಾಣಿಸುತ್ತವೆ
ನಾರಾಯಣಾ ಓ ನಾರಾಯಣಾ ಹೆಂಗುಸೇ
ಬ್ರಾಹ್ಮಣ ಕೈಮುಗಿ ಮುಗಿದೇ ಅಂಗೈ ಆಯಾಸವಾಗುತ್ತಿದೆ
ಬ್ರಾಹ್ಮಣ ಅಡ್ಡಬಿದ್ದು ಬಿದ್ದು ಮಂಡಿ ಸಿಪ್ಪೆ ಹೋಯಿತಪ್ಪ......
ಯಾರಮ್ಮಾ ಹೆಣ್ಣೇ ಎಂದು ಬ್ರಾಹ್ಮಣ ಶರಣುಹಾಕುತ್ತಾನೆ......
ನಾರಾಯಣಾ ನಾರಾಯಣ ಬ್ರಾಹ್ಮಣ ಓ......
ಕಡುಮಂಗಳವಾರದಂದು ಸುಡುಸುಡುಬಿಸಿಲಿಗೆ
ಒಂದು ಮನೆ ತೆಗೆದು (ನಾಶಮಾಡಿ) ಒಂದು ಮನೆ ಇಟ್ಟು (ಬೆಳಗಿಸಿ)
ಸರಕಾರಿ ಜಾನುವಾರುಗಳು, ಸರಕಾರ (ಯಜಮಾನರು) ಇಲ್ಲದ ಹೆಣ್ಣುಗಳು ನಾವು....
ಅಡುಗೆಗೆ ಪಾತ್ರೆಗಳು ಬಿಡಾರಕ್ಕೆ ಜಾಗ ಎಷ್ಟಿದೆ ಬ್ರಾಹ್ಮಣ ನಿಮ್ಮಲ್ಲಿ......ಓ.......
ನನ್ನಂತಹ ಒಕ್ಕೆತ್ರಿ (ಬಂಟ) ಹೆಣ್ಣುಗಳಿಗೆ
ಮೊದಲೆಷ್ಟು ಜಾಗ ಕೊಟ್ಟಿದ್ದೀರಿ ಬ್ರಾಹ್ಮಣ......
ಇನ್ನೆಷ್ಟು ಕೊಡಲಿದೆ ಬ್ರಾಹ್ಮಣ ಎಂದು ಸಿರಿಯೆ ಓ ಕೇಳುತ್ತಾರಂತೆ
ನಾರಾಯಣ ಬ್ರಾಹ್ಮಣ......
ಬಸರೂರ ಕಾಂತಾಳ್ವರು ಎಷ್ಟು ಉಂಬಳಿ ನಿಮಗೆ ಕೊಡುತ್ತೇನೆಂದಿದ್ದಾರೆ
ಎಷ್ಟು ಕಳಸಿಗೆ ನಿಮಗೆ ಅಳೆದುಕೊಟ್ಟಿದ್ದಾರೆ......
ಎಷ್ಟು ಬೆರಣಿ (?) ನಿಮಗೆ ಕೊಟ್ಟಿದ್ದಾರೆ ಬ್ರಾಹ್ಮಣ......
ಗಂಡ ಇರುವಾಗಲೇ ಓ ಬಿಟ್ಟುಬಂದವಳೆಂದು ಹೇಳಲಿಲ್ಲವೇ ಬ್ರಾಹ್ಮಣ ನೀವು......
ಒಂದು ಮನೆ ನಾಶಮಾಡಿ ಬಂದವಳೆಂದು ಹೇಳಲಿಲ್ಲವೇ ಬ್ರಾಹ್ಮಣ ನೀವು......
ಎಷ್ಟು ಉಂಬಳಿ ಕೊಡುತ್ತೇನೆಂದು ಓ ಹೇಳಿದ್ದಾರೆಂದು ಓ ಹೇಳಿಬಿಡಿ ಬ್ರಾಹ್ಮಣ ನೀವು......
ನನ್ನ ಅಜ್ಜನವರು ಎಷ್ಟು ಉಂಬಳಿ ಓ ನಿಮಗೆ ಬಿಟ್ಟಿದ್ದಾರೆ
ನಾರಾಯಣ ಬ್ರಾಹ್ಮಣ......

ನಾರಾಯಣ ಬ್ರಾಹ್ಮಣ ನಿಮಗೆ ಮೂರು ಬಾರಿ ಓ ಬಲಕ್ಕೆ ಜನಿವಾರ ಹಾಕಿದ್ದೀರೆಂದು
ಸಾರಿ ಹೇಳುವುದು ಬ್ರಾಹ್ಮಣ......ಓ......
ಇದು ಯಾರೆಂದು ನಿಮಗೆ ತಿಳಿಯಿತೇ......ಓ......
ಇದು ಬಡಗಣ ಲಂಕೆಲೋಕನಾಡಲ್ಲಿ......
ಬಂಗಾರದ ಹರಳಾಗಿ ಬಂದ ಸಿರಿ ಇದು
ಸತ್ಯಮಹಾಲೋಕದ ಸಿರಿ ಎಂದು ತಿಳಿಯಿತೇ ಬ್ರಾಹ್ಮಣ ನಿಮಗೆ......
ನಾರಾಯಣಾ ಓ ನಾರಾಯಣ ಸಿರಿಯೆ......ಓ......
ಸತ್ಯಮಹಾಲೋಕದ ಓ ಆರ್ಯಬನ್ನಾಯ ಓ ಬಿರ್ಮುಮಾಲವರು......
ಒಂದು ವರ್ಷದಿಂದ ಒಂದು ವರ್ಷಕ್ಕೆ ಓ ಒಂದು ಸಾವಿರ ಮುಡಿ ಉಂಬಳಿ ಓ
ಒಂದು ಸಾವಿರ ತೆಂಗಿನಕಾಯಿ ಉಂಬಳಿ ನನಗೆ ಮಗಾ......
ಎಂದು ಬ್ರಾಹ್ಮಣ ಓ ಹೇಳುತ್ತಾನಪ್ಪ......ಓ......ಸಿರಿಯಲ್ಲಿ......
ನಾರಾಯಣ ಬ್ರಾಹ್ಮಣ......
ಇಂದಿನಿಂದ ಮುಂದಕ್ಕೆ ಪೂಜೆ ಓ ಪೂಜೆಯ ವೇಳೆಯಲ್ಲಿ
ಪೂಜೆ ಮಾಡಿ ಓ ಬಾಗಿಲು ಹಾಕಿ ಹೋಗಿಬಿಟ್ಟರೂ
ಮುಂದಕ್ಕೆ ಓ ತೆಂಗಿನಕಾಯಿ ಹಿಡಿದುಕೊಂಡು
ನನ್ನಂತಹ ಹೆಂಗುಸರು ಒಂದು ವೇಳೆ ಬಂದರು ಕೂಡಾ
ಹಣ್ಣುಕಾಯಿ ಮಾಡಿ ಗಂಧಪ್ರಸಾದ ಕೊಡುವಿರೇ ಬ್ರಾಹ್ಮಣ ಓ
ಎಂದು ಸಿರಿಯೆ ಓ ಕೇಳುತ್ತಾರಂತೆ......
ಆದೀತು ತಾಯಿ ಸಿರಿಯೆ ಎಂದು ಉತ್ತರ ಕೊಟ್ಟರಂತೆ......
ಇಂದಿನವರೆಗೆ ನಿಮಗೆ ಸಾವಿರಮುಡಿ ಉಂಬಳಿ ಇದ್ದರೆ
ಇಂದಿನಿಂದ ಮುಂದಕ್ಕೆ ಕೇಳಿತೇ ಬ್ರಾಹ್ಮಣ
ಒಂದು ವರ್ಷದಿಂದ ಒಂದು ವರ್ಷಕ್ಕೆ
ಹನ್ನೆರಡು ಮುಡಿ ಅಕ್ಕಿ ಉಂಬಳಿ ನಿಮಗೆ
ನಿಮಗೆ ಒಂದುವರ ಕೇಳಿದಿರೇ ಬ್ರಾಹ್ಮಣ
ಬಾವಿಯ ಸಮೀಪದಿಂದಲೇ ನಿಮಗೆ ವರ ಕೊಡುತ್ತೇನೆ ನಾನು
ಹಾಕಿರುವ ಏತದಲ್ಲಿ ತೋಡಿಸಿರುವ ಬಾವಿಯಿಂದ
ಒದ್ದೆಬಟ್ಟೆ ತುಂಡು ಲಂಗೋಟಿಯಲ್ಲಿ ಓ
ಬಾಯಲ್ಲಿ ಮಂತ್ರ ಕೈಯಲ್ಲಿ ಚೆಂಬುನೀರು ಹಿಡಿದುಕೊಂಡು
ದೇವರ ಶಿರಕ್ಕೆ ನೀರು ಹೊಯ್ಯುತ್ತಾ ಓ ದೇವರ ಬಿಂಬವನ್ನು ಓ ತೊಳೆದು ಬ್ರಾಹ್ಮಣ
ಹೊಟ್ಟೆಯ ಹಸಿವು ಓ ತೀರಿಸಿಕೊಳ್ಳಬೇಕು ಬ್ರಾಹ್ಮಣ......
ನಾರಾಯಣ ಓ ನಾರಾಯಣ ಓ......ಬ್ರಾಹ್ಮಣ ಕೇಳಿ
ಒಳಗೆ ಹೊಕ್ಕುಬಿಡಿ ಬ್ರಾಹ್ಮಣ ನೀವು

ದೇವರ ಮುಖ ಒಮ್ಮೆ ನೋಡಿಬಿಡಿ ಬ್ರಾಹ್ಮಣ ಎಂದರು......
ಒಳ ಹೊಕ್ಕರು, ಬ್ರಾಹ್ಮಣ (ಒಳಗೆ) ಹೋದರು......
ದೇವರಿಗೆ ಓ ನೀರು ಹೊಯ್ದರಂತೆ
ಮಲ್ಲಿಗೆಯಲ್ಲಿ ಜಲ್ಲಿ (ಮಾಲೆಯಲ್ಲಿ ವಿಶೇಷಾಲಂಕಾರ) ಪುಷ್ಪದಲ್ಲಿ ಜಲ್ಲಿ ಓ ದೇವರಿಗೆ ಮಾಡಿದರು......
ಹೋಗಿ ಬ್ರಾಹ್ಮಣ ಓ ಹರಿವಾಣ ಕೊಟ್ಟಿಬಿಡೀ ಎಂದು ಸಿರಿ ಹೇಳುವಾಗ
ಜನನಕ್ಕೆ ಬಂದಿದ್ದಂತಹ ಬಂಗಾರದ ಹರಿವಾಣವನ್ನು ಓ ಸಿರಿ ಕೊಟ್ಟಿರಪ್ಪ......ಹೊಸ್ತಿಲಲ್ಲಿ ಇಟ್ಟರು......
ನಾರಾಯಣ ಸಿರಿಯೆ......
ಬಂಗಾರದ ಹರಿವಾಣ ಹಿಡಿದರು ಇಂದು ಬಂಗಾರದ ಮಗು ಬೆಳ್ಳಿಯ ತೊಟ್ಟಿಲು ಹಿಡಿಹಣ ದುಂಡು(?) ಕುಂಬಳ......ಓ......
ಮಗನ ಕೈಯಲ್ಲಿ ಓ ಸತ್ಯಮಹಾಲೋಕದ ಸಿರಿಯ ಮಗ ಮುದ್ದು ಕುಮಾರನ ಕೈಯಲ್ಲಿ ಹರಕೆ ಹಾಕಿಸಿದರು......
ಗಂಧಪ್ರಸಾದ ಹಿಡಿದುಕೊಂಡು ಹೋದರು ಸಿರಿ......
ನನಗೆ ತಡವಾಗುತ್ತದೆ ಎಂದರು
ಬಡಗಣ ಲಂಕೆಲೋಕನಾಡು ಇಳಿಯುವಾಗ ಹೇಳಿದರು ಸಿರಿ
ನಾರಾಯಣ ದೇವರೆ ಓ ಬೆರ್ಮರೆ ನೀವು......ಓ......
ನನಗೊಂದು ಬಾಗಿಲು ನನಗೊಂದು ಮಧ್ಯಮಾರ್ಗ
ತೋರಿಸಿ ಬಿಟ್ಟುಬಿಡಿ ದೇವರೇ ಎಂದು ಓ ಹೇಳಿದರು ಸಿರಿ......
ಬಡಗಣ ಲಂಕೆಲೋಕನಾಡು ಓ ಇಳಿದರು ಸಿರ......ಓ......
ಹೋಗುತ್ತಾ ಹೋಗುತ್ತಾ ಹೋದರು ಸಿರಿ......
ಮಡಿವಾಳರ ಮಾಬುಕರಿಯ ಓ ಮದನಕುದುರು ತಲುಪಿದರು ಸಿರಿ......ಓ......
ಹೊಳೆತುಂಬ ರಣಾಂಗಣದಂತೆ ನೆರೆಯೇರುವ ಹೊತ್ತು......
ನಾರಾಯಣ ಓ ನಾರಾಯಣ ದೋಣಿಯ ಕುಂಞಾ......ಓ......
ನನಗೊಂದು ದೋಣಿ ತಾ ಎಂದರು......
ಈ ತುದಿಯಿಂದ ಆ ತುದಿಗೆ ದಾಟಿ ಹೋಗಬೇಕೆಂದರು......
ನಾರಾಯಣ ಹೆಂಗುಸೇ ನಾರಾಯಣ ಹೆಂಗುಸೇ ಓ......
ಇಂದಿನ ದಿನದಲ್ಲಿ ದೋಣಿ ಬಿಡಲು
ಆಗುವುದಿಲ್ಲ ಎಂದನು ಕುಂಞಾ......
ಒಂದು ದೋಣಿ ಇದ್ದದ್ದು......
ಉಬಾರಿಗೆ (ಉಪ್ಪಿನಂಗಡಿಗೆ) ಉಪ್ಪು ತರಲು ಹೋಗಿದೆ

ಇನ್ನೊಂದು ದೋಣಿ ಇದ್ದದ್ದು
ವೇಣೂರಿಗೆ ಎಣ್ಣೆ ತರಲು ಹೋಗಿದೆ
ಇನ್ನೊಂದು ದೋಣಿ ಇದ್ದದ್ದು ಓ ಹೋಗಿದೆಯಪ್ಪಾ
ಬೆದ್ರಕ್ಕೆ (ಮೂಡುಬಿದರೆಗೆ) ಮೆಣಸು ತರಲು
ಮೂರು ಉತ್ತರ ಮೂರು ದೋಣಿಗೆ ಓ
ದೋಣಿಯ ಕುಂಞ ಓ ಕೊಟ್ಟಿಬಿಟ್ಟನಪ್ಪಾ......
ಇದೊಂದು ದೋಣಿ ಇದ್ದದ್ದು
ತೂತು ದೋಣಿ ಮುರಿದ ಹುಟ್ಟು ಇರುವುದೆಂದು ಓ ಹೇಳಿದನಪ್ಪಾ ಕುಂಞ
ನಾರಾಯಣ ಓ ನಾರಾಯಣ ದೇವರೆ ಬೆರ್ಮೆರೆ
ಹೊಟ್ಟೆಯುರಿಯ ವೇಳೆ ಇದಾಯಿತೆಂದರು
ಕಣ್ಣಲ್ಲಿ ಕಡುದುಃಖ ದುಃಖಿಸಿದರು
ಏನು ಮಾಡುವುದು ಏನು ಉಪಾಯವೆಂದರು
ಬತ್ತಕೇರಿ ಬಸರೂರ ಕಾಂತಾಳ್ವನ ಸತ್ಯ ಮೆರೆಯಿತಪ್ಪಾ
ಸತ್ಯಮಹಾಲೋಕದ ಸಿರಿಯ ಸತ್ಯ ಮುಳುಗಿತೆಂದರು......
ಕಣ್ಣಲ್ಲಿ ಕಡುದುಃಖ ದುಃಖಿಸಿದರು ಸಿರಿ......
ನಾರಾಯಣಾ ನಾರಾಯಣಾ ಎಂದರು......
ಆ ಕಡೆ ನೋಡಿ ಈ ಕಡೆ ನೋಡುವಾಗ ಓ
ಬಾಳೆಯಗಿಡ ಓ ಕಂಡಿತಪ್ಪಾ ಸಿರಿಗೆ......
ಬೆನ್ನು ಮಡಿಲಿಗೆ ಕೈಹಾಕಿದರು......
ರಾವಿನ್ನ (?) ಗೆಜ್ಜೆಕತ್ತಿ ತೆಗೆದರು......
ಆ ಕಡೆ ನೋಡಿ ಈ ಕಡೆ ನೋಡುವಾಗ ಬಾಳೆಯ ಗಿಡದಿಂದ
ಒಂದು ತುಂಡು ತುದಿ ಎಲೆ ತೆಗೆದರು......
ಕಡೆ ಎಲೆಯನ್ನು ಕೊಯ್ದರು ತುದಿಯನ್ನಿಟ್ಟರು ಸಿರಿ
ದಾರುವಿನ ತಲೆಯಿಂದ ತೊಟ್ಟಿಲು ಇಳಿಸಿದರು
ಎಲೆಯ ಮೇಲೆ ತೊಟ್ಟಿಲು ಇಡುವಾಗ ಹೇಳಿದರು
ನಾರಾಯಣ ಓ ನಾರಾಯಣಾ ಓ......
ಅರುವತ್ತಾರು ಕೋಟಿ ನಾಗಬ್ರಹ್ಮರು
ಮೂವತ್ತಮೂರು ಕೋಟಿ ದೇವರು ಬೆರ್ಮೆರು ಓ
ಎಡದಲ್ಲಿ ನಂಬಿಕೊಂಡು ಬಂದ ಉದ್ಭವ ಆದ ದೈವ, ಸೇಮಕಲ್ಲ ಪಂಜುರ್ಲಿ
ಎಡದಲ್ಲಿ ನೀನಾದೆ ಓ ಬಲದಲ್ಲಿ ನಾನು ಜನನಕ್ಕೆ ಬಂದೆ ಎಂದರು
ನಿನ್ನ ಮುಖವಾಡದ ಸತ್ಯದಲ್ಲಿ ಓ ನನ್ನ

ಅಡ್ಕದಹಾಳೆ, ತೋಟದ ಪುಷ್ಪ, ಅಡಕೆಗಿಡದ ಓ ಹಾಳೆ ಹಿಂಗಾರದ ಓ ಪುಷ್ಪವೆಂದರು......
ಸತ್ಯದ ನೆಲೆ ಎಂದರು ಹಿಂಗಾರದ ಎಸಳು ಎಂದರು ಸಿರಿ......
ಕುಮಾರನ ಕುಂದಣದ ತೊಟ್ಟಿಲು ತೆಗೆದು ತುದಿ ಎಲೆಯಲ್ಲಿ ಇಟ್ಟರು......
ಮಡಿವಾಳ ಮಾಬುಕರಿಯ ರಸ್ತೆ ಮಾರ್ಗವಾಗಿ ಹೋಗಬೇಕೆಂದರು......
ಹತ್ತು ಬೆರಳುಗಳನ್ನು ಜೋಡಿಸಿ ವಂದಿಸಿದರು ಸಿರಿ......
ಈ ಬದಿಯಿಂದ ಆ ಬದಿಗೆ (ಹೊಳೆಯು) ಮಾರ್ಗ(ದಂತೆ) ಆಗಿಹೋಯಿತು......
ಕೆಳಗಡೆಯ ನೀರು ಕೆಳಗೆ (ಸ್ತಬ್ಧ) ಆಯಿತು ಮೇಲ್ಗಡೆಯ ನೀರು ಮೇಲೆ (ಸ್ತಬ್ಧ) ಆಯಿತು, ಓ ನಡುವೆ ಮಾರ್ಗ (ನಿರ್ಮಾಣ)ವಾಗಿ
ಅಷ್ಟುಹೊತ್ತಿಗೆ ಓಡೋಡುತ್ತಾ ಓ ಬಂದನೆ ಕುಂಞ
ನನ್ನ ಹೆಂಡತಿ ಮಕ್ಕಳಾ......
ಉಪ್ಪು ಅನ್ನ ತೆಗೆದಿರೇ ಸಿರಿ ಎಂದನು
ನಾರಾಯಣ ಓ ನಾರಾಯಣ ದೋಣಿಯ ಕುಂಞ......ಓ......
ಬಸರೂರ ಕಾಂತಾಳ್ವ ಎಷ್ಟು ಲಂಚ ಕೊಡುತ್ತೇನೆಂದು ಹೇಳಿದ್ದಾರೆ......ಓ......
ಸತ್ಯಮಹಾಲೋಕದ ಸಿರಿ ದಿಕ್ಕು ಅಳಿದು (ದಿಕ್ಕುದೆಸೆಯಿಲ್ಲದೆ) ದೇಶಾಂತರ ಹೋಗುವವಳು......
ಲಂಚ ಕೊಡಲು ಅವಳಲ್ಲೇನೂ ಉಳಿದಿಲ್ಲ ಎಂದು ತಿಳಿದೆಯಲ್ಲ......ಓ......ದೋಣಿಯ ಕುಂಞ
ಇಂದಿನವರೆಗೆ ನಿನಗೆ ಓ......
ಹನ್ನೆರಡು ತಿಂಗಳ ಹರಿವು (ಹೊಳೆಯಲ್ಲಿ) ಇತ್ತಪ್ಪಾ......
ಮುಂದಕ್ಕೆ ನಿನಗೆ ಆರು ತಿಂಗಳ ಹರಿವು (ಮಾತ್ರ) ನಿನಗೆ......
ಓ ಆರು ತಿಂಗಳು ಕಡವು (ದೋಣಿದಾಟು) ನಿನಗೆ......ಓ......
ನಿನ್ನ ಹೊಟ್ಟೆಯ ಹಸಿವು ನೀಗಿಸಿಕೋ ಎಂದರು......
ಮಡಿವಾಳರ ಮಾಬುಕರಿಯಾ ಮದನಕುದುರು ದಾಟಿ ಹೋದರು......
ನಾರಾಯಣಾ ಓ ನಾರಾಯಣ ದೇವರೇ....ಓ.....ನಾರಾಯಣ ದೇವರೆ ಬೆರ್ಮರೇ....
ದೇವರು ಓ ಬೆರ್ಮರಲ್ಲಿ ಹೇಳುತ್ತಾರಪ್ಪಾ ಓ......
ಸಿರಿಯ ಸತ್ಯ ಓ ನಿಂತು ಹೋಯಿತಪ್ಪಾ (ಶಾಶ್ವತವಾಯಿತು)
ಬಸರೂರ ಕಾಂತಾಳ್ವನ ಸತ್ಯ ಮುಳುಗಿ ಹೋಯಿತು ಓ......
ನಾರಾಯಣ ಓ ನಾರಾಯಣ ದೇವರು ಬೆರ್ಮರೇ......
ನಾರಾಯಣ ಓ ನಾರಾಯ......ಓ......
ಮಡಿವಾಳರ ಮಾಬುಕರಿಯ ಓ ದಾಟಿದರು ಸಿರಿಯೇ......
ಸತ್ಯಮಹಾಲೋಕದ ಸಿರಿಯ ಓ ಸತ್ಯ (ನೆಲೆ) ನಿಂತುಹೋಯಿತೆಂದರು......ಓ......
ಬತ್ತಕೇರಿ ಬಸರೂರ ಕಾಂತಾಳ್ವನ ಸತ್ಯ ಓ ಮುಳುಗಿ ಹೋಯಿತಪ್ಪಾ ಓ......

ಪಂಥಾಹ್ವಾನ ಓ ಹಾಕಿದರು ಸಿರಿಯೇ......
ಹಾಕಿದ ಪಂಥ ಓ ಗೆದ್ದು ಬಂತೆಂದರು......
ಅರುವತ್ತಾರು ಕೋಟಿ ಓ ನಾಗಬ್ರಹ್ಮರು
ಓ ಮೂವತ್ತಮೂರು ಕೋಟಿ ದೇವರುಗಳು ಓ
ನಡುನರಲೋಕಾ ಓ ನರಜಂತು......ಓ......
ಮನುಷ್ಯ ಪಾತ್ರಿ ಎಂದು ಓ ಹೇಳಿದರು ಸಿರಿಯೇ......
ಮಡಿವಾಳರ ಮಾಬುಕರಿಯಾ ಓ ದಾಟಿದರು ಸಿರಿ
ಹಸಿವಿನ ಹೊತ್ತು ಆಗುತ್ತದೆ ಎಂದರು......ಓ......
ಹೋಗುತ್ತಾ ಹೋಗುತ್ತಾ ಹೋದರು ಸಿರಿ ಓ ಸತ್ಯಮಹಾಲೋಕದ ಸಿರಿ ಓ......
ಮಗು ಹಿಡಿಸಿಕೊಂಡು ತೊಟ್ಟಿಲು ಹೊರಿಸಿಕೊಂಡು ಓ......
ಹೋಗೀ ಹೋಗಿ ಓ ಹೋದರು ಸಿರಿಯೇ......ಓ......
ಕೋಟಿ ಪೂಂಜರ ಓ ಬೈಲು ಹಿಡಿದರು......
ಎಲ್ಲಿಗೆ ಹೋಗುವುದು ಅಕ್ಕನವರೇ ನಾವೆಂದು ಕೇಳಲು ಹೇಳುತ್ತಾರೆ ಸಿರಿ......
ನಾರಾಯಣ ದಾರು, ಇದೊಂದು ಬೈಲು (ಗದ್ದೆಯ ದಾರಿ)ಹಿಡಿದೆವು ನಾವು
ಎಲ್ಲಿ ಮನೆಯ ಛಾವಣಿಯ ತುದಿ ಕಂಡಿತೊ
ಅಲ್ಲೊಂದು ಲೋಟೆ ನೀರು ಕುಡಿಯೋಣ ಎಂದರು......
ಅಲ್ಲಿಂದ ಹಾಗೆ ಮುಂದೆ ಹೋಗುವಾಗ
ಕೋಟಿ ಪೂಂಜರ ಬೈಲುದಾರಿ ಹಿಡಿದು ಹೋಗುವಾಗ ಓ
ಬಂದು ಬಂದು ಕೋಟಿ ಪೂಂಜರ ಬೈಲ (ಗದ್ದೆಯ)ಲ್ಲೇ
ಸಾಗುವಾಗ ಓ ಕಾಣಿಸುತ್ತದಪ್ಪಾ ಓ ಒಂದು ಮನೆ......
ಕಾಣುವ ಮನೆಯ ಅಂಗಳಕ್ಕೆ ಬಂದು ನಿಂತರು......
ಅಂಗಳದ ಮುಂದೆ ಹೋಗಿ ನಿಲ್ಲುವಾಗ ಬರುತ್ತಾರಪ್ಪಾ ಹೆಂಗುಸರು ಓ
ಎದುರು ಬದುರಾಗಿ ಹೆಂಗುಸರು ಬರುತ್ತಾರೆ......
ಕೋಟಿ ಪೂಂಜರ ತಂಗೀ ಓ ದಾರಮು ಮರ್ದೆದಿ......
ಎಲ್ಲಿಂದ ಬಂದಿಯಪ್ಪಾ ಓ ಮಲ್ಲಿಗೆ ಹೋಗುವವಳೆಂದು ಕೇಳಲು ಓ ಹೇಳುತ್ತಾಳೆ ಓ....
ನಾರಾಯಣ ಅಕ್ಕನವರೇ ಓ ಊಟ ಉಪಚಾರದ ಬಗೆಗೆ ಆಮೇಲೆ ಮಾತನಾಡುವಾ
ಒಂದು ತಂಬಿಗೆ ನೀರು ಮೊದಲು ಕೊಟ್ಟುಬಿಡಿ......
ಹಸಿವಿನ ಹೊತ್ತು ಆಯಿತು ಅಕ್ಕನವರೇ ಎಂದು ಓ ಸಿರಿ ಹೇಳಲು......
ಕೋಟಿ ಪೂಂಜರ ತಂಗಿ ಓ ದಾರಮು ಮರ್ದೆದಿ ಹೇಳುತ್ತಾರೆ......
ಊಟೋಪಚಾರ ಮುಗಿಸಿದರು ಹೆಂಗುಸೂ......
ಊಟ ಹಾಕುವಾಗ ಓ ಹೇಳುತ್ತಾರೆ
ನನ್ನ ಸತ್ಯವನ್ನು ನಾನು ಹೇಳುತ್ತೇನೆ ಮಗಾ......

ನಿನ್ನ ಸತ್ಯವನ್ನು ನೀನು ಹೇಳೆಂದರು......
ನಾರಾಯಣ ಅಕ್ಕನವರೇ ದಿಕ್ಕು ಇಲ್ಲದಾಯಿತು ದೆಸೆ ಅಳಿದುಹೋಯಿತು ನನಗೆ ಅಕ್ಕನವರೇ......
ಸತ್ಯಮಹಾಲೋಕದ ಅರಮನೆಯಲ್ಲಿ ಓ ಸತ್ಯಮಹಾಲೋಕದ ಸಿರಿ ನಾನು
ಬತ್ತಕೇರಿ ಬಸರೂರ ಕಾಂತಾಳ್ವರ ಮಡದಿ ನಾನು
ಕೈ ಹಿಡಿದ ಮದುಮಗಳು ನಾನೆಂದು ಹೇಳುತ್ತಾರೆ ಸಿರಿ......
ನಿಮ್ಮ ಸತ್ಯ, ನಿಮ್ಮ ಪರಿಚಯ ಹೇಳುತ್ತೀರಾ ಅಕ್ಕನವರೇ ಎಂದು ಓ ಸಿರಿ ಕೇಳುತ್ತಾಳೆ......
ನಾರಾಯಣ ಮಗ ಸಿರಿ......ಓ......
ಕೋಟಿಪೂಂಜರ ಸಹೋದರಿ ನಾನು......ಓ......
ನನಗೊಬ್ಬ ಮಗ ಇದ್ದಾನೆ ಮಗಾ ಓ......
ನರಭಕ್ಷಕ, ರಾಕ್ಷಸ ಮಗಾ......
ನಾವಿಲ್ಲಿ ನಿಲ್ಲಬಹುದೆ ಎಂದು ಸಿರಿ ಕೇಳುವಾಗ ಹೇಳುತ್ತಾರೆ......
ನಾರಾಯಣ ಮಗಾ......
ನನ್ನ ಮಗ ರಾಕ್ಷಸ ಮಗಾ
ನರಮಾನವರ ವಾಸನೆ ತಿಳಿದರೆ ಮಗಾ
ಅಟ್ಟಾಡಿಸಿ ಓ ತಿನ್ನುತ್ತಾನೆ ಮಗಾ
ನಾನು ಹೇಗೆ ನಿನ್ನನ್ನು ಇಲ್ಲಿ ಇರಲು ಹೇಳಲಿ ಮಗಾ ಎಂದು
ಕಣ್ಣಲ್ಲಿ ಕಡುದುಃಖ ದುಃಖಿಸಿದರು ಹೆಂಗುಸೂ
ಹೊಟ್ಟೆಯಲ್ಲಿ ಉರಿಸಂಕಪಟ್ಟರು
ದೇವರೇ ಆತ ಬರುವ ಹೊತ್ತಾಯಿತು ಮಗಾ
ಅರ್ಧ ಮುಡಿ ಅಕ್ಕಿಯ ಗಂಜಿ ಮಾಡಿ
ಆರಲು ಇಡದಿದ್ದರೆ ಮಗಾ ಅವನು
ನನ್ನನ್ನೇ ಕೊಲ್ಲುತ್ತೇನೆ ತಿನ್ನುತ್ತೇನೆ ಎನ್ನುತ್ತಾನೆ ಮಗಾ......ಎಂದರು......
ಬೇಗ ಬೇಗ ಊಟ ಮಾಡು ಮಗಾ......
ಈ ಮನೆಯಿಂದ ಒಮ್ಮೆ ಹೊರಟುಹೋಗಿ ಮಗಾ
ಏಳೂವರೆ ಗಾವುದ ದಾಟಿ ಹೋದರೂ ಮಗಾ
ನರಮಾನವರ ವಾಸನೆ ಹಿಡಿದು
ಓಡೋಡುತ್ತಾ ಬರುತ್ತಾನೆ ಅವನೆಂದು
ಹೇಳುತ್ತಾರಪ್ಪಾ ಹೆಂಗುಸು ಅವರು......
ಇಂದಾದರೋ ಸಿರಿಗೆ ಬೇಗಬೇಗ ಊಟ ಮುಗಿಸಿದರಂತೆ ದಾರುವಿಗೆ ಊಟ ಮಾಡಿಸಿದರಂತೆ

ಇಂದು ಕೋಟಿಪೂಂಜರ ಬೈಲು
ಮನೆಯಿಳಿದು ಬೈಲಿಗೆ ಬರುವಾಗ......ಓ......
ತಿನ್ನುತ್ತೇನೆ ಕೊಲ್ಲುತ್ತೇನೆಂದೇ ಓಡೋಡುತ್ತಾ ಬರುತ್ತಾನಪ್ಪ ಮಗಾ......
ಯಾರು ತಾಯಿಯವರೆ ಓ ಯಾರು ತಾಯಿಯವರೆ
ಮಾನವನ ವಾಸನೆ ಬರುತ್ತದಲ್ಲವೇ ಹೆಣ್ಣವಾಸನೆ ಬರುತ್ತದೆಯಲ್ಲಾ ನನಗೆ ಓ......
ವಾಸನೆ ಹಿಡಿಯುವಾಗ ಹೇಳುತ್ತಾರೆ ಹೆಂಗುಸು ಅವರು......
ನಾರಾಯಣ ಮಗಾ ಓ ಕೇಳಿದ್ದೀಯೇ ನೀನು ಓ ಕೇಳು......
ನಾನೇ ನರವಾಸನೆ ಬರುವುದು ಮಗಾ
ಮೆಯ್ಯ ಬೆವರದು, ನಾನು ಸ್ನಾನವನ್ನೇ ಮಾಡಲಿಲ್ಲಾ ಓ
ನಿನಗೆ ಗಂಜಿ ಮಾಡಿ ಇಟ್ಟಿದ್ದೇನೆಂದು
ನಿನ್ನ ಮರದ ಮರಿಗೆಯಲ್ಲಿ ಆರಲು ಇಟ್ಟಿದ್ದೇನೆ ಎಂದು ಹೇಳಿ
ತಣಿಸಿ ತಣಿಸಿ ಹೆದರಿಕೆಯಿಂದಲೇ ಭಯಭೀತರಾಗಿ ತಾಯಿ ಕೊಡುತ್ತಾರಪ್ಪಾ......
ತಾಯಿ ಹೆದರಲು ಅನ್ನ ತಿನ್ನುವಲ್ಲಿಂದಲೇ ಓ
ಏಳೂವರೆ ಗಾವುದಕ್ಕೆ ಓಡಿ ಹೋಗುತ್ತಾನೆ ಮಗಾ
ನಾರಾಯಣ ನಾರಾಯಣ ಅಕ್ಕನವರೇ......
ಅಕ್ಕನವರಾದ ಸಿರಿ ಹೋಗುತ್ತಿದ್ದಾರೆ ಮುಂದಿನಿಂದ
ಮಗವನ್ನು ಹಿಡಿದುಕೊಂಡು ತೊಟ್ಟಿಲನ್ನು ಹೊತ್ತುಕೊಂಡು ದಾರು ಹಿಂದಿನಿಂದ
ಹೋಗುತ್ತಿದ್ದಾಗ......
ನಾರಾಯಣ ಅಕ್ಕನವರೇ ಓ ಅಕ್ಕನವರೇ......
ನಿಮ್ಮ ತಲೆಯ ಸೂಡಿ ಯಾಕಾಗಿ ಬಾಡಿಹೋಯಿತು ಅಕ್ಕನವರೇ
ಸೆರಗಿನ ತುದಿ ಯಾತಕ್ಕಾಗಿ ಮಡಿಹೋಯಿತೆಂದಳು......
ಹಿಂತಿರುಗಿ ನೋಡಲು ಅಕ್ಕನವರು ಓ......
ಓಡೋಡುತ್ತಾ ರಾಕ್ಷಸ ಬರುವುದು ಕಾಣಿಸಿತು
ನಾರಾಯಣ ಸಿರಿ ಅಷ್ಟು ಹೇಳುವುದನ್ನು ಕೇಳಿದರು......
ಬಲದ ಉಂಗುಟದಲ್ಲಿ ಮೂರುಕಲ್ಲು ತೆಗೆದರು
ಬಲದ ಕೈಯಲ್ಲಿ ಹಿಡಿದರು ಅಕ್ಕನವರು
ಹಿಂತಿರುಗಿ ಒಂದು ಕಲ್ಲು ಎಸೆಯುವಾಗ ಹೇಳುತ್ತಾರೆ
ಏಳೂವರೆ ಗಾವುದಕ್ಕೆ ಓಡೆಂದರು
ಒಂದು ಕಲ್ಲು ಎಸೆದಕ್ಕನವರು......
ಏಳೂವರೆ ಗಾವುದಕ್ಕೆ ಓಡಿದರು......
ಮತ್ತೊಂದು ಕಲ್ಲು ಎಸೆದರು ಅಕ್ಕನವರು......

ಮಾಯದಲ್ಲಿ ಬಂದಿದ್ದಾದರೆ ಮಹೇಶ್ವರ ಆಗೆಂದರು
ಇನ್ನೊಂದು ಕಲ್ಲೂ ಎಸೆದರು ಅಕ್ಕನವರು......
ವೀರದಲ್ಲಿ ಬಂದಿದ್ದಾರೆ ವೀರಭದ್ರ ಕುಮಾರ ಆಗೆಂದರು......
ಮೂರು ಕಲ್ಲಿಗೆ ಮೂರು ಶಾಪ ಕೊಟ್ಟರು......
ವೀರಭದ್ರ ಕುಮಾರ ಆದರೆ ನೀನೇ
ಮಾಯದಲ್ಲಿ ಬಂದರೆ ಮಹೇಶ್ವರ
ಕ್ಷೇಮದಲ್ಲಿ ಬಂದರೆ ಸೇಮಕಲ್ಲ ಪಂಜುರ್ಲೀ......
ವೀರದಲ್ಲಿ ಬಂದರೆ ವೀರಭದ್ರ ಕುಮಾರ ಎಂದು
ಮೂರು ಕಲ್ಲಿಗೆ ಮೂರು ವರ ಕೊಟ್ಟರು ಸಿರಿಯೇ
ಓ ಸಿರಿ ತಾನು ಕೊಟ್ಟರಂತೆ......ಓ......
ನಾರಾಯಣ ಓ ನಾರಾಯಣ ಅಕ್ಕನವರೇ......ಓ......
ಕೋಟಿಪೂಂಜರ ಬೈಲಿಗೆ ಬಂದರೆ ನಾವು......ಓ......
ಕೋಟಿಪೂಂಜರ ತಂಗಿ ಓ ಮರ್ದಿಯ ಮಗೆ......
ಹೊಟ್ಟೆತುಂಬ ಊಟ ಹಾಕಿದರು......
ಹೊಟ್ಟೆಯ ಬೆಂಕಿ ಓ ನಂದಿಸಿದರು ಓ ಕೊಂತ್ಯಮ್ಮ ದೇವಿಯಂತೆ......
ವೀರಭದ್ರ ಕುಮಾರನ ತಾಯಿಯ ಹೆಸರು
ಕೊಂತ್ಯಮ್ಮ ದೇವಿಯೆಂದು ಹೆಸರು ಇಟ್ಟರು ಓ......
ಗೆದ್ದೇಬಿಟ್ಟೆವೆಂದರು
ಸತ್ಯಮಮಹಾಲೋಕದ ಸಿರಿಯ ಸತ್ಯ ಗೆದ್ದಿತೆಂದರು
ಬಾಯಲ್ಲಿ ನುಡಿದರು ಮನದಲ್ಲಿ ಎಣಿಸಿದರು......ಓ......
ಹೋಗುತ್ತಾ ಹೋಗುತ್ತಾ ಎಲ್ಲಿಗೆ ಹೋಗುವುದೆಂದು ಕೇಳಲೂ......
ನಾರಾಯಣ ಓ ನಾರಾಯಣ......ಓ ನಾರಾಯಣ
ಇಂದಾದರೋ ಬೋಳದ ಅರಮನೆಯಲ್ಲಿ ಓ
ಬೋಳಬಾರಿ ಓ ಚತ್ತಿರಿಗಳು (ಕ್ಷತ್ರಿಯರು?) ಓ......
ಕರಿಯ ಕಾಸಿಂಗರಾಯರು ಓ ಬೊಳಿಯ ದೇಸಿಂಗರಾಯರು
ಇಬ್ಬರು ಅಣ್ಣತಮ್ಮಂದಿರು ಚತ್ತಿರಿಗಳು ಓ......
ಬೆಳಗ್ಗೆ ಬೇಗನೆ ಎದ್ದರಂತೆ ಎದ್ದು ಹೇಳುತ್ತಾರಂತೆ
ನಾರಾಯಣ ಓ ಅಣ್ಣನವರೇ ಕೇಳಿದ್ದೀರೋ ನಮಗೆ
ಕಾಡು ಕಟ್ಟಬೇಕು (ಕಾಡುಮೃಗಗಳನ್ನು ದಿಗ್ಬಂಧ ಮಾಡಬೇಕು) ಓ ಬೇಟೆಯಾಡಬೇಕು
ಓ ಎಂದು ಹೇಳುತ್ತಾರಂತೆ......
ಕರಿಯ ಕಾಸಿಂಗರಾಯರು ಬೊಳಿಯ ದೇಸಿಂಗರಾಯರು......
ನಾರಾಯಣ ಮಗ ಕೇಳಿದ್ದೀಯೇ ಕಾಡುಕಟ್ಟಿ (ದಿಗ್ಬಂಧ ಮಾಡಿ) ಬೇಟೆಯಾಡಬೇಕಾದರೆ
ಏನಾಗಬೇಕು ನಮಗೆ

ಇಂದು ಕೋವಿ ಹಿಡಿದ ಈಡುಗಾರನನ್ನು......ಓ......
ಬಿಲ್ಲು ಹಿಡಿದ ಓ ಮುಗೆರನನ್ನು......ಓ ಒಟ್ಟು ಸೇರಿಸೋಣ......
ಓಲೆಪತ್ರ ಓ ಕಳುಹಿಸೋಣ......ಓ......
ಅಜೂಪಾಜೂ (ಅಕ್ಕಪಕ್ಕದ) ಓ ನಾಯಿಗಳನ್ನು ಓ ಒಟ್ಟು ಸೇರಿಸೋಣ ಎಂದರು......
ಕಪ್ಪು ನಾಯಿಗಳಿಗೆ ಕಜೆ ಅಕ್ಕಿಯ (ಕುಚ್ಚಿಗೆ) ಅನ್ನ ಮಾಡಿಸಿದರು......
ಬಿಳಿ ನಾಯಿಗಳಿಗೆ ಬಿಳಿಯಕ್ಕಿಯ ಅನ್ನ ಮಾಡಿಸಿದರು ಇಂದು......
ಓಲೆ ಬಿಟ್ಟ ಬೆನ್ನಿಗೆ ಇಂದು ಕೋವಿ ಹಿಡಿದ ಈಡುಗಾರರು ಇಂದು
ಬಿಲ್ಲು ಹಿಡಿದ ಮುಗೇರರು ಇಂದು
ಬೋಳದ ಅರಮನೆಯಲ್ಲಿ ಓ ಸೇರಿದರು......ಓ......
ಕೋವಿ ಹಿಡಿದ ಈಡುಗಾರರು ಓ......
ಇಂದಾದರೋ ಊಟೋಪಚಾರ ಮುಗಿಸಿದರು, ಇಂದು ಉಂಡ ಎಂಜಲಿಗೆ (ಊಟಮಾಡಿದ ಕೂಡಲೇ) ಇಂದು
ವೀಳ್ಯ ಮೆದ್ದರು ಇಂದು ಓ ಬೇಟೆಗೆ
ಬೇಕಾದ ಮಂದೆ ಸೇರಿಸಿಕೊಂಡು ಓ ಬೇಟೆಗೆ ಹೊರಟರು......
ಬೇಟೆಗೆ ಹೋಗಿ ಇಂದು ಯಾವೊಂದು ಬೇಟೆಯಾಡುವುದು ಅಣ್ಣ ಎಂದು ತಮ್ಮ ಕೇಳುವಾಗ ಹೇಳುತ್ತಾರಂತೆ ಮಾದೇರಿ ಮಲೆಕಾಡು ಬೇಟೆಯಾಡೋಣವೇ ಅಣ್ಣ ಓ ಎಂಜಿರು ಎಲೆಮಲೆ ಓ ಬೇಟೆಮಾಡೋಣವೇ......
ಎಂದಾದರೋ ಮಗ ಕೇಳಿದ್ದೀಯೇ ಎಂಜಿರು ಎಲಿಮಲೆಯಲ್ಲಿ ಓ ಬೇಟೆಯಾಡೋಣ ಎಂದು ಓ
ಅಣ್ಣ ಓ ಹೇಳುತ್ತಾರೆ......ಓ......
ಅಷ್ಟು ಹೊತ್ತಿಗೆ ಇಂದು ಎಂಜಿರು ಎಲಿಮಲೆಯಲ್ಲಿ ಬೇಟೆಯಾಡುವಾಗ ಹಾರುವ ಹಕ್ಕಿ ಕೂಡ ನೋಡಲು ಸಿಗಲಿಲ್ಲವಂತೆ ಇಂದು, ಈ ಗುಟುರುಹಾಕುವ ಕುದುಂಬುಲು ಹಕ್ಕಿಯೂ ಸಿಗಲಿಲ್ಲವಂತೆ
ಬೋಲಬಾರಿ ಚತ್ತಿರಿ(ಕ್ಷತ್ರಿಯರು)ಗಳಿಗೆ......
ನಾರಾಯಣ...... ತಮ್ಮಾ ಕೇಳಿದ್ದೀಯೇ ಎಂಜಿರು ಎಲಿಮಲೆಯನ್ನು ಬಿಡುವ ಇಂದು ಮಾದೇರಿ ಮಲೆಕಾಡಲ್ಲಿ ಬೇಟೆಯಾಡುವ ಎಂದರು......ಓ......
ಇಂದಾದರೋ ಓ ಅಣ್ಣ ಹೇಳುತ್ತಾರೆ......
ಮಾದೇರಿ ಮಲೆಕಾಡಲ್ಲಿ ಬೇಟೆಯಾಡುವಾಗ ಇಂದು ಹಾರುವ ಹಕ್ಕಿ ಓ ಗುಟುರು ಹಾಕುವ ಕುದುಂಬುಲು ಸಿಗಲಿಲ್ಲ ಎಂದು ಹೇಳಿದರು ಇಂದು ಓ...... ಯಾರು ಅಣ್ಣನವರೇ ಎಲ್ಲಿದ್ದೀರಿ ನೀವು ಕೇಳಿದ್ದೀರೇ ಎಂದರು ಬೇಟೆಯ ಮಂದಿ......
ಎಂಜಿರು ಎಲಿಮಲೆ, ಮಾದೇರಿ ಮಲೆಕಾಡಲ್ಲಿ ಬೇಟೆಯಾಡಿದೆವು ನಾವು ನಮಗೆ ಓ ಒಂದು ಹಕ್ಕಿ, ಒಂದು ಓಡುವ ಪ್ರಾಣಿ ದೊರೆಯಲಿಲ್ಲ ಎಂದರು......
ಕಾಡಬೇಟೆ ಅರೆ (ಸುಳ್ಳು) ಓ ನೀರಬೇಟೆ ನಿನ (ಸತ್ಯ) ಎಂದರಂತೆ

ಎರಡು ಕಾಡನ್ನು ಬಿಟ್ಟರು ಇಂದು ನಾರಾಯಣ ಓ ಅಣ್ಣ ಕೇಳಿದ್ದೀರೇ ಓ......
ಬೋಳದ ಕಾಡಲ್ಲಿ ಓ ಬೇಟೆ ಮಾಡೋಣವೇ ಎಂದರು......
ಇಂದಾದರೋ ಬೋಳದ ಕಾಡಲ್ಲಿ ಬೇಟೆ ಮಾಡೋಣವೆಂದು ಹೇಳಿ ಬೋಳದ ಕಾಡಲ್ಲಿ ಬೇಟೆಯಾಡುವಾಗ ಹಾರುವಹಕ್ಕಿ ಗುಟುರುಹಾಕುವ ಕುದುಂಬುಲು ಓ ಕಾಣಿಸಲಿಲ್ಲ ಓ......
ಕುದುಂಬುಲು ಇಲ್ಲವೆಂದು ಹೇಳವಾಗ ಓ ಹೇಳುತ್ತಾರೆ......
ಬೆಳಗಿನಿಂದ ಸಾಯಂಕಾಲ ದಾಟಿ ಓ ಕತ್ತಲಾಗುವವರೆಗೂ ಇಂದು ಓ
ಹಾರುವ ಹಕ್ಕಿ ಓ ಗುಟುರು ಹಾಕುವ ಕುದುಂಬುಲು ಓ ಕಾಣಿಸಲಿಲ್ಲ ಎಂದರು......
ಸೋತು ಸುಣ್ಣವಾಗಿರುವ ಈ ಸಮಯದಲ್ಲಿ......
ಬೋಳಬಾರಿ ಚತ್ತಿರಿಗಳು......
ಇಂದಾದರೋ ಬೋಳದ ಕಾಡಲ್ಲಿ ಹೋಗುತ್ತಾ ಹೋಗುತ್ತಾ ಇಂದು......
ನಾರಾಯಣ ನಾರಾಯಣ ಸಿರಿಯೇ......ಓ ಸಿರಿ ಕೇಳಬೇಕು......
ಮಡಿವಾಳರ ಮಾಪುಕರಿಯ ದಾಟಿ ಕೋಟಿಪೂಂಜರ ಬೈಲು ಹಿಡಿದು ಓ ಬೋಳದ ಕಾಡಿನ ಬುಡದಲ್ಲಿ ಓ......
ಬಿಳಿಯ ಬುಗರಿ ಮರದಲ್ಲಿ ಇಂದು ಕುಮಾರನ ಕುಂದಣದ ತೊಟ್ಟಿಲು ಕಟ್ಟಿ ಓ......
ರಾತ್ರಿಯ ರಾಮಾಯಣ ಹಗಲಿನ ಭಾರತ ಓ ಓದುತ್ತಿರುವಾಗಾ ಓ......
ಕಿವಿಗೆ ಸಿಂಗಾರ ಓ ಕಣ್ಣಿಗೆ ರಂಗಿತವಾಗಿ
ಓ ಮಗುವನ್ನು ಲಾಲಿಸುತ್ತಾ ಓ ಸ್ವರ ಕೊಡುತ್ತಿರಲು ಸಿರಿ......
ಅಷ್ಟು ಹೊತ್ತಿಗೆ ಓ ಸಿರಿ ಕೊಡುವ ಸ್ವರ ಇಂದು ಬೋಳಬಾರಿ ಚತ್ತಿರಿಗಳ ಕಿವಿಗೆ ಬಿದ್ದು ಇಂದು ಬೋಳದ ಇಡೀ ಕಾಡೇ ಬೆಳಕಾದಂತಾಯಿತು......
ಮೂಡಣದಲ್ಲಿ ಸೂರ್ಯದೇವರ ಅಂದ ಓ ನೋಡಿದಂತಾಯಿತು ಅವರಿಗೆ......
ಇಂದಾದರೋ ಬೋಳಬಾರಿ ಚತ್ತಿರಿಗಳಿಗೆ ಕಿವಿಗೆ ಹೆಣ್ಣು ಸ್ವರ ಕೇಳುವಾಗ
ಹೇಳುತ್ತಾರಂತೆ ನಾರಾಯಣ ಓ ನಾರಾಯಣ ಮಂದಿಗಳೇ......ಓ......
ಹಾರುವ ಹಕ್ಕಿ ಸಿಗಲಿಲ್ಲ ನಮಗೆ ಗುಟುರುಹಾಕುವ ಕುದುಂಬುಲು ಸಿಗಲಿಲ್ಲ ನಮಗೆ ನಿಮ್ಮ ನಿಮ್ಮ ಮನೆಗೆ ಹೋಗಿರೆಂದು ಕೋವಿ ಹಿಡಿದ ಈಡುಗಾರರನ್ನು ಓ ಬಿಲ್ಲು ಹಿಡಿದ ಮುಗೆರರನ್ನು ಓ
ಕಾಜುಬಾಜು ಓ ನಾಯಿಗಳನ್ನು ಓ ನಿಮ್ಮ ನಿಮ್ಮ
ಮನೆಗೆ ಕೊಂಡುಹೋಗಿ ಎಂದು ಓ ಹೇಳುತ್ತಾರೆ......
ಬೋಳಬಾರೀ ಓ ಚತ್ತಿರಿಗಳು......
ಹೆಣ್ಣುಸ್ವರ ಕೇಳಿಸಿಕೊಂಡು ಅವರಂತೆ ಇಂದು ಅಣ್ಣ ತಮ್ಮ ನನಗೆ ತನಗೆಂದು ಓ ಎಲ್ಲಿ ಕೇಳಿಸುತ್ತದೆಂದು ಹೇಳುತ್ತಾ......
ಹೆಣ್ಣ ಸ್ವರ ಕೇಳಿಸುತ್ತದೆ ಅಣ್ಣಾ ಎಂದು ತಮ್ಮ ಹೇಳಲು

ನನಗೆ ಬೇಕು ತಮ್ಮಾ ಎಂದು ಅಣ್ಣ ಹೇಳುತ್ತಾರೆ......
ನನಗೆ ಬೇಕು ಅಣ್ಣಾ ಎಂದು ತಮ್ಮ ಹೇಳುತ್ತಾರಂತೆ, ಅಷ್ಟಾಗುವಾಗ......
ನನಗೆ ತನಗೆಂದು ಓಡೋಡುತ್ತಾ ಬರುತ್ತಾರೆ ಅವರು......
ದೂರದಲ್ಲಿ ಬರುವುದನ್ನು ಇಂದು ಸಿರಿ ನೋಡಿದಳಂತೆ ಸತ್ಯಮಹಾಲೋಕದ ಸಿರಿ
ದೂರದಲ್ಲಿ ಓಡೋಡುತ್ತಾ ಬರುವುದನ್ನು ನೋಡುವಾಗ ಇಂದು
ನನಗೆ ತನಗೆಂದು ಹೇಳುವಾಗ ಹೇಳಿದಳಂತೆ ಸಿರಿ
ಬಲದ ಕೈಯಲ್ಲಿ ಹಿಡಿದವರು ನನ್ನ ಅಣ್ಣ ಎಂದು ಎಡದ ಕೈಯಲ್ಲಿ ಹಿಡಿದವರು
ನನ್ನ ತಮ್ಮ ಎಂದು
ಹೇಳಿದರಂತೆ ಮಣ್ಣುಮುಟ್ಟಿ ಹೆಣ್ಣು ಶಾಪ ನೀಡಿದರಂತೆ......
ಅವರಿಗೊಂದು ಪಾಪ ನನಗೊಂದು ದೋಷವೆಂದಳು ಓ ಸಿರಿಯೇ......
ಓ ಸಿರಿಯೇ ತಾನೂ......
ನಾರಾಯಣ ಓ ಮಗ ತಂಗಿಯೆ......
ನೀನೇನು ಇಲ್ಲಿಗೆ ಬಂದು ಕಾಡಲ್ಲಿ ಕುಳಿತುಕೊಂಡಿದ್ದೀಯೆ......
ಬಿಳಿಯ ಬುಗರಿ ಮರಕ್ಕೆ ಓ ಪೇರಳೆ ಜಾತಿ ಮರಕ್ಕೆ ಕುಮಾರನ ಚಿನ್ನದ ತೊಟ್ಟಿಲೂ
ಏನು ಕಟ್ಟಿದೆ ಮಗ ಎಂದು ಓ ಕೇಳುತ್ತಾರೆ ಅಣ್ಣಂದಿರು......ಓ......
ಬೋಳಬಾರಿ ಚತ್ತಿರಿಗಳು......
ನಿನ್ನ ಸತ್ಯವನ್ನು ನಮ್ಮಲ್ಲಿ ಹೇಳು ಮಗಾ ನಮ್ಮ ಸತ್ಯವನ್ನು ನಿನ್ನಲ್ಲಿ ಹೇಳುತ್ತೇವೆ
ನಾವೆಂದು ಓ ಹೇಳುತ್ತಾರಂತೆ......
ನಾನು ನನ್ನ ಸತ್ಯವನ್ನು ಹೇಳುತ್ತೇನೆ ಅಣ್ಣಂದಿರೆ ಇಂದು ಕಿವಿಕೊಟ್ಟು ಕೇಳಿರಿ ಇಂದು
ಬಾಯಾರೆ ನುಡಿಯುತ್ತೇನೆ
ನಾನೆಂದು ಹೇಳುತ್ತಾಳೆ ಸಿರಿಯೇ......
ಇಂದಾದರೋ ಇಂದು ಸತ್ಯನಾಪುರದರಮನೆಯಲ್ಲಿ ಇಂದು ಆರ್ಯಬನ್ನಾರ ಬಿರ್ಮು
ಮಾಲವರಂತೆ ಇಂದು
ಅವರಿಗೆ ಸಂತಾನ ಇಲ್ಲದ ಆ ಕಾಲದಲ್ಲಿ
ದಿಕ್ಕಿಲ್ಲದೆ ದೆಸೆ ಇಲ್ಲದೆ ಓ ಕಾಡು ಕರೆಯುತ್ತ ಓ ಊರು ಅಳುತ್ತಿರುವಾಗ ಓ......
ಬಡಗಣ ಲಂಕೆಲೋಕನಾಡಲ್ಲಿ ಓ ದೇವರು ಬೆರ್ಮರು ಜಯದಲ್ಲಿ ಓ
ಗಂಧದ ಗುಳಿಗೆಯಲ್ಲಿ ಓ ಬಂಗಾರದ ಪಿಂಗಾಣಿಗೆ
ಬೆಳ್ಳಿಯ ದಂಟು ಓ ಬಂಗಾರದ ಎಸಳಿಗೆ
ಜನನಕ್ಕೆ ಬಂದವರಳು ಓ ಬಾಳಿದವಳು ಬಾಲಕ್ಕೆ ಸಿರಿ......
ಸತ್ಯನಾಪುರದರಮನೆಯ ಓ ಸತ್ಯಮಹಾಲೋಕದ ಸಿರಿ ಅಣ್ಣಂದಿರೆ ನಾನೂ......
ಅಲ್ಲಿಂದ ನನ್ನ ಅಜ್ಜನವರು ಓ ಬತ್ತಕೇರಿ ಬಸರೂರಿಗೆ ಓ ಬಸರೂರ ಕಾಂತಾಳ್ವನಿಗೆ

ಧರ್ಮಧಾರೆ ನನ್ನ ಅಜ್ಜನವರು ಓ ನೆರವೇರಿಸಿಕೊಟ್ಟರು ನನ್ನ ಅಣ್ಣಂದಿರೆ
ನನ್ನ ಅಣ್ಣಂದಿರೆ ಓ ಕೇಳಿರಿ......ಓ...... ನಾನು ಸತ್ಯವನ್ನು ನುಡಿಯುತ್ತೇನೆ ಅಣ್ಣಂದಿರೆ......
ಕಿವಿಕೊಟ್ಟು ನೀವು ಕೇಳಿರೀ......
ಬತ್ತಕೇರಿ ಬಸರೂರಿನಾ ಅರಮನೆಯಲ್ಲಿ ಅಣ್ಣಂದಿರೆ......
ಆರು ತಿಂಗಳು ಕಳೆದು ಓ ಏಳು ತಿಂಗಳು ಹಿಡಿಯುವಾಗ......
ಔತಣದೂಟ ಹಾಕಿ ಬಾಯಿಯ ಆಸೆ ಕಳೆಯಲು
ನನ್ನ ಅಜ್ಜನವರು ಹಾಗು ನನ್ನ ಗಂಡ
ಕಡೆರಿ ಕಾರ್ಕಳದ ತುದಿ ಪೇಟೆಗೆ ಅಣ್ಣಂದಿರೆ ಓ ಜವುಳಿ ಕೊಳ್ಳಲು ಹೋದರು......
ನನ್ನ ಅಜ್ಜನವರು ನನ್ನ ಗಂಡ ಓ ಬಸರೂರ ಕಾಂತಾಳ್ವರು......
ಪಟ್ಟೆಯಲ್ಲಿ ಮೇಲಾದ ಪಟ್ಟೆಸೀರೆ ಕೊಳ್ಳಬೇಕೆಂದರು ಓ......
ಅಂಗೈಯೊಳಗೆ ತುಂಬುವ, ಒಂದು ಮುಷ್ಟಿಯೊಳಗೆ ಹಿಡಿಯುವ
ಭೂಮಿಗೆ ಎರಗುವಂತಹ ಆಕಾಶಕ್ಕೆ ಹಾರುವಂತಹ
ಉಗುರಲ್ಲಿ ಎಳೆ ತೆಗೆಯುವಂತಹ ಪಟ್ಟೆ ತೆಗೆದರು......
ಕಣ್ಣೀರು ಒರಸುವಂತಹ, ಪಟ್ಟೆಯಲ್ಲಿ ಮೇಲಾದ ಪಟ್ಟೆ ತೆಗೆದರಂತೆ
ಚೆಂಡುಮಲ್ಲಿಗೆ ತಂದರು......
ಗಂಟುಕಟ್ಟಿಕೊಂಡು ದಾರಿಯಲ್ಲಿ ಬರುವಾಗ
ಅಜ್ಜನವರು ಒಂದು ದಾರಿ, ನನ್ನ ಗಂಡ ಒಂದು ದಾರಿ ಹಿಡಿದು ಬರುವಾಗ
ಅಣ್ಣಂದಿರೆ ಕಣ್ಣಸನ್ನೆ ಕೈಭಾಷೆಯಲ್ಲಿ
ಸೆರಗಿನ ತುದಿಯಲ್ಲಿ ಕರೆದಳು ಸೂಳೆಸಿದ್ದು......
ಕರೆದಳು ಅಣ್ಣಂದಿರೆ ಮೇಲುಪ್ಪರಿಗೆಯಲ್ಲಿ ಮೇಲಂತಸ್ತಿನಿಂದ
ಮಲಗುವ ಮಂಚದಲ್ಲಿ ಹೂವಿನ ಹಾಸಿನಲ್ಲಿ ಗಂಟು ಬಿಚ್ಚಿದಳು
ಅವಳ ಮಡಿಲಿಗೆ ತಲೆಯಿಟ್ಟು ಮಲಗಿದರು ನನ್ನ ಗಂಡ
ಕಣ್ಣಿಗೆ ನಿದ್ದೆ ಆವರಿಸುವ ಸಮಯದಲ್ಲಿ ಓ ಅಣ್ಣಂದಿರೆ......ಓ......
ಕಟ್ಟು ಬಿಚ್ಚಿದಳು ಸೀರೆ ಉಟ್ಟಳು ಮಲ್ಲಿಗೆ ಜಲ್ಲಿ ಹಾಕಿದಳು......
ನಾರಾಯಣ ಅಣ್ಣಂದಿರೆ ನಾನು ಚೆಂದವೋ ಓ ನಿಮ್ಮ ಹೆಂಡತಿ ಚಂದವೋ ಎಂದು
ಕೇಳಿದಳು ಸೂಳೆಸಿದ್ದು......
ಅವಳುಟ್ಟ ಕಡೆ ತುಂಡನ್ನು
ನಾನು ಉಡಲಾರೆನೆಂದು ಹೇಳಿ
ಸತ್ಯನಾಪುರದ ಅರಮನೆಗೆ ಬಂದು ಹೆರಿಗೆ ಆಗಿ ಅಣ್ಣಂದಿರೆ
ಕುಮಾರನ ಜನನವಾಗುವಾಗ ಅಜ್ಜನವರಿಗೆ ಮರಣ ಬಂದೊದಗಿತು......
ಅಜ್ಜನವರಿಗೆ ಮೂರನೆ ದಿನದಂದು ಬೂದಿಮುಚ್ಚಿ ಎಳನೀರು ಕೊಡಹಿ ಇಟ್ಟು
ಓಲೆಯಾಳನ್ನು ಕಳುಹಿಸಿದರು ನನಗೆ......

ಬತ್ತಕೇರಿ ಬಸರೂರ ಕಾಂತಾಳ್ವರು......
ಸೂಡದಣ್ಣ ಮಗ ಸಂಕರಾಳ್ವನನ್ನು ಎದುರು ಹಾಕಿದರು ಹಿಂದಿನಿಂದ ಅವರು ಕುಳಿತರು......
ಒಂದು ಬಾರಿ ಅಲ್ಲ, ಎರಡು ಬಾರಿಯಲ್ಲ, ನಾಲ್ಕು ಬಾರಿ
ಕೋಳಿಯ ಗೂಟದಿಂದ ಹಿಡಿದು ಕರುವಿನ ಹಗ್ಗದವರೆಗೆ ಉಪ್ಪಿನ ಗೆರಟೆಯಿಂದ ಸಿಂಬಿ ಪೊರಕೆಯವರೆಗೆ
ಹಟ್ಟಿಯ ಜಾನುವಾರು ಅಟ್ಟದ ಬೀಜದವರೆಗೆ ಓ ಪಾಲು
ಕೊಂಡುಹೋದ ಸೂಡದಣ್ಣನ ಮಗ ಸಂಕರಾಳ್ವನನ್ನು
ಹೊರಗಿನಿಂದ ಅವ ರಾಜ್ಯವಾಳಬೇಕಂತೆ
ಒಳಗೆ ನಾನಿರಬೇಕೆಂದು
ಆ ರೀತಿಯ ಉತ್ತರ ಕೂಟದ ಕಳದಲ್ಲಿ ನೀಡಿದರು ಅಣ್ಣಂದಿರೆ
ಅದು ಬೇಡವೆಂದು ನಾನು
ಸೂಡದಣ್ಣ ಮಗ ಸಂಕರಾಳ್ವನಿಗೆ
ಹೊರಗೆ ರಾಜ್ಯವಾಳುವುದು ಬೇಡ
ನಾನೇ ಒಳಗಿರುವುದು ಬೇಡವೆಂದು
ನನ್ನ ಸತ್ಯದಲ್ಲಿ ಸತ್ಯನಾಪುರದರಮನೆ ಸುಟ್ಟು
ಕರಿಕಲಾಗುವಂತೆ ಮಾಡಿ ಓ......
ಕಡು ಮಂಗಳವಾರದಂದು ನಡು ಮಧ್ಯಾಹ್ನದ ಸುಡುಬಿಸಿಲಿಗೆ
ಮಗುವನ್ನು ಹಿಡಿಸಿಕೊಂಡು ತೊಟ್ಟಿಲು ಹೊರಿಸಿಕೊಂಡು
ಬತ್ತಕೇರಿ ಬಸರೂರಿಗೆ ಬರ ಹೇಳಿ
ಆರ್ಯಬನ್ನಾಯ ಬಳಿ ಬದಲಾಯಿಸಿ ಪುತ್ರನ್ನಾಯ ಸೆರೆ ಬದಲಿಸಿ
ಬತ್ತ ಕಟ್ಟಿಸಿ ಬರ ಹೇಳಿಸಿ ಹೊರಟು ಬಂದವಳು ನಾನು ಅಣ್ಣಂದಿರೆ......
ಸತ್ಯ ಗೆಲ್ಲಬೇಕು ಅನ್ಯಾಯ ಮುಳುಗಬೇಕು ಎಂದು ಓ......
ಗೆದ್ದು ತಿಳಿದು ಬಂದವಳು ಅಣ್ಣಂದಿರೆ
ದೇಶಾಂತರ ಹೋಗುವವಳಾದರು ಸ್ವತಂತ್ರಳಾಗಬೇಕು
ನನ್ನ ಮಗುವಿಗೆ ಹರಕೆ ಸಲ್ಲಿಸಬೇಕು
ಉತ್ತರಕ್ಕೆ ಹೋಗಿ ಹರಕೆ ಸಲ್ಲಿಸಿ ಓ ಅಣ್ಣಂದಿರೆ
ಸೆಟ್ಟಿ ಬ್ರಾಹ್ಮಣನ ಅಂಗಳ ಗುಡಿಸಿಕೊಂಡು
ಹೊಟ್ಟೆ ತುಂಬಿಸಿಯೇನೆಂದು ತಿಳಿದು ನಾನು ಹೊರಟು ಬಂದೆ ಅಣ್ಣಂದಿರೆ......
ಬೋಳದ ಕಾಡು ಬಿಳಿಯ ಬೊಗರಿಯ ಮರ
ಪೇರಳೆ ಜಾತಿಗೆ ಕುಮಾರನ ಕುಂದಣದ ತೊಟ್ಟಿಲೂ
ನಾರಾಯಣ ಪದ ಹಾಡೀ

ಓ ರಾತ್ರಿಯ ರಾಮಾಯಣ ಹಗಲಿನ ಭಾರತ
ನಾನೇ ಓದಿದ್ದು ಅಣ್ಣಂದಿರೆ......
ನನ್ನ ಸತ್ಯ ಇಲ್ಲಿಗೆ ಮುಗಿಯಿತಣ್ಣಂದಿರೆ......
ಓ ಬಾಯಾರ ನುಡಿದೆನೆಂದು
ಹೇಳಿದರಪ್ಪಾ ಸಿರಿಯೇ ಅವರು......
ಓ ಸತ್ಯಮಹಾಲೋಕದ ಸಿರಿಯೇ......
ನಾರಾಯಣ ಮಗ ಓ ಸಿರಿಯೇ ಕೇಳಿದ್ದೀಯಾ......ಓ......
ನಮ್ಮ ಸತ್ಯ ಓ ನಾನು ಹೇಳುತ್ತೇನೆ ಮಗಾ
ಬೋಳದ ಕಾಡಿಗೆ ನಾವು ಬೇಟೆಗಾಗಿ ಬಂದವರು......
ನಾವು ಹೇಗೆ ಜನನಕ್ಕೆ ಬಂದವರೆಂದು ಓ
ನಾನು ಹೇಳುತ್ತೇನೆಂದು ಹೇಳಿದರು ಚತ್ತೇರಿಗಳು......
ಬೋಳಬಾರಿ ಚತ್ತೇರಿಗಳು......
ನಾರಾಯಣ ಮಗಾ......ಓ......
ನೆಲ್ಲಿಯ ಮರದಲ್ಲಿ ಓ ಹಕ್ಕಿಯ ರೆಕ್ಕೆಯಲ್ಲಿ
ಜೋಡು ನಳಿಗೆಯ ಓ ಕೋವಿ ಹಿಡಿದು ಓ
ಜನನಕ್ಕೆ ಮೊಟ್ಟೆ ಒಡೆದು ಬಂದ ಬೋಳಬಾರಿ ಚತ್ತೇರಿಗಳು ನಾವು......
ಕರಿಯ ಕಾಸಿಂಗ ಬಿಳಿಯ ದೇಸಿಂಗರಾಯರು......
ಬಾ ತಾಯೆ ಮಗಾ ಓ ತಂಗಿಯೇ......ಓ......
ನಮ್ಮ ಅರಮನೆಗೆ ಹೋಗುವ ನಾವು......ಓ......
ಉಣ್ಣುವಷ್ಟು ಅನ್ನ ಮಗಾ......ಓ ನಿನಗೆ......
ಮೇಲುಪ್ಪರಿಗೆಯಲ್ಲಿ ಏಳು ಉಪ್ಪರಿಗೆಯಲ್ಲಿ ಕುಳಿತುಕೊಳ್ಳಿಸಿ
ಎರಡು ಅಣ್ಣಂದಿರಿಗೆ ಒಬ್ಬಳು ತಂಗಿಯೆಂದು ಹೇಳಿಸಿಯೇನೆಂದು
ಹೇಳಿದರಪ್ಪಾ ಬೋಳಬಾರಿ ಚತ್ತೇರಿಗಳು......
ನಾರಾಯಣಾ ಓ ಅಣ್ಣಂದಿರೆ ಓ
ಬೇಟೆಗೆ ಹೋದ ಗಂಡುಸರು......
ಹೆಣ್ಣು ತಂದಿದ್ದಾರೆಂದು ನಾಳೆಗೆ ಹೆಸರು ಬಂದೀತು ಅಣ್ಣಂದಿರೆ
ಬರುವ ರೀತಿಯಲ್ಲೇ ಬಂದೆನು ನೀವು ಕರೆದುಕೊಂಡು ಹೋಗುವ ಕ್ರಮದಲ್ಲೇ
ಕರೆದುಕೊಂಡು ಹೋದರೆಂದು ಹೇಳುತ್ತಾಳಪ್ಪಾ ಸಿರಿ......
ನಾರಾಯಣ ಮಗ ಸಿರಿಯೇ......
ಕೊಂಡುಹೋಗುವ ರೀತಿಯಲ್ಲಿ ನಾವು ಕೊಂಡುಹೋದರೆ
ಬರುವ ರೀತಿಯಲ್ಲಿ ನೀನು ಬರುತ್ತೀಯೇ ಎಂದರು......

ನಾರಾಯಣ ಓ ನಾರಾಯಣ ಅಣ್ಣಂದಿರೆ
ಕೊಂಡುಹೋಗುವ ರೀತಿಯಲ್ಲಿ ನೀವು ಕೊಂಡುಹೋದರೆ ನಾನು ಬರುತ್ತೇನೆಂದಳು......
ಬೇಟೆಗೆ ಹೋದ ಓ ಚತ್ತೇರಿಗಳು
ಕಾಡುಕಟ್ಟಿದರು ಬೇಟೆ ಓಡಿಸಿದರಂತೆ
ಮೃಗಗಳು ದೊರೆಯಲಿಲ್ಲವೆಂದು ಹೆಣ್ಣನ್ನೆ ತಂದಿದ್ದಾರೆಂದು
ಊರಲ್ಲಿ ಸುದ್ದಿಯಾದೀತಲ್ಲವೇ ಅಣ್ಣಂದಿರೆಂದು ಹೇಳುತ್ತಾಳೆ ಸಿರಿ......
ನಾರಾಯಣ ಓ ನಾರಾಯಣ ಮಗ ಸಿರಿಯೇ ಓ......
ಇಲ್ಲಿಯೇ ಕುಳಿತುಕೋ ನಾವು ಬರುತ್ತೇವೆಂದರು......
ಇಂದಾದರೋ ಇಂದು ಬೇಟೆಯ ಮಂದಿಗಳು ಹೋಗಿದ್ದಾರಂತೆ ಬೋಳಬಾರಿ ಚತ್ತೇರಿಗಳು
ಬೋಳಬಾರಿ ಅರಮನೆಗೆ ಹೋಗಿಯಂತೆ ಇಂದು......
ಅಟ್ಟಕ್ಕೆ ಹೋದರು ಏಣಿ ಇಡಿಸಿದರು ಕಿರು ಅಟ್ಟದಿಂದ ದಂಡಿಗೆ
ಕೆಳಗಿಡಿದರಂತೆ ಇಂದು ಬೋಳಬಾರಿ ಚತ್ತೇರಿಗಳಂತೆ ಇಂದು ದಂಡಿಗೆ ಸಿಂಗಾರ ಮಾಡಿಸಿಯಂತೆ ಇಂದು......
ದಂಡಿಗೆ ಹೊರುವ ಬೋವಿಗಳನ್ನು ಕರೆಸಿಕೊಂಡಂತೆ ಇಂದು ಬೇಂಡು ಬಿಗಿಲು ಸರ್ವಬಿರುದಾಳಿಗಳೊಂದಿಗೆ ಬರಬೇಕೆಂದು ಓ ಹೇಳಿ ಕಳುಹಿಸಿದರಂತೆ......
ಇಂದು ಅವರು ಬೋಳದರಮನೆಗೆ ಹೋಗುವುದನ್ನು ನೋಡಿಯಂತೆ ಇಂದು
ಕುಮಾರನ ಕುಂದಣದ ತೊಟ್ಟಿಲಿಂದ ಮಗುವನ್ನೆತ್ತಿ ಕೈಯಲ್ಲಿ ಹಿಡಿದಳು ಸಿರಿ......
ಓ ಸಿರಿ ತಾನು ಹಿಡಿಯುವಾಗಂತೆ
ನಾರಾಯಣ ಮಗ ಕುಮಾರಾ ಓ......
ಹೊಟ್ಟೆತುಂಬ ಮೊಲೆಹಾಲು ಕುಡಿಯುಪ್ಪಾ......
ಹಾಲು ಕುಡಿ ಮಗಾ......
ನಿನ್ನ ಮಾವಂದಿರು ನನ್ನನ್ನು ಕರೆದುಕೊಂಡು ಹೋಗಲು ದಂಡಿಗೆ ತರುತ್ತಾರೆ ಮಗಾ...
ಬೋಳದವರ ಮನೆಗೆ ಹೋಗುವ ಮಗಾ......ಓ......
ಬೋಳದರಮನೆಯಲ್ಲಿ ನಿನಗೆ ಪಟ್ಟ ಕಟ್ಟಬೇಕು ಪಟ್ಟದುಂಗುರ ಇಡಬೇಕು ಮಗಾ......
ಬಾಯಿಂದ ಮೊಲೆ ತೆಗೆಯಿತು ಮಗು ಓ ನಾರಾಯಣ ಮಗು
ನಾರಾಯಣ ಓ ನಾರಾಯಣ ತಾಯಿಯವರೆ
ಬೋಳದರಮನೆಗೆ ಹೋಗುವುದು ನಾವು
ಬೋಳದರಮನೆಯಲ್ಲಿ ಪಟ್ಟವೆ ನನಗೆ
ಬೋಳದರಮನೆಯಲ್ಲಿ ಪಟ್ಟದುಂಗುರ ತೊಡಿಸುವುದೆ ಅಮ್ಮ ನನಗೆ
ಮಗನಿಗೆ ಪಟ್ಟ ಕಟ್ಟಿಸಬೇಕು

ಪಟ್ಟದುಂಗುರ ತೊಡಿಸಿ ರಾಜ್ಯವಾಳಿಸಬೇಕೆಂದಿದ್ದರೆ ತಾಯಿಯವರೆ
ಸತ್ಯನಾಪುರದರಮನೆಯಲ್ಲಿಯೇ ಪಟ್ಟಕಟ್ಟಿ ಪಟ್ಟದುಂಗುರ ತೊಡಿಸಬಹುದಿತ್ತು ಓ......
ಸತ್ಯನಾಪುರದರಮನೆಯಲ್ಲಿ ಅದು ಮಾಡಲು ಸಾಧ್ಯವಾಗದಿದ್ದರು ಕೂಡ ಓ......
ಬತ್ತಕೇರಿ ಬಸರೂರಲ್ಲಿ ಪಟ್ಟಕಟ್ಟಿಸಿ ಪಟ್ಟದುಂಗುರ ತೊಡಿಸಬಹುದಿತ್ತು ತಾಯಿಯವರೆ ನಿಮಗೆ......
ಒಬ್ಬ ತಂದೆಗೆ ಹುಟ್ಟಿ ಇನ್ನೊಬ್ಬ ತಂದೆಯ ಹೆಸರು
ನಾನು ಕರೆಯೆನು ಎಂದು ಹೇಳುತ್ತಾನೆ ಮಗ ಅವನು......
ನಾರಾಯಣ ಮಗಾ......
ಹಠ ಮಾಡಬೇಡ ಮಗ ಹಠ ಸಾಧಿಸಬೇಡಾ
ದಿಕ್ಕು ತಪ್ಪಿತು ಮಗಾ ದೆಸೆ ಅಳಿದುಹೋಯಿತು
ದೇಶಾಂತರ ಹೋಗುವುದಾದರು ಸ್ವತಂತ್ರ ಆಗಬೇಕು ನನಗೆಂದು......
ಬೋಳದರಮನೆಗೆ ಹೋಗುವ ಮಗ ಎಂದು ಓ ಸಿರಿ ಹೇಳುತ್ತಾರೆ......
ನಾರಾಯಣ ನಾರಾಯಣ ಓ ತಾಯಿಯವರೆ......
ನಿಮ್ಮ ಸತ್ಯ ನಿಮ್ಮ ಧರ್ಮದಲ್ಲಿ
ಬೋಳದ ಅರಮನೆಗೆ ನಾನು ಬರಲಾರೆ
ಕೋಳಿ ಹಕ್ಕಿ ಓಡಿಸಲಾರೆ ನಾನು
ಕಲಗಚ್ಚಿನ ಮರಿಗೆ ಎತ್ತಲಾರೆ ನಾನು ತಾಯಿಯವರೆ
ಒಬ್ಬ ಅಪ್ಪನಿಗೆ ಹುಟ್ಟಿ ಇನ್ನೊಬ್ಬ ಅಪ್ಪನ ಹೆಸರು ಕರೆಯಲಾರೆ ಅಮ್ಮಾ
ಒಕ್ಕೆತ್ತಿರಿ ವಂಶದ ಕುಲ ತುಳುನಾಡಿನ ಕತೆಯನ್ನು ನನ್ನಲ್ಲಿ ಹೇಳಬೇಡಿ ಅಮ್ಮಾ ಎಂದು ಹೇಳಿತು ಮಗು......
ನನ್ನನ್ನು ಮಾಯ ಮಾಡಿಬಿಡಿ ಎಂದಿತು......
ಅಷ್ಟು ಹೊತ್ತಿಗೆ ಇಂದು
ಮಡಿಲಲ್ಲಿಟ್ಟುಕೊಂಡರು ಸಿರಿ ಕಣ್ಣಲ್ಲಿ ಕಡುದುಃಖ ದುಃಖಿಸಿದರು
ಹೊಟ್ಟೆಯಲ್ಲಿ ಸಂಕಟಪಟ್ಟರು
ರಾವಿನ್ನ ಗೆಜ್ಜೆಕತ್ತಿ ತೆಗೆದು ಮೂರು ಗೆರೆ ಎಳೆದರು......
ನಾರಾಯಣ ನಾರಾಯಣ ಓ......ನಾರಾಯಣಾ......
ಇಂದಾದರೋ ರಾವಿನ್ನ ಗೆಜ್ಜೆಕತ್ತಿ ತೆಗೆದು ಮೂರು ಗೆರೆ ಎಳೆದರಂತೆ
ಎಳೆದಾಗುವಾಗ ನಾರಾಯಣ ಮಗ ಕುಮಾರಾ......ಓ......
ಬೋಳದ ಕಾಡಲ್ಲಿ ಮಾಯವಾದ ಮಗಾ......ಓ......
ಬೊಲ್ಯೊಟ್ಟು ಬೆಳ್ಳಿಮಾಡಕ್ಕೆ ಹೋಗಿ......
ಬಿಳಿಯ ಬುಗುರಿ ಮರದಲ್ಲಿ ಕಂಚಿನ ಕೋಳಿಯಾಗಿ

ರೆಕ್ಕೆ ಬಡಿದೇ ಕೂಗು ಮಗಾ......ಓ......
ನಾರಾಯಣ......ನಾರಾಯಣಾ......
ನಾರಾಯಣಾ......ನಾರಾಯಣಾ......
ಒಂದು ವರ್ಷದ ಒಂದು ದಿನದಂದು
ಅಮ್ಮಾ ಎಂದು ಕರೆಯಲು ಮಗಾ......ಓ......
ಧಾರೆ ನೀರಲ್ಲಿ ಒಂದು ಚಾಮುಂಡೀ (?) ಓ ಎಳೆ ಮಗಾ......
ಒಂದು ವರ್ಷದ ಒಂದು ದಿನ ದಂಡಿಗೆ......ಓ......
ಅಮ್ಮಾ ಎಂದು ನೀನು ಕರೆ ಮಗಾ......ಓ......
ಮಗನೇ ಎಂದು ನಾನು ಪ್ರೀತಿಸುವೆ......
ಮುಖದ ಮುತ್ತಿನಂತಹ ಬೆವರನ್ನೊರೆಸಿದರು ಓ......
ಬೆನ್ನಿನ ಯಮಧೂಳು ತೆಗೆದರೋ......ಓ......
ಯಮಧೂಳು ಒರೆಸಲು ಮಗ ನಿನಗೆ
ಒಬ್ಬಳು ತಂಗಿಯನ್ನು ಹೆತ್ತು ಓ ಬರುವೆನು ಮಗಾ......
ಒಬ್ಬ ತಾಯಿಗೆ ಒಂದು ಮಗು ಅಲ್ಲವಂತೆ
ಒಂದು ಬಾಳೆಗೆ ಒಂದು ಕಂದು ಅಲ್ಲವಂತೆ ಓ......
ನಾರಾಯಣ ಓ ನಾರಾಯಣವಂತೆ
ನಾರಾಯಣ ಓ ನಾರಾಯಣ ದಾರು......ಓ......
ದಂಡಿಗೆ ಓ ಇಮದು ಹಿಡಿದುಕೊಂಡು ನನ್ನ ಅಣ್ಣಂದಿರು ಬರುತ್ತಾರೆ ಮಗ ದಾರು
ಓ ನಾವು ಹೋಗುವಾ......
ಎಂದು ಓ ಸಿರಿ ಹೇಳುತ್ತಾರಂತೆ......
ಅಷ್ಟು ಹೊತ್ತಿಗೆ ಕುಳಿತಲ್ಲಿಂದ ದಡಕ್ಕನೆ ಎದ್ದಳಂತೆ ದಿಢ್ಕನೆ ನಿಂತಳು
ನಾರಾಯಣ ಅಕ್ಕನವರೆ ಓ ಅಕ್ಕನವರೆ ನಿಮಗೆ......ಓ......
ಒಂದಲ್ಲ ಎರಡು ಸಲ, ಮೂರು ಬಾರಿ ಶರಣು ಅಕ್ಕನವರೆ ಓ......
ಬೋಳದರಮನೆಗೆ ನಾನು ಬರುವುದಲ್ಲಕ ಅಕ್ಕನವರೆ......ಓ......
ನೀವು ಹೋಗಿ ಅಕ್ಕನವರೆ ಓ ಕೇಳಿದ್ದೀರಿ......
ಅಲ್ಲಿನ ಹೆಂಗುಸರ ಕಡೆ ಬಟ್ಟೆ (ಒಳ ಉಡುಪು) ಓ ನಾನು ಒಗೆಯೇನು ಅಕ್ಕನವರೆ ಓ.....
ಅಂದಿಗೆ ಓ ನಮ್ಮ ಅಜ್ಜನವರ ಓ ವರ ಕೊಟ್ಟಿದ್ದಾರೆ......ಓ......
ನಾರಾಯಣ ಓ ಅಕ್ಕನವರೇ......
ಮತ್ತೇನು ಮಾಡುತ್ತಿ ಓ ದಾರು ಎಂದು ಸಿರಿ ಕೇಳಲು ಹೇಳುತ್ತಾಳಂತೆ......
ನಾರಾಯಣ ಅಕ್ಕನವರೇ ಇಂದು ಕುಮಾರನನ್ನು ಮಾಯ ಮಾಡಿದಂತೆ ನನ್ನನು ಮಾಯ ಮಾಡಿಬಿಡಿ ಅಕ್ಕನವರೇ ನಿಮ್ಮ ಸತ್ಯ ಮತ್ತು ಧರ್ಮದಲ್ಲಿ ಓ ನಾರಾಯಣ ಅಕ್ಕನವರೇ......
ಅಷ್ಟು ಹೊತ್ತಿಗಂತೆ, ಛಲ ಹಿಡಿಯಬೇಡ ದಾರು ಓ ಸಾದಾಗ (ಹಠ ಸಾಧಿಸಲು?)

ಹೋಗಬೇಡಾ......ಓ......
ಗರ್ಭದಲ್ಲಿ ಓ ಜನನಕ್ಕೆ ಬಂದವನನ್ನು
ಮಾಯದ ಓ ಮಗಳಿಗೆ ಜೋಗದ ಗರ್ಭದಲ್ಲಿ ಓ ಜೋಗದ ಕುಮಾರ ಜನಿಸಿದ......
ಭೂಮಿಗೆ ಜನನವಾಗಿ ಬಂದವನನ್ನು ಮಾಯ ಮಾಡಿದೆ ದಾರು......
ಇಂದು ನೀನೇಕೆ ಚಂಡಿ ಹಿಡಿಯುತ್ತೀ, ಹಠ ಸಾಧನೆ ಮಾಡುತ್ತಿ ದಾರು ಎಂದು ಓ ಕಣ್ಣೀರು ಒರಸಿ ಹೇಳುತ್ತಾರೆ ಸಿರಿ......
ನಾರಾಯಣ ಅಕ್ಕನವರೇ ಹತ್ತು ಬೆರಳು ಜೋಡಿಸಿ ಶರಣು ಹಾಕುತ್ತೇನೆ ಅಕ್ಕನವರೇ ಓ...
ಕುಮಾರನನ್ನು ಮಾಯ ಮಾಡಿದಂತೆ ನನ್ನನ್ನು ಮಾಯ ಮಾಡಿಬಿಡಿ ಅಕ್ಕನವರೇ ಮಾಯ ಮಾಡಿಬಿಡಿ ನಿಮ್ಮ ಸತ್ಯ ಧರ್ಮದಿಂದ ಅಕ್ಕನವರೇ
ಅಷ್ಟು ಹೇಳುವುದನ್ನು ಕೇಳಿದರಂತೆ ಇಂದು ಓ ಅಜ್ಜನವರ ಕಾಲದಿಂದ ಇದ್ದ ದಾರು ವನ್ನು ಓ
ನನ್ನ ದಿನದಲ್ಲಿ ಓ ಬೋಳದರಮನೆಯಲ್ಲಿ ಓ......
ಬಿಳಿಯ ಬುಗುರಿಯ ಮರದಲ್ಲಿ ಓ ಕುಮಾರನ ಕುಂದಣದ ತೊಟ್ಟಿಲು ಕಟ್ಟಿ
ತೊಟ್ಟಿಲಿನಿಂದ ಮಗುವನ್ನು ತೆಗೆದು ಕುಮಾರನನ್ನು ಮಾಯ ಮಾಡಿದೆ ಇಂದು ದಾರುವನ್ನು ಮಾಯಾ ಓ ಮಾಡುತ್ತೇನೆಂದರು......
ನಾರಾಯಣ ದಾರು ಇಂದು ಬೋಳದ ಕಾಡಲ್ಲಿ ಮಾಯವಾದ ದಾರು ಓ......
ನಿತ್ಯ ಜಾತಿಗೆ ಓ ಮಕ್ಕಳು ಮರಿಮಕ್ಕಳಿಗೆ......
ತೊಟ್ಟಿಲ ಮಗುವಿಗೆ ಓ ಕಟ್ಟಿಹಾಕಿರುವ ಕರುವಿಗೆ ಕಾವಲು ಹಾಕು(ಇಡು)ತ್ತಾ ಓ....
ತಿಂಗಳಿಗೊಂದು ಓ ಗೆರಸೆಯಲ್ಲಿ ಅಗೆಲು (ಆಹಾರ) ತೆಗೆದುಕೊಳ್ಳುತ್ತಾ ಓ
ಗುಡ್ಡೆಯ ಅಜ್ಜಿಯಾಗಿ ಓ ಬಾ ದಾರು ಎಂದರು......
ಮಣ್ಣು ಮುಟ್ಟಿದರು ಓ ಹೆಣ್ಣ ಶಾಪ ಓ ನೀಡಿದರು ಸಿರಿ......ಓ......
ಅಷ್ಟು ಹೊತ್ತಿಗಂತೆ ಬೋಳದ ಕಾಡಲ್ಲಿ ಇಂದು ಓ ಬೋಳ ಬಾರಿ ಚತ್ತೇರಿಗಳು....
ದಂಡಿಗೆ ಹೊರಿಸಿಕೊಂಡು ಓ ಬೇಂಡು ಬಿಗಿಲಲ್ಲಿ......ಓ......
ಸತ್ಯದಂಡಿಗೆ ಸರ್ವ ಬಿರುದಾವಳಿ ಸಹಸ್ರ ಮೇಳಗಳೊಂದಿಗೆ ಬರುವಾಗ......
ಬೋಳದ ಕಾಡಲ್ಲಿ ಓ ಬಿಳಿಯ ಬುಗರಿಯ ಬುಡದಲ್ಲಿ ಓ ಸಿರಿ ಒಬ್ಬಳೆ ಓ ಇದ್ದಾಳೆ ಮಗಳು......
ನಾರಾಯಣ ಓ ನಾರಾಯಣ ಸಿರಿ......ಓ......
ಮಗು ಎಲ್ಲಿಗೆ ಹೋಯಿತು......ಓ......
ದಾರು ಎಲ್ಲಿಗೆ ಹೋದಳು......
ನಮ್ಮ ಅಳಿಯ ಎಲ್ಲಿದ್ದಾನೆಂದು ಹೇಳಿ ಓ ಪ್ರೀತಿಯಿಂದ ಕೈ ನೀಡುವಾಗ ಕುಮಾರ ಓ ಇಲ್ಲ ಎಂದರು......

ನಾರಾಯಣ ಅಣ್ಣಂದಿರೆ ಇಂದು ಕುಮಾರನನ್ನು ಬೋಳದ ಕಾಡಿನಿಂದ......
ಬೊಲ್ಯೊಟ್ಟುವಿಗೆ ಹೋಗು ಬಿಳಿಯ ಬುಗುರಿಯ ಮರದಲ್ಲಿ ಓ ಕಂಚಿನ ಕೋಳಿಯಾಗಿ
ರೆಕ್ಕೆಗಳನ್ನು ಬಡಿದು ಕೂಗೆಂದು ನಾನು ವರ ಕೊಟ್ಟೆನು ಇಂದು......
ಒಂದು ವರ್ಷದ ಒಂದು ದಿನದಂದು ಅಮ್ಮಾ ಎಂದು ಕರೆ,
ನಾನು ಮಗಾ ಎಂದು ಪ್ರೀತಿಸುವೆ ಎಂದು ಉತ್ತರ ಕೊಟ್ಟೆ ಅಣ್ಣಂದಿರೇ......ಓ......
ದಾರುವನ್ನು ಮಾಯ ಮಾಡಿದೆ ನಾನು......
ಅಷ್ಟು ಹೇಳುವುದನ್ನು ಕೇಳಿದರಂತೆ ಬೋಳಬಾರಿ ಚತ್ತೇರಿಗಳು ಕರಿಯ ಕಾಸಿಂಗ ರಾಯರು
ಬಿಳಿಯ ದೇಸಿಂಗರಾಯರು ಓ......ಎರಡು ಜನ ಜೊತೆಯಾಗೀ
ತಂಗಿಯನ್ನೆತ್ತಿದರು ಓ ದಂಡಿಗೆಯ ಮೇಲೆ ಕುಳ್ಳಿರಿಸಿದರು......
ಒಂದೇ ದಂಡಿಗೆಯಲ್ಲಿ ಅಣ್ಣ, ತಮ್ಮ ಹಾಗೂ ತಂಗಿ ಹೋಗುತ್ತಾರಂತೆ......
ಜೋಳದರಮನೆಗೆ ಕರೆದುಕೊಂಡು ಹೋದರಂತೆ ಚಿಕ್ಕಚಾವಡಿ ಸಿದ್ರಮಂಪಟದಲ್ಲಿ
ದಂಡಿಗೆಯಿಂದೆತ್ತಿ ಮಂಚದ ಮೇಲೆ ಕುಳಿತುಕೊಳ್ಳಿಸಿದರಂತೆ ಓ ಮೇಲುಪ್ಪರಿಗೆಗೆ
ಓ ಮೇಲಂತಸ್ತಿನ ಏಳುಪ್ಪರಿಗೆಗೆ ಓ ಪಟ್ಟಸೂಡ (ಮಲಗುವ?) ಮಂಚದಲ್ಲಿ
ಓ ತಂಗಿ ಸಿರಿಯನ್ನು ಕುಳಿತುಕೊಳ್ಳಿಸಿದರು......
ನಾರಾಯಣಾ ಓ ನಾರಾಯಣಾ ಓ......
ಕೊಟ್ರಾಡಿಯ ಅರಮನೆಯಲ್ಲಿ ಓ ಕೊಡ್ಸರಾಳ್ವರು......ಓ......
ಇದ್ದಾರಂತೆ ಓ ಅವರು......
ಮಕ್ಕಳಾಟಿಕೆಯಲ್ಲಿ ಓ ಹುಚ್ಚುಬುದ್ಧಿಯಲ್ಲಿ ಓ ಹುಡುಗ ಬುದ್ಧಿಯಲ್ಲಿ ಓ ಇಂದು
ಅರಮನೆ ಕಟ್ಟಿಸುತ್ತಾ ಓ ಒಬ್ಬರೇ ಇದ್ದಾರಂತೆ......
ಬಡವನ ತೋರಿಕೆಯಲ್ಲೇ ಬಡ ಸಂಸಾರವಾಗೀ ಓ......
ದಿಕ್ಕು ಮುಖವಿಲ್ಲದೆ ಓ ಇದ್ದಾರಂತೆ......
ಹೀಗೆ ಊಟ ಉಪಚಾರ ಮಾಡುತ್ತಾ ಒಬ್ಬರೇ ಇರುವ ಸಮಯದಲ್ಲಿ ಇಂದು......
ಒಂದಾನೊಂದು ದಿನದಲ್ಲಿ ಓ ನಾಲ್ಕು ದಿಕ್ಕಿನ ಗ್ರಾಮಸ್ಥರು ಓ ಬಂದರಂತೆ......
ಕೊಟ್ಟರಾಡಿಯ ಅರಮನೆಯಲ್ಲಿ ಇಂದು ಪಟ್ಟದ ಮಂಚದಲ್ಲಿ ಓ ಕುಳಿತುಕೊಂಡು
ಓ ನಾಲ್ಕು ಜನ ನೆಂಟರು ಹಾಗು ಕೊಟ್ಟರಾಡಿಯ ಕೊಡ್ಸರಾಳ್ವರು ಸುಖದುಃಖ ಮಾತನಾಡುವಾಗ......
ಏನು ಮಾರಾಯರೆ ಕೊಟ್ಟರಾಡಿಯ ಕೊಡ್ಸರಾಳ್ವರೆ ಇಂದು ನೀವು......
ಸಣ್ಣ ಪ್ರಾಯದಲ್ಲೇ ದೊಡ್ಡದೊಂದು ಅರಮನೆ ಕಟ್ಟಿಸಿ......
ಓ ಮಗುವಿನಂತೆ ಓ ಏನು ಕುಳಿತಿದ್ದೀರಿ......
ಯೋಗ್ಯವಾದ ಬೀಡಿಗೆ ಭಾಗ್ಯದ ಸಿರಿ ಆಗಬೇಕೊ......ಓ......
ಕತ್ತಲೆಯ ಕೋಣೆಗೆ ನಂದಾದೀಪ ಆಗಬೇಕೆಂದು......ಓ......

ನಾಲ್ಕು ದಿಕ್ಕಿನ ಗ್ರಾಮಸ್ಥರು ಹೇಳುತ್ತಾರೆ......
ಅಷ್ಟು ಹೊತ್ತಿಗೆ ಅವರು ಕೇಳುವಾಗ ಹೇಳುತ್ತಾನೆ ನಾಲ್ಕು ದಿಕ್ಕಿನ ಗ್ರಾಮಸ್ಥರಲ್ಲಿ ಇಂದು ಕೊಟ್ಟರಾಡಿಯ ಕೊಡ್ಸರಾಳ್ವ......ಓ......
ಏನು ಕೊಟ್ಟರಾಡಿಯ ಕೊಡ್ಸರಾಳ್ವ ನಾವು ಹೇಳಿದೆವೆಂದು
ನನಗೆ ಹಾಗಾದರೆ ಹೆಣ್ಣು ನೋಡುತ್ತೀರಾ ಹೆಣ್ಣು ಸಂಬಂಧ ಹುಡುಕುತ್ತೀರಾ
ಎಂದನು ಕೊಟ್ಟರಾಡಿಯ ಕೊಡ್ಸರಾಳ್ವ ಓ......
ಹೆಣ್ಣು ನೋಡಲು, ಹೆಣ್ಣು ಕೇಳಲು ಹೋಗಲು ನಾವು ಸರಿಯಾದ ಉಡುಗೆ ತರಲಿಲ್ಲ ಎಂದರು......
ನೋಡಿದ್ದರಲ್ಲಿ ಎಲ್ಲಾದರು ಅಥವಾ ಕೇಳಿದ್ದರ ಕೇಳಿಕೆಯಲ್ಲಿ ಯಾವುದಾದರು ಇದೆಯೇ ಎಂದರು......
ಇಂದಾದರೋ ಇಂದು ಕೇಳಿದ್ದೀರೆ ನೀವು ನಾಲ್ಕು ದಿಕ್ಕಿನ ಗ್ರಾಮಸ್ಥರೇ
ನೋಡಿದ್ದರಲ್ಲಿ ಅಥವಾ ಕೇಳಿದ್ದರಲ್ಲಿ ಓ......
ಅಂಗರಾಜೆ ಬರ್ಕೆ, ಉಜೆಮಾರಗುತ್ತು ಓ ಕಡೆಂಗಾಡಿ ಗುತ್ತಿನಲ್ಲಿ ಓ
ಬಾಮುಕೆಲ್ಲೆಯವರ ಓ ತಂಗಿ ಇದ್ದಾಳೆ ಸಾಮು ಆಳ್ವೆದಿ
ಸತ್ಯದ ಮಕ್ಕಳು ಓ ಅಣ್ಣ ತಂಗಿ......
ಅದಾದರೆ ನಮ್ಮ ಮಾವನ ಮಗಳು ಸಾಮು ಆಳ್ವೆದಿ ಓ ಇದ್ದಾಳೆಂದು ಓ ಹೇಳುತ್ತಾರೆ ಆಳ್ವರು......
ಓ ಕೊಟ್ಟರಾಡಿ ಕೊಡ್ಸರಾಳ್ವರು......
ಇಂದಾದರೋ ಬಂದ ನೆಂಟರು ಹಿಂತಿರುಗಿ ಹೋಗುವ ಮೊದಲು ಹೆಣ್ಣು ನೋಡಲು ಹೋಗಬೇಕೆಂದು ಆಳ್ವರು ಹೇಳಲು ಇಂದು ನಾವು ಉಡುಗೆ ತೊಡುಗೆ ತರಲಿಲ್ಲವೆಂದು ಹೇಳಲು ಅವರು
ಹೇಳುತ್ತಾರಂತೆ ಇಂದು......
ಒಬ್ಬನ ಉಡುಗೆತೊಡುಗೆಯನ್ನು ಹಂಚಿಕೊಂಡು ಓ ಹೋಗಿ ಎಂದರು......
ಇಂದಾದರೋ ತೆಂಕಣ ಮನೆಯ ಸಿರಿ ಪದೊಲಿಗೆ ಹೋದರಂತೆ ಕೊಟ್ಟರಾಡಿಯ ಕೊಡ್ಸರಾಳ್ವರು
ಇಂದು ಕಲ್ಲಕಲೆಂಬಿ (ಪೆಟ್ಟಿಗೆ)ಯ ಬಾಯಿ ಬೀಗಕ್ಕೆ ಕಂಚಿನ ಬೀಗಕ್ಕೆ ಮೆಂಚುವ ಕಿಲಿಕೈ ಹಾಕಿ
ಬಾಯಿಬೀಗ ತೆಗೆದರಂತೆ ಹೂವಿನ ಎಲೆವಸ್ತ್ರದ ಗಂಟು ತಂದರು ಕೊಡ್ಸರಾಳ್ವರು......
ಗಂಟು ಬಿಡಿಸಿ ನಾಲ್ಕು ಜನ ನೆಂಟರಿಗೆ ಇಂದು ಓ ಗಂಡಸರ ಆಭರಣವೆಂದು ಕೊಟ್ಟರು......
ಅಂಗೈ ಬಳೆ ಮುಂಗೈ ಸರಪಳಿ ಗಾಳಿಪೇಂಟ ಓ ಬೆಳ್ಳಿ ಕಟ್ಟಿನ ಚೂರಿ ಓ ಪರೆಂಗಿ ಕೊಡೆ ಒಬ್ಬನ ಆಭರಣವನ್ನು ನಾಲ್ಕು ಜನ ಹಂಚಿಕೊಂಡು ತೊಟ್ಟರು ಇಂದು ಓ ಕೊಟ್ಟರಾಡಿಯ ಅರಮನೆ ಇಳಿದರು......

ಕೊಟ್ಟರಾಡಿಯ ಬೈಲು ದಾಟಿದರಂತೆ ಇಂದು ಕೊಟ್ಟರಾಡಿಯ ಬೈಲು ಬಿಟ್ಟು ಇಂದು ಹೋಗುತ್ತ ಹೋಗುತ್ತ......
ಅಂಗರಾಜೆ ಉಜೆಮಾರಗುತ್ತಾ ಓ ಕಡೆಂಗಾಡಿ ಬರ್ಕೆಗೆ ಓ ಕಂಬಳದ ಕಟ್ಟಹುಣಿಯಲ್ಲೆ ಹೋಗುತ್ತಾರೆ......
ಅಷ್ಟು ಹೊತ್ತಿಗೆ ಇಂದು ಓ ಬಾಮುಕೆಲ್ಲರು ಹೇಳುತ್ತಾರೆ......
ಯಾರು ಮಗ ತಂಗಿ ಕೇಳಿದ್ದೀಯೇ ನೀನೇ ಓ ಕೇಳು ತಂಗಿಯೇ ಓ......
ನನ್ನ ತಲೆಯಲ್ಲಿ ಹೇನಿನ ಮೊಟ್ಟೆ ಓ ಹೆಚ್ಚಾಗಿದೆ ಮಗಾ......
ಎರಡು ಹೇನಿನ ಮೊಟ್ಟೆ (ಸೀರುಹೇನು) ಓ ತೆಗೆದುಬಿಡು ಮಗ ಎಂದು ಹೇಳುತ್ತಾರೆ......
ಅಷ್ಟು ಹೊತ್ತಿಗೆ ಹೋಗುತ್ತಾಳಂತೆ ರಾವಿನ್ನ ಗೆಜ್ಜೆಕತ್ತೀ ತಂದಳಂತೆ ಬಂಗಾರದ ಬಾಚಣಿಗೆ ಬೆಳ್ಳಿಯ ಸೀರಣಿಗೆ ಹಿಡಿದುಕೊಂಡು ಓ
ಬೆಳ್ಳಿಕಟ್ಟಿದ ಚೂರಿ ಹಿಡಿದಳಂತೆ ಓ ಮಗಳು
ಅಣ್ಣನ ತಲೆಯನ್ನೆ ಓ ಎತ್ತಿ ಮಡಿಲಲ್ಲಿಟ್ಟುಕೊಂಡು
ಎಡದಿಂದ ಹುಡುಕುತ್ತಾ ಹೇನು ಹೊಸಕಿದಳು ಮಗಳು ಬಲದಿಂದಲೂ ಹೇನು ಹೊಸಕಿ ಹಾಕುತ್ತಾ ಇದ್ದಳು ಓ......
ಬಗ್ಗಿ ಹೇಣು ಕುಟ್ಟು (ಹೊಸಕು)ವಾಗ ಕತ್ತು ನೋಯ್ದಿತು ಬೆನ್ನು ಮುರಿದಂತಾಯಿತವಳಿಗೆ...
ಬೆನ್ನು ಮುರಿಯಿತು ಓ ಕತ್ತು ನೋಯಿತೆಂದು ಹೇಳಿ ಓ ತಲೆ ಎತ್ತಿ ನೋಡಿದಳು ಸಾಮೂ......
ಓ ಸಾಮು ಆಳ್ವೆದಿ......
ನಾರಾಯಣ ಅಣ್ಣನವರೇ ಕೇಳಿದ್ದೀರಾ ನಮ್ಮ ಓ ಅಂಗರಾಜೆ ಉಜೆಮಾರಗುತ್ತು ಓ...
ಕಡೆಂಗಾಡಿ ಬರ್ಕೆಯ ಹೂಹಾಕುವ ಹೊಸಕ್ಕಿಯ ಕಂಬಳಗದ್ದೆಯ ಬದುವಿನ ಮೂಲಕ ನಾಲ್ಕು ಜನ ನೆಂಟರು ಬರುವ ಅಂದ ಓ ನೋಡಿ ಅಣ್ಣನವರೇ ಎಂದಳು......
ನಾರಾಯಣ ಮಗ ಸಾಮೂ ನಿನಗೆ ಇಷ್ಟು ಸಣ್ಣ ಪ್ರಾಯದಲ್ಲಿ ದಾರಿಗೆ ಕಣ್ಣಾಯಿತೆ ಮಗಾ ಓ ಬೀದಿಗೆ ದೃಷ್ಟಿ ಓ ಆಯಿತೆ ನಿನಗೆಂದರು......
ಅಷ್ಟು ಹೊತ್ತಿಗೆ ಬಡತಕ್ಕನೆದ್ದರು ದಿಡ್ಕನೆ ನಿಂತರು ಓ ಒಳಗೆ ಹೋಗು ಮಗ ಒಳಗೆ ಕುಳಿತುಕೋ ಎಂದರು......
ಹಾಕಿರುವ ಏತದಲ್ಲಿಗೆ ತೊಡಿಸಿರುವ ಬಾವಿಯ ಸಮೀಪಕ್ಕೆ ಹೋದರಂತೆ
ಒಂದು ಮರಿಗೆ ನೀರನ್ನು ತೆಗೆದರಂತೆ ಕವುಚಿ ಹಾಕಿರುವ ಕಲ್ಲುಮರಿಗೆಯನ್ನು ಸರಿಯಾಗಿ ಇಟ್ಟರಂತೆ
ಇಂದು ಒಂದು ಮರಿಗೆ ನೀರು ಎಳೆದು ಹಾಕಿದರಂತೆ ಕಂಚಿನ ಕೈರಂಕ ಹಾಕಿದರಂತೆ......
ಒಳಸೂತ್ರಕ್ಕೆ ಓ ಬಂದರು......
ಬಂದ ನೆಂಟರು ಹಾಕಿರುವ ಏತ ತೋಡಿಸಿರುವ ಬಾವಿಯ ಸಮೀಪ ಬಂದರಂತೆ ಕಲ್ಲಮರಿಗೆಗೆ ಕಂಚಿನ್ನ ಕೈರಂಕ ಹಾಕಿ ಕೈಕಾಲಿನ ಧೂಳು ತೊಳೆದರಂತೆ......
ಓ ಎದೆಯ ದಟ್ಟವಾದ ಧೂಳು ಓ ತೊಳೆದರು......

ಆರೂವರೆ ಅಂಗಣ ಮೂರೂವರೆ ಅಂಗಳ ದೊಡ್ಡ ಅಂಗಳಕ್ಕೆ ಬಂದರಂತೆ
ಮೆಟ್ಟಿಲಲ್ಲಿ ಚಪ್ಪಲಿ ತೆಗೆದರಂತೆ ಪಾಗಾರದಲ್ಲಿ ಕೊಡೆ ಇರಿಸಿದರಂತೆ
ಚಿಕ್ಕಚಾವಡಿ ಓ ಸಿದ್ರಮಂಟಪದಲ್ಲಿ ತಾಳೆಗರಿಯ ಚಾಪೆಯಲ್ಲಿ ಓ
ಬಿತ್ತೊತ್ತಿ ಕುಳಿತುಕೊಂಡರಂತೆ ನೆಂಟರು......
ನಾಲ್ಕು ಜನ ನೆಂಟರು ಕುಳಿತುಕೊಳ್ಳುವುದನ್ನು ನೋಡಿದರಂತೆ ನಾಲ್ಕು ಪಿಂಗಾಣಿಯಲ್ಲಿ ಹಾಲು ತಂದರಂತೆ ಓ......
ತಟ್ಟೆಯಲ್ಲಿ ಎಲೆ ಅಡಿಕೆ ತಂದು ನೆಂಟರಿಗೆ ಕೊಟ್ಟರು ಕೆಲ್ಲರು ಓ ಅಣ್ಣ ಬಾಮುಕೆಲ್ಲರು......
ಇಂದಾದರೋ ಹಾಲು ಕುಡಿದರಂತೆ ಬಾಯಾರಿಕೆಗೆ ಬೇಸರಕ್ಕೆ ಎಲೆ ಅಡಿಕೆ ಮೆದ್ದರಂತೆ ಇಂದು......
ತಿಂದು ಇನ್ನು ಓ ಊಟೋಪಚಾರವಾಗಿ ಓ ಪಕ್ಕದ ಹಳೆ ಸುದ್ದೀ
ನಿತ್ಯದ ಒಳ ಸುದ್ದೀ ಓ ಮಾತನಾಡುವಾಗ......
ಯಾರು ಓ ನೆಂಟರೇ ಓ......
ಎಲ್ಲಿಂದ ಬಂದಿರಿ ನೆಂಟರೆ ನೀವು ಓ ಎಲ್ಲಿಗೆ ಹೋಗುವವರು......
ನಾವು ಬಂದದ್ದು ಕೆಲ್ಲರೆ ಓ ಕೇಳಿದ್ದೀರೆ ಇಂದು ಮಾರುವ ಜಾನುವಾರು ಇದೆಯೇ ಓ ಕೊಡುವ ಹೆಣ್ಣಿದೆಯೇ ಎಂದು ಕೇಳಲು ಬಂದವರೂ......
ಕೊಟ್ಟರಾಡಿಯ ಓ ಕೊಡ್ಸರಾಳ್ವನಿಗೆ ಓ ಹೇಳುತ್ತಾರೆ ನೆಂಟರು......
ಕೊಡುವ ಹೆಣ್ಣಿದ್ದರೆ ಓ ನೆಂಟರೆ ಮೀನ ಮೇಷ ಮಾಸಗಳಲ್ಲಿ ಕೊಟ್ಟಾಗಿದೆ......
ಮಾರುವ ಜಾನುವಾರು ಇದ್ದರೆ ಓ ವೃಶ್ಚಿಕ ಧನು ಮಾಸಗಳಲ್ಲಿ ಓ ಮಾರಿಹೋಗಿದೆ......
ನಾರಾಯಣಾ ಓ ನಾರಾಯಣಾ ಓ ಬಾಮುಕೆಲ್ಲರೆ......
ಕೊಡುವ ಹೆಣ್ಣಿನ ಅಡುಗೆ ಕೆಲಸದ ಸಹಾಯಕ್ಕೆ ನಾವು ಬಂದದ್ದಲ್ಲಪ್ಪಾ ಓ......
ಮಾರುವ ಜಾನುವಾರಿನ ಬೆನ್ನು ಸವರಲು ಓ ಬಂದವರಲ್ಲ ನಾವು
ಕೊಟ್ಟರಾಡಿಯ ಅರಮನೆಯಲ್ಲಿ ಓ ಕೊಟ್ಟರಾಡಿ ಕೊಡ್ಸರಾಳ್ವನಿಗೆ
ನಿಮ್ಮ ತಂಗಿ ಸಾಮು ಆಳ್ವೆದಿಯನ್ನು ಕೊಡುತ್ತೀರಾ ಎಂದು ಕೇಳಲು ಬಂದವರೆಂದು ಹೇಳುತ್ತಾರೆ ನೆಂಟರು......
ನಾರಾಯಣ ಓ ನಾರಾಯಣಾ ಓ......
ಏಳು ಏಳೂವರೆ ಸಣ್ಣ ಪ್ರಾಯದ ಓ ಮಗಳು ನನ್ನ ತಂಗೀ ಓ ಸಾಮು ಆಳ್ವೆದಿ......
ಉಟ್ಟ ಬಟ್ಟೇ ಓ ಒಗೆಯಲು ತಿಳಿಯದು ಓ ಕೆದರಿದ ಕೂದಲನ್ನು ಓ ಕಟ್ಟಲು ತಿಳಿಯದು...
ನಾರಾಯಣ ಓ ನಾರಾಯಣ ಬಾಮುಕೆಲ್ಲರೆ......
ನಿಮ್ಮ ಹೆಣ್ಣಿಗೆ ಕೆದರಿದ ಕೂದಲು ಕಟ್ಟಲು ತಿಳಿಯದಿದ್ದರೆ ಉಟ್ಟ ಸೀರೆ ಒಗೆಯಲು ತಿಳಿಯದಿದ್ದರೆ
ನಮ್ಮ ಹುಡುಗನಿಗೂ ಹಾಕಿದ ಚಡ್ಡೀ ಓ ತೆಗೆಯಲು ಬಾರದು......
ತಲೆಯಿಂದ ಬಿದ್ದ ಟೊಪ್ಪಿಯನ್ನು ಓ ತಲೆಗಿಡಲು ತಿಳಿಯದೆಂದರು......ಓ......

ಉತ್ತರಕ್ಕೆ ಉತ್ತರ ಸದರಿಗೆ ಸಂದಾಯ ಓ ಸೊಲ್ಮೆಗೆ ಸೊಲ್ಮೆ ಓ
ಸಲ್ಲಿಸಿದರು ನೆಂಟರು......
ಅಷ್ಟು ಹೊತ್ತಿಗಂತೆ ಇಂದು ಓ ಊಟ ಮಾಡುವ ಎಂದು ಹೇಳುವಾಗ......
ಮಾತುಕತೆ ಆಗಿ ನಿಶ್ಚಯ ಆಗದೆ ನಾವು ಓ ಕೊಟ್ಟ ನೀರಿಗೆ ಕೈಕೊಡೆವು ಎಂದು
ನಾಲ್ಕು ಜನ ನೆಂಟರು ಓ ಹೇಳಿದರು......
ಅಷ್ಟು ಹೊತ್ತಿಗೆ ಓ......
ಕಣ್ಣ ಸನ್ನೆಯಲ್ಲಿ ಓ ಕೈಭಾಷೆಯಲ್ಲಿ ಬಾಗಿಲು ಮೂಲೆಯಲ್ಲಿ ನಿಂತು ಓ ತಂಗೀ
ಕೆಲ್ಲರನ್ನು ಕರೆಯುತ್ತಾಳೆ ಓ ಮಗಳು ಅವಳು......
ನಾರಾಯಣ ಅಣ್ಣನವರೇ, ಓ ಸೋತು ಸುಣ್ಣವಾಗಿರಲಿ ಓ ಅಣ್ಣನವರೇ......
ಮೊದಲು ಬಂದ ಸಂಬಂಧವಾದುದರಿಂದ ಮಾತು ಕೊಟ್ಟುಬಿಡು ಓ ಅಣ್ಣನವರೇ......
ನಿಶ್ಚಯ ಮಾಡಿಬಿಡಿ ಓ ಅಣ್ಣನವರೇ ಎಂದಳು......
ಹೊರಗೆ ಬಂದರಂತೆ ಬಾಮುಕೆಲ್ಲರು......
ನೆಂಟರಿಗೆ ಉತ್ತರ ಕೊಟ್ಟರು ನಿಶ್ಚಯ ಮಾಡಿದರು ಓ ಕೊಟ್ಟ ನೀರಿಗೆ ಓ
ಊಟೋಪಚಾರ ಪೂರೈಸಿದರು......
ಊಟ ಮಾಡಿದ ಕೂಡಲೆ ಎಲೆ ಅಡಿಕೆ ಮೆದ್ದರು......
ಎಲೆ ಅಡಿಕೆ ಮೆದ್ದರು ಸ್ವಲ್ಪ ನಿದ್ದೆ ಹೋದರು ನೆಂಟರು......
ನೆಂಟರು ಹೋದವರು ಅಂಗರಾಜೆ ಬರ್ಕೆ, ಉಜೆಮಾರಗುತ್ತು, ಓ ಕಡೆಂಗಾಡಿ
ಬರ್ಕೆ ಇಳಿದರಂತೆ ಓ......
ಕೊಟ್ಟರಾಡಿಬೈಲಲ್ಲೇ ಓ ಕಂಬಳದ ಬದುವಿನ ಮೂಲಕ ಓ ಹೋಗುತ್ತಾರಂತೆ ನೆಂಟರು...
ಹೋಗುವಾಗ ಮನೆಯ ಮುಂದಿನ ಜಗಲಿಯಲ್ಲಿ ಕುಳಿತ ಕೊಡ್ಸರಾಳ್ವ ಓ ನೆಂಟರು
ಹಿಂತಿರುಗಿ
ಬರುವಾಗಲೂ ಅಲ್ಲೇ ಕುಳಿತಿದ್ದಾನೆ......
ಗಂಡಾಗಿ ಬಂದಿರೋ ನೆಂಟರೇ ನೀವು ಹೆಣ್ಣಾಗಿ ಬಂದಿರೇ......ಓ......
ನಿನಗೆ ಹೆಣ್ಣು ನೋಡಲು ಹೋದರೆ ಆಳ್ವಾ......
ಹೆಣ್ಣಾಗಿ ಬರಲಿಕ್ಕಿದೆಯೇ ಓ ಗಂಡಾಗಿಯೇ ಬಂದೆವೆಂದರು......
ಅಷ್ಟು ಹೇಳುವುದನ್ನು ಕೇಳಿಸಿಕೊಂಡ ಓ ಮನಸ್ಸು ತುಂಬ ಸಂತಸಗೊಂಡ......
ಕೊಟ್ಟರಾಡಿಯ ಕೊಡ್ಸರಾಳ್ವನೂ ಓ ನಾಲ್ಕು ಜನ ನೆಂಟರು......ಓ......
ಮದುವೆಗೆ ದಿನ ನೋಡಲು ಓ ಹೋದರು......
ದಿನ ಓ ಸಿಕ್ಕಿತಪ್ಪಾ ಓ......
ಒಳ್ಳೆಯ ವೇಳೆ ಓ ಒಳ್ಳೆಯ ಘಳಿಗೆ......
ಅಂಗರಾಜಬರ್ಕೆ ಓ ಉಜೆಮಾರಗುತ್ತು......ಓ......
ಕಡೆಂಗಡಿಬರ್ಕೆಯಲ್ಲಿ ಓ ಬಾಮುಕೆಲ್ಲರು ಓ ಬಲ್ಯಾಯನ (ಜ್ಯೋತಿಷಿ) ಕೊಟ್ಟಿಗೆಗೆ

ಹೋದರು......
ಒಳ್ಳೆಯ ದಿನ ಓ ಒಳ್ಳೆಯ ವಾರ
ನನ್ನ ತಂಗಿ ಓ ಸಾಮು ಆಳ್ವೇದಿಗೆ......
ಸಿಗಬೇಕೆಂದು ಹೇಳಿದರು ಕೆಲ್ಲರು......
ಹೇಳಿದ ನಾಲಿಗೆ ಗಂಟಲಲ್ಲಾಗಬೇಕಾದರೆ
ಒಳ್ಳೆಯ ವಾರ ಒಳ್ಳೆಯ ಗಳಿಗೆ
ಮೇಲೆ ಬರುವ (ಮುಂದಿನ) ಗುರುವಾರ ವಾರಕ್ಕೆ
ಸಿಂಹರಾಶಿಗೆ ಬೊಳ್ಫೆರ್ಮಲ ಹಕ್ಕಿಯ ದನಿಗೆ ಕೋಳಿಯ ಕೂಗಿಗೆ
ಮದುಮಗಳ ದಿಬ್ಬಣ ಓ ಹೊರಡಬೇಕೆಂದು......
ವಾರ ದಿನ ಸಿಕ್ಕಿತೆಂದು ಓ ಹೇಳುತ್ತಾರೆ ಕೆಲ್ಲರು......
ಇಂದಾದರೋ ಇಂದು ಮದುವೆಗೆ ದಿನ ಆಯಿತೆಂದು ಹೇಳಿ ಇಂದು
ಅಂಗರಾಜೆ ಬರ್ಕೆ ಉಜೆಮಾರಗುತ್ತಲ್ಲಿ ಓ......
ಚಪ್ಪರ ಹಾಕಿಸಬೇಕು ಓ ಈವರೆಗೆ ಆಗದಿರುವಂಥ ಕಾರ್ಯಕ್ರಮ ಏರ್ಪಡಿಸಬೇಕೆಂದು ಹೇಳಿದರು
ಇಂದಾದರೋ ಇಂದು ಅಂಗರಾಜೆ ಬರ್ಕೆ ಉಜೆಮಾರ ಗುತ್ತು ಕಡೆಂಗಾಡಿ ಬರ್ಕೆಯಲ್ಲಿ
ಇಂದು ಬಾಮುಕೆಲ್ಲರು ಅವರ ಅರಮನೆಯಲ್ಲಿ ಕಬ್ಬು ಕಡಿದರಂತೆ ಕಂಬ ಹಾಕಿಸಿದರಂತೆ
ವೀಳ್ಯ ತೆಗೆದರಂತೆ ವೀಳ್ಯದಲ್ಲಿ ಚಪ್ಪರವಂತೆ ಇಂದು ಹಿಂಗಾರದ ಗಿಡ್ಕೆ ಮುಡ್ಯಾಲದಲ್ಲಿ
ಇಡೆಕಡ್ಯವಂತೆ......ಓ......
ಅಚ್ಚುಬೆಲ್ಲದಲ್ಲಿ ಒಲೆ ಓಲೆಬೆಲ್ಲದಲ್ಲಿ ಬತ್ತೆಂದು (ಪಕ್ಕದ ಒಲೆ?) ಕೊಡಿಸಿದ್ದಾರೆ......ಓ......
ಈವರೆಗೆ ಸೇರದ ಸಭೆ ಓ ಸೇರಬೇಕೆಂದರು......
ಸೇರದ ಸಭೆ ಸೇರಬೇಕು ಚದುರುವ ಸಭೆ ಚದುರಬೇಕು......
ಅಂಗರಾಜೆ ಬರ್ಕೆ ಉಜೆಮಾರಗುತ್ತು ಕಡೆಂಗಡಿ ಬರ್ಕೆಯಲ್ಲಿ ಓ ಬಾಮುಕೆಲ್ಲರು......
ಅಷ್ಟು ಹೊತ್ತಿಗೆ ಓ ಕೇಳಬೇಕಲ್ಲಿ......ಓ......
ನಾರಾಯಣಾ ಓ ನಾರಾಯಣಾ......
ನಾರಾಯಣಾ ಓ ನಾರಾಯಣಾ......ಓ......
ಕೊಟ್ಪರಾಡಿಯ ಓ ಅರಮನೆಯಲ್ಲಿ
ನಾಲ್ಕು ಓ ತಂದೇವಿನ ಮರ ಓ ಕಡಿಸಿದ್ದಾರೆ ಆಳ್ವರು......ಓ......
ನಾಲ್ಕು ಕಂಬ ಓ ಹಾಕಿಸಿ
ಈಚಲು ಮರದ ಚೌರಿ (ಗೊಂಚಲು) ಓ ಕಡಿಸಿ......
ಕೊಟ್ಪರಾಡಿಯ ಅರಮನೆಯಲ್ಲಿ ಓ ಚಪ್ಪರ ಹಾಕಿಸಿದ್ದಾರೆ......
ಏಳು ಮಾಳಿಗೆಯಲ್ಲಿ ಓ ಏನಂತೆ ಓ......
ಅಂಗರಾಜೆ ಬರ್ಕೇ ಉಜೆಮಾರಗುತ್ತು ಕಡೆಂಗಾಡಿ ಬರ್ಕೆಯಿಂದ......

ಬಾಮುಕೆಲ್ಲರ ತಂಗಿಯನ್ನು (ಮದುವೆ) ಆಗುವುದಂತೆ ಓ ಸಾಮುಆಳ್ವೆದಿಯನ್ನು......
ಕೊಟ್ಟರಾಡಿಯರಮನೆಯಲ್ಲಿ ಊರುಮಾಗಣೆಯಲ್ಲಿ......ಓ......
ನಾಲ್ಕು ಮುಡಿ ಓ ಭತ್ತದ ಹೊಟ್ಟು ತುಂಬಿಸಿದ್ದಾರೆ......
ಮುಡಿ ಎಂದು ಕಟ್ಟಿಸಿದ್ದಾರೆ ನಾಲ್ಕು ಗೋಣಿ ತೌಡು ತಂದು......
ಮುಡಿ ಕಟ್ಟಿಸಿದ್ದಾನೆ ಕೊಡ್ಸರಾಳ್ವಾ......ಓ......
ಕುತ್ತಟ್ಟದಲ್ಲಿ ಹಾಕಿಸಿಬಿಟ್ಟಿದ್ದಾನಂತೆ......
ಕೊಟ್ಟರಾಡಿಯಾ ಅರಮನೆಯಲ್ಲಿ ಓ......
ಸಭೆ ಸಾವಿರಾರು ಓ ಹಾಕಿರುವ ಚಪ್ಪರದಲ್ಲಿ ಓ......
ಸೇರುತ್ತಾ ಅಗಲುತ್ತಾ ಇರುವ ಓ ಸಮಯದಲ್ಲಿ......
ನಾರಾಯಣಾ ಓ ನಾರಾಯಣಾ ಓ......
ಅಂಗರಾಜ ಬರ್ಕೆ ಓ ಉಜೆಮಾರ ಗುತ್ತು......ಓ ಕಡೆಂಗಾಡಿ ಬರ್ಕೆಯಿಂದಾ......
ಬಾಮುಕೆಲ್ಲರ ತಂಗೀ ಓ ಸಾಮು ಆಳ್ವೆದಿಯನ್ನು......
ಮದುಮಗಳ ಶೃಂಗಾರೋ ಬೆಳ್ಳಿಯಲ್ಲಿ ಬೆಳ್ಳಗೆ
ಬಂಗಾರದಲ್ಲಿ ಸಿಂಗಾರ ಓ ಮಲ್ಲಿಗೆಯಲ್ಲಿ ಜಲ್ಲಿ
ಭಾರಿ ಪಟ್ಟೆಸೀರೆ ಓ ಉಡಿಸಿದರಂತೆ ಗುತ್ತಿನ್ನ ರವಿಕೇ ಹಾಕಿಸಿದರು......
ರಾವಿನ್ನ ಗಜ್ಜೆಕತ್ತೀ ಓ ಹನೆ(ಮರದ) ಛತ್ರ ಕೊಡುವಾಗ......ಓ......ದಿಬ್ಬಣ ಹೊರಡುವಾಗ...
ಬೊಳ್ಳೆ ಹಕ್ಕಿಯ ಸ್ವರಕ್ಕೆ ಓ ಕೋಳಿಯ ಕೂಗಿಗೆ......
ಸಿಂಹರಾಶಿಯಲ್ಲಿ ಓ ದಿಬ್ಬಣ ಹೊರಡುವಾಗ......
ದುಃಖಿಸಿ ದುಃಖಿಸಿ ಓ ಹಾಕಿರುವ ಚಪ್ಪರದಲ್ಲಿ......ಓ......
ಬಂಗಾರದ ಕುರ್ಚಿಯಲ್ಲಿ ಓ ಅಣ್ಣ ಕುಳಿತುಕೊಂಡಿದ್ದಾರಪ್ಪ......
ನಾರಾಯಣ ಓ ನಾರಾಯಣ ಅಣ್ಣನವರೇ......
ದುಃಖಿಸಿ ದುಃಖಿಸಿ ಅಳುತ್ತಿರುವಾಗ......
ಕಣ್ಣೀರು ಒರಸುತ್ತಾರೆ ಅಣ್ಣ ಅವರು......
ಅಣ್ಣನವರ ಕಣ್ಣಿನ ಕಣ್ಣೀರು......ಓ......
ಸೆರಗಿನ ತುದಿಯಲ್ಲಿ ಓ ತಂಗಿ ಒರೆಸುವಾಗ
ನಾರಾಯಣ ಓ ನಾರಾಯಣ ಅಣ್ಣನವರೇ......
ನಾನೊಂದು ಕೇಳುತ್ತೇನೆ ಓ ಉತ್ತರ ಕೊಡಬೇಕು ಅಣ್ಣನವರೇ......
ಕೊಟ್ಟ ಉತ್ತರಕ್ಕೆ ನನಗೊಂದು ಓ ಕೇಳುತ್ತೀರೇ......ಓ......
ಕೇಳುತ್ತಾಳೇ ಸಾಮೂ ಓ ಸಾಮು ಆಳ್ವೇದಿ......
ನಾರಾಯಣಾ ಓ ನಾರಾಯಣ ಮಗ ತಂಗಿಯೇ......
ನೀನೊಂದು ಉತ್ತರ ಕೇಳಿದ್ದನ್ನು ಮಗಾ......

ನಿನಗೆ ಇಲ್ಲವೆಂದು ಹೇಳುವೆನೆ ಮಗಾ......
ಕಣ್ಣೀರು ಸುರಿಸಬೇಡಾ ಓ ಹೊಟ್ಟೆಯಲ್ಲಿ ಸಂಕಟ ಪಡಬೇಡ ಮಗಾ......
ನಾರಾಯಣಾ ಓ ನಾರಾಯಣ ಅಣ್ಣನವರೇ......ಓ......
ಬಂಗಾರದ ಕುರ್ಚಿಯಲ್ಲಿ ಓ ಅಣ್ಣ ಕುಳಿತುಕೊಳ್ಳುವಾಗ ಓ......ಹಾಕಿರುವ ಚಪ್ಪರದಲ್ಲಿ
ನಾರಾಯಣ ಓ ಅಣ್ಣನವರೇ ಓ......
ನಾರಾಯಣ ಓ ನಾರಾಯಣಾ......
ಕಾಶಿಗೆ ಹೋಗಿರುವ ಓ ಕಪಿಲೆ ದನವನ್ನು......
ನನಗೊಂದು ಕೊಟ್ಟುಬಿಡಿ ಅಣ್ಣನವರೆ ಎಂದು ಓ
ಹೇಳುತ್ತಾಳೆ ಸಾಮು ಆಳ್ವೆದೀ......
ನಾರಾಯಣಾ ಓ ನಾರಾಯಣ......ಓ......
ಕಾಶಿಗೆ ಹೋಗಿರುವ ಓ ಕಪಿಲೆ ದನವನ್ನು......
ಹಿಡಿದುಕೊಂಡು ಓ ಬಂದರು ಕೆಲ್ಲೆಯವರು......
ದಿಬ್ಬಣ ಓ ಹೊರಟಿತಪ್ಪಾ ಓ......
ಅಂಗರಾಜೆ ಓ ಉಜೆಮಾರ ಗುತ್ತು......
ಕಡೆಂಗಾಡಿ ಬರ್ಕೆಯಲ್ಲಿ ಬುಡ ಆದರೆ
ತುದಿ ಇದೆ ಕೊಟ್ಟರಾಡಿಯ ಕಂಬಳದ ಹುಣಿಯಲ್ಲಿ......
ಕಾಶಿಗೆ ಹೋಗಿರುವ ಕಪಿಲೆ ದನವನ್ನು ಓ
ಹಗ್ಗದಲ್ಲಿ ಹಿಡಿದುಕೊಂಡು ಓ ಹೋದನಂತೆ......
ಕೊಟ್ಟರಾಡಿಯ ಅರಮನೆಯಲ್ಲಿ ಓ ಕಪಿಲೆ ದನವನ್ನು ಕಟ್ಟಿದರಂತೆ
ಹಟ್ಟಿಯಲ್ಲಿ ಹೋಗಿ ನೋಡುವಾಗ......
ಕಪಿಲೆ ದನವನ್ನು ಕಟ್ಟಲು ಒಂದು ಗೂಟವು ಇಲ್ಲವಾಗಿ ಹೋಯಿತು......
ನಾರಾಯಣಾ ಓ ನಾರಾಯಣಾ......ಓ......
ನಾರಾಯಣಾ ಓ ನಾರಾಯಣಾ......
ಅಷ್ಟು ಹೊತ್ತಿಗೆ ಹೇಳಿದರಂತೆ......ಓ ಬಾಮುಕೆಲ್ಲರು......
ಆಚೆ ನೋಡಿದರು ಈಚೆ ನೋಡಿದರಪ್ಪಾ......
ಒಂದು ಕಂಬ ಹಾಕಿದರಂತೆ......ಓ......
ಕಂಬ ಹಾಕಿ ಒಂದು ಗೂಟ ಓ ನಾಟಿಸಿದರಂತೆ......
ಕಪಿಲೆಯನ್ನು ಕಟ್ಟಿಹಾಕಿಯೇ ಬಿಟ್ಟರಂತೆ......
ನಾರಾಯಣ ಓ ನಾರಾಯಣ......ಓ......
ದಿಬ್ಬಣ ಓ ಹೋದ ದಿಬ್ಬಣವನ್ನು......
ಕೊಟ್ಟರಾಡಿಯಾ ಅರಮನೆಯಲ್ಲಿ ಓ......
ಬಾಳೆ ಹಾಕಿದ ಬಾಕಿತಿಮಾರು ಗದ್ದೆಯಲ್ಲಿ......

ಹಾಸಿರುವ ಚಾಪೆಯಲ್ಲಿ ಕೊಟ್ಟಿರುವ ನೀರಿನಲ್ಲೇ ಓ ದಿಬ್ಬಣ ಎದುರುಗೊಂಡರು......
ಬಾಕಿತಿಮಾರ ಗದ್ದೆಯ ಬದುವಿನಲ್ಲೆ ಓ ಮದುಮಗಳನ್ನು ಕುಳಿತುಕೊಳ್ಳಿಸಿ......
ಅಣ್ಣನವರು ಹೋಗಿ ಚಪ್ಪರದಲ್ಲಿ ನೋಡುವಾಗ......
ನಾರಾಯಣ ಓ ನಾರಾಯಣ......ಓ......
ನಾರಾಯಣ ಓ ನಾರಾಯಣ......
ಮಾಡಿರುವ ಓ ಅಡುಗೆಯನ್ನು ನೋಡಿ
ಕಣ್ಣಲ್ಲಿ ಕಡುದುಃಖ ಓ ಬಿಟ್ಟರು ಕೆಲ್ಲರು......
ಓ ಹೊಟ್ಟೆಯಲ್ಲಿ ಸಂಕಟ ಓ ಪಟ್ಟರು ಕೆಲ್ಲರು......
ಧಾರೆಗೆ ಮದುಮಗ ಮದುಮಗಳನ್ನು ಕುಳಿತುಕೊಳಿಸುವಾಗ
ಧರ್ಮಧಾರೆ ಓ ಕಣ್ಣೀರಲ್ಲಿ ಕೈತೊಳೆದು
ಅಣ್ಣ ಬಾಮುಕೆಲ್ಲರು ಓ ಎರೆಯುತ್ತಾರಂತೆ
ಧರ್ಮಧಾರೆ ಎರೆದಾಗುವಾಗ......
ಅಣ್ಣನವರ ಮುಖ ನೋಡುವಾಗ ಓ ತಂಗಿಗೆ
ಮಾವಿನ ಸೊಪ್ಪಿನ ಓ ಎಳೆಚಿಗುರು ಬಾಡಿದಂತೆ
ಅಣ್ಣನವರ ಮುಖ ಓ ಬಾಡಿಹೋಗಿದೆ......
ಅಣ್ಣನವರನ್ನು ಕೈ ಭಾಷೆಯಲ್ಲಿ ಓ ಕಣ್ಣಸನ್ನೆಯಲ್ಲಿ......
ಅಣ್ಣನವರನ್ನು ಕರೆದುಕೊಂಡು ಓ ಸಆಮು ಆಳ್ವೇದಿ......
ನಾರಾಯಣ ಅಣ್ಣನವರೇ ಓ ನಾರಾಯಣ ಅಣ್ಣನವರೇ......
ಯಾಕಾಗಿ ನೀವು ಚಿಂತೆಯಲ್ಲಿ ತಲೆಬಾಗಿಸಿದ್ದೀರೆಂದು
ನನ್ನಲ್ಲಿ ಹೇಳಿಬಿಡಿ ಎಂದು ಓ ಹೇಳುತ್ತಾಳಪ್ಪಾ......ಓ......
ನಾರಾಯಣ ಮಗಾ ಓ ನಾರಾಯಣಾ......
ಈ ವರೆಗೆ ಸೇರದ ಸಭೆ ಸೇರಿತಲ್ಲಾ ಓ......
ಅಗಲುವ ಸಭೆ ಅಗಲಿತಲ್ಲಾ......ಓ......
ಸೇರಿದ ಸಭೆ ಮಾಡಿರುವ ಅಡುಗೆ ಸಾಕಾಗದಲ್ಲ ಮಗ ಎಂದರು......
ನಾರಾಯಣ ಓ ನಾರಾಯಣ ಅಣ್ಣನವರೇ......ಓ ಕೇಳಿದ್ದೀರೆ......
ಚಿಂತೆಯಿಂದ ತಲೆಬಾಗಿಸಬೇಡಿ ಅಣ್ಣನವರೇ ಓ......
ಕಣ್ಣಲ್ಲಿ ಕಡುದುಃಖ ದುಃಖಿಸಬೇಡಿ ಅಣ್ಣನವರೇ......
ಹೊಟ್ಟೆಯಲ್ಲಿ ಸಂಕಟಪಡಬೇಡಿ ಅಣ್ಣನವರೇ ನೀವು......ಓ ಅಣ್ಣನವರೇ ಕೇಳಿದ್ದೀರಾ......
ಆಗಿರುವ ಅಡುಗೆಯನ್ನು ಓ......
ಮೂಡಣಕ್ಕೆ ಬಾಗಿರುವ ಬಂಗಬಾಳೆಯ ಓ ತುದಿ ಎಲೆಯನ್ನು
ತಂದು ನೀವು...... ಓ......
ಒಂದೆಲೆ (ತುಂಬ) ಅನ್ನ ಓ ಆದ ಅಡುಗೆಯನ್ನು
ಕಪಿಲೆ ದನಕ್ಕೆ ಓ ಇಟ್ಟುಬಿಡಿ ಅಣ್ಣನವರೇ ಎಂದಳು......

ನಾರಾಯಣ ಅಷ್ಟು ಹೇಳುವುದನ್ನು ಕೇಳಿದರು ಅಣ್ಣ......
ಪೂರ್ವಕ್ಕೆ ಹೋದ ಬಂಗಬಾಳೆಯ ತುದಿ ಎಲೆ ತಂದರು ಒಂದೆಲೆ ಬಡಿಸಿದರು......
ಬಾ ತಾಯಿ ಸಹೋದರಿಯೇ ಓ ಸಾಮುಆಳ್ವೇದಿ ಎಂದರು......
ಸಾಮುಆಳ್ವೆದಿ ಓ ಹೋದಳು......
ಒಂದೆಲೆ ಅನ್ನ ಓ ಕಪಿಲೆದನಕ್ಕಿಟ್ಟಳು......
ನಾರಾಯಣ ಓ ಕಪಿಲೆಯೇ......ಓ......
ಅಂಗರಾಜೆ ಬರ್ಕೆ ಉಜೆಮಾರಗುತ್ತು ಕಡೆಂಗಾಡಿ ಬರ್ಕೆ ಓ ಹೇಗೆ ಬೆಳಗೀತೊ ಓ..
ಅಂತೆಯೇ ನೀನು ಬಾಯಿ ಹಾಕಿದ ಗಳಿಗೆಯಲ್ಲಿ
ಕೊಟ್ಟರಾಡಿಯ ಅರಮನೆ ಓ ವೃದ್ಧಿಯಾಗಬೇಕು ಓ ನೀರಾಗಿ ಹರಿಯಬೇಕು
ಆಗಿರುವ ಅಡುಗೆಯನ್ನೇ ಓ ಸುಧಾರಿಸಿಕೊಂಡು ಕಪಿಲೆಯೇ ಎಂದು ಸಾಮು ಆಳ್ವೇದಿ ಕಪಿಲೆಗೆ ನಮಿಸಿದಳು......
ಒಂದು ಚೆಂಬು ನೀರು (ಮೈಮೇಲೆ) ಎರೆದಳು ಸಾಮು ಆಳ್ವೇದಿ......
ಹಿಂತಿರುಗಿ ಬಂದಳಂತೆ......
ಧಾರೆದಸ್ತು ಓ ದೇಸೆ ಆಗಿದೆಯಂತೆ......ಓ......
ಹೋದ ನೆಂಟರು ಊಟೋಪಚಾರ ಮುಗಿಸಿದರು......
ಮದುಮಗ ಮದುಮಗಳನ್ನು ಅಕ್ಕಪಕ್ಕ ಕುಳ್ಳಿರಿಸಿ
ಹಾಲು ಕೊಟ್ಟರು ಓ ಮದುಮಗಳನ್ನು
ಹೋದ ದಿಬ್ಬಣ ಓ ಅಂಗರಾಜೆ ಬರ್ಕೆ ಓ ಉಜೆಮಾರಗುತ್ತಿಗೆ ಓ ಬಂತಪ್ಪಾ ಓ...... ಅಲ್ಲಿ......
ಕೊಟ್ಟರಾಡಿಯ ಅರಮನೆಯಲ್ಲಿ ಆಗಿರುವ ಅಡುಗೆ
ಸಭೆ ಸಾವಿರ ಜನ ಓ ಮಂದಿ ಮಾರ್ಬಲ ಓ
ಊಟ ಮಾಡಿಯೂ ಓ ಮಿಕ್ಕಿ ಉಳಿದಿದೆಯಂತೆ
ಹಾಲಂತೆ ಓ ಮಿಕ್ಕಿದೆಯಂತೆ......
ನೀರಾಗಿ ಓ ಹರಿಯಿತಂತೆ......ಓ......
ನಾರಾಯಣಾ ಓ ನಾರಾಯಣಾ......
ಇಂದಾದರೋ ಅಂಗರಾಜೆ ಉಜೆಮಾರಗುತ್ತು ಕಡೆಂಗಾಡಿ ಬರ್ಕೆಯಲ್ಲಿ ಓ......
ಸಾಮು ಆಳ್ವೆದಿಯೂ ಓ ಕೊಟ್ಟರಾಡಿಯ ಅರಮನೆಗೆ ಓ ಬಂದರಂತೆ......
ಸಾಯಂಕಾಲದ ಹೊತ್ತಿಗೆ ಇಂದು ಅಡುಗೆಗೆ ಅಕ್ಕಿ ಕೇಳುವಾಗ
ನಾರಾಯಣ ಮದುಮಗಾ ಓ ಮದುಮಗ......ಓ......
ಸಾಯಂಕಾಲಕ್ಕೇ ನಮಗೆ ಎಲ್ಲಿದೆ ಅಕ್ಕೀ......
ಸಾಯಂಕಾಲದ ಓ ಅಡುಗೆ ಇತ್ಯಾದಿ ಓ ಮಾಡುವ ಎಂದು ಓ ಸಾಮುಆಳ್ವೆದಿ ಕೇಳುವಾಗ......
ಕಿರಿ ಅಟ್ಟಕ್ಕೆ ಓ ಹೋಗು ಸಾಮು ಓ ಮುಡಿನಾಳಿ ಹಿಡಿದುಕೊಂಡು ಹೋಗು......

ಕುಚ್ಚಲಕ್ಕಿ ಇದೆ ಬೆಳ್ತಿಗೆ ಅಕ್ಕಿ ಇದೆ ಓ ಇದೆ ಎಂದರು......
ಅಷ್ಟು ಹೇಳುವುದನ್ನು ಕೇಳಿದಳಂತೆ ಕಿರು ಅಟ್ಟಕ್ಕೆ ಹೋದಳಂತೆ ಮುಡಿನಾಳಿ ಹಿಡಿದು ಕೊಂಡು
ಮುಡಿಗೆ ಮುಡಿನಾಳಿ ಹಾಕುವಾಗ ಇಂದು ಓ......
ಐದು ಮುಡಿ ಓ ಹೊಟ್ಟು ಇದ್ದಲ್ಲಿಗೆ ಓ ಬೆಳ್ತಿಗೆ ಅಕ್ಕಿ ಆಗಿದೆಯಂತೆ......
ಇನ್ನೊಂದು ಮುಡಿಗೆ ಮುಡಿನಾಳಿ ಹಾಕಿ ಓ ತೋಡುವಾಗಂತೆ ಓ......
ಅಕ್ಕಿಮುಡಿ ಓ ಆಗಿದೆ ಎಂದರು......
ಮುಚ್ಚಲು ಗೆರಸೆಯನ್ನು ಹಿಡಿದಳು ಸಾಮುಆಳ್ವೆದಿ ಅಕ್ಕಿ ಹಾಕಿ ಓ
ಕೊಟ್ಟರಾಡೀ ಕೊಡ್ಸರಾಳ್ವನ ಓ ಅಂಗುಳದ ಮುಂದೆ
ಮುಚ್ಚಲು ಗೆರಸೆಯಲ್ಲಿ ಶಬ್ದ ಮಾಡುತ್ತಾ ಅಕ್ಕಿ ಗೇರುವಾಗ ಓ......
ಮೂಗಿನ ತುದಿಯಲ್ಲಿ ಓ ನೋಡಿಕೊಂಡು
ಪಟ್ಟಸೂಡ (ಮಲಗುವ?) ಮಂಚದಲ್ಲಿ ಓ ಕುಳಿತುಕೊಂಡು ಕಾಲ ಮೇಲೆ ಓ ಕಾಲು ಹಾಕಿ ಓ ಮೂಗಿನ
ಮೇಲೆ ಓ ಕೈ ಇಟ್ಟನಂತೆ......
ನಾರಾಯಣ ಮದುಮಗ ಓ ಮದುಮಗ ಕೇಳಿದಿಯ......
ಕಡಲ ಸಿರಿ ಹೊಯ್ಗೆಯನ್ನು ತಂದು ಮುಡಿಕಟ್ಟಿ ಅಟ್ಟದಲ್ಲಿ ಹಾಕಿದರು ಸತ್ಯದ ಮಗಳು ಸಾಮುಆಳ್ವೆದಿ ಹೌದಾದರೆ
ಅಂಗರಾಜ ಬರ್ಕೆ ಉಜೆಮಾರಗುತ್ತು ಕಡೆಂಗಾಡಿ ಬರ್ಕೆಯಲ್ಲಿ ಓ ಸತ್ಯಮಹಾಲೋಕದ ಓ ಸಾಮುಆಳ್ವೆದಿ
ಹೌದಾದರೆ ಅಕ್ಕಿಯಾದೀತು......ಓ......
ಎಂದು ಹೇಳಿದರು ಸಾಮುಆಳ್ವೇದಿ......
ಅಂತೆಯೇ ಒಳ್ಳೆಯ ರೀತಿಯಲ್ಲಿ ಓ
ಹೋಗುತ್ತಾ ಬರುತ್ತಾ ಓ ಅಂಗರಾಜೆ ಬರ್ಕೆಯಲ್ಲಿ ಓ ಸೇರುತ್ತಾ ಅಗಲುತ್ತಾ ಓ......
ಕೊಟ್ಟರಾಡಿಯ ಈ ಅರಮನೆಯಲ್ಲಿ ಓ ಸೇರುತ್ತಾ ಅಗಲುತ್ತಾ ಓ ಇದ್ದಾರಂತೆ......
ಒಂದಲ್ಲ ಓ ಒಂದು ದಿನದಲ್ಲಿ......ಓ......
ಸುದ್ದಿ ಹೋಗುತ್ತದೆಯಂತೆ......
ಆರು ಮೂರು ವರ್ಷ ಓ ಕಳೆಯುವಾಗಾ......ಓ......
ಸುದ್ದಿ ಓ ಕೇಳಿಕೆಯ ಕೇಳಿತದಲ್ಲಿ......ಓ......
ಬೋಳದರಮನೆಗೆ ಬೋಳಬಾರಿ ಚತ್ತೇರಿಗಳಿಗೆ ಓ......
ಒಬ್ಬಳು ತಂಗಿ ಇದ್ದಾಳಂತೆ......
ಸತ್ಯಮಹಾಲೋಕದ ಸಿರಿಯಂತೆ ಅವಳು......
ಅವಳನ್ನೊಮ್ಮೆ ನೋಡಬಹುದಿತ್ತೆಂದು ಓ ಊರು ಮಾಗಣೆಯಲ್ಲಿ ಓ ಹೇಳುತ್ತಾರಂತೆ......
ಮೇಲಂತಸ್ತಿನ ಓ ಏಳು ಉಪ್ಪರಿಗೆಯಲ್ಲಿ......

ಆರು ಮೂರು ವರ್ಷವಾದರೂ ಓ ಕಣ್ಣು ಕೊಂಡುಹೋಗಿ ಓ ನೋಡಲಿಲ್ಲವಪ್ಪಾ......
ಸುದ್ದಿಯು ಓ ಮಾಧ್ಯಮವಾಗಿ ಓ ಹೋಗುತ್ತದೆಯಂತೆ
ನಾರಾಯಣಾ ಓ ನಾರಾಯಣಾ......ಓ......
ನಾಲ್ಕು ಊರು ನಾಲ್ಕು ದೇಶ ಓ ಹೆಸರು ಹೋಗುತ್ತದೆಯಪ್ಪಾ ಓ......
ಬೋಳದರಮನೆಗೆ ಓ ಸಿರಿಯನ್ನು ತಂದಿದ್ದಾರಂತೆ......ಓ......
ಅವರು ಬೋಳಬಾರಿ ಚತ್ತೇರಿಗಳ ತಂಗಿ ಇದ್ದಾಳೆಂದು ಓ ಹೆಸರು ಹೋಗಿದೆಯಂತೆ
ಅಳವನ್ನೊಮ್ಮೆ ನೋಡಬೇಕು ಓ ಹೋಗಬೇಕೆಂದರು......ಓ......
ಕೊಟ್ಟರಾಡಿಯ ಓ ಕೊಡ್ಸರಾಳ್ವರು......
ಅಷ್ಟು ಹೊತ್ತಿಗೆ ಇಂದು ಒಂದಲ್ಲ ಒಂದು ದಿನದಲ್ಲಿ ಇಂದು ಕೊಟ್ಟರಾಡಿಯರಮನೆ
ಇಳಿದರಂತೆ ಇಂದು ಓ ಬೋಳದರಮನೆಗೆ ಹೋದರು......
ಬೋಳದರಮನೆಗೆ ಹೋಗಿಯಂತೆ ಒಂದಲ್ಲ ಎರಡು ಓ ಮೂರು ನಾಲ್ಕು ಬಾರಿ
ಓ ಹೋಗೀ......
ಊಟ ಉಪಚಾರ ಓ ಊರ ಸುದ್ದಿ ಓ ಇತ್ಯಾದಿ
ಮಾತನಾಡುತ್ತಾ ಓ ನಗುತ್ತಾ ಓ ಇರುವ ಸಮಯದಲ್ಲಿ
ಒಂದಲ್ಲ ಒಂದು ದಿನ ಓ ಹೇಳುತ್ತಾರಂತಪ್ಪಾ......
ಕೊಟ್ಟರಾಡಿಯ ಓ ಕೊಡ್ಸರಾಳ್ವರು......
ನಾರಾಯಣ ಓ ನಾರಾಯಣ ಚತ್ತೇರಿಗಳೇ
ಸುಮ್ಮನೆ ಯಾಕೆ ನಾವು ಕುಳಿತು ಪಟ್ಟಾಂಗ ಮಾತನಾಡುವುದು ಓ......
ಒಂದಾಟ ಚದುರಂಗ ಆಡೋಣವೇ ನಾವು
ಚದುರಂಗ ಆಡೋಣವೇ ಎಂದು ಕೇಳಲು ಹೇಳುತ್ತಾರೆ ಓ......
ಯಾರದು ಕೊಟ್ಟರಾಡಿ ಕೊಡ್ಸರಾಳ್ವಾ......
ನಾವು ಚದುರಂಗದಲ್ಲಿ ಸೋತರೆ ಓ
ನಮ್ಮ ಸಹೋದರಿಯನ್ನು ನಿಮಗೆ ಕೊಡುತ್ತೇವೆ......ಓ......
ನೀವು ಸೋತರೆ ನಿಮ್ಮ ಸಹೋದರಿಯನ್ನು ನನಗೆ ಕೊಡಬೇಕೆಂದು
ಬೋಳಬಾರಿ ಚತ್ತೇರಿಗಳು ಓ ಕೇಳುತ್ತಾರಂತೆ......
ನಾರಾಯಣ ಓ ನಾರಾಯಣ ಚತ್ತೇರಿಗಳೇ......ಓ......
ಆಡೋಣ ಎಂದರಂತೆ......
ಅಂತಪಂಥ ಹಾಕಿದರಂತೆ......
ಅಂತಪಂಥ ಓ ಹಾಕಿ ಚದುರಂಗಕ್ಕೆ ಕುಳಿತರಂತೆ
ಒಂದಾಟ ಆಡಿ ಓ ಎರಡಾಟ ಆಡುವಾಗ
ಮೂರಾಟ ಆಡುವಾಗಾ ಓ ಬಾಯಾರಿಕೆಯಾಗುತ್ತದೆ ಎಂದರು......
ಒಂದು ಚೆಂಬು ನೀರು ಓ ಕೊಡಿ ಓ
ಚತ್ತೇರಿಗಳೇ ಎಂದು ಹೇಳಿದರು ಕೊಡ್ಸರಾಳ್ವರು......

ತಮ್ಮ ಎದ್ದರು ಕರಿಯ ಕಾಸಿಂಗರಾಯರು ಹೋದರು......
ಒಂದು ಚೆಂಬು ನೀರು ಓ ತಂದುಕೊಟ್ಟರು......
ಕೊಡುವಾಗ ಹೇಳುತ್ತಾರೆ ಕೊಟ್ಟರಾಡಿಯ ಕೊಡ್ಸರಾಳ್ವರು......
ಏನು ಚತ್ತೇರಿಗಳೆ ಅಂತಪಂಥ ಹಾಕಿದಿರ ನೀವು......
ಬೋಳದರಮನೆಯಲ್ಲಿ ಓ ಹೆಣ್ಣುಹೆಂಗುಸು ಓ ಇಲ್ಲವೇ ಒಂದು ಚೆಂಬು ನೀರು ಕೊಡಲು......
ಹೆಣ್ಣು ಹೆಂಗುಸು ಇಲ್ಲದ ಅರಮನೆಯೇ ಇದು......
ಎಂದು ಹೇಳುತ್ತಾರಪ್ಪಾ ಓ ಕೊಟ್ಟರಾಡಿಯ ಕೊಡ್ಸರಾಳ್ವರು......
ನಾರಾಯಣಾ ಓ ನಾರಾಯಣಾ ಓ ಆಳ್ವರೆ ಕೇಳಿದಿರಾ......
ನಮಗೆ ಮದುವೆ ಆಗಲಿಲ್ಲಪ್ಪಾ......
ನಮ್ಮ ಸೇವೆಯ ಓ ಹೆಣ್ಣುಗಳಲ್ಲಿ
ಯಾಕಾಗಿ ತರಲು ಹೇಳುವುದೆಂದೂ ಓ ಹೇಳಲಿಲ್ಲ ನಾವು......
ನಾವೇ ನೀರು ತಂದುಕೊಟ್ಟಿದ್ದೆಂದು ಹೇಳಿದರು......
ನಾರಾಯಣಾ ಓ ನಾರಾಯಣಾ ಓ ಬೋಳಬಾರೀ ಚತ್ತೇರಿಗಳೇ
ನಿಮ್ಮ ಸಹೋದರಿ ಇದ್ದಾಳೆಂದು ಗೊತ್ತಿದೆಯಲ್ಲವೇ......
ಅವಳನ್ನು ನೋಡಬೇಕಂದು ಹೇಳುತ್ತಾರೇ......
ನೋಡಬೇಕಾದರೆ ಏನಾಗಬೇಕು ಓ ಆಳ್ವರೆ ಓ ಅವಳನ್ನು ನೋಡಬೇಕಾದರೆ
ನಮ್ಮ ಅಂತಪಂಥ ಓ ಆಗಲಿ ಎಂದರು......
ಅಂದಿನ ದಿನ ಓ ಹೋಗಿದೆಯಂತಪ್ಪಾ......
ಮರುದಿನ ಬಂದಿದೆ ಅವರಿಗೆ......
ಮರುದಿನ ಬರುವಾಗ ಓ......
ಕೊಟ್ಟರಾಡಿಯ ಕೊಡ್ಸರಾಳ್ವರು ಓಡೋಡುತ್ತಾ ಓ ಬೋಳದರಮನೆಗೆ ಓ ಬರುತ್ತಾರೆ......
ಬೋಳದರಮನೆಗೆ ಬಂದರು ಓ ಚದುರಂಗ ಆಡಲು ಕುಳಿತುಕೊಳ್ಳುವ ಎಂದರು......
ಚದುರಂಗ ಆಡಿ ಓ ಹೋದರು......
ಒಂದಾಟ ಆಡಿದರು ಓ ಎರಡಾಟ ಆಡುವಾಗ ಓ......
ನೀರು ಬೇಕೆಂದು ಓ ಆಳ್ವರು ಕೇಳಿದರು......
ಅಷ್ಟು ಹೊತ್ತಿಗೆ ಹೆಣ್ಣುಹೆಂಗುಸು ಕೊಟ್ಟರೆ ಮಾತ್ರ ನೀರು ಬೇಕು ನನಗೆ
ನನ್ನಂತಹ ಗಂಡುಸು ಕೊಡುವುದಾದರೆ ನೀರೆ ಬೇಡ ನನಗೆಂದರು......
ಅಷ್ಟು ಹೇಳುವಾಗ ಓ ಹೇಳುತ್ತಾರೆ ಓ ಬೋಳಬಾರೀ ಚತ್ತೇರಿಗಳು......ಓ......
ಕರಿಯ ಕಾಸಿಂಗರಾಯರು ಓ ಬೊಳಿಯ ದೇಸಿಂಗರಾಯರು......
ಮೇಲಂತಸ್ತಿಗೆ ಹೋದರು ಓ ಏಳು ಉಪ್ಪರಿಗೆಗೆ
ನಾರಾಯಣಮಗ ಸಿರಿಯೆ ಓ......
ಒಂದು ಗಿಂಡಿ ನೀರು ಓ ಕೊಡಬಹುದೆ ಮಗ......

ನಾರಾಯಣ ಅಣ್ಣನವರೆ ಓ ಕೇಳಿದ್ದೀರೆ......
ಒಂದು ಗಿಂಡಿ ನೀರು ಕೊಡಬೇಕಾದರೆ ಏನಾಗಬೇಕು ಅಣ್ಣನವರೆ......
ಏಳು ಪರದೆ ಓ ಕಟ್ಟೆಬಿಡಿ ಗಂಡುಸೇ ಓ
ಏಳು ಪರದೆಯ ಓ ಹೊರಗೆ ನೀರು ಕೊಟ್ಟು ಬಿಡುತ್ತೇನೆಂದಳು......ಓ......
ಸತ್ಯಮಹಾಲೋಕದ ಸಿರಿಯೆ ಓ ಹೇಳುತ್ತಾಳಂತೆ......
ಅಷ್ಟು ಹೇಳಲು ಓ ಹೇಳುತ್ತಾರಂತೆ......
ಏಳು ಪರದೆ ಓ ಕಟ್ಟುವುದು ನಾವು
ಏಳು ಪರದೆಯ ಹೊರಗೆ ನೀರು ಕೊಡುತ್ತೇವೆಂದರು......
ಆದರೂ ಹೆಣ್ಣುಗಳನ್ನು ನೋಡಬೇಕೆಂದು ಕೊಡ್ಸರಾಳ್ವ ಓ ಹೇಳಲು ಆಯಿತೆಂದರು......
ಒಳಗಿನಿಂದಲೇ ಏಳು ಪರದೆ ಕಟ್ಟಿದರು......
ಪರದೆಯೊಳಗಿಂದಲೇ ನೀರು ಕೊಡುವಾಗ
ಅವಳ ಮುಂಗೈಯ ಓ ಅಂದಚಂದ
ನಾರಾಯಣ ಓ ನಾರಾಯಣಾ ಓ......
ನೀರು ಕೊಡುವಾಗ ಸತ್ಯಮಹಾಲೋಕದ ಸಿರಿಯ ಮುಂಗೈಯ ಅಂದಚಂದ ನೋಡಿದರು
ಕೊಟ್ಟರಾಡಿಯ ಕೊಡ್ಸರಾಳ್ವ......
ದಡಕ್ಕನೆ ಬಿದ್ದರು ಓ ಸ್ಮೃತಿ ತಪ್ಪಿದರು......
ನಾರಾಯಣ ಓ ನಾರಾಯಣ......
ಮುಂಗೈಯ ಅಂದ ನೋಡಿ ಆಳ್ವರೆ ನೀವು
ಮತಿ ಕೆಟ್ಟಿರಿ ಪ್ರಜ್ಞೆ ತಪ್ಪಿದಿರಿ ಏನು ಆಳ್ವರೆ ಎಂದು ವಿಚಾರಿಸಿದರು ಬೋಳಬಾರೀ ಚತ್ತೇರಿಗಳು......
ಅವಳ ಶರೀರವನ್ನು ಒಂದುವೇಳೆ ನೋಡಿದರೆ ಏನಾದೀರಿ ಏನು ಹೋದೀರಿ ಎಂದರು
ಅಷ್ಟು ಹೇಳಲು ಪ್ರಜ್ಞೆಗೆ ಬಂದರು ಅವರು......
ನೀರು ಕುಡಿದರು ಮುಖಕ್ಕೆ ನೀರು ಹಾಕಿದರು......
ಆ ದಿನಕ್ಕೆ ಚದುರಂಗ ಸಾಕೆಂದರು......
ತನ್ನ ಮನೆಗೆ ಓ ಹೋದರು ಆಳ್ವರು......
ಕೊಟ್ಟರಾಡಿಯರಮನೆಯಲ್ಲೇ ಅಂದಿನ ದಿನ ಕಳೆದುಹೋಯಿತು......
ಮರುದಿನ ಓ ಬಂದಿದೆ ಆಳ್ವರಿಗೆ......ಓ......
ಏನಪ್ಪಾ ಆ ಕೊಟ್ಟರಾಡಿಯರಮನೆಯಲ್ಲೇ......
ಅಡಿಕೆ ಬಾಯಿಗೆ ಹಾಕಿದರೆ ಆಳ್ವರು
ವೀಳ್ಯತಿನ್ನಲು ಬೋಳಮಲ್ಲಿಗೆಗೆ ಹೋಗುವುದು......
ಬೋಳಮಲ್ಲಿಗೆಯಲ್ಲಿ ವೀಳ್ಯ ತಿಂದರೆ

ಕೊಟ್ಟರಾಡಿಯರಮನೆಗೆ ಹೊಗೆಸೊಪ್ಪು ತಿನ್ನಲು ಹೋಗುವುದು......
ಬೋಳಮಲ್ಲಿಗೆಯಲ್ಲಿ ಹೊಗೆಸೊಪ್ಪು ತಿಂದರೆ
ಕೊಟ್ರಾಡಿಯರಮನೆಗೆ ಸುಣ್ಣ ತಿನ್ನಲು ಹೋಗುತ್ತಾರೆ......
ಹಾಗೆಯೇ ಅಂದಿನ ದಿನ ಕಳೆಯಲು
ಒಂದಲ್ಲ ಒಂದು ದಿನ ಹೇಳುತ್ತಾರೆ......
ಕೊಟ್ಟರಾಡಿಯ ಕೊಡ್ಸರಾಳ್ವರು ಬೋಳಮಲ್ಲಿಗೆಯಲ್ಲಿ
ಪಹರೆ ಹಾಕಿದ್ದಾರೆಂದು ಸುದ್ದಿ ಹರಡುತ್ತದಪ್ಪಾ ಓ......
ಕಿವಿಯಿಂದ ಕಿವಿಗೆ ಹರಡುತ್ತಾ
ಬೋಳಬಾರೀ ಚಿತ್ತೇರಿಗಳ ಕಿವಿಗೆ ಬಿದ್ದು ಅವರಿಗೆ ನಾಚಿಕೆಯಾಗಿ ಪರಿಣಮಿಸಿತು......
ನಾರಾಯಣಾ ಓ ನಾರಾಯಣಾ......
ನಾವು ಸೋತರೆ ನಮ್ಮ ಸಹೋದರಿಯನ್ನು ನಿಮಗೆ ಕೊಡುತ್ತೇವಪ್ಪಾ......
ನೀವು ಸೋತರೆ ನಿಮ್ಮ ಸಹೋದರಿಯನ್ನು ನಮಗೆ ಕೊಡಬೇಕಂದರು......
ಅಂತಪಂಥ ಹಾಕಿದರು......
ಅಂತಪಂಥ ಹಾಕಿಯಾದರೂ......ಓ
ಕಿವಿಯಿಂದ ಕಿವಿಗೆ ಹೋಗಿದೆ ಎಂದರು......
ಅಂದಿನ ದಿನಮಾನ ಹೋಗಿದೆಯಪ್ಪಾ......ಓ......
ಮರುದಿನ ಬಂದಿದೆಯಂತೆ ಅಲ್ಲಿ......
ಮರುದಿನದಂದು ಕೊಟ್ಟರಾಡಿಯರಮನೆಯಿಂದ ಬೋಳಮಲ್ಲಿಗೆಗೆ ಓ ಹೋದರು......
ಚದುರಂಗದಲ್ಲಿ ಸೋತು ಓ ಸುಣ್ಣ ಆದರಂತೆ......ಓ......
ಬೋಳಬಾರಿ ಚತ್ತೇರಿಗಳು......
ಕರಿಯ ಕಾಸಿಂಗರಾಯರು ಓ ಬಿಳಿಯ ದೇಸಿಂಗ ಓ ರಾಯರಂತೆ......
ನಾರಾಯಣಾ ಓ ನಾರಾಯಣ ದೇವರೆ......
ಈವರೆಗೆ ನಾವು ಸೋಲಲಿಲ್ಲ
ಇಂದೇನು ನಮಗೆ ಸೋಲಾಯಿತು ಎಂದರು......
ರಾಮಕಾಲವೇ ಓ ಬ್ರಹ್ಮಹತ್ಯೆ ಮಾಡಿದೆವೆ
ನಮ್ಮ ಸಹೋದರಿಯನ್ನು ಹೇಗೆ ಕೊಡುವುದಪ್ಪಾ......
ನಾವು ಹೇಗೆ ನಮ್ಮ ಸಹೋದರಿಗೆ ಹೇಳುವುದೆಂದರು ಕರಿಯ ಕಾಸಿಂಗರಾಯರು
ಓ ಚಿಂತೆಯಲ್ಲಿ ತಲೆಬಾಗಿಸಿದರು......
ಮೇಲು ಮಾಳಿಗೆಯಲ್ಲಿ ನಾರಾಯಣ ಅಣ್ಣನವರೆ ನಾರಾಯಣ ಅಣ್ಣನವರೆ
ಎಡದ ಕೈಯಲ್ಲಿ ಹಿಡಿದವರು ನನ್ನ ತಮ್ಮ ಬಲದ ಕೈಯಲ್ಲಿ ಹಿಡಿದವರು
ನನ್ನ ಅಣ್ಣ ಎಂದು ಅಂದು ಶಾಪ ಕೊಟ್ಟಿದ್ದೇನೆ ಅಣ್ಣನವರೆ
ಏನು ಕಷ್ಟ ಏನು ತೊಂದರೆ ಅಣ್ಣನವರೆ
ನನ್ನಲ್ಲಿ ಹೇಳಿ ಎಂದು ಹಟ ಕಟ್ಟಿದಳು ಛಲ ಹಿಡಿದಳು ಸಿರಿಯೆ

ಸತ್ಯಮಹಾಲೋಕದ ಸಿರಿ......
ನಾರಾಯಣ ಮಗ ಸಿರಿಯೆ......
ಚದುರಂಗ ಆಡಲು ಕುಳಿತೆವು ಮಗ......
ನಾವು ಸೋತು ಸುಣ್ಣವಾದೆವಲ್ಲ ಮಗ......
ಏನು ಮಾಡುವುದೆಂದರು......
ಏನು ಉತ್ತರ ಹೇಳಬೇಕೆಂದರು......
ನಾರಾಯಣ ಅಣ್ಣನವರೆ ಓ ನೀವು ಸೋಲಲಿಲ್ಲ ಓ ಅವರು ಸೋತರು......
ಹೆಣ್ಣು ಕೊಡುತ್ತೇವೆಂದು ಹೇಳಿ ಅಣ್ಣಂದಿರೆ ಸಂಬಂಧ ಹಿಡಿಯಿರಿ......
ಓ ನೀವು ಮಾತುಕತೆ ಮುಗಿಸಿರಿ ಓ ಮಾತುಕೊಟ್ಟುಬಿಡಿ ಎಂದಳು ಸಿರಿ......
ಅಂದಿನ ದಿನಮಾನ ಹೋಗಿದೆಯಂತೆ ಮರುದಿನ ಬರಲು ಓ ಕೊಟ್ಟರಾಡಿಯ ಕೊಡ್ಸರಾಳ್ವನಿಗೆ
ಓ ಎರಡು ಹೆಂಡಂದಿರ ನಡುವೆ ಬದುಕುವ ಅಂದ ಹೇಗೆ ನೋಡುವುದು ಓ ಅವನನ್ನು ಪರೀಕ್ಷೆ ಮಡಬೇಕೆಂದು ಓ ಹೇಳಿದರು......
ನಾರಾಯಣ ಅಣ್ಣನವರೆ......
ನಾಳೆಯ ದಿನಕ್ಕೆ ಕೊಟ್ಟರಾಡಿಯ ಕೊಡ್ಸರಾಳ್ವ ಬರುವ ಹೊತ್ತು ನೋಡಿ
ಕಾಜುಬಾಜು ನಾಯಿಗಳನ್ನು ಬಿಡಿ ಅಣ್ಣನವರೆ......
ಅವನ ಸಾಹಸ ನೋಡುವ ಎಂದಳು ಸಿರಿ......ಓ......
ಅಂದಿನ ದಿನ ಕಳೆದು ಮರುದಿನ ಬರಲು
ಕೊಟ್ಟರಾಡಿಯ ಬೈಲುಗದ್ದೆ ಇಳಿದು ಬೋಳದ ಬೈಲುಗದ್ದೆಯ ಮೂಲಕ ಬಂದು ಕಲ್ಲ ಹೆಬ್ಬಾಗಿಲು ಕಂಚಿನ ಹೊಸ್ತಿಲು
ಆರೂವರೆ ಅಂಗಣ ಮೂರೂವರೆ ಅಂಗಳಕ್ಕೆ ಓ ಬರುವಾಗಾ......
ಕಾಜುಬಾಜು ಎಂಬ ಎರಡು ನಾಯಿಗಳನ್ನು, ತಿನ್ನುತ್ತೇವೆ ಕೊಲ್ಲುತ್ತೇವೆ ಎಂದು (ಮುಂದೊತ್ತಿ) ಬರುವ
ನಾಯಿಗಳನ್ನು ಬಿಟ್ಟರಪ್ಪಾ ಬೋಳಬಾರಿ ಚತ್ತೇರಿಗಳು......
ಬಿಟ್ಟರು ಓ ಅವರು ಏಳು ಅಂತರಗಳ ಯಮದೇವಿ ಗುಂಡದಲ್ಲಿ ಕುಳಿತಿದ್ದಾರೆ......
ನಾರಾಯಣಾ ನಾರಾಯಣಾ ಓ ನಾರಾಯಣ......
ಅಷ್ಟು ಹೊತ್ತಿಗೆ ತಿನ್ನುತ್ತೇವೆ ಕೊಲ್ಲುತ್ತೇವೆ ಎಂದು ಎಡಬಲ ಎರಡು ತುದಿಯಿಂದ ಕಾಜುಬಾಜು ಎಂಬ ಎರಡು ನಾಯಿಗಳು ಹೋದುವಪ್ಪಾ......
ಕಾಜುಬಾಜು ನಾಯಿಗಳು ಹೋಗುವಾಗ......
ಎಡದಿಂದ ಬಂದ ನಾಯಿಗೆ ಎಡಕಾಲಿನ ಚಪ್ಪಲಿ ಎಸೆದರು ಬಲದಿಂದ ಬಂದ ನಾಯಿಗೆ ಬಲಕಾಲಿನ ಚಪ್ಪಲಿ ಎಸೆದರು ಓ......
ಕೊಟ್ಟರಾಡಿಯ ಓ ಕೊಡ್ಸರಾಳ್ವರು......
ನಾರಾಯಣ ಓ ನಾರಾಯಣವಪ್ಪಾ......ಓ......

ಬೋಳಮಲ್ಲಿಗೆಯಲ್ಲಿ ಓ ಬೋಳದರಸುಗಳು ಎಲ್ಲಿಗೆ ಹೋಗಿದ್ದರಪ್ಪಾ......
ಕಾಜುಬಾಜು ಎಂಬ ಎರಡು ನಾಯಿಗಳನ್ನು ಬಿಟ್ರೋ......
ನನ್ನನ್ನು ನಾಯಿಗಳು ಚೆನ್ನಾಗಿ ಕಚ್ಚಿ ಸಾಯಿಸಲೆಂದೋ......
ನಾರಾಯಣಾ ನಾರಾಯಣಾ ಆಳ್ವರೆ ಓ......
ನೀವೇ ನಿನ್ನೆಯ ದಿನದಂದು ಓ ಹೆಣ್ಣು ಕೇಳಿದಿರಿ ಸಂಬಂಧ ಹಿಡಿಯುತ್ತೇನೆಂದು ತಿಳಿಸಿದಿರಿ
ಮಾತು ಕೊಡುತ್ತೇನೆಂದು ಓ ಉತ್ತರ ಕೊಟ್ಟಿದ್ದೀರಿ......
ನೀವಾದರೋ ಓ ಕೊಟ್ಟರಾಡಿಯ ಓ ಕೊಡ್ಸರಾಳ್ವನಲ್ಲಿ ಓ......
ನೀವೇ ಕೇಳಿರಿ ಇಂದು ಎರಡು ಹೆಂಡಂದಿರ ಮಧ್ಯೆ ಬದುಕುವವನ ಸಾಮರ್ಥ್ಯವನ್ನು
ನಮಗೆ ಪರೀಕ್ಷಿಸಬೇಕೆಂದು ಕಾಜುಬಾಜು ನಾಯಿಗಳನ್ನು ನಾವು ಬಿಟ್ಟದ್ದು......
ಇದರಲ್ಲಿ ನೀವು ಗೆದ್ದು ಬಂದಿರಿ......
ಇಂದಲ್ಲದಿದ್ದರೆ ನಾಳೆಯಾದರೋ ಓ ಇಬ್ಬರು ಹೆಂಡಂದಿರ ಜೊತೆ ಬದುಕುವವನ ಶಕ್ತಿಯನ್ನು
ನಾವು ನೋಡಿದ್ದೆಂದು ಓ ಬೋಳಬಾರಿ ಚತ್ತೇರಿಗಳು ಓ ಹೇಳಿಬಿಟ್ಟರು......
ನಾರಾಯಣ ಕೊಡ್ಸರಾಳ್ವಾ......ಓ......ಬೋಳಬಾರಿ ಚತ್ತೇರಿಗಳೇ......
ನೀವೂ ಇರುವುದು ಒಕ್ಕೆತ್ರಿ ವಂಶದ ಗಂಡುಮಕ್ಕಳಾಗಿ
ನಾನು ಇರುವುದು ಒಕ್ಕೆತ್ರಿ ವಂಶದ ಗಂಡುಮಗ(ನಾಗಿ)
ಭೇದಭಾವನೆ ಯಾಕಾಗಿ ನಮ್ಮಲ್ಲಿ ಓ ಒಂದೇ ಜಾತಿಬಾಂಧವರಲ್ಲಿ
ಮದುವೆ ಸಂಬಂಧ ಬೆಳೆಸುವರು ನಾವು ಓ ಎಂದು ಕೊಟ್ಟರಾಡಿಯ ಕೊಡ್ಸರಾಳ್ವ ಓ ಹೇಳಿದರು......
ನಾರಾಯಣ ಓ ನಾರಾಯಣ ಚತ್ತೇರಿಗಳೇ......ಓ......
ನಾನು ಮದುವೆ ಓ ಆದರೆ ಓ......
ಸಾಮು ಆಳ್ವೆದಿಯನ್ನು ಏನು ಮಾಡುವುದೆಂದರು......
ಅವಳಿರುವಾಗ ಅವಳು ಬಿಟ್ಟಾಳೆಯೇ ಎಂದು ಕೇಳಲು ಬೋಳಬಾರಿ ಚತ್ತೇರಿಗಳು ಓ ಹೇಳಿಕೊಡುತ್ತಾರೆ......
ಹಾಲು ತರುವಾಗ ಓ ನೀರುಬೇಕೆಂದು ಕೇಳಬೇಕೂ......ಓ ಆಳ್ವರೆ
ಅನ್ನ ತರುವಾಗ ಓ ತಂಗುಳನ್ನ ಬೇಕೆಂದು ಕೇಳಬೇಕು......
ತಂಗುಳನ್ನು ತರುವಾಗ ಓ ಮೊಸರು ಬೇಕೆಂದು ಕೇಳಬೇಕು......
ಸೋತು ಸುಣ್ಣವಾಗಿ ಓ ಹೋಗುತ್ತಾರೆ......
ಬಿಸಿನೀರ ಸ್ನಾನಮಾಡಲು ತಯಾರು ನಡೆಸುವಾಗ ತಣ್ಣೀರು ಬೇಕೆಂದು ಹೇಳಬೇಕು......
ತಣ್ಣೀರು ತಯಾರಿಸುವಾಗ ಬಿಸಿನೀರು ಬೇಕೆಂದು ಹೇಳಬೇಕು......
ಸೋತು ಸುಣ್ಣವಾಗುತ್ತಾಳೆ ಸಾಮು ಆಳ್ವೆದಿ ಎಂದು ಬೋಳಬಾರಿ ಚತ್ತೇರಿಗಳು ಹೇಳಿಕೊಡುತ್ತಾರೆ......

ಅಂತೆಯೇ ಮಾಡುವುದೆಂದು ಹೇಳಿ ಇಂದು ಓ ಬೋಳದರಮನೆ ಇಳಿದುಕೊಂಡು
ಕೊಟ್ಟರಾಡಿಯರಮನೆಗೆ ಓ ಹೋಗುತ್ತಾರೆ ಆಳ್ವರು......ಓ......
ಕೊಟ್ಟರಾಡಿಯ ಓ ಕೊಡ್ಸರಾಳ್ವರು......
ನಾರಾಯಣ ಸಾಮು ಆಳ್ವೆದಿ ಓ ಅನ್ನ ಹಾಕೆಂದು ಹೇಳಿದರು......
ಅನ್ನ ತರುವಾಗ ಸಾಮು ಆಳ್ವೆದಿ ನನಗಿಂದು ಗಂಜಿ ಬೇಕೆಂದರು......
ಗಂಜಿ ತರುವಾಗ ಓ ನನಗಿಂದು ತಂಗುಳನ್ನ ಬೇಕೆಂದರು
ತಂಗುಳನ್ನ ಬೇಕೆಂದಾಗ ಹೇಳುತ್ತಾನೆ ಸಾಮು ಆಳ್ವೆದಿ......
ನಾರಾಯಣ ಗಂಡುಸೇ ಇದು ಬೆಳಗಿನ ಹೊತ್ತಾಗುತ್ತಿದ್ದರೆ ತಂಗುಳನ್ನ ಕೊಡುತ್ತಿದ್ದೆ ನಿಮಗೆ......
ಮಧ್ಯಾಹ್ನದ ಹೊತ್ತಲ್ಲವೇ ಇದು ಎಂದು ಸಾಮು ಅಳ್ವೆದಿ ಹೇಳುತ್ತಾಳೆ......
ನಾರಾಯಣ ಓ ನಾರಾಯಣ ಸಾಮು ಆಳ್ವೇದೀ ಓ......
ಬಿಸಿನೀರು ಸ್ನಾನಮಾಡಬೇಕು ನನಗೆಂದರು......
ಬಿಸಿನೀರ ಸ್ನಾನಕ್ಕೆಂದು ಬಚ್ಚಲುಕೊಟ್ಟಿಗೆ(ಮನೆ)ಗೆ ಕರೆದುಕೊಂಡು ಹೋಗಿ ಸಾವಿರ ಕೊಡ ನೀರು ಬಿಸಿ ಮಾಡುವಾಗ ಹೇಳುತ್ತಾರೆ......
ಬಿಸಿನೀರು ಬೇಡ ಸಾಮು ಆಳ್ವೆದಿ ನನಗೆ ತಣ್ಣೀರು ಬೇಕು......
ಅಂದು ಉತ್ತರ ಓ ಕೊಡುತ್ತಾಳೆ......
ನಾರಾಯಣ ಗಂಡಸೇ ಓ ಕೇಳಿದ್ದೀರೆ ನೀವೂ......
ಸತ್ಯನಾಪುರದರಮನೆ ಸುಟ್ಟು ಬೂದಿ ಮಾಡಿ
ಬತ್ತಕೇರಿ ಬಸಲೂರಿನರಮನೆಗೆ ಗಂಡನನ್ನು ಬಿಟ್ಟು
ಬತ್ತ ಕಟ್ಟಿಸಿ ವಿಚ್ಛೇದನ ಹೇಳಿ ಬಂದವಳು
ಕಡು ಮಂಗಳವಾರ ನಡು ಮಧ್ಯಾಹ್ನದ ಸುಡುಬಿಸಿಲಲ್ಲಿ ಗಂಡನಿಗೆ ವಿಚ್ಛೇದನ ಹೇಳಿ ಬಂದವಳು......ಓ......
ಬೋಳದರಮನೆಗೆ ಬಂದು ಕುಳಿತಿದ್ದಾಳೆ......
ಅವಳು ಹೇಳಿಕೊಟ್ಟದ್ದೇ ನಿಮಗೆಂದು......ಓ ಕೇಳುತ್ತಾಳೆ ಅವಳು......
ಅಷ್ಟು ಹೇಳಲು ಹೇಳುತ್ತಾರೆ ಅವರು......
ನಾರಾಯಣ ಓ ದೇವರೆ
ಕೈ ಸುಸ್ತಾಗುವಷ್ಟು ಹೊಡೆಯುತ್ತಾರೆ ಇಂದು ಕಾಲು ಸುಸ್ತಾಗುವಷ್ಟು ಒದೆಯುತ್ತಾರಂತೆ ಇಂದು ಓ ಕೊಟ್ಟರಾಡಿಯ ಕೊಡ್ಸರಾಳ್ವ......
ಮೂಗಲ್ಲಿ ಬಾಯಲ್ಲಿ ಊಟಮಾಡಿ ಓ ಹೋಗುತ್ತಾರಂತೆ ಓ......
ಒಂದು ದಿನ ಹೋಗುವಾಗ ಹಿಡಿದ ತುಂಡನ್ನು ಓ ಬಿಟ್ಟು ಹೋಗುತ್ತಾರೆ......
ಒಂದು ದಿನ ಹೋಗುವಾಗ ನಾರಾಯಣ ಓ ನಾರಾಯಣವಂತೆ......ಓ......
ನಾರಾಯಣ ಓ ನಾರಾಯಣ......
ಅಷ್ಟು ಹೊತ್ತಿಗಂತೆ ಓ ಅಷ್ಟು ಹೇಳಿಯಾಗುವಾಗ ಇಂದು ಓ ಸೋತು ಸುಣ್ಣವಾಗಿ

ಓ ಹೋಗುತ್ತಾಳೆ ಹೆಣ್ಣು......
ನಾರಾಯಣ ಓ ನಾರಾಯಣ
ಅಂದಿನ ದಿನದಂದು ಇಂದು ಕೊಟ್ಟರಾಡಿಯ ಅರಮನೆಯಿಂದ ಇಂದು ಓ ಹೋಗುತ್ತಾರಂತೆ
ಬೋಳಮಲ್ಲಿಗೆಯಲ್ಲಿ ಓ ಹೋಗಿ ಕುಳಿತುಕೊಳ್ಳುತ್ತಾರಂತೆ......
ನಾರಾಯಣಾ ಓ ನಾರಾಯಣಾ......ಓ......
ಏನು ಮಾಡಿದಿರಿ ಓ ಆಳ್ವರೆ ಏನು ಬಿಟ್ಟರೆಂದು ಓ ಕೇಳುವಾಗ ಹೇಳುತ್ತಾರಂತೆ
ನೀವೆಂದಂತೆ ಮಾಡಿದೆ, ಇಂದು ಅನ್ನ ತರುವಾಗ ಪದಾರ್ಥ ಬೇಕೆಂದು
ಪದಾರ್ಥ ತರುವಾಗ ಮೊಸರು ಬೇಕೆಂದು, ಮೊಸರು ತರುವಾಗ ತಂಗುಳನ್ನ ಬೇಕೆಂದು, ತಂಗುಳನ್ನ ತರುವಾಗ ಬಿಸಿನೀರು ಬೇಕೆಂದು, ಬಿಸಿನೀರು ತರುವಾಗ ತಣ್ಣೀರು ಬೇಕೆಂದು ಓ ಹೇಳಿದೆನೆಂದರು......
ನಾರಾಯಣ ಮದುಮಗ ಓ ನಾರಾಯಣ ಮದುಮಗ
ಏನು ನೀವು ಈ ರೀತಿಯ ಶಿಕ್ಷೆ ಈ ವರೆಗೆ ಕೊಡಲಿಲ್ಲ. ಕೊಡದ ಶಿಕ್ಷೆ ಕೊಟ್ಟಿರಿ
ಕೈ ಸುಸ್ತಾಗುವವರೆಗೆ ಹೊಡೆದಿರಿ ಕಾಲು ಸುಸ್ತಾಗುವವರೆಗೆ ಒದೆದಿರಿ
ಕೊಟ್ಟರಾಡಿಯ ಕೊಡ್ಸರಾಳ್ವರು ಓ ಬೋಳಮಲ್ಲಿಗೆಗೆ ಹೊರಟು ಹೋದರು......
ಅಷ್ಟು ಹೊತ್ತಿಗೆ ಇಂದು ಕಣ್ಣಲ್ಲಿ ಕಡುದುಃಖ ಬಿಡುತ್ತಾ ಇಂದು ಓ
ಸಾಮು ಆಳ್ವೆದಿ ಇರುವಾಗಲಂತೆ ಇಂದು......
ಅಂದಿನ ದಿನ ಹೋಗುವಾಗ ಗಂಡನನ್ನು ಹತ್ತಿರ ಕುಳಿತುಕೊಳ್ಳಿಸಿದಳು......
ನಾರಾಯಣ ಮದುಮಗ ಓ ಕೊಟ್ಟರಾಡಿಯ ಕೊಡ್ಸರಾಳ್ವರೆ......
ಓ ನನ್ನ ಗಂಡನೇ ಎಂದಳು ಸಾಮು ಆಳ್ವೆದಿ ಇಂದು ಪಟ್ಟಸೂಡ ಮಂಚದಲ್ಲಿ
ಹತ್ತಿ ಹತ್ತಿರವಾಗಿ ಕುಳಿತುಕೊಳ್ಳಿಸಿದಳು......
ಹತ್ತಿರ ಕುಳಿತುಕೊಳ್ಳಿಸಿ ಓ ಬುದ್ಧಿವಿಚಾರ(ಬುದ್ದಿವಾದ)ವನ್ನು ಓ ತಿಳಿಸಿ ಹೇಳಿದಳು......
ನಾರಾಯಣ ಗಂಡನೇ ಓ ಅಂದಿನ ದಿನದಲ್ಲಿ ಓ ಅಂಗರಾಜೆಬರ್ಕೆ ಉಜೆಮಾರಗುತ್ತು
ಓ ಕಡೆಂಗಾಡಿ ಬರ್ಕೆಯಿಂದ ನನ್ನ ದಿಬ್ಬಣ ಹೊರಡುವಾಗ
ಕಾಶಿಗೆ ಹೋಗಿರುವ ಕಪಿಲೆ ದನವನ್ನು ನನಗೆ ಕೊಟ್ಟಿದ್ದಾರೆ......
ನನ್ನ ಅಣ್ಣನವರಲ್ಲಿ ಕಾಡಿಬೇಡಿ ತಂದಿದ್ದೇನೆ......
ಕೊಟ್ಟರಾಡಿಯ ಅರಮನೆಯಲ್ಲಿ ಓ ನಾಲ್ಕು ತಂದೇವು ಮರದ ಕಂಭ ಹಾಕಿ
ಈಚಲಿನ ಹಗ್ಗದಿಂದ ಕಟ್ಟಿ ಚಪ್ಪರ ಹಾಕಿದೆ......ಓ......
ಅಂಗರಾಜೆ ಉಜೆಮಾರಗುತ್ತು ಕಡೆಂಗಾಡಿ ಬರ್ಕೆಯಿಂದಾ......ಓ......
ಕಬ್ಬು ಕಡಿಸಿದ್ದಾರೆ ಓ ಕಬ್ಬಿನಿಂದ ಕಂಬ ಎಂದರು......ಓ......
ವೀಳ್ಯದೆಲೆಯಲ್ಲಿ ಚಪ್ಪರ ಹಿಂಗಾರದಲ್ಲಿ ತಡಿಕೆ ಓ ಮುಡ್ಯಲದಲ್ಲಿ ಅಲ್ಲಲ್ಲಿ ಎಡೆಕಟ್ಟು ಓಲೆಬೆಲ್ಲದಲ್ಲಿ ಒತ್ತು ಅಚ್ಚುಬೆಲ್ಲದಲ್ಲಿ ಒಳೆ ಹಾಕಿಸಿ ಗೌಜಿಗದ್ದಲದಲ್ಲಿ ಗುಲ್ಲು ಗುಂಪಲ್ಲಿ ಅಂಗರಾಜೆ ಉಜೆಮಾರುಗುತ್ತು ಕಡೆಂಗಾಡಿ ಬರ್ಕೆಯಿಂದ ಬಾಮುಕೆಲ್ಲರು ನನ್ನ

ಅಣ್ಣ ಓ ಕೊಟ್ಟರಾಡಿಯರಮನೆಯನ್ನು ಹೋಗುವಾಗ ಓ
ಏನು ಇತ್ತು ಗಂಡನೇ, ಓ ಏನು ಆಗಿದೆಯೆಂಬುದು ನಿಮಗೆ ಓ ನೆನಪಿದೆಯೇ ಎಂದಳು......
ಅಷ್ಟು ಹೇಳುವುದನ್ನು ಕೇಳಿದರು, ನಾರಾಯಣ ಸಾಮು ಆಳ್ವೆದಿ ನಾನು ಹೋಗುವುದಿಲ್ಲ ಇನ್ನು ಕೊಟ್ಟರಾಡಿಯ
ಅರಮನೆ ಇಳಿಯುವುದಿಲ್ಲ, ಬೋಳಮಲ್ಲಿಗೆಗೆ ಹೋಗುವುದಿಲ್ಲ ಓ ಎಂದರು......
ನಾರಾಯಣ ಮದುಮಗ ನೀವು ಕೇಳಿರಿ......
ಸತ್ಯನಾಪುರದರಮನೆ ಸುಟ್ಟು ಬೂದಿ ಮಾಡಿಸಿಕೊಂಡು......
ಬತ್ತಕೇರಿ ಬಸ್ರೂರಿನಿಂದ ಬತ್ತ ಕಟ್ಟಿಸಿ ವಿಚ್ಛೇದನ ಹೇಳಿಸಿಕೊಂಡು ಆರ್ಯಬನ್ನಾಯ ಬಳಿ ಬದಲಿಸಿ
ಪುತ್ರಬನ್ನಾಯ ಸೆರೆ ಬದಲಿಸಿ ಹೊರಟುಬಂದವಳು ಓ ಸತ್ಯಮಾಲೋಕದ ಸಿರಿ......
ಬೋಳದ ಕಾಡಲ್ಲಿ ಓ ಬಿಳಿಯ ಬುಗರಿ ಮರದ ಸೆಳೆಗೊಂಬಿನ ಜಂತಿಗೆ ಓ ಕುಮಾರನ ಕುಂದಣದ ತೊಟ್ಟಿಲು
ಕಟ್ಟಿ ರಾತ್ರೆಯ ರಾಮಾಯಣ ಹಗಲಿನ ಭಾರತ ಓದಿಕೊಂಡು ಇದ್ದವಳು......
ಅಂಥ ಸಿರಿ ಓ ಕುಮಾರನನ್ನು ಮಾಯ ಮಾಡಿದವಳು
ಓ ನಡ್ತಾರೆಯಲ್ಲಿ ನಾಲ್ಕು ಸೆರೆಯಲ್ಲಿ ಆಳಿದವಳು ಕಾಟ್ ಕೈಯೆಂಕಿ(?) ಓರಗೆಯ ಹೆಣ್ಣನ್ನು
ಮಾಯ ಮಾಡದಿರುವಂಥವಳು ಸಿರಿ ಓ......
ಬೋಳದರಮನೆಗೆ ಬಂದು ಓ ಬೋಳಬಾರಿ ಚಿತ್ತೇರಿಗಳಿಗೆ ಓ ತಂಗಿ ಆಗಿದ್ದಾಳೆ......
ಅಂಥ ಹೆಣ್ಣನ್ನು ಓ ಮದುವೆ ಆಗುತ್ತೀರೆ ಎಂದು ಓ ಸದ್ಬೋಧನೆ ಓ......ಹೇಳಿದವರು
ಅಂಗರಾಜೇ ಓ ಉಜೆಮಾರಗುತ್ತು ಓ ಕಡೆಂಗಾಡಿ ಬರ್ಕೆ ಓ ಸಾಮು ಆಳ್ವೆದಿ......
ಅಷ್ಟು ಹೇಳುವುದನ್ನು ಕೇಳಿದರಂತೆ ಇಂದು ಒಂದಲ್ಲ, ಎರಡುದಿನ, ಮೂರು, ನಾಲ್ಕು ದಿನ ಹೋಗದೆ ಕುಳಿತರು ಓ ಕೊಟ್ಟರಾಡಿಯ ಕೊಡ್ಸರಾಳ್ವರು......
ಅಷ್ಟು ಹೊತ್ತಿಗಂತೆ ಇಂದು ಚಿಂತೆಯಲ್ಲಿ ಮುಳುಗಿ ಹೋಗುತ್ತಾರೆ......ಓ......
ಬೋಳದರಮನೆಯಲ್ಲಿ ಬೋಳಬಾರಿ ಚತ್ತೇರಿಗಳು ಓ......
ಕರಿಯ ಕಾಸಿಂಗರಾಯರು ಓ ಬಿಳಿಯ ದೇಸಿಂಗರಾಯರು......
ಏನು ನೀವು ಸದಾ ಬರುತ್ತಿದ್ದರು ಯಾಕಾಗಿ ಬಾರದೆ ಕೂತಿರೆಂದು ಕೇಳುತ್ತಾರೆ......
ನಾರಾಯಣ ತಮ್ಮ ನಾರಾಯಣ ತಮ್ಮ ಕೇಳಿದ್ದೀಯೇ ಎಂದು
ಇಂದು ಬೋಳಬಾರಿ ಚತ್ತೇರಿಗಳು ಅಣ್ಣತಮ್ಮ ಓ ಮಾತನಾಡಿಕೊಳ್ಳುತ್ತಾರೆ......
ಓಲೆಯ ಆಳನ್ನು ಕರೆಯಬೇಕು ಓಲೆ ಬಿಡಬೇಕು......ಓ......
ಎಂದು ಓ ಹೇಳುತ್ತಾರೆ......
ಇಂದಾದರೋ ಇಂದು ಓಲೆಯ ಆಳನ್ನು ಕರೆದರಂತೆ ಓಲೆಯ ಆಳನ್ನು ಕರೆದು
ಯಾರು ಆಳು ಓ ಆಳೇ ಕೇಳಿದಿಯೇ ನೀನು ಓ......
ಓಲೆಯ ಆಳಲ್ಲಿ ಓ ಹೇಳುತ್ತಾರೆ......

ಓಲೆಯನ್ನು ಬರೆದರಂತೆ ಇಂದು ಓಲೆಯ ಆಳನ್ನು ಕರೆದರಂತೆ ಓ......
ಕೆಳಕೊಟ್ಟರಾಡಿ ಬಿಡಬೇಕು, ಮೇಲಿನ ಕೊಟ್ಟರಾಡಿಯಂತೆ ನಡು ಕೊಟ್ಟರಾಡಿಯಲ್ಲಿ
ಓ ಕೊಡ್ಸರಾಳ್ವರ ಬೀಡಿಗೆ ಹೋಗಬೇಕೆಂದು ಓ ಹೇಳುತ್ತಾರಂತೆ......
ಕೆಳ ಕೊಟ್ಟರಾಡಿಯಲ್ಲಿ ಕೇಳಿದರೆ ಕೊಡಬೇಡ ಮೇಲಿನ ಕೊಟ್ಟರಾಡಿಗೆ ಹೋಗಬೇಡ
ನಡು ಕೊಟ್ಟರಾಡಿಯ ಕೊಡ್ಸರಾಳ್ವರಲ್ಲಿಯೇ ಕೊಟ್ಟುಬಿಡು......
ಓ ಹೆಣ್ಣ ಕೈಯಲ್ಲೇ ಕೊಡಬೇಡ ಎಂದರು......
ಅಯ್ಯಯ್ಯೋ ಓ ಬೋಳಬಾರಿ ಚತ್ತೇರಿಗಳೇ
ಕಿವಿ ಕೇಳುವುದಿಲ್ಲ ಕಣ್ಣು ಕಾಣುವುದಿಲ್ಲ ನನಗೆ
ಎಲ್ಲಿಗೆ ಹೋಗುವುದು ಎಲ್ಲಿಂದ ಬರುವುದೆಂದು ಕೇಳುತ್ತಾನೆ ಓಲೆಯ ಆಳು......
ನಾರಾಯಣ ಆಳೇ ನಾರಾಯಣ ಆಳೇ ಓ......
ನೀನೇ ಕೇಳಪ್ಪಾ......ಸೆರಗೆಳೆದು ಓಲೆಯ ಗಂಟನ್ನು ಆಳಿನ ಕೈಗೆ ಹಾಕಿದರು....ಓ....
ಬೋಳಮಲ್ಲಿಗೆ ಓ ಇಳಿದನಂತೆ ಇಂದು ಓ......
ಬೋಳಮಲ್ಲಿಗೆ ಇಳಿದು ಇಂದು ಓ ಕೊಟ್ಟರಾಡಿಯ ಬೈಲುಗದ್ದೆಯ ಮೂಲಕ ಹೋಗುತ್ತಾನೆ......ಓ......
ಅಷ್ಟು ಹೊತ್ತಿಗೆ ದಾರಿಯ ದಿಕ್ಕುದೆಸೆ ಆಳಿಗೆ ಗೊತ್ತಿಲ್ಲವಾಯಿತು ಓ
ನಾರಾಯಣ ಓ ನಾರಾಯಣ
ತಾಮ್ರದ ಪಾತ್ರೆ ಹಿಡಿದಳು ಸಾಮು ಆಳ್ವೆದಿ ಇಂದು ಓ ಕೊಟ್ಟರಾಡಿಯ ಅರಮನೆಯಿಂದ
ತೋಡಿಸಿರುವ ಬಾವಿ ಹಾಕಿರುವ ಏತದಲ್ಲಿಗೆ ನಡೆದಳು......
ಆಕಾಶದೆತ್ತರದ ಏತದಿಂದ ಪಾತಾಳದಾಳದ ನೀರನ್ನು ಎತ್ತುವಾಗ ಓ......
ನಾರಾಯಣ ಹೆಂಗುಸೇ ಓ ನಾರಾಯಣ ಹೆಂಗುಸೇ......
ಕೆಳಕೊಟ್ಟರಾಡಿ ಎಂದರೆ ಯಾವುದು ಹೆಂಗುಸೇ ಮೇಲ್ ಕೊಟ್ಟರಾಡಿ ಎಂದರೆ
ಯಾವುದೆಂದು ಓ ಆಳು ಕೇಳುತ್ತಾನೆ......
ನಾರಾಯಣ ಓ ನಾರಾಯಣಾ......
ಎಲ್ಲಿಗೆ ಹೋಗುವುದು ಅಜ್ಜನವರೆ ನೀವು ಓ ಎಲ್ಲಿಂದ ಬಂದೀರಿ
ಎಂದು ಸಾಮು ಆಳ್ವೆದಿ ಕೇಳಲು ಹೇಳುತ್ತಾನೆ......
ನಾನು ಓಲೆ ಕೊಂಡುಹೋಗುವವನು......
ಎಲ್ಲಿಗೆ ಅಜ್ಜನವರೆ ನೀವು ಓಲೆ ಕೊಂಡುಹೋಗುವುದು ಎಲ್ಲಿಂದ ಬಂದವರೆಂದು
ಸಾಮು ಆಳ್ವೆದಿ ಕೇಳಲು ಹೇಳುತ್ತಾನೆ ಓಲೆಯ ಆಳು......
ಓಲೆಯ ಗಂಟು ಅಲ್ಲ ಅದು ತಾಯೇ......ಓ......
ವೀಳ್ಯದೆಲೆ ಅಡಿಕೆಯ ಗಂಟದು ಎಂದು ಹೇಳುತ್ತಾನೆ ಆಳು......
ನಾರಾಯಣ ಅಜ್ಜನವರೆ ನಾರಾಯಣ ಅಜ್ಜನವರೆ ಓ......
ಎಲೆ ಅಡಿಕೆ ತಿನ್ನುವ ಭ್ರಮೆ ನನಗೆ ಹೆಚ್ಚಾಯಿತು......
ಒಂದೆಲೆ ಒಂದು ತುಂಡು ಅಡಿಕೆ ನನಗೆ ಕೊಟ್ಟುಬಿಡಿ ಎಂದಳು ಸಾಮುಆಳ್ವೆದಿ

ನಾರಾಯಣ ಮಗ ಅದು ಎಲೆ ಅಡಿಕೆಯ ಗಂಟಲ್ಲ ಮಗ ಅದು ಓಲೆಯ ಗಂಟು ಹೆಣ್ಣ ಕೈಯಲ್ಲೆ ಕೊಡಬಾರದು ಬದಲಾಗಿ ಗಂಡಸಿನ ಕೈಯಲ್ಲೇ ಕೊಡಬೇಕೆಂದಿದ್ದಾರೆ ನಡು ಕೊಟ್ಟರಾಡಿ ಯಾವುದೆಂದು ಹೇಳುತ್ತೀಯ ಮಗ ಎಂದು ಓಲೆಯ ಆಳು ಹೇಳುತಾನೆ ಅಷ್ಟು ಹೊತ್ತಿಗೆ ಓಲೆಯ ಗಂಟು ಈಚೆ ಕೊಡಿ ಅಜ್ಜನವರೆ......

ನೀವು ಕೊಟ್ಟಿದ್ದೀರೆಂದು ಹೇಳಲಾರೆ ನಾನು, ನಾನು ತೆಗೆದುಕೊಂಡಿದ್ದೇನೆಂದೂ ಹೇಳಲಾರೆ, ಅಜ್ಜನವರೆ

ನೀವೂ ಕೊಟ್ಟಿದ್ದೇನೆಂದು ಹೇಳಬೇಡಿ ಓ ಎಂದಳು ಸಾಮು ಆಳ್ವೆದಿ......

ಓಲೆಯ ಆಳು ಓ ಸೆರಗೆಳೆದು ಓ ಗಂಟುಬಿಡಿಸಿ ಕೊಟ್ಟನು

ಓಲೆಯ ಅಕ್ಷರವನ್ನು ಓದಿದಳು......

ಚಂದ್ರಿಕೆ (ಸುರುಳಿ) ಮಡಚಿ ಒಂದು ಕೈಯಲ್ಲಿ ಮಾರುದ್ದ ಬಿಡಿಸಿದಳು......

ಮಾರುದ್ದ ಒಕ್ಕಯಿ (ಒಂದು ಕೈಯನ್ನು) ಬಿಟ್ಟಳು ಓ ನೆನಪಿನ ಓದು ಓದಿದಳು ಸಾಮೂ......

ಓಲೆಯನ್ನು ಗಂಟು ಕಟ್ಟಿದಳು......

ಮುದುಕನ ಸೆರಗಲ್ಲೇ ಗಂಟುಕಟ್ಟಿ ಓ ಓಲೆಯನ್ನು ಹಿಂತಿರುಗಿಸಿದಳು ಸಾಮು ಆಳ್ವೆದಿ

ನಾರಾಯಣ ಅಜ್ಜನವರೆ ಇದುವೇ ಕೊಟ್ಟರಾಡಿಯರಮನೆ......

ನಡು ಕೊಟ್ಟರಾಡಿ ಎಂದರೆ ಇದುವೇ ಅಜ್ಜನವರೆ......

ಕೊಡ್ಸರಾಳ್ವರ ಅರಮನೆ ಇದುವೇ ಓ ಎಂದಳು......

ಓಲೆಯ ಆಳು ಓ ಕೊಟ್ಟರಾಡಿಗೆ ಹೋದನು ಓ......

ಕೊಡ್ಸರಾಳ್ವರ ಕೈಗೆ ಸೆರಗಿನ ಕಟ್ಟುಬಿಚ್ಚಿ ಓ ಓಲೆಯ ಗಂಟು ಓ ಕೊಟ್ಟನಪ್ಪಾ......

ಓಲೆಯ ಗಂಟನ್ನು ನೋಡಿದರು ಓ ಬೇಗಬೇನೆ ಓದಿದರು......

ಚೆಂಬಿನ (ತಾಮ್ರದ) ಗಡಿಗೆಯಲ್ಲಿ ನೀರು ಹಿಡಿದುಕೊಂಡು ಓ ಆರೂವರೆ ಅಂಗಣ ಮೂರುವರೆ ಅಂಗಳ,

ಹಿರಿಯ ಅಂಗಳ ದಾಟಿಕೊಂಡು ಹೋಗುತ್ತಾಳೆ ಸಾಮು......

ಸಾಮು ಆಳ್ವೆದಿ ಹೋಗುವುದನ್ನು ನೋಡಿ......ಓ......

ಕೈಯಲ್ಲಿರುವ ಓಲೆಯನ್ನು ತೆಗೆದು ಗಂಡ ಅವರು......ಓ......

ಕೊಟ್ಟರಾಡಿಯ ಕೊಡ್ಸರಾಳ್ವ ಕುಂಡೆಯಡಿಗೆ ಹಾಕುವಾಗ ಹೇಳುತ್ತಾಳೆ ಸಾಮು......

ನಾರಾಯಣ ಮದುಮಗ ಯಾಕಾಗಿ ಅಡಗಿಸುತ್ತೀರಿ ಓ ಯಾಕಾಗಿ ಕುಂಡೆಯಡಿಗೆ ಹಾಕುತ್ತೀರಿ

ಏಳಿ ಮದುಮಗ (ಗಂಡ) ಹೋಗಿ ನೀವು......

ಕೊಟ್ಟರಾಡಿಯ ಅರಮನೆಗೆ ಬೋಳಮಲ್ಲಿಗೆಯಿಂದ ಸತ್ಯಮಹಾಲೋಕದ ಸಿರಿ ಕಳುಹಿಸಿದ ಓಲೆ ಇದೂ......

ಎಂದಳಪ್ಪಾ ಸಾಮು ಆಳ್ವೆದಿ......

ಅಷ್ಟು ಹೇಳುವುದನ್ನು ಕೇಳಿದರಪ್ಪಾ ಓ......

ಉತ್ತರಕ್ಕೆ ಉತ್ತರ ಓ ಕೇಳಿಸಿಕೊಂಡು
ಕೈ ಸುಸ್ತಾಗುವಷ್ಟು ಹೊಡೆದರು ಕಾಲು ಸುಸ್ತಾಗುವಷ್ಟು ಒದ್ದರು......
ಮೂಗಿನ ಮೂಗುತಿ ಚಿಮ್ಮಿ ಹೋಯಿತು, ಕುತ್ತಿಗೆಯ ಕಿಲಬಂದಿ ತುಂಡಾಗಿ ಹೋಯಿತು...
ಕೈಯ ಬಳೆ ಪುಡಿಯಾಗಿ ಹೋದುದನ್ನು ನೋಡಿದರಂತೆ
ನಾರಾಯಣ ಓ ನಾರಾಯಣ ಗಂಡುಸೂ ಓ......
ಕೊಟ್ಟರಾಡಿಯರಮನೇ ಓ ಇಳಿದರು ಅವರು ಓ ಬೋಳಮಲ್ಲಿಗೆಗೆ ಹೋದರು......
ಬೋಳಮಲ್ಲಿಗೆಗೆ ಹೋಗುವುದನ್ನು ನೋಡಿದಳು ಸಾಮು ಆಳ್ವೆದಿ......
ಏಳೇಳು ಹದಿನಾಲ್ಕು ಲೋಕದ ಕೋಪ ಕೋಪಿಸಿದಳು......
ಸಿಟ್ಟುಗೊಂಡು ತನ್ನ ಗಂಡ ಹೋಗುವುದನ್ನು ನೋಡಿದಳು......
ಕಾಶಿಗೆ ಹೋಗಿರುವ ಕಪಿಲೆ ದನದ
ತುಪ್ಪ ತೆಗೆದು (ದೈವದ) ಸ್ಥಾನ(ವಿರುವ) ಚಾವಡಿಯಲ್ಲಿ
ಚಿಕ್ಕಚಾವಡಿ ಸಿದ್ರ ಮಂಟಪದಲ್ಲಿ
ದನದ ತುಪ್ಪದಲ್ಲಿ ಕಂಚಿನ ಕಾಲುದೀಪದಲ್ಲಿ
ನಂದಾದೀಪ ಉರಿಸಿ ಬಿಟ್ಟಳು......
ನಾರಾಯಣ ದೇವರೆ ನಾರಾಯಣ ದೇವರು ಬಿರ್ಮೆರೆ......
ಅವಳಷ್ಟು ಸತ್ಯ ನನ್ನಲ್ಲಿಯೂ ಇದೆ......
ನನ್ನಷ್ಟು ಸತ್ಯ ಅವಳಲ್ಲಿಯೂ ಇರಬಹುದು......
ಇನ್ನು ಮದುಮಗಳಾಗಿ ಕೊಟ್ಟರಾಡಿಯರಮನೆಗೆ ಬಂದವಳಿಗೆ
ಬಲದ ಕಣ್ಣಿಗೆ ಬಾಣವಾಗಿ ನಾಟಬೇಕೆಂದು
ಬಾಳೆ ಹಾಕುವ ಬಾಕಿತಿಮಾರಲ್ಲಿ
ಕುಳಿತವಳು ಓ ಏಳಬೇಕಾದರೆ
ಕಣ್ಣಿಗೆ ಬಾಣವಾಗಿ ನಾಟಲಿ ಎಂದರು......ಓ......
ಅಂಗರಾಜಬರ್ಕೆ ಉಜೆಮಾರುಗುತ್ತೂ
ಕಡೆಂಗಾಡಿ ಬರ್ಕೆಗೆ ಓ ನಾನು ಹೋಗುತ್ತೇನೆಂದಳು ಸಾಮು ಆಳ್ವೆದಿ......
ಆನೆಬಾಗಿಲು ದಾಟಿದಳು ಸಾಮು ಆಳ್ವೆದಿ......
ಕಿರುಬಾಗಿಲಲ್ಲೆ ಇಳಿದಳಂತೆ ಇಂದೂ......
ಇಳಿದು ಸೆರಗು ಮುಸುಕು ಹಾಕಿಕೊಂಡು......
ತಲೆಗೆ ಮುಸುಕು ಹಾಕಿಕೊಂಡು ಕಣ್ಣಲ್ಲಿ ಕಣ್ಣೀರು ತೆಗೆದುಕೊಂಡು
ಹೋಗುತ್ತಾಳಪ್ಪಾ ಓ ಸಾಮು ಆಳ್ವೆದಿ......
ಹೋಗಿ ಹೋಗಿ ಓ ಹೋಗುತ್ತಾಳಪ್ಪಾ......
ಹೋದವಳು ಹೋಗುತ್ತಾಳೆ ಓ ಸಾಮುಆಳ್ವೆದಿ......ಓ......
ಅಂಗರಾಜೆಬರ್ಕೆ ಉಜೆಮಾರಗುತ್ತಾ ಓ ಕಡೆಂಗಾಡಿ ಬರ್ಕೆಯಲ್ಲಿ
ದೂರದಿಂದ ಬರುವುದನ್ನು ಮನೆಯ ಕಲ್ಲಪಡ್ಪಿರೆಯಲ್ಲಿ ಓ ಕುಳಿತು ನೋಡುತ್ತಾರೆ

ಅಣ್ಣ ಓ ಬಾಮಜು ಕೆಲ್ಲರು......
ನಾರಾಯಣ ದೇವರೆ......
ನನ್ನ ಭಾವನೂ ನನ್ನ ತಂಗಿಯೂ ಬರುವವರು......
ತಂಗಿಯು ಏನು ಒಬ್ಬಳೇ ಬರುತ್ತಿದ್ದಾಳಪ್ಪಾ......
ನನ್ನ ಭಾವ ಏನು ಕಾಣಿಸುವುದಿಲ್ಲವೆಂದರು......
ಇಣುಕಿ ಇಣುಕಿ ಓ ನೋಡುವಾಗ ಓ......
ಒಬ್ಬಳೆ ಮಗಳು ಓ ತಲೆಗೆ ಮುಸುಕು ಹಾಕಿಕೊಂಡು......
ಹರ್ಷದಿಂದ ಬಂದರೆ ನನ್ನ ತಂಗಿ ಸಾಮು ಆಳ್ವೆದಿ......
ಆನೆ ಬಾಗಿಲಿಂದ ಪ್ರವೇಶಿಸುತ್ತಾಳೆ......
ದುಃಖದಿಂದ ಬಂದರೆ ನನ್ನ ತಂಗಿ ಓ......
ಕಿರುಬಾಗಿಲಲ್ಲೇ ಓ ಹೋಗುವಳೆಂದರು......
ನಾರಾಯಣ ಓ ನಾರಾಯಣ ದೇವರೆ ಓ......
ಸಾಮು ಆಳ್ವೆದಿ ಬಂದಳಂತಪ್ಪಾ......
ಹೂಹಾಕುವ ಕುಂಬಳಗದ್ದೆ ಹಿಂದೆ ಬಿಟ್ಟಳು ಇಂದು ಹುರುಳಿ ಬಿತ್ತುವ ತಿಮಾರುಗದ್ದೆ
ಹಿಂದೆ ಹಾಕಿಕೊಂಡು ಬಾಳೆ ಹಾಕುವ ಬಾಕಿತಿಮಾರು ಗದ್ದೆ ಹಿಂದೆ ಹಾಕಿಕೊಂಡು
ಹಾಕಿರುವ ಏತ ತೋಡಿಸಿರುವ ಬಾವಿಯ ಸಮೀಪಕ್ಕೆ
ಚೆಂದೆಂಗು ಪದ್ಮಕಟ್ಟೆ ಹಿಂದೆ ಹಾಕಿಕೊಂಡು
ಆರೂವರೆ ಅಂಗಣ ಮೂರೂವರೆ ಅಂಗಳ ಹಿಂದೆ ಬಿಟ್ಟುಕೊಂಡು ಇಂದು
ಹಿರಿಯ ಅಂಗಳ ಹಿಂದೆ ಬಿಟ್ಟುಕೊಂಡು......
ಕಿರು ಬಾಗಿಲಲ್ಲೆ ಹೊಕ್ಕಳು ಓ ಸಾಮೂ......
ಓ ಸಾಮು ಆಳ್ವೆದಿ ಹೊಕ್ಕಳು......ಓ......
ನಾರಾಯಣ ಓ ನಾರಾಯಣ ತಂಗಿಯೇ......ಓ......
ಏನು ಬಂದೆಯೆಂದು ಓ ಅಣ್ಣನವರು
ಬಾಮು ಕೆಲ್ಲರು ಓ ರಮಿಸಿ ಕೇಳುತ್ತಾರೆ......ಓ......
ಕೊಟ್ರಾಡಿಯ ಅರಮನೆಯಲ್ಲಿ ಬರಬಂದರು ಓ......
ಅಂಗಜೆಬರ್ಕೆ ಉಜೆಮಾರಗುತ್ತಲ್ಲಿ ಓ ಬರಬರಲಿಲ್ಲ ನಿನಗೆ......
ಏನು ಹೇಳಿದರು ಓ ಏನು ಬಿಟ್ಟರೆಂದೂ......
ನನ್ನಲ್ಲಿ ಹೇಳೆಂದು ಓ ಕೇಳುತ್ತಾರೆ ಬಾಮು ಕೆಲ್ಲರು......
ಕಣ್ಣಲ್ಲಿ ಕಣ್ಣೀರು ಓ ತೆಗೆಯುತ್ತಾ ಓ ಹೊಟ್ಟೆಯಲ್ಲಿ ಸಂಕಟಪಡುತ್ತಾ
ನಾರಾಯಣ ಅಣ್ಣನವರೆ ಓ ನಾರಾಯಣ ಅಣ್ಣನವರೆ
ವರ್ಷ ಕಳೆದು ತಿಂಗಳ ಅನಂತರ ಓ
ಕೊಡಬಾರದ ಶಿಕ್ಷೆ ಓ ಕೊಡುತ್ತಿದ್ದಾರೆ......
ತಿನ್ನಬಾರದ ಶಿಕ್ಷೆಯನ್ನು ನಾನು ತಿನ್ನು(ಅನುಭವಿಸು)ತ್ತಿದ್ದೇನೆ......

ಬೋಳಬಾರಿ ಅರಮನೆಯಲ್ಲಿ ಬೋಳಬಾರಿ ಚತ್ತೇರಿಗಳು
ಕರಿಯ ಕಾಸಿಂಗರಾಯರು ಬೊಳಿಯ ದೇಸಿಂಗರಾಯರಿಗೆ
ಅವರ ತಂಗಿ ಓ ಸತ್ಯಮಹಾಲೋಕದ ಸಿರಿ ಇದ್ದಾಳೆ......ಓ......
ಅವಳಾದರೊ ಗಂಡನನ್ನು ಬಿಟ್ಟು
ಬತ್ತ ಕಟ್ಟಿಸಿ ಓ ಬರ ಹೇಳಿಸಿ
ಸತ್ಯನಾಪುರದರಮನೆ ಸುಟ್ಟು ಬೂದಿ ಮಾಡಿಸಿಕೊಂಡು
ಬತ್ತಕೇರಿ ಬಸ್ರೂರನ್ನು ಮಾಯ ಮಾಡಿಸಿಕೊಂಡು
ಜನನಕ್ಕೆ ಬಂದ ತನ್ನ ಮಗನನ್ನು
ಮಾಯ ಮಾಡಿಸಿಕೊಂಡು ದಾರುವನ್ನು ಮಾಯಮಾಡಿಸಿ
ಬಂದವಳು ಓ ಇದ್ದಾಳೆಂದೂ ಓ ಹೇಳುತ್ತಾರಪ್ಪಾ ಓ ಸಾಮು ಆಳ್ವೆದಿ......
ಅಷ್ಟು ಹೊತ್ತಿಗೆ ಹೇಳುತ್ತಾರಂತೆ ನಾರಾಯಣ ಮಗ ನಿನಗೆ ಓ
ನಿನಗೆ ಓ ಮನಸ್ಸಿಲ್ಲದಿದ್ದರೆ ಓ ಹೋಗುವುದು ಬೇಡವೆಂದು ಓ ಅಣ್ಣ
ಕೂತುಕೊಳಿಸಿದರು ಅಷ್ಟು ಹೊತ್ತಿಗೆ ಒಂದಲ್ಲ ಒಂದು ದಿನದಲ್ಲಿ ಕೊಟ್ರಾಡಿಯ
ಅರಮನೆಯಲ್ಲಿ ಹೇಳುತ್ತಾರೆ ಓ ಕೊಡ್ಸರಾಳ್ವರು......
ಓ ಬೋಳುಮಲ್ಲಿಗೆಗೆ ಹೋಗಿ ಓ......
ಇಂದಾದರೋ ಇಂದು ನನ್ನ ಮಡದಿ ಮದುಮಗಳು ಇಲ್ಲವಂತೆ,
ಹೊರಟುಹೋಗಿದ್ದಾಳೆಂದು ಓ ಹೇಳುತ್ತಾರೆ
ಓ ಕೊಟ್ಟರಾಡಿಯ ಕೊಡ್ಸರಾಳ್ವರು......
ಕೊಡ್ಸರಾಳ್ವರು ಹೇಳುವಾಗಂತೆ ಇಂದು ಬೋಳಬಾರಿ ಚತ್ತೇರಿಗಳು ಕರಿಯ ಕಾಸಿಂಗ ರಾಯರು
ಬೊಳಿಯ ದೇಸಿಂಗರಾಯರಂತೆ ಮದುವೆಗೆ ದಿನಮಾನ ನೋಡಬೇಕೆಂದರಂತೆ ಇಂದು....
ಒಳ್ಳೆಯ ದಿನ ಓ ಒಳ್ಳೆಯ ವಾರ ಓ ಇಟ್ಟರಂತೆ ಓ......
ಈ ಬರುವ ಗುರುವಾರದ ಆನಂತರ ಬರುವ ಗುರುವಾರಕ್ಕೆ ಓ ಮದುವೆಯ ಕಾರ್ಯವೆಂದರು......
ಇಂದಾದರೋ ಅಷ್ಟು ಹೇಳುವುದನ್ನು ಕೇಳಿದರಂತೆ ಇಂದು ಬೋಳದರಮನೆಯಿಂದ ಇಂದು ಓ
ಮದುಮಗಳ ಶೃಂಗಾರ ಮಾಡಿಸಿಕೊಂಡು ಓ ದಿಬ್ಬಣ ಹೊರಟಿತಪ್ಪಾ......
ಇಂದಾದರೋ ಇಂದು ಓ ದಿಬ್ಬಣ ಹೊರಟದ್ದು ಇಂದು ಕೊಟ್ರಾಡಿಯ ಅರಮನೆಯಲ್ಲಿ
ಓ ಬಾಳೆ ಹಾಕುವ ಬಾಕಿತಿಮಾರಿನಲ್ಲಿ......
ಬಾಳೆಹಾಕುವ ಬಾಕಿತಿಮಾರಿನಲ್ಲಿ ಇಂದು ಬಡ್ತಿಮಾರ್ ಹತ್ತುವಾಗಂತೆ ಇಂದು ನೆಂಟರು
ಓ ಕುಳಿತುಕೊಳ್ಳುವಾಗ......
ಸಿರಿಯಾದರೋ ಒಂದು ರಾವಿನ್ನ ಗೆಜ್ಜೆಕತ್ತಿ ಬೆನ್ನ ಮಡಿಲಿಗೆ ಕೈಹಾಕಿದಳಂತೆ ರಾವಿನ್ನ ಗೆಜ್ಜೆಕತ್ತಿ

ತೆಗೆದಳಂತೆ ಹನೆ ಛತ್ರ ಅಡಿಗೆ ಹಾಸಿದಳಂತೆ ಇಂದು ಓ ಸಿರಿಕುಳಿತಳು......ಓ......
ಸಿರಿ ಕುಳಿತುಕೊಳ್ಳುವಾಗ ಓ ಹೇಳುತ್ತಾರೆ......
ಏಳಮ್ಮ ಸಿರಿ ನಾನು ಹೋಗುವಾ ಓ ದಿಬ್ಬಣ ಹೋಗುವಾ ಓ ಧಾರೆಯ ಮುಹೂರ್ತಕ್ಕೆ ವೇಳೆ ಹೋಗುತ್ತದೆ ಓ ಎಂದು ಹೇಳುತ್ತಾರೆ ಚತ್ತೇರಿಗಳು......ಓ......
ಕರಿಯ ಕಾಸಿಂಗ ರಾಯರು ಓ ಬಿಳಿಯ ದೇಸಿಂಗರಾಯರು......ಓ......
ನಾರಾಯಣ ಅಣ್ಣಂದಿರೆ ಕೇಳಿದ್ದೀರೆ ನೀವೂ ನಾನು ಬರಬೇಕಾದರೆ ಇಂದೂ
ನನ್ನ ಅಕ್ಕ ಓ ಸಾಮು ಆಳ್ವೆದಿ ಬಲದ ಕೈಯಲ್ಲಿ ಹಿಡಿಯಬೇಕು ಓ ನಾನೇಳಬೇಕು
ಆನಂತರ ಧಾರೆ ಆಗಬೇಕೆಂದು ಓ ಹೇಳುತ್ತಾಳೆ ಸಿರಿ......
ಓ ಸತ್ಯಮಹಾಲೋಕದ ಸಿರಿ ಓ ಹೇಳುತ್ತಾಳೆ......
ಅಷ್ಟು ಹೊತ್ತಿಗಂತೆ ಇಂದು ಅಯ್ಯಯ್ಯೋ ಪಾಪವೇ ಎಲ ಎಲ ದೋಷವೇ
ರಾಮ ಕಾಲವೇ ಬ್ರಹ್ಮಹತ್ಯೆ ಆಯಿತಲ್ಲ ಇಂದು......
ಏನು ಮಾಡುವುದು ಯಾರಲ್ಲಿ ಹೇಳುವುದೆಂದು ಹೇಳುತ್ತಾರೆ ಕೊಟ್ಟರಾಡಿಯ ಕೊಡ್ಸರಾಳ್ವರು......
ಏನು ಮಾಡುವುದಪ್ಪ ಓ ಏನು ಬಿಡುವುದು ನಾನು......
ಕೈ ಬಳಲುವಷ್ಟು ಹೊಡೆದಿದ್ದೇನೆ ಇಂದು ಕಾಲು ಬಳಲುವಷ್ಟು ಒದ್ದಿದ್ದೇನೆ ಇಂದು
ಮೂಗಿನ ಮೂಗುತಿ ಚಿಮ್ಮಹೋಗಿದೆಯಂತೆ ಇಂದು ಕುತ್ತಿಗೆಯ ಕೆಲಬಂದಿ ತುಂಡಾಗಿ ಹೋಗಿದೆಯಂತೆ
ಕೈಯ ಕೊಂದೆ ಬಳೆ ಪುಡಿಯಾಗಿ ಹೋಗಿದೆಯಂತೆ ಇಂದು......
ಕಾಲುಂಗುರ ಕಳಚಿ ಹೋಗಿದೆಯಂತೆ ಹೇಗೆ ಬರಲು ನಾನು ಹೇಳುವುದೆಂದು ಓ ಹೇಳುತ್ತಾರಪ್ಪಾ
ಓ ಕೊಟ್ಟರಾಡಿಯ ಓ ಕೊಡ್ಸರಾಳ್ವರು......
ಓ ಕೊಟ್ಟರಾಡಿಯ ಕೊಡ್ಸರಾಳ್ವರು ಓ ಹೇಳುತ್ತಾರಪ್ಪಾ......ಓ......
ಇಂದಾದರೋ ಇಂದು ಅಷ್ಟು ಹೇಳುವುದನ್ನು ಕೇಳಿದಂತೆ ಇಂದು ಒಬ್ಬ ಆಳಿಗಂತೆ
ಕೊಟ್ರಾಡಿಯರಮನೆಯಲ್ಲಿ ಹೊಟ್ಟೆಗೆ ಅನ್ನ ದಾರಿಗೆ ಸಂಬಳ ಓ ಕೊಟ್ಟರಂತೆ ಓ......
ಇಲ್ಲಿಂದ ಹೋದ ಆಳು ಓ ಅಂಗರಾಜೆ ಉಜೆಮಾರಗುತ್ತು ಓ ಕಡೆಂಗಡಿ ಬರ್ಕೆಗೆ ಓ ಹೋಗು ಆಳೇ ಎಂದರು......
ಹೋಗುವ ಆಳಿಗೆ ಓ ಹೊರಡುವಾಗ ಹೇಳಿದರು......ಓ......
ಎಲ್ಲಿಂದ ಬಂದೆ ಆಳು ಓ ಎಲ್ಲಿಗೆ ಹೋಗುವುದೆಂದೂ ಓ ಕೇಳುವಾಗ ಹೇಳುತ್ತಾರೆ ಓ...... ನಾರಾಯಣ ಓ ನಾರಾಯಣಾ......
ಒಬ್ಬ ಆಳನ್ನು ಓ ಹೋದ ಆಳಿನಲ್ಲಿ ಎಲ್ಲಿಂದ ಬಂದದ್ದು ಆಳೇ
ಎಲ್ಲಿಗೆ ಹೋಗುವುದೆಂದು ಓ ಬಾಮುಕೆಲ್ಲರು ಕೇಳುತ್ತಾರಂತೆ......
ಬಾಮು ಕೆಲ್ಲರು ಕೇಳುವಾಗ ಓ ಹೇಳುತ್ತಾರೆ ಓ......
ಕೊಟ್ಟರಾಡಿಯ ಅರಮನೆಯಿಂದ ಬಂದದ್ದು......ಓ......

ಅಕ್ಕನವರನ್ನು ಕರೆದುಕೊಂಡು ನೀವ ಬರಬೇಕೆಂದು ಓಲೆ ಬರೆದು ಓ ಕಳುಹಿಸಿದ್ದಾರೆ......
ನಾನು ಹೇಳುವುದಿಲ್ಲ ಓಲೆ ತಿಳಿಸುತ್ತದೆ ಎಂದರು......
ಅಷ್ಟು ಹೊತ್ತಿಗೆ ಓಲೆಯನ್ನು ಮಾರುದ್ದ ಬಿಡಿಸಿದರು
ನೆನಪಿನ ಓದು ಓದಿದರು ಕೆಲ್ಲರು......ಓ......
ಓಲೆಯನ್ನು ಓದಿ ಹೇಳಿದರು......
ನಾರಾಯಣ ತಂಗಿ ಸಾಮು ಆಳ್ವೆದಿ
ನನ್ನ ಪ್ರೀತಿಯ ಭಾವ ಓ ಪ್ರೀತಿಯ ಭಾವಮೈದ
ಓಲೆ (ಕಳುಹಿಸಿ) ಬಿಟ್ಟಿದ್ದಾರೆ ಮಗ ಏನು ಮಾಡಬೇಕು......
ಏನು ಬಿಡಬೇಕೆಂದು ಕೇಳುವಾಗ ಹೇಳುತ್ತಾಳೆ......
ನಾರಾಯಣ ಅಣ್ಣನವರೆ ಪ್ರೀತಿಯ ಭಾವ
ಪ್ರೀತಿಯ ಭಾವಮೈದ ಹೌದಾದರೆ ಬೇರೊಂದು ಹೆಣ್ಣು ಓ ನೋಡುವುದಿಲ್ಲ......
ನಿಮ್ಮ ತಂಗಿಯನ್ನು ಓ ಬೀದಿಪಾಲು ಮಾಡಬೇಕು
ಮಾರ್ಗದಲ್ಲಿ ಹಾಕಬೇಕೆಂದು ಎಣಿಸುವುದಿಲ್ಲ ಅಣ್ಣನವರೆ......
ನಾನು ಹೋಗಲಾರೆ ಓ ನೀವು ಹೋಗಿ ಎಂದು
ತಂಗಿ ಉತ್ತರ ಅಣ್ಣನಿಗೆ ಕೊಡುತ್ತಾಳಂತೆ......
ನಾರಾಯಣ ಆಳೇ ಅವಳು ಬರುವುದಿಲ್ಲವಂತೆ
ನಾನಾದರೋ ಬಂದು ಏನು ಮಾಡುವುದೆಂದು
ಹೋದ ಆಳನ್ನು ಮರಳಿ ಕಳುಹಿಸಿಕೊಟ್ಟರೂ......
ಆಳು ಹೋಗುವಾಗ ದಾರಿಗೆ
ಬೋಳಬಾರಿ ಚತ್ತೇರಿಗಳು ನೋಡುತ್ತಾರಪ್ಪಾ......
ಕರಿಯಕಾಸಿಂಗ ರಾಯರು ಬಿಳಿಯ ದೇಸಿಂಗರಾಯರು......
ಕೊಟ್ಟರಾಡಿಯ ಕೊಡ್ಸರಾಳ್ವರು ಇಣಿಕಿ ಇಣಿಕಿ ನೋಡುವಾಗ ಹೇಳುತ್ತಾರೆ......
ನಾರಾಯಣಾ ಓ ನಾರಾಯಣಾ......
ಸಾಮುಆಳ್ವೆದಿ ಓ ಬರುವುದಿಲ್ಲಂತಪ್ಪಾ......ಓ......
ಓಲೆಯ ಆಳು ಓ ಹೇಳಿದನಂತೆ......
ನಾರಾಯಣೋ ನಾರಾಯಣ ಆಳೇ......ಓ......
ಇದೆಂದು ಆಳು ಓ ಹೋಗಿ ಮತ್ತೆ
ಇನ್ನೊಂದು ಓಲೇ ಓ ಕೊಂಡುಹೋಗೂ......
ಒಂದು ಬಾರಿಗೆ ಮಾನ ಉಳಿಸಬೇಕು ಮರ್ಯಾದೆ ಉಳಿಸಬೇಕೆಂದು
ಹೇಳಿಬಿಡೆಂದು ಓ ಹೇಳುತ್ತಾರೆ ಕೊಡ್ಸರಾಳ್ವರು......ಓ......
ನಾರಾಯಣಾ ಓ ನಾರಾಯಣಾ......
ಆಳು ಹೋಗುವಾಗ ಓ ಕಲ್ಲಿನ ಮನೆಯ ಮುಂಭಾಗದಲ್ಲಿ ಕುಳಿತುಕೊಂಡು ಓ......
ಕುಳಿತುಕೊಂಡ ಕೆಲ್ಲರು ಓ ಬಾಮು ಕೆಲ್ಲರು ಏಳಲಿಲ್ಲಾ......ಓ......

ಏನು ಬಂದೀ ಆಳೇ ಎಂದು ಕೇಳಲು......
ಒಂದು ಬಾರಿಗೆ ಮಾನ ಉಳಿಸಬೇಕಂತೆ ಕಾಪಾಡಬೇಕಂತೆ
ನಿಮ್ಮ ತಂಗಿಯನ್ನು ಕರೆದುಕೊಂಡು ನೀವು ಬರಬೇಕೆಂದು ಹೇಳಲು ಬಾಮು ಕೆಲ್ಲರು...
ನಾರಾಯಣ ಸಹೋದರಿಯೇ ಓ ಸಾಮು ಆಳ್ವೆದಿ
ಕೊಟ್ರಾಡಿಯ ಅರಮನೆಯಲ್ಲಿ ಬರ ಬಂದರೂ ಮಗ
ಅಂಗರಾಜೆ ಉಜೆಮಾರಗುತ್ತಾ ಕಡೆಂಗಾಡಿ ಬರ್ಕೆಯಲ್ಲಿ
ನಿನಗೆ ಬರ ಬಾರದಂತೆ ನಾನಿದ್ದೇನೆಂದು
ಕೈಮುಟ್ಟಿ ಅಣ್ಣ ಭಾಷೆ ಕೊಡುವಾಗ ಹೇಳುತ್ತಾಳೆ......
ಅಯ್ಯಯ್ಯೋ ಅಣ್ಣನವರೆ ಹಟ ಮಾಡಬೇಡಿ ಓ ಹಗೆ ಸಾಧಿಸಬೇಡಿ ನನ್ನಲ್ಲಿ ಓ......
ನಾನು ಹೋಗಲಾರೆ ಓ ನಾನು ಬರಲಾರೆನೆಂದು ಓ ಹೇಳುತ್ತಾಳೆ ಸಾಮು ಆಳ್ವೆದಿ......
ಅಷ್ಟು ಹೊತ್ತಿನ ಹೋದ ಆಳು ಹಿಂತಿರುಗಿ ಬರುವಾಗ
ಕೊಟ್ಟರಾಡಿಯ ಅರಮನೆಯಲ್ಲಿ ಕೊಟ್ಟರಾಡಿ ಕೊಡ್ಸರಾಳ್ವರು
ಕಸಿಂಗ ಕಾಸಿಂಗರಾಯರು ಬಿಳಿಯ ದೇಸಿಂಗರಾಯರು ಓ
ಮೂರು ಜನ ಓ ದಾರಿಗೆ ಕಣ್ಣು ಬೀದಿಗೆ ದೃಷ್ಟಿ ಹಾಕುತ್ತ
ಓ ಎದುರಿಗೆ ಬರುತ್ತಾರೆ......
ನಾರಾಯಣ ಆಳ್ವರೆ......
ನಿಮ್ಮ ಮದುವೆಯ ಕಾಟ ನನಗೆ ಬೇಡಪ್ಪಾ
ನಿಮ್ಮ ಒಕ್ಕಲು ನನಗೆ ಬೇಡಪ್ಪ
ನನಗೆ ದಾರಿಯ ಸಂಬಳ ಬೇಡ
ಹೊಟ್ಟೆಯ ತುಂಬ ಆಹಾರ ಬೇಡಪ್ಪ ನನಗೆ
ನಿಮ್ಮ ಮದುಮಗಳು ಸಾಮುಆಳ್ವೆದಿ ಕೈಯಿಂದ
ಬೈಗಳು ತಿನ್ನಲು ನನ್ನಿಂದ ಸಾಧ್ಯವಿಲ್ಲ
ಎಂದು ಓಲೆಯ ಆಳು ಕೈಮುಗಿದು ಶರಣುಹಾಕಿ ಹೇಳುತ್ತದಪ್ಪಾ......
ಅಷ್ಟುಹೊತ್ತಿಗೆ ಮೂರನೇ ಆಳಿಗೆ ಹೇಳುತ್ತಾರೆ......
ದಮ್ಮಯ್ಯ ದೇವರೆ ದಕ್ಕಯ್ಯ ದೇವರೆ ಎಂದು ಹೇಳಿದರಂತೆ ಇಂದು......
ಕೊಟ್ಟರಾಡಿಯ ಕೊಡ್ಸರಾಳ್ವರು ಇರುವ ಉಡುಗೆಯಲ್ಲಿಯೇ
ಮದುಮಗನ ಪೋಷಾಕಿನಲ್ಲಿ ಓ
ಕೊಟ್ಟರಾಡಿಯ ಅರಮನೆಯನ್ನು ಓ ಆಳ್ವರು ಓ ಇಳಿದರಂತೆ......ಓ......
ಓಡೋಡುತ್ತಾ ಓ ಹೋಗುತ್ತಾರಂತೆ......
ಹೋಗುವಾಗ ಓ ಹಾಕಿರುವ ಏತದಲ್ಲಿ ಓ ತೋಡಿಸಿರುವ ಬಾವಿಯಿಂದ ಆಕಾಶದೆತ್ತರದ
ಏತದಲ್ಲಿ ಓ ಪಾತಾಳದಲ್ಲಿರುವ ನೀರನ್ನು ತೆಗೆಯುತ್ತಿದ್ದಾಳೆ ಓ ಸಾಮು ಆಳ್ವೆದಿ......
ನಾರಾಯಣ ಅಣ್ಣನವರೆ ಓ ಅಣ್ಣನವರೆ ಕೇಳಿದ್ದೀರೋ ಓ......

ನಿಮ್ಮ ಅಳಿಯ ಓ ಆಳ್ವರು ಬರುತ್ತಿರುವ ಅಂದಾ
ಓಡೋಡುತ್ತಾ ಬರುವುದನ್ನು ನೋಡಿ ಅಣ್ಣನವರೆ......
ಕಾಲಿನ ಮಣ್ಣು ತಲೆಗಾಗುತ್ತಿದೆ ಅಣ್ಣನವರೆ......
ತಲೆಯ ಬೆವರು ಕಾಲಿಗಾಗುವಂತೆ
ತಲೆಯ ಬೆವರು ಕಾಲಿಗಾಗುವಂತೆ
ಓಡುತ್ತಾ ಬರುವ ಅಂದ ನೋಡಿ ಅಣ್ಣನವರೆ ಎಂದು ಹೇಳುತ್ತಾಳೆ ಸಾಮು ಓ ಆಳ್ವೆದಿ......
ಇಂದಾದರೋ ಇಂದು ದೂರದಿಂದ ಬರುವುದನ್ನು ನೋಡಿದರಂತೆ ಇಂದು ಬಾಮು ಕೆಲ್ಲರು......
ಇಂದು ಗಿಂಡಿಯಲ್ಲಿ ಹಾಲು ತಂಬಿಗೆಯಲ್ಲಿ ನೀರು ಹಿಡಿದು ಓ ಆಳ್ವರಿಗೆ ಕೊಡುವಾಗ
ಆಳ್ವರು ಗಿಂಡಿಯ ನೀರಿಗೆ ಕೈ ಕೊಡುವುದಿಲ್ಲ......ಓ......
ತಂಬಿಗೆಯ ನೀರಿಗೆ ಕೈಕೊಡುವುದಿಲ್ಲಪ್ಪಾ ಗಿಂಡಿಯ ಹಾಲಿಗೆ ಕೈಕೊಡುವುದಿಲ್ಲ......
ನಾರಾಯಣ ಭಾವನವರೆ ಓ ದಮ್ಮಯ್ಯ ಭಾವನವರೆ......ಓ......
ದಕ್ಕಯ್ಯ ಭಾವನವರೆ ಇಂದು ಸಾವಿರ ತಪ್ಪಿರಬಹುದು ಸರ್ವವೂ ತಪ್ಪಾಗಿರಬಹುದು ತಪ್ಪನ್ನು ಒಪ್ಪು ಮಾಡಿ ಕೊಟ್ಟುಬಿಡಿ......
ನಿಮ್ಮ ತಂಗಿ, ಓ ನನ್ನ ಕೈಧಾರೆಯ ಮದುಮಗಳನ್ನು ಕರೆದುಕೊಂಡು......
ನೀವು ಬನ್ನಿಯಪ್ಪಾ ಎಂದು ಓ ಹೇಳುತ್ತಾರಲ್ಲ......
ಬಾಮು ಕೆಲ್ಲರು ಓ ಅಡ್ಡ ಬಿದ್ದು ಓ
ಸೋಲಿಗೆ ಶರಣು ಓ ಸಲ್ಲಿಸುತ್ತಾರೆ......
ನಾರಾಯಣ ಓ ನಾರಾಯಣ ತಂಗಿಯೇ ಓ......
ನನ್ನ ಭಾವನವರು ಓ ನಿನ್ನ ಮದುಮಗ(ಗಂಡ)ನಂತೆ ಇಂದು ಕಾಲಿಗಡ್ಡಬಿದ್ದು ಸೋಲಿಗೆ ಶರಣು ಸಲ್ಲಿಸುತ್ತಾರಂತೆ ಇಂದು......
ಒಂದು ಬಾರಿಗೆ ಹೋಗಿ ಬರುವ ಎಂದು ಓ ಅಣ್ಣ ಬಾಮು ಕೆಲ್ಲರು ಹೇಳಿದರು......
ದಮ್ಮಯ್ಯ ಸಾಮೂ ದಕ್ಕಯ್ಯ ಸಾಮು ಆಳ್ವೆದೀ......ಓ......
ನಿನ್ನನ್ನು ಬಿಟ್ಟು ಹಾಕಲಾರೆ ನಾನೂ ನನ್ನ ಕೈಧಾರೆಯ ಮದುಮಗಳ ನೀನೇ......
ಒಂದು ಬಾರಿಗೆ ಬಾ ಓ ಬಂದುಬಿಡೆಂದು ಗಂಡ ಹೇಳುತ್ತಾರಂತೆ......
ಕೊಟ್ಟರಾಡಿಯ ಕೊಡ್ಸರಾಳ್ವರು ಹೇಳುತ್ತಾರೆ......
ಕೊಟ್ಟರಾಡಿಯ ಕೊಡ್ಸರಾಳ್ವ ಹೇಳಲು ಹೇಳುತ್ತಾಳೆ......
ನಾರಾಯಣ ಮದುಮಗ (ಗಂಡ) ನಾರಾಯಣ ಮದುಮಗ (ಗಂಡ)......
ಕೈ ದಣಿಯುವಷ್ಟು ಹೊಡೆಯುವಾಗ ಕಾಲು ದಣಿಯುವಷ್ಟು ಒದೆಯುವಾಗ ಮದುಮಗ (ಗಂಡ)......
ಕುತ್ತಿಗೆಯ ಕಿಲಬಂದಿ ಜಜ್ಜಿಹೋಗುವಷ್ಟು ಓ ಮೂಗಿನ ನತ್ತು ಚಿಮ್ಮುವಷ್ಟು
ಕೈಯ ಬಳೇ ಓ ಪುಡಿಯಾಗುವಷ್ಟು ಕಾಲುಂಗುರ ಕಿತ್ತು ಹೋಗುವಷ್ಟು
ತುಳಿಯುವಾಗ ನನ್ನ ಮದುಮಗಳು ಸತ್ಯದ ಮದುಮಗಳು ಸಾಮ ಆಳ್ವೆದಿ ಎಂದು

ಅಂದು ಹೋಗಲಿಲ್ಲವಲ್ಲವೇ ಓ ಮದುಮಗ(ಗಂಡ)ನೇ ಕೇಳಿದಿರೆ......ಓ......
ಇಂದಲ್ಲದಿದ್ದರೆ ನಾಳೆಯೂ ಓ ಕೊನೆಯ ಮದುಮಗಳು......ಓ......
ಕೈಹಿಡಿದ ಮದುಮಗಳು (ಹೆಂಡತಿ) ನಾನೇ ನಿಮಗೆಂದಳು......ಓ......
ಮದುಮಗಳ ಶೃಂಗಾರ ಸಾಮು ಆಳ್ವೆದಿ ಆದಳು......
ಅಂಗರಾಜೆ ಉಜೆಮಾರಗುತ್ತು ಕಡೆಂಗಾಡಿ ಬರ್ಕೆಯಿಂದಾ ಬಾಮು ಕೆಲ್ಲರೂ
ಸಾಮು ಆಳ್ವೆದಿಯೂ ಕೊಟ್ಟರಾಡಿ ಕೊಡ್ಸರಾಳ್ವರೂ ಬಂದರು......
ಬಂದು ಬಂದು......ಓ......
ಬಾಳೆ ಹಾಕುವ ಬಾಕಿತಿಮಾರಿಗೆ ಬಂದರು......
ನಾರಾಯಣ ಓ ನಾರಾಯಣ......ಓ......ನಾರಾಯಣ......
ಇಂದಾದರೋ ಹೋದರಂತೆ ಇಂದು ಕೊಟ್ರಾಡಿಯ ಅರಮನೆ ಹೊಕ್ಕರಂತೆ ಚಾವಡಿಗೆ
ಹೋದರಂತೆ ಹೊತ್ತಿಸಿಟ್ಟ ನಂದಾದೀಪವನ್ನು ನಂದಿಸಿದರಂತೆ ಇಂದು
ಸಾನೇರಿ (ದೈವದ ಸ್ಥಾನ?) ಚಾವಡಿಯಿಂದ ಓ ಇಳಿದರು ಓ......
ಸಾಮು ಆಳ್ವೆದೀ ಇಳಿದರು......
ಕೊಟ್ರಾಡಿಯ ಬೂಡು ಇಳಿದರಂತೆ ಬಾಳೆ ಹಾಕುವ ಬಾಕಿತಿಮಾರಿಗೆ ಬಂದೂ......
ಬಾಕಿತಿಮಾರಿಗೆ ಬಂದರಂತೆ ಇಂದು ಓ ಸಿರಿಗೆ ಹೇಳಿದರು......
ನಾರಾಯಣ ನಾರಾಯಣ ಸಿರಿಯೇ ಓ......
ಮದುವೆಯಾಗಬೇಕೆಂದೇ ಆಗಿದ್ದಿ ನೀನು ಓ ಬರಬೇಕೆಂದೇ ಬಂದು ನೀನಾದರೋ
ಯಾಕಾಗಿ ಹನೆ ಛತ್ರ ಅಡಿಗೆ ಹಾಕಿ ಕುಳಿತುಕೊಂಡಿದ್ದೀಯ......
ಏಳು ಬಾ ಎಂದರು ಬಲದ ಕೈ ಹಿಡಿದರು ಸಾಮುಆಳ್ವೆದಿ ತಂಗಿ ಸಿರಿಯನ್ನೂ......
ಬಲದ ಕೈ ಹಿಡಿಯಲು ಬಡಕ್ಕನೆದ್ದಳು ದಿಡಕ್ಕನೆ ನಿಂತಳು ಇಂದು ಸಾಮು ಆಳ್ವೆದಿ
ಸಿರಿಯನ್ನು ಕೈಯಲ್ಲಿ ಹಿಡಿದುಕೊಂಡು ಹಾಕಿರುವ ಚಪ್ಪರಕ್ಕೆ ಕೊಟ್ಟರಾಡಿಯ
ಅರಮನೆಯನ್ನು ಹೊಕ್ಕರಂತೆ ಇಂದೂ......
ಹಾಕಿರುವ ಚಪ್ಪರಕ್ಕೆ ಓ ಹೋಗಿ ಓ......
ಕೈ ಹಿಡಿದ ಗಂಡನಿಗೆ ಓ ಧಾರೆ ಮಾಡಿದಳು ಓ ಸಾಮು ಆಳ್ವೆದೀ......ಓ......
ಕೊಟ್ಟರಾಡಿಯ ಅರಮನೆಯಲ್ಲಿ ದಾರೆದಸ್ತು ಆಯಿತು ಇಂದೂ......
ಸೇಸೆ ಇತ್ಯಾದಿ ನೆರವೇರಿಸಿದರು ಇಂದು ಕೊಟ್ಟರಾಡಿಯ ಅರಮನೆಯಲ್ಲಿ ಓ......
ಬಂದ ನೆಂಟರು ಓ ಬೋಳದರಮನೆಗೆ ಓ ಬೋಳಮಲ್ಲಿಗೆಗೆ ಹೋದರಂತೆ......ಓ......
ಬೋಳಬಾರಿ ಚತ್ತೇರಿಗಳು......
ಕರಿಯ ಕಾಸಿಂಗರಾರಯು ಬಿಳಿಯ ದೇಸಿಂಗರಾಯರು......
ಇಂದಾದರೂ ಇಂದು ಕೊಟ್ಟರಾಡಿಯ ಅರಮನೆಯಲ್ಲಿ ಇಂದು ಸಾಮು ಆಳ್ವೆದಿಯಂತೆ
ಇಂದು
ಸತ್ಯಮಹಾಲೋಕದ ಸಿರಿ ಹಾಗೂ ಕೊಟ್ಟರಾಡಿಯ ಕೊಡ್ಸರಾಳ್ವರಂತೆ ಇಂದು
ಎರಡು ಮದುಮಗಳಂದಿರು (ಹೆಂಡಿರು) ಒಬ್ಬ ಮದುಮಗ (ಗಂಡ) ಜೊತೆಜೊತೆಗೆ

ಹಾಲಾಗಿ, ಹೆಪ್ಪುಗಟ್ಟುತ್ತಾ
ನೀರಾಗಿ ನಿಲ್ಲುತ್ತಾ ಕಾಲಕಳೆಯುತ್ತಾ ಓ ಇದ್ದಾರೆ......
ನಾರಾಯಣಾ ಓ ನಾರಾಯಣಾ ಓ......
ಮೇಲೆ ಮೇಲಿನ ಲೋಕ ಒಬ್ಬ ಬೆರ್ಮ(ಬ್ರಹ್ಮ)ರ ಪಾದಕ್ಕೆ ಓ ಒಂದು ನಾರಾಯಣ......
ನಾರಾಯಣಾ ಓ ನಾರಾಯಣಾ......
ಕೆಳೆ ಸಿರಿಬಾರಿ ಲೋ ಸಿರಿಪಾದಕ್ಕೆ ಓ ಒಂದು ನಾರಾಯಣಾ......
ನಾರಾಯಣ ಓ ನಾರಾಯಣ......
ಕೊಟ್ಟರಾಡಿಯ ಓ ಅರಮನೆಯಲ್ಲಿ ಓ
ಕೊಡ್ಸರಾಳ್ವರೂ ಇಬ್ಬರು ಮದುಮಗಳಂದಿರೂ (ಹೆಂಡಂದಿರು)......ಓ......
ಹೀಗೆ ಅಕ್ಕಪಕ್ಕದಲ್ಲಿ ಕುಳಿತು ಕಾಲಕಳೆಯುತ್ತಾ ಓ ಇರುವ ಸಮಯದಲ್ಲಿ ಇಂದೂ
ಒಂದಲ್ಲ ಒಂದು ದಿನದಲ್ಲಿ ಇಂದು ಸತ್ಯಮಹಾಲೋಕದ ಸಿರಿ ಓ......
ಬೀಡಿಗೆ (ಮನೆಗೆ) ದೂರ, ಅಂಗಳಕ್ಕೆ ಹತ್ತಿರವಾಗುವ ಸಮಯದಲ್ಲಿ......
ನಾರಾಯಣ ಓ ನಾರಾಯಣ ಅಕ್ಕನವರೆ
ಬೀಡಿಗೆ ದೂರಾದೆವು ಅಂಗಳಕ್ಕೆ ಹತ್ತಿರವಾದೆವು (ಋತುಮತಿಯಾದೆವು) ಅಕ್ಕನವರೆ
ಎಲ್ಲಿ ಮಿಂದು ಶುದ್ಧವಾಗುವುದು ಅಕ್ಕನವರೆ......ಓ......
ತಂಗಿ ಸಿರಿ ಸತ್ಯಮಹಾಲೋಕದ ಸಿರಿ ಸಾಮು ಆಳ್ವೆದಿಯಲ್ಲಿ ಓ ಕೇಳುತ್ತಾರೆ......
ನಾರಾಯಣ ಮಗ ಸಿರಿಯೇ, ಓ ಬೀಡಿಗೆ ದೂರ ಓ ಅಂಗಳಕ್ಕೆ ಹತ್ತಿರ ಆದರೆ
ಮಡಿವಾಳರ ಮಾಪುಕರಿಯ (ಮಡಿವಾಳಘಟ್ಟ)ಕ್ಕೆ ಓ ಹೋಗು ಮಗ......
ಗೆರಟೆಯಲ್ಲಿ ಸೀಗೆ ಓ ಬಳ್ಳದಲ್ಲಿ ಬಾಗೆ ಮುಂದಿನಿಂದ ಸಂಗೀತ ಹಿಂದಿನಿಂದ
ಸಂಗಾತಿ ಓ ಇದೆಯೆಂದರು......
ಓ ಅಕ್ಕ ಸಾಮುಆಳ್ವೆದಿ ಓ ಹೇಳುತ್ತಾರೆ......
ಮಿಂದು ಮಡಿ ಓ ಆಗಬೇಕೆಂದರು ಓ......
ಮುಂದಿನಿಂದ ಸಂಗಾತಿ ಓ ಹಿಂದಿನಿಂದ ಸಂಗೀತಾ
ಗೆರೆಟೆಯಲ್ಲಿ ಸೀಗೆ ಬಳ್ಳದಲ್ಲಿ ಬಾಗೆ ಹಿಡಿದುಕೊಂಡು ಓ......
ಮಡಿವಾಳರ ಮಾಪುಕರಿಯ (ಬಟ್ಟೆ ತೊಳೆಯುವ ಸ್ಥಳ)ಕ್ಕೆ ಓ ಸಿರಿ ಹೋಗುತ್ತಾರೆ......
ಸಿರಿ ಹೋಗಿ ಮಡಿವಾಳರ ಮಾಪುಕರಿಯದಲ್ಲಿ ನೋಡುವಾಗ ಇಂದು ಓ......
ಹಕ್ಕಿಗೆ ಹೀರು(ಕುಡಿಯು)ವಷ್ಟು ನೀರಿಲ್ಲವಾಯಿತು......ಓ......
ನಾರಾಯಣ ಅಕ್ಕನವರೆ ಓ ಅಕ್ಕನವರೆ ಕೇಳಿದ್ದೀರೆ......
ಮಡಿವಾಳರ ಮಾಪುಕರಿಯದಲ್ಲಿ ಹಕ್ಕಿಗೆ ಹೀರಲಿಕ್ಕೂ ನೀರಿಲ್ಲದಾಯಿತು......
ನಾರಾಯಣ ಸಿರಿಯೆ ಚೆಂದೆಂಗಿನಮರದ ಓ ಪದ್ಮಕಟ್ಟೆಯಲ್ಲಿ......
ಏಳನೀರಲ್ಲಿ ಓ ಮಡಿ ಆಗೆಂದು ಓ ಹೇಳುತ್ತಾರೆ......
ಎಳನೀರಲ್ಲಿ ಮಿಂದು ಮಡಿಯಾಗೆನ್ನಲು......ಓ......
ಗೊನೆಗೊನೆ ಎಳನೀರು ಓ ಕಡಿಸಿದರು......

ಗೊನೆಗೊನೆ ಎಳನೀರು ಕಡಿಸಿ ನೋಡುವಾಗ
ಸಾವಿರ ಸಾವಿರದೊಂದು ಎಳನೀರು ಕೆತ್ತಿ ನೋಡಲು
ಎಳನೀರಲ್ಲಿಯೂ ಒಂದು ತೊಟ್ಟೂ ನೀರಿಲ್ಲದಾಯಿತು......
ನಾರಾಯಣಾ ಓ ನಾರಾಯಣಾ......ಓ ದೇವರೆ ನೀವೂ
ಏನು ಮದುಮಗ ಮಡಿವಾಳರ ಮಾಪುಕರಿಯಕ್ಕೆ ಓ ನಾನು ಹೋಗುವಾಗಾ
ಹಕ್ಕಿಗೆ ಹೀರಲಿಕ್ಕೂ ನೀರಿಲ್ಲದಾಯಿತು......
ಎಳನೀರು ತೆಗೆಸಿ ಅದನ್ನು ಕಡಿಸುವಾಗಲೂ
ಎಳನೀರಲ್ಲಿ ಕೂಡಾ ಸ್ವಲ್ಪವೂ ನೀರಿಲ್ಲದಾಯಿತು......
ಎಂದು ಸತ್ಯಮಹಲೋಕದ ಸಿರಿ ಹೇಳಿದರು......
ನಾರಾಯಣ ಮಗ ಇಬ್ಬರು ಮದುಮಗಳಂದಿರೆ......
ನಿನ್ನಷ್ಟೆ ಸತ್ಯ ಓ ಸಿರಿಯಲ್ಲಿಯೂ ಇದೆ
ಸಿರಿಯಷ್ಟೆ ಸತ್ಯ ಓ ಸಾಮು ಆಳ್ವೆದಿಯಲ್ಲಿಯೂ ಇದೆ
ಯಾಕಾಗಿ ನೀವು ಹಟ ಸಾಧಿಸುತ್ತಿದ್ದೀರಿ
ನನ್ನ ಅಂದ ನೋಡುವುದೇ ನೀವೆಂದು......
ಕೊಟ್ಟರಾಡಿಯ ಓ ಕೊಡ್ಸರಾಳ್ವರು......ಓ......
ಇಬ್ಬರು ಮದುಮಗಳಂದಿರಿಗೂ ಸದ್ಬೋಧನೆ (ಹಿತವಚನ)......
ಹೇಳುತ್ತಾರಪ್ಪಾ ಓ ಆಳ್ವರು......
ಏನನ್ನು ಹೇಳುತ್ತೀರಿ ಓ ಮದುಮಗ (ಗಂಡ)
ಹೋಗಿ ನೋಡಿ ಮಡಿವಾಳರ ಮಾಪುಕರಿಯದಲ್ಲಿ ಓ ನೀರು ಇದೆ
ಗೊನೆಗೊನೆ ಎಳನೀರಲ್ಲಿ ನೀರು ಇದೆಯಪ್ಪಾ ಎಂದರು
ಸಿರಿ ಹೋದಳು ಮಡಿವಾಳರ ಮಾಪುಕರಿಯದಲ್ಲಿ
ಮಿಂದು ಮಡಿಯಾಗಿ ಬಂದಳು ಓ......
ಬಳ್ಳದಲ್ಲಿ ಬಾಗೆ ಕರಟದಲ್ಲಿ ಸೀಗೆಯಂತೆ
ಎದುರಲ್ಲಿ ಸಂಗೀತ ಹಿಂದಿನಿಂದ ಸಂಗಾತಿ
ಬಂದರಂತೆ ಶುದ್ಧ ಮುದ್ರಿಕೆಯಲ್ಲಿ ಕೊಟ್ಟರಾಡಿಯ ಅರಮನೆಯಲ್ಲಿ
ಸುಖಸಂತೋಷದಲ್ಲಿ ಕಾಲಕಳೆಯುತ್ತಿದ್ದಾರೆ......
ಒಂದಾನೊಂದು ದಿನದಲ್ಲಿ ಇನ್ನು
ಆ ಕಾಲ ಹೋಗಿ ವೇಳೆ ಬರುವಾಗಾ
ಸಾಮು ಆಳ್ವೆದಿ ಓ ಬೀಡಿಗೆ ದೂರವಾದರು ಅಂಗಳಕ್ಕೆ ಹತ್ತಿರವಾದರು
ತಿಂಗಳ ಮುಟ್ಟಿನಲ್ಲಿ ಕುಳಿತಾಗ
ನಾರಾಯಣ ಮಗ ಸಿಇರಿಯೆ ನನಗೆ
ಬಳ್ಳದಲ್ಲಿ ಬಾಗೆ ಕರಟದಲ್ಲಿ ಸೀಗೆ
ಎದುರಲ್ಲಿ ಸಂಗೀತ ಹಿಂದಿನಿಂದ ಸಂಗಾತಿ

ಆಗಬೇಕೆಂದು ಅಕ್ಕ ಹೇಳುತ್ತಾರೆ ಸಾಮು ಆಳ್ವೆದಿ......
ಹೋಗಿ ಅಕ್ಕನವರೆ ಬಳ್ಳದಲ್ಲಿ ಬಾಗೆ ಕರಟದಲ್ಲಿ ಸೀಗೆ......
ಎದುರಿಂದ ಸಂಗೀತ ಹಿಂದಿನಿಂದ ಸಂಗಾತಿ
ಓ ನಾನು ಕೊಡುತ್ತೇನೆಂದು ಹೇಳಿದಳು ಸಿರಿ......
ಅಕ್ಕ ಹೋದರು ಸಾಮು ಆಳ್ವೆದಿ......
ಮಡಿವಾಳರ ಮಾಪುಕರಿಯಕ್ಕೆ ಹೋಗಿ......
ನೋಡುವಾಗ ಹಕ್ಕಿಗೆ ಹೀರುವಷ್ಟು
ನೀರಾದರೂ ಅಲ್ಲಿ ಇಲ್ಲವೆಂದರು
ನಾರಾಯಣ ಸಿರಿಯೆ......
ನನಗಿಂತಲೂ ಮಿಗಿಲಾದ ಸತ್ಯ ನಿನ್ನಲ್ಲಿಯೂ ಆಗಿಹೋಯಿತಲ್ಲಾ
ಹಕ್ಕಿಗೆ ಹೀರಲು ನೀರಿಲ್ಲ ಮಗ ಎಂದರು......
ನಾರಾಯಣ ಅಕ್ಕನವರೆ ಚೆಂದೆಂಗಿನ ಮರದಲ್ಲಿ
ಚೆಂದೆಂಗಿನ ಎಳನೀರಲ್ಲಿ ಮಿಂದು ಮಡಿಯಾಗಿ ನೀವೆನ್ನಲು......
ಅಷ್ಟು ಹೊತ್ತಿಗೆ ಚೆಂದೆಂಗಿನ ಎಳನೀರು ತೆಗೆಸಿದರು......
ಸಾವಿರ ಸಾವಿರದೊಂದು ಎಳನೀರು ಕಡಿಸಿ ನೀರು ನೋಡಿದರು......
ನೊಡುವಾಗ ಎಳನೀರಲ್ಲಿಯೂ ನೀರಿಲ್ಲದಾಯಿತು......
ನಾರಾಯಣ ಮದುಮಗ (ಗಂಡ) ಓ ಮದುಮಗ (ಗಂಡ)......
ಕೊಟ್ಟರಾಡಿಯ ಅರಮನೆಯನ್ನು ನಾನು ಮೊದಲು ಹೊಕ್ಕವಳು
ಒಂದು ಚೂರೂ ನೀರಿಲ್ಲದಂತೆ ಮಾಡಿಬಿಟ್ಟಳು ಸಿರಿ ಎಂದು......
ಕೈ ಹಿಡಿದ ಮದುಮಗ(ಗಂಡ)ನಲ್ಲಿ ದೂರು ಕೊಟ್ಟಳು......ಓ......
ಸತ್ಯಮಹಾಲೋಕದ ಸಿರಿಯ ದೂರು......ಓ ಸಾಮು ಆಳ್ವೆದಿ ಕೊಟ್ಟರು......
ನಾರಾಯಣ ಸಿರಿಯೆ ಓ ಸಿರಿಯೆ ಕೇಳಿದ್ದೀಯಾ ನೀನೂ
ಸತ್ಯಮಹಾಲೋಕದ ಅರಮನೆಯಲ್ಲಿ ಸತ್ಯಮಹಾಲೋಕದ ಸಿರಿ ಬಾಳಿದವಳು ಬಾಲಕ್ಕ ಸಿರಿಯೆ......
ನಿನ್ನ ಅಕ್ಕನವರು ಓ ಸಾಮು ಆಳ್ವೆದಿ......
ನನ್ನ ಧಾರೆಯಾಗಿ ಕೈಹಿಡಿದ ಓ ನಿತ್ಯ ಮದುಮಗಳು......
ನಿನ್ನಷ್ಟೆ ಸತ್ಯ ಅವಳಲ್ಲಿಯೂ ಇದೆ ಅವಳಷ್ಟೆ ಸತ್ಯ ನಿನ್ನಲ್ಲಿಯೂ ಇರುವಾಗ ಯಾಕಾಗಿ ನೀವು
ಹಠ ಹಿಡಿದು ಸಾಧನೆ ಮಾಡುತ್ತೀರಿ......
ಎನ್ನುತ್ತಾರೆ ಓ ಆಳ್ವರು......
ಬನ್ನಿ ಅಕ್ಕನವರೆ ಹೋಗೋಣ ನಾವು ಮಡಿವಾಳರ ಮಾಪುಕರಿಯಕ್ಕೆ ನೀರು ಇದೆಯೋ ಇಲ್ಲವೋ ನೋಡುವ......
ಹಕ್ಕಿಗೆ ಹೀರುವಷ್ಟು ನೀರು ಇಲ್ಲವೆಂದು ನೀವು ಹೇಳಿದಿರಿ......

ಹೋಗುವ ಅಕ್ಕನವರೆ ಎಂದು ಹೇಳಿ ಅಕ್ಕ ಸಾಮುಆಳ್ವೆದಿಯನ್ನು ಕರೆದುಕೊಂಡು ಬಳ್ಳದಲ್ಲಿ ಬಾಗೆ ಕರಟದಲ್ಲಿ ಸೀಗೆ ಮುಂದಿನಿಂದ ಸಂಗೀತ ಹಿಂದಿನಿಂದ ಸಂಗಾತಿ ಕರೆದುಕೊಂಡು ಓ
ಸತ್ಯಮಹಾಲೋಕದ ಸಿರಿ ಓ ಹೋಗುತ್ತಾಳೇ......
ಹೋಗುವಾಗ ಇನ್ನಾದರೂ ಹೇಳುತ್ತಾಳೆ ಅಕ್ಕನವರೆ......
ನಾರಾಯಣ ಅಕ್ಕನವರೆ ಮೇಲಿರುವುದು ಓ ದೇವರ ಗುಂಡಿ
ಕೆಳಗಿರುವುದು ಭೂತಗಳ ಗುಂಡಿ ನಡುವಿರುವ ಮಡಿವಾಳರ ಮಾಪುಕರಿಯದಲ್ಲಿ
ಮಿಂದು ಓ ಶುಚಿ ಆಗೋಣ ಅಕ್ಕನವರೆ ಎಂದಳು......ಓ......
ಅಕ್ಕ ಸಾಮು ಆಳ್ವೆದಿಯೂ ತಂಗಿ ಸತ್ಯಮಹಾಲೋಕದ ಸಿರಿಯೂ......ಓ......
ಮಿಂದು ಶುದ್ಧಮುದ್ರಿಕೆಯಲ್ಲಿ ಬಂದರು......
ಜೊತೆಜೊತೆಯಾಗಿ ಓ ಸುಖಸಂತೋಷದಲ್ಲಿ ಕಾಲಕಳೆಯುತ್ತಿರುವ ಸಮಯದಲ್ಲಿ ಇಂದಾದರೋ ಇಂದು ಸಾಮುಆಳ್ವೆದಿಯಂತೆ ಇಂದು ಓ ಕೊಟ್ಟರಾಡಿಯಿಂದ ಓ ಅಂಗರಾಜೆ ಬರ್ಕೆ ಉಜೆಮಾರ ಗುತ್ತಿಗೆ ಹೋಗುತ್ತಾ ಬರುತ್ತಾ ಓ ಇರುವ ಸಮಯದಲ್ಲಿ ಓ ಸಿರಿಯಂತೆ......
ನಾನೂ ಹೋಗುತ್ತೇನೆ ಗಂಡ ಓ ಬೋಳಮಲ್ಲಿಗೆಗೆ ಓ ಹೋಗಿ ಬರುತ್ತೇನೆಂದರು ಇಬ್ಬರೂ ಒಂದೇ ದಿನ ಯಾತಕ್ಕಾಗಿ ಹೋಗುತ್ತೀರಿ ಮದುಮಗಳಂದಿರೆ (ಹೆಂಡಂದಿರೇ) ಸಾಮು ಆಳ್ವೆದಿ ಹೋಗಿ ಬಂದ ಬಳಿಕ ಓ ನೀನು ಹೋಗಿ ಬಾ ಎಂದು ಓ ಸದುತ್ತರ ಕೊಟ್ಟರು ಓ ಆಳ್ವರು......ಓ......
ಕೊಟ್ಟರಾಡಿಯ ಓ ಕೊಡ್ಸರಾಳ್ವರು......
ಹೀಗಿರಲು ಒಂದಾನೊಂದು ದಿನದಲ್ಲಿ ಓ......
ಸಿರಿಗೆ ಮುಟ್ಟು ನಿಂತು ಗರ್ಭ ನಿಲ್ಲಲು
ಮಾಯದ ಮಗಳಿಗೆ ಜೋಗದ ಗರ್ಭ ಓ ನಿಂತಿತೂ......ಓ......
ಎರಡು ಮೂರು ತಿಂಗಳು ದಾಟಿಹೋಯಿತು......ಓ......
ಮೂರು ನಾಲ್ಕು ತಿಂಗಳು ತುಂಬಿ ಐದು ಆರು ಓ ಏಳು ತಿಂಗಳು ತುಂಬಿ ಹೋಯಿತಪ್ಪಾ......
ನಾರಾಯಣ ಮದುಮಗ(ಗಂಡ)ನೇ ಓ ನಾರಾಯಣ ಮದುಮಗ (ಗಂಡ)....ಓ....
ನನ್ನ ತಂಗಿ ಓ ಸಿರಿ ಸತ್ಯಮಹಾಲೋಕದ ಸಿರಿ ಗರ್ಭಿಣಿ, ಮದುಮಗ(ಗಂಡ) ನಮಗೆ...
ನಾನಾದರೋ ನಿಮ್ಮ ಕೈಧಾರೆಯ ಮದುಮಗಳು (ಹೆಂಡತಿ)......ಓ......
ಮುಟ್ಟು ನಿಲ್ಲಲಿಲ್ಲ ಹೆರಿಗೆ ಆಗಲಿಲ್ಲ......
ನನ್ನ ತಂಗಿ ಓ ಸತ್ಯಮಹಾಲೋಕದ ಸಿರಿ
ಗರ್ಭಿಣಿ ಓ ಎಂದು ಮದುಮಗ(ಗಂಡ)ನಲ್ಲಿ......
ಹರುಷದ ಮೆಯ್ಯಲ್ಲಿ ಮುತ್ತಿನ ನಗುವಲ್ಲಿ

ಮನಸ್ಸು ತುಂಬ ಸಂತೋಷಗೊಂಡು
ಗಂಡನ ಓ ಸಮೀಪ ಕುಳಿತುಕೊಂಡು
ಗಂಡನಿಗೆ ಬೋಧನೆ (ಹಿತವಚನ) ಕೊಟ್ಟು ಹೇಳುತ್ತಾಳೆಪ್ಪಾ ಸಾಮು ಆಳ್ವೆದಿ......
ನಾರಾಯಣಾ ಓ ನಾರಾಯಣಾ ಸಾಮು ಆಳ್ವೆದಿ......
ನಿನ್ನ ತಂಗಿ ಗರ್ಭವತಿಯಾಗುವುದೂ ಒಂದೇ
ನೀನು ಗರ್ಭವತಿಯಗುವುದೂ ಒಂದೇ......
ಯಾಕಾಗಿ ಭಯಪಡುತ್ತಿದ್ದಿ ಭಯಭೀತಿಗೊಳಗಾಗುತ್ತಿದ್ದಿ
ಓ ಸಾಮು ಎಂದು ಆಳ್ವರು ಕೇಳುತ್ತಾರೆ......
ಇಂದಾದರೋ ಇಂದು ಹರುಷದ ಮೆಯ್ಯಲ್ಲಿ ಮುತ್ತಿನ ನಗುವಲ್ಲಿ ಓ
ಬೋಳಬಾರಿ ಚತ್ತೇರಿಗಳು ಕರಿಯ ಕಾಸಿಂಗರಾಯರು ಬಿಳಿಯ ದೇಸಿಂಗರಾಯರು ಬರುವಾಗ
ಅವರಲ್ಲಿಯೂ ಹೇಳುತ್ತಾಳೆ ಓ ಸಾಮುಆಳ್ವೆದಿ......ಓ......
ಏನು ಅಣ್ಣಂದಿರೆ ಓ ನಮ್ಮ ತಂಗಿ ಸತ್ಯಮಹಾಲೋಕದ ಸಿರಿ ಗರ್ಭಿಣಿ ಅಣ್ಣಂದಿರೆ...ಓ...
ಆರು ತಿಂಗಳು ಕಳೆದು ಏಳನೇ ತಿಂಗಳಾರಂಭವಾಯಿತೆಂದಳು......
ಅಂದಿನ ದಿನ ಹೋಗಿದೆ ಓ......
ಮರುದಿನ ಬರುವಾಗ ಓ ಹೇಳುತ್ತಾಳೆ......
ಅಂಗರಾಜೆಬರ್ಕೆ ಓ ಉಜೆಮರ ಗುತ್ತು ಓ......
ಬಾಮುಕೆಲ್ಲರು ಬರುವಾಗ ಓ ಹೇಳುತ್ತಾಳೆ......
ನಾರಾಯಣ ಅಣ್ಣನವರೆ ನಾರಾಯಣ ಅಣ್ಣನವರೆ ಓ......
ನನ್ನ ತಂಗೀ ಓ ಸತ್ಯಮಹಾಲೋಕದ ಸಿರಿ ಗರ್ಭಿಣಿ ಎಂದು......
ಮನಸ್ಸಲ್ಲೇ ಸಂತೋಷಪಡುತ್ತಾಳೆ ಓ......
ನಗುವಿನಲ್ಲೇ ಎದುರಿಗೆ ಹೋಗಿ
ಅಂಗರಾಜೆಬರ್ಕೆ ಉಜೆಮಾರ ಗುತ್ತು ಬಾಮುಕೆಲ್ಲರಲ್ಲಿ ಹೇಳುತ್ತಾಳಂತೆ......
ನಾರಾಯಣ ಮಗ ಓ ಸಾಮು ನೀನೇ......ಓ......
ಸಿರಿ ಗರ್ಭವತಿಯಾಗುವುದೂ ಒಂದೆ ಮಗ ನೀನು ಗರ್ಭವತಿಯಾಗುವುದೂ ಒಂದೇ ನನಗೆ
ನೀವು ಅತ್ಯಂತ ಪ್ರೀತಿಯ ತಂಗಿಯಂದಿರು ನನಗೆ ಓ ಪ್ರೀತಿಯ ನಿಮಗೆ ನಾನೊಬ್ಬನೇ ಅಣ್ಣ ಎನ್ನುತ್ತಾರೆ ಬಾಮು ಕೆಲ್ಲರು......
ನಾರಾಯಣ ಓ ನಾರಾಯಣಾ ಓ......
ಏಳು ತಿಂಗಳು ಕಳೆಯಿತು ಇಂದು ಎಂಟನೆ ತಿಂಗಳು ಪ್ರಾರಂಭವಾಗುವಾಗ ಇಂದೂ ಅಂಗರಾಜೆ ಓ ಉಜೆಮಾರ ಗುತ್ತಿಗೆ ಓ......
ಕಡೆಂಗಾಡಿ ಬರ್ಕೆಗೆ ಓ ಬಾಮುಕೆಲ್ಲರು ಓ ಬಂದರಂತೆ......ಓ......
ಇಂದಾದರೋ ಬಂದಂತೆ ಇಂದು ಕೊಟ್ರಾಡಿಯರಮನೆಯಲ್ಲಿ ಇಂದು......

ಸುಖಸಂತೋಷದಲ್ಲಿ ನಾಲ್ಕು ಜನ ಮಾತಾಡಿಕೊಳ್ಳುತ್ತಿರುವಾಗ ಇಂದು ಹಾಲು ಕುಡಿಯುತ್ತಿರುವಾಗ
ಆಚೀಚೆ ಕುಳಿತು ಹಾಲು ಕುಡಿಯುತ್ತಾ ಊಟಮಾಡುತ್ತಿರುವಾಗ ಇಂದು......
ಮಾತನಾಡುತ್ತಾ ನಗುತ್ತಾ ಸಂತೋಷದಲ್ಲಿರುವಾಗ ಇಂದು......
ಓ ಹೇಳುತ್ತಾರೆ ನಾರಾಯಣ ನಾರಾಯಣ ಓ ಭಾವಾ
ಸಿರಿಯನ್ನೂ ಸಾಮು ಆಳ್ವೆದಿಯನ್ನೂ ಓ
ಇಂದಾದರೋ ಕೊಟ್ಟರಾಡಿಯ ಅರಮನೆಯಿಂದ
ಅಂಗರಾಜೆ ಉಜೆಮಾರ ಗುತ್ತಿಗೆ ಓ ಕಳುಹಿಸಿಕೊಡಿ ಓ ಭಾವಂದಿರೆ ಎಂದು ಓ ಹೇಳುತ್ತಾರೆ ಓ ಬಾಮುಕೆಲ್ಲರು......
ನಾರಾಯಣ ಓ ನಾರಾಯಣಾ ಓ......
ಬರುವುದಾದರೆ ಓ ಏನಾಗಬೇಕು
ಬೆಳಗ್ಗೆ ಹೋದರೆ ಓ ಸಂಜೆಗೆ ಹಿಂತಿರುಗಿಯಾರು
ಎಂದು ಓ ಹೇಳುತ್ತಾರೆ ಬಾಮುಕೆಲ್ಲರಲ್ಲಿ ಓ ಕೊಡ್ಸರಾಳ್ವರು......
ನಾರಾಯಣ ಓ ನಾರಾಯಣಾ ಓ......
ಅಂದಿನ ದಿನ ಹೋಗಿದೆ ಓ ಮರುದಿನ ಬರುವಾಗ......
ಬಾಮು ಕೆಲ್ಲರಂತೆ ಇಂದು ನನ್ನ ತಂಗಿಯಂದಿರು ಬರುತ್ತಾರಂತೆ ಓ......
ಸಮ್ಮಾನ (ಔತಣ) ಹಾಕಬೇಕೆಂದು ಓ ಹೇಳುತ್ತಾರೆ ಕೆಲ್ಲರು......
ಓ ಬಾಮುಕೆಲ್ಲರು ಹೇಳುತ್ತಾರೆ......
ನಾರಾಯಣ ಓ ನಾರಾಯಣಾ ಓ ಮದುಮಗ......
ನಾವಿನ್ನು ಬೆಳಗ್ಗೆ ಹೋದರೆ ಓ ಸಂಜೆಗೆ ಬರುತ್ತೇವೆ......ಓ......
ಅಕ್ಕತಂಗಿ ಓ ಹೋಗಿ ಬರುತ್ತೇವೆಂದು ಓ ಹೇಳಿದಳು ಸಾಮು ಆಳ್ವೆದಿ......
ಒಂದು ಬಾರಿಯ, ಓ ಎರಡು, ಮೂರು ನಾಲ್ಕು ಬಾರಿಯ ಕೆಲಸಗಳನ್ನು ಪೂರೈಸಿ...... ಓ......
ಇಂದಾದರೋ ಮೇಲುಪ್ಪರಿಗೆಯಲ್ಲಿ
ಬಂಗಾರದಲ್ಲಿ ಕೆಂಪು ಬೆಳ್ಳಿಯಲ್ಲಿ ಬಿಳಿ ಅದರು......
ಮಲ್ಲಿಗೆಯಲ್ಲಿ ಜಲ್ಲಿ ಓ ಹಾಕಿದರಂತೆ
ತಂಗಿಯನ್ನೂ ಸೊಬಗು, ಶೃಂಗಾರ ಮಾಡಿಸಿಕೊಂಡು
ಅಕ್ಕ ಸಾಮು ಓ ಸಿದ್ರಮಂಟಪದಲ್ಲಿ ಓ
ರಾಜಿರ ಹಲಗೆಯಲ್ಲಿ ಓ ತೂಗುಯ್ಯಾಲೆಯಲ್ಲಿ ಓ......
ಒರಗಿ ಕುಳಿತಿದ್ದಾರೆ ಆಳ್ವರು......
ನಾರಾಯಣ ಮದುಮಗ ಓ ನಾರಾಯಣ ಮದುಮಗ......ಓ......
ನಾವಿಂದು ಹೋಗಿ ಬರುತ್ತೇವೆಂದರು ಓ ಸಾಮು ಆಳ್ವೆದಿ......
ಯಾರು ಸಾಮು ಆಳ್ವೆದಿ ಓ......

ನಾವು ಹೋಗಿ ಬರುತ್ತೇವೆಂದೆರ ಏನೆಂದು ಅರ್ಥ ಸಾಮು ಆಳ್ವೆದಿ......
ನನ್ನ ಮಾತನ್ನು ನೀನೇ ಹೇಳಬೇಕು ಓ ಅವಳ ಮಾತನ್ನು ಅವಳೇ ಹೇಳಬೇಕೆಂದರು......
ಇಷ್ಟು ಹೇಳುವುದನ್ನು ಕೇಳಿದರಂತೆ ಸಾಮು ಆಳ್ವೆದಿ ನಾನು ಹೋಗಿ ಬರುತ್ತೇನೆ ಮದುಮಗ (ಗಂಡ) ಎಂದು ಹೇಳಿದರಂತೆ......
ತಂಗಿಯಲ್ಲಿ ಹೇಳಿದರಂತೆ ಹೋಗು ಸಿರಿಯೆ ನಮ್ಮ ಮದುಮಗ(ಗಂಡ)ನಲ್ಲಿ ಹೋಗಿ ಬರುತ್ತೇನೆಂದು ಹೇಳಿ ಬಾ ಎಂದರು......
ನಾರಾಯಣ ನಾರಾಯಣ ಮದುಮಗ ಓ......
ಒಂದು ವರ್ಷ ಓ ಒಂದು ದಿನ ಓ ಮದುಮಗ (ಗಂಡ) ಕೇಳಿದಿರಾ......
ಕೊಟ್ಟರಾಡಿಯ ಅರಮನೆಯಿಂದ ಅಂಗರಾಜೆ ಬರ್ಕೆ ಓ ಉಜೆಮಾರ ಗುತ್ತಿಗೆ
ನಾವು ಹೋಗಿ ಬರುತ್ತೇವೆಂದು ಓ ಹೇಳಿದಳು ಸಿರಿಯೆ......
ಬೆಳಿಗ್ಗೆ ಹೋದರೆ ನೀವು ಸಂಜೆಗೆ ಬರಬೇಕು ಸಂಜೆ ಹೋದರೆ ಬೆಳಗ್ಗೆ ಬರಬೇಕೆಂದರು
ಹೋಗಿ ಬನ್ನಿಯಪ್ಪ ಜಾಗ್ರತೆಯಿಂದ ಎಂದು ಹೇಳಿ ಕಳುಹಿಸಿದರು......ಓ......
ಕೊಟ್ಟರಾಡಿಯ ಕೊಡ್ಸರಾಳ್ವರು......
ನಾರಾಯಣ ಓ ನಾರಾಯಣ ಓ......
ನಾರಾಯಣ ನಾರಾಯಣ ಓ ನಾರಾಯಣ ನಾರಾಯಣಾ......
ನಾರಾಯಣ ಅಕ್ಕನವರೇ ಓ ಯಾರು ಸಾಮೂ......ಓ......
.... ಆಳ್ವೇದಿ ಓ ಹೇಳುತ್ತಾರಂತೆ......ಓ......
ಮಗ ಓ ಸಿರಿ ಕೇಳಿದೆಯಾ......
ನೀನಾದರೋ ಓ ತಲೆ(ಕೂದಲು) ಕಟ್ಟಿ ಓ ಶೃಂಗಾರ ಆಗು ಮಗಾ......ಓ......
ನಮ್ಮ ಅಣ್ಣನವರ ಓ ಅಂಗರಾಜಗುತ್ತು ಓ ಕಡೆಂಗಾಡಿ ಬರ್ಕೆಗೆ ಓ ಹೋಗೋಣ......
ಮಗ ಎಂದು ಓ ಸಾಮು ಆಳ್ವೆದಿ ಹೇಳುವಾಗ......
ನಾರಾಯಣ ಓ ನಾರಾಯಣಾ ಓ......ನಾರಾಯಣ ಅಕ್ಕನವರೇ......ಓ......
ಯಾರೋ ಒಬ್ಬ ಓ ನಾಲ್ಕುಮನೆ ಬೇಡಿಕೊಂಡು ಓ ಮೂರುಮನೆಯಲ್ಲಿ ಭಿಕ್ಷೆಕೇಳುತ್ತಾ....
ಬರುವ ನರಸಣ್ಣ ಬಂದಿದ್ದಾನೆಂದು ಓ ಸಿರಿ ಓ ಹೇಳುತ್ತಾಳಂತೆ......ಓ......
ಸತ್ಯಮಹಾಲೋಕದ ಸಿರಿ ಓ ಹೇಳುತ್ತಾರೆ......
ಅಷ್ಟು ಹೊತ್ತಿಗೆ ಓ ಕೇಳಿದೆಯ ಮಗ ಸಿರಿ ಓ......
ಒಂದು ಬಳ್ಳ ಅಕ್ಕಿ ಓ ಒಂದು ತೆಂಗಿನಕಾಯಿ ಓ ಒಂದು ಕವಳೆ ವೀಳ್ಯದೆಲೆ ಓ ಒಂದು ಅಡಿಕೆ ಹಿಡಿದುಕೊಂಡು......
ಪಡಿ ಕೊಟ್ಟುಬಿಡು ಸಿರಿ ಎಂದು......ಓ......
ಹೇಳುತ್ತಾರಂತೆ ಓ ಸಾಮು ಆಳ್ವೆದಿ......
ಅಷ್ಟು ಹೇಳುವುದನ್ನು ಓ ಕೇಳಿದರು ಸಿರಿ ಓ......
ತೆಂಕಣ ಮನೆ ಸಿರಿಪದೊಲಿಗೆ ಹೋದರು......
ಅಕ್ಕಿಯ ಕಣಜಕ್ಕೆ ಕೈ ಹಾಕಿದರು......ಓ......

ಗೆರಸೆ ಹಿಡಿದರು ಓ ಸಿರಿ......ಓ......
ಒಂದು ಬಳ್ಳ ಅಕ್ಕಿ, ಒಂದು ತೆಂಗಿನಕಾಯಿ ಓ ಕವಳೆ ವೀಳ್ಯದೆಲೆ ಒಂದು ಅಡಿಕೆ ಹಾಕಿಕೊಂಡು ಓ ಬರುವಾಗ ಓ......
ಆರೂವರೆ ಅಂಗಣ ಮೂರುವರೆ ಅಂಗಳ ಓ ದೊಡ್ಡ ಅಂಗಳಕ್ಕೆ ಓ ಕಾಲು ಇಡುತ್ತೇನೆಂದು ನೋಡುವಾಗ......
ಸಿರಿ ಓ ನೋಡುತ್ತಾರಂತೆ......
ನಾರಾಯಣ ಓ ನಾರಾಯಣಾ ಓ......
ಸಿರಿ ತಲೆ ಎತ್ತಿ ನೋಡುವಾಗ......ಓ......
ಕುತ್ತಿಗೆಯಲ್ಲಿ ನೇಗಿಲ ತುಂಡು ಓ ಕಟ್ಟಿಕೊಂಡು......
ನಾಲ್ಕು ಮನೆ ಬೇಡುತ್ತಾ ಓ ಮೂರು ಮನೆಯಲ್ಲಿ ಭಿಕ್ಷೆ ಎತ್ತುತ್ತಾ......
ಬರುವುದನ್ನು ನೋಡಿದರು ಸಿರಿ......
ಬತ್ತಕೇರಿ ಬಸರೂರಿನ ಓ ಮದುಮಗನ ಗುರುತು ಓ ಕಾಂತಾಳ್ವನ ಗುರುತೂ ಓ ಸತ್ಯಮಹಾಲೋಕದ ಸಿರಿಗೆ ಸಿಕ್ಕಿತಂತೆ......
ಗೆರಸೆಯನ್ನು ಹಿಡಿದುಕೊಂಡೇ ಓ ಸಿರಿ ತಿರುಗಿದಳು......
ನಾರಾಯಣ ಅಕ್ಕನವರೇ ಓ ನಾರಾಯಣ ಅಕ್ಕನವರೇ......ಓ......
ನಾನು ಭಿಕ್ಷೆ ಕೊಡಲಾರೆ ಓ ನೀವೇ ಕೊಟ್ಟುಬಿಡಿ ಓ ಎಂದಳು ಸಿರಿ......
ಯಾಕೆ ಮಗಾ ಓ ನೀನು ಕೊಡುವುದಿಲ್ಲವೆಂದು ಕೇಳಲು ಓ ಹೇಳುತ್ತಾಳೆ......
ನಾರಾಯಣ ಅಕ್ಕನವರೇ ಓ ನಾರಾಯಣ ಅಕ್ಕನವರೇ......
ಹಿಂದಿನ ಕಾಲದಲ್ಲಿ ಓ ನನ್ನ ಅಜ್ಜನವರು ಓ ಹೇಳುವುದನ್ನು ಕೇಳಿದ್ದೇನೆ ಅಕ್ಕನವರೇ....
ಗರ್ಭಿಣಿ ಹೆಂಗುಸು ಓ ಎಲ್ಲಿಗಾದರು ಓ ಮನೆ ಇಳಿದು ಹೊರಡುವಾಗ......ಓ......
ನಾಲ್ಕು ಮನೆ ಬೇಡುವ ಓ ಮೂರು ಮನೆ ಭಿಕ್ಷೆ ಎತ್ತುವವನಿಗೆ ಓ ಪಡಿಯಕ್ಕಿ ಕೊಟ್ಟು ಓ ಹೊಡಬಾರದೆಂಬುದನ್ನು ಹೇಳುವುದನ್ನು ಕೇಳಿದ್ದೇನೆ ಓ ನನ್ನ ಅಜ್ಜನವರು ಹೇಳುವುದನ್ನು......
ಆಯಿತು ಮಗಾ......ಅಜ್ಜನವರ ಮಾತು ಮನ್ನಿಸು......ಓ ಭಿಕ್ಷೆ ಕೊಡುವುದು ಬೇಡ ಮಗಾ......ಓ......
ನಾನು ಕೊಡುತ್ತೇನೆಂದು ಹೇಳಿದರು ಓ ಸಾಮು ಆಳ್ವೆದಿ......
ನಾರಾಯಣಾ ಓ ನಾರಾಯಣಾ......
ಒಂದು ನಾರಾಯಣಾ ಹಾಕಿದರಂತೆ ಓ......
ಸಾಮು ಆಳ್ವೆದಿ ಬಂದರು ಓ ಅದರ ಮೇಲೊಂದು ಸೌತೆಕಾಯಿ ಇಟ್ಟರು ಓ ಅಳಿಲು ಬಣ್ಣದ ಸೌತೆಕಾಯಿ
ಇಟ್ಟರು ಓ ಬುಟ್ಟಿಯಲ್ಲಿ ಹಾಕಿ ಓ ಗೆರಸೆ ಹಿಡಿದುಕೊಂಡು......
ಬಾ ಅಪ್ಪಾ ನೆರಳಿಗೆ ಬಾ ಓ ನಿನ್ನ ಪಡಿ ತೆಗೆದುಕೋ ಎಂದು
ಓ ಹೇಳುತ್ತಾರಪ್ಪಾ ಸಾಮು ಆಳ್ವೆದಿ......

ಗೆರಸೆ ಹಾಗು ಬುಟ್ಟಿಯಿಂದ......ಓ......
ಒಂದು ಬಳ್ಳ ಅಕ್ಕಿ ಓ ಒಂದು ತೆಂಗಿನಕಾಯಿ ಒಂದು ಅಡಕೆ ಓ ಒಂದು ಕವಳೆ ವೀಳ್ಯದೆಲೆ ಓ ಅಳಿಲು ಬಣ್ಣದ ಸೌತೆಕಾಯಿ ಓ ಪಡಿಸಂಪಗೆಯನ್ನು ಹಿಡಿದುಕೊಂಡರು....
ಬಸರೂರಿನ ಕಾಂತಾಳ್ವನ ಮಾತು ಓ ಮುಳುಗಿ ಹೋಯಿತು......ಓ......
ಸತ್ಯನಾಪುರದ ಅರಮನೆಯ ಓ ಸತ್ಯಮಹಾಲೋಕದ ಸಿರಿಯ ಮಾತು ಓ ಗೆದ್ದಿತು......
ಅಲ್ಲಿಂದ ಹಾಗೆ ಹೊರಟರಂತೆ ಓ......
ಅಕ್ಕ ತಂಗಿ ಓ ಸಿರಿಯೂ ಸಾಮು ಆಳ್ವೆದಿಯೂ ಓ......
ಅಂಗರಾಜೆ ಉಜೆಮಾರಗುತ್ತಾ ಓ ಆಯಿತೆಂದರು......
ಕೊಟ್ಟರಾಡಿಯ ಅರಮನೆ ಇಳಿದರಪ್ಪಾ ಓ ಅಕ್ಕನೂ ತಂಗಿಯೂ......
ಕೊಟ್ಟರಾಡಿಯ ಬೈಲು ಇಳಿದರು......
ಸಣ್ಣ(ಚಿಕ್ಕ) ತೋಡು ಚಿಕ್ಕ ಕಾಲುಸಂಕ......ಓ ಹಿಂದೆ ಬಿಟ್ಟರು
ಜಾನುವಾರುಗಳು ದಾಟುವ ಹೆದ್ದಾರಿ ಹಿಂದೆ ಹಾಕಿದರು
ಮನುಷ್ಯರು ಹೋಗುವ ಓ ಮಾರ್ಗ ಹಿಡಿದರು......
ಮುಂದೆ ಹೋಗುವಾಗ ಓ ಕೇಳುತ್ತಾಳೆ ತಂಗಿ ಸಿರಿ......ಓ......
ನಾರಾಯಣ ಓ ಅಕ್ಕನವರೆ ನಾರಾಯಣ ಅಕ್ಕನವರೆ......
ಅಲಿಕ್ಕುಂಜ ಎಂದರೆ ಯಾವುದು ಅಕ್ಕನವರೆ ಪಿಲಿಕ್ಕುಂಜ ಎಂದರೆ ಯಾವುದು ಎಂದು ಕೇಳುತ್ತಾಳೇ
ನಾರಾಯಣ ಮಗ ಸಿರಿ ಕೇಳಿದ್ದೀಯೇ......
ಆಲಿಕ್ಕುಂದ ಪಿಲಿಕ್ಕುಂಜ ಎಂದರೆ ಯಾವುದೆಂದು ಹೇಳಬಾರದು ಮಗ......
ಸಾಮು ಆಳ್ವೆದಿ ತಂಗಿಗೆ ಉತ್ತರ ಓ ಕೊಡುತ್ತಾರೆ......
ನಾರಾಯಣ ಅಕ್ಕನವರೆ ಓ ನನಗೆ ಹೇಳಬೇಕು ಓ ಹೇಳಬೇಕೆಂದು ಹಠ ಹಿಡಿಯುತ್ತಾಳಪ್ಪ......ಓ......
ಈಗ ಹೋಗುವಾಗ ಹೇಳಲಾರೆನಪ್ಪಾ ಸಿರಿಯೆ......ಓ......
ನಾರಾಯಣ ಓ ನಾರಾಯಣಾ......
ಹೋಗುವಾಗ ಹೇಳದಿದ್ದರು ಹಿಂತಿರುಗಿಬರುವಾಗ ಹೇಳಬೇಕು ಅಕ್ಕನವರೆ ಎಂದಳು ಓ...
ಆಯಿತು ಮಗ ಓ ಈಗ ಹೇಳುವುದಿಲ್ಲ ಓ ಹಿಂತಿರುಗಿ ಬರುವಾಗ ಹೇಳುವೆನೆಂದರು
ಇಂದಾದರೋ ಇಂದು ಸತ್ಯಮಹಾಲೋಕದ ಸಿರಿಯೂ ಸಾಮು ಆಳ್ವೆದಿಯೂ ಇಂದು ಚೆಂದದಿಂದ
ಅಕ್ಕಪಕ್ಕದಲ್ಲಿ ಇಂದು ಅಲಿಕ್ಕುಂಜ ಪಿಲಿಕ್ಕುಂಜ ಕಾಡು ದಾಡಿದರು......ಓ......
ಎತ್ತುಗಳು ಸಾಗುವ ಹೆದ್ದಾರಿ ಬಿಟ್ಟರು......
ಆನೆಕಟ್ಟುವ ಅಶ್ವತ್ಥ ಕುದುರೆ ಕಟ್ಟುವ ಕಿನ್ನಿಗೋಳಿ ಓ......
ಸೆಳೆಗೊಂಬು ಅಲಿಮಾರು ಓ ಬಿಳಲು ಮಾದೇರು......
ಎಂಜೀರು ಎಲಿಮಲೆ ಓ ಸಿರಿಮುಳ್ಳಿನ ಸಿರಿಕಾಡು

ಹಿಂದೆ ಹಾಕಿ ಓ ಹೋದರು......
ಅಂಗರಾಜೆ ಎಲಿಮಲೆ ಓ ಸಿರಿಮುಳ್ಳಿನ ಸಿರಿಕಾಡು
ಹಿಂದೆ ಹಾಕಿ ಓ ಹೋದರು......
ಅಂಗರಾಜೆ ಓ ಉಜೆಮಾರ ಗುತ್ತಿಗೆ ಓ ಹೋದರಂತೆ ಓ......
ಸಿರಿಯೂ ಸಾಮು ಆಳ್ವೆದಿಯೂ......ಓ......
ನಾರಾಯಣ ಓ ನಾರಾಯಣಾ ಓ......
ದೂರದಲ್ಲಿ ಬರುವುದನ್ನು ನೋಡಿದರು ಅಣ್ಣನವರು......
ನನ್ನ ತಂಗಿಯಂದಿರು ಬರುವ ಚಂದ ನೋಡಿರಪ್ಪಾ ಓ ಎಂದರಂತೆ ಓ......
ಅಕ್ಕತಂಗಿ ಬರುವ ಅಂದ ನೋಡಿದರು
ಚಿಕ್ಕಚಾವಡಿ ಸಿದ್ರಮಂಟಪದಲ್ಲಿ ತಾಳೆಗರಿ ಚಾಪೆಯಲ್ಲಿ ಒತ್ತೊತ್ತಾಗಿ ಕುಳ್ಳಿರಿಸಿದರು
ಪಿಂಗಾಣಿಯಲ್ಲಿ ಹಾಲು ಓ ಗಿಂಡಿಯಲ್ಲಿ ನೀರು
ಈರ್ವರು ಸಹೋದರಿಯರಿಗೆ ಕೊಟ್ಟರು ಅಣ್ಣ ಅವರು
ಅಣ್ಣ ಬಾಮುಕೆಲ್ಲರು......
ನಾರಾಯಣ ಓ ನಾರಾಯಣಾ ಓ......ನಾರಾಯಣ ಓ ನಾರಾಯಣ......
ಇಂದಾದರೋ ಇಂದು ಅಕ್ಕಪಕ್ಕ ಕುಳಿತುಕೊಂಡು ಇಂದು ತಂಗಿಯಂದಿರೂ ಅಣ್ಣನೂ ಕುಳಿತುಕೊಂಡು
ಇಂದು ಮಾತಾಡಿಕೊಂಡಿರಲು ಓ ವೇಳೆ ಹೋಗುತ್ತದಣ್ಣನವರೆ
ಓ ಕಾಲ ತಡವಾಗುತ್ತದೆ ಓ ನಮಗೆಂದಳು......
ಅಷ್ಟು ಹೇಳುವುದನ್ನು ಕೇಳಿದರಂತೆ ಬಾಮು ಕೆಲ್ಲರು ಇಂದು......
ತೆಂಗಿನಕಾಯಿ ಸೇರಿಸಿ ಸಾವಿರ ಬಗೆ, ಹುಳಿ ಸೇರಸಿ ಮುನ್ನೂರು ಬಗೆ ಓ
ಮದ್‌ರೆ ಮಾಫಲ ಓ ಕಣಿಲೆ ಕಾವಟೆಯ ಓ ಹುಳಿ, ಲಿಂಬೆಯ ಉಪ್ಪಿನಕಾಯಿ ಯೆಂದರು......
ಊಟಕ್ಕೆ ಓ ಎಲೆ ಹಾಕುವಾಗ ಓ......
ಸಮ್ಮಾನ(ಔತಣ)ದ ಊಟ ಬಡಿಸುವಾಗ ಸಿರಿ ಹೇಳುತ್ತಾಳಂತೆ
ನಾರಾಯಣ ಓ ನಾರಾಯಣಾ ಅಕ್ಕನವರೆ
ನಾವು ಓ ಅಕ್ಕ ತಂಗಿ ನಾವು
ಒಂದೇ ಎಲೆಯೆದುರು ಕುಳಿತು ಜೊತೆಗೆ ಊಟ ಮಾಡೋಣ ಎಂದರು......
ಅಷ್ಟು ಹೊತ್ತಿಗೆ ಓ ಹೇಳುವಾಗ ಓ......
ಹೇಳುತ್ತಾರಷ್ಟೆ ಓ ಅಕ್ಕನೂ ತಂಗಿಯೂ ಓ......
ನಾರಾಯಣ ಮಗ ಸಿರಿಯೇ ಕೇಳಿದ್ದೀಯೆ......
ಬೇಕಾದಷ್ಟು ಓ ಒಳಸೂತ್ರದಲ್ಲಿ ಓ......
ನಿನ್ನ ಅಕ್ಕ ಓ ಸಾಮು ಆಳ್ವೆದಿಗೆ ಇದೆ ಮಗಾ
ಒಂದೇ ಎಲೆಯಲ್ಲಿ ಯಾಕಾಗಿ ಊಟ ಮಾಡುವುದೆಂದು ಓ ಅಣ್ಣನವರು ಹೇಳಲು

ನಾರಾಯಣ ಓ ಅಕ್ಕನವರೆ ಓ......
ಮೂಡಣ ಬಂಗಬಾಳೆಯ ತುದಿಎಲೆಯಲ್ಲಿ ಓ ಅಕ್ಕನವರೆ......
ನನ್ನ ಎಲೆಯಲ್ಲಿ ಓ ನಿಮಗೆ ಸಮಪಾಲು ಎಂದಳು......ಓ......
ನಿಮ್ಮ ಎಲೆಯಲ್ಲಿ ಸಮಪಾಲು ಓ ನನಗೆ ಅಕ್ಕನವರೇ ಎಂದಳು......
ಓ ಎಲೆಗೆ ಗುರುತು ಹಾಕಿದಳು......ಓ......
ನೂರು ಕಾಲದಿಂದ ಸಾವಿರ ಕಾಲದವರೆಗೆ
ಬಾಳೆಯೆಲೆಯಲ್ಲಿ ಓ ಸಮಪಾಲು ಎಂದಳು......
ಬಲ ಬೆರಳಲ್ಲಿ ಗೆರೆ ಎಳೆದಳು......
ಒಂದೇ ಎಲೆಯಲ್ಲಿ ಅಕ್ಕತಂಗಿ ಊಟ ಮಾಡಿದರು......
ಊಟ ಚೆನ್ನಗಿ ಓ ಮುಗಿಸಿದರಂತೆ ಓ......
ಊಟದ ಅನಂತರ ವೀಳ್ಯ ಮೆದ್ದರು......
ವೀಳ್ಯ ತಿಂದಾದ ಬಳಿಕ ಹಾಲು ಕುಡಿಯುವಾಗ ಹೇಳುತ್ತಾಳೆ......
ನಾರಾಯಣ ಅಣ್ಣನವರೆ ನಾರಾಯಣ ಅಣ್ಣನವರೆ......
ಹತ್ತು ಬೆರಳು ಜೋಡಿಸಿ ವಂದನೆ ಮಾಡಿ ನಿಮಗೆ ಓ
ಶರಣು ಹಾಕಿದೆ ಓ ಅಣ್ಣನವರೆ ಎಂದಳು......ಓ ಸತ್ಯಮಹಾಲೋಕದ ಸಿರಿ......
ಅಷ್ಟು ಹೊತ್ತಿಗೆ ಓ ಹೇಳುತ್ತಾರೆ......ಓ ಬಾಮು ಕೆಲ್ಲರು......
ನಾರಾಯಣ ಮಗ ಸಿರಿಯೆ ಸತ್ಯಮಹಾಲೋಕದ ಸಿರಿಯೆ......
ಮೂಗು ಬಾಯಿ ಕಟ್ಟಿದ (ಗರ್ಭಿಣಿ) ಹೆಣ್ಣು ಮಗ ನೀನು
ಹತ್ತು ಬೆರಳು ಜೋಡಿಸಿ ಶರಣು ಹಾಕಬೇಡ ಮಗ......
ಮಾಯದ ಮಗಳಿಗೆ ಜೋಗದ ಗರ್ಭ ಓ ನಿಂತಿದೆ ಮಗ......
ಸುಖವಾಗಿ ಹೆರಿಗೆ ಆಗಲಿ ಮಗ......
ನಿಮ್ಮ ತಾಯಿ ಹಾಗು ಮಗುವನ್ನು ನನ್ನ ಅರಮನೆಗೆ ಹೊಗಿಸಿಯೇನೆಂದು
ಬಾಮು ಕೆಲ್ಲರು ಓ ಹೇಳಲು ಹೇಳುತ್ತಾಳೆ......
ಆ ರೀತಿಯ ಯೋಗ ಈ ರೀತಿಯ ಭಾಗ್ಯ ಓ
ಯಾವಾಗ ಕೂಡಿ ಬಂದೀತು ಅಣ್ಣನವರೆ ಎಂದಳು......
ಸತ್ಯಮಹಾಲೋಕದ ಸಿರಿ ಓ ಹೇಳಿದಳು......
ನಾರಾಯಣ ಓ ನಾರಾಯಣಾ ಅಣ್ಣನವರೆ......
ವೇಳೆ ಹೋಗುತ್ತದೆ ಕಾಲ ತಡವಾಗುತ್ತದೆ ನಮಗೆಂದೂ
ಅಕ್ಕತಂಗಿ ಹೇಳಲು ಹೇಳುತ್ತಾರೆ......
ಜಾಗ್ರತೆಯಾಗಿ ಹೋಗಿ ಮಗ ಜಾಗ್ರತೆಯಾಗಿ ಹೋಗಿ
ಕೊಟ್ಟರಾಡಿಯ ಅರಮನೆಯನ್ನು (ಸರಿಯಾದ) ವೇಳೆಯಲ್ಲೇ ತಲುಪಿಬಿಡಿ ಎಂದು
ಹೇಳುತ್ತಾರೆ ಬಾಮು ಕೆಲ್ಲರು......
ನಾರಾಯಣ ನಾರಾಯಣ ಅಕ್ಕನವರೆ ಓ......

ಹಿಂತಿರುಗಿ ಬರುವಾಗ ಹೇಳುತ್ತೇನೆಂದಿದ್ದೀರಿ ಅಕ್ಕನವರೆ
ಹಿಂತಿರುಗಿ ಹೋಗುವಾಗ ಹೇಳಬೇಕು ಅಕ್ಕನವರೆ ಎಂದು......
ಅಂಗರಾಜೆ ಉಜೆಮಾರ ಗುತ್ತಿನ ಓ ಬೈಲು ಹತ್ತಬೇಕಾದರೆ ಓ ಹೇಳುತ್ತಾಳೆ ಮಗಳು......
ನಾರಾಯಣ ಮಗ ಸಿರಿಯೆ......
ಹೋಗುವಾಗ ಹೇಳುತ್ತೇನೆಂದರೂ ಹೇಳಬೇಕೆಂದೇನಿಲ್ಲ ಎಂದರು......
ಶಾಂತಿ ಸಮಾಧಾನದಲ್ಲಿ ತಂಗಿ ಸಿರಿಯನ್ನು......
ಕರೆದುಕೊಂಡು ಬರುತ್ತಾರಪ್ಪಾ ಓ ಸಾಮು ಆಳ್ವೆದಿ......
ನಾರಾಯಣ ಓ ನಾರಾಯಣಾ......
ಆಲಿಕ್ಕುಂಜ ಅಂದರೆ ಯಾವುದು ಅಕ್ಕನವರೆ......
ಪಿಲಿಕ್ಕುಂಜ ಅಂದರೆ ಯಾವುದೆಂದು......
ಸಿರಿ ಓ ಕೇಳುತ್ತಾಳಪ್ಪ......
ನಾರಾಯಣ ಮಗ ಸಿರಿ ಕೇಳಿದ್ದೀಯೇ......
ಆಲಿಕ್ಕುಂಜ ಪಿಲಿಕ್ಕುಂಜ ಹೇಳಿದರೆ ಮಗ......
ಗಬ್ಬದ ಹಸು ಕೂಡಲೇ ಕರು ಹಾಕುತ್ತದಂತೆ
ಗರ್ಭಿಣಿ ಹೆಂಗುಸರು ಹೆರುತ್ತಾರಂತೆ ಮಗ......
ಅಷ್ಟು ಹೇಳಲು ಸಿರಿ ಹೇಳುತ್ತಾಳಂತೆ ಇಂದು ಹೆರಿಗೆಯ ಸಮಯ ಬರುವಾಗ ಹೆರದಿರುತ್ತಾರೆಯೇ ಅಕ್ಕನವರೆ......
ನೋವು ಬಂದಾಗ ಹಸು ಕರು ಹಾಕದಿರುತ್ತದೆಯೇ ಓ ಎಂದಳು ಸಿರಿ......
ಅಷ್ಟು ಹೊತ್ತಿಗೆ ನಾರಾಯಣ ಓ ನಾರಾಯಣಾ......
ನಾರಾಯಣ ಓ ನಾರಾಯಣಾ......
ಆಲಿಕ್ಕುಂಜ ಅಂದರೆ ಇದುವೆ ಮಗ ಸಿರಿ ಪಿಲಿಕ್ಕುಂಜ ಅಂದರೆ ಇದೇ ಎಂದು ಹೇಳುವಾಗ......
ಇಂದು ಹೇಳಿದ ನಾಲಿಗೆ ಗಂಟಲಲ್ಲಾಗಬೇಕಾದರೆ ಸಿರಿಗೆ ಹೆರಿಗೆ ಆಗುತ್ತದೆ ಓ......
ತಿಳಿಯಾದ ಮುಖದಲ್ಲಿ ಹುಳಿಯಾದ ನೋವು ಕಾಣಿಸಿಕೊಂಡು ಇಂದು ಒಂದು ನೋವಿಗೆ......
ಇಂದು ಅಲಿಕ್ಕುಂಜ ಪಿಲಿಕ್ಕುಂಜ ಕಾಡಲ್ಲಿ ಹೆರಿಗೆ ಆಯಿತಂತೆ ಸಿರಿಗೆ......
ನಾರಾಯಣ ನಾರಾಯಣಾ ಮಗ ಸಿರಿಯೇ......ಓ......
ಆಲಿಕ್ಕುಂಜ ಕಾಡು ಪಿಲಿಕ್ಕುಂಜ ಕಾಡು ಹೇಳುವುದಿಲ್ಲ ಎನಲು ಕೇಳಿದೆ ಮಗ
ಗಬ್ಬದ ಹಸು ಕರು ಹಾಕುತ್ತದೆ ಗರ್ಭಿಣಿ ಹೆಂಗುಸರು ಹೆರುತ್ತಾರೆಂದು ಹೇಳಲು ಹೇಳಿದೆ
ತಿಂಗಳು ತುಂಬುವಾಗ ಹೆರದಿರುತ್ತಾರೆಯೇ ಎಂದು ಹೇಳಿದೆ ಮಗ ನೀನು ನನಗೆ......
ಮಾನವಹತ್ಯೆ ಬ್ರಹ್ಮಹತ್ಯೆ ಮಾಡಿದೆಯಾ ಎನಗೆಂದರು......
ಆಚೆ ನೋಡಿದರು ಏನು ಮಾಡಬೇಕು ಈಚೆ ನೋಡಿದರು ಏನು ಮಾಡಬೇಕೆಂದು ಹೇಳಿದರಂತೆ

ಕಣ್ಣಲ್ಲಿ ಕಡುದುಃಖ ತೆಗೆದರು ಹೊಟ್ಟೆಯಲ್ಲ ಸಂಕಟಪಟ್ಟರಂತೆ ಇಂದು......ಇಂದು......
ಮೇಲ್ ಮೇಲಿನ ಲೋಕ ಓ ಒಬ್ಬ ಬೆರ್ಮೆರ ಪಾದಕ್ಕೆ ಶರಣು ಹಾಕಿದರು ಸಾಮು ಆಳ್ವೆದಿ......
ನಾರಾಯಣ ಓ ನಾರಾಯಣಾ......
ಅಂದಿನ ದಿನಕ್ಕೆ ಇಂದು ಒಂದು ವರ್ಷ ಒಂದು ದಿನ ಆಗಿ ಬಂತಪ್ಪ ಸಿರಿಗೆ ಓ......
ಸಿರಿಗೆ ವೇಳೆ ಕಾಲ ಓ ಬಂತಪ್ಪಾ......
ನಾರಾಯಣ ಇಂದು ನಾರಾಯಣ ಎಂದು ಹೇಳಿದರಂತೆ ಹೇಳಿ ಆಚೆ ನೋಡಿ ಈಚೆ ನೋಡುವಾಗ ಇಂದು ಬಡ ಬ್ರಾಹ್ಮಣನ ನಿಜರೂಪ ಓ ತೋರಿ ಬಂತು......
ನಾರಾಯಣ ಮಗ ಸಾಮು ಆಳ್ವೆದಿ ಓ......
ಭಯ ಪಡಬೇಡ ಓ ಹೆದರಿಕೊಳ್ಳಬೇಡ......
ಸಿರಿ ಹೆತ್ತಳು ಬಾಣಂತಿಯಾದಳು
ನಾನಾದರೂ ಓ ನಿಲ್ಲುತ್ತೇನೆ ಮಗಾ......
ಹೊಕ್ಕುಳು ತುಂಡರಿಸಲು ಕತ್ತಿ ಇಲ್ಲಪ್ಪಾ ಮಗುವನ್ನು ಮಲಗಿಸಲು ಹಾಳೆ ಇಲ್ಲವೆಂದು ಹೇಳಲು ಹೇಳುತ್ತಾರೆ......
ಇಂದಾದರೋ ಇಂದು ಅಲಿಕ್ಕುಂಜ ಕಾಡಿನಲ್ಲಿ ಇಂದು ಪಿಲಿಕ್ಕುಂಜ ಕಾಡಿನಲ್ಲಿ ನಾನು ನಿಲ್ಲುತ್ತೇನಪ್ಪ
ನೀನು ಹೋಗು ಓ ಕೊಟ್ಟರಾಡಿಯ ಅರಮನೆಗೆ ಕೊಡ್ಸರಾಳ್ವನಿಗೆ ಹೇಳು ಸಾಮು......
ಮಗುವನ್ನು ಮಲಗಿಸಲು ಹಾಳೆ ತಂದುಬಿಡಮ್ಮಾ......
ಹೊಕ್ಕುಳಬಳ್ಳಿ ಕತ್ತರಿಸಲು ಕತ್ತಿ ತಾ ಎಂದರು......
ಆಚೆ ನೋಡಿ ಈಚೆ ನೋಡುವಾಗಪ್ಪಾ......ಓ......
ಸಾಮು ಆಳ್ವೆದಿ ಓಡೋಡುತ್ತಾ ಓ ಕೊಟ್ಟರಾಡಿಯರಮನೆಯನ್ನು ಹೋಗಬೇಕಾದರೆ ಒಬ್ಬ ಬ್ರಾಹ್ಮಣ ಬಂದು ನಿಜರೂಪ ತಾಳಿದ್ದಾನೆ ಓ ಕುಮಾರನಂತೆ ಗೋಚರಿಸಲಾಗಿ ಓ......
ನಾರಾಯಣಾ ಓ ನಾರಾಯಣ ದೇವರೆ ಬೆರ್ಮೆರೇ......ಓ......
ಇಂದಾದರೋ ಇಂದು ಅಲಿಕುಂಜ ಕಾಡಿನಲ್ಲಿ ಇಂದು ಪಿಲಿಕ್ಕುಂಜ ಕಾಡಿನಲ್ಲಿ ಇಂದು ಮಗುವನ್ನು ನೋಡಿದಳಂತೆ ಇಂದು ಹೆರಿಗೆ ಆದವಳಂತೆ ಇಂದು
ಬಲದ ಕೈಯಲ್ಲಿ ಅಡಕೆ ಇಟ್ಟಳಂತೆ, ಬಲದ ಕೈಯಲ್ಲಿ ಅಡಕೆ ಇಟ್ಟು ಸಸಿಕಂಗು ಹಾಳೆ ಹಿಂಗಾರ ಆಗಬೇಕೆಂದಳು ಇಂದು ಮಣ್ಣು ಮುಟ್ಟಿದಳಂತೆ ಹೆಣ್ಣುಶಾಪ ಕೊಟ್ಟಳಂತೆ ಇಂದು ಸಿರಿ
ಬಲದ ಕೈಯಲ್ಲಿ ಅಡಕೆ ಇಟ್ಟಳು......ಓ......
ಕಂಗಿನ ಸಸಿ ಮಾಡಿದಳು ಸಿರಿ......
ಅಡಕೆ ಸಸಿಯಲ್ಲಿ ಹಾಳೆ ಹಿಂಗಾರ ಬಲಿಯಿತು ಇಂದು
ಹಾಳೆ ಆಯಿತಂತೆ ತುದಿ ಬುಡ ಕತ್ತರಿಸಿದಳಂತೆ ಇಂದು......

ಹೆರುವ ಕಳದಲ್ಲಿ ಹುಟ್ಟಿದ ಮಗುವಿಗೆ ಹೆಸರಿಡಬೇಕೆಂದಳಂತೆ ಇಂದು
ಓ ಸಿರಿ ಹೇಳುತ್ತಾಳಂತೆ......ಓ......
ನಾರಾಯಣಾ ಓ ನಾರಾಯಣ ದೇವರೆ ಬೆರ್ಮರೇ......
ಇಂದಾದರೋ ಇಂದು ಮಗುವನ್ನು ಕೈಯಲ್ಲಿ ಹಿಡಿದು ಬಾಯಿತುಂಬ, ಹೊಟ್ಟೆ ತುಂಬುವಷ್ಟು ಮೊಲೆಯೂಡಿಸತೊಡಗುವಾಗ
ಹೇಳಿದಳಂತೆ ಇಂದು ಬಾಯಿಗೆ ಮೊಲೆ ಓ ಇಡುವುದಿಲ್ಲಪ್ಪಾ ಓ......
ಮಗು ಚಿಮ್ಮಿ ಚಿಮ್ಮಿ ಅಳುತ್ತದೆ......
ನಾರಾಯಣ ನಾರಾಯಣ ಮಗ ಕುಮಾರಾ......ಓ......
ಒಂದು ವರ್ಷ ಓ ಒಂದು ದಿನ ಇಂದಿಗೆ ಸೇರಿ ಬಂತು ಮಗ......
ಒಬ್ಬಳು ತಾಯಿಗೆ ಒಂದೇ ಮಗು ಅಲ್ಲವಂತೇ (ಸಾಲದಂತೆ) ಬಾಳೆಗೆ ಒಂದೇ ಚಿಕ್ಕ ಸಸಿ ಅಲ್ಲವಂತೆ (ಸಾಲದಂತೆ)......
ನಿನ್ನ ಮುಖದ ಮುತ್ತಿನ ಬೆವರು ಒರೆಸಲು......ಓ......
ನಿನ್ನ ಬೆನ್ನಿನ ಯಮ(ದಟ್ಟವಾದ)ಧೂಳು ತೊಳೆಯಲು ಓ
ನಿನಗೊಂದು ಬೆನ್ನಲ್ಲೇ ತಂಗಿ ಸೊನ್ನೆಯನ್ನೂ ಓ ಹೆತ್ತ ಸ್ಥಳದಲ್ಲೇ ಹೆಸರು ಓ ಇಟ್ಟರಂತೆ......
ರಣರಂಗದ ನೆರೆ ಬರಲಪ್ಪಾ......
ಸಣ್ಣ ತೋಡು ಸಣ್ಣ ಕಾಲುಸಂಕದಲ್ಲಿ
ರಣರಂಗದ ನೆರೆಯಲ್ಲಿ ತೇಲಿಬಿಟ್ಟಳು ಸೊನ್ನೆಯನ್ನು ಸಿರಿ......
ನೀನು ನೆರೆಯಲ್ಲಿ ತೇಲಿಹೋಗಬೇಕು
ಸಣ್ಣ ತೋಡಿನಲ್ಲಿ ಓ ಗಿಡ್ಡವಾದ ಕಾಲುಸಂಕದಲ್ಲಿ
ರಣರಂಗದ ನೆರೆಯಲ್ಲಿ ಹೋಗಬೇಕು ಮಗಾ
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರ್ ಅವರ ಬೈಲುಗದ್ದೆಯಲ್ಲಿ
ಗದ್ದೆಯ ಬದುವಿನಲ್ಲಿ ಓ ಹಿಂಗಾರದ ಹೂಹಾಳೆ ಹೋಗಿ ಸೇರಿಕೊಳ್ಳುವಂತೆ
ಸೇರಿಕೊಳ್ಳಬೇಕು ಮಗಾ ಎಂದರು......
ಮಣ್ಣು ಮುಟ್ಟಿದರು ಓ ಹೆಣ್ಣು ಶಾಪ ನೀಡಿದರು......
ಒಂದು ವರ್ಷ ಓ ಒಂದು ದಿನ ಓ
ಬೊಲ್ಯೊಟ್ಟು ಬೆಳ್ಳಿಮಾಡ ಓ ಬಿಳಿಯ ಬುಗರಿಯ ಮರದಲ್ಲಿ......
ಬಿಳಿಯ ಶಾಸ್ತ್ರಹುಂಜ ಆಗಿ ಓ ಕಂಚಿನ ಕೋಳಿಯಾಗಿ......
ರಕ್ಕೆ ಬಡಿದು ಕೂಗಿ ಓ ಧಾರೆನೀರಲ್ಲಿ ಓ ಬಿಳಿಯಬಟ್ಟೆ ಹಾಸಿ
ತಾಯೀ ಎಂದು ಕರೆದರೆ ಓ ಮಗ ಎಂದು ಪ್ರೀತಿಸುವೆ ಓ ಮಗ ಕುಮಾರಾ......
ನಾರಾಯಣ ಓ ನಾರಾಯಣಾ ಓ......
ಗುರ್ಗಲಾಡೀ ಓ ಚಂದುಪೆರ್ಗಡೇ ಓ ಬನ್ನಾರ್......
ನಸುಕಿನಲ್ಲಿಯೇ ಓ ಎದ್ದರಂತೆ......ಓ......

ಮುಚ್ಚಿರುವ ಬಾಗಿಲು ಓ ತೆರೆದರಂತೆ......
ಕಿಟಕಿಗೆ ಕೈ ಓ ಕೊಟ್ಟರಂತೆ
ಗಿಂಡಿಯ ನೀರು ತೆಗೆದು ಮುಖದ ಕೊಳೆ ಓ ಕಣ್ಣಿನ ನಿದ್ದೆ ಓ ತಿಳಿಯಾಗಿಸಿದರಂತೆ......
ಓ......ಅಜ್ಜನವರು......
ಗಿಂಡಿ ಕೊಂಡುಹೋಗಿ ಕಿಟಕಿಯಲ್ಲಿಟ್ಟರು......ಓ......
ವೀಳ್ಯದೆಲೆಯ ತಟ್ಟೆ ಹಿಡಿದರು ಅಜ್ಜನವರು......
ಚಿಕ್ಕ ಚಾವಡೀ ಓ ಸಿದ್ರ ಮಂಟಪಕ್ಕೆ ಓ......
ತೂಗುಯ್ಯಾಲೆಯಲ್ಲಿ ಓ ಬಾಜಿರದ ಹಲಗೆಯಲ್ಲಿ......
ಜೊತೆಗೆ ಕುಳಿತರು ಅಜ್ಜನವರು......ಓ......
ವೀಳ್ಯದ ತಟ್ಟೆ ಮಡಿಲಲ್ಲಿಟ್ಟುಕೊಂಡರು......
ಅಡಕೆ ತಿಂದರು ಚಿತ್ತವಿಕಾರಗೊಂಡರು
ವೀಳ್ಯ ತಿಂದು ಆನಂದಪರವಶರಾದರು
ಸುಣ್ಣ ತಿಂದು ಕೆಂಪೇರಿದರು......
ಬಾಯಿಯ ವಾಸನೆಗೆ ಎಲೆ ಅಡಿಕೆ ಮೆದ್ದರು......
ಕಾಯಿ ತಿಂದು ವಿಶ್ರಾಂತರಾದರು ಅಜ್ಜನವರು......ಓ......
ತಟ್ಟೆ ಕೊಂಡುಹೋಗಿ ಕಿಟಕಿಯಲ್ಲಿಟ್ಟರು......ಓ......
ಒಳಸೂತ್ರಕ್ಕೆ ಹೋದರು ಅಜ್ಜನವರು......ಓ......
ಆರು ಮೊಳ ಕಾಂಗು(ಬಟ್ಟೆ) ಸೊಂಟಕ್ಕೆ ಸುತ್ತಿದರು ಅಜ್ಜನವರು......ಓ......
ಮೂರು ಮೊಳ ಕಾಂಗು(ಬಟ್ಟೆ) ತಲೆಗೆ ಕಟ್ಟಿದರು ಅಜ್ಜನವರು......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರ್......ಅವರು......
ಚಂದು ಪೆರ್ಗಡೇ ಓ ಬನ್ನಾರಂತೇ ಓ......
ಹಾರೆ ಇಡುವ ಕೋಣೆಗೆ ಓ ಹೋದರು ಅಜ್ಜನವರು......ಓ......
ಬಸರೂರ ಓ ಪನ್ನೆ(?) ಹಾರೆ ಎಡದ ಹೆಗಲಿಗೆ ಓ ಇಟ್ಟರು ಅಜ್ಜನವರು......
ಎಡದ ಹೆಗಲಿಗೆ ಓ ಇಟ್ಟರು ಅಜ್ಜನವರು......ಓ......
ಗುರ್ಗಲಾಡೀ ಓ ಕಂಬಳದ ಬದುವಿನ ಮೂಲಕ ಓ ಬೈಲುಗದ್ದೆಗೆ ಹೋಗಬೇಕಂದರು..
ತಗ್ಗಿದ ನೀರನ್ನು ಓ ಏರಿಸಿಕೊಂಡು ಓ ಏರಿದ ನೀರನ್ನೂ ಓ ತಗ್ಗಿಸಿಕೊಂಡು......
ಹಳೆಯ ತೆರಪು ಮುಚ್ಚಿಕೊಂಡು ಹೊಸ ತೆರಪು ತೆರೆದುಕೊಂಡು
ಕಂಬಳ ಗದ್ದೆಯ ಓ ಈ ತುದಿಯಿಂದಾ......
ಚೆಂದೆಂಗಿನಮರದ ಪದ್ಮಕಟ್ಟೆಯ ಬುಡಕ್ಕೆ ಓ ಹೋದರು ಅಜ್ಜನವರು......
ತಾರೆಯನ್ನೂ ಓ ಗದ್ದೆಯ ಬದುವಿನಲ್ಲಿಟ್ಟರು......ಓ......
ಗದ್ದೆಯ ತೆರಪಿನಲ್ಲಿ ಓ ರಣರಂಗದ ನೆರೆ ಏನು ಬಂದಿದೆಯಪ್ಪಾ......
ಇದೇನಿಲ್ಲಿ ಹೊಂಬಾಳೆ ಅಡಕೆ ಹೊಂಬಾಳೆ ಗದ್ದೆಯ ತೆರಪಿನಲ್ಲಿ ಏನು ಬಂದು ನಿಂತಿದೆಯೆಂದರು......

ಹಾರೆಯನ್ನು ಗದ್ದೆಯ ಬದುವಿನಲ್ಲಿಟ್ಟರು ಅಜ್ಜನವರು......ಓ......
ಕಂಬಳದ ಗದ್ದೆಯ ತೆರಪಿಗೆ ಇಳಿದರು ಅಜ್ಜನವರು......
ಕಂಬಳದ ಗದ್ದೆಯ ತೆರಪಿಗೆ ಇಳಿದು......
ಹೂ ಹೊಂಬಾಳೆಯೆಂದು ಹೆಕ್ಕುವಾಗ ಅಜ್ಜನವರು......
ಗುರ್ಗಲಾಡೀ ಓ ಚಂದುಪೆರ್ಗಡೆ ಓ ಬನ್ನಾರಂತೆ......
ಹೊಂಬಾಳೆ ಹೆಕ್ಕುವಾಗ ಓ ಹೆಣ್ಣುಮಗುವೊಂದು ಅಳುತ್ತದೆ......ಓ......
ನಾರಾಯಣ ದೇವರೇ ನಾರಾಯಣ ದೇವರೆ ಬೆರ್ಮರೇ......ಓ......
ಯಾರಪ್ಪಾ ಓ ಮಗುವನ್ನಿಲ್ಲಿ ಬಿಟ್ಟಿದ್ದಾರೆಂದರು......
ಎರಡು ಕೈಗಳಲ್ಲಿ ಓ ಮಗುವನ್ನೆತ್ತಿಕೊಂಡರು......
ಮಕ್ಕಳುಮರಿ ಓ ಇಲ್ಲದವನು ನಾನು......
ಆ ಕಾಲದಲ್ಲಿ ಓ ಬಿರ್ಮು ಮಾಲವರಿಗೆ ಓ
ಸಂತಾನ ಸಿಕ್ಕಿದೆಯಂತೆ ಓ ಆ ರೀತಿಯ ವೇಳೆ ಓ
ದೇವರು ಬೆರ್ಮರು ಓ ನನಗೆ ಕೊಟ್ಟು ಬಿಟ್ಟರೆ ಓ ಎಂದರು ಅಜ್ಜನವರು......ಓ......
ಎರಡು ಕೈಯಲ್ಲಿ ಓ ಮಗುವನ್ನೆತ್ತಿಕೊಂಡು ಓ......
ಗುರ್ಗಲಾಡಿ ಬೈಲು ಹಿಂದಿಕ್ಕಿದರು ಅಜ್ಜನವರು......ಓ......
ಗುರ್ಗಲಾಡಿ ಓ ಅರಮನೆಗೆ ಹೋದರು......
ಓರಗೆಯ ಓ ಹೆಣ್ಣುಗಳನ್ನು ಕರೆದರು......
ನಾರಾಯಣ ಹೆಣ್ಣುಗಳೇ ಓ ನಾರಾಯಣ ಹೆಣ್ಣುಗಳೇ ಓ......
ನನಗೊಂದು ಮಗು ಓ ಸಿಕ್ಕಿತೆಂದರು......
ಜಾಗ್ರತೆಯಾಗಿ ಇದಕ್ಕೆ ಸ್ನಾನ ಮಾಡಿಸಿ ಎಂದರು......
ಎದೆ ತೊಟ್ಟಿಲು ಎಂದು ಕಟ್ಟಿಸಬೇಕು ಅದಕ್ಕೆಂದರು......
ಕಿರುಬೆರಳಿಗೆ ಓ ಪಟ್ಟಿ ಸುತ್ತಬೇಕು......
ತಾಯಿಯ ಮೊಲೆಹಾಲೆಂದು ಓ ಕುಡಿಸಬೇಕೆಂದರು......
ಗುರ್ಗಲಾಡಿ ಓ ಚಂದುಪೆರ್ಗಡೆ ಓ ಬನ್ನಾರು......
ಅಷ್ಟು ಹೊತ್ತಿಗೆ ಓ ಮಗುವನ್ನು ಮಲಗಿಸಿ
ಆಯದ ತುದಿಯಲ್ಲಿ ಸೋಯದದ(?) ನೇಲೆ ಓ ಹಾಕಿಸಿದರು ಅಜ್ಜನವರು......
ಸೋಯದ ನೇಲೆಯಲ್ಲಿ ಮಗುವನ್ನು ಮಲಗಿಸಿ......
ಕಣ್ಣಿಗೆ ನಿದ್ದೆ ಆವರಿಸುವುದನ್ನು ನೋಡಿದರು......
ಗದ್ದೆಯ ಬದುವಿನಲ್ಲಿ ಓ ಹಾರೆ ಇದೆಯಪ್ಪಾ......
ನಾನು ಅದನ್ನು ತರುತ್ತೇನೆಂದರು......ಓ......
ಗುರ್ಗಲಾಡೀ ಓ ಚದು ಪೆರ್ಗಡೆ ಬನ್ನಾರ್ ಅವರು......
ನಾರಾಯಣಾ ನಾರಾಯಣಾ......ಓ......
ಕಂಬಳದಾ ಓ ಈ ತುದಿಗೆ ಬಂದೆ......ಓ......

ಹಾರೆ ಹಿಡಿದು ಒಂದು ಸುತ್ತು ಬರುತ್ತೇನೆ......
ತೋಡಿನ ಬದಿಯಲ್ಲೇ ಬರುತ್ತೇನೆಂದರು ಅಜ್ಜನವರು......
ಈ ತುದಿಯಿಂದ ಓ ಆ ತುದಿಗೆ ಹೋಗುವಾಗ ಓ......
ಒಂದು ಮಗು ಅಳುವ ಸ್ವರ ಕೇಳಿಸುತ್ತದೆ......
ನಾರಾಯಣಾ ಓ ನಾರಾಯಣಾ ಓ ನಾರಾಯಣಾ......
ಪ್ರಶ್ನೆ ಇದೆಯೇ, ಕೇಳಬೇಕಂತೆ ಓ......
ಪೆಜನಾರರ ತಂಗಿಯಂತೆ ಓ......
ಜೇವು ಕೇದಗ ಎಂಬ ಹೆಂಗುಸೂ ಓ......
ಗರ್ಭಿಣಿ ಓ ಆಗಿದ್ದಾರಂತೆ......
ಆರು ತಿಂಗಳು ಓ ಕಳೆದಿದೆಯಂತೆ ಅವರಿಗೆ......ಓ......
ಏಳು ತಿಂಗಳು ಓ ತುಂಬಿದೆಯಂತೆ......ಓ......
ಒಂದಾನೊಂದು ದಿನದಲ್ಲಿ ಓ......
ಬಡಬ್ರಾಹ್ಮಣ ಒಬ್ಬ ಹೋಗಿದ್ದಾರಂತೆ ಅಲ್ಲಿಗೆ.....
ಪೆಜನಾರ್ ಓ ಹೊರಟರಂತೆ ಓ......
ನೀವು ಓ ಎಲ್ಲಿಗೆ ಹೋಗುತ್ತೀರಿ ಮದುಮಗ ಓ ಎಂದು
ಕೇಳುತ್ತಾಳಪ್ಪಾ ಓ ಕೇದಗ ಅವಳು......
ಕೇದಗ ಕೇಳಲು ಹೇಳುತ್ತಾರಂತೆ......
ಮೊದಲ ಹೆರಿಗೆಯ ತಿಂಗಳು ತುಂಬಿದಾಗ......ಓ......
ನನ್ನನ್ನು ಬಿಟ್ಟು ಓ ಎಲ್ಲಿಗೆ ಹೋಗುತ್ತೀರೆಂದು ಓ ಮದುಮಗನಲ್ಲಿ ಕೇಳುವಾಗ......
ಎಂಟು ತಿಂಗಳು ಕಳೆದಿದೆ ನನಗೆ
ಒಂಬತ್ತನೇ ತಿಂಗಳ ಬಂತಲ್ಲಾ......ಓ......
ಅಲ್ಲಿಗೆ ಒಮ್ಮೆ ಹೋಗಬೇಕು ನನಗೆ......
ಕುಂಬಳೆಯ ದೇವಸ್ಥಾನಕ್ಕೊಮ್ಮೆ ಹೋಗಬೇಕು......
ಮೂರು ಪಿಂಡ ಬಿಡಲಕ್ಕಿದೆ (ಹಾಕಲಿಕ್ಕಿದೆ) ಎಂದರು......ಓ......
ಏನು ಒಬ್ಬ ಪೆಜನಾರ್ ಓ ಮನುಷ್ಯ ಹೇಳುತ್ತಾರೆ......
ಅಲ್ಲಿಂಗ ಹಾಗೆ ಹೋಗುವಾಗ......
ಒಂದಾನೊಂದು ದಿನದಲ್ಲಿ ಇನ್ನು
ಮೂಲದ ಮುದ್ದ ಓ ಕಾಲದ ಕಲ್ಲಲ
ಯಾರು ಆಳು ಓ ಯಾರು ಆಳು......
ತಂದೇವು ಮರದ ಎಲೆ ತರಬೇಕು ನನಗೆ......
ಅದರಲ್ಲಿ ತಯಾರಿಸಿದ ಗಟ್ಟಿ ತಿನ್ನಬೇಕು ನನಗೆ
ಬಾಯಿಯ ಆಸೆ ಕಳೆಯಬೇಕೆಂದು......
ಹೆಣ್ಣು ಕೇದಗ ಓ ಹೇಳುತ್ತಾಳಪ್ಪ......

ಹೆಣ್ಣು ಕೇದಗ ಓ ಹೇಳುವಾಗ......
ಹೆರಿಗೆಗೆ ಹೆರಿಗೆಯ ತಿಂಗಳು ತುಂಬುವಾಗ
ಮೂಲದ ಮುದ್ದ ಕಾಲದ ಕಳಲನಲ್ಲಿ
ಚಂದೆವಿನ ಎಲೆ ಓ ತಂದು ಕೊಡುತ್ತೀಯೇ
ಎಂದು ಓ ಹೇಳುವಾಗ ಆಳು
ಒಂದು ಬಳ್ಳ ಅಕ್ಕಿ ಹಾಕಿದಳು ಹೆಣ್ಣು
ದಡ್‌ಬಡ್ ಎಂದು ಅರೆದಳು
ದುಡಿದೂಸೆಲ್ (ನುಣ್ಣಗೆ) ಓ ಮಾಡಿಕೊಂಡು
ತಂದೇವಿನ ಎಲೆಯ ಓ ಕಡುಬು ತಿನ್ನಬೇಕಂದಳು ಹೆಣ್ಣು ಕೇದಗ......
ಕಾಲದ ಕಲ್ಲಲ ಓ ಮೂಲದ ಮುದ್ದನಲ್ಲಿ
ಎಲೆ ತಂದುಕೊಡೆಂದು ಹೇಳುವಾಗ ಹೇಳುತ್ತಾನಂತೆ ಆಳು......
ಆಳು ಹೋಗಿ ತಂದೇವಿನ ಮರವನ್ನು ನೋಡುವಾಗ......
ತಂದೇವಿನ ಮರದಿಂದ ಕೇಳುತ್ತದೆಯಪ್ಪ......
ಹುಲಿ ಒಂದು ಕುಳಿತುಕೊಂಡು ಮೆಲ್ಲುತ್ತಿರುವುದನ್ನು ನೋಡಿದನಂತೆ......
ಓಡುತ್ತಾ ಓಡುತ್ತಾ ಬಂದನಂತೆ ಕಲ್ಲಲ......
ಯಾರು ಒಡತೀ ಯಾರು ಒಡತೀ ಎಂದು
ಒಂದೇ ಉಸಿರಿಗೆ ಮೂರು ಬಾರಿ ಕರೆದನಂತೆ......
ಮೂರು ಬಾರಿ ಕರೆಯಲು ಹೇಳುತ್ತಾಳಂತೆ......
ಎಲ್ಲಿದೆ ಆಳೇ ಎಲೆ ಎಂದು ಕೇಳಲು......
ಎಲೆ ತರಲು ಹೋಗುವಾಗ
ಮರದಲ್ಲಿ ಹುಲಿಯೊಂದು ಕುಳಿತು ಮೆಲ್ಲುತ್ತಿರಲು......
ನೋಡುತ್ತದೆಯಲ್ಲಾ ಎಂದನಪ್ಪ ಅವ......
ಹೋಗು ಆಳೇ ಓ ಕಾಲದ ಕಲ್ಲಲ ಮೂಲದ ಮುದ್ದಾ ಹೋಗಿ......
ಹೆಣ್ಣುಮಗು ಹೆತ್ತರೆ ಓ ನಿನಗೆ ಕೊಡುತ್ತೇನೆ......
ಗಂಡುಮಗು ಹೆತ್ತರೆ ಓ ಅವರಿಗೆ ಬೇಕಂತೆ
ಎಂದು ಹೇಳಿದರು ಒಡತಿ ಎಂದು ಹುಲಿಗೆ ತಿಳಿಸು ಎಂದರು ಕಲ್ಲಲನೊಡನೆ......
ಕಾಲದ ಕಲ್ಲಲ ಓ ಮೂಲದ ಮುದ್ದಾ......
ಅಷ್ಟು ಹೇಳುವುದನ್ನೂ ಕೇಳಿತು ಹುಲಿ......
ಬಡಕ್ಕನೆದ್ದು ದಿಡಕ್ಕನೆ ಓಡಿ......
ಹೋಗಿ ದೂರದಲ್ಲಿ ನಿಲ್ಲಲು......
ತಂದೇವಿನ ಎಲೆ ತಂದುಬಿಟ್ಟ
ತಂದೇವಿನ ಎಲೆಯನ್ನು ಓ ತಂದುಕೊಡುವಾಗ
ಹುಡುಗಿ ಬೇಗಬೇಗನೆ ಕಡುಬು ಇಟ್ಟು

ಬೇಯುತ್ತಾ ಬರುವಾಗ ಎಲೆಯ ಪರಿಮಳದಲ್ಲಿ
ಪರಿಮಳ ತಡೆಯಲಾಗದೆ ಹೆರಿಗೆಯ ನೋವಿನಲ್ಲೆ
ಒಂದು ಕಡುಬು ತಿಂದುಬಿಟ್ಟಳು ಹುಡುಗಿ......
ಒಂದು ನೋವಿಗೆ ತಿಳಿಯಾದ ಮುಖದಲ್ಲಿ ಹುಳಿಯದ ನೋವು ಕಾಣಿಸಿಕೊಂಡು......
ವೇಳೆ ಘಳಿಗೆಯಲ್ಲಿ ನಿಮಿಷದ ಹೊತ್ತಲ್ಲಿ......
ಹೆಣ್ಣುಮಗುವೊಂದು ಭೂಮಿಗೆ ಜನನಕ್ಕೆ ಬಂತು......
ಹೆಣ್ಣುಮಗು ಭೂಮಿಗೆ ಜನಿಸಿ ಬರುವಾಗ
ಹರುಷದ ದೇಹ ಮುತ್ತಿನ ನಗುವಾಯಿತು......
ಮಗುವನ್ನು ನಡೆದುಕೊಂಡರೆ ಮನೆ ಬದುಕು ಉಳಿಯದು......
ಹುಡಿಗಿಯನ್ನು ನಾನು ಕೊಡುವುದಿಲ್ಲವೆಂದು ಹೇಳುತ್ತಾಳಪ್ಪಾ ಹೆಣ್ಣು ಕೇದಗ ಅವಳು......
ಹೆಣ್ಣು ಕೇದಗ ಒಂದು ದಿನದ......
ಮೂರರಲ್ಲಿ ಮೂರನೆಯ ಪುರುಡು
ಏಳರಲ್ಲಿ ಏಳರ ಪುರುಡು
ಒಂಬತ್ತರಲ್ಲಿ ಒಂಬತ್ತರ ಪುರುಡು
ಹನ್ನೆರಡರಲ್ಲಿ ಓ ಪುಣ್ಯಾರ್ಚನೆ ಮಾಡಿದರಂತೆ......
ನಾಮಕರಣ ಮಾಡಿ......
ವೇಳೆ ಹೋಗುತ್ತದೆ ಕಾಲ ತಡವಾಗುತ್ತದೆ......
ಮೂವತ್ತನೆಯ ದಿನ ಸೇರುತ್ತಾ ಬರುವಾಗ......
ಮೂವತ್ತೊಂದನೇ ದಿನದಂದು......
ಹುಲಿ ಓ ಮನೆಯ ಹಿಂದುಗಡೆ
ಕಿಡಕಿಯ ಮೂಲಕ ಇಣುಕುತ್ತಾ ಅಡಗುತ್ತಾ ಇರುವಾಗ......
ಹಾಳೆಯಲ್ಲಿ ಮಲಗಿದ ಮಗುವನ್ನಾದರೋ ಕಾಯುತ್ತಿದ್ದಾಳಪ್ಪಾ ಹೆಣ್ಣು ಕೇದಗ......
ಹುಡುಗಿ ಕೇದಗ ಮೂವತ್ತೊಂದನೇ ದಿನದಂದು......
ಮಗುವಿನ ಹಾಸುಬಟ್ಟೆ ಒಗೆದುಕೊಂಡು ಬರುತ್ತೇನೆಂದು
ಓ ಸಣ್ಣ ತೋಡಿಗೆ ಸಣ್ಣ ಕಾಲಸಂಕದಲ್ಲಿ
ಹೋಗುವುದನ್ನು ನೋಡಿದೆಯಂತೆ ಹುಲಿ......
ಕಿಟಕಿಯಿಂದ ಹೋಗಿ ಹೆಣ್ಣುಮಗುವನ್ನು
ಎಳೆದುಕೊಂಡು ಬಂದು ಹುಲಿ ಇನ್ನಾದರು......
ತಂದೇವು ಮರದಲ್ಲಿ ಇಟ್ಟುಬಿಟ್ಟಿದೆ......
ನಾರಾಯಣಾ ಓ ನಾರಾಯಣಾ......
ಅಜ್ಜನವರು ಹೋದರಂತೆ ಕಾಡಿನ ಬದಿಯಲ್ಲಿ ತೋಡಿನ ಪಕ್ಕದಲ್ಲಿ......
ಗದ್ದೆಗೆ ನೀರು ಬಿಡುತ್ತೇನೆಂದು ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು ಓ ಹೋಗುವಾಗ......

ತಂದೇವು ಮರದಲ್ಲಿ ಓ ಹೆಣ್ಣುಮಗು ಅಳುವ ಚಂದ......ಓ......
ಅಜ್ಜನವರ ಕಿವಿಗೆ ಓ ಕೇಳಿಸುತ್ತದೆಯಂತೆ......
ಆಚೆ ನೋಡಿದರು ಅಜ್ಜನವರು ಓ
ಈಚೆ ನೊಡಿದರು ಓ ಅಜ್ಜನವರು......
ಮಗುವನ್ನು ಮಲಗಿಸಿ ಅರಮನೆಯಲ್ಲಿ ಓ ಬಂದಿದ್ದೇನಪ್ಪಾ......
ಮಗು ಎಲ್ಲಿ ಅಳುವುದೆಂದು ಓ ಕೇಳುತ್ತಾರೆ ಅಜ್ಜನವರು......
ಸೇವಕಿ ಹುಡುಗಿಯರನ್ನು ಕರೆದು......
ನಾರಾಯಣ ಮಗ ಹುಡುಗಿಯರೆ ಓ ಮಗು ಎಲ್ಲಿದೆ ಓ ಇಲ್ಲಿ ಅಳುವುದು ಕೇಳಿಸುತ್ತಿದೆ ಎಂದು ಅಜ್ಜನವರು ಕೇಳುತ್ತಾರೆ......
ನಾರಾಯಣ ಓ ಅಜ್ಜನವರೆ......ಓ......
ಮಗುವಿಗೆ ಚೆನ್ನಾಗಿ ನಿದ್ದೆ ಆವರಿಸಿಹೋಗಿದೆ ಅಜ್ಜನವರೆ ಎಂದಳು......
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು......
ಹೊಳೆಬದಿಯ ಓ ಪೊದರಿನ ಎಡೆಗೆ ಹೋದರು......
ನಾರಾಯಣ ದೇವರು ಬೆರ್ಮರೆ......
ಎಲ್ಲಪ್ಪ ಮಗು ಅಳುವುದು ನನ್ನ ಕಿವಿಗೆ ಕೇಳಿಸುತ್ತಿದೆಯಲ್ಲ......
ಕಣ್ಣಿಗೆ ತೋರಿಸುತ್ತೀರೆ ಎಂದರು ದೇವರು ಬೆರ್ಮರಲ್ಲಿ......
ಗುರ್ಗಲಾಡಿ ಓ ಚಂದುಪೆರ್ಗಡೆ ಓ ಬನ್ನಾರರಂತೆ ಓ......
ಅಷ್ಟು ಹೊತ್ತಿಗೆ ಓ ತಂದೇವಿನ ಮರದಲ್ಲಿ......
ಪೊಟರೆಯ ಒಳಗೆ ಓ ಮಗು ಸಿಕ್ಕಿತಂತೆ
ಹರುಷದ ಮೈಯಾಯಿತು ಅಜ್ಜನವರಿಗೆ
ಮುತ್ತಿನ ನಗುವಾಯಿತು ಹರುಷಗೊಂಡರು ಅಜ್ಜನವರು
ಮನಸ್ಸಿನಲ್ಲಿ ಸಂತೋಷ ಓ ಪಡೆದರಜ್ಜನವರು
ನನಗೊಂದು ಮಗು ಓ ಸಿಕ್ಕಿತೆಂದರು......
ಗದ್ದೆಯ ತೆರಪಿನಲ್ಲಿ ಒಂದು ಮಗು ಸಿಕ್ಕಿತು ಓ......
ತಂದೇವು ಮರದ ಓ ಪೊಟರೆಯ ಎಡೆಯಲ್ಲಿ ಓ ಒಂದು ಮಗು ದೊರಕಿತೆಂದರು.....
ಒಂದೇ ತೊಟ್ಟಿಲಲ್ಲಿ ಓ ಎರಡು ಮಕ್ಕಳನ್ನು ಮಲಗಿಸಬೇಕೆಂದರು......
ನನಗೆ ಓ ತೂಗಬೇಕೆಂದರು ಓ ಅಜ್ಜನವರು......
ಎದೆಗೆ ಅವುಚಿಕೊಂಡರು ಓ ಪ್ರೀತಿ ಮಾಡಿದರು ಅಜ್ಜನವರು......
ಗುರ್ಗಲಾಡಿ ಓ ಅರಮನೆಗೆ ಬಂದರು ಅಜ್ಜನವರು......ಓ......
ನಾರಾಯಣ ಓ ನಾರಾಯಣಾ......
ಅಷ್ಟು ಹೊತ್ತಿಗೆ ಓ ಅಜ್ಜನವರು ಬಂದು ಓ
ಸೇವಕಿ ಹೆಣ್ಣುಗಳನ್ನು ಓ ಕರೆಸಿದರಜ್ಜನವರು......ಓ......
ನಾರಾಯಣ ಓ ನಾರಾಯಣಾ ಹೆಣ್ಣುಗಳೆ......

ಇನ್ನೊಂದು ಮಗುವನ್ನು ತಂದೆ ಎಂದು ಓ ಹೇಳಲು ಹೇಳುತ್ತಾರೆ ಹೆಣ್ಣುಗಳು......ಓ
ಅಜ್ಜನವರೇ......
ಅರುವತ್ತಾರು ಕೋಟಿ ಓ ನಾಗಬ್ರಹ್ಮರು ಕೊಟ್ಟರು ನಿಮಗೆ ಓ......
ಮೂವತ್ಮೂರು ಕೋಟಿ ಓ ದೇವರು ಕೊಟ್ಟ ಮಗು ಇದು......
ಎರಡು ಮಕ್ಕಳೆಂದು ಹೇಳುತ್ತಾರಂತೆ ಹೆಣ್ಣುಗಳು......ಓ......
ಸೇವಕಿ ಹೆಣ್ಣುಗಳು ಓ ಹೇಳುತ್ತಾರೆ......
ಅಷ್ಟು ಹೊತ್ತಿಗೆ ಓ ಎರಡು ಮಕ್ಕಳನ್ನು ಓ ಸ್ನಾನಮಾಡಿಸಿಕೊಂಡು ಓ......
ಹರುಷದ ಮೆಯಿ ಓ ಮುತ್ತಿನ ನಗುವಿನಲ್ಲಿ ಓ ಇದ್ದಾರಂತಪ್ಪಾ......
ಎರಡು ಮಕ್ಕಳನ್ನು ಓ ಎತ್ತಿಕೊಂಡರು ಅಜ್ಜನವರು ಓ......
ಮೊದಲು ದೊರೆತ ಮಗುವನ್ನು ಓ ಬಲದ ಕೈಯಲ್ಲಿ ಇಟ್ಟುಕೊಂಡರು ಅಜ್ಜನವರು......
ಬಳಿಕ ದೊರೆತ ಮಗುವನ್ನು ಅಜ್ಜನವರು ಎಡದ ಕೈಯಲ್ಲಿ ಎತ್ತಿಕೊಂಡರು......
ಪ್ರೀತಿಯಿಂದ ಮುದ್ದಾಡಿದರು ಓ ಕೊಂಡಾಡಿದರು ಅಜ್ಜನವರು ಓ......
ಗುರ್ಗಲಾಡೀ ಓ ಚಂದು ಪೆರ್ಗಡೇ ಓ ಬನ್ನಾರು ಅಜ್ಜನವರು......
ನಾರಾಯಣಾ ಓ ನಾರಾಯಣ ಹೆಣ್ಣುಗಳೇ......
ಮಗುವನ್ನು ಎತ್ತಿಕೊಂಡು ನಾನು ಕೂತರೆ ಓ ಆಗದು ಮಗ......
ಮಗುವಿಗೆ ತೊಟ್ಟಿಲು ಹಾಕಬೇಕು ನಮಗೆ......
ಕೆಳಗಿನ ಬದಿ ಪಾಲವರಿಗೆ ಓ ಮೇಲಿನ ಬದಿ ಪಾಲವರಿಗೆ
ಒಳ್ಳೆಯ ದಿನ ಓ ಮುಹೂರ್ತ ನೋಡಿ ಬರಬೇಕು ನನಗೆಂದರು......
ಜ್ಯೋತಿಷಿಯ ಕೊಟ್ಟಿಗೆ(ಮನೆ)ಗೆ ಓ ಹೋಗಬೇಕು ನನಗೆ......
ದಿನಮಾನ ನೋಡಬೇಕೆಂದರು......
ದಿನಮಾನ ಓ ನೋಡಿ ಇನ್ನು ಓ......
ವೇಳೆ ಕಾಲದಲ್ಲಿ ಓ ಮುಲ್ಕಿ ಸೇರಿ ಒಂಬತ್ತು ಮಾಗಣೆ
ಹನ್ನೆರಡು ಮಾಗಣೆ ಓ ಹನ್ನೆರಡು ಗ್ರಾಮದವರನ್ನು ಓ......
ಆಮಂತ್ರಿಸಿ ನಾನು ಓ ಬರುತ್ತೇನೆಂದರು......ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಓ ಬನ್ನಾರು......
ಆದೀತು ಅಕ್ಕನವರೇ ಓ ಎಂದರು......
ಜೋಕೆಯಿಂದ ಮಕ್ಕಳನ್ನು ನೋಡಿಕೊಂಡಿರಿ ಮಕ್ಕಳೇ ಎಂದರು......
ದಯ ತೊಟ್ಟಿಲು ಓ ಕಿರುಬೆರಳಿಗೆ ಓ ಪಟ್ಟಿ ಸುತ್ತಿ ಓ
ತಾಯ ಮೊಲೆಹಾಲೆಂದು ಓ ಕುಡಿಸಿ ಮಕ್ಕಳೇ ಎಂದರು......
ನಾರಾಯಣಾ ಓ ನಾರಾಯಣ ಅಜ್ಜನವರೆ......
ಕೋಣೆಯ ಯಮದೇವಿ ಗುಡಿಗೆ ಓ ಹೋದರು ಅಜ್ಜನವರು......ಓ......
ಅಂಕಣ ಮನೆ ಓ ಸಿರಿ ಪದೊಲಿಗೆ (ಉಗ್ರಾಣ ಕೋಣೆ) ಹೋದರು......
ಕಲೆಂಬಿ (ಕಲ್ಲಪೆಟ್ಟಿಗೆ)ಯ ಬಾಯಿಬೀಗ

ಕಂಚಿನ ಬೀಗಕ್ಕೆ ಓ ಮೆಂಚಿನ ಕೀಲಿಕೈ ಹಾಕಿದರು ಓ ಅಜ್ಜನವರು ಇಂದು......
ಅರುವತ್ತು ತೂಕ ಓ ಬಂಗಾರ ತೆಗೆದರು......ಓ
ಮೂವತ್ತು ತೂಕ ಓ ಬೆಳ್ಳಿ ತೆಗೆದರು ಅಜ್ಜನವರು......
ಸೆರಗಲ್ಲಿ ಐನೂರು ಓ ಬಟ್ಟೆಯ ತುದಿಯಲ್ಲಿ ಮುನ್ನೂರು ಓ ಕಟ್ಟಿದರು ಅಜ್ಜನವರು ಓ..
ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರು ಅಜ್ಜನವರು ಅವರು ಓ......
ಜ್ಯೋತಿಷಿಯ ಕೊಟ್ಟಿಗೆ(ಮನೆ)ಗೆ ಹೋದರು ಅಜ್ಜನವರು......ಓ......
ದೂರದಲ್ಲಿ ಬರುವುದನ್ನು ಓ ನೋಡಿದರು ಬಲ್ಯಾಯ......ಓ......
ಮೂರು ಕಾಲಿನ ಓ ಮುಂಡುಮುಕ್ಕಲಿಗೆ ಓ......
ಓ ದೂರದಲ್ಲಿ ತಂದು ಇಟ್ಟು ಬರುವುದನ್ನು ನೋಡಿ......
ಅಜ್ಜನವರೇ ಕುಳಿತುಕೊಳ್ಳಿ ಓ ಕುಳಿತುಕೊಳ್ಳಿ ಎಂದು ಹೇಳಿ ಓ......
ಹೇಳಿದನಂತೆ ಓ ಜ್ಯೋತಿಷಿ ಅವನು......
ನಾರಾಯಣ ಜ್ಯೋತಿಷಿ ಓ ನಾರಾಯಣ ಜ್ಯೋತಿಷಿ......
ಹರುಷದ ದಿನ ಓ ಮುತ್ತಿನ ನಗು ಓ ನನಗೆ ಬಂತು......
ಮಕ್ಕಳು ಓ ಇಲ್ಲದವ ನಾನು ಓ......
ಸೇವೆಗೆ ಓ ಹೆಣ್ಣುಗಳನ್ನು ಓ ಇಟ್ಟುಕೊಂಡಿರುವವ ನಾನು......
ಅರುವತ್ತರ ಪ್ರಾಯದ ಓ ಮುದುಕನಿಗೆ
ಎರಡು ಮಕ್ಕಳು ಓ ದೊರೆತಿವೆ ಜ್ಯೋತಿಷಿಯೇ......
ಮಕ್ಕಳನ್ನು ತೊಟ್ಟಿಲಲ್ಲಿ ಹಾಕಬೇಕು ಓ ನನಗೆ......
ಮಗುವಿಗೆ ತೊಟ್ಟಿಲು ಓ ಮಾಡಿಸಬೇಕು......
ಆಚಾರಿಯ ಕೊಟ್ಟಿಗೆಗೆ ಓ ಹೋಗಬೇಕು ನನಗೆಂದು......
ಹೇಳುತ್ತಾರಪ್ಪಾ ಓ ಅಜ್ಜನವರು ಅವರು......
ಗುರ್ಗಲಾಡೀ ಓ ಚಂದು ಪೆರ್ಗಡೆ......
ಬನ್ನಾರು ಅವರು ಓ ಹೇಳುತ್ತಾರಂತೆ......
ನಾರಾಯಣಾ ಓ ನಾರಾಯಣ ದೇವರೇ......
ದೇವರು ಬೆರ್ಮರೇ ಓ ಕೇಳಿಯಪ್ಪ......
ಒಳ್ಳೆಯ ದಿನ ಓ ಒಳ್ಳೆಯ ವಾರ ಅಜ್ಜನವರೆ......
ಈ ಬರುವ ಮಂಗಳವಾರ ಅಲ್ಲ ಓ ಮೇಲೆ ಬರುವ ಮಂಗಳವಾರಕ್ಕೆ......
ಕೊಟ್ಟಿಗೆಗೆ ಜಾನುವಾರುಗಳು ಓ ಸೇರಿಕೊಳ್ಳುವ ಹೊತ್ತಿಗೆ
ಉದಯವಾದ ಸ್ವಾಮಿ(ಸೂರ್ಯ) ಅಸ್ತಂಗತನಾಗುವಾಗ ಇನ್ನು ಓ......
ಮಕ್ಕಳನ್ನು ತೊಟ್ಟಿಲಲ್ಲಿ ಓ ಮಲಗಿಸಬಹುದೆಂದು......
ಜ್ಯೋತಿಷಿಯ ಕೊಟ್ಟಿಗೆಯಲ್ಲಿ ಜ್ಯೋತಿಷಿ ಹೇಳುತ್ತಾನಪ್ಪಾ......
ಅಲ್ಲಿಂದ ಹಾಗೆ ಹೋದರು ಅಜ್ಜನವರು......
ಒಂದು ಹೊಡೆತಕ್ಕೆ ಓ ಒಂದು ಬಿಗಿತಕ್ಕೆ......

ಅರುವತ್ತು ತೂಕದ ಓ ಬಂಗಾರದ ತೊಟ್ಟಿಲೂ
ಮೂವತ್ತು ತೂಕದ ಓ ಬೆಳ್ಳಿಯ ಹುರಿದಾರ ಮಾಡಿಸಿದರು ಅಜ್ಜನವರು......
ಮೂಲ್ಕಿಗೆ ಹೋಗಬೇಕೆಂದರು ಅಜ್ಜನವರು......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು......
ಬಂಗರಬೆಟ್ಟು ಬೊಲಿಯಬೆಟ್ಟು ಕಕ್ಕೆಬೆಟ್ಟು ಕಾರಿಬೆಟ್ಟು......
ಮೂಲ್ಕಿ ಸೇರಿ ಒಂಬತ್ತು ಮಾಗಣೆ ಓ......
ಬಂಗರಬೆಟ್ಟು ಬೊಲಿಯಬೆಟ್ಟುವಿಗೆ ಹೋಗಬೇಕಂತೆ ಇನ್ನ ಮುಂಡೇರು......
ಬೋಳ ಬೊಲ್ಮಾನ ಕಾಪು ಕಡಂದಲೆ ಹನ್ನೆರಡು ಗ್ರಾಮ ಹನ್ನೆರಡು ಮಾಗಣೆಗೆ
ಹೋದರು ಅಜ್ಜನವರು......
ಮಕ್ಕಳನ್ನು ತೊಟ್ಟಿಲಲ್ಲಿ ಹಾಕಲು ದಿನಮಾನ ನೋಡಿದೆ ಹೆಂಗುಸರೇ ಎಂದರು......
ನೀವೂ ಒಂದು ಗಳಿಗೆ ಬರಬೇಕಪ್ಪಾ......
ನನ್ನ ಮಮತೆಯ ಮಕ್ಕಳನ್ನು ಪ್ರೀತಿಯ ಮೊಮ್ಮಕ್ಕಳನ್ನು
ತೊಟ್ಟಿಲಲ್ಲಿ ಹಾಕಿ ತೂಗಿ ಕೊಡಬೇಕು......
ಹೆಣ್ಣು ಹೆಂಗುಸು ಇಲ್ಲದವ ನಾನು......
ಅರುವತ್ತು ದಾಟಿದ ಮುದುಕ ನಾನೆಂದು ಹೇಳಿದರು ಅಜ್ಜನವರು ಓ ಅವರು....ಓ.....
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು......
ಅಂದಿನ ದಿನ ಹೋಗಿದೆಯಪ್ಪಾ......
ಮರುದಿನ ಬಂದಿದೆಯಂತೆ......
ಬರುವಾಗ ಅಜ್ಜನವರು ಈವರೆಗೆ ಮಾಡಿಸದೆ ಅಡುಗೆ ಮಾಡಿಸಿದ್ದಾರಂತೆ......
ಸೇರದ ಸಭೆ ಸೇರಿಸಿದ್ದಾರಂತೆ......
ಕೂಡಿಕೊಂಡು ಓ ಚದುರಿಕೊಂಡು ಓ ಇದ್ದಾರಂತೆ ಅಲ್ಲಿ......ಓ......
ನಾರಾಯಣ ಹೆಂಗುಸರೇ ನಾರಾಯಣ ಹೆಂಗುಸರೇ......
ನಗುನಗುತ್ತಾ ಹೋಗುತ್ತೀರಿ ನೀವು ಎಂದು ಹೇಳಿದರು ಅಜ್ಜನವರು......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು......
ನಾರಾಯಣ ಓ ನಾರಾಯಣಾ......
ಅಷ್ಟು ಹೊತ್ತಿಗೆ ಹೇಳಿದರು ಅಜ್ಜನವರು ಓ......
ಗುರ್ಗಲಾಡೀ ಚಂದು ಪೆರ್ಗಡೆ ಬನ್ನಾರರು......
ಇಂದಾದರೋ ತೊಟ್ಟಿಲು ತಂದರಂತೆ ಅಜ್ಜನವರು ಇಂದು ಓ......
ಗುರ್ಗಲಾಡಿಯಾ ಅರಮನೆಯಲ್ಲಿ......
ಸಾನೇರಿ ಚಾವಡಿಯಲ್ಲಿ ಏಳು ಕೋಣೆಯ ಯಮದೇವಿ ಗುಡಿಯಲ್ಲಿ ಇಂದು
ಬೆಳ್ಳಿ ಕಟ್ಟಿದ ಬೆಳ್ಳಿಮಾಡದಲ್ಲಿ ಇಂದು ಆಯದ ಮೂಲೆಯಲ್ಲಿ ಇಂದು ಸೋಯದ(?)
ಮೇಲೆ ಹಾಕಿದರಂತೆ
ಇಂದು ನಾಲ್ಕು ಮಾಗಣೆಯ ಓ ನಾಲ್ಕು ಮನೆಯ ಹೆಣ್ಣುಗಳು......ಓ.......

ತೊಟ್ಟಿಲು ಕಟ್ಟಿದರು ಅಜ್ಜನವರು ಓ ತೊಟ್ಟಿಲಲ್ಲಿ ಮಕ್ಕಳನ್ನು ಮಲಗಿಸಿದರು......
ಗದ್ದೆಯ ಬದುವಿನಲ್ಲಿ ಓ ಮೊದಲು ದೊರೆತ ಮಗುವಿಗೆ ಸೊನ್ನೆ ಎಂದು ಹೆಸರಿಟ್ಟರಂತೆ ಅಲ್ಲಿ......
ಕಾಡಿನ ಬದಿಯಲ್ಲಿ ಓ ಹೊಳೆಯ ದಡದಲ್ಲಿ ತಂದೇವು ಮರದಲ್ಲಿ ದೊರೆತ ಮಗಳಂತೆ......
ಬಳಿಕ ದೊರೆತ ಮಗಳಿಗೆ ಗಿಂಡೆ ಎಂದು ಹೆಸರಿಟ್ಟರು......
ಹೆಸರು ಇಟ್ಟರು ಅಜ್ಜನವರು ವಂಶಾವಳಿ ಕರೆದರಂತೆ......
ಎರಡು ಮಕ್ಕಳಿಗೆ ಓ ಆಭರಣಗಳು ಎಂದರು......
ಸೊಂಟಕ್ಕೆ ಡಾಬು ನೂಲು ಮಾಡಿಸಿದರಂತೆ
ಕೈಯ ಚಲಾಕೀ ಹಾಕಿಸಿದರು......
ಕುತ್ತಿಗೆಗೆ ಕಂಬಳಿ ಉಂಗುರ
ಬೆರಳಿಗೆ ಮುತ್ತಿನ ಉಂಗುರ......
ಕೈಗೆ ಚಲಾಕೀ ಕಾಲಿಗೆ ಉರಿಗೆಜ್ಜೆ ಓ
ಮಕ್ಕಳಿಗೆ ಹಾಕಿಸಿದರು ಮಕ್ಕಳ ಚಂದ ನೋಡಿದರು ಅಜ್ಜನವರು......
ಮಕ್ಕಳ ಅಂದ ನೋಡಿದರು ಅಜ್ಜನವರು ಅಂಗಾತ ಮಲಗುವ ಮಕ್ಕಳು ಹೋಗಿ ಕವುಚಿ ಬೀಳುವಷ್ಟಾಗಿದ್ದಾರೆ......
ಕವುಚಿಬಿದ್ದ ಮಕ್ಕಳು ಓ ಎದ್ದು ಕುಳಿತುಕೊಂಡು ಹಿಡಿದು ನಿಲ್ಲುವಲ್ಲಿಗೆ
ಕಡೆದುಕೊಂಡು ಎರಡು ಮಕ್ಕಳು ಬರುವ ಅಂದ ನೋಡಿದರು ಅಜ್ಜನವರು......
ಒಂದು ವರ್ಷ ಆರು ತಿಂಗಳ ಮಕ್ಕಳ ಆರು, ಮೂರು ವರ್ಷಕ್ಕೆ
ತಲುಪಿದರಪ್ಪಾ ಮಕ್ಕಳು ಅವರು......ಓ......
ಎರಡು ಮಕ್ಕಳು......
ಐದು ವರ್ಷ ದಾಟಿತು ಮಕ್ಕಳಿಗೆ
ಆರು ವರ್ಷ ನಡೆಯುತ್ತಿರುವಾಗ ಹೇಳುತ್ತಾರೆ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು......
ನಾರಾಯಣಾ ಓ ನಾರಾಯಣ ದೇವರೇ......
ನಮ್ಮ ಓ ಮಕ್ಕಳಿಗೆ ಪ್ರೀತಿಯ ಮಕ್ಕಳಿಗೆ......
ಪ್ರೀತಿಯ ವಿದ್ಯಾಭ್ಯಾಸ ಆಗಬೇಕೆಂದರು......
ಕಡಲಿಗೆ ಓ ಜನ ಕಳುಹಿಸಿದರು......
ಸಣ್ಣ ಮರಳು ಎಂದು ಓ ತರಿಸಿದರು ಅಜ್ಜನವರು......
ಮೂಡಣದ ಮೊಗಸಾಲೆಯಲ್ಲಿ ಓ ಹಾಕಿಸಿದರು......
ಬೆಳಗ್ಗಿನ ಹದ ಬಿಸಿಲಿಗೆ ಓ ಬಿಡಿಸಿದರು......
ಸಾಯಂಕಾಲದ ಹನಿ ಬಿಸಿಲಿಗೆ ಮರಳನ್ನು ರಾಶಿ ಮಾಡಿಸಿದರು......ಓ......
ನಮ್ಮ ಅಜ್ಜನವರು ಗುರ್ಗಲಾಡೀ ಚಂದು ಪೆರ್ಗಡೇ ಬನ್ನಾರರು ಅವರು......
ಪಡುವಣ ಪಡುಸಾಲೆಯಲ್ಲಿ ಮೂಡಣ ಮೊಗಸಾಲೆಯಲ್ಲಿ

ಮರಳಿನ ಅಕ್ಷರಾಭ್ಯಾಸಕ್ಕೆಂದು ಹಾಕಿಸಿದರು......
ಮಕ್ಕಳಿಗೆ ಬರೆಹ ಬರೆಸಿದರು......
ಮರಳಿನ ಬರೆಹ ಆಯಿತೆಂದರು ಮಕ್ಕಳಿಗೆ......
ನಮ್ಮ ಅಜ್ಜನವರು ನಮ್ಮ ಮಕ್ಕಳಿಗೆ
ನಿನ್ನ ಪ್ರೀತಿಯ ಮೊಮ್ಮಕ್ಕಳಿಗೆ......
ಮರಳಿನ ಬರೆಹ ಆಯಿತೆಂದರು......
ತುಳುಭಾಷೆಯನ್ನು ಕಲಿಸಿದರು.....
ಭಾಷೆಗಳಾದ ಭಾಷೆಗಳನ್ನು ಓ ಓದಿಸಿದರು ಮಕ್ಕಳಿಗೆ......
ಏಳು ಏಳೂವರೆ ವರ್ಷದ ಮಕ್ಕಳು......ಓ......
ಹತ್ತು ಹನ್ನೆರಡು ವರ್ಷ ಆಗುವಾಗ......
ನಾರಾಯಣಾ ನಾರಾಯಣಾ ಓ ನಾರಾಯಣಾ ಓ ನಾರಾಯಣ......
ಉರ್ಕಿದೊಟ್ಟಿನ ಅರಮನೆಯಲ್ಲಿ ಓ......
ಗುರುಮಾರ್ಲರು ಓ ಇದ್ದಾರಂತೆ......
ಕೆಲೆಂಜ ಪರಾರಿ ಓ ಅರಮನೆಯಲ್ಲಿ......
ಕೆಲೆಂಜ ಪರಾರಿಗುತ್ತುವಿನಲ್ಲಿ ಅಂತೆ ಇಂದು ತಮ್ಮ ಇದ್ದಾರೆ ಜಾರುಮಾರ್ಲರು......
ಇಂದಾದರೋ ಉರ್ಕಿದೊಟ್ಟುವಿನ ಅರಮನೆಯಲ್ಲಿ ಮಕ್ಕಳಾಟಿಕೆ ಹುಚ್ಚುಬುದ್ಧಿಯಲ್ಲಿ
ಇಂದು ಸಣ್ಣದೊಂದು ಬುದ್ಧಿಯಲ್ಲಿ ಓ ದೊಡ್ಡದೊಂದು ಪ್ರಾಯದಲ್ಲಿ......
ಹಳೆಯ ಬೀಡ(ಮನೆಯ)ನ್ನು ತೆಗೆದರಂತೆ ಹೊಸಬೀಡನ್ನು ಬೆಳಗಿಸಿಯಂತೆ ಇಂದು......
ಬೀಡಿನ ವಿಚಾರ ಓ ಯಾರೊಬ್ಬ ಓ ತಿಳಿಯುತ್ತೀರೆಂದರು......
ಅಷ್ಟು ಹೊತ್ತಿಗೆ ಇಂದ ಉರ್ಕಿದೊಟ್ಟುವಿನ ಅರಮನೆಯಿಂದ ಇಂದು ಬೀಡಿನ ವಿಚಾರವನ್ನು ಯಾರು ತಿಳಿಸಿಕೊಡುತ್ತೀರೆಂದು ಓ......ಗುರುಮಾರ್ಲರು ಹೇಳುವಾಗ ಓ ಕೇಳುತ್ತಾರಂತೆ
ಉದ್ದಂದ ಬೆಟ್ಟಿನಲ್ಲಿ......ಓ......
ಬೆಟ್ಟುಗದ್ದೆಯ ಒಕ್ಕಲೂ ಓ ಬಿರ್ಮಣ ಬೈದನನ್ನು ಬರುವಂತೆ ಮಾಡಬೇಕು......
ಕುಳ್ಳಗಿನ ತಾಳೆಮರಕ್ಕೆ ಗಿಡ್ಡ ಬಿದಿರಿನ ಏಣಿಯನ್ನು ಓ ಇಡಿಸಬೇಕೆಂದರು......
ಗಿಡ್ಡವಾದ ಏಣಿಯಲ್ಲಿ (ಹತ್ತಿಸಿ) ಕಟ್ಟುಕಟ್ಟು ತಾಳೆಗರಿ ಕಡಿಸಿದರಂತೆ ಗುರುಮಾರ್ಲರು......
ಕಟ್ಟುಕಟ್ಟು ತಾಳೆಗರಿ ಕಡಿಸೀ ಬೆಳಗಿನ ತಿಳಿ ಬಿಸಿಲಿಗೆ (ಒಣಗಲು) ಹಾಕಿಸಿದರು......
ಸಾಯಂಕಾಲದ ಹದಬಿಸಿಲಿಗೆ ಕಟ್ಟು ಕಟ್ಟಿಸಿದರು......
ಕಟ್ಟಿನಿಂದ ಉತ್ತಮವಾದ ತಾಳೆಗರಿ ತೆಗೆದರು ಗುರುಮಾರ್ಲರು ಓ......
ಅಂದಕ್ಕೆ ಎಣ್ಣೆ ಅರಿಶಿಣ ಲೇಪಸಿದರು......
ತುದಿ ಗರಿ ಕತ್ತರಿಸಿದರು ಬುಡ ತುಂಡರಿಸಿದರು......
ಸಮಾನಾಂತರವಾಗುವಂತೆ ತಾಳೆಗರಿಯನ್ನು ಸರಿಪಡಿಸಿದರು ವಕ್ರತೆಯನ್ನು ನೇರ್ಪುಗೊಳಿಸಿದರು......

ಬಹಿರಂಗದ ಆಳನಲ್ಲೇ ಓ ಅಂತರಂಗದ ಓಲೆ ಓ ಬಿಡಬೇಕೆಂದು ಹೇಳಿದರಂತೆ......
ಅಷ್ಟು ಹೊತ್ತಿಗೆ ಗುರುಮಾರ್ಲರಂತೆ
ನಾಲ್ಕು ದಿಕ್ಕಿನ ಗ್ರಾಮಿಗಳಿಗೆ ಓ ಕೊಂಡುಹೋಗುತ್ತಾನಂತೆ ಓಲೆಯ ಮಾಣಿ......
ಓಲೆ ಕೊಂಡುಹೋಗುವಾಗ ನಾಲ್ಕು ದಿಕ್ಕಿನ ಗ್ರಾಮಿಗಳಿಗೆ ಓಲೆ ಕೊಡುವಾಗ......
ಮಡಚಿದ ಓಲೆಯನ್ನು ಓ ಗ್ರಾಮಿಗಳು ಮೊಳಕಾಲವರೆಗೆ ಬಿಡಿಸಿ......
ನೆನಪಿನ ಓದು ಓದುವಾಗ......ಓ......
ಉಟ್ಟ ಬಟ್ಟೆಯಲ್ಲೇ ಓ ಹಿಡಿದ ಕಾರ್ಯದಲ್ಲೆ ಓ
ಬರಬೇಕೆಂದು ಸೂಚಿಸುತ್ತದಂತೆ......ಓ......
ಇಂದಾದರೋ ಇಂದು ಉಂಡ ಊಟದಲ್ಲಿ ಉಟ್ಟ ಬಟ್ಟೆಯಲ್ಲಿ ಇಂದು
ನಾಲ್ಕು ದಿಕ್ಕಿನ ಗ್ರಾಮಿಗಳು ಇಂದು ಉರ್ಕಿದೊಟ್ಟುವಿನ ಅರಮನೆಗೆ ಬರಬೇಕೆಂದು
ಓ ಕಾಣಿಸುವಾಗ
ಇಂದಾದರೋ ಇಂದು ನಾಲ್ಕು ದಿಕ್ಕಿನ ಗ್ರಾಮಿಗಳಂತೆ ಇಂದು ಉರ್ಕಿದೊಟ್ಟುವಿನ
ಅರಮನೆಗೆ ಬಂದರಂತೆ......
ಗ್ರಾಮಿಗಳು ಬರುವ ಅಂದ ನೋಡಿದ್ದಾರಂತೇ ಇಂದು ಗುರುಮಾರ್ಲರಂತೇ ಇಂದು
ಹಾಕಿರುವ ಏತದಲ್ಲಿಗೆ ತೋಡಿಸಿರುವ ಬಾವಿಯಲ್ಲಿಗೆ ಹೋಗಿ
ಕವುಚಿ ಹಾಕಿರುವ ಮರಿಗೆಯನ್ನು ಅಂಗಾತ ಮಾಡಿದರಂತೆ......ಓ......
ಒಂದು ಮರಿಗೆ ನೀರು ಓ ಸೇದಿದರು ಗುರುಮಾರ್ಲರು......ಓ......
ಕಂಚಿನ ಕೈಮರಿಗೆ ಓ ಹಾಕಿದರಂತೆ
ಕಂಚಿನ ಕೈ ಮರಿಗೆ ಹಾಕಿದಾಗ ನೆಂಟರು
ಕೈಕಾಲು ಮುಖ ಓ ತೊಳೆದರಂತೇ ಓ......
ನೆಂಟರು ಅವರು ನಾಲ್ಕು ದಿಕ್ಕಿನ ಗ್ರಾಮಸ್ಥರು ಹೋಗಿ
ಉರ್ಕಿದೊಟ್ಟು ಅರಮನೆಯ ಆರೂವರೆ ಅಂಗಣ ಮೂರುವರೆ ಅಂಗಳ
ಮೂರುವರೆ ಅಂಗಳ ಓ ಹಿಡಿದರು ಗ್ರಾಮಸ್ಥರು......
ಹೊರವರಣದ ಗೋಡೆಯಲ್ಲಿ ತಾಡವಾಲೆಯಿಂದ ರಚಿಸಿದ ಛತ್ರಿ (ಕರ್ಕೊಡೆ)
ಇರಿಸಿದರು ಓ ಮೆಟ್ಟಲಲ್ಲಿ ಚಪ್ಪಲಿ ಓ ಇಟ್ಟರವರು......ಓ......
ಚಿಕ್ಕಚಾವಡಿ ಓ ಸಿದ್ರಮಂಟಪಕ್ಕೆ ಓ ಬರುತ್ತಾರೆ ಅವರು ನೆಂಟರು......
ನಾರಾಯಣಾ ಓ ನಾರಾಯಣ ನೆಂಟರೇ ಓ......
ಬಾಯಾರಿಕೆಗೆ ಓ ಹಾಲು ಕುಡಿಯಿರೀ......
ಬೇಸರವಾಗುವುದಕ್ಕೆ ಓ ಎಲೆ ಅಡಿಕೆ ಜಗಿಯಿರಿ ಎಂದರು......
ಬಾಯಾರಿಕೆಗೆ ಹಾಲು ಕುಡಿದರು ನೆಂಟರು......
ಬೇಸರಕ್ಕೆ ಎಲೆ ಅಡಿಕೆ ತಿಂದರು......
ಎಲೆ ಅಡಿಕೆಯ ಅಮಲಿಗತೆ ಮಲಗಿದರು......
ಯಾಕಾಗಿ ಗುರುಮಾರ್ಲರು ಬರಹೇಳಿದಿರೆಂದು......

ಅಂತರಂಗದ ಓಲೆ ಬಹಿರಂಗದ ಆಳು
ಯಾಕಾಗಿ ಕಳುಹಿಸಿದಿರೆಂದು ಕೇಳುವಾಗ ಹೇಳುತ್ತಾರಂತೆ
ಮಕ್ಕಳಾಟಿಕೆಯಲ್ಲಿ ಹುಚ್ಚುಬುದ್ಧಿಯಲ್ಲಿ......
ಓ ಹಳೆಯ ಬೀಡನ್ನು ತೆಗೆದು, ಹೊಸ ಬೀಡು ಬೆಳಗಿಸಿದೆ......
ನನ್ನ ಬೀಡಿನ ಕುಂದುಕೊರತೆಗಳನ್ನು
ಯಾರಾದರೊಬ್ಬರು ತಿಳಿಸಿಕೊಡಬೇಕೆಂದು......
ಹೇಳಿದರಪ್ಪಾ ಓ ಗುರುಮಾರ್ಲೆರು......
ನಾರಾಯಣ ಗುರುಮಾರ್ಲೆ ಕೇಳಿದಿಯೇ......ಓ......
ಪಡುವಣದ ಪಡುಸಾಲೆ ಓ ಹೊಕ್ಕರು ನೆಂಟರು......
ಮೂಡಣದ ಮೊಗಸಾಲೆಯಿಂದ ಓ ಹೊರಡುವಾಗ ಹೇಳುತ್ತಾರೆ......
ಯೋಗ್ಯವಾದ ಬೀಡಿಗೆ ಭಾಗ್ಯದ ಸಿರಿ ಆಗಬೇಕು ಓ......
ಕತ್ತಲೆಯ ಕೋಣೆಗೆ ನಂದಾದೀಪ ಆಗಬೇಕೆಂದು ಓ......
ಹೇಳುತ್ತಾರಪ್ಪೋ ಓ ನಾಲ್ಕು ಕಡೆಯ ನೆಂಟರು......ಓ......
ನಾರಾಯಣಾ ಓ ನಾರಾಯಣ ಓ
ನೆಂಟರು ಹೇಳುವುದನ್ನು ಓ ಕೇಳಿದರು ಗುರುಮಾರ್ಲಾ......
ಇಂದಾದರೋ ಇಂದು ಓ ಬಂದಿರುವ ನೆಂಟರು ಓ ಹಿಂತಿರುಗಿಬೇಕಾದರೆ....ಓ.....
ಹೆಣ್ಣು ನೋಡಲೂ ಓ ಹೋಗಬೇಕೆಂದರು......
ನಿನಗೆ ಹೆಣ್ಣು ನೋಡಲಿಕ್ಕೆ ಹೋಗಲು......
ನಾವು ಉಡುಗೆ ತೊಡುಗೆ ಓ ತರಲಿಲ್ಲ ಎಂದರು ಓ ನೆಂಟರು......
ಅಷ್ಟು ಹೇಳುವುದನ್ನು ಓ ಕೇಳಿದರು ಓ ಅಣ್ಣತಮ್ಮಂದಿರು......
ಕಲ್ಲಕಲ್ಲೆಂಬಿಯ ಬಾಯಿಬೀಗ ತೆಗೆದರು......
ಕಂಚಿನ ಬೀಗಕ್ಕೆ ಮೆಂಚಿನ ಕೀಲಿಕೈ ಹಾಕಿದರಪ್ಪಾ......ಓ......
ಅಣ್ಣತಮ್ಮ ಓ ಹಾಕಿ ಇನ್ನು ಒಂದು ಬಾರಿಯ ಉಡುಗೆತೊಡುಗೆ ಹಾಗೂ
ಆಭರಣಗಳನ್ನು ಹಿಡಿದುಕೊಂಡು ಬಂದರಂತೆ ಗುರು ಮಾರ್ಲೆರು......
ನಾರಾಯಣ ನೆಂಟರೇ ಆಭರಣಗಳನ್ನು ಹಂಚಿಕೊಂಡು ತೊಟ್ಟುಕೊಳ್ಳಿ ಎಂದರು......
ಗಂಡುಸರ ಆಭರಣಗಳು ಓ ಅಂಗೈಬಳೆ ಓ ಮುಂಗೈ ಸರಪಳಿಯಂತೆ ಓ......
ಗಾಲಿಪೆಂಟಿಯಂತೆ ಓ ಪರಂಗಿಕೊಡೆ ಓ ಬೆಳ್ಳಿ ಕಟ್ಟಿದ ಚೂರಿ......
ಗಂಡುಸರ ಆಭರಣಗಳೆಂದರು ಗುರುಮಾರ್ಲೆರು......ಓ......
ಉರ್ಕಿದೊಟ್ಟಲ್ಲಿ ಓ ಎಲ್ಲಿಗೆ ಹೋಗುವುದು ಎಲ್ಲಿಂದ ಹುಡುಗಿ ನೋಡುವುದೆಂದು ಓ
ಕೇಳುತ್ತಾರೆ ಈಗ ಓ ನಾಲ್ಕೂ ಕಡೆಯ ಗ್ರಾಮಸ್ಥರು......
ನಾರಾಯಣ ನೆಂಟರೇ ಓ ನಾರಾಯಣ ನೆಂಟರೇ......
ಉರ್ಕಿದೊಟ್ಟು ಅರಮನೆಯಿಂದ ಓ ಗುರ್ಗಲಾಡೀ ಓ ಅರಮನೆಗೆ ಹೋಗಿ
ಚಂದು ಪೆರ್ಗಡೆ ಬನ್ನಾರರ ಮೊಮ್ಮಕ್ಕಳು......

ಸೊನ್ನೆಗಿಂಡೆಯೆಂಬ ಓ ಎರಡು ಮಕ್ಕಳು ಓ ಅಜ್ಜನವರ ಮೊಮ್ಮಕ್ಕಳು......ಓ......
ಹೆಣ್ಣು ಕೊಡುತ್ತಾರೆಯೇ ಓ ಸಂಬಂಧ ಬೆಳೆಸುತ್ತಾರೆಯೇ ಎಂದು ಓ ಕೇಳಿರೆಂದು ಓ ಹೇಳುತ್ತಾರೆ......
ಓ ಅಣ್ಣತಮ್ಮಂದಿರು ಓ ಕೆಲೆಂಜ ಪರಾರೀ ಓ ಜಾರು ಮಾರ್ಲರು......
ಓ ಉರ್ಕಿದೊಟ್ಟಿನ ಗುರು ಮಾರ್ಲರು ಓ ಹೇಳುತ್ತಾರಂತೆ......
ನಾರಾಯಣಾ ಓ ನಾರಾಯಣ......
ನೆಂಟರು ಹೋದದ್ದು ಓ ನೋಡಿದರು ಅಜ್ಜನವರು......
ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರರು......
ನೆಂಟರನ್ನು ಓ ಚಿಕ್ಕಚಾವಡಿಯ ಓ ಸಿದ್ರಮಂಟಪದಲ್ಲಿ ಓ ತಾಳೆಗರಿಯ ಚಾಪೆಯಲ್ಲಿ ಓ..
ಹತ್ತಿರಹತ್ತಿರ ಕುಳಿತುಕೊಳಿಸಿದರು......ಓ......
ಪಿಂಗಾಣಿಯಲ್ಲಿ ಹಾಲು ಓ ತಟ್ಟೆಯಲ್ಲಿ ಎಲೆ ಅಡಿಕೆ ತಂದು......
ತೂಗುಯ್ಯಾಲೆಯಲ್ಲಿ ಕುಳಿತ ಓ ನೆಂಟರಿಗೆ ಕೊಟ್ಟರಂತೆ......ಓ......
ಕೊಟ್ಟ ಹಾಲನ್ನು ಓ ಕುಡಿಯುತ್ತಾರೆ ನೆಂಟರು......
ಬೇಸರಕ್ಕೆ ಓ ಎಲೆ ಅಡಿಕೆ ತಿನ್ನುತ್ತಾರೆ......
ಎಲೆ ಅಡಕೆ ಓ ತಿಂದರು ನೆಂಟರು......ಓ......
ಪಕ್ಕದ ಹಳೆಸುದ್ದಿ ಓ ದೈನಂದಿನ ಓ ಒಳಸುದ್ದಿ ಓ ಮಾತನಾಡುತ್ತಾರೆ ನೆಂಟರು......
ಪಕ್ಕದ ಹಳೆಸುದ್ದಿ ಓ ಆಚೆ ಇರಲಿ ಓ ಅಜ್ಜನವರೆ......
ಊರ ಒಳಸುದ್ದಿ ಓ ಈಚೆ ಇರಲಿ......
ಮಾರುವ ಜಾನುವಾರು ಇದೆಯೋ ಓ ಕೊಡುವ ಹೆಣ್ಣಿದೆಯೋ ಅಜ್ಜನವರೇ ಎಂದರು...
ನಾರಾಯಣ ನೆಂಟರೇ......
ಮಾರುವ ಜಾನುವಾರುಗಳು ವೃಶ್ಚಿಕ ಧನು ಮಾಸಗಳಲ್ಲಿ ಮಾರಿ ಹೋಗೆ ಓ......
ಕೊಡುವ ಹೆಣ್ಣನ್ನು ಓ ಚೈತ್ರ ವೈಶಾಖ ಮಾಸಗಳಲ್ಲಿ ಓ ಕೊಟ್ಟು ಹೋಗಿದೆ......
ಮಾರುವ ಜಾನುವಾರಿನ ಬೆನ್ನು ಸವರಲು ಬಂದವರು ನಾವಲ್ಲ ಅಜ್ಜನವರೇ......
ಕೊಡುವ ಹೆಣ್ಣಿನಾ ಅಡುಗೆ ಜಾರಿಸಲು ನಾವು ಬಂದವರಲ್ಲ ಎಂದು ಹೇಳಿದರು ನೆಂಟರು......
ಅಷ್ಟು ಹೊತ್ತಿಗೆ ಓ ಹೇಳುತ್ತಾರಂತೇ ಓ......
ಎಷ್ಟು ಸಣ್ಣವರು ಓ ನನ್ನೆರಡು ಮಕ್ಕಳು......ಓ......
ಏಳು ಏಳೂವರೆ ವರುಷದಾ ಓ ಮಕ್ಕಳು ನನ್ನವರು......ಓ......
ಎಂದು ಓ ಹೇಳುತ್ತಾರೆ ಅಜ್ಜನವರು ಅವರು......
ನಿಮ್ಮದು ಏಳು ಏಳೂವರೆ ವರುಷದ ಮಗಳಾದರೆ ಓ
ನಮ್ಮ ಹುಡುಗ ಹತ್ತು ಹನ್ನೆರಡು ವರ್ಷದ ಓ ಮಗು ಎಂದು ಓ ಹೇಳುತ್ತಾರಪ್ಪ ಓ ನಾಲ್ಕು ದಿಕ್ಕಿನ ಗ್ರಾಮಸ್ಥರು......
ಅಷ್ಟು ಹೊತ್ತಿಗೆ ಓ ಮಾತನಾಡಿದರೆಂದು ಓ ಚರ್ಚೆ ಬೇಡ ಅಜ್ಜನವರೇ ಓ

ಹಠಸಾಧನೆ ಬೇಡ ನಮಗೆ......ಓ......
ನಿಮ್ಮ ಮೊಮ್ಮಗಳನ್ನು ಓ ನಮಗೆ ಕೊಡಿ......
ಸಣ್ಣ ಪ್ರಾಯದಲ್ಲಿ ಕೊಟ್ಟರೆ ಒಳ್ಳೆಯದೆಂದು ಓ ಹೇಳಿದರು ಓ ಅಜ್ಜನವರು......
ಹರುಷದ ಮೆಯಿ ಓ ಮುತ್ತಿನ ನಗು ನಕ್ಕರು ಅಜ್ಜನವರು......
ನೆಂಟರಿಗೆ ಬಂದಿರುವ ನೆಂಟರಿಗೆ ಓ
ಊಟೋಪಚಾರ ಓ ಮಾಡಿಸಿದರು ಅಜ್ಜನವರು......ಓ......
ಎಲೆ ಅಡಕೆ ಓ ಕೊಡಿಸಿದರು......
ಮಾತುಕತೆ ಓ ನಿಶ್ಚಯ ಮಾಡಿದರು ಅಜ್ಜನವರು ಓ......
ಸೊನ್ನೆಯನ್ನು ಕೊಡುವುದೆಂದು ಓ ನಿಶ್ಚಯ ಮಾಡಿದರು ಅಜ್ಜನವರು......
ಗುರ್ಗಲಾಡಿಯ ಓ ಅರಮನೆಯಿಂದ ಓ......
ಚಂದು ಪೆರ್ಗಡೆ ಓ ಬನ್ನಾರರ ಓ ಚಾವಡಿಯಿಂದ ಓ......
ನೆಂಟರು ಓ ಹೊರಟರಂತೇ......ಓ......
ಹೋಗುವಾಗ ಕುಳಿತಿದ್ದ ಓ ಗುರುಮಾರ್ಲರು......
ಕಲ್ಲ ಹೊರಾವರಣ ಓ ಕಂಚಿನ ಹೊಸ್ತಿಲಲ್ಲಿ ಓ
ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ......
ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ ಗುರುಮಾರ್ಲರು ಓ ಇದ್ದಾರಂತೇ......
ಎಲ್ಲಿಂದ ಬಂದಿರಿ ಓ ಎಲ್ಲಿಗೆ ಹೋಗುವವರೆಂದು ಕೇಳಿ
ತಾಗಿ ಬಂದಿರೇ ಓ ಹೆಣ್ಣಾಗಿ ಬಂದಿರೇ ಎಂದು ಕೇಳುತ್ತಾರಂತೆ......
ನಾರಾಯಣ ಗುರುಮಾರ್ಲಾ ಓ ಕೇಳಿದ್ದೀಯೇ......ಓ......
ಓ ಹೆಣ್ಣು ನೋಡಲು ಹೋಗಿ......ಓ......
ಗಂಡಾಗಿ ಓ ಬರಲಿಕ್ಕಿದೆಯೇ ಓ ಹೆಣ್ಣಾಗಿ ಬರಲಿಕ್ಕೆ ಓ ಇದೆಯೇ ಎಂದರು......
ಇದಾದರೋ ಇಂದು ಓ ಆ ಹೊತ್ತಿಗೆ......ಓ......
ಉರ್ಕಿದೊಟ್ಟುವಿನ ಗ್ರಾಮಸ್ಥರಲ್ಲಿ ಓ ಊಟೋಪಚಾರ ಓ ಕೇಳುತ್ತಾರೆ......
ಊಟೋಪಚಾರ ಓ ಕೇಳುವಾಗ ಓ ಮಾತುಕತೆ ಖಂಡಿತ ಓ ನಿಶ್ಚಯ ಓ ಮಾಡಿ
ದೆವೆಂದು ಓ ಹೇಳುತ್ತಾರಪ್ಪಾ ನೆಂಟರು......
ನಾರಾಯಣ ಓ ನಾರಾಯಣ ದೇವರೇ ಓ ನಾರಾಯಣ......
ಇಂದಾದರೋ ಇಂದು ಓ ನಾಲ್ಕು ದಿಕ್ಕಿನ ಗ್ರಾಮಸ್ಥರಂತೆ ಇಂದು ತೊಟ್ಟ ಆಭರಣ
ನ್ನು ಮಾರ್ಲರ ಕೈಯಲ್ಲಿ ಕೊಟ್ಟು......ಓ......
ಕೆಲಿಂಜ ಪರಾರಿ ಓ ಜಾರು ಮಾರ್ಲರು ಓ ಅಣ್ಣ ಇದ್ದಾರಂತೆ ಇಂದು......
ಅಣ್ಣತಮ್ಮಂದಿರು ಓ ನಿಶ್ಚಯಿಸಿದರಂತೆ......ಓ......
ಗರ್ಗಲಾಡೀ ಓ ಚಂದು ಪೆರ್ಗಡೆ ಓ ಚಾವಡಿಗೆ ಓ ಹೋಗಬೇಕೆಂದರು......
ಅಣ್ಣ ತಮ್ಮ ಓ ಹೋದರಂತೆ ಓ......
ಅಜ್ಜನವರನ್ನು ಓ ಬರಮಾಡಿದರು......ಓ......

ಅಜ್ಜನವರನ್ನು ಬರಮಾಡಿ ಇನ್ನು......
ಮದುವೆಗೆ ದಿನಮಾನ ಓ ನೋಡಬೇಕು......
ಕೇಳಿದರಪ್ಪಾ ಓ ಅಜ್ಜನವರು......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರರು ಅಜ್ಜನವರು......
ನಾರಾಯಣ ಓ ನಾರಾಯಣಾ......ಓ......
ಕೆಲೆಂಜಪರಾರಿ ಓ ಜಾರು ಮಾರ್ಲ್‌ರೂ......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರೂ......ಓ......
ಮದುವೆಗೆ ಓ ದಿನಮಾನ ನೋಡಲು......ಓ......
ಜ್ಯೋತಿಷಿಯ ಮನೆಗೆ ಹೋಗುತ್ತಾರಪ್ಪಾ......ಓ......
ಜ್ಯೋತಿಷಿಯ ಮನೆಗೆ ಓ ಹೋಗುವುದನ್ನು ನೋಡಿದ್ದಾರಂತೆ......ಓ......
ಜ್ಯೋತಿಷಿಯು ನೋಡಿ ಈ ಮೂರು ಕಾಲಿನ ಓ ಗಿಡ್ಡವಾದ ಮುಕ್ಕಾಲಿಯನ್ನು......
ಇಂದು ಓ ಇಟ್ಟಿದ್ದಾನೆಂದು ಜ್ಯೋತಿಷಿ......
ಏನು ಬಂದಿರಿ ಓ ಅಜ್ಜನವರೆ ನೀವು......ಓ......
ಏನು ಬಂದಿರಿ ಎಂದು ಜಾರು ಮಾರ್ಲ್‌ರಲ್ಲಿ ಓ ಕೇಳುವಾಗ ಹೇಳುತ್ತಾರಂತೆ......
ಯಾರು ಜ್ಯೋತಿಷಿಯೇ ಕೇಳಿದಿರಾ
ನನ್ನ ಓ ಪ್ರೀತಿಯ ಮೊಮ್ಮಗಳಿಗೆ ಓ
ಮಾತುಕತೆ ನಡೆಸಿ ಮದವೆ ನಿಶ್ಚಯ ಓ ಮಾಡಿದ್ದೇನೆ ನಾನು......
ಒಳ್ಳೆಯ ದಿನ ಓ ಒಳ್ಳೆಯ ಮುಹೂರ್ತ ಓ ನೋಡಬೇಕೆಂದು ಓ ಹೇಳುತ್ತಾರೆ ಅಜ್ಜನವರು ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಓ ಬನ್ನಾರರು ಅವರು......
ಒಳ್ಳೆಯ ದಿನ ಒಳ್ಳೆಯ ವಾರ ಓ......
ಹೇಳಬೇಕು ಜ್ಯೋತಿಷಿಯೇ ಎಂದು ಓ ಅಜ್ಜನವರು ಹೇಳುವಾಗ ಓ......
ನಾರಾಯಣ ಅಜ್ಜನವರೆ ಓ ನಿಮಗೆ ಭಯ ಯಾಕೆ?
ದಿನಮಾನ ಓ ನಿಮಗೆ ನಾನು ಓ ಒಳ್ಳೆಯ ದಿನವನ್ನೇ ಓ ಹೇಳುತ್ತೇನೆಂದು ಹೇಳಿದರು.... ಓ......
ಅರುವತ್ತು ಪುಟದ ಓ ಜಾತಕ ತೆಗೆದರು ಓ......
ಮೂವತ್ತು ಪುಟದ ಓ ಗ್ರಂಥ ತೆಗೆದರು ಓ......
ಅರುವತ್ತು ಪುಟದ ಓ ಜಾತಕದಲ್ಲಿ ಓ......
ಸೊನ್ನೆಯ ಲಗ್ನದ ಫಲ ಓ ಕಂಡುಬಂದಾಗ......
ಒಂದು ಹೇಳಿದರೆ ಓ ಕಡಿಮೆಯಾಗುತ್ತದೋ ಓ
ಎರಡು ಹೇಳಿದರೆ ಓ ಹೆಚ್ಚಾದೀತೋ
ಒಳ್ಳೆಯ ಫಲ ಜಾತಕದ್ದು ಒಳ್ಳೆಯ ಫಲವೆಂದು ಹೇಳಿದರು......

ಇದೇ ಬರುವ ಮಂಗಳವಾರವಲ್ಲ ಓ ಅದರ ಮೇಲೆ ಬರುವ (ಮುಂದಿನ) ಓ ಮಂಗಳವಾರ ಓ......
ಸಿಂಹ ರಾಶಿ ಓ ಬೊಲ್ಲೆರ್ಮಲ ಹಕ್ಕಿಯ ಸ್ವರ ಓ ಕೋಳಿಯ ಕೂಗಿಗೆ (ಮುಂಜಾನೆ) ಓ ಗುರ್ಗಲಾಡಿಯ ಅರಮನೆ ಇಳಿಯಬೇಕು ಓ......
ಆ ವೇಳೆಯಲ್ಲಿ ಅರಮನೆ ಇಳಿದು......ಓ......
ಉರ್ಕಿದೊಟ್ಟುವಿನಾ ಓ ಅರಮನೆಯಲ್ಲಿ ಓ......
ಧರ್ಮಧಾರೆ ಓ ಎರೆದು ಕೊಡುವ ಓ ವೇಳೆ ಒಳ್ಳೆಯದಿದೆಯೆಂದು ಓ ಬಲ್ಯಾಯ ಹೇಳುತ್ತಾನಪ್ಪಾ......
ಅಲ್ಲಿಂದ ಹಾಗೆ ಬಂದರಂತೆ ಓ ಅಜ್ಜನವರು ಹಾಗೂ ಗುರು ಮಾರ್ಲ ಹಾಗೂ ಜಾರು ಮಾರ್ಲರು......
ನಾರಾಯಣ ಮಗ ಓ ಮಕ್ಕಳೇ ನೀವೂ......
ನೀವು ಈ ಕಡೆಯಿಂದ ಹೋಗಿ ಮಕ್ಕಳೇ ಓ
ನಿಮ್ಮ ಕಡೆಯಿಂದ ಓ ಕಾಯಿ ಹಾಕಿ ಓ ಕನ್ಯಾ ಮುಹೂರ್ತಕ್ಕೆ ಆಮಂತ್ರಿಸಿ ಮಕ್ಕಳೇ......
ನಾನು ಹೋಗುತ್ತೇನೆ ಓ ಕಾಯಿ ಹಾಕಿಸಿ ಓ ಕನ್ಯಾ ಮುಹೂರ್ತಕ್ಕೆ ಕರೆಯುತ್ತೇನೆಂದರು
ಅಂದಿನ ದಿನಮಾನ ಕಳೆದಿದೆ ಅಜ್ಜನವರಿಗೆ......
ಮರುದಿನ ಓ ಬಂದಿದೆ ಅಜ್ಜನವರಿಗೆ......
ಗುರ್ಗಲಾಡಿಯ ಅರಮನೆಯಲ್ಲಿ
ಸಾವಿರ ಕಾಲ ಹಿಂದೆ
ಹಾಕಿರುವ ಓ ಚಪ್ಪರಾ......
ಅನಂತರ ಚಪ್ಪರ ಹಾಕಲಿಲ್ಲವೆಂದರು......
ಗುರ್ಗಲಾಡೀ ಚಂದು ಪೆರ್ಗಡೆ ಬನ್ನಾರ್ ಅವರು......
ಕಬ್ಬು ಕಡಿಸಿದರು ಓ......
ಕಬ್ಬಲ್ಲಿ ಕಂಭ ಹಾಕಿಸಿದರು......
ವೀಳ್ಯ ಕೊಯಿಸಿದರು
ವೀಳ್ಯದಲ್ಲಿ ಪನಿದೊಂಪ (ಚಿಕ್ಕಚಪ್ಪರ) ಹಾಕಿಸಿದರು......
ಹಿಂಗಾರದಲ್ಲಿ ತಡಿಕೆ ಓ ಕಟ್ಟಿಸಿದರು......
ಮುಡ್ಯಾಲದಲ್ಲಿ ಅಲ್ಲಲ್ಲಿ ಕಟ್ಟ (ಗಂಟು) ಹಾಕಿಸಿದರು......
ಅಚ್ಚುಬೆಲ್ಲದಲ್ಲಿ ಒಲೆ ಎಂದರು
ಓಲೆಬೆಲ್ಲದಲ್ಲಿ ಒತ್ತು ಎಂದರು......
ಗುರ್ಗಲಾಡಿಯ ಅರಮನೆಯಲ್ಲಿ
ಎರಡು ಮಕ್ಕಳು ಅಜ್ಜನವರಿಗೆ ದೊರಕಿದವಂತೆ
ಮೊದಲು ದೊರೆತ ಮಗಳಂತೆ ಅವಳು
ಸೊನ್ನೆಗೆ ಕಾಯಿ ಹಾಕಿ

ಕನ್ಯಾಮುಹೂರ್ತಕ್ಕೆ ಓ ಕರೆಸಿದ್ದಾರಂತೆ ಓ......
ಮದುವೆ ಮಂಗಲಕಾರ್ಯಕ್ಕೆ ಓ ಹೋಗಬೇಕೆಂದರು......
ಊರುಮಾಗಣೆ(ಯ ಜನರಿಗೆ) ಓ ಹೇಳಿಕಳುಹಿಸಿದ್ದಾರೆ
ದೂರಕ್ಕೆ ಓ ನಗಾರಿ ಹೊಡೆಸಿದ್ದಾರೆ......
ಹತ್ತಿರಕ್ಕೆ ಡಂಗುರ ಸಾರಿದ್ದಾರೆ......
ಮನೆ ಹೊಕ್ಕು ಹೇಳಿಕೆ ಕೊಡುವುದಕ್ಕೆ ಮನೆ ಹೊಕ್ಕು ಹೇಳಿಸಿದ್ದಾರೆ......
ಓಲೆತಾಲಿ (ತಾಡವಾಲೆ?) ಕಳುಹಿಸುವಲ್ಲಿಗೆ ಓಲೆತಾಲಿ (ಪತ್ರ) ಕಳುಹಿಸಿದ್ದಾರೆ ಅಜ್ಜನವರು...
ಹನ್ನೆರಡು ಗುತ್ತು ಹನ್ನೆರಡು ಮಾಗಣೆ......
ಹನ್ನೆರಡು ಗ್ರಾಮದ ಜನರನ್ನು ಕರೆಸಿದ್ದಾರೆ ಅಜ್ಜನವರು......
ಗುರ್ಗಲಾಡಿಯಾ ಅರಮನೆಯಲ್ಲಿ......
ನಾಲ್ಕು ಮನೆಯ ಹೆಣ್ಣುಗಳನ್ನು ಕರೆಸಿ......
ನಾಲ್ಕು ಮನೆಯ ಹೆಣ್ಣುಗಳು ಇನ್ನು ಬೇಗ ಓ......
ಮದುಮಗಳನ್ನು ಸಿಂಗಾರ ಮಾಡಿಕೊಂಡು......
ಇರುವಾಗ ಇನ್ನಾದರೋ ಓ......
ಯಾರು ಮಗ ತಂಗಿ ತಂಗಿಯೇ ಕೇಳಿದಿಯೇ......
ಓ ಗಿಂಡೀ ಕೇಳು ಮಗ......
ಸಣ್ಣ ಪ್ರಾಯದ ಮಗು ಮಗ......
ನಿನ್ನ ಅಕ್ಕ ಸೊನ್ನೆಯನ್ನು ಸಿಂಗರಿಸಿದ ರೀತಿಯಲ್ಲಿಯೇ
ನಿನ್ನನ್ನೂ ಸಿಂಗರಿಸೋಣ ಎಂದು
ಕೆಳಗಿನ ಬದಿಯ ಪಾಲವರು ಮೇಲಿನ ಬದಿಯ ಪಾಲವರ ಹೆಣ್ಣುಗಳು......
ನಡುನಕರದ ಹೆಣ್ಣುಗಳು
ಹೇಳುತ್ತಾರಪ್ಪಾ ಗಿಂಡೆಗೆ ಸದ್ಬೋಧನೆ ಹೇಳುತ್ತಾರೆ......
ನಾರಾಯಣಾ ನಾರಾಯಣ ಹೆಂಗುಸರೇ......
ನನ್ನನ್ನು ಸಿಂಗಾರ ಮಾಡಬೇಡಿ......
ನನ್ನ ಅಕ್ಕನವರನ್ನು ಚೆನ್ನಾಗಿ ಸಿಂಗಾರ ಮಾಡಿ......
ಮಲ್ಲಿಗೆಯಲ್ಲಿ ಜಲ್ಲಿ ಹಾಕಿರಿ......
ಬಂಗಾರದ ಕೆಂಪು ಬೆಳ್ಳಿಯಲ್ಲಿ ಬಿಳಿ
ನಮ್ಮಕ್ಕನವರು ಆಗಲೆಂದು......ಓ......
ಹೇಳುತ್ತಾಳಪ್ಪಾ ಗಿಂಡೆ ಅವಳು......
ನಾರಾಯಣ ಗಿಂಡೆ......
ಅಷ್ಟು ಹೊತ್ತಿಗೆ ಕೇಳಬೇಕಪ್ಪಾ......ಓ......
ಉರ್ಕಿದೊಟ್ಟಿನ ಅರಮನೆಯಲ್ಲಿ ಓ......
ಗುರು ಮಾರ್ಲನ ಓ ಅರಮನೆಯಲ್ಲಿ......

ಸೇರದ ಸಭೆ ಸೇರಿಸಿಕೊಂಡು......
ಚದುರುವ ಸಭೆ ಚದುರಿಕೊಂಡು
ಹಾಕಿರುವ ಸಣ್ಣ ಚಪ್ಪರದಲ್ಲಿ......
ಕಟ್ಟಿರುವ ತೋರಣಮುಹೂರ್ತದಲ್ಲಿ
ಗುರ್ಗಲಾಡೀ ಅರಮನೆಯಿಂದಾ......
ದಿಬ್ಬಣ ಹೊರಟಿತಪ್ಪಾ......
ಅದರ ಕೊನೆ ಗುರ್ಗಲಾಡಿ ಅರಮನೆಯಲ್ಲಾದರೆ
ತುದಿ ಉರ್ಕಿದೊಟ್ಟುವಿನ ಅರಮನೆಯಲ್ಲಿ......
ಬಾಳೆಹಾಕಿದ ಬಾಕಿತಿಮಾರಿನಲ್ಲಿ ಸೊನ್ನೆಯ ದಿಬ್ಬಣ ಹೋಗುವ ಅಂದ ನೋಡಿದರಪ್ಪಾ...
ನಾರಾಯಣಾ ನಾರಾಯಣ ಓ......
ಉರ್ಕಿದೊಟ್ಟಿನ ಸೊನ್ನೆಯ ದಿಬ್ಬಣ
ಹೋಗುವ ಅಂದ ನೋಡುತ್ತಾರೆ......
ದಂಡಿಗೆಯಲ್ಲಿ ಎತ್ತಿಕೊಂಡು
ಬಾಲೆ ಹಾಕುವ ಬಾಕಿತಿಮಾರಿನಲ್ಲಿ ದಂಡಿಗೆ ಬರುವುದನ್ನು ನೋಡುವಾಗ
ದೂರದಿಂದ ನೋಡುವವರು ಹೇಳುತ್ತಾರಂತೆ......
ಒಂದೇ ದಂಡಿಗೆಯಲ್ಲಿ ಇಬ್ಬರು ವಧುಗಳೆಂದು......
ಹೇಳುತ್ತಾರಪ್ಪಾ ಅಲ್ಲಿ......
ಸೇರದ ಸಭೆ ಸೇರಿಕೊಂಡು
ಚದರುವ ಸಭೆ ಚದರಿಕೊಂಡು
ಹುಡುಗನ ದಿಬ್ಬಣ ಉರ್ಕಿದೊಟ್ಟುವಿನ ಅರಮನೆ ಕಡೆಯ ಹೆಂಗುಸರು ಹೇಳುತ್ತಾರಂತೆ...
ಅದನ್ನು ಕಿವಿಕೊಟ್ಟು ಸೊನ್ನೆ, ಮದುಮಗಳು ಓ ಕೇಳುತ್ತಾಳೆ......
ಉರ್ಕಿದೊಟ್ಟುವಿನ ಅರಮನೆಗೆ ಓ ಬರುವ ಮದುಮಗಳು ಒಬ್ಬಳು ಸೊನ್ನೆಯಂತೆ......
ನಾವು ಎರಡು ಮಕ್ಕಳು ಸೊನ್ನೆ ಗಿಂಡೆಯೆಂಬ ಎರಡು ಹೆಣ್ಣುಗಳು ನಾವು......
ಒಂದೇ ದಂಡಿಗೆಯಲ್ಲಿ ಕುಳಿತು ಬಂದೆವು
ನನ್ನ ತಂಗಿ ಗಿಂಡಿ ಮದುಮಗಳಿಗೆ
ಧಾರದಸ್ತು ದಿಬ್ಬಣ ಎದುರುಗೊಂಡು
ಬಂದ ದಿಬ್ಬಣವನ್ನು ಎದುರುಗೊಂಡರಂತೆ
ತಂಬಿಗೆಯಲ್ಲಿ ನೀರು ಬೆಲ್ಲನೀರು ಕೊಡಿಸಿದರು......
ಬೆಲ್ಲನೀರು ಕೊಡಿಸಿ ಅಡಕೆ ವೀಳ್ಯದೆಲೆ ಕೊಡಿಸಿದರು......
ಎಲೆ ಅಡಕೆವೀಳ್ಯ ಕೊಡಿಸಿ ಇನ್ನು......
ಮದುಮಗನಿಗೆ ಸ್ವರ್ಣ ಮುಹೂರ್ತ ಮಾಡಿಸಿದರು......
ಉರ್ಕಿದೊಟ್ಟುವಿನ ಅರಮನೆಯಲ್ಲಿ......
ಮದುಮಗಳಿಗೆ ಓ ಮುಹೂರ್ತಕ್ಕೆ

ಒಳ್ಳೆಯ ಓ ವೇಳೆ ಘಳಿಗೆಯಲ್ಲಿ......
ನಾರಾಯಣ ಓ ನಾರಾಯಣ ಗುರುಮಾರ್ಲ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು ಹೇಳುತ್ತಾರೆ......
ನಾರಾಯಣ ಮದುಮಗ (ಗಂಡ) ನಾರಾಯಣ ಮದುಮಗ (ಗಂಡ)
ನನ್ನ ಮೊಮ್ಮಗಳು ಸೊನ್ನೆಯನ್ನು ನಿನಗೆ ಧರ್ಮಧಾರೆ ಎರೆದು
ಮಣ್ಣನ್ನೂ ಹೆಣ್ಣನ್ನೂ
ಧರ್ಮಧಾರೆ ಎರೆದು ಓ ನಾನು ಕೊಡುವುದೆಂದು
ಹೆಣ್ಣು ಮಣ್ಣು ಕೊಟ್ಟಬಿಟ್ಟಿದ್ದಾರೆ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು......
ನಾರಾಯಣಾ ನಾರಾಯಣ ಅಜ್ಜನವರೆ......
ಉರ್ಕಿದೊಟ್ಟುವಿನ ಅರಮನೆಯನ್ನು ಓ ಬಾಳಿಸಿದರೆ (ಕಾಪಾಡಿದರೆ)
ಗುರ್ಗಲಾಡಿಯ ಅರಮನೆಯನ್ನು ಬೆಳಗಿಸಿಯೇನು......
ಗುರ್ಗಲಾಡಿಯ ಅರಮನೆಯನ್ನು ಬೆಳಗಿಸಿದರೆ......
ಉರ್ಕಿದೊಟ್ಟಿನ ಅರಮನೆ ಬಾಳಿಸುವೆನೆಂದು
ಕೈಮುಟ್ಟಿ ಭಾಷೆ ಮೈಮುಟ್ಟಿ ಸೇಸೆ ಓ ಹಾಕಿದರು ಅಜ್ಜನವರು......
ಗುರ್ಗಲಾಡೀ ಓ ಚಂದು ಪೆರ್ಗಡೆ ಓ ಬನ್ನಾರ್ ಅವರಂತೆ......
ಧಾರೆದಸ್ತು ಓ ಮಾಡಿಸಿದರು......ಓ......
ಅಕ್ಷತೆಯಿಂದ ಎಬ್ಬಿಸಿ ಓ ಮದುಮಗ ಮದುಮಗಳನ್ನು ಅಕ್ಕಪಕ್ಕ ಕುಳ್ಳಿರಿಸಿ
ಗಿಂಡಿಯಲ್ಲಿ ಹಾಲು ಓ ಕೊಡಿಸಿದರು ಅಜ್ಜನವರು......
ಸೇರಿದ ಸಭೆಗೆ ಊಟೋಪಚಾರ ಓ ಮಾಡಿಸಿದರು ಓ......
ಹೋದ ದಿಬ್ಬಣ ಓ ಹಿಂತಿರುಗಿ ಬರುವಾಗ......
ದುಃಖಿಸಿ ದುಃಖಿಸಿ (ಬಿಕ್ಕಿಬಿಕ್ಕಿ) ಓ ಅಳುತ್ತಾಳೆ......
ಅಳುತ್ತಾಳಪ್ಪಾ ಓ ಗಿಂಡೆ ಮದುಮಗಳು......
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ......
ನನ್ನ ತಂಗೀ ಗಿಂಡೆಯನ್ನೂ ಓ ನನ್ನ ಜೊತೆಗೆ ಓ ಬಿಟ್ಟು ಹೋಗಿ ಅಜ್ಜನವರೆಂದು......
ಓ ಸೊನ್ನೆ ಮದುಮಗಳು ಓ ಹೇಳುತ್ತಾಳಪ್ಪಾ......
ನಾರಾಯಣ ಮಗಾ ಓ ಸೊನ್ನೆ ಮದುಮಗಳೇ ಓ ನೀನು ಕೇಳಿದ್ದೀಯಾ......
ನಿನ್ನ ತಂಗಿ ಓ ಗಿಂಡೆಯನ್ನು......
ಇಂದಿನ ದಿನ ಓ ಬಿಟ್ಟು ಹೋಗುವುದಿಲ್ಲ ಮಗಾ
ಎಂದು ಹೇಳಿದರು ಅಜ್ಜನವರು......
ಅಳುತ್ತಿರುವ ಗಿಂಡೆ ಮದುಮಗಳನ್ನು ಓ ಕರೆದುಕೊಂಡು ಅಜ್ಜನವರು......
ಎದೆಗೆ ಅವಚಿಕೊಂಡು, ಮಡಿಲಲ್ಲಿ ಹಾಕಿಕೊಂಡು
ಮಡಿಲಲ್ಲಿ ಮಲಗಿಸಿಕೊಂಡು ಓ ಗಿಂಡೆ ಮದುಮಗಳನ್ನು......

ದಂಡಿಗೆಯಲ್ಲಿ ಕುಳ್ಳಿರಿಸಿ ಓ ಕರೆದುಕೊಂಡು ಬಂದರು......
ಗುರ್ಗಲಾಡಿಯ ಓ ಅರಮನೆ ಹೊಕ್ಕರು......
ಚಿಕ್ಕ ಚಾವಡಿಯಲ್ಲಿ ಸಿದ್ರಮಂಟಪದಲ್ಲಿ......
ತೂಗುಯ್ಯಾಲೆಯಲ್ಲಿ, ತಾಳೆಗರಿ ಚಾಪೆಯಲ್ಲಿ......ಓ......
ಗಿಂಡೆ ಮದುಮಗಳನ್ನು ಓ ಮಡಿಲಲ್ಲಿ ಹಾಕಿಕೊಂಡರು......
ನಾರಾಯಣ ಮಗ ಓ ನಾರಾಯಣ ಗಿಂಡೆ......
ಅಂದಿನ ಕಾಲದಲ್ಲಿ ಎದೆ ತೊಟ್ಟಿಲೆಂದು ಓ ನಿನಗೆ ಕೊಟ್ಟಿದ್ದೇನೆ ಮಗಾ......
ಇಂದಿನ ಕಾಲದಲ್ಲಿ ಓ ಎದೆತೊಟ್ಟಿಲೆಂದು ಓ ನಾನು ಕೊಡುತ್ತೇನೆ ಮಗಾ......
ನಿನ್ನ ಅಕ್ಕನವರನ್ನು ಓ ನನ್ನ ಮೊಮ್ಮಗಳನ್ನು......
ಉರ್ಕಿದೊಟ್ಟುವಿನ ಅರಮನೆಗೆ ಧರ್ಮಧಾರೆ ಎರೆದು ನಾನು ಕೊಟ್ಟರೆಂದು ಹೇಳುತ್ತಾರೆ ಅಜ್ಜನವರು......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರ್ ಅವರು......
ಒಂದು ಬಾರಿ ಹೋಗಿ ಎರಡನೇ ಬಾರಿ ಬರುವಾಗ......
ಎರಡು ಬಾರಿ ಹೋಗಿ ಮೂರನೇ ಬಾರಿ ಬರುವಾಗ......
ವರ್ಷ ಕಳೆದು ತಿಂಗಳು ಹೋಗುತ್ತದಪ್ಪಾ ಓ ಸೊನ್ನೆ ಮದುಮಗಳಿಗೆ......
ಅಷ್ಟು ಹೊತ್ತಿಗೆ ಓ ಗಿಂಡಿಯಂತೆ ಓ......
ಒಂದಾನೊಂದು ದಿನದಲ್ಲಿ ಓ......
ನಾರಾಯಣ ಓ ನಾರಾಯಣವಂತೆ......
ಇಂದಾದರೋ ಇಂದು ಮುಂಜಾವದಲ್ಲಿ ಇಂದು ಗಿಂಡೆ ಎದ್ದಳಂತೆ ಇಂದು......
ಒಂದು ಬಾರಿ ಎರಡು ಬಾರಿಯ ಕೆಲಸಕಾರ್ಯಗಳನ್ನು ಗಿಂಡೆ ಮದುಮಗಳು ಮುಗಿಸಿದಳಂತೆ......
ಇಂದಾದರೋ ಇಂದು ಹಂಡೆಯನ್ನು ಹಿಡಿದಳಂತೆ ಓ ಗಿಂಡಿಯನ್ನು ಹಿಡಿದಳಂತೆ ಓ ಗಿಂಡೇ
ಇಂದಾದರೋ ಹಟ್ಟಿಯಕೊಟ್ಟಿಗೆಯ ಕಡೆಗೆ ಹೋದಳಂತೆ ಇಂದು ಗಿಂಡೆ ಓ......
ಕಪಿಲೆ ದನವನ್ನು ಓ ಹಿಡಿದಳಂತೆ......ಓ......
ಮುದ್ದು ಕುಮಾರನನ್ನು (ಕರುವನ್ನು) ಓ ಬಿಟ್ಟಳಂತೆ......
ಮುದ್ದು ಕುಮಾರನಿಗೆ (ಕರುವಿಗೆ) ಓ ಒಂದುಬಾರಿ ಮೊಲೆ ಚೀಪಲು ಬಿಟ್ಟಳು....ಓ....
ಹಂಡೆ ತುಂಬ ಹಾಲು ಕರೆದಳು ಗಿಂಡೆ ಓ......
ಹಂಡೆ ತುಂಬ ಹಾಲುಕರೆದಳು ಗಿಂಡೆ
ಗಿಂಡಿ ತುಂಬ ಹಾಲು ಓ ಕರೆದಳು ಗಿಂಡೆ
ಮುದ್ದುಕುಮಾರನನ್ನು (ಕರುವನ್ನು) ಓ ಎಳೆದು ಕಟ್ಟಿದಳು......
ಕಾಶಿ ಕಪಿಲೆಯನ್ನೂ ಓ ಬಿಟ್ಟುಬಿಟ್ಟಳಪ್ಪಾ......
ನಾರಾಯಣ ಓ ನಾರಾಯಣ ಓ......

ಉಗುರು ಚಿವುಟುತ್ತಾ ಕಾಲು ಕರೆಯುತ್ತಾ ಗೋಡೆ ಹಿಡಿದು
ಕೂಗುತ್ತ ಅಳುತ್ತಾ ಇದ್ದಳಪ್ಪಾ ಓ ಗಿಂಡೆ ಮದುಮಗಳು......
ನಾರಾಯಣಾ ಓ ನಾರಾಯಣ......ಓ......
ನಾಲ್ಕು ಸಂಗಾತಿ ಹೆಣ್ಣುಗಳಂತೆ......
ನಮ್ಮ ಮಗು ಎಲ್ಲಿ ಹೋದಳಪ್ಪಾ ಎಲ್ಲಿ ಹೋದಳೆಂದು......
ಹುಡುಕುತ್ತಾ ಹುಡುಕುತ್ತಾ ಹೋಗುವಾಗ......
ಹಂಡೆಯೂ ಇಲ್ಲ ಗಿಂಡೆಯೂ ಇಲ್ಲವೆಂದರು ಹೆಣ್ಣುಗಳು......
ಹಟ್ಟಿಯ ಕಡೆಗೆ ಹೋದರಂತೇ ಹಟ್ಟಿ ಕಡೆಗೆ ಹೋಗುವಾಗ ಇನ್ನಾದರೋ......
ಗೋಡೆ ಚಿವುಟುತ್ತಾ ಉಗುರು ಕಚ್ಚುತ್ತಾ
ಕಾಲುಕೆರೆಯುತ್ತಾ ಇದ್ದಾಳಪ್ಪ ಮಗಳು......
ದುಃಖಿದುಃಖಿಸಿ (ಬಿಕ್ಕಿಬಿಕ್ಕಿ) ಅಳುತ್ತಾಳೆ ಅವಳು ಮಗಳು......
ನಾರಾಯಣ ನಾರಾಯಣ ಗಿಂಡೇ......
ಮದುಮಗಳಾಗಿ ಮಗಾ ಮೈನರೆದಿ ಓ......
ಅಳಬೇಡ ಮಗಾ ನೀನು ದುಃಖಿಸಬೇಡ......
ನಿನ್ನ ಹಾಗೆಯೇ ಇರುವ ಹೆಣ್ಣುಗಳು ನಾವು ಕೂಡಾ
ಚಿಕ್ಕವರಾಗಿದ್ದೇ ದೊಡ್ಡವರಾದವರು
ಹೆಣ್ಣು ಹೋಗಿ ಹೆಂಗುಸರಾದವರು......
ನಾವು ಗಿಂಡೆ ಕೇಳಿದ್ದೀಯೇ ಓ......
ಅಳಬೇಡ ಮಗಾ ಓ ದುಃಖಿಸಬೇಡ ಎಂದರು......
ಗಿಂಡೆಗೆ ಸಮಾಧಾನ ಹೇಳಿದರು ಓ ಹೆಣ್ಣುಗಳು......
ನಾರಾಯಣ ನಾರಾಯಣ ಅಜ್ಜನವರೇ ಓ......
ನಮ್ಮ ಗಿಂಡೆ ಮದುಮಗಳಾದಳು ಓ ಋತುಮತಿಯಾದಳು......ಓ......
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು......
ಯಾರು ಹೆಣ್ಣುಗಳೇ ಯಾರು ಹೆಣ್ಣುಗಳೇ......
ಮಡಿವಾಳಗಿತ್ತಿ ಚೆಲುವೆಗೆ ಹೇಳಿ ಕಳುಹಿಸಿ ನೀವು......
ನಾಲ್ಕು ಮನೆಯ ಹೆಣ್ಣುಗಳನ್ನುಕರೆಸಿ ನೀವೆಂದರು......
ಗುರ್ಗಲಾಡೀ ಚಂದು ಪೆರ್ಗಡೇ ಓ ಬನ್ನಾರ್ ಅವರು......
ಕೆಳಬದಿಯಲ್ಲಿ ಓ ಹೋದರು ಹೆಣ್ಣುಗಳು......
ಮೇಲ್ಬದಿಯಲ್ಲಿ ಓ ಹೋದರು......
ಮಡಿವಾಳಗಿತ್ತಿ ಚೆಲುವೆಗೆ ಓ (ಬರಲು) ಹೇಳಿದರು......
ಮಡಿವಾಳಗಿತ್ತಿ ಚೆಲುವೆ ಓ ಬಂದಳಂತೆ......
ನಾಲ್ಕು ಮನೆಯ ಹೆಣ್ಣುಗಳು ಬಂದರು......
ಕಳಸಿಗೆ ಭತ್ತದ ಚಿಕ್ಕ ಮೂಟೆ ಹಾಕಿದಳು

ನಾಲ್ಕು ತೆಂಗಿನಕಾಯಿಗಳ(ನ್ನು ಒಟ್ಟು ಸೇರಿಸಿ) ಜೊತೆಗಂಟು ಹಾಕಿದಳು
ಒಂದು ಬಳ್ಳ ಭತ್ತ ತೆಗೆದಳೋ ಚೆಲುವೆ......
ಬುಕ್‌ಬುಡ್ ಎಂದು (ಕುಟ್ಟಿ) ಧೂಳೀಪಟ ಮಾಡಿದಳು......
ನಾರಾಯಣಾ ನಾರಾಯಣಾ ಓ......
ಧೂಳೀಪಟ ಮಾಡಿದುದನ್ನು (ತೆಗೆದುಕೊಂಡು)......
ಅಂಗಳದಲ್ಲಿ ಮಂಡಲ (ರಂಗೋಲಿ) ಹಾಕಿದಳು......
ನಾಲ್ಕು ಗಿಂಡಿಗಳಿಗೆ ಮಂಡಲ (ರಂಗೋಲಿ) ಹಾಕಿದಳು......
ನಾಲ್ಕು ಗಿಂಡಿಗಳಿಗೆ ಮಂಡಲ (ರಂಗೋಲಿ) ಹಾಕಿದಳು......
ಸಿಂಬಿ ಕಟ್ಟಿದಳು ನಾಲ್ಕು ಮೂಲೆಯಲ್ಲಿರಿಸಿದಳು......
ಮಡಿವಾಳಗಿತ್ತೀ ಚೆಲುವೇ ಓ ಕಳಸಿಗೆ ಭತ್ತದಾ ಓ ಚಿಕ್ಕ ಮುಡಿ (ಗಂಟು) ಇಟ್ಟಳು......
ಅದರ ಮೇಲೆ ಜೊತೆಗಂಟು ಹಾಕಿದ ತೆಂಗಿನ ಕಾಯಿಯಗಳನ್ನು ಇರಿಸಿದಳು ಚೆಲುವೆ....
ನಾಲ್ಕು ಮನೆಯ ಹೆಣ್ಣುಗಳು ಹೋದರು ಈಗ
ಬಂಗಾರದ ಚಿಕ್ಕ ಎಣ್ಣೆಯ ಪಾತ್ರೆ ಹಿಡಿದರು
ಬೆಳ್ಳಿಯ ಸೌಟು (ಚಮಚ) ಹಾಕಿದರು......
ಇನ್ನಾದರೋ ಹೋದರು ಹೆಣ್ಣುಗಳು......
ನಾರಾಯಣ ನಾರಾಯಣ ಹೆಣ್ಣುಗಳೇ ಕೇಳಿದ್ದೀರೇ ನೀವು......
ಒಬ್ಬಳೇ ಹೋದಳು ಹೆಣ್ಣು......
ಹಟ್ಟಿಯ ಕಡೆಗೆ ಹೋದಳಂತೆ
ಬಂಗಾರದ ಚಿಕ್ಕ ಎಣ್ಣೆಯ ಪಾತ್ರೆ ಹಿಡಿದಳು......
ಬೆಳ್ಳಿಯ ಸೌಟು (ಚಮಚ) ಹಾಕಿದಳು......
ಮೂರು ಚಮಚ ಎಣ್ಣೆ ತೆಗೆದು......
ಮದುಮಗಳ ತಲೆಗೆ ಹಾಕಿದಳು......
ಮದುಮಗಳ ತಲೆಗೆ ಹಾಕಿ
ಮದುಮಗಳನ್ನು ಕರೆದುಕೊಂಡು ಬಂದರಂತೆ ಅಲ್ಲಿ......
ಗಿಂಡೆಯನ್ನು ಮೂರು ಸುತ್ತು ಬಲಿ (ಪ್ರದಕ್ಷಿಣೆ) ಬರಿಸಿದರು......
ಮೂರು ಸುತ್ತು ಪ್ರದಕ್ಷಿಣೆ ಬರಿಸಿ
ಭತ್ತದ ಚಿಕ್ಕ ಮೂಟೆಯಲ್ಲಿ ಜೊತೆಗಂಟು ಹಾಕಿದ ತೆಂಗಿನಕಾಯಿಯ ಮೇಲೆ ಕುಳ್ಳಿರಿಸಿದರು......
ನಾಲ್ಕು ಮನೆಯ ಹೆಣ್ಣುಗಳು ನಾಲ್ಕು ತಂಬಿಗೆ ನೀರು ಓ ಎರೆದರು......
ಬಳ್ಳದಲ್ಲಿ ಬಾಗೆ ಗೆರಟೆಯಲ್ಲಿ ಸೀಗೆ ತಂದರು......ಓ......
ಮಡಿವಾಳಗಿತ್ತಿ ಓ ಚೆಲುವೆ ಹೇಳಿದಳು......
ಚಾಕರಿಗೆ ಓ ಜನವಿಟ್ಟು
ಮಡಿವಾಳರ ಮಾಪುಕರಿಯಕ್ಕೆ

ಕರೆದುಕೊಂಡು ಹೋಗುತ್ತಾರಪ್ಪ......
ಸಂಗಾತಿ ನಾಲ್ಕು ಮನೆಯ ಹೆಣ್ಣುಗಳು
ಗಿಂಡೆ ಮದುಮಗಳಾದಳು ಋತುಮತಿಯಾದಳು......
ತೆಂಗಿನ ಹಸಿ ಗರಿಗಳ ತಡಿಕೆ ಹೆಣೆದು ಕಟ್ಟಿ ಮರೆಮಾಡಿ ಗಿಂಡೆಯನ್ನು ಕುಳಿತುಕೊಳ್ಳಿಸಿ ದರಪ್ಪ ನಾಲ್ಕು ಮನೆಯ ಹೆಣ್ಣುಗಳು......
ಅಷ್ಟು ಹೊತ್ತಿಗೆ ಹೇಳುತ್ತಾರಪ್ಪಾ ನಾಲ್ಕು ಮನೆಯ ಹೆಣ್ಣುಗಳು......
ನಾರಾಯಣ ನಾರಾಯಣ ಅಜ್ಜನವರೇ ಓ......
ನಿಮ್ಮ ಮೊಮ್ಮಗಳು ಓ ಸೊನ್ನೆಗೆ ಹೇಳಿದರೆ......ಓ......
ಅವಳಿಗೆ ಹೇಳಿದರೆ ಓ ನಾವು ಬಾರೆವು ಅಜ್ಜನವರೆ......
ಆನಂತರ ಹುಟ್ಟಿದ ತಂಗಿ ಮದುಮಗಳಾದಳು ಮೆಯಿನೆರೆದಳು ಅಜ್ಜನವರೇ......
ಮೊದಲು ಹುಟ್ಟಿದ ಸೊನ್ನೆ ಮದುಮಗಳಾಗಲಿಲ್ಲ ಮೆಯಿನರೆಯಲಿಲ್ಲ......
ಹೆಣ್ಣು ಹೋಗಿ ಹೆಂಗುಸಾಗಲಿಲ್ಲ......
ಗೋಣಿ ಗೊಡ್ಡು ಅಜ್ಜನವರೇ ಬಂಜೆ ಬರಡು ಅವಳು......
ಹಾವುರಾಣಿ ಹರಿದಾಡಿದ ಅಂಗಳದಲ್ಲಿ ಓತಿ ಓದಲಿಲ್ಲವೆಂದು
ಹೇಳುತ್ತಾರಪ್ಪಾ ಹೆಣ್ಣುಗಳು ನಾಲ್ಕು ಮನೆಯ ಹೆಣ್ಣುಗಳು......
ಕವಿತೆ ಕಟ್ಟಿದರು ಓ ಕಪಟತನ ತೋರಿದರು......
ಸೊನ್ನೆ ಬಂದರೆ ಅಜ್ಜನವರೇ ನಾವು ಬಾರೆವೆಂದರು......
ಸೊನ್ನೆಗೆ ಹೇಳಿದರೆ ನಾವು ಬಾರೆವೆಂದು
ನಾಲ್ಕು ಮನೆಯ ಹೆಣ್ಣುಗಳು ಹೇಳಿದರು......
ನಾರಾಯಣ ನಾರಾಯಣ ಅಜ್ಜನವರೆ......
ಜಾತಿ ಬೇಕೋ ನೀತಿ ಬೇಕೋ......
ಜಾತಿಬಾಂಧವರು ಓ ನೀತಿಕುಲ ಬೇಕೆ ಅಜ್ಜನವರೆ, ಮೊಮ್ಮಗಳು ಬೇಕೆ ನಿಮಗೆ ಎಂದು ಕೇಳುತ್ತಾರೆ ಹೆಣ್ಣುಗಳು......
ನಾರಾಯಣಾ ನಾರಾಯಣಾ ಹೆಣ್ಣುಗಳೇ ಓ......
ಜಾತಿಬಾಂಧವರು ನೀತಿಕುಟುಂಬ ನನಗೆ ಬೇಕು......
ನನ್ನ ಮೊಮ್ಮಗಳಿಗೆ ಓ ಇಂದಲ್ಲದಿದ್ದರೆ ನಾಳೆ ನಾನು ಬಂಧುಬಳಗ (ನೆಲೆ, ನೆಂಟಸ್ತಿಕೆ) ಮಾಡುತ್ತೇನೆ......
ರಾಜಿಕೂಟಕ್ಕೆ (ರಾಜಿಪಂಚಾಯಿಕೆಗೆ) ಕರೆಸಿಕೊಳ್ಳುವೆ ಎಂದು ಹೇಳಿದರು ಅಜ್ಜನವರು
ನಾರಾಯಣ ಅಜ್ಜನವರು ಅವರು......
ಗುರ್ಗಲಾಡಿ ಚಂದು ಪೆರ್ಗಡೆ ಓ ಬನ್ನಾರರು ಅವರು......
ಅಷ್ಟು ಹೊತ್ತಿಗೆ ಓ ಕೇಳಬೇಕು ಓ......
ಅಂದಿನ ದಿನ ಹೋಗಿದೆಯಂತೆ......
ಮರಳಿ ಮರುದಿನ ಓ ಬರುವಾಗ......

ಗಿಂಡೆಗೆ, ಓ ಋತುಮತಿಯಾದವಳಿಗೆ
ಡಬ್ಬ ಡಬ್ಬ ಓ ತುಪ್ಪವಂತೆ......
ಮುಡಿ ಮುಡಿ ಓ ಅವಲಕ್ಕಿಯಂತೆ
ಅಜ್ಜನವರು ಓ ಕಳುಹಿಸಿದ್ದಾರಂತೆ......
ಒಂದಾನೊಂದು ದಿನದಲ್ಲಿ ಓ.....
ಹನ್ನೆರಡು ದಿನ ತುಂಬಿ ಬರುವಾಗ......ಓ.....
ನಾಲ್ಕು ಮನೆಯ ಹೆಣ್ಣುಗಳು ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು......
ಹನ್ನೆರಡನೆಯ ದಿನದಲ್ಲಿ ಋತುಮತಿಯಾದ ಮದುಮಗಳ ಮದುವೆ (ಮೆಯಿನೆರೆದ ಹಬ್ಬ) ಓ ಮಾಡಬೇಕಪ್ಪ......
ನೀರ ಪ್ರಸ್ತಾಪ(ಮೀಯಿಸುವ ಹಬ್ಬ?)ಕ್ಕೆ ಓ ಕರೆಯಬೇಕೆಂದು ಓ ಶುದ್ಧಮುದ್ರಿಕೆಯೆಂದು ಓ ಹೇಳುತ್ತಾರೆ......
ಗುರ್ಗಲಾಡೀ ಓ ಚಂದು ಪೆರ್ಗಡೆ ಓ ಬನ್ನಾರರಂತೆ......
ಬನ್ನಾರ್ ಹೇಳುವಾಗ ಓ ಹನ್ನರಡನೇ ದಿನದಂದು......
ಸೊನ್ನೆಯೂ ಹೇಳುತ್ತಾಳಂತೆ ಓ ನಾರಾಯಣಾ ಓ ನಾರಾಯಣ ಮದುಮಗಾ ಓ...
ನನ್ನ ಅಜ್ಜನವರು ಓ ಅರಳುಮರುಳಿನಲ್ಲಿ ಓ ಹೇಳದೆ ಕುಳಿತುಕೊಂಡಾರು
ನನ್ನ ತಂಗಿ ಓ ಗಿಂಡೆಯಂತೆ ಓ ಋತುಮತಿಯಾಗಿದ್ದಾಳೆ ಮೆಯಿ ನೆರೆದಿದ್ದಾಳೆ ಓ
ಇಂದು ನೀರ ಪ್ರಸ್ತಾಪ(ಮೀಯಿಸುವ ಹಬ್ಬ)ಕ್ಕೆ ಓ ಕರೆಯುವುದಂತೆ......
ನೀರ ಪ್ರಸ್ತಾಪ(ಮೀಯಿಸುವ ಹಬ್ಬ)ಕ್ಕೆ ಓ ನಾನು ಹೋಗಬೇಕು ಮದುಮಗಾ
ಎಂದು ಸೊನ್ನೆ ಮದುಮಗಳು ಓ ಹೇಳುತ್ತಾಳಂತೆ......
ನಾರಾಯಣ ಓ ನಾರಾಯಣ ಸೊನ್ನೆ ಓ......
ಉರ್ಕಿದೊಟ್ಟುವಿನ ಸೊನ್ನೆ ಮದುಮಗಳೇ......
ನೀನಾದರೋ ಋತುಮತಿಯಾಗಲಿಲ್ಲ ಮೆಯಿನೆರೆಯಲಿಲ್ಲ ಓ
ನಿನ್ನ ತಂಗಿ ಓ ಗಿಂಡೆ ಋತುಮತಿಯಾಗಿದ್ದಾಳೆ ಮುಟ್ಟಾಗಿದ್ದಾಳೆ
ನೀರ ಪ್ರಸ್ತಾಪ(ಮೀಯಿಸುವ ಹಬ್ಬ)ಕ್ಕೆ ಕರೆಯಲು ಹೋಗುವಾಗ
ನಾಲ್ಕು ಮನೆಯ ಹೆಣ್ಣುಗಳು ಸುಳ್ಳು ಹೇಳಿಯಾರು, ನಿನ್ನನ್ನು ಹೀಯಾಳಿಸಿಯಾರು, ಓ...
ಸೊನ್ನೆ ಕೇಳಿದಿಯೇ ನೀನೆಂದು ಓ ಕೈಹಿಸಿದ ಮದುಮಗಾ ಓ ಬೋಧನೆ (ಹಿತವಚನ) ಹೇಳುತ್ತಾರಂತೆ......
ನಾರಾಯಣ ಓ ನಾರಾಯಣ ಮದುಮಗಾ ಓ......
ನನ್ನ ಅಜ್ಜನವರಿಗೆ ಪ್ರಾಯದೋಷದಿಂದ ಮರೆತುಹೋದರೂ......
ಎದೆ ತೊಟ್ಟಿಲಲ್ಲಿ ಹಾಕಿ ನಮ್ಮ ಅಜ್ಜನವರು ನಮ್ಮಿಬ್ಬರನ್ನೂ ಸಾಕಿದ್ದಾರೆ ಕಿರುಬೆರಳಿಗೆ ಓ ಬಟ್ಟೆ ಸುತ್ತಿ (ಹಾಲಲ್ಲಿ ಅದ್ದಿ) ತಾಯ ಮೊಲೆಹಾಲೆಂದು (ಹಾಲು) ಕುಡಿಸಿ ಸಾಕಿದ್ದಾರೆ ನಮ್ಮ ಅಜ್ಜನವರು......

ಒಂದೇ ತೊಟ್ಟಿಲಲ್ಲಿ ಓ ನಮ್ಮನ್ನು ಇಬ್ಬರು ಮಕ್ಕಳನ್ನು ಓ ಮಲಗಿಸಿದ್ದಾರೆ ಅಜ್ಜನವರು...
ನನ್ನ ತಂಗಿಯ ಅಂದ ಓ ನನಗೆ ನೋಡಬೇಕು ಮದುಮಗ ಎಂದು......
ಹಠ ಹಿಡಿಯುತ್ತಾಳೆ ಓ ಹಠ ಸಾಧಿಸಲು ಹೋಗುತ್ತಾಳೆ......
ತಣ್ಣೀರು ಮುಟ್ಟುವುದಿಲ್ಲ ಸವಿ ಹೀರುವುದಿಲ್ಲ ಸೊನ್ನೆ......
ನಾರಾಯಣ ಓ ನಾರಾಯಣ ಸೊನ್ನೆ......ಓ......
ಹಾಗೆ ಒಂದು ವೇಳೆ ಹೋಗುವುದಿದ್ದರೂ ಓ ಕೆಲೆಂಜ ಪರಾರಿ ಓ ಜಾರು ಮಾರ್ಲರು ಓ ನನ್ನ ಅಣ್ಣನವರಲ್ಲಿ ಓ ಕೇಳಿ ಹೋಗು ಓ......
ಎಂದು ಹೇಳಿಯಾರು......
ಒಂದು ಜಿಗಿತಕ್ಕೆ ಓ ಒಂದು ಹಾರುವಿಕೆಯಲ್ಲಿ ಓ ಹೋದಳಂತೆ ಓ ಸೊನ್ನೆ ಓ......
ಕೆಲೆಂಜ ಪರಾರಿ ಓ ಜಾರುಮಾರ್ಲರಲ್ಲಿಗೆ......ಓ......
ನಾರಾಯಣ, ಭಾವನವರೇ ಓ ನಾರಾಯಣ, ಭಾವನವರೇ......
ನನ್ನ ತಂಗಿ ಋತುಮತಿಯಾಗಿದ್ದಾಳಂತೆ ಓ ಮೈಯಿನೆರೆದಿದ್ದಾಳಂತೆ ಭಾವನವರೇ
ನಾನು ಹೋಗಬೇಕು ಓ ನನ್ನ ತಂಗಿಯ ಅಂದ ನಾನು ನೋಡಬೇಕು......
ಓ ಎಂದು ಹೇಳುತ್ತಾಳೆ ಸೊನ್ನೆ ಮದುಮಗಳು......
ನಾರಾಯಣ ಮಗ ಓ ಸೊನ್ನೆ ಕೇಳಿದ್ದೀಯೇ ಓ......
ನಾಲ್ಕುಮನೆಯ ಹೆಣ್ಣುಗಳು ನಿನಗೆ ಓ......
ಕಪಟದಿಂದ ಏನೇನೋ ಹೇಳಿಯಾರು ಮಗಾ
ನಮ್ಮ ಓ ಉರ್ಕಿದೊಟ್ಟು ಅರಮನೆಯ ಮಾನಮರ್ಯಾದೆ ತೆಗೆದಾರು ಮಗಾ......
ನಾರಾಯಣ ನಾರಾಯಣ ಭಾವನವರೇ......
ಒಂದೇ ತೊಟ್ಟಿಲಲ್ಲಿ ಮಲಗಿದವರು ನಾವು ಒಂದೇ ಮೊಲೆಹಾಲು ಕುಡಿದವರು ನಾವು...
ನಮ್ಮ ಅಜ್ಜನವರು ಕಿರುಬೆರಳಿಗೆ ಪಟ್ಟೆ ಸುತ್ತೀ ಓ......
ನನ್ನ ಒಡಲು ತಂಪು ಮಾಡಿದ ಹಾಗೆಯೇ ಓ ನನ್ನ ತಂಗಿಯನ್ನೂ
ಒಂದೇ ತೊಟ್ಟಿಲಲ್ಲಿ ಮಲಗಿಸಿ ಓ ನಮ್ಮಿಬ್ಬರನ್ನೂ ಸಾಕಿದರು ಅಜ್ಜನವರು......
ಒಂದೇ ತಟ್ಟೆಯಲ್ಲಿ ಓ ಒಂದೇ ಹರಿವಾಣದಲ್ಲಿ
ಒಂದೇ ಹರಿವಾಣದಲ್ಲಿ ಅನ್ನ ಕೊಟ್ಟು ಸಾಕಿದ ಅಜ್ಜನವರಿಗೆ ಮುಪ್ಪಿನ ದೋಷ (ಮರೆವು) ಆಗಿದೆ ಎಂದಳು ಸೊನ್ನೆ
ತಣ್ಣೀರು ಮುಟ್ಟುವುದಿಲ್ಲ ಓ ಸವಿ ಹೀರುವುದಿಲ್ಲ......
ಆಯಿತು ಮಗ ಎಂದರಂತೆ ಕೆಲೆಂಜ ಪರಾರಿಯ ಜಾರು ಮಾರ್ಲರು ಬಂದು......
ಉರ್ಕಿದೊಟ್ಟುವಿನ ಅರಮನೆಗೆ ಬಂದರಂತೆ......
ನಾರಾಯಣ ನಾರಾಯಣ ಮದುಮಗಾ ಓ ನಾರಾಯಣವಂತೆ......ಓ......
ನನ್ನ ಭಾವನವರು, ಓ ನಿಮ್ಮಣ್ಣ ಓ ಬಂದರು ಮದುಮಗಾ......ಓ......
ಬಂದರಂತೆ, ಬಂದಾಗುವಾಗ ಯಾರು ಓ ಅಣ್ಣಾ ಕೇಳಿದಿರೇ......

ಗುರ್ಗಲಾಡಿಯ ಅರಮನೆಗೆ ಓ ಸೊನ್ನೆ ಮದುಮಗಳು ಓ ಹೋಗುವುದಂತೆ ಅಣ್ಣಾ...
ಅವಳ ತಂಗೀ ಓ ನನ್ನ ನಾದಿನೀ ಓ ಮದುಮಗಳಾಗಿದ್ದಾಳಂತೆ
ನೀರ ಪ್ರಸ್ತಾಪ(ಮೀಯಿಸುವ ಹಬ್ಬ)ದ ಆಚರಣೆ ಇವತ್ತಂತೆ ಓ......
ಇವಳನ್ನು ಹೀಯಾಳಿಸಿಯಾರು ಓ ಅಣ್ಣಾ ಕೇಳಿದಿಯ......
ಕವಿತೆ ಕಟ್ಟಿ ಓ ಕಪಟದಿಂದ ನಕ್ಕಾರು......ಓ......
ನಾರಾಯಣ ಮಗ ಸೊನ್ನೆ ಓ ಕೇಳಿದಿಯೇ ನೀನು......
ಸೊನ್ನೆ ಮದುಮಗಳೇ ಓ ಕೇಳು ಮಗಾ......ಓ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಮಾನ ಹೋಗದು ಮರ್ಯಾದೆ ಹೋಗದು......
ಮಾನದಲ್ಲಿ ಹೋಗಿ ಮಾನದಲ್ಲೇ ಬಾ ತಾಯಿ
ಯಾರು ಮಗಾ ಸೊನ್ನೆ ಎಂದರು......
ಕೆಲೆಂಜ ಪರಾರಿ ಜಾರುಮಾರ್ಲರು......
ನಾರಾಯಣ ಅಣ್ಣಾ ಓ ಕೇಳಿದ್ದೀಯೇ ನೀನು......
ಅಷ್ಟು ಸದ್ಬೋಧನೆ (ಹಿತವಚನ) ನೀತಿ ಮಾತು ಕೊಡಬೇಡ ಅಣ್ಣಾ......
ನನ್ನ ಮದುಮಗಳು ನಿನ್ನ ನಾದಿನಿ
ಉರ್ಕಿದೊಟ್ಟುವಿನ ಅರಮನೆಯಲ್ಲಿ
ಮಾನದಲ್ಲಿ ಹೋಗಿ ಮಾನದಲ್ಲಿ ಬಾರದೇ ಇದ್ದರೆ ಓ ಅವಳನ್ನು
ಕುದುರೆಗಳಿಗೆ ಹುರುಳಿ ಬೇಯಿಸಲು ನೇಮಿಸಿಯೇನು
ಕಾಡು ಜಾನುವಾರುಗಳಿಗೆ ಪಶುಆಹಾರ ಬೇಯಿಸುವಂತೆ ಮಾಡಿ ಬಿಟ್ಟಿಚಾಕರಿ ಮಾಡಿಸಿಯೇನು ಸೊನ್ನೆಯನ್ನು
ಎಂದು ಓ ಹೇಳುತ್ತಾನಪ್ಪಾ ಓ ಉರ್ಕಿದೊಟ್ಟುವಿನಾ ನಿತ್ಯಮದುಮಗ ಗುರು ಮಾರ್ಲ ಓ ಹೇಳುತ್ತಾನಪ್ಪಾ...... ಓ ಉರ್ಕಿದೊಟ್ಟುವಿನಾ ನಿತ್ಯಮದುಮಗ ಗುರ ಮಾರ್ಲ ಓ ಹೇಳುತ್ತಾನಪ್ಪಾ......
ಅಟ್ಟದವರೆಗೆ ಏಣಿ ಇಡಿಸಿದರು......
ಅಟ್ಟದವರೆಗೆ ಏಣಿ ಇಡಿಸಿ ಓ ಅಟ್ಟದಿಂದ ದಂಡಿಗೆ ಇಳಿಸಿದರು......
ದಂಡಿಗೆ ಹೊರುವ ಬೋವಿಗಳನ್ನು ಕರೆಸಿದರು ಗುರು ಮಾರ್ಲರು ಓ ಜಾರುಮಾರ್ಲರು...
ದಂಡಿಗೆಯನ್ನು ಸಿಂಗರಿಸಿದರು......
ದಂಡಿಗೆ ಸಿಂಗರಿಸಿ ಹೇಳಿದರು......
ಅಣ್ಣನೂ ತಮ್ಮನೂ ಓ ಕಲ್ಲಿನ ಹೆಬ್ಬಾಗಿಲಲ್ಲಿ ಕುಳಿತುಕೊಂಡರಂತೆ......
ನಾರಾಯಣ ಬೋವಿಗಳೇ ಓ ನಾರಾಯಣ ಬೋವಿಗಳೇ ನೀವು......ಓ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ ಏರಿದ ದಂಡಿಗೆ ಓ
ಗುರ್ಗಲಾಡೀ ಓ ಚಂದುಪೆರ್ಗಡೆ ಓ ಬನ್ನಾರರ ಚಾವಡಿಯಲ್ಲಿ ಓ ನಿಲ್ಲಬೇಕೆಂದರು......
ಬನ್ನಾರರ ಚಾವಡಿಯಲ್ಲಿ ಓ ನಿಲ್ಲಬೇಕೆಂದರು......ಓ......

ಹಾದಿಬೀದಿಯಲ್ಲಿ ಓ ದಂಡಿಗೆಯನ್ನು ನಿಲ್ಲಿಸಬಾರದೆಂದು ಓ ದಂಡಿಗೆಯ ಬೋವಿಗಳಿಗೆ ಅಪ್ಪಣೆ ಓ ಕೊಟ್ಟರು......
ಓ ಕಲೆಂಜ ಪರಾರಿ ಜಾರು ಮಾರ್ಲರು ಓ ಉರ್ಕಿದೊಟ್ಟುವಿನ ಗುರು ಮಾರ್ಲರು...
ಓ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ ಏರಿದ ದಂಡಿಗೆ ಹೋಗಿದೆಯಂತೆ ಓ......
ಹೋಗುತ್ತಾ ಹೋಗುತ್ತಾ ಓ ಹೋಗುತ್ತದೆಯಂತೆ ಓ......
ಗುರ್ಗಲಾಡೀ ಓ ಚಂದು ಪೆರ್ಗಡೆಯವರ ಗದ್ದೆಯ ದೊಡ್ಡ ಬದುವಿನಲ್ಲಿ......
ನಾರಾಯಣ ಓ ನಾರಾಯಣಾ
ಮೇಲ್ ಮೇಲಿನ ಲೋಕದ ಓರ್ವ ಬೆರ್ಮರ ಪಾದಕ್ಕೆ ಒಂದು ನಾರಾಯಣಾ......
ನಾರಾಯಣ ಓ ನಾರಾಯಣಾ......ಓ......
ಕೆಳಗಣ ಸಿರಿಬಾರಿ ಉಳ್ಳಾಕುಳು (ದೈವದ) ಪಾದಕ್ಕೆ ಒಂದು ನಾರಾಯಣಾ......
ನಾರಾಯಣ ಓ ನಾರಾಯಣಾ......ಓ......
ಈ ಜಾಗದ ರಾಜಂದೈವ ಕೊಡಮಂದಾಯನ ಪಾದಕ್ಕೇ ಒಂದು ಶರಣೂ......ಓ......
ನಾರಾಯಣ ಓ ನಾರಾಯಣಾ......
ನಾರಾಯಣ ಓ ನಾರಾಯಣಾ......ಓ......
ನನ್ನ ಅಕ್ಕನವರು ಓ ಸತ್ಯಮಹಾಲೋಕದ ಸಿರಿಯವರ ಪಾದಕ್ಕೇ ಓ ಒಂದು ನಾರಾಯಣಾ...
ನಾರಾಯಣ ಓ ನಾರಾಯಣಾ......ಓ......
ಸೊನ್ನೆಯ ಪಲ್ಲಕ್ಕೀ ಓ ಬರುವ ಅಂದ......
ನೋಡಿದ್ದಾರಪ್ಪಾ ಓ ಗುರ್ಗಲಾಡಿಯ ಓ ಅರಮನೆಯಲ್ಲಿ ಓ......
ನಾಲ್ಕು ಮನೆಯ ಹೆಣ್ಣುಗಳು ಓ ನೋಡಿದರಂತೆ......
ನಾರಾಯಣ ಓ ಅಜ್ಜನವರೇ ಓ......
ನಾವು ನಿನ್ನೇ ಓ ಹೇಳಿದ್ದಲ್ಲವೇ ಅಜ್ಜನವರೇ......ಓ......
ನಿಮ್ಮ ಮೊಮ್ಮಗಳು ಓ ಸೊನ್ನೆಗೆ ಹೇಳಿಕೆ ಕೊಟ್ಟರೆ ನಾವು ಬರಲಾರೆವೆಂದು ನಿನ್ನೆ ಹೇಳಿದಲ್ಲವೇ ಅಜ್ಜನವರೇ......
ಯಾಕೆಂದು ಕೇಳಿದರೆ ಓ ಸೊನ್ನೆ ಋತುಮತಿಯಾಗಲಿಲ್ಲ ಮೆಯಿನರೆಯಲಿಲ್ಲ......
ನೀರ ಪ್ರಸ್ತಾಪ(ಮೀಯಿಸುವ ಹಬ್ಬ)ಕ್ಕೆ ಕರೆಯಲಿಲ್ಲ ಅವಳಿಗೆ ಓ......
ನೀರ ಪ್ರಸ್ತಾಪ(ಮೀಯಿಸುವ ಹಬ್ಬ)ಕ್ಕೆ ಕರೆಯಲಿಲ್ಲ ಅವಳಿಗೆ ಓ......
ಬಂಜೆ ಬರಡು ಗೋಣಿ ಗೊಡ್ಡು ಓ......
ಕಣತಲೆಯಲ್ಲಿ ಬಿಳಿಕೂದಲು ಬಂದಿದೆಯವಳಿಗೆ......
ಹಾವುರಾಣಿ ಹರಿಯಲಿಲ್ಲ ಓತಿ ಓದಲಿಲ್ಲವೆಂದು ಓ......
ಅವಳ ತಂಗೀ ಓ ಗಿಂಡೆ ಮುಟ್ಟಾಗಿದ್ದಾಳೆ......
ಅವಳಿಗೆ ಹೇಳಿಕೆ ಕೊಟ್ಟರೆ ಓ ನಾವು ಬರುವುದಿಲ್ಲವೆಂದು ಓ......

ನಿಮಗೆ ನಿನ್ನೆಯೇ ನಾವು ಹೇಳಿದ್ದಲ್ಲವೇ ಅಜ್ಜನವರೇ......
ಹೇಳುವುದಿಲ್ಲ ಓ ಹೇಳುವುದಿಲ್ಲ ಹೆಣ್ಣುಗಳೇ ಎಂದು ನಮಗೆ ನೀವು ಉತ್ತರ ಕೊಟ್ಟಿದ್ದಿರಲ್ಲವೇ ಅಜ್ಜನವರೆ......
ನಾರಾಯಣ ಮಗ ಹೆಣ್ಣುಗಳೇ ಓ......
ನಾನು ಸೊನ್ನೆಗೆ ಓ ಹೇಳಲಿಲ್ಲವೆಂದು ಹೇಳಿದರು ಅಜ್ಜನವರು......
ನಾರಾಯಣ ಅಜ್ಜನವರೆ ಓ ನಿಮ್ಮ ಮೊಮ್ಮಗಳು ಓ ಸೊನ್ನೆ ಬರುವ ಅಂದ ನೋಡಿ ಅಜ್ಜನವರೇ......
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು......
ಗದ್ದೆಯ ಬದುವಿನ ಕಡೆ ನೋಡಿದರು ಅಜ್ಜನವರು......
ನಾರಾಯಣ ಹೆಣ್ಣುಗಳು ನಾರಾಯಣ ಹೆಣ್ಣುಗಳು......ಓ......
ಮಸಾಲೆ ಅರೆಯುವವರು ಕಲ್ಲು ಬಿಟ್ಟೆದ್ದರು......ಓ......
ತರಕಾರಿ ಹೆಚ್ಚುವವರು ಮೆಟ್ಟುಕತ್ತಿ ಬಿಟ್ಟೆದ್ದರು......
ಅಕ್ಕಿ ಸೋಸುವ ಹೆಂಗುಸರು ಓ......
ಅಕ್ಕಿಯ ಮರಿಗೆ ಬಿಟ್ಟೆದ್ದರು......
ಒಲೆಯ ಬುಡದಲ್ಲಿ ಕುಳಿತಿದ್ದವರು......ಓ......
ಪಾಕವನ್ನು ಬಿಟ್ಟು ಎದ್ದುನಿಂತರು......
ಸೊನ್ನೆ ಬಂದರೆ ಓ ಅಜ್ಜನವರೇ ಓ......
ನಾವು ಹಿಂತಿರುಗುವುದೇ ಎಂದು ಓ ಹೊರಟರು ಹೆಣ್ಣುಗಳು......ಓ......
ನಾರಾಯಣ ಓ ನಾರಾಯಣ ಹೆಣ್ಣುಗಳೇ ಓ......
ಹೋಗಬೇಡಿರಿ ಓ ನನ್ನ ಕೆಲಸ ಓ ಅಂದದಲ್ಲಿ ಓ......
ಮಾಡಿ ಮುಗಿಸಬೇಕೆಂದರು ಓ ಅಜ್ಜನವರು......
ವೇಗವಾಗಿ ಸೊನ್ನೆಯ ಪಲ್ಲಕ್ಕೀ ಓ
ಬರುವುದನ್ನು ನೋಡಿ ಓ
ಅಜ್ಜನವರು ಓ ಎದುರು ಹೋದರಪ್ಪಾ......ಓ......
ನಾರಾಯಣ ಮಗ ಸೊನ್ನೆ ಓ ಕೇಳಿದ್ದೀಯೇ......
ನೀನೇ ನನ್ನ ಪ್ರೀತಿಯ ಮಗಳು ಓ ಮಮತೆಯ ಮೊಮ್ಮಗಳು ಸೊನ್ನೆ ನೀನು ಮಗಾ...
ನಾನು ಹೇಳಿಕೆ ನೀಡಲಿಲ್ಲವೆಂದು ಸಿಟ್ಟಲ್ಲಿ ಕುಳಿತುಕೊಳ್ಳಬೇಡ ಮಗಾ
ಇಂದಿಗೂ ನನ್ನ ಮೊಮ್ಮಗಳು ಮುಂದಕ್ಕೂ ನನ್ನ ಮೊಮ್ಮಗಳೇ ಮಗಾ......
ದಮ್ಮಯ್ಯ ಮಗಾ ಓ ದಕ್ಕಯ್ಯ ಮಗಾ ಸೊನ್ನೆ......ಓ......
ನಿನ್ನ ತಂಗೀ ಗಿಂಡೆಯ ಓ ಅಂದ ನೋಡಲು ನೀನು ಓ
ಬರುವುದು ಬೇಡ ಮಗಾ ಓ ನಿನ್ನನ್ನು ಅವರು ಕೊರತೆ ಹೇಳುತ್ತಾರೆ ಹೀಯಾಳಿಸುತ್ತಾರೆ ಮಗಾ
ನೀನು ಬಂದರೆ ಅವರು ಹೊರಟುಹೋಗುತ್ತೇವೆಂದು ಎದ್ದು ಓ ನಿಂತಿದ್ದಾರೆ ಮಗಾ...

ನಿನ್ನ ತಂಗಿಯನ್ನು ಸಿಂಗಾರ ಓ ಮಾಡುವುದಿಲ್ಲವೆಂದು ಹೇಳುತ್ತಾರೆ ಮಗಾ ಎಂದು
ಓ ಕಣ್ಣಲ್ಲಿ ಕಡುದುಃಖ ಓ ಹೊಟ್ಟೆಯಲ್ಲಿ ಸಂಕಟ ಓ
ಅಜ್ಜನವರು ಪಡುವಾಗ ಓ ಹೇಳುತ್ತಾಳೆ ಮಗಳು......
ನಾರಾಯಣ ಬೋವಿಗಳೇ ಓ ನಾರಾಯಣ ಬೋವಿಗಳೇ......ಓ......
ಪಲ್ಲಕ್ಕಿಯನ್ನು ಇಳಿಸಿರಿ ಇಲ್ಲಿ......
ಚೆಂದೆಂಗಿನ ಮರದ ಪದ್ಮಕಟ್ಟೆಯ ಬುಡದಲ್ಲಿ......
ಗದ್ದೆಯ ಬದುವಿನಲ್ಲೇ ದಂಡಿಗೆ ಇಳಿಸಿದಳು ಸೊನ್ನೆ......
ದಂಡಿಗೆಯ ಕೊಂಬಿಗೆ ಅಜ್ಜನವರು ಕೈ ಓ ಕೊಡುವಾಗಾ......
ನಾರಾಯಣ ಅಜ್ಜನವರೇ ನಾರಾಯಣ ಅಜ್ಜನವರೇ......
ನಿಮ್ಮ ಮೊಮ್ಮಗಳು ಓ ಗಿಂಡೆಯ ಅಂದ ಓ......
ದೂರದಲ್ಲಿ ನಿಂತಾದರು ಓ ನಾನು ನೋಡುತ್ತೇನೆ ಅಜ್ಜನವರೇ......
ನಿನ್ನೆಗೆ ನಾವು ಒಂದೇ ತೊಟ್ಟಿಲಲ್ಲಿ ಮಲಗಿದವರು ಅಜ್ಜನವರೇ......
ಒಂದೇ ತಟ್ಟೆಯಲ್ಲಿ ಓ ಅನ್ನ ಉಂಡಿದ್ದೇವೆ ಅಜ್ಜನವರೇ ಓ......
ಒಂದೇ ಪಿಂಗಾಣಿಯಲ್ಲಿ ಓ ಹಾಲು ಕುಡಿದಿದ್ದೇವೆ ನಾವು......
ಒಂದೇ ಬೆರಳಿಗೆ ಓ ಪಟ್ಟೆಸುತ್ತಿದ್ದೀರಿ ಓ......
ತಾಯ ಹಾಲೆಂದು ಓ ನಮಗೆ ಕುಡಿಸಿದ್ದೀರಿ ಅಜ್ಜನವರೆ......
ದೂರದಲ್ಲಿ ನಿಂತು ನನ್ನ ತಂಗಿಯ ಅಂದವನ್ನು ನಾನು ನೋಡುತ್ತೇನೆಂದೇ ಹೇಳುತ್ತಾಳೆ ಸೊನ್ನೆ
ಓ ಉರ್ಕಿದೊಟ್ಟುವಿನಾ ಓ ಸೊನ್ನೆ ಮದುಮಗಳು......
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು ಓ ಗದ್ದೆಯ ಬದುವಿನಿಂದ ಓ ಹಿಂದೆ ಹೋದರು
ನಾರಾಯಣ ಓ ನಾರಾಯಣ ಹೆಣ್ಣುಗಳೇ ಓ......
ಸೊನ್ನೆ ಬರುವುದಿಲ್ಲಾ ಓ ನೀವು ಭಯಪಡಬೇಡಿ......
ನಿಮ್ಮ ಕೆಲಸ ನೀವು ಮುಂದವರಿಸಿ ಎಂದರು......
ಅಷ್ಟು ಹೇಳುವುದನ್ನು ಕೇಳಿದರು ಹೆಣ್ಣುಗಳು......ಓ......
ಮಸಾಲೆ ಅರೆಯುವವರು ಮಸಾಲೆ ಅರೆಯಲು ಕುಳಿತರು......
ತರಕಾರಿ ಹೆಚ್ಚುವವರು ತರಕಾರಿ ಹೆಚ್ಚಲು ಕುಳಿತರು......
ಅಕ್ಕಿ ಸೋಸುವವರು ಅಕ್ಕಿ ಸೋಸಲು ಹೋದರು......
ಒಲೆಯ ಹತ್ತಿರ ಕುಳಿತು ಪಾಕ ಮಾಡುವವರು ಓ ಅಡುಗೆ ಕೆಲಸ ಮಾಡುತ್ತಾ ಓ ಇದ್ದಾರೆ ಅಲ್ಲಿ......
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು......
ನಾರಾಯಣ ಹೆಣ್ಣುಗಳೇ ನಾರಾಯಣ ಹೆಣ್ಣುಗಳೇ......
ಮುಹೂರ್ತದ ಹೊತ್ತು ಸಮೀಪಿಸುತ್ತಾ ಬಂತು ನಮಗೆ......

ನೀರ ಪ್ರಸ್ತಾಪ(ಮೀಯಿಸುವ ಹಬ್ಬ)ಕ್ಕೆ ಓ ಕರೆಯುವ ಹೊತ್ತು ಬಂತೆಂದರು......
ಅಷ್ಟು ಹೇಳುವುದನ್ನು ಕೇಳಿದರು ಹೆಣ್ಣುಗಳು......ಓ......
ನಾಲ್ಕು ಮನೆಯ ನಾಲ್ಕು ಗುರಿಕಾರ (ಯಜಮಾನ) ಓ ಮನೆಯವರು......
ಅವರವರ ಓ ನಾಲ್ಕು ಮನೆಯ ಹೆಣ್ಣುಗಳು......
ನಾಲ್ಕು ಕರಂಡಕ ಓ ಆಭರಣ ತಂದರು......ಓ......
ಗಿಂಡೆಯ, ಇನ್ನು ಓ ತಲೆಕೂದಲನ್ನು ಬಿಚ್ಚಿ ಬೆನ್ನಿಗೆ ಹಾಕಿದರು
ಬಂಗಾರದ ಚಿಕ್ಕ ಎಣ್ಣೆಯ ಪಾತ್ರೆಗೆ ಓ ಬೆಳ್ಳಿಯ ಸೌಟು (ಚಮಚ) ಹಾಕಿದರು......
ಗಿಂಡೆಗೆ ನೆತ್ತಿಗೆ ಓ ನೆಯ್ಯೆಣ್ಣೆ ಹಾಕಿದರು......
ನೆತ್ತಿಗೆ ನೆಯ್ಯೆಣ್ಣೆ ಓ ಕೂದಲಿಗೆ ಕೂದಲೆಣ್ಣೆ ಹಾಕಿದರಪ್ಪಾ ಓ......
ತಲೆ ಕಟ್ಟಿದರು ಓ ಬಲಕ್ಕೆ ಜಡೆಗೊಂಡೆ ಹಾಕಿದರು......
ತಲೆಯ ಆಭರಣಗಳು ಎಂದು ತೊಡಿಸಿದರು ಹೆಣ್ಣುಗಳು......ಓ......
ನೆತ್ತಿ ಬೈತಲೆ ಓ ಮುಚ್ಚಬಂಗಾರ, ತಿರುಪಿನ ಹೂ, ಅಡ್ಡಕೇದಗೆ, ಓ ನೀಟ ಸಂಪಗೆ ಓ...
ತಲೆಯ ಆಭರಣಗಳನ್ನು ಓ ಮುಡಿಸಿದರು ಹೆಣ್ಣುಗಳು......
ಬಾರೆ(?) ಪಟ್ಟೆಸೀರೆಯನ್ನು ಉಡಿಸಿದರು ಓ ಮುತ್ತಿನ (ಮಣಿಗಳನ್ನು ಪೋಣಿಸಿದ) ರವಕೆ ಹಾಕಿಸಿದರು......ಓ......
ಕೈಯ ಆಭರಣವೆಂದು ಓ ಕರಂಡಕ ತೆಗೆದರು ಹೆಣ್ಣುಗಳು......
ಕೈಯ ಆಭರಣ ಹಿಡಿದರು ಹೆಣ್ಣುಗಳು......ಓ......
ಮುತ್ತು ಮುದ್ರೆಯ ಉಂಗುರ ಎಂದರು ಓ......
ಬೆರಳಿನ ಆಭರಣವೆಂದರು......
ಕೈಯ ಆಭರಣ ಓ ದಾಬು, ಬಳೆ ಓ ದುಂಡು, ದೋರೆ ಓ
ಮುರ್ಗಿ ಚಲಾಕಿ ಎಂದು ಓ ಬಳೆಗಳ ಹೆಸರೆಂದರು......
ಕೈಯ ಆಭರಣ ಓ ಆಯಿತೆಂದರು......ಓ......
ಕಿವಿಯ ಆಭರಣ ಓ ಇಟ್ಟರು ಹೆಣ್ಣುಗಳು......ಓ......
ಬೆಂಡೋಲೆ ಓ ಓಪಲೆ (opal) ಓ ಟಾರ್ (star – ನಕ್ಷತ್ರಾಕಾರದ) ಬುಗುಡಿ ಓ ಸರಪಳಿಯಂತೆ ಓ
ಹೊನ್ನೆಯ ಮೊಗ್ಗು ಓ ಲವಂಗದ ಕಡ್ಡಿ ಓ ಕಲಶದ ಕೊಪ್ಪು ಓ ಮುತ್ತು ಸರಪಳಿ ಓ ಕೊಪ್ಪು ಎಂದರು......
ಕಿವಿಯ ಆಭರಣ ಓ ಆಯಿತೆಂದರು......
ಮೂಗಿನ ಆಭರಣವೆಂದು ಓ ಹಿಡಿದರು ಹೆಣ್ಣುಗಳು......
ಮೂಗಿನ ಆಭರಣ ಓ ಮೂಗುತಿಯೆಂದರು ಓ......
ಮೂಗಿಗೆ ಟಿಕ್ಕಿ, ಬಲಾಕು, ನತ್ತು ಓ ಎಂದರು ಓ
ಮೂಗುತಿಗೆ ಕುಸುರು ಓ ಸಿಕ್ಕಿಸಿದರು ಹೆಣ್ಣುಗಳು......
ಮೂಗಿನ ಆಭರಣ ಓ ಆಯಿತೆಂದರು......

ಓ ಕಂಠದ ಆಭರಣವೆಂದರು ಹೆಣ್ಣುಗಳು......
ಬಂಗಾರದ ಕರಂಡಕ ಹಿಡಿದರು ಹೆಣ್ಣುಗಳು......ಓ......
ಕೊರಳಿನ ಆಭರಣ ಓ ಇಡುತ್ತೇವೆಂದು ಹೇಳಿದರು......
ಕೊರಳಿನ ಆಭರಣ ಓ ಗೋಧಿ(ಯ ಆಕಾರದ ಗುಂಡುಗಳುಳ್ಳ)ಸರ ಓ ಕಾಪಿ ಬೀಜವನ್ನು ಹೋಲುವ ಗುಂಡುಗಳುಳ್ಳ)ಸರ ಓ ಅವಲಕ್ಕಿಸರ
ಓ ಚಕ್ರಸರ ಓ ಜೋಡು ಅಡ್ಡಿಗೆ ಓ ಮಿಸಿರಿಮಾಲೆ
ಓ ಗೆಜ್ಜೆಟಕ್ಕ್‌ಮಣಿ ಓ ಸಿಂಗರೊ ಮಣಿಯಂತೆ
ಕೊರಳಿನ ಆಭರಣಗಳು ಆಯಿತೆಂದರು......ಓ......
ಸೊಂಟದ ಆಭರಣವೆಂದು ಹಿಡಿದರು ಹೆಣ್ಣುಗಳು......
ಸೊಂಟದ ಆಭರಣ ಓ ಸೊಂಟದ ಪಟ್ಟಿ ಓ ಕೊಯಮಲಕು ಓ ಬೆಳ್ಳಿಯ ನೂಲೆಂದರು...
ಓ ಡಾಬು ನೂಲು ಓ ಸೊಂಟದ ಆಭರಣವೆಂದರು......
ಕಾಲಿನ ಆಭರಣ ಎಂದರು ಹೆಣ್ಣುಗಳು......
ಕಾಲಿನ ಚೈನು ಓ ಕಾಲಿನ ಪೈಜಣೀ ಓ ಕಾಲಿನ ಕಡಗ ಎಂದು ಕಾಲಿನ ಆಭರಣಗಳು...
ಗಿಂಡಿಗೆ ಓ ಇಟ್ಟರು ಹೆಣ್ಣುಗಳು......
ಗಿಂಡೆಯನ್ನು ಓ ಋತಿಮತಿಯಾದ ಹೆಣ್ಣನ್ನು ಓ ಮದುಮಗಳಂತೆ ಸಿಂಗಾರ ಮಾಡಿದರು...
ಅಂಗಳದಲ್ಲಿ ಕುಳ್ಳಿರಿಸಿ ಕಲಶದ ನೀರು ಹೊಯ್ದರು ನಾಲ್ಕು ಮನೆಯ ಹೆಣ್ಣುಗಳು...
ನಾಲ್ಕು ಮನೆಯ ಹೆಣ್ಣುಗಳು ಹೊರಗಿನ ಹನಿ(ತಂಪಾದ?) ಚಪ್ಪರದಲ್ಲಿ
ಓರೆಯಾಗಿ ಕುಳಿತುಕೊಳ್ಳುವಾಗ......
ರಾವಿನ್ನ(?) ಗೆಜ್ಜೆಕತ್ತಿ ಓ ಬೆಳ್ಳಿ ಕಟ್ಟಿದ ಚೂರಿ ಓ ವೀಳ್ಯ ಅಡಕೆ ಓ ಗಿಂಡೆಯ ಕೈಯಲ್ಲಿ
ನಾಲ್ಕು ಮನೆಯ ಹೆಣ್ಣುಗಳು ಓ ಬೇಗನೆ ಕೊಡಿಸಿದ್ದಾರೆ......
ನಾರಾಯಣಾ ಓ ನಾರಾಯಣ......
ನಾರಾಯಣಾ ಓ ನಾರಾಯಣ ಅಜ್ಜನವರೇ......
ದೂರದಲ್ಲಿ ಓ ಓರೆಯಾಗಿ......ಓ......ಅಕ್ಕ ಓ ಸೊನ್ನೆ ಮದುಮಗಳನ್ನು
ತಂಗಿ ಓ ಗಿಂಡೆ ನೋಡುತ್ತಾಳೆ......
ಕಣ್ಣಲ್ಲಿ ಕಡು ದುಃಖ ಬಿಡುತ್ತಾಳೆ ಗಿಂಡೆ ಓ ಹೊಟ್ಟೆಯಲ್ಲಿ ಸಂಕಟಪಡುತ್ತಾಳಪ್ಪಾ
ಓ ಗಿಂಡೆ ಮದುಮಗಳು......
ನಾರಾಯಣಾ ಓ ನಾರಾಯಣ......
ಹಾಕಿರುವ ಏತದಲ್ಲಿಗೆ......ತೋಡಿಸಿರುವ ಬಾವಿಯಲ್ಲಿಗೆ......
ಆಕಾಶದ(ಷ್ಟು ಎತ್ತರದ) ಅಟ್ಟೆಮರ ಇಳಿಸಿ ಓ ಪಾತಾಳದ(ಷ್ಟು ಆಳದಲ್ಲಿರುವ) ಹನಿ (ತಂಪಾದ) ನೀರು ಓ ಮಗುಚಿದರು (ತೆಗೆದರು) ಹೆಣ್ಣುಗಳು......
ಬೆಳ್ಳಿಯ ಗಿಂಡೆಯಲ್ಲಿ......ಓ ಒಂದು ಗಿಂಡೆ ನೀರು ತುಂಬಿದರು......
ವೀಳ್ಯ ಅಡಿಕೆ ಓ ಹಾಕಿದರು......
ನಾರಾಯಣಾ ಓ ನಾರಾಯಣ ಹೆಣ್ಣುಗಳು......ಓ......

ಚೆಂದೆಂಗಿನ ಓ ಪದ್ಮಕಟ್ಟೆಯ ಓ ಬುಡಕ್ಕೆ
ಗಿಂಡಿಯ ನೀರು ಓ ವೀಳ್ಯ ಅಡಿಕೆ ಓ ಬೆಳ್ಳಿಯ ಗಿಂಡಿಯನ್ನು
ಗಿಂಡೆಯ ಕೈಯಲ್ಲಿ ಓ ಕೊಡಿಸಿದ್ದಾರೆ......
ಅಷ್ಟು ಹೊತ್ತಿಗೆ ಓ ಸೊನ್ನೆ ಇನ್ನು......ಓ......
ಗುರ್ಗಲಾಡೀ ಕಂಬಳಗದ್ದೆಯ ಬದುವಿನಲ್ಲಿ ಚೆಂದೆಂಗು ಓ ಪದ್ಮಕಟ್ಟೆಯ ಬುಡದಲ್ಲಿ
ಕಣ್ಣೀರಲ್ಲಿ ಕೈತೊಳೆಯುತ್ತಾ......ಓ ಹೊಟ್ಟೆಯುರಿ ತಡೆಯಲಾರದೆ......
ಬಡಕ್ಕನೆ ಎದ್ದುನಿಂತಳು ಸೊನ್ನೆ ಓ ದಿಡಕ್ಕನೆ ನೆಟ್ಟನೆ ನಿಂತಳು
ಪೂರ್ವಕ್ಕೆ ಮುಖ ಮಾಡಿದಳು ಸೊನ್ನೆ......
ಸೊನ್ನೆ ಮದುಮಗಳು ಓ ಕೇಳಬೇಕಂತೆ......
ನಾರಾಯಣಾ ಓ ನಾರಾಯಣ ತಾಯಿಯವರೇ......
ನಿನ್ನೆಗೆ ನನ್ನ ತಾಯಿಯವರು ನೀವು......
ಬಡಗಣ ಲಂಕೆಲೋಕನಾಡಿನಲ್ಲಿ ಆನೆಕಲ್ಲ ಅಡ್ಡದಲ್ಲಿ ದಂಬೆಕಲ್ಲ ಎದುರಿನಲ್ಲಿ
ಗಜಮರದ ತುದಿನೆರಳಲ್ಲಿ......
ಬುಟ್ಟಿಯ ಫಲವಸ್ತು ಓ ಹೆಡಿಗೆಯ ಪುಷ್ಪದಲ್ಲಿ
ಗಂಧದ ಗುಳಿಗೆಯಲ್ಲಿ ಹಿಂಗಾರದ ಎಸಳಿನಲ್ಲಿ ಹೋಮದ ಕುಂಡದಲ್ಲಿ ತಾಯಿಯವರೇ
ಒಕ್ಕೆತ್ತಿರಿ ವಂಶದಲ್ಲಿ ಪಾರ್ವತಿ ಜನನದಲ್ಲಿ
ನಿನ್ನೆಗೆ ಉದಯಿಸಿದ ಓ ಅರುವತ್ತಾರು ಕೋಟಿ ಓ ನಾಗಬ್ರಹ್ಮರು ಓ
ಬ್ರಹ್ಮರ ಬಲಭಾಗದಲ್ಲಿ ಓ ಮೂವತ್ತಮೂರು ಕೋಟಿ ಓ ದೇವರ ಎಡಭಾಗದಲ್ಲಿ
ನಿನ್ನೆಗೆ ಜನನ ಆದ ತಾಯಿಯವರು...ಜನನದ ಸ್ಥಳದಲ್ಲಿ ಸತ್ಯಮಹಾಲೋಕದ ಸಿರಿ...
ಸತ್ಯದಲ್ಲಿ ಉದ್ಭವ ಓ ಆದವರು ಹೌದಾದರೆ ಓ......
ಮಾಯದ ನನ್ನ ತಾಯಿಯವರೇ ಓ ಕೇಳಿ......
ಮಾಯದ ಬಸಿರಲ್ಲಿ ಓ ಯೋಗದ ಗರ್ಭದಲ್ಲಿ ಓ......
ನಿಮ್ಮ ಹೊಟ್ಟೆಯಿಂದಲೇ ಬೆಳೆದುಬಂದ ಮಗಳು......
ನಾನು ಸೊನ್ನೆ ಹೌದಾದರೆ ಓ ತಾಯಿಯವರೇ......
ಒಂದು ಕುಡ್ತೆ ಕಹಿ (ಔಷಧಿ) ಕುಡಿಯದಿದ್ದರೂ......
ಒಂದು ಗೆರಟೆ ಓ ಬಿಸಿನೀರು ಸ್ನಾನಮಾಡದೆ ಇದ್ದರೂ......
ಆಲಿಕ್ಕುಂಜ ಪಿಲಿಕ್ಕುಂಜ ಕಾಡಿನಲ್ಲಿ ಓ
ಹೆರಿಗೆ ಹೆತ್ತಿದ್ದರೂ......
ರನ್ನದ ತೋಡಿನಲ್ಲಿ ಓ ರಣರಂಗದ (ಭೀಕರ?) ನೆರೆಯಲ್ಲಿ ನಿನ್ನೆಗೇ ನನ್ನನ್ನು ಬಿಟ್ಟರೂ
ನಿಮ್ಮ ಸತ್ಯದಲ್ಲಿ ಓ ತಾಯಿಯವರೇ ನನ್ನ ತಂಗಿ ಗಿಂಡೆಯನ್ನು ಓ ಮಾಯಾಸ್ವರೂಪ
ಮಾಡಿಬಿಡುತ್ತೇನೆಮ್ಮಾ ಎಂದಳು......
ಗದ್ದೆಯ ಬದುವಿನಲ್ಲೇ ಓ ನಿಂತಳು ಸೊನ್ನೆ......ಓ......
ಮೂರು ಚಿಮಿಟಿಯಷ್ಟು ಓ ಮಣ್ಣು ತೆಗೆದಳು......

ಒಂದು ಚಿಟಿಕೆ ಮಣ್ಣು ಬಡಗಣ ಲಂಕೆಲೋಕನಾಡಿಗೆ
ಒಂದು ಚಿಟಿಕೆ ಮಣಣು ಸತ್ಯನಾಪುದರಮನೆಗೆ
ಒಂದು ಚಿಟಿಕೆ ಮಣ್ಣು ಓ ದೇವರು ಬೆರ್ಮರ ಪಾದಕ್ಕೆ
ಗಿಂಡೆ ಮಾಯ ಆಗಬೇಕಂದು ಹೇಳಿದಳಪ್ಪಾ ಸೊನ್ನೆಯಂತೆ......
ನಾರಾಯಣಾ ಓ ನಾರಾಯಣವಂತೆ
ಹೇಳಿದ ನಾಲಿಗೆ ಓ ಗಂಟಲಲ್ಲಾಗಬೇಕಾದರೇ ಓ
ಗಿಂಡೆ ಮಾಯ ಓ ಆದಳಪ್ಪಾ......
ನಾಲ್ಕು ಮನೆಯ ಹೆಣ್ಣುಗಳಾ ಓ ನಾಲ್ಕು ಕರಂಡಕ ಆಭರಣ ಇಲ್ಲದಾಯಿತು ಓ
ಗಿಂಡೆ ಇಲ್ಲಾ ಓ ಮಾಯವಾದಳು......
ಅಯ್ಯಯ್ಯೊ ದೋಷವೆ ಅಪ್ಪಾ ಓ ಎಲ ಎಲಾ ಕಾಲವೇ ಎಂದರು......
ರಾಮಕಾಲವೇ ಬ್ರಹ್ಮಹತ್ಯೆ (ಮಹಾ ವಂಚನೆ) ಮಾಡಿದಳಲ್ಲಾ ಸೊನ್ನೆ ನಮಗೆ......
ಯೋಗದ ಗಿಂಡೆ ಎಂದು ನಾವು ಭಾವಿಸಿದೆವಪ್ಪಾ......
ಮಾಯದ ಗಿಂಡೆ ಎಂದು ಭಾವಿಸಿರಲಿಲ್ಲಾ......ಎಂದು......
ತಲೆಗೆ ತಲೆ ಹೊಡೆದುಕೊಳ್ಳುತ್ತಾರೆ ಹೆಣ್ಣುಗಳು......ಓ......
ನಮ್ಮ ಆಭರಣ ಓ ಹೋಯಿತಲ್ಲಾ ಅಜ್ಜನವರೆ ಎಂದಳು......
ನಾರಾಯಣ ಹೆಣ್ಣುಗಳೇ ಓ ನಾನೇನು ಮಾಡಬೇಕು......ಓ......
ಹಾಕಿರುವ ಏತದಲ್ಲಿಗೆ ಓ ತೋಡಿಸಿರುವ ಬಾವಿಯ ಹತ್ತಿರ......
ಬೆಳ್ಳಿಯ ಗಿಂಡಿ ಓ ನೀರ ಹಿಡಿದುಕೊಂಡು......
ಚೆಂದೆಂಗಿನಮರದ ಬುಡಕ್ಕೆ ಓ ಎರೆಯಲು ಕೊಂಡುಹೋಗಿ......
ನಾಲ್ಕು ಮನೆಯ ಹೆಣ್ಣುಗಳು ಓ ನೀವು ಹೋಗಿದ್ದೀರೆಂದು ಓ ಅಜ್ಜನವರು ಹೇಳುತ್ತಾರಂತೆ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರ್......ಓ......
ಕಣ್ಣಲ್ಲಿ ಕಡುದುಃಖ ಓ ಹೊಟ್ಟೆಯಲ್ಲಿ ಸಂಕಟಪಡುತ್ತಾರಲ್ಲ......
ಸೊನ್ನೆಯನ್ನು ಬರಲು ಬಿಡದಿದ್ದದ್ದು ಓ ಅದು ನನ್ನ ತಪ್ಪೆಂದು ಓ......
ನನಗೆ ತಿಳಿಯದಾಯಿತೆಂದರು......
(ಗಿಂಡೆ ಮಾಯ ಆದಳು, ಇನ್ನು ಆಕೆಯ ಪ್ರಸ್ತಾವವಿಲ್ಲ)
ನಾರಾಯಣಾ ಓ ನಾರಾಯಣ ಓ ನಾರಾಯಣ ಬೋವಿಗಳೇ
ಗದ್ದೆಯ ಬದುವಿನಿಂದ ಹೊರಡಲಿ ನಮ್ಮ ಪಲ್ಲಕ್ಕೀ
ಎಂದಳಪ್ಪಾ ಓ ಸೊನ್ನೆಯಂತೆ......
ಗದ್ದೆಯ ಬದುವಿನಿಂದ ಸೊನ್ನೆಯ ದಂಡಿಗೆ ಓ ಏರಿತಪ್ಪಾ......ಓ......
ದಂಡಿಗೆಯ ಬೋವಿಗಳು ದಂಡಿಗೆ ಹಿಡಿದುಕೊಂಡು ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬೈಲು ಓ ಗದ್ದೆಯ ಬದು ಬಿಟ್ಟರು......ಓ......
ದಂಡಿಗೆ ಬಂದು ಬಂದು ಓ ಉರ್ಕಿದೊಟ್ಟುವಿನಾ ಓ ಬೈಲಲ್ಲಿ ಬರುವಾಗ ಓ

ಪಲ್ಲಕ್ಕಿಯ ಅಂದವನ್ನು......
ದಂಡಿಗೆ ಹೋಗುವಾಗ ಉರ್ಕಿದೊಟ್ಟುವಿನ ಅರಮನೆಯ ಕಲ್ಲ ಹೆಬ್ಬಾಗಿಲಲ್ಲಿ ಕುಳಿತವರು...
ಗುರುಮಾರ್ಲ ಜಾರು ಮರ್ಲಾ ಅಣ್ಣತಮ್ಮ ಕುಳಿತವರು......
ಸೊನ್ನೆಯ ದಂಡಿಗೆ ಹಿಂತಿರುಗಿ ಬರುವ ಅಂದ ಓ ನೋಡುಮಗಾ ತಮ್ಮ ಎಂದರಪ್ಪ ಅಣ್ಣನವರು......
ಓ ಅಣ್ಣನವರು ಓ ಕೆಲೆಂಜ ಪರಾರಿ ಜಾರು ಮಾರ್ಲರು......
ಇಣಿಕಿ ಓ ಇಣಿಕಿ ನೋಡುವಾಗ ಓ ಸೊನ್ನೆಯ ದಂಡಿಗೆ ಓ ಬರುವ ಅಂದ ಓ......
ಮುಗುಳ್ನಗು ನಗುತ್ತಾ ಓ ದಂಡಿಗೆಯಲ್ಲಿ ಕುಳಿತುಕೊಂಡು ಸೊನ್ನೆ ಬರುವ ಓ ಅಂದ ನೋಡಿದ್ದಾರೇ......
ಬಂದು ಬಂದು ಓ ಬರುತ್ತದೆ ದಂಡಿಗೆ ಓ......
ಹೂಹಾಕುವ ಪುದ್ದಾರ (ಹೊಸಕ್ಕಿಯ ಭತ್ತದ) ಗದ್ದೆಯ ಬದುವಿನ ಮೂಲಕ ಬರುತ್ತದೆ...
ಅದನ್ನು ಹಿಂದಕ್ಕೆ ಹಾಕಿ ಬಂದಳು ಸೊನ್ನೆ......
ಹುರುಳಿ ಬಿತ್ತುವ ತಿಮಾರುಗದ್ದೆಗೆ ಬಂದಳು......
ಹುರುಳಿ ಬಿತ್ತುವ ತಿಮಾರುಗದ್ದೆಯನ್ನು ಹಿಂದಕ್ಕೆ ಹಾಕಿ ಬಂದಳು ಸೊನ್ನೆ......
ಬಾಳೆ ಹಾಕುವ ಬಾಕಿತಿಮಾರಿಗೆ ಬಂದಳು......
ಬಾಳೆ ಹಾಕುವ ಬಾಕಿತಿಮಾರು ಹಿಂದಕ್ಕೆ ಹಾಕಿದಗಳು......ಓ......
ಹಾಕಿರುವ ಏತದಲ್ಲಿಗೆ ತೋಡಿಸಿರುವ ಬಾವಿ ಸಮೀಪಕ್ಕೆ
ಆರೂವರೆ ಅಂಗಣ ಮೂರುವರೆ ಅಂಗಳ
ಹಿರಿಯ ಅಂಗಳ ಓ ಕಲ್ಲ ಹೆಬ್ಬಾಗಿಲಿನ ಸಮೀಪಕ್ಕೆ ಬರುತ್ತದೇ......
ಕಲ್ಲ ಹೆಬ್ಬಾಗಿಲಿನಲ್ಲಿ ಓ ದಂಡಿಗೆಯನ್ನು ಓ
ದಂಡಿಗೆಯ ಬೋವಿಗಳು ಇಳಿಸಿದರಪ್ಪಾ ಓ......
ಬಡ್ಕನೆದ್ದು ದಿಡ್ಕನೆ ನಿಂತರು ಓ ಕೆಲೆಂಜ ಪರಾರಿ ಓ ಜಾರು ಮಾರ್ಲರು......
ಯಾರು ಮಗಾ ಓ ಸೊನ್ನೆ ಮದುಮಗಳೇ ಓ......
ಅರ್ತಿಯ ನಾದಿನಿ ಓ ಪ್ರೀತಿಯ ಸೊನ್ನೆ......ಓ......
ಮಾನದಲ್ಲಿ ಹೋದೆಯಾ ನೀನು ಮಾನದಲ್ಲಿಯೇ ಹಿಂತಿರುಗಿ ಬಂದೆಯ
ಉರ್ಕಿದೊಟ್ಟುವಿನ ಮರ್ಯಾದೆ ಓ ಉಳಿಸುತ್ತಾ ಬಂದೆಯಾ ಎಂದು
ಕೇಳುತ್ತಾರಪ್ಪಾ ಜಾರು ಮಾರ್ಲರು......
ನಾರಾಯಣ ಭಾವನವರೇ ನಾರಾಯಣ ಭಾವನವರೇ ಓ
ಗುರ್ಗಲಾಡಿಯ ಅರಮನೆಯಲ್ಲಿ ಓ......
ಅಡುಗೆ ತಯಾರಕರು ತರಕಾರಿ ಹೆಚ್ಚುವವರು ಮೆಟ್ಟುಕತ್ತೀ ಬಿಟ್ಟಿದ್ದರು......
ಅಕ್ಕಿ ಸೋಸುವವರು ಮರಿಗೆ ಬಿಟ್ಟಿದ್ದರು......
ಅಷ್ಟು ಹೊತ್ತಿಗೆ ಭಾವನವರೇ......ಓ......
ನನ್ನ ಅಜ್ಜನವರು ಗುರ್ಗಲಾಡೀಚಂದು ಪೆರ್ಗಡೆ ಬನ್ನಾರರು ಅವರು......

ಎದುರಿಗೆ ಚುರುಕಿನಿಂದ ಓ ಓಡೋಡುತ್ತಾ ನಮ್ಮ ಅಜ್ಜನವರು ಬಂದರು ಅವರು...
ಬರಬೇಡ ಮಗ ಸೊನ್ನೆ ಬರಬೇಡವೆಂದು ದಂಡಿಗೆಯ ಕೊಂಬಿಗೆ ಕೈಕೊಟ್ಟು ತಡೆದರು...
ಅಣ್ಣನವರು ಕೈಕೊಡುವಾಗ ದಂಡಿಗೆಯ ಬೋವಿಗಳಲ್ಲಿ ದಂಡಿಗೆ ನಿಲ್ಲಿಸಿದೆ......
ದಂಡಿಗೆಯಿಂದಿಳಿದು ನನ್ನ ತಂಗಿಯ ಅಂದ ನಾನು ನೋಡುತ್ತೇನೆಂದು ಹೇಳಿದೆ ಭಾವನವರೇ
ಮದುಮಗಳ ಸಿಂಗಾರ ಮಾಡಿಸಿದರು ಅಲ್ಲಿ......
ಹಾಕಿರುವ ಚಪ್ಪರದಲ್ಲಿ ರಾವಿನ್ನ ಗೆಜ್ಜೆಕತ್ತಿ ಓ ಕೊಟ್ಟರು ಅಲ್ಲಿ......
ಹಾಕಿರುವ ಏತ ತೋಡಿಸಿರುವ ಬಾವಿಯ ಸಮೀಪಕ್ಕೆ ಹೋಗಿ
ಬೆಳ್ಳಿಯ ಸಿರಿಗಿಂಡಿ ಹಿಡಿಸಿ ಎಲೆಅಡಿಕೆ ಹಾಕಿಸಿ ತೆಂಗಿನ ಬುಡಕ್ಕೆ ಓ
ನೀರು ಎರೆಸಲೆಂದು ಓ ಗಿಂಡೆಯನ್ನು ಕರೆದುಕೊಂಡು ಬಂದರು ಮದುಮಗಾ......
ನನ್ನ ಸತ್ಯ ಓ ಇಲ್ಲದಿದ್ದರು ಓ......
ನನ್ನ ತಾಯಿಯವರು ಬಡಗಣ ಲಂಕೆಲೋಕದಲ್ಲಿ ಓ ಮಾಯದ ತಾಯಿಯವರು ಓ
ಸತ್ಯದಲ್ಲಿ ಹುಟ್ಟಿ ಓ ಸತ್ಯದಲ್ಲಿ ಬೆಳೆದ ಓ ತಾಯಿಯವರ ಗರ್ಭದಿಂದ ಯೋಗದಲ್ಲಿ...... ಓ ನಾನು ಬಂದೆ
ಮಾಯದ ಮಗಳು ಓ ನನ್ನ ತಾಯಿಯವರು......ಓ
ಮಾಯದ ಹೊಟ್ಟೆಯಲ್ಲಿ ಓ ಯೋಗದ ಗರ್ಭದಲ್ಲಿ ಓ ಬೆಳೆದು ಬಂದವಳು ನಾನು ಎಂದೇ
ಸತ್ಯನಾಪುರದ ಓ ಅರಮನೆಯಲ್ಲಿ ಓ ಹುಟ್ಟಿ ಬೆಳೆದ ಓ ನನ್ನ ತಾಯಿಯವರ ಸತ್ಯದಲ್ಲಿ
ನನ್ನ ತಂಗೀ ಓ ಗಿಂಡೆ ಓ ಮಾಯ ಆಗಬೇಕು ಮಾಯಾಸ್ವರೂಪ ತಾಳಬೇಕೆಂದು
ಹೇಳಿದೆ ಭಾವನವರೇ ಎಂದು ಓ ಹೇಳಿದಳು ಸೊನ್ನೆ......
ಗಿಂಡೆಯನ್ನು ಮಾಯಮಾಡಿ ಓ ಬಂದೆ ಭಾವನವರೇ ಎಂದಳು......
ನಾರಾಯಣ ಮಗ ನಾರಾಯಣ ಓ......
ಕಪಟ ನಾಟಕದ ಮಗಳು ಮಗ ನೀನು
ಉರ್ಕಿದೊಟ್ಟುವಿನ ಮಾನಮರ್ಯಾದೆ ಉಳಿಸಿ ಬಂದೆ ಎಂದರು......
ಹರುಷದ ಮೆಯಿ ಮುತ್ತಿನ ನಗುವಲ್ಲಿ ಓ ಅಣ್ಣತಮ್ಮಂದಿರು ಓ ನಾದಿನಿಯನ್ನು
ಕರೆದುಕೊಂಡು ಓ ಉರ್ಕಿದೊಟ್ಟುವಿನ ಅರಮನೆಗೆ ಹೋದರು......
ನಾರಾಯಣಾ ಓ ನಾರಾಯಣಾ ಮಗಾ......ಓ......
ತಮ್ಮ ಕೇಳಿದ್ದೀಯೇ ಓ ಗುರು ಮಾರ್ಲಾ......ಓ......
ನನ್ನ ಅರಮನೆಗೆ ನಾನು ಹೋಗುತ್ತೇನೆಂದರು ಓ ಜಾರು ಮಾರ್ಲರು......
ಜಾರು ಮಾರ್ಲರು ಓ ಹೋದರಂತೆ ಓ ಕೆಲೆಂಜ ಪರಾರಿಗೆ ಹೋದರಂತೆ......
ಇಂದಾದರೋ ಇಂದು ಓ ಅಂದಿನ ದಿನ ಹೋಗಿದೆಯಂತೆ ಸೊನ್ನೆ ಮದುಮಗಳಿಗೆ...
ನಾರಾಯಣ ಗಂಡುಸೇ ಓ ನಾರಾಯಣ ಗಂಡುಸೇ......ಓ......
ಉರ್ಕಿದೊಟ್ಟುವಿನಾ ಓ ಕೆಳಕರೆಯ ಓ ಪಾಲವರ ಹೆಂಗುಸರು......ಓ......

ನನಗೆ ಏನು ಹೇಳುತ್ತಾರೆ ಮದುಮಗಾ ಎಂದಳು......
ನಾರಾಯಣ ಮಗಾ ನಾರಾಯಣ ಸೊನ್ನೆ......
ಓ ಸೊನ್ನೆ ಮದುಮಗಳೇ ಕೇಳಿದ್ದೀಯೆ ನೀನು......
ಗುರು ಮಾರ್ಲನಾ ಹೆಂಡತಿಯಂತೆ ಓ ಉರ್ಕಿದೊಟ್ಟುವಿನ ಸೊನ್ನೆಯಂತೆ......
ಋತುಮತಿಯಾಗಲಿಲ್ಲಾ ಮೆಯಿನೆರೆಯಲಿಲ್ಲಾ......ಓ......
ಗೋಣಿ ಗೊಡ್ಡು ಅವಳು ಬಂಜೆ ಬರಡಂತೆ......
ಹಾವುರಾಣಿ ಹರಿಯಲಿಲ್ಲ ಓ ಓತಿ ಓದಲಿಲ್ಲಾ ಓ......
ಕೆನ್ನೆಯಲ್ಲ ನರೆಕೂದಲು......ಓ ಬಂದಿದೆ ಅವಳಿಗೆ......
ಓ ಇನ್ನು ಯಾವಾಗ ಋತಿಮತಿಯಾಗುವುದು ಓ ಮೆಯ್ನೆರೆಯುವುದೆಂದು ಓ ಕೇಳುತ್ತಾರೆ ಎಂದರು......
ಏಳು ಹೇಳುತ್ತಾರೆಂದು ಏನು ಹೇಳಲಿ ನಾನು......
ಅವರ ಬಾಯಲ್ಲೇ ಅವರು ಹೇಳಿದರೆ......ಓ......
ನಮಗೇನು ಸೊನ್ನೆ ಎಂದರು ಮದುಮಗ......
ನಾರಾಯಣಾ ನಾರಾಯಣ ದೇವರೆ ಬೆರ್ಮರೆ ಓ ನಾರಾಯಣ......
ಅಂದಿನ ದಿನ ಹೋಗಿದೆ ಸೊನ್ನೆಗೆ......ಓ......
ಮರುದಿನ ಬಂದಿದೆ ಸೊನ್ನೆಗೆ......ಓ......
ಮುಂಜಾವದಲ್ಲೇ ಎದ್ದಳು ಸೊನ್ನೆ......ಓ......
ಒಂದುಬಾರಿ ಎರಡುಬಾರಿ ಮೂರುಬಾರಿ ನಾಲ್ಕುಬಾರಿಯ
ಉರ್ಕಿದೊಟ್ಟುವಿನೋ ಅರಮನೆಯಲ್ಲಿ ಓ ಕೆಲಸ ಇತ್ಯಾದಿ ಮಾಡಿದಳು......
ಹಟ್ಟಿಗೆ ಓ ಹೋದಳು ಸೊನ್ನೆ
ಹತ್ತು ಹದಿನಾರು ಓ ಸಣ್ಣಕರುಗಳನ್ನು
ಕಂಚಿನ್ನ ಉಣುಗೋಲು ಓ ಜಾರಿಸಿದಳು......
ಕರುಗಳನ್ನು ಬಿಟ್ಟು ಗುಡ್ಡೆಗೆ ಅಟ್ಟುವೆನೆಂದು ಓ ಹೋದಳು ಸೊನ್ನೆ......ಓ......
ಅಜಿಲೊಟ್ಟು ಮುಜಿಲೊಟ್ಟು ಗುಡ್ಡೆ ಕಾಡಿಗೆ ಓ ಹೋದಳು ಸೊನ್ನೆ......ಓ......
ಹೋಗಿಯೇ ಓ ಹೋದಳು ಸೊನ್ನೆ......
ಕಲ್ಲು ಇದೆ ದೊಡ್ಡ ಪರ್ವತ ಪ್ರಪಾತ ಇದೆ ಅಲ್ಲಿ......
ಹಿಂತಿರುಗಿ ಬರುವಾಗ ಓ ಕೇಪಳ (ಕಿಸ್ಗಾರ) ಹೂ ಹೆಕ್ಕಿದಳು ಸೊನ್ನೆ......
ಪೂರ್ವಕ್ಕೆ ಮುಖ ಹಾಕಿದಳು......
ನಾರಾಯಣಾ ಓ ನಾರಾಯಣ ದೇವರೇ ಓ......
ನಾರಾಯಣ ಓ ದೇವರೇ ಎಂದಳು......
ಇದೊಂದು ಓ ಪಡೆ ಕಲ್ಲು ಎಂದಳು......
ಇದೊಂದು ದೇವರ ಜಾಗ ಆಗಿದ್ದೀತು
ಇರಬಹುದು ಎಂದು ಮನಸ್ಸಲ್ಲೇ ನೆನೆದಳು......

ನಾರಾಯಣಾ ನಾರಾಯಣಾ
ನಾರಾಯಣಾ ಓ ನಾರಾಯಣ ಎಂದಳು......
ಹತ್ತು ಬೆರಳು ಜೋಡಿಸಿ ವಂದಿಸಿದಳು......ಓ......
ಪಡೆಕಲ್ಲಿಗೆ ಮುಖ ಹಾಕಿದಳು ಓ ಸೊನ್ನೆ ಅವಳು......
ಹೂ ಇಟ್ಟು ಓ ಶರಣು ಹಾಕುವಾಗ......ಓ......
ನಾರಾಯಣ ದೇವರೇ ಎಂದು ಮೂರ ಬಾರಿ ಹೇಳಿದಳು......
ಸೊನ್ನೆ ಮದುಮಗಳು ಓ ಹೇಳುತ್ತಾಳಪ್ಪ......
ಋತುಮತಿಯಾದರೆ ಮೆಯ್ನೆರೆದರೆ......ಓ......
ತಿಂಗಳ ಮುಟ್ಟಾಗಿ ಕುಳಿತು ವರ್ಷದೊಳಗೆ ಹೆತ್ತರೆ ನಾನು......
ಓಲೆ ಕರಗಿಸಿ ಅಂಕಣ ಹಾಕಿಸಿಯೇನು
ಮೂಗುತಿ ಕರಗಿಸಿ ಓ ಮುಗುಳಿ ಇಡಿಸಿಯೇನು......
ಹೇಳಿದಳು ಹರಕೆ ಓ ಮುಗಿದಳು ಕೈ ಸೊನ್ನೆ ಓ......
ಉರ್ಕಿದೊಟ್ಟುವಿನ ಓ ಸೊನ್ನೆ ಮದುಮಗಳು......
ಅಲ್ಲಿಂದ ಹಿಂದೆ ತಿರುಗಿದಳು ಸೊನ್ನೆ......ಓ......
ಹಿಂದೆ ತಿರುಗಿ ಉರ್ಕಿದೊಟ್ಟುವಿನ ಅರಮನೆಗೆ ಬರುತ್ತಾಳೆ......
ಒಂದು ಬಾರಿಯ ಓ ಎರಡು ಬಾರಿಯ ಓ ಕೆಲಸ ಇತ್ಯಾದಿ ಮಾಡಿದಳು ಸೊನ್ನೆ......
ಅಂದಿನ ದಿನಮಾನ ಓ ಹೋಗಿದೆ ಓ......
ಮರುದಿನ ಓ ಬಂದಿದೆ ಸೊನ್ನೆಗೆ......
ಮುಂಜಾವದಲ್ಲಿ ಓ ಎದ್ದಳಪ್ಪಾ ಓ ಸೊನ್ನೆ ಮದುಮಗಳು......
ಮುಚ್ಚಿರುವ ಬಾಗಿಲು ತೆರೆದಳು ಸೊನ್ನೆ......
ಹೊರಹೊರಟು ಬಂದಳು ಸೊನ್ನೆ
ಕೆದರಿದ ಕೂದಲನ್ನು ಬಲಕ್ಕೆ ಬಲಮುಡಿ ಎಂದು ಏರಿಸಿದಳು......
ಬಿಚ್ಚಿದ ಸೀರೆಯನ್ನು ನೆರಿಗೆ ಹಿಡಿದು ಉಟ್ಟಳು......
ಬಂಗಾರದ ಸೊಪ್ಪಿರುವ ಹಿಡಿಸೂಡಿ ಹಿಡಿದಳು......
ಏಳು ಅಂತರಗಳ ಯಮದೇವಿ ಗುಡಿ(ಕತ್ತಲ ಕೋಣೆ)ಯನ್ನು ಬೀಸಿ (ಗುಡಿಸಿ)ದಳು...
ಹೊರಗಣ ಸೂತ್ರಕ್ಕೇ ಬಂದಳು ಸೊನ್ನೆ......
ಆರೂವರೆ ಅಂಗಣ ಓ ಮೂರೂವರೆ ಅಂಗಳ ಓ ಗುಡಿಸಿದಳು ಸೊನ್ನೆ......
ಹಿಡಿಸೂಡಿ ಕೊಂಡುಹೋಗಿ ಕೊಟ್ಟೆಗೆಯಲ್ಲಿರಿಸಿದಳು......
ಏಳು ಅಂತರಗಳ ಯಮದೇವಿ ಗುಡಿ ಹೊಕ್ಕಳು ಸೊನ್ನೆ......
ಒಲೆಯ ಕರಿಬೂದಿ ತೆಗೆದಳು ಸೊನ್ನೆ......
ಅಡಿಯಿಂದ ಕೊಳ್ಳಿ ಉರಿಸಿದಳು ಸೊನ್ನೆ......
ಮೇಲಿಂದ ಮಡಕೆ ಇರಿಸಿದಳು ಸೊನ್ನೆ
ಬಿಳಿಯ ಬೆಳ್ತಿಗೆ(ಅಕ್ಕಿ) ಬೇಯಲು ಹಾಕಿದಳು......

ಹೊರ ಹೊರಟು ಬಂದಳು ಸೊನ್ನೆ......
ಹೊರಹೊರಟು ಬರುವಾಗ ಸೊನ್ನೆ......
ಪಶುಆಹಾರದ ಮಡಕೆಯನ್ನು ಹಿಡಿದಳು ಸೊನ್ನೆ......
ಹಟ್ಟಿಯ ಕಡೆಗೆ ಹೋದಳು ಸೊನ್ನೆ......
ದನಗಳಿಗೆ ಪಶುಆಹಾರ ಕೊಟ್ಟಳು ಸೊನ್ನೆ......
ಎಮ್ಮೆಗಳಿಗೆ ಪಶುಆಹಾರ ಇಟ್ಟಳು ಸೊನ್ನೆ......
ಕಂಚಿನ ಹಂಡೆ ಹಿಡಿದಳು ಸೊನ್ನೆ......
ಬೆಳ್ಳಿಯ ಗಿಂಡಿ ಹಿಡಿದಳು ಸೊನ್ನೆ......
ಕಂಚಿನ ಉಣುಗೋಲು ಜಾರಿಸಿದಳು ಸೊನ್ನೆ
ಮುದ್ದು ಕರುಗಳನ್ನು ಬಿಟ್ಟಳು......ಸೊನ್ನೆ......
ಗೂಟಕ್ಕೆ ಎಳೆದು ಕಟ್ಟಿದಳು......
ಕಾಶಿಗೆ ಹೋದ ಕಪಿಲೆ ದನವನ್ನು
ಮುದ್ದು ಕುಮಾರನನ್ನು (ಎಳೆಗರುವನ್ನು) ಬಿಟ್ಟಳು ಸೊನ್ನೆ......
ಒಂದು ಬಾರಿ ಎಳೆದು ಕಟ್ಟಿದಳು......
ಹಂಡೆ ತುಂಬ ಹಾಲು ಕರೆದಳು ಸೊನ್ನೆ......
ಹಂಡೆ ತುಂಬ ಹಾಲು ಕರೆದು ಸೊನ್ನೆ ಓ
ಗಿಂಡಿ ತುಂಬ ಹಾಲು ಕೇಳಿದಳಂತೆ......
ಗಿಂಡಿಯನ್ನು ಕೊಂಡುಹೋಗಿ ಕಿಟಕಿಯಲ್ಲಿರಿಸಿದಳು......
ಹಂಡೆಯ ಹಾಲನ್ನು ಕೊಂಡುಹೋಗಲು ಬರುವಾಗ......ಓ......
ಸೊನ್ನೆ ಋತುಮತಿಯಾದಳು ಮೆಯ್ನೆರೆದಳು......
ಉರ್ಕಿದೊಟ್ಟುವಿನಾ ಅರಮನೆಯಲ್ಲಿ ಓ......
ನಾರಾಯಣಾ ಓ ನಾರಾಯಣಾ ಓ......
ಗುರು ಮಾರ್ಲೆರು ಓ ಬೈಲುಗದ್ದೆಯ ಮೂಲಕ ಹೋದವರು ಓ ಬೆಟ್ಟುಗದ್ದೆಯ ಮೂಲಕ ಬೆಟ್ಟುವಿಗೆ ಬಂದು ಓ ಅರಮನೆಯಲ್ಲಾದರು......
ಅರಮನೆಗೆ ಬಂದು ಓ ಚಿಕ್ಕಚಾವಡಿ ಓ ಸಿದ್ರಮಂಟಪದಲ್ಲಿ ಓ ಗುರು ಮಾರ್ಲೆರು ಕುಳಿತುಕೊಳ್ಳುವಾಗ......
ನಿನ್ನೆಯವರೆಗೆ ಸೊನ್ನೆ ಮದುಮಗಳು......
ಪಿಂಗಾಣಿಯಲ್ಲಿ ಹಾಲು, ಗಿಂಡಿಯಲ್ಲಿ ನೀರು ಓ ತರುತ್ತಿದ್ದ ಮದುಮಗಳು......
ಇಂದು ಎಲ್ಲಿಗೆ ಹೋದಳೆಂದರು......ಓ......ಗುರು ಮಾರ್ಲೆರು......
ಅಷ್ಟು ಹೊತ್ತಿಗೆ ಓ ಹುಡುಕುತ್ತಾ ಹುಡುಕುತ್ತಾ ಓ
ಸೊನ್ನೆ ಮದುಮಗಳು ಎಲ್ಲಿಗೆ ಹೋದಳೆಂದು......ಓ......
ಹೇಳಿದರಂತೆ ಓ ಗುರು ಮಾರ್ಲೆರು......
ಹಂಡೆ ನೋಡುತ್ತೇನೆಂದು ಹೋಗಲು......

ಓ ಹಂಡೆ ಇಲ್ಲವಂತೆ......
ಅಷ್ಟು ಹೇಳುವುದನ್ನು ಕೇಳಿದರು ಗುರು ಮಾರ್ಲರು......
ಹಟ್ಟಿಯ ಕಡೆಗೆ ಬಂದರು ಗುರು ಮಾರ್ಲರು......
ಹಟ್ಟಿಗೆ ಬಂದು ನೋಡುವಾಗ ಓ......
ಸೊನ್ನೆ ಮದುಮಗಳು ಓ ಕೇಳಬೇಕಂತೆ......
ಕಣ್ಣೀರು ಹಾಕುತ್ತಾ ಓ
ಕಾಲು ಕೆರೆಯುತ್ತಾ ಓ ಉಗುರು ಚಿವುಟುತ್ತಾ ಓ ಇದ್ದಾಳೆ ಸೊನ್ನೆ......
ಅಷಚ್ಟು ಹೇಳುವುದನ್ನು ಓ ಕೇಳಿದರು ಗುರು ಮಾರ್ಲರು......
ಕೆಲೆಂಜ ಪರಾರಿಗೆ ಓ ಹೋದರಂತೆ
ನಾರಾಯಣ ಅಣ್ಣಾ ಓ ನಾರಾಯಣ ಅಣ್ಣಾ......
ನನ್ನ ಮದುಮಗಳು ಓ ನಿನ್ನ ನಾದಿನಿ ಓ ಋತುಮತಿಯಾದಳು ಓ ಮೆಯ್ನೆರೆದಳು......
ಏನು ಮಾಡುವುದು ಓ ಅಣ್ಣನವರೇ ಎಂದು ಓ ತಮ್ಮ ಗುರು ಮಾರ್ಲರು ಓ ಕೇಳುತ್ತಾರಂತೆ......
ನಾರಾಯಣ ಓ ನಾರಾಯಣ ಗುರುಮಾರ್ಲಾ ಓ......
ಸಮೀಪದ ನಾಲ್ಕು ಜನ ಹೆಣ್ಣುಗಳನ್ನು ಕರೆಯಿರೀ ಓ......
ಪಕ್ಕದ ನಾಲ್ಕು ಜನ ಹೆಣ್ಣುಗಳನ್ನು ಕರೆಯಿರಿ ಎಂದರು......
ನಾನು ಹೋಗುತ್ತೇನೆ ನಾನು ಹೋಗುತ್ತೇನೆ ಗುರು ಮಾರ್ಲಾ ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರು ಓ ನಮ್ಮ ಅಜ್ಜನವರಿಗೆ ಓ ತಿಳಿಸಿ ಬರುತ್ತೇನೆಂದು ಓ ಹೇಳುತ್ತಾರೆ ಅಲ್ಲಿ......
ನಾರಾಯಣಾ ಓ ನಾರಾಯಣಾ
ಅಷ್ಟು ಹೇಳುವುದನ್ನು ಕೇಳಿದರು ಜಾರು ಮಾರ್ಲರು......ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರಾ
ಅರಮನೆಗೆ ಹೋಗುವಾಗ ಓ ಕುಳಿತುಕೊಂಡು ಇದ್ದಾರಪ್ಪಾ......
ಏನು ಬಂದಿ ಓ ಜಾರು ಮಾರ್ಲಾ......ಓ ಏನೆಂದು ಅಜ್ಜನವರು ಕೇಳುವಾಗ
ನಾರಾಯಣ ಓ ನಾರಾಯಣ ಅಜ್ಜನವರೇ......
ನಿಮ್ಮ ಮೊಮ್ಮಗಳು ಓ ನನ್ನ ನಾದಿನೀ ಓ ಋತುಮತಿಯಾಗಿದ್ದಾಳೆ ಓ ಮೆಯ್ನೆರೆದಿದ್ದಾಳೆ
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು......
ಹರುಷದ ಮೆಯಿ ಓ ಮುತ್ತಿನ ನಗು ಓ ಬಂತು ಅಜ್ಜನವರಿಗೆ......
ಅಜ್ಜನವರು ಹಾಗೂ ಜಾರು ಮಾರ್ಲರು ಓ
ಗುರ್ಗಲಾಡಿಯ ಅರಮನೆಯ ಇಳಿದುಕೊಂಡು......ಓ......
ಉರ್ಕಿದೊಟ್ಟುವಿನ ಓ ಅರಮನೆಗೆ ಬರುತ್ತಾರಂತೆ......
ಅಷ್ಟು ಹೇಳುವುದನ್ನು ಓ ಕೇಳಿದರಂತೆ ಓ......
ಗುರುಮಾರ್ಲರು ಓ ಕೇಳಿದರಂತೆ......

ನಾರಾಯಣ ಓ ನಾರಾಯಣಾ ಓ......
ಕೆಳಬದಿಗೆ ಹೋದರು ಗುರು ಮಾರ್ಲ್
ಮೇಲ್ಬದಿಯ ಮೂಲಕ ಓ ಬಂದರಂತೆ......
ನಾರಾಯಣ ಹೆಣ್ಣುಗಳೇ ಓ ನಾರಾಯಣ ಹೆಣ್ಣುಗಳೇ ಓ......
ಸೊನ್ನೆ ಋತುಮತಿಯಾದಳು ಓ ಮೆಯ್ನೆರೆದಳು......
ನೀರು ಹೊಯ್ಯಲು ಓ ಬರಬೇಕೆಂದರು......
ಅಷ್ಟು ಹೊತ್ತಿಗೆ ಓ ಗುರು ಮಾರ್ಲರು......
ಉರ್ಕಿದೊಟ್ಟುವಿನ ಓ ಅರಮನೆಗೆ ಬರುವಾಗ
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು ಓ......
ಮಡಿವಾಳಗಿತ್ತಿ ಚೆಲುವೆಯನ್ನು ಓ ಕರೆದರಂತೆ ಓ......
ಕರೆದುಕೊಂಡು ಓ ಬರುತ್ತೇನೆಂದು ಹೇಳುವಾಗ......
ಮಡಿವಾಳಗಿತ್ತಿ ಚೆಲುವೆ ಓ ಬರುತ್ತಾಳಂತೆ......
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ......
ನಾಲ್ಕು ಮನೆಯ ಹೆಣ್ಣುಗಳು ಓ ಹೀಗೆ ಹೇಳುತ್ತಾರಲ್ಲಾ......
ಸೊನ್ನೆ ಋತುಮತಿಯಾದಳು ಮೆಯ್ನೆರೆದಳೆಂದು
ಹೇಳುವಾಗ ಹೇಳುತ್ತಾರೆ......
ಸೊನ್ನೆಯೂ ಋತುಮತಿಯಾಗಲು ಇದೆಯಾ?
ಒಬ್ಬರಿಗೊಬ್ಬರು ಹೆಣ್ಣುಗಳು ಹೇಳುತ್ತಾರೆ......
ಸೊನ್ನೆ ಸುಳ್ಳು ಹೇಳಿರಬೇಕು......ಓ......
ಬಂಜೆ ಬರಡು ಗೋಣಿ ಗೊಡ್ಡು ಅವಳು......
ಹಾವುರಾಣಿ ಓಡಲಿಲ್ಲ ಓತಿ ಹರಿದಾಡಲಿಲ್ಲ ಅವಳಿಗೆ......
ಅವಳು ಹೇಗೆ ಋತುಮತಿಯಾಗುವುದು ಓ
ಕಾಡಿನಿಂದ ದೊಡ್ಡ ಉಣ್ಣಿಯನ್ನು ತಂದು ಓ
ಅದನ್ನು ಇನ್ನೇನಾದರೂ ತಾಗಿ(ಕಚ್ಚಿ)ಸಿದ್ದಾಳೋ ಏನೋ ಎಂದು
ಹೇಳುತ್ತಾರಪ್ಪಾ ನಾಲ್ಕು ಮನೆಯ ಹೆಣ್ಣುಗಳು......ಓ......
ನಾರಾಯಣ ಓ ನಾರಾಯಣಾ......
ಒಬ್ಬರಿಗೊಬ್ಬರು ತಮಾಷೆ ಮಾಡುತ್ತಾ ನಗುತ್ತಾ
ಗೇಲಿ ಮಾಡುತ್ತಾ ಇದ್ದಾರಪ್ಪಾ ನಾಲ್ಕು ಮನೆಯ ಹೆಣ್ಣುಗಳು......
ಅದೊಂದು ಮಾತು ಮಡಿವಾಳಗಿತ್ತಿ ಚೆಲುವೆಗೆ ತಿಳಿದು
ನಾರಾಯಣ ಓ ನಾರಾಯಣ ಅಕ್ಕನವರೆ......
ಯಾಕೆ ಅಂತಹ ಮಾತು ಹೇಳುತ್ತೀರೀ......
ಹೇಳುತ್ತೀರೆಂದು ಓ ಮಡಿವಾಳಗಿತ್ತಿ ಚೆಲುವೇ ಹೆಣ್ಣುಗಳಿಗೆ ಉತ್ತರ ಕೊಡುತ್ತಾಳೆ ಅವಳು...
ಏನು ಹೇಳುವುದನ್ನು ಓ ಕೇಳಿದೆ ಚೆಲುವೆ ನೀನು ಓ......

ಅವಳ ತಂಗೀ ಓ ಗಿಂಡೆ ಮದುಮಗಳಾಗಿ
ಎಷ್ಟೋ ವರ್ಷ ಓ ಎಷ್ಟೋ ಕಾಲವಾಯಿತು......
ನಿನ್ನೆ ಹುಟ್ಟಿದ ಸೊನ್ನೆಯೆಂದು ತಿಳಿದೆಯ ನೀನು......
ಊರಿನವರು ಮಾತನಾಡಿಕೊಳ್ಳುತ್ತಾರೆ ಓ ಉಣ್ಣಿ ತಂದಳವಳು......
ಎಂದು ಓ ಹೇಳುತ್ತಾರೆ ಅವರು ನಾಲ್ಕು ಮನೆಯ ಹೆಣ್ಣುಗಳು......
ನಾರಾಯಣ ಹೆಂಗುಸರೇ ಓ ನಾರಾಯಣ ಹೆಂಗುಸರೇ ಓ......
ಬನ್ನಿ ಹೋಗೋಣ ಓ ನೀರು ಹೊಯ್ಯುವ ಎಂದಳು ಚೆಲುವೆ......
ಮಡಿವಾಳಗಿತ್ತಿ ಚೆಲುವೇ ಓ ಬಂದಳಪ್ಪಾ......ಓ ಉರ್ಕಿದೊಟ್ಟಿನ ಅರಮನೆಗೆ......
ಕಳಸೆ ಭತ್ತದ ಕುರುಂಟು ಹಾಕಿದಳು......ಓ......
ಜೊತೆಗಂಟು ಹಾಕಿದ ತೆಂಗಿನಕಾಯಿ ಓ ನಾಲ್ಕು ಕಾಯಿಗಳ ಜೊತೆಗಂಟು ಹಾಕಿದಳು...
ಒಂದು ಬಳ್ಳ ಭತ್ತ ತೆಗೆದಳು ಓ ಮಡಿವಾಳಗಿತ್ತಿ ಚೆಲುವೆ......
ದಡ್‌ಬಡ್ ಕುಟ್ಟಿದಳು ಧೂಳೀಪಟ ಮಾಡಿದಳಂತೆ
ಧೂಳೀಪಟ ಮಾಡಿದಳು ಚೆಲುವೆ......
ಅಂಗಳದಲ್ಲಿ ಮಂಡಲ ಹಾಕಿದಳು......
ಅಂಗಳದಲ್ಲಿ ಮಂಡಲ ಬಿಡಿಸಿದಳು ಚೆಲುವೆ......
ಓ ನಾಲ್ಕು ಮುಡಿ ಅಕ್ಕಿ ಓ ನಾಲ್ಕು ಮೂಲೆಯಲ್ಲಿ ಓ ನಾಲ್ಕು ಸಿಂಬೆ ಓ ಕಟ್ಟಿದಳು ಚೆಲುವೆ......
ಒಬ್ಬರಿಗೊಬ್ಬರು ಓ ಮುಖಮುಖ ಓ ನೋಡುತ್ತಾ......
ಮುಖಮುಖ ನೋಡುತ್ತಾ ಓ ಒಬ್ಬೊಬ್ಬರಂತೆ ಬರುತ್ತಾರೆ ಹೆಣ್ಣುಗಳು......
ಓ ನಾಲ್ಕು ಮನೆಯ ಓ ನಾಲ್ಕು ಹೆಣ್ಣುಗಳು......
ಬಂಗಾರದ ಓ ಚಮದ ಹಿಡಿದರು ಬೆಳ್ಳಿಯ ಎಣ್ಣೆಯ ಪಾತ್ರೆ ಹಿಡಿದರು......ಓ......
ಚಮಚ ಹಾಕಿದರು ಓ ಸೊನ್ನೆಗೊಂದು ಚಮಚ ನೆತ್ತಿಗೆ ನೆಯ್ಯೆಣ್ಣೆ ಓ ಹಾಕಿದರಂತೆ...
ಸೊನ್ನೆಯ ಕೈ ಹಿಡಿದು ಬಂದರು ಓ......
ಅಂಗಳಕ್ಕೆ ಬಂದರು ಓ ಜೊತೆಗಂಟು ಹಾಕಿದ ಕಾಯಿಗಳ ಮೇಲೆ ಓ ಭತ್ತದ ಚಿಕ್ಕ ಗಂಟಿನ ಮೇಲೆ ಓ ಸೊನ್ನೆಯನ್ನು ಕುಳ್ಳಿರಿಸಿದರು......
ನಾಲ್ಕು ಮನೆಯ ನಾಲ್ಕು ಹೆಣ್ಣುಗಳು ಓ ನಾಲ್ಕು ತಂಬಿಗೆ ನೀರು ಸೊನ್ನೆಯ ಮೇಲೆ ಎರೆದರು......
ಬಳ್ಳದಲ್ಲಿ ಬಾಗೆ ಓ ಗೆರಟೆಯಲ್ಲಿ ಸೀಗೆ ಓ ಎದುರಲ್ಲಿ ಸಂಗಾತಿ ಓ ಹಿಂದಿನಿಂದ ಸಂಗೀತ ಓ ಕರೆದುಕೊಂಡರು ಹೆಣ್ಣುಗಳು......
ಮಡಿವಾಳರ ಮಾಪುಕರಿಯಕ್ಕೆ ಓ ಕರೆದುಕೊಂಡು ಹೋದರು......
ಮಿಂದು ಶುದ್ಧಮುದ್ರಿಕೆ ಮಾಡಿದರು......
ಸೊನ್ನೆಯನ್ನು ಕರೆದುಕೊಂಡು ಬಂದರು......ಅಲ್ಲಿ ಓ......
ತೆಂಗಿನ ಹಸಿಗರಿಗಳ ಕೋಣೆ ನಿರ್ಮಿಸಿದರು ಓ ಕೋಣೆಯೊಳಗೆ ಕುಳತುಕೊಳ್ಳಿಸಿದರು...

ನಾಲ್ಕು ಮನೆಯ ಹೆಣ್ಣುಗಳು ಓ ಊಟೋಪಚಾರ ಮುಗಿಸಿದರು......
ಊಟೋಪಚಾರ ಮಾಡಿದರು ಹೆಣ್ಣುಗಳು......
ಒಬ್ಬರಿಗೊಬ್ಬರು ಮುಖಮುಖಿ ನೋಡುತ್ತಾ ಗೇಲಿ ಮಾಡುತ್ತಾ ಹೋದರು ಹೆಂಗುಸರು......
ನಾರಾಯಣ ಓ ನಾರಾಯಣಾ......
ಉರ್ಕಿದೊಟ್ಟಿನಾ ಅರಮನೆಯಲ್ಲಿ ಓ ಸೊನ್ನೆ ಋತುಮತಿಯಾದಳಂತೆ......
ಓ ಮೆಯ್ನೆರೆದಳಂತೆ ಎಂದು ಓ......
ಒಬ್ಬರಿಗೊಬ್ಬರು ಮುಖಮುಖ ನೋಡಿ ಗೇಲಿಮಾಡುತ್ತಾ ಹೋದರು ಹೆಣ್ಣುಗಳು...ಓ...
ಒಬ್ಬರಿಗೊಬ್ಬರು ನಗುತ್ತಾ ಹೋಗುವುದನ್ನು ದೂರದಿಂದ ನೋಡಿದರು ಓ ಜಾರು ಮಾರ್ಲರು......
ನಾರಾಯಣ ಓ ನಾರಾಯಣ ದೇವರೇ......
ನಾವು ಏನೂ ಉತ್ತರ ಕೊಡುವುದಿಲ್ಲ......ಓ......
ಅವಳ ತಾಯಿ ಓ ಮಾಯದ ಸಿರಿ ಓ ನೋಡಿದರೆ ಸಾಕೆಂದು
ಮನಸ್ಸು ತುಂಬ ಓ
ಹೊಟ್ಟೆ ತುಂಬ ಓ ಹೊಟ್ಟೆಯೊಳಗೆ ಇಟ್ಟುಕೊಂಡರು ಓ ಜಾರು ಮಾರ್ಲರು......
ಆ ದಿನ ಹೋಗಿ ಓ ಮರುದಿನ ಬಂದಾಗ......
ಗುರ್ಗಲಾಡಿಯ ಅರಮನೆಯಿಂದ ಓ ಏಳೇಳು ಹೊರೆ ಓ ಅವಲಕ್ಕಿಯಂತೆ
ಡಬ್ಬ ಡಬ್ಬ ಓ ತುಪ್ಪ ಕಳುಹಿಸಿದ್ದಾರೆ ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರ್ ಅವರು......
ಅಂದಿನ ದಿನ ಹೋಗಿದೆಯಂತೆ ಓ......
ಮರುದಿನ ಓ ಬಂದಿದೆಯಂತಪ್ಪಾ......
ಕೆಲೆಂಜ ಪರಾರಿ ಓ ಜಾರು ಮಾರ್ಲರು ನನ್ನ ನಾದಿನಿ ಋತುಮತಿಯಾಗಿದ್ದಾಳೆ ಮೆಯ್ನೆರೆರಿದ್ದಾಳಪ್ಪಾ......
ಸ್ವಲ್ಪಸ್ವಲ್ಪ ಎಂದು ಏಳೇಳು ಹೊರೆ ಓ ಅವಲಕ್ಕಿಯಂತೆ......
ಸ್ವಲ್ಪ ಸ್ವಲ್ಪವೆಂದು ಏಳೇಳು ಹೊರೆ ಡಬ್ಬದ ತುಪ್ಪ ಕಳುಹಿಸಿದರಂತೆ......
ಸ್ವಲ್ಪ ಸ್ವಲ್ಪವೆಂದು ಏಳೇಳು ಹೊರೆ ಓ ಮೆಂತೆ ಕಳುಹಿಸಿದ್ದಾರೆ......
ಅರ್ತಿಯ ಓ ನನ್ನ ತಮ್ಮ ಓ ಪ್ರೀತಿಯ ತಮ್ಮನ ಹೆಂಡತಿ ಓ ನನ್ನ ನಾದಿನೀ
ಓ ಉರ್ಕಿದೊಟ್ಟುವಿನ ಸೊನ್ನೆ ಋತುಮತಿಯೆಂದು......ಓ......
ಹಾಗೆ ಓ ದಿನಮಾನ ಕಳೆದು ಹೋಗಿದೆ ಓ......
ಹತ್ತು ಹನ್ನೆರಡು ಓ ದಿನ ಆಗುವಾಗ......
ನಮ್ಮ ಓ ನಾದಿನಿಯನ್ನೂ ಓ ಋತುಮತಿಯಾದ ಹೆಣ್ಣಿಗೆ ಓ ಋತುಮತಿಯಾದ ಸಂಭ್ರಮಾಚರಣೆ ಮಾಡಬೇಕಪ್ಪಾ ಓ......
ಭಾರಿ ಒಂದು ಗಡದ್ದಾಗಿ ಮಾಡಬೇಕು ಓ ಭಾರಿ ನೀತಿಯಲ್ಲಿ ಓ ಸರ್ವಬಿರುದಾವಳಿ

ಯಲ್ಲಿ......
ಆಗಬೇಕೆಂದು ಹೇಳುತ್ತಾರಂತೆ ಓ ಕೆಲೆಂಜ ಪರಾರಿ ಓ ಜಾರು ಮಾರ್ಲರು......
ತಮ್ಮನ ಹೆಂಡತಿ ನಾದಿನಿಯು ಅವಳೇ ಓ ಬೆನ್ನಹಿಂದೆ ಹುಟ್ಟಿದ ತಂಗಿಯೂ ಅವಳೇ ಎಂದರಪ್ಪಾ ಕೆಲೆಂಜ ಪರಾರೀ ಜಾರು ಮಾರ್ಲರಂತೆ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಬಹಳ ಒಂದ ಗೌಜಿಯಲ್ಲಿ ಬಹಳ ಗಂಭೀರವಾಗಿ...
ಮನೆಮನೆಗೆ ಹೊಕ್ಕು ಹೇಳಿಕೆ ಕೊಟ್ಟಿದ್ದಾರೆ ಓಲೆ ಕಳುಹಿಸಿದ್ದಾರೆ......
ಭಾರೀ ಗಡ್ಡದ್ದು ಓ ಗುಮ್ಮತ್ತಿನಲ್ಲಿ ಮದುಮಗಳ ಮದುವೆ ಓ ನೀರಪ್ರಸ್ತಾಪ (ಮೀಯಿಸುವ ಹಬ್ಬ) ಮಾಡಬೇಕೆಂದರು......
ನಾಲ್ಕು ಮನೆಯ ಹೆಣ್ಣುಗಳನ್ನೂ ಋತುಮತಿಯಾದಂದು ಓ ನೀರು ಹೊಯ್ದ ಹೆಣ್ಣುಗಳನ್ನು ಬರಮಾಡಿದರು
ಬರಮಾಡಿ ಓ ಮದುಮಗಳ ಶೃಂಗಾರ ಓ ಮಾಡಿ ಎಂದರು......
ಮದುಮಗಳ ಶೃಂಗಾರ ಮಾಡಲು ಓ ನಾಲ್ಕು ಕರಂಡಕ ಬಂಗಾರ ತೆಗೆದುಕೊಂಡು ಬನ್ನಿ ಎಂದು ಓ ಹೇಳುತ್ತಾರಪ್ಪಾ ಓ ಜಾರು ಮಾರ್ಲರು......
ನಾರಾಯಣ ಓ ನಾರಾಯಣ ಮರ್ಲರೇ......ಓ......
ನಾಲ್ಕು ಕರಂಡಕ ಆಭರಣ ಓ ನಾವು ಎಲ್ಲಿಂದ ತರಲೀ......
ಒಂದು ಬಾರಿ ನಾಲ್ಕು ಕರಂಡಕ ಆಭರಣ ಓ ಗಿಂಡಿ ಋತುಮತಿಯಾದದ್ದಕ್ಕೆ ಓ ನಾವು ತೊಡಿಸಿದ್ದು
ಗಿಂಡೆ ಮಾಯ ಆಗುವಾಗ ಓ ನಾಲ್ಕು ಕರಂಡಕ ಆಭರವಣವು ಮಾಯವಾಗಿದೆ ಯೆಂದರಪ್ಪಾ ಹೆಣ್ಣುಗಳು......
ನಾರಾಯಣ ಓ ನಾರಾಯಣ ಭಾವನವರೇ......
ಅವರ ನಾಲ್ಕು ಕರಂಡಕ ಆಭರಣ ಓ ಬೇಡ ಭಾವನವರೇ......
ನನ್ನದೇ ಆಭರಣಗಳು ಒಳಸೂತ್ರದ ಏಳು ಅಂತರದ ಯಮದೇವಿ ಗುಡಿಯಲ್ಲಿ
ತೆಂಕಣ ಮನೆ(ಕೋಣೆ)ಯಲ್ಲಿ ಸಿರಿಪದೊಲಿ(ಚಾವಡಿ)ಯಲ್ಲಿದೆ ಭಾವನವರೇ......
ಕಲ್ಲಿನ ಪೆಟ್ಟಿಗೆಯಲ್ಲಿ ಓ ನನ್ನ ಕರಾಜನ (ಆಭರಣದ ಪೆಟ್ಟಿಗೆ) ಇದೆ ಎಂದು ಹೇಳಿದಳು ಸೊನ್ನೆ......
ಒಂದೇ ಕರಜನ (ಪೆಟ್ಟಿಗೆಯ) ಬಂಗಾರದಲ್ಲಿ ಓ ಸೊನ್ನೆ ಮದುಮಗಳನ್ನು ಸಿಂಗಾರ ಮಾಡಿದರು......
ಹಾಕಿರುವ ಚಪ್ಪರದಲ್ಲಿ ಬಂಗಾರದ ಕುರ್ಚಿಯಲ್ಲಿ ಓ ಮದುಮಗ ಓ ಗುರು ಮಾರ್ಲರು ಕುರ್ಚಿಯಲ್ಲಿ ಕುಳಿತುಕೊಳ್ಳಿಸಿದರು ಋತುಮತಿಯ ಹಬ್ಬ ಓ ಮಾಡಿಸಿದರು......
ಋತುಮತಿಯ ಹಬ್ಬ ಓ ಮಾಡಿಸಿದರು......ಓ......
ಸೇರಿರುವ ಸಭೆಗೆ ಊಟೋಪಚಾರ ಮಾಡಿಸಿದರು......
ಊಟೋಪಚಾರದ ಬೆನ್ನಿಗೆ

ಎಲೆ ಅಡಿಕೆಯ ಭೋಗ ಓ ಮಾಡಿಸಿದ್ದಾರೆ......
ನಾರಾಯಣಾ ಓ ನಾರಾಯಣ......
ಉರ್ಕಿದೊಟ್ಟು ಅರಮನೆಯಿಂದ ಹಿಂತಿರುಗಿದರಪ್ಪಾ ಹೋದ ನೆಂಟರು......
ನಾರಾಯಣಾ ಓ ನಾರಾಯಣ ಮಕ್ಕಳೇ ಓ......
ಉರ್ಕಿದೊಟ್ಟಿನ ಓ ಗುರು ಮಾರ್ಲಾ......ಓ......
ನಿನ್ನ ಮದುಮಗಳನ್ನು ಓ ನನ್ನ ಮೊಮ್ಮಗಳನ್ನು ಓ ನಾನು ಕರೆದುಕೊಂಡು ಹೋಗುತ್ತೇನೆಂದು ಹೇಳಿದರು ಅಜ್ಜನವರು......
ನಾರಾಯಣ ಓ ಅಜ್ಜನವರೇ ಓ......
ಕರೆದುಕೊಂಡು ಓ ಹೋಗಿ ನೀವು......ಓ......
ಬೆಳಗ್ಗೆ ಕರೆದುಕೊಂಡು ಹೋದರೆ ಅಜ್ಜನವರೇ ಓ
ಸಂಜೆ ಕರೆದುಕೊಂಡು ಬರುತ್ತೇನೆಂದು ಹೇಳುತ್ತಾರೆ ಓ ಗುರು ಮಾರ್ಲರು......
ಉರ್ಕಿದೊಟ್ಟುವಿನ ಅರಮನೆಯಿಂದ ಓ......
ಗುರ್ಗಲಾಡೀ ಓ ಚಂದು ಪೆರ್ಗಡೆ ಅರಮನೆಗೆ ಓ......
ಸೊನ್ನೆ ಮದುಮಗಳು ಹೋಗುತ್ತಾಳೆ......ಓ......
ಊಟೋಪಚಾರ ಮುಗಿಸಿದರು ಸೊನ್ನೆ......ಓ......
ಸಂಜೆಯ ಹೊತ್ತಿಗೆ ಬಂದರು ಗುರು ಮಾರ್ಲರು......
ಮದುಮಗ ಮದಮಗಳನ್ನು ಗುರ್ಗಲಾಡೀ ಓ ಚಂದು ಪೆರ್ಗಡೆ ಓ ಚಾವಡಿಯಿಂದ...
ಓ ಇಳಿಸಿ ಓ ಕೊಟ್ಟರು ಅಜ್ಜನವರು......
ಅಜ್ಜನವರು ಓ ಕೊಡುವಾಗ ಓ ಬೆನ್ನು ಹಾಕಿ ಹಿಂತಿರುಗಿ ಓ ಹೋಗುತ್ತಾರೆ......
ಓ ಗುರು ಮಾರ್ಲರೂ ಓ ಸೊನ್ನೆಯೂ......
ಉರ್ಕಿದೊಟ್ಟಿನ ಅರಮನೆಗೆ ಬಂದರಂತೆ ಓ ಬಂದು ಬಂದು......
ಉಟ್ಟ ಪಟ್ಟೆಯನ್ನು ಬಿಚ್ಚಿದಳು ಸೊನ್ನೆ......ಓ......
ತೊಟ್ಟ ಆಭರಣಗಳನ್ನು ತೆಗೆದಳು......
ಅಂದಿನ ದಿನ ಹೋಗಿದೆ ಸೊನ್ನೆಗೆ......ಓ......
ಮರುದಿನ ಓ ಬಂದಿದೆಯಂತೆ......ಓ......
ಒಂದಲ್ಲ ಒಂದು ದಿನದಂದು ಓ......
ವರ್ಷ ಕಳೆದು ತಿಂಗಳಾಗುವಾಗ......
ಮುಟ್ಟಾದ ಸೊನ್ನೆ ಅವಳು......
ಮುಟ್ಟು ಆಗಲಿಲ್ಲವೆಂದರು......ಓ......
ಒಂದಾದೊಂದು ದಿನದಲ್ಲಿ ಓ ಸೊನ್ನೆಯಂತೆ......ಓ......
ಬೀಡಿಗೆ (ಮನೆಗೆ) ದೂರ ಓ ಅಂಗಳಕ್ಕೆ ಹತ್ತಿರ ಓ ಆದಳು ಸೊನ್ನೆ......
ನಾರಾಯಣಾ ಓ ನಾರಾಯಣ ಮದುಮಗಾ ಓ......
ಬಳ್ಳದಲ್ಲಿ ಬಾಗೆ ಓ ಗೆರಟೆಯಲ್ಲಿ ಸೀಗೆ ಓ ಕೊಟ್ಟುಬಿಡಿ ಮದುಮಗಾ......

ನಾರಾಯಣಾ ಓ ನಾರಾಯಣ ಸೊನ್ನೆ......ಓ......
ಗೆರಟೆಯಲ್ಲಿ ಸೀಗೆ ಓ ಬಳ್ಳದಲ್ಲಿ ಬಾಗೆ ಓ ಮುಂದಿನಿಂದ ಸಂಗೀತ ಓ ಹಿಂದಿನಿಂದ ಸಂಗಾತಿ
ಓ ಕಳುಹಿಸಕೊಟ್ಟರು ಗುರು ಮಾರ್ಲರು......
ನಾರಾಯಣಾ ಓ ನಾರಾಯಾ ಸೊನ್ನೆ......ಓ......
ಕೆಳಗಿನ ಹೊಂಡ ಓ ಭೂತಗಳ ಹೊಂಡ......ಓ......
ಮೇಲಿನ ಹೊಂಡ ಓ ದೇವರ ಹೊಂಡ......ಓ......
ನಡುಹೊಂಡ ಓ ಮಡಿವಾಳರ ಮಾಪುಕರಿಯ ಎಂದರು......
ನಾರಾಯಣಾ ಓ ನಾರಾಯಣ ಮದುಮಗಾ (ಗಂಡ) ಓ......
ಏಳು ವರ್ಷದ ಮಗುವಲ್ಲ ನಾನು ಮದುಮಗಾ (ಗಂಡ) ಓ......
ಹತ್ತುಹದಿನೈದು ವರ್ಷದ ಮಗಳೆಂದು ಓ ಮದುಮಗ(ಗಂಡ)ನಿಗೆ ಉತ್ತರ ಕೊಟ್ಟಳು ಸೊನ್ನೆ......
ಮುಂದಿನಿಂದ ಸಂಗಾತಿ ಓ ಹಿಂದಿನಿಂದ ಸಂಗೀತ ಓ
ಬಳ್ಳದಲ್ಲಿ ಬಾಗೆ ಓ ಗೆರಟಿಯಲ್ಲಿ ಸೀಗೆ ಹಿಡಿದುಕೊಂಡು ಹೋದಳು ಸೊನ್ನೆ......
ಮಡಿವಾಳರ ಮಾಪುಕರಿಯ (ನೀರಿನ) ಹೊಂಡದಲ್ಲಿ ಓ......
ಮಿಂದು ಶುದ್ಧವಾದಳು ಸೊನ್ನೆ......
ಉರ್ಕಿದೊಟ್ಟಿನ ಅರಮನೆಯಲ್ಲಿ ಓ......
ಸಣ್ಣವಳು ಹೋಗಿ ದೊಡ್ಡವಳಾಗಿ ಓ
ಹೆಣ್ಣು ಹೋಗಿ ಹೆಂಗುಸಾಗೀ ಓ......
ತಿಂಗಳಲ್ಲಿ ಋತುಮತಿಯಾಗುತ್ತಾ ಇದ್ದಾಳೆ ಅಲ್ಲಿ ಸೊನ್ನೆ......
ನಾರಾಯಣಾ ಓ ನಾರಾಯಣ ಓ......ನಾರಾಯಣಾ ಓ ನಾರಾಯಣಾ......
ಇಂದಾದರೋ ಇಂದು ಉರ್ಕಿದೊಟ್ಟುವಿನ ಅರಮನೆಯಲ್ಲಿ ಇಂದು ತಿಂಗಳ ಋತುಮತಿಯಾಗಿ
ಹೊರಗಿರುತ್ತಾ ಕಾಲ ಕಳೆಯುತ್ತಾ ಸೊನ್ನೆ ಇರುವಾಗ ಓ......
ಒಂದು ತಿಂಗಳು ಕಳೆಯಿತು ಸೊನ್ನೆಗೆ ಓ......
ಎರಡು ತಿಂಗಳು ಓ ತುಂಬಿ ಬಂತು......
ಉರ್ಕಿದೊಟ್ಟುವಿನ ಓ ಸೊನ್ನೆ ಮದುಮಗಳಿಗೆ......
ನಾರಾಯಣಾ ಓ ನಾರಾಯಣಾ......ಓ......
ನಾರಾಯಣಾ ಓ ನಾರಾಯಣಾ......
ನಾಲ್ಕು ತಿಂಗಳು ಕಳೆಯಿತು ಸೊನ್ನೆಗೆ
ಐದು ತಿಂಗಳು ತುಂಬಿ ಬಂತು......
ಐದು ತಿಂಗಳು ಕಳೆಯಿತು ಓ......
ಆರು ತಿಂಗಳು ತುಂಬುತ್ತಾ ಬಂದಿದೆ ಓ......

ಆರು ತಿಂಗಳು ಕಳೆಯಿತು ಸೊನ್ನೆಗೆ......
ಏಳು ತಿಂಗಳು ತುಂಬುತ್ತಾ ಬರುವಾಗ......
ಒಂದಾನೊಂದು ದಿನದಲ್ಲಿ ಓ......
ಮುಂಜಾವದಲ್ಲಿ ಎದ್ದಳು ಸೊನ್ನೆ......
ಆರೂವರೆ ಅಂಗಣ ಮೂರೂವರೆ ಅಂಗಳ ಓ ಗುಡಿಸುತ್ತಾ ಇದ್ದಾಳೆ ಓ......
ಮುಂಜಾವದಲ್ಲಿ ಎದ್ದಳು ಸೊನ್ನೆ
ಏಳು ಅಂತರದ ಯಮದೇವಿ ಗುಡಿಯ ಓ ಬಾಗಿಲು ತೆರೆದಳು......
ಬಾಗಿಲು ತೆರೆದಳು ಸೊನ್ನೆ ಅವಳು......
ಬಿಚ್ಚಿಹೋದ ಸೀರೆಯನ್ನು ನೆರಿಗೆ ಏರಿಸಿ ಉಟ್ಟಳು......
ಬಿಚ್ಚಿಹೋದ ಮುಡಿಯನ್ನು ಓ ಬಲಕ್ಕೆ ಬಲಮುಡಿ ಹಾಕಿ ಕಟ್ಟಿದಳು......
ಒಳಗಣ ಸೂತ್ರಕ್ಕೆ ಬರುತ್ತಾಳೆ ಸೊನ್ನೆ......ಓ......
ಏಳ ಅಂತರದ ಯಮದೇವಿ ಗುಡಿಯನ್ನು ಹೊಕ್ಕಳು......
ತೂತಿರುವ ಗೆರಟೆಯನ್ನು ಹಿಡಿದಳು ಸೊನ್ನೆ......
ಒಲೆಯ ಕರಿಬೂದಿಯನ್ನು ತೆಗೆದಳು ಸೊನ್ನೆ......
ಅಡಿಯಿಂದ ಕೊಳ್ಳಿ ಉರಿಸಿದಳು......ಓ......
ಮೇಲಿಂದ ಪಾತ್ರೆ ಇರಿಸಿದಳು......
ಹೊರಗಣ ಸೂತ್ರಕ್ಕೆ ಬಂದಳು ಸೊನ್ನೆ......
ಬಂಗಾರದ ಗಿಡ್ಡಪೊರಕೆ ಹಿಡಿದಳು......
ಬಂಗಾರದ ಗಿಡ್ಡಪೊರಕೆ ಹಿಡಿಯುವುದಕ್ಕೆ ನೋಡಿದರು ಗುರು ಮಾರ್ಲರು......
ಚಿಕ್ಕಚಾವಡಿ ಓ ಸಿದ್ರಮಂಪಟದಲ್ಲಿ ಓ ತೂಗುಯ್ಯಾಲೆಯಲ್ಲಿ ಓ......
ತಾಳೆಗರಿಯ ಚಾಪೆಯಲ್ಲಿ ಓ ಒತ್ತೊತ್ತಾಗಿ ಕೂತಿದ್ದಾರೆ ಗುರು ಮಾರ್ಲರು......
ನಾರಾಯಣ ನಾರಾಯಣಾ......
ಬಂಗಾರದ ಗಿಡ್ಡಪೊರಕೆ ಹಿಡಿದುಕೊಂಡು ಓ ಆರೂವರೆ ಅಂಗಣ ಮೂರುವರೆ ಅಂಗಳ ಓ ಗುಡಿಸಿಕೊಂಡು ಓ ಸೊನ್ನೆ ಇರುವಾಗ......
ಸೊನ್ನೆಯನ್ನು ಬಗ್ಗಿ ಬಗ್ಗಿ ನೋಡುತ್ತಾರೆ ಗುರುಮಾರ್ಲರು......
ಗುರುಮಾರ್ಲರು ಓ ಸೊನ್ನೆಯನ್ನು ನೋಡಿ ಓ ಮನಸ್ಸಲ್ಲೇ ಎಣಿಸುತ್ತಾರೆ......
ಸೊನ್ನೆಯ ತಲೆಯ(ಕೂದಲ) ತುದಿ ಏನು ಬಾಗಿದೆ ಓ ಮೊಲೆತುದಿ ಏನು ಬಾಗಿದೆ ಯೆಂದು ಓ ಕೇಳುತ್ತಾರೆ......
ಸೊನ್ನೆಯಲ್ಲಿ ಇನ್ನೇನು ಕೇಳುತ್ತಾರರೆ ಗುರು ಮಾರ್ಲರು......
ನಾರಾಯಣಾ ಓ ನಾರಾಯಣ ಸೊನ್ನೆ......ಓ......
ಇಲ್ಲಿಗೆ ಬಾ ಬಾ ಎಂದು ಕರೆದರು......
ಕರೆದ ಗಳಿಗೆಗೆ ಓ ಓಡುತ್ತಾ ಬರುತ್ತಾಳೆ ಸೊನ್ನೆ......ಓ......

ಕೈಯಲ್ಲಿದ್ದ ಗಿಡ್ಡಪೊರಕೆಯನ್ನು ಕೆಳಗೆ ಹಾಕಿದಳು ಸೊನ್ನೆ......
ನಾರಾಯಣಾ ಓ ನಾರಾಯಣ ಸೊನ್ನೆ......
ಎಷ್ಟು ತಿಂಗಳು ತುಂಬಿತು ನಿನಗೆ......ಓ......
ಎಷ್ಟು ತಿಂಗಳು ಆಯಿತು ಎಂದು ಓ ಗುರು ಮಾರ್ಲರು ಕೇಳುತ್ತಾರೆ ಸೊನ್ನೆಯಲ್ಲಿ...
ನಾರಾಯಣಾ ಓ ನಾರಾಯಣ ಸೊನ್ನೆ......
ತಲೆ ಕೆಳಗೆ ಹಾಕಿದಳು ಓ ಕಾಲಲ್ಲಿ ನೆಲ ಕೆರೆದಳು ಓ ಉಗುರು ಕಚ್ಚಿ ಓ ಕಣ್ಣಲ್ಲಿ ಕಡುದುಃಖ ಓ ದುಃಖಿಸಿದಳು ಸೊನ್ನೆ......
ನಾರಾಯಣಾ ನಾರಾಯಣ ಸೊನ್ನೆ ಓ......
ತಾಯಿಯೂ ನಾನೇ ಗಂಡನೂ ನಾನೇ ಎಂದು ಓ ಗುರು ಮಾರ್ಲರು ಸೊನ್ನೆಯಲ್ಲಿ ಹೇಳುತ್ತಾರಂತೆ
ನಾರಾಯಣಾ ಓ ನಾರಾಯಣಾ ಓ ನಾರಾಯಣ ಸೊನ್ನೆ ಓ......
ಅಕ್ಕನೂ ನಾನೇ ಓ ಅತ್ತೆಯೂ ನಾನೇ ಓ ತಂಗಿಯೂ ನಾನೇ ಓ ನನ್ನಲ್ಲಿ ಹೇಳು ಹೇಳೆಂದು
ಗುರು ಮಾರ್ಲರು ಓ ಸೊನ್ನೆಯಲ್ಲಿ ಕೇಳುತ್ತಾರಂತೆ......
ನಾರಾಯಣಾ ಓ ನಾರಾಯಣ......ಓ......
ಯಾರಲ್ಲಿ ಹೇಳುತ್ತೀ ಓ ಸೊನ್ನೆ ನೀನೇ
ನನ್ನಲ್ಲಿ ಹೇಳದಿದ್ದರೆ ಓ ಕುಳಿತುಕೋ (ತೊಂದರೆಯಿಲ್ಲ) ಸೊನ್ನೆ ಓ......
ಕೆಳಬದಿಯ ಓ ನಾಲ್ಕು ಮನೆಯ ಹೆಣ್ಣುಗಳಲ್ಲಿ ಓ ಹೇಳೆಂದು ಸಿಟ್ಟಲ್ಲಿ ಹೇಳುತ್ತಾರೆ ಗುರು ಮಾರ್ಲರು
ಅಷ್ಟು ಹೇಳುವುದನ್ನು ಕೇಳಿದರು ಸೊನ್ನೆ......ಓ......
ನಾರಾಯಣಾ ಓ ನಾರಾಯಣ ಮದುಮಗಾ......ಓ......ನಾರಾಯಣ......
ಕಳೆದದ್ದು ಓ ಆರು ತಿಂಗಳು ಓ ತುಂಬಿದ್ದು ಏಳು ತಿಂಗಳೆಂದು ಹೇಳುತ್ತಾಳೆ ಸೊನ್ನೆ
ಅಷ್ಟು ಹೇಳುವುದನ್ನು ಕೇಳಿದರು ಗುರು ಮಾರ್ಲರು......
ಒಳ ಸೂತ್ರಕ್ಕೆ (ಕೋಣೆಗೆ) ಹೋದರಂತೆ......
ಬಂಗಾರದ ತುಂಡು ಪೊರಕೆ ಕೊಟ್ಟಿಗೆಯಲ್ಲಿರಿಸಿದಳು......
ಕೈಕಾಲು ತೊಳೆದು ಒಳಗೆ ಬಂದಳು......ಓ......
ನಾರಾಯಣಾ ಓ ನಾರಾಯಣ ಸೊನ್ನೆ......ಓ......
ನನಗೆ ಹಾಲು ಅನ್ನ ಓ ಬಡಿಸಿ ಎಂದರು......
ಏಳು ಅಂತರದ ಯಮದೇವಿ ಗುಡಿಗೆ ಓ ಹೋದಳು ಸೊನ್ನೆ......
ಬಂಗಾರದ ಹರಿವಾಣ ತೆಗೆದಳು ಓ ಸೊನ್ನೆ ಕೇಳಬೇಕಂತೆ......
ಅಗೋಳಿಯ ತಂಗುಳನ್ನು ಬಡಿಸಿದಳು ಓ ಮರಿಗೆಯ ಉಪ್ಪು ಉಪ್ಪಿನಕಾಯಿ ಓ...
ಮದಿರೆ ಮಾಪಳದ ಓ ಹುಳಿ ಲಿಂಬೆಯ ಉಪ್ಪಿನಕಾಯಿ ಬಡಿಸಿದಳು......
ಕಣಿಲೆ ಕಾವಟೆಯ ಉಪ್ಪಿನಕಾಯಿ ಬಡಿಸಿದಳು......

ತೆಂಗಿನಕಾಯಿ ಬೆರೆಸಿ ಸಾವಿರ ಬಗೆ ಪದಾರ್ಥ, ಹುಳಿ ಬೆರೆಸಿ ಮುನ್ನೂರು ಬಗೆಯ ಓ ಪದಾರ್ಥ ಬಡಿಸಿದಳು......
ಊಟೋಪಚಾರ ಮಾಡಿದರು ಗುರು ಮಾರ್ಲರು ಓ......
ಉಂಡ ಕೂಡಲೇ ಓ ಎಲೆ ಅಡಿಕೆ ಮೆದ್ದರು ಓ......
ಕಾಯಿಯ ಭೋಗ ಓ ಹೋದರು ಮದುಮಗಾ......
ನಾರಾಯಣಾ ಓ ನಾರಾಯಣ ಸೊನ್ನೆ......ಓ......
ಉರ್ಕಿದೊಟ್ಟಿನ ಅರಮನೆಯಲ್ಲಿ ಜೋಕೆರಾಕೆಯಲ್ಲಿ ಓ ಇರು ಎಂದರು ಓ ಕಲೆಂಜ ಪರಾರಿ......
ಓ ನನ್ನ ಅಣ್ಣನವರಲ್ಲಿ ಓ ಹೋಗಿ ಬರುತ್ತೇನೆ ಎಂದರು......
ಕೆಲೆಂಜ ಪರಾರಿಗೆ ಓ ಹೋಗಿಬಂದು ಓ ನಿನ್ನ ಅಜ್ಜನವರು ಓ ನನ್ನ ಅಜ್ಜನವರು ಓ...
ಗುರ್ಗಲಾಡೀ ಓ ಚಂದು ಪೆರ್ಗಡೆ ಓ ಬನ್ನಾರರವರ ಚಾವಡಿಗೆ ಓ ಹೋಗಿ ಓ ಅಜ್ಜನವರಿಗೆ ವಿಷಯ ತಿಳಿಸಿ ಬರುತ್ತೇನೆಂದರು......
ಅಷ್ಟು ಹೇಳುವುದನ್ನು ಕೇಳಿದರು ಗುರು ಮಾರ್ಲರು ಓ ಉರ್ಕಿದೊಟ್ಟುವಿನ ಅರಮನೆ ಓ ಇಳಿದರು......
ಉರ್ಕಿದೊಟ್ಟಿನ ಅರಮನೆಯಿಂದ ಓ ಹೋದರು ಓ ಗುರು ಮಾರ್ಲರು......
ಕೆಲೆಂಜ ಪರಾರೀ ಓ ಅರಮನೆಗೆ ಹೋದರು......
ನನ್ನ ತಮ್ಮ ಓ ಏನು ಬಂದದ್ದಪ್ಪಾ ಓ ಏನು ಕಾರ್ಯದಲ್ಲಿ ಬಂದ ಎಂದು ಕಲ್ಲ ಹೆಬ್ಬಾಗಿನಲ್ಲೇ ನೋಡುತ್ತಾ ಇದ್ದಾರಪ್ಪಾ ಓ ಜಾರು ಮಾರ್ಲರು......
ನಾರಾಯಣಾ ಓ ನಾರಾಯಣಾ ಓ ನಾರಾಯಣಾ......
ಏನು ಬಂದಿ ಓ ಗುರು ಮಾರ್ಲಾ ಏನೊಂದು ಕಾರ್ಯದಲ್ಲಿ ಬಂದೆ ನೀನು ಓ.... ಏನು ಕಾರ್ಯವೆಂದು ಕೇಳುತ್ತಾರೆ......
ನಾರಾಯಣಾ ಓ ನಾರಾಯಣ ಅಣ್ಣಾ......ಓ......
ನನ್ನ ಮದುಮಗಳು ಓ ನಿನ್ನ ನಾದಿನಿ ಗರ್ಭಿಣಿ ಅಣ್ಣಾ ಓ ಅವಳಿಗೆ ಬಯಕೆ ಹಾಕಬೇಕು ಓ ಬಾಯಿಯ ಆಸೆ ಓ ಕಳೆಯಬೇಕು ನಾವೆಂದು ಓ ಹೇಳುತ್ತಾರೆ ಅವರು ಓ ಗುರು ಮಾರ್ಲರು......
ನಾರಾಯಣಾ ಓ ನಾರಾಯಣಾ......
ಹರುಷದ ಮೆಯಿ ಮುತ್ತಿನ ನಗುವಿನಲ್ಲಿ ಓ ಅದರಂತೆ ಓ ಕೆಲೆಂಜ ಪರಾರಿ ಜಾರು ಮಾರ್ಲರು......
ಅಣ್ಣ ತಮ್ಮ ಓ ಒಟ್ಟೊಟ್ಟಿಗೆ ಸೇರಿಕೊಂಡೂ ಓ ಕಲೆಂಜ ಪರಾರೀ ಓ ಇಳಿದರಂತೆ......
ಕೆಲೆಂಜ ಪರಾರೀ ಓ ಹಿಂದೆ ಬಿಟ್ಟರಂತೆ ಓ......
ಗುರ್ಗಲಾಡೀ ಓ ಚಂದುಪೆರ್ಗಡೆ ಓ ಬನ್ನಾರರ ಬೈಲುಗದ್ದೆಯ ಮೂಲಕ ಓ ಹೂ ಹಾಕುವ ಪುದ್ದಾರ ಗದ್ದೆಯ ಬದುವಿನ ಮೂಲಕ ಹೋಗುತ್ತಾರೆ......
ನಾರಾಯಣಾ ಓ ನಾರಾಯಣಾ ಓ ನಾರಾಯಣಾ......

ದೂರದಲ್ಲೇ ಬರುವುದನ್ನು ನೋಡುತ್ತಾರೆ ಅಜ್ಜನವರು ಓ ಗುರ್ಗಲಾಡಿಯ ಕಲ್ಲ ಹೆಬ್ಬಾಗಿಲಲ್ಲಿ ಕುಳಿತುಕೊಂಡೂ......
ನನ್ನ ಮಕ್ಕಳು ಏನು ಬರುತ್ತಾರಪ್ಪಾ......ಓ ನನ್ನ ಮೊಮ್ಮಕ್ಕಳು ಓ ಅಣ್ಣತಮ್ಮಂದಿರು......
ಎಂದು ಹೇಳುತ್ತಾರೆ ಅಜ್ಜನವರು ಓ ಗುರ್ಗಲಾಡಿಯ ಚಂದು ಪೆರ್ಗಡೆ ಓ ಬನ್ನಾರು ಅವರು......
ಅಷ್ಟು ಹೇಳುವಾಗ ಕೇಳುತ್ತಾರಂತೆ ಓ ದೂರದಿಂದ ಬರುವುದನ್ನು ನೋಡಿದರು ಅಜ್ಜನವರು......
ಹಾಕಿರುವ ಏತದಲ್ಲಿಗೆ ಓ ತೋಡಿಸಿರುವ ಬಾವಿಯಲ್ಲಿಗೆ ಓ......
ಆಕಾಶದೆತ್ತರದ ಏತವನ್ನು ಓ ಇಳಿಸಿ ಪಾತಾಳದ ಹನಿ(ತಂಪು)ನೀರನ್ನು ಮೇಲೆತ್ತಿದರು...
ಕವುಚಿ ಹಾಕಿರುವ ಕಲ್ಲಮರಿಗೆಯನ್ನು ಓ ಅಂಗಾತ ಮಾಡಿದರು......
ಅಂಗಾತ ಇಟ್ಟು ಓ ಒಂದು ಮರಿಗೆ ನೀರು ಹಾಕಿದರು ಅಜ್ಜನವರು......
ಕಂಚಿನ ಕೈಪಾತ್ರೆ ಹಾಕಿ......
ಕೈಯ ಧೂಳು ಕಾಲಿನ ಧೂಳು ತೊಳೆದರಪ್ಪಾ......ಓ......
ಮುಖದ ಮುತ್ತು ಬೆವರು ಓ ತೊಳೆದರು ಮೊಮ್ಮಕ್ಕಳು ಓ......
ಕೆಲೆಂಜ ಪರಾರಿ ಜಾರು ಮಾರ್ಲರು ಓ ಉರ್ಕಿದೊಟ್ಟುವಿನ ಓ ಗುರು ಮಾರ್ಲರು
ಆರೂವರೆ ಅಂಗಣ ಮೂರೂವರೆ ಅಂಗಳಕ್ಕೆ ಓ ಹೋದರು ಅವರು......ಓ......
ಮೆಟ್ಟಲ್ಲಿ ಚಪ್ಪಲಿ ಇಟ್ಟರಂತೆ......ಓ......
ಹೊರ ಆವರಣದ ಗೋಡೆಯಲ್ಲಿ ಕೊಡ ಇಳಿಸಿದರಂತೆ......ಓ......
ಚಿಕ್ಕಚಾವಡಿ ಸಿದ್ರಮಂಪಟದಲ್ಲಿ ತಾಳೆಗರಿ ಚಾಪೆಯಲ್ಲಿ ಓ ತೂಗುಯ್ಯಾಲೆಯಲ್ಲಿ......
ಓ ಒತ್ತೊತ್ತಾಗಿ ಕುಳಿತರು......
ಕೆಲೆಂಜ ಪರಾರಿ ಜಾರು ಮಾರ್ಲರು ಓ ಉರ್ಕಿದೊಟ್ಟುವಿನ ಓ ಗುರು ಮಾರ್ಲರು...
ಒಳಸೂತ್ರಕ್ಕೆ ಹೋದರಜ್ಜನವರು......
ಬೆಳ್ಳಿಯ ಪಿಂಗಾಣಿಯಲ್ಲಿ ಎರಡು ಪಿಂಗಾಣಿ ಹಾಲು ಓ ತಟ್ಟೆಯಲ್ಲಿ ಎಲೆ ಅಡಿಕೆ ಹಿಡಿದುಕೊಂಡರು ಅಜ್ಜನವರು......
ಓ ತೂಗುಯ್ಯಾಲೆಗೆ ಕೊಟ್ಟರು ಅಜ್ಜನವರು......
ಅಜ್ಜನವರು ಕೊಟ್ಟ ಓ ಹಾಲನ್ನು ಮಕ್ಕಳು ಓ ತೆಗೆದು ಕುಡಿದರು ಓ ಎಲೆಅಡಿಕೆ ತಿಂದರು......
ನಾರಾಯಣ ಮಗ ಓ ಮೊಮ್ಮಕ್ಕಳೇ ಓ ಏನು ಬಂದಿರಿ ಓ ಏನು ಹೋದಿರೆಂದು ಆ ಅಜ್ಜನವರು ಕೇಳುವಾಗ ಓ......
ನಾರಾಯಣಾ ಓ ನಾರಾಯಣ ಅಜ್ಜನವರೇ......
ನಿಮ್ಮ ಮೊಮ್ಮಗಳು ಓ ನನ್ನ ನಾದಿನಿ ಓ ಗುರ ಮಾರ್ಲನ ಮದುಮಗಳೂ......
ಗರ್ಭಿಣಿ ಓ ಬಯಕೆ ಹಾಕೋಣವೇ ಓ ಬಾಯಿಯ ಆಸೆ ಕಳೆಯೋಣವೇ ಎಂದರು...
ನಾರಾಯಣ ಮಗಾ ಓ ಎಷ್ಟು ತಿಂಗಳು ಕಳೆಯಿತು ಮಗಾ ಎಷ್ಟು ತಿಂಗಳು ತುಂಬಿ

ತೆಂದು ಓ ಅಜ್ಜನವರು ಕೇಳುತ್ತಾರೆ......
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ ಓ......
ಕಳೆದದ್ದು ಆರು ತಿಂಗಳು ಏಳು ತಿಂಗಳು ತುಂಬುತ್ತಾ ಬಂತೆಂದರು ಗುರು ಮಾರ್ಲ್‌ರು...
ಅಷ್ಟು ಹೇಳಲು ಓ ಅಜ್ಜನವರು ಈಗ ನಾರಾಯಣಾ ನಾರಾಯಣಾ ಎಂದರು
ಹರುಷದ ಮೆಯಿ ಮುತ್ತಿನ ನಗು ಓ ನಕ್ಕರು ಅಜ್ಜನವರು......
ನಾರಾಯಣಾ ಓ ನಾರಾಯಣಾ ಅಜ್ಜನವರೇ ಓ......
ಒಳ್ಳೆಯ ಮುಹೂರ್ತ ಒಳ್ಳೆ ವಾರ ನೊಡೋಣವೇ ಅಜ್ಜನವರೆ ಎಂದರು......ಓ......
ಕೆಲೆಂಜ ಪರಾರೀ ಜಾರು ಮಾರ್ಲ್‌ರು......
ಆಯಿತು ಮಗಾ ಓ ಎಲ್ಲಿಗೆ ಹೋಗುವುದು ಓ ಅಜ್ಜನವರೇ ಓ ಎಲ್ಲಿಗೆ ಹೋಗುವುದೆಂದು ಕೇಳಲು ಹೇಳುತ್ತಾರೆ......
ನಾರಾಯಣ ಮಗಾ ಓ ಇಲ್ಲಿ ಒಬ್ಬ ಬಲ್ಯಾಯ (ಜ್ಯೋತಿಷಿ) ಇದ್ದಾನೇ......ಓ......
ನನ್ನ ಗುರುತುಪರಿಚಯದ ಓ ಬಲ್ಯಾಯ ಮಗಾ......
ನಾನು ಚಿಕ್ಕವನಿರುವಾಗ ಓ ನನಗೂ ನನ್ನ ತಾಯಿ ಓ ಪಿಂಗಾಣಿಯಲ್ಲಿ ಹಾಲನ್ನ ಕೊಡುತ್ತಿರುವಾಗ......
ಓ ಆ ಬಲ್ಯಾಯನಿಗೂ ಪಿಂಗಾಣಿಯಲ್ಲಿ ಅನ್ನ ಕೊಟ್ಟಿದ್ದಾರಂತೆ ಮಗಾ ನನ್ನ ತಾಯಿ...
ಒಂದೇ ಲೋಟದಲ್ಲಿ ಹಾಲು ಕುಡಿದವರು ನಾವು ಓ ಆ ಬಲ್ಯಾಯ ಇಲ್ಲೇ ಇದ್ದಾನಂತೆ......
ಓ ಒಂದೇ ಬಟ್ಟಲಲ್ಲಿ ಉಂಡು ಬೆಳೆದವರು ನಾವು......ಓ......
ಓ ಜೊತೆಗೆ ಆಡುತ್ತಾ ಬೆಳೆದವರು ನಾವು......
ಆದಿಪೂರ್ವದ ಜ್ಯೋತಿಷಿ ಮಗಾ......
ಎಂದು ಹೇಳುತ್ತಾರೆ ಅಜ್ಜನವರು......ಓ......
ಆದೀತು ಅಜ್ಜನವರೇ ಓ ಹೋಗೋಣವೆಂದು ಓ ಮೊಮ್ಮಕ್ಕಳು ಹೇಳುವಾಗ......
ಏಳು ಅಂತರದ ಯಮದೇವಿ ಗುಡಿಗೆ ಹೋದರು ಅಜ್ಜನವರು......
ಕಲ್ಲಕಲೆಂಬಿ (ಪೆಟ್ಟಿಗೆ)ಯ ಬಾಯಿಬೀಗ ಓ ಕಂಚಿನ ಬೀಗಕ್ಕೆ ಓ ಮೆಂಚಿನ ಕೀಲಿಕೈ ಹಾಕಿದರು ಅಜ್ಜನವರು
ಸೆರಗಲ್ಲಿ ಐದುನೂರು ಕಟ್ಟಿದರು ಅಜ್ಜನವರ ಓಮುನ್ನಿ(ಬಟ್ಟೆಯ ತುದಿ)ಯಲ್ಲಿ ಓ ಮುನ್ನೂರು ಕಟ್ಟಿದರು......
ಗುರ್ಗ್‌ಲಾಡಿ ಓ ಚಂದು ಪೆರ್ಗ್‌ಡೆ ಓ ಬನ್ನಾರು ಅಜ್ಜನವರು......
ಗುರ್ಗ್‌ಲಾಡಿಯ ಅರಮನೆ ಇಳಿದರು......ಓ......
ಅಜ್ಜನವರೂ ಓ ಮೊಮ್ಮಕ್ಕಳೂ......
ಗದ್ದೆಯ ಬದುವನ್ನು ಓ ಹಿಂದಕ್ಕೆ ಬಿಟ್ಟರು......ಓ......
ಸಣ್ಣ ತೋಡೂ ಓ ಚಿಕ್ಕ ಕಾಲುಸಂಕ ಓ ದಾಟಿ ಹಿಂದಿಕ್ಕಿದರು......
ಜಾನುವಾರುಗಳು ಸಾಗುವ ಹೆದ್ದಾರಿ ಬಿಟ್ಟರು ಮನುಷ್ಯರು ಹೋಗುವ ಮಧ್ಯಮಾರ್ಗ

ಹಿಡಿದರು ಅಜ್ಜನವರು......
ಅಜ್ಜನವರೂ ಮೊಮ್ಮಕ್ಕಳೂ......ಓ......ಹೋಗುತ್ತಾರೆ......
ಹೋಗಿ ಹೋಗಿ ಹೋದರಂತೆ ಓ ಬಲ್ಯಾಯನ ಕೊಟ್ಟಿಗೆಗೆ ಹೋದರಂತೆ......
ದೂರದಲ್ಲಿ ನೋಡಿದ ಬಲ್ಯಾಯ ಓ ಗದ್ದೆಯ ಬದುವಲ್ಲಿ ನಿಂತುಕೊಂಡು
ಒಬ್ಬ ಮುದುಕನೂ ಎರಡು ಮಕ್ಕಳೂ......ಓ......
ಎಲ್ಲಿಗೆ ಹೋಗುವವರೆಂದು ಓ ಕೇಳುತ್ತಾನೆ ಬಲ್ಯಾಯ......
ಬಲ್ಯಾಯನ ಕೊಟ್ಟಿಗೆಗೆ ಓ ತಲಪಿದ್ದಾರೆ......
ಅಷ್ಟು ಹೊತ್ತಿಗೆ ಓ ಬಲ್ಯಾಯ ಬಂದನು......
ಯಾರು ಬಲ್ಯಾಯ ಓ ಯಾರು ಬಲ್ಯಾಯ ಎಂದು ಅಜ್ಜನವರು ಕರೆದರು......
ನನ್ನ ಗುರುತುಪರಿಚಯ ಸಿಕ್ಕಿತೇ ಬಲ್ಯಾಯ ಎಂದು ಅಜ್ಜನವರು ಕೇಳಿದರು......
ನಾರಾಯಣಾ ಓ ನಾರಾಯಣ ಬನ್ನಾರ್ ಅವರೇ......ಓ......
ಹೇಳುವುದನ್ನು ಕೇಳಿದ್ದೇನೆ ಆದರೆ ಪರಿಚಯ ಇಲ್ಲವಲ್ಲಾ......
ಕಣ್ಣಿನ ಚಾಲೀಸು ಬಂದಿದೆ ನನಗೆ ಓ......
ಪರಿಚಯ ಗುರುತು ಓ ಆಗುವುದಿಲ್ಲ ನನಗೆಂದು ಓ ಬಲ್ಯಾಯ ಹೇಳಿದ......
ಬಲ್ಯಾಯನಿಗೆ ಗುರುತು ಪರಿಚಯ ಓ ಹೇಳಿದರು ಬನ್ನಾರು ಅವರು......
ನಾರಾಯಣ ಬನ್ನಾರರೇ ಓ ನಾರಾಯಣ ಬನ್ನಾರರೇ
ಸಾವಿರ ತಪ್ಪಾಯಿತು ಓ ಸರ್ವವೂ ತಪ್ಪಾಯಿತು......
ತಪ್ಪನ್ನು ಓ ಒಪ್ಪು ಮಾಡಿರೆಂದು ಹೇಳುತ್ತಾನೆ ಬಲ್ಯಾಯ......
ನಾರಾಯಣಾ ಓ ನಾರಾಯಣ ಬಲ್ಯಾಯಾ......
ಹಿಂದೆ ಚಿಕ್ಕವರಿರುವಾಗ ನಾವು
ಒಂದೇ ಬಟ್ಟಲಲ್ಲಿ ಉಂಡವರು......
ಜೊತೆಯಾಗಿ ಆಡುತ್ತಿದ್ದವರು ಓ......
ನಿನ್ನ ಕೊಟ್ಟಿಗೆಗೆ ಬರುವ ಅವಕಾಶ ನನಗೆ ದೊರಯಲಿಲ್ಲ......
ನನ್ನೊಡನೆ ಮಾತನಾಡುವ ಅವಕಾಶ ಓ ನಿನಗೆ ಸಿಕ್ಕಲಿಲ್ಲ......
ನಾರಾಯಣ ಓ ಬಲ್ಯಾಯ ಕೇಳಿದಿಯೇ......
ನಿನ್ನ ಕೊಟ್ಟಿಗೆಗೆ ಓ ಇಂದು ಬರುವ ಅವಕಾಶವನ್ನು ನನಗೆ ಓ ದೇವರು ಓ ಬಡಗಣ ಲಂಕೆಲೋಕನಾಡ ಓ ಲೋಕನಾಥೇಶ್ವರ ಸ್ವಾಮಿಯು ಓ ಸುತ್ತಲ್ಲಿ ನಡೆಯುವ ಓ ಸೇಮುಕಲ್ಲ ಪಂಜುರ್ಲಿಯೂ ಓ ಸಹಾಯ ಕೊಟ್ಟರು ಓ ನಿನ್ನ ಕೊಟ್ಟಿಗೆಗೆ ಬರುವಂತೆ......
ನಾರಾಯಣಾ ಓ ನಾರಾಯಣ ಅಜ್ಜನವರೇ......
ಏನು ಆಗಬೇಕು ಓ ಏನು ಹೋಗಬೇಕೆಂದು ಓ ಕೇಳಿದ ಬಲ್ಯಾಯ......
ನನಗೊಂದು ಓ ಬಲ್ಯಾ ಕೇಳಿದೆಯಾ ಓ ನಾರಾಯಣ ಬಲ್ಯಾಯಾ......
ಒಳ್ಳೆಯ ದಿನ, ಒಳ್ಳೆಯ ವಾರ, ಒಳ್ಳೆಯ ಗಳಿಗೆ ಓ ಒಳ್ಳೆಯ ನಿಮಿಷ ಸಿಗಬೇಕು ಓ...

ಯಾಕಾಗಿ ಬನ್ನಾರರೇ ಎಂದು ಬಲ್ಯಾಯ ಕೇಳಲು ಹೇಳುತ್ತಾರೆ......
ನನ್ನ ಮೊಮ್ಮಗಳು ಓ ಇದ್ದಾಳಪ್ಪಾ ಓ ಪ್ರೀತಿಯ ಓ ಮೊಮ್ಮಗಳು......
ಗದ್ದೆಯ ಬದುವಿನಲ್ಲಿ ದೊರೆತ ಮಗು ಓ ಸೊನ್ನೆ ಅವಳು......
ಅವಳನ್ನು ನಾನೇ ಓ ಉರ್ಕಿದೊಟ್ಟುವಿನ ಓ ಅರಮನೆಗೆ ಓ ಗುರು ಮಾರ್ಲನಿಗೆ
ಇನ್ನೊಬ್ಬನ ಓ ಕೈ ಸೇರಿಸಿ ಓ ಹೆಣ್ಣಿಗೂ ಮಣ್ಣಿಗೂ ಓ ಧರ್ಮಧಾರೆ
ಎರೆದು ಓ ಅಂದಿಗೆ ಕೊಟ್ಟಿದ್ದೇನೆ ಓ
ಇಂದಿಗೆ ಅವಳು ಓ ಗರ್ಭಿಣಿಯಾಗಿದ್ದಾಳೆ ಓ ತಿಂಗಳು ತುಂಬಿದೆ ಅವಳಿಗೆ......
ಸೀಮಂತಕ್ಕೆ ದಿನ ಓ ಹೇಳಬೇಕೆಂದರು ಓ ಅಜ್ಜನವರು ಬನ್ನಾರ್ ಅವರು......
ನಾರಾಯಣಾ ಓ ನಾರಾಯಣ ದೇವರೇ
ಅರುವತ್ತು ಕಟ್ಟು ಗ್ರಂಥ ತೆಗೆದನಂತೆ ಓ ಮೂವತ್ತು ಕಟ್ಟು ಓ ಜಾತಕ ತೆಗೆದನಂತೆ
ಜಾತಕದ ಫಲ ನೋಡಿದನಂತೆ ಬಲ್ಯಾಯ ಓ ಗ್ರಂಥದ ಫಲವನ್ನು ತಿಳಿಸಿದನಂತೆ...
ಈ ಬರುವ ಗುರುವಾರವಲ್ಲ, ಓ ಮೇಲೆ ಬರುವ ಗುರುವಾರದಂದು ಓ ನಿಮ್ಮ
ಮೊಮ್ಮಗಳು ಸೊನ್ನೆಗೆ......
ಉದಯವಾದ ಸ್ವಾಮಿ ಓ ಅಸ್ತಮನಾಗುವಾಗ
ಅಸ್ತಮನಾದ ಸ್ವಾಮಿ ಓ ಉದಯವಾಗಿ ಏಳುಮಾರು ಓ ಉದ್ದಕ್ಕೆ ಬರುವಾಗ
ಓ ಸೂರ್ಯನ ಪ್ರಕಾಶಕ್ಕೆ......
ಪೂರ್ವದಿಕ್ಕು ಓ ಪಶ್ಚಿಮದಿಕ್ಕು ಓ ದಕ್ಷಿಣದಿಕ್ಕು ಓ ನಾಲ್ಕು ದಿಕ್ಕಿನಿಂದ ಓ......
ಒಂದು ದಿಕ್ಕಿಗೆ ಓ ಪೂರ್ವಕ್ಕೆ ಮುಖ ಹಾಕೀ......
ಗರ್ಭಿಣಿಗೆ ಓ ಕೋಳಿ ನಿವಾಳಿಸಿ ಬಿಟ್ಟು ಓ ಹೂ ಹಿಂಗಾರ ಕೊಟ್ಟೂ......
ಓ ಅವಳನ್ನು ಪ್ರೀತಿಯಿಂದ ನೋಡಿ ಎಂದು ಬಲ್ಯಾಯ ಓ ಕೊಟ್ಟಿಗೆಯಲ್ಲಿ ಹೇಳುತ್ತಾನೆ...
ಅಷ್ಟು ಹೇಳುವುದನ್ನು ಕೇಳಿದರು ಅಜ್ಜನವರು ಓ......ಬಲ್ಯಾಯನಿಗೆ ಕೊಡುವ
ಸಂಬಳವನ್ನು ಕೊಟ್ಟರು......
ನಾರಾಯಣಾ ಓ ನಾರಾಯಣ ಮೊಮ್ಮಕ್ಕಳೇ......ಓ......
ನಾವು ಬಲ್ಯಾಯನ ಕೊಟ್ಟಿಗೆ ಇಳಿಯುವಾ ಎಂದರು......
ಅಜ್ಜನವರು ಹಾಗು ಮೊಮ್ಮಕ್ಕಳು ಹಿಂತಿರುಗಿದರು......
ನಾರಾಯಣಾ ಓ ನಾರಾಯಣ ಅಜ್ಜನವರೇ......
ಬಂದವರು ಓ ಹಿಂತಿರುಗಬೇಕಾದರೆ
ಸೊನ್ನೆಗೆ ಸೀರೆ ರವಿಕೆ ಓ ತೆಗೆಯೋಣ ಎಂದು ಹೇಳುತ್ತಾರೆ......
ನಾರಾಯಣಾ ಓ ನಾರಾಯಣಾ......
ಯಾವ ಪೇಟೆಗೆ ಹೋಗುವುದು ಓ ಎಂದು ಈಗ ಓ ಕೆಲೆಂಜ ಪರಾರಿ ಜಾರು
ಮಾರ್ಲರು ಓ ಕೇಳುತ್ತಾರೆ ಅಲ್ಲಿ......
ನಾರಾಯಣ ಮಗಾ ಓ ನಾರಾಯಣ ಮಗಾ ಓ ಮಕ್ಕಳೇ ಕೇಳಿದಿರಾ......
ಕಡೇರಿ ಕಾರ್ಲ (ಕಾರ್ಕಳ) ತುದಿ ಪೇಟೆಯ ಓ ಒಂದು ತುದಿಯಲ್ಲಿ

ನನ್ನ ಸ್ನೇಹಿತ ಓ ಇದ್ದಾನಂತೆ ಓ ಅಂಗಡಿ ಸಾಹುಕಾರ......
ಅವನ ಅಂಗಡಿಗೆ ಹೋಗುವ ನಾವು ಓ
ಜವುಳಿ ತೆಗೆಯುವ ಎಂದು ಓ ಹೇಳುತ್ತಾರಂತೆ......
ಕಡೆರಿ ಕಾರ್ಲ(ಕಾರ್ಕಳ)ದ ತುದಿಪೇಟೆಯ ಒಂದು ತುದಿಗೆ ಹೋದರಂತೆ ಅವರು...
ನಾರಾಯಣಾ ಓ ನಾರಾಯಣ ಜವುಳಿಯವನೇ......ಓ......
ನನಗೊಂದು ಪಟ್ಟೆ ಓ ಕೊಡೆಂದರು......
ಪಟ್ಟೆ ಇಂದು ಓ ಪಟ್ಟೆಯಲ್ಲಿ ಮೇಲಾದ ಪಟ್ಟಿ ಓ ಅಂಗೈಯೊಳಗೆ ತುಂಬುವ ಪಟ್ಟಿ
ಒಂದು ಮುಷ್ಟಿಯೊಳಗಡೆ ಹಿಡಿಯುವ ಪಟ್ಟೆ......ಉಗುರಲ್ಲಿ ಸೀಳಬಹುದಾದ(?)
ಪಟ್ಟೆ ಓ ಕಣ್ಣೀರು ಒರಸುವ ಪಟ್ಟೆ......
ಓ ಭೂಮಿಗೆ ಎರಗುವ ಪಟ್ಟೆ ಓ ಆಕಾಶಕ್ಕೆ ಓ ಹಾರುವ ಪಟ್ಟೆ......
ಪಟ್ಟೆಯಲ್ಲಿ ಪಟ್ಟೆ ಓ ಮೇಲಾದ ಪಟ್ಟಿಯನ್ನು ಓ ತೆಗೆದರು ಅಜ್ಜನವರು......
ಗುತ್ತಿನ್ನ (ಗುಬ್ಬಿಯ?) ರವಿಕೆ ಓ ತೆಗೆದರದಕ್ಕೆ ಓ ಗಂಟು ಕಟ್ಟಿದರು......
ಅಲ್ಲಿಂದ ಹಾಗೆಯೇ ಓ ಈ ಕಡೆಗೆ ಬಂದರು ಓ ಮಲ್ಲಿಗೆಯ ಬಾಯಿ ಓ
ಬುಟ್ಟಿ ಇಟ್ಟುಕೊಂಡು ಓ ಮಲ್ಲಿಗೆಯ ಮೊಗ್ಗು ಓ ಮಾರುತ್ತಿದ್ದಾಳೆ......
ನಾರಾಯಣ ಬಾಯಮ್ಮ ಓ ಮಲ್ಲಿಗೆಯ ಚೆಂಡಿಗೆ ಓ ಎಷ್ಟೆಂದು ಕೇಳುವಾಗ......
ಮಲ್ಲಿಗೆ ಮಾರುವ ಬಾಯಮ್ಮ ಓ ಹೇಳುತ್ತಾಳೆ ಬನ್ನಾರರಿಗೆ......
ನಾರಾಯಣಾ ಬನ್ನಾರರೇ ಓ ನಾರಾಯಣ ಬನ್ನಾರರೇ ಓ......
ನಿಮ್ಮ ಮೊಮ್ಮಗಳು ಸೊನ್ನೆಗಾ ಎಂದು ಓ ಕೇಳುತ್ತಾಳೆ ಬಾಯಮ್ಮ......
ಹೌದಪ್ಪಾ ಓ ಹೌದು ಬಾಯಮ್ಮ ಓ......
ನನ್ನ ಮೊಮ್ಮಗಳೂ ಓ ಸೊನ್ನೆಗೆ ಓ ಗುರು ಮಾರ್ಲನಾ ಓ ಮದುಮಗಳಿಗೆ......
ಸೊನ್ನೆ ಮದುಮಗಳಿಗೆ ಬಯಕೆ ಹಾಕಬೇಕು ಓ ಬಾಯಿಯ ಚಪಲ ಓ ಕಳೆಯ ಬೇಕೆಂದು
ಓ ಹೇಳಿದರು ಬನ್ನಾರರು......
ನಾರಾಯಣಾ ಓ ನಾರಾಯಣಾ ಓ......
ಮಲ್ಲಿಗೆಯ ಚೆಂಡೂ ಓ ಕೇಳುವಾಗ ಓ
ಯಾವ ಮಲ್ಲಿಗೆ ಓ ಯಾವ ಮಲ್ಲಿಗೆ ಅಜ್ಜನವರೇ......
ಜಾಜಿಮಲ್ಲಿಗೆ ಓ ಬೇಕೆ ಅಜ್ಜನವರೇ ಓ ಸೂಜಿಮಲ್ಲಿಗೆ ಬೇಕೇ......
ದುಂಡುಮಲ್ಲಿಗೆ ಬೇಕೆ ಅಜ್ಜನವರೇ ಓ ಕಸ್ತೂರಿಮಲ್ಲಿಗೆ ಬೇಕೇ ಓ......
ಸೂಜಿಮಲ್ಲಿಗೆ ಓ ಬೇಕೆ ಅಜ್ಜನವರೇ......
ನಾರಾಯಣಾ ಓ ನಾರಾಯಣ ಬಾಯಮ್ಮ ಓ......
ಚೆಂಡುಮಲ್ಲಿಗೆ ಓ ಜಾಜಿಮಲ್ಲಿಗೆ ಓ ಸೂಜಿಮಲ್ಲಿಗೆ ಓ ಮಂಗಳೂರುಮಲ್ಲಿಗೆ......
ಕಸ್ತೂರಿಮಲ್ಲಿಗೆ ಓ ಸೇವಂತಿಗೆ ಓ ಒರ್ವಂತಿಗೆ ಓ ಅಬ್ಬಲ್ಲಿಗೆ (ಕನಕಾಂಬರ) ಹೂ ಓ...
ಅಡ್ಡಕೇದಗೆ ನೀ ನೀಟಸಂಪಗೆ ಓ ಮಲ್ಲಿಗೆಯ ಮೊಗ್ಗು ಓ

ಕೊಡು ಬಾಯಮ್ಮ ಎಂದು ಓ ಹೇಳಿದರು ಬನ್ನಾರರು......
ನಾರಾಯಣಾ ಓ ನಾರಾಯಣ ಬನ್ನಾರರೇ......
ಮಲ್ಲಿಗೆಯ ಚೆಂಡು ಓ ಹಿಡಿದುಕೊಂಡರು......ಓ ಬಂದರಂತೆ......
ಮಲ್ಲಿಗೆಯ ಕ್ರಯ ಓ ಅಜ್ಜನವರು ಕೊಡುವಾಗ......
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ......
ಎರಡು ಚೆಂಡು ಓ ಮಲ್ಲಿಗೆ ಓ ಸೊನ್ನೆ ಮದುಮಗಳಿಗೆ ಓ ನನ್ನ ಲೆಕ್ಕದಲ್ಲಿ ಓ ಮುಡಿಸಬೇಕು ಅಜ್ಜನವರೇ ಎಂದು
ಎರಡು ಚೆಂಡು ಮಲ್ಲಿಗೆ ಓ ಕೊಡುತ್ತಾಳೆ ಬಾಯಿ......
ನಾರಾಯಣಾ ಓ ನಾರಾಯಣ ಓ......ಅಜ್ಜನವರು ಓ ಹೇಳುತ್ತಾರೆ......
ನಾರಾಯಣ ಓ ಗುರುಮಾರ್ಲ ಓ ಜಾರುಮಾರ್ಲ ಓ ಕೇಳಿದ್ದೀರಾ ನೀವೂ......
ಹೂವಿನ ಗಂಟು ಓ ಜವುಳಿಯ ಗಂಟು......
ಕೊಂಡು ಹೋಗಿ ಓ ಕಲ್ಲ ಪೆಟ್ಟಿಗೆಯಲ್ಲಿ ಓ ಇಟ್ಟುಬಿಡಿ ನೀವೂ......ಓ......
ಸೊನ್ನೆಗೆ ತೋರಿಸಬೇಡಿ ಎಂದೂ ಓ ಹೇಳುತ್ತಾರಂತೆ ಬನ್ನಾರ್ ಅವರು......
ನಾರಾಯಣಾ ಓ ನಾರಾಯಣ ಬನ್ನಾರರು......
ನೀವು ಈ ಕಡೆಯಿಂದ ಹೋಗಿಬಿಡಿ ಮಕ್ಕಳೇ ಓ
ನಾನು ಆ ಕಡೆಯಿಂದ ಬರುವೆನೆಂದರು......
ಅಜ್ಜನವರು ಹೋದರು ಓ ಅಜ್ಜನವರ ಅರಮನೆಗೆ ಓ......
ಮೊಮ್ಮಕ್ಕಳು ಬಂದರು ಓ ಉರ್ಕಿದೊಟ್ಟುವಿನ ಅರಮನೆಗೆ......
ಉರ್ಕಿದೊಟ್ಟುವಿನ ಅರಮನೆಗೆ ಬಂದರಂತೆ ಓ ಗುರು ಮಾರ್ಲರು ಜಾರು ಮಾರ್ಲರು ಓ......
ಬಂದು ಕಲ್ಲಕಲೆಂಬಿಯಲ್ಲಿ ಓ ಹೂವಿನ ಗಂಟೂ ಓ ಜವುಳಿಯ ಗಂಟೂ ಇಟ್ಟರಂತೆ...
ನನ್ನ ಮದುಮಗಳು ಓ ನಿನ್ನ ನಾದಿನಿಗೆ......
ಮಾಡದ ಬಯಕೆ (ಔತಣ) ಮಾಡಬೇಕು ಓ......
ಸೇರದ(ಷ್ಟು) ಸಭೆ ಸೇರಿಸಬೇಕು ಚದುರದ ಸಭೆ ಚದುರಬೇಕೆಂದು......
ಹೇಳುತ್ತಾರೆ ಓ ಗುರು ಮಾರ್ಲರು......
ನಾರಾಯಣಾ ನಾರಾಯಣಾ......
ಇಂದಾದರೋ ಇಂದು ದೂರದವರಿಗೆ ಮನೆಗೆ ಹೋಗಿ ಹೇಳಿಕೆ ಕೊಡಬೇಕು ಇಂದು ಸಮೀಪದವರಿಗೆ ಓಲೆ ಕಳುಹಿಸಬೇಕು ದೂರಕ್ಕೆ ನಗಾರಿ ಹೊಡೆಸಬೇಕೆಂದು ಓ ಹೇಳುತ್ತಾರಂತೆ ಜಾರು ಮಾರ್ಲರು......
ಇಂದಾದರೋ ಇಂದು ಅರುವತ್ತು ಮುಡಿ ಬಾಕಿಮಾರುಗದ್ದೆಯನ್ನು ಕೆತ್ತಿಸಿದರಂತೆ ಮೂವತ್ತು ಮುಡಿ
ಬೆಟ್ಟುಗದ್ದೆಯನ್ನು ಶುಚಿಗೊಳಿಸಿದರಂತೆ ಇಂದು ವೀಳ್ಯದಲ್ಲಿ ಹನಿ (ತಂಪು) ಚಪ್ಪರ ಓ ಹಾಕಿಸಬೇಕು ಓ......

ಕಬ್ಬು ಕಡಿಸಬೇಕು ಕಬ್ಬಿನ ಕಂಬ ಹಾಕಿಸಬೇಕು......
ವೀಳ್ಯದೆಲೆ ಕೊಯ್ದು ಹನಿ (ತಂಪು) ಚಪ್ಪರ ಓ ಹಿಂಗಾರದಲ್ಲಿ ತಡಿಕೆ ಕಟ್ಟಬೇಕು...
ಹಿಂಗಾರದಲ್ಲಿ ತಡಿಕೆ ಕಟ್ಟಿ ಲಾವಂಚದಲ್ಲಿ ಕಟ್ಟಿಹಾಕಬೇಕು......
ಅಚ್ಚುಬೆಲ್ಲದಲ್ಲಿ ಒಲೆ ಓ ಓಲೆಬೆಲ್ಲದಲ್ಲಿ ಓ ಒತ್ತು(ಒಲೆ) ಕೊಡಿಸಿ
ಮೇಲೆ ಮೇಲ್ಕೊಡಿ ಹಾಕಿ ಓ ನಡೆದಾಡುವಲ್ಲಿ ನಡೆಬಟ್ಟೆ ಹಾಕಬೇಕೆಂದರು......
ಓ ಕೆಲೆಂಜ ಪರಾರಿ ಓ ಜಾರು ಮಾರ್ಲೆರು......ಓ......
ನಾರಾಯಣಾ ಓ ನಾರಾಯಣಾ ಓ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಸೇರದ ಸಭೆ ಸೇರಿದೆಯಂತೆ ಓ ಚದುರದ ಸಭೆ ಚದುರಿದಂತೆ......
ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರರಂತೆ ಓ......
ಬನ್ನಾರರ ಚಾವಟಿಯಿಂದಾ ಓ ನೆಂಟರ ದಿಬ್ಬಣ ಓ ಬರುವ ಅಂದ ಓ ನೋಡಿದ್ದಾರೆ ಗುರು ಮಾರ್ಲೆರು
ಬುಡು ಉಂಟು ಗುರ್ಗಲಾಡಿ ಬಾಳೆ ಹಾಕುವ ಬಾಕಿತಿಮಾರಲ್ಲಿ......ಓ......
ತುದಿ ಉಂಟು ಓ ಉರ್ಕಿದೊಟ್ಟುವಿನ ಓ ಗದ್ದೆಯ ಬದುವಿನಲ್ಲಿ......
ನಾರಾಯಣಾ ಓ ನಾರಾಯಣ......
ನಾರಾಯಣಾ ಓ ನಾರಾಯಣ......
ಬಂದ ನೆಂಟರನ್ನೂ ಓ ಹಾಕಿರುವ ಚಪ್ಪರದೊಳಗೆ ಸ್ವಾಗತಿಸಿದರಂತೆ ಓ ಕಲೆಂಜ ಪರಾರೀ ಓ ಜಾರು ಮಾರ್ಲೆರು ಓ......
ಬಂದ ನೆಂಟರಿಗೆ ನೀರು ಕೊಟ್ಟರು......
ಬೆಲ್ಲನೀರು ಕೊಟ್ಟರಂತೆ ಓ ವೀಳ್ಯದೆಲೆ ತಟ್ಟೆ ಕೊಡಿಸಿದರಂತೆ......
ಅಡಕೆ ತಿಂದು ಓ ಅಡಕೆಯ ಭೋಗ (ಅಮಲು) ಹೋಗುವಾಗ ಅಲ್ಲಿ......ಓ......
ವೇಳೆ ಬರುತ್ತದ ಓ ಕಾಲ ತಡವಾಗುತ್ತದೆ......
ಉದಯವಾದ ಸ್ವಾಮಿ ಓ ಏಳು ಮಾರು ಮೇಲೆ ಬಂದನಂತೆ......
ನಾರಾಯಣಾ ಓ ನಾರಾಯಣ ಅಜ್ಜನವರೇ......ಓ......
ಏನು ಮಗಾ ಓ ಗುರು ಮಾರ್ಲೆ......
ವೇಳೆ ಬಂತು ಓ ಕಾಲ ತಡವಾಯಿತು ಮಗಾ......
ಮಾತುಕತೆ ಓ ಮತ್ತೆ ಮಾಡುವ ಓ......
ನಮ್ಮ ಕೆಲಸ ಓ ಮುಂದೆ ಹೋಗಲಿ ಓ ಎಂದರು......
ಮನೆಗೆ ಹೋಗಿ ಓ ಹೇಳಿಕೆ ಕೊಟ್ಟಲ್ಲಿ......ಓ......
ಅಷ್ಟು ಹೊತ್ತಿಗೆ ಓ ನಾಲ್ಕು ಮನೆಯ ಹೆಣ್ಣುಗಳು ಓ ಕಾಣುವುದಿಲ್ಲಪ್ಪಾ......
ನಾರಾಯಣ ಓ ಅಜ್ಜನವರೇ ಓ ನಮ್ಮ
ನಾಲ್ಕು ಮನೆಯ ಹೆಣ್ಣುಗಳು ಓ ಬರಲಿಲ್ಲ ಎಂದು ಗುರು ಮಾರ್ಲೆ ಹೇಳುತ್ತಾರಂತೆ...
ಯಾಕಾಗಿ ಬರಲಿಲ್ಲಾ ಓ ಯಾಕಾಗಿ ಹೋಗಲಿಲ್ಲಾ

ಎಂದು ಓ ಹೇಳುತ್ತಾರೆ ಅಜ್ಜನವರು......
ಅಜ್ಜನವರು ಹೇಳುವಾಗ ಓ ಒಂದು ಓಲೆ (ಪತ್ರ) ಓ ಬಿಡು (ಕಳುಹಿಸು)ತ್ತಾರಂತೆ...
ಓ......
ಒಂದು ಆಳು ಓ ಕಳುಹಿಸುವಾಗ......
ಕೆಳಗಿನ ಬದಿಯ ಪಾಲವರ ಓ ಹೆಣ್ಣುಗಳು ಓ
ಮೇಲಿನ ಬದಿಯ ಪಾಲವರ ಓ ಹೆಣ್ಣುಗಳು ಹೇಳುತ್ತಾರಂತೆ......
ನಾರಾಯಣ ಓ ಆಳೇ ನಾವು ಬರುವುದಿಲ್ಲ......
ಸೊನ್ನೆ ಗರ್ಭಿಣಿ ಅಲ್ಲಪ್ಪಾ......
ಓ ಎಸರುತಟ್ಟೆ, ಕೈತಟ್ಟೆ ಮೊದಲಾದವಜುಗಳನ್ನು ಬಟ್ಟೆಯೊಳಗಡೆ ಅಡಗಿಸಿಟ್ಟಿದ್ದಾಳೆ...
ಓ ಸೀಮಂತದ ಸೀರೆ ಉಡುವ ಸಲುವಾಗಿ ಓ......
ಸನ್ಮಾನ, ಊಟೋಪಚಾರಗಳನ್ನು ತಿನ್ನುವ ಸಲುವಾಗಿ ಓ......
ನಾವು ಬಾರೆವು ಎಂದರು ಓ ಹೆಣ್ಣುಗಳು......ಓ......
ಹೆಣ್ಣುಗಳು ಹೇಳುವುದನ್ನು ಕೇಳಿದನು ಆಳು ಓ......
ಹೋದ ಹಾಗೆ ಹಿಂದಿರುಗಿ ಬಂದ......ಓ ಸೊನ್ನೆಯಲ್ಲಿ ಹೇಳುತ್ತಾನೆ......
ಅಷ್ಟು ಹೊತ್ತಿಗೆ ಓ ಹೋಗುತ್ತಾರಪ್ಪಾ......ಓ......
ಕೆಲೆಂಜ ಪರಾರಿ ಓ ಜಾರು ಮಾರ್ಲರು......
ನಾರಾಯಣ ಹೆಣ್ಣುಗಳೇ ಓ ನಾರಾಯಣ ಹೆಣ್ಣುಗಳೇ......
ನೀವು ನಾಲ್ಕು ಮನೆಯ ಹೆಣ್ಣುಗಳು ನೀವು ಯಾಕಾಗಿ ಬರುವುದಿಲ್ಲವೆಂದು
ಓ ಕೇಳಲು ಹೇಳುತ್ತಾರೆ......
ಇಷ್ಟೊತ್ತಿಗಾಗಲೇ ಓ ನಮ್ಮ ಮನೆಯ ಗಂಡುಸರು ಓ ಬೈಲುಗದ್ದೆಯ ಮೂಲಕ
ಹೋದವರು ಓ ಮನೆಗೆ ಬಂದಿದ್ದಾರೆ......
ಅವರಿಗೆ ಹಾಲು ಕೊಡಲಿಲ್ಲ ಓ ತೊಟ್ಟಿಲ ಮಗುವಿಗೆ ಮೊಲೆಹಾಲು ಕುಡಿಸಲಿಲ್ಲ......
ಓ ಕೆಲೆಂಜ ಪರಾರೀ ಜಾರು ಮಾರ್ಲರೇ ಎಂದು ಹೇಳುತ್ತಾರೆ ಓ ನಾಲ್ಕು ಮನೆಯ
ಹೆಣ್ಣುಗಳೂ......
ನಾಲ್ಕು ಮನೆಯ ಓ ಹೆಣ್ಣುಗಳು ಹೇಳಿದರಂತೆ ಓ ಹೊರಟು......
ನಾಲ್ಕು ಮನೆಯ ಹೆಣ್ಣುಗಳೂ ಓ ಉರ್ಕಿದೊಟ್ಟುವಿನ ಅರಮನೆಗೆ ಬಂದರಂತೆ....
ನಾರಾಯಣಾ ಓ ನಾರಾಯಣ ಹೆಣ್ಣುಗಳೇ......
ವೇಳೆ ಬಂತು ಓ ಕಾಲ ತಡವಾಯಿತು......
ಗರ್ಭಿಣಿಗೆ ಓ ಹೂಸೀರೆ ಕೊಡುವ ಓ ಎಂದರಂತೆ ಓ ಅಜ್ಜನವರು ಅಜ್ಜನವರು ಓ...
ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರರು ಅವರು......
ಅಷ್ಟು ಹೇಳುವುದನ್ನು ಕೇಳಿದರು ಓ ಅಜ್ಜನವರು......
ಹೆಣ್ಣುಗಳನ್ನು ಕರೆಸಿದರು ಓ ಪೂರ್ವಕ್ಕೆ ಮುಖ ಹಾಕಿ ಓ ನಿಲ್ಲಿಸಿದರಂತೆ......
ಗರ್ಭಿಣಿಗೆ ಓ ಕೋಳಿ ನಿವಾಳಿಸಿ ಬಿಟ್ಟರಂತೆ ಓ ಕೋಳಿಯನ್ನು ಹಿಂದಕ್ಕೆ ಓ ಎಸೆದರು...

ನಾರಾಯಣಾ ಓ ನಾರಾಯಣ ಹೆಣ್ಣುಗಳೇ......
ಬಂಗಾರದ ಓ ಹರಿವಾಣದಲ್ಲಿ......
ಕಟ್ಟಿನ ಸೀರೆ ಓ ಗಂಟಿನ ರವಿಕೆ
ಚೆಂಡುಮಲ್ಲಿಗೆ ಹೂ ಓ ಸಣ್ಣ ಕಂಗಿನ ಹಾಳೆಹಿಂಗಾರ ಇಟ್ಟು
ಓ ಸೊನ್ನೆಗೆ ಹೂಸೀರೆ ಕೊಡಿಸಿದರು......
ನಾರಾಯಣಾ ಓ ನಾರಾಯಣಾ ಓ......
ಗರ್ಭಿಣಿ ಆಭರಣಗಳನ್ನು ತೊಡಿಸಿದರು......
ಮದುಮಗಳ ಅಲಂಕಾರ ಮಾಡಿಸಿ ಓ
ಔತಣ ಹಾಕಿಸಿ ಓ ಬಾಯಿಯ (ತಿನ್ನುವ) ಆಸೆಯನ್ನು ಕಳೆದಿದ್ದಾರೆ......
ಉರ್ಕಿದೊಟ್ಟಿನ ಅರಮನೆಯಲ್ಲಿ......
ನಾರಾಯಣಾ ಓ ನಾರಾಯಣಾ......
ಗರ್ಭಿಣಿ ಹೆಂಗುಸಿಗೆ ಬಯಕೆ ಹಾಕಿ ಆದ ಗಳಿಗೆಯಲ್ಲೇ ಓ......
ನೆರೆದ ಸಭೆಗೆ ನೀರು ಕೊಟ್ಟರು......
ನಾರಾಯಣಾ ಓ ನಾರಾಯಣ ಭಾವನವರೇ......ಓ......
ಮೇಲಂತಸ್ತಿನ ಏಳು ಉಪ್ಪರಿಗೆಗೆ ಸೊನ್ನೆ ಹೋದಳು......
ನಾರಾಯಣಾ ಓ ನಾರಾಯಣ ಭಾವನವರೇ ಓ......
ಒಂದು ಬಾರಿಗೆ ಓ ಒಂದು ಉತ್ತರ (ಪ್ರಶ್ನೆ) ಓ ನಾನು ಕೇಳುತ್ತೇನೆ ನಿಮ್ಮಲ್ಲಿ....ಓ.....
ನನ್ನ ಅಜ್ಜನವರು ಓ ನನ್ನ ಭಾವನವರಲ್ಲಿ......
ನಾರಾಯಣಾ ಓ ನಾರಾಯಣ ಮಗ ಸೊನ್ನೆ......ಓ......
ಏನು ಮಗ ನಿನ್ನ ಉತ್ತರ (ಪ್ರಶ್ನೆ) ಎಂದು ಓ ಅಜ್ಜನವರು ಬನ್ನಾರರು ಹಾಗು ಭಾವ ಜಾರು ಮಾರ್ಲರು ಓ ಕೇಳುತ್ತಾರಂತೆ......
ನಾರಾಯಣ ಭಾವನವರೇ ಓ ನಾರಾಯಣ ಅಜ್ಜನವರೇ......ಓ......
ಹತ್ತು ಬೆರಳು ಜೋಡಿಸಿ ನಿಮಗೆ ಓ ಸೋಲಿಗೆ ಶರಣು ಓ ಸಲ್ಲಿಸುತ್ತೇನೆ (ಶರಣಾಗುವೆ)...
ಒಂದು ಬಾರಿಗೆ ಓ ಉಟ್ಟಿರುವ ಪಟ್ಟೆಯನ್ನು ಬಿಚ್ಚುತ್ತೇನೆ ಅಜ್ಜನವರೇ ಎಂದು ಸೊನ್ನೆ ಹೇಳುತ್ತಾಳಂತೆ......
ನಾರಾಯಣ ಮಗ ಸೊನ್ನೆ ಕೇಳಿದ್ದೀಯೇ ಓ......
ಗಂಡನ ಮನೆಯಲ್ಲಿ ತೆಗೆದಿರುವ ಪಟ್ಟೆಯನ್ನು ಬಯಕೆ ಹಾಕೀ ಓ ಹೊರಡುವಾಗ ಉಟ್ಟ ಪಟ್ಟೆಯನ್ನು ಓ ಕುಟುಂಬದ ಮನೆಯಲ್ಲಿ ಓ ಬಿಚ್ಚುವುದು ಮಗಾ......ಓ......
ಅದಕ್ಕೆ ಮೊದಲು ಗಂಡನ ಮನೆಯಲ್ಲಿ ಬಿಚ್ಚಬಾರದು ಮಗಾ ಎಂದು ಹೇಳುತ್ತಾರೆ ಬನ್ನಾರರು......
ನಾರಾಯಣ ಅಜ್ಜನವರೇ ಓ ನಾರಾಯಣ ಭಾವನವರೇ......
ದಮ್ಮಯ್ಯ ಭಾವನವರೇ ದಕ್ಕಯ್ಯ ಭಾವನವರೇ......
ಒಂದು ಬಾರಿ ಸೀರೆ ಬದಲಿಸುತ್ತೇನೆ ನಾನು......

ಒಂದು ಬಾರಿಗೆ ಹರಕುಬಟ್ಟೇ ಉಡುತ್ತೇನೆ ನಾನು ಭಾವನವರೇ ಕೇಳಿದಿರೇ......
ಒಂದು ಪಂಕ್ತಿಗೆ ಓ ನಾನು ತುಪ್ಪ ಬಡಿಸುತ್ತೇನೆಂದು ಓ
ಹೇಳಿದಳು ಸೊನ್ನೆ......
ಒಂದು ಬಾರಿಗೆ ನನ್ನ ನಾಲಿಗೆಯ ವಾಗ್ದಾನವನ್ನು ಓ ಉಳಿಸಿ ಭಾವನವರೇ......
ಎಂದ ಹೇಳಿ ಸೋಲಿಗೆ ಸೊಲ್ಮೆ ಸಲ್ಲಿಸುತ್ತಾಳೆ......
ನಾರಾಯಣ ಅಜ್ಜನವರೇ ನಾರಾಯಣ ಅಜ್ಜನವರೇ......
ಗರ್ಭಿಣಿಯ ಓ ಬಾಯಿಯ ವಾಕ್ಯವನ್ನು ನಾವು ತಿರಸ್ಕರಿಸುವುದು ಬೇಡ ಅಜ್ಜನವರೇ...
ಎಂದು ಈಗ ಓ ಹೇಳಿದರಪ್ಪಾ ಓ ಕೆಲೆಂಜ ಪರಾರಿ ಜಾರು ಮಾರ್ಲರು......
ಅಷ್ಟು ಹೇಳುವುದನ್ನು ಕೇಳಿ ಹೋದಳಪ್ಪಾ ಓ ಮೇಲು ಮಾಳಿಗೆಯಲ್ಲಿ ಪಟ್ಟೆಸೀರೆಯನ್ನು ಓ ಬಿಚ್ಚಿದಳು ಸೊನ್ನೆ......
ಒಂದು ಬಾರಿಗೆ ತುಂಡು ಬಟ್ಟೇ ಓ ಉಟ್ಟಳು ಸೊನ್ನೆ......
ಬಂಗಾರದ ಚಮಚ ಹಿಡಿದು ಓ ಬೆಳ್ಳಿಯ ಓ ತುಪ್ಪದ ಪಾತ್ರೆ ಹಿಡಿದುಕೊಂಡು....
ಒಂದು ಬಾರಿಗೆ ನೀರು ಕೊಟ್ಟು ಓ ಎಲೆಹಾಕಿದರಂತೆ......
ಎಲೆಯ ತುದಿಗೆ ಉಪ್ಪಿನಕಾಯಿ ಬಡಿಸಿದರಂತೆ......
ತೆಂಗಿನಕಾಯಿ ಬೆರೆಸಿ ಸಾವಿರ ಬಗೆ ಪದಾರ್ಥ ಬಡಿಸಿದರೂ, ಮೆಣಸು ಸೇರಿಸಿ ಮುನ್ನೂರು ಬಗೆ ಪದಾರ್ಥ ಬಡಿಸುವಾಗ......
ನಡೆದಿರುವ ಸಭೆಗೆ ಒಂದೊಂದೇ ಚಮಚ ತುಪ್ಪ ಬಡಿಸುತ್ತಾ ಸೊನ್ನೆ ಹೋಗುವಾಗ....
ಮೂಗಿನ ಮೇಲೆ ಕೈಯಿಡುತ್ತಾರೆ ಓ ಸೇರಿದ ಮಂದೀ......
ಒಂದು ಸಾಲಿನಿಂದ ಇನ್ನೊಂದು ಸಾಲಿಗೆ ತುಪ್ಪ ಬಡಿಸುತ್ತಾ ಸೊನ್ನೆ ಹೋಗುವಾಗ...
ಸೊನ್ನೆ ಉರ್ಕಿದೊಟ್ಟಿನ ಅರಮನೆಯಲ್ಲಿ ಮದುಮಗಳಾದದ್ದು ಅಲ್ಲಪ್ಪಾ......ಓ......
ಕಾಡಿಗೆ ಹೋಗಿ ದೊಡ್ಡ ಉಣ್ಣಿ ತಂದು ಹಿಚುಕಿಕೊಂಡದ್ದು ಸೊನ್ನೆ......
ಉರ್ಕಿದೊಟ್ಟಿನ ಅರಮನೆಯಲ್ಲಿ ಸೊನ್ನೆ ಓ ಬಸುರಿ ಅಲ್ಲಪ್ಪಾ ಅವಳು......
ಓ ಔತಣ ತಿನ್ನಲು ಆಸೆ ಆಗಿ ಓ ಎಸರುತಟ್ಟೆ ಕೈತಟ್ಟೆಗಳನ್ನು ಹೊಟ್ಟೆಯ ಭಾಗದಲ್ಲಿ ಕಟ್ಟಿಕೊಂಡುದರಿಂದ ಹೊಟ್ಟೆ ದೊಡ್ಡದಾಗಿ ಕಾಣುತ್ತದೆಂದು ಓ ಹೇಳಿದುದು ಓ ಎನ್ನುತ್ತಾರೆ ಸೊನ್ನೆ......
ಸೊನ್ನೆಗೆ ಹೇಳಿದ ಓ ಮಾತು ಇದು ಓ......
ನಾರಾಯಣ ಹೆಣ್ಣುಗಳೇ ಓ ಎಸರುತಟ್ಟೆ ಓ ಇಟ್ಟುಕೊಂಡ ಲೆಕ್ಕದಲ್ಲಿ ನೀವು
ಎರಡು ಚಮಚ ತುಪ್ಪ ಓ ಜಾಸ್ತಿ ತಿನ್ನೀ ಎಂದು ಸೊನ್ನೆ ಬಡಿಸುತ್ತಾಳೆ......
ನಾರಾಯಣಾ ಓ ನಾರಾಯಣ ಹೆಣ್ಣುಗಳೇ......ಓ......
ಎರಡು ಚಮಚ ತುಪ್ಪ ಹೆಚ್ಚು ತಿನ್ನಿರಿ......
ಒಂದು ಚಮಚ ಸೊನ್ನೆ ಬಸುರಿ ಆದ ಲೆಕ್ಕದ ಊಟದ್ದು......ಓ......
ಇನ್ನೊಂದು ಚಮಚ ತುಪ್ಪ ಓ ನಾರಾಯಣ ಹೆಣ್ಣುಗಳೇ ಓ......
ಎಸರುತಟ್ಟೆ ಕೈತಟ್ಟೆ ಹೊಟ್ಟೆಯಲ್ಲಿ ಅಡಗಿಸಿಟ್ಟ ಲೆಕ್ಕದಲ್ಲಿ ಜಾಸ್ತಿ ತಿನ್ನಿರೀ ಓ......

ಎಂದು ಹೇಳಿ ಓ ಸೊನ್ನೆ ಹೇಳಿ......
ಹೀಯಾಳಿಕೆ ಓ ನಾಲ್ಕು ಮನೆಯ ಹೆಣ್ಣುಗಳಿಗೆ ಕೊಡುತ್ತಾಳೆ ಸೊನ್ನೆ......
ನಾರಾಯಣಾ ಓ ನಾರಾಯಣ ಹೆಣ್ಣುಗಳೇ......ಓ......
ಉರ್ಕಿದೊಟ್ಟುವಿನ ಅರಮನೆಯ ಸೊನ್ನೆ ಗೋಣಿ ಗೊಡ್ಡು ಬಂಜೆ ಬರಡು ಓ....
ಹಾವುರಾಣಿ ಹರಿಯಲಿಲ್ಲ ಓತಿ ಓಡಲಿಲ್ಲಾ
ಆ ರೀತಿಯ ಉತ್ತರ ನೀವು ನೀಡಿದ್ದೀರಿ ಹೆಣ್ಣುಗಳೇ ಓ......
ಅಂತಹ ಗೋಣಿಗೊಡ್ಡು ಓ ಬಂಜೆ ಬರಡು ಓ ಉರ್ಕಿದೊಟ್ಟುವಿನ ಸೊನ್ನೆ ಹೆಣ್ಣುಗಳೇ...
ಅಷ್ಟು ಹೇಳುವುದನ್ನು ಕೇಳಿದರು ಹೆಣ್ಣುಗಳು......
ನೆರೆದ ಸಭೆಯ ಜೊತೆಗೆ ಊಟೋಪಚಾರ ಮಾಡಿದರು......ಓ......
ಊಟೋಪಚಾರ ಮಾಡಿದವರು ಓ ಎಲೆಅಡಿಕೆ ತಿಂದರು ಓ ಅಡಕೆಯ ಅಮಲು ಹೋದರು......
ಅಷ್ಟು ಹೊತ್ತಿಗೆ ಓ ಹೋದಳು ಸೊನ್ನೆ......
ಓ ತುಪ್ಪದ ಪಾತ್ರೆಯನ್ನು ಓ ಮದುಮಗನಲ್ಲಿ ಕೊಟ್ಟಳು......
ನಾರಾಯಣ ಭಾವನವರೇ ಓ ನಾರಾಯಣ ಭಾವನವರೇ......ಓ......
ಬಿಚ್ಚಿಟ್ಟಿರುವ ಪಟ್ಟೆಯನ್ನು ಓ ಉಡುತ್ತೇನೆಂದಳು ಓ......
ಪಟ್ಟೆ ಉಟ್ಟಳು ಓ ಶೃಂಗಾರ ಆದಳು......
ಸೇರಿರುವ ನೆಂಟರ ಎದುರಲ್ಲಿ ಓ......
ಅಜ್ಜನವರು ತಂದಿರುವ ಪಲ್ಲಕ್ಕಿಯಲ್ಲಿ ಓ......
ದೊಡ್ಡ ಅಂಗಳದಲ್ಲಿ ಪಲ್ಲಕ್ಕಿ ಸಿಂಗರಿಸಿ ಇರಿಸಿದ್ದಾರೆ......ಓ......
ಉರ್ಕಿದೊಟ್ಟುವಿನ ಮದುಮಗ ಗುರು ಮಾರ್ಲ ಓ......
ಅಡ್ಡಕ್ಕೆ ಎತ್ತಿದರು ಓ ಗರ್ಭಿಣಿಯನ್ನು ಓ ದಂಡಿಗೆಯಲ್ಲಿ ಓ ಕೈಹಿಡಿದ ಮದುಮಗನನ್ನು ದಂಡಿಗೆಯಲ್ಲಿ ಕುಳ್ಳಿರಿಸಿದರು......
ದಂಡಿಗೆಯ ಕೊಂಬಿಗೆ ಕೈಕೊಟ್ಟರು......ಓ......
ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ ಏರಿಸಿದರು ದಂಡಿಗೆ......ಓ......
ಇಲ್ಲಿ ಏರಿದ ಪಲ್ಲಕ್ಕಿಯನ್ನು ಓ ಅಜ್ಜನವರೇ......
ದಾರಿ ಮಧ್ಯೆ ನಿಲ್ಲಿಸಬೇಡಿ ಅಜ್ಜನವರೇ ಓ......
ಗುರ್ಗಲಾಡಿಯ ಓ ನಿಮ್ಮ ಚಾವಡಿಗೇ ನೇರವಾಗಿ ಹೋಗಲಿ ಎಂದರಲ್ಲಾ ಗುರು ಮಾರ್ಲರು
ನಾರಾಯಣಾ ಓ ನಾರಾಯಣ......
ಹೊರಟಿತಪ್ಪಾ ದಂಡಿಗೆ......
ಉರ್ಕಿದೊಟ್ಟಿನಾ ಅರಮನೆ ಇಳಿದು......
ಗುರ್ಗಲಾಡಿಯ ಚಂದು ಪೆರ್ಗಡೆ ಬನ್ನಾರರ ಬೈಲುಗದ್ದೆಯ ಮೂಲಕ ಓ......
ಹೂಹಾಕುವ ಪುದ್ದಾರ ಗದ್ದೆಯ ಬದುವಿನ ಮೂಲಕ ಓ ಹೋಗುವಾಗ ಹೇಳುತ್ತಾಳೆ

ಸೊನ್ನೆ ಓ......
ಉರ್ಕಿದೊಟ್ಟಿನ ಸೊನ್ನೆ ಮದುಮಗಳು ಹೇಳುತ್ತಾಳೆ......
ನಾರಾಯಣಾ ಓ ನಾರಾಯಣ......ಓ ನಾರಾಯಣ......
ಓ ನಾರಾಯಣಾ ಓ ನಾರಾಯಣಾ......ಓ
ಅಂದಿನ ಓ ಕಾಲದಲ್ಲಿ......ಓ......
ನನ್ನ ತಂಗಿ ಓ ಗಿಂಡೆಯನ್ನು ಓ......
ಇದೊಂದು ತೆಂಗಿನ ಮರದ ಓ ಬುಡದಲ್ಲಿ ನಿಂತು ಓ......
ಮಾಯಮಾಡಿ ನಾನು ಓ......
ಒಂದಲ್ಲ ಒಂದು ದಿನಕ್ಕೆ ಗಿಂಡೆ ಓ......
ಇದ್ದರೆ ಓ ಒಂದು ಬೀಡು ಓ ಸತ್ತರೆ ಒಂದು ಕಾಷ್ಠ ನಮಗೆ......ಓ......
ಸೇರಿದರೆ ಒಂದು ಕೂಟ ಓ ಮಾಯವಾದರೆ ಒಂದು ಮಾಯ ಓ......
ಒಂದಲ್ಲ ಒಂದು ದಿನಕ್ಕೆ ಗಿಂಡೆ ಓ......
ಒಂದು ವರ್ಷದಿಂದ ಓ ಒಂದು ವರ್ಷಕ್ಕೆ ಓ
ನಿನ್ನಲ್ಲಿ ನಾನೇ ಓ ಉತ್ತರ ಕೇಳುತ್ತೇನೆ......
ಅಂದಿಗೆ ನಿನಗೆ ಓ ನಿನ್ನ ಅಕ್ಕನವರು ಓ ಸೊನ್ನೆ ಉತ್ತರ ಓ ನಿನಗೆ ಕೊಡುತ್ತೇನೆ ಎಂದು ಹೇಳಿದಳು ಸೊನ್ನೆ......
ಸೊನ್ನೆ ಹೇಳಿದಳು ಓ ಅರಮನೆಗೆ ಹೋಗಿ......ಓ......
ಬೆಳಗ್ಗೆ ಹೋದ ಪಲ್ಲಕ್ಕಿ ಓ......
ಅಂದಿನ ದಿನ ಹೋಗಿದೆ ಸೊನ್ನೆಗೆ ಓ......
ಮರುದಿನ ಓ ಬಂದಿದೆ ಸೊನ್ನೆಗೆ......
ನಾರಾಯಣಾ ಓ ನಾರಾಯಣ......ಓ ನಾರಾಯಣಾ......ಓ......
ಯಾರು ಗುರುಮಾರ್ಲ ಓ ಗುರುಮಾರ್ಲ ಓ ಕೇಳಿದ್ದೀಯೇ ನೀನೂ......
ನಿನ್ನೆಗೆ ನಾವು ಓ ನಾದಿನಿಯನ್ನು ಓ ನಿನ್ನ ಮದುಮಗಳನ್ನು (ಮಡದಿಯನ್ನು) ಓ ಔತಣ
ಹಾಕಿಸಿ ಓ ಬಾಯಿಯ ಆಸೆ ಕಳೆದು ಓ ಗುರ್ಗಲಾಡಿಯ ಅರಮನೆಗೆ ಓ ನಿನ್ನೆಗೆ ಕಳುಹಿಸಿದ್ದೇವೆ......
ಇಂದು ಹೋದ ಓ ಪಲ್ಲಕ್ಕಿ ಹಿಡಿದುಕೊಂಡು ಓ......
ನಾವು ಕರೆದುಕೊಂಡು ಓ ಬರೋಣ ಎಂದರು ಓ ಕೆಲೆಂಜ ಪರಾರಿ ಜಾರುಮಾರ್ಲರು...
ಅಷ್ಟು ಹೇಳುವುದನ್ನು ಓ ಕೇಳಿದರು ಗುರುಮಾರ್ಲರು......
ಕಿರಿ ಅಟ್ಟಕ್ಕೆ ಜನ ಕಳುಹಿಸಿದರಂತೆ ಇಂದು ಕಿರು ಅಟ್ಟದಿಂದ ದಂಡಿಗೆ ತೆಗೆಯಿಸಿ ಇಂದು..
ದಂಡಿಗೆಯನ್ನು ಶೃಂಗಾರ ಓ ದಂಡಿಗೆ ಹೊರುವ ಬೋವಿಗಳಲ್ಲಿ ಓ ಮಾಡಿಸಿದ್ದಾರಂತೆ ಓ ಗುರುಮಾರ್ಲರು......
ನಾರಾಯಣಾ......ನಾರಾಯಣಾ......ನಾರಾಯಣಾ ಓ ನಾರಾಯಣ......

ನಾರಾಯಣ ನಾರಾಯಣ ಗುರುಮಾರ್ಲ......
ಅಷ್ಟು ಹೇಳುವುದನ್ನು ಕೇಳಿದರಂತೆ ಓ......
ಅಣ್ಣ ಹಾಗು ತಮ್ಮ ಪಲ್ಲಕ್ಕಿ ಹಿಡಿಸಿಕೊಂಡು
ಉರ್ಕಿದೊಟ್ಟಿನ ಅರಮನೆ ಓ ಇಳಿದು......
ಗುರ್ಗಲಾಡಿಯ ಅರಮನೆಗೆ ಓ ಹೋದರಂತೆ......
ಹೋದವರನ್ನು ನೋಡಿದರು ಅಜ್ಜನವರು ಓ......
ಸೊನ್ನೆ ಮದುಮಗಳು ನೋಡಿ ಹೇಳುತ್ತಾಳೆ......
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ......
ನಿಮ್ಮ ಮೊಮ್ಮಗ ಓ ನನ್ನ ಗಂಡ ಹಾಗು ನನ್ನ ಭಾವನವರು ಬಂದರು......
ಹೋದರು ಎಂದಳು ಪಿಂಗಾಣಿಯಲ್ಲಿ ಹಾಲು ಓ ಗಿಂಡಿಯಲ್ಲಿ ನೀರು ಕೊಟ್ಟಳಂತೆ...
ಡಿಯ ನೀರು ತೆಗೆದು ಆಚೆಗಿರಿಸಿದರು ಓ ಪಿಂಗಾಣಿಯ ಹಾಲು ಕುಡಿದರು......
ನಾರಾಯಣಾ ಓ ನಾರಾಯಣ ಸೊನ್ನೆ ಮದುಮಗಳೇ......
ಅಲಂಕಾರ ಓ ಆಗು ಮಗಾ......ಓ......
ನಾವು ಕರೆದುಕೊಂಡು ಹೋಗಲು ಬಂದದ್ದೆಂದರು ಓ ಜಾರು ಮಾರ್ಲರು......
ಒಳಗಣ ಸೂತ್ರಕ್ಕೆ ಹೋದಳು ಮದುಮಗಳು......
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ ಓ ಕರೆದುಕೊಂಡು ಹೋಗಲು ಓ ಬಂದಿದ್ದಾರಂತೆ, ನಾನು ಹೊರಡುವೆನೆಂದಳು ಸೊನ್ನೆ ಓ......
ಅಲಂಕಾರ ಓ ಆದಳಂತೆ......
ಅವಳ ಅಡುಗೆಯನ್ನು ಓ ಅಜ್ಜನವರು ಓ ಹೆಣ್ಣುಗಳಲ್ಲಿ ಬಡಿಸಿದರು......
ನಾರಾಯಣ ಹೆಣ್ಣುಗಳೇ ಓ ಸೇವಕಿ ಹೆಣ್ಣುಗಳೇ......ಓ......
ಊಟೋಪಚಾರ ಮಾಡಿದರಂತೆ......
ಯಾರು ಹೆಣ್ಣುಗಳೇ ಓ ನಿಮ್ಮ ಅಕ್ಕನವರು ನನ್ನ ಮೊಮ್ಮಗಳು ಸೊನ್ನೆಯನ್ನು ಅಲಂಕಾರ ಮಾಡಿಬಿಡಿ ಮಗಾ......
ನಾರಾಯಣ ಅಕ್ಕನವರೇ ಓ ನಾರಾಯಣ ಅಕ್ಕನವರೇ......
ನಾವು ಅಲಂಕಾರ ಮಾಡುತ್ತೇವೆಂದು ಹೆಣ್ಣುಗಳು ಹೇಳುವಾಗ ಓ ಹೇಳುತ್ತಾರೆ......
ಆ ರೀತಿಯ ಋಣಭಾಗ್ಯ ನಾನು ಪಡೆಯಲಿಲ್ಲವಲ್ಲಾ ಓ ಹೆಣ್ಣುಗಳೇ ಕೇಳಿದಿರೆ......
ಅಕ್ಕನವರೇ ಓ ಅಕ್ಕನವರೇ ಎಂದು ಎಡಬಲ ಓ ಬರುವವಳನ್ನು ಓ ಮಾಯಮಾಡಿ ನಾನು ಬಿಟ್ಟೆ ಓ ಮರ ಇದು......
ಅಷ್ಟು ಹೇಳುವುದನ್ನು ಕೇಳಿದರು ಹೆಣ್ಣುಗಳು......ಓ ಅಕ್ಕನವರ ಅಂದ ಓ ಅಲಂಕಾರ ಓ ಆದ ಚಂದವನ್ನು ಓ ನೋಡುತ್ತಾರೆ ಹೆಣ್ಣುಗಳೂ......
ಹೆಣ್ಣುಗಳು ನೋಡಿ ಓ ಆಯಿತು ಮದುಮಗಾ ಸಿಂಗಾರಗೊಂಡೆನು ಓ ಹೊರಡೋಣ ಎಂದು ಸೊನ್ನೆ ಹೇಳುವಾಗ......
ನಾರಾಯಣ ಓ ನಾರಾಯಣ ಮಕ್ಕಳೇ......ಓ......

ಕೆಲೆಂಜ ಪರಾರಿ ಜಾರು ಮಾರ್ಲ ಓ ಉರ್ಕಿದೊಟ್ಟು ಗುರು ಮಾರ್ಲ......
ನನ್ನ ಮೊಮ್ಮಗಳು ಸೊನ್ನೆಯ ಓ ಹೆರಿಗೆ ಬಾಣಂತನ ನಾನೇ ಮಾಡಿಸುತ್ತೇನೆ ಓ...
ಎಂದು ಅಜ್ಜನವರು ಓ ಹೇಳುತ್ತಾರೆ......
ನಾರಾಯಣ ಓ ನಾರಾಯಣ ಅಜ್ಜನವರೇ ಓ......
ಸೊನ್ನೆಯನ್ನು ಓ ನಾವು ಹೆರಿಗೆ ಮಾಡಿಸುವುದು ಓ ನಾವು ಸಾಕುವುದು
ಎಂದು ಓ ಅಜ್ಜನವರಿಗೆ ಓ ಉತ್ತರ ಇನ್ನು ಓ ಮಕ್ಕಳು ಕೊಡುತ್ತಾರೆ......
ನಾರಾಯಣ ಓ ನಾರಾಯಣ ಓ......
ಯಾರೂ ಓ ನೀವು ಸಾಕುವುದು ನಾನು ಸಾಕುವುದು ಎಂದು ನಾವು ಯಾಕೆ ಹೊಯಿಕ್ಕೈ ಮಾಡಿಕೊಳ್ಳುವುದು......
ಸೊನ್ನೆ ಹೇಗೆ ಹೇಳಿದಳೋ ಹಾಗೆಂದರು ಅಜ್ಜನವರು......
ನಾರಾಯಣಾ ಓ ನಾರಾಯಣ ಅಜ್ಜನವರೇ......
ಗುರ್ಗಲಾಡಿ ಚಂದು ಪೆರ್ಗಡೆ ಬನ್ನಾರ್ ಅಜ್ಜನವರು ಓ......ಅಜ್ಜನವರೇ......
ನಾನು ಓ ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ ಓ......
ಉಳಿದರೂ ಅದುವೇ ಅರಮನೆ ಅಜ್ಜನವರೇ ಓ ಅಳಿದರೂ ಅದುವೇ ಅರಮನೆಯಲ್ಲಿ ಓ...
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ ಹೆರಿಗೆಯನ್ನು
ಓ ನಾನು ಮಾಡುತ್ತೇನೆಂದು ಓ ಸೊನ್ನೆ ಮದುಮಗಳೂ ಓ ಉತ್ತರ ಕೊಟ್ಟಳೂ......
ನಾರಾಯಣ ನಾರಾಯಣ ಮಗ ಸೊನ್ನೆ ಓ......
ಒಳ್ಳೆಯ ವರ ಓ ಒಳ್ಳೆಯ ಉತ್ತರ ನೀನು ಓ ಕೊಟ್ಟೆಯಲ್ಲ ಮಗ ನನಗೆ......
ಚಂದದಲ್ಲಿ ಹೆರಿಗೆಯಾಗಿ ಹೋಗು ಮಗ ಎಂದರು......
ಹರುಷದ ಮೆಯಿ ಓ ಮುತ್ತಿನ ನಗುವಿನಲ್ಲೇ ಓ ಸೊನ್ನೆಯನ್ನು
ದಂಡಿಗೆಯಲ್ಲಿ ಎತ್ತಿ ಕುಳ್ಳಿರಿಸಿದರು ಅಜ್ಜನವರು......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರು ಅವರು......
ಇಂದಾದರೋ ಇಂದು ಸೊನ್ನೆಯೂ ಗುರ ಮಾರ್ಲರೂ ಒಂದೇ ದಂಡಿಗೆಯಲ್ಲಿ ಬರುತ್ತಾರಂತೆ......
ಓ ಕಲೆಂಜ ಪರಾರಿ ಓ ಜಾರು ಮಾರ್ಲರು ಓ ಒಂದು ದಂಡಿಗೆಯಲ್ಲಿ......
ಗುರ್ಗಲಾಡಿ ಓ ಬೈಲುಗದ್ದೆಯ ಮೂಲಕ ಏರಿದ ದಂಡಿಗೆ......ಓ......
ಉರ್ಕಿದೊಟ್ಟುವಿನ ಬಾಳೆ ಹಾಕಿದ ಬಾಕಿತಿಮಾರು ಗದ್ದೆಯ ಬದುವಿನ ಮೂಲಕ ಸಾಗುತ್ತಿದೆಯಂತೆ ದಂಡಿಗೆ......
ದಂಡಿಗೆಯಿಂದ ಇಳಿದು ಓ ಅಂದಚಂದದಲ್ಲಿ ಓ......
ಸೊನ್ನೆ ಮದುಮಗಳೂ ಓ ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ ಇದ್ದಾಳೆ......
ನಾರಾಯಣಾ ಓ ನಾರಾಯಣಾ......
ನಾರಾಯಣಾ ಓ ನಾರಾಯಣ......
ಅಂದಿನ ದಿನ ಹೋಗಿದೆ ಸೊನ್ನೆಗೆ......

ಮರಳಿ ಮರುದಿನ ಓ ಬಂದಿದೆಯಪ್ಪಾ......
ಏಳು ತಿಂಗಳು ಕಳೆದಿದೆ ಸೊನ್ನೆಗೆ ಎಂಟು ತಿಂಗಳು ತುಂಬಿದೇ......
ಎಂಟನೆ ತಿಂಗಳು ಕಳೆದು ಹೆಂಗುಸಿಗೆ ಒಂಬತ್ತನೆ ತಿಂಗಳು ತುಂಬಿ ಬಂದಿದೆ......
ಒಂಬತ್ತು ತಿಂಗಳು ಓ ಕಳೆದು ಓ ಹತ್ತನೇ ತಿಂಗಳು ಆರಂಭವಾಗಿದೆ
ನಾರಾಯಣಾ ಓ ನಾರಾಯಣ ಓ......
ನಾರಾಯಣಾ ಓ ನಾರಾಯಣ ಮದುಮಗಾ ಓ......
ಎಂದು ಸೊನ್ನೆ ಓ ಮದುಮಗ(ಗಂಡ)ನನ್ನು ಕರೆಯುತ್ತಾಳೆ......
ಏನು ಸೊನ್ನೆ ಓ ಏನು ಕರೆಯುವುದೆಂದು ಓ ಕೇಳುತ್ತಾರೆ ಗುರು ಮಾರ್ಲರು ಓ...
ತಿಳಿಯಾದ ಮುಖದಲ್ಲಿ ಓ ಹುಳಿಯಾದ ನೋವು ಕಾಣಿಸಿಕೊಂಡಿದೆಯಂತೆ......
ಇಂದಾದರೋ ಇಂದು ಅಷ್ಟು ಹೊತ್ತಿಗೆ ಆಶ್ಚರ್ಯಚಕಿತರಾಗಿ ಗಡಿಬಿಡಿಯಾಗಿ ಕಾಲಿನ ಮಣ್ಣು ತಲೆಗೆ ಚಿಮ್ಮುವ ರೀತಿಯಲ್ಲಿ, ತಲೆಯ ಮಣ್ಣು ಕಾಲಿಗೆ ಆಗುವ ವೇಗದಲ್ಲಿ
ಕೆಲೆಂಜ ಪರಾರಿಗೆ ಓಡುತ್ತಾರೆ ಓ ಗುರು ಮಾರ್ಲರು......
ನಾರಾಯಣಾ ಏನು ಬಂದಿ ಗುರು ಮಾರ್ಲ ಎಂದು ಓ ಅಣ್ಣನವರು ಕೇಳುವಾಗ ಓ ಹೇಳುತ್ತಾರಂತೆ......
ಸೊನ್ನೆಗೆ ಆರೋಗ್ಯ ಸರಿಯಿಲ್ಲ ಓ ಬೆನ್ನು ಸೆಳೆಯುತ್ತಿದೆಯಂತೆ ಇಂದು ತಿಳಿಯಾದ ಮುಖದಲ್ಲಿ ಹುಳಿಯಂತಹ ನೋವು
ಸೊನ್ನೆಗೆ ಉಂಟಾಯಿತೆಂದು ಓಡೋಡುತ್ತಾ ಓ ಬರುತ್ತಾರಂತೆ ಓ......
ಅಲ್ಲಿಂದ ಹಾಗೆ ಓ ಬರುತ್ತಾರೆ......
ಕೆಲೆಂಜ ಪರಾರೀ ಓ ಜಾರು ಮಾರ್ಲರು......ಓ......
ಕಾಲಿನ ಮಣ್ಣು ತಲೆಗೆ ಚಿಮ್ಮುವಷ್ಟು ವೇಗದಲ್ಲಿ......
ತಲೆಯ ಬೆವರು ಓ ಕಾಲಿಗೆ ತಾಗುವ ರೀತಿಯಲ್ಲಿ......
ಓಡುತ್ತ ಓಡುತ್ತಾ ಹೋಗುತ್ತಾರಂತೆ ಓ ಜಾರು ಮಾರ್ಲರು......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರರ ಚಾವಡಿಗೆ......
ಏನು ಓಡುತ್ತಾ ಓಡುತ್ತಾ ಬಂದಿ ಓ ಜಾರು ಮಾರ್ಲ ಎಂದು ಅಜ್ಜನವರು ಕೇಳುವಾಗ...
ನಿಮ್ಮ ಮೊಮ್ಮಗಳು ಓ ನನ್ನ ನಾದಿನಿ ಸೊನ್ನೆಗೆ ಓ......
ತಿಳಿಯಾಗಿರುವ ಮುಖದಲ್ಲಿ ಹುಳಿಯಾದ ನೋವು ಕಾಣಿಸಿಕೊಂಡಿದೆ ಅಜ್ಜನವರೇ ಓ..
ಎಂದು ತಿಳಿಸಿದರು ಜಾರು ಮಾರ್ಲರು ಓ ಓಡೋಡುತ್ತಾ ಹಿಂತಿರುಗಿ ಬಂದರು......
ಹೋದ ಆಳನ್ನು ಹಿಂಬಾಲಿಸಿ ಓ ಅಜ್ಜನವರು ಇನ್ನೇನು
ಓಡುತ್ತ ಓಡುತ್ತಾ ಓ ಬಂದರಂತೆ......ಓ......
ಉರ್ಕಿದೊಟ್ಟುವಿನ ಅರಮನೆಗೆ ಓ ಬಂದರಂತೆ......
ನಾರಾಯಣಾ ಓ ನಾರಾಯಣ......ಓ......
(ನಾಲ್ಕು ಎಳೆಗಳ) ಉಡಿದಾರ ತೆಗೆದರು ಅಜ್ಜನವರು......ಓ......

ನಾರಾಯಣಾ ಓ ನಾರಾಯಣಾ ಎಂದರು......
ನಾರಾಯಣಾ ಓ ನಾರಾಯಣಾ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ ಸೊನ್ನೆ ಮದುಮಗಳಿಗೆ ಓ......
ತಿಳಿಯಾದ ಮುಖದಲ್ಲಿ ಹುಳಿಯಂತಹ ನೋವು ಕಾಣಿಸಿಕೊಳ್ಳುವಾಗ ಹೇಳಿದಳು......
ಸೊಂಟದಿಂದ ಉಡಿದಾರ ತೆಗೆದರು ಅಜ್ಜನವರು ಓ......
ಸೊನ್ನೆಗೆ ಏನೂ ತೊಂದರೆಯಿಲ್ಲದೆ ಸರಿಯಾದ ರೀತಿಯಲ್ಲಿ
ಹಾಕಿರುವ ನೇಲೆಯಲ್ಲಿ ಪ್ರಸವ ಆದರೆ......
ಬಂಗಾರದ ಮಗು ಬೆಳ್ಳಿಯ ತೊಟ್ಟಿಲು ಓ ಹಿಡಿಹಣ ಓ
ದಂಡು ಕುಂಬಳ(?) ಓ ಹರಕೆ ಹಾಕುತ್ತೇನೆಂದು ಹರಕೆ ಹೇಳುತ್ತಾರೆ ಅಜ್ಜನವರು...
ಹರಕೆ ಹೇಳಿದ ನಾಲಿಗೆ ಗಂಟಲಿಗಾಗಬೇಕಾದರೆ ಓ ನೇಲೆಯ (ಆಧಾರದ) ಹಗ್ಗಕ್ಕೆ ಕೈಕೊಡುವಾಗ ಓ......
ಸೊನ್ನೆ ಮದುಮಗಳು ಒಂದೇ ನೋವಿಗೆ ಓ ಎರಡು ಮಕ್ಕಳನ್ನು ಹಡೆದಳು ಸೊನ್ನೆ...
ನಾರಾಯಣಾ ಓ ನಾರಾಯಣಾ ಓ......
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ......ಓ......
ನಿಮ್ಮ ಮೊಮ್ಮಗಳೂ ಓ ಒಂದೇ ನೋವಿಗೆ ಎರಡು ಮಕ್ಕಳನ್ನು, ಹೆಣ್ಣುಮಕ್ಕಳನ್ನು ಓ ಹಡೆದಳೆಂದು ಹೇಳುತ್ತಾರೆ......ಓ......
ನಾರಾಯಣಾ ನಾರಾಯಣಾ ಓ ಅಜ್ಜನವರು ನೋಡಿದರು......
ಎರಡು ಹಿಂಗಾರದ ಮಕ್ಕಳು ರಕ್ತದ ನೀರಲ್ಲಿ ಹೊರಳಾಡುತ್ತಿರುವುದರ ಅಂದ ನೋಡಿದರು ಅಜ್ಜನವರು......ಓ......
ಹರುಷದ ದೇಹ ಓ ಮುತ್ತಿನ ನಗು ನಕ್ಕರು ಅಜ್ಜನವರು......ಓ......
ನಾರಾಯಣಾ ಓ ನಾರಾಯಣ......ಓ......
ಮಕ್ಕಳ ಹೊಕ್ಕುಳಬಳ್ಳಿ ಕತ್ತರಿಸಿದರು ಓ ಹೆತ್ತ ಜಾಗವನ್ನು ಶುಚಿಗೊಳಿಸಿದರು......
ಬಾಣಂತಿ ಮಕ್ಕಳನ್ನು ಬಿಸಿನೀರಲ್ಲಿ ಸ್ನಾನ ಮಾಡಿಸಿ......
ಏಳು ಅಂತರದ ಯಮದೇವಿ ಗುಡಿಯಲ್ಲಿ ಬೆಳ್ಳಿಮಾಡದಲ್ಲಿ ಮಲಗಿಸಿದರಂತೆ......
ನಾರಾಯಣಾ ನಾರಾಯಣಾ......ಓ......
ನಾರಾಯಣ ನಾರಾಯಣ ಗುರುಮಾರ್ಲ......
ಮಗು ಹುಟ್ಟಿದ ಜಾತಕ ಕೇಳಬೇಕು......ಓ......
ಎಂದು ಅವರು ಹೇಳುತ್ತಾರೆ......
ಗುರ್ಗಲಾಡಿ ಚಂದುಪೆರ್ಗಡೆ ಬನ್ನಾರರು ಹೇಳುತ್ತಾರೆ......
ಇಂದಾದರೋ ಇಂದು ಗುರು ಮಾರ್ಲರು ಹಾಗು ಅಜ್ಜನವರು ಇಂದು ಬಲ್ಯಾಯನಲ್ಲಿಗೆ ಹೋದರಂತೆ ಹೋಗಿ ಬಲ್ಯಾಯನಲ್ಲಿ......
ಅರುವತ್ತು ಹಿಡಿ ಜಾತಕ ತೆಗೆಸಿದರಂತೆ ಇಂದು ಮೂವತ್ತು ಹಿಡಿ ಗ್ರಂಥ ತೆಗೆಸಿ ಇಂದು ಪಂಚಾಂಗ ಬಿಡಿಸಿ ಮಕ್ಕಳ ಜಾತಕ ನೋಡುತ್ತಾರೆ......

ಮಕ್ಕಳ ಜಾತಕ ನೋಡುವಾಗ ಓ ಕಾಣಿಸುತ್ತದೆ ಅಲ್ಲಿ......
ಒಂದೇ ಗರ್ಭದಲ್ಲಿ ಜನಿಸಿದ ಅವಳಿ ಮಕ್ಕಳೆಂದು......
ನಾರಾಯಣ ಬನ್ನಾರರೇ ಓ ನಾರಾಯಣ ಬನ್ನಾರರೇ......
ಹೆತ್ತ ಕಳದಲ್ಲಿ ಜನಿಸಿದ ಮಕ್ಕಳಿಗೆ ಹೆಸರು ಓ......
ಅಬ್ಬಗ ದಾರಗ ಎಂದೇ ಕರೆಯಿರೆಂದು ಬಲ್ಯಾಯ ಹೇಳುತ್ತಾನಪ್ಪಾ......
ಬಲ್ಯಾಯ ಹೇಳುದುದನ್ನು ಕೇಳಿ ಹೇಳಿದರು......
ನಾರಾಯಣಾ ಓ ನಾರಾಯಣ ಬಲ್ಯಾಯಾ......
ಹರಕೆಯ ಮಕ್ಕಳಲ್ಲವೇ ಅಜ್ಜನವರೇ ಎಂದು ಬಲ್ಯಾಯ ಕೇಳಿದನು
ಹರಕೆ ಹೇಳಿ ಹುಟ್ಟಿದ ಮಕ್ಕಳು ಅವರೆಂದು ಓ......
ಅಜ್ಜನವರು ಬನ್ನಾರರು ಓ ಹೇಳುತ್ತಾರೆ......
ಮಕ್ಕಳು ಒಳ್ಳೆಯ ಘಳಿಗೆ, ಒಳ್ಳೆಯ ರಾಶಿ, ಓ ಒಳ್ಳೆಯ ಜಾತಕ, ಒಳ್ಳೆಯ ನಕ್ಷತ್ರದಲ್ಲಿ ಹುಟ್ಟಿದ ಮಕ್ಕಳು......ಓ......
ನಡುತಲೆ(ನೆತ್ತಿ)ಗೆ ನಾಲ್ಕು ಅಕ್ಕಿಕಾಳು ಹಾಕುವಿರಿ ನೀವೂ......
ಆದರೆ ಮೊಮ್ಮಕ್ಕಳ ಅಂದಚಂದ ನೋಡುವ ಭಾಗ್ಯ ನಿಮಗೆ ದೊರಕದೆ ಹೋಗುತ್ತದೆ ಎಂದು ಬಲ್ಯಾಯ ಹೇಳುತ್ತಾನೆ......
ಅಷ್ಟು ಹೇಳುವಾಗ ಓ ಅಜ್ಜನವರು ಹೇಳುತ್ತಾರೆ ಓ......
ಹರಕೆಯ ಓ ಮಕ್ಕಳ ಹರಕೆಯನ್ನು ಓ ನಾವು ಸಲ್ಲಿಸುತ್ತೇವೆ......
ನಮ್ಮ ಮಕ್ಕಳ ಅಂದ ಓ ನಮಗೆ ನೋಡಬೇಕೆಂದರು......ಓ ಅಜ್ಜನವರು......
ಅಜ್ಜನವರು ಬನ್ನಾರರು ಅವರು ಗುರ್ಗಲಾಡಿ ಚಂದು ಪೆರ್ಗಡೆ ಓ ಬನ್ನಾರರಂತೆ... ಹೇಳುತ್ತಾರೆ ಅಜ್ಜನವರು
ನಾರಾಯಣ ಓ ನಾರಾಯಣಾ......
ಬಲ್ಯಾಯನ ಕೊಟ್ಟಿಗೆಯಿಂದ ಹೊರಟು ಬರುತ್ತಾರೆ......
ಮೂರರಲ್ಲಿ ಮೂರರ ಪುರುಡು ಓ ಐದರಲ್ಲಿ ಐದನೇ ಪುರುಡು ತೆಗೆಸಿದ್ದಾರೆ ಓ ಗುರುಮಾರ್ಲರು ಓ ಉರ್ಕಿದೊಟ್ಟುವಿನ ಅರಮನೆಯಲ್ಲಿ......
ನಾರಾಯಣಾ ಓ ನಾರಾಯಣಾ......ಓ......
ಅಡಕೆಗಿಡದ ಓ ಹಾಳೆ ಹಿಂಗಾರ ಓ......
ಹಿಂಗಾರದ ಹಾಳೆಯನ್ನು ಓ ತರಿಸಿದ್ದಾರೆ ಓ ಗುರುಮಾರ್ಲರು ಓ......
ಏಳರಲ್ಲಿ ಏಳನೇ (ದಿನದ) ಪುರುಡು ಓ ಒಂಬತ್ತರಲ್ಲಿ ಒಂಬತ್ತರ ಪುರುಡು....ಓ....
ಹನ್ನೊಂದರಲ್ಲಿ ಹನ್ನೊಂದರ ಪುರುಡು ಕಳೆದರು......ಓ......
ಹದಿನಾರರಂದು ಓ ಮಗುವಿನ ಜಾಗ ಬದಲಾಯಿಸಿ
ಮಗುವಿನ ಜಾಗ ಬದಲಿಸಿ ಪುರುಡನ್ನು ಕಳೆದರು......ಓ......
ಗುರ್ಗಲಾಡಿ ಚಂದು ಪೆರ್ಗಡೆ ಬನ್ನಾರರು ಅವರು......
ನಾರಾಯಣಾ ಓ ನಾರಾಯಣಾ......ಓ......

ನಾರಾಯಣಾ ಗುರುಮಾರ್ಲ......ಓ......
ಮಗುವನ್ನು ತೊಟ್ಟಿಲಲ್ಲಿ ಹಾಕಬೇಕು ನಮಗೆ ಓ......
ನಮ್ಮ ಮಕ್ಕಳನ್ನು ಎಂದು ಹೇಳುತ್ತಾರಪ್ಪಾ ಓ ಜಾರು ಮಾರ್ಲರು......
ಇಂದಾದರೋ ಮಗುವನ್ನು ತೊಟ್ಟಿಲಲ್ಲಿ ಹಾಕಲು ಇಂದು
ತೊಟ್ಟಿಲು ಮಾಡಿಸಬೇಕೆಂದರು......ಓ......
ಇಂದಾದರೋ ಇಂದು ಮಗುವಿನ ತೊಟ್ಟಿಲು ಮಾಡಿಸಲು ಓ ಕರೆಸಬೇಕೆಂದರು......
ಜಾತಿಬಾಂಧವರನ್ನು ಓ ನೀತಿಕುಟುಂಬದವರನ್ನು ಓ ಕರೆಸಬೇಕೆಂದರು......
ಇಂದಾದರೋ ಇಂದು ಗುರು ಮಾರ್ಲರು ಹೋಗುತ್ತಾರಂತೆ ಇನ್ನಮುಂಡೆರು ಬೋಳ
ಬೆಳ್ಮಣ್ಣು ಕಾಪು ಕಡಂದಲೆ ಕಕ್ಕೆಬೆಟ್ಟು ಕಾರಿಬೆಟ್ಟೆಂದು ಇಂದು ಮೂಲ್ಕಿ ಸೇರಿ ಒಂಬತ್ತು
ಮಾಗಣೆ ಬಂಗರಬೆಟ್ಟು ಬೋಳಿಯಬೆಟ್ಟು ಓ ಕಾಲು ನಾಯ್ಕನ ಮನೆಗೆ......ಓ......
ಹನ್ನೆರಡು ಮಾಗಣೆ ಓ ಹನ್ನೆರಡು ಗುತ್ತಿಗೆ......ಓ......ಹೇಳಿ ಕಳುಹಿಸುತ್ತಾರೆ ಅಜ್ಜನವರು..ಓ..
ಈ ಬರುವ ಮಂಗಳವಾರವಲ್ಲ ಓ ಮೇಲೆ ಬರುವ (ಮುಂದಿನ) ಮಂಗಳವಾರದಂದು
ಓ......
ಅಸ್ತಮನಾದ ಸ್ವಾಮಿ ಉದಯವಾಗುವಾಗ......ಓ......
ಉದಯವಾದ ಸ್ವಾಮಿ ಅಸ್ತಮನಾಗುವಾಗ......
ಜಾನುವಾರುಗಳು ಹಟ್ಟಿಯ ಕಡೆಗೆ ಓ ಬರುವ ಹೊತ್ತಿಗೆ......ಓ......
ಅಸಲುಮಸಲಾದ ಓ ಹೊತ್ತು ಗಳಿಗೆಗೆ......ಓ......
ಮಗುವನ್ನು ತೊಟ್ಟಿಲಲ್ಲಿ ಹಾಕಬೇಕೆಂದರು......
ನಾರಾಯಣಾ ಓ ನಾರಾಯಣಾ......ಓ......
ಅಜ್ಜನವರು ಓ ಕೇಳಬೇಕಪ್ಪಾ......
ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ......
ಅರುವತ್ತು ತೂಕ ಓ ಬಂಗಾರದ ತೊಟ್ಟಿಲಾಗಬೇಕೆಂದರು......ಓ......
ಮೂವತ್ತು ತೂಕ ಓ ಬೆಳ್ಳಿಯ ಹುರಿದಾರ ಮಾಡಿಸಿದರು ಅಜ್ಜನವರು......
ನಾರಾಯಣಾ ಓ ನಾರಾಯಣಾ ಓ......
ಒಂದು ಕಡೆತಕ್ಕೆ (ಕಡೆಚ್ಚಿಲ್‌ಗೆ) ಓ ಒಂದು ಹೊಡೆತಕ್ಕೆ
ಆಚಾರಿಯಲ್ಲಿ ಓ ಅರುವತ್ತು ತೂಕ ಓ ಬಂಗಾರದ ತೊಟ್ಟಿಲು ಓ ಮೂವತ್ತು ತೂಕ
ಓ ಬೆಳ್ಳಿಯ ಹುರಿದಾರ ಮಾಡಿದರು......ಓ ತೊಟ್ಟಿಲು ತಂದರು ಅಜ್ಜನವರು......
ಕೆಲೆಂಜ ಪರಾರಿ ಜಾರು ಮಾರ್ಲರು ಓ ಗುರ್ಗಲಾಡಿ ಓ ಚಂದು ಪೆರ್ಗಡೆ ಓ
ಬನ್ನಾರರು ಸೇರಿ ಓ......
ಆಯದ ತುದಿಯಲ್ಲಿ ಓ ಸೋಯದ ನೇಲೇ ಓ......
ಹಕ್ಕಿ ಹಲಗೆಗೆ ಓ ಪನ್ನೆ ಪೆರ್ಗೋಲಿಗೆ......
ಬಂಗಾರದ ತೊಟ್ಟಿಲಿಗೆ ಓ ಕೊಂಡಿ ಸಿಕ್ಕಿಸಿದರು ಓ ಬೆಳ್ಳಿಯ ಹುರಿದಾರಕ್ಕೆ
ಓ ಕೊಂಡಿ ಹಾಕಿದರು ಓ......

ಅಂದು ಸೊನ್ನೆಯನ್ನು ಹೀಯಾಳಿಸಿದ ಹೆಣ್ಣುಗಳು......ಓ......
ಕೆಳ ಕೆರೆಯ ಎರಡು ಹೆಣ್ಣುಗಳು......ಓ......
ಮೇಲಿನ ಕರೆಯ ಎರಡು ಹೆಣ್ಣುಗಳೂ......ಓ......
ನಾಲ್ಕು ಹೆಣ್ಣುಗಳು ಮಗುವನ್ನು ಹಿಡಿದುಕೊಂಡರು......ಓ......ಎರಡು ಮಕ್ಕಳನ್ನು......
ಆಚೀಚಿನಿಂದ ಅವರನ್ನು ನಿಲ್ಲಿಸಿದರು......ಓ......
ಮಕ್ಕಳನ್ನು ತೊಟ್ಟಿಲಲ್ಲಿ ಓ ಗುರು ಮಾರ್ಲರು ಓ ಜಾರು ಮಾರ್ಲರು ಓ......
ಗುರ್ಗಲಾಡಿಯ ಚಂದು ಪೆರ್ಗಡೆ ಬನ್ನಾರರು ಹಾಗೂ ಉರ್ಕಿದೊಟ್ಟುವಿನ ಸೊನ್ನೆ ಮದುಮಗಳು
ಸೇರಿ ಸೊನ್ನೆಯ ಮಕ್ಕಳನ್ನು ಓ ತೊಟ್ಟಿಲಲ್ಲಿ ಮಲಗಿಸಿದರು......ಓ......
ರಾತ್ರೆಯ ರಾಮಾಯಣ ಓ ಶರಣು ಹಾಕಿ ಓ ಸೊನ್ನೆಯಂತೆ......
ನಾರಾಯಣಾ ಓ ನಾರಾಯಣ ಮಕ್ಕಳೇ......ಓ......
ಅಬ್ಬಗ ದಾರಗ ಮಕ್ಕಳು ಮಗಾ......ಓ......
ನಿಮ್ಮ ದೊಡ್ಡಮ್ಮನವರು ಓ ಬಡಗಣ ಲಂಕೆಲೋಕನಾಡಲ್ಲಿ ಓ......
ದಂಬೆಕಲ್ಲ ಮುಂದೆ ಓ ಗಜಮರದ ಬುಡದಲ್ಲಿ ಓ......
ಉದಯವಾದ ದೊಡ್ಡಮ್ಮ ಅವರು ಓ......
ನಿಮ್ಮ ದೊಡ್ಡಮ್ಮ ಮಕ್ಕಳೇ ಓ ನನ್ನ ತಾಯಿಯವರು......ಓ......
ಸತ್ಯಮಹಾಲೋಕದ ಸಿರಿಯ ಮೊಮ್ಮಕ್ಕಳು......ಓ.....
ಅಬ್ಬಗದಾರಗ ಮಕ್ಕಳು ನೀವೆಂದು ಓ ಹೇಳಿದರಪ್ಪಾ......
ಮಕ್ಕಳನ್ನು ನಾರಾಯಣ ಹಾಡು ಹಾಡಿ ಓ ತೊಟ್ಟಿಲಲ್ಲಿ ತೂಗಿದರು......ಓ ಸೊನ್ನೆ ಮದುಮಗಳೂ......
ಇಂದಾದರೋ ಇಂದು ಆಗಮಿಸಿರುವ ನೆಂಟರು ಹಿಂತಿರುಗಿದರಂತೆ......ಓ......
ಅಜ್ಜನವರು ಓ ಗುರ್ಗಲಾಡಿಯ ಓ ಹೋದರಂತೆ......
ಇಂದಾದರೋ ಇಂದು ಮಕ್ಕಳನ್ನು ಕಲೆಂಜಪರಾರಿ ಜಾರು ಮಾರ್ಲರು,
ಗುರು ಮಾರ್ಲರು ಹಾಗೂ ಸೊನ್ನೆ ಸೇರಿಕೊಂಡು
ಅತಿಯಾದ ಮಮತೆ, ಪ್ರೀತಿಯಿಂದ ಮಕ್ಕಳನ್ನು ಸಾಕಿಕೊಂಡು ಓ ಇದ್ದಾರಂತೆ......
ಇಂದಾದರೋ ಇಂದು ಮಕ್ಕಳ ಕಾಲಿನ ಅಂದ ನೋಡಿದರು......
ಕಾಲಿಗೆ ಕಡಗ ಓ ಗೆಜ್ಜೆ ಚೈನೂ......ಓ......
ಮಕ್ಕಳ ಕಾಲಿಗೆ ಪೈಜಣಿ ಹಾಕಿದರಪ್ಪಾ......
ಸೊಂಟದ ಅಂದ ಓ ನೋಡಿದರಪ್ಪಾ ಓ ಸೊನ್ನೆ ಮದುಮಗಳು ಓ ಗುರುಮಾರ್ಲರು...
ಸೊಂಟದ ದಾಬನೂಲು ಓ ಮಕ್ಕಳಿಗೆ ಚಕ್ಕೀ ಓ ಮಾಡಿಸಿದರು......
ಕೈಯ ಅಂದ ಓ ನೋಡಿದರು ಓ ಮಕ್ಕಳಿಗೆ ಓ......
ಕೈಗೆ ಚಲಾಕೀ ಓ ಮುರ್ಗೀ ಓ ಹಾಕಿಸಿದರು......
ಕುತ್ತಿಗೆಯ ಅಂದ ಓ ನೋಡಿದರು......

ಕುತ್ತಿಗೆಗೆ ಓ ಕಂಬಳಿ(?) ಉಂಗುರ ಓ......
ಕುರ್ಜಾತು ಓ ಹಾಕಿಸಿದರು......
ಮಕ್ಕಳ ಕಿವಿಯ ಅಂದಾ ಓ ನೋಡಿದರು......
ಕಿವಿಗೆ ಅತ್ತಿಬೀಜ(ದಂತಹ) ಕುಂಡಲ ಓ ಹಾಕಿಸಿದರು......
ಮಕ್ಕಳ ಅಂದಚಂದ ಓ ನೋಡಿದರು......
ತಿಂಗಳ ಮಕ್ಕಳು ಬೆಳೆದು ವರ್ಷ ತುಂಬಿತು......
ವರ್ಷ ಕಳೆದು ಮಕ್ಕಳಿಗೆ ಎರಡು ವರ್ಷವಾಯಿತು......
ಮೂರು ತಿಂಗಳ ಮಕ್ಕಳು ಬೆಳೆದು
ಮೂರು ವರ್ಷದ ಮಕ್ಕಳಾದರು......
ಹಾಲಿಗೆ ಓ ದನ ಕಟ್ಟಿಸಿದ್ದಾರೆ......
ತಾಯ ಮೊಲೆಹಾಲು ಓ ಬತ್ತುವಾಗ......
ಹಾಲಿಗೆ ದನ ಓ ಕಟ್ಟಿಸಿದ್ದಾರೆ......
ಮಕ್ಕಳಿಗೆ ಹಾಲು ಓ ಕುಡಿಯಲು......
ದನ ಬತ್ತುವಾಗ ಓ ಆಡು ಕಟ್ಟಿಸಿ......
ಆಡಿನ ಹಾಲು ಕೊಟ್ಟು ಬೆಳೆಸಿದ್ದಾರೆ......
ನಾರಾಯಣಾ ಓ ನಾರಾಯಣ......ಓ......
ನಾರಾಯಣಾ ಓ ನಾರಾಯಣ ಮಕ್ಕಳೇ......
ಆರು ತಿಂಗಳ ಮಕ್ಕಳು ಬೆಳೆದು ಆರು ವರ್ಷಕ್ಕೆ ಕಾಲಿಟ್ಟರು......ಓ......
ಏಳು ತಿಂಗಳ ಮಕ್ಕಳು ಓ ಏಳು ವರ್ಷದ ಮಕ್ಕಳಾಗಿ ಬೆಳೆದರು......
ಕಪಟನಾಟಕದ ಓ ಅಬ್ಬಗದಾರಗ ಮಕ್ಕಳು......
ನಾರಾಯಣ ಓ ನಾರಾಯಣಾ ಓ......
ನಾರಾಯಣಾ ಓ ಮದುಮಗ......
ನಮ್ಮ ಮಕ್ಕಳಿಗೆ ಓ ಬರೆಹ ಓದು ಓ ಕಲಿಸಬೇಕು......
ಎಂದು ಸೊನ್ನೆ ಮದುಮಗಳು ಓ ಹೇಳುತ್ತಾಳೆ......
ಅಷ್ಟು ಹೇಳುವುದನ್ನು ಓ ಕೇಳಿದರು ಗುರುಮಾರ್ಲರು......ಓ......
ತಮ್ಮ ಕೆಲೆಂಜ ಪರಾರಿ ಜಾರುಮಾರ್ಲರಲ್ಲಿ ಓ ಹೇಳಿದರು......
ಜಾರುಮಾರ್ಲರು ಓ ಕೇಳಿದರು ಅದನ್ನು......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರಲ್ಲಿ ಹೇಳಿದರು......
ಚಂದು ಪೆರ್ಗಡೆ ಬನ್ನಾರು ಅವರು ಬಂದರು ಅಜ್ಜನವರು......ಓ......
ಉರ್ಕಿದೊಟ್ಟುವಿನ ಓ ಗುರು ಮಾರ್ಲ ಓ......
ಒಬ್ಬ ಸೇವಕನನ್ನು ಓ ಕಳುಹಿಸಿದರು......
ಕಡಲಿಗೆ ಕಳುಹಿಸಿದರು ಓ ನಯವಾದ ಮರಳು ತರಿಸಿದರು......
ನಯವಾದ ಮರಳು ತರಿಸಿದು ಮಾರ್ಲರು ಓ ಮುಂಜಾವದ ತಿಳಿ ಬಿಸಿಲಿಗೆ

ಹಾಕಿಸಿದರು......ಓ......
ಮುಂಜಾವದ ತಿಳಿಬಿಸಿಲಿಗೆ ಹಾಕಿಸಿದರು ಗುರು ಮಾರ್ಲರು ಓ......
ಸಾಯಂಕಾಲದ ತಿಳಿಬಿಸಿಲಿಗೆ ಓ ರಾಶಿ ಮಾಡಿಸಿದರು......
ರಾಶಿ ಮಾಡಿಸಿದ ಓ ಮರಳನ್ನು ತಂದರು ಓ ಪಡುವಣ ಪಡುಸಾಲೆಯಲ್ಲಿ ಹಾಕಿದರು ಓ......
ಮೂಡಣ ಓ ಮೂಡುಸಾಲೆಯಲ್ಲಿ ಹಾಕಿದರು......
ಎರಡು ಮಕ್ಕಳನ್ನು ಓ ಅಂದಚಂದದಲ್ಲಿ ಓ ತಣ್ಣೀರಲ್ಲಿ ಸ್ನಾನಮಾಡಿಸಿ ಓ......
ಬಿಸಿನೀರಲ್ಲಿ ಮುಳುಗಿಸಿ(ಮೀಯಿಸಿ)ಕೊಂಡು ಓ ಬಂದರು ಅಜ್ಜನವರು......
ಮೂಡಣ ಮೊಗಸಾಲೆಯಲ್ಲಿ ಓ ಮೂಡುದಿಕ್ಕಿಗೆ ಮುಖ ಹಾಕಿ ನಿಲ್ಲುವಾಗ ಹೇಳಿದರು... ಓ......
ಮೂರುಕಣ್ಣಿನ ತೆಂಗಿನಕಾಯಿ ಒಂದು ಕವಳೆ ವೀಳ್ಯದೆಲೆ ಓ ಒಂದು ಅಡಕೆ ಬೇಕೆಂದು ಓ ಹೇಳಿದರು ಅಜ್ಜನವರು......
ಎರಡು ಮಕ್ಕಳಿಗೆ ಓ ಎರಡು ತೆಂಗಿನಕಾಯಿ ಓ ಎರಡು ಸೇರು ಓ ಬೆಳ್ತಿಗೆ ಅಕ್ಕಿ ಎಂದರು
ಎರಡು ಕವಳೆ ಓ ವೀಳ್ಯದೆಲೆ ಎಂದರು ಓ ಎರಡು ಅಡಕೆ (ಎಂದು) ಹೇಳಿದರು......
ಮಕ್ಕಳನ್ನು ಪೂರ್ವಕ್ಕೆ ಮುಖ ಮಾಡಿ ನಿಲ್ಲಿಸಿ ಓ ಹತ್ತು ಬೆರಳುಗಳಿಂದ ಶರಣು ಹಾಕಿಸಲು......
ಕೆಲೆಂಜ ಪರಾರಿ ಜಾರು ಮಾರ್ಲರು ಉರ್ಕಿದೊಟ್ಟುವಿನ ಗುರು ಮಾರ್ಲರು ಓ......
ಸೊನ್ನೆ ಮದುಮಗಳು ಓ ಚಂದು ಪೆರ್ಗಡೆ ಬನ್ನಾರರು ಓ ನಾಲ್ಕು ಜನ ಓ ಹಿಂದಿನಿಂದ
ಓ ಎರಡು ಮಕ್ಕಳನ್ನು ಓ ಮುಂದೆ ನಿಲ್ಲಿಸಿ ಓ ಹತ್ತು ಬೆರಳಿನಿಂದ ಶರಣುಮಾಡಿಸಿದರು....
ನಾರಾಯಣ ನಾರಾಯಣ ಸೊನ್ನೆ......
ಎಲ್ಲಿಗೆ ಹರಕೆ ಹೇಳಿಕೊಂಡಿದ್ದೀಯಾ ಎಂದು ಕೇಳುತ್ತಾರೆ......
ನಾನು ಯಾಕೆ ಓ ಹರಕೆ ಹೇಳಲಿ ಓ ನೀವೇ ಹರಕೆ ಹೇಳಿ ಎಂದರು......
ನಾರಾಯಣ ನಾರಾಯಣ ಸೊನ್ನೆ......
ಆ ಕಾಲದಲ್ಲಿ ಹರಕೆ ಹೇಳಲಿಲ್ಲವೇ?
ಮದುಮಗಳಾದರೆ ಓ ಋತುಮತಿಯಾದರೆ
ತಿಂಗಳ ಮುಟ್ಟಾದರೆ ಓ ವರ್ಷದಲ್ಲಿ ಹೆರಿಗೆಯಾದರೆ
ಓಲೆ ಕರಗಿಸಿ ಅಂಕಣ ಹಾಕಿಸುತ್ತೇನೇ......ಓ......
ಮೂಗುತಿ ತೆಗೆದು ಮುಗುಳಿ ಇಡಿಸುತ್ತೇನೆಂದು ಓ ಹರಕೆ ಓ
ನಾನು ಹೇಳಿದ್ದೇನೆಂದು ಓ ತಿಳಿಸುತ್ತಾಳೆ ಸೊನ್ನೆ......
ದೇವರನ್ನು ಓ ಮುಜಿಲೊಟ್ಟು ಉರಿಬೆರ್ಮೆರ್ ದೇವರನ್ನು
ವಂದಿಸಿಕೊಂಡು ಓ ನನ್ನ ತಾಯಿಯವರ ಸತ್ಯವೆಂದಳು......
ನನ್ನ ತಾಯಿಯವರು ಓ ಬಡಗಣ ಲಂಕೆಲೋಕನಾಡು ಓ ದೇವರು ಬೆರ್ಮೆರ ಓ ಬಲಭಾಗದಲ್ಲಿ ಓ ದೇವರ ಓ ಎಡಭಾಗದಲ್ಲಿ ಓ......

ಧ್ವಜಕಂಬದ ಓ ಬುಡದ ನೆರಳಲ್ಲಿ ಓ ಬುಟ್ಟಿಯ ಅಯ್ಯೋಜಿಯಲ್ಲಿ(?) ಓ
ಹೆಡಿಗೆಯ ಪುಷ್ಪದಲ್ಲಿ ಓ ಗಂಧದ ಗುಳಿಗೆಯಲ್ಲಿ ಓ ಹೋಮದ ಕಪ್ಪು ಹೊಗೆಯಲ್ಲಿ
ಓ ಬೆಳ್ಳಿಯ ದಂಡು ಓ ಬಂಗಾರದ ಎಸಳಲ್ಲಿ ಓ......
ಕುಂಕುಮದ ಹರಳಾಗಿ ಓ ಅಜ್ಜನವರ ಹಚ್ಚಡೆಯ ತುದಿಗೆ ಓ......
ನನ್ನ ತಾಯಿಯವರು ಜನನಕ್ಕೆ ಬಂದದ್ದು ಹೌದಾದರೆ......ಓ......
ಅವರ ಸತ್ಯ ಓ ಅವರ ಗರ್ಭದಲ್ಲಿ ಓ ಮಾಯದ ಗರ್ಭದಲ್ಲಿ ಓ......
ಜೋಗದ ಗರ್ಭ ಓ ನಿಂತು ಬಂದವಳು ಓ ನನ್ನ ಸೊನ್ನೆ ಓ......
ಸೊನ್ನೆಯ ಗರ್ಭದಲ್ಲಿ ಓ ಬಂದ ಮಕ್ಕಳು ಓ ಅಬ್ಬಗದಾರಗ ಓ ಮಕ್ಕಳಿಗೆ......
ಹೊಯ್ಗೆಯ ಬರೆಹವೆಂದೂ ಓ ಹೇಳಿದರೂ ಸೊನ್ನೆ ಓ ಅಜ್ಜನವರು ಓ......
ಮಕ್ಕಳನ್ನು ಕುಳ್ಳಿರಿಸಿದರು ಓ ಆಚೀಚೆ ಮಕ್ಕಳನ್ನು ಕುಳ್ಳಿರಿಸಿ
ನಡುವಿನಲ್ಲಿ ಅಜ್ಜನವರು ಕುಳಿತುಕೊಂಡು ಓ......
ಮಕ್ಕಳಿಗೆ ಮರಳಿನ ಬರೆಹವೆಂದರು......ಓ......
ಮರಳಿನ ಬರೆಹ ಓ ಅಜ್ಜನವರು ಕಲಿಸಿದರಂತೆ......
ಕಟಪನಾಟಕದ ಮಕ್ಕಳೂ ಓ ಅಬ್ಬಗದಾರಗ ಓ ಎರಡು ಮಕ್ಕಳು......
ಮರಳಿನ ಬರೆಹ ಓ ಕಲಿತರಂರೆ ಮಕ್ಕಳೂ ಓ ತುಳುಭಾಷೆಯನ್ನು ಓ ಕಲಿತರು ಮಕ್ಕಳು
ಕನ್ನಡ ಬರೆಹ ಓ ಕಲಿತರು ಮಕ್ಕಳು ಓ......ದೇವರ ಶರಣು ಕಲಿತರು ಮಕ್ಕಳು......
ನಾರಾಯಣ ಮಗ ಓ ಮಕ್ಕಳೇ ನಿಮಗೆ ಓ ಯಾವೊಂದು ಬರೆಹ ಓ......
ಬರುತ್ತದೆಯೆಂದು ಅಜ್ಜನವರು ಕೇಳುವಾಗ ಓ ಹೇಳುತ್ತವೆ ಮಕ್ಕಳು......
ನಾರಾಯಣಾ ಓ ನಾರಾಯಣ ಅಜ್ಜನವರೇ ಓ ನಮ್ಮ ದೇವರ ಓ ಶರಣು
ಬರುತ್ತದೆ ಓ ಸ್ವಾಮಿ ಬೆರ್ಮೆರ ಓ ಓಲಗ ಬರುತ್ತದೆ ಓ......
ಒಬ್ಬರು ನಾರಾಯಣ ಓ ಬೆರ್ಮರ ಉತ್ತರ ಓ ಉತ್ತರ ಬರುತ್ತದೆ ಓ......
ಮರಳಿನ ಬರೆಹ ಓ ಬರುತ್ತದೆ ಅಜ್ಜನವರೇ ಎಂದು......
ಮಕ್ಕಳು ಓ ಅಜ್ಜನವರು ಕೇಳಿದ್ದಕ್ಕೆ ಓ ಉತ್ತರ ಕೊಡುತ್ತವೆ ಓ ಎರಡು......
ಮಕ್ಕಳು ಓ ಕಪಟನಾಟಕದ ಓ ಅಬ್ಬಗದಾರಗ ಓ ಮಕ್ಕಳು ಇವರು......
ಏಳು ಏಳೂವರೆ ವರುಷದ ಮಕ್ಕಳು......ಓ......
ಹತ್ತು ಹನ್ನೆರಡು ಓ ವರ್ಷದ ಮಕ್ಕಳ ಹಾಗೆ......ಓ...... ಇದ್ದಾರಲ್ಲ ಮಕ್ಕಳು......
ನಾರಾಯಣಾ ಓ ನಾರಾಯಣಾ......ಓ......
ನಾರಾಯಣಾ ಓ ನಾರಾಯಣಾ......ಓ......
ತಂದೆಯವರೇ ಓ ಕೇಳಿದ್ದೀರೇ......ಓ......
ಎರಡು ಮಕ್ಕಳು ಓ ಅಪ್ಪಾ ಎಂದು ಓ ತೂಗುಯ್ಯಾಲೆಯಲ್ಲಿ ಓ...... ತಂದೇ
ಕುಳಿತುಕೊಂಡಲ್ಲಿಗೆ ಬಂದು ಓ ನಾರಾಯಣ ತಂದೆಯವರೇ......
ನಾವು ಪ್ರೀತಿಯ ಮಕ್ಕಳೆಂದೂ ಓ ನೀವು ಹೇಳುತ್ತೀರಿ......
ಪ್ರೀತಿಯ ಮಕ್ಕಳು ನಮಗೆ ಓ ಪ್ರೀತಿಯಿಂದ ಆಡಲು ಏನಾದರೂ ನಮಗೆ ಓ......

ಕೊಡುತ್ತೀರಾ ತಂದೆಯವರೇ ಎಂದು......ಮಕ್ಕಳು ಕೇಳುತ್ತವೆಯಂತೆ......
ನಾರಾಯಣ ಮಕ್ಕಳೇ ಓ ನಾರಾಯಣ ಮಕ್ಕಳೇ ಓ ಕೇಳಿರಿ......
ನಿಮ್ಮ ದೊಡ್ಡಪ್ಪನವರು ಓ ನನ್ನ ಅಣ್ಣನವರು ಓ ಬರಲಿ ಮಗಾ......ಓ......
ನಾಳೆಯ ದಿನದಂದು ಅವರು ಬರುತ್ತಾರೆ ಓ ಅವರಲ್ಲಿ ಕೇಳುವ ಎಂದು ಓ ಹೇಳುತ್ತಾರೆ
ಅಂದಿನ ದಿನ ಹೋಗಿದೆ ಮಕ್ಕಳಿಗೆ ಓ ಮರುದಿನ ಓ ಬಂದಿದೆಯಂತೆ ಓ
ಅಷ್ಟು ಹೊತ್ತಿಗೆ ಓ ಹೇಳುತ್ತಾರೆ......
ನಾರಾಯಣಾ ಓ ನಾರಾಯಣ ದೊಡ್ಡ ತಂದೆಯವರೆ......ಓ......
ಪ್ರೀತಿಯ ಮಕ್ಕಳಿಗೆ ಓ ನಮಗೆ ಆಡಲು ಓ ಏನು ತಂದಿದ್ದೀರೆಂದು ಓ ಮಕ್ಕಳು ಕೇಳುತ್ತವೆ......
ನಾರಾಯಣಾ ಓ ನಾರಾಯಣಾ......
ನಿಲ್ಲಿ ಮಗ ಮಕ್ಕಳೇ ಓ ನೀವೂ ಓ......
ನಮ್ಮ ಅಜ್ಜನವರು ಓ ನಿಮ್ಮ ಪಿಜ್ಜ (ಮುತ್ತಜ್ಜ) ಓ ಇದ್ದಾರೆ......ಓ ಹಿರಿಯವರು......
ಅವರಲ್ಲಿ ಕೇಳಿ ಓ ಬರುತ್ತೇವೆ ಎಂದರು......
ನಾಳೆಯ ದಿನದಂದು ಓ ನಮ್ಮ ಅಜ್ಜನವರು ಓ ಬರುತ್ತಾರೆ ಮಗಾ......
ಅವರಲ್ಲಿ ಕೇಳೋಣ ಎಂದು ಓ ಹೇಳುತ್ತಾರೆ ದೊಡ್ಡ ತಂದೆಯವರು......
ಅಂದಿನ ದಿನ ಹೋಗಿದೆ ಮಕ್ಕಳಿಗೆ ಓ......
ಮರುದಿನ ಓ ಬಂದಿದೆಯಂತೆ......
ನಾರಾಯಣಾ ಓ ನಾರಾಯಣ ಅಜ್ಜನವರೇ ಓ......
ಮಕ್ಕಳಿಗೆ ಓ ಆಡಲು ಆಟಿಕೆ ಕೊಡಬೇಕೆಂದರೂ ಓ......
ಛಲ ಕಟ್ಟುತ್ತಾರೆ ಓ ಹಟ ಸಾಧಿಸುತ್ತಾರೆ ಓ ಮಕ್ಕಳು ಅಜ್ಜನವರೇ......ಓ......
ಛಲ ಕಟ್ಟಿ ಓ ಹಠಸಾಧನೆ ಮಾಡುತ್ತಾರೆ ಓ......
ಯಾರು ಮಗಾ ಓ ಸೊನ್ನೆ ಕೇಳು......ಓ......
ಆದಿಪೂರ್ವದ ಮಣೆ ಇದೆ ಓ......
ಮರದ ಮಣೆ ಓ ಇದೆ......ಓ......
ಹೊಂಗರಕನ ಕಾಯಿ ಇದೆ ಎಂದು ಹೇಳುತ್ತಾರೆ ಓ ಅಜ್ಜನವರು......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರರು ಹೇಳುತ್ತಾರಂತೆ......
ನಾರಾಯಣ ಅಜ್ಜನವರೆ ಓ ಮರದ ಮಣೆ ಓ ಹೊಂಗರಕಮರದ ಕಾಯಿಯಲ್ಲಿ ಓ...
ಪ್ರೀತಿಯ ಮಕ್ಕಳು ಓ ಯಾಕೆ ಆಡುವುದು ಅಜ್ಜನವರೇ ಓ ಕೇಳಿದಿರೆ......ಓ......
ನಮ್ಮ ಮಕ್ಕಳಿಗೆ ಓ ಬೆಳ್ಳಿಯ ಮಣೆ ಓ ಮಾಡಿಸಬೇಕು ನಮಗೆ ಓ......
ಬಂಗಾರದ ಹರಳು ಓ ಆಗಬೇಕೆಂದಳು......ಸೊನ್ನೆ......
ಹಠ ಕಟ್ಟುತ್ತಾಳೆ ಓ ಹಠ ಸಾಧನೆ ಮಾಡುತ್ತಾಳೆ......ಓ......
ತಣ್ಣೀರು ಮುಟ್ಟುವುದಿಲ್ಲ ಓ ಬಿಸಿನೀರು ಕುಡಿಯುವುದಿಲ್ಲ......
ಇಂದಾದರೋ ಇಂದು ಅಷ್ಟು ಹೇಳುವುದನ್ನು ಕೇಳಿದಳಂತೆ ಇಂದು ಅಜ್ಜನವರು

ಗುರು ಮಾರ್ಲರು ಹೋದರಂತೆ ಇಂದು......
ಕಲ್ಲಕಲೆಂಬಿಯಿಂದ ಓ ಕಂಚಿನ ಬೀಗಕ್ಕೆ
ಮಿಂಚುವ ಕೀಲಿಕೈ ಹಾಕಿ ಓ ಬೆಳ್ಳಿ ತೆಗೆದುಕೊಂಡು ಬಂದರಂತೆ......ಓ......
ಬೆಳ್ಳಿ ತಂದರು ಓ ಆಚಾರಿ ಕೊಟ್ಟಿಗೆಗೆ ಓ ಹೋದರು ಅಜ್ಜನವರು......
ನಾರಾಯಣಾ ಓ ನಾರಾಯಣ ಓ ನಾರಾಯಣ ಆಚಾರಿಯೇ......ಓ......
ನಾರಾಯಣ ಆಚಾರಿ ಎಂದು ಹೆಸರು ಓ ಕರೆದು ಅಜ್ಜನವರು......
ನಮ್ಮ ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ......
ಸೊನ್ನೆ ಓ ಎರಡು ಮಕ್ಕಳನ್ನು ಓ ಹಡೆದಿದ್ದಾಳೆ......
ಹಡೆದ ಓ ಮಕ್ಕಳು......ಓ......
ಅಬ್ಬಗದಾರಗ ಓ ಮಕ್ಕಳಿಗೆ ಓ ಚೆನ್ನೆಮಣೆ ಆಗಬೇಕು ಎಂದು ಓ ಹೇಳಿದರು ಅಜ್ಜನವರು
ಒಂದೇ ಹೊಡತಕ್ಕೆ ಓ ಒಂದೇ ಕಾಯಿಸುವಿಕೆಗೆ ಓ
ಬೆಳ್ಳಿಯ ಮಣೆ ಓ ಮಾಡಿಸಿ ಓ ಕೊಟ್ಟಿದ್ದಾನೆ ಆಚಾರಿ......ಓ......
ಏಳೇಳು ಓ ಹದಿನಾಲ್ಕು ಮನೆಯ ಬಂಗಾರದ ಹರಳು ಓ ತಂದುಕೊಟ್ಟಿದ್ದಾರೆ......
ಅಜ್ಜನವರು ಹಾಗೂ ಗುರು ಮಾರ್ಲರು ಓ ಮಣೆ ತಂದರು......
ಚಿಕ್ಕಚಾವಡಿ ಓ ಸಿದ್ರಮಂಪಟದಲ್ಲಿ ಓ......
ಸಾನೆರಿ ಚಾವಡಿಗೆ ಓ ಮಕ್ಕಳನ್ನು ಕರೆದರು......ಓ......
ನಾರಾಯಣ ಮಗ ಓ ಅಬ್ಬಗ ಓ ದಾರಗ ಎಂದು ಓ ಅಜ್ಜನವರು ಕರೆದರು......
ಕರೆದ ಘಳಿಗೆ ಓ ನಿಮಿಷ ಹೊತ್ತಲ್ಲಿ......
ಪಡುವಣ ಪಡಸಾಲೆಯಿಂದ ಓ ಮೂಡಣ ಮುಖಸಾಲೆಗೆ......
ಓಡೋಡುತ್ತಾ ಓ ಎರಡು ಮಕ್ಕಳೂ ಓ ಬಂದರಂತೆ......
ನಡುಮಧ್ಯದಲ್ಲಿ ಓ ಅಜ್ಜನವರು ಕುಳಿತರು......
ಮಕ್ಕಳಿಗೆ ಆಟದ ಮಣೆ ತೋರಿಸಿದರು ಓ ಕಾಯಿ ಹಾಕಿಸಿದರು......
ಬೆಳ್ಳಿಯ ಮಣೆಗೆ ಬಂಗಾರದ ಹರಳು ಓ ಹಾಕಿಸಿದರು ಅಜ್ಜನವರು......ಓ......
ಮಕ್ಕಳು ಆಡುತ್ತಾ ಓ ಇದ್ದಾರಂತೆ......ಓ...... ಎರಡು ಮಕ್ಕಳೂ......
ಮಕ್ಕಳು ಆಡುತ್ತಿರುವ ಓ ಸಮಯದಲ್ಲಿ......ಓ......
ಅಂದಿನ ದಿನ ಓ ಹೋಗಿದೆಯಂತೆ......ಓ......
ಮರುದಿನ ಓ ಬಂದಿದೆಯಂತೆ......
ಉರ್ಕಿದೊಟ್ಟುವಿನ ಓ ಬೈಲಲ್ಲಿ......
ಕೆಳಬದಿಯ ಓ ಹೆಣ್ಣುಗಳು......ಓ......
ಮೇಲಿನ ಬದಿಯ ಓ ಹೆಣ್ಣುಗಳಂತೆ......ಓ......
ಅಂದು ಅಪವಾದ ಹೊರಿಸಿದ ಹೆಣ್ಣುಗಳಂತೆ ಓ......ಸೊನ್ನೆಗೆ
ಸೊನ್ನೆಯ ಮಕ್ಕಳನ್ನು, ಅಬ್ಬಗದಾರಗ ಮಕ್ಕಳನ್ನು......

ಅವರು ನಾಲ್ಕು ಹೆಣ್ಣುಗಳೂ ಓ ಕಣ್ಣಿಂದ ನೋಡಲಿಲ್ಲ......
ಒಬ್ಬರಿಗೊಬ್ಬರು ಓ ಮಾತನಾಡಿಕೊಳ್ಳುತ್ತಾರಂತೆ ಹೆಣ್ಣುಗಳು......
ನಾರಾಯಣ ಓ ಕೇಳಿದ್ದೀರಾ......
ಗುರ್ಕಿದೊಟ್ಟಿನ ಅರಮನೆಗೆ ನಾವಾಗಿ ಓ ಹೋಗಲಿಲ್ಲಪ್ಪಾ......ಓ......
ಸೊನ್ನೆಯ ಮಕ್ಕಳನ್ನು ನಾವು ನೋಡಲಿಲ್ಲಾ......
ಚೆನ್ನೆಮಣೆ ಮಾಡಿಸಿದ್ದಾರಂತೆ ಬೆಳ್ಳಿಯ ಮಣೆ ಬಂಗಾರದ ಹರಳಂತೆ......
ಮಕ್ಕಳಿ ಚೆನ್ನೆ ಆಡುವುದನ್ನು ನಾವು ನೋಡಲಿಲ್ಲ......
ಎಂಬುದಾಗಿ ಹೇಳುತ್ತಾರೆ ಓ ಮೇಲಿನ ಬದಿಯ ಎರಡು ಹೆಣ್ಣುಗಳೂ......
ಅಷ್ಟು ಹೊತ್ತಿಗೆ ಓ ಹೇಳುತ್ತಾರಂತೆ......
ಬದಿ ಓ ಎರಡು ಹೆಣ್ಣುಗಳೂ......
ಸೊನ್ನೆ ಆಡುವುದನ್ನು ನೊಡುವುದಲ್ಲ ಹುಟ್ಟಿದ ಮಕ್ಕಳನ್ನೆ ನಾವು ನೋಡಲಿಲ್ಲ......
ನೋಡಲು ಹೋದರೆ ಏನು ಹೇಳುತ್ತಾರೋ ಸೊನ್ನೆ ಮದುಮಗಳು......
ಏನು ಹೇಳುತ್ತಾರೋ ಎಂದು ಓ ಇವರು ಮಾತನಾಡಿಕೊಳ್ಳುತ್ತಾರಂತೆ......
ಣ ಹಾಕಿಸಿ ಓ ಬಾಯಿಯ ಆಸೆ (ನಾಲಗೆಯ ಚಪಲ) ಓ ಕಳೆಯುವಾಗಲೂ......
ಓ......
ಹಿಯಾಳಿಸಿ ಹೀಯಾಳಿಸಯೇ ತುಪ್ಪ ಬಡಿಸಿದ ಸೊನ್ನೆ ಮದಮಗಳು ಅವರು......
ಅದು ಹೋಗಿ ಮಕ್ಕಳನ್ನು ನೋಡಿದರೆ
ಏನು ಉತ್ತರ ಕೊಡುತ್ತಾರೋ ಏನೋ ಎಂದು ಓ ಹೇಳುತ್ತಾರೆ ಹೆಣ್ಣುಗಳು...ಓ....
ನಾರಾಯಣಾ ಓ ನಾರಾಯಣ ಅಕ್ಕನವರೇ......ಓ......
ಹೇಳಿದರೆ ಹೇಳಲಿ ಓ ಮಕ್ಕಳನ್ನು ನೋಡುವಾ ಎಂದು ಹೇಳುತ್ತಾರೆ ಹೆಣ್ಣುಗಳು....
ಅಷ್ಟು ಹೇಳುವಾಗ ನಾಲ್ಕು ಮನೆಯ ಓ ನಾಲ್ಕು ಹೆಣ್ಣುಗಳು ಓ ಉರ್ಕಿದೊಟ್ಟುವಿನ ಓ ಬೈಲುಗದ್ದೆಯಲ್ಲೇ......
ಎಲೆಮರೆ ಓ ಕಾಯಿಮರೆ ಆಗುತ್ತಾ ಓ ಒಬ್ಬರಿಗೊಬ್ಬರು ಹಿಂದೆಮುಂದೆ ಆಗುತ್ತಾ......
ಹಿಂದೆ ಮುಂದೆ ಆಗುತ್ತಾ ಓ ಬರುವಾಗ ಓ......ಹೇಳುತ್ತಾರಂತೆ......
ದೂರದಿಂದ ಬರುವುದನ್ನು ನೋಡಿದರು ಸೊನ್ನೆ......
ನಾರಾಯಣ ಮಗಾ ಓ ಮಕ್ಕಳೇ ನೀವೂ......
ಅವರು ಬಂದು ಅಂಗಳದಲ್ಲಿ ನಿಲ್ಲುವಾಗ ಓ ನೀವು ಹೇಳಬೇಕು......
ಜೋರಜೋರು ಹಸಿವಾಗುತ್ತದೆ ನಮಗೆಂದು ಜೋರುಜೋರಾಗಿ ಅಳಬೇಕೆಂದು ಹೇಳಿದರು......
ಓಡೋಡುತ್ತಾ ಹೋದರು ಅವರು......
ಸೊನ್ನೆ ಮದುಮಗಳು ಹೋದರಂತೆ......
ಹಟ್ಟಿಯ ಕಡೆಗೆ ಹೋದರು ಸೊನ್ನೆ......
ಕಪಿಲೆ ದನದ ಒಂದು ಮುದ್ದೆ ಸೆಗಣಿ ತಂದು......

ತೆಳುವಾಗಿ ಕಲಸಿ ದಪ್ಪವಾಗಿ ಚಿಮುಕಿಸಿ......
ಅಂಗಳದಲ್ಲೇ ಸೆಗಣಿ ಚಿಮುಕಿಸಿ ಮರಿಗೆಯಲ್ಲಿ ಸೊನ್ನೆ ಇಟ್ಟರಂತೆ ಸೊನ್ನೆ ಮದುಮಗಳು ಇಟ್ಟರಂತೆ......
ನಾರಾಯಣಾ ನಾರಾಯಣಾ ಓ......
ನಾರಾಯಣಾ ನಾರಾಯಣಾ......
ಕಲ್ಲಿನ ಹೆಬ್ಬಾಗಿಲು ಕಂಚಿನ ದಾರಂದ ಓ ದಾಟಿಕೊಂಡು ಬರುವಾಗ......
ಚಿಕ್ಕ ಚಾವಡಿ ಸಿದ್ರ ಮಂಟಪದಲ್ಲಿ ಓ......
ಮಕ್ಕಳು ಅಳುತ್ತಾ ಬೊಬ್ಬಿಡುತ್ತಾ ಇದ್ದಾವೆ......
ಆರುವರೆ ಅಂಗಣ ಮೂರುವರೆ ಅಂಗಳದಲ್ಲಿ ಓ......
ಸೊನ್ನೆ ಇಂದು ಸೆಗಣಿ ಕಲಸಿ ಓ ಚಿಮುಕಿಸುತ್ತಾ ಇದ್ದಾರೆ......
ನಾರಾಯಣ ಓ ನಾರಾಯಣಾ ಅಕ್ಕನವರೆ......
ಮಕ್ಕಳು ಅಳುತ್ತಿದ್ದಾವೆ ಓ ಮಕ್ಕಳು ಅಳುತ್ತಿದ್ದಾರೆ
ನೀವೇನು ಸೆಗಣಿ ಚಿಮುಕಿಸುತ್ತೀರಿ......
ಮಕ್ಕಳನ್ನು ಹೋಗಿ ಸಮಾಧಾನಿಸಿ ಅಕ್ಕನವರೇ......
ನಾವು ಸೆಗಣಿ ಚಿಮುಕಿಸುತ್ತೇವೆಂದರು
ನಾರಾಯಣ ಓ ನಾರಾಯಣ ಹೆಣ್ಣುಗಳೇ ಓ......
ಮಕ್ಕಳಿಗೇನು ಅಳುವುದೇ ಕೆಲಸ
ಆರುವರೆ ಅಂಗಣ ಮೂರುವರೆ ಅಂಗಳದಲ್ಲಿ ಓ......
ಒಂದು ಮುದ್ದೆ ಸೆಗಣಿ ಓ ಇಲ್ಲದೆ ಹೋಗಿದೆ......ಓ......
ನನ್ನ ಗಂಡ ಓ ಮಕ್ಕಳ ಚಾಕರಿಯೇ ಮಾಡುವುದೇ......
ಅಂಗಳಕ್ಕೆ ಸೆಗಣಿ ಸಾರಿಸುವುದಿಲ್ಲವೇ ಎಂದು ಓ
ನನ್ನ ಗಂಡ ಓ ಬೈಯುತ್ತಾರೆ ನನಗೆಂದು ಓ ಹೇಳಿದರು ಸೊನ್ನೆ ಮದುಮಗಳು......
ನಾರಾಯಣ ಅಕ್ಕನವರೇ ನಾವು ಚಿಮುಕಿಸುತ್ತೇವೆ ಓ......
ಮಗುವನ್ನೂ ಸಮಾಧಾನಪಡಿಸಿ ಎಂದು ಹೆಣ್ಣುಗಳು ಹೇಳುವಾಗ......
ಕೈಕಾಲು ಓ ತೊಳೆದರು ಸೊನ್ನೆ ಓ......
ಚಿಕ್ಕ ಚಾವಡಿಗೆ ಓ ಸಿದ್ರಮಂಪಟಕ್ಕೆ ಓ ಹೋದರು ಸೊನ್ನೆ......
ಮಕ್ಕಳಿಗೆ ಹಿತವಚನ ಹೇಳುವಾಗ......
ಈ ನಾಲ್ಕು ಮನೆಯ ನಾಲ್ಕು ಹೆಣ್ಣಗಳು......
ತನ್ನ ಮೈಗೆ ಸೆಗಣಿ ಚಿಮ್ಮಿದಳು ಎಂದು
ಅವರವರು ಹೊಡೆದಾಡಿಕೊಳ್ಳಲು ಶಾಪ ಕೊಟ್ಟಳು ಸೊನ್ನೆ ಮದುಮಗಳು......
ನಾರಾಯಣ ಹೆಣ್ಣುಗಳೇ ಓ ನೀವು ಉರ್ಕಿದೊಟ್ಟಿನ ಅರಮನೆಯಲ್ಲಿ ಓ......
ಯಾಕಾಗಿ ಅಂಕ ಕಾಳಗ ಹೋಗುತ್ತೀರೀ ಹೆಣ್ಣುಗಳೇ ಎಂದು ಸೊನ್ನೆ ಉತ್ತರ (ಪ್ರಶ್ನೆ) ಕೇಳುತ್ತಾಳೆ ಅವರಿಗೆ......

ನೀವು ಗಲಾಟೆ ಮಾಡಿಕೊಂಡು ಹೊಡೆದಾಡಿಕೊಳ್ಳುವವರಾದರೆ
ನಿಮ್ಮ ನಿಮ್ಮ ಮನೆಯಲ್ಲಿ ಜಾಗ ಇಲ್ಲವೇ......
ಉರ್ಕಿದೊಟ್ಟಿನ ಅರಮನೆಗೆ ಓ ಯಾಕೆ ಬಂದಿರಿ ಎಂದು......ಓ......
ಅವರ ಜಗಳ ಬಿಡಿಸಿ ಓ ಬುದ್ಧಿವಾದ ಹೇಳಲು ಹೋಗುತ್ತಾಳೆ ಸೊನ್ನೆ......
ಮುಂದಕ್ಕೆ ಅಂತಹ ವರ ಕೊಟ್ಟಳು......
ಮಧ್ಯೆ ಪ್ರವೇಶಿಸಿ ಓ ಬುದ್ಧಿ ಹೇಳುತ್ತಾಳೆ ಸೊನ್ನೆ......ಓ......
ಉರ್ಕಿದೊಟ್ಟುವಿನ ಓ ಸೊನ್ನೆ ಮದುಮಗಳು......
ನಾರಾಯಣ ಓ ನಾರಾಯಣಾ......
ನಾರಾಯಣ ಓ ನಾರಾಯಣಾ......
ಅಂದಿನ ದಿನ ಹೋಗಿದೆ ಅವರಿಗೆ......
ಮರುದಿನ ಓ ಬಂದಿದೆಯಂತೆ......ಓ......
ಬೈಲಲ್ಲಿ ಸಾವಿರಮುಡಿ ಗದ್ದೆ ಆಗಿದೆ......ಓ......
ಬೆಟ್ಟುವಿನಲ್ಲಿ ನೂರಾರು ಮುಡಿ ಬೆಟ್ಟುಗದ್ದೆಯಂತೆ......ಓ......
ಉರ್ಕಿದೊಟ್ಟಿನ ಅರಮನೆಯಲ್ಲಿ......ಓ......
ಹಾರೆ (ಗುದ್ದಲಿ) ಇಡುವ ಕೊಟ್ಟಿಗೆಗೆ ಹೋದರು......ಓ......
ಬಸರೂರು ಪನ್ನೆ(?)ಹಾರೆ ತೆಗೆದರು......
ಎಡ ಹೆಗಲಲ್ಲಿ ಗುರು ಮಾಲ್ರು ಇಟ್ಟರು......ಓ......
ಬೈಲುಗದ್ದೆಯ ಮೂಲಕ ಹೋದವರು ಓ ಏರಿದ ನೀರು ತಗ್ಗಿಸಿಕೊಂಡು ಓ ತಗ್ಗಿದ ನೀರು ಏರಿಸಿಕೊಂಡು
ಹಳೆಯ ತೆರಪನ್ನು ಮುಚ್ಚಿಕೊಂಡು ಹೊಸ ತೆರಪನ್ನು ಮಾಡಿಕೊಂಡು
ಬೈಲುಗದ್ದೆಯ ಮೂಲಕ ಹೋದವರು ಓ ಬೆಟ್ಟುಗದ್ದೆಯ ಮೂಲಕ ಬರುತ್ತಾರೆ...ಓ...
ಉರ್ಕಿದೊಟ್ಟುವಿನ ಓ ಗುರು ಮಾರ್ಲರು......
ಇಂದಾದರೋ ಇಂದು ಉರ್ಕಿದೊಟ್ಟುವಿನ ಓ ಬೈಲುಗದ್ದೆಯ ಮೂಲಕ ಬಂದರಂತೆ
ಇಂದಜು ಹಾರೆ ಕೊಂಡುಹೋಗಿ ಕೊಟ್ಟಿಗೆಯಲ್ಲಿ ಇಟ್ಟರಂತೆ ಇಂದು......
ಹಾರೆ ಕೊಂಡುಹೋಗಿ ಕೊಟ್ಟಿಗೆಯಲ್ಲಿ ಇಟ್ಟರಂತೆ ಇಂದು ಉರ್ಕಿದೊಟ್ಟು ಅರಮನೆಗೆ ಬರುವಾಗಲಂತೆ ಚಿಕ್ಕಚಾವಡಿ ಸಿದ್ರಮಂಪಟದಲ್ಲಿ ಬಾಜಿರದ ಹಲಗೆಯಲ್ಲಿ ಒತ್ತೊತ್ತಾಗಿ ಕುಳಿತುಕೊಳ್ಳುವಾಗ......
ಗುರು ಮಾರ್ಲರಿಗೆ ಪಿಂಗಾಣಿಯಲ್ಲಿ ಹಾಲು ಓ ಗಿಂಡಿಯಲ್ಲಿ ನೀರು ಹಿಡಿದುಕೊಂಡು
ಸೊನ್ನೆ ಮದುಮಗಳು ಓ ಬರುತ್ತಾಳಂತೆ ಓ......
ಹಾಲು ತೆಗೆದರು ಓ ಹಾಲು ಕುಡಿದರು ಬಾಯಾರಿಕೆಗೆ
ಓ ಎಲೆ ಅಡಿಕೆ ತಿಂದರು......
ನಾರಾಯಣ ಓ ನಾರಾಯಣ ಸೊನ್ನೆ......ಓ......
ಮಕ್ಕಳಿಗೆ ಊಟ ಮಾಡಿಸಿದೆಯಾ ಓ ಹಾಲು ಕುಡಿಸಿದೆಯಾ ಎಂದು ಕೇಳುತ್ತಾರೆ

ಗುರುಮಾರ್ಲರು......
ನಾರಾಯಣ ಗಂಡನೇ, ಓ ಮಕ್ಕಳಿಗೆ ಊಟಮಾಡಿಸಿ ಓ ಹಾಲುಕೊಟ್ಟು
ಮಕ್ಕಳನ್ನು ಮಲಗಿಸಿ ನಾನು ಬಂದದ್ದು ಗಂಡನೇ......
ನಾವು ಹಾಲನ್ನ (ಹಾಲುಗಂಜಿ) ಊಟ ಮಾಡೋಣ ಎಂದಳು......
ಎರಡು ಬಟ್ಟಲು ತೊಳೆದಳು ಸೊನ್ನೆ......
ಅಗೊಳಿಯ ತಂಗೂಳು ಹಾಕಿದಳು ಓ ಚಿಕ್ಕ ಮಡಕೆಯ ಮೊಸರು ಸುರಿದಳು......
ಮರಿಗೆಯ ಉಪ್ಪು ಉಪ್ಪಿನಕಾಯಿ ಓ ಬಡಿಸಿದಳು ಸೊನ್ನೆ ಓ......
ಕಣಿಲೆ ಕಾವಟೆಯ ಓ ಹುಳಿ ಲಿಂಬೆಯ ಓ
ಮಾದಿರಫಲ ಮಾಫಲದ ಉಪ್ಪಿನಕಾಯಿ ಬಡಿಸಿದಳು......
ಮುಂಜಾವಿನ ಹಾಲನ್ನ ಉಂಡರು ಓ......
ಮದುಮಗ ಮದುಮಗಳು (ಗಂಡಹೆಂಡತಿ) ಸೊನ್ನೆ ಗುರು ಮಾರ್ಲರು ಓ......
ಮುಖ ತೊಳೆದು ಓ ಎಲೆಅಡಕೆ ತಿಂದರು......
ನಾರಾಯಣ ಮಗ ಮಕ್ಕಳೇ ಓ ಮಕ್ಕಳೇ......
ನಮ್ಮ ತಲೆಯಲ್ಲಿ ಓ ಹೇನಿನ ಎರಡು ಸೀರು ಓ ಇದೆ ಮಗಾ......ಓ......
ಎರಡು ಹೇನು ತೆಗೆಯುತ್ತೀರಾ ಮಕ್ಕಳೆ ಎಂದು
ತಂದೆ ಗುರು ಮಾರ್ಲರು ಓ ತಾಯಿ ಸೊನ್ನೆ ಮದುಮಗಳು ಓ ಕೇಳುತ್ತಾರಂತೆ....
ನಾರಾಯಣ ಓ ನಾರಾಯಣ ತಾಯಿಯವರೇ......
ನಾವು ಕೊಟ್ಟು ಬಿಡುತ್ತೇವೆ ಓ ಬಂಗಾರದ ಬಾಚಣಿಗೆ ಓ ಬೆಳ್ಳಿಯ ಸೀರಣಿಗೆ......
ರಾವಿನ್ನ (?) ಗೆಜ್ಜೆಕತ್ತಿ ಓ ಕೊಟ್ಟುಬಿಡಿ ಎಂದಳು......
ಬಡಕ್ಕನೆ ಎದ್ದರು ಹೆಂಗುಸು ದಿಡಕ್ಕನೆ ನಿಂತುಕೊಂಡರು......
ದಿಡಕ್ಕನೆ ನಿಂತು ಓ ಹೇಳುತ್ತಾರೆ ಹೆಂಗುಸು ಅವರು......ಓ......
ಏಳು ಅಂತರದ ಯಮದೇವಿ ಗುಡಿಗೆ ಓ ಹೊಕ್ಕರು ಹೆಂಗುಸು......ಓ......
ಬಂಗಾರದ ಬಾಚಣಿಗೆ ಓ ಬೆಳ್ಳಿಯ ಸೀರಣಿಗೆ ಓ......
ರಾವಿನ್ನ (?) ಗೆಜ್ಜೆಕತ್ತಿ ಓ ತಂದರಂತೆ......
ಎರಡು ಮಕ್ಕಳ ಓ ಎರಡು ಕೈಯಲ್ಲಿ ಕೊಟ್ಟರು ಹೆಂಗುಸು ಓ......
ಸೊನ್ನೆ ಮದುಮಗಳು ಓ ಕೊಟ್ಟರಂತೆ......ಓ......
ನಾರಾಯಣ ಓ ನಾರಾಯಣ......ಓ
ಅಕ್ಕ ಅಬ್ಬಗ ಓ ರಾವಿನ್ನ ಗೆಜ್ಜೆಕತ್ತಿ ಓ ಬಂಗಾರದ ಬಾಚಣಿಗೆ ಓ
ಬೆಳ್ಳಿಯ ಸೀರಣಿಗೆ ಓ ಅಕ್ಕ ಅಬ್ಬಗಾ ಓ......
ಗುರು ಮಾರ್ಲರು ತಲೆಯನ್ನು......
ಓ ಮಡಿಲ ಮೇಲಿಟ್ಟಳು
ಗುರು ಮಾರ್ಲರ ತಲೆಯ ಹೇನುಕುಟ್ಟಲು (ಕುಟುಕಲು) ಓ ಆರಂಭಿಸಿದಳು...ಅಬ್ಬಯಾ...
ತಂಗಿ ದಾರಗಾ......ಓ......ಬಂಗಾರದ ಬಾಚಣಿಗೆ ಓ ಬೆಳ್ಳಿಯ ಸೀರಣೆ ಓ ಹಿಡಿದಳು

ಮಗಳು......
ರಾವಿನ್ನ ಗೆಜ್ಜೆಕತ್ತಿ ಹಿಡಿದಳು ಓ ಕಾಲು ನೀಡಿದಳು......ಓ......
ನಾರಾಯಣ ತಾಯಿಯವರೇ ಓ ನನ್ನ ಅಕ್ಕನವರು......ಓ......
ತಂದೆಯವರ ಹೇನು ಕುಟ್ಟುವಾಗ ಓ ನಾನು ನಿಮ್ಮ
ಹೇನು ಕುಟ್ಟುತ್ತೇನೆಂದು......
ತಾಯಿಯ ಓ ತಲೆ ತೆಗೆದು ಓ ಮಡಿಲಲ್ಲಿ ಇಟ್ಟಳು......ಓ......
ಎಡದಿಂದ ಓ ಬಲದವರೆಗೆ ಓ ಸೀರಣಿಗೆ ಹಾಕಿ ಓ ಅಕ್ಕತಂಗಿ......ಓ
ತಾಯಿತಂದೆಯರ ಹೇನು ತೆಗೆಯಲು ಕುಳಿತರು......
ಹೇನು ನೋಡುತ್ತಿರುವಾಗ ಓ......
ಕಾಣುತ್ತದಪ್ಪಾ, ಕುತ್ತಿಗೆ ಸುಸ್ತಾಯಿತು ಮಕ್ಕಳಿಗೆ ಬೆನ್ನು ಬಳಲಿತು......
ನಾರಾಯಣ ಓ ನಾರಾಯಣ ದೇವರೇ......
ಬೆನ್ನು ಮುರಿಯುತ್ತದೆ ಓ ಕುತ್ತಿಗೆ ನೋವಾಗುತ್ತಿದೆ ಎಂದು......
ತಲೆಯನ್ನು ಓ ಎತ್ತಿ ಓ ಮೇಲೆ ನೋಡುವಾಗ......
ಉರ್ಕಿದೊಟ್ಟುವಿನ ಓ ಬೈಲುಗದ್ದೆಯ ಮೂಲಕ ಓ ಗದ್ದೆಯ ಬದುವಿಗೆ ಮೇಲೆ ಓ
ನಾಲ್ಕು ಜನ ನೆಂಟರು
ಓ ಬರುವ ಅಂದ ಓ ಕಾಣಿಸುತ್ತಿದೆಯಂತೆ......
ನಾರಾಯಣ ತಾಯಿಯವರೆ ಓ ನಾರಾಯಣ ತಾಯಿಯವರೆ......ಓ......
ನಮ್ಮ ಕಂಬಳ ಗದ್ದೆಯ ಬದುವಿನ ಮೇಲೆ ಓ ನಾಲ್ಕು ಜನ ನೆಂಟರು ಓ......
ಬರುವ ಅಂದ ಕಾಣಿಸುತ್ತದೆ ಎಂದು ಓ ಹೇಳಿದಳು ಮಗಳು......
ಅಷ್ಟು ಹೇಳಲು ಓ ಅಕ್ಕ ಅಬ್ಬಗ ಓ ತಲೆ ಎತ್ತಿ ನೋಡಿದಳು......ಓ......
ಏಳಿ ತಂದೆಯವರೇ ಓ ನೆಂಟರು ಬರುವ ಅಂದ ನೋಡಿ ಎನ್ನುವಾಗ......
ನಾರಾಯಣ ಓ ನಾರಾಯಣ ಮಕ್ಕಳೇ......ಓ......
ಏಳು ಏಳೂವರೆ ವರ್ಷದ ಮಕ್ಕಳು ನಿಮಗೆ ಓ ದಾರಿಗೆ ಕಣ್ಣು ಬೀದಿಗೆ ದೃಷ್ಟಿ
ಆಯಿತೇ ನಿಮಗೆಂದು ಗುರು ಮಾರ್ಲರು ಹೇಳುತ್ತಾರಂತೆ......
ಅಷ್ಟು ಹೇಳುವುದನ್ನು ಓ ಕೇಳಿ......
ಮಡಿಲಿನಿಂದ ತಲೆ ಎತ್ತಿ ನೋಡುವಾಗ......ಓ......
ಗದ್ದೆಯ ಬದುವಿನಲ್ಲಿ ಓ ಆ ಬದಿಯಿಂದ ಈ ಬದಿಗೆ ಓ ನಾಲ್ಕು ಜನ ನೆಂಟರು
ಬರುವ ಅಂದ ನೋಡಿದರಂತೆ......
ನಾರಾಯಣ ಮಗ ಮಕ್ಕಳೇ ಓ
ನಮ್ಮ ತಲೆ ತುರುಬು ಬಿಟ್ಟುಬಿಡಿ ಮಕ್ಕಳೇ ಓ......
ಏಳು ಅಂತರದ ಯಮದೇವಿ ಗುಡಿಗೆ ಹೋಗಿ ಮಕ್ಕಳೇ ಎಂದು......
ಮಕ್ಕಳನ್ನು ಓ ಕಳುಹಿಸಿದರಂತೆ......
ಓಡೋಡುತ್ತಾ ಓ ಹೋದರು ಗುರುಮಾರ್ಲರು......ಓ......

ಆಕಾಶದೆತ್ತರದ ಏತದ ಗಳೆ ಹಿಡಿದರು ಓ......
ಪಾತಾಳದ ಹನಿ(ತಂಪು)ನೀರು ತೆಗೆದರು......
ಕಲ್ಲಮರಿಗೆಗೆ ಒಂದು ಮರಿಗೆ ನೀರು ಸೇದಿ ಹಾಕಿದರು......
ಕಂಚಿನ ಕೈಪಾತ್ರೆ (ಕೈಯುಳ್ಳ ತಂಬಿಗೆ) ಹಾಕಿದರು......
ನಾಲ್ಕು ಜನ ನೆಂಟರಿಗೆ ಓ ನಾಲ್ಕು ತಂಬಿಗೆ ನೀರು ಕೊಡುವಾಗ ಓ......
ಕೈಕಾಲಿನ ಧೂಳು ಎದೆಯ ಧೂಳು, ಮುಖದ ಮುತ್ತಿನಂತಹ ಬೆವರು ತೊಳೆದರು....
ನೆಂಟರನ್ನು ಕರೆದುಕೊಂಡು ಬಂದರು......
ಆರೂವರೆ ಅಂಗಣ ಮೂರೂವರೆ ಅಂಗಳಕ್ಕೆ ಬಂದರು
ಮೆಟ್ಟಲಿಲ್ಲ ಚಪ್ಪಲಿ ಕಳಚಿಟ್ಟರು......
ಆವರಣದ ಗೋಡೆಯಲ್ಲಿ ಓಲೆಗರಿಯ ಕೊಡೆ ಇರಿಸಿದರು......
ನಾರಾಯಣ ಓ ನಾರಾಯಣಾ
ನಾರಾಯಣ ಓ ನಾರಾಯಣಾ
ಇಂದಾದರೋ ಇಂದು ಬಂದಿರುವ ನೆಂಟರಂತೆ ಇಂದು ಉರ್ಕಿದೊಟ್ಟಿನ ಅರಮನೆಗೆ ಹೋದರಂತೆ ಇಂದು ಚಿಕ್ಕಚಾವಡಿ ಸಿದ್ರಮಂಪಟ ತಾಳೆಗರಿ ಚಾಪೆಯಲ್ಲಿ
ಓ ಬಾಜಿರದ ಹಲಗೆಯಲ್ಲಿ ಓ......
ಒತ್ತೊತ್ತಾಗಿ ಓ ನೆಂಟರು ಕುಳಿತರು......
ಏಳು ಅಂತರದ ಯಮದೇವಿ ಗುಡಿಗೆ ಹೋದರಂತೆ......
ಬೆಳ್ಳಿಯ ಹಾಲಿನ ಗಡಿಗೆಯಿಂದ ಓ ನಾಲ್ಕು ಜನ ನೆಂಟರಿಗೆ ಓ ನಾಲ್ಕು ಗಿಂಡಿ ಹಾಲು ಓ ಕೊಟ್ಟರು ಸೊನ್ನೆ......
ಪಿಂಗಾಣಿಯಲ್ಲಿ ಹಾಲು ಗಿಂಡಿಯಲ್ಲಿ ನೀರು ಓ ತಟ್ಟೆಯಲ್ಲಿ ಎಲೆ ಅಡಕೆ ಓ ಗಂಡನ ಕೈಯಲ್ಲಿ ಕೊಟ್ಟಳು ಸೊನ್ನೆ......
ಗಂಡ ಓ ಗುರು ಮಾರ್ಲ ಓ......
ನೆಂಟರಿಗೆ ಕೊಂಡುಹೋಗಿ ಓ ಕೊಟ್ಟರು......
ಪಿಂಗಾಣಿಯ ಹಾಲಲ್ಲಿ ಓ ಬಾಯಾರಿಕೆ ತಣಿಸಿದರು ಓ ಬೇಸರಕ್ಕೆ ಎಲೆ ಅಡಿಕೆ ತಿಂದರು...
ಪಟ್ಟಸೂಡ ಮಂಚದಲ್ಲಿ ಬಾಜಿರದ ಹಲಗೆಯಲ್ಲಿ ತಾಳಗರಿಯ ಚಾಪೆಯಲ್ಲಿ ಜೊತೆಜೊತೆಗೆ......
ನಾಲ್ಕು ಜನ ನೆಂಟರೂ ಗುರ ಮಾರ್ಲರೂ ಓ ಮಾತನಾಡುತ್ತಿರುವಾಗ......
ಅಕ್ಕಪಕ್ಕದ ಹಳೆಯ ಸುದ್ದಿ ದಿನದಿನದ ಒಳಸುದ್ದಿ ಮಾತನಾಡುತ್ತಿರುವಾಗ......ಓ......
ಎಲ್ಲಿಂದ ಬಂದಿರಿ ನೆಂಟರೆ ನೀವು ಎಲ್ಲಿಗೆ ಹೋಗುವುದೆಂದು ಕೇಳುವಾಗ ಹೇಳುತ್ತಾರೆ...
ನಾಲ್ಕು ಜನ ನೆಂಟರು ಹೇಳುತ್ತಾರಂತೆ......
ಅಕ್ಕಪಕ್ಕದ ಹಳೆಯ ಸುದ್ದಿ ಆಚೆ ಇರಲಿ ದಿನನಿತ್ಯದ ಒಳಸುದ್ದಿ ಈಚೆ ಇರಲಿ......
ಮಾರುವ ದನ ಇದೆಯೇ ಕೊಡುವ ಹುಡುಗಿ ಇದೆಯೇ ಎಂದು ಕೇಳುವಾಗ ಹೇಳುತ್ತಾರೆ......

ಮಾರುವ ದನವನ್ನು ವೃಶ್ಚಿಕ ಧನು ತಿಂಗಳಲ್ಲಿ ಮಾರಿ ಆಗಿದೆ......
ಕೊಡುವ ಹುಡುಗಿಯನ್ನು ಮೀನ ಮೇಷದಲ್ಲಿ ಕೊಟ್ಟು ಹೋಗಿದೆಯೆಂದು ಹೇಳುತ್ತಾರೆ ಗುರುಮಾರ್ಲರು......
ನಾರಾಯಣ ಓ ನಾರಾಯಣ ಗುರು ಮಾರ್ಲರೇ ಓ......
ಕೊಟ್ಟಿರುವ ಹುಡುಗಿಯ ಅಡುಗೆ ಜಾರಿಸಲು ನಾವು ಬಂದವರಲ್ಲ......
ಮಾರುವ ದನದ ಬೆನ್ನು ಸವರಲು ನಾವು ಬಂದವರಲ್ಲ ಎನ್ನುತ್ತಾರೆ ನೆಂಟರು......
ನಾರಾಯಣ ನಾರಾಯಣ ನೆಂಟರೇ ಓ......
ನಮ್ಮದು ಅವಳಿಮಕ್ಕಳು ಅಬ್ಬಗ ದಾರಗೆಯರೆಂಬ ಎರಡು ಹೆಣ್ಣುಮಕ್ಕಳು......
ಏಳು ಏಳೂವರೆ ವರ್ಷದ ಮಕ್ಕಳನ್ನು ನಾವು ಕೊಡುವುದಿಲ್ಲವೆಂದು
ಹೇಳುತ್ತಾರೆ ಓ ಗುರು ಮಾರ್ಲರು......
ನಾರಾಯಣ ಓ ನಾರಾಯಣ ಗುರು ಮಾರ್ಲರೇ......
ನಮ್ಮದು ಓ ಅವಳಿ ಗಂಡುಮಕ್ಕಳು......
ಕಡೆರಿ ಕಾರ್ಲದ ತುದಿಪೇಟೆಯ ಬೊಳಿಯ ಚಂದ್ರಾಮು ಶೆಟ್ಟಿಯ ಮಕ್ಕಳು....ಓ....
ರಾಮ ಲಕ್ಷ್ಮಣ ಎನ್ನುವ ಗಂಡುಮಕ್ಕಳು......
ಬೊಳಿಯ ಚಂದ್ರಾಮು ಸೆಟ್ಟಿ ಹೇಳಿದರು ಓ ನಮ್ಮನ್ನು......
ಉರ್ಕಿದೊಟ್ಟುವಿನ ಅರಮನೆಗೆ ಹೋಗಬೇಕು ಗುರು ಮಾರ್ಲರು ಸೊನ್ನೆಯ ಮಕ್ಕಳು...ಓ...
ಅಬ್ಬಗದಾರಗ ಎರಡು ಹೆಣ್ಣುಗಳು ಇದ್ದಾರೆಂದು ಓ ಹೇಳಿದರಂತೆ......
ಹಾಗಾಗಿಯೇ ಓ ನಾವು ಬಂದವರೆಂದು ಓ ಹೇಳುತ್ತಾರಂತೆ ಓ ನಾಲ್ಕುಜನ ನೆಂಟರೂ...
ನಾರಾಯಣ ಓ ನಾರಾಯಣ ನೆಂಟರೇ......
ನಾವು ಕೊಡುವುದಿಲ್ಲವೆಂದು ಹೇಳಿದರಂತೆ......
ಅಷ್ಟು ಹೇಳುವುದನ್ನು ಓ ಏಳು ಅಂತರದ ಯಮದೇವಿ ಗುಡಿಯಲ್ಲಿ ಓ ಬಾಗಿಲ ಮರೆಯಲ್ಲಿ ನಿಂತು ಸೊನ್ನೇ......
ಕಣ್ಣಸನ್ನೆ ಕೈಯ ಸಂಜ್ಞೆಯಲ್ಲಿ ಗಂಡನನ್ನು ಕರೆದಳು ಓ......
ಒಳ ಸೂತ್ರದಲ್ಲಿ ಮಾತನಾಡಿಕೊಳ್ಳುತ್ತಾರೆ ಮದುಮಗ (ಗಂಡ) ಹಾಗು ಮದುಮಗಳು (ಹೆಂಡತಿ)......
ನಾರಾಯಣ ಸೊನ್ನೇ ಓ ನಾರಾಯಣ ಸೊನ್ನೇ......
ಮಾತು ಕೊಡುವುದು ನಾವು ಬೇಡ ಎಂದರು......
ಅಷ್ಟು ಹೇಳುವಾಗ ಹೇಳುತ್ತಾಳೆ ಸೊನ್ನೇ......
ನಾರಾಯಣ ಗಂಡ, ಪ್ರಥಮ ಸಂಬಂಧವನ್ನು ತಪ್ಪಿಸಬಾರದೆಂದಳು ಸೊನ್ನೇ......
ನಾರಾಯಣ ಸೊನ್ನೆ ನಾರಾಯಣ ಸೊನ್ನೇ......
ಹಟ ಕಟ್ಟಬೇಡ ಓ ಜಗಳಾಡಬೇಡ......
ಹರಕೆ ಹೇಳಿ ಹುಟ್ಟಿದ ಓ ಮಕ್ಕಳು ಇವರೆಂದು ಹೇಳಿದರು ಗುರು ಮಾರ್ಲರು......
ನಾರಾಯಣ ಗಂಡ ಓ ನಾರಾಯಣ ಗಂಡ......

ಎರಡು ಮಕ್ಕಳ ಹರಕೆಯನ್ನು ಓ ನಾಲ್ಕು ಜನ ಕರೆದುಕೊಂಡು ಹೋಗಿ ಓ ನಾವು ಹಾಕುವುದು ಒಳ್ಳೆಯದಲ್ಲವೇ ಎಂದಳು ಸೊನ್ನೇ......
ಅಷ್ಟು ಹೇಳುವುದನ್ನು ಓ ಕೇಳಿದರು ಗುರು ಮಾರ್ಲರು ಓ......
ಕೆಲೆಂಜ ಪರಾರಿಗೆ ಓ ಹೋದರಂತೆ......
ಹೋದ ಆಳಿನ ಬೆನ್ನು ಹಿಡಿದು ಜಾರು ಮಾರ್ಲರು ಬಂದರಂತೆ......
ಜಾರು ಮಾರ್ಲರು ಹೋದರು ಓ ಗುರ್ಗಲಾಡಿ ಚಂದು ಪೆರ್ಗಡೆ ಬನ್ನಾರರ ಚಾವಡಿಗೆ ಓ ಹೋಗಿ......
ಬನ್ನಾರರನ್ನು ಕರೆದುಕೊಂಡು ಉರ್ಕಿದೊಟ್ಟುವಿನ ಅರಮನೆಗೆ ಬಂದರು......
ನಾಲ್ಕು ಜನ ನೆಂಟರೂ ಮೂರು ಜನರೂ......
ಏಳು ಜನ ಒಟ್ಟಾಗಿ ಕುಳಿತು ಗುರ್ಗಲಾಡಿ ಚಂದು ಪೆರ್ಗಡೆ ಬನ್ನಾರರು, ಕೆಲೆಂಜ ಪರಾರಿ
ಜಾರು ಮಾರ್ಲರೂ ಓ ಉರ್ಕಿದೊಟ್ಟುವಿನ ಗುರು ಮಾರ್ಲರೂ......
ಕಡೆರಿ ಕಾರ್ಲದ ಬೊಳಿಯ ಚಂದ್ರಾಮು ಕಳುಹಿಸಿದ ನೆಂಟರು ಓ ನಾಲ್ಕು ಜನರಪ್ಪಾ
ಏಳು ಜನರಪ್ಪಾ ಜೊತೆಜೊತೆಯಾಗಿ ಓ ಕುಳಿತುಕೊಂಡೂ ಎಲೆ ಅಡಕೆ ಓ ತಿನ್ನುತ್ತಾ ಸಂಚಿ ಅತ್ತ ಇಟ್ಟರಂತೆ......
ಕಾಯಿತಿಂದು ಅಮಲೇರುವಾಗ ಕೇಳುತ್ತಾರಂತೆ......
ನಾರಾಯಣ ನಾರಾಯಣ ದೇವರೇ ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರರ್ ನೀವೂ......
ನಿಮ್ಮ ಓ ಆರ್ತಿಯ ಓ ಪ್ರೀತಿಯ ಮೊಮ್ಮಕ್ಕಳನ್ನೂ......
ನಮ್ಮ ಅವಳಿ ಮಕ್ಕಳಿಗೆ ಓ ಕೊಡಬೇಕೆಂದು ಓ ನಾಲ್ಕು ಜನ ನೆಂಟರು ಕೇಳುವಾಗ ಹೇಳುತ್ತಾರೆ......
ನಾರಾಯಣ ಓ ನಾರಾಯಣ ಎಂದರು......
ಏಳಂತರದ ಯಮದೇವಿಗುಡಿಗೆ ಬೆಳ್ಳಿಮುಚ್ಚಿದ ಬೆಳ್ಳಿಮಾಡಕ್ಕೆ ಓ ಹೋದರಜ್ಜನವರು...
ನಾರಾಯಣ......ನಾರಾಯಣ......ಓ ನಾರಾಯಣ ಅಜ್ಜನವರೇ......
ನಮ್ಮ ಮಕ್ಕಳನ್ನು ಓ ಮೊದಲು ಬಂದ ಮಕ್ಕಳನ್ನು ಓ ಮೊದಲು ಬಂದ ನೆಂಟಸ್ತಿಕೆಗೆ ಕೊಟ್ಟುಬಿಡುವ ಅಜ್ಜನವರೆ ಎಂದ ಹಠಕಟ್ಟುತ್ತಾಳೆ ಹಠಸಾಧಿಸಹೋಗುತ್ತಾಳೆ......
ತಣ್ಣೀರು ಮುಟ್ಟುವುದಿಲ್ಲ ಓ ಬಿಸಿನೀರು ಕುಡಿಯುವುದಿಲ್ಲ ಓ ಸೊನ್ನೆ ಕೇಳಬೇಕು...
ಅಷ್ಟು ಹೇಳುವುದನ್ನು ಓ ಕೇಳಿದರಜ್ಜನವರು ಓ ಮಾತು ಕೊಟ್ಟರು......
ನಾರಾಯಣ ನೆಂಟರೇ ಓ ನಾರಾಯಣ ನೆಂಟರೇ......
ನಮ್ಮ ಮಕ್ಕಳಿಗೆ ಬಿಚ್ಚಿದ ಅಂಗಿಯನ್ನು ಓ ತೊಡಲು ಬರುವುದಿಲ್ಲ......
ಬಿಚ್ಚಿದ ಮುಡಿಯನ್ನು ಓ ಕಟ್ಟಲು ತಿಳಿಯುವುದಲ್ಲ ಎಂದು ಅಜ್ಜನವರು ಹೇಳಲು ಹೇಳುತ್ತಾರೆ......
ನಾರಾಯಣ ಅಜ್ಜನವರೇ ಓ ನಾರಾಯಣ ಅಜ್ಜನವರೇ......ಓ......

ನಮ್ಮ ಮಕ್ಕಳು ಶಾಲೆಗೆ ಹೋದರೆ ಓ
ಪುಸ್ತಕ ಸ್ಲೇಟು ತಂದು ಓ ಬೋದಿಗೆಯ ಕಂಭದಲ್ಲಿ ಇಡಲು ತಿಳಿಯದು......
ನಾರಾಯಣ ನಾರಾಯಣ ಅಜ್ಜನವರೇ......ಓ......
ತಲೆಯ ಟೊಪ್ಪಿ ಓ ಕೆಳಗೆ ಬಿದ್ದದ್ದನ್ನು ಮತ್ತೆ ತಲೆಗಿರಿಸಿಕೊಳ್ಳಲು ನಮ್ಮ ಮಕ್ಕಳಿಗೆ ತಿಳಿಯುವುದಿಲ್ಲ
ಅಂಗಿ ಹಾಕಿದರೆ ಚಡ್ಡಿ ಹಾಕಿಕೊಳ್ಳಲು ತಿಳಿಯದು ಅವರಿಗೆ ಓ ಅಂಗಿಯ ಗುಬ್ಬಿ ಓ.. ಹಾಕಲು ತಿಳಿಯದ ಓ ಮಕ್ಕಳು ನಮ್ಮವರು ರಾಮಲಕ್ಷ್ಮಣ ಎನ್ನುವ ಓ ಗಂಡು ಮಕ್ಕಳೆಂದು ಓ ಹೇಳುತ್ತಾರೆ ನೆಂಟರು......
ನಾರಾಯಣ ಓ ನಾರಾಯಣಾ......
ಚರ್ಚೆ ಬೇಡ ಓ ಮಾತು ಬೇಡಪ್ಪಾ......
ಮಾತು ಓ ಕೊಡುತ್ತಾರೆ......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರು......
ಅಷ್ಟು ಹೇಳುವುದನ್ನು ಓ ಕೇಳಿದರು......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರು......ಓ......
ಬಂದಿರುವ ನೆಂಟರಿಗೆ ಓ ಊಟೋಪಚಾರ ಮಾಡಿಸಿದರು......
ಊಟ ಮಾಡಿದ ಬೆನ್ನಿಗೇ ಓ ಎಲೆ ಅಡಕೆ ಕೊಡಿಸಿದರು......ಓ......
ಊಟದ ಅನಂತರ ಎಲೆ ಅಡಕೆ ತಿಂದರು......
ಉರ್ಕಿದೊಟ್ಟುವಿನ ಓ ನೆಂಟರು ಓ ಹಿಂತಿರುಗಿ ಹೋದರಂತೆ......
ದೂರದಲ್ಲಿ ಹೋಗುವುದನ್ನು ಓ ನೋಡಿದರು ನೆಂಟರು ಓ ಕಡೆರಿ ಕಾರ್ಕಳದ ಬೊಳಿಯ ಚಂದ್ರಾಮು ಸೆಟ್ಟಿ ಓ ಕೇಳುತ್ತಾರಂತೆ......
ನಾರಾಯಣ ನೆಂಟರೇ ಓ ನಾರಾಯಣ ನೆಂಟರೇ ಓ......
ಗಂಡಾಗಿ ಬಂದಿರೇ ಓ ಹೆಣ್ಣಾಗಿ ಬಂದಿರೇ ಎಂದು ಕೇಳುತ್ತಾರೆ ಓ......
ಬೊಳಿಯ ಚಂದ್ರಾಮು ಸೆಟ್ಟೀ ಓ ಕೇಳುತ್ತಾರಂತೆ......
ನಾರಾಯಣ ಓ ನಾರಾಯಣ ದೇವರೇ......
ರಾಮಲಕಣ ಎನ್ನುವ ಹುಡುಗರಿಗೆ ನಾವು
ಉರ್ಕಿದೊಟ್ಟುವಿನ ಅರಮನೆಯಲ್ಲಿ......ಓ......
ಸೊನ್ನೆ ಮಕ್ಕಳು ಓ ಚೆನ್ನೆ ಆಟದಲ್ಲಿ ಜಾಣರು ಅಂತಿರುವ ಮಕ್ಕಳನ್ನು ಓ......
ಅಬ್ಬಗದಾರಗರೆನ್ನುವ ಓ ಹೆಣ್ಣುಗಳನ್ನು ನೋಡಿ ಬಂದೆವೆಂದು ಹೇಳುತ್ತಾರೆ ನೆಂಟರು ಓ ನಾಲ್ಕು ಕೋಡಿಯ ನೆಂಟರು......
ಅಂದಿನ ದಿನ ಹೋಗಿದೆ ಅವರಿಗೆ
ಮರಳಿ ಮರುದಿನ ಓ ಬಂದಿದೆ ಓ......
ನಾರಾಯಣ ಓ ನಾರಾಯಣಾ......ಓ......
ಕಡೆರಿ ಕಾರ್ಕಳ ತುದಿಪೇಟೆಯ ಓ ಬೊಳಿಯ ಚಂದ್ರಾಮು ಸೆಟ್ಟಿ ಓ ಬಂದು......

ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರು......ಓ......
ಕೆಲೆಂಜ ಪರಾರಿ ಓ ಜಾರು ಮಾರ್ಲರು......ಓ......
ಮದುವೆಗೆ ಮುಹೂರ್ತ ಓ ನೋಡಿದರಂತೆ
ಮದುವೆಗೆ ಮುಹೂರ್ತ ಓ ನೋಡಿ ಬಂದು......ಓ......
ಒಳ್ಳೆಯ ದಿನ ಒಳ್ಳೆಯ ವಾರ ಆಗಬೇಕೆಂದರು......
ಗುರ್ಗಲಾಡಿ ಚಂದು ಪೆರ್ಗಡೆ ಬನ್ನಾರರು ಅವರು......ಓ......
ಬಲ್ಯಾಯನ ಕೊಟ್ಟಿಗೆಗೆ ಓ ಚಂದ್ರಾಮುವನ್ನು ಕರೆದುಕೊಂಡೂ ಓ ಹೋದರಂತೆ....
ನಾರಾಯಣ ಓ ನಾರಾಯಣ ಬಲ್ಯಾಯ ಓ......ಎಂದು ಬಲ್ಯಾಯನನ್ನು (ಜ್ಯೋತಿಷಿಯನ್ನು) ಓ ಅಜ್ಜನವರು ಕರೆಯುವಾಗ......
ನಾರಾಯಣ ಓ ನಾರಾಯಣ ಬನ್ನಾರರೇ ಓ......
ಹಿಂದೆ ಮಕ್ಕಳ ಹಿಡಿ ಜಾತಕ ಕೇಳಲು ಓ ನಕ್ಷತ್ರ ಕೇಳಲೂ ಬಂದ ಅಜ್ಜನವರು......
ಇಂದೇನು ಬಂದರೆಂದು ಕೇಳುತ್ತಾನೆ ಬಲ್ಯಾಯ......
ನಾರಾಯಣ ಓ ನಾರಾಯಣ ದೇವರೆ......ಓ......
ಜಾತಕ ಕೇಳಿದ ಓ ಮಕ್ಕಳಿಗೆ......
ಸೊನ್ನೆಯ ಮಕ್ಕಳು ಓ ಚೆನ್ನೆ ಆಟಲ್ಲಿ ಜಾಣರು ಓ ಅಂತಿರುವ ಅವಳಿ ಮಕ್ಕಳಿಗೆ....
ಕಡೆರಿ ಕಾರ್ಲ ಓ ತುದಿಪೇಟೆಯ ಓ ಬೊಳಿಯ ಚಂದ್ರಾಮು ಸೆಟ್ಟಿ ಮಕ್ಕಳಿಗೆ ಓ......
ರಾಮಲಕ್ಷ್ಮಣರೆನ್ನುವ ಓ ಗಂಡುಮಕ್ಕಳಿಗೆ ಒಳ್ಳೆಯ ದಿನ ಓ ಒಳ್ಳೆಯ ದಿನಮಾನ ಓ ಸಿಗಬೇಕು
ಓ ಬಲ್ಯಾಯ ಎಂದು ಓ ಹೇಳುತ್ತಾರೆ......
ಅರುವತ್ತು ಹಿಡಿ ಜಾತಕವಂತೆ ಓ ಮೂವತ್ತು ಹಿಡಿ ಓ ಗ್ರಂಥ ತೆಗೆದು ಓ ಬಂದರು
ಓ ಪಂಚಾಂಗ ಬಿಡಿಸಿ ಓ ನೋಡುವಾಗ......
ಕಾಣಿಸುತ್ತದೆ ಓ ಅಬ್ಬಗದಾರಗರ ಜಾತಕದಲ್ಲಿ......
ಅಬ್ಬಗದಾರಗರ ಜಾತಕ ನೋಡಿ ನಾರಾಯಣ ನಾರಾಯಣಾ ಎಂದು ಓ ಬಲ್ಯಾಯ ಹೇಳುತ್ತಾನೆ ಓ......
ನಡುನೆತ್ತಿಗೆ ನಾಲ್ಕು ಅಕ್ಷತೆ ಹಾಕುವ ಯೋಗ ಮಾತ್ರವಲ್ಲದೆ ಒಟ್ಟಿಗೆ ಕುಳಿತು ಹಾಲು ಕುಡಿಯುವ ಯೋಗ ಇಲ್ಲವೆಂದು ಹೇಳಿ ಓ
ಮನಸ್ಸಲ್ಲೇ ಎಣಿಸಿ ಬಾಯಿಬಿಟ್ಟು ಹೇಳದೆ......
ಬಲ್ಯಾಯ ಓ ಹೇಳುತ್ತಾನಂತೆ......
ನಾರಾಯಣಾ ನಾರಾಯಣಾ ಓ
ನಾರಾಯಣಾ ನಾರಾಯಣ ಓ......
ಬಲ್ಯಾಯನ ಕೊಟ್ಟಿಗೆಯಿಂದ ಓ ಹಿಂತಿರುಗಿದರು......ಓ......
ಹಿಂತಿರುಗಿ ಓ ಬನ್ನಾರರೂ ಬೊಳಿಯ ಚಂದ್ರಾಮು ಸೆಟ್ಟಿಯೂ......

ಈ ಬರುವ ಮಂಗಳವಾರವಲ್ಲ ಆಮೇಲೆ ಬರುವ ಮಂಗಳವಾರದಂದು......ಓ......
ಸಿಂಹರಾಶಿಗೆ ಓ ಬೊಳ್ಳೆಮಾಣಿಕ ಹಕ್ಕಿಯ ಕೂಗಿಗೆ ಓ ಕೋಳಿಯ ಕೂಗಿಗೆ ಓ......
ಉರ್ಕಿದೊಟ್ಟುವಿನರಮನೆಯಿಂದ ಓ ದಿಬ್ಬಣ ಹೊರಡುವುದು ಓ ಬೋಳದ ಅರಮನೆ ಗೆಂದು ಹೇಳಿದರು......
ನಾರಾಯಣ ನಾರಾಯಣವಂತೆ......
ದೇವರು ಬೆರ್ಮೆರಲ್ಲಿ ವಂದನೆ ಮಾಡಿಕೊಂಡರು ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರರು......ಓ......
ಯಾರು ಚಂದ್ರಾಮು ಸೆಟ್ಟಿ ಓ ಎಂದು ಕೇಳಿದರು......
ನೀವು ನಿಮ್ಮ ದಾರಿಯಲ್ಲಿ ಹೋಗಿ ಓ ನಮ್ಮ ದಾರಿಯಲ್ಲಿ ನಾವು ಹೋಗುತ್ತೇವೆಂದು ಓ ಹೇಳಿದರು ಅಜ್ಜನವರು ಓ ಗುರ್ಗಲಾಡಿ ಚಂದು ಪೆರ್ಗಡೆ ಬನ್ನಾರರು ಓ ಉರ್ಕಿದೊಟ್ಟು ಓ ಗುರು ಮಾರ್ಲರು......
ಉರ್ಕಿದೊಟ್ಟು ಗುರುಮಾರ್ಲರೂ ಓ ಕೆಲೆಂಜ ಪರಾರಿ ಜಾರು ಮಾರ್ಲರೂ......ಓ......
ಅವರವರ ಮನೆಗೆ ಓ ಮೂರು ಜನ ಓ ಮೂರು ಮನೆಗೆ ಹೋದರು......
ಅಂದಿನ ದಿನ ಹೋಗಿದೆ ಮಾರ್ಲರಿಗೆ ಓ ಮರುದಿನ ಓ ಬಂದಿದೇ......
ಮುಂಜಾವದಲ್ಲಿ ಎದ್ದು ಓ ಹೊರಹೊರಟೂ ಓ ಬಂದರು ಗುರು ಮಾರ್ಲರು...ಓ...
ನಾರಾಯಣ ಸೊನ್ನೇ ಓ ನಾರಾಯಣ ಸೊನ್ನೇ......
ಮಕ್ಕಳಿಗೆ ಬೇಗ ಬೇಗನೆ ಹಾಲು ಕೊಟ್ಟು ಓ ಊಟ ಕೊಟ್ಟು ಓ ಹೊಟ್ಟೆ ತುಂಬಿಸಿಬಿಡು ಸೊನ್ನೇ......
ನಮ್ಮ ಅಜ್ಜನವರು ಅಂದಿಗೆ ದಿನಮಾನ ಕೇಳಿ ಓ ಮದುವೆಗೆ ದಿನವಿಟ್ಟಿದೆ ಓ ಕೇಳಿದಿಯಾ ಸೊನ್ನೆ ಎಂದು ಓ ಹೇಳಿದರು ಗುರು ಮಾರ್ಲರು......
ನಾನು ಬೈಲಲ್ಲಿ ಹೋಗಿ ಬರುವೆನೆಂದರು ಓ ಗುರು ಮಾರ್ಲರು ಓ......
ಉರ್ಕಿದೊಟ್ಟುವಿನ ಅರಮನೆ ಇಳಿದರು ಗುರು ಮಾರ್ಲರು......
ಹಾರೆ ಇಡುವ ಕೊಟ್ಟಿಗೆಗೆ ಓ ಹೋದರು ಗುರು ಮಾರ್ಲರು......
ಬಸರೂರ ಪನ್ನೆ ಹಾರೆ ತೆಗೆದು ಓ ಎಡ ಹೆಗಲ ಮೇಲಿರಿಸಿ ನಡೆದರು ಗುರು ಮಾರ್ಲರು ಬೈಲಲ್ಲಿ ಸಾವಿರಮುಡಿ ಗದ್ದೆಯಂತೆ ಗುರು ಮಾರ್ಲರಿಗೆ......
ಬೆಟ್ಟಿನಲ್ಲಿ ನೂರಾರು ಮುಡಿ ಗದ್ದೆ ಇದೆಯಂತೆ......
ಬೈಲಲ್ಲಿ ಹೋದ ಗುರು ಮಾರ್ಲರು ಓ ಬೆಟ್ಟಿನಲ್ಲಿ ಬಂದರಂತೆ......
ಬೆಟ್ಟಿನಲ್ಲಿ ಬಂದ ಗುರು ಮಾರ್ಲರು ಹಾರೆ ಕೊಂಡುಹೋಗಿ ಕೊಟ್ಟಿಗೆಯಲ್ಲಿ ಇರಿಸಿದರು ಉರ್ಕಿದೊಟ್ಟುವಿನ ಅರಮನೆಗೆ ಬರುವಾಗ......
ಚಿಕ್ಕಚಾವಡಿ ಸಿದ್ರಮಂಟಪದಲ್ಲಿ ಬಾಜಿರದ ಹಲಗೆಯಲ್ಲಿ ಓ ಗುರು ಮಾರ್ಲರು ಕುಳಿತುಕೊಳ್ಳುವಾಗ......
ಪಿಂಗಾಣಿಯಲ್ಲಿ ಹಾಲು ಓ ಗಿಂಡಿಯಲ್ಲಿ ನೀರು ಓ ತಟ್ಟೆಯಲ್ಲಿ ಎಲೆ ಅಡಕೆ ಓ ಹಿಡಿದಳು ಸೊನ್ನೇ......

ಓ ನಾರಾಯಣ ಗಂಡನೇ ಓ ಬಾಯಾರಿಕೆಗೆ ಹಾಲು ಓ ಕುಡಿಯಿರಿ ನೀವು......
ಬೇಸರವಾಗುವುದಕ್ಕೆ ಎಲೆಅಡಕೆ ಓ ತನ್ನಿರೆಂದು ಓ ಹೇಳಿದಳು ಸೊನ್ನೇ......
ಬಾಯಾರಿಕೆಗೆ ಹಾಲು ಓ ಕುಡಿದರು ಮಾರ್ಲರು ಓ ಬೇಸರವಾಗುವುದಕ್ಕೆ ಕಾಯಿ ತಿಂದರು ಮಾರ್ಲರು......
ಮಕ್ಕಳನ್ನು ಸ್ನಾನಮಾಡಿಸಿದೆಯಾ ಸೊನ್ನೆ ಓ ಊಟ ಮಾಡಿಸಿದೆಯಾ ಎಂದರು......
ಅಷ್ಟು ಹೇಳುವುದನ್ನು ಕೇಳಿದಳು ಸೊನ್ನೆ ಓ ಸೊನ್ನೆ ಮದುಮಗಳು......ಓ......
ಇಂದಾದರೋ ಇಂದು ನಾರಾಯಣ ಓ ನಾರಾಯಣ ಓ ಸೊನ್ನೆಯಂತೆ ಇಂದು......
ಎಡದ ಕೈಯಲ್ಲಿ ಅಬ್ಬಗನನ್ನು ಕರೆದಳು ಓ ಬಲದ ಕೈಯಲ್ಲಿ ದಾರಗನನ್ನು ಹಿಡಿದಳು....
ಎರಡು ಮಕ್ಕಳನ್ನು ಕರೆದುಕೊಂಡಳಂತೆ ಇಂದು ಹಾಕಿರುವ ಏತದಲ್ಲಿಗೆ ತೋಡಿಸಿರುವ ಬಾವಿಯಲ್ಲಿಗೆ
ಹೋದಳಂತೆ ಇಂದು ಆಕಾಶದ ಅಟ್ಟೆಮರ ಹಿಡಿಸಿದಳು ಇಂದು ಪಾತಾಳದ ಹನಿ (ತಂಪು)ನೀರು ತೆಗೆಸಿದ್ದಾಳೆ ಇಂದು......
ಮಕ್ಕಳ ಹಲ್ಲು ಮುಖ ತೊಳೆಸಿದಳು ಸೊನ್ನೆ......ಓ
ಮುಖ ತೊಳೆಸಿ ಓ ಕರೆದುಕೊಂಡು ಓ ಹಿಂದಕ್ಕೆ ಬಂದು......ಓ......
ಏಳು ಅಂತರದ ಯಮದೇವಿ ಗುಡಿ ಹೊಕ್ಕಳು ಸೊನ್ನೇ......ಓ......
ಎರಡು ಬೆಳ್ಳಿಯ ಹರಿವಾಣ ತೆಗೆದಳು......
ಮಡಕೆಯ ತಂಗುಳು ಕುಡಿಕೆಯ ಮೊಸರು ಸುರಿದಳು ಮರಿಗೆಯ ಉಪ್ಪು ಉಪ್ಪಿನಕಾಯಿ ಹಾಕಿದಳಂತೆ ಇಂದು ಓ ಮಕ್ಕಳನ್ನು ಹೊಟ್ಟೆತುಂಬ ಊಟ ಮಾಡಿಸಿದಳು ಸೊನ್ನೆ...
ಮುಖ ತೊಳೆದು ಬಿಟ್ಟಳು ಸೊನ್ನೇ......
ಅಷ್ಟು ಮಾಡಿ ಓ ಸೊನ್ನೆ ಬಿಟ್ಟಳು......ಓ......
ಬೀಡು ಅರಮನೆ ಓ ಇಳಿದಳು......ಓ......
ಮೂಡಣದ ನಂದನದ ಹಿತ್ತಿಲನ್ನು ಹೊಕ್ಕಳು ಸೊನ್ನೆ......ಓ......
ದೊಡ್ಡ ಬೇಲಿ ಓ ಕಂಚಿನ ಉಣುಗೋಲು ಜಾರಿಸಿದಳು ಸೊನ್ನೆ ಓ......
ಮೂಡಣದ ನಂದನದ ಹಿತ್ತಿಲಿಗೆ ಹೋದಳಂತೆ ಇಂದು
ಹೂವಿನ ಹಿತ್ತಿಲಿಗೆ ಹೋಗಿಯಂತೆ ಇಂದು ಜಾಜಿಮಲ್ಲಿಗೆ ಕೊಯ್ದಳಂತೆ......
ಇಂದು ಸೂಜಿಮಲ್ಲಿಗೆ ಕೊಯ್ದಳಂತೆ, ಕಸ್ತೂರಿಮಲ್ಲಿಗೆ ಕೊಯ್ದಳಂತೆ ಇಂದು
ಮುಳ್ಳುಮಲ್ಲಿಗೆ, ದುಂಡುಮಲ್ಲಿಗೆ, ಅಡ್ಡಕೇದಗೆ, ನೀಟಸಂಪಗೆ ಕೊಯ್ದಳಂತೆ......
ಓರ್ವಂತಿಗೆ ಇರ್ವಂತಿಗೆ ಓ ಸೇವಂತಿಗೆ ಹೂ......
ಹೂವಾದ ಹೂವುಗಳನ್ನೆಲ್ಲ ಓ ಹೆಕ್ಕಿದಳಂತೆ ಸೊನ್ನೆ ಓ......
ದಾರವಿಲ್ಲದೆ ಓ ಚೆಂಡು ಹಾಕಿದಳು (ಹೂವಿನ ಮಾಲೆ ಪೋಣಿಸಿದಳು) ಓ ಚೆಂಡು (ಹೂವಿನ ಮಾಲೆ) ತಂದಳು ಮೇಲುವಾಡದಲ್ಲಿಟ್ಟಳು ಸೊನ್ನೆ......ಓ......
ನಾರಾಯಣ ನಾರಾಯಣ ಸೊನ್ನೆ ಓ......
ಏಳು ಅಂತರದ ಯಮಗುಂಡ ಹೊಕ್ಕಳಂತೆ......

ನಾರಾಯಣ ಸೊನ್ನೆ ಓ......
ಕಾಯಿ ಹಾಕಬೇಕು ಕನ್ಯಾಮುಹೂರ್ತ ಓ ನಮಗೆ ಕರೆಯ(ಘೋಷಿಸ)ಬೇಕೆಂದು ಓ ಹೇಳಿದರು ಮಾರ್ಲರು......ಓ......
ಹನ್ನೆರಡು ಮಾಗಣೆ ಓ ಹನ್ನೆರಡು ಗುತ್ತಿಗೆ ಓ ನಮಗೆ ಹೋಗಬೇಕೆಂದು ಓ ಹೇಳಿದರು ಗುರು ಮಾರ್ಲರು......
ನಾರಾಯಣ ಓ ನಾರಾಯಣಾ ಓ......
ನೀನು ಮದುಮಗಳ ಸಿಂಗಾರ ಆಗು ಓ ನಾನು ಮದುಮಗನ ಸಿಂಗಾರ ಆಗುತ್ತೇನೆಂದರು ಗುರು ಮಾರ್ಲರು......
ಉರ್ಕಿದೊಟ್ಟುವಿನ ಗುರು ಮಾರ್ಲರು......
ಅಷ್ಟು ಹೇಳುವುದನ್ನು ಕೇಳಿದಳು ಸೊನ್ನೆ ಹೋದಳಂತೆ ಇಂದು ಏಳು ಅಂತರದ ಯಮದೇವಿ ಗುಡಿ ಹೊಕ್ಕಳಂತೆ ಸೊನ್ನೆ......
ಬಂಗಾರದ ಬಾಚಣಿಗೆ ಬೆಳ್ಳಿಯ ಸೀರಣಿಗೆ ಎಣ್ಣೆಯ ಪಾತ್ರೆ ಹಿಡಿದಳಂತೆ ಇಂದು ನೆತ್ತಿಗೆ ನೆಯ್ಯೆಣ್ಣೆ ಹಾಕಿದಳಂತೆ ಇಂದು ಕೂದಲಿಗೆ ಕೂದಲೆಣ್ಣೆ ಹಾಕಿದಳಂತೆ ಇಂದು......
ತಲೆ ಬಾಚಿದಳು ಬಲದ ಬಲಮುಡಿ ಏರಿಸಿದಳು ಸೊನ್ನೆ......ಓ......
ಸೊನ್ನೆ ಮದುಮಗಳು ಓ ಕೇಳಬೇಕು......
ಇಂದಾದರೋ ಬಲಕ್ಕೆ ಬಲಮುಂಡಿ ಏರಿಸಿದಳಂತೆ ಇಂದು ದಾರವಿಲ್ಲದೆ (ಹೂವಿನ ಮಾಲೆಯ) ಚೆಂಡು ಹಾಕಿದ್ದನ್ನು ಇಂದು......
ಮಲ್ಲಿಗೆ ಹಿಂಗಾರದ ಹೂವೆಂದು ಇಂದು ಮುಡಿಸಿದಳು......
ಜಾಜಿಮಲ್ಲಿಗೆ ಸೂಜಿಮಲ್ಲಿಗೆ ಕಸ್ತೂರಿಮಲ್ಲಿಗೆಯೆಂದು ಇಂದು ದುಂಡುಮಲ್ಲಿಗೆ ಚೆಂಡು ಮಲ್ಲಿಗೆಯಂತೆ ಇಂದು ಸೇವಂತಿಗೆ ಓರ್ವಂತಿಗೆ ಇರ್ವಂತಿಗೆ ಅಬ್ಬಲ್ಲಿಗೆಯ ಪುಷ್ಪವೆಂದು ಇಂದು......
ಮುಡಿದಳು ಸೊನ್ನೆ ಓ ಅಡ್ಡಕೇದಗೆ ಓ ಉದ್ದ ಸಂಪಿಗೆ ಇಟ್ಟಳು ಓ......
ಬಾರೆ ಪಟ್ಟೆಸೀರೆ ತೆಗೆದಳಂತೆ ಇಂದು ಗುತ್ತಿನ್ನ(?) ರವಿಕೆ ಹಾಕಿದಳಂತೆ ಇಂದು......
ಬಂಗಾರದ ಕರಂಡಕ ಓ ಹಿಡಿದಳು ಸೊನ್ನೆ......
ಬಂಗಾರದ ಕರಂಡಕ ಹಿಡಿದಳಂತೆ ಇಂದು ಸೊನ್ನೆಯ ಬಂಗಾರವೆಂದು ಹೇಳಿದಳಂತೆ ಇಂದು......
ಕುತ್ತಿಗೆಯ ಕರಿಮಣಿ ಹಾಕಿದಳಂತೆ ಇಂದು ಗೋಧಿ(ಕಾಳಿನಾಕಾರದ ಮಣಿಯ)ಸರ ಹಾಕಿದಳಂತೆ......
ಅವಲಕ್ಕಿಸರ ಹಾಕಿದಳಂತೆ ಇಂದು ಮೆಂತೆಸರ ಹಾಕಿದಳಂತೆ ಇಂದು ಕಾಫಿ(ಬೀಜದ ಆಕಾರದ ಮಣಿಯ)ಸರ
ಹಾಕಿದಳಂತೆ ಇಂದು ಚಕ್ರಸರ ಇಟ್ಟಳಂತೆ ಇಂದು......
ಜೋಡಡ್ಡಿಗೆ ಮಿಸಿರಿಯ ಮಾಲೆ ಇಟ್ಟಳು ಚದಿಕ್ ಇಟ್ಟಳಂತೆ ಇಂದು ಸಿಂಗರಾನಿ ಇಟ್ಟಳಂತೆ ಇಂದು ಬಂಗರಾಣಿಯೆಂದು ಓ ಕುತ್ತಿಗೆಯ ಆಭರಣಗಳೆಂದು ಓ

ಇಟ್ಟಳು ಸೊನ್ನೇ ಓ
ಸೊನ್ನೆ ಮದುಮಗಳು ಓ ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ......
ಅಷ್ಟು ಹೊತ್ತಿಗಂತೆ ಇಂದು ಕೈ ಆಭರಣಗಳೆಂದು ಹಿಡಿದಳಂತೆ ಇಂದು ದುಂಡುಕಾಜಿ ಇಟ್ಟಳಂತೆ
ದೋರೆ ಇಟ್ಟಳಂತೆ ಇಂದು ದಾಬುಲುಬಳೆ ಇಟ್ಟಳಂತೆ ಮುಳ್ಳುಬಳೆ, ಎಸಳುಬಳೆ ಇಟ್ಟಳಂತೆ
ಮುತ್ತು ಮುದ್ರೆಯ ಬಳೆಗಳೆಂದು ಕೈ ಬಳೆಗಳನ್ನು ಇಟ್ಟಳಂತೆ ಸೊನ್ನೇ....ಓ.....
ಮೂಗಿನ ಆಭರಣಗಳೆಂದು ಹೇಳಿದರು ಸೊನ್ನೆ......
ಮೂಗಿನ ಬುಲಾಕು ಮೂಗಿತಿಯಂತೆ ಇಂದು ಬೊಟ್ಟಿಗೆ ಕುದುರು(?) ಹಾಕಿದ್ದಾಳಂತೆ ಇಂದು
ನತ್ತು ಇಟ್ಟಳಂತೆ ಇಂದು ಓ...... ಗೊಡ್ಡು ಮಲಕ್ಕೆಂದು ಓ ಹೇಳಿದಳು ಸೊನ್ನೆ......
ಕಿವಿಯ ಆಭರಣಗಳೆಂದು ಹೇಳಿದಳು ಸೊನ್ನೆ ಬೆಂಡೋಲೆ ಇಟ್ಟಳಂತೆ......
ಓಪಲ್ ಇಟ್ಟಳಂತೆ ಇಂದು ಮುತ್ತಿನ ಕೊಪ್ಪು ಓ ಮುತ್ತಿನ ಸರಪಳಿ ಓ......
ಕಲಶದ ಕೊಪ್ಪು ಓ ಲವಂಗದ ಕಡ್ಡಿ ಓ ಹೊನ್ನೆಯ ಮೊಗ್ಗು ಓ......
ಟಾರ್ (ನಕ್ಷತ್ರ) ಬುಗುಡಿ ಇಟ್ಟಳಂತೆ......ಓ......
ತಲೆಯ ಆಭರಣಗಳೆಂದು ಓ ಹೇಳಿದಳಂತೆ ಸೊನ್ನೆ ಓ......
ನೆತ್ತಿ (ನಡು) ಬೈತಲೆ, ಓ ಜಡೆ ಬಂಗಾರ, ಗುಲಾಬಿಯ ಹೂ ಓ ತಿರುಪಿನ ಹೂ......
ಓ ಬಂಗಾರದ ಬಾಚಣಿಗೆ ಓ ಮುಳ್ಳುಕೊಪ್ಪು ಎಂದು ಓ ಮುಳ್ಳು ಇಟ್ಟಳಂತೆ......
ತಲೆಯ ಆಭರಣಗಳು ಆಯಿತೆಂದು ಓ ಹೇಳಿದಳು ಸೊನ್ನೆ......
ನಾರಾಯಣ ಓ ನಾರಾಯಣಾ......ಓ......
ಸೊಂಟದ ಆಭರಣಗಳೆಂದು ಹೇಳಿದಳು ಸೊನ್ನೆ......
ಸೊಂಟಕ್ಕೆ ಮುತ್ತಿನ ಕುಸುರಿಗಳಿರುವ (ಮುಪ್ಪರಿಯ?) ಪಟ್ಟಿ ಎಂದಳು......ಓ ಒಂದು ಬಾರಿಕಜ್ಜದ (ಒಂದು ಎಳೆಯ?) ಪಟ್ಟಿ ಎಂದಳು......
ಒಂದು ಎಳೆಯ ಉಡಿದಾರ ಓ ಎರಡು ಸುತ್ತಿನ(ಎಳೆಯ)ದ್ದೆಂದಳು ಸೊನ್ನೆ ಓ......ಸೊಂಟದ ಆಭರಣ ಆಯಿತೆಂದಳು......ಓ......
ಕಾಲಿನ ಆಭರಣ ಓ ಕಾಲಿನ ಬೆಳ್ಳಿ ಎಂದಳು ಸೊನ್ನೆ ಓ ಕಾಲಿಗೆ
ಕಾಲುಂಗುರ ಓ ಕಾಲಿಗೆ ಚೈನು ಓ ವಂಕಿ ಇಟ್ಟಳು ಓ ಕುಣಿಪ್ಪು(?) ಇಟ್ಟಳು...ಓ...
ಪೈಜಣಿಗೆ ಇಟ್ಟಳು ಓ ಕಾಲಿನ ಆಭರಣ ಆಯಿತೆಂದಳು ಸೊನ್ನೆ......
ಏಳು ಅಂತರದ ಯಮದೇವಿ ಗುಡಿಯಿಂದ ಸಿಂಗಾರವಾಗಿ ಬಂದಳು ಓ......
ಪನ್ನೆ ತತ್ರ, ರಾವಿನ್ನ ಗೆಜ್ಜೆಕತ್ತಿ ಹಿಡಿದಳು ಸೊನ್ನೇ ಓ......
ಚಿಕ್ಕಚಾವಡಿ ಓ ಸಿದ್ರ ಮಂಟಪ ಓ ಸಾನೇರಿ ಚಾವಡಿಗೆ ಓ ಬಂದಳು ಸೊನ್ನೇ...ಓ...
ಇತ್ತ ಹೊರಗಡೆ ಸಿಂಗಾರ ಆಗಿದ್ದಾರೆ ಓ ಗುರುಮಾರ್ಲರು ಓ ಮದುಮಗನಂತೆ...
ಸೊಂಟದಿಂದ ಕೆಳಗೆ ಓ ಕಚ್ಚೆಯ ತೊಡುಗೆ(?) ಓ ಸೊಂಟದಿಂದ ಮೇಲೆ ಗಂಧದ ಲೇಪನ ಓ ತಲೆಗೆ ತಲೆಯ ವಸ್ತ್ರ ಕಟ್ಟಿದ್ದಾರೆ ಓ ಹೆಗಲಿಗೆ ಧೋತರವಂತೆ......

ಅಂಗೈ ಬಳೆ ಮುಂಗೈಗೆ ಸರಪಳಿ ಓ ಗಾಳಿಪೆಂಟಿಗೆ ಓ ಪರಂಗಿ(ವಿದೇಶೀ)ಕೊಡೆ ಓ ಹಿಡಿದರು ಮದುಮಗ......
ನಾರಾಯಣ ಓ ನಾರಾಯಣ......ನಾರಾಯಣ ಓ ನಾರಾಯಣಾ......
ನಾರಾಯಣ ಗಂಡ, ಓ ನೀವು ಮದುಮಗನ ಓ ಸಿಂಗಾರವಾಗಿದ್ದೀರಿ ಓ ನಾನು ಮದುಮಗಳ ಸಿಂಗಾರ ಆಗಿದ್ದೇನೆ
ರಾವಿನ್ನ ಗೆಜ್ಜೆಕತ್ತಿ ಪನ್ನೆತತ್ರ ಹಿಡಿದಳು ಸೊನ್ನೇ ಓ......
ಚಿಕ್ಕಚಾವಡಿ ಓ ಸಿದ್ರಮಂಟಪಕ್ಕೆ ಓ ಬಂದು ನಿಂತಳು......
ನಾರಾಯಣ ಮದುಮಗಾ ಓ ನಾರಾಯಣ ಮದುಮಗಾ ಓ......
ಉರ್ಕಿದೊಟ್ಟಿನರಮನೆಯಲ್ಲಿ ಓ ಒಂದು ಹಾಳೆ ಹಿಂಗಾರಕ್ಕೆ ಬರ ಬಂತೆ......
ಓ ಎಂದು ಸೊನ್ನೆ ಹೇಳುವಾಗ......ಓ......ನಾರಾಯಣ ಸೊನ್ನೇ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ ಸಣ್ಣ ಸಸಿ ಅಡಕೆಯ ಹಾಳೆ ಹಿಂಗಾರಕ್ಕೆ ಬರಬಂದಿದೆಯೇ ಎಂದು ಕೇಳಬೇಸ ಸೊನ್ನೇ......
ಓಲೆಯ ಮಾಣಿಯನ್ನು ಕರೆದರು......
ಅಡಕೆ ಸಸಿಯಿಂದ ಹಾಳೆಹಿಂಗಾರ ತೆಗೆಸಿದರು...... ಗುರು ಮಾರ್ಲರು......
ಹಿಂಗಾರದ ಹಾಳೆಯನ್ನು ಸೊನ್ನೆಯ ಕೈಯಲ್ಲಿರಿಸಿದರು ಗುರು ಮಾರ್ಲರು ಓ ಗುರು ಮಾರ್ಲರು ಕೊಟ್ಟರಂತೆ......
ನಾರಾಯಣ ಓ ನಾರಾಯಣ ದೇವರೇ......ಓ......
ಹಾಳೆಹಿಂಗಾರ ಓ ಸೊನ್ನೆಯ ಕೈಯಲ್ಲಿ ಕೊಟ್ಟು......ಓ......
ಸೊನ್ನೆ ಇಂದು ಚಿಕ್ಕಚಾವಡಿ ಓ ಸಿದ್ರಮಂಪಟದಲ್ಲಿ ನಿಂತು......ಓ......
ಹಾಳೆಹಿಂಗಾರವನ್ನು ಒಡೆದು......
ತಾನು ಮುಡಿಯುತ್ತೇನೆಂದು ಹೇಳುವಾಗ ಸೊನ್ನೆ......ಓ......
ಏಳು ಅಂತರದ ಯಮದೇವಿ ಗುಂಡದಿಂದ ಓ ತನಗೆ ತನಗೆಂದು ಓ ಮಕ್ಕಳು ಓಡಿ ಬರುತ್ತಾರೆ
ಅಕ್ಕ ಅಬ್ಬಗ ಬಲದ ಕೈಯಲ್ಲಿ ಹಿಡಿದಳು ಓ ತಂಗಿ ದಾರಗ ಓ ಎಡದ ಕೈಯಲ್ಲಿ ಹಿಡಿಯುವಾಗ......
ನಾರಾಯಣ ತಾಯಿಯವರೇ ಓ ನಾರಾಯಣ ತಾಯಿಯವರೇ ಓ......
ತಂದೆಯವರು ಮದುಮಗನ ಸಿಂಗರ ಆಗಿದ್ದಾರೆ......
ನೀವಾದರೋ ಮದುಮಗಳ ಸಿಂಗಾರ ಆಗಿದ್ದೀರಿ......
ಹಾಳೆಹಿಂಗಾರವನ್ನು ನೀವೊಬ್ಬರೇ ಮುಡಿಯುತ್ತೀರಾ ಎಂದು ಅಕ್ಕ ಅಬ್ಬಗ ಕೇಳಲು ಓ...
ಹಾಳೆ ಒಡೆದು ಓ ತಾನು ಮುಡಿಯುತ್ತೇನೆನ್ನುವಾಗ......
ಅಕ್ಕ ಅಬ್ಬಯ ಓ ಓಡೋಡುತ್ತಾ ಬಂದು ಓ ಬಲದ ಕೈಯಲ್ಲಿ ಹಿಡಿಯಲು ಒಂದೆಸಳು ಹಿಂಗಾರ ತೆಗೆದರು ಓ ಅಕ್ಕ ಅಬ್ಬಗನ ಕೈಗಿತ್ತರು......
ಒಂದೆಸಳು ಹಿಂಗಾರದ ಹೂ ತೆಗೆದು ಓ ಎಡದ ಕೈಯಲ್ಲಿ ಹಿಡಿದ ದಾರಗನ

ಕೈಗೆ ಒಂದೆಸಳು ಹಿಂಗಾರ ಕೊಟ್ಟರು......ಓ......
ಹಾಳೆ ಹಿಂಗಾರವನ್ನು ಇಡಿಯಾಗಿಯೇ ತಾನು ಮುಡಿದರು......
ನಾರಾಯಣ ಓ ನಾರಾಯಣ ದಾರು......ಓ......
ಮಕ್ಕಳನ್ನು ಓ ಭಾರೀ ಜಾಗ್ರತೆಯಲ್ಲಿ ನೋಡಿಕೊಂಡಿರ ಎಂದರು......
ಜಾಗ್ರತೆಯಾಗೆ ಇರು ಎಂದರು......ಓ......
ಮಕ್ಕಳನ್ನು ಶಾಂತಿ ಸಮಾಧಾನದಿಂದ ನೋಡಿಕೊಂಡಿರು ಎಂದರು ಸೊನ್ನೇ......
ನಾರಾಯಣ ಓ ನಾರಾಯಣಾ ಓ......
ನಾರಾಯಣ ಓ ನಾರಾಯಣಾ......
ನಾರಾಯಣ ಮಕ್ಕಳೇ ಕೇಳಿರೇ ನಾವೇನು ಮದುಮಗ ಮದುಮಗಳ ಸಿಂಗಾರ ಆದದ್ದು ಇಂದೆಂದರೆ......
ಈ ಬರುವ ಮಂಗಳವಾರವಲ್ಲ ಆಮೇಲೆ ಬರುವ ಮಂಗಳವಾರಕ್ಕೆ...ಓ ಮಗಾ...
ಬೆಳ್ಳಿಯಲ್ಲಿ ಬೆಳ್ಳಗೆ ಬಂಗಾರದಲ್ಲಿ ಸಿಂಗಾರ ಮಾಡಿ ಓ ನಿಮ್ಮನ್ನು ಮದುಮಗಳ ಸಿಂಗಾರ ಮಾಡಿ......ಓ......
ಮದುವೆಯ ಅಂದ ಓ ನಾನು ನೋಡುವುದು ಮಗಾ......ಓ......
ನಾವು ಓ ಕಾಯಿ ಹಾಕಿ ಕನ್ಯಾಮುಹೂರ್ತ ಕರೆಯಲು (ಘೋಷಿಸಲು) ಹೋಗುವುದೆಂದು ಓ......
ಹೇಳುತ್ತಾಳೆ ಸೊನ್ನೇ ಓ ಮದುಮಗಳು......
ಇಂದಾದರೋ ಚಿಕ್ಕಚಾವಡಿ ಸಿದ್ರ ಮಂಟಪ ಇಳಿದರಂತೆ ಇಂದು......
ಆರೂವರೆ ಅಂಗಣ ಮೂರುವರೆ ಅಂಗಳಕ್ಕೆ ಹೋಗುವಾಗ ಓ ಸೊನ್ನೆಯಲ್ಲಿ ಕೇಳುತ್ತಾರೆ ಓ ಗುರು ಮಾರ್ಲರು......
ನಾರಾಯಣ ಸೊನ್ನೇ ಓ ಮಕ್ಕಳು ಆಡುವಾ......
ಬೆಳ್ಳಿಯ ಮಣೆ ಓ ಬಂಗಾರದ ಹರಳು ಎಲ್ಲಿಟ್ಟಿದ್ದೀ ಎಂದು ಕೇಳಲು......
ಹಿಂತಿರುಗಿದಳು ಸೊನ್ನೆ ಓ ಓಡೋಡುತ್ತ ಬಂದಳು ಸೊನ್ನೇ......ಓ......
ಬೆಳ್ಳಿಯ ಮಣೆ ಬಂಗಾರದ ಹರಳು ಓ ಕೊಂಡುಹೋದಳು ಸೊನ್ನೇ......ಓ......
ಕಲ್ಲಕಲೆಂಬಿಯಲ್ಲಿ ಬೀಗಮುದ್ರಿಗೆಯ ಒಳಗಿಟ್ಟಳು ಸೊನ್ನೇ......ಓ......
ಹಿಂತಿರುಗಿ ಬಂದಳು ಸೊನ್ನೆ ಅವಳು ಓ......
ಉರ್ಕಿದೊಟ್ಟುವಿನ ಅರಮನೆ ಇಳಿದರು ಓ......
ಮದುಮಗ ಮದುಮಗಳು ಓ ಸೊನ್ನೆಯೂ ಗುರು ಮಾರ್ಲರು......ಓ......
ನಾರಾಯಣ ಓ ನಾರಾಯಣಾ......
ಹೋಗಿ ಹೋಗಿ ಹೋಗುತ್ತಾರಂತೆ......ಓ......
ಅಬ್ಬನಡ್ಕದ ಗೋಳಿಯ ಬುಡಕ್ಕೆ ಹೋಗುತ್ತಾರೆ ಸೊನ್ನೆಯೂ ಗುರು ಮಾರ್ಲರು...ಓ...
ನಾರಾಯಣ ಓ ನಾರಾಯಣ ಮದುಮಗ......
ಬಿಸಿಲು ಆರಲಿ ಓ ಗಾಳಿ ಬೀಸಲಿ......ಓ......

ಬಾಯಾರಿಕೆ ಓ ಆಗುತ್ತದೆ ಮದುಮಗಾ......ಓ......
ಎಲೆ ಅಡಕೆ ಓ ತಿನ್ನುವ ಮುದಮಗಾ......ಓ......
ಎಂದು ಓ ಸೊನ್ನೆ ಹೇಳುತ್ತಾರಂತೆ......
ಅಷ್ಟು ಹೇಳುವುದನ್ನು ಓ ಕೇಳಿದರು ಗುರು ಮಾರ್ಲರು......ಓ......
ಅಬ್ಬನಡ್ಕದ ಗೋಳಿಯ ಬುಡಕ್ಕೆ ಓ ಹೋದರು ಗುರು ಮಾರ್ಲರು......ಓ......
ದೊಡ್ಡದಾದ ಗಡ್ಡೆಯ ಚೆನ್ನಾಗಿರುವ ನೆರಳೆಂದರು......
ಮರದ ನೆರಳಿನಲ್ಲಿ ಗೋಳಿಯ ಅಡಿಯಲ್ಲಿ ಗುರು ಮಾರ್ಲರು
ಹೋಗಿ ಕುಳಿತು ಸಂಚಿ ಬಿಡಿಸಿದರು ಓ ಎಲೆಅಡಕೆ ತಿಂದರು......
ಕಡು ಮಂಗಳವಾರದಂದು ಮಟಮಟ ಬಿಸಿಲಿಗೆ ಓ......
ಓ ಅಂಬಂದಡ್ಕದ ಗೋಳಿಮರದ ಬುಡಕ್ಕೆ ಓ ಗುರು ಮಾರ್ಲರೂ
ಸೊನ್ನೆಯೂ ಓ ಕುಳತಲ್ಲಿಗೆ......
ಬಡಬ್ರಾಹ್ಮಣಾ ಓ ಉರಿಹಗಲಿಗೆ ಓ......
ಆಚೆ ನೋಡಿ ಈಚೆ ನೋಡುವಾಗ ಓ ಬಡಬ್ರಾಹ್ಮಣನಂತೆ......
ನಾರಾಯಣ ಓ ನಾರಾಯಣ ಗುರು ಮಾರ್ಲಾ......ಓ......
ನೀನು ಮದುಮಗನ ಸಿಂಗಾರ ಆಗಿದ್ದೀ, ಸೊನ್ನೆ ಮದುಮಗಳ ಸಿಂಗಾರ ಆಗಿದ್ದಾಳೆ ಓ...
ಎಲ್ಲಿಗೆ ಹೋಗುವುದು ಓ ಎಲ್ಲಿಂದ ಬಂದದ್ದೆಂದು ಓ......
ಬಡಬ್ರಾಹ್ಮಣ ಓ ಕೇಳುತ್ತಾನೆ......
ನಾರಾಯಣ ಬ್ರಾಹ್ಮಣ ಓ ನಾರಾಯಣ ಬ್ರಾಹ್ಮಣಾ ಓ......
ನಮ್ಮಮಕ್ಕಳು ಓ ಅಬ್ಬಗದಾರಗ ಮಕ್ಕಳಿಗೆ ಬ್ರಾಹ್ಮಣಾ......
ಕಾಯಿ ಹಾಕಿ ಓ ಕನ್ಯಾಮುಹೂರ್ತ ಕರೆಯಲು ಹೋಗುವವರೆಂದು ಹೇಳುತ್ತಾರೆ...
ಓ......
ನಾರಾಯಣ ಗುರು ಮಾರ್ಲಾ ಓ...... ನಿನ್ನ ಮಕ್ಕಳನ್ನು ಎಲ್ಲಿಗೆ ಕೊಡುವುದೆಂದು
ಬಡಬ್ರಾಹ್ಮಣ ಕೇಳುತ್ತಾನೇ......
ಕಡೆರಿ ಕಾರ್ಕಳದ ಬೊಳಿಯ ಚಂದ್ರಾಮು ಸೆಟ್ಟಿಯ ಮಕ್ಕಳಿಗೆ ಓ......
ರಾಮಲಕ್ಷ್ಮಣ ಎನ್ನುವ ಗಂಡುಮಕ್ಕಳಿಗೆ ಓ......
ಅಬ್ಬಗದಾರಗರೆನ್ನುವ ಮಕ್ಕಳನ್ನು ಕೊಡುವುದೆಂದು ಓ ಹೇಳುತ್ತಾರೆ ಗುರು ಮಾರ್ಲರು......
ಬಡಬ್ರಾಹ್ಮಣನಿಗೆ ಹೇಳುತ್ತಾರೆ......
ನಾರಾಯಣ ಓ ನಾರಾಯಣಾ......ಓ......
ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ ಓ......
ಸೊನ್ನೆಯ ಮಕ್ಕಳು ಓ ಹರಕೆಯ ಮಕ್ಕಳು......ಓ ಎಂದು
ಹೇಳುವುದನ್ನು ಕೇಳಿದ್ದೇನೆಂದು ಓ ಹೇಳುತ್ತಾರೆ ಬಡಬ್ರಾಹ್ಮಣಾ......
ಅಷ್ಟು ಹೊತ್ತಿಗೆ ಸೊನ್ನೆಯಂತೆ ಇಂದು ಏಳೇಳು ಲೋಕದ ಕೋಪ ಕೋಪಿಸಿದಳಂತೆ...

ನಾರಾಯಣ ಬ್ರಾಹ್ಮಣ......ಓ ನೀವು......
ನಾನು ಹರಕೆ ಹೇಳಿಕೊಳ್ಳುವಾಗ ನೀವು ಓ......
ತಲೆ ಮೇಲೆ ಓ ಕಾಲಕೆಳಗೆ ಇದ್ದಿರೇ? ಓ
ಎಂದು ಬ್ರಾಹ್ಮಣನಿಗೆ ಉತ್ತರ ಕೊಡುತ್ತಾಳೆ ಸೊನ್ನೆ ಅವಳು......ಓ......
ನಾರಾಯಣ ಸೊನ್ನೇ ಓ......
ಅಷ್ಟು ಸಿಟ್ಟಲ್ಲಿ ನೀನು ನನ್ನಲ್ಲಿ ಕೇಳಬೇಡ......
ನಿನ್ನ ಮಕ್ಕಳಿಗೆ ಓ ಅವಳಿ ಮಕ್ಕಳಿಗೆ......
ಅವಳಿ ಗಂಡುಮಕ್ಕಳ ಜೊತೆಗೆ ಓ ಮದುವೆ ಮಾಡಪ್ಪಾ ಓ ಮದುವೆಯ ಅಂದ ನೋಡಿಬಿಡು ನೀನು ಓ
ಹರಕೆ ಹೇಳಿಕೊಳ್ಳುವಾಗ ನನ್ನ ತಲೆಯ ಮೇಲಿಂದ ಓ ಕಾಲಕೆಳಗಡೆಗೆ ಓ ನಾನಿರಲಿಲ್ಲಪ್ಪಾ......
ಮದುವೆಯ ಹೊತ್ತಿನಲ್ಲಿ ನೀನೇ ನೋಡು...... ಓ......
ಓ ಎಂದು ಬಡಬ್ರಾಹ್ಮಣ ಸೊನ್ನೆಗೆ ಉತ್ತರ ಕೊಡುತ್ತಾನೇ......
ನಾರಾಯಣ ಬ್ರಾಹ್ಮಣ ನೀವು ಎಲ್ಲಿಗೆ ಹೋಗುವವರೆಂದು ಓ ಗುರು ಮಾರ್ಲರು ಕೇಳಲು, ಹೇಳುತ್ತಾರೆ......
ನಾಲ್ಕು ಮನೆಯಿಂದ ಬೇಡುತ್ತಾ ಮೂರುಮನೆಯಲ್ಲಿ ಭಿಕ್ಷೆ ಎತ್ತುತ್ತಾ ಹೋಗುವವನು ನಾನು ಗುರು ಮಾರ್ಲಾ ಓ......
ಎಂದು ಬಡಬ್ರಾಹ್ಮಣ ಹೇಳುತ್ತಾನೇ......
ಅಷ್ಟು ಹೇಳಲು ಹೇಳುತ್ತಾರೆ ಗುರು ಮಾರ್ಲರು......
ಹೋಗುವಾಗ ಹೋಗಬೇಡಿ ಓ ಬ್ರಾಹ್ಮಣರೇ ನೀವು ಬರುವಾಗ ಬನ್ನಿ......
ನಿಮಗೆ ಭಿಕ್ಷೆ ಓ ನಾನು ಕೊಡುತ್ತೇನೆ ಬ್ರಾಹ್ಮಣಾ ಓ ಕೇಳಿದಿರೇ......
ಹೆಣ್ಣು ಹೆಂಗುಸರು ಓ ಕಲಿತರೆ ಬ್ರಾಹ್ಮಣಾ ಓ ಮೊಣಕಾಲು ಕೆಳಗೆ ಓ ಬ್ರಾಹ್ಮಣಾ......
ನೀವು ಸಿಟ್ಟು ಮಾಡಿಕೊಳ್ಳಬೇಡಿ ಓ......ಎಂದರು......
ನಾರಾಯಣ ಓ ನಾರಾಯಣ ಗುರು ಮಾರ್ಲಾ......ಓ......
ನನಗೇನು ಸಿಟ್ಟುಸೆಡವು ಓ......
ಅವಳು ಹೇಳಿದರೆ ನನಗೇನೆಂದರು......
ಅಲ್ಲಿಂದ ಹಾಗೆ ಅವರೆದ್ದು......
ಆಚೀಚೆ ನೋಡಲು ಓ ಬ್ರಾಹ್ಮಣ ಮಾಯವಾಗಿದ್ದಾನಂತೆ......
ಇವರು ಗುರು ಮಾರ್ಲ ಹಾಗೂ ಸೊನ್ನೆ ಇಂದು......
ಅಬ್ಬನಡ್ಕ ಓ ಗೋಳಿಯ ಮರ ಬಿಟ್ಟರು ಹಿಂತಿರುಗಿ ಓ......
ಇನ್ನ ಮುಂಡೇರು ಓ ಬೋಳ, ಬೊಲ್ಮಾನ (ಬೆಳ್ಮಣ್), ಓ ಕಾಪು, ಕಡಂದಲೆ ಓ
ಬಂಗರಬೆಟ್ಟು ಬೊಳಿಯಬೆಟ್ಟು ಮುಲ್ಕಿ ಸೇರಿ ಓ ಕಕ್ಕೆಬೆಟ್ಟು ಕಾರಿಬೆಟ್ಟು ಓ
ಒಂಬತ್ತು ಮಾಗಣೆ ಓ ಹನ್ನೆರಡು ಗುತ್ತು ಓ ಹನ್ನೆರಡು ಬರ್ಕೆಯಂತೆ ಓ......

ಒಂಬತ್ತು ಮಾಗಣೆ ಕಾಳು ನಾಯ್ಕ ಓ ಮನೆಗೆ ಹೋಗಿ ಓ......
ಕಾಯಿ ಹಾಕಿ ಕನ್ಯಾಮುಹೂರ್ತ ಕರೆಯಲು ಹೋದರಂತೆ......
ಬ್ರಾಹ್ಮಣ ಹೋದನಂತೆ ಓ ಅಬ್ಬನಡ್ಕದ ಓ ಗೋಳಿಯ ಬುಡದಿಂದ ಓ ಮಾಯ ಆದನಂತೆ ಬ್ರಾಹ್ಮಣಾ......
ಉರ್ಕಿದೊಟ್ಟುವಿನಾ ಅರಮನೆಗೆ ಓ ಬ್ರಾಹ್ಮಣ ಹೋಗಿದ್ದಾನಂತೆ......ಓ......
ಹಟ್ಟಿಗೆ ಹೋಗಿ ಓ ಕಂಚಿನ ಉಣುಗೋಲು ಸರಿಸಿದನಂತೆ ಬ್ರಾಹ್ಮಣಾ......
ಹತ್ತು ಹದಿನಾರು ಮುದ್ದಿನ ಕರುಗಳು ಓ ಬಾಳೆ ಹಾಕಿರುವ ಬಾಣತಿಮಾರಿನ ತೆನೆ ತುಂಬಿದ ಪೈರು ತಿನ್ನಬೇಕು......
ಉರ್ಕಿದೊಟ್ಟು ಅರಮನೆಯ ಸೇವಕಿ ಹೆಣ್ಣುಗಳು ಓ......
ಅಟ್ಟಿಸಿಕೊಂಡು ಬರುವಾಗ ಅಜಿಲೊಟ್ಟು ಮುಜಿಲೊಟ್ಟು ಓ ಕಾಡಿಗೆ ಹೋಗಬೇಕೆಂದು ಹೇಳಿತು ಬ್ರಾಹ್ಮಣ......
ಅಲ್ಲಿಂದ ಹಾಗೆ ಹೊರಟನು ಬ್ರಾಹ್ಮಣ ಓ ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ ನಿಂತು ಓ
ಆರೂವರೆ ಅಂಗಣ ಮೂರುವರೆ ಅಂಗಳದಲ್ಲಿ......
ದೊಡ್ಡ ಅಂಗಳಕ್ಕೆ ಓ ಹೋಗಿದೆ ಬ್ರಾಹ್ಮಣನಂತೆ ಓ ಯಾರಪ್ಪ ಮನೆಯಲ್ಲಿ
ಯಾರು ಮನೆಯಲ್ಲಿ ಎಂದು......ಓ......
ಬ್ರಾಹ್ಮಣ ಕರೆಯುವಾಗ ಓ ಒಳಮನೆಯಿಂದ ಸೇವಕಿ ದಾರು ಹೆಣ್ಣು ಮಾತಾಡುತ್ತಾ ಓಡುತ್ತಾ ಬರುತ್ತಾಳೇ......
ನಾರಾಯಣ ಓ ನಾರಾಯಣಪ್ಪಾ ಓ ಹೆಣ್ಣುಗಳೇ ಕೇಳಿದಿರೇ ಓ ಬಾಕಿಮಾರಗದ್ದೆಯಲ್ಲಿ ಓ ತೆನೆತುಂಬಿದ ಪೈರನ್ನು ಓ ಕರುಗಳು ಮೇಯುತ್ತಿವೆ......
ಓಡಿಸಿಯಪ್ಪಾ ಎಂದು ಓ ಇಲ್ಲಿ ಯಾರೂ ಇಲ್ಲವೇ ಎಂದು ಹೇಳುತ್ತಾನಂತೆ ಬಡಬ್ರಾಹ್ಮಣ......
ನಾರಾಯಣ ಓ ನಾರಾಯಣ ದೇವರೇ ಎಂದರು ಹೆಣ್ಣುಗಳು ಓ ಬಾಕಿಮಾರಗದ್ದೆಯಲ್ಲಿ ಪೈರು ತಿನ್ನುತ್ತಿರುವ ಜಾನುವಾರುಗಳನ್ನು ಓ ಓಡಿಸುತ್ತಾ ಹೋಗುವಾಗ ಅಜಿಲೊಟ್ಟು ಮುಜಿಲೊಟ್ಟು ಕಾಡು ಹತ್ತಿ ಹೋಗುತ್ತವೆ ಜಾನುವಾರುಗಳು......ಓ......
ನಾರಾಯಣ ಓ ನಾರಾಯಣ ದೇವರೇ ಓ ಯಾರು ಮಗಾ ಓ ಮಕ್ಕಳೇ ಎಂದು ಕೇಳುವಾಗ
ನಗುನಗುತ್ತಾ ಎದುರು ಬರುತ್ತವೆಯಂತೆ ಮಕ್ಕಳು ಓ ಅಬ್ಬಗದಾರಗರೆಂಬ ಎರಡು ಮಕ್ಕಳು......
ನಾರಾಯಣ ಓ ನಾರಾಯಣ ಬ್ರಾಹ್ಮಣಾ......
ಎಲ್ಲಿಂದ ಬಂದಿರಿ ಬ್ರಾಹ್ಮಣ ಓ ಎಲ್ಲಿಗೆ ಹೋಗುವವರೆಂದು ಓ ಮಕ್ಕಳು ಕೇಳುತ್ತವೆ ಓ ಎರಡು ಮಕ್ಕಳು......
ನಾರಾಯಣ ಮಗಾ ಓ ನಾರಾಯಣ ಮಗಾ ಮಕ್ಕಳೇ......ಓ......

ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ ಸೊನ್ನೆಯ ಮಕ್ಕಳು ಓ ಚೆನ್ನೆ ಆಟದಲ್ಲಿ ಜಾಣರು ಎಂದು
ಓ ನಾಲ್ಕು ಊರು ನಾಲ್ಕು ದೇಶದಲ್ಲಿ ಹೆಸರು ಕೇಳುತ್ತಿದೆ ಮಗಾ......
ಅದನ್ನು ನೋಡೋಣ ಎಂದು ನಾನು ಬಂದದ್ದು ಮಕ್ಕಳೇ......ಕಿವಿ ಕೇಳುವುದಿಲ್ಲ ನನಗೆ ಓ ಕಣ್ಣು ಕಾಣದ ಮುದುಕ ನಾನು......
ಓ ಬಡಬ್ರಾಹ್ಮಣ ನಾಲ್ಕು ಮನೆಯ ಬೇಡುವವನೆಂದು ಹೇಳುತ್ತಾನೆ ಬ್ರಾಹ್ಮಣ......
ನಾರಾಯಣ ಬ್ರಾಹ್ಮಣಾ ಓ ನಾರಾಯಣ ಬ್ರಾಹ್ಮಣಾ ಓ......
ನಾವು ಓ ನಮ್ಮ ತಾಯಿಯವರು ಓ ತಂದೆಯವರು ಕಾಯಿ ಹಾಕಿ ಕನ್ಯಾಮುಹೂರ್ತ ಕರೆಯಲು ಹೋಗಿದ್ದಾರೆ......
ನಮ್ಮ ತಾಯಿಯವರು ಓ ನಮ್ಮ ಬೆಳ್ಳಿಯ ಮಣೆ ಬಂಗಾರದ ಹರಳನ್ನು ಕಲ್ಲಿನ ಕಲೆಂಬಿ(ಪೆಟ್ಟಿಗೆ)ಯಲ್ಲಿ ಓ ಬೀಗ ಮುದ್ರೆಯಲ್ಲಿ ಓ ಇಟ್ಟುಹೋಗಿದ್ದಾರೆಂದು ಓ ಮಕ್ಕಳು ಬೇಗ ಹೇಳುತ್ತವೆಯಂತೆ......
ನಾರಾಯಣ ಮಗ ನಾರಾಯಣ ಮಗ ಮಕ್ಕಳೇ ಓ ನಿಮ್ಮ ತಾಯಿ ಅರಳುಮರುಳಲ್ಲಿ ಓ ಕಲ್ಲ ಪೆಟ್ಟಿಗೆಯಲ್ಲಿ ಇಟ್ಟಿದ್ದಾಳೆ ಮಗಾ ಆದರೆ ಓ ಬೀಗ ಹಾಕಲಿಲ್ಲವೆಂದು ಬಡ ಬ್ರಾಹ್ಮಣ ಮಕ್ಕಳಿಗೆ ಉತ್ತರ ಕೊಡುತ್ತಾನೇ......
ನಾರಾಯಣ ನಾರಾಯಣ ಎಂದು ಹೇಳಿ ಓ ಅಕ್ಕತಂಗಿ ಓ ಓಡೋಡುತ್ತಾ ಹೋಗುತ್ತಾರೆ......
ನಾರಾಯಣ ಓ ನಾರಾಯಣಾ......ಓ......
ಅಬ್ಬಗದಾರಗ ಓ ಮಕ್ಕಳು......ಓ......
ಇಂದಾದರೋ ಇಂದು ಅಕ್ಕ ಅಬ್ಬಗ ಓ ತಂಗಿ ದಾರಗ ಹೋಗಿ ನೋಡುವಾಗಂತೆ....
ಇಂದು ಕಲ್ಲ ಪೆಟ್ಟಿಗೆಯ ಬಾಯಿಬೀಗ ಕಳಚಿದೆಯಂತೆ ಓ......
ಅಕ್ಕ ಅಬ್ಬಗ ಬೆಳ್ಳಿಯ ಮಣೆಯನ್ನು ಓ ಅಂಗೈಯಲ್ಲಿಟ್ಟು ತರುವಾಗ ಓ......
ತಂಗಿ ದಾರಗ ಓ ಸೆರಗಲ್ಲಿ ಹರಳನ್ನು ಕಟ್ಟಿಕೊಂಡು......ಓ
ನಾರಾಯಣ ಬ್ರಾಹ್ಮಣಾ ನಾರಾಯಣ ಬ್ರಾಹ್ಮಣಾ......ಓ......
ತಾಯಿಯವರೇ ಓ ಬೀಗಮುದ್ರೆಯಲ್ಲಿ ಓ ಕಲ್ಲಕಲೆಂಬಿ (ಪೆಟ್ಟಿಗೆ)ಯಲ್ಲಿ ಇಟ್ಟುಹೋದದ್ದು ಓ......
ಆದರೆ ಬೀಗಮುದ್ರೆ ಮಾಡಲಿಲ್ಲವೆಂದು ನಗುನಗುತ್ತಾ ಓ ಸಂತೋಷದಲ್ಲಿ
ಬ್ರಾಹ್ಮಣನಿಗೆ ಉತ್ತರ ಕೊಡುತ್ತಾರೆ......
ನಾರಾಯಣ ಓ ನಾರಾಯಣಾ ಬ್ರಾಹ್ಮಣಾ......ಓ......
ಸಾನೇರಿ ಚಾವಡಿಯಲ್ಲಿ ಓ ಸಿದ್ರಮಂಪಟದಲ್ಲಿ......
ಚಿಕ್ಕಚಾವಡಿಯಲ್ಲಿ ಓ ಹರಳು ಹಾಕಿದರು ಮಕ್ಕಳು......ಓ......
ಮಣೆ ಇಟ್ಟರು ಓ ಆಚೇಚಿನಿಂದ ಮಕ್ಕಳು ಕುಳಿತರು......
ಬೆಳ್ಳಿಯ ಮಣೆ ಬಂಗಾರದ ಹರಳಲ್ಲಿ ಓ......

ಮಕ್ಕಳು ಆಟಕ್ಕೆ ಕುಳಿತರು......ಓ......
ನಾರಾಯಣ ಓ ನಾರಾಯಣಾ......
ಇಂದಾದರೋ ಇಂದು ಒಂದಾಟ ಆಡಿದರಂತೆ ಇಂದು ಒಂದಾಟ ಆಡುವಾಗ ಇಂದು...
ಒಂದಾಟ ಆಡುವಾಗ ಅಬ್ಬಗನ ಒಂದು ಮನೆ(ಚೆನ್ನೆಮಣೆಯ ಕುಳಿ)ಗೆ ಬೆಂಕಿ ಬಿತ್ತು (ಖಾಲಿ ಆಯಿತು) ಇಂದು
ಎರಡಾಟ ಆಡುವಾಗ ಎರಡನೆ ಮನೆಗೆ ಬೆಂಕಿ ಬಿತ್ತು, ಇಂದು ಮೂರಾಟ ಆಡುವಾಗ ಮೂರನೆ ಮನೆಗೆ ಬೆಂಕಿ ಬಿತ್ತಂತೆ......
ನಾಲ್ಕನೆ ಆಟ ಆಡುವಾಗ ಓ ಬಲದಿಂದ ಅರಳಾಯಿತು (ಅರಳಿನಂತೆ ಬಿರಿಯಿತು) ಓ...
ನಾರಾಯಣ ಓ ನಾರಾಯಣ ಅಕ್ಕನವರೇ ಓ......
ಭಾವನವರು ಬರುವುದಕ್ಕೆ ಮೊದಲು ಅರಳು ಮಿಶ್ರಮಾಡಬೇಕು......
ಅರಳು ಮಿಶ್ರಮಾಡಿ ಅಕ್ಕನವರಿಗೆ ಔತಣಹಾಕಬೇಕೆಂದು ಓ ಹೇಳಿದಳು ತಂಗಿ ದಾರಯಾ...
ನಾರಾಯಣ ದಾರಗಾ ಓ ನಾರಾಯಣ ದಾರಗಾ ಓ......
ನನಗೆ ಬೇರೆಯೇ ಅರಳು ಮಿಶ್ರಮಾಡಿ ಓ ಅರಳಿನ ಔತಣ ಬೇರೆಯೇ ಎಂದು ಓ ಕೇಳಿದಳು ಅಬ್ಬಗ ಓ ಚೆನ್ನೆಮಣೆ ತುಳಿದಳು ಓ ಕವುಚಿ ಹಾಕಿದಳು......
ಮಣೆಯನ್ನು ಎಳೆದಳು ಓ ಅಬ್ಬಗ ಓ......
ತಂಗಿ ದಾರಗನ ನಡುನೆತ್ತಿಗೆ ಓ ಹೊಡೆದಳು ಇಂದು......
ನಡುನೆತ್ತಿಗೆ ಹೊಡೆದು ಓ ಆಚೆ ನೋಡಿ ಈಚೆ ನೋಡುವಾಗ ಓ......
ಬಡಬ್ರಾಹ್ಮಣ ಓ ಮಾಯ ಆಗಿದ್ದಾನೆ......
ನಾರಾಯಣ ಓ ನಾರಾಯಣ ದೇವರೇ......ಓ......
ನಿಜವಾದ ಬ್ರಾಹ್ಮಣ ಎಂದು ನಾನು ತಿಳಿದೆನಪ್ಪಾ......
ಮಾಯದ ಬ್ರಾಹ್ಮಣನೆಂದು ನಾನು ತಿಳಿಯಲಿಲ್ಲ ಎಂದಳು......
ಇಂದು ನೋಡುವಾಗ ತಂಗಿ ದಾರಗ ಕಾಯಬಿಟ್ಟು ಕೈಲಾಸ ಸೇರಿದ್ದಾಳಂತೆ, ಜೀವಬಿಟ್ಟು ವೈಕುಂಠ ಸೇರಿದ್ದಾಳಂತೆ......
ಕಣ್ಣಿನ ಕಪ್ಪಾಲಿ ಮರೆಯಾಗಿ ಬಿಳಿಆಲಿ ಎದ್ದುಕಾಣುತ್ತಿದೆಯಂತೆ......
ಬಾಯಲ್ಲಿ ಬಿಳಿನೊರೆ ಕಾರಿದಳಂತೆ ಓ ದಾರಗ......ಓ......
ನಾರಾಯಣ ಓ ನಾರಾಯಣ ದೇವರೇ ಓ......
ಏನು ಮಾಡಲಿ ನಾನು ಓ ಏನಾಯಿತೆಂದು ಹೇಳಿದಳು ಅಬ್ಬಗ......ಓ......
ನಾರಾಯಣ ಓ ನಾರಾಯಣ ದೇವರೇ ಓ......
ಮೇಲು ಮೇಲ್‌ಸ್ತರದ ಲೋಕ ಓ ದೇವರು ಬೆರ್ಮೆರ ಪಾದಕ್ಕೆ ಓ ಒಂದು ಶರಣೆಂದಳು......
ನಾರಾಯಣ ಓ ನಾರಾಯಣಾ......ಓ......
ಆಚೆ ಎಂದಳು ಅಬ್ಬಗ ಓ ಈಚೆ ಎಂದಳು......ಓ......
ಕಣ್ಣಲ್ಲಿ ಕಣ್ಣೀರ ಧಾರೆ ಸುರಿಸಿದಳು ಅಬ್ಬಗ......ಓ......

ಹೊಟ್ಟೆಯಲ್ಲಿ ಸಂಕಟಪಟ್ಟಳು ಅಬ್ಬಗ ಓ......
ಓಡಿಹೋದಳು ಓ ಕಂಗಿಗೆ (ಆತು) ಬೆಳೆದ ಪಂಚವಳ್ಳಿ ವೀಳ್ಯದೆಲೆ ತಂದಳು......
ಕಾಸರಕನ ಮರಕ್ಕೆ (ಆತು) ಬೆಳೆದಿರುವ ಕಾಪುರದ(?) ಗರಿ ತಂದಳು ಓ ಮಾವಿಗೆ ಹೋಗಿರುವ
ಮುಂಡೋಲೆ ವೀಳ್ಯ ತಂದಳು ಓ......
ಮೂರು ಬಗೆಯ ವೀಳ್ಯದೆಲೆ ತಂದಳು......
ಮುತ್ತಿನ ಕಲ್ಲಿನ ಮೂಗುತಿ ತೆಗೆದಳು......
ಕೆಲೆಂಜ ಪೊರಾರಿ ಓ ಜಾರು ಮಾರ್ಲರು ಓ ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರು ಬರಬೇಕು
ಹೊಸ ಬುಟ್ಟಿಯಲ್ಲಿ ಓ ಹೊಸ ಹುಟ್ಟಿನಲ್ಲಿ ಓ ಎರಡು ಹೆಣಗಳನ್ನು ಓ ನಮ್ಮನ್ನು ತೆಗೆಯಬೇಕೆಂದಳು ಅಬ್ಬಗ......
ತಂಗಿಯನ್ನು ಅಡ್ಡಕ್ಕೆ ಎತ್ತಿಹಿಡಿದಳು ಓ ಕಣ್ಣಲ್ಲಿ ಕಣ್ಣೀರು ತೆಗೆದಳು ಅಬ್ಬಗ......ಓ......
ಹಾಕಿರುವ ಏತ ಓ ತೋಡಿಸಿರುವ ಬಾವಿಯ ಕಟ್ಟೆಗೆ ತಂದಳು ಅಬ್ಬಗ ಓ......
ಬಾವಿಗೆ ಹಾಕಿದಳು ಓ ತಾನೂ ಹಾರಿದಳು ಅಬ್ಬಗ......ಓ......
ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ ಓ ಹಾಕಿರುವ ಏತದಲ್ಲಿ ಓ ತೋಡಿಸಿರುವ ಬಾವಿಯಲ್ಲಿ
ಎರಡು ಹೆಣಗಳು ಓ ಹಿಂಗಾರದ ಹಾಳೆಗಳು ಓ ತೇಲಿದಂತೆ ಓ ತೇಲುತ್ತಿದ್ದಾವಂತೆ...
ನಾರಾಯಣ ಓ ನಾರಾಯಣಾ ಓ......
ಅಜಿಲಬೆಟ್ಟು ಓ ಮುಜಿಲಬೆಟ್ಟು ಓ ಕಾಡಿನಿಂದ ಓ ಕರುಗಳನ್ನು ಅಟ್ಟಿಸಿಕೊಂಡು ಓ ದಾರು ಸೇವಕಿ ಹೆಣ್ಣು ಬರುವಾಗ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ ಮಕ್ಕಳು ಇಲ್ಲವಂತೆ......ಓ......
ಇಲ್ಲಪ್ಪಾ ಎಂದು ಓ ಅಯ್ಯಯ್ಯೋ ದೇವರೇ ಓ ಎಲಎಲಾ ದೇವರೇ ಎಂದು ಹೇಳುತ್ತಾ ಹುಡುಕುತ್ತಾ ಹೋಗುವಾಗ ಹೆಣ್ಣುಗಳು......ಓ......
ಹಾಕಿರುವ ಏತ ಓ ತೋಡಿಸಿರುವ ಬಾವಿಯಲ್ಲಿ......ಓ......
ಎರಡು ಹಿಂಗಾರದ ಹಾಳೆಗಳು ತೇಲುವಂತೆ ಓ ಎರಡು ಮಕ್ಕಳ ಹೆಣಗಳು ತೇಲುತ್ತಿವೆಯಂತೆ
ನಾರಾಯಣ ಓ ನಾರಾಯಣ ದೇವರೇ......ಓ......
ಕಾಯಿಹಾಕಿ ಕನ್ಯಾಮುಹೂರ್ತ ಕರೆದು ಓ ಅದೇ ದಾರಿ ಓ ಅಬ್ಬಂದಡ್ಕದ ಓ
ಗೋಳಿಯ ಬುಡದಲ್ಲಿ ಓ ಗುರು ಮಾರ್ಲನೂ ಸೊನ್ನೆಯೂ......ಓ......
ಕಾಯಿ ತಿಂದು ಓ ಅಮಲೇರಿ ಓ ಕುಳಿತಿದ್ದಾರೆ......ಓ......
ಅಷ್ಟು ಹೊತ್ತಿಗೆ ಓ ನಾರಾಯಣ ಬ್ರಾಹ್ಮಣಾ......ಓ......
ಅಲ್ಲಿ ಜೋಗವಾದರು ಬ್ರಾಹ್ಮಣ......
ನಾರಾಯಣ ಬ್ರಾಹ್ಮಣಾ ಓ ನಾರಾಯಣ ಬ್ರಾಹ್ಮಣಾ ನೀವೂ......

ಹೋಗುವಾಗಲೂ ನಮಗೆ ಓ ಇಲ್ಲೇ ಸಿಕ್ಕಿದ್ದೀರಿ ಓ ಹಿಂತಿರುಗಿ ಬರುವಾಗಲೂ ಇಲ್ಲೆ ಸಿಕ್ಕಿದಿರಿ......
ಹೋಗುವಾಗ ಹೋದಿರೇ ಉರ್ಕಿದೊಟ್ಟುವಿನ ಬೈಲಲ್ಲೆ ಓ......
ಬರುವಾಗ ಬಂದಿರೇ?
ನಾರಾಯಣ ಓ ಗುರು ಮಾರ್ಲಾ ಓ......
ಹೋಗುವಾಗ ಹೋಗಿರಲಿಲ್ಲಾ ಓ ಬರುವಾಗ ಬಂದೇ ನಾನು......ಓ
ನಾನು ಬರುತ್ತಿರುವಾಗ......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಕಿರಚಾಟ ಕೇಳಿಸುತ್ತಿದೆ ಎಂದರು......
ಅಷ್ಟು ಹೇಳುವುದನ್ನು ಕೇಳಿದಳು ಸೊನ್ನೆ ಓ ತಲೆಗೆ ತಲೆ ಓ ಹೊಡೆದುಕೊಂಡಳು...
ಇಂದು ಎದೆಎದೆ ಬಡಿದುಕೊಂಡಳಂತೆ ಓ ಹಾಕಿರುವ ಆಭರಣಗಳನ್ನು ತುಂಡು ಮಾಡಿದಳು ಓ ಉಟ್ಟಿರುವ ಪಟ್ಟೆ ಹರಿದುಕೊಂಡಳು......ಸೊನ್ನೇ......
ಮುಡಿದಿರುವ ಜಲ್ಲಿಯನ್ನು ಓ ಕಡಿದಳು ಸೊನ್ನೇ......ಓ......
ನಾರಾಯಣ ಓ ನಾರಾಯಣಾ......
ಆಚೆ ನೋಡಿ ಈಚೆ ನೋಡುವಾಗ ಬ್ರಾಹ್ಮಣ ಮಾಯ ಆಗಿದ್ದಾನಂತೆ......
ನಾರಾಯಣ ಓ ನಾರಾಯಣಾ...... ನಾರಾಯಣ ಸೊನ್ನೆ ಎಲ್ಲಿ ಬೊಬ್ಬೆ ಕೇಳಿದೆಯೋ ಏನೋ ಎಲ್ಲಿಗೆ ಹೋಗುವವಳು ನೀನು......
ಯಾಕಾಗಿ ಸ್ಮೃತಿ ತಪ್ಪುತ್ತಿ ಎಂದು ಹೇಳಿ ಸೊನ್ನೆಯನ್ನು
ಎತ್ತಿಕೊಂಡು ಓ ಉರ್ಕಿ ದೊಟ್ಟುವಿನ ಅರಮನೆಗೆ
ತಂದು ಹಾಕಿದರು ಗುರು ಮಾರ್ಲರು......ಓ......
ನೋಡುವಾಗ ಓ ಏನನ್ನು ನೋಡುವುದು......ಓ......
ಬಾವಿಯ ಕಟ್ಟೆಯಲ್ಲಿ ಓ ಬರೆದು ಇರಿಸಿದ್ದು ಓ ಕಾಣಿಸುತ್ತದೆ......
ನಾರಾಯಣ ಓ ನಾರಾಯಣ ಗಂಡುಸೇ ಓ......
ಬಡಬ್ರಾಹ್ಮಣ ಓ ನಾರಾಯಣ ಗಂಡುಸೇ ಓ......
ಬಡಬ್ರಾಹ್ಮಣ ಬಂದನಪ್ಪಾ ಓ ಉರ್ಕಿದೊಟ್ಟು ಅರಮನೆಗೆ ಓ ಬಡಬ್ರಾಹ್ಮಣ ಬಂದನಪ್ಪಾ......
ಬಾಕಿಮಾರುಗದ್ದೆಯ ಪೈರು ಜಾನುವಾರು ತಿನ್ನುತ್ತದೆಯೆಂದು ಓ ಬಡಬ್ರಾಹ್ಮಣ ಕರೆದು ಹೇಳಿದನು ಅಣ್ಣನವರೇ......
ಓ ಎಂದು ಸೇವಕಿ ಹೆಣ್ಣು ಓ ಉತ್ತರ ಕೊಡುತ್ತಾಳೇ......
ನಾವು ಬರುವಾಗ ಓ ಗಂಡುಸೇ ಕೇಳಿದಿರಾ......ಓ......
ಎರಡು ಹೆಣಗಳು ಓ ಬಾವಿಯಲ್ಲಿವೆ......ಓ......
ಅದನ್ನು ನೋಡಿ ಓ ನಾವು ಅರಿಯೋ ಮುರಿಯೋ ಅತ್ತೆವೆಂದು ಓ ಹೇಳುತ್ತವೆ ಹೆಣ್ಣುಗಳು......
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ ಗಡಿಬಿಡಿ ಆಗುತ್ತದೆ ಓ......

ಕಿರಿಚಾಟ ಓ ಕೇಳಿಸುತ್ತದೆ......ಓ......
ನಾರಾಯಣ ಓ ನಾರಾಯಣಾ......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರು ಬಂದರು......
ಕೆಲೆಂಜ ಪರಾರಿ ಓ ಜಾರು ಮಾರ್ಲರು ಬಂದರು ಅಲ್ಲಿಗೆ......
ನಾರಾಯಣ ಓ ನಾರಾಯಣಾ ಓ......
ನಾರಾಯಣ ಓ ನಾರಾಯಣಾ......ಓ......
ಎಂದಾದರೋ ಇಂದು ಕಾಸರಕ ಮರಕ್ಕೆ ಹೋಗಿರುವ ಕಾಪುರಗರಿಯಲ್ಲಿಯಂತೆ
ಇಂದು ಮವಿನ ಮರಕ್ಕೆ ಹೋಗಿರುವ
ಮುಂಡೋಲೆ ವೀಳ್ಯದಲ್ಲಿಯಂತೆ ಇಂದು ಓ ಕಂಗಿಗೆ ಹೋಗಿರುವ ಪಂಚವಳ್ಳಿ ವೀಳ್ಯದಲ್ಲಿ ಇಂದು......
ಮೂಗಿನ ಮೂಗುತ್ತಿಯಲ್ಲಿ ಬರೆದು ಇಟ್ಟಿದೆಯಂತೆ ಇಂದು......
ಗುರ್ಗಲಾಡೀ ಓ ಚಂದು ಪೆರ್ಗಡೆ ಓ ಬನ್ನಾರರು ಅಜ್ಜನವರು ಓ......
ಕೆಲೆಂಜ ಪರಾರಿ ಓ ಜಾರು ಮಾರ್ಲರು ಓ ನಮ್ಮ ತಂದೆಯವರು......ಓ......
ಹೊಸ ಬುಟ್ಟಿಯಲ್ಲಿ ಓ ಹೊಸ ಹುಟ್ಟಿನಲ್ಲಿ......ಓ......
ಎರಡು ಹೆಣಗಳನ್ನು ಓ ಮೇಲೆ ತೆಗೆಯಬೇಕೆಂದು ಓ ಬರೆದಿಟ್ಟಿದೆ ಎಂದರು......
ಹೊಸ ಬುಟ್ಟಿ ಓ ಹೊಸ ಹುಟ್ಟುಗಳನ್ನು ಮಾಡಿಸಿದರು......
ಬಾವಿಯಿಂದ ಎರಡು ಹೆಣಗಳನ್ನೂ ಮೇಲಕ್ಕೆತ್ತಿದರು......ಓ......
ಉರ್ಕಿದೊಟ್ಟುವಿನರೆಮನೆಯಲ್ಲಿ ಓ ಸಾನೇರಿ ಚಾವಡಿಯಲ್ಲಿ ಓ ಕಣಜದ ಅಕ್ಕಿಯಲ್ಲಿ ಓ ಮಲಗಿಸಿದರಂತೆ......
ಮೂಗಿಗೆ ಹತ್ತಿ ಓ ಇಟ್ಟರಂತೆ......
ಎರಡೂ ಹೆಣಗಳು ಓ ಕಣಜದ ಅಕ್ಕಿಯಲ್ಲಿ ಓ ಬಿಸಿ ಏರುವುದಿಲ್ಲವಲ್ಲಾ ಓ......
ಎರಡೂ ಹೆಣಗಳು ಓ ಮಣ್ಣಾಗಿವೆ......
ಇಂದಾದರೋ ಇಂದು ಸೊನ್ನೆಯನ್ನು ಕರೆದುಕೊಂಡು ಹೋದರಂತೆ......ಓ......
ಕತ್ತಲ ಕೋಣೆಯಲ್ಲಿ ಓ ಬೀಗಮುದ್ರೆಯಲ್ಲಿ ಸೊನ್ನೆಯನ್ನು (ಕೂಡಿ)ಹಾಕಿದರು......
ಗುರು ಮಾರ್ಲನನ್ನು ಓ ಕೊಂಡುಹೋದರಜ್ಜನವರು......ಓ......
ಕೂಡಿರುವ ಮಂದೆಗಳು ಓ ಕತ್ತಲಕೋಣೆಯಲ್ಲಿ ಓ ಬೀಗಮುದ್ರೆಯಲ್ಲಿ
ಓ ಗುರು ಮಾರ್ಲನನ್ನು ಹಾಕಿದರು......
ನಾರಾಯಣ ಓ ನಾರಾಯಣ......
ನಾರಾಯಣ ಓ ನಾರಾಯಣ ದೇವರೇ......
ಏನು ಮಾಡುವುದು ಓ ಏನು ಬಿಡುವುದೆಂದರು......ಓ......
ನಾರಾಯಣಾ ಓ ದೇವರೇ ಎಂದರು......
ಇಂದಾದರೋ ಇಂದು ಚಾವಡಿಯಿಂದ ಹೆಣಗಳನ್ನು ನೋಡಿದರಂತೆ ಆ ಕಡೆಯ ಮಾವಿನ ಮರ ಈ ಕಡೆಯ ಮಾವಿನ ಮರ ಕಡಿಸಿದರಂತೆ......ಇಂದು......

ಅಸನದ ಮೂಲೆಯಲ್ಲಿ ಮಸಣದ ಕಾಷ್ಠ ಓ ಪೇರಿಸಿದರಂತೆ......
ಏಳು ಕೈಯ ಕೊಪ್ಪರಿಗೆಯಲ್ಲಿ ಬಿಸಿನೀರು ಕಾಯಿಸಿದರಂತೆ......ಇಂದು......
ಎರಡು ಹೆಣಗಳನ್ನು ಇಂದು ತಂದರಂತೆ ಇಂದು ಜೋಡು ಬೆಂಚು ಇರಿಸಿದರಂತೆ...
ಇಂದು ಮಾವಿನ ತೊಗಟೆ ಓ ಗೆರಟೆಯ ಸೀಗೆ ಓ ಎಣ್ಣೆ ಅರಶಿಣ
ಓ ಸವರಿದಂತೆ......
ಉರ್ಕಿದೊಟ್ಟುವಿನ ಅರಮನೆಯ ಅರ್ಧ ಆ ಕಡೆಯ (ಕಟ್ಟಕಡೆಯ?) ನೀರುಮಗಾ ನಿಮಗೆಂದರು......ಓ......
ಹೆಣವನ್ನು ಸ್ನಾನ ಮಾಡಿಸಿದರು ಓ ಹೆಣವನ್ನು ಕೊಂಡುಹೋಗುವಂತೆ ಇಂದು......
ಮೂಡಣಕ್ಕೆ ಹೋಗಿರುವ ಬಂಗಬಾಳೆಯ ಎಲೆಯನ್ನು ತಂದರಂತೆ ಇಂದು ಬೂದು ಬಾಳೆಯ
ಎಲೆ ತಂದಿದ್ದಾರಂತೆ ಇಂದು......
ಜೋಡು ಎಲೆಯಲ್ಲಿ ಓ ಜೋಡು ಹೆಣಗಳನ್ನು ಸಿಂಗಾರಮಾಡಿ ಮಲಗಿಸಿದರಂತೆ...... ಓ......
ಕಲೆಂಜ ಪರಾರಿ ಜಾರು ಮಾರ್ಲರು ಓ ಉರ್ಕಿದೊಟ್ಟುವಿನ ಗುರು ಮಾರ್ಲರು ಓ ಅಜ್ಜನವರು......
ತಲೆಗೆ ತಲೆ ಹೊಡೆದುಕೊಳ್ಳುತ್ತಾ ಓ ಎದೆ ಎದೆ ಬಡಿದುಕೊಳ್ಳುತ್ತಾ......ಓ......
ಹೆಣಕ್ಕೆ ಗುರು ಮಾರ್ಲರೂ ಜಾರು ಮಾರ್ಲರೂ ಓ
ಹೆಣಕ್ಕೆ ತಲೆ ಓ ಕೊಟ್ಟರಂತೆ......
ಅಸನದ ಮೂಲೆಯಲ್ಲಿ ಮಸಣದ ಕಾಷ್ಠಕ್ಕೆ ಅಪ್ರದಕ್ಷಿಣೆಯಾಗಿ ಮೂರು ಸುತ್ತು ಬಂದರಂತೆ......
ಓ ಹೆಣವನ್ನು ತೆಗೆದು ಕಾಷ್ಠದಲ್ಲಿ ಮಲಗಿಸಿದರು......
ತಲೆಯ ಮೇಲೆ ಕಾಲ ಕೆಳಗೆ ಓ......
ತಲೆಯ ಮೇಲಿಂದ ಜನ್ಮಕೊಟ್ಟ ತಂದೇ ಓ ಉರ್ಕಿದೊಟ್ಟುವಿನ ಗುರು ಮಾರ್ಲರು ಓ ಬೆಂಕಿ ಕೊಟ್ಟರು......
ಕಾಲ ಕೆಳಗಿಂದಾ ಓ ಮಕ್ಕಳಿಗೆ ತಂದೆಯಲ್ಲಿ (ತಂದೆಯ ಜೊತೆಗೆ?) ಹುಟ್ಟಿದ ಓ ತಂದೆಯವರು (ಚಿಕ್ಕಪ್ಪ?)......ಓ......
ಕೆಲೆಂಜ ಪರಾರಿ ಓ ಜಾರು ಮಾರ್ಲರು ಓ ಬೆಂಕಿ ಕೊಟ್ಟರು......ಓ......
ತುದಿಬುಡ ಓ ಉರಿಯುತ್ತಾ ಬರುವಾಗ......
ನಡುಭಾಗ ಓ ಸೇರಿಕೊಂಡು ಬರುವಾಗ......
ಬಂಗಾರದ ತುಂಬಿಗಳು ಓ ಜೋಡುದುಂಬಿಗಳಾಗಿ ಓ......
ಆಕಾಶಕ್ಕೆ ಹೊಗೆ ಓ ಭೂಮಿಗೆ ಬೂದಿ ಆಗಬೇಕಾದರೆ ಓ......
ನಡು ಸೇರಿಕೊಂಡು ಉರಿಯುತ್ತಾ ಬರುವಾಗ......ಓ......
ಬಂಗಾರದ ದುಂಬಿಗಳಾಗಿ ಓ ಮೇಲಿನ ಮೇಲ್‌ಲೋಕ ಓ ದೇವರು ಬೆರ್ಮರ

ಪಾದಕ್ಕೆ......
ಓ ಶರಣುಹಾಕಿ ಓ ಬಂಗಾರದ ಪುಂಚಲ (ಚಾಮರ?) ಓ ದೇವರು ಬೆರ್ಮೆರು ಓ ಮಕ್ಕಳಿಗೆ ಕೊಟ್ಟಿದ್ದಾರೆ......
ನಾರಾಯಣ ಓ ನಾರಾಯಣ ದೇವರೇ ಓ ಸೊನ್ನೆ ಕೇಳಿದ್ದೀಯೇ ನೀನೂ......
ನೀನು ಪ್ರಜ್ಞೆ ತಪ್ಪಿದರೆ ಓ ಇಂದು ನಮ್ಮಿಂದೇನು ಮಾಡಲು ಸಾಧ್ಯವಿದೆ......
ಶಾಂತಿ ಸಮಾಧಾನ ಮಾಡಿಕೋ ಓ ತಾಯಿ ಎಂದರು......ಓ......
ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರು......ಓ......
ಇದು ಏನೋ ಮಾಯದ ದೃಷ್ಟಿ ನಮಗೆ ಓ......
ಯೋಗದಲ್ಲಿ ಬಾಳುವೆ ಓ ನಮಗಿಲ್ಲವೋ ಏನೋ ಎಂದರು......ಓ......
ಅಜ್ಜನವರು ಓ ಗುರ್ಗಲಾಡೀ ಓ ಚಂದು ಪೆರ್ಗಡೆ ಬನ್ನಾರರು......
ಸೊನ್ನೆಗೆ ಪ್ರಜ್ಞೆ ಬರುವಂತೆ ಓ ಮಾಡಿದರು......ಓ......
ಅಂದಿನ ದಿನ ಕಳೆದಿದೆ ಅವರಿಗೆ......ಓ......
ಮರುದಿನ ಓ ಬಂದಿದೆಯಂತೆ......
ಮೂರನೇ ದಿನದಂದು ಬೂದಿ ಮುಚ್ಚಬೇಕು...... ಓ......ಎಳನೀರು ತೂತು ಮಾಡಿ ಇಡಬೇಕೆಂದು ಓ...... ಅಜ್ಜನವರು ಹೇಳಿದರು......
ಅಜ್ಜನವರು ಹೇಳಿ ಓ ಅವರ ಮನೆಗೆ ಗುರ್ಗಲಾಡಿ ಓ ಚಂದು ಪೆರ್ಗಡೆ ಬನ್ನಾರರು ಓ ಅವರ ಚಾವಡಿಗೆ ಓ ಹೋದರಜ್ಜನವರು......
ಕೆಲೆಂಜೆ ಪರಾರಿ ಜಾರು ಮಾರ್ಲೆರು ಓ ಅವರ ಮನೆಯ ಓ ಕೆಲೆಂಜ ಪರಾರಿಗೆ ಹೋದರಂತೆ......
ಗುರುಮಾರ್ಲೆರು ಸೊನ್ನೆಯೂ ಓ ಚಾಕರಿಯ ಜನಗಳು ಓ...... ಉಕಿದೊಟ್ಟುವಿನ ಅರಮನೆಯಲ್ಲಿ ಓ ಇದ್ದಾರಂತೆ......
ನಾರಾಯಣ ನಾರಾಯಣ ಓ ದೇವರೇ......
ದೇವರೇ ಕೇಳಬೇಕು......
ತಲೆಬಾಗಿ ಶರಣು ಓ ದೇವರೇ
ನಡುಬಾಗಿ ನಾಟಕವಂತೆ......
ನಾರಾಯಣ ನಾರಾಯಣ ಓ ದೇವರೇ......
ದೇವರೇ ಓ ಕೇಳಬೇಕು......
ಮೂರು ದಿನದ ಯೋಗ (ದರ್ಶನ) ಕೊಡುತ್ತೀರಾ ದೇವರೇ......
ಎಂದು ಕೇಳುತ್ತಾವೆ ಮಕ್ಕಳು......ಓ
ಎರಡು ಮಕ್ಕಳು......
ನಾರಾಯಣ ನಾರಾಯಣ ಮಕ್ಕಳೇ......
ಮೂರು ದಿನದ ಜೋಗ (ದರ್ಶನ) ಕರುಣಿಸಿದರೆ ಓ......
ನನಗೇನು ಕೊಡುತ್ತೀರೆಂದು ಓ ಹೇಳುತ್ತಾರೆ......

ದೇವರು ಬೆರ್ಮರಂತೆ......
ಮೂರುದಿನದ ಜೋಗ ಕೊಟ್ಟರೆ ಓ ದೇವರೇ......
ಎರಡು ಕೈಯಲ್ಲಿ ಎರಡು ಬಾರಿ(?) ತರುವೆವೆಂದು ಓ......
ಹೇಳುತ್ತಾನೆ ಓ ಎರಡು ಮಕ್ಕಳು......
ಮೂರು ದಿನದ ಜೋಗ ಯಾಕೆ ಮಕ್ಕಳೇ
ನಿಮಗೆಂದು ಓ ಕೇಳಿದರು......
ಅಮ್ಮನವರ ದುಃಖವನ್ನು ಓ ದೇವರೇ......
ಅಪ್ಪನವರ ಚಿಂತೆಯನ್ನು......ಓ......
ಮರೆಸಿ ಬರುವೆವೆಂದರು ಓ ಮಕ್ಕಳು......
ಎರಡು ಮಕ್ಕಳು ಅವರು......
ಮೂರು ದಿನದ ಜೋಗ ಕೊಟ್ಟರು......ದೇವರು......
ಮಕ್ಕಳು ಮಾಯವಾದರು......
ಮೇಲಿನ ಲೋಕದಲ್ಲಿ ಮಾಯವಾದ ಮಕ್ಕಳು......
ಕೆಳಗಿನ ಸಿರಿಲೋಕದಲ್ಲಿ......ಓ......
ಉರ್ಕಿದೊಟ್ಟು ಬೈಲಲ್ಲಿ......ಓ......
ಜೋಗ(ದರ್ಶನ)ವಾಗಿದ್ದಾರೆ ಮಕ್ಕಳು......ಓ......
ಎರಡು ಮಕ್ಕಳಂತೆ ಅವರು......
ಅಂದಿನ ದಿನದಿಂದು ಓ ಗುರು ಮಾರ್ಲರು......
ಬೈಲಲ್ಲೆ ಬರುತ್ತಾರಂತೆ......
ಎಲ್ಲಿಂದ ಬಂದಿರಿ ಮಗಾ ಓ ಮಕ್ಕಳೇ......
ಎಲ್ಲಿಗೆ ಹೋಗುವವರೆಂದು......
ಗುರು ಮಾರ್ಲರು ಮಕ್ಕಳಲ್ಲಿ ಓ ಕೇಳುತ್ತಾರೆ......
ಓ ಕೇಳುತ್ತಾರಂತೆ
ನಾರಾಯಣ ಓ ನಾರಾಯಣ ಗಂಡುಸೇ......
ನಾವು ಹೋಗುವುದೆಂದರೆ ಓ......
ಬೋಳದರಸು ಮಕ್ಕಳಿಗೆ ಓ ಇಂದಾದರೋ
ಕಾಯಿ ಹಾಕಿ ಕಾಯಿಯ ಮದುವೆಯಂತೆ......
ಅಲ್ಲಿಗೆ ಕರೆದಿದ್ದಾರೆ ನಮ್ಮನ್ನು......
ಅಲ್ಲಿಗೆ ಹೋಗುವುದೆಂದರು......ಓ ಎರಡು ಮಕ್ಕಳು......
ಕಣ್ಣಾರೆ ನೋಡುತ್ತಾರೆ......ಓ ಮಾರ್ಲರು......
ಗುರುತು ಹಿಡಿಯುತ್ತಾರೆ......
ಯಾಕಾಗಿ ನೋಡುತ್ತೀರಿ ಓ ಗಂಡುಸೇ
ಎಂದು ಕೇಳಿದರು......

ನಿಮ್ಮನ್ನು ನೋಡುವಾಗ ಓ ಮಕ್ಕಳೇ......
ನನ್ನ ಮಕ್ಕಳನ್ನು ನೋಡಿದಂತೆ ಕಾಣಿಸುತ್ತೀರಿ......
ನಿಮ್ಮ ಮಕ್ಕಳು ಓ ಮಾರ್ಲರೇ......
ಏನಾಗಿದ್ದಾರೇ?
ನಮ್ಮ ಮಕ್ಕಳನ್ನು ಓ ಮಕ್ಕಳೇ......
ಮುಜಿಲಬೆಟ್ಟು ಉರಿಬ್ರಹ್ಮರ ಓ ಎದೆಗೆ
ಜೋಡು ಒಲೆ ಹಾಕಿದ್ದೇವೆ ಎಂದು
ಹೇಳುತ್ತಾರೆ ಮಾರ್ಲರು ಅವರಾದರೋ......
ಗುರು ಮಾರ್ಲರು ಅವರು......
ದೇವರನ್ನು ಓ ಯಾಕಾಗಿ ದೂರುತ್ತೀರಿ......
ನಿಮ್ಮ ಬುದ್ಧಿವಂತಿಕೆ ಸರಿಯಿಲ್ಲದುದಕ್ಕೆ
ಅವಳಿಮಕ್ಕಳಿಗೆ ಓ......
ಮದುವೆ ಮಾಡಲು ಹೊರಟಿರಿ......
ಅವರ ಹರಕೆಯನ್ನು ಹಿಂದಕ್ಕೆ ಉಳಿಸಿದಿರಿ......
ಮದುವೆ ಮೊದಲು......ಎಂದು
ಮದುವೆ ಮಾಡಿ ನೀವು
ಅವರ ಅಂದ ನೋಡದಿರೇ ಎಂದು.......
ಹೇಳುತ್ತಾರೆ ಮಕ್ಕಳು ಅವರು....
ಎರಡು ಮಕ್ಕಳು ಅವರಂತೆ....
ಮಕ್ಕಳು ಅಷ್ಟು ಹೇಳುವುದನ್ನು ಕೇಳಿ....
ಅಕಲು ಕೆಡತ್ತಾರೆ ಅವರು....
ಓ ಪ್ರಜ್ಞೆ ತಪ್ಪುತ್ತಾರೆ ಮಾರ್ಲರು ಅವರು.......
ನಾರಾಯಣ ನಾರಾಯಣ ಓ ಅಕ್ಕನವರೇ.......
ಅಕ್ಕನವರೇ ಓ ಕೇಳಿದ್ದೀರೆ.......
ಪಾಪಕ್ಕೆ ಹುಟ್ಟಿಸಿದ್ದಾರೆ ಓ ನಮ್ಮ ಓ ತಂದೆಯವರು.......
ಪುಣ್ಯಕ್ಕೆ ಓ ಸಾಕಿದ್ದಾರೆ ಓ ತಂದೆಯವರು.......
ಎಂದು ಹೇಳುತ್ತಾರೆ ಅವರು.......
ಬಲದ ಕೈಯಲ್ಲಿ ಓ ಅಬ್ಬಗ ಹಿಡಿದಳು.......
ಎಡದ ಕೈಯಲ್ಲಿ ಓ ದಾರಗ ಹಿಡಿದಳು.......
ಪ್ರಜ್ಞೆ ಬರುವಂತೆ ಓ ಮಕ್ಕಳು ಮಾಡಿದರು.......
ಮಾರ್ಲರಿಗೆ ಪ್ರಜ್ಞೆ ಬರುವಾಗ.......
ಮಕ್ಕಳು ಮಾಯ ಓ ಆಗಿದ್ದಾರೆ.......
ನಾರಾಯಣ ನಾರಾಯಣ ಓ ಮಕ್ಕಳೇ.......

ಜೀವಂತವಿದ್ದು ನಿಮ್ಮ ಬುದ್ದಿ ಬಿಡಲಿಲ್ಲಾ.......
ಸತ್ತು ಕೂಡಾ ಬಿಡಲಿಲ್ಲ ಎಂದರು.......
ಗುರು ಮಾರ್ಲರು ಅವರು.......
ಅಷ್ಟು ಹೊತ್ತಿಗೆ ಓ ಮಕ್ಕಳು.......
ಮಾಯ ಓ ಆಗಿದ್ದಾರೆ....
ಬೈಲಲ್ಲಿ ಮಾಯವಾದರು ಓ ಮಕ್ಕಳು.......
ಉರ್ಕಿದೊಟ್ಟಿನ ಚಾವಡಿಯಲ್ಲಿ ಜೋಗವಾದರು.......ಓ.......ಮಕ್ಕಳು.......
ಎರಡು ಮಕ್ಕಳು ಅವರು.......
ಬಂಗಾರದ ಉಯ್ಯಾಲೆಯಲ್ಲಿ ಕುಳಿತುಕೊಂಡು.......
ಗಿಗಟೆ ಅಲ್ಲಾಡಿಸುತ್ತಾರೆ ಓ ಮಕ್ಕಳು.......
ಎರಡು ಮಕ್ಕಳು ಅವರು.......
ನಾರಾಯಣ ನಾರಾಯಣ ಓ ಎಂದರು
ಸೇವಕಿ ಹೆಣ್ಣುಗಳು.......
ಚಾವಡಿಯಲ್ಲಿ ಕುಳಿತು ಓ ಮಕ್ಕಳು.......
ಮುಂದೆ ಹಿಂದೆ ಚಲಿಸುವಾಗ.......
ಓಡೋಡುತ್ತಾ ಓ ಬಂದು
ಹೆಣ್ಣುಗಳು ನೋಡುತ್ತಾರೆ.......
ನೋಡಿದ ಮೇಲೆ ಹಿಂದಕ್ಕೆ ಓ.......
ಓಡುತ್ತಾ ಓ ಬೇಗನೆ ಬರುತ್ತಾರೆ.......
ನಾರಾಯಣ ನಾರಾಯಣ ಓ ಅಕ್ಕನವರೆ.......
ನಮ್ಮ ಮಕ್ಕಳ ಅಂದ ನೋಡಿ ಎಂದೂ.......
ಸೇವಕಿ ಹೆಣ್ಣುಗಳು ಓ ಹೇಳುತ್ತಾರೆ.......
ನಾರಾಯಣ ನಾರಾಯಣ ಓ ಮಕ್ಕಳೇ.......
ಉರ್ಕಿದೊಟಿನ ಅರಮನೆಯಲ್ಲಿ
ಅನ್ನ ಬಸಿಯುತ್ತಾ ....ಓ ನಿಮಗಾಗಿ ಓ
ಸೊನ್ನೆಯೂ ಹೇಳುತ್ತಾರೆ.......
ಯಾಕಾಗಿ ಹೇಳುತ್ತೀರಿ.......ಓ.......ಅಕ್ಕನವರೇ.......
ಎಂದು ಕೇಳಿದರು.......
ಸೊನ್ನೆ ಒಳಗಿನಿಂದ ....ಓ.......
ತೂರಾಡುತ್ತಾ ಅಳುತ್ತಾ ....ಓ.......
ತುಂಡು ಬಟ್ಟೆ ಓ ಉಟ್ಟುಕೊಂಡು
ಚಿಂತೆಯಿಂದ ಮುಖ ಬಾಡಿಸಿಕೋಂಡು.......
ಚಾವಡಿಗೆ ಬಂದು ಓ ನೋಡುತ್ತಾರೆ.......

ಸೊನ್ನೆ ಮದುಮಗಳು.......ಅವರು.......
ಎಲ್ಲಿಂದ ಬಂದಿರಿ ಮಗಾ.......ಓ ಮಕ್ಕಳೇ.......
ಎಲ್ಲಿಗೆ ಹೋಗುವವರು.......
ಎಂದು ಕೇಳುವಾಗ ಓ ಮಕ್ಕಳು ಹೇಳುತ್ತಾರೇ.......ಇಂದಾದರೋ.......
ಕಾಯಿ ಹಾಕಿದ್ದಾರೆ.......
ಕನ್ಯಾಮುಹೂರ್ತ ಓ ಕರೆಯಲು
ಹೋಗಿದ್ದಾರೆ ಎಂದು ಹೇಳಿದರು.......
ನಾರಾಯಣ ನಾರಾಯಣ ಓ ಹೆಂಗುಸೇ.......
ನಮಗೆ ಎರಡು ಗಿಂಡೆ ಹಾಲನ್ನು
ಕೊಡಬಹುದೇ ಎಂದು ಕೇಳುತ್ತಾರೆ.......
ಎರಡು ಮಕ್ಕಳಂತೆ.......
ಅಷ್ಟು ಹೇಳುವುದನ್ನು ಕೇಳಿದರು.......
ಅವರಾದರೋ ಹೆಂಗುಸೂ.......
ಏಳು ಅಂತರದ ಯಮದೇವಿ ಗುಡಿಗೆ
ಓ ಹೋದರು.......
ಮಕ್ಕಳು ಕುಡಿಯುವಂತಹ ಓ ಪಿಂಗಾಣಿಯಲ್ಲಿ
ಎರಡು ಪಿಂಗಾಣಿ (ಬಟ್ಲು) ಹಾಲು ಕೊಟ್ಟರು.......
ಸೊನ್ನಯೇ, ಕೇಳಬೇಕಮ್ಮಾ.......
ಪರಿಚಯವಿರುವವರಂತೆ ನೋಡುತ್ತಾರೆ ಓ ತಾಯಿಯವರು
ಗುರುತು ಹಿಡಿದಂತೆ ನೋಡುತ್ತಾರೆ.......
ಯಾಕೆ ಹಾಗೆ ನೋಡುತ್ತೀರಿ.......ಓ ಹೆಂಗುಸೇ.......
ಎಂದು ಕೇಳುತ್ತಾರೆ ಮಕ್ಕಳು.......
ನಿಮ್ಮನ್ನು ನೋಡುವಾಗ ಓ ಮಕ್ಕಳೇ.......
ನನ್ನ ಮಕ್ಕಳನ್ನು ನೋಡಿದಂತೆ ಆಗುತ್ತದೆ.......
ನಿಮ್ಮ ಮಕ್ಕಳಾದರೋ ಓ ಹೆಂಗುಸೇ.......
ಏನಾಗಿದ್ದಾರೆ.......
ನನ್ನ ಮಕ್ಕಳನ್ನು ಓ ಮಕ್ಕಳೇ
ಮುಜಿಲಬೆಟ್ಟು ಉರಿಬ್ರಹ್ಮಾ ಎದೆಗೆ .... ಓ ನಾವಾದರೋ
ಜೋಡು ಒಲೆ ಹಾಕಿಸೀ.......
ಮೂರು ದಿನವಾಯಿತೆಂದರು.......ಓ ಸೊನ್ನೆ ಅವರು.......
ಸೊನ್ನೆ ಮದುಮಗಳು
ಅಷ್ಟು ಹೇಳಲು ಓ ಹೇಳುತ್ತಾರೆ.......
ಮಕ್ಕಳು ಹೇಳುತ್ತಾರಂತೆ.......

ಹರಕೆ ಹಿಂದೆ ಉಳಿಸಿ ಓ ಹೆಂಗುಸೇ
ಮದುವೆಗೆ ಮುಂದೆ ಹೋದಿರಿ.......
ಮದುವೆ ಮಾಡಿಸಿದರೇ ಓ ಹೆಂಗುಸೇ
ಮದುವೆಯ ಅಂದ ನೋಡಿದರೇ ಎಂದು
ಮಕ್ಕಳು ಹೇಳಲು ಓ ಸೊನ್ನೇ
ಅಕಲು ತಪ್ಪಿದರು.......
ಅಕಲು ತಪ್ಪಿದರು ಸೊನ್ನೇ
ಪ್ರಜ್ಞೆ ತಪ್ಪಿದರು ಓ.......
ಅಷ್ಟು ಹೊತ್ತಿಗೆ ಓ ಹೇಳುತ್ತಾಳೇ
ಓ ಅಕ್ಕ ಅಬ್ಬಗಳಂತೆ
ನಾರಾಯಣ ಓ ನಾರಾಯಣ ದಾರಗ.......
ತಂಗಿ ದಾರಗ.......
ಹತ್ತು ತಿಂಗಳು ನಮ್ಮನ್ನು ಓ
ತಾಯಿಯವರು ಹೊತ್ತಿದ್ದಾರೆ.......
ಎದೆಯ ರಕ್ತವನ್ನು ಕೊಟ್ಟು
ನಮ್ಮ ಒಡಲು ತಂಪು ಮಾಡಿದ್ದಾರೆ.......
ಅವರಿಗೆ ಸ್ಮೃತಿ ಬರುವಂತೆ ಮಾಡೋಣ ಎಂದರು.......
ಅಕ್ಕ ಅಬ್ಬಗ ಈಗಾದರೋ
ಬಲದ ಕೈಯಲ್ಲಿ ಹಿಡಿದಳು.......
ತಂಗಿ ದಾರಗೆಯಾದರೊ ಈಗ
ಎಡದ ಕೈಯಲ್ಲಿ ಹಿಡಿದಳು.......
ಪ್ರಜ್ಞೆ ಬರುವಂತೆ ಓ ಮಾಡಿದರು.......
ಎರಡು ಮಕ್ಕಳಂತೆ.......
ಆಚೆ ನೋಡಿ ಈಚೆ ನೋಡುವಾಗ ಓ ಸೊನ್ನೇ.......
ಮಕ್ಕಳು ಮಾಯವಾಗಿದ್ದಾರೆ.......
ನಾರಾಯಣ ನಾರಾಯಣ ಓ ಮಕ್ಕಳೇ.......
ಎರಡು ಮಕ್ಕಳೇ.......
ಜೀವಂತ ಇದ್ದು ನಿಮ್ಮ ಬುದ್ದಿ ಓ ಬಿಡಲಿಲ್ಲ.....ಓ
ಸತ್ತೂ ಬಿಡಲಿಲ್ಲವಲ್ಲಾ.......ಓ.......
ಪದೇ ಪದೇ ಅದನ್ನೇ ಹೇಳುತ್ತಾ ಓ
ಹೀಯಾಳಿಸುತ್ತೀರಲ್ಲಾ ಓ ಎಂದು
ಮನಸ್ಸಲ್ಲೇ ಎಣಿಸಿದರು ಓ ಸೊನ್ನೆ ಅವರು.......
ಸೊನ್ನೆ ಮದುಮಗಳು ಅವರು.......

ಉರ್ಕಿದೊಟ್ಟಿನ ಅರಮನೆಯಲ್ಲಿ.......ಮಕ್ಕಳು.......
ಮಾಯವಾದ ಮಕ್ಕಳು.......
ಅಬ್ಬನಡ್ಕದ ಗೋಳಿಮರದ ಬುಡದಲ್ಲಿ ಓ ಮಕ್ಕಳು.......
ಜೋಗ(ದರ್ಶನ) ವನ್ನು ಬೇಡುತ್ತಾರೆ.......
ಅಷ್ಟು ಹೊತ್ತಿಗೆ ಓ ಬರುತ್ತಾರಂತೆ
ಕುಂಬಾರ ಬಬ್ಬುವಂತೆ.......
ಎಲ್ಲಿಂದ ಬಂದವ ಓ ಕುಂಬಾರನೇ
ಎಲ್ಲಿಗೆ ಹೋಗುವವನು
ಎಂದು ಕೇಳುತ್ತವಂತೆ ಓ ಹೆಣ್ಣುಗಳು.......
ಎರಡು ಹೆಣ್ಣುಗಳು.......
ಬೋಳದರಸು ಮಕ್ಕಳಿಗೆ ಓ ಇಂದಾದರೋ
ಕಾಯಿ ಹಾಕಿ ಕಾಯಿಯ ಮದುವೆಯಂತೆ
ಅಲ್ಲಿಗೆ ಕಲಶ ಕೊಂಡುಹೋಗುವುದೆಂದು
ಕುಂಬಾರ ಹೋಗುವಾಗ.......
ಕುಂಬಾರನನ್ನು ಮಾಯವೆಂದು ಮಾಡಿದರು.......
ಎರಡು ಮಕ್ಕಳಂತೆ.......
ಅಲ್ಲಿಂದ ಹಾಗೆ ಓ ಬರುವಾಗ.......
ಬೇಂಡಿನ (ವಾಲಗ)ವನು ಬರುತ್ತಾನೆ.......
ಎಲ್ಲಿಗೆ ಹೋಗುವವನು ಓ ಬೇಂಡಿನ (ವಾಲಗದ)ವನೇ
ಎಲ್ಲಿಂದ ಬಂದವನೂ.......
ಬೋಳದರಸು ಮಕ್ಕಳಿಗೆ ಇಂದಾದರೋ
ಕಾಯಿ ಹಾಕಿ ಕನ್ಯಾಮುಹೂರ್ತವಂತೆ.......
ಕರೆಯಲು ಹೋಗುವವರೆಂದು ಓ
ಬೇಂಡಿನವ ಹೇಳುತ್ತಾನಂತೆ.......
ಅಲ್ಲಿಗೆ ಬೇಂಡು ಕೊಂಡುಹೋಗುವುದೆಂದೂ.......
ಬೇಗನೇ ಹೇಳುತ್ತಾನೆ.......
ನಮಗಾದರೋ ಓ ಬೇಂಡಿನವನೇ
ನೀರ ಪ್ರಸ್ತಾಪ (ಮೀಯಿಸುವ ಹಬ್ಬ) ಕ್ಕೆ ಕರೆಯಲಿಲ್ಲ.......
ನಮಗೊಮ್ಮೆ ಬೇಂಡನ್ನು ಈಗಲಾದರು
ನೀನಾದರು ಬಡಿಯುವೆಯಾ ಎಂದು
ಹೇಳುತ್ತಾರೆ ಮಕ್ಕಳು ಈಗಲಾದರೂ
ಎರಡು ಮಕ್ಕಳಂತೆ.......
ಕಾಡು ಗುಡ್ಡೆಯಲ್ಲಿ....... ಓ ನಾವಾದರೋ

ಬೇಂಡು ಬಾರಿಸೆವೆಂದು
ಹೇಳುತ್ತಾನೆ ಬೇಂಡಿನವನು ಅವನು.......
ಏಳು ಹೆಜ್ಜೆ ಮುಂದೆ ಹೋಗಲು ಓ ಅವನನ್ನು
ಬೇಂಡಿನವನನ್ನು ಮಾಯ ಮಾಡಿದರು.......
ಎರಡು ಮಕ್ಕಳಂತೆ ಅವರು
ಅಬ್ಬಗದಾರಗ ಮಕ್ಕಳಂತೆ.......
ನಾರಾಯಣ ನಾರಾಯಣ ಓ ನಾರಾಯಣ
ನಾರಾಯಣ ಓ ಕೇಳಬೇಕಂತೆ.......
ಅಷ್ಟು ಹೊತ್ತಿಗೆ ಓ ಅವನ ಹಿಂದಯೇ ಬರುತ್ತಾನಂತೆ.......
ಗರ್ನಾಲಿನ ಸಾಹೇಬ ಓ ಬರುತ್ತಾನೆಂದು ಹೇಳುತ್ತಾರೆ.......
ಎಲ್ಲಿಂದ ಬಂದವನು ಓ ಎಲ್ಲಿಗೆ ಗರ್ನಾಲು ....ಓ
ಕೊಂಡು ಹೋಗುವವನೆಂದು ಓ ಕೇಳಲೂ.......
ಬೋಳದರಸು ಮಕ್ಕಳಿಗೆ ಓ ಇಂದಾದರೋ
ಕಾಯಿಹಾಕಿ ಕನ್ಯಾಮುಹೂರ್ತಕ್ಕೆ
ಹೇಳಿದ್ದಾರೆಂದೂ ಹೇಳಿದನಂತೆ.......
ನಮಗೆರಡು ಗರ್ನಾಲು ಸಿಡಿಸಬಹುದೇ ಎಂದು.......
ಸಾಹೇಬನಲ್ಲಿ ಕೇಳುತ್ತಾರೆ.......
ಕಾಡುಗುಡ್ಡದಲ್ಲಿ ನಾನಾದರೋ
ಗರ್ನಾಲು ಎಸೆಯಲಾರೆ.......
ಎಂದು ಸಾಹೇಬ ಹೇಳುತ್ತಾ ಬೇಗಬೇಗನೇ ಹೋಗುತ್ತಾನ<ಂತೆ.......
ಅಲ್ಲಿಂದ ಏಳು ಹೆಜ್ಜೆ ಓ ಮುಂದೆ ಸಾಗುವಾಗ.......
ಗರ್ನಾಲಿನ ಸಾಹೇಬನನ್ನು ಓ ಮಾಯವೆಂದು ಮಾಡಿದರು.......
ಅಷ್ಟು ಹೊತ್ತಿಗೆ ಓ ಇಂದಾದರೋ.......
ಬರುತ್ತಾನಂತೆ ಓ ಮಡಿವಾಳ.......
ಎಲ್ಲಿಗೆ ಹೋಗುವವ ಮಡಿವಾಳ.......
ಎಂದು ಕೇಳುತ್ತಾರೆ ಮಕ್ಕಳು ಅವರು.......
ಬೋಳದರಸು ಮಕ್ಕಳಿಗೆ ಇಂದಾದರೋ
ಕಾಯಿ ಹಾಕಿ ಕನ್ಯಾಮುಹೂರ್ತಕ್ಕೆ
ಮಡಿ(ಬಟ್ಟೆ) ಕೊಂಡುಹೋಗುವುದೆಂದನು ಮಡಿವಾಳ.......
ಮಡಿಯ ಮಾಡಿವಾಳನಂತೆ.......
ನಮಗೆರಡು ಜನರಿಗೆ ಇಂದಾದರೋ.......
ಎರಡು ಮಡಿ(ಬಟ್ಟೆ) ಕೊಡಬಹುದೆ?.......
ಕಾಡುಗುಡ್ಡದಲ್ಲಿ ಓ ಹೆಣ್ಣುಗಳೇ

ಮಡಿ ಕೊಡಲಾರನೆಂದು ಓ ಹೇಳುತ್ತಾನೆ
ಮಡಿವಾಳ ಹೇಳುತ್ತಾನಂತೆ.......
ಅಲ್ಲಿಂದ ನಾಲ್ಕು ಹೆಜ್ಜೆ ಓ ಹೋಗುವಾಗ.......
ಮಡಿವಾಳನನ್ನು ಮಾಯವೆಂದು ಮಾಡಿದರು.......
ಎರಡು ಮಕ್ಕಳಂತೆ.......
ಅವನ ಹಿಂದಿನಿಂದ ಬರುತ್ತಾನಂತೆ
ಭಂಡಾರಿ (ಕ್ಷೌರಿಕ) ಬರುತ್ತಾನಂತೆ.......
ಎಲ್ಲಿಂದ ಬಂದವನು ಓ ಭಂಡಾರಿಯೇ
ಎಲ್ಲಿಗೆ ಹೋಗುವವನು.......
ಬೋಳದ ಅರಸು ಮಕ್ಕಳಿಗೆ ಇಂದಾದರೊ
ಕಾಯಿ ಹಾಕಿ ಕ್ಯಾಮುಹೂರ್ತಕ್ಕೆ
ಕರೆದು ಹೋಗಿದ್ದಾರೆಂದು ಓ ಹೇಳುತ್ತಾರಂತೆ.......
ಭಂಡಾರಿ ಹೇಳುವಾಗ.......
ನಮಗೆ ಇಂದಾದರೋ ಓ ಭಂಡಾರಿಯೇ
ಮೋಂದಲೆ (ಮುಖಕ್ಷೌರ) ಕೊಡುತ್ತೀಯೋ
ನೀರ ಪ್ರಸ್ತಾಪ (ಮೀಯುವ ಹಬ್ಬ)ಕ್ಕೆ ನಮ್ಮನ್ನೇ
ಕರೆಯಲಿಲ್ಲವೆಂದು ಓ ಹೇಳುತ್ತಾರಂತೆ.......
ಕಾಡುಗುಡ್ಡದಲ್ಲಿ ನಾನಾದರೋ ಕೊಡೆನೆಂದು ಓ ಭಂಡಾರಿ
ಭಂಡಾರಿ ಹೇಳಿದಾಗಲಂತೆ
ಅಲ್ಲಿಂದ ನಾಲ್ಕು ಹೆಜ್ಜೆ ಓ ಹೋಗುವಾಗ.......
ಭಂಡಾರಿಯನ್ನು ಮಾಯ ಮಾಡಿದರು.......
ಅವನ ಹಿಂದೆಯೇ ಬರುತ್ತಾಳೆ ಓ
ಮಲ್ಲಿಗೆಯ ಬಾಯಿ (ಕ್ರಿಶ್ಚಿಯನ್ ಹೆಂಗುಸು) ಅಂತೆ.......
ನಾರಾಯಣ ನಾರಾಯಣ ಓ ಬಾಯಿ
ಎಲ್ಲಿ ಹೋಗುವವಳು.......
ಎಲ್ಲಿಂದ ಬಂದವಳೆಂದು ಕೇಳುತ್ತಾವೆ
ಎರಡು ಮಕ್ಕಳಂತೆ.......
ಬೋಳದರಸು ಮಕ್ಕಳಿಗೆ ಓ ಹೆಣ್ಣುಗಳೇ
ಕಾಯಿ ಹಾಕಿ ಕನ್ಯಾಮುಹೂರ್ತ
ಅದಕ್ಕೆ ಮಲ್ಲಿಗೆಯ ಹೂ ಕೊಂಡುಹೋಗುವುದೆಂದು ಬಾಯಿ ಹೇಳುತ್ತಾಳೆ ....
ಅಷ್ಟು ಹೇಳುವಾಗ ಓ ಹೇಳುತ್ತವಂತೆ
ಎರಡು ಮಕ್ಕಳು ....
ನಾರಾಯಣ ನಾರಾಯಣ......ಓ.......ಬಾಯೀ.......

ಎರಡು ಮಕ್ಕಳಂತೆ.......
ನಾರಾಯಣ ನಾರಾಯಣ ಓ ಹೆಣ್ಣುಗಳೇ.......
ಲೆಕ್ಕದ ಚೆಂಡುಗಳಿರುವುದು ಓ
ಲೆಕ್ಕದ ಹೂವುಗಳಿರುವುದೆಂದಳು ....ಓಬಾಯಿ
ಮಲ್ಲಿಗೆಯ ಬಾಯಿಯಂತೆ.......
ಎರಡು ಹೆಜ್ಜೆ ಮುಂದೆ ಹೋದ ಓ ಬಾಯೀ.......
ಹಿಂತಿರುಗಿ ಬಂದಳು.......
ಹಿಂತಿರುಗಿ ಬಂದಳು ಓ ಬಾಯೀ.......
ಮಲ್ಲಿಗೆಯ ಬುಟ್ಟಿ ಓ ಕೆಳಗಿಟ್ಟಳು.......
ಎರಡು ಚೆಂಡು ಹೂ ಮಕ್ಕಳಿಗೆ ಕೊಟ್ಟಳು.......
ಚೆಂಡುಗಳನ್ನು ಹಿಡಿದುಕೊಂಡು ಓ ಬುಟ್ಟಿ ಹಿಡಿದುಕೊಂಡು
ಬಾಯಿಯಾದರೋ ಹೋದಳಂತೆ.......
ಬೋಳದರಮನೆಗೆ ಹೋದಳು.......
ಬೇಗನೆ ಕರೆದಳು ಅಲ್ಲಿ.......
ನಾರಾಯಣಾ ನಾರಾಯಣ ಓ ಬಾಯೀ.......
ಬೆಳಗ್ಗೆ ಬಂದರೆ ಸಂಜೆ ಹೋಗುವ ಬಾಯಿ ನೀನೂ.......
ನಿನಗೇನು ಇಂದು ತಡವಾಯಿತೆಂದು ಓ ಕೇಳುತ್ತಾರೆ.......ಬಾಯಿಯಲ್ಲಿ.......
ನಾರಾಯಣ ನಾರಾಯಣ ಬಾಯಿ ಓ........
ಬೆಳಗ್ಗೆ ಬಂದರೆ ಸಂಜೆ ಹೋಗುವ ನಿನಗೇನು ಇಂದು ಅವಸರವೆಂದು ಓ
ಕೇಳುತ್ತಾರೆ ಅಬ್ಬೆಯರು ಓ
ಬೋಳಬಾರಿ ಅಬ್ಬೆಯರು.......ಓ........
ನಾರಾಯಣ ಹೆಂಗುಸರೇ ಓ.......
ಮಲ್ಲಿಗೆಯ ಹಿತ್ತಲಿಗೆ ಹೋಗಿರುವ ಗಂಡುಸರಿಗೆ ಓ ಅನ್ನ ಬಡಿಸಲಿಲ್ಲಾ.......
ತೊಟ್ಟಿಲ ಮಗುವಿಗೆ ಓ ಹಾಲುಣಿಸಿ ಓ ರಮಿಸಿ ಬರಲಿಲ್ಲ ಓ ಹೆಂಗುಸರೇ ಎಂದಳು.......
ಓ ಮಲ್ಲಿಗೆಯ ಬಾಯೀ.......
ಹೂವಿನ ಚೆಂಡು ಲೆಕ್ಕ ಮಾಡಿದಳು ಓ ಅವರಿಗೆ ನೀಡಿದಳು ಓ ಅವಳ ಸಂಬಳ ತೆಗೆದುಕೊಂಡಳು
ಓ ಲೆಕ್ಕಮಾಡಿ ನೋಡುವಾಗ.......ಬುಟ್ಟಿಯಲ್ಲಿ ಎರಡು ಚೆಂಡು ಮಲ್ಲಿಗೆ ಹೆಚ್ಚು ಉಂಟಪ್ಪಾ.......
ನಾರಾಯಣ ದೇವರೇ ಓ ನಾರಾಉಣ ದೇವರೇ.......
ಲೆಕ್ಕದ ಚೆಂಡು ನಾನು ತಂದದ್ದಪ್ಪಾ.......
ಲೆಕ್ಕದ ಚೆಂಡಿನಿಂದ ಓ ಎರಡು ಚೆಂಡು ಮಲ್ಲಿಗೆ ಓ ಮಕ್ಕಳಿಗೆ ಕೊಟ್ಟೇ.......

ಇನ್ನೂ ಎರಡು ಚೆಂಡು ಓ ಮಲ್ಲಿಗೆ ಉಂಟಪ್ಪಾ.......
ನನಗೆ ಮಕ್ಕಳು ಇನ್ನು ಎಲ್ಲಿ ಸಿಕ್ಕಿಯಾರು.......
ಎಲ್ಲಿ ನಾನು ಕೊಡಬಹುದಿತ್ತು ದೇವರೇ ಎಂದು
ಮನಸ್ಸಲ್ಲಿ ಚಂಚಲ (ಬೇಗ?) ಓ ಎಣಿಸಿ ಹೋಗುತ್ತಾಳೆ ಓ ಮಲ್ಲಿಗೆಯ ಬಾಯೀ.......
ಬಂದು ಬಂದು ಬಂದಳಪ್ಪಾ ಓ ಮಲ್ಲಿಗೆಯ ಬಾಯೀ.......
ಬಾಯಿ ಬರುವಾಗ ಓ ನಾರಾಯಣ ನಾರಾಯಣ ಹೇಳಿ ಓ.......
ಅಬ್ಬನಡ್ಕದ ಓ ಗೋಳಿಮರದ ಬುಡದಲ್ಲಿ.......ಓ.......
ಎರಡು ಚೆಂಡು ಮಲ್ಲಿಗೆ ಓ ಕೊಟ್ಟದ್ದನ್ನೂ ....ಓ.......
ಗೋಳಿಮರದ ಬುಡದಲ್ಲಿ ಹಾಕಿ ಓ ಸ್ವಾಮಿ ನಾರಾಯಣ ಓ ನಾರಾಯಣ ಬೆರ್ಮೆರಲ್ಲಿ.......ಓ.......
ಮಕ್ಕಳು ಜೋಗ (ದರ್ಶನ) ಓ ಬೇಡುತ್ತಾರೆ.......
ಓ ನಾರಾಯಣ ಮಕ್ಕಳೇ
ನಾನು ಕೊಟ್ಟ ಮಲ್ಲಿಗೆಯನ್ನು ಓ ಯಾಕಾಗಿ ಮಕ್ಕಳೇ ಓ ನೀವು ಜೋಗ (ದರ್ಶನ) ಬೇಡುತ್ತೀರಿ.......
ಇಗೊಳ್ಳಿ ಮಕ್ಕಳೇ ಓ ಇನ್ನೆರಡು ಚೆಂಡುಹೂ ಓ ಎಂದು ಮಲ್ಲಿಗೆಯ ಬಾಯಿ ಹೇಳುತ್ತಾಳೆ.......
ಅಷ್ಟು ಹೇಳುವಾಗ ಓ ಹೇಳುತ್ತಾರೆ ಹೆಣ್ಣುಗಳು.......ಓ.......
ನಾರಾಯಣ ಬಾಯೀ ನಾರಾಯಣ ಬಾಯೀ ಓ ನಾರಾಯಣ ಬಾಯೀ.......
ಹತ್ತು ತಿಂಗಳು ಓ ತಾಯಿಯವರನ್ನು ನಾವು ಓ ಬಿಟ್ಟು ಇದ್ದೇವೆ.......ಓ.......
ಜನ್ಮ ನೀಡಿದ ತಂದೆಯವರನ್ನು ಬಿಟ್ಟಿದ್ದೇವೆ ನಾವು.......ಓ.......
ಹೋಗು ಬಾಯಿ ಓ ನಮ್ಮ ಅರಮನೆಗೆ.......
ನಮ್ಮ ತಾಯಿಯವರು ಓ ನಮ್ಮ ತಂದೆಯವರು ಓ ಉರ್ಕಿದೊಟ್ಟುವಿನ ಓ ಗುರು ಮಾರ್ಲರು.......
ಓ ನಮ್ಮ ತಾಯಿಯವರಾದ ಸೊನ್ನೆ ಹೆಂಗುಸು ಓ ಇದ್ದಾರೆ.......
ಅವರಲ್ಲಿಗೆ ಹೋಗು ಬೆಳ್ಳಿಯ ಸೀರಣಿಗೆ ಓ ಬಂಗಾರದ ಬಾಚಣಿಗೆ.......
ಬಂಗಾರದ ಚಮಚ ಓ ಬೆಳ್ಳಿಯ ಎಣ್ಣೆಯ ಪಾತ್ರ ಓ ತಾ ಬಾಯೀ.......ಓ.......
ನಮ್ಮನ್ನು ಸಿಂಗರಿಸಿಬಿಡು.......ಓ.......
ಅಷ್ಟು ಹೇಳುವುದನ್ನು ಕೇಳಿದಳು ಬಾಯೀ.......
ನಾರಾಯಣ ಹೆಂಗುಸೇ ಓ ನಾರಾಯಣ ಹೆಂಗುಸೇ.......
ಬಂಗಾರದ ಬಾಚಣಿಗೆ ಓ ಬೆಳ್ಳಿಯ ಸೀರಣಿಗೆ ಓ ಬಂಗಾರದ ಚಮಚಮ ಓ ಬೆಳ್ಳಿಂಯ ಎಣ್ಣೆಯ ಪಾತ್ರೆ ಓ ಕೊಟ್ಟುಬಿಡಿ ಹೆಂಗುಸೇ ಓ ಎಂದಳು ಬಾಯೀ.......
ಅಷ್ಟು ಹೇಳುವುದನ್ನು ಓ ಕೇಳಿದಳು ಬಾಯೀ.......ಓ.......
ಹೆಂಗುಸು ಹೋದರು ಓ ಮಕ್ಕಳ ಬಂಗಾರದ ಚಮಚಮವಂತೆ ಬೆಳ್ಳಿಯ ಎಣ್ಣೆಯಪಾತ್ರೆ

ಮಕ್ಕಳು ಬಾಚುವ ಬಂಗಾರದ ಬಾಚಣಿಗೆ ಓ ಬೆರಳ್ಳಿಯ ಸೀರಣಿಗೆ ಓ ಬಾಯಿಯಲ್ಲಿ ಕೊಟ್ಟ್ರು
ಬಾಯಿಯಲ್ಲಿ ಕೊಟು ಕಿರುಬಾಗಿಲಲ್ಲೇ ಓ ಬಾಯಿಯ ಹಿಂದಿನಿಂದಲೇ ಬಂದು ....ಓ........
ಕಿರುಬಾಗಿಲಲ್ಲಿ ನಿಂತಾಗ ಹೇಳುತ್ತಾರೆ.......
ನಾರಾಯಣ ಬಾಯೀ ಓ ನಾರಾಯಣ ಬಾಯೀ ....ಓ.......
ಹತ್ತು ತಿಂಗಳು ಹೊರಲಿಕ್ಕೆ ನಾನು ....ಓ........
ಮಕ್ಕಳ ಅಂದ ನೋಡುವ ಭಾಗ್ಯನಿನಗೆ ಬಂತೆಂದರು.......
ಹತ್ತು ತಿಂಗಳು ಹೊರಲಿಕ್ಕೆ ನಾನು.......ಓ........
ಮಕ್ಕಳ ಅಂದ ನೋಡುವ ಭಾಗ್ಯ ನಿನಗೆ ಬಂತೆಂದರು.......
ಕಣ್ಣಲ್ಲಿ ಕಡು ದುಃಖ ದುಃಖಿಸಿದರು ಸೊನ್ನೇ
ಹೊಟ್ಟೆಯಲ್ಲಿ ಉರಿಸಂಕಟ ಓ ಪಟ್ಟರು ಸೊನ್ನೇ.......
ಬಾಯಿ ಹೋದಳು ಓ ಬಂಗಾರದ ಬಾಚಣಿಗೆ ಹಿಡಿದಳು.......
ಬಂಗಾರದ ಚಮಚ ಹಿಡಿದಳು ಬಾಯೀ.......
ಬೆಳ್ಳಿಯ ಎಣ್ಣೆಯ ಪಾತ್ರೆಗೆ ಓ ಚಮಚ ಹಾಕಿದಳು.....
ಮಕ್ಕಳ ನೆತ್ತಿಗೆ ನೆಯ್ಯೆಣ್ಣೆ ಓ ಹಾಕಿದಳು ಬಾಯೀ.....
ಕೂದಲಿಗೆ ಕೂದಲೆಣ್ಣೆ ಕೊಟ್ಟಳು ಬಾಯೀ.....
ಕಿವಿಗೆ ಕೀಲೆಣ್ಣೆ ಬಿಟ್ಟಳು ಬಾಯಿ....
ಬಂಗಾರದ ಬಾಚಣಿಗೆಯಲ್ಲಿ ತಲೆ ಬಾಚಿದಳು.....ಓ.....
ಬೆಳ್ಳಿಯ ಸೀರಣಿಗೆಯಲ್ಲಿ ಓ ಕೂದಲು ಎಳೆದಳು.....
ಮಲ್ಲಿಗೆಯಲ್ಲಿ ಜಲ್ಲಿ ಓ ಹಾಕಿದಳು ಬಾಯೀ ಓ....
ನಾರಾಯಣ ನಾರಾಯಣ ಬಾಯೀ......ಓ........
ಕೈಯಲ್ಲಿ ಕೊಡಬಹುದಾದರೆ ನಮ್ಮಲ್ಲಿ ಏನೂ ಇಲ್ಲ....
ಮೆಯ್ಯಿಂದ ಕೊಡಬಹುದೆಂದರೆ ನಮ್ಮಲ್ಲಿ ಇಲ್ಲ ಬಾಯೀ....
ನಿನಗೆ ಗುಡ್ಡದ ಮೇಲೆ ಒಂದು ವರ ಕೊಡುತ್ತೇವೆ ಬಾಯೀ.....
ಗುಡ್ಡದ ತುದಿಯಲ್ಲಿ ಮನೆಮಾಡಿ ಕುಳಿತರು ಬಾಯೀ.....
ಬಾಳೆ ಬಳ್ಳಿ ಓ ಸುವರ್ಣಗೆಡ್ಡೆ, ಗೆಣಸು ನೆಡುತ್ತಾ ಓ ಊಟಮಾಡಲು ತೊಂದರೆ ಬಾರದೆ ಓ
ಕಾಲಕಳೆ ಬಾಯೀ.....
ನಮ್ಮ ಅಂದ ನಿನಗೆ ಬಾಯೀ ಓ ನಮ್ಮ ಬಲ ಕೈಯ ಕಿರುಬೆರಳಿನ ಅಂದ ಬಾಯೀ.....
ಕಟ್ಟಿದ ತಲೆ ಮಾಸಬಾರದು ಓ ಉಟ್ಟ ಸೀರೆ ಹುಡಿಯಾಗಬಾರದು ಬಾಯಿ ಎಂದು ಓ.......

ಶಾಪ (ವರ) ಕೊಟ್ಟರು ಓ ಎರಡು ಮಕ್ಕಳು ಓ ಅಬ್ಬಗದಾರಗ ಓ ಮಕ್ಕಳು....ಓ.....
ಹೋದರು ಅಬ್ಬನಡ್ಕದ ಗೋಳಿಮರದ ಬುಡದಿಂದ ಓ ಹಿಂತಿರುಗಿ ಹೋದರು ಮಕ್ಕಳು
ಓ ಮಾಯವಾದರು......
ನಾರಾಯಣಾ ಓ ನಾರಾಯಣಾ....ಓ.....
ನಾರಾಯಣಾ ನಾರಾಯಣ......
ಇಂದು ಹೋದ ಮಕ್ಕಳು ಓ.... ಬೋಳದರಮನೆಯಲ್ಲಿ ಇನ್ನಾದರೋ....
ಕಡೆರಿಕಾರ್ಕಳ ಓ ಬೊಳಿಯ ಚಂದರಾಮು ಓ ಸೆಟ್ಟಿಯ ಮಕ್ಕಳನ್ನು ಓ......
ರಾಮಲಕ್ಷ್ಮಣೆರೆನ್ನುವ ಹುಡುಗರ ದಿಬ್ಬಣ....ಓ.....
ಕಡೆರಿಕಾರ್ಕಳದ ತುದಿಪೇಟೆಯಿಂದ ಓ ದಿಬ್ಬಣ ಹೊರಡುತ್ತದೆ.....ಓ......
ದಿಬ್ಬಣ ಹೊರಟು ಬೋಳದ ಅರಮನೆಗೆ ಬರುವಾಗ.....
ನಡು ಮಧ್ಯಮಾರ್ಗದಿಂದ ಬರುವಾಗಂತೆ ಓ.....
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ.....
ಅದೊಂದು ಬೈಲಿನವರು ಮಾತನಾಡಿಕೊಳ್ಳುತ್ತಾರೆ......
ಅಬ್ಬಗದಾರಗರು ಸಾಯದಿರುತ್ತಿದ್ದರೆ ಆ ಹುಡುಗಿಯರಿಗೆ ಆಗುವ ಮದುವೆಯಲ್ಲವೇ ಓ.....
ರಾಮಲಕ್ಷ್ಮಣರೆನ್ನುವ ಹುಡುಗರಿಗೆ ಕೊಡುವುದಿಲ್ಲವೇ.....
ರಾಮಲಕ್ಷ್ಮಣರಿಗೆ ಓ ಅಬ್ಬಗದಾರಗರ ಬದಲಾಗಿ ಬೋಳದರಮನೆಯಲ್ಲಿ ಓ ಚೆನ್ನಗ–ಚೆಲುವಗ
ಎನ್ನುವ ಹೆಣ್ಣುಗಳಿಗೆ ಓ ಧಾರೆದಸ್ತೆಂದು....
ಉರ್ಕಿದೊಟ್ಟುವಿನ ಓ ಬೈಲಲ್ಲಿ ಓ ಹೇಳುತ್ತಾರಂತೆ ಓ.....
ಗಂಡಸರಿಂದ ಓ ಹೆಂಗುಸರ ವರೆಗೆ.....
ತಲೆ ಬಾಚಿ ಕಟ್ಟುವವರ ವರೆಗೆ.....
ನಾರಾಯಣಾ ನಾರಾಯಣಾ....
ಹೋದ ದಿಬ್ಬಣವನ್ನು ಎದುರುಗೊಳ್ಳುತ್ತಾರೆ ಬೋಳದ ಅರಮನೆಯಲ್ಲಿ.....
ಏನು ಮಾಡುವುದಪ್ಪಾ ಏನು ಮಾಡುವುದಪ್ಪಾ ಎಂದರು....
ದಿಬ್ಬಣ ಎದುರುಗೊಳ್ಳಲು ಬೇಂಡುಬಿಗಿಲು ಇಲ್ಲಪ್ಪಾ ಎಂದರು.....
ಗರ್ನಾಲು ಎಸೆಯಲು ಓ ಗರ್ನಾಲು ಇಲ್ಲಾ...
ದಲಿಯ (ಹಾಸುವ ಮಡಿಬಟ್ಟೆ) ಹಾಕಲೆಂದು ನೋಡಿದರೆ ಓ.....
ಮಡಿವಾಳ ಬರಲಿಲ್ಲವೆಂದು ಹೇಳುತ್ತಾರೆ.....ಓ....
ಗಂಡುಗಳನ್ನು ಮುಹೂರ್ತಕ್ಕೆ ಕುಳಿತುಕೊಳಿಸಬಹುದೆಂದರೆ
ಮೋಂದಲೆಗೆ (ಮುಖಕ್ಷೌರಕ್ಕೆ) ಕ್ಷೌರಿಕ ಬರಲಿಲ್ಲಾ.....

ಕಲಶ ಇಟ್ಟು ಓ ಕಲಶ ಶುದ್ದ ಮಾಡಲು.....
ಕುಂಬಾರ ಬಬ್ಬು ಓ ಬರಲಿಲ್ಲವೆಂದರು.....
ವ್ಯಥೆ ಪಡುತ್ತಾ ಓಪರಸ್ಪರ ಮಾತನಾಡಿಕೊಳ್ಳುತ್ತಾ ಇದ್ದಾರೆ.....
ಬೋಳದ ಅರಮನೆಯಲ್ಲಿ ಓ ಇದ್ದಾರಂತೆ.....ಓ.....
ಯಾರ ದೃಷ್ಟಿಯೋ ಓ ಯಾರ ಮಾಯವೋ........ಓ.....
ಹೇಳುತ್ತಾರಂತೆ ಬೋಳದ ಅರಮನೆಯಲ್ಲಿ.....
ನಾರಾಯಣ ನಾರಾಯಣಾ ಓ.....
ಮೇಲುಮೇಲ್ಸ್ತರದ ಏಳು ಉಪ್ಪರಿಗೆಯಲ್ಲಿ....ಓ.....
ಚೆನ್ನಗ–ಚೆಲುವಗರನ್ನು ಓ ಬಂಗಾರದಲ್ಲಿ ಕೆಂಪು ಓ ಬೆಳ್ಳಿಯಲ್ಲಿ ಬಿಳಿ ಓ ಮಾಡಿಸಿಕೊಂಡು
ಬಾರೆ ಪಟ್ಟೆಸೀರೆ ಓ ಗುತ್ತಿನ ರವಿಕೆ ಓ ಮಲ್ಲಿಗೆಯಲ್ಲಿ ಜಲ್ಲಿ ಓ ಹಾಕಿಸಿ......
ಮದುಮಗಳ ಸಿಂಗಾರ ಓ ಮಾಡಿಸಿ.....
ಮೇಲಂತಿಸ್ತಿನ ಏಳು ಉಪ್ಪರಿಗೆಯಲ್ಲಿ ಓ ಮದುಮಕ್ಕಳನ್ನು ಓ ಕುಳ್ಳಿರಿಸಿ ಬಿಟ್ಟಿದ್ದಾರಂತೆ.......
ನಾರಾಯಣಾ ಓ ನಾರಾಯಣಾ .....ಓ.....
ನಾರಾಯಣಾ ಓ ನಾರಾಯಣಾ......ಓ.....
ಇಂದಾದರೋ ಇಂದು ಅಬ್ಬನಡ್ಕದ ಓಗೋಳಿಯ ಬುಡದಿಂದ ಓ....
ಮಕ್ಕಳು ಹೋಗುತ್ತಾರೆ ಓ ಎರಡು ಮಕ್ಕಳು.....
ಅಬ್ಬನಡ್ಕದ ಗೋಳಿಯ ಬುಡದಲ್ಲಿ ಮಾಯವಾದ ಓ ಮಕ್ಕಳು....ಓ.....
ಬೋಳದ ಅರಮನೆಯಲ್ಲಿ ಓಬೋಳದ ಅರಮನೆಯಲ್ಲಿ.....
ಏಳು ಉಪ್ಪರಿಗೆ ಓ ಮೇಲಂತಸ್ತಿನಲ್ಲಿ.....
ಇನ್ನೇನು ಬೇಗದಲ್ಲಿ ಮಕ್ಕಳು.....
ರಾವಿನ್ನ ಗೆಜ್ಜಿಕತ್ತಿ ತೆಗೆದಳು ಅಬ್ಬಗ....ಓ.....
ಪೂರ್ವದಿಂದ ಪಶ್ಚಿಮಕ್ಕೆ ಓ ಗೆರೆ ಎಳೆದಳು.....
ಎಡಬಲದಲ್ಲಿ ಓ ಗೆರೆ ಎಳೆದಳು.....ಓ.....
ಮೇಲಂತಸ್ತಿನಲ್ಲಿ ಇರುವ ಓ ಮಕ್ಕಳು.....
ಚೆನ್ನಗಚೆಲುವಗರು ಓ ಮಾಯಾಸ್ವರೂಪವಾಗಬೇಕು....
ನಾವು ಹೋಗಿ ಉಪ್ಪರಿಗೆಯಲ್ಲಿರಬೇಕು....ಓ......
ಮೇಲಂತಸ್ತಿನಲ್ಲಿ ಓ ನಾವಾಗ(ಸೇರ)ಬೇಕು....ಓ....
ಕಡೆರಿ ಕಾರ್ಕಳದ ಓ ತುದಿಪೇಟೆಯ ಓ.....
ಬೊಳಿಯ ಚಂದ್ರಾಮು ಸೆಟ್ಟಿ ಮಕ್ಕಳಿಗೆ....
ರಾಮಲಕ್ಷ್ಮಣರೆನ್ನುವ ಓ ಗಂಡುಗಳಿಗೆ.....ಓ.....
ಧರ್ಮಧಾರೆ ಓ ನಮ್ಮ ಜೊತೆಗಾಗಬೇಕೆಂದು ಓ ಹೇಳುತ್ತಾಳೆ ಅಬ್ಬಗ ಓ......

ನಾರಾಯಣಾ ಓ ನಾರಾಯಣಾ.....
ಮೇಲೆ ಮೇಲ್ತರದ ಲೋಕ ಓ ಧೇವರು ಬೆರ್ಮೆರ ಪಾದಕ್ಕೆ ಓ.....
ನಾರಾಯಣಾ ಓ ನಾರಾಯಣಾ.....ಓ......
ಅಷ್ಟು ಹೇಳುವಾಗ ಓ ಮಕ್ಕಳು ಮಾಯ ಆಗಬೇಕೆಂದೂ ಹೇಳುವಾಗ ಮಕ್ಕಳು ಓ.....
ನಾರಾಯಣ ಓ ಅಕ್ಕನವರೇ.....ಓ......
ಅವರನ್ನು ಮಾಯ ಮಾಡಬೇಕಾದರೆ ಅಕ್ಕನವರೇ ನಮ್ಮ ಓ......
ಅನಾದಿಯ ಕಟ್ಟುಓಲೆಗೆ ತೆಗೆಯಬೇಕು ನಾವು ಓ......
ತೆಗೆಯಬೇಕೆಂದು ಹೇಳುತ್ತಾಳೆ ತಂಗಿ ದಾರಗ ......ಓ......
ಹೇಳುತ್ತಾಳೆ ದಾರಗ......
ನಾರಾಯಣಾ ಓ ನಾರಾಯಣಾ .....ಓ.....
ನಮ್ಮ ತಾಯಿ ಇದ್ದಾರೆ ಓ.....
ಉರ್ಕಿದೊಟ್ಟುವಿನ ಅರಮನೆಯಲ್ಲಿ ಓ......
ನಮ್ಮ ತಾಯಿ ಸೊನ್ನೆ ಇದ್ದಾರೆ ಓ.....
ಎಂದು ಈಗ ಓ ಹೇಳುತ್ತಾಳೆ ಮಕ್ಕಳು.....ಓ.....
ಅಬ್ಬರದಾರಗ ಓ ಮಕ್ಕಳಂತೆ.....
ನಮಗೆ ದಾರೆದಸ್ತ್ ಆಗಬೇಕಾದರೆ ಓ......ಅಕ್ಕನವರೇ......
ನಮ್ಮ ದೊಡ್ಡಮ್ಮನವರ ಓ ಹುಟ್ಟು ಹೊಲಬು, ಜನ್ಮಕುಂಡಲಿ (ಜಾತಕ) ತೆಗೆದುಕೊಳ್ಳದೆ ಓ......
ಧಾರೆದಸ್ತ್ ಓ ನಮಗೆ ಬೇಡವೆಂದು ಓ ತಂಗಿ ದಾರಗ ಓ ಹೇಳುತ್ತಾಳಂತೆ.....
ಹಾಗಾದರೆ ಮೊದಲು ಹುಟ್ಟಿದ್ದು ನಾನಾದರೋ ತಂಗಿ ದಾರಗ......
ಮೋಸ ವಿದ್ಯೆ ನಿನ್ನಲ್ಲಿದೆ ಎಂದರು.....
ಅಷ್ಟು ಹೇಳಲು ನಾರಾಯಣಾ ಓ ನಾರಾಯಣಾ.....ಓ.....
ನಮ್ಮ ದೊಡ್ಡಮ್ಮನವರ ಜನನದ ಸ್ಥಳ...
ನಮ್ಮ ದೊಡ್ಡಮ್ಮನವರು ಓ ಬಡಗಣ ಓ ಲಂಕೆಲೋಕನಾಡು ಓ ಆನೆಕಲ್ಲ ಓ ಅಡ್ಡದಲ್ಲಿ
ಆನೆಕಲ್ಲ ಅಡ್ಡ, ಕುದುರೆಕಲ್ಲ ನೀಟ (ಉದ್ದ) ಓ ದಂಬೆಕಲ್ಲ ಮುಂದೆ ಓ
ಗಜಮರದ ನೆರಳಲ್ಲಿ ಓ.....
ಬುಟ್ಟಿಯ ಅಯ್ಯೋಜಿ ಬುಟ್ಟಿಯ ಪುಷ್ಪ ಓ ಗಂಧದ ಗುಳಿಗೆ ಓ
ಹೋಮದ ಕರಿ ಹೊಗೆಯಂತೆ.....
ಬೆಳ್ಳಿಯ ದಂಡು ಓ ಬಂಗಾರದ ಎಸಳು.....ಓ
ಅರ್ವತ್ತಾರು ಕೋಟಿ ನಾಗಬೆರ್ಮೆರು ಓ ಮೂವತ್ತಮೂರು ಕೋಟಿ ಓ ದೇವರುಗಳು......

ಬೆರ್ಮರ ಓ ಬಲಭಾಗದಲ್ಲಿ ಓ ದೇವರ ಎಡಭಾಗದಲ್ಲಿ ಓ ನಮ್ಮ ದೊಡ್ಡಮ್ಮನವರು.....
ಓ ಬಂಗಾರದ ಪಿಂಗಾಣಿಯಲ್ಲಿ ಓ ಬೆಳ್ಳಿಯ ದಂಟು ಓ ಬಂಗಾರದ ಎಸಳಲ್ಲಿ ಓ ಕುಂಕುಮದ ಹರಳಾಗಿ ಅಜ್ಜನವರ ಹಚ್ಚಡೆಯ ಓ ತುದಿಗೆ.....
ಜನನವಾದ ದೊಡ್ಡಮ್ಮನವರಾದರೆ......
ತಾಯಿಯವರ ಎಡದಲ್ಲೇ ಉದ್ಭವವಾದ ದೈವ ಓ ಕ್ಷೇಮಕಲ್ಲ ಪಂಜುರ್ಲಿ ಓ......
ಕ್ಷೇಮಕಲ್ಲ ಪಂಜುರ್ಲಿ ಓ... ಬಲದಲ್ಲಿ ಓ ನನ್ನ ದೊಡ್ಡಮ್ಮವನರು.....ಅವರು ಸತ್ಯ ಓ ಸತ್ಯದಲ್ಲಿ ಹುಟ್ಟಿದ್ದಾದರೆ ಓ.....
ಕುಂಕುಮದ ಹರಳಲ್ಲಿ ಓ ಉದ್ಭವವಾದವರು ನನ್ನ ತಾಯಿಯವರಾದರೆ ಓ....
ಸತ್ಯನಾಪುರದರಮನೆಯಲ್ಲಿ ಓ ಅವರ ....ಓ.....
ಹುಟ್ಟು ಬೆಳವಣಿಗೆ ಓ ಬಾಲ್ಯ ಹೋಗಿ ದೊಡ್ಡವರಾಗಿ ಬೆಳೆದ ಜಾಗ ಹೌದಾದರೆ ಓ.....
ಬತ್ತಕೇರಿ ಓ ಬಸರೂರಲ್ಲಿ ಓ.....
ನಮ್ಮ ಓ ಅಜ್ಜನವರು.....ಓ ಕಾಂತಾಳ್ವರ ಜನ್ಮಕ್ಕೆ......ಓ.....
ಅವರ ಇಂದ್ರಿಯ (ವೀರ್ಯ)ಕ್ಕೆ ಮಾಯದ ತಾಯಿಯವರಿಗೆ ಓ ಯೋಗದ ಕುಮಾರ
ಓ ಜನನಕ್ಕೆ ಬಂದಿದ್ದಾರೆಂದರೆ ಓ.....
ಅಳ್ತಿಯ ಸೋದರಮಾವ ಓ ಪ್ರೀತಿಯ ಸೋದರಮಾವನವರು....
ಬೋಳದ ಕಾಡಲ್ಲಿ ಓ ಬಿಳಿಯ ಬುಗರಿಯ ಮರಕ್ಕೆ ಓ ನಮ್ಮ ಮಾವನವರ ಓ ಕುಂದಣದ ತೊಟ್ಟಿಲು ಓ ನಮ್ಮ ದೊಡ್ಡಮ್ಮನವರು ಓ ಕಟ್ಟಿದ್ದಾರೆಂದರೆ.....
ನಮ್ಮ ದೊಡ್ಡಮ್ಮನವರು ಓ ಕೇಳಬೇಕಪ್ಪಾ.....ಓ.....
ಬೋಳದ ಕಾಡಲ್ಲಿ ಓ ರಾವಿನ್ನ ಗೆಜ್ಜೆಕತ್ತಿ ಓ ತೆಗೆದರು ದೊಡ್ಡಮ್ಮನವರು......
ನಮ್ಮ ದೊಡ್ಡಮ್ಮನವರು ಓ ರಾವಿನ್ನ ಗೆಜ್ಜೆಕತ್ತಿ ಓ
ತೆಗೆದರು ಓ ಮೂರುಗೆರೆ ಎಳೆದರಂತೆ....
ನಮ್ಮ ಸೋದರಮಾವನವರು ಓ ಅವರನ್ನು ಕೊಂಡುಹೋಗಿ ....ಓ.....
ಬೊಲ್ಯೊಟ್ಟುವಿನ ಬಿಳಿಯ ಬುಗರಿಯ ಮರದಲ್ಲಿ ಓ ಕಂಚಿನ ಕೋಳಿಯಾಗಿ ಓ.....
ರೆಕ್ಕೆ ಬಡಿದು ಕೂಗು ಎಂದು ಓ ಹೇಳಿದರು ನಮ್ಮ.....
ಕಂಚಿನ ಕೋಳಿ ಓ ರೆಕ್ಕೆ ಬಡಿದು ಕೂಗಿ ಓ ಧಾರೆಯ ನೀರಲ್ಲೆ ಓ ಚಾಮುಂಡಿ ಎಳೆದು ಓ ಅಮ್ಮಾ ಎಂದು ಕರೆಯುತ್ತೇನೆ ಓ ಮಗಾ ಎಂದು ರಮಿಸರಿ ಎಂದು ಓ ಅಂದಿಗೆ ಉತ್ತರ ಓ ನಮ್ಮ ಮಾವನವರು ಓ ಕೊಟ್ಟಿದ್ದಾರಾದರೆ.....
ನಮ್ಮ ಮಾವನವರು ಓ ರಮಿಸಿಕೊಂಡು ಹೋಗಿ.....
ಹಿಂದಿನಿಂದ ಓ ನಮ್ಮ ತಾಯಿಯವರು
ಬೋಳಮಲ್ಲಿಗೆಯಿಮದ ಓ ಹೋಗುವಾಗ....
ಬೋಳಮಲ್ಲಿಗೆಯಿಂದ ಓ ಕೊಟ್ಟರಾಡಿಯ ಅರಮನೆಗೆ ಓ ನಮ್ಮ ತಾಯಿಯವರು

ಓ ಮದುವೆಯಾಗಿದ್ದಾರಂತೆ......
ನಮ್ಮ ದೊಡ್ಡಮ್ಮನವರು ಓ ಕೊಟ್ಟರಾಡಿಯ ಅರಮನೆಗೆ ಓ ಮದುವೆಯಾಗಿದ್ದಾರೆ....
ಕೊಡ್ಸರಾಳ್ವರಂತೆ ಓ ಮಾಯದ ತಾಯಿಯವರಿಗೆ ಓ ಯೋಗದ (ಮಾಯಾ?) ಗರ್ಭದಲ್ಲಿ ಓ ಬೆಳೆದುಬಂದ....
ಓ ನಮ್ಮ ತಾಯಿಯವರು ಓ ಸೊನ್ನೆ ಹೌದಾದರೆ.....
ಸೊನ್ನೆಯ ಸತ್ಯ ಇದೆಯೆಂದಾದರೆ.....ಓ.....
ಅಲಿಕ್ಕುಂಜ ಪಿಲಿಕ್ಕುಂಜ ಓ ಕಾಡಲ್ಲಿ ತಾಯಿಯವರಿಗೆ...
ನಮ್ಮ ದೊಡ್ಡಮ್ಮನವರು ಓ ಅಲಿಕ್ಕುಂಜ ಕಾಡು ಪಿಲಿಕ್ಕುಂಜ ಕಾಡಲ್ಲಿ ಓ.....
ಹಠಕಟ್ಟಿ ಓ ಹಠಸಾಧನೆ ಮಾಡಿ ಓ ಇನ್ನದರೋ.....ಓ......
ನಮ್ಮ ದೊಡ್ಡಮ್ಮನವರು ಓ ಅಂಗರಾಜಬರ್ಕೆ ಓ ಉಜೆಮಾರಗುತ್ತು ಓ ಕಡೆಂಗಡಿ ಗುತ್ತಿನಿಂದ ....ಓ....
ಔತಣದ ಊಟಮಾಡಿ ಓ ಹಿಂತಿರುಗಿ ಓ ಬರುವಾಗ ಇನ್ನು......
ನಮ್ಮ ದೊಡ್ಡಮ್ಮನವರು ಓ ಅಂಗರಾಜಬರ್ಕೆ ಓ ಉಜೆಮಾರಗುತ್ತು ಓ ಕಡೆಂಗಾಡಿ ಬರ್ಕೆಯಿಂದ....
ಓ ಹಿಂತಿರುಗಿ ಬರುವಾಗ ಓ ನಾರಾಯಣ ಅಕ್ಕನವರೇಎಂದು ದೊಡ್ಡಮ್ಮನವರಲ್ಲಿ......
ಹಠಕಟ್ಟಿ ಓ ಹಠಸಾಧನೆ ಸಾಧಿಸಿ ಓ ಅಲಿಕ್ಕುಂಜ ಓ ಪಿಲಿಕ್ಕುಂಜ ಕಾಡು ಯಾವುದೆಂದುಕೇಳಿ.....
ಕೇಳಿ ಬರಬೇಕಾದರೆ ಓ ಹೆರಿಗೆನೋವು ಕಾಣಿಸಿಕೊಂಡು ನನ್ನ ದೊಡ್ಡಮ್ಮನವರು ನನ್ನನ್ನು ನಮ್ಮ ತಾಯಿಯವರನ್ನು ಹೆತ್ತಿದ್ದಾರಂತೆ.....
ಅತ್ತ ನೋಡಿ ಇತ್ತ (ಅತ್ತಿತ್ತ) ನೋಡುವಾಗ ಓ....
ಕರುಳುಬಳ್ಳಿ ತುಂಡರಿಸಲು ಕತ್ತಿ ಇರಲಿಲ್ಲವಂತೆ....ಓ....
ಮಗು ಮಲಗಿಸಲು ಹಾಳೆ ಇಲ್ಲದ ಸಮಯದಲ್ಲಿ......
ನಮ್ಮ ಮಾವನವರು ಓ ಒಬ್ಬ ಕುಮಾರ ಬಡ ಬ್ರಾಹಣನ ರೂಪ ತಾಳಿ....
ನಾರಾಯಣಾ ಓ ನಾರಾಯಣಾ.....
ದೊಡ್ಡಮ್ಮನವರನ್ನು ಕರೆದರಂತೆ....
ಕೊಟ್ಟರಾಡಿಗೆ ಓ ಹೋಗಪ್ಪಾ.....
ಕರುಳ ಬಳ್ಳಿ ತುಂಡರಿಸಲು ಓ ಕತ್ತಿ ತಾ ಎಂದು ಕಳುಹಿಸಿದರಂತೆ
ಕರುಳ ಬಳ್ಳಿ ತುಂಡರಿಸಲು ಓ ಕತ್ತಿ ತರಲು ಎಂದು ಕಳುಹಿಸುವಾಗ
ಆಚೆ ಎಂದು ಈಚೆ ಎಂದು ಓ ಹೇಳಿದರಂತೆ
ನಾರಾಯಣ ಓ ನಾರಾಯಣ ಮಕ್ಕಳು....ಓ.....
ನಾರಾಯನ ನಾರಾಯಣ.... ನಮ್ಮ ದೊಡ್ಡಮ್ಮನವರು ಓ ನಮ್ಮ ತಾಯಿಯವರನ್ನು ಸ್ಥಳದಲ್ಲಿ ಹುಟ್ಟಿದ ಮಗು ಎಂದರ
ಮಗುವನ್ನು ಓ ನನ್ನತಾಯಿಯವರನ್ನು

ಮಡಿಲಲ್ಲಿ ಹಾಕಿಕೊಂಡರು ಓ.....
ಬಾಯಿಗೆ ಮೊಲೆಹಾಲು ಓ ಕೊಟ್ಟು ಓ.....
ಯಾರು ಮಗಾ ಸೊನ್ನೆ ಎಂದು ಕರೆದರಂತೆ ನನ್ನ ದೊಡ್ಡಮ್ಮನವರು......
ಅಲಿಕ್ಕುಂಜ ಕಾಡಲ್ಲಿ ಓ ಪಿಲಿಕ್ಕುಂಜ ಕಾಡಲ್ಲಿ ಮಗಾ ನಿನ್ನನ್ನು ಓ ....
ಹೆತ್ತೆನು ಮಗಾ ಸೊನ್ನೆ ಎಂದು ....ಓ.....
ನಮ್ಮ ದೊಡ್ಡಮ್ಮನವರು ಹೇಳಿದರಂತೆ ಓ....
ನಾರಾಯಣ ಓ ನಾರಾಯಣ ತಂಗಿ....
ನಮ್ಮ ದೊಡ್ಡಮ್ಮನವರ ಹುಟ್ಟು ಓ ತಿಳಿಯದೆ ನಾವು.....
ನಮ್ಮ ತಾಯಿಯವರ ಜಾತಕದ ಫಲ ಓ ಹೇಗೆ ನಮಗೆ ತಿಳಿದುಬರಬೇಕೆಂದರು.....
ನಮ್ಮ ತಾಯಿಯವರನ್ನು ಸಾಕಲು.....
ದೊಡ್ಡಮ್ಮನವರು ಓ ಹತ್ತು ತಿಂಗಳು ಓ ಹೊತ್ತಿದ್ದಾರಂತೆ.....
ಏಳು ಏಳೂವರೆ ತಿಂಗಳು ಓ ಸಾಕಿದ ಶ್ರಮ ನಮ್ಮ ದೊಡ್ಡಮ್ಮನವರಿಗೆ ಓ ಇಲ್ಲದೆ ಹೋಗಿದೆ
ನಮ್ಮ ತಾಯಿಯವರನ್ನು ಓ ರಣರಂಗದ ಪ್ರವಾಹ ಬರಿಸಿದಂತೆ......
ಬಲದ ಕೈಯಲ್ಲಿ ಅಡಿಕೆ ಇಟ್ಟು ಓ ಸಣ್ಣ ಸಸಿ ಮಾಡಿದರಂತೆ.....
ಹಾಳೆಯನ್ನು ತೆಗೆದು ತುದಿಬುಡ ಕತ್ತರಿಸಿ.....
ನಾರಾಯಣ...... ನಾರಾಯಣವಂತೆ......
ನಮ್ಮ ತಾಯಿಯವರನ್ನು ಓ ದೊಡ್ಡಮ್ಮನವರು ಓ ಕೇಳಿದಿಯಾ ಮಗಾ....
ನಮ್ಮ ತಾಯಿಯವರು ಓ ಸೊನ್ನೆಯನ್ನು....
ಸಣ್ಣ ತೋಡಿನಲ್ಲಿ ಓ ಗಿಡ್ಡ(ಚಿಕ್ಕ) ಸಂಕದಲ್ಲಿ....
ರಣರಂಗದ ನೆರೆ ಹೋಗಲಿ....ಓ....ನಮ್ಮ ತಾಯಿಯವರನ್ನು ಓ ದಲಂಬಿಗೆ(ನೀರಿಗೆ) ದಾನ ಓ ದೊಡ್ಡಮ್ಮನವರು ಬಿಟ್ಟವರಂತೆ....
ನಮ್ಮ ತಾಯಿಯವರು ಹೋದರಂತೆ ಮಗಾ ಓ.....
ಹೋಗಿ ಹೋಗಿ ಓ ಗುರ್ಗಲಾಡಿ ಚಂದು ಒಎರ್ಗಡೆ ಓ ಬನ್ನಾರದ ಬೈಲಲ್ಲಿ ಓ.....ಗದ್ದೆ ಬದುವಿನ ಓ ತೆರಪುನೀರಲ್ಲಿ
ಹಿಂಗಾರದ ಹೊಂಬಾಳೆ ಓ ತೇಲುವ ಚಂದ ಓ ತೇಲಬೇಕೆಂದು ಹೇಳಿ ಓ....
ನಮ್ಮ ತಾಯಿಯವರಿಗೆ ಓ ದೊಡ್ಡಮ್ಮನವರು ಓ ಮಣ್ಣುಮುಟ್ಟಿ ಓ ವರಪಾಲಿಸಿದ್ದಾರಂತೆ ಮಗಾ.....
ನಾರಾಯಣಾ ಓ ನಾರಾಯಣಾ.....
ನಮ್ಮ ತಾಯಿಯವರನ್ನು ಓ ಕೊಂಡುಹೊದರಂತೆ.....
ನಮ್ಮ ಅಜ್ಜನವರು ಗುರ್ಗಲಾಡಿ ಓ ಚಂದು ಪೆರ್ಗಡೆ ಓ ಬನ್ನಾರ್ ಎನ್ನುವ ಅಜ್ಜನವರಂತೆ ಮಗಾ.....
ಓ ದಾರಗಾ ಕೇಳಿದ್ದೀಯೋ.....

ನಾರಾಯಣಾ ಓ ನಾರಾಯಣ ಮಗಾ....ಓ.....
ನಮ್ಮ ದೊಡ್ಡಮ್ಮನವರು ಓ ನಮ್ಮ ಸೋದರಮಾವನವರೋ ಜಾತಿಕಟ್ಟಿನ ವಂಶಾವಳಿಯನ್ನು ಈಗ ಓ ಕರೆದು ಈಗ ಓ ಆಯಿತು ಮಗಾ.....
ಆಬ್ಬನಡ್ಕದ ಓ ಗೋಳಿಯ ಬುಡಕ್ಕೆ ಓಸ್ವಾಮಿ ಶರಣು ಸಲ್ಲಲಿ ಮಗಾ.....ಓ.....
ಸೋಲಿಗೆ ಸೊಲ್ಮೆ (ವಿನಯದಿಂದ ನಮಸ್ಕಾರ?) ಓ ಕೊಟ್ಟು ಮಗಾ.....
ಅಬ್ಬನಡ್ಕದ ಗೋಳಿಯ ಬುಡದಲ್ಲಿ ಓ ನಮ್ಮ ತಾಯಿ ಓ ನಮ್ಮ ತಂದೆಯವರು ಓ.....
ಅಡಕೆ ಬಿಚ್ಚಿದ್ಧಾರಂತೆ (ತಿಂದಿದ್ದಾರಂತೆ?) ಓ ಅಡಕೆಯ ಬೋಗ (ಅಮಲು) ಓ ಹೋಗಿದ್ಧಾರಂತೆ ಮಗಾ....
ಅಡಕೆ ತಿಂದೂ ಅಡಕೆಯ ಬೋಗ (ಅಮಲು) ಓ ಹೋಗುವಾಗ ಮಗಾ.....
ಇನ್ನ ಮುಂಡೇರು ಓ ಬೋಳಬೊಲ್ಮಾನ (ಬೆಳ್ಮಣ್) ಓ ಕಾಪು, ಕಡಂದಲೆ ಓ ಬಂಗರೊಟ್ಟು ಬೊಲ್ಕೊಟ್ಟು ಓ
ಮುಲ್ಕಿ ಸೇರಿ ಓ ಕಾಳು ನಾಯಕನಾ ಓ ಒಂಬತ್ತು ಮಾಗಣೆ ಓ.
ಒಂಬತ್ತು ಬರ್ಕೆ ಓ ಒಂಬತ್ತು ಗುತ್ತು ಓ ಹನ್ನೆರಡು ಮಾಗಣೆಗೆ.....
ಅಡಕೆ ಹಾಕಿ ಓ ಕನ್ಯಾಮುಹೂರ್ತ ಕರೆಯಲು ಓ ನಮ್ಮ ತಾಯಿಯವರು ಓ ನಮ್ಮ ತಂದೆಯವರು ಓ
ಹೋಗಿ ಬರುವಾಗ ಓ ನಮ್ಮ ದೇವರು ಓ ನಮ್ಮ ಬೆರ್ಮರು ಓ ನಮ್ಮ ಬೆರ್ಮೆರ್....
ಅಬ್ಬನಡ್ಕಾ ಗೋಳಿಯ ಬುಡದಲ್ಲಿ ಓ ನಮ್ಮ ದೇವರಿಗೆ ಓ ನಮ್ಮ ತಾಯಿಯವರು....
ಹರಕೆಯ ಮಕ್ಕಳೆಂದು ಓ ನಮ್ಮ ತಾಯಿಯವರಿಗೆ ಓ ದೇವರು ಬೆರ್ಮರು ಓ.....ಬಾಯಿ ಬಿಟ್ಟು ಮೆಯ್ಯ್ಯಾರ (ಬಾಯಾರ) ನುಡಿದರು.....
ಗಿಳಿ ಬಾಯಿಪಾಠ ಮಾಡಿಸಿದಂತೆ ಓದಿ ಹೇಳಿದರು ಓ....
ನಾರಾಯಣ ಮಗಾ....ಓ.....
ನಮ್ಮ ತಾಯಿಯುವರು ದಾಡೆ (ಹಲ್ಲು)ಕಳೆದ (ಉದುರಿದ) ದೋಡೆ (ಗೊಡ್ಡೆಮ್ಮೆ?)ಆಗಿಹೋದರು....ಓ.....
ಯಾಕಾಗಿ ಕರಗುತ್ತೀ ಓ ಯಾಕಾಗಿ ನರಳುತ್ತೀ .....ಓ....
ನಾರಾಯಣ ಮಗ ತಂಗಿ ಕೇಳಿದೆಯಾ....
ನಮ್ಮ ತಾಯಿಯವರು ಓ ಬ್ರಾಹಣನಿಗೆ ಓ ದೇವರು ಬೆರ್ಮರಿಗೆ ಉತ್ತರ ಕೊಟ್ಟು ಸದರಿಗೆ ಸಂದಾಯ ಓ ಹೇಳಿದ ಹರಕೆಯ ಓ
ಮಕ್ಕಳು ಸೊನ್ನೆ ಎಂದು ಓ ದೇವರು ಬೆರ್ಮರು ಹೇಳಲು ಉತ್ತರಿಸಿದರಂತೆ ಓ (ನಾನು ಹರಕೆ ಹೇಳಿಕೊಳ್ಳುವಾಗ) ನೀವು ತಲೆಯ ಮೇಲೆ ಇದ್ದಿರೇ ಬ್ರಾಹ್ಮಣ ನೀವು ಓ ತಲೆಯ ಕೆಳಗೆ
ಇದ್ದಿರೇ ಓ ಹರಕೆ ಹೇಳುವಾಗ ಎಂದು ಹೇಳಿ ಓ.....
ಕೋಪ ಕ್ರೋಧದಿಂದ ಓ ನಮ್ಮ ದೇವರು ಬೆರ್ಮರಿಗೆ ಓ ಉತ್ತರಕ್ಕೆ ಉತ್ತರ ಓ

ಮಾತಿಗೆ ಪ್ರತಿ ಮಾತು ಕೊಟ್ಟಿದ್ದಾರಂತೆ ಓ ನಮ್ಮ ತಾಯಿಯವರು .....ಓ.
ನಮ್ಮ ತಾಯಿಯವರಿಗೆ ಓ ಬಲಹೀನ ತಾಯಿಗೆ ಓ ಋಣಹೀನ ಮಕ್ಕಳೆಂದು ಓ ಆಗಿದೇ....
ಅಬ್ಬನಡ್ಕದ ಗೋಳಿಯ ಬುಡದಿಂದ ಓ.....
ಸ್ವಾಮಿಗೆ ಶರಣು ಓ ಸಲ್ಲಿಸುವಾ ಓ....
ನಮ್ಮ ಓ ಉರ್ಕಿದೊಟ್ಟುವಿನ ಓ ಅರಮನೆಯಲ್ಲಿ....
ಬೆಳ್ಳಿಯ (ಚೆನ್ನೆ)ಮಣೆ ಓ ಬಂಗಾರದ ಹರಳಲ್ಲಿ ಓ.....
ಬೆಳ್ಳಿಯ ಉಯ್ಯಾಲೆಯಲ್ಲಿ ಓ ಬಂಗಾರದ ಗಿರಗಟೆ ಓ ಸೋಲಿಗೆ ಸೊಲ್ಮೆ ಓ ಸಲ್ಲಿಸುವ ಮಗಾ.......
ನಿನ್ನೆಯ ವರೆಗೆ ಓ ಸತ್ಯದಲ್ಲಿ ಹುಟ್ಟಿ ಓ ಶಬ್ದ (?) ದಲ್ಲಿ ಬೆಳೆದೂ......
ನಮ್ಮನ್ನು ಓ ತಂದೆ ಹುಟ್ಟಿಸಿದ ಓ ತಾಯಿ ಹೆತ್ತರೂ ಕೂಡಾ.....
ರಕ್ತದಲ್ಲಿ ಹುಟ್ಟಿದರೂ ಓ ನೀರಲ್ಲಿ ಬೆಳೆದರೂ ಓ ಗಾಳಿಗಮನ (ಸಂಚಾರ) ದಲ್ಲಿ ನಮ್ಮ ಓ ದೊಡ್ಡಮ್ಮನವರನ್ನು...ಓ....
ತಂದೆ ಹುಟ್ಟಿಸಲಿಲ್ಲ ಓ ತಾಯಿ ಹೆರಲಿಲ್ಲಾ.....
ರಕ್ತದಲ್ಲಿ ಹುಟ್ಟಲಿಲ್ಲ ಓ ನೀರಲ್ಲಿ ಬೆಳೆಯಲಿಲ್ಲ.....
ಗಾಳಿ ಗಮನ (ಸಂಚಾರ)ದಲ್ಲಿ ಬೆಳೆದುಬಂದ ಓ ನಮ್ಮ ದೊಡ್ಡಮ್ಮನವರು.....
ನಾರಾಯಣಾ ಓ ನಾರಾಯಣಾ....ಓ.....
ಸ್ವಾಮಿ ಬೆರ್ಮರು ಓ ಅಪ್ಪಣೆಯಲ್ಲಿ....
ಮೇಲು ಮೇಲ್ಸ್ತರದ ಲೋಕ ಓ ಒಬ್ಬ ಬೆರ್ಮರು ಓ ದೇವರೆ....
ನಾರಾಯಣಾ ಓ ನಾರಾಯಣಾ ದೇವರು ಬೆರ್ಮರೇ ಓ......
ನಿನ್ನೆಗೆ ನಮ್ಮನ್ನು ಓ ಬಂಗಾರದ ದುಂಬಿಯಾಗಿಸಿ ಓ ಹಾರಿಸಿದಿರಿ......
ನಿನ್ನೆಗೆ ನಾವೂ ಓ ಬಂಗಾರದ ಪುಂಚಲ (?)ದಲ್ಲಿ
ಎಡದಲ್ಲಿ ಬಲದಲ್ಲಿ ಓ ಅಬ್ಬಗದಾರಗ ಮಕ್ಕಳು ನಾವು ದೇವರು ಬೆರ್ಮರನ್ನು.....
ಇಂದಿಗೆ ನಾವು ಓ ಸ್ವಾಮಿ ಬೆರ್ಮರೇ.......
ಮುಜಿಲೊಟ್ಟು ಒಬ್ಬ ಬೆರ್ಮದೇವರೇ ಓ......
ನಿಮ್ಮಪಾದ ಹಿಡಿದು ಶರಣು ಹಾಕುತ್ತೇವೆ.....
ನಿಮಗೆ ಓ ದೇವರು ಬೆರ್ಮರೇ ಓ ನಾರಾಯಣ ದೇವೇ ......ಓ......
ಎರಡು ಕೈಯಲ್ಲಿ ಓ ಎರಡು ಬಾರಿ ಓ ಕೊಂಡುಹೋಗು ಓ......
ನಾವು ಬರುತ್ತೇವೆಂದು ಓ ನಿನ್ನೆಗೆ ಉತ್ತರ ಓ ಉರಿಬೆರ್ಮರೇ ಓ
ನಿಮ್ಮಲ್ಲಿ ಬೇಡಿದ್ದೇವೆ....ಓ.....
ನಾರಾಯಣ ಓ ನಾರಾಯಣ ಉರಿಬೆರ್ಮರೇ....ಓ.....
ಮುಕ್ಕಾಲು ಮೂರು ಗಳಿಗೆಯ ಓ ಕೊಟ್ಟ ಜೋಗ (ದರ್ಶನ)ದಲ್ಲಿ ಓ.....
ಅಬ್ಬನಡ್ಕದ ಗೋಳಿಯ ಬುಡದಿಂದ ಓ

ಮಾಯ ಆಗುತ್ತೇವೆ ಓ.... ನಾವು ದೇವರು ಬೆರ್ಮರ್ಣರೇ....ಓ.....
ಬೋಳದರಮನೆಯಲ್ಲಿ ಓ ಮೇಲುಮಾಳಿಗೆ ಓ ಏಳು ಉಪ್ಪರಿಗೆಯಲ್ಲಿ.....
ಬಂಗಾರದ ಕುರ್ಚಿಯಲ್ಲಿ ಚೆನ್ನಗ ಚೆಲುವಗ ಓ ಬೆಳ್ಳಿಯಲ್ಲಿ ಬೆಳ್ಳಗೆ ಓ ಬಂಗಾರದಲ್ಲಿ ಕೆಂಪಗೆ
ಓ ಮಲ್ಲಿಗೆಯಲ್ಲಿ ಜಲ್ಲಿ (ಹೂವಿನ ತಲೆಯ ಅಲಂಕಾರ).....
ರಾವಿನ್ನ ಗೆಜ್ಜೆಕತ್ತಿ ಓ ತೆಗೆದಳು ಅಬ್ಬಗ ಓ.....
ಎಡದಲ್ಲಿ ಬಲದಲ್ಲಿ ಓ ಗೆರೆ ಹಾಕಿದಳು....
ಚೆನ್ನಗ ಚೆಲುವಗ ಓ ಮಾಯವಾಗಬೇಕು....ಓ....
ಬೆಳ್ಳಿಯ ಪುಂಚಲ ಓ ಒಬ್ಬ ಬ್ರಾಹಣನ ಓ ಎಡ ಪಾದದಲ್ಲಿ ಓ ಇಡಬೇಕು ಎಂದರು ಓ.....
ಅಬ್ಬಗದಾರಗರು ಓ ಅಬ್ಬನಡ್ಕದ ಗೋಳಿಮರದ ಬುಡದಲ್ಲಿ ಮಾಯವಾದ ಮಕ್ಕಳು.....ಓ....
ಬೋಳದ ಅರಮನೆಯಲ್ಲಿ ಓ ಮೇಲ್ ಮೇಲ್ಸ್ತರದಲ್ಲಿ ಓ ಏಳುಪ್ಪರಿಗೆಯಲ್ಲಿ ಓ ಬಂಗಾರದ ಕುರ್ಚಿಯಲ್ಲಿ ಅಬ್ಬಗದಾರಗ....ಓ.....
ಬೋಳದರಮನೆಯಲ್ಲಿ ಓ ಕೆಳಗೆ ಓ ಹಾಕಿಸಿರುವ ಚಪ್ಪರದಲ್ಲಿ.....
ಓ ಮದುಮಗನ ಮೋಂದಲೆ (ಮುಖಕ್ಷೌರ) ಆ ಆಗುತ್ತಿರುವಾಗ
ಮೇಲ್ ಮೇಲ್ಸ್ತರದ ಓ ಏಳುಪ್ಪರಿಗೆಗೆ ಓ ಮದುಮಗಳ ಕೈ ಹಿಡಿದುಕೊಂಡು ಹೋಗಲು....
ನಾಲ್ಕು ಗುತ್ತು ಓ ನಾಲ್ಕು ಬರ್ಕೆಯಾ ಓ......
ಗುರಿಕ್ಕಾರರ ಹೆಂಗುಸರು ಓ ಬರುತ್ತಾರಂತೆ....
ಯಾಕಾಗಿ ಚೆನ್ನಗ ಚೆಲುವಗ ಓ ಅಳುತ್ತೀರಿ.....
ನಿಮಗೊಂದು ಮದುವೆ ಓ ಹೆಚ್ಚೇ....ಓ.....
ಧಾರೆದಸ್ತು ನಿಮಗೆ ಹೆಚ್ಚಿಗೆಯೇ....ಓ....
ಹಿಂದೆ ಓ ಹಿಂದಿನವರಿಗಾದಂತೆ ಓ ಧಾರೆವಸ್ತು ಮಗಾ.....
ಯಾಕಾಗಿ ಚೆನ್ನಗ ಚೆಲುವಗ ಓ ಅಳುತ್ತೀರಿ, ಯಾಕಾಗಿ ದುಃಖಿಸುತ್ತೀರೆಂದು ಕೇಳುತ್ತಾರೆ ಹೆಣ್ಣುಗಳು.....
ನಾರಾಯಣಾ ಓ ನಾರಾಯಣಾ......ಓ. ನಾರಾಯಣಾ.....
ಮೇಲ್‌ಮೇಲ್‌ಸ್ತರದ ಏಳು ಉಪ್ಪರಿಗೆಯಲ್ಲಿ ಓ ಮದುಮಗಳಂದಿರನ್ನು ಓ ಕೈ ಹಿಡಿದು....
ಓ ಕರೆದುಕೊಂಡು ಬರುವಾಗ.....
ಹಾಕಿರುವ ಚಪ್ಪರದಲ್ಲಿ ಓ ವೀಳ್ಯದ ಹನಿ (ತಣ್ಣಗಿನ) ಚಪ್ಪರದಲ್ಲಿ ಓ ಹಿಂಗಾರದ ತಡಿಕೆಯಲ್ಲಿ ಓ....
ಮುಡ್ಯಾಲದ (ನಾರಿನ) ಎಡೆಗಂಟಿನಲ್ಲಿ ಓ ಕೇಳಬೇಕು ....ಓ.....

ಮೇಲಕ್ಕೆ ಮೇಲ್ಕೊಡಿ (ಮೇಲ್ಕಾಉಬಟ್ಟೆ) ಓ ನಡೆಯುವಲ್ಲಿಗೆ ನಡೆದಲಿಯ (ಹಾಸುಬಟ್ಟೆ), ಮದುಮಕ್ಕಳನ್ನು
ಓ ಧಾರೆಗೆ ಸುತ್ತು ಬರಿಸುವಾಗ......
ಚೆನ್ನಗ ಚೆಲುವಗ ಮದುಮಕ್ಕಳೆಂದು ಓ ಸೇರಿರುವ ಚಪ್ಪರದಲ್ಲಿ ಓ ಮದುಮಗಂದಿರನ್ನು
ಅಬ್ಬಗದಾರರಿಗೂ ಓ ಕಡೆರಿ ಕಾರ್ಕಳದ ಓ ಬೊಳಿಯ ಚಂದ್ರಾಮು ಸೆಟ್ಟಿ ಓ....
ರಾಮಲಕ್ಷ್ಮಣರೆನ್ನುವ ಓ ಗಂಡುಗಳಿಗೂ ಓ ಉರ್ಕಿದೊಟ್ಟಿನ ಅರಮನೆಯಲ್ಲಿ ಓ ಸೊನ್ನೆಯ ಮಕ್ಕಳಾದ ಓ ಅಬ್ಬಗದಾರಗ ಮಕ್ಕಳಿಗೆ....ಓ.....
ಧಾರೆದಸ್ತು ನೆರವೇರಿಸಿ ಓ ಸೇಸೆ ಓ ಹಾಕಿಯಾಗುವಾಗ,.....
ಮದುಮಗ ಮದುಮಗಳಂದಿರನ್ನು ಜೊತೆಜೊತೆಯಾಗಿ ಕುಳ್ಳಿರಿಸಿ ಓ ಹಾಲು ಕೊಡಲು ಓ ಹೋಗುವಾಗ....
ಬೋಳದರಮನೆಯಲ್ಲಿ ಓ ಅಬ್ಬಗದಾರಗ ಓ ಮದುಮಗಳಂದಿರು ಓ ಮಾಯವಾದರು..... ಓ....
ನಾರಾಯಣಾ ನಾರಾಯಾಣ....ಓ ನಾರಾಯಣಾ....
ನಾರಾಯಣಾ ಉರಿಬೆರ್ಮರ ಪಾದಕ್ಕೆ ಇಂದು ಮಕ್ಕಳು ಹೋಗಿ
ಅಬ್ಬಗದಾರಗ ಮಕ್ಕಳು ಹೋಗಿ ಓ ಸ್ವಾಮಿ ಶರಣು ಹಾಕಿ ಓ....
ನಾರಾಯಣ ದೇವರೇ ಓ ಮೂರು ದಿನದ ಓ ಜೋಗ(ದರ್ಶನ) ಕೊಟ್ಟರೆ.....
ಎರಡು ಕೈಯಲ್ಲಿ ಓ ಎರಡು ಬಾರಿ ತಂದೆವು ಓ ಎಡದಲ್ಲಿ ಬಲದಲ್ಲಿ ಓ ಎಷ್ಟು ಆಳು ಬೇಕು ನುಮಗೆ....
ತಾಯಿಯವರ ದುಃಖ ತಂದೆಯವರ ಚಿಂತೆಯನ್ನು ಓ ಕಳೆದು ಬಂದು ಓ
ಋತುಮತಿಯಾದ ಸಂಭ್ರಾಮಚರಣೆ ಓ ಆಗಿ (ಮಾಡಿ) ಬಂದೆವು ನಾವು....
ಧಾರೆದಸ್ತು ಆಯಿತು ನಮಗೆಂದು...ಓ....
ಹೇಳುತ್ತವೆಯಪ್ಪಾ ಮಕ್ಕಳು ....ಓ.....
ನಾರಾಯಣ ನಾರಾಯಣ ಕಪಟನಾಟಕದ ಓ ಮಕ್ಕಳು.....

* * * *

ಈಶ್ವರದೇವರು ಪಟ್ಟೆ ಕೊಟ್ಟಿದ ಹಾಡು*

ಗಾಳಿ ಬೆಳ(ದಿಂ)ಗಳು ಭೂಮಿ ಬೆಳೆದಲ್ಲಿ
ಬಾಲೆ(ಯೆ) ನಿನ್ ದುರಿತ(ವು) – ಉಂಟೆಂದು
ಬಾಲೇಶ ಮೊದಲು ನುಡಿದಾನೆ ೧

ಹೆಂಡಿರ್ ಮಾಯಂಗ(ಳ) ಗಂಡರೇನ್ ಬಲ್ಲರು
ಗುಂಡಿಯಲಿರುವ ಕರುಮೀನ–ಹೆಜ್ಜೆಯ
ಕಂಡವರುಂಟೆ ಧರೆಮೇಲೆ ೨

ಕಾವುಂಟೆ ಕಬ್ಬಿಗೆ ಬೇವುಂಟೆ ಬೆಲ್ಲಕೆ
ಶೀವುಂಟೆ ಹರಿವ ಜಲದಲಿ–ಪಾರ್ವತಿ
ಕಾದಿ ನೆಮ್ಮಲ್ಲಿ ಎರಡುಂಟೆ? ೩

ಗಾಳಿಗೆ ಎಲೆಯುಂಟು? ಎಲೆಗೆ ಬೀಜಗಳುಂಟೆ?
ಕೊಡಲ ನೀರೊಳಗೆ ಸುಳಿಯುಂಟೆ–ಪಾರ್ವತಿ
ನನ್ನ ನಿನ್ನಲ್ಲಿ ಎರಡುಂಟೆ? ೪

ನಾರಿ ಕೇಳ್ ಪಾರ್ವತಿ ನಾನ್ ಹೋಗ್ವೆ ಕಾಶಿಗೆ
ಕೋಮಾಲೆ ನಿನ್ನ ಕುಮುರನ–ಕಾದಿರು
ನಾ ಬರುವೆ ಎಂಟು ದಿವಸಕ್ಕೆ ೫

ಇಂದ್ರಲೋಕದಿಂದ ತಂದ್ರು ಚಂದುಳ್ಳದ ಪಟ್ಟೆಯ
ರಂಭೆ ನೀನದ್ನ ಒಳಿಡು–ಎನುತಲೆ
ನಗುತಲೀಶ್ವರರು ನುಡಿದರು ೬

ದೇವಲೋಕದಿಂದ ತಂದ್ರು ದೇವಾಂಗದ ಬಣ್ಣವ
ನಾರಿ ನೀನಿದ್ನ ಒಳಗಿರಿಸೆನುತಲೆ
ಮೋಷಿಕವಾದ್ರು ಪರಮಾತ್ಮ ೭

---

* ಶಿವರಾಮ ಐತಾಳ, ದಕ್ಷಿಣ ಕನ್ನಡದ ಜನಪದ ಸಾಹಿತ್ಯ, ಶಾರದಾ ಮಂದಿರ, ಮೈಸೂರು.

ಮೋಷಿಕವಾಗಿಯೆ ಮೋಸದಲಿ ನಡೆತಂದ್ರು
ಕಾಂತೆಯ ಮನೆಯ ಒಳಗಿರುವ–ಪಟ್ಟೆಯ ಏ
ಕಾಂತದಲಿ ತೆರೆದ್ರು ಎಲರಿಯಾಗಿ ೮

ಪುಟ್ಟ ಗಣಪಯ್ಯ ಪಟ್ಟೆಯ ಬೇಡುವ
ಪಟ್ಟೆಯ ತಂದು ಹೊರಗಿಂಕೆ–ನೋಡಿದ್ರೆ
ನುಚ್ಚ ಕಟ್ಟಲಿಕೆ ತೆರವಿಲ್ಲ ೯

ಸಣ್ಣ ಗಣಪಯ್ಯ ಬಣ್ಣವ ಬೇಡುವ
ಬಣ್ಣವ ತಂದು ಹೊರಗಿಂಕೆ–ನೋಡಿದ್ರೆ
ಎಳ್ಳೆ ಕಟ್ಟಲಿಕೆ ತೆರವಿಲ್ಲ ೧೦

ಕರಿಯ ಕಬ್ಬಿನ ಕೋಲು ಕಡಿದು ಹೋಳನು ಮಾಡಿ
ತಟ್ಟೆಯಲಿ ತುಂಬಿ ಕೊಡುವೇನೊ–(ಎಂದರೆ)
ಪಟ್ಟೆಯಿಲ್ಲಾದೆ ಮೆಲೆನೆಂಬ ೧೧

ತಟ್ಟೆಯಲಿ ನೊರೆಹಾಲು ಬಟ್ಲಲಿ ಹರೆತುಪ್ಪ
ಬಾಳೆಯ ಹಣ್ಣು ಸಕ್ಕರೆಯ–ಕೊಟ್ಟರೆ
ಬಣ್ಣ ವಿಲ್ಲಾದೆ ಮೆಲೆನೆಂಬ ೧೨

ಕಂಬಳಿಯ ಕಾಳಿಂಗ (ಹರ್ಶ್ರೋಲಿಯುತ) ಬಂದ
ಹಲವು ಭಾಷೆಗಳ ನುಡಿಯುತ–ಮಡದೀಯ
ಒಳವ ಸೋದಲಿಕೆ ಹೊರಟಾರೆ ೧೩

ಕಂಬಳಿಯ ಅಂಗೀಯು ಕಂಬಳಿಯ ಟೊಪ್ಪೀಯು
ಸೂಜಿಯ ದಾರ ಕೈಯಲ್ಲಿ–ಹಿಡಕೊಂಡು
ಬಂದ ಪಾರ್ವತಿಯ ಮನೆಗಾಗಿ ೧೪

ಬಂದ ಹೊಲಿಗಾರನು ನಿಂದನಂಗಣದಲ್ಲಿ
ಬಟ್ಟೆಗಳ್ ಹೊಲಿಯೋ ಕುಂಟೆಂದು – (ಪಾರ್ವತಿಯ)
ಕರೆದು ಕೇಳಿದನೆ ಹೊಲಿಗಾರ ೧೫

ಒಳಗಿದ್ದ ಪಾರ್ವತಿ ಹೊರಗಿಂಕೆ ಬಂದಳು
ಈಗ್ಯಾರು ನನ್ನ ಕರೆದರು–ಎನುತಲೆ
ತಾ ಕರೆದೆನೆಂಬ ಹೊಲಿಗಾರ ೧೬

ಪುತ್ರನ ಪಟ್ಟೆಯ ಎಲಿಗಳು ತರಿದವು
ಸ್ವಾಮಿ ಬಂದಽರೆ ಬಯ್ವಾರು–ಹೊಲಿಗಾರ
ಪಟ್ಟೆಯ ನೀನು ಹೊಲಿಬೀಯ ೧೭

ಬಾಲನ ಬಣ್ಣವ ಎಲಿಗಳು ತರಿದವು
ಸ್ವಾಮಿ ಬಂದರೆ ಬಯ್ವಾರು–ಹೊಲಿಗಾರ
ಬಣ್ಣವ ಹೊಲಿಯೋ ಎನಿತಿದ್ಲು ೧೮

ಆಗಿತು ಎನುತಾ ಬೇಗದಲಿ ಕುಳಿತಾನೆ
ತನ್ನಿರಿ ಪಟ್ಟೆಯ ಎನುತಲೆ–ಪಾರ್ವತಿ
ತಂದು ಕೊಡ್ಸಿದ್ಲು ಹೊಲಿಯುದಕೆ ೧೯

ಚಿನ್ನದ ಸೂಜಿಯಲಿ ಬಣ್ಣ ಹೊಲಿದಾನೆ
ಚಿನ್ನಕ್ಕ ಮುದ್ದು ಮುಖದವಳು–ಪಾರ್ವತಿ
ಬಣ್ಣವ ನೋಡಿ ನಗುವಽಳು ೨೦

ಮುತ್ತಿನ ಸೂಜಿಯಲಿ ಪಟ್ಟೇ ಹೊಲಿದಾನೆ
ಉತ್ತುಮ ಮುದ್ದು ಮುಖದವಳು–ಪಾರ್ವತಿ
ಪಟ್ಟೆಯ ನೋಡಿ ನಗುವಽಳು ೨೧

ಚಿನ್ನದ್ ಹಿರವಾಣದಲಿ ಸಣ್ಣ ಅಕ್ಕಿಯ ತುಂಬಿ
ಚಿನ್ನಕ್ಕು ಮುದ್ದು ಮುಖದವಳು–ಕೊಟ್ಟರೆ
ಅಕ್ಕಿ ಯಾಕೆಂಬ ಹೊಲಿಗಾರ ೨೨

ಮುತ್ತಿನ ಬುಟ್ಟಿಯಲಿ ದುಡ್ಡುಕಾಸನೆ ತುಂಬಿ
ಉತ್ತುಮ ಮುದ್ದು ಮುಖದವಳು–ಕೊಟ್ಟರೆ
ದುಡ್ಡು ಯಾಕೆಂಬ ಹೊಲಿಗಾರ ೨೩

ಹೊಲಿದಕ್ಕೆ ಕೂಲಿಯ ಹೇಳಯ್ಯ ಹೊಲಿಗಾರ
ಈಗಳ್ ಎರಡ್ ವರಗಽಳ ಕೊಡುವೆ
ಈಗಽಲೆ ಹೋಗು ಮನೆಯಿಂದ ೨೪–೨೫

ತೊಂಡೆ ಬೆಂಡೆಯಕಾಯಿ ಬಾಳೆ ಬದಲನೆಕಾಯಿ
ಹಾಗಲಕಾಯಿ ಮೊದಲಾದ–ತಾಳ್ಯೆಲ್ಲ
ಬೇಗೆ ಮಾಡಿದ್ಲು ಅಡಿಗೆಯ ೨೬

ಕೊಡಿಯ ಬಾಳ್ಯಾವ ತಂದು ತೊಳೆದು ಎ(ಡೆ)ಗಳ ಮಾಡಿ
ಆಗ ಗೊರವಯ್‌ನ ಅಶನಕ್ಕೆ-ಕರೆದರೆ
ಕಾಲ್ತೊಳೆದು ಬಂದ (ಹೊಲಿಗಾರ) ೨೭

ಬಾಳ್ಯೆಲೆಲುಂಬವನು ಯಾವೂರ ಗೋವ್ಗಳನೊ
ಸ್ವಾಮಿ ತಾನುಂಬ ತಳಿಗೆಯ-ತಂದಿಡು
ನಾವಿಬ್ಬರುಂಬೋ ಸವಿದೂಟ ೨೮

ಗಿರಿರಾಯ್ನ ಮಗಳಾಗಿ ಹರನ ಹೆಂಡತಿಯಾಗಿ
ಅರಿವೆ ಹೊಲಿಯೊವ್ನ ಒಡನೂಟ-ಉಂಬುದು
ಇದು ಎನ್ನ ಹಣೆಯ ಬರವೆಂದ್ಲು ೨೯

ಹಾದಿಯಽಲಿ ಉಂಡೇನು ಸಾದಿನ ಬೊಟ್ಟಟೀನೊ
ಬೋಗಿ ಎಲೆಯೊಳಗೆ ಸವಿದುಂಡೆ- (ಪಾರ್ವತಿ)
ನಾರಿ ನಿನಮೇಲೆ ಮನಸಾದೊ ೩೦

ಚಂದ್ರಶೇಖರದೇವ್ರು ಕಾಶೀಗ್ಹೋಗಿದ್ರು
ಇಂದು ಮದ್ಯಾನ್ಹಕೆ ಬರುವರು-ಹೊಲಿಗಾರ
ಈಗಲೆ ಹೋಗು ಮನೆಯಿಂದ ೩೧

ಕಾಶಿಗೆ ಹೋದವ್ರು ಈಗ್ಯೆಲ್ಲಿ ಬರುವರು
ಯಾತಕೆನ್ನೊಡನೆ ಬಲು ಸುಳ್ಳ-ನಾಡುವೆ
ಬಾರೆಈಗೆನ್ನ ಬಳಿಗೆಂದ ೩೨

ಕೊಟ್ಟರೆ ಕೊಡು ನೀನು ಕೊಡದಿದ್ದರುಳಿದಿರು
ಸ್ವಾಮಿ ಬಂದಽರೆ ತರಿಸ್ಯಾರು-ಎನುತಲೆ
ಕೋಣೆಯ ಮನೆಗೆ ನಡೆದಾಳೆ ೩೩

ಸಾಲೆಯ ಮಂಚಕೆ ಸಾಲು ಮಲ್ಲಿಗೆ ಹಾಸಿ
ಕಾಲುದೀವೀಽಗೆ ಬೆಳಕಿಟ್ಟು
ಬೆಳಕಿಟ್ಟ-ಪಾರ್ವತಿ
ಬಾಲರೊಡಗೊಂಡು ಕುಳತಾಲೆ ೩೪

ಮುಂದ್‌ಮುಂದೆ ಅವ್‌ಳ್ ಹೋದ್ಲು ಹಿಂದ್ ಹಿಂದೆ ಇವ ಹೋದ
ಇಕ್ಕಿದ ಕದವ ಸೆಳಲಿಸಿ-ಗೊರವಯ್ಯ
ಮಂಚಕ್ಹೋಗಿ ಕರವ ಪಿಡಿದಾನೆ ೩೫

ಗಡಗಡನೆ ನಡ್‌ಗಿದ್ಲು ಕೆಡ್‌ಗಿ ಮೂರ್ಚ್ಛೆಯಾಗಿದ್ಲು
ಜಲಜಲಾ ಬೆಗರಿ ಬೆದರಿದ್ಲು–ಅರಸಿಯು
ಮೂರ್ಚ್ಛೆಯಾಗಿ ನೆಲಕೆ ಒರಗಿದ್ಲು ೩೬

ಪಟ್ಟೆಯಾಕೆ ಹರಿದಿತ್ತು ಮೃತ್ಯುಯಾಕೆ ಬಂದಿತ್ತು
ಕೆಟ್ಟಿತು ಯೆನ್ನ ಬೌಮಾನ–ಎನುತಲೆ
ಮುಕ್ಕಣ್ಣ ಶಿವನ ನೆನೆದಾಳೆ ೩೭

ಬಗ್ಗಿ ಬಂದ ಕುರು(ಳ) ತಿದ್ದಿ (ನೇವ?)ರಿಸುತ್ತ
ಸೂಸು(ವ) ಬೆಗರ ವರಿಸುತ್ತ–ಮಡದೀಗೆ
ತೋರಿದ್ರು ತಮ್ಮ ನಿಜರೂಪವ ೩೮

ಪಟ್ಟೆ ಹರದ್ದೂ ನಾನೆ ಪಟ್ಟೆ ಹೊಲದ್ದೂ ನಾನೆ
ಮಿತ್ರೆ ನಾ ನಿನ್ನ ಒಳವ
ಒಳವ ಸೋ–ದಲು ಬಂದೆ
ಅಂಜಿದ್ಯಾ ನೀನು ಎನುತಿದ್ರು ೩೯

ಹೆಶುವು ನೀನಾಗಲು ತ್ರಿಶುವು ನಾನಾಗಲು
ಹಸಿದವರಡುಗೆ ಸವಿದಿಡು–ಎನುತಲೆ
ಈಶ್ವರರು ಸ್ನಾನಕ್ಹೊರಟಾರೆ ೪೦

ಪಟ್ಟೆಯ ಮಾಸ್ಯುಟ್ಲು ಸೊಪ್ಪು ನೆರಿದುಟ್ಲು
ನೋಡುವ ಶಿವನ ಗುಣವೆಂದು–ಪಾರ್ವತಿ
ಮೇರುತ್ತಿಯಾಗಿ ನಡೆದಳು ೪೧

ಕರಿಯ ಕಾಕಿಯ ಮಣಿ (ಬೆಳಿ) ಗುರುಗುಂಜಿಯ ದಂಡೆ
ಕರಿಮಣಿಯ ಸರವ ಕೊರಳಲ್ಲಿ – ಇಟ್ಟುಕೊಂಡು
ಕೊರವತ್ತಿಯಾಗಿ ನಡೆದಳು ೪೨

ಮುತ್ತಿನೋಲೆಯ ತೆಗೆದು ತೊಗಲಿನೋಲೆಯನಿಟ್ಟು
ನೋಡುವ ಶಿವನ ಗುಣವನು–ಎನುತಲೆ
ಕೊರವತ್ತಿಯಾಗಿ ನಡೆದಳು ೪೩

ಚಿನ್ನದ ಬಳೆಯಽ (ತೆಗೆದು) ಮಣ್ಣಿನ ಬಳೆಯಽ (ನಿಟ್ಟು)
ನೋಡುವ ಶಿವನ (ಗುಣವೆಂದು)–ಪಾರ್ವತಿ
(ಕೊರವತ್ತಿ)ಯಾಗಿ (ನಡೆದಳು) ೪೪

ಚಂದ್ರಶೇಖರ ದೇವ್ರು ಮಿಂದುಬರುವ ದಾರಿಯಲಿ
ಅಂಗನೆ ಗೆಣಗ ಎಳಗುತ್ತ ಎಳಗು–ತ್ತಿರುವುದ
ಕಂಡು ಪರಮಾತ್ಮ ಬೆರಗಾದ್ರು ೪೫

ಕಂಡರೆ ಈಶ್ವರರು (ಕಳಗಿದ್‌ದಾರ್ ಮಂದಿಯ)
ಶೀಘ್ರದಿಂದ ಲವಳ ಕರ್‌ಕಂಡು–ಬನ್ನಿರೆನುತ
ನಗ್ತಲೀಶ್ವರರು ನುಡಿದಾರೆ ೪೬

ಅಟ್ಟಿದಾ ಚಾರಕರು ತಟ್ಟನೆ ನಡತಂದ್ರು
ತಟ್ಟನೆ ಬೇಗ ನಡತಂದು–ಹೇಳಿದ್ರು
ದೇವರು ನಿನ್ನ ಕರೆದಾರ ೪೭

ನೀವಾಗಿ ಬಂದರೆ ಅಂದಣ ಕೊಡಿಸ್ಯಾರಂತೆ
ಮುಂದೆ ಬೆಳಿಕೊಡಿಯಾ (ಕೊಡಿಸ್ಯಾರು–ದೇವರು)
ಮುಂದೆ ಸಾವಿರವ ಕೊಡಿಸ್ಯಾರು ೪೮

(ಸೊಪ್) ಪುಟ್ಟ ಮೇರುತಿಗೆ ಅಂದಣವು ನನಗ್ಯಾಕೆ
ಮುಂದೆ ಬೆಳಿಕೊಡಿಯಾ ದೇವರು–ಕೊಡಲ್ಯಾಕೆ
ಮುಂದೆ ಸಾವಿರವು ನನಗ್ಯಾಕೆ

ಒಪ್ಪನ್ನ ಭತ್ತವ ಅಡಿಬೇಕು ತೊಳಿಬೇಕು
ಈಗ ಬರುವುದಕೆ ಸಮಯ್‌ವಿಲ್ಲಾ
.............................?

ಬಂದು ಸರಚಿಂತಾಮಣಿ ಇಂದು ಮಾತ್ನಾಡಿದ
ಮಂದಾರಧರ (?) ಬರಹೇಳಿದಾಗಲೆ
ಬೇಗನೆ ಹೋಗ್ಯೆಂದು ಅರಸಿಯು ೪೯

ಅಟ್ಟಿದ ಚಾರಕರು ತಟ್ಟನೆ ನಡೆತಂದ್ರು
ತಟ್ಟನೆ ಬೇಗ ನಡೆತಂದು–ಹೇಳಿದ್ರು
ಮರುಳೆಂದು ನಿಮ್ಮ ಬೈವಳು ೫೦

ಸೊಪ್ಪುಟ್ಟಿ (ಬೇಡಿತಿಯ) ಸೊಕ್ಕನ್ನೆ ಮುರಿಸುವೆ
ಹಿಡಿಬೇಕು ಅವಳ ತರಬೇಕು–ಎನುತಲೆ
ನೆಳಲಿಗೀಶ್ವರನು ನಡೆತಂದ್ರು ೫೧

ದೇವರು ಬರುವುದ ದೂರದಿಂದಲೆ ನೋಡಿ
ಬೇಗದಿಂ ಸೊಪ್ಪ ಗುಡಿಕಟ್ಟಿ–ಬೇಡತಿ
ದಿಟ್ಟೆ (ಯಂದ)ದಲಿ ನಗುವಳು ೫೨

ಬಂದಿರೆ ದೇವರೆ ನಿಂದಿರಂಗಣದಲ್ಲೆ
ಇಂದಕ್ಕಲಾದೆ ಮನೆಯಿಲ್ಲ–ದೇವರೆ
ಕುಳ್ಳಿರಿ ಗುಡಿಯ ಜಗ್ಲಿಯಲ್ಲಿ ೫೩

ಸೃಷ್ಟಿ ಮೇಲ್ ಕುಳಿತರೆ ಪಟ್ಟೆ ಕೆಸರಾದವು
ಕಟ್ವಾಂಗ ತಾರೆ ಮಣೆತಾರೆ–ಎನುತಲೆ
ಸೊಪ್ಪೆರ್ಡು ಮುರ್‌ದು ಮಣೆಕೊಟ್ಲು ೫೪

ಅಗರ್ಜಿ? ಗಟ್ಟಕ್ಕೆ ಕುಮಕಿಯಾನ್ ಬಿತ್ತಿದ
ನೀಲದಕ್ಕಲಾದ ಹೊಲೆಬೇಡ–ಬಂದರೆ
ಕತ್ತಿsಲಿ ನಿಮ್ಮ ಕಡಿವರು ೫೫

ಹೊಲೆಬೇಡ ಬಂದರೆ ಹೊರಗಿಂಕೆ ನಿಲಿಸುವೆ
ದೂಡುವೆ ಗುಡಿಯ ಜಗುಲಿಗೆ–(ಕೋಮsಲೆ)
ಬಾರೆ ಈಗೆನ್ನ ಬಳಿಗೆಂದ್ರು ೫೬

ಒಂದು ಅಡಿಕೆಯ ಒಡೆದು ಒಂಬತ್ ಹೋಳನೆ ಮಾಡಿ
ಕೊಡಲ ನೀರೊಳಗೆ ಅದನದ್ದಿ–ಕೊಟ್ಟರೆ
ಇಕ್ಕಯ್ಯನಿಡಿದ ಪರಮಾತ್ಮ ೫೭

ಇಕ್ಕಯ್ಯನಿಡಿವುದಕೆ ಹರದಾಡು ಮಗುವಲ್ಲ
ಸೂಳೆಯ ಹೆಣ್ಣು ನಾನಲ್ಲ–ದೇವರೆ
ಹೀನಕುಲಕೇನು ಬಯಸಿದ್ರಿ ೫೮

ಹಾರರ ಮಗಳಲ್ಲ ಹರದರ ಸೂಳೆಯಲ್ಲ
ಸೂಳೆಯ ಹೆಣ್ಣು ನಾನಲ್ಲ–ದೇವರೆ
ಹೀನ ಕುಲಕೇನು ಬಯಸಿದ್ರಿ ೫೯

ಮೇಲು ಕೀಳೆಂಬುವ ಬಾಹಲ್ಯ ನಮಗಿಲ್ಲ
ಕಾಣದೆ ನೀನು ಒಡಗೂಡು
ಒಡಗೂಡಿ–ದಾದರೆ
ಬೇಡಿದಿಷ್ಟಾರ್ಥ ಕೊಡುವೆನು ೬೦

ಬೇಡಿತಿ ಬೇಡೀಳು ಬೇಡ್‌ದಿದ್ದ ವಸ್ತುವ
ಸ್ವಾಮಿಯ ಕೊರಲ ಪದಕವ–ಕೊಟ್ಟರೆ
ಬರುವೆ ನಾನೊಂದು ನಿಮಿಷಕ್ಕೆ ೬೧

ಷರರೊಬ್ಬರಾದರೆ ಪದಕವ ಬೇಡರು
ಪಾರ್ವತಿಯಲ್ದೆ ಪರರೊಬ್ರು
ಪರರೊಬ್ಬ–ರಲ್ಲೆಂದು
ಜ್ಞಾನವ ಮಾಡಿ ನುಡಿದರು ೬೨

ನಾನೂ ಇತ್ತೇ ಬಂದೆ ನೀನೂ ಇತ್ತೇ ಬಂದೆ
ಕುಮರರು ಎಲ್ಲಿ ಐದರು–ಎನುತಲೆ
ಜ್ಞಾನವ ಮಾಡಿ ನುಡಿದರು ೬೩

ಎಲ್ಲವ್ರ ಮನೆಯಲ್ಲಿ ಬೆಲ್ಲ ಬಾಳೆಯ ಹಣ್ಣು
ಎಲ್ಲವ್ರು ಹರಕೆ ಕೊಡುವರು–ಗಣಪತಿಗೆ
ಉಂಡಾಡಿ ಬರುವ ಬರಯಲಲ್ಲಿ ೬೪

ಉಂಡಾಡಿ ಬರುವಾಗ ಅಜ್ಜಿ ನೆನೆದsಳೆದು
ಅಜ್ಜಿಯ ಮನೆಯ ಹರಕೆಯ–ತಾತಿಂದು
ಬರದಿಂದ ಬರುವ ಬಯಲಲ್ಲಿ ೬೫

ಬರದಿಂದ ಬರುವಾಗ ಗೋವ್ಗಳರ ಮಕ್ಕಳು
ದಾರ್‍ಯಲ್ಲಿ ಎರಡು (ಹಲ್ ಗಂಟು
ಹುಲ್ಲಗಂ–ಟಿಕ್ಕಲು)
ಕಾಲ್ಜಾರಿ ಬಿದ್ದ ಬಯಲಲ್ಲಿ ೬೬

ಬಿದ್ದಲ್ಲಿಂದೆದ್ದನೆ ಹೊಟ್ಟೆಗ್‌ಳು ಒಡೆದವು
ಸರ್ಪನ ತೆಗೆದು ನಡುಹೊಟ್ಟೆಗೆ–ಸುತ್ತಿದ
ಅತ್ತಿತ್ ನೋಡಿsದs ಗಣನಾಥ ೬೭

ಗಣಪ ಬೀಳ್ವುದ ಕಂಡು ಚಂದ್ರ ನಸುನಕ್ಕ
ಮುರಿದ ದಂತಗಳ ಎಡಗೈಲಿ–ಹಿಡಕಂಡು
ಚಂದ್ರಂಗೆ ಶಾಪ ಕೊಡುತಿರ್ಪ ೬೮

ನನ್ನ ಹಬ್ಬದ ದಿವ್ಸ ನಿನ್‌ಕಂಡ್ ಸ್ತ್ರೀ ಪುರ್‌ಷ್‌ರೀಗೆ
ಪಳ್ಳ ಸುಳ್ಳಾಗಿ ಪೊಳ್ಳಾಗಿ–ಇರಲೆಂದು
ಚಂದ್ರಂಗೆ ಶಾಪ ಕೊಡಿತಿರ್ಪ ೬೯

ಸುತ್ತಿದ ಹುಲ್ಲನೆ ಬಿಚ್ಚಿ ಬಿಸುಟನೆ ಗಣಪ
ನನ್ನ ಹಬ್ಬಗಳು ಆದನಕ–ಈ ಹುಲ್ಲು
ನೆರೆಯದಿರೆಂದು ವರವಿತ್ತ ೭೦

ಬಾಲೇಶ ಮೊದಲಾಗಿ ಲೀಲೆಯ ತೋರಿದ
ಯಾರಾದ್ರೀ ಕತಿಯ ಹೇಳಿಕೇಳಿ–ದವರಿಗೆ
ಪಾಪ ಹೋಗಿ ಪುಣ್ಯ ಬರುತಿರ್ಕು ೭೧

ಗೋವಿನ ಹಾಡು

ಆದಿ ಪುರುಷರೆ ವೇದ ಸಂಪನ್ನರೆ
ಆಯ್ದ ಮಲ್ಲಿಗೆಯ ಅರಳ ತಂದೊಪ್ಪಿಸುವೆ
ಹಾದೀಲಿ ಸಂದ ಕತಿಕೇಳಿ ೧

ಭಾರತ ವಿದ್ಯವ ಕಾದಿ ಗೆಲಿದ್ದಾಂಗೆ
ಆದಿನಾರಾಯ್ಣ ಶರಣೆಂದು
ಶರಣೆಂದರ್ತ್ಯಂಗಳ
ಮಾಡಿದ ಪಾಪ ಕ್ಷಯವಾಗ್ಲಿ ೨

ಅಣ್ಣ ಕೇಳುವ ಮಧ್ಯ ತಣ್ಣೀರ ಕೊಳದಲ್ಲಿ
ಬಣ್ಣ ಉಳ್ಳಾದ (ಕಿ)ರು ಜಾಜಿ–ವನದಲ್ಲಿ
ಕಣ್ಣೆಂದ್ಲು ತನ್ನ ಗುರುವಿಗೆ ೩

ಮರಣಕಾಲ ಭೀಷ್ಮರು ಸಾಲ್ಮಂಚವೇರಿದ್ರು
ಪುರಾಣವನು ಹೇಳತೊಡಗಿದ್ರು–ಭೀಷ್ಮರು
ಕೌಲಿಯ ಕತಿಯು ಮೊದಲೆಂದ್ರು ೪

ಉತ್ತುಮ್ ಸೋಮಾಜರು ಭಟ್ಟರ ಮನೆಯಲ್ಲಿ
ಕೊಟ್ಟಿಗಿಯೊಳಗಿನ್ ಹಿಂ(ಡಿ)ನ–ಕಡೆಚೆಲ್ವಿ
ಹುಟ್ಟಿದ್ಲು ಕೆಂದೆ ಕವಿಲೆಯು ೫

ಹಾಲು ಅನ್ನವನುಂಡು ಮೊಸರು ಅನ್ನವ ಕಟ್ಟಿ
ಚಿನ್ನದ ಜಾಮ ಕೊಳವೆಯಾನ್–ಹಿಡಿದರು
ಅಲ್ಲಿಗಾ ತುರುವ ಹೊಡೆದರು ೬

ಕಟ್‌ಹೋದ ಬುತ್ತಿಯ ಬಿಚ್ಚಿದ್ರು ಕಲ್‌ಮೇಲೆ
ಹತ್ತಾಳು ಉಂಡು ದಣಿದರು
ದಣಿದು ಕೈ–ತೊಳೆದರು
ಬೆಟ್ಟದಲಿ ಹರಿವ ಜಲದಲಿ ೭

ಕೈತೊಳೆದು ಗೋವ್ಗಳರು ಕೊಂಡ್ರು ಕೈವೀಳ್ಯವ
ಊರ್ದಂಡ(ನ) ಶ್ರಮದಿ ದಣಿದರು–ಎನುತಲೆ
(ಹಿಂಡಿನ) ಮುಂದೆ ಮಲಿಗ್ಯಾರು ೮

ಒರಗಿದಾ ಗೋವ್ಗಳರು ಬಿಸಿಲ್ಹೊತ್ತಿಗೆದ್ದರು
ಅರಿಯದ ಗೋವ್ಗಳ ತಂಪುಳ್ಳವನಕಾಗಿ
ಅಲ್ಲಿಗಾ ತುರುವ ಹೊಡೆದರು ೯

ಮರಣಕಾಲಕೆ ಒಂದು ನುಡಿ(ಯ) ಬಾರದ ಹುಲಿಯು
ಧರೆಗೊಮ್ಮೆ ಹತ್ತಿ ಇಳಿವುದು
ಇಳಿದು ಬರು–ವುದಕಂಡು
ಎಳಗಂದಿ ಮೈಯು ನಡಿಗ್ಯಾವು ೧೦

ನಿಲ್ಲುನಿಲ್ ಹುಲಿಯಣ್ಣ ನಿಲ್ಲೊಂದು ಮಾತುಂಟು
ನಿಲ್ಲೊಮದು ಮಾತು ನುಡಿವೆನು–ನಿನ್ ಕೂಡೆ
ಮನೆಗ್ಹೋಗಿ ವನಕೆ ಬರುವೆನು ೧೧

ಬಾರದೆ ಇದ್ದರೆ ನೋಡ್ ನನ್ನ ಸತ್ಯವ
ಹಾಲಕ್ಕಿಯಂತ ಹಯ್‌ಗೈವ–ಮಡದಿಯ
ಅಂತವ್ನ ದ್ರೋಹ ತನಗೆಂತು ೧೨

ಅಂಗಾಲ ಅರ್ಚ್‌ವೊವ್ನ ಕುಣಿಕುಣಿದು ನಡೆದವ್ನ
ಅಣಹಲ್ಲ ತೋರಿ ನಗುವವ್ನ–ಪಾಪಿಯ
ಅಂತವ್ನ ದ್ರೋಹ ತನಗಕ್ಕು ೧೩

ಹಸಿಯೆಳ್ಳು ಬತ್ತಕ್ಕೆ ಹುಸಿದು ನೀರೆರೆವವ್ನ
ಬಿಸಿತುಪ್ಪ ಕಾಸಿ ಕುಡುಕೆಂದು ಕೊಡುವವ್ನ
ಅಂತವ್ನ ದ್ರೋಹ ತನಗೆಂತು ೧೪

ಮಂಗ್ಳವಾರ್ದ ಸಂಜೆಯಲಿ ಮಕ್ಕಳ ಬೈವವ್ನ
ಕೊಟ್ಟಿಗಿಯ ಗಂಟಿಯಹೊಡಿವವ್ನ–ಪಾಪಿಯ
ಅಂತವ್ನ ದ್ರೋಹ ತನಗೆಂದು ೧೫

ನೆರೆಮನೆಗೆ ನೀರಿಗೆ ಮನೆಯಾಕೆ ಹೋಗ್ವಾಗ
ಕರುವುಂಡಿತೆಂದು ಒಡತಿಗೆ–ಹೇಳ್‌ವವ್ನ
ಅಂತವ್ನ ದ್ರೋಹ ತನಗೆಂದು ೧೬

ಅಬ್ಬಿಯ ಬೈವನ್ನ ಗುಬ್ಬಿ ಗೂಡಳಿವವ್ನ
ಗಬ್ಬದ ಗಂಟಿ ಪಶುವನ್ನು ಹೊಡಿವವ್ನ
ಅಂತವ್ನ ದ್ರೋಹ ತನಗಕ್ಕು ೧೭

ತಂದಿಯ ಬೈವವ್ನ ತಾಯಿ (ಗ್) ಕೈ ನಿಗುರ್‌ವನ್ನ
ತಂದ ಹೆಂಡತಿಯ ಬಿಟ್ಟವ್ನ–ಪಾಪಿಯ
ಅಂತವ್ನ ದ್ರೋಹ ತನಗಕ್ಕು ೧೮

ಹೆಣ್ಣ ಕೊಟ್ಟಂತೆಯ ಬಣ್ಣಿಸಿ ಬೈವವ್ (ನು)
ಬಣ್ಣವನೊಗೆವ ಅಗಸನ–ಕಲ್ಲಡಿ
ಗೊಣ್ಣೆ ಹುಳುವಾಗಿ ತೊಳಲತ್ತು
ತೊಳಲುತ್ತ–ಇದ್ದರೆ
ಅಂತವ್ನ ದ್ರೋಹ ತನಗಕ್ಕು ೧೯

ಹಂಬುವ ಬಳ್ಳಿಯ ಕೊಡಿಯೊಂದ ಮುರಿವವ್ನ
ಬಡವ (ರ್ಗೆ) ನ್ಯಾಯ ನುಡಿವವ್ನ–ಪಾಪಿಯ
ಅಂತವ್ನ ದ್ರೋಹ ತನಗಕ್ಕು ೨೦

ಮಿಂದು ಮೈಲಿಗೆಯುಟ್ಟು ಉಂಡು ಗಂಧವನೆ(ಚ್ಚಿ?)
ಎಂದೂ ಶೂದ್ರಿತಿಯೊಡನೆ ಸೆಳೆಮಂಚ ಏರ್‌ವವ್ನ
ಅಂತವ್ನ ದ್ರೋಹ ತನಗಕ್ಕು ೨೧

ಅರಳೆಯ ಅಶುವತ್ತ ಅರಳೆಯ ಮರಗಳು
ಹತ್ರೆ ದೇವಾಲ್ಯ ಕೆರೆಮಠ–ವಿಲ್ಲದ
ಹತ್ರೆ ಇದ್ದವು ಗತಿಗ್ಹೋಗ್ವೆ ೨೨

ಅಡವಿಯೊಳಗೆ ಇನ್ನು ಕೊಡುವ ಸಾಕ್ಷಿಗಳಿಲ್ಲ
ಪೊಡವಿಯಾಳುವ (ದೇವರು) ಸಾಕ್ಷಿ–ನಮಗಿನ್ನು
ಬೆಳೆದ ಭೂಮಿಗಳು ಇ(ವೆ) ಸಾಕ್ಷಿ ೨೩

ನಿಂತಿದ್ ಹುಲಿಯಣ್ಣನು ತೂಗಿದ ತಲೆಗಳ
ಉಪಾಯವು ಇಲ್ಲ ಪಶು (ವಿನ?) ಮಾತಿದು
ಹೋಗೆಂದು ಬಿಟ್ಟ ತೊಲಗ್ಯಾನು ೨೪

ನಲಿನಲಿ (ದ) ಸೋಮಯ್ಯ ಬಾಡುತ್ತ ಬಳುಕುತ್ತ
ಬಾಡಿದ ಕೆಮಿಯ ಅಳುಗೊಂಡು ಸೋಮಯ್ಯ
ಬೀ(ಡಿ)ಗೆ ಆಗಿ ನಡೆತಂದ ೨೫

ಕಂದನ ನೋಡುತ್ತ ಕಣ್ಣಲ್ ನೀರ್ ಸೊರಿಯುತ್ತ
ಇಂದಿಗೆ ಋಣವು ಹರಿಯಿತು–ಎನುತಲೆ
ಅಂದ್ಯಾಗ ಕವಿಲೆ ಅಳುವಳು ೨೬

(ಇಂ)ದಿಗೆ ಬರುವಾಗ (ಎಂ) ದಿನಪರಿಯಲ್ಲ
ಇಂದಿನ ಪರಿಯ ನುಡಿಯದೆ–ಇದ್ದರೆ
ಮುಟ್ಟೆನು ನಿನ್ನ ಮೊಲೆಹಾಲ ೨೭

ಬೇಡವೊ ಕಂದಯ್ಯ ಕಾಡದೆ ನೀನುಣ್ಣು
ಆಡಿದ ಮಾತು ಹುಸಿಯಲ್ಲ–ನೀ ಮೊಲೆ
ಯೂಡಿದ್ರೆ ಒಮ್ಮೆ ವನಕ್ಹೋಗ್ವೆ ೨೮

ಅಳಬೇಡ ಕಂದಯ್ಯ ಚೆಲುವ ಮೂರುತಿ ನೀನು
ಹೇಳ್ಯೇನು ಕೇಳು ನಿನಗೊಂದು–ಬುದ್ಧಿಯ
ನರುಹುವೆನೆಂದು ನುಡಿದಳು ೨೯

ಉತ್ತಿನ್ಹುಲ್ಲಿತ್ತೆಂದದರೊತ್ತಿಗೆ ಮೇಯ್‌ದಿರು
ಎತ್ತಾಗಿ ನೀನು ಅದರೊತ್ತಿಗೆ–(ಹೋದರೆ?)
ಸರ್ಪನ ಬಾಯಲ್ಲಿ ಗನವಕ್ಕು ೩೦

ಕಂದ (ನೆ ಮಂದೆಯ?) ಹಿಂದ್ಹಿಂದೆ ಹೋಗದಿರು
ಹಿಂದೆ ನಿಂತಲ್ಲಿ ಉಳಿದರೆ–ಹುಲಿಕಂಡು
ತಿಂದರೆ ನನ್ನ ಕತಿಯಕ್ಕು ೩೧

ದ್ರುಷ್ಟರಿಗೆ ಸತ್ಯವ ಕೊಟ್ಟು ಬಾಧೆಯನಕ್ಕ
ಹೆತ್ತ (ವ್ರು) ಬಿಟ್ಟರೆ ಅದು ಪಾಪ–ಅಕ್ನವ್ರೆ
ನಿಮ್ಮ (ಗ್ನಿ) ನ್ಯಾರು ಸಲಿಗ್ಯಾರು ೩೨

ಸಣ್ ಹುಂಡೆ ದೊಡ್ ಹುಂಡೆ ಕರ್ಣಕೇರಿಯ ಹುಂಡೆ
ಹಿಂಡಿನ ಒಡ(ವೆ?) ಕಡುಚೆಲ್ವೆ–ನೀ ಕೇಳೆ
ಒಬ್ಬರೊಂದಿವ್ಸ ಮೊಲೆಯೂಡಿ ೩೩

ಕಾಡದೆ ಕಚ್ಚದೆ ಆಯದಲಿ ಮೊಲೆಯೂಡಿ
ಬಾಲಯ್ಯ ಈಗ ಅರ್ತುಲ್ಲ–ಮೇಯ್ವಂತೆ
ಒಬ್ಬರೊಂದಿವ್ಸ ಮೊಲೆಯೂಡಿ ೩೪

ಹಟ್ಟಿ ಕೆಸರೆಂದು ಮೆಟ್ಟಿದೆ ಒಂದಿನ
ಕಟ್ಟಿದ್ ದಾಮಿಲ್ಲಿ ಹೊಡೆದಳು
ಹೊಡೆದಳ್ ನನ್ನೊಡತಿ ಅವ್ವ್
ಲಕ್ಷಣದಿಂದ ಹುಲಿಕಂಡೆ ೩೫

ಅಂಬಿ ಕಚ್ಚಿತೆಂದು ಒಂದಿನ ಮೆಟ್ಟಿದೆ
ಕರೆವ ಹಂಡೆಯಲಿ ಹೊಡೆದಳ್ ನನ್ನೊಡತಿ ಅವ್ವ್
ಲಕ್ಷಣದಿಂದ ಹುಲಿಕಂಡೆ ೩೬

ಹಾದಿ ಕೆಸರೆಂದು ಬೀದಿ ಬಿಸುಲೆಂದು
ಬಾರ್ದೆ ಒಂದಿರುಳು ಉಳಿದರೆ–ನನ್ನೊಡ್ತಿ
ಬಾರ್ದೆ ಹೋಗೆಂದು ಬೈವಳು ೩೭

ಇಂಬಿಯ ವನಗಳಿರ ತುಂಬಿದ ಕೊನಗಳಿರ
ಬಂದೀಗ ನೀವು ನಳಿವಳಿರ–ನೀವ್ ಕೇಳಿ
ನಿಮ್ಮ ಕೈಯೊಡನೆ ಮಗನಾದ ೩೮

ಇಂತಿನ ಬುದ್ಧಿಯ ಎಲ್ಲಾವು ಹೇಳ್ಯಾಳು
ಅದರಿಮದ ಮುಂದೆ ವನಕಾಗಿ–ಬರುವಾಗ
ಮೇದವಾದಿತ್ಯ ಮುಳುಗ್ಯಾವು ೩೯

ಇಲ್ಲಿದ್ದ್ ಹುಲಿರಾಯ್ನು ಎಲ್ಲಿಗೆ ಹೋದನು
ಎಲ್ಲಿಗೆ ಹೋಗಿ ಅಡಗಿದ್ನು–ಎನುತಲೆ
ಅಲ್ಲಿಯಾಗ ಕವಿಲೆ ಹುಡುಕ್ವಾಳು ೪೦

ಘಟ್ಟನ್ನೆ ಬಿಟ್ಟು ಹೆಬ್ಬೆಟ್ಟಲ್ಲಿ ಕುಳಿತಿದ್ದ
ಕೃಷ್ಣವನಾದ ಹುಲಿರಾಯ–ಕೇಳಯ್ಯ
ತಿನ್ನಯ್ಯ ಆಗ್ರ ಮನಹಾರ ೪೧

ಹಿಂದಾರು ತಿಂಗಳು ಆಲದಲ್ಲುಪವಾಸ
ಮುಂದಾರು ತಿಂಗ್ಳು ಉಪವಾಸವಿದ್ದ (ರೂ)
ಮುಟ್ಟೇನು ನಿನ್ನ ಪಶುತಾಯೆ ೪೨

ಪಶುಕಂಡು ಓಡದು ಹುಲಿ ಕಂಡು ತಿನ್ನದು
ಇದು ಏನು ಚೋದ್ಯ ಎನುತಲೆ–ಮೇಲಿರುವ
ಸುರರೆಲ್ಲ ನೋಡಿ ನಗುವರು ೪೩

ಇಂದ್ರಲೋಕದಿಂದ ಇಂದ್ರಕರ್ಣಿಕೆಯರು
ಗಂಧವಾಕ್ಷತೆಯ ಉದುಕವ–ತಕ್ಕೊಂಡು
ಬಂದರಾ ಕವಿಲೆ ಎದುರಾಗಿ ೪೪

ನಾಗಲೋಕದಿಂದ ನಾಗಕರ್ಣಿಕೆಯರು
ಹೂಗು ಅಕ್ಷತೆಯ ಉದುಕವ–ತಕ್ಕೊಂಡು
ಬಂದಾರ ಕವಿಲೆ ಎದುರಾಗಿ ೪೫

ಕಾಜಿನ ನೆಲೆಗಟ್ಟು ರಾಜಮಾಣಿಕ್ದ್ ಗೋಡೆ
ಮುತ್ತು ಮಾಣಿಕವ ಬಿಗಿದಿದ್ದ–ಕಂಭಕ್ಕೆ
ಕಟ್ಟಿದ್ರು ಕೆಂದೆ ಕವಿಲೆಯ ೪೬

ಕಟ್ಟುವವ್ರು ಕರೆವವ್ರು ಮುಟ್ಟಿಹಾಲ ಕಾಸುವವ್ರು
ಕೊಟ್ಟಿಗೆ ಸೆಗಣಿ ತೆಗೆವವ್ರು–ಸಹಿತಲೆ
ಬಂದರಾ ಕವಿಲೆ ಸ್ವರ್ಗಕ್ಕೆ ೪೭

ಕರೆವವ್ರು ಕಾಸುವವ್ರು ಕರುವನೆ ಹಿಡಿವವ್ರು
ಕರುವಿಗೆ ಸೆಗಣಿ ತೆಗೆವವ್ರು–ಸಹಿಸಲೆ
ಬಂದರಾ ಕವಿಲೆ ಸ್ವರ್ಗಕ್ಕೆ ೪೮

ಪುತ್ತಳನ ಕೊರಳಿಗೆ ಪಚ್ಚೆಯ ಡಾಬಿಕ್ಕಿ
ಅರ್ತ್ಯದಲಿ ಕಟ್ಟಿ ಅಲ್ಲಿದ್ದ–ಭೂಸುರರು
ಅತಿಮುದ್ದನೆಂದು ಹೆಸರಿಟ್ರು ೪೯

ಈ ಹಾಡ ಹೇಳ್‌ಲಿಕೆ ಯಾವ್‌ವಾ(ರ್‌ವೂ) ತೀರದು
ಆದಿತ್ಯವಾರ ಅಮವಾಸ್ಯ
ಅಮ್‌ವಾಶ್ಯಂಕ್ರಾಂತಿಯು
ಹೇಳ್ ಕೇಳ್‌ದವ್ರ್ ಪಾಪ ಪರಿಹಾರ ೫೦

ಪಾಪ ಪರಿಹಾರ ಮನದಾಪತ್ತು ಹಿಂಗ್ವವು
ಗೋಕರ್ಣ ಮೆಟ್ಟಿ ಕುಲಕ್ಷೇತ್ರ–ಕಾಶಿಯ
ತೀರ್ಥಮಿಂದಂತ ಫಲವಕ್ಕು ೫೧

* * * * *

ಗೌರಮ್ಮ ಅಪ್ಪನ ಮನೆಗೆ ಹೋದ ಹಾಡು

ಗಜಮುಖ ಗಣಪನ ತ್ರಿಜಗದಿ ವಂದಿಸಿ
ಅಜನ ರಾಣಿಯಳ ಬಲಗೊಂಡು–ಪೇಳುವೆ
ಗೌರಿಯ ಹಬ್ಬ ಮೊದಲೆಂದು ೧

ಇಂದು ಗೌರಿಯ ಹಬ್ಬ ತಂದೆ ಕರಿಯಲಿ ಬಂದ
ಚಂದ್ರಿಕೆ ಶೀರೆ ನೆರೆದುಟ್ಟು–ಗೌರಮ್ಮ
ತಂದೆಯ ಮನೆಗೆ ಅನುವಾದ್ಲು ೨

ಇಂದ್ಯಾರು ಕರೆದರು ಇನ್ನೆಲ್ಲಿ ಪಯಣವು
ಇಂದೆಲ್ಲಿಗ್ ಹೋಗ್ತೆ ಎಲೆ ಗೌರಿ ಎನುತಲೆ
ನಿಂದು ಈಶ್ವರರು ನುಡಿದರು ೩

ಅಪ್ಪಯ್ನ ಮನೆಯಲ್ಲಿ ಶುಕ್ರವಾರದ ಪೂಜೆ
ಹೊಕ್ಕು ಬರ್‌ತೇನೆ ದಿನ ಮೂರ್‍ಲಿ–ಎನುತಲೆ
ನಿತ್ತು ಗೌರಮ್ಮ ನುಡಿದಾಳೆ ೪

ಮಿತ್ರೆ ನೀ ಹೋದರೆ ಪುತ್ರ ಸಂಗಡ ಬರುವ
ಚಕ್ಕುಲಿಯ ಬೇಡಿ ಅಳುವನೆ–ಗಣಪಯ್ಯ
ಚಕ್ಕುಲಿ ನೀನೆಲ್ಲಿಂದ್ ಕೊಡಿತೀಯೊ ೫

ನಾರಿನೀ ಹೋದರೆ ಬಾಲಯ್ಯ ಸಂಗಡ ಬರುವ
ಹೋಳಿಗೆ ಬೇಡಿ ಅಳುವನು–ಗಣಪಯ್ಯ
ಹೋಳಿಗೆ ನೀನೆಲ್ಲಿಂದ್ ಕೊಡುತೀಯೊ ೬

ಚಕ್ಕುಲಿಯ ಬೇಡಿದ್ರೆ ಉಪ್ಪಿಟ್ಟ ಕೊಟ್ಟೇನೊ
ಅಚ್ಚೆಳ್ಳಿನ್ ಎಣ್ಣೆ ಎರೆದೇನು–ಈಶ್ವರರೆ
ಹೋಗ್ ಬರ್‍ತೆ ನನ್ನ ತೌರಿಗೆ ೭

ಹೋಳಿಗೆ ಬೇಡಿದ್ರೆ ಹುಳಿದೋಸೆ ಕೊಟ್ಟೇನು
ಹಾಲ ಬೇಡಿದ್ರೆ ಹನಿನೀರ–ಕೊಟ್ಟೇನು
ಹೋಗ್ ಬರ್ತೆ ನನ್ನ ತೌರಿಗೆ ೮

ಮಿತ್ರೆ ನೀ ಹೋದರೆ ಕೊಪ್ಪು ಸಡಲಿಸು
ಕೊಪ್ಪು ಬಂಗಾರ ಸಡಲಿಸು–ಗೌರಮ್ಮ
ಬಿಚ್ಚೋಲೆಯನಿಟ್ಟು ನಡಿಯೆಂದ್ರು ೯

ರಂಭೆ ನೀ ಹೋದರೆ ಬಂದೀ ಸಡಲಿಸು
ಬಂದಿ ಬಂಗಾರ ಸಡಲಿಸು–ಗೌರಮ್ಮ
ಕರಿಮಣಿಯ ಕಟ್ಟಿ ನಡಿಯೆಂದ್ರು ೧೦

ಮಿತ್ರೆ ಹಾದಿಯ ಮೆಟ್ಟಿ ಹೊಸ್ತಿಲ ಇಳಿವಾಗ
ಕೊಪ್ಪು ನೀನೆಲ್ಲಿ ಇರಿಸಿದ್ದೆ–ಎನುತಲೆ
ನಿತ್ತು ಈಶ್ವರರು ನುಡಿದರು ೧೧

ರಂಭೆ ಹಾದಿಯ ಮೆಟ್ಟಿ ಅಂಗಳ ಇಳಿವಾಗ
ಬಂದಿ ನೀನೆಲ್ಲಿ ಇರಿಸಿದ್ದೆ–ಎನುತಲೆ
ನಿಂದು ಈಶ್ವರರು ನುಡಿದರು ೧೨

ಉಪ್ಪರಿಗೆ ಒಳಗಿಂಕೆ ಪಟ್ಟೆಮಂಚದ ಅಡಿ
ಪೆಟ್ಟಿಗೆ ಒಳಗೆ ಇರಿಸಿದ್ದೆ–ಎನುತಲೆ
ನಿತ್ತು ಗೌರಮ್ಮ ನುಡಿದಾಳೆ ೧೩

ಚಾವಡಿಯ ಒಳಗಿಂಕೆ ತೂಗುಮಂಚದ ಅಡಿ
ಬಂದಿಯನಲ್ಲಿ ಇರಿಸಿದ್ದೆ–ಎನುತಲೆ
ನಿಂದು ಗೌರಮ್ಮ ನುಡಿದಾಳೆ ೧೪

ಮಿತ್ರೆ ನಿನ್ ತೌರಿಲ್ಲಿ ಆದ ತುಂಬೆಯ ಸೊಪ್ಪು
ಹೊಕ್ಕು ಬಾ ಮನವೆ ದಣಿವಷ್ಟು–ಎನುತಲೆ
ನಿತ್ತು ಈಶ್ವರರು ನುಡಿದರು ೧೫

ಹಿತ್ತಾಳಿ ಚಿನ್ನಕ್ಕು (ಇಟ್ಟಿ) ಬಂಗಾರಕ್ಕು
ಇಷ್ಟಕ್ ನನ್ ತೌರು ಬಡವರು–ಎನುತಲೆ
ನಿತ್ತು ಗೌರಮ್ಮ ನುಡಿದಾಳೆ ೧೬

ಕಟ್ಟುತ್ತ ಕರೆಯುತ್ತ ಪುತ್ರನ ತೂಗುತ್ತ
ಮಿತ್ರೆ ಗೌರಮ್ಮ ತೌರೂರ್ಗೆ
ತೌರೂರಿಗ್–ಹೋಗ್ವಾಗ
ಸೃಷ್ಟಿ ಮೇಲ್ ಎಲ್ಲೂ ತೆರವಿಲ್ಲ ೧೭

ಬಂದಳ್ ಗೌರಮ್ಮ (ಗೆ) ಗಿಂಡಿಗ್ಯಲುದುಕವ ತಂದು
ಗಂಧಾಕ್ಷತೆಯ ನವಿಲೆ
ನವಿಲೆಪು–ಷ್ಟಾಂಗವ
ತಂದಿಟ್ಟರವಳ ಕೆಲದಲ್ಲಿ ೧೮

ಕೊಡಿಯು ಬಾಳ್ಯವನ್ಹಾಕಿ ಹುಳಿಯು ಸಾಸುಮೆ ಬಳಸಿ
ಮಿಗಿಲಾಗಿ ತುಂಬ ಅವಳಿಗೆ
ಅವಳಿಗೆಂ–ದೆಡೆಮಾಡಿ
ಚಂದ್ರಶೇಖರನ ಮಡದಿಗೆ ೧೯

ಉಂಡಳೆ ಕೈ ತೊಳೆದಳೆ ಕೊಂಡಳೆ ಕೈವೀಳ್ಯವ
ಬಂದು ಆಡಿದವೆ ನವಿಲೆ
ನವಿಲೆ–ಪುಷ್ಟಾಂಗವ
ಚಂದ್ರಶೇಖರನ ಮಡದೀಯ ೨೦

ಓಲೆ ಕಂಠವ ಕೊಂಡು ಜಾಣ ಬಿನ್ನಯ ಬಂದ
ಕೂಡೆ ಮಾಲಿಂಗ ಕರೆ ಬಂದು
ಕರೆ ಬಂದ್–ಗೌರಮ್ಮನ
ಮೋಹದ ಹಿರಿಯ ಮಗ ಬಂದ ೨೧

ಹೊತ್ತು ಹೋಯಿತು ತಂದೆ ಮತ್ ನನ್ನ ಕಳುಗಿನಿ
ಸೃಷ್ಟಿಗೀಶ್ವರರು ಬೈವರು–ಎನುತಲೆ
ನಿತ್ತು ಗೌರಮ್ಮ ನುಡಿದಾಳೆ ೨೨

ಬಡವ್ರಿಗೆ ಹೆಣ್ಣುಗಳು ಹುಟ್ಟುವುದೆ ಅತಿಕ್ರಷ್ಟ
ದೊಡ್ಡವ್ರಿಗ್ ಕೊಡುದು ಬಲುಕ್ರಷ್ಟ
ಕೊಡುದು ಬಲುಕ್ರಷ್ಟ ಎಂದ್–ಗಿರಿರಾಯ
ಸೆಡಿದನೆ ಕಣ್ಣ ಜಲಗಳ ೨೩

ದೇವರ ಮುಂದಣ ಸಾಲೆರ್ದು ಮಣೆಹಾಕಿ
ನಾರಿ ಗೌರಮ್ಮನ ಮಡಿಲಿಗೆ
ಮಡಿಲಿಗ–ಕ್ರಿಯ ತುಂಬಿ
ಗಂಡನ ಮನೆಗೆ ಕಳುಗಿನಿ ೨೪

ದೂರಿಂದ ಬರುವಾಗ ಕಂಡರೆ ಈಶ್ವರರು
ನಾರಿ ಗೌರಮ್ಮ ತೌರಿಂದ
ತೌರೂರಿಂದ–ಬರುವಾಗ
ಅರೆಮುಗುಳು ನಗೆಯ ನಗುವರು ೨೫

ಹೋಗ ಬೇಡೆಂದರೆ ಕೇಳದೆ ನೀ ಹೋದೆ
ರಾಗಿಯ ರೊಟ್ಟಿ ಹನಿನೀರ–ಕುಡಿದೀಗ
ಬಾಲ ಗಣಪಯ್ಯ ಬಡಿಯಾದ ೨೬

ಅಕ್ಕ ನೀನ್ ತೌರಿಲ್ಲಿ ಅಷ್ಟೈಶ್ವರ್ಯದದೇನೆ
ಪುತ್ರರೈದಾರು ಮನೆಯಲ್ಲಿ–ಅಕ್ಕಮ್ಮ
ನಿತ್ಯಗ ನಿಮ್ಮ ನೆನೆವರು ೨೭

ನನಗೆ ಹೇಳುವುದಕ್ಕೆ ನೀನ್ಯಾರು ಮಗಳವ್ವ
ನೀನು ಅನ್ನಿಗರ ಮನೆಯಲ್ಲಿ
ಮನೆಯಲ್ಲಿ–ದ್ದಾಕೆಯ
ನಮ್ಮ ಈಶ್ವರರು ಕರೆತಂದ್ರು ೨೮

ಕಟ್ಟಲಿಗೆ ಕೊರಡಿಲ್ಲ ಕರೆಯುವುದಕೆ ಮಲಿಯಲ್ಲ
ಕೊಟ್ಟಿಗಿಗ್ ಹೋದsರೆ ಸಗಣಿಯಿಲ್ಲ–ಈಶ್ವರರ
ಮೆಚ್ಚಿ ಬಂದವಳ ಬಳುವಳಿ ೨೯

* * * * *

ಮಹಾಭಾರತ

ಪುಣ್ಯಸ್ತ್ರೀ ಕುಂತಿದೇವಿ ಹೆಣ್ಣಾಕ್ಕೆ ಹಡಿಲಿಲ್ಲೆ
ಅಣ್ಣಂದ್ರೈದ್ಮಂದಿ ಮರುಗ್ಯಾರು !

ಮಜ್ಜಾನ್ದ ಹೊತ್ತಿಲೂ ಗೆಜ್ಜೆಗ್ಯೆಲೆಂದವು
ವಜ್ರ ಪಾಂಡವರ ಗಯ್ದಿಲಿ – ಅಣ್ಣಯ್ಯ
ಮಜ್ಜಾನ್ದ ಬಲಿಗೆ ಹೊಯ್ಬರು

ಉಯ್ಯಾಲಾಡ್ಡನು ಬಿದ್ದ ಹೂಗುಕೊಯ್ದನು ಬಿದ್ದ
ಅಯ್ಯೋ ಸಿರಿಕಿಷ್ಣ ಅಳಿಬಿದ್ದ – ಸುದ್ದಿಕೇಂಡ್
ದಾಯ್ವಾದ್ರ್ ಕೈತಟ್ಟಿ ನೆಗುವರು

ಕರ್ಪ ಕಡಿಯುವುದುಂಟೆ ಭೀಮ ಬೇಡುವುದುಂಟೆ
ಸರ್ಪಗೆ ಬಾಲ ಎಯ್ದುಂಟೆ – ಪಾಂಡುವರ
ದರ್ಪ ಮೂರೂದುಂಟೆ ರಣದಲ್ಲಿ?

ಚಕ್ಕುಲಿ ಸತ್ವಾಂಗೆ ಚಕ್ರಭೀಮನ ಕ್ವಾಟಿ
ರಕ್ಕಸರ ಕ್ವಾಟಿ ರಣಬೀದಿ – ಒಳಗಲ್ಲಿ
ಹೊಕ್ಕು ಹೊಯ್ಕಿದನೆ ಅಭಿಮನ್ಯು !

ಪಂತಿಯಲಿ ಪರ್ಪಂಚು ಎಂಥವ್ಕೂ ಮಾಡೂಳ್
ಕುಂತಿದೇವಿ ತನ್ನ ಮಗನಿಗೆ – ಅರ್ಜುನಗೆ
ಪಂತಿಯಲಿ ಮಸರ ಎರದಳು !

ಪತಿವ್ರತಿ ದ್ರೌಪದಿಯ ವ್ರತುವ ಕೆಡಿಸಲಿಕೆಂದು
ಕೆಟ್ಟ ಕೀಚಕನ ಕಿರಿತಮ್ಮ – ದುಶ್ಯಾಸ್ನ
ಮುಟ್ಟಿ ದ್ರೌಪದಿಯು ಮುಡಿ ಬಿಚ್ಚಿ

ಬಾರಮ್ಮ ಜಗಲಿಗೆ ಕನಕಾಂಗಿ ಕಲ್ಯಾಣಿ
ಯಾರಕ್ಕ್ ನಿಂಗೆ ಪುರುಸನು?
ಕೌರವ್ರಿಗ್ ಕೊಟ್ಟರೆ ಗೇರೆಂಬ್ರ್ ಗೆಡ್ಸೆಂಬ್ರ್
ಅರ್ಜುನನ ಮಗನೇ ಅಭಿಮನ್ಯುಗ್ – ಕೊಟ್ಟರ
ಒರಗುವಿ ಹಾಸ್ಗಿಲ್ ಹಾಲುಂಡು

ಎಪ್ಪತ್ತೇಳು ರಾಜ್ಯ ತಿರ್ಗ್ದ ಅರ್ಜುನ ಸ್ವಾಮಿ
ಒಪ್ಪಿ ಪ್ರಮೀಳಿ ಸೆರಿಯೊಳಗೆ – ಅರ್ಜುನ ಸ್ವಾಮಿ
ತಪ್ಪು ಉಪಾಯ ಹುಡುಕೂರು !

ಬಂತಲೇ ಬಡತನು ಪಂಚಪಾಂಡವ್ರಿಗೂ
ಕುಂತಿದೇವಿ ಪಡೆದ ಮಗನ–ಅಣ್ಣಯ್ಯಂಗೂ
ಬಂತೇ ಬಡತನವು ನಿಜವಾಗ್ಲೂ !

ಕನ್ನಡಿ ಕಂಡರೂ ಕಣ್ಣುಬ್ಬು ಎಯ್ಡಂಗ
ಕನ್ನಡಿಯೊಳಗೆ ಚದುರಂಗ – ದ್ರೌಪದಿ
ಚೆನ್ನಿ ಆಡಿದಳೆ ಪಗ್ಡಿಯ

ಪುಣ್ಯಸ್ತ್ರೀ ಕುಂತಿದೇವಿ ಹೆಣ್ಣ್ಯಾಕೆ ಹಡಿಲಿಲ್ಲೆ
ಅಣ್ಣಂದ್ರೈದ್ಮಂದಿ ಮರುಗ್ಯಾರು

ಸತ್ತದ್ದನ್ ತರಬ್ಯಾಡಿ ಜೀವಿದ್ದನ್ ಕೊಲ್ಬ್ಯಾಡಿ
ಮಾಂಸಿಲ್ದೆ ಮನಿಗೆ ಬರಬ್ಯಾಡಿ – ಅರ್ಜುನ್ ಸ್ವಾಮಿ
ಮಾಂಸಿಲ್ದೆ ಊಂಟು ಉಣಲಾರಿ

ಅರ್ಜುನ ಸ್ವಾಮಿಯೇ ಕಟ್ಟಿಮ್ಯಾಲ್ ಕೂತಿರಿ
ಹಾರ್ತಿಪ್ಪು ಮಿಗುನ ಹೊಡ್ಕೊಡಿ – ನಾ ನಿಮ್ಮ
ಸ್ವಾದರತ್ತಿಯ ಮಗಳಾಪಿ !

ಹಾಡಿ ಉಂಡವ ಕೆಟ್ಟ ಕೇಡ ನೆನದವ ಕೆಟ್ಟ
ನೋಡದೆ ಕೆಟ್ಟ ಬೆಳುಭೂಮಿ – ಸ್ವಾದರ
ಹೆಣ್ತಂದು ಕೆಟ್ಟ ಅಭಿಮನ್ಯು !

ಪಂತಕ್ಕೆ ಪಗ್ಡಿಯಾಡಿ ಪಾಂಡವ್ರ್ ಕೌರವರು
ಸೋತು ಪಾಂಡವ್ರ್ ವನಕ್ಹೋಪ–ಸಮಯಕೆ
ಸತಿ ಹೋಯಿ ಸೆರಗ ಹಿಡಿದಳು – ಏನೆಂದು
ಸತ್ಗಿ ನೆಳಲಡ್ಡೆ ನಾ ಬತ್ತಿ
ಹೊಟ್ಟ್ಯಗೆ ಆರ್ ತಿಂಗ್ಳ್ ಬಪ್ಪುಕೆ ಬರಲಕ್ಕು
ಪುತ್ರಯ್ನ ಎಲ್ಲಿ ಸಲಗುವಿ?
ಅತ್ತಿಯ ಮರನಡಿ ಹೆತ್ತು ತೊಟ್ಟಿಲ ಕಟ್ಟಿ
ಮುತ್ತುಗದ ಎಲಿನೇ ಮುರ್ದ್ಹಾಸಿ–ಪಾಂಡವರೆ
ಪುತ್ರಯ್ನ ಅಲ್ಲೇ ಸಲಗುವಿ.

* * * * *

ಭಾಗವತ

ಗೋಕುಲದೊಳಗೆಲ್ಲ ಏನೆಲ್ಲ ಐಭೋಗ
ಗೋಕುಲದ ಕಿಷ್ಣ ಕೊಳಲೂದಿ–ಬಪ್ಪಂಗೆ
ಗೋಪಿಯರಾರ್ತಿ ಅನುಮಾಡಿ

ಸುಕ್ರ್‌ವಾರ್ದ್ ದಿನ್ದಂಗೆ ರುಕ್ಮಿಣಿ ಹುಟ್ದಳೆಂದು
ಹೆಣ್ಕೇಂಬೂಕ್ ಬಂದ ಮುನಿಪನು–ಮೂರ್‌ಲೋಕ
ಮಿಕ್ಕ ದೊಡ್ಡನಿಗೆ ಕೊಡಿ ಎಂದು

ಪಾರಿಜಾತದ ಹೂಗ್ ಪಾಂಡವ್ರಿಗ್ ಅತಿಪಿರಿಯ
ತೆರಿಯಡ್ಡೆ ತಂದ್ರ್ ಕಿಷ್ಟ್‌ದೇವ್ರು – ಆ ಹೂಗ
ಮರಿಯಡ್ಡೆ ಭಾಮಿಗ್ ಕೊಡುವರು

ಗೋಕುಲದೊಳಗೆಲ್ಲ ಏನೆಲ್ಲ ಐಭೋಗ
ಗೋಕುಲದ ಕಿಷ್ಣ ಕೊಳಲೂದಿ–ಬಪ್ಪಂಗೆ
ಗೋಪಿಯರಾರ್ತಿ ಅನುಮಾಡಿ

ಇತಿಹಾಸ

ಬಾಳಿಯ ಹಣ್ಣುಂಟು ಬಾರ್ಕೂರಿಗ್ಹೋಗ್ ಜೋಗಿ
ಬೇಡಿ ತಿಂಬಷ್ಟು ಮನಿಯುಂಟು – ಎಲೆಜೋಗಿ
ಉಳ್ಕಂಬ್ಕೆ ಉಂಟು ದೇವಲ್ಯ

ಬಾರ್ಕೂರೆಂಬುದೆಲ್ಲಿ ಬಸವ ಪಟ್ಟಣವೆಲ್ಲಿ
ಆ ರಾಜ್ಯವೆಲ್ಲಿ ಅರಸೆಲ್ಲಿ – ಮಗುವಿಗೆ
ಹಾರಿ ಬಂದುಂಬೂ ಮನಿಯೆಲ್ಲಿ?

ಬಸುರೂರು ಎಂಬುದು ಹೆಸರಾದ ಪಟ್ಟಣ
ಹಸಿದ್ಯಾಕೆ ಬಂದಿ ಹೆರಿಯಣ್ಣ – ಬಾರಣ್ಣ
ಕುಸಿಯಾಯಿ ಹೆರಗೆ ಹೋಗಣ್ಣ

ಬಾರಕೊರೆಂಬುದು ಭಾರಿದೊಡ್ಡ್ ಪಟ್ಟಣ
ವಾಲಗವೆಲ್ಲೂ ಮಠುವೆಲ್ಲೂ – ಮಾದಯ್ನ
ನೀರ್‌ಕುಡುವ ಆನಿ ಕೆರಿ ಎಲ್ಲೂ !

ಬಾಳಿಯ ಹಣ್ಣುಂಟು ಬಾರ್ಕೂರಿಗ್ಹೋಗ್ ಜೋಗಿ
ಬೇಡಿ ತಿಂಬಷ್ಟು ಮನಿಯುಂಟು – ಎಲೆ ಜೋಗಿ
ಉಳ್ಕಂಬ್ಕೆ ಉಂಟು ದೇವಲ್ಯ

ಒಗಟು

ಬಗಲಿಲ್ಲ ಕಕ್ಕುವುದು ಬಾಯಲ್ಲಿ ತಿಂಬೂದು
ನಂಗ್ಹೇಳಿ ಅರ್ಥು ಈ ಹಾಡ – ಹೇಳ್ದಿರೆ
ಕೈಗೆ ಹಲ್ಲ್ ಮುರ್ದು ಕೊಡುವೆನು !

ಕಲ್ಲಲ್ ಕುಕ್ಕೂದಲ್ಲ ನೀರಲ್ ಸೆಳುವುದಲ್ಲ
ಎಲ್ಲೆಲ್ಲೂ ಕಂಡ್ರೂ ಮಡಿವಸ್ತ್ರ – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಕೊಕ್ಕನ್ಹಕ್ಕಿ ಮ್ಯಾಲೆ ಅರ್ಥುಂಟಾ?

ಕಟ್ಟಿ ಕಟ್ಟುವುದಲ್ಲ ನೀರ ಎರುವುದಲ್ಲ
ಎಲ್ಲೆಲ್ಲೂ ಕಂಡ್ರೂ ಹೊಸಹೂಗು – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಕಿಸ್ಕಾರ್ಹೂಗಿನ ಮ್ಯಾಲೆ ಅರ್ಥುಂಟಾ?

ಬಲ್ಲಿದ್ಹಂದ ನಿಜವಾಗ್ಲೂ ಬಡವ ಕಟ್ಟಿದ್ಮನಿಗೆ
ಮಾಲ್ಹುಲ್ಲ ಹಾಸಿ ಬಲಿಬಂದು – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಅಕ್ಕಿಮುಡಿ ಮುಂದೆ ಅರ್ಥುಂಟಾ?

ತಂದಿ ಮದಿಗ್ಹೋಪ್ದಲ್ಲ ತಾಯ್ಮನಿಗೆ ಹೋಪ್ದಲ್ಲ
ಮುಂದದು ಧಾರಿ ಮೂರುತಕ – ಅಂಬಲ್‌ಹಾಡು
ಜಾಣಿ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಸಂಪ್ಗಿ ಹೂಗಿನ ಮುಂದೆ ಅರ್ತುಂಟಾ?

ತಂದಿ ಮದಿಗ್ಹೋಪುದಲ್ಲ ತಾಯ್ಮದಿಗ್ ಹೋಪುದಲ್ಲ
ಮದಿಗ್ಹೋಪುದು ಗರ್ಬು ಹೊಟ್ಟಿಯ – ಅಂಬಲ್‌ಹಾಡು
ಜಾಣಿ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಸಿಂಗಾರ್ಹೂಗಿನ ಮುಂದೆ ಅರ್ತುಂಟಾ?

ದರಿಯ ಮ್ಯಾಲ್ ಹುಟ್ಟುವುದು ದೊರಿಯಾಯಿ ಬೆಳುವುದು
ಅರಮನಿಗುತ್ತರವ ಕೊಡುವುದ – ಅಂಬಲ್‌ಹಾಡು
ಜಾಣಿ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಹನಿಮರನಲ್ದೆ ಅರ್ತುಂಟಾ?

ದಾರಿಮ್ಯಾಲೆ ಹುಟ್ಟುವುದು ದಾರಿಮ್ಯಾಲ್ ಬೆಳೆವುದು
ದಾರಿಕಾರಣ್ಣ್ನ ನಿಲುಸುವುದು – ಅಂಬಲ್‌ಹಾಡು
ಜಾಣಿ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಸೂರಿಮುಳ್ಳಲ್ದೆ ಅರ್ತುಂಟಾ?

ಅಂಗ್ಳದಲ್ಹುಟ್ಟುವುದು ಅಂಗ್ಳದಲ್ ಬೆಳುವುದು
ಉಳಿಸುವುದು ಹಲವು ಮಕ್ಕಳ – ಅಂಬಲ್‌ಹಾಡು
ಜಾಣಿ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡ ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಕೋಳಿಮರಿಯಲ್ದೆ ಅರ್ತುಂಟಾ?

ಅಂಗಯ್ಯ ಚೆಂದಕ್ಕೆ ಮುಂಗೈಯನುಂಗಿದ
ಸಿಂಗಳ್ಕನಲ್ಲ ಶಿವನಲ್ಲ – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡ ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ರವಿಕೆಯಲ್ಲದೆ ಅರ್ತುಂಟಾ?

ಸಪ್ಪೇರಿ ಬೆಳುವುದು ಬಾವಿಯ ಕಟ್ಟಲಿ
ಉಪ್ಪಿನ ಹಂಗೇ ಅದ್ಕಿಲ್ಲೆ – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡ ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಎಲೆಬಳ್ಳಿ ಅಲ್ದೆ ಅರ್ತುಂಟಾ?

ಹಸಿಯ ಹಸಿಯ ಬೀಳೆ ಮಸಿಯ ಬಣ್ಣದ ಬೀಳೆ
ಬಿಸಿನೀರ ಹಾಕಿ ಸಲಗುವಿ – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡ ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ತಲಿಕುರ್ಲಲ್ದೆ ಅತುಂಟಾ?

ಕಣಿಕಣಿ ಬ್ಯಾಳಿ ಮಾಡಿ ಪಿಣಿಪಿಣಿ ನೀರ್‌ಬಿಟ್ಟು
ಬೆಳಕಿನಲಿ ಅಲ್ಲೇ ಬೆಳದಾನು –ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡ ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ಬೆಳ್ಳುಳ್ಳಿ ಅಲ್ದೆ ಅರ್ತುಂಟಾ?

ಹಿತ್ತಿಲಲ್ಲಿರುವುದು ಸೊಪ್ಪಿನ್ಹಾಂಗ್ ಬೆಳೆವುದು
ಬೀಂಜಕ್ಕೂ ಬೀಳ ಇಡುವರು – ಅಂಬಲ್‌ಹಾಡು
ಜಾಣೆ ಕನ್ನಡವ ತಿಳಿದ್ಹೇಳು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡು
ತೊಂಡಿ ಬೀಳಲ್ದೆ ಅರ್ತುಂಟಾ?

ಬಗಲಲ್ಲಿ ಕುಕ್ಕುವುದು ಬಾಯಲ್ಲಿ ತಿಂಬೂದು
ನಂಗ್ಹೇಳಿ ಅರ್ತು ಈ ಹಾಡಿನ – ಹೇಳ್ದಿರೆ
ಕೈಗೆ ಹಲ್ಲ್‌ಮುರ್ದ್ ಕೊಡುವೆನು

ಕನ್ನಡದ ಹಾಡನ್ನು ಹನ್ನೆಯ್ಡು ನಾ ಬಲ್ಲಿ
ಕನ್ನಡದ ಶಿವನ ಪದನವು – ಅಂಬಲ್‌ಹಾಡಾ
ಬೀಸುಕಲ್ಲಲ್ದೆ ಅರ್ತುಂಟಾ?

* * * * *

ಲೋಕಾನುಭವ

ನಿದ್ದಿಗೆ ಮದ್ದುಂಟೆ ಬುದ್ಧಿಗೆ ಕೇಡುಂಟೆ
ಇದ್ದ ಬಲ್ಲವಗೆ ಭಯವುಂಟೆ–ದೇವರೆ
ಮದ್ದುಂಟೆ ಜನನ ಮರಣಕ್ಕೆ !

ದೇವ್ರ ಕಾಂಬ್ಕೆಂದ್ಹೇಳಿ ದೇವಲ್ಯಕ್ ನಾ ಹೋದಿ
ದೇವ್ರು ಅದರ ಒಳಗಿಲ್ಲೆ – ಪೂಜಿಗೆ
ದೇವರೆ ಯಾರ ಹಿಡಿಯಲಿ !

ಆನಿಗುಡ್ಡಿಯ ದೇವ್ರು ಮಾಡೊಡ್ಡ ಮನಿಸರು
ಆನಿಕಳಿಸಿದರೂ ಬರಲಿಲ್ಲೆ – ಬಾಳಿಯ
ಕೊನಿಯ ಕಳಿಸಿದರೆ ಬರುವರು

ಕಣ್ಣುಕಾಣದ ಪಕ್ಷಿ ಹಣ್ಣುಳ್ಳ ಮರಕ್ಹೋಯಿ
ಹೆಣ್ಣೆಂದು ಮೆದ್ದು ಹಸಿಕಾಯ – ಆ ಪಕ್ಷಿ
ಹಣೆನೀರ ಕುಡಿತು ಹಾಲೆಂದು

ನಿದ್ದಿ ಬಾರದ ಕಣ್ಗೆ ಮದ್ದ್ಯಾರು ಬಲ್ಲರು
ಗೆದ್ದಿಯ ಬದಿಯ ಗುರುಗನ – ಕೊಡಿತಂದು
ಭದ್ರಿ, ಕಾಡಿಗಿಯ ಹಿಡಿದ್ಹಚ್ಚು

ಸವತಿಯ ಮಕ್ಕಳು ಅವಸರಕೆ ಆಪರೇ
ಜಗತಿಯ ಬಿತ್ತಿ ಬೆಳೆವರೇ – ತೊಟ್ಟಿಲ
ಮಗುವೆತ್ತಿ ಮುದ್ದು ಕರುವರೇ

ಮಗನಲ್ಲ ಕುಲಗೇಡಿ ಎಳಗರು ಎತ್ತಲ್ಲ
ಜಗಳಾಡುವವಳು ಸೊಸಿಯಲ್ಲ – ತವರ್ಮನಿಯ
ಹೋಗ್ವವಳು ಜರಿದು ಮಗಳಲ್ಲ

ಮಗಳ ಮಕ್ಕಳಿಗಿಂತ ಮಗನ ಮಕ್ಕಳೆ ಲೇಸು
ಮಗಳೆ ನಿನಗಿಂತ ಸೊಸಿಲೇಸು – ಮುತ್ತಿನ
ನಗಕಿಂತ ಲೇಸು ಕರಿಮಣಿ

ಅತ್ತಿಗಿ ತಾಯಲ್ಲ ಹಿತ್ತಾಳಿ ಚಿನ್ನಲ್ಲ
ಮತ್ತೆ ಬಂದಳ್ಕ ಮರನಲ್ಲ – ಹೆಣ್ಣಿಗೆ
ಹುಟ್ಟಿದ ಮನಿಯು ನಿಜವಲ್ಲ

ಹಣ್ಣು ಹಾಲಿಗಿಂತ ಬೆಣ್ಣೆ ತುಪ್ಪಕ್ಕಿಂತ
ಚೆನ್ನಾಯಿ ಕಳಿತ ರಸಬಾಳಿ – ಹಣ್ಗಿಂತ
ಚೆನ್ನಮ್ಮ ತಾಯ ಎದಿಹಾಲು

ಹಾಡಿಗೆ ಹಾಡಿಲ್ಲೆ ಏಡಿಗೆ ತಲಿಯಿಲ್ಲೆ
ಮೋಡ ಬಂದಲ್ಲಿ ಬಿಸಿಲಿಲ್ಲೆ – ಹೆಣ್ಣಿಗೆ
ಓಡಿಹೋದಲ್ಲಿ ಸುಕುವಿಲ್ಲೆ

ಮುಗಿಲ ಮ್ಯಾಲಿನ ಚಿಕ್ಕಿ ಹಗಲು ಮೂಡಿದರೇನು
ಅಗಲಿ ಇಪ್ಪವರ ಗೊಡವ್ಯೇನು – ಮಾಣಿಕ್ಯ
ಹಾವಿನ್ ಬದಿಲಿದ್ದು ಫಲುವೇನು

ಕಾಳಿ ತಂದಿನೆಂತ ಕಡುದುಃಖಪಡಬ್ಯಾಡ
ಹೆಲಸಿನ ಹಣ್ಣು ಮೈಮುಳ್ಳು – ಆದರೆ
ಕಾಣದನು ಸವಿದು ಕಡುರುಚಿಯ

ತಂಬಿಟ್ಟಿಗುಪ್ಪುಂಟೆ ತವರಿಗೆ ಮುಪ್ಪುಂಟೆ
ಡೊಂಬಳ ಮನಿಗೆ ಕದವುಂಟೇ – ಸೂಳಿಯ
ನಂಬಿದವಗುಂಟೇ ಸಂಸಾರ !

ಗಂಡನ ಹಿತುವೇನು ಕೆಂಡದ ತಂಪೇನು
ಕೊಂಡ ಮಜ್ಜಿಗಿ ರುಚಿಯೇನು – ಎಲೆಗೆಳಿಯ
ಭಂಡಾಗಿ ಬದುಕಿ ಫಲುವೇನು

ಮಕ್ಕಾಸಿಯುಳ್ಳವಗೆ ಮಕ್ಕ ಕೊಡನು ದೇವ
ಮಕ್ಕು ಬ್ಯಾಡೆಂದು ತಿರಿದುಂಬು – ಬಡವಂಗೆ
ಮಕ್ಕಳ ಕೊಡುವ ಮನಿತುಂಬ

ಉಡಲಕ್ಕು ಸೇರಿಸಿ ಸೀರಿಯು ಹರಿದರೆ
ಮಡದಿ ತಪ್ಪಿದರೆ ತರಲಕ್ಕು – ಅಣ್ಣಯ್ಯ
ಒಡಹುಟ್ಟನೆಲ್ಲಿ ತಪ್ಪಿಯೋ

ಕೆಂಪಿನ ಹೆಣ್ಣಿಗೂ ಸಂಪಿಗಿ ಹೂಗಿಗೂ
ಅಂತರಾಳದ ದ್ವಾರಿ ಹುಣಸಿಯ – ಹಣ್ಣಿಗೂ
ಎಂಥೋರೂ ಬಾಯ ಬಿಡುವರು

ಕಣ್ಗೆ ಕಾಡಿಗಿ ಮೇಲು ಹೆಣ್ಗೆ ಯೌವನ ಮೇಲು
ಬಣ್ಣಕ್ಕೆ ಮೇಲು ಗುರುಗುಂಜಿ – ಅಣ್ಣಯ್ಯ
ಗುಣದಲ್ಲಿ ಮೇಲು ಜನಿವಾರು

ಮಕ್ಕಳಾಟಿಕಿ ಚೆಂದೊ ಮತ್ತೆ ಯೌವನ ಚೆಂದೊ
ಮತ್ತಿನ್ನು ಚೆಂದೊ ನರಿಗಡ್ಡ – ಲೋಕದಿ
ಎತ್ತ ನೋಡಿದರೂ ನೆಗಿ ಚೆಂದೊ

ಕಾಕಿಕೂಳ್ ಬಾಂಗ್ತ್ತ್ ಗುಬ್ಬಿನೀರ್ ತತ್ತ್
ಸಾಗರದ ಕೆಪ್ಪಿ ಸದಿಒಡಗಿ – ನಮ್ಮನಿಯ
ನಾಗಮ್ಮ ಹೆರಗೆ ನಿಂತಳು !

ಮಾತಿಗೆ ಮಾತುಂಟು ಮಾತಿಗೆ ಸಮ್ಮಾನುಂಟು
ಪಾತಾಳಗುಂಡಿಗೆ ನೆಲಿಯುಂಟು – ಹೆಣ್ಣಿನ್‌ಕೈಲಿ
ಮಾತಾಡಿ ಗೆಲುವ ಗಣಸುಂಟೆ !

ಅಕ್ಕ ಇದ್ದರೆ ಭಾವ ರೊಕ್ಕ ಇದ್ದರೆ ಸಂತಿ
ಮಕ್ಕಳಿದ್ದರೆ ಮನಿಮಾರು – ಮಾವಯ್ನ
ಒಕ್ಕಲಿದ್ದರೆ ದೌಲತ್ತು !

ಕೇಳು ಕೇಳ್ಹೆಣ್ಣೆ ಕೋಳಿ ಹುಲ್ಮೇವುದ
ಸೂಳಿ ಸಜ್ಜನಿಕಿ ಕಲುವಳಾ – ಚೆನ್ನಿಗರು
ಗುಳ್ಳದ ಹೂಗ ಮುಡುವರಾ

ಗಾಳಿಗೆ ಗರ್ಬುಂಟಾ ಸೂಳಿಗೆ ನಾಚ್ಕೆ ಉಂಟಾ
ನೆಳಲುಂಟಾ ಸೂರಿದೇವ್ರಿಗೆ – ಅತ್ತಿಹೂಗ
ಕಂಡವರುಂಟಾ ಜನರಲ್ಲಿ

ಹೆಣ್ಣೇ ನಿನ್ನಿಂದ ಕಾಮನ ಕತಿಯಾದೊ
ಹುಣ್ಣಿ ನಿನ್ನಿಂದ ಬೆಳಕಾದೊ – ಬೆಳ್ಳುಳ್ಳಿ
ಊಂಟ್‌ವೇ ನಿನ್ನಿಂದ ರುಚಿಯಾದೋ

ಕಣುಕು ಮಿಣುಕು ಸಲ್ಲ ಕೊಳಕು ಮ್ಯಾದಲಿ ಸಲ್ಲ
ಹೆಣ್ಣಿಗೆ ಸಲ್ಲ ನೆರಮನಿ – ಬಸುರೂರ
ಸೂಳಿಗೆ ಸಲ್ಲ ಗಂಡ್ಸ್‌ಮನಿ

ರಟ್ಟೆಯೆಯ್ದಿದ್ದರೆ ಇತ್ತೆ ಬಾಯೆಂಬರು
ರಟ್ಟೆಯೆ ಮುರದಿ ಮರುವರ್ಸ – ಅಣ್ಣಯ್ಯ
ಕೆಟ್ಟಿ ನೀನ್ಯಾರ ಮಗಳೆಂಬ !

ಹೊತ್ತು ಸುಡುವುದಕೆ ಗಂಡುಮಕ್ಕಳು ಬೇಕು
ನಿತ್ತು ಮರುಗೂಕೆ ಮಗ್ಳಬೇಕು – ಗ್ವಾಕ್ರಣಲಿ
ಅಸ್ಥಿ ಬಿಡುವುದಕೆ ಅಳಿಬೇಕು

ಬಡವಂಗೆ ಒಂದೆತ್ತು ಬಲ್ಲಿದಗೆಯ್ಡತ್ತು
ಒಡಿಯ ಗೋಯಿಂದಗ್ಹಲವೆತ್ತು – ಬ್ಯಾಸಾಯ
ಹೂಡಿ ಬಿತ್ತಿದರು ತೊಳಸಿನ

ಕಳ್ಳುಕುಡುಕನ ಮಾತು ಸುಳ್ಳೇನು ಬದ್ದೇನು
ಗುಳ್ಳಿಯ ತಿಂಬ ಹೊಲಿಯನ – ಮಾತಿಗ್ಹೋರೆ
ಎಳ್ಳಷ್ಟೂ ಮಾನೊ ಉಳಿಲಾರ್ದು

ಗಂಡ ಆಡಿದ ಮಾತು ಕೊಂಡಳು ಮೂರ್‌ಲೋಕ್ವ
ಮುಂಡ್ಕನ ಕಾಯಿ ಹೆಲಸೆಂದು – ಎಲೆನಾರಿ
ಬೆಂಡವೆ ಹೊರತು ಸೂಳಿಯುಂಟಾ?

ಕಾಕಿಯು ಕರದರೆ ಲೋಕದ ಬಿದ್ನರ್ ಬಪ್ಪ್ರ
ಬೆಂಕಿ ಕರದರೆ ಹಸಿ ಊಂಟೊ – ಗಾವಳಿಗೆ
ಹೂಗಿನ ಕಾಲ ಅಳಿಬಪ್ಪ!

ಹೆಣ್ಣಾಯಿ ಹುಟ್ವಲ್ಲಿ ಮಣ್ಣಾಯಿ ಹುಟ್ಟಿರೆ
ಮಣ್ಣ ಮ್ಯಾಲೊಂದು ಚಂಪ್ತಿಯ ಗಿಡುಹುಟ್ಟಿ
ತಣ್ಣೊಗ್ಗೊಂದು ಹಣ್ಣ ತಿನಲಕ್ಕು!

ಹೆಣ್ಣಿನ ಗೋಳ್ಹೊಡದು ಹೊನ್ನಿಯ ಮರಬೆಂತು
ಹನ್ನೆಯ್ಡ್ ಸಾಯಿರದ ಎಲಿತಾಳಿ – ಉಡುಪಿಯ
ಸಂನ್ಯಾಸಿ ಕೂತ ಮಠು ಬೆಂತು !

ನೀರುಕಂಡಲ್ಲ್ ನಾಮೊ ಅಕ್ಕಿಕಂಡಲ್ಲಗಡುಗಿ
ನಾರಿ ಕಂಡಲ್ಲಿ ಅನುಮಾನೋ !

ದೊಡ್ಡಸ್ತಿಕ್ಕ ಬಂದಾಗ ದೊಡ್ಡ್‌ದೊಡ್ಡ ನೆಂಟರು
ಬಡವಾಗಣ್ಣಯ್ಯ ಕೆಡುವಂಗೆ – ಆ ಊರ
ಗಿಡು ಸಹ ತಾನು ನೆಗುವುದು

ಹಸಿವಿಗಿಲ್ಲದ ಊಂಟು ಬಿಸಿಲಿಗಿಲ್ಲದ ಕೊಡಿ
ದುಸ್ಮನನೊಡನೆ ಇಸ್ವಾಸೊ – ಅಂತ್ವೇಳಿ
ಬಿಸ್ಲಲ್ವೆದ್ದಾರಿ ಹಿಡುವುದು

ತುಂಬಿ ತರಿಯಲು ಬ್ಯಾಡ ತೆಂಗಿನ ಮರವನ್ನು
ನಂಬಲೇ ಬ್ಯಾಡ ಗಣಸಿನ – ಈ ಊರ
ನಂಬ್ದವ್ವ್ ಮಗಳೇ ಕೆಡುವಳು !

ಕೆಡುವುದಾ ಮುಗ್ಗಿದರೆ ಸುಗ್ಗಿ ಅಕ್ಕಿಯ ಅನ್ನು
ದೊಡ್ಡೋರ್ವೆಂಡಿರಿಗೆ ಬಡತನು – ಬಂದರೆ
ದೊಡ್ಡಸ್ತಿಕ್ಕ ಹೆಸರು ಮರುವುದಾ?

ನಿದ್ದಿಗೆ ಮದ್ದುಂಟೆ ಬುದ್ಧಿಗೆ ಕೇಡುಂಟೆ
ಇದ್ಯ ಬಲ್ಲವಗೆ ಭಯವುಂಟೆ – ದೇವರೆ
ಮದ್ದುಂಟೆ ಜನನ ಮರಣಕ್ಕೆ !

* * * * *

ಅನುಬಂಧ

ಒಡ್ಹುಟ್ಟು ಇಲ್ದಿರ್‌ಮ್ಯಾಲೆ ಇರ್ಬಾರ್ದು ಈ ಜೀಂವ
ಒಡ್ಲೊಳಗೆ ಎಯ್ದು ಸಿಸುಗಳು – ಇಲ್‌ದ್ಮ್ಯಾಲೆ
ಸುಡುನಾರಿ ನಿನ್ನ ಹೆಣ್ಣ್‌ಜಲ್ಮ

ಸತ್ತ್ಮರ ಚಿಗುರ್ವುದಾ ಬಿದ್ಮರ ಬೇರೊಯ್ವುದಾ
ಸತ್ತುಹೋದವರು ಬರುವರಾ – ತಾಯಮ್ಮ
ಸತ್ತವರಿಗೆಷ್ಟು ಮರುಗೂದು?

ಒಡವಿಯ ಮಕ್ಕಳು ನಡದು ಬಪ್ಪುದು ಚೆಂದೊ
ನಡದಾಡಿ ದೂಳ ಹೊಯ್ಕಂಡ್ – ಬಪ್ಪಂಗೆ
ಒಡವಿಯ ದುಃಖ ದೂರಕ್ಕು

ಉಡುದಾರ ಉಂಗಿಲು ಮಾಡ್ಸ್‌ಬವ್ದಿ ಮುರಿದರೆ
ಮಡದಿ ಸತ್ತ್ರವಳ ತರಬವ್ದು – ಸಿಕ್ಕಾರು
ಪಡದಂಥ ತಂದಿ ತಾಯೆಲ್ಲಿ?

ಒಡವಿ ಆಡಿದ ಮಾತು ಅಡಿಗಡಿಗೆ ಬ್ಯಾಸರ
ಒಡವಿ ಇಟ್ಟವ್ವು ಒನಿಒನಿದು – ಹೇಳಿದರೆ
ನುಡಿನುಡಿಗೆ ಬಾಯ ಬಿಡುವರು !

ಅಟ್ಟಡಿಗಿ ಅಳಿಯಂಗೆ ಇಟ್ಟನೀರ್ ನೆಂಟಂಗೆ
ಪೆಟ್ಟಿಗಿ ಚಿನ್ನು ಮಗಳಿಂಗೆ – ನಾಳ್ಬಬಪ್ಪು
ಪತ್ರದ ಸಾಲ ಮಗನಿಗೆ !

ಆಲಕ್ಕೆ ಹೂಗಿಲ್ಲೆ ಸಾಲಕ್ಕೆ ಕೊನಿಯಿಲ್ಲೆ
ಜಾಲಿಯ ಮರಕೆ ನೆರಳಿಲ್ಲೆ – ನನ್‌ಮಗಳೇ
ತಾಯಿಯ ಮನಿಯು ಸ್ಥಿರುವಲ್ಲ

ಎಂಕೆಂಕ್ಲು ಮಲ್ಲಿಗಿ ಗೊಂಚ್ಲಿನ ಸ್ಯಾಮಂತ್ಗಿ
ಎಂಕ್ಲ್ ಕೊಂಡೊರಗೂ ಕಿಸ್ಕಾರ – ಹಣ್ಣಿನ
ಎಂಕ್ಲಿಗೇ ಬಾಯ ಬಿಡುವರು

ತೆಂಕಬೀದಿಯ ಮ್ಯಾಲೆ ತಿರ್ಪತಿ ರಾಜ್ಯದಲಿ
ತೆಂಬಿನ ಫಲವ ನೆಡಸಿದ್ದಿ – ತಮ್ಮಯ್ಯ
ಅಕ್ಕ ಸಂತಾನು ಪಡಿಲೆಂದು

ಹೆಣ್ಣು ಹೆಟ್ಟಿತೆಂದು ಹೆಚ್ಚಳ ನಿಂಗ್ಯಾಕೆ
ಹೆಣ್ಣು ನೆರಮನಿಯ ಸಿರಿದೇವಿ – ತಾಯಮ್ಮ
ಗಂಡು ನಿನ್‌ಮನಿಯ ತೊಲಿಕಂಬು

ಸೂಳಿಗೆ ಕೊಟ್ಟಣು ಸುಡುಗಾಡಿಗ್ಹೋದ್ಹೆಣು
ಹೆಣ್ತಿಗ್ ಕೊಟ್ಟಣು ಕೈಗುಂಟು – ಅಣ್ಣಯ್ಯ
ನಾಳಿನಾಪತ್ಗೆ ಕಾಣ್ಲಕ್ಕು

ಬ್ಯಾಸಿಗಿ ಬಿಸಿಲಿಗೆ ಬೇಗಿನ ಮರತಂಪು
ನೇತ್ರಾವ್ತಿ ಎಂಬ ಹೊಳಿತಂಪು – ಮಳಿರಾಯ
ಬೀಸಲು ತಂಪು ಧರಿಗೆಲ್ಲ

ಬಿಸಿಲಿಗೆ ಬಂದರಿಗೆ ಬಸಲಿಯ ತಂಪುಂಟು
ಆಸರ್ಕಿಯಾದವ್ರಿಗ್ ಬೆಲ್ಲ್‌ನೀರು – ಅಣ್ಣಯ್ಯ
ಹಸಿವಿಗ್ ಬಂದರಿಗೆ ಮಸರನ್ನ !

ಆಳಿನ್ ಸ್ವಾಧೀನ್ಕೊಟ್ಟು ಮಗಳ ಧಾರಿಯನೆರದು
ಗಾಳಿಪಾಡಿನಲ್ಲೇ ಒರಗೂರು – ಭಾವಯ್ಯ
ಏಳು ಜಲುಮಕೂ ಹೆಣ್ಣ್ ಸಾಕು !

ಬಡವಿಯ ದುಃಖವು ಅಡವಿಗೆ ಕೇಂಡರೆ
ಕಡುಜಾಣನೆಂಬ ಮಿಗು ಕೇಂಡ್ – ದೇವರೆ
ಬಡವಿ ಇಪ್ಪುದು ಬಲುಕಷ್ಟ

ಹೊಟ್ಟಿಗಿಲ್ಲದ ಕೋಳಿ ಮೊಟ್ಟೆಯನ್ಹೆಕ್ಕಿದವು
ಹೊಟ್ಟಿಗಿದ್ದೀರೆ ನಯಿಲ್ಹಿಂಡು – ಗಂಡ್ಹೆಂದ್ರ
ಗೊಟ್ಟಿ ತಪ್ಪಿದರೆ ಬಿಡಿನುಡಿ

* * * *

ಹರಕೆ

ಬಿದ್ದರೆತ್ತುವರಿಲ್ಲೆ ಬೆನ್ನತಾಗುವರಿಲ್ಲೆ
ನಾನಿದ್ದೇನೆಂಬ ಹಿತರಿಲ್ಲೆ – ದೇವರೆ
ತಾಯಂತೆ ನೀವು ಸಲಹಿನಿ

ನಮ್ಮನಿ ಸುತ್ತೆಲ್ಲ ದುಗ್ಗಾಣಿ ಗಿಡುಹುಟ್ಟಿ
ದುಡ್ಡಿಗ್ಹೂನ್ರ್ ಹೂಗ ಕೊಯ್ಯುವಿ – ದೇವರೆ
ಹರ್ವಾಣ್ತುಂಬ್ ಹೂಗ ಕೊಡ್ಸುವಿ

ಯಾರ್ಯಾರ ನಂಬಿ ನಾನಿದ್ದ ಮಗಳಲ್ಲ
ದೇವರ ನಂಬಿ ದೃಢುವಾಯಿ – ತಿರುಪತಿ
ನಂಬಿದ ಒಡ್ಯ ಕೆಡ್ಸನು

ಪಾಪಿ ಹೊಟ್ಟೆಲ್ಹುಟ್ಟಿ ಪರರ ಕೈಯನು ಸೇರಿ
ಕ್ವಾಟಲಿ ಹೊರತು ಸುಖುವಿಲ್ಲೆ – ಪರಮಾತ್ಮ
ಸಾಕ್ ನಿಮ್ಮ ಬಳಿಗೆ ಕರ್ಕಣೀ

ಸುಖುವಾಯ್ಲಿ ನಮ್ಮ ಸಕಲ ಮಂದಿಗೆಲ್ಲ
ಅತಿರಾಜ್ಯ ಆಳೂ ಕಿರಿಮಾವ್ನ್ – ಮಡದಿಗೆ
ಬಾಲಿಲಿಟ್ಟ್ ವಾಲಿ ನಿಜವಾಯ್ಲಿ

ಕೋಟೇಸ್ರ್‍ದ್ ಕೋಟಿಲಿಂಗ ಕೊಲ್ಲೂರ ಮೂಕಾಂಬಿ
ಮಾತಾಯಿ ನಂಗೆ ಸುಖುಕೊಡು – ನೀನಿಟ್ಟ
ಮುತ್ತಿನ್ಮೂಗುತಿಗೂ ಮುಗುಳಿಗೂ !

ತಾಯಿ, ಮಗು

ಆಡುವ ಮಕ್ಕಳಿಗೆ ಏನಾಟ ದೇವರೇ
ನಾಗಬಿಲ್ಲಾಟ ನಯಿಲಾಟ – ದೇವರೇ
ನಿಮ್ಮಾಟ ನಮ್ಮ ಮಗುವಿಗೆ

ಯಾಕಳುವಿ ಕಿರುಬಾಲ ಬೇಕಾದ್ದು ನಿನಗುಂಟು
ತ್ವಾಟದಲಿ ಬೆಳೆದ ರಸಬಾಳಿ – ಕಿರುಬಾಲ
ಅಳುವಾಗಲೊಂದು ಕೊಡುತಿಪ್ಪೊ

ಯಾಕಳುವಿ ಕಿರುಬಾಲ ಬೇಕಾದ್ದು ನಿನಗುಂಟು
ಅಳಗಿಯ ಅಂಬ್ಲಿ ಬೋಗ್ಣಿಲಿ – ಅಯ್ಯುಂಡಿ
ಅಳುವಾಗಲೊಂದು ಕೊಡುತಿಪ್ಪೊ

ಮುದ್ದು ನಮ್ಮಗುವಿಗೆ ಗೆಜ್ಜೆಪಾಡಗ ಬೇಕು
ಒಡ್ಯಾಣ ಬೇಕು ನಡುವಿಗೆ – ಕಿರುಬಾಲ
ನೀ ಬೇಕು ನಮ್ಮ ಬಳಗಕ್ಕೆ

ಅಕ್ಕನಡಿಸಲಿಕ್ಕೆ ಚಿಕ್ಕ ಮಕ್ಕಳು ಬೇಕು
ಚೆನ್ನಿ ಆಡಲಿಕೆ ಎಣಿಬೇಕು – ನಮ್ಮಗುವ
ದೊಡ್ಡವ್ರ ಮನಿಗೆ ಕೊಡಬೇಕು

ಆಯುಷ್ಯ ಹೆಚ್ಚಲಿ ಅಪಮೃತ್ಯು ತೊಲಗಲಿ
ಕೇಂಡವರು ಎಲ್ಲ ಹರಸಲಿ – ಮಗುವಿಗೆ
ದೀರ್ಘಾಯುಷ್ಯದ ಹರಕಿಯ

ಅಜ್ಜ ಅಜ್ಜಿಗೆ ಮುದ್ದು ಗೆಜ್ಜೆಕಾಲಿಗೆ ಮುದ್ದು
ಹಣ್ಣುಳ್ಳ ಮರಕೆ ಗಿಣಿಮುದ್ದು – ಕಿರುಬಾಲ
ನೀ ಮುದ್ದು ನಮ್ಮ ಬಳಗಕ್ಕೆ

ನಮ್ಮನಿ ಸುತ್ತಲೂ ಕೆಮ್ಮಣ್ಣ ಚಾವಡಿ
ದೂಳ ಕಾಲವರು ಬರಬ್ಯಾಡಿ – ನಮ್ಮನಿ
ಚಿನ್ನದ ಕಾಲೋಡಿ ಬರಬೇಕು

ತುತ್ತುವ್ವಿ ತುಪ್ಪನ್ನ ನಮ್ಮಗಿಗ್ ಹಾಲನ್ನ
ಸಂಗ್ತೆ ಆಡೂರಿಗ್ ಮಸರನ್ನ

ತುತ್ತುವ್ವಿ ತುಪ್ಪನ್ನ ನಮ್ಮಗಿಗ್ ಹಾಲನ್ನ
ದೇವರ ತಂಗಿ ಸೌಭದ್ರಿ

ಯಾಕಳುವನೆಂದು ಎಲ್ಲರೂ ಕೇಳೋರು
ಕಾಯದ ಹಾಲ ಕೆನಿಬೇಡಿ – ಕಂದಯ್ಯ
ಕಾಡಿ ಕೈಯಿಂದ ಇಳಿಯನು

ಮನಿಯ ಬಾಗಿಲ ಮುಮದೆ ಅಪ್ಪಿಮಾಯಿನ ಮರ
ಚಣಿಲೆ ನಿನ್ನಾಟೊ ತರವಲ್ಲ – ನಮ್ಮನಿ
ಚಿಟ್ಟ್ ಬಿಲ್ಲ ಬಾಲ ಒಳಗಿಪ್ಪ

ದಾಯಾದಿ ಕಾದ್ವಂಗೆ ಭೂಮಿ ಪಾಲಾಪಂಗೆ
ಆಗಳಿಕೆ ನಮ್ಮ ಹಸುಮಗು – ಕೂಕಂಡ್
ನಡುತುಂಡಿನ್ ಭೂಮಿ ತಂಗಂಬ

ಆಡೂಕ್ಹೋದ್ಮಗುವಿನ ಕೇಂಬೂಕೆ ಬಂದೀರ್
ಎತ್ಹೋದ್ಲು ತಮ್ಯ ಹಸುಬಾಲಿ – ರತ್ನಮ್ಮ
ಕಣ್‌ದಿಷ್ಟಿ ಅಕ್ಕ್ ಒಳಗ್ಹೋಗು

ತಾಯಿ, ಮಗಳು, ತವರು

ಹಾಲ್ಹಬ್ಬೊ ಹಲವರಿಗೆ ನುಗ್ಲಬ್ಬೊ ಬ್ರಾಂಬ್ರಿಗೆ
ಆಸಾಡಿ ಹಬ್ಬೊ ಅಳಿಯಂಗೆ – ಮ್ಯಾಲ್ಬಪ್ಪೊ
ದೀವಾಳಿ ಹಬ್ಬೊ ಮಗಳಿಗೆ

ತಾಯಿದ್ರೆ ತವರ್ಮನಿ ನೀರಿದ್ರೆ ಕೆರಿಬಾಮಿ
ಆನಿಯಿದ್ರರಸು ದೊರಿತನ – ತಾಯಮ್ಮ
ನೀನಿದ್ರೆ ಲೇಸು ತವರ್ಮನಿ

ತವರೂರ ದಾರಿಲಿ ಕಲ್ಲಿಲ್ಲೆ ಮುಳ್ಳಿಲ್ಲೆ
ಸಾಸಿಮಿಯಷ್ಟು ಮರಳಿಲ್ಲೆ – ಬಾನಲ್ಲಿ
ಬಿಸಿಲಿನ ಬ್ಯಾಗಿ ಸುಡಲಿಲ್ಲೆ

ನೀರಿನ ಮ್ಯಾಲ್ ನೀರು ನೀರಾಚಿ ತಾವರಿ
ತಾವರಿಯಾಚಿ ತವರೂರು – ಹೋದರೆ
ತಿರುಗಿ ಬಪ್ಪೂಕೆ ಮನಸಿಲ್ಲೆ

ಯಾರು ಆದರೂ ಹೆತ್ತ ತಾಯ್ಹಾಂಗೆ ಆದಾರೇ
ಸಾಯಿರ ಸೌದಿ ಒಲಿಯಲ್ಲಿ – ಉರಿದರೂ
ದೀವಿಗಿಯಂಥ ಬೆಳಕುಂಟೇ

ತಾಯಿಯಿಲ್ಲದ ಮ್ಯಾಲೆ ಇರಬಾರದೀ ಜಲ್ಮ
ಹೋಗ್ಬೇಕು ಊರ ಕೆರಿಗಾಯಿ – ತಾಯಮ್ಮ
ಬೀಳ್ಬೇಕು ಗಂಗೀ ಹೆಸರ್‍ಹೇಳಿ

ತಾಯ್ಮನಿಗೆ ಹೋಪವ್ರ ತಡಿಯದಿರು ಮಾವಯ್ಯ
ನಾಳಿಗವ್ರಲ್ಲಿ ಗೌರಿಯು – ಚೌತಿಹಬ್ಬೊ
ಮಗಳಿಲ್ಲೆ ಎಂದು ಮರುಗೂರು

ಹದನಾಡ ಹೆಲಸಿನ ತೊದನಾಡ ಬಾಳಿಯ
ಮಲಿನಾಡ ಗೂಡ ತುಡುಬಿಯ – ಜಿಗಿನ್‌ತುಪ್ಪೊ
ನಂಗೆಂದು ತಾಯಿ ಕಳುಹ್ಯಾಳು

ಗಂಜಿಯ ಕುಡಿದರೂ ಗಂಡನ ಮನಿಲೇಸು
ಅಂದಣದ ಮ್ಯಾಲೆ ಚೌರಿಯ – ಬೀಸ್ಕಂಡ್ರೂ
ಹಂಗಿನ್ ತವರ್ಮನಿಯು ನಂಗ್ಬ್ಯಾಡ

ಎಂದು ನಮ್ಮನಿಯಲಿ ಪುಸ್ತ್ಕ ಓದುತ ಬಪ್ಪ
ಪುತ್ರನ ಸಂಗ್ಡ ಗೆಳಿ ಬಪ್ಪ – ಆತಂಗೆ
ಒಪ್ಪಿದ್ಲು ಸೀತಿ ಇವಳೆಂದು

ಕಂಬ್ಳಿ ಕುರುಬನ ತಂಗಿ ಆಡಿದಳೆ ಬಿಂಕವ
ಕಾಣ್ಬನ್ನಿ ನನ್ನ ತೌರೂರು – ಅಣ್ಣಂದ್ರು
ಓಡೋಳಗಂಬ್ಳಿ ಕೊಡುವರು

ತೌರುಮನಿ ದೀಪವ ತೆರುವೇರಿ ನೋಡ್ಯೇನು
ಹತ್ತೂ ಬೆಳ್ಳಚ್ಚಿ ಶರಣೆಂದ – ತಮ್ಮಂದ್ರ್
ಜಯವಂತರಾಗಿ ಇರಲೆಂದು

ಕಣ್ಣೆಂಜ್ಲು ಕಾಡಿಗಿ ಬಾಯೆಂಜ್ಲು ಈಳ್ಯವ
ಯಾರೆಂಬಜಲಾಡಿ ನನ್ನ್ ಮನವ – ಹಡದಮ್ನ
ಬಾಯೆಂಜಹಲುಂಡು ಬೆಳದೇನು

ತಾಯ್ಮನಿಗ್ ಹೋಪಂಗೆ ತಂಗಾಳಿ ಬೀಸಲಿ
ತಿಂಗ್ಳ ಮಜ್ಜನವ ನೆರಿಯಲಿ – ಕುಂದಾಪ್ರ್ದ
ತಾಯ್ಮನಿ ಜ್ಯೋತಿ ಉರಿಯಲಿ

ನೀರಿಗ್ಹೋದಲ್ಲೆ ನೀಲದ ಬಳಿ ಬಂದೊ
ನಾಕಂಡಲ್ಲಿಂಥ ಬಳಿಯಿಲ್ಲೆ – ಬಳಗಾರ
ಹೋಗ್ಹೇಳು ನನ್ನ ತವರಿಗೆ

ಆನಿಯ ಕಟ್ಟೀರು ಕುದುರಿಯ ಬಿಟ್ಟೀರು
ಹೆಬ್ಬಾಗ್ಲಿಗ್ ಮುತ್ತ ಬಿಗ್ಸೀರು – ಬಳಗಾರ
ಅದೆ ನನ್ನ ತಾಯ ಅರಮನಿ

ತಾಯ್ ಹುಟ್ಟಿದೂರಿಗೆ ತಾವರಿ ನಡಸುವಿ
ನಾ ಹುಟ್ಟಿದೂರು ಮುತ್ತ್ಯಾಡಿ – ಬಯಲಿಗೆ
ಸಾಲಾಗಿ ಸಂಪ್ಗಿ ನಡಸುವಿ

ಅಣ್ಣಿದ್ದೀರ್ ಬತ್ತಿದ್ದ ತಮ್ಮೀದ್ದೀರ್ ಬತ್ತಿದ್ದ
ತಾಯಿದ್ದೀರ್ ಜನುನೇ ಕಳ್ಸಿ‍ದ್ಲು – ತವರಲ್ಲಿ
ತಾಯಿಲ್ಲೆ ನಂಗೆ ತವರಿಲ್ಲೆ

ಪಾಪಿ ಮುಕು ತೊಳ್ದಲ್ಲಿ ಕಾಸಾನ ಮರೊ ಹುಟ್ಟಿ
ಪುಣ್ಯೇಸ್ತ್ರಿ ನನ್ನ ಹಡದಮ್ಮ – ತೊಳ್ದಲ್ಲಿ
ಆಲದ್ಮರ ಹುಟ್ಟಿ ನೆರಳಾದೊ

ಗೋಮಾತೆ

ಅಂಚಂಚು ದಾಂಟುತ್ತ ಕುಂಚ್‌ಬಾಲು ಕೂಣಿಸುತ್ತ
ಮುತ್ತು ಕೆಚ್ಚಲನು ಅಲ್ಸುತ್ತ – ಗುರ್ವಮ್ಮ
ಕಾಯೇರಿನ್ ಬೇಗ ಬರಹೇಳು

ಮನಿಯ ದೇವರ ಗುಣವೊ ಕರುವ ಕೈಲಿಯ ಗುಣವೊ
ಹಡದಮ್ಮ ನಿನ್ನ ಕೈಗುಣವೊ – ಹಿತ್ತಾಳಿ
ತಂಬಿಗಿ ತುಂಬು ನೊರಿಹಾಲು

ಸರಸ

ಅಕ್ಕತಂಗ್ಯರು ನಾವು ಆನಿಮ್ಯಾಲ್ ಹೋಪಂಗೆ
ಕಟ್ಟಿ ಮ್ಯಾಲೊಬ್ಬ ಬಣಜಿಗ – ಕೂಕಂಡ್
ಸಾಯಿರ ಕೊಡುವಿ ಇಳಿಯೆಂಬ

ಬತ್ತು ತೊಳುವರ ಕೈಗೆ ಬಯ್ನಿ ಮುಳ್ಳ್ ಹೆಟ್ಟಿತು
ಮದ್ದಿಗ್ಹೋದಣ್ಣ ಬರಲಿಲ್ಲೆ – ಬಸುರೂರ
ಸೂಳಿ ಕಂಡಲ್ಲೇ ಒರಗಿದ

ಅಕ್ಕಿ ಚಣ್ಣೊರ‍್ಲಿಗೆ ಮುತ್ತು ಚಣ್ಣ್ ಕೊರ‍್ಲಿಗೆ
ನ್ಯಾಗಳ ಚಣ್ಣ ನಡುಮನಿ – ತಮ್ಮಯ್ಯ
ಮಾವನ ಮಗಳೇ ಮನಸೆಂದ

ಅವಲಕ್ಕಿಯ ಕುಟ್ಟಿ ಅವನ ಗಡ್ಡವ ಸುಟ್ಟಿ
ಮಾಳಿಗಿ ಸುಟ್ಟಿ ಮನಿಸುಟ್ಟಿ – ಬಸುರೂರ
ಸೂಳೇರ ಚಣ್ಣ ನೆರಿ ಸುಟ್ಟಿ

ಸೀರಿಸೆರಗಿಗೆ ಮುತ್ತು ವಾಲಿದಾಳಿಗೆ ಮುತ್ತು
ವಾಯ್ಲಾರ‍್ದ ಮುತ್ತು ಮಲಪಿಗೆ – ಹೆಣ್ಣಿನ
ಮೂಗುತಿಗೆ ಮುತ್ತು ಜಗಜ್ಯೋತಿ

ಹಣ್ಣಡಕಿ ಹಾಸಿಗಿ ಕಾಯಡಕಿ ತಲಿದಿಂಬು
ಸೂರ‍್ಯನ ಕ್ಯಾದ್ಕಿ ಸುಖನಿದ್ರಿ – ಗೈವಾಗ
ಮಡದ್ಹೋಯಿ ಮುಸುಕ ತೆಗದಳು – ಏನೆಂದು
ಸಾಕ್ ಸ್ವಾಮಿ ನಿದ್ರಿ ಹಿರಿಯಲಿ

ಮಂಚದ ಕಾಲಿಗೆ ಕಂಚಿನ ತಿರುಗಣಿ
ರಾಯರು ಒರಗೂ ಹಲಗಿ ಹಾಸಿಗಿ ಮ್ಯಾಲೆ
ರಾಣಿ ಕಾನೂನ ಬರದಳು

ಉಪ್ಪಿರ‍್ಗಿ ಮ್ಯಾಲೆ ಉತ್ತುಮರು ಒರಗ್ಯಾರು
ಯಾವ ಬಣ್ಣದಲಿ ಎಬಿಸಲಿ – ನಮ್ಮನಿಯ
ಕಾಗ್ತ ಬಂದಿದೆ ನಿಮಗಾಯಿ

ಮಲ್ಲಿಗಿ ಹೂಗಿನ ಗಮನ ಮನಿಗೆ ಬಂದವರ‍್ಯಾರು
ಗಂಧದ ಗಮನ ಒಳಗೆಲ್ಲ – ಗೋಳಿಗಯ್ಡಿ
ಬಂಟ್ರು ನಮ್ಮಲ್ಲಿ ಒಲಿದರು

ಮಾತಿಗೆ ಮಾತುಂಟು ಮಾತಿಗುತ್ತರವುಂಟು
ನೀಲು ನಿನ್ನ್ ಹತ್ರ ಗುಣಉಂಟು – ಇದ್ದರೆ
ಮ್ಯಾಲ್ಹೊಡಿಗೊತ್ತು ಕೊಡು ಬಾರೆ

ಬಾರಕೂರಿನ ಸೂಳಿ ಯಾರ್‌ಮ್ಯಾಲೆ ಕಣ್ಣಿಟ್ಲು
ಆನಿಮ್ಯಾಲ್ ಬರುವ ಅರಸಿಗೂ – ಕೊರಗಣ್ಣಗೂ
ಮುತ್ತಿನ್ ಚೆಂಡಿಟ್ಟು ಕರದಳು

ಬಾರ್ಕೂರ ಪ್ಯಾಟಿಲಿ ಎತ್ತ್‌ಕಟ್ಟಿ ಬಪ್ಪಂಗೆ
ಸುತ್ತ್‌ಕಟ್ಟಿ ಸೂಳಿ ತಡದಳು – ಗ್ವಾಪಣ್ಣ
ಹಣುಕಲ್ಲ ನಿನ್ನ ಗುಣುಕಾಯಿ

ಅಪ್ಪನ ಅಳಿದಿಕ್ಕು ಚಿಕ್ಕ್ ಚಿಕ್ಕ ಪೋರರು
ದಾಂಬೂ ನ್ಯಾಗಳದ ನಡೀನರು – ಅಪ್ಪಯ್ಯ
ಎಡದಾರೀಲ್ ನಮ್ಮ ತಡದರು

ಕುಂಬಾರ ಗಂಡಿಗೆ ಮುತ್ತಿನ ಹೆಣ್ಣ್ಯಾಕೆ
ಕಡಿಯೆಂಬ ಮಣ್ಣ ಹೊರುಯೆಂಬ – ಕುಂಬಾರ್ಗಂಡು
ಹೊತ್ತು ಮಾರೆಂಬ ಗಡಗಿನ

ಸಿಟ್ಟ್ ಬಂದ ಪುರುಸನ ಹ್ಯಾಂಗೆ ಮಾತಾಡಿಸಲಿ
ಚೊಂಬು ಶ್ರೀಗಂಧ ಸೀತಾಳಿ – ಹಿಡ್ಕಂಡ್
ಮಾತು ಮಾತಿನಲಿ ನಗಿಸುವಿ

ಕುದುರಿನ ಕೂಣಿಸುತ್ತ ಚದುರ ಬಾಗ್ಲಿಗೆ ಬಂದ
ಮಗನೆಂದೇ ತಾಯಿ ನಲಿದಾಡಿ – ತ್ವಾಂಟದ
ಮಗನಲ್ಲ ಮಗಳ ಪುರುಸನು

ಕಂಚಿಕಾಯ್ ಕಂಯ್ ಎಂಬ ನಿಂಬಿಕಾಯ್ ಹುಳಿಯೆಂಬ
ಮಾಯಿನ ಮಿಡಿ ಸೊನಿ ಎಂಬ – ವಸಂತ
ಮಾವನ ಮಗಳೇ ಮನಸೆಂಬ

ಅಂಗಿ ಮ್ಯಾಲಿನ ಅಂಗಿನ ಶ್ಯಾನುಭಾಗನ ತಂಗಿ
ಏನೇ ಬೇಡ್ದ್ಳಂಗಿ ಚದುರಂಗಿ – ಮಾವ್ನ್‌ಮಗ್ಳ್
ತೋಳ ಬೇಡಿದಳು ತಲಿದಿಂಬು

ಮೂಡಾಯ್ ಮೂಡಿದ ಸೂರ್ಯ ಪಡಾಯ್ ಅಂತಾರೆದ್ರೂ
ಆ ಹೆಣ್ಣಿನ್ ನಾನು ತರಿದಿರೆ – ತಾಯ್ಕೇಳೆ
ಅಭಿಮನ್ಯೆಂಬ್ಹೆಸರ ಬದಲಿಡು

ಯಾತ್ರಿಗ್ಹೋದಣ್ಣ ದುಂಡುಮಲ್ಲಿಗಿತಂದ
ತಂಗಿ ಕೇಳಿದರೆ ಇಲ್ಲೆಂದ – ಅಣ್ಣಯ್ಯ
ಮಡದಿ ಕೇಳಿದರೆ ಮುಡಿ ಎಂದ

ಯಾಲಕ್ಕಿ ಕಾಯ್ನೊಲಿದು ಯಾವಡ್ಗಿ ಮಾಡಲಿ
ಊರಿಗ್ಹೋಗೀರ್ ರಾಯರು – ಬಾರದೆ
ಯಾವಡ್ಗಿ ಮಾಡಿ ಫಲುವೇನು?

ಆಡೂಕ್ಹೋದಭಿಮನ್ಯು ಓಡಿ ಮನಿಗೆ ಬಂದು
ಗುಲ್ಲೇನೆ ತಾಯೇ ಮನಿಯಲ್ಲಿ – ಮಾವ್ನ್‌ಮಗಳು
ಸ್ವಾದರ್ಕಿ ಹೆಣ್ಣು ಪರರಿಗೆ

ಕೊಲ್ಲೂರ್ ಮೂಕಾಂಬಿ ಹಬ್ಬುಕೊಂದ್ ದಿನುವಿಟ್ಟು
ಗಂಡಂಗೊಂದ್ವಾಲಿ ಬರದರು – ಹಬ್ಬುಕ್ಕ್
ತಮ್ಮ ಸ್ವಾಮೀರು ಬರ್ಕಂದು

ಹಬ್ಬಕ್ ಬಂದರೆ ಕೇಂಬುಕೆಡ್ಯ ಕರ್ಕೆರಿ
ಹಬ್ಬದ್ ಮರುದಿನ ಹಸರವು – ಮೂಕಾಂಬಿ
ಓಕುಳಿಗಾಯಿ ಬರುವೆನು

ಸ್ವಾಮಿ ನಿಮ್ ಕಾಣದೆ ಮಸಸಿಲಿ ಮಾಚಿಂತಿ
ದೇವ್ರಾಯಿ ಬನ್ನಿ ಕನಸಿಲಿ – ಎಲೆಸ್ವಾಮಿ
ಹೂಗಾಯಿ ಬನ್ನಿ ಮುಡುವೆನು

ಸೂಳಿಸತ್ತರೆ ರಾಯ ಏನೆಂದೆ ಮರುಗುವ
ಏ ನನ್ನ ಮುದ್ದು ಹಗಳವೆ – ಹಾಸ್ಗಿಮ್ಯಾಲೆ
ರಾಣಿಗಿನ್ಯಾವ ಮರಣವೇ

ಹೋಪುಕು ಬಪ್ಪುಕು ಪರ್ಸಾರು ತಿಂಗಳು
ಬಾಲ ಗುರುಗಿಜ್ಜಿ ಚಳಿಯಂಗಿ – ಕೊಟ್ಟನಕ
ಬಾಗಿಲ್ ಮೆಟ್ಟಿಲನೆ ಬಿಡೆನೆಂಬ

ಗುಂಬಳ ಬೀಳ್ದಂಬಿ ಹೆಬ್ಬಾಗ್ಲಿಗ್ ಎರಗಿದೊ
ಸೂಳಿ ಬಂದೊಳಗೆ ಸುಳಿದಾಡಿ – ನಮ್ಮೊಡ್ಯರ
ಹಣುಕಾಯ್ ಅಲ್ಲವ್ರ ಗುಣುಕಾಯಿ

ಜಾಣರ ತಲಿಮ್ಯಾಲೆ ಚಾಜಿ ಸಂಪಿಗಿ ಹೂಗ್
ನಾ ಬೇಡಿರ್ ಹೂಗ ಕೊಡಲಿಲ್ಲೆ – ಕುಂದಾಪ್ರಿಲಿ
ಬಿಟ್ಟ ಕುಂಕ್ಮದ ಬಿಡುಸೂಳಿ – ತಲಿಮ್ಯಾಲೆ
ಜಾಜಿ ಸಂಪಿಗಿ ನಲಿದಾಡಿ

ಹೊರೊಳಿಯ ಹೊರ್ಕಂಡ್ ಕುರುಮಟ್ಟೀಲ್ ಕಟ್ಕಂಡ್
ಅದ್ಕೊಪ್ಪೊ ಕಾಯ್ನ ಒಡ್ಕಂಡ್ – ಆ ಹೆಣ್ಣು
ತನಗೊಪ್ಪೊ ಮಿಂಡ್ನ ಕರದಳು

ಈ ಸುಟ್ಟ ಕಣ್ಣಿಗೆ ಎಲ್ಲಿ ನಿದ್ದಿ ಬಂತೊ
ರಾಜ್ಯವಾಳೂ ಸ್ವಾಮಿ ಮನಿಲಿಲ್ಲೆ – ಉಡುಪಿಯ
ಕಿಷ್ಣನ ಪರ್ಯಾಯಕ್ ನಡದರು

ತಿಂಗಳ ಬೆಳಕಿಲಿ ಚೆಂದವಾಯಿತು ಬಿದ್ದು
ಗಂಡಿಪ್ಪ ಸೂಳಿಮನಿಯಲ್ಲಿ – ಅತ್ತಿಗಿ
ನೀನಿಪ್ಪಿ ತೌರ ಮನಿಯಲ್ಲಿ

ರಾಯ ಅಣ್ಣಯ್ನ ಉಟ್ಟದಟ್ಟಿಯ ಮ್ಯಾಲೆ
ಪಾರಾಣದ್ದಕ್ಕಿ ನಯಿಲ್ದಿಂಡು – ಬಸುರೂರ
ಸೂಳಿ ಇದ್ಲ್ ಅವ್ನ ಸೆರಗಿಲಿ

ಕಿಚ್ಚು ಬೇಡೂಕ್ ಹೋದಿ ಅಣ್ನ ಸೂಳಿಮನಿಗೆ
ಕಚ್ಚುವ ನಾಯ ಕರದಳು – ಆ ಸೂಳಿ
ಊರಿಗೊಗ್ಯಳು ನಂಗ್ ವೈರಿ

ಮಧ್ಯದಾತ್ರಿಲಿ ಎದ್ದೋದ ಪುರಿಸಂಗೆ
ಎದ್ದು ಶಾಪವನೆ ಕೊಡುವಳು – ಏನೆಂದು
ಸೂಳಿಯ ಮನಿಯೇ ಸುಡುಗಾಡು – ಸುಟ್ಟ್ ಹೋರೆ
ಸ್ವಾಮಿ ನಮ್ಮನಿಗೆ ಬರುವರು

ವಿರಸ

ಹಾಂಗ್ಲ ಕಾಯಿಟ್ಟವ್ಳೇ ಹಾಲಳ್ಗಿ ಜರಿದವ್ಳೇ
ಮಾಯಿಗೆ ಮೂಂಜ ಮುರಿದವ್ಳೇ – ಅಬ್ಬಕ್ಕ
ನಾನಿದ್ರವ್ಳ್ ಮೂಂಜ ಮುರಿತಿದ್ದಿ

ಗುಂಬ್ಳ್‌ಕಾಯ್ ಇಟ್ಟವ್ಳೇ ಗುಂಡಳ್ಗಿ ಜರಿದವ್ಳೇ
ಮಾಯಿಗೆ ಮೂಂಜ ಮುರಿದವ್ಳೇ – ಅಬ್ಬಕ್ಕ
ನಾನಿದ್ರವ್ಳ್ ಮೂಂಜ ಮುರಿತಿದ್ದಿ

ಬಂದವರ ಎದುರಿಗೆ ಮಾನು ತೆಗ್ದಳ್ ಮಗನೇ
ದೂಕಿಕಿ ಬಾ ಅವ್ಳ ತವರಿಗೆ – ಮಗರಾಯ
ಅವ್ಳಲ್ಲದಿದ್ರೆ ಇನ್ನೊಬ್ಳು

ದೂಕಿ ಬಾ ಅಂಬೂಕೆ ಬರಿದೆ ಬಂದವ್ಳಲ್ಲ
ಸಾಯಿರ ಕೊಟ್ಟು ಸಭಿಮುಂದೆ – ಬಳುವಳಿ
ಅದ್ ಸಾಗ್ಲಿ ಮುಂಚಿ ತವರಿಗೆ

ಅಪ್ಪನ ಮನಿಯಲ್ಲಿ ಅಪ್ರೂಪ್ದ್ ಮಲ್ಲಿಗಿ
ಅಪ್ಪನ ಮೊಮ್ಮಗ್ಳ್ ರಾಕ್ಷಸಿ – ಅತ್ತಿಗಿ
ತಲಿಲಿದ್ದ ಹೂಗ್ನೇ ಹರುವಳು !

ಅಣ್ಣ ಹೆಂಡತಿಗಿಂತ ತಮ್ಮ ಹೆಂಡತಿ ಜಾಣಿ
ತಂಗಿಯೊಬ್ಬಳಿಗೂ ಸುಖವಿಲ್ಲೆ – ಅಮ್ಮಯ್ಯ
ಕಡ್ಲಾರೂ ಬೇಕು ಮನಿಬ್ಯಾಡ

ಬತ್ತುಕೊಳ್ದ್ ಬಂದ್ ಸೊಸಿ ಬಾಯ್ರಿಗ್ಬಂದ್ ಸೊಸಿ
ಪಿಂಗಾಣಿಲಿ ಹಾಲು ಎರ್ಕಂಡ್ಲ್
ಬಂದ ಬಂದರೆದ್ರು ಬಣ್ಣುಬಯ್ಲ್ ಮಾಡ್ಬ್ಯಾಡಿ
ಮೊನ್ನಿನ ಹುಳ್ಗಂಜಿ ಎರುವರು
ಬಂದ ಬಂದರೆದ್ರು ಮಾನು ತೆಗ್ದ್ ಸೊಸಿ
ಹಟ್ಟಿಲಿದ್ದೆಮ್ಮಿ ಕರ್ದ್ ಉಂಡ್ಲು

ತುಂಬಿದ ಕೆರಿಯಲ್ಲಿ ಬೀಸಿಟ್ಲು ಹರ್ವಾಣು
ಕಾಣಣ್ಣ ನಿನ್ನ ಮಡದಿಯ – ತಪ್ಪಿಗೆ
ತಪ್ಪೊಂದ್ಕೆ ಪಾದು ಹಿಡ್ಸುವಿ

ನೀರಿಗೆ ಹೋಗ್ಬೇಕು ನೀಲದ ಕ್ವಾಟಿಗೆ
ತಡವಾದರತ್ತಿ ಬಯ್ವರು
ತಡವಾದರತ್ತಿ ಏನ್ಹೇಳಿ ಬಯ್ವರು
ನಿಮ್ಮ್ಯಾರು ಅಲ್ಲಿ ತಡದರು?
ನಮ್ಮಾಂಗೆ ಇಪ್ಪಂಗೆ ನೀವ್ ನೀರಿಗ್ಹೋಯಿಲ್ಲ್ಯಾ
ನಿಮ್ಮ್ಯಾರು ಅಲ್ಲಿ ತಡದರು?
ಆಡಿದ ಮಾತಿಗೆ ಉತ್ರುಕೊಟ್ಟಳು ಮಗನೆ

ದೂಕಿ ಬಾ ಅವ್ಳ ತೌರಿಗೆ
ಅತ್ತೆಮ್ಮ ಕೇಣಿ ನಾ ಬರಿದೆ ಬಂದವ್ಳಲ್ಲ
ಬಟ್ಟಲು ಚೊಂಬು ದ್ಯನಕರು – ಅತ್ತೆಮ್ಮ
ಸಾಗಲಿ ಮುಂಚಿ ತೌರಿಗೆ

ಹರ್ದ್ ಬಪ್ಪು ನೀರಿಗೆ ಹರ್ವಾಣು ಬಿಟ್ಟಳೆ
ಕಾಣ್ ಮಗನೆ ನಿನ್ನ ಮಡದಿ – ಮಾಡ್ದ್‌ಕೆಲ್ಸ
ತಾಳ್ಯೇನು ನಿನ್ನ ಗಉಣುಕಾಯಿ

ಬತ್ತುತ್ತೊಳ್ದ್ ಬಂದ್‌ಸೊಸಿಯೇ ಬಾಯ್ರಿಗ್ ಬಂದ್ ಸೋಸಿಯೇ
ಬಟ್ಟಲು ಹಾಲ ಎರ್ದಿದಿ
ಬಂದರ್‍ಹೋದರೆದ್ರು ಬಟ್ಟಾಣಿ ಮಾಡೂ ಮಾಯಿ
ನಿನ್ನಿನ್ ಹುಳ್ಗಂಜಿ ಎರಿದಿರು
ಬಂದರ್‍ಹೋದರೆದ್ರು ಮರ್‍ವಾದೆ ತೆಗ್ದಳ್ ಮಗನೇ
ದೂಕಿ ಬಾ ಅವಳ ತೌರಿಗೆ
ನಾನಾಯ್ ಬಂದಳಲ್ಲ ಅದಾಯ್ ಬಂದದ್ದಲ್ಲ
ಸಾಯಿರಕೊಡಿ ಸಭಿಕೂಡಿ – ತಾಯಮ್ಮ
ಧರ್ಮಕ್ಕೆ ಧಾರಿ ಎರಿಲಿಲ್ಲೆ

ಕೈಯ ಕಂಕಣದಳೇ ಮೆಯ್ಯ ಭೂಷಣದಳೇ
ಹೊಗೆಸಳ ಎಳಿಯ ರಾಧಮ್ಮ – ಎಲೆಮಗಳೆ
ಹುಯ್ಯಲಿಂದೇಳು ದೊರಿಬಪ್ಪ
ದೊರಿ ಬಂದ್ರೆ ಬರಲಿ ಜಗ್ಲಿಮ್ಯಾಲ್ ಕುಳ್ಳಲಿ
ಹುಯ್ಲಿಂದ ನಾನು ಇಳಿಲಾರಿ

ಗೇರುಗೇರೆಂದರೆ ಸೀರಿಯು ದೂಳೆಂಬ್ಳ್
ಕಾಣಣ್ಣ ನಿನ್ನ ಮಡದಿ – ಮಾಡೂ ಕೆಲ್ಸ
ತಾಳಿದಿ ನಿನ್ನ ಗುಣುಕಾಯಿ

ನೀರ್‌ಹೊಯ್ಯಿ ಎಂದರೆ ಕಾಲುನೋವೆಂಬಳು
ಕಾಣಣ್ಣ ನಿನ್ನ ಮಡದಿ – ಮಾಡೂ ಕೆಲ್ಸ
ತಾಳಿದಿ ನಿನ್ನ ಗುಣುಕಾಯಿ

ಅಪ್ಪನ ಮನಿಯಲ್ಲಿ ಎಪ್ಪತ್ತು ತೆಂಗಿನ್ಮರು
ಹೆಡಿನೂರಲದ್ಕೂ ಕೊನಿನೂರು – ಅಪ್ಪಯ್ಯ
ನಿಮ್ಮ್ ಸೊಸಿಗೂ ನಂಗೂ ಸರಿಪಾಲು
ನಿಮ್ಮ್ ಸೊಸಿಗೂ ನಂಗೂ ಸರಿಪಾಲು ಕೊಡದಿದ್ರೆ
ಸರ್ಕಾರ್ಕೂ ಮನಿಗೂ ತಿರ್ಸುವಿ – ಅಪ್ಪಯ್ಯ
ಸರ್ಕಾರ್ದ ಮೆಟ್ಲಿ ಹರ್ಸುವಿ

ಕಂದಿದ ಮುಕಕೂ ಚೊಂಬಿನುದಕವ ಕೊಡುವಿ
ಊಂಟಕ್ಕಾಯ್ತಣ್ಣ ಕೈತೊಳಿ
ಗಂಗಿಯ ಮಿಂದಿದಿ ಅಂಗ್ಡಿಯಲುಂಡಿದಿ
ಹಸಿವಿಲ್ಲೆ ತಂಗಿ ಒಳಗ್ಹೋಗು
ಹಾಲಾಡಿ ಹೊಳಿಯಲ್ಲಿ ಹಾಲುಭೋಜನದೂಂಟೊ
ನಿನ್ನಾಣೆ ತಂಗಿ ಹಸಿವಿಲ್ಲೆ – ಬಾವ್ನಮನಿಲಿ
ಮೆಟ್ಲಕಲ್ಲಾಯಿ ಇರಬೇಕು !
ಮೆಟ್ಲಕಲ್ಲಾದರೂ ಮಡ್ವಾಳ ಮಡಿ ಒಗುವ
ಕೆಂಬರ್ಗಿ ಸಪ್ಪಾಗು ಗರನಲ್ಲಿ
ಕೆಂಬರ್ಗಿ ಸಪ್ಪಾರೂ ಪದಾರ್ಥು ಮಾಡ್ಲಕ್ಲು
ದಾಸಾನ್ಹೂಗಾಗು ತ್ವಾಟ್ದಲ್ಲಿ
ದಾಸಾನ್ಹೂಗಾದರೂ ದೇವ್ರಿಗ್ ಕೊಯ್ದ್ ಒಪ್ಸ್ವರು
ಕಾಸಾನ್ಹಣ್ಣಾಗು ಅಡವಿಲಿ !

ತಾಯಿ ಮಕ್ಕಳ ಮಾತು ನೀರಮ್ಯಾಲಿನ ಗುಳ್ಳಿ
ನಾನೇನ ಹೇಳ್ದಿ ಹಡದಮ್ಮ – ನಾ ನಿನ್ನ
ಪಾದಕ್ಕೆ ಬಿದ್ದು ಶರಣಂಬಿ

ಅಂಚಂಚಿನೊಳಗೆಲ್ಲ ಕುಂಚ್ಹುಲ್ಲ ಕೊಯ್ಯೋಳೆ
ಪಂಚಬಳ್ಳೆಲಿಯ ಕೊಡುವಿಯಾ?
ನಾನು ಬಿಲ್ಲರ ಹುಡುಗಿ ನೀವು ನಾರಾಯ್ಣ್‌ಸ್ವಾಮಿ
ನಾ ಕೊಟ್ಟ ಈಳ್ಯ ಮೆಲುವಿರಾ?
ಚಪ್ಪದ್ ಈಳ್ದೆಲಿಗೂ ಚಿಪ್ಪಿಯ ಸುಣ್ಣಕೂ
ವಾಜಿಲ್ಲೆ ಹೆಣ್ಣೇ ಮೆಲುವೆನು

ಜಗ್ಲಿಮ್ಯಾಲ್ ಕೂತವನೇ ಜಗಮುಖದ ಜಾಣನೇ
ನಾನುಟ್ಟ ಸೀರಿ ಹೆಸರ್ಹೇಳು !
ಹಾದ್ರ್‌ಗಿತ್ತ್ಯರುಡುವುದು ಹದ್ನಾರ್ ಬಣ್ಣದ ಸೀರಿ
ನಾನೇನ ಹೇಳ್ಲಿ ಹಸುಮಗು !

ಮಡದಿಯ ಹೊಡುವಲ್ಲಿ ಇಲ್ಲೆಲ್ಲೂ ಕೋಲಿಲ್ಲೆ
ಯಾಲಕ್ಕಿ ಹೊಲಕೆ ನಡದನು – ಅಣ್ಣಯ್ಯ
ಸಿಟ್ಟಿರಿದು ಮನಿಗೆ ಬರುವನು

ನಮ್ಮ ಕಾಂಬೂದೇನು ಬಂದಬಂದವರೆಲ್ಲ
ನಮ್ಹಾಂಗೆ ನಮ್ಮ ಮೈಬಣ್ಣ – ಉಡ್ಬಿಯ
ಆನಿ ಬಂದಿಳಿತು ಅದ್ನ್ ಕಾಣಿ

ತುಂಬಿಯ ಹೂಗಿನ್ಹಾಂಗೆ ತುಂಬಿತು ನಿನ್ನ್ ಬಳಗ
ನಾನೊಬ್ಳ್ ನಿಂಗೆ ಹೊರಿಯೇನು – ಮಾವಯ್ಯ
ಪರ್ಸಕ್ಕೊಂದ್ ಗಾಯ್ ಕರಿಲಿಲ್ಲೆ !

ಅತ್ತಿಗಿ ಮೈದಿನಿ ಚಣ್ಣಕ್ಕಿ ತೊಳುವಂಗೆ
ಅತ್ತಿಗಿ ಸೋತು ಹೆರಗಿನ – ಜಗ್ಲಿಲಿ
ಬಳ್ಳೆಲಿ ತಿಂಬವ್ರೆ ನೀಂವ್ ಕೇಣಿ – ಮಾಯಾ
ನಾನ್ಹೋತಿ ನನ್ನ ತವರಿಗೆ
ಚರ್ಗಿಲಿ ಮಜ್ಗಿ ಇತ್ತ್ ಮಡ್ಕಿಲಿ ಅನ್ನ ಇತ್ತ್
ಉಂಡ್ಹೋಗೆ ಹೆಣ್ಣೇ ತವರಿಗೆ
ಚರ್ಗಿಲಿ ಮಜ್ಗಿ ಇರ್ಲಿ ಮಡ್ಕಿಲಿ ಅನ್ನ ಇರ್ಲಿ
ಬಪ್ಪೂ ಸೊಸಿಗಕ್ಕ್ – ಅತ್ತ್ಯೆಮ್ಮ
ನಾನ್ಹೋತಿ ನನ್ನ ತವರಿಗೆ
ಬಣಲಗೆ ಬಾಚಣ್ಗಿತ್ತ್ ಗಿಣಲಗೆ ಎಣ್ಣಿ ಇತ್ತ್
ಬಾಚ್ಹೋಗೆ ಹೆಣ್ಣೇ ತವರಿಗೆ
ಬಾಣ್ಲಗೆ ಬಾಚಣ್ಗಿ ಇರ್ಲಿ ಗಿಣ್ಲಗೆ ಎಣ್ಣಿ ಇರ್ಲಿ
ಬಪ್ಪೂ ಸೊಸಿಗಕ್ಕ್ ಒಳ್ಗಿರ್ಲಿ – ಅತ್ತಿಗ್ಯಕ್ಕ
ನಾನ್ಹೋತಿ ನನ್ನ ತವರಿಗೆ
ಅಂಟಿನ್ ಕಯ್ಡ್ಗೀಲಿ ಅಂಟಿತ್ತ್ ಕುಂಕ್ಮದ್ಕಯ್ಡ್ಗೀಲ್ ಕುಂಕ್ಮಿತ್ತ್
ಹಾಕ್ಹೋಗೆ ಹೆಣ್ಣೇ ತವರಿಗೆ

ಅಂಟಿನ್ ಕಯ್ಡ್ಗೀಲ್ ಅಂಟಿರ್ಲಿ ಕುಂಕ್ಮದ್ಯಯ್ಡ್ಗೀಲ್ ಕುಂಕ್ಮಿರ್ಲಿ
ಒಪ್ಪೊ ಸೊಸಿಗಕ್ ಒಳ್ಗಿರ್ಲಿ – ಚಿಕ್ಕಪ್ಪ
ನಾನ್ಹೋತಿ ನನ್ನ ತವರಿಗೆ
ಮಲ್ಗಿ ಹೂಗ್ ತತ್ತಿ ಮುಡ್ಕಂಡ್ಹೋಗ್ಹೆಣ್ಣೆ ತವರಿಗೆ
ಮಲ್ಗಿ ಹೂಗ್ ತಪ್ದ್ ಬ್ಯಾಡ
ಬಪ್ಪೊ ಸೊಸಿಗಕ್ಕ್ – ಮೈದಿನಣ್ಣ
ನಾನ್ಹೋತಿ ನನ್ನ ತೌರಿಗೆ
ಸಂಪಿಗಿ ತತ್ತಿ ಮುಡಿದ್ಹೋಗೆ ಹೆಣ್ಣೇ ತವರಿಗೆ
ಸಂಪಿಗಿ ಹೂಗ್ ತಪ್ದ್‌ಬ್ಯಾಡ ಹೆರ್ಗ್ ಇರ್ಲಿನಿ
ಪತ್ತಾಸಿನ್ ಮ್ಯಾಲ್ ಕೂತವ್ರೆ ನೀಂವ್ ಕೇಣಿ ಭಾವಣ್ಣ
ನಾನ್ಹೋತ್ತಿ ನನ್ನ ತೌರಿಗೆ
ತ್ವಾಂಟಕ್ಕ್ ಹೋಯಿ ಸಿಂಗಾರ್ಹೂಗ್ ತತ್ತಿ
ಮುಡಿದ್ಹೋಗೆ ಹೆಣ್ಣೇ ತವರಿಗೆ
ತ್ವಾಂಟಿಕ್ ಹೋಯ್ ಸಿಂಗಾರ್ಹೂಗ್ ತಪ್ದ್‌ಬ್ಯಾಡ ಹೆರ್ಗ್ ಇರ್ಲಿನಿ
ತಳ್ಳಿಬಳ್ಳಿ ಸಮಮಾಡ್ವರೆ ನೀಂವ್ ಕೇಣಿ
ನಾನ್ಹೋತ್ತಿ ನನ್ನ ತೌರಿಗೆ
ಕಯ್ಡ್ಕೀಲಿ ಚಿನ್ನ ಇತ್ತ್ ಟ್ರೇಂಕಿಲಿ ಸೀರಿ ಇತ್ತ್
ಉಟ್ಹೋಗೆ ಹೆಣ್ಣೆ ತವರಿಗೆ
ಪಟ್ಟಸೀರಿಯ ಕಟ್ಟಿ ಕಿಚ್ಚಿಗೆ ಹಾಕಿನಿ
ನಾನ್ಹೋತಿ ನನ್ನ ತವರಿಗೆ

ಇಕ್ಕೇರಿ ಬಳ್ಗಾರ್‌ಗಂಡೆ ಅತ್ತೆರೆಲ್ಲಿಗ್ಹ್ವಾರ್
ಮುತ್ತಿನ್ ಮಲ್ಲಾರ ಹೊಗ್ಲಲಿ – ಇಟ್ಕಂಡ್
ಮುತ್ತೈದಿಯರಿಗೆ ಬಳಿ ಇಡ್ವಲೇ
ಮುಂದು ಪಟ್ಟಿ ಎಯ್ಡ್ ಹಿಂದೆ ಹಸುರೆಯ್ಡ್
ಕೆಂಪಿನ ಬಳಿಯ ನಡೂಕಿದು – ಬಳ್ಗಾರ್ ಗಂಡೆ
ಬಳಿ ಇಟ್ಟ ಕೂಲಿ ತೆಗ್ದ್ ಹೇಳ್
ದುಡ್ಡು ತೆಕಂಬನಲ್ಲ ರೊಕ್ಕು ಹಿಡೂನಲ್ಲ
ಗುಣುಕಂಡೇ ಬಳಿನ ಇಡುಸುವಿ !
ಇಕ್ಕೇರಿ ಬಳ್ಗಾರ್ ಗಂಡೆ ಸೊಕ್ಕಿನ್ ಮಾತಾಡ್ಬ್ಯಾಡ
ಲಕ್ಸ್ಪತಿ ನನ್ನ ಹೆರಿಯಣ್ಣ – ಕೇಂಡರೆ
ಮುತ್ತಿನ್ ಮಲ್ಲಾರ್ನೇ ಹೊಗ್ಲಿಗ್ಹಾಕ್ವ!

ಆಗುಂಬಿ ಘಾಟಿಲಿ ಆನಿಗೆಂಟಿಯ ಕೇಂಡ್
ಆನಿಗಾರುತಿಯ ಅನುಮಾಡ
ಆನಿಗಾರುತಿ ಬ್ಯಾಡ ನಂಗೆ ಮೂರುತಿ ಬ್ಯಾಡ
ದಾಳಿಂಬ್ದ ತಂಗಿ ದಣಿಬ್ಯಾಡ

ಹೋತ್ಹೋತಿ ಎಂದ್ಹೇಳಿ ಹೊಸ್ಲ್ಹತ್ರ ಗಳಿಯಳು
ಜೋತಿ ಮಾಣಿಕದ ಪುರುಸನ – ಚಿಟ್ಟಕಿ
ಹೋಪುಕವ್ಳಿಗೆ ಮನಸಿಲ್ಲೆ

ಬೆಳ್ಳಿ ಮಂಕದಣ್ಣಯ್ಯ ಬೆಳ್ಗಾಪಗೇನ್ಬಂದಿ
ಕಾಣ್ತಂಗಿ ಮದ್ವಿ ಮನಿಯಲ್ಲಿ – ನೀನದ್ರ
ಕಳ್ಸ ಹಿಡೂಕೆಂದ್ ಕರುಬಂದಿ
ಇಂದಿನ್ ಮದ್ವಿಗೆ ಇಂದೇ ಹೇಳಿಸಿಬಿಟ್ಟಿ
ಹಾಳುದೂಳಕ್ಕ್ ಬರಲಾರಿ
ಹಾಳುದೂಳಾದರೆ ನಾನಿದ್ದಿ ತಂಗ್ಯಮ್ಮ
ಮದ್ವಿ ಬಾ ತಂಗಿ ಗುಣದಿಂದ
ಕಂಟಾಣಿ ಕಡ್ದ್‌ಹೋಯ್ ಮಣಿಸರು ಹರ್ದ್‌ಹೋಯ್ತ್
ಬರ್ಲಾರಿ ಹಾಂಗೆ ಮದ್ವಿಗೆ
ಕಂಟಾಣಿ ಕಡ್ದ್‌ಹೋಯ್ ಮಣಿಸರು ಹರ್ದ್‌ಹೋಯ್ತ್
ಬರ್ಲಾರಿ ಹಾಂಗೆ ಮದ್ವಿಗೆ
ಕಂಟಾಣಿ ಕಟ್ಸುವಿ ಮಣಿಸರು ಬಿಗ್ಸುವಿ
ಮದ್ವಿ ಬಾತಂಗಿ ಗುಣದಿಂದ
ಎಮ್ಮಿಯ ಕರು ಹೆಕ್ಕಿ ಇಂದಿಗೆ ಮೂರ್‌ದಿವ್ಸೊ
ಬರ್ಲಾರಿ ಹಾಂಗೆ ಮದ್ವಿಗೆ
ಎಮ್ಮಿಯ ಕರುಹೆಕ್ಕ್ರೆ ಎಮ್ಮಿಗಿಮ್ಮಿನ್ ತಪ್ಪೊ
ಮದ್ವಿ ಬಾ ತಂಗಿ ಗುಣದಿಂದ
ದ್ಯನವು ಕರುಹೆಕ್ಕಿ ಇಂದಿಗೆಯ್ಡ್ ದಿವ್ಸಾದೊ
ಬರ್ಲಾರಿ ಹಾಂಗೆ ಮದುವಿಗೆ
ದ್ಯನು ಕರು ಹೆಕ್ಕಿರೆ ದ್ಯನಿಗ್ ದ್ಯನು ತಪ್ಪೊ
ಮದ್ವಿ ಬಾ ತಂಗಿ ಗುಣದಿಂದ
ನಾನೇ ಬಪ್ಪಿ ಅಂದ್ರೆ ಬಾಲಯ್ಯ ಬತ್ತ್ಯೆಂಬ
ಬರ್ಲಾರಿ ಹಾಂಗೆ ಮದುವಿಗೆ
ಬಾಲಯ್ಗೆ ದಂಡ್ಗಿ ತಪ್ಪೊ ಬಾವಯ್ನಿಗ್ ಕುದ್ರಿತಪ್ಪೊ
ಮದುವಿ ಬಾ ತಂಗಿ ಗುಣದಿಂದ !

ಮಾಯಿಗೂ ಸೊಸಿಗೂ ಜಗಳವು ಹಿಡ್ಕಂಡ್
ಹಿತ್ಲಿಗೆ ಹೋಯಿ ಮಣೆಬೆಚ್ಚಿ – ಮಗ್ನ್ಕರ್ದು
ತಕ್ಕ್ ಉತ್ತ್ರ ಕೊಡುವ ಸೊಸಿ ಬ್ಯಾಡ

ಮಕ್ಕಿ ಕಂಟದ ಮ್ಯಾಲೆ ನಿಂತೀರ್ ನಮ್ಮೊಡ್ಯ
ಒಕ್ಕ್ಲ್ ಅಣ್ಣಯ್ನ ಕರದರು – ಏನೆಂದು
ಚಣ್ಣಕ್ಕಿ ಭೂಮಿ ಬಿಡು ಮಗು
ಹಿಂದಿನ ಸಾಲದ ಮುಂದೆ ತೀರ್ಸ್ಕಂಬಿ
ಚಣ್ಣಕ್ಕಿ ಬೂಮಿ ಬಿಡ್ಲಾರಿ
ಒರ್ಗ್ಗಿತ್ತ ಗಟ್ಟತ್ತಿ ಮುರ್ಗ್ನ ಬ್ಯಾಂಟಿಗ್ಹೋಯಿ
ಮಣಿಗಾರ್ರ ಮಗ್ಳ ಒಡ್ಗೂಡಿ – ನಾ ಬಂದಿ
ಮನಿಮಡದಿ ನೀರ ಹದಮಾಡ !
ನಾನೀರ ಕಾಸ್ಕಾರೆ ನೀಂವ್ ನೀರ ಮೀಕಾರೆ
ಮಣಿಗಾರ್ರ ಮಗ್ಳ ಬಿಡಬೇಕು
ಹೊನ್ನಿಕೋಲಾಡತ್ತ್ ಬೆನ್ನುಬೂಲ್ ಬೇಡತ್ತ್
ಮನಿಮನಡಿ ನೀರ ಹದಮಾಡ !
ಹೊನ್ನಿಕೋಲಾಡುದ್ಯಾಕೆ ಬೆನ್ನುಬೂಲ್ ಬೇಡೂದ್ಯಾಕೆ
ಹಳ್ಳದಲ್ ಉಂಟೊ ಹಣಿನೀರು !

ಬಿಡ್ತಿ ಬಿಡ್ತಿ ಎಂದ್ ಬಿಂಕದ ಮಾತೇನು
ಬಿಟ್ಟಿರೀ ರಾಣಿ ಹೆದರ್ವಳಾ – ಸಂಪ್ಗಿಹೂಗ್
ಕೊಂಬರಿಲ್ಲದೆ ಉಳುವುದಾ?

ಕಂಚಿಗೆ ಕಾಯ್ ಬಾದ್ಯಾ ಲಿಂಬಿಗೆ ಎಲಿಬಾದ್ಯಾ
ಕಾಲುಂಗಿಲ್ ಬಾದ್ಯಾ ಬೆರ್ಳಿಗೆ – ಅಣ್ಣಯ್ಯ
ನಾ ಬಾದ್ಯಾ ನಿನ್ನ ಬಳಗಕ್ಕೆ?

ಉಂಡರು ಉಟ್ಟರು ಒಲ್ಲಿಯ ಹೊದಿದರು
ಹೋದ್ರು ನೆರಮನಿಯ ವಚನಕು – ನಾಕಂಡ್ರೆ
ಶಾಲಿ ಸೆರಗ್ಹಿಡಿದು ನಿಲಿಸುವಿ
ಸೆರಗ್ಹಿಡಿದ ಕೈಗೆ ಸೆರಿಹೊನ್ನ ಕೊಡುವೆನು
ಸೆರಗಬಿಡ್ಹೆಣ್ಣೇ ಮನಿಗ್ಹೋಪೋ
ಸೆರಿಹೊನ್ನ ಕೊಟ್ಟರೆ ಬೀದಿಲಿ ಬಿಕ್ಕುವಿ
ಒಡಲ ವೈರವನು ಬಿಡಲಾರಿ !

ಕೇರಿಮ್ಯಾಲ್ ಹೋಪವ್ನೆ ಕಾಳಿಂಗ್ನ್ ದ್ಯನಿಯವ್ವೆ
ಬಾಯಿಗ್ ಬಳ್ಳೆಲಿಯ ಕೊಡುತಿಯೋ?
ಕೊಡುವುಕೆ ಕೊಡುವೆನು ಕೊಡದೆ ಇಪ್ಪವನಲ್ಲ
ನನ್ ಸಂಗ್ರೆ ನೀನು ಬರಬೇಕು
ಬಪ್ಪುಕೆ ಬರುವೆನು ಬಾರದಿರುವವಳಲ್ಲ
ಯಾವ ರೂಪಿನಲಿ ಬರುವುದು?
ಅಂಗಿಯನ್ಹಾಕ್ಕೊಳ್ಳೆ ಪಂಚಿಯನುಟ್ಕೊಳ್ಳೆ
ತಲಿಗೆ ರುಮಾಲಿಯ ಸುತ್ಕಂಡ್ – ಎಲೆಹೆಣ್ಣೆ
ದೊರಿಮಗನ್ಹಾಂಗೆ ಬರಬೇಕು !

ತಲಿಗೆ ರುಮಾಲಿಯ ಸುತ್ಕಂಡ್ ಎಲೆಹೆಣ್ಣೆ
ದೊರಿಯ ಮಗ ಬಂದ ಹಸಿಹಾಕು !
ನನ್ನಣ್ಣ ಬರಲಿಲ್ಲೆ ನನ್ನ್ ತಮ್ಮ ಬರಲಿಲ್ಲೆ
ಯಾರಿಗೆಂದ್ ಹಸಿಯ ಬಿಡಿಸೂದು?
ಅಂಗ್ಡಿಗೆ ಹೋಗ್ಹೆಣ್ಣೆ ಗುಳ್ಳ್‌ಕಾಯಿ ತಾ ಹೆಣ್ಣೆ
ನಂಗೂಬಿದ್ದಿನಗೂ ಒಡನೊಂಟೊ !
ಎಲ್ಲವ್ರ್ ಬಿದ್ದಿನಗೆ ಹಣ್ಣ್‌ಗಡ್ಡು ಗುಲ್ಲ್‌ಮೀಸಿ
ನಮ್ಮನಿ ಬಿದ್ದಿನಗೆ ಸೋರ್‍ಮೊಲಿ !
ನಂಗೂ ಬಿದ್ದಿನಗೂ ಒಡನೂಂಟೊ ಹಾಕಿಕಿ
ಹೋಗ್ಹೆಣ್ಣೆ ನಿನ್ನ ತವರಿಗೆ !
ಒಬ್ಬೇ ನಾ ಬರಲಿಲ್ಲೆ ಒಬ್ಬೇ ನಾ ಹೋಗ್ಲಾರಿ
ಸಾಯಿರ ಕೊಟ್ಟು ಸಭಿಹೂಡಿ – ನನ್ನ್
ಬಂಗಾರ್‍ದ್ ಬಂಡಿ ಹೊಡ್ದ್‌ಕೊಡಿ !

ಹೆಣ್ಣು ಹುಟ್ಟಿತು ಎಂದು ಅಣ್ಣಯ್ಯಂಗ್ಹೇಳ್ಸಿ ಬಿಟ್ಟಿ
ಬಣ್ಣದ ತೊಟ್ಲ್ ಗಿಜ್ಜ್‌ಗತ್ತಿ – ದಿಟ್ಟಿಸರು
ಹೆತ್ತೇಳೇ ದಿನೆಕ ಕೊಡಬೇಕು
ಹೆಣ್ಣು ಹುಟ್ಟಿರೆ ಮ್ಯಾಳಿಯ ತಿಪ್ಪೆಂಬ
ತೊಟ್ಟಿಲು ನೇಣು ಕೊಡ್ಲಾರಿ !
ಪಾಪಿ ಅಣ್ಣನ ಮನಿಗ್ಯಾಕೆ ಹೇಳಿಸಿ ಬಿಟ್ಟೆ
ಕಾನೊಳಗ್ಹೋಯಿ ಕಣಜಿಯ ಎಲಿತಿಂದು
ಹಾರುವಿ ಅದನು ಹೊದಿಸುವಿ !

ಕಳಿಹುಲ್ಲಿಗಂಜಿ ಓಡ್ಹೋದ್ಲ್ ಸೊಸಿಮದ್ದು
ಕರ್ದ್ ತಾರೊ ಮಗನೇ ಹೊಸ್ತುಂಬೊ
ನಾನಾಯಿ ಹೇಳೆನು ಅವರಾಯಿ ಕಳುಹರು
ಆ ಮಗು ಅಂಗ್ಣ ಇಳಿಯದು – ತಾಯಮ್ಮ
ನೀನ್ಹೋಯಿ ಸೊಸಿಯ ಕರತಾರೆ
ಹೊನ್ನಿ ಹೊಗಳ್ದಾಂಗೆ ಕೊಟ್ಟಿತ್ತು ತೆರದ್ಹಣು
ಜುಟ್ಟಿಗ್ ಕೈಕೊಟ್ಟು ಕರತಾರೋ !

ಕೆರಿಯ ದಂಡಿಯ ಮ್ಯಾಲೆ ಎರಿನ್‌ಸಾಲ್ ಹೊಯ್ದಾಂಗೆ
ಅರಿಯೆ ನಾನತ್ತಿ ಕೆಲ್ಸವು – ನನ್ನ್‌ತಾಯಿ
ಸರಿಚಿನ್ನು ಹಾಕಿ ಕಳುಸ್ಯಾಳು !

ಸರಿಚಿನ್ನು ಹಾಕಿರೆ ಕಳಚಿ ಪೆಟ್ಗಿಲಿಡು
ಹಿಡಿಹೆಣ್ಣೇ ಸುಳಿಯ ಮಣ್ಹೆಡ್ಗಿ !
ಹಿಡಿಹೆಣ್ಣೇ ಸುಳಿಯ ಮಣ್ಹೆಡ್ಗಿ ಎಂಬುದಕೆ
ಅರುವತ್ತಾರ್ಹಳ್ಳಿ ಕುಸುಬಿಯು – ಗೌಡ್ಯರ ಮಗ್ಳ
ತಪ್ಪಂಗೆ ಅತ್ತ್ಯಮ್ಮ ಅರಿವರು !

ನೆರೆಮನಿಯವ್ನ್ ಕೂಡೆ ಮಾತೇನಾಡಿದಳೆಂದು
ಯಾತ್ರಾಗ್ಹೋಡ್‌ದ್ಯಣ್ಣ ಮಡದಿಗೆ ?
ಹೊಳಿಯ ಹೊನ್ನಿಯ ಬೇರು ಎಳಿಯ ಬೆತ್ತದನೇಣು
ಅರಗಿತು ಹೆಣ್ಣೇ ಕುರುಬೆನ್ನು !
ಅಯ್ಯೋ ನನ್ನ್ ಜೀಂವೆ ವಯ್ಯಾರ್ದ್ ಮಿಳಿಹಾಂಗೆ
ಹೊಡುವರಿಗಿನ್ನಾಂಗೆ ಕೈಬಂದೊ–ಕುಂದ್ರಾಪ್ರ
ಹಡ್ದಮ್ಮ ಕೇಳೀರ್ ಮರುಗೂಳು

ಹೊತ್ತಾರೆ ಮುಂಚ್ಹೋದವ್ರ್ ಹೊತ್ತ್ಹೋರೂ ಬರಲಿಲ್ಲೆ
ಯಾರ್ಹೆಂಡ್ರ ವ್ರತವ ತಡದಿರಿ?
ನಿನ್ನಂಥ ಸ್ತ್ರೀಯರು ಎತ್ತುಪಗ್ಡಿ ಆಡ್ವಂಗೆ
ನಿಂತೆಯ್ಡೇ ಗಳ್ಗಿ ತಡುವಾಯ್ತು !

ಭಾವಯ್ನ ತಲಿಮ್ಯಾಲೆ ಏಳೆಸ್ಲ್ ಕ್ಯಾದಗಿ
ಬೇಡ್ಕಣಿಯಕ್ಕ ಸೆರಗೊಡ್ಡಿ – ಭಾವಯ್ಯ
ಪಾದಕ್ಕೆ ಬಿದ್ದೊರತು ಕೊಡಬ್ಯಾಡಿ
ಬಾಡಿದ ಹೂಗಿಗೆ ಪಾದಕ್ಕೆ ಬೀಳೂಕೆ

ಬ್ಯಾಡ ಕಾಣ್ವೆಣ್ಣೆ ಹಳಹೂಗ್ – ಅನ್ಗಳ್ಳಿ
ನನ್ನಾಯಿಗ್ ವಾಲಿ ಬರಿಯುವಿ – ತಂಗ್ಯಮ್ಮ
ಮಂಗ್ಳೂರ್ ಮಲ್ಗಿನೇ ಕಳುಗೂಳು !

ಹೆಂಡಿರು ಮಕ್ಕಳಿಗೆ ಹಿಂಡೆಮ್ಮಿ ಹೊಡದರು
ಬೆನ್ಹಿಂದೆ ಬಂದ ಕಿರಿತಂಗಿ – ಮಕ್ಕಳಿಗೆ
ಹಿಂದಿನ ಸಾಲ ಬರದ್ಹಾಕಿ

ನಿಮ್ಮಾಣಿ ಅತ್ತಿಗಿ ನಿಮ್ಮಣ್ಣಂಗ್ ಸನಿವಾರೊ
ಬಣ್ಣದ ಕಾಪ್ಲಿನ ಕೊಡಬೇಕು
ಬಣ್ಣದ ಕಾವಲಿನ ಮೊನ್ನೊಬ್ಬು ಕೊಂಡ್ಹೋಯಿ
ಎಣ್ಣೆ ತೋರ್ಸದೆ ಗೆಮ್ಸಿದ್ಲು – ಅತ್ತಿಗಿ
ಬಣ್ಣ ಕಾವಲಿನ ಕೊಡ್ಲಾರಿ – ಅತ್ತಿಗಿ
ಬಣ್ಣನಿ ಸಕು ಮನಿಗ್ಹೋಗು !
ಹಾಲ ಹಚ್ಚಡ ದೊರಿಯೇ ನೀಲ್ಹೊಂಟಿ ಕೆಮಿಯೋರೇ
ನಿಮ್ಮ್ ತಂಗಿ ಕಾವಲಿನ ಕೊಡ್ಲಿಲ್ಲೆ !
ಹೊನ್ವಾಲಿ ಕೆಮಿಹೆಣ್ಣೆ ಹೆಸರೇ ಜಂತಕದವ್ಳೇ
ಕಡ್ಬು ಕೆಮಿಹೆಣ್ಣೆ ಹೆಸರೇ ಜಂತಕಿದವ್ಳೇ
ನೆರಮನಿ ಅತ್ತಿಗ್ನೇ ಬರಹೇಳು

ಅಪ್ಪನೂ ಅಬ್ಬಿಯೂ ಸೂರಾಲ್ ಹಬ್ಬೂಕ್ ಹೋಯಿ
ಸೂರಯ್ಯನೆಂಬ ಮಗಹುಟ್ಟಿ – ಮಾರ್ನಿವರ್ಸೊ
ಲೀಲಾವತಿ ಎಂಬ ಸೊಸಿ ಬಂದು – ಸೂರಯ್ಯ
ಹೆತ್ತಮ್ಮ ಹೊರಗೆ ಹೊಯ್ಡೆಂದ !

ಆನಂದಪುರದಲ್ಲಿ ಅರಳಿಕಟ್ಟೆಯ ಮ್ಯಾಲೆ
ಏನ್ಹೇಳೀರಪ್ಪ ಮಗನಿಗೆ – ರಾಜೀವಂಗೆ
ಚಣ್ಣಕ್ಕಿ ಬೂಮಿ ಅವನಿಗೆ – ಕೊಟ್ಟರೆ
ಮಗಳು ಗುಲಾಬಿ ಮುನುವಳು
ಮಗಳು ಗುಲಾಬಿ ಮುನಿದ ಕಾಲಕ್ಕೆ
ಹಟ್ಟಿಲಿದ್ದ್ ಎಮ್ಮಿ ಅವಳಿಗೆ

ಸಾಕಣ್ಣ ಸಂಸಾರ ದೂಕಣ್ಣ ದೋಣಿಯ
ದಾಂಟ್ಸಿ ಕೊಡಣ್ಣ ಹೊಳಿಂದಾಚಿ – ಅಪ್ಪನಮನಿ
ಸೀಮಂತಕ್ಹೋಯಿ ಬರುವೆನು

ನೀರಿಗ್ಹೋದೆಣ್ಣೆ ಇನ್ನಾರೂ ಬರಲಿಲ್ಲೆ
ಅಲ್ಯಾರೆ ನಿನ್ನ ತಡದರು?
ಶೆಟ್ಟ್ರ ನನ್ ತಡಿಲಿಲ್ಲೆ ಬಟ್ಟ್ರ ನನ್ನ್ ತಡಿಲಿಲ್ಲೆ
ಹೆಡಿಬಿದ್ದೇ ಕೊಡನು ಜರಿದವು
ಅತ್ತಿಕಾಲದ ಕೊಡ ಮಾವ್ನ್‌ಕಾಲದ ಕೊಡ
ಜರಿದ್ಯಲೆ ಹೆಣ್ಣೆ ಹಳಕೊಡ

ಚಿನ್ನದ ಕೊಡನಲ್ಲ ಬೆಳ್ಳಿಯ ಕೊಡನಲ್ಲ
ಮಣ್ಣಿನ ಕೊಡಕೊಟ್ಟೇ ಮರುಗೂರೀ – ಅತ್ತ್ಯಮ್ಮ
ನನ್ನ್ ಅಣ್ಣಂಗ್ ವಾಲಿ ಬರದೇನು – ಅತ್ತ್ಯಮ್ಮ
ಬೆಳ್ಳಿಕೊಡನೂರ ಕಳಗುವ – ಅತ್ತ್ಯಮ್ಮ
ಚಿನ್ನ ಕೊಡನೂರ ಕಳುಗುವ

ನೀರಿಗೆ ಹೋದ್ಹೆಣ್ಣೆ ಇನ್ನಾರೂ ಬರಲಿಲ್ಲೆ
ಅಲ್ಲ್ಯಾರೆ ನಿನ್ನ ತಡದರು?
ನನ್ಹಾಂಗೆ ಇದ್ದಾಗಳಿಕೆ ನೀಂವ್ ನೀರಿಗ್ಹೋದಾಗಳಿಕೆ
ಅಲ್ಲ್ಯಾರೆ ನಿಮ್ ತಡದರು?
ನಾ ನಿನ್ನ ತಪ್ಪಂಗೆ ಮೂರುವರ್ಸದ ಬಾಲಿ
ಈ ಮಾತನ್ಹ್ಯಾಂಗೆ ಕಲಿತಿಯೇ?
ಹುಟ್ಟಿದ ಮನುಸರು ಹುಟ್ದ್ಹಾಂಗೆ ಇರುವರಾ
ದಿನುಕೊಂದ್ ಬುದ್ದಿ ಕಲುವರು !

ದುಃಖನಿವೇದನೆ

ಹ್ಯಾದಿಮ್ಯಾಲ್ಹೋಪವ್ರೆ ಹಾಡೆಂದು ಕಾಣ್ಬ್ಯಾಡಿ
ಹಾಡಲ್ಲ ನನ್ನ ಒಡಲುರಿ – ದೇವರೆ
ಬೆಗರಲ್ಲ ನನ್ನ ಕಣ್ಣೀರು

ಹಾದಿಯ ಗೆದ್ದಿಯ ಹಾಯದಿರು ಬಸವಣ್ಣ
ಬಾಲರಂದಿಗರ ಬಡವರ – ಗೆದ್ದಿಯ
ಹಾಯದೆ ಬಾರೊ ಬಸವಣ್ಣ

ಮಕ್ಕಿದಂಡಿಯಮ್ಯಾಲೆ ಬಿಕ್ಕಿ ಬಾಗಳ್ಹೂಗು
ಹೆಕ್ಕಿ ಮುಡ್ಯೊ ಮಗಳೇ ಮನಿಲಿಲ್ಲೆ – ಅಪ್ಪಯ್ಯ
ಗಂಡನ ಮನಿಗೆ ನಡೆದಳು

ತಾಯಿ ಸತ್ತಮ್ಯಾಲೆ ಯಾರು ಆಸ್ರಯ ನಮಗೆ
ಅಪ್ಪಯ್ಯ ಒಂದು ಮರುಮದ್ವಿ – ಮಾಡ್ಕಂಡ್ರೆ
ಮಕ್ಕಳೆಂದಾಸಿ ನಮ್ಗಿಲ್ಲೆ

ನಮ್ಮನಿ ದೇವ್ರಿಗೆ ಏನಂಜಲಾದವು
ಹಾಲೆಂಜಲಾಯ್ತು ಕರುಕುಡಿದು – ಬಾಳಿಯ
ಹಣ್ಣೆಂಜಲಾಯ್ತು ಗಿಣಿತಿಂದು

ಬಡತನವೆ ನೀ ನನ್ನ ಬಿಡದೆ ಬೆನ್ನಿಲಿ ಬಂದೆ
ಕಡುಕಷ್ಟಗೊಳಿಸಿ ದಣಿಸಿದೆ – ಹೊನ್ನುಳ್ಳ
ಹೊಲಿಯಂಗೆ ಕೈಯ ಮುಗಿಸಿದೆ

ಬತ್ತೊ ತೊಳು ಕೊಟ್ಗಿಗೆ ಬಪ್ಪವ್ರ್ ದಿಕ್ಕಿಲ್ಲೆ
ಯಾರಿಗೊಂದ್ ಮಣಿಯ ಕೊಡ್ಲಕ್ಕ್ – ತೆಂಗಿನ
ಬೇರು ಬಿಟ್ಹಾಂಗೆ ಬಳಗವು

ಚಿಪ್ಪಿಲಿ ಹಾಲೆರದು ಬಟ್ಟಿಲಿ ಕಪ್ಪುಚ್ಚಿ
ಹತ್ತೆಂಟು ವರ್ಸ ಸಲಹಿದಿ – ಮಗ್ಳನ್ನು
ಹ್ಯಾಂಗಮ್ಮ ಮರತು ಬದುಕಲಿ

ಸೊಲಿಸೊಲಿ ಬತ್ತವೆ ನನ್ನ ದಣಿಸಲು ಬ್ಯಾಡ
ನಿತ್ಯ ಪೂಜಿಸುವಿ ಒರ್ಲಲ್ಲಿ – ಸಂಕರನೆ
ಮುಸ್ಟಿ ಪೂಜಿಸುವಿ ಮುಡಿನೂರು

ಮನಿಲಿ ಮಕ್ಕಳ್ ಗುಲ್ಲು ಹಟ್ಟಿಲಿ ಕರಾಳ್ ಗುಲ್ಲು
ಅಸ್ವಂತ್ನ್ ಗುಲ್ಲು ಗೆದ್ದಿಲಿ – ತಿರುಪತಿ
ತಿಮ್ಮಪ್ನ್ ಗುಲ್ಲು ಬಯ್ಲಲ್ಲಿ

ಕೆಮ್ಮಣ್ಣಗುಡ್ಡಿಲಿ ಉಮ್ಮಣ್ಣದೇವರು
ನನ್ತಾಯಿ ಹೋಯಿ ಕೈಮುಗಿದು – ಬಪ್ಪಂಗೆ
ಮುಂಗ್ರಿ ತನ್ನ್ ಮೂಂಜ ಮುರ್ಕಂಡ್ಲ್

ಮಗನ್ನಾರು ಪಡಿಕಾರೆ ಮುಗ್ಲ್ ಮುಟ್ಟಿತು ಬ್ಯಾನಿ
ಮಗುನ್ನುಟ್ಟಿ ನೆರದು ಸೊಸಿಬಂದು – ನಿಂತಾಗ
ಹೆತ್ತಮ್ಮ ಹೆರಗೆ ಹೆಯ್ಡಮ್ಮ

ದಾರಿಮ್ಯಾಲ್ ಹೋಪವ್ನೆ ಹರ್ಗಿಸಪ್ಪಿನ್ ಕಳ್ಳ
ಈ ಬುದ್ದಿ ಎಲ್ಲಿ ಕಲ್ತಿಯೋ – ಗಿರಿಯನೇ
ನಾಯ್ಗಿದ್ದ ಬುದ್ಧಿ ನಿಂಗಿಲ್ಲೆ

ಬಾಳುವ ಮನಿಯಲ್ಲಿ ಹತ್ತೆಂಟು ಹೇಳೂರು
ಬಾವುಲಿ ಕೆಮಿಯ ಮರಿಮಾಡು – ನರಸಿಯೆ
ಬಾಮಿ ತೀರುತಕೆ ನಡಿ ತಾಯಿ

ನನ್ನಣ್ಣನಾಯಿರೆ ನನ್ನೂರಿಗ್ ಬತ್ತಿದ್ದ
ನನ್ನಣ್ಣನಲ್ಲ ಪರಬಾರಿ – ಹೆರಿಯಬ್ಬಿ
ಮಗನು ನೂರ್ ಹೆದ್ರ್ಸಿ ಗಳ್ದೋದ

ನುರಿನುರಿ ಬತ್ತುವೆ ನಮ್ಮದಣಿಸಲು ಬ್ಯಾಡ
ನಿನ್ನ ಕೊಡುಸುನೋ ಒರ್ಲಲ್ಲಿ – ಈ ಮನಿಯ
ಅಟ್ಟಿಕೊಡ್ಸುನೋ ಮುಡಿನೋರು

ಈಗಳ್ ಹೆಣ್ಣ್‌ಮಕ್ಳೇ ಯಾಕೆ ನೀಂವ್ ಬೆರಗಾಪ್ರಿ
ಲೋಕದ ಸೂರ್ಯ ಎಯ್ದಂಟಾ – ನನ್ನಂಥ
ಪಾಪಿ ಜೀವುಂಟಾ ಜನರಲ್ಲಿ?

ತಿಂಗಳ ಬೆಳಕಿಲಿ ನಾ ಶಾಲಿ ಉಡ್ವಂಗೆ
ಅಣ್ಣ ನಿನ್ನ್ ಕೈ ರತ್ನದುಂಗಿಲು ತಾಗಿ
ನಾನುಟ್ಟ ಶಾಲಿ ಹರಿಯಿತು !

ಬಾಳಿಪಟ್ಟಿಯ ಸೀರಿ ಬೇಕೆಂದೇ ನಾ ತರ್ಸಿ
ಯಾಕ್ ಸ್ವಾಮಿ ನೀವು ಮುನುವುದು – ನಮ್ಮನಿಯ
ರಾಜಯ್ನ ಮದಿಗೆ ಉಡಬೇಕು

ತಿರುಪತಿ ತಿಮ್ಮಪ್ಪ ಮಡದಿಗೇನ್ ಹೇಳೂರ್
ಮಾರುಣ್ಣು ಹಣ್ಣು ಕೆಳಗ್ಹೋಯಿ
ಮಾರುಂಡ್ರೆ ಹಣ್ಣು ನೀಂವ್ಯಾಕೆ ನನ್ನ್‌ಗಂಡ
ತೊಳಸಿ ಕೊಯ್ದುಂಬಿ ದಯದಿಂದ

ಸನಿವಾರೊ ಸಂಕ್ರಾಂತಿ ತಪ್ಪದೆ ನೆಂಟರು
ಒಡದ್ಹಾಕಿದಕ್ಕಿ ಬರಿದಾಯ್ತು – ಅಣ್ಣಯ್ಯ
ಅಟ್ಟದಡಿಯಕ್ಕಿ ಒಡ್ಕೊಡೋ

ಹ್ವಾದಲ್ಲಿ ನನ್ನ್ ಸುದ್ದಿ ಬಂದಲ್ಲಿ ನನ್ನ್ ಸುದ್ದಿ
ಸೀಗಿ ಬಲ್ಲಿಲಿ ನನ್ನ್‌ಸುದ್ದಿ – ಆಡ್ವರಿಗೆ
ಎಡಗಾಲು ಅವರ ಎದಿಮ್ಯಾಲೆ

ಅಕ್ಕ ನಿನ್ಮಗನಿಗೆ ಸಿಟ್ಟಿಲೊಂದ್ಹೊಡದಿದ್ದಿ
ಹೂಗಿನ ಕೋಲೇ ಹೊಯ್ಲಿದ್ದು – ಅಕ್ಕಕೇಣ್
ಅಕ್ಕ ಸಿರಿದೇವಿ ಮುನಿದಳು

ಹಣಿಯಲಿ ಬರದಕೂ ಮೊದಲುಂಡ ಸಾಲಕೂ
ಬ್ರಹ್ಮ ನೀ ಬರೆದ ಬರಹಕೂ – ನಾನೀಗ
ಹಗರಣವಾದಿ ಜನರಿಗೆ

ನಾನು ಸಣ್ಣಳಾದಿ ಕಾಚಿನ ಬಟ್ಟಾದಿ
ಕನ್ನಡಿ ಕಾಂಬೂಕ್ ಹಯ್ಯಾದಿ–ಬ್ಯರ್ಮಾರ್ದ್
ರಾಜ್ಯವಾಳ್ವರಿಗೆ ಮಗಳಾದಿ–ಚಾಂತಾರಿನ್
ಸೀಮಿಯಾಳ್ವರಿಗೆ ಸೊಸಿಯಾದಿ

ಮಾನವ್ರ ನಂಬಿ ನಾನಿದ್ದ ಮಗಳಲ್ಲ
ದೇವರ ನಂಬಿ ಗಿಡವಾಯಿ – ಶಾನಾದಿ
ಹಾಯ್ಗುಳಿ ನಂಬಿ ಕೆಡುವೆನೇ !

ಅಪ್ಪಯ್ಯ ಕೊಟ್ಟೀರ್ ಬಾಳಿಪೆಟ್ಟಿಯ ಸೀರಿ
ಮ್ಯಾದ್ಲಿಗೂ ಬಾರ ನೆರಿಬಾರ – ಅಪ್ಪಯ್ಯ
ಮಾರ್ಕಣ್ಣಿ ನಿಮ್ಗೆ ಹಣುಬುಕ್ಕ್ !

ಕಾಕಿಕಣ್ಣಿನ್ ಬತ್ತೊ ಗೋಪಿಚಂದ್ನದೊನ್ನಿ
ಆ ಬತ್ತೊ ತೊಳ್ದ್ ಜರುಜಂತ್
ಬಸಿಬಿಸಿ ಕೂಳಿಗೆ ಬಸ್ಲಿ ಸಪ್ಪಿನ್ ಮ್ಯಾಲಾರೊ
ಅದ್ಹಾಯ್ಕಂಡ್ ಉಂಡು ಜರುಬಿಡ್ತ್

ಹತ್ತು ಕೊನಿಹೂಗ ತೆಕ್ಕಿಲ್ತುಂಬ್ಬಿಡ್ಕಂಡ್
ಮತ್ತೊ ಸಾಲಂದು ಮನಿದೆಯ್ಯೊ – ಮರ್ಲ್ಚಿಕ್ಕು
ಹೂಗ್ ಸಾಲಂದು ಮುನಿದಳು

ಎಡಿತಿಲ್ಲೆ ಎಂದ್ಹೇಳಿ ಯಾರಲ್ಲಿ ಹೇಳೂದು
ಎಡಿತಿಲ್ಲೆ ಜೀಂವ ಮಡಿತಿಲ್ಲೆ – ಸ್ವರ್ಗದ
ಬಾಗಿಲ ತೆರಿಯೋ ಯಮರಾಯ

ಬಂದ ಬಂದವರೆಲ್ಲ ಬಣ್ದ ಚಾವ್ಡಿಗ್ಹೋಯ್ನಿ
ನಂಗೂ ನಮ್ಮನಿಯ ಕೆಲ್ಸವು – ಬಿದ್ನರೆ
ಬಣ್ದ ಮಾತಾಡಿ ಕಳುಗುವಿ

ಹಾಡ್ಹೇಳೆ ಹಳಿರಂಡಿ ನೀ ಕೇಳೆ ಮುದಿರಂಡಿ
ಶೋಬಾನಿ ಕೊಡೆ ಸೊಸಿರಂಡಿ – ಸಾಕಾಯ್ದಿರೆ
ಕೆರಿಮನಿ ರಂಡೀರ್ನು ಕರದುಕೊ

ಬ್ಯಾಡ ಬ್ಯಾಡಂದರೂ ಬೆನ್ಹತ್ತಿ ಬರುವರು
ಅಲ್ಲ್‌ಕಾಣಿ ಸ್ವಾಮಿ ಜಲಮೀಯೂ – ಜಾಲ್ದ್‌ಹೂಗ
ತಂದ್ರೊಂದ್ ಗಳಿಗಿ ಮುಡ್ಕಂಬಿ

ಲಕ್ಸಪತಿ ಇದ್ದಂತೆ ಭಿಕ್ಸವ ಬೇಡ್ವಳು
ಹಾಲಿದ್ದೇ ಇಸವ ಕುಡುವಳು – ಮಾರಾಯ್ರೇ
ನೀವಿದ್ದೇ ಪರರ ನೆರುವಳು

ಯಾರೂ ಇಲ್ಲೆಂದ್ಹೇಳಿ ನೀರ ಸೇದಲು ಹ್ವಾದಿ
ನೀರೊಳಗೊಂದು ಎಳನಾಗ – ಕೂಕಂಡ್
ನಾನಿದ್ದಿ ಅಮ್ಮ ಮುನಿಗ್ಹೋಗು !

ಕ್ವಾಣಿ ಕ್ವಾಣಿಗೂ ಸಾರಿ ಕಾನದೀವಿಗಿ ಹಚ್ಚಿ
ಮಡದಿ ಇಲ್ಲವ್ನ ಸದರಲ್ಲಿ – ಮಾವಯ್ಯ
ಏನು ನೀಂವ್ ಬರಿದೆ ಅರಸುವ್ರಿ

ಕಟ್ಕೆರಿ ಬಯ್ಲಲ್ಲಿ ಉತ್ಮೆಟ್ಟಿ ಕುಂಕ್ಮಚೆಲ್ಲಿತ್ತ್
ಲತ್ತ್ ಬಿದ್ಹೋಯ್ತು ನೆಲಗುಳ್ಕಿ – ಕಟ್ಕೆರಿ
ಹರ್ಕಿ ಸಂದ್ಹೋಯ್ತು ತಳದಲ್ಲಿ

ಆಪತ್ತಿನ್ ಕಾಲಕೆ ಆಪಿ ಅಂಬವರಿಲ್ಲೆ
ಒಡಹುಟ್ಟಿದಣ್ಣ ತುಲ್ದಸಿ – ಕೂಕಂಡ್
ಬಾಯಿಗೆ ನೀರ ಬಿಡವನು

ಬತ್ತು ತೊಳುವರ ಕೈಗೆ ಬಯ್ನಿ ಮುಳ್ಹೆಟ್ಟಿತು
ನಾತೊಳು ಬತ್ತೊ ಹನಿಆರ್ಗಿ – ತೆಂಗಿನ
ನೆಳಲು ಬಂದಕ್ಕಿ ಕಡಿಯಾದೊ

ಬೇಲಿ ಮ್ಯಾಲಿದ್ದೂಗು ಬೆಳ್ಳಗಿದ್ದರೇನು
ನಾ ಮುಡ್ದುಬಿಟ್ಟ ಹಳಿಹೂಗ್ – ಪಚ್ಚಿಕದ್ರ್
ಬೇಕೆಂಬ ಸವತಿ ಮುಡಿದ್ಹೋಗು

ಒಂದ್ ಒರ್ಲ್ ಬುತ್ತುನ ಬಂದ್ದೂಡ್ ಅಕ್ಕಯ್ಯ
ಉಂಗಿಲು ಕೊಡುವಿ ಬೆರ್ಲಿಗೆ – ಅಕ್ಕಯ್ಯ
ಬಂದಿಯ ಕೊಡುವಿ ತೋಳಿಗೆ

ಹಾಂಗಲ ಕಾಯನ್ನು ಹ್ಯಾಂಗೆ ಅಟ್ಟರೂ ಕೈಂಯೆ
ಹಾಲು ಬಟ್ಟಿಟ್ರೂ ಕಿರುಕಂಯಿ – ಅತ್ತಿಗಿ
ಹ್ಯಾಂಗೆ ಮಾಡಿದರೂ ಹಿತುವಿಲ್ಲೆ

ಪುಟ್ಟುಡ್ಗ ಪುಟ್ಟುಡ್ಗ ಯಾತರ ಪುಟ್ಟುಡ್ಗ
ಮಾಗಾಯಿಯಿಲ್ಲೆ ಮುರುವಿಲ್ಲೆ – ಪುಟ್ಟುಡ್‌ಗೆ
ಮಾಡಿಸೂರುಂಟು ಹಣುವಿಲ್ಲೆ

ಕೊಲ್ಲೂರ ಮೂಕಾಂಬಿ ಸುತ್ತು ತೀರ್ತಕೆ ಹೋಯಿ
ಚಕ್ರಸುವೆಯ್ಡೂ ಕಳದ್ಹೋದೊ – ಮೂಕಾಂಬಿ
ದುಃಖ್ದಲ್ಲಿ ತೇರ ಎಳಸೀರ

ಹಾಡುಹೇಳಲು ಬನ್ನಿ ಸಾಜ ಮುತ್ತೈದಿಯರು
ರಾಗೆಳುವ ಬನ್ನಿ ರತ್ನರು – ಈ ಮನಿಯ
ವಾಯ್ಣಾರ್ಛೇಳ್ವರೆ ಒಳಗ್ಹೋಯ್ನಿ

ಬೆಳಿಕುದ್ರಿ ಹತ್ಕಂಡ್ ಬೆಳ್ಗಿನ್ ಸಾರಿಗ್ ಹೆಯ್ಬ
ಇನ್ನಾರೂ ಅಣ್ಣ ಬರಲಿಲ್ಲೆ – ಕುಂದಾಪ್ದ್ರ
ಸರ್ಕಾರ ಸಾಕಾ ಮನಿಬೇಕಾ?

ಬಾಳಿಯ ಬಳ್ಳಿಯು ನೀರಿಲ್ದೆ ಉರಿದವು
ನೀನ್ಯಾಕೆ ಉರಿದಿ ತೊಳಸಿಯೆ – ನಮ್ಮನಿ
ನಂದಗೋಕುಲದ ಕಣನಲ್ಲಿ !

ದಾನು ಮಾಡ್ಡ್ ಜೀಂವಲ್ಲ ಧರ್ಮುಮಾಡ್ದ್ ಜೀಂವಲ್ಲ
ಹ್ಯಾಂಗ್ಹೋಯ್ಲಿ ಜೀಂವೇ ಸ್ವರ್ಗಕ್ಕೆ – ಬಾಗ್ಲಿಲಿ
ಉಕ್ಕಿಸ್ದ ತಂತಿ ಉರಿಎಣ್ಣೆ

ಆಚಾರಿ ಸಾಲಿಲಿ ಆಚಿ ಕೂತವನ್ಯಾರು
ಆ ತಂಗಿ ಗಂಡ ಮೈದಿನ – ಕೂಕಂಡೆ
ಮಂಗ್ಳ್ವಾರೊ ಮಗಳೆ ಮನಿಗ್ಹೋಗು

ಬತ್ತೊ ತೊಳುವುದು ಒಪ್ಪೊತ್ತಿನ್ ಕೆಲಸವು
ವಾರಗಿ ನನ್ನ ವೈರಿಯಾದ ಮ್ಯಾಲೆ
ವಾಲಾಡ್ತ ಬತ್ತೊ ತೊಳ್ಸುವಿ

ಸಂಪಿಗಿ ಮರನಡಿ ತಂಪಿಗೆ ನಾ ನಿತ್ತಿ
ಕೊಯ್ಲಿಲ್ಲೆ ಹೂಗ ಮುಡಿಲಿಲ್ಲೆ – ದೇವರೆ
ಮಾತಿನ್ ಸರಳಿಗೆ ಗುರಿಯಾದಿ

ಅತ್ತಿ ಒಳ್ಳೇರಾರೂ ಪುತ್ರ ಚೆಲುವನಾರೂ
ಅಕ್ಕ ನಿನ್ಮನಸು ಕುಶಿಯಾರೂ – ಬೈಂದೂರ
ಬಡವಂಗೆ ಹೆಣ್ಣ ಕೊಡಲಕ್ಕ?

ಹೊತ್ತಾರೆ ಎದ್ದಿದಿ ಹೊತ್ತೆರಗಿ ಬಯ್ಯಾದೊ
ಸ್ವಾಮಿ ನಿಮ್ಮೂರು ಸುಡುಗಾಡು – ಕೆಂಜಿಮುಳ್ಳ್
ಸೆರಗು ತಪ್ಪಿಸಿದಿ ಬೆಳಗಾಯ್ತು

ಏಗಳೀಕ್ ಕಂಡರೂ ತಮ್ಮಯ್ಯ ಮನಿಲಿಲ್ಲೆ
ಗ್ವಾಯಾ ನಾಡಾಚಿ ಹುಲಿಬ್ಯಾಂಟಿ – ಹುಡ್ಗೀರ್‌ಸಂಗ್ತೆ
ಮನಿಮಡದಿ ಚಿಂತಿ ಬಿಡುವಳು

ಈ ಬತ್ತೊ ಕುಟ್ಟಿಕಿ ಈ ಅಕ್ಕಿ ಮಾಡಿಕಿ
ಈ ಹೊಳಿಂದಾಚಿ ಅರಿಹೊಳಿ – ನೀರ್ತಂದು
ಯಾವ್ ಹೊತ್ತೇ ನಮ್ಮ ಅಡಿಗಿಯು

ಅಳೆಲ್ಲ ಬಂದಿದ್ದೊ ಮಗುವ್ಯಾಕೆ ಬರಲಿಲ್ಲೆ
ಗ್ವಾಯಿನಾಡಾಚಿ ಗುಜರಿಯ–ಕೋಳಿಪಡಿ
ಒಡ್ಡ್ಗ್ಗ ಭೋಜಯ್ನ ಬಿಡಲಿಲ್ಲೆ

ಹಳ್ಯರ್ಹಳಿಯರು ಕೂಡಿ ಹಗ್ಗದ್ ಬಂಡಿನೇರಿ
ಮುಂದಿನ್ ಚೋಟೆಯ್ಡ್ ಮುರ್ದ್ಹೋದೊ – ಈ ಊರ
ಹಳ್ಯರ್ ಸುತ್ತ್ಹೋರೆ ನಮ್ಗೇನು

ಗಂಡ ಸತ್ತಾಕಿಯ ರಂಡಿಯೆಂದ್ ಕರಿಬ್ಯಾಡಿ
ಕಂದ್ನ ಕೈಹಿಡಿದು ಮರುಗೂಳು – ಆ ನಾರ್‍ಯ
ಗಂಗಾದೇಯಿಯೆಂದ್ ಕರಿಬೇಕು

ದುಷ್ಟರ ಕೊಲುವುದು ಮಾದೊಡ್ಡ ಸಂಪತ್ತ
ಕ್ವಾಣಿ ಬಳಗ್ವಾಕಿ ಚಿಲಕ್ವಾಕಿ – ಕುಯ್ಡಮ್ನ
ಮೆಣ್ಸಿನ್ಹೊಯಿ ಹಾಕಿ ಸುಡಬೇಕು

ತಂಗಳ್ಳೂಳ್ ಹಾಕೂರ್ ನಮ್ಮನ್ ಸಂಪೈಸೂರ್
ಬೆನ್ನಿಂದೆ ಕತ್ತಿ ಮಸಿವರು – ದುಷ್ಟರು
ಹಿತುವೇನು ಅವರ ಗತುವೇನು?

ಹೊತ್ತು ಮೂಡೂಕಿದ್ರೆ ಹೊಸ್ಲು ತೊಳಿಕಿದ್ರೆ
ಮಾಯಿ ಮನಿಗ್ಹೋದ ಮಗಿಬಂದ
ಏನನುಂಡಿದಿ ಮಗನೇ ಏನ ತಿಂದಿದಿ ಮಗನೇ
ನೀನುಂಡೂಟವ ನಂಗ್ಹೇಳು
ಅಪ್ಪವ ಮಾಡೀರ್ ತುಪ್ಪವ ಬಡಿಸೀರ್
ಬಾಯ್ರಿಗೆ ಹಾಲ ಕೊಟ್ಟೀರ್ – ನಮ್ಮಾಯಿ
ಸಂಗ್ತ ತಮ್ಮಗಳ ಕಳ್ಸೀರ್ – ನಮ್ಮಾಯಿ
ಸಂಗ್ತೆ ಗಾವುದ ಬಂದೀರ್

ಸಿಟ್ಟು ಬಂದ್ಹೊತ್ತಿಗೆ ಶಿವನ ಪಾಡನು ತಾರಿ
ಹುಂತಿನೊಳಗಿರುವ ಸರ್ಪ ಕಾಳಿಂಗನು
ಕಚ್ಚೂನೆಂಬ್ ಭೀತಿ ನಂಗಿಲ್ಲೆ

ಅಂಜಿಕಿ ಮಾತಿಗೆ ನಾನಂಜೂ ಮಗಳಲ್ಲ
ಬೆತ್ತಗಳಲ್ಲ ಚಡಿಯಲ್ಲ – ಇನ್ನೊಬ್ರ
ಅಟ್ಹಾಸಿಗಂಜೂ ಮಗಳಲ್ಲ

ಹೊಟ್ಟಲಿ ಬಲುವಿಲ್ಲೆ ರಟ್ಟಲಿ ಸತುವಿಲ್ಲೆ
ಆ ಊರ ಉಕ್ಕು ತರ್‍ಸಲಿಲ್ಲೆ – ನಮ್ಮೊಡ್ಯ
ಒನ್ಕಿಗೆ ತೊಡಿಯ ಇಡ್ಸಲಿಲ್ಲೆ

ದಾಯಾದಿ ಕರಗ್ಸಂಗೆ ಭೂಮಿ ಪಾಲಾಪಂಗೆ
ಆಗ್ಳಿಗ್ ಭೋಜಯ್ನ ಹಸುಮಗು – ಕೂಕಂಡ್
ನಡೂ ತುಂಡಿನ್ ಭೂಮಿ ತಂಗೆಂಬ

ಕಾಣಲಿಲ್ಲೆಂದ್ಹೇಳಿ ಕದ್ದು ತಿನ್ನಲುಬ್ಯಾಡ
ಗೋಯಿಂದನಾಣಿ ಸಿವನಾಣಿ – ಈ ಮನಿಯ
ಜಲದೇವ್ತಿ ಕಂಡೇ ಮುನುವಳು

ಯಾತ್ರಿಗ್ಹೋದಣ್ಣ ತಂಗಿ ಮನಿಗೆ ಬಂದ
ಊಂಟದ್ಹೊತ್ತಣ್ಣ ಹೆರ್ಗ್ ನಿಲ್ಲು – ಎಂಬಾಗ
ಕಂದಿತಣ್ಣಯ್ನ ನೆಗಿಮುಕೊ

ಮಾತಾಡ್ಹೊ ಅಂದರೆ ಬಾಯಗೆ ಕರ್ಪುರದೀಳ್ಯೊ
ಹಸಿ ಹಾಕೂನಂದ್ರೆ ಕೈಸಗ್ಣಿ – ಬಾವಯ್ಯ
ಕೂಕಾಣಿ ಬತ್ತಿ ಹಲಗಿಲಿ

ಹೂಡುಕ್ಹೋದ್ ಮಗನೇ ಉಯ್ಯಾಲ್ ಮಂಚನೇರಿ
ಹರಹರ ಸಿವನೇ ಮಳಿಯಿಲ್ಲೆ – ಮಾಸ್ವಾಮಿ
ವರಮೂರ್ತಿ ಹರಕಿ ಸಲಲಿಲ್ಲೆ !

ಹಾದಿಗ್ಹನ್ನೆಯ್ಡ್ ಕವಲು ಮಾತಿಗೆ ಚದುರಂಗೊ
ಉಂಬುಕ್ ಕೂತಲ್ಲೆ ಎಯ್ಡಂಗೊ – ಮಾಡ್ವರಿಗೆ
ಎಲ್ಹೋರೂ ಬೆನ್ನ ಮುಡಿಬೇಕು

ದಂಡಿಗಿ ಹತ್ಕಂಡ್ ಹಿಂತಿರ್ಗಿ ಕಾಂಬಳು
ಸಂಗಡದವ್ರ ಕರುವಳು – ಪಾರೋತಿ
ಇಂದಿಗ್ ನನ್ನಾಟ ಮುಗಿತೆಂದು

ಬಾಲನ ಬಸುರಿಲಿ ಏನ ತಿಂಬಳು ಹಸಿಯ
ಅಂಗೈಲಿ ನುಪ್ಪೂ ಹುಣ್ಸಿನ – ತಿನ್ಕೆಂದು
ಪುರುಸನ ಕೂಡೆ ಮರುಗೊಳು

ಕೈಯ ಒನ್ನಿಯ ತಪ್ಪಿ ಕೈಬಳಿ ಜರಿದವು
ಹೊಡಿಬ್ಯಾಡಣ್ಣಯ್ಯ ಬಯ್ಬ್ಯಾಡ – ಮಡದಿಗೆ
ತೂಕಕೊಂದ್ ಬಳಿನ ಇಡಿಸುವಿ

ಚಣ್ಣ ಚಂದ್ರಯ್ನಿಗೆ ಆಯ್ಸುಹೆಚ್ಚಲಿ ಎಂದು
ಸ್ವಾಮ್ವಾರ ಹಿಡ್ದಿ ಹದ್ನಾರು – ಗಿರಿಮ್ಯಾಲೆ
ಕಾಲ್‌ತೊಳ್ದ್ ಬಿಟ್ಟಿ ಕೈಲ್ತಿನ

ಮನಿಯು ಚಣ್ಣದೆಂದು ಮುನಿದಿರಿ ಚಿಕ್ಕಮ್ಮ
ಚಣ್ಣ ಚಂದ್ರಯ್ಯಿಗೆ ಹದ್ನಾರು – ಗಿರಿಮ್ಯಾಲೆ
ಕಾಲ್‌ತೊಳ್ದ್ ಬಿಟ್ಟಿ ಕೈಲ್ತಿನ

ಮನಿಯು ಚಣ್ಣದೆಂದು ಮುನಿದಿರಿ ಚಿಕ್ಕಮ್ಮ
ಚಿಣ್ಣವರೆಲ್ಲ ನೆರಿಯಲಿ – ನಿಮ್ನಾಗ
ಹೂಗಿನ ಕಟ್ಟಿ ಹೊರುವರು

ಕಾರುತಿಂಗಳ ಮಳಿ ವಾರಂತ ಹೊಯ್ಲಿಲ್ಲೆ
ನಾನೊಂದು ಕೊಡಿಯ ಹಿಡಿಲಿಲ್ಲೆ – ನರಾಡಿಸುತ್ಲೂ
ಭಾಗ್ವ್ಯೇಂತಿ ನಾನು ಒಳಗಿದ್ದಿ

ಯಾರಾಣಿ ಕೊಟ್ಟರೂ ತಾಯಾಣಿ ಕೊಡಲಾರಿ
ಮಟ್ಟಿಮ್ಯಾಲಾಡು ಮಗನಾಣಿ – ಕೊಟ್ಟರೂ
ಗರತಿ ನಿಮ್ಮಾಣಿ ಕೊಡ್ಲಾರಿ

ಬಾವಣ್ಣ ಎಂಬ ಬಾಮವೆ ನಂಗುಂಟು
ಹ್ಯಾಂಗಾಡ್ಲಿ ತಾಯೇ ಪಗಡಿನ – ಬಾವಣ್ಣ
ಸೆರಗ ಮುಟ್ಟಿದರೆ ಉರಿದ್ಹೋಪಿ

ಬಾಮಿಯ ಕಟ್ಟಲಿ ಬಾವಣ್ಣ ನಿತ್ತೀರು
ಸೀರಿಗ್ ಹೋಪ್ಪ್ಯಂದ್ರೆ ಅವಗಡು – ಬಾವಣ್ಣ
ತೇಲ್ಸ್ಕಣಿ ನಿಮ್ಮ ಕದುರಿನ – ಬಾವಣ್ಣ
ಅಲ್ಸ್ಕಣಿ ನಿಮ್ಮ ಮೈದಿನಿ

ನಾಕೂರಿನ್ ಮ್ಯಾಲೆ ಯಾಕ್ಬಂದಿ ನಾರಾಯ್ಣ
ನಾಕೂರ್‌ನಾರ್‍ಯರ ಕಣ್‌ದಿಷ್ಟಿ – ನಿನ್ಹ್‌ತಾಯಿ
ಹಾಲು ಮಂತರ್ಸಿ ಇಡುವಳು

ದೊಡ್ಡವ್ರ್ ಮನಿ ಹೆಣ್ಣಿನ್ ತರ್ಬ್ಯಾಡಂದ್ರ್ ತಂದ
ತುಪ್ಪು ಭೋಜನಕೆ ಎಡಿ ಅಂದ – ತಮ್ಮಯ್ಯ
ತಪ್ಪೆಂದು ಕಾಲ ಹಿಡಿದನು !

ಹಿಂಡರಿಚ್ಚಿಗಾರ ಹಿಂದ್ಹೋಯಿ ಮನಿಕಟ್ಟಿ
ನನ್ನಿಚ್ಚಿಗಾರ ಕಿರಿಮಗ – ಬಾಲಯ್ಯ
ಬಣ್ಣ ಚಾವ್ಡಿಗೆ ತಳಿಹೂಡಿ

ಹೆಣ್ಣಿನ್ ಕೊಟ್ಟ್ ಹಣುವ ಹರ್ವಾಣದಲ್ ಕೊಡುವರು
ಕಾಲಿಗೆ ಬಿದ್ದ ಅಳಿಯಂಗೆ – ಬಾಲಮ್ಮ
ತನ್ನ ಕೈಹಣುವ ಕೊಡುವಳು

ಕಾಳೂರು ಕಾಳಮ್ಮ ಒಳಸುತ್ತಿನ್ ಬಲಿ ಬಂದ್ಲ್
ಹೆರಸುತ್ತಿಲ್ ಬಿದ್ದೊ ಹಸಿಹೂಗ್ – ಬೀಚಮ್ಮ
ಮಕ್ಕಳ ಫಲವ ಸೆರಗೊಡ್ಡೆ

ಹಾದಿಹೋಕಿನ ಮನಿ ಇಪ್ಪವ್ಕ್ ನಾನೊಬ್ಬೇ
ಸಾಲಿಗ್ಹೋದನು ಹಸುಮಗು–ಬಂದ್ಯಾಲೆ
ಇಲ್ಲೇ ಬೀಡನೇ ಬಿಡಬಪ್ದು

ಚಣ್ಣಕ್ಕಿ ಕುಟ್ಟಕ್ಕಿ ಚಣ್ಣ ದೋಣಿಲ್‌ತುಂಬಿ
ನಿನ್ನ್ಯಲ್ಲ ಮೊನ್ನಿ ಕಳುಗಿದಿ – ತಮ್ಮಯ್ಯ
ಯಾವ ಊರಿನಲಿ ಒರಿಗಿದಿ?

ತಂಗಿ ತನ್ನ್ ಮಗಳಿಗೆ ತೂಕದ್ವಾಲಿಯ ಗೆಯ್ಸಿ
ಆಪತ್ತಿಗ್ ನನ್ನ ಕರದಳು – ತನ್ನ್ ಮಗ್ಳ
ಅಪ್ಪಂತವರಿಗೆ ಕೊಡುಕೆಂದು

ಮಾಯಿಗೂ ಮಾವಂಗೂ ಕೂಕಂಡ ಸಾಲಕ್ಕೆ
ಕಾಲಗ್ವಜ್ವರದ ಅಳಿಹುಟ್ಟಿ – ನೆಗಿದರೆ
ಮಾವ್ನ ಪುಸ್ತಕವ ಹರದಿಟ್ಟ !

ಸಂತಾನು ಇಲ್ಲೆಂದು ಸಂಪಿಗಿ ನೆಡಸಿದಿ
ಹೂಗು ಹೆಬ್ಬಾಗ್ಲಿಗೆರಗಿತು – ಗಿರಿಜಮ್ಮ
ಸಂತಾನ್ದ ಗೌರಿ ಸೆರಗೊಡ್ಡಿ

ಇಂದು ನಾಳೆಂದರೆ ಬಂದವು ದೀವಾಳಿ
ಹೊನ್ನ ಕಳ್ಸಿಗ್ಗಲಿ ಹೊಲಿಮಾತಿ – ಈ ಮನಿಯ
ಗಂಗಿಗೌರ್ಯೆಂಬ ತಿರಿಕಟ್ಟಿ – ಈ ಮನಿಲಿ
ಮಾವ ಅಳಿಯಂಗೆ ಒಳಮಾತು – ಏನೆಂದು
ಭೂಮ್ತಾಯಿ ನಮಗೆ ಮುನಿದಳು

ಬಾಳಿಯ ಬಳ್ಳಿಯು ನೀರಿಲ್ಲದುರಿದುವು
ಹ್ಯಾಂಗಿಪ್ಪ್ ಮನಿಯ ಗರತಿಯು – ಮಂಡಿಕುರ್ಲ್
ಎಣ್ಣಿಲ್ಲದುರಿದೊ ಅನುಗಾಲ

ವಾಲಿಕೆಮಿ ತಾಯಮ್ಮ ಅಲ್ಸ್ಕಣಿ ನನ್ನ್ ಮಾತ
ಜಾನಿಸಬ್ಯಾಡಿ ಮಗಳಿಗೆ – ತಾಯಮ್ಮ
ಬಾಳುವ ಮನಿಯು ಬಲುಸುಕೊ

ಗಂಡಾಯಿ ಹುಟ್ಟಿರೆ ಬಹುಮಂಡಲಾಳ್ತಿದ್ದ
ಹೆಂಗಸಾಯಿರೆ ಜಯವೇನೊ – ಹುಟ್ಟಿರೆ
ಕುಲಕೊಂದು ಕುಂದ ತರುವಳು

ಅಣ್ನ ಹೆಂಡತಿಗಿಂತ ತಮ್ನ ಹೆಂಡತಿ ಜಾಣಿ
ತಂಗಿ ಎಂಬಳಿಗೆ ಮನಿ ಇಲ್ಲೆ – ಅಣ್ಣಯ್ಯ
ಗುಂಡಿಯಲ್ಲಿಪ್ದೇ ಅತಿಲೇಸು

ಕರ್ಕರಿ ಮಗುವಿನ ಕಣಕ್ಹಿಡಿದು ದೂಕಿನಿ
ಒನ್ಕಿಲಿ ಅದ್ನ ತದ್ಕಿನಿ – ಆ ಮಗುನ
ಕರುಮೆಟ್ಟಿತೆಂದು ಕರದ್ಹೇಳಿ

ಅದ್ದೆಲಿ ನಂಗ್ಬ್ಯಾಡ ಅದ್ದಡ್ಕಿ ನಂಗ್ಬ್ಯಾಡ
ನನ್ನಪ್ಪನೂರು ಬೈಂದೂರು – ಬಟ್ಕಳೂರು
ಎಲಿ ಬುಕ್ಕ್ ಎಲಿಯ ಹೂಬಕ್ಕ್ – ತುರುಬಿಗೆ
ಎಳಿಯ ಸಿಂಗಾರ್ದ ಕೊನಿಬುಕ್ಕ್ !

ಕಳಸವ ಹಿಡುವಲ್ಲಿ ಕೈನೀಡ್ತ ಬಪ್ಪಳು
ನನ್ನ ಕಂಡಾಕಿ ನಿಲುವಳು – ತಂಗ್ಯಮ್ಮ
ಯಾರಾದರೇನು ಹಿಡಿಮಗು

ದೂರಿನ ದಾರಿಗೆ ಹೋಯಿ ಬಪ್ಪರಿಲ್ಲೆ
ಹ್ಯಾಂಗಿದ್ದಳ್ ನನ್ನ ಹೆರಿಯಕ್ಕ – ಗಂಡ್ನ ಮನಿಲಿ
ಹೋಯಿಬಂದವ್ರೇ ನಂಗ್ಹೇಳಿ

ಗಂಡಿನ ಹೆತ್ತಳೇ ರಾಕ್ಸೇತಿ ನೀ ಬಾರೆ
ರಾಗಿ ಅಂಬಲಿನ ಕುಡಿಬಾರೆ–ನಿನ್ನ್ ಮಗ
ಕಂಬ್ಳಿ ತಂದನು ಉಡಬಾರೇ

ಹಾವಿನ ಮರಿತಂದು ಹಾಲ್ಹಾಕಿ ಸಾಂಕಿರೆ
ಅದ್ ತನ್ನ ಇಸವ ಮರವುದೆ – ಈ ಊರ
ದಾಯಾದಿ ಕಾಲ್ಕುಸಿ ಮರವುದೇ

ಕಾಲದ ಕಾಣಿಕಿ ಕಾಲಕ್ಕು ಸಲಿಸಿತು
ಬ್ಯಾಡಂದ್ರೂ ನಮ್ಮ ತಳದರು – ಹೆಗ್ಡಿಕೇರಿ
ಸಸಿಹೋಯಿ ಸಿಸುವ ಸಲಿಸಂಬ್ರು

ಮಂದರ್ತಿ ಅಮ್ನರು ಸುಕ್ರ್‌ವಾರ್ದ್ ತೀರ್ಥುಕ್ಹೋಯಿ
ಚಕ್ರದ್ಸರುವೆಯ್ದು ಬಳ್ದ್ ಹೋಯಿ – ಅಮ್ನವ್ರು
ಪುತ್ರ ಸೋಕದಲಿ ಮನಿಗ್ಹೋರ್

ಕನಸುಕಟ್ಟಿತು ಗರತಿ ನಿನ್ನ್ ಕೈಲ್ಹೇಳಲು ಮುರ್ತಿ
ಸೀಕಂಚಿಪುರದ ಗಜಲಿಂಗಿ – ಮರನಡಿ
ಸಿವಬಂದು ಇಳಿದ ಸಪನವು

ದಾಯ್ವಾದಿ ಗೆದ್ದಿಲಿ ದರ್ಭಿಯ ಹುಲ್ಲ್ ಹುಟ್ಲಿ
ದೊರಿರಾಯ ನನ್ನ ಕಿರಿಯಣ್ಣ – ಗೆದ್ದಿಲಿ
ಸಾಜ ಚಿಣ್ಣಕ್ಕಿ ಬೆಳಿಯಲಿ

ದುಷ್ಟರ ಕಂಡರೆ ದೂರಿಂದ ತೆಲಗುವಿ
ಅಂಗ್ಳದಲ್ಹೋಯಿ ಮುಕುನೋಡಿ – ದುಷ್ಟನ
ಎಳ್ಳ್ ಕಾಳಿನಷ್ಟೇ ಕಪಟವು

ಮಕ್ಕಳಿಲ್ಲದ ಮ್ಯಾಲೆ ಮನಿ ಆಸಿ ನಮ್ಗೇನ್
ಹುಟ್ಸಿದ್ ಚಿತ್ತೇರಿ ಬಿರಮನ – ಕಾಲಡಿ
ದೊಕಿಕಿ ಜೀಂವ ಮಡಿಯಲಿ

ಚಣ್ಣಳ್ ಸಿಂಗಾರಿನ್ ಕೊಟ್ಟಿತ್ತ್ ಗಟ್ಟದ ಮ್ಯಾಲೆ
ಆ ಮುದ್ದುಗಂಡ ಕಳುಗೂನ – ಅವ್ವಣ್ಣ
ತಾ ಮುದ್ದನಾಡಿ ಕರತಪ್ಪ

ಮಕ್ಕಳಿಲ್ಲದ ಮ್ಯಾಲೆ ಇರಲಕ್ಕ ಈ ಜೀಂವು
ಒಡ್ಲಗೆ ಎಯ್ದು ಸಿಸುಗಳು – ಇಲ್ಲರ್‍ಮ್ಯಾಲೆ
ಸುಡುನಾರಿ ನಿನ್ನ ಜಲುಮವ

ಉಟ್ಟ ಸೀರಿಯು ಮಾಸಿ ಸ್ವಾಮಿಗೆ ಜನು ಕಳುಗಿ
ವಸ್ತ್ರ ಕುಕ್ಕೂ ಗೌಂಡಿ ಬರಲೆಂದು – ಗಾವ್ಯಿಯಂಗೆ
ಹಾಲನ್ನು ಹಾಕಿ ಸಲಗುವಿ

ಉಣ್ಣದೆ ತಿನ್ನದೆ ಹೊನ್ನ ಮಾಡಿದರೇನು
ನನ್ನ ಕೈಹಿಡಿದ ಮಡದಿನ – ಭಂಗುಬಡಿಸಿ
ಕಾಸಿಗೆ ಹೋರೂ ಫಲವುಂಟಾ?

ಭಂಗೂನ ಬಿಡಿಸುವ ಬಳಿಯ ಕೈ ಮಡದಿನ
ತಿಂಗಳಿಗೊಂದೆಲಿಯ ಮೆಲಿಸದಿದ್ದವನಿಗೆ
ಹಂಬಲಿನ್ನೆಷ್ಟು ಗರತಿಯ !

ಹೋರಿಯ ಹೊಗ್ಲುರಿ ಹೊಡದನ ಕೈಉರಿ
ಮಕ್ಕಳಿಲ್ಲದನ ಒಡಲುರಿ – ಇವು ಮೂರು
ತಟ್ಟಲೀಸ್ವರನ ಮಡದಿಗೂ

ಅಕ್ಕ್ನ ಕೊಟ್ಟ್ ಮನಿಗೆ ತಂಗೀನ ಕೇಂಬರು
ಎಲಸಂದಿ ಬಾಳಿ ಮನಿಯವರೇ – ಕೊಡ್ಕಾರೆ
ಅಕ್ಕ ಬಾಳೂ ಮನಿಗೆ ಬರಬೇಕು

ಹಾಂವು ಕಪ್ಪಿಯ ನುಂಗಿ ದಾವತಿ ಬಿಡುವಾಗ
ಬಾರೆ ತಪ್ಪಿಸುವೊ ಕಾಣಕ್ಕ – ಅವು ನಮ್ಮ
ವಾಲಿಭಾಗ್ಯವ ಉಳಿಸ್ಯಾವು

ಬಂಗಾರಿಲ್ಲದ ಮನಿ ಸಿಂಗಾರಿಲ್ಲದ ತ್ವಾಂಟ
ಗಂಡಿಲ್ದ ಬಡವಿ ಸಂಸಾರ – ಮೈಸೂರ
ಗಂಡ್ ಮಕ್ಳ್ ಸಾಯೊ ನಮಗಾದೊ

ಉತ್ತುಮಜಾತಿ ಹೊಗೆ ಊರಿಗ್ಹೋತುರಿ ಸ್ವಾಮಿ
ಏಗಳಿಕೆ ಬತ್ರಿ ದೊರಿ ನೀಂವು?
ತಾಸಿನ ಕೆಲ್ಸ ಬಿಟ್ಟಿ ತೇಸಿನ ಕುದ್ರಿ ಏರಿ
ನಾಳಿ ಮಜ್ಜಾನ ಬರುವೆನು
ಬರುವೆನು ಎಂದು ಬಾಯಲ್ಲಿ ಹೇಳ್ಬ್ಯಾಡಿ
ಉಂಗಿಲು ಕೊಟ್ಹ್ಹೋಯ್ನಿ ಗುರುತಿಗೆ

ಮನಿಹೊದ್ದಿಗಿಪ್ಪ ನಾಗಮ್ಮ ನೀ ಕೇಣ್
ನಮ್ಮನಿಗೆ ಬಂದ ಬಲು ಬರು – ಪರಿಹರ್‍ಸ್ರೆ
ಗೋಪುರಕೆ ಮುತ್ತ ಕಡ್ಸುವಿ

ಹೆದ್ರ್‍ಬ್ಯಾಡ ತಮ್ಮಯ್ಯ ಆನಿಯ ಬಲುವುಂಟು
ಮ್ಯಾಲೆ ಗೋಮುಖದ್ದ ಹುಲಿಯುಂಟು – ತಮ್ಮಯ್ಯ
ಭಗ್ವಂತ್ನ ಸಾಯ ನಿಂಗುಂಟು

ಹಾಸ್ಯ

ಅತ್ತಿಯ ಮನಿದ್ವಾಸಿ ಹತ್ತಿಹೂಗಿನ್ಹಾಂಗೆ
ಎಪ್ಪತ್ತು ತಿಂದ ಮದುಮಗ – ಹೊಟ್ಟಿಲಿ
ನೆಗಳುಂಟೋ ಏನೋ ಶಿವಬಲ್ಲ

ಅಕ್ಕನ ಗಂಡಂಗೆ ಸಪ್ಪನ ತಾಳಿಲು
ಹೊಟ್ಕಾಣಿ ಮೀನು ಬಳುವಳಿ – ಬಾಪ್ಪೆಂದ್ರೆ
ಎಣ್ಣಿಲಿ ಚವಣಿ ಹೊರ್ದಿಟ್ಲ್ !

ಅಜ್ಜಿ ಗರಸಿನವ್ಯಾಕೆ ಕಬ್ಯಾಕೆ ಬೋಡಂಗೆ
ದಿಬ್ಬಣುವ್ಯಾಕೆ ಮುದುಕಂಗೆ – ಗಾಣಿಗ
ನಿನ್ನಪ್ಪಗ್ಯಾಕೆ ಸೆಳಮಂಚೊ

ದಬ್ಣದ್ ಸಾಲಿ ಬತ್ತಕೂ ಹುಣ್ಸಿಯ ಒನ್ಕಿಗೂ
ಅಯ್ಯೋ ನನ್ನ್ ಜೀಂವೇ ಮಡಿಯಲಿ
ಶ್ಯಾಡಿಯ ಮೀನಿಗೂ ಗೆಯ್ಬಿಯ ಕಳ್ಳಿಗೂ
ಅಯ್ಯೋ ನನ್ನ್ ಜೀಂವೆ ಉಳಿಯಲಿ

ಸುಗ್ಗಿಯ ಬತ್ತವು 'ಸೂ' ಅಂದ್ರು ನುರಿಯದು
ಯಾವ್ ರಾಯ ಬಿಕ್ಕಿ ಬೆಳ್ದನೊ – ಉದ್ದಿಯ
ಆನಿಮೆಟ್ಟಿದರೂ ಹೊಡಿಯಾಗ – ನಮ್ಮಂಥ
ರಂಭೇರು ಕುಟ್ಟಿ ಪುಡಿಗೈದ್ರ್

ಹಳ್ಗನ ಅಕ್ಕಿಗೂ ಬೆಳ್ಳಿಯ ಕೊಳಗೂ
ಗ್ವಾಪಣ್ಣ ಅಳವ ಅಳತಿಯ – ಬಾಮಕೂ
ಗ್ವಾಯಿಗ್ಹೋದ್ದಡಗು ತಿರುಗಿದೊ

ಹಾದ್‌ಬಾರ್‌ದಿದ್ದ್ ಹೆಣ್‌ಮಕ್ಕೆ ಬೀಳಿ ನನ್ನ್ ಪಾದಕ್ಕೆ
ಹಾರುಂಟೇ ನನ್ನ್ ಕೊರ್ಲಲ್ಲಿ – ಹೆಣ್ಮಕ್ಳೇ
ಹೂಗುಂಟೇ ನನ್ನ್ ಹನುಮಂತ

ಚಣ್ಣನು ತಮ್ಮಯ್ಯ ಹೆಣ್ಣಿಮನಿಗ್ಹೋಪಂಗೆ
ಬಲ್ಲಿ ಮ್ಯಾಲೆಯ್ದು ಬರಿಹುಲಿ – ಕೂಕಂಡ್
ನೆರಮನಿ ನಾರಾಯ್ಣ್ನ ಕರದನು

ಸೈಕಲ್ ಸೈಕಲ್ ಕೂಡಿ ಸೈಕಲ್ ಕುಂದಾಪ್ರಿಗ್ ಹೋಯಿ
ಏನೇ ಅಣ್ಣಯ್ನ ತನಿಕಿಯು – ಕುಂದಾಪ್ಟ್ದ
ನರಿಬ್ಯಾಣ್ದ ಜಡ್ಡು ನಮಗಾಯ್ತು

ಇಬ್ಬರು ಹೆಂಡಿರ ಗುದ್ದಾಟ ತಾಳದೆ
ಗೆದ್ದಿಬಯ್ಲಲ್ಲಿ ಮನಿಕಟ್ಟಿ – ಶಿವರಾತ್ರಿ
ಹಬ್ಬೂಕ್ ಮಾರಿದನು ಹೆರಿಹೆಣ್ತ್ಯ – ಸುಗ್ಗಿಯ
ಬೀಂಜಕ್ಕ್ ಮಾರಿದನು ಕಿರಿಹೆಣ್ತ್ಯ

ನಮ್ಮನಿ ಸುತ್ತಲೂ ದುಗ್ಗಾಣಿ ಗಿಡುಹುಟ್ಟಿ
ದುಡ್ಡಿಗೊಂದ್ಹೂಗ ಕೊಯ್ಯುವಿ

ಕಟ್ಟಿದ ಮಂಡಿಯ ಬಿಚ್ಚಿ ಕಟ್ಟುವುದ್ರಲ್ಲಿ
ಹೊನ್ನಾವ್ಟ್ ಹೊಳಿದಾಂಟಿ ನಡದರು !

ಮುದ್ಕಿ ಮದಿಯಾಯ್ಕೆಂದ್ ತುದಿಕಾಲಲ್ಕುಣಿದಳು
ಚಾವ್ಡಿ ಮ್ಯಾಲ್ಯೂತ ಚೆಲುವನೆ – ಅಯ್ಕೆಂದ್
ಮುದ್ಕಿ ಸ್ವಾಮ್ವಾರ ಹಿಡಿದಳು

ಮುಂಡ್ಕನ ಹಳಿನಡ್ಡೆ ಮುದ್ಕಿ ಮಿಂಡನ ಕೂಡಿ
ಸರ್ಕಾರ ಬಂದು ತನ್ಕಿಯ – ಏನೆಂದು
ಮುದ್ಕಿಗೀ ಕೆಲ್ಸ ತರವಲ್ಲ !

ಆಡುವ ಗಿಣ್ಣಲು ಅಂಗ್ಣದಲ್ಲಿಟ್ಟಿಕಿ
ನಿದ್ದಿ ಬಂತೇನೋ ಮಗುವಿಗೆ – ಮಂಜ್ನಾಥಗೆ
ದಿಬ್ಣ ಬಂತೆಂದು ಎಬ್ಸುವಿ

ಒಂದೊಂದ್ ಮುತ್ತು ನಿಂಬಿಕಾಯ್ ಗಾತರ
ಅದಿಪ್ಪ್ದ ಆಚಿ ಪರನಾಡು – ಪರಪಕ್ಶೊ
ಹೊಳುವುದು ಗಿರಿಜಮ್ನ ಮುಕದೊಳ್ಗೆ

ಏಕಾದಸಿಯೆಂದು ಯಾಕೆ ಮಾಡಿರಿ ಸ್ವಾಮಿ
ಮೂರ್ಹೊತ್ತೂ ಉಂಡು ಸುಕಿನಿದ್ರಿ – ಗೆಯ್ವರಿಗೆ
ಪಾಪಿಗಳಿಗೆಂಥ ಉಪವಾಸೊ

ಚಣ್ಣಿ ಚಣಿಮಿಣಿ ಹೆಣ್ಣಿ ವಾಲಿ ಕಿಚ್ಚಿನ ಗೆಂಡೊ
ಮುಗಿಗಂಡ್ದ ಕೈಲಿ ಚದುರಂಗೊ – ಅಡ್ಡಂಗೆ
ಎಲಿ ಬಂದು ಬೋಡ ತರಿದುವು

ಸೂಳ್ಗಾರ ಮಾವಯ್ಯ ಸೂಳಿಮನಿಗ್ ಹ್ವಾಪಂಗೆ
ಹೂಗಿನ್ ಬಲ್ಲಿಲಿ ಹುಲಿಕೂತು – ಮಾವಯ್ಯ
ಒಕ್ಲ ಮಕ್ಕಳನು ಕರದನು

ಹಗ್ಲಿಗೆ ಹೊಯ್ವ್ಮಳಿ ಸುಗ್ಗಿಗೆ ಹೊಯ್ಯಲಿ
ದುಂಡುಮಲ್ಲಿಗಿ ಚಿಗುರಲಿ – ಈ ಊರ
ಗಂಡ ಸತ್ತವರ ಮದುವಿಗೆ

ಮೈತ್ನಣ್ಣಿ ಎಂಬುವರು ಮಂಗ್ಳೂರಲಿರುವರು
ನುಗ್ಲಿಲ್ದೆ ನೆಯ್ಗಿ ನೆಯ್ವರು – ಅವ್ರ್‌ಹೆಣ್ತಿ
ಸೆರಿಗಿಲ್ದೆ ಮಾಗಣಿಗೆ ಉಪಕಾರೊ !

ಯಾಲಕ್ಕಿ ಎಲಿಕಾರ ಎಲಿಗೆ ಸುಣ್ಣವು ಕಾರ
ಎಲ್ಲ್‌ದ್ಕಿಂತ ಕಾರ ಸಾವ್ಕಾರ – ಮಾವಯ್ನ
ಮಾತು ಮಾಗಣಿಗೆ ಉಪಕಾರೊ !

ಲಂಕಾಪಟ್ಣದೊಳ್ಗೆ ಎಂಥ ದೀವಿಗಿ ಬೆಳಕು
ತಾಯಿ ಸೀತಮ್ನ ಮೂಗುತಿ – ಬೆಳಕಿಗೆ
ಹಣ್ಣಿಗ್ಹಾರುವನು ಹನುಮಂತ – ಸಂಕ್ರಾಣ್ದ
ಹೆಣ್ಣಿಗ್ಹಾರುವರು ಹಲವರು

ಬತ್ತೊ ತೊಳಿ ಎಂದರೆ ದುಃಖಮಾಡಿತು ಹೆಣ್ಣು
ತಂಗುಳ ಕೂಳ ತನುಮಸರ – ಇಕ್ಕಿಕಿ
ಈಗಳ್ ಕಾಣದರ ಕೈಬಾಯಿ

ಪುಣ್ಣುಳ್ರ ಮಗಳು ಪುರುಸ್ನ ಸಂಗಡ ಬಂದು
ಕಾಸೀ ತೀರುತಕೆ ಹೊಯ್ಟಳು – ನಮ್ಮಕ್ಕ
ತೀರುತದಿ ಕಂತಿ ನೆಗುವಳು – ಏನೆಂದು
ನೀಂವ್ ಮಾಡಿದ್ ಪುಣ್ಯ ನಂಗೆಂದು !

ಮಡದಿನ ಹೊಡಿಲಿಕೆ ಇಲ್ಲೆಲ್ಲೂ ಕೋಲಿಲ್ದೆ
ಮಂದರ್ತಿ ಕಾನ ಎಳಿಬೆತತೊ – ಬಪ್ಪಲ್‌ಗಂಟೆ
ಅಂತಯ್ಯ ನಿನ್ನ್ ಸಿಟ್ಟೆ ಹಿರಿದವು

ಅಂದಕು ಚೆಂದಕು ಗಿಡ್ಡಿಯ ತಂದಿದಿ
ಅಂಗಣದಲ್ಲಾಡೂ ಬಯ್ಡಿ – ತೆಂಗಿನಕಾಯಿ
ಎದ್ದಳು ಗಿಡ್ಡಿ ಜಗಳಕು

ತೆಂಕಿನವ್ರ ಮಾತು ಕೊಂಕ್ಣ ಕನ್ನಡ ಮಾತು
ಆ ಮಾತು ತಮ್ನಿಗ್ ಬರಲಿಲ್ಲ – ಒಳಗಿದ್ದ
ಮಡದಿ ಆಡಿದಳೆ ತುಳುಭಾಸಿ

ಹತ್ತಿಯ ಹೊಸಿಯಜ್ಜೀ ಬತ್ತಿಯ ಮಾಡಜ್ಜಿ
ವಿಷ್ಣುಲೋಕ್ದೊಳಗೆ ಇರಲಕ್ಕೂ – ಅಜ್ಜಿಗೆ
ಚಪ್ಪರದ ಹಾಡು ತರವಲ್ಲ

ತೊಂಡೆಕ್ಯಾ ಅರಿಯಜ್ಜಿ ಬೆಂಡೆಕ್ಯಾ ಕತ್ತರಿಸಜ್ಜಿ
ಕ್ಯಾಸಾಸ್ಮೀನಾರೂ ಅರಿಯಜ್ಜಿ – ಆದರೆ
ಮಂಟಪದ ಹಾಡು ತರವಲ್ಲ

ಸುಖನಿವೇದನೆ

ಐದುಮಂದಿಯರೊಳಗೆ ಐರಾಪ್ತಿ ಅಕ್ಕಮ್ಮ
ಮೈನೆರೆದಳೆಂದು ಒಸಗಿಯು – ಅಣ್ಣಯ್ಯ
ಏದೂರಿಗ್ ವಾಲಿ ಬರದನು – ಏನಂದು
ಐರಾಪ್ರಿಗೊಪ್ಪೂ ಜಡಿಹೂಗ್ – ಮುಂದ್ಲಿಬಟ್ಟ್
ಐದು ದಿನಕಾಯಿ ತರಬೇಕು

ಹಾಲುಂಡ ತವರಿಗೆ ಏನೆಂದು ಹಾಡಲಿ
ಹೊಳಿದಂಡಿಲಿರುವ ಗರುಕಿಯ – ಕೊಂಡಿಹಾಂಗೆ
ಹಬ್ಬಲಿ ಅದರ ರಸಬಳ್ಳಿ

ತುಪ್ಪನ್ನು ಉಂಬಲೆ ತುಳುನಾಡಿಗ್ಹೋಯ್ಲಕ್ಕು
ಅಕ್ಕಿಯ ಮ್ಯಾಲೆ ಬರಿಲಕ್ಕು – ಈ ನಾಡ
ಮಕ್ಕಳು ಮ್ಯಾಲೆ ಕಲಿಲಕ್ಕು

ಅಯ್ಯಯೊ ಒಡ್ಯನೇ ಕೈಕಾಣಿ ಬಾಯ್ಕಾಣಿ
ತುಂಬು ಕಳ್ಸಿಗ್ಲಿ ಅಳ್ಕಣಿ

ಆಚಾರಿಕಟ್ಟಿದ್ಮನಿ ಅಯವ ಕಂಡ್ಬನ್ನಿ
ಸೂಚಿಳಿಗ್ ಮುತ್ತ ಸುರದ್ಹಾಂಗೆ – ಅಣ್ಣಯ್ನ
ಮನಿಗ್ಹೋಪ ಬನ್ನಿ ಒಳಗೆಲ್ಲ

ನನ್ನ ತಾಯಿಯ ಮಗ ನಂಗೆ ಸ್ಥಾವರ ಅಣ್ಣ
ಯಾವ ದಂಡಿಲಿ ಇರುವನು – ತಿರುಪತಿ
ರಾಮದಂಡಾಡಿ ಒರಗಿದ

ಬಳ್ಗಾರ ಬಳಿತಂದ ಬಣಜಿಗ ಹೂಗ್‌ತಂದ
ಕಿರಾಯ್ ಮಾಡೂ ದೊರಿಯೇ ಮನಿಲೆಲ್ಲೆ – ಎಂಬ್‌ದ್‌ಕೇಂಡ್
ಮೈದಿನ ದೊರಿಯು ಕಿರಾಯ್ಮಾಡಿ

ಅಕ್ಕತಂಗಿಯರೊಳಗೆ ಹೆಚ್ಚೇನು ಕಮ್ಮೇನು
ಹಿಡಿ ತಂಗಿಯಮ್ಮ ಕಳಸವ – ತಮ್ಮಂಗೆ
ಮುತ್ತಿನ್ ಬಾಸಿಂಗಕೆದುರಾಯಿ

ಒಳ್ಳಿ ಗಳ್ಗಿಯ ಕಂಡ್ ಬರ್ಲಿಗ್ ಬತ್ತೊ ಹೊಯ್ದು
ಬತ್ತುಕಿಂತಕ್ಕಿ ಒದಗಲಿ – ಅಣ್ಣಯ್ನ
ವರ್ಸಕಿಂತಾಯ್ಸ ಹರಿದಾಯ್ಲಿ

ಮಂಡಿ ಕಟ್ಟುವಳೆಲ್ಲಿ ಮಲ್ಗಿ ಮುಡುವಳೆಲ್ಲಿ
ನಾಬತ್ತಿ ನಿಲ್ಲಿ ಮದ್ವಿಗೆ – ಅಣ್ಣಯ್ನ
ದಿಬ್ಬು ಚಂದದಲಿ ಹೆಯ್ಡಲಿ

ಹಬ್ಬದ ಗುಡಿಯಲಿ ಅಬ್ಬತಮ್ಮರ ಕಂಡಿ
ಬಪ್ಪ್ಯಲೆ ಮಾವ ಮನಿಗ್ಹೋಪೊ – ನಮ್ಮನಿ
ತೊಟ್ಟಿಲ್ ಕಂದನಿಗೆ ಚಪಲವು

ಅಪ್ಪನ ಕಾಲಕ್ಕೆ ತುಪ್ಪನ್ನು ಉಂಡಿದ್ದಿ
ಈಗ ಅಣ್ಣಯ್ನ ದರ್ಬಾರ – ಕಾಲಕ್ಕೆ
ಹಾಲುಂಡು ಹಾಸ್ಗಿ ಒರ್ಗಿದಿ

ಪಂಚ್ವಳ್ಳಿ ನೆಡ್ಸಿದಿ ಪಂತಕ್ ನೀರ್ ಹೊಯ್ದಿದಿ
ಎಂಕ್ಲ್ ಮೆಟ್ಟೆಲಿಯ ಕೊಯ್ಸುವಿ – ಮಾವಯ್ನ
ಹರ್ವಾಣ ತುಂಬು ಚಿಗುರೆಲಿ

ಪಾದಕ್ಕೆ ನೀರ್ ಕೊಟ್ರೆ ಬ್ಯಾಡೆಂಬ ಸಿರಿಹರಿ
ಯಾವ ಪುಣ್ಯದಲಿ ಪಡದಿಯಾ – ಸಿವರಾತ್ರಿ
ಜಾಗರಕೆ ಕೂತ ಫಲದಿಂದ

ಮುತ್ತುಳಿ ಸರುನ ಕೊಟ್ಟು ಬಾ ಗಿಣಿರಾಮ
ಚಿಕ್ದೇವಿ ನನ್ನ ಹಿರಿಯಕ್ಕ – ಇಲ್ದಿರೆ
ಕಟ್ಟಿ ಬಾ ಅರಳಿ ಎಂಕ್ಲಿಗೆ

ಅಕ್ಕ ಕುಂಕ್ಮದಕ್ಯ ಅಕ್ಕಿ ತೊಳ್ಸಲು ಬಾರೆ
ಅಪ್ಪ ಗಂಗೊಳ್ಳಿಗ್ ಹೆಯ್ಬಿರ್ – ಯಾಕೆಂದು
ಪಾವಾನ್ ಮುತ್ತುಳಿಯ ತಪ್ಕೆಂದ್

ಉಂಡಳು ಉಟ್ಟಳು ಚಂದ್ರ ಬಟ್ಟಿಟ್ಟಳು
ಗಂಡನ ಮುಂದೆ ನಡದಳು – ಸುಬ್ಬಮ್ಮ
ಚಂದ್ರಸಾಲಿಲಿ ಅವ್ಕ್ ಮಾವ – ಕೂಕಂಡರ
ಹೊತ್ತ್‌ಹೋಯ್ತ್ ಮಗುವೆ ಮನಿಗ್ಹೋಗ್

ಇಲ್ಲೆ ಬಾ ಅತ್ತಿಗಿ ಇಲ್ಲೊಂದ್ ಮಾತುಂಟು
ಕಲ್ಯಾಣ್ ಪುರದಾಚೆ ಮದಿಗ್ಹೋಪೋ – ನಿನ್ಕೊರ್ಲ
ಮುತ್ತಿನಡ್ಡಿಕಿಯ ಕೊಡಬೇಕು

ಅಕ್ಕಿ ಚಣ್ದ್ ಮುಡಿ ದೊಡ್ಡ್ ಅವ್ಕ ಕಾಲಿಗುಂಗಿಲ್
ಹೌದೇನಂತಯ್ಯ ನಿನ್‌ಮಡದಿ – ಸ್ಯಾಲಿಸೆರ್ಗ
ಮರಿಮಾಡಿ ಪಾದು ತೊಳದಳು

ಕನಸು ಕಟ್ಟಿತು ಗರತಿ ಮನಸಿಲಿ ಸಂತೋಸ
ಕನಸನೊಬ್ಬರಿಗೂ ಒಡಿಲಾರಿ – ತಿರುಪತಿ
ಕಳಸ ನನ್ಕೈಗೆ ದೊರಕಿತು

ನಾಮವ ಹಚ್ವಲ್ಲಿ ನಾ ನಿಮ್ಮ ಮಗಳಾದಿ
ನಾಮದ ಮ್ಯಾಲೆ ತೊಳಸಿ ತೀರ್ಥವ ಬೇಡಿ
ನಾನು ಗೋಯಿಂದ್ನ ಕಿರಿಸೊಸಿ

ಅಣ್ಣಂಗೂ ತಮ್ಮಂಗೂ ಚಿನ್ನ ಕಟ್ಟಿನ ಕೋವಿ
ತಮ್ಮ ಬಾವಣ್ಣ ಹುಲಿ ಹೊಡದು – ಕೆಡದಕಿ
ಸರ್ಕಾರಲಕ್ಕ್ ಕಾಗ್ತು ಬರದನು – ಏನಂದು
ಹುಲಿ ಹೊಡದ ಫೀಸು ಕೊಡ್ಕೆಂದು !

ಹೇಳ್ಬೇಳು ನಿನ್ನ್‌ಹಾಡು ಹೇಳುವಿ ನನ್ನ್‌ಹಾಡು
ಇಪ್ಪತ್ತೊಂದ್ ಹಾಡು ಹೊಸಹಾಡು – ಹೇಳ್ದಿರೆ
ನನ್ತಾಯಿಗ್ ನಾನು ಮಗಳಲ್ಲ

ಗೋಯಿಂದ್ನ ಹಾಕುತ್ತ ಗೋಪಾಲ್ಪಡಿ ಬೇಡುತ್ತ
ಸಂಕೂ ಚಾಗಂಟಿ ಹೊಡುವನು – ದಾಸಯ್ಗೆ
ಏನ್ ಕೊಟ್ಟಿ ಮಗಳೆ ಧರ್ಮವು?
ಹಿತ್ತಲ ಚೌಂತಿಹಣ್ಣು ಮುತ್ತಲ ಬೆಣ್ತಕ್ಕಿ
ಕೊಟ್ಟಿ ಕಾಣ್ ತಾಯಿ ಧರ್ಮವು

ತಿರುಪತಿ ತಿಮ್ಮಪ್ಪ ಹೆಸರಿಗೆ ದೊಡ್ಡವರು
ಆನಿ ಕಳ್ಸೀರೂ ಬರಲಿಲ್ಲೆ – ಬಾಳಿಯ
ವನವ ಮಾಡಿದರೆ ಬರುವರು

ಬಾರೆ ಬಾರತ್ತಿಗಿ ಊರುಕಾಣಲು ಹೋಪೊ
ಸೀಮೊಗ್ಗದಾಚಿ ಸಿರಸಿಯು – ಜಾತ್ರಿಕಂಡ್
ಆನ್ಗಳ್ಳಿ ಮ್ಯಾಲೆ ಬರುತಿಪ್ಪೊ

ಹುಂತಿನ ಮ್ಯಾಲಿಪ್ಪ ಮಾಸೇಸ ನೀ ಕೇಳೊ
ನಂಗೆ ಬಂದಂಥ ಗೌರವ – ಕೇಂಡರೆ
ಹುಂತಿಗೆ ಮುತ್ತು ಬಿಗುಸುವಿ

ಗಂಡನೆಂಬುದು ಬಟ್ಟು ಗಂಡನೆಂಬುದು ಸಿರಿಯು
ಗಂಗಾದೇವಿಯಿ ಕೇಳೆ ವಚನವು – ಹೆಣ್ಮಕ್ಕ
ಗಂಡರಿಗಾಯ್ತು ಹೆರಿದಾಯ್ಲಿ

ಕೇರಿ ಕೇರಿಯ ಮ್ಯಾಲೆ ಹೂಗು ಮಾರುತ ಬಂದ
ಏ ನನ್ನ ಗೋಪಿ ಮಗ್ನಲೇ – ಅಂತಯ್ಯ
ಬಾಳೊ ಹೆಂಡ್ತಿನೇ ತಪ್ಪನು

ಒಂದ್ವಾಡ ಹೇಳಮ್ಮ ತಂಬಿಟ್ಟ ಬಳಸುವ
ತಂಬಿಟ್ಟಿನ್ ಮ್ಯಾಲೆ ಹೆರಿತುಪ್ಪ – ಬಳಸುವಿ
ಒಂದ್ವಾಡ್ಹೇಳೂಲೇ ನನ್ನ್ ಮ್ಯಾಲೆ

ಚಾವ್ಡಿ ಚಾವ್ಡಿಯಡ್ಡೆ ಚಾವ್ಡಿ ಮುಂಡಿಗಿಯಡ್ಡೆ
ಎಲಿಯುಂಟಾ ಸ್ವಾಮಿ ಚಡ್ಕಿಲಿ – ನೀವೊರ್ಗ್ಳೂ
ಹಾಸ್ಗಿಲಿ ಸ್ವಾಮಿ ಬಿಡತುಂಟಾ?

ನೀನು ಬಸುರಿಯೆಂದು ನಿನ್ನ್ ಪುರುಸೇನ್ ಬಲ್ಲ
ನನ್ನ ಕೈಲ್ಹೇಳು ಗುಣದಿಂದ – ಪುರುಸಂಗೆ
ಸೀಮಂತಕ್ವಾಲಿ ಬರುವೆನು

ತಿರುಪತಿ ರಾಜ್ದಲ್ಲಿ ಮೂಡುಬಾಗಲಲ್ಲಿ
ಹಾಲ್ವೊಯ್ದು ತೊಳಸಿ ನಡ್ಸುವ – ಮಾವಯ್ಯ
ಮಗಳು ಸಂತಾನು ಪಡಿಕೆಂದು

ಬಾವಿಯ ಕಟ್ಟಿಲಿ ಬೆಳ್ಳುಳ್ಳಿ ನೀರುಳ್ಳಿ
ತಾಜ ಕೆಂಬ್ದರಿ ಕೈಹರ್ಗಿ – ಕುತ್‌ಬರಿಸಪ್ಪು
ರಾಯ ನಾರಾಯ್ಣ್ನ ಅಗಲೂಂಟೊ

ಚಣ್ಣಕ್ಕಿ ಮುಡಿಮೂರು ಜಿಗಿನ ತುಪ್ಪದ ಹಾಡ
ಅವನಿಗವನಪ್ಪ ಕಳುಗಿರು – ಸಂಕ್ರಯ್ಯ
ಓದಂಬ ಉಡುಪಿ ಮಠದಲ್ಲಿ

ಹೊತ್ತಾರಿ ಮುಂಚೆದ್ದು ದೇವ್ರ್ ಭಕ್ತಿನೆ ಮಾಡಿ
ತಂದಿ ಸಿರಿಪಾದೂ ಹಿಡದನು – ಸಂಕ್ರಯ್ಯ
ತಾನು ಗುರುಮಠಕೆ ನಡದನು

ಆಯಿತ್ವಾರಮವಾಸಿ ಮ್ಯಾಲೆ ಚತುರ್ದಸಿ
ಬಾಲಹುಟ್ಟಿದನೆ ದಸಮಿಲಿ – ತಿರುಪತಿ
ತಿಮ್ಮಪ್ಪ್ ಹುಟ್ಟಿದನೆ ಸನಿವಾರೊ

ಸತಿ ಮೈನೆರ್ದಳೆಂದು ಅತಿಹರ್ಸ ಮನಸಿಲಿ
ಮಾವಂಗೂ ಮಾಯ್ಗೂ ಬಿಡುಚಿಂತಿ – ಏನಂದ್
ಹಾಲುಜೇನುಗಳ ಎರಿ ಎಂದು

ಅಕ್ಕ ಹೆತ್ತ್ ಸುದ್ದಿ ಏಲ್ದ್ ಕೇಂಡಿ ನರಸಿಂಹ
ಹೊಸ ಅಂಗ್ಡಿಂದಾಚೆ ಪ್ಯಾಟೇಲಿ – ಕೂಕಂಡ್
ಅಳಿಯಂಗ್ ಚಳಿಯಂಗಿ ಹೊಲಿಸುವ

ಹೆತ್ತಳೆಂಬ ಸುದ್ದಿ ಹೆಬ್ಬಾಗ್ಲಂಗ್ ನಾ ಕೇಂಡಿ
ತುಪ್ಪಕು ಜನುನ ಕಳುಗಿದಿ – ಮುಂಡಾಡಿಗ್
ಹೆತ್ತದ್ದಕ್ ಹೋಪ್ಕೆ ಸವನಿದಿ

ಹಾಲ್ಹಬ್ಬುಕ್ ಹೋಯ್ಯಾರು ಹಾಲಂಥ ಮಡಿಯಾಯ್ಕ್
ಮ್ಯಾಲೆ ಸೀತಾಳಿ ಕೊಡಿಯಾಯ್ಕ್ – ತಮ್ಮಯ್ಯ
ಮಾವ್‌ದಿಕ್ಕಾಯ್ಕ್ ಗೆಣಿಯರು

ಒಬ್ಬಣ್ಣ ಕೂಡ್ಹುಟ್ಟಿ ಎಲ್ಲ ಯಾತುರಿ ಕಂಡಿ
ಕಾಯೇರಿ ತೀರ್ಥು ತಿರುಪತಿ – ಮಿಂದಿಕಿ
ಮತ್ತೂ ಗ್ವಾಕ್ರಣಕ್ ಸವನೆಂಬ

ಅಡಗಿಯ ಮನಿಯಲ್ಲಿ ಮಡದಿಸಾಲಿಯ ಹಿಡದು
ನನ್ನಾಸ್ವಾ ನಿಂಗೆ ತವರಾಸ್ವಾ?
ನಿಮ್ಮಾಣಿ ದೊರಿಯೆ ಚೆಂದ್ಲ ಮೂಡಲಗಿರಿಯೇ
ನಿಮ್ಮಿಂದೇನ್ಹೆಚ್ಚು ತವರಾಸಿ !

ಗ್ವಾಕ್ರಣದೊಳಗುಂಟು ದೀಪು ಮದ್ದಲಿ ಕಂಬು
ದಾತರಿ ಅಲ್ಲ ಬಯ್‌ಬಯ್ಗೆ – ಗ್ವಾಕ್ರಣ್ದಲ್
ದೀಪು ಕಂಡರಿಗೆ ಸ್ವರ್ಗವು

ವಾಲಿ ಬಿಟ್ಟೀರ್ ಬಾರ ಹೇಳಿ ಕಳುಗೀರ್ ಬಾರ
ಮಾನಸ್ಥಗಾರ ಮಣಿಗಾರ – ಚಿಕ್ಕಪ್ಪಿಗ್
ಕೂತ್ಹೇಳಿ ಬನ್ನಿ ಮದುವಿಗೆ

ಹೆಣ್ಣಿನ ಕೊಡ್ಕಾರೆ ಮನಿಯ ಕಾಣಲುಬೇಕು
ಬಾಗಿಲಲ್ಲಿರುವ ಅರಳಿಯ – ಪಾರಾಣ್ಡುಕ್ಕಿ
ನುಡಿ ಕೇಂಡ್ ಮಗಳ ಕೊಡಬೇಕು

ಈ ಬತ್ತೂ ತೊಳ್ಸಿಕ್ದ್ರೆ ಮಾಡೊದ್ದ ಸಂಪತ್ತಾ
ಮಾರಾಯ್ರ ಮನಿಯ ಬಲ್ಗಿಯ – ತೆಕ್ಕಂಡ್
ಮಾರಾಶಿ ಬತ್ತೂ ತೊಳ್ಡೋಪಿ

ವರ್ಣನೆ

ಚಾಚಿಕಟ್ಟಿದ ಮಂಡಿ ಬಾಗಳ್ ಹೂಗಿನ ದಂಡಿ
ನನ್ನ್ತಾಯಿ ತೆಗದ ಬಯ್ತಲಿ – ಬಾಮಕು
ನಮ್ಮಣ್ಣ ತಪ್ಪ ಕೊನಿಹೂಗು

ಸೀತಿಯ ತಲಿಕುರ್ಲ ಸಿಗ್ದು ಬಯ್ತಲಿ ಮಾಡಿ
ಸಿರಿಕಿಷ್ಣನಂಥ ಚವುಲಿಯ – ರಾಗಿಟಿಮ್ಯಾಲೆ
ದುಂಡುಮಲ್ಗಿಯ ಇಳಿಬಿಟ್ಟು

ಗುಡ್ಡಿಯ ಬೆದಿರೆ ನೀ ಗುಡಿಸಲಿಗೆ ನೆಯ್ದಾದಿ
ಜಾಣ ಕಿಷ್ಣನಿಗೆ ಕೊಳಲಾದಿ – ಸಿರಿಬೆದಿರೆ
ಮುತ್ತುಗೇರೂಕೆ ಮೊರದಾದಿ

ಕಡಗಣ್ಣಿಗ್ ಕಾಡಿಗಿ ಕುರುಬೆನ್ನಿಗ್ ಅರಿಸಿನ
ಗಮ್ಮುಗ್ಯೆಲೆಂಬ ಗಿಜ್ಜಗತ್ತಿ – ಸುರ್ಕಂಡ್
ಜಾಣ್ಸೆ ಬಚ್ಚಲಿಗೆ ನಡದಳು

ಗಟ್ಟಿಮ್ಯಾಲಿಪ್ಪುದು ಬೆಟ್ಗೆ ಬೇರೆಯ್ವುದು
ಗಾಳಿಗೆ ಗರ್ಭ ಹೊರುವುದು – ಸಿಂಗಾರ್ಹೂಗು
ಧಾರಿ ಮೂರುತಕೆ ಅದು ಮುಂದೆ

ಗಿದ್ದರು ನೆಡದರೆ ಗಿಣಿಹಿಂಡು ನೆಡದ್ಹಾಂಗೆ
ಉದ್ದನ ಬಾಲಿ ನನ್ನ್ತಂಗಿ – ನೆಡದರೆ
ರುದ್ದರನ ತೇರು ಎಳದ್ಹಾಂಗೆ

ಅಕ್ಕತಂಗ್ಯರು ನಾವು ಸ್ಯಾಮಂತ್ಗಿ ಮುಖದವರು
ನಾವೊಂದೆ ಕೆರಿಯ ಜಪದವರು – ಅಣ್ಣಯ್ಯ
ಸಂನ್ಯಾಸಿ ಜಪವ ಮರತನು

ತಾನ್ ಹತ್ತೂ ಕುದ್ರಿನ ಸ್ವಾದ್ರ್ ಮಾವಂಗ್ ಕೊಟ್ಟು
ತಾನ್ಬಂದ ಕಾಲ ನೆಡಗಿಲಿ – ಭಾವಯ್ಯ
ಈ ಬುದ್ದಿ ಎಲ್ಲಿ ಕಲ್ತ್‌ಕಂಡ್ರಿ

ಅಣ್ಣತಂದರೆ ಒಂದು ಕೊನಿಹೂಗ ತಪ್ಪನು
ಹೆರಿಯಕ್ಕ ತನಗೆ ಕಿರಿಯಕ್ಕ – ತನಗಂಬ್ಕೆ
ಒಳಗಿದ್ದ ಮಡದಿ ತನಗಂಬ್ಕೆ – ಅಣ್ಣಯ್ಯ
ತರಬೇಕು ಹತ್ತು ಕೊನಿಹೂಗ

ಉಪ್ಪರ್ಗಿ ಮೆಟ್ಟಲು ತುಪ್ಪಲಿ ಸಾರಿಸಿ
ಚಾರುತ್ತಲಣ್ಣ ಜತನವು – ಅಪ್ನ್ಮನಿ
ಮಲ್ಲಿಗಿ ಸರುವ ಹಿಡಿದಿಳಿ

ಕಟ್ಟಿಕಟ್ಟುವುದಲ್ಲ ನೀರುಹೊಯ್ಯುವುದಲ್ಲ
ಯಾವಾಗ ಕಂಡ್ರೂ ಗಿರುಮಿಟ್ಟಿ – ಕಿಸ್ಕಾರ್‌ಹೂಗ್
ಇಪ್ಪುದು ದೇವ್ರ ತಲಿಮ್ಯಾಲೆ

ಇಂದ್ ನಾಳೆಂಬರುಗಾಯಿ ಬಂದಿತು ದೀವಾಳಿ
ರನ್ನದ್ ಕಳ್ಸಿಗ್ಲಿ ಹೊಲಿಮಾತಿ – ಮಾವಯ್ಯ
ಗಂಗಿಗೌರ್ಯೆಂಬ ತಿರಿಕಟ್ಟಿ – ಮಾವಯ್ಯ
ತಿರಿಹತ್ತಿ ಕಡಲ ತೆರಿಕಾಣಿ

ಗಾಳಿಮಳಿ ಬಪ್ಪಂಗೆ ಎಲ್ಲಿಪ್ಪಿ ಕೋಗಿಲಿ
ಅಂಬರದ ಮ್ಯಾಲೆ ಅರಮನಿ – ಒಳಗಿಪ್ಪ
ಸಿಂಗಾರ ಹೂಗ ಹೆಡಿಮಂಚ

ಮೂಡಿಂದ ಮುಗಿಲೆದ್ದು ನೂರ್ಥನಿ ಮಳಿಬಿದ್ದು
ಜನ್ನದ್ ಮಲಗೆದ್ದಿ ಒಗದೆದ್ದು – ಅಣ್ಣಯ್ಯ
ಚಿನ್ನದ ನೆಲ ಅಣಿಮಾಡು

ಅಂಗಯ್ಯಲಾರುತಿ ಮುಂಗಯ್ಯಲಾರುತಿ
ತಂಗ್ಯಮ್ನ ಕೈಲಿ ತಳಗಿಯ – ಹಿಡ್ಕಂಡ್
ನಂಟರಂದಣಕೆ ಹೆಯ್ಟಳು

ಚಿನ್ನಗುಡ್ಡಿಯ ಮ್ಯಾಲೆ ಆಡಿ ಬರುವುದ ಕಂಡಿ
ಕುಸ್ತಿ ಹೆಯ್ಟಿರು ದೊರಿಗಳು – ಕೈ ಉಂಗಿಲು
ಇಷ್ಟದೂರ ಮನಿಗೂ ಹೊಳದುವು

ಬೆನ್ನಾಕಿ ನೆಡದರೆ ಬೆನ್ನ್‌ಚೆಂದೊ ಬೂಲ್‌ಚೆಂದೊ
ಓದಿರ್ ಉಸ್ಸೆಂಬೊ ದ್ಯನಿಚೆಂದೊ – ಉಪ್ಪರ್ಗಿಲಿ
ನಗುತಿಪ್ಪ ಶೋಬ್ನ ಮುಕುಚೆಂದೊ

ಬಾಮಿಯ ಕಟ್ಟಲಿ ನೀರುಳ್ಳಿ ಬೆಳ್ಳುಳ್ಳಿ
ಸಾಜಾತೆಂಬ್ಬರ್ಗಿ ಕೊಯ್ವಂಗೆ – ಅಣ್ಣಯ್ಯ
ರಾಜ ಮಾರಾಜ್ರಿಗಗಲೂಂಟ

ಕಾಸಿಗ್ ಬಿದ್ದುದ್ದ್ವರು ಕಾಲು ಬಾರೊಡಿಯಲು
ಮತಿಗುಯ್ಡ್ವರು ಅಳುವರು – ಅಣ್ಣಪ್ದೇವ್ರು
ಉಮಿಯೊಳ್ಗೆ ಬೆಂಕಿ ಬೆಮದ್ದಾಂಗೆ

ಅಂದಕು ಚೆಂದಕು ತಂದನೀ ಗಿಡ್ಡಿಯ
ಅಂಗ್ಣದಲ್ಲಾಡೂ ಬುಯ್ಡಿ ತೆಂಗಿನಕಾಯ
ತಂದನೀ ಮನಿಯ ಕೆಲಸಕೆ

ಅಂಗ್ಣದಲ್ ತೆಂಗ್‌ನೆಟ್ಟು ಬೆಂಗಳ್ಳೂರಿಗ್ ಬೇರೊಯ್ದು
ಬಸುಪಟ್ಣದಲ್ಲಿ ಹೆಡಿಬಿಟ್ಟು – ಅದ್ರ್‌ಕಾಯಿ
ಕುಂದಾಪ್ರ್ದ ಸಂತಿಯಲಿ ಮಾರಾಯ್ತು!

ನೆಲ್ಲಿಗೆ ಹಣ್ಣುಂಟೆ ನೆಲಕ ಮುಚ್ಚಿಗಿಯುಂಟೆ
ಕೋಡುಂಟೆ ನಾರಿ ಕುದುರಿಗೆ – ಸಿರಸಿಯ
ಅಮ್ಮನವ್ರ್ ಬಂಗಾರಕರಗುಂಟೆ

ತೊಟ್ಲಲ್ಲಿ ಕಂದಯ್ನ ಹೊತ್ಕಂಡ್ ಬರುವವಳೆ
ತೊಟ್ಲಗಿದ್ದ್ ಮಗಿನ ಹೆಸರ್ಹೇಳೆ
ಮಗಿನ್ಹೆಸರು ಮಾಣಿಕ್ಯ ತಾಯ್ ಹೆಸರು ತಾರುಕಿ
ಪತಿಪುರುಸ್ತ ಹೆಸರು ರಸನಾಮೆ

ತೆಂಕ್‌ಬಡದಿಕ್ಕಿನ ನೆಂಟರ ಸಾಯ್ದಿಂದ
ಬಂಡಿಮ್ಯಾಲ್ಬಂತು ಬೆಳಿಮೋಪು – ಅಣ್ಣಯ್ಯ
ನಿಂತೆ ಕಟ್ಸಿದ್ದ ಕಡ್ಮಾಡ

ಕಾಸಿಗುಂಬಳಕಾಯಿ ಕಾರಬದನಿಕಾಯಿ
ನುಗ್ಗಿಯ ಕಾಯಿ ಎಣ್ಣ್ಗಾಯಿ – ಚಿತ್ತಾರ್ಬಳ್ಳಿ
ಬುದ್ಯೊವಂತ್ರ ಮನಿಗೆ ಹೊರಿಬಂತು

ಯಾಲಕ್ಕಿ ಮರನೆ ಎಲಿಗೊಂದ್ ಕಾಯಾಗು
ಗಂಧದ ಮರನೆ ತಲಿದೂಗು – ನಮ್ಮನಿಯ
ರಂಭೀರಾಡ್ವಲ್ಲಿ ನೆರಳಾಗು

ವಾಲಿಕಾರ ನಿಂಗೆ ಒಳ್ಳಿ ಹೆಂಡತಿ ಯಾಕೊ
ನೀ ಹ್ವಾದಿ ರಾಜ್ಯ ತಿರುಗುತ – ನಿನ್ನ್‌ನಾರಿ
ಬಾಡ್ಯಾಳು ಬಾಳಿ ಸುಳಿಹಾಂಗೆ!

ಒಂದಲ್ಲ ಎಯ್ಡಲ್ಲ ಒಂಬಯ್ಯೂರು ಹಡ್ಗೆದ್ದೊ
ನಂಗಲ್ ಹಾಕಿದೊ ಅಳಿವಿಲಿ – ಆವೂರ
ಜಂಗಲ್ ಬರಲೆಂದು ಕರದರು

ಸಾಯಿರೆತ್ತಿನೊಡಿಯ ಸರ್ದಾರ ನಮ್ಮಗು
ದಿಬ್ಬಣವೆಲ್ಲಿ ಮರತವು – ಸಾಲ್ಗಿರಾಮ್ದ್
ಮುದ್ದು ಬಾವಯ್ನ ಮನಿಯಲ್ಲಿ

ತೊಳ್ಸಿಯ ಕಟ್ಟಿಲಿ ಸಾರ್ಸಿ ರಂಗ್ವಾಲಿ ಬರ್ದ್
ಸೇರ್ಸಿ ಪೆಟ್ಟಿಗಿಯ ಹೊರಿಕಟ್ಟಿ – ಅಜ್ಜಯ್ಯ
ತಾ ಮುಂದೆ ತನ್ನ ಬಳಗ್ದಿಂದೆ – ಕೂಡ್ಕಂಡ್
ಗೋಯಿಂದ್ನ್ ಯಾತ್ರಿಗ್ ಸವನಿದ

ಮಾರ್ನ್‌ಕಟ್ಟಿ ದ್ಯಕ್ಯವ್ರ್ ಚಿನ್ನದ ಹೊದ್ಕ್ಯವ್ರ್
ಮತ್ತೆ ದ್ಯಕ್ಕ್ಯಯವ್ರ್ ಹೊಗಳೂರು – ದೊಡ್ಡಿಕಾಲ್ಚಿಕ್ಕು
ಮುಡಿದ ತಾವುರಿಪಿ ಕೊಡುವಳು

ಮಕ್ಕಳ ಹೆರದವಳು ಎಷ್ಟು ಗೆಯ್ದರೇನು
ಬಾಡಿಗಿ ಎತ್ತು ಹೊಡದ್ಹಾಂಗೆ – ಬಾಳೆಲಿಯ
ಹಾಸ್ಯಂಡು ಬೀಸಿ ಹಣಿದ್ಹಾಂಗೆ !

ಕೊಲ್ಲೂರ ಬೀದಿಲಿ ಎತ್ತ್‌ಮೆಟ್ಟಿ ಕುಂಕ್ಮ ಚೆಲ್ಲಿ
ರಕ್ತು ಬಿದ್ಹೋದೊ ರಣಗಲ್ಲು – ಮೂಕಾಂಬಿ
ಹಕ್ಕಿ ಸಂದ್ಹೋದೊ ಹಣ್ಕಾಯಿ

ಕೊಲ್ಲೂರ ಮೂಕಾಂಬಿ ಬೀದಿಮ್ಯಾಲೊಯ್ಯ್ಹಾಡಿ
ಆಡಿಕುಟ್ಟಿದಳೆ ಅರಸಿನ – ಮೂಕಾಂಬಿ
ಹೋದಂಥ ಪರ್ಸಿಗ್ ಪರಸಾದೊ

ನಾರಿ ತಂಗ್ಯಮ್ನ ಕಾಡಿಗ್ಹಚ್ಚಿದ ಕಣ್ಣು
ಕಾಯೇರಿ ಹೊಳಿಯ ಒರಗಲ್ಲು – ಕಂಚ್ಗಾರ್ನ
ಗಿಣ್ಣಿಲ್ಗೆ ಗೆರಿಯ ತೆಗದ್ಹಾಂಗೆ !

ನಾರಾಯ್ಣದೇವ್ರಿಗೆ ಏನೆಂಜಲಾದವು
ಹಾಲೆಂಜಲಾದೊ ಕರುಮುಟ್ಟಿ – ದೇವ್ರಿಗೆ
ಹೊಗೆಂಜಲಾದೊ ಹುಳುಮುಟ್ಟಿ

ಆರಂಬ ಅಡವಿಲಿ ಹೋರ್‍ಯೆಮ್ಮಿ ಗೆಲಿದವು
ಆಲ್ಸಿ ಕೇಣ್ತಾಯಿ ಅಡವಿಲಿ – ನಿನ್ಮಗ
ಕಬ್ಣದ್ ಆಲಿನ ಹೊಡ್ಸಿದ

ಮಾರುದ್ದ ಮಂಡಿಕುರ್ಲ್ ಗೇಣುದ್ದ ಎಣಿಗಂಟು
ಕೊಂಕ್ಲಿ ಸಾಸ್ಬಾರ ಹುಡುಗಿಯು – ಪುಟ್ಟಮ್ಮ
ತೆಂಕಿನ್ ತೀರುತಕೆ ಸವನಿರು

ಅಪ್ಪಯ್ಯ ಬಪ್ಪ್‌ದಾರಿ ದೂರಿಂದೆ ಕಂಡಳು
ಕಳ್ಸಕಾರುತಿಯ ಅಣಿಮಾಡಿ – ಹೊನ್ನಮ್ಮ
ತೊಳ್ಸಿಗ್ ರಂಗ್ವಾಲಿ ಬರದಳು

ರಂಗ್ವಾಲಿ ಬರಿಯೆ ರಂಗ ಪಾಂಡವ್ರ್ ಮಗ್ಳೇ
ರನ್ನದ್ ಕಯ್ಡಿಗಿಯ ಮುಖದವ್ಳೇ – ಎಂಕಮ್ಮ
ರಂಗ್ವಾಲಿ ಬರಿಯೆ ತೊಳ್ಸಿಗೂ

ಮಗಳನ್ನು ಕಳಿಸಿಕಿ ಮನಿಯತ್ತೆ ಬಪ್ಪಂಗೆ
ಗಂಧದ ಗುಡ್ಡಿ ಮರಿಯಾದೊ – ಜಲಜಮ್ಮ
ಗಂಡನ ಮನಿಗೂ ಸನುವಾಯಿ

ಅಪ್ಪಯ್ನ ಬಗಿಯರು ಬಪ್ಪುದೆ ಬಯ್ಯಾಯಿ
ಬುಕ್ಕಿಯ ಹೂಗ ಕೊಯ್ಕಂತ – ಅಪ್ಪ್ನಅಕ್ಕ
ಬಪ್ಪರು ತಾರ್ಕಿ ಬೆಳಕಿಗೆ

ಸಣ್ಣವ್ಳ್ ಸಿರ್ದೇವಿನ್ ಯಾರಿಗೆ ಕೊಡ್ಲಕ್ಕ್
ಮೂಡಲಗಿರಿಯ ಅರಸಂಗೆ – ಕೊಟ್ಟರೆ
ಹೀಗಿನ್‌ಪಾಲ್ಕಿಲಿ ಬರುವಳು

ಮದ್ದಾನಿ ಅಣ್ಣಯ್ಯ ಮರಿಯಾನಿ ತಮ್ಮಯ್ಯ
ಗುಜ್ಜಾನಿ ವಜ್ರ ಕಿರಿಯಂವ – ತಮ್ಮಯ್ಯ
ಹಬ್ಬೂಕ್ ಮೂರಾನಿ ಹೆಯ್ಸಿತು – ಕುಂದಾಪ್ರಿಲಿ
ಕಗ್ಗಲ್ಲ ಸಂಕೊ ಮುರಿದಾವು

ಅಪ್ಪಯ್ನ ವಸ್ತ್ರವು ಯಾಲಕ್ಕಿ ಪರಿಮಳು
ಏನ್ಹಾಕಿ ಒಗದಿ ಮಡುವಾಳ – ಕೋಟೇಸುರ್ದ
ತಾವುರಿಕೆರಿಯ ಹಣಿನೀರು

ರಾಮಣ್ಣ ರತುವೇರಿ ಲಕ್ಸ್ಮಣ ಕುದುರ್ಯೇರಿ
ತಾಯಿ ಸೀತಮ್ಮ ಮರನೇರಿ – ನಿತ್ತಳೆ
ದೂರದ ಪರ್ಸಿ ಹರಿದವು

ಅವ್ಲಕ್ಕಿ ಬಣ್ದ್ ಸೀರಿ ಅವ್ಳ್ ಕಾಲಿಗ್ ಉಂಗಿಲ್
ಆಡೂಕ್ಹೋಯಿದ್ಲ್ ಅತಿರಂಭಿ–ಚಂದಮ್ನ
ಕೇಂಬೂಕ್ ಬಂದೀರ್ ಅರ್ಸ್‌ಮಕ್ಳ್

ನಾರಾಯ್ಣ್‌ದೇವರ ಮಗನೂ ಸೂರಿದೇವರ ಮಗಳೂ
ಗೊಂಬಿಗಳು ಕೂತೋ ಮಣಿಮ್ಯಾಲೆ – ಗಿರಿಮ್ಯಾಲೆ
ಗೋಯಿಂದಗ್ಹೋಲೂ ಎಣಿಯರು

ಕೆರಿಸುತ್ತೂ ಕ್ಯಾದಿಗಿ ಮನಿಸುತ್ತೂ ಮಲ್ಲಿಗಿ
ಹಾಸಿಗಿ ಸುತ್ತೂ ಪರಿಮಳು – ಅಣ್ಣಯ್ನ
ಬೀಸಣಿಗಿ ಸುತ್ತೂ ಬಿಡುಮುತ್ತು

ತಾರಕಿ ಬೆಳಕಿಗೂ ಯಾಲಕ್ಕಿ ಕೊಯ್ಯ್ಯೂನ್ಯಾರೆ
ಯಾವ್ತಾಯಿ ಪಡದ ಕುವರನು – ಅರ್ಜುನ
ಯಾಲಕ್ಕಿ ಇದ್ದನ್ಕ ಎಲಿತಿನ್ನ

ಬಾಳಿ ಹಣ್ಣಾದರೆ ಭೂಮಿ ಹಣ್ಣಾದ್ಹಾಂಗೆ
ಆಳ್ಗಳ ಕರಸಿ ಕೊಯ್ಲ್ಹುಡ್ಸಿ – ನಮ್ಮೊಡಿರು
ತಾವು ಸತ್ತಿಗಿಯ ನೆಳಲಡ್ಡೆ

ಮಜ್ಜಿಗಿ ತಿಕ್ಕೋರ ಮೈಯೆಲ್ಲ ಪರಿಮಳು
ಕೈಲಿ ಆಡಿತು ಕಡಗವು – ನಮ್ಮೊಡಿರ
ಕೆಮಿಲ್ ಆಡಿತು ಹಯ್ಕೊಂಟಿ !

ಹುಂಡಿಯೂ ಕಾಳಿಯೂ ದೇವರ ಜನ್ನಿಯೂ
ಕಾನೋಳಗ್ಹೋಯಿ ಕರುಹಾಕಿ – ಅಂತಯ್ಯ
ದೇಯೇಂದ್ರನಾಯಿ ಹೊಡ್ಕಂಡ್

ಅಷ್ಟೊತ್ತಿಗ್ ಬಂದ್ ನೆಂಟ್ರಿಗ್ ಇಷ್ಟೊತ್ಯಾಂಗಾಯ್ತು
ಆ ಸುಟ್ಟ ಗುಡ್ಡಿ ಸುಡುಗಾಡು – ಚಿಟ್ಟಿಮುಳ್ಳು
ದಿಕ್ಕು ತಪ್ಪಿಸಿದೊ ಹೊಲನಲ್ಲಿ

ಹತ್ತೂ ಬೆಯ್ಳಿಗೆ ಕೆತ್ತಿಸಿದುಂಗಿಲು
ಒತ್ತುಂಗಿಲ್ ಎಲ್ಲೇ ಕಳದಿಯಾ – ಸೀನಯ್ಯ
ಮುದ್ದು ಬಾವಯ್ನ ಒಡನಾಡಿ – ಮರ್ತ್ಉಂಗಿಲ್
ಬೇಡಿಕೊಡು ಮಗುವೆ ಗುಣದಿಂದ

ಮಾಣಿಕದುಂಗಿಲು ಮಾಣಿ ಮಾರುತ ಬಂದ
ಮಾಣಿ ನಾ ಕೊಂಬಿ ಕಿರಿಯಳು – ಸಂಕ್ರಯ್ನ
ಹಾಲುಂಬೂ ಹತ್ತು ಬೆಯ್ಳಿಗೆ

ಆಕಾಸ್ ಬಣ್ಣದ ಸೀರಿ ಬೇಕಂತ ತರ್ಸಿದಿ
ಯಾಕ ಸ್ವಾಮಿ ನೀಂವ್ ಮುನುವುದು – ಮನಿಯಲ್ಲಿ
ನಾಲಿ ಬೋಜಯ್ಯ ಮದುವಿ ಚಪ್ಪರದಲ್ಲಿ
ಕರಿಕೊಯ್ದ್ ನಾನು ಉಡಬೇಕು

ಹಡ್ಗಿನ್ ಮ್ಯಾಲ್ ಬಂದದ್ ಗಿಡ್ಗ ಪಪ್ಪಳಿಸಸಿ
ಆದರೆ ಹಬ್ಬಿದವು ರಸಬಳ್ಳಿ – ಬೋಜಯ್ನ
ಭುಜಕೆ ಹಬ್ಬಿದವು ಬೆಳಿಸಿಬ್ಬು

ಊರಿನ ಉಗ್ರಾಣಿ ಊರಿಗ್ ಮೂರುಂಗದೋನು
ತಕಮುಖದಗಾರ ದಫೇದಾರ್ನ – ಸಂಗಾತ
ಹೊಯ್ಮಾಲಿಗಾರ ಅವನೊಬ್ಬ

ನಾವು ಅಲ್ಲ್ಯವ್ರಲ್ಲ ನಾವು ಇಲ್ಲ್ಯವ್ರಲ್ಲ
ನಾವು ಕುಂದಾಪ್ರ್‌ದ್ ಚೆದುರಿರು – ಬೆದುರಿರು
ಬೆದರ್ಥಿಂಡ್ಲಿಗ್ಬೆಂಕಿ ಕೊಡುವವರು

ಬಾಮಿಯ ತಡಿಗೆದ್ದಿ ನೀನ್ಹೊಡೂಲಣ್ಣಪ್ಪ
ಬಾಣಂತಿ ನಿನ್ನ ಕಿರಿತಂಗಿ – ಮಿಂದ್ನೀರು
ಬಚ್ಚಲು ತುಂಬಿ ಹರದ್ಹೋದೋ

ಕಂಬಳದ ಗೆದ್ದಿನ ಮುಂದೆ ಹೂಡಿದರ್ಯಾರು
ಕಂಬಿನಂಥ ತೋಳು ತೊಡಿಯೋನು – ಅಣ್ಣಪ್ಪ
ಮುಂದೆ ಹೂಡಿದನೆ ನಡುಬಯ್ಲು

ಕಾಳಾವ್ರ್‌ದ್ ಸಿಸ್ಬಿದಿನು ಕಾಳಿಂಗ್ನ್ ಮಾಚಿಂತಿ
ಈ ಹುಂತನ್ಹ್ಯಾಂಗೆ ಬಿಡುವುದು – ಕಾಳಿಂಗ
ಮಾದೊಡ್ಡ ಮಳಿಗೆ ನೆನುವುದು

ತನ್ನ ಗಂಡನ ಕೊಂದು ಕೊನಿಲಿ ದೀವಿಗಿ ಹಚ್ಚಿ
ಬಲಗಾಲಿಲ್ ಬಾಯ ಬಿಡವಳು – ಸಿರ್ಸಿಯ
ದುರ್ಗಮ್ಮ ಎಂಥ ದೈತ್ಯಯೋ !

ಮಾರ‍್ಯಮ್ಮ ಬಪ್ಪಳು ವಾರ‍್ಯಾಯಿ ಜನರೆಲ್ಲ
ಕ್ವಾಣನ ತಿಂದು ಮದವೇರಿ – ಬಂದಮ್ಮಿಗ್
ಕಾಣಿಕಿ ಕಟ್ಟಿ ಕಳ್ಸಿನಿ

ಸಿರ್ಸಿಯ ದುರ್ಗಮ್ಮ ಬಂದಳು ರಾಜ್ಯಕೆ
ಗೆಂಡದ ಕಿಡಿಯ ಉದುರಿಸ್ತ – ದುರ್ಗಮ್ಮ
ಬಂದಳೀ ರಾಜ್ಯ ಬೆಳಗುತ್ತ

ಬೆಳ್ಗಾಯ್ ಮುಮಚಿ ಎದ್ಕಂಡ್ ಹಾರಿಹೆಗ್ಲಿಗ್ ಹಾಕ್ಕಂಡ್
ಮೂಡ್ಲಾಯ್ ಮುಖಹಾಕಿ ನೆಡದನು – ಬಾಬಣ್ಣ
ಬಡಗ್ಹೋತ ನೀರು ತಡದನ – ಏನೆಂದು
ಹೋಗ್ಲಿ ಹೆರಿಯಬ್ಬಿ ಬಯ್ಲಿಗೂ

ಜಾಲ್ಡ್‌ಹೂಗ್ ಅರ್‍ಳ್ಕಿದ್ರೂ ಜಾಮ್ದ್‌ಕೋಳಿ ಕೂಗ್ಯಿದ್ರೂ
ಗಂಗೊಳ್ಳಿಲ್ ನಿನ್ನಿ ಐಭೋಗೊ – ಅಂತಯ್ನ
ಬಂಗಾರದ್ಹಡಗು ಕರಿಚಾಂಚಿ

ಗುಬ್ಬಕ್ಕಿ ಗುರ್ವ್ಹಕ್ಕಿ ಗುರ್ವ್ಹಕ್ಕಿ ನೆಲ್ದ್‌ಮಾಲ್ ಕೂತ್ಹಕ್ಕಿ
ಪಿಕಳಾರ ಪೀಂಯಾ ಗೆರ್ವ್ಹಕ್ಕಿ – ಭೋಜಯ್ಯ
ಚಿಟ್ಟ್‌ಬಿಲ್ಲ ತಾರೊ ಹೊಡ್ತಪ್ಪೊ

ಮಕ್ಕಳಾಟಿಕೆ ಗುಬ್ಬಿ ಮರನಡಿ ಯಾಕಿಪ್ಪಿ
ನಾ ಕೊಡುವಿ ಗುಬ್ಬಿ ಮಣಿತೋಳು – ಭೋಜಣ್ಣ
ಕಂಚಿನ್ಹೆಬ್ಬಾಗ್ಲ ಕಡಮಾಡಿ

ದೇವ್ರಿಗ್ಹೋಪನ ಕೈಲಿ ದೇವಲೋಕದ ಕೊಳಲು
ಕಾಂಬಲೆ ಅಕ್ಕ ಹೆರಗ್ಹೋಯಿ – ನಿನ್ಮಗ
ದೇವ್ರ ಹೊಗಳೆದ ಕೊಳಲಲಿ !

ಕಂಚಿನ ಕಡಗೋಲು ಮಿಂಚಿನ ಕಿರುವಲು
ರಂಗಾಚಾರಿ ನೆಯ್ದ ತೆಗನೇಣು – ತೆಕ್ಕಂಡ್
ರಂಭಿ ಮಜ್ಜಿಗಿಯ ಕಡದಳು

ಕಾನೊಳಗಿದ್ದ್ ಕಳ್ಳರು ಊರಲಿಳಿದರು ಎಂದು
ಹೆಳಿಬಿಡನ್ನಮ್ಮ ಒಡ್ತಿಗೂ – ಕಮ್ಲುಮ್ಮಂಗೂ
ಮುತ್ತಿನ್ ಮುಗುಳೆಯ್ಡ್ ಬಲುಜ್ವಾಕಿ

ಕಾಯ್ ಬೆಳಿವ ಕೈಲ್ಕೆರಿ ಹೂಗ್ ಬೆಳಿವ ಬಸುರೂರು
ಮುತ್ತ್‌ರತ್ನ ಬೆಳಿವ ಕುಂದಾಪ್ರ್ – ಹೆಣ್ಣ್‌ಮಕ್ಳ್
ಮುತ್ತಿನ್ ಮುಗುಳಿಲ್ದೆ ಹೆಯ್ಡರು !

ಹಟ್ಟಿಯ ಹಣಿಯಲ್ಲಿ ನಿತ್ತುಕೊ ಅಣ್ಣಯ್ಯ
ಕಟ್ಟಿದ ಕೈಲ್ತಿ ಕರಕಂತಿ – ನಿನ್ನ್‌ಕೆಮಿಯ
ವಜ್ರದ ವಂಟಿ ಬೆಳಕಿಲಿ !

ನಾಳಿ ನಾಳೆಂದರೆ ಬಪ್ಪುದು ದೀವಾಳಿ
ಕನ್ನಿಯರೆಲ್ಲ ತಲಿಬಾಚಿ – ಈ ಮನಿಯ
ಗೋವಿಗಾರುತಿಯ ಅನುಮಾಡಿ

ಕಂಬ್ಳುಗೆದ್ದಿಯ ಮುಂದೆ ಒಂಬತ್ತು ಮುಡಿಗೆದ್ದಿ
ಉಂಬ್ಳಿ ಅಂತಯ್ನ ನಡುಬಯ್ಲು – ನಲ್ವತ್ತ್ಹಾನಿ
ಮದುಮಕ್ಕಳ್ಹಾಂಗೆ ತಲಿಬಾಗಿ

ವಂಡಾರಿಗ್ಹೋಯ್ಕಂದೆ ಹೋರಿ ಸಿಂಗಾರಾಯಿ
ಬೆನ್ನುದ್ದಿ ಅದರ ಭುಜತಟ್ಟಿ – ಅಂತಯ್ಯ
ವಂಡಾರಿಗ್ ಹೋರಿ ಸವನಿತು

ಸುಮ್ಮನೆ ತೊಳದರೆ ಗುಮ್ಡಕ್ಕಿ ತೊಳದ್ಹಾಂಗೆ
ಹಾಡ್ಹೇಳಿ ಬತ್ತೊ ತೊಳದರೆ – ಎಲೆನಾರಿ
ಬ್ಯಾಸ್ರ ಬಿನ್ಹಾಕಿ ನಡದಾವು

ಕಳ್ಳಿ ನಿನ್ನ್ ಜವ್ವನು ಕೊಳ್ಳಿಯ ತುಂಡ್ಹಾಂಗೆ
ಯಾವಾಗ್ಲೂ ಗೆಯ್ವು ಗರತಿಯ – ಜವ್ವನು
ದುಂಡು ಮಲ್ಲಿಗಿಯ ಎಸ್ಳ್ಹಾಂಗೆ !

ಬಜ್ಜಿ ಹೊಳಿಯಿಂದಾಚಿ ಲೋಬಾನ್ದ್ ಪರಿಮಳೊ
ಹಬ್ಬು ಅಬ್ಬಕ್ನ ಮನಿಯಲ್ಲಿ – ಹೆಣ್ಮಕ್ಳ್
ಮುಡಿಬಿಚ್ಚಿ ಸ್ನಾಯ ಸಲಿಸುರೊ

ಬಾರ್ಕೂರಿಗ್ಹೋಯಿ ಬಳಿಯಿಟ್ಟು ಬಪ್ಪಂಗೆ
ಯಾವ ನೂತ್ನದ ಮಳಿಯೊಯ್ದೊ – ನಮ್ಕೈಯ
ಕಡಗದ್ಮ್ಯಾಲೇಳು ಹನಿ ಕೂತೋ

ಕುಂದಾಪ್ರ್‌ದ್ ಪ್ಯಾಟಿಲಿ ಕಿಚ್ಚಿಲ್ಲೆ ನೀರಿಲ್ಲೆ
ರಾಯ ಅಣ್ಣಯ್ನ ಕೆಮಿವಂಟಿ – ಬೆಳಕಿಗೆ
ರಾಣಿ ಕಾಸ್ತುವ ಬರದಳು

ಚಪ್ಪರದ ಕಂಬಿಗೆ ಚಾಂಚಿ ನಿತ್ತವಳ್ಯಾರು
ರೂವಾರ್ದ ಗೊಂಬಿ ಅವಳ್ಯಾರು – ಕಸ್ತೂರಿ
ಮಾವಯ್ನ ಉಂಬ್ಕೆ ಬರಹೇಳು

ಚಪ್ರಕೂ ಚಾಪ್ಡಿಗೂ ಚಾಂಚಿದಿ ದಂಡಿಗಿ
ಹೂಗಿನ್ ಕೊನಿಯಂಥ ಹಸುಮಗು – ಪಾರೋತಿ
ಬಾಗಿ ದಂಡಿಗಿಯನಿಳುವಳು

ಬಂಡಿಯು ಹೊಸಬಂಡಿ ಹೆಂಡತಿ ಹಸುಬಾಲಿ
ಹಿಂದೆ ಬರುವೆಮ್ಮಿ ಎಳಗಂದಿ – ಅಣ್ಣಯ್ನ
ಬಾಲಿ ಹೆಂಡತಿಯ ಬಳುವಳಿ

ನೆಯ್ಲಾಡಿ ಬಿಲ್ಲಾಡಿ ತಗ್ಗಿಲಿ ಹೆಗ್ಗುಂಜಿ
ಆನಿ ಬಂದಿಳಿದೊ ಬಯ್ಲಿಗೆ – ಸೇತುವಿ
ಒಳಗೆ ದೂರಿ ತಮ್ಮ ಒರಗಿದ

ತಾತಿ ಕರಿಮಣಿ ಜೋಡು ತಾಯಿ ಮಕ್ಕಳು ಜೋಡು
ನಾನೂ ನನ್ನಕ್ನೂ ಸರಿಜೋಡು – ಹೋಪಂಗೆ
ಊರನಾರೀರು ಕರುಬೂರು – ಏನೆಂದು
ದೇವನಕನ್ನೀರು ಹೆಯ್ವರು

ತಾರಿಕಿ ಬೆಳಕಿಗೆ ನಾನಕ್ಕಿ ತೊಳ್ಸುವಿ
ಸೂರಿಚಂದ್ರರ ಬೆಳಕಿಗೆ – ಕಾಳಾವ್ರಿಲಿ
ಮಂಡಲಕಕ್ಕಿ ತೊಳ್ಸುವಿ

ಕಾಳಾವ್ರ್ದ ಕಾಳಿಂಗ ಆಳಿಬಪ್ಪುದು ಚೆಂದೊ
ಬಾಗೂಳ್ಹೂಗಿನಲಿ ದರ್ಸಿನ – ಕಾಳಿಂಗ್ನಿಗ್
ಸಿಂಗಾರ್ಹೂಗಿನಲಿ ಪರ್ಸಾದೊ

ಆಚಾರಿ ಕಟ್ಟಿದ್ಮನಿ ಆಯ ಕಾಂಬೂಕ್ ಬನ್ನಿ
ಸೂಜಿಮ್ಯಾಲ್ ಮುತ್ತು ಸುರದ್ಹಾಂಗೆ – ನಮ್ಮನಿ
ಮೋಪು ಮುಂಡಿಗಿಯ ಕೆಲಸವು

ಬಣ್ಣಾಲಿ ಒಳ್ಗಿಲ್ಲೆ ಬುಣ್ಣ್ದ ಚಾವ್ಡಿಲಿಲ್ಲೆ
ಎತ್ತ್‌ಹ್ವಾರ್ ನಮ್ಮ ಒಡಿಯರು – ನಾವ್‌ತೊಳ್ದ್
ಅಕ್ಕಿ ಇನ್ನ್ಯಾರು ಆಳುವರು – ಅವ್ರ್‌ಕೈಯ
ಬರವಣ್ಗಿನ್ನ್ಯಾರು ಬರುವರು !

ಸಂತಿಗೆ ಹೋಪರಿಗೆ ಸಂಚಿ ಸುಣ್ಣದಕಾಯಿ
ಎಂಟುನೂರಡಕಿ ಎಲಿನೂರು – ನಮ್ಮಜ್ಜಿ
ಮಟ್ಟಿಯ ಅಡಕಿ ಫಲುಬಂತು

ಗಂಡನ ಮನಿಯಿಂದ ಹ್ಯಾಂಗ್ ಬಪ್ಳು ರತ್ನಮ್ಮ
ದಂಡಿಗಿ ಮ್ಯಾಲೆ ತಳಿದೀಪು – ಇಟ್ಕಂಡ್
ಬಪ್ಪಳು ತಾಯ ಅರಮನಿಗೆ

ಒಂದೊಂದು ವಜ್ರವು ಲಿಂಬಿಕಾಯ್ ಗಡುತರವು
ಬೆಳುವುದ್ ಗಂಗೊಳ್ಳಿ ಅಳಿವಿಲಿ – ಆ ವಜ್ರ
ಬಪ್ದು ನಾರಾಯ್ಣನ್ ಹಡಗಲ್ಲಿ – ಆ ವಜ್ರ
ಹೊಳುವುದ್ ರತ್ನಮ್ನ್ ಮುಖದಲ್ಲಿ !

ಬಪ್ಪರಿಗ್ ಬಾಯ್ಮಾತು ಬರದಿದ್ದರಿಗ್ ಕೈವಾಲಿ
ಎಬ್ಬಿಸಿ ಬಿಟ್ಟ ಕುದುರಿನ – ಕುಂದಾಪ್ರಿಗ್
ಭಾವಯ್ನ ಲಗ್ನ ಬರೆಂದು

ಮಲ್ಗಿ ಹೂಗಿನ ಗಮನ ಮನಿಗೆ ಬಂದರ್‍ಯಾರು
ಗಂಧದ ಗಮನ ಒಳಗೆಲ್ಲ – ಕೊಳ್ಳಿಬಯ್ಲು
ಬಂಟರ ಹೊರತು ನರರಲ್ಲ !

ಗಂಡನ ಮನಿಯಿಂದ ಏನ್ಬಂದಿ ರತ್ನಮ್ಮ
ಮುಖವು ಬಾಡಿದವು ಬಿಸಲಿಗೆ – ನಿನ್‌ಕೈಯ
ಬಳ್ಳೆಲಿ ಬಾಡಿದೊ ಬೆಗರಿಗೆ

ಕುಂದಾಪ್ರ್ದ ಪ್ಯಾಟಿಲಿ ನೂರಾರು ಜನರಲ್ಲಿ
ಏನೆಂದು ನಾನು ಕರವುದು – ಕಂಚಿನ
ಕ್ವಾಟಿಯ ಅರಸೆ ಮನಿಗ್ಹೋಪೋ

ಕುಂದಾಪ್ರ್ದ ಪ್ಯಾಟಿಲಿ ನೂರಾರು ಜನರಲ್ಲಿ
ಏನೆಂದು ನಾನು ಕರವುದು – ಕಂಚಿನ
ಕ್ವಾಟಿಯ ಅರಸೆ ಮನಿಗ್ಹೋಪೋ

ಕುಂದಾಪ್ರ್ದ ಸಂತಿಲಿ ಏನಗ್ಗ ಏನ್ ಪಿರಿಯ
ಸಕ್ಕರಿ ಪಿರಿಯ ಸಕಲಾತಿ – ಮಾವ್ನಿಗೆ
ಮಕ್ಕಳು ಪಿರಿಯ ಮನಿಯಲ್ಲಿ

ಕನ್ನಡಿಯೊಳಗಿನ ಗೆಂಟು ಕೈಗೆ ಸಿಕ್ಕಿತು ಎಂದು
ಅರಸ ನಾರಾಯ್ಣ್ನ ಮನದಲ್ಲಿ – ಈ ಊರ
ಅರಸು ಮನಿತನವೆ ತನಗಂದು

ಇಂದ್ ಬೀಸುವ ಗಾಳಿ ಇಂದ್ರಲೋಕದ ಗಾಳಿ
ಇಂದೆಯ್ನ್ಡ್ ಗಳಿಗಿ ನಿಲಬೇಕು – ಗುಡ್ಡಟ್ಟಿನ್
ಗಣ್ಪತಿ ದೀಪ್ಗಿ ಉರಿಬೇಕು

ಚಾವಡಿ ಸುತ್ತಲೂ ಚಾಡಿಗಾರರು ಬಹಳ
ಮಾವ್ನಿಗಿಂತಳಿಯ ಕಡುಜಾಣ – ಸಂಕ್ರಯ್ಯ
ಮೂರು ಮಾತಿನಲಿ ಮುಗದೆದ್ದ

ರಾಯ್ರು ಮೆಟ್ಟುವ ಮೆಟ್ಟು ತಾಜಕೊಂಬ್ ಒತ್ತಾಳಿ
ಮ್ಯಾಲೊಂದು ತರದ ಗುರುಗುಂಜಿ – ಮಟ್ಟ್‌ಮೆಟ್ಟಿ
ರಾಯ್ರು ನಮ್ಮನಿಗೆ ಬರುವರು

ದರಿಯ ಮ್ಯಾಲ್ ಹುಟ್ಟೂದು ದೊರಿಯಾಗಿ ಬೆಳುವುದು
ಚೋಯ್ಸರಿಗುತ್ರು ಕೊಡುವುದು – ಹನಿವಾಲಿ
ಬಡವರ ಗೋಳು ಹೊಯ್ದೀತು

ಹೊಳಿಯ ದಾಟುವಲ್ ಕಂಡಿ ಹೊಳುವ ತಾರಕಿ ಕಂಡಿ
ತಾಯೇ ನಿನ್ನ್ ಮನಿಯ ಜಗ್ಲಿಲಿ – ಹಾಸ್ಗಿಮ್ಯಾಲ್
ರಾಯ್ರ್ ನಿನ್ನಳಿಯ ಒರಗೀರ್

ನೆಗಿ ನಂಜುಕಾರರ ನಗುತರನ ಕಾಣ್ಬ್ಯಾಡಿ
ನೆಗಿ ಬ್ಯಾರೆ ಅವ್ರ ಹಗಿ ಬ್ಯಾರೆ – ಬಾಳಿಯ
ಕುಂಡಿಕಿ ಬ್ಯಾರೆ ಕೊನಿ ಬ್ಯಾರೆ – ಬಾಳಿಯ
ಕೊಂಡು ಮಾರುವವನ ಗುಣಬ್ಯಾರೆ

ಚಿನ್ನದಂಥ ಹೆದ್ದಾರಿ ಬೆಳ್ಳ್ಯಂಥ ಸಾರೋಟು
ಸಾರೋಟಿನೊಳಗೆ ದನಿಗಳೆ – ನಿಮ್ಮ್ ಕೈಯ
ಉಂಗಿಲ್ ನಮ್ಮನಿಗೆ ಹೊಳದವು

ಕೈಯಡಿ ಕಾಲಡಿ ಆನಿಯ ಭುಜದಡಿ
ಸ್ವಾಮಿಯು ಮನಿಲಿ ಹರದಾಡಿ – ಬಪ್ಪಂಗೆ
ಭೂಮಿತಾಯ್ ಕಂಡು ನೆಗಿಯಾಡಿ

ಬಳಿ ಇಟ್ಟರೊಂದಂಗ ಬಟ್ಟಿಟ್ಟರೆಯ್ಡಂಗ
ಜಾಜಿ ಕ್ಯಾದ್ಗಿನ ಮುಡಿದರೆ – ಬೀಚಮ್ನ
ಬಾಚಿ ಕನ್ನಡಿನ ಹಿಡಿದಳು

ಚಾಮಿಯು ಕಟ್ಟಿಲಿ ಹೆಣ್ಣಿಲಿ ಬಿದ್ದಿತ್ತ್
ಅಲ್ಲಿಗ್ಹಾರಿದರು ಗಗನಕ್ಕೆ – ತೋಳರುಬಳಿ
ದಿಂಡೀರ್ ಹಾರಿದರು ಜಗಳಕ್ಕೆ

ಹಗ್ಗಿಯ ಸಪ್ಪಿಗೆ ಹದಿನಾರು ಮುದ್ದುರಿ
ಹಲವು ಮುದ್ರಿಯ ಮಗುವಿಗೆ – ತಿರುಪತಿ
ಒಡಿನ ಮುದ್ರಿಯು ಭುಜದಲ್ಲಿ

ತಾಟಕಿ ಬಪ್ಪಳೆಂದು ಮಾತ ಪುರಿಮಡಿಸಿ
ತಾಟಕಿ ಹುಬ್ಬು ಹೊಯ್ಮಾಲಿ – ಮಾತಿಂದ
ತಗ್ಗಿ ಗಿಡುವೆದ್ದು ಕೋಣಿವುದು

ಸುರಿಗೆಯೇ ಸಂಪ್ಗಿಯೇ ಬಪ್ಪಿಯಾ ಬಾರಿಯಾ
ನಾಳಿ ನಮ್ಮನಿಯ ಮದುವಿಯೂ – ಚಪ್ಪರ್ದಲ್ಲಿ
ಸುರಿಗಿ ಸಂಪಿಗಿಯ ಚೋಲ್ಲ್ಯಾಡಿ

ಹೋರಿಯ ಹೆರಮಾಡಿ ಗೋರಿಯ ಹೆರಮಾಡಿ
ಆಳಿಗೆ ಕೊಚ್ಚ ಅಳುವನು – ನರಸಿಂಹ
ತಾನು ಕಂಬಳಕೆ ಹೆಯ್ಪನು

ಕಟ್ಟಿ ಕಟ್ಟುವುದಲ್ಲ ನೀರು ಹೊಯ್ಯುವುದಲ್ಲ
ಗಾಳಿ ಪಡಿನಲ್ಲಿ ಇರುವುದು – ಬಾಗಾಳ್ಹೂಗು
ಗಾಳಿ ಬಂದತ್ತ ಉದುರೂದು

ಹೆಬ್ಬಾಗ್ಲ ಮನಿಮುಂದೆ ಹೆಬ್ಬೆಲ್ಸಿನ್ ಮರಹುಟ್ಟಿ
ಕಡ್ಕೊಡ್ ಆಚಾರಿ ಅರ್ಕೊಡ – ಮಾವಯ್ಯ
ಕೂಕಂಬಲ್ಲೆಲ್ಲ ತಳಿಹೊಡ

ಅಕ್ಕಿಯ ಕೊಳ್ಳಿನಿ ಚೊಕ್ಕ ಮುತ್ತಿನ್ಹಾಂಗೆ
ಆಕ್ಸತಿಗಕ್ಕು ಒಳ್ಗಿರ್ಲಿ – ನಾರಾಯ್ಣ
ಕಳ್ಸ ನೀರ್‌ಮಿಂದ ನೆಸಲಿಗೆ

ಅಪ್ಪಯ್ನ ಮನಿಯಿಂದ ಬಪ್ಪಂಗೆ ಹೊತ್ತ್ಹೋಯ್ತು
ಬುಕ್ಕಿಯ ಹೂಗ ಕೊಯ್ಕಂತ – ಹೆಣ್ಣಂತ
ಬಪ್ಪಳ್ ತಾರ್ಕಿಯ ಬೆಳಕಿಲಿ

ಒಂದೊಂದೆ ಮಾತ್ನಾಡಿ ಕೊಂದಂತೆ ಫಲವಾದೊ
ಇಂದಿಗೀ ಮಾತ ಸಲಿಸುವಿ – ಬಾಳಿಯ
ದಿಂಡಿಗೆ ಮುಳ್ಳ ಸುರಿದ್ಹಾಂಗೆ

ಬಾಳಿಯ ಬಳ್ಳಿಯು ನೀರಿಲ್ಲದುರಿದುವು
ತೊಳ್ಸಿ ನೀನ್ಯಾಕೆ ಉರಿದ್ಹೋಪಿ – ಈ ಮನಿಯ
ಹೊನ್ನ ಗೋಕುಲದ ಕಣನಲ್ಲಿ

ಕರಿಯ ಕುದುರಿ ತಂದು ಕಣನಲಿ ಸಿಂಗಾರ್‌ಮಾಡಿ
ಬೆನ್ನುದ್ದಿ ಅದರ ಭುಜು ತಿಕ್ಕಿ – ಕೋಟೇಸುರ್ದ್
ತಂಗಿ ದಿಬ್ಬಣಕೆ ಸವನಿದಿ

ಮೂಡಿನ ಚಂದ್ರಮ್ಮ ದೇವಲೋಕ್ದಿಂದ್ಬಂದ
ನಾ ನೀರ ಕಾಸಿ ಕಳುಸುವಿ – ಗುಜ್ಜಮ್ಮ
ಆ ನೀರ ಮಿಂದು ಬಸ್ರ್‌ಹೊರು

ಕನ್ನಡಿ ಕಾವಮ್ಮ ಕಳ್ಸದ ಗುಜ್ಜಮ್ಮ
ಅರಸ್ನ ದಿಬ್ಬಣಕೆ ಸವನಿರು – ಅವರಿಬ್ರು
ಸಭಿಯಲ್ಲಂತರ್ಲಿ ಬರುವರು

ಆದ್ರಿ ಮಳಿರಾಯ ಆದರ್ಲಿ ಹೊಯ್ಯಯ್ಯ
ಆಲಿ ಹೊಡಿದನೆ ಅಡವಿಲಿ – ಅಣ್ಣಯ್ಯ
ಆದರ್ಲಿ ಮಳಿಯೇ ಹೊಯ್ಯಯ್ಯ

ಸೀತಿ ಸಿರಿದೇವರು ಕೂತಿಲ್ಲಿ ಮೆರುವರು
ತಾ ಮುಗಿಲು ಕಟ್ಟಿ ಮಳಿಹೊಯ್ದ್ – ಸೀತಮ್ನ
ಬೀಸೂ ಮ್ಯಾದಲಿಯು ನೆನದವು

ಸರ್ಪನ ಕೊರ್ಲಿಗೆ ಸರ್ಪಣಿ ಉಯ್ಯೊಡ್ಡಿ
ಹಾರ್ತ ನೆಯಿಲ್ಹಕ್ಕಿನ್ ಸಭಿಗೊಡ್ಡಿ – ತಮ್ಮಯ್ಯ
ಈ ಕುಸ್ತಿನೆಲ್ಲಿ ಕಲಿತಿಯೋ

ಸುರಿಗಿ ಸಂಪಿಗಿಯ ಸರ್ವೇಸ್ರಿ ಮುಡ್ಕಂಡ್
ಸಭಿಯರಿಗೆ ಕೈಯ ಮುಗಿದಳು – ಏನೆಂದು
ಅಳಿಯಂಗ್ ಸಾಯಿರವ ಕೊಡ್ತ್ಯೆಂದು

ಮಧ್ಯ ದಾತ್ರಿಲಿ ಬಂದು ಎಬ್ಬಿಸುವರ್‍ಯಾರು
ಗಂಧ ಕುಂಕುಮದ ಹಣಿಯರು – ಸೌಡದ
ಅಮ್ಮವ್ರ ಹೊರತು ನರರಲ್ಲ !

ಮಾಯಿನ ಎಲಿಬಿದ್ದು ನೀರೆಲ್ಲ ಕಲಕಾದೊ
ನಾನೆಲ್ಲಿ ಮೀವೂದ್ ಹಣಿನೀರ – ಬಸ್ರೂರ
ಮಾಲ್ಯೇರ ದಂಡ್ಗಿ ಇಳುವಲ್ಲಿ

ಮಣಿಕಲ್ಲ ಗುಡ್ಡಿಲಿ ಮಲ್ಲಿಗಿ ಗಿಡುಹುಟ್ಟಿ
ಬಾರ್ಕೂರಲ್ಹೋಯಿ ಕೊಡಿಬಿಟ್ಟು – ಮಲ್ಲಿಗಿ
ಕುಂದಾಪ್ರಿಲ್ಹೋಯಿ ಮುಕಿಯಾದೊ – ಮಲ್ಲಿಗಿ
ಬಸ್ರೂರಲ್ಹೋಯಿ ಅರಳಿದೊ – ಮಲ್ಲಿಗಿ
ಹಾಲಾಡಿ ಸಾವ್ಕಾರ ಕಿರಾಯ್ಮಾಡಿ – ಮಲ್ಲಿಗಿ
ಚೋರಾಡಿ ನಾರೀರು ಹೆಣಿದರು – ಮಲ್ಲಿಗಿ
ಮಂದರ್ತಿ ನಾರೀರ ತಲಿಮ್ಯಾಲೆ !

ಹುಲ್ಲುಕುತ್ತುರಿ ಕಂಡ್ ಅಕ್ಕಿ ಕುತ್ತಟು ಕಂಡ್
ಹಟ್ಟಿನ ಕಂಡು ಮಟುವೆಂದ – ಅಣ್ಣಯ್ನ
ದುಸ್ತನ್ನೇ ಕಂಡು ಅರಸೆಂದ

ಹಂಬಿಹಾಳಿಯಂಥನ ಹಂಬಲು ನನಗಾದೊ
ಕಾಣಬೇಕೆಂದು ಮಸಸಿಲಿ – ಸೇಕರಗೆ
ಕಾಗತು ಬರದು ಕಳುಗಿದಿ

ಹೊಳಿಂದಾಚೆ ಅಣ್ಣಯ್ಯ ಬೆಳಿ ಹ್ಯಾಂಗೆ ನಿನ್ನೂರ
ಬೆಳಿ ಸಂಪತ್ತಾಯಿ ಮಳಿಯಿಲ್ಲೆ – ನಿನ್ನ್ ಕೊರ್ಲ
ಕಿರಿಮುತ್ತಿನ್ಹಾಂಗೆ ಕಿರುಜ್ವಾಳ

ಮುತ್ತೈದಿತನೂಕ್ ಒಪ್ಪೂ ಮೂರೆಳಿ ಕರಿಮಣಿ
ಮ್ಯಾಲ್ಗಿರಿ ಗೋಯಿಂದ್ನ್ ಮಡದಿ – ಕಾಯೇರಮ್ನೂಗ
ಕರಿಮಣಿ ಜಿಡಿಯು ಹದಿನಾರು

ಮೂಗುತಿ ಮುತ್ತ ತೂಕುಮಾಡ್ವಲ್ಲೋಯಿ
ಭೂಪಾಲ ತನ್ನ ಮಡದಿಗೆ – ಮಂಜಣ್ಣ
ಮೂಗ್ತಿ ಮೂರ್ ಲಕ್ಸ ದರವಾದೊ

ಬಾಲಿ ಬಾಬ್ಯಮ್ಮಂಗೆ ಮೂರ್ಮಂದಿ ಅಣ್ಣ್‌ದಿಕ್ಕು
ಮೂರ್ಮಂದಿಗ್ ಮೂರು ಮಳಿಗಿಯು – ಬಾಬ್ಯಮ್ಮ
ಹೊತ್ತಿಗೊಂದ್ ಉಡುಗಿ ಉಡುವಳು

ಹಾಸ್ವಾಕಲಣ್ಣಯ್ಯ ಭೂಮಿಗ್ ಬಲು ಬಪ್ವಾಂಗೆ
ಭೂಮ್ತಾಯಿ ಬಾಯ ಬಿಡುವರು – ಏನೆಂದು
ಬಗ್ತಿ ಬಂದ್ ಭೂಮಿ ಇಳುವರು

ಸ್ವಾಮೀನ ನೆನ್ಕಂಡ್ ಭೂಮಿನ ಮೆಟ್ಕಂಡ್
ತಾನು ತನ್ನಳಿದ ಕರ್ಕಂಡ್ – ಅಣ್ಣಯ್ಯ
ಭೂಮಿಲಿ ಎಲ್ಲಿ ಜನಿಸಿದ

ಮೂಡಿಂದ ಬಪ್ಪಂಗೆ ಮುನ್ನೂರು ಕೊಂತಳ್ಳಿ
ಎಣ್ಣೆ ಸುಲದಕೆ ನೆಣಿಸಾಲ – ಅದ್ರಿಂದ
ಸತ್ಯದಿಂದುರಿದ ಜಗಜ್ಯೋತಿ

ಅರ್‌ವರನ ಹಾಸಿಗಿ ಮೂರ್‌ವರನ ತಲಿದಿಂಬ್
ಅರವತ್ತೆ ಕಂದಾವ್ನ್ ಗುಳ್ದ್‌ಕಾಯಿ – ಕುಗ್ಗಿಕಡ್ಡಿ
ಯಾವಾಗ್ಲಪ್ಪಯ್ನ ಹೊಗ್ಲಾಗೆ

ಕಾಲುಂಗಿಲ್ ಹಾಯ್ಕಂಡ್ ನೀರಿಗೆ ಹೋಗ್ವಳು
ಕಾಲು ಬೆಟ್ಟೊಡದು ನಿಲುವಳು – ಗಿರ್ಜಮ್ಮ
ಬಂಡಿ ಬಂದ್ವೊರತು ಸವುನಳು

ಕಾಣದಿದ್ದೂರನು ಕಂಡ್ಬಂದಿ ಕುಂದಾಪ್ರ
ಮೂಡಬಾಗಿಲಿಗೆ ಮರುಗವು – ನಮ್ಮನಿ
ಹೆಣ್ಣೆ ಬಾಳುವ ಅರಮನಿ

ಒಂದ್‌ನೂರ ಬರಿ ಅಂದ್ರೆ ಒಂಬಯ್ನೂರ್ ಬರದಳು
ಕೊಂಬಿನ ಮ್ಯಾಲೆ ಗಯ್ದನ – ಬರಿ ಅಂದ್ರೆ
ಗಂಡ ಮಾರಾಯ್ನ ಬರದಳು

ಪುಣ್ಯುಳ್ಳ ಪುರುಸನ ತೋಳಮ್ಯಾಲಿನ ನಿದ್ರಿ
ಏಳೆಲೆ ಪನಚಾ ಬೆಳಗಾದೊ – ನೀ ಕೊಯ್ಯೊ
ಹೂಗಿನ್ ತಪ್ಲಿಗೆ ಬಿಸಿಲಾದೊ

ಆನಿಮ್ಯಾಲ್ ಬಂದದ್ದ ಭೂಮಿಮ್ಯಾಲ್ ಇಳ್ಗೀನಿ
ಸಾನ್ವರನ ಬರುಕೆ ಕರ್ಸೀನಿ – ಮಂಜಯ್ನ
ಮಾಯಿ ಕೊಟ್ಟಣವ ಬರ್ಸೀನಿ

ದಂಡ್ನಲ್ಲಿ ದಳವಾಯಿ ಮಾತ್ನಲ್ಲಿ ಪರ್ಚಂಡ
ಹೌದೆ ಸಂಕಮ್ಮ ನಿನ್ಮಗ – ಮಂಜಯ್ಯ
ಮಂದಿನ್ ಪಾಲಿಸುವ ಐನೂರು

ಹೆಬ್ಬಾಗಿಲಿಂದ್ಹೆರಗೆ ಪಗಡಿ ಆಡುವ ಮಗುವೆ
ನಿನ್ನ್ ಮಾವ್ನ ಹೆಸರ ನಂಗ್ಹೇಳು
ಉಪ್ಪರ್ಗಿ ಮನಿಯರು ನುಗ್ಲ ಪಾರಾರ್ದವ್ರ್
ರಾಜ್ಯಕೆ ಮವ ಹೆರಿಯರು – ಮಮ್ಮಳ
ಮನಿತನೊ ಕೇಂಡ್ ಮುಗುಳ್ನಕ್ಕಿ
ರಾಜ್ಯಕೆ ಅವ್ನ್ ಮಾವ ಹೆಯ್ಬರು – ನಮ್ಮಗುನ
ರಾಜ್ಯ ಆಳ್ವಂಗೆ ಕೊಡ್ಕೆಂದು !

ನೀರ ಕಾಸ್ಹೆಣ್ಣೆ ನೀಲ್ದಂಗಿ ಮಾರಂಗೆ
ಆನಿಮ್ಯಾಲ್ ಬಪ್ಪ ಅರಸಿಗೆ – ಅಣ್ಣಂಗೆ
ತುಪ್ಪು ಕಾಸ್ಹೆಣ್ಣೆ ಸನಿವಾರೊ

ಪಾಪಿಗಳಂಗಣ ಕರುಮೆಟ್ಟಿ ಕೆಸರಾದೊ
ಭೂಪಾಲ ಮಾವ್ನ ಬ್ಯರುಮಾರ್ದಂಗಣದಲ್ಲಿ
ಅಳಿದಿಕ್ಕಳಾಡಿ ಕೆಸರೆದ್ದೊ

ಹಾಲಾಡಿ ಬಂದ್ರದಲ್ಲಿ ವಾಲಾಡಿ ಬಪ್ಪರ್ರ್ಯಾರು
ಹಿಡಿಮುಷ್ಟಿಯಲ್ಲಿ ಕೊಡಿಯನು – ಅಣ್ಣಯ್ಯ
ವಾಲಾಡ್ತ ಘಾಟಿ ಇಳುವನು

ಚೆಂದಕ್ಕ್ ನಾವ್ ಚೆಲುವಿರು ಆಯಕ್ಕ್ ನಾವ್ ಗಿಡ್ಡೀರು
ನಾಗಭೂಸಣದ ಗರತೀರು – ಬಪ್ಪುರೆಂದು
ಹೋಯ್ ಹೇಳಿ ಬಾರೊ ತಳಗಾರ

ನಾಡ ನೆಂಟರಿಗೆಲ್ಲ ಇಂದೇ ಹೇಳಿಕಿ ಮಾಡ
ನಾಳಿ ನಿನ್ನಳಿಯಂಗೆ ಚವಲವು – ಮಗುವಿಗೆ
ಮಾವ್ನಿತ್ತು ಕೆಮಿಯ ಸುರಸಿದ

ಎಲ್ಲ ನಾಡರಸ ಮುತ್ತ್ ಬಿಕ್ಕಿ ಬೆಳುವಂಗೆ
ನಮ್ಮ ನಾಡರಸ ಹಸುಮಗು – ತಮ್ಮಯ್ಯ
ಮುತ್ತ್ ಬಿಕ್ಕಿ ರತ್ನ ಬೆಳದನು

ಬ್ಯಾಸಾಯ ಮಾಡ್ವನ ಬೇಲಿ ಚೆಂದವ ಕಾಣಿ
ನೇಲ್ ಕಾಣಿ ಅವ್ನ ನೊಗುಕಾಣಿ – ತಮ್ಮಯ್ನ
ಬ್ಯಾಸಾಯ ಕಾಣಿ ಬಯ್ಲಲ್ಲಿ

ಚಪ್ಪರದ ಕಂಬಿಗೆ ಚಾಂಚಿದಿ ದಂಡಿಗೆ
ಮಗುವು ಸಿಂಗಾರ್ದ ಕೊನಿಹಾಂಗೆ – ಗಿರ್ಜಮ್ಮ
ಬಾಂಗಿ ದಂಡ್ಗಿನ ಇಳಿಮಗು

ಕೋಟಂಗಿ ಜರಿಶಾಲೊಉ ಕೈಲಿ ಕಾಗ್ತದ್ ಕೊಡಿ
ಯಾರು ಕಾಣಯ್ಯ ಬಯ್ಲಲ್ಲಿ – ಚೆನ್ನಿಜಡ್ಡ್
ಮಾವ ಮಾದೊರಿಯು ಬರುವನು

ಸನಿವಾರ್ ಸನಿವಾರ್ ಸಂತಿ ಸ್ವಾಮ್ವಾರೊ ದೊರಿಕೂಟ
ಮಂಗ್ಳ್ವಾರೊ ಮಂಗ್ಳೂರ್ ತನಿಕೆಯು – ಅಣ್ಣಯ್ನೆ
ಕಾಗತು ಬಂದೊ ಕರಿಬಂದೊ

ಹಗಲು ನೆಯ್ಯಿನ ದಾರಿ ಮುಗಲು ಮಿಂಚಿನ ದಾರಿ
ಇರುಳು ಕಗ್ತತ್ತಲಿ ದಾರಿ – ನಲ್ಲನ
ಇರವ ನೀ ತೋರೆ ಕಂಕಾರಿ

ಗೋಳಿಯ ಮರನಡಿ ಗೋಯಿಂದನ್ಯಾರ್ ತಾಯೆ
ಗೋಪಾಲಕೃಷ್ಣ ಕೊಳಲೂದಿ – ಬಪ್ಪಂಗೆ
ಗೋಪಿಯರಾರ್ತಿ ಹಿಡಿದರು

ದೇವ್ರಿಗ್ಹೋತರ್ ಕೂಡೆ ದೇವಲೋಕದ ಕೊಳಲು
ಕಂಡು ಬಾರಮ್ಮ ಹೆರಗ್ಹೋಯಿ – ಮಗನಿಗೆ
ದೇವನೊಲಿದರು ನಿಜವಾಗ್ಯೊ

ತೋರ್ತ ಗುಡ್ಡಿಯ ಮ್ಯಾಲೆ ಚಿಕ್ಕ ಮುರುಗನ ಕೋವಿ
ಕುಸ್ತಿಗೆ ದೊರಿಯೇ ಹೆಯ್ಬೀರು – ಅವ್ರ್ಕೈ
ಅಸ್ತ್ರ ನಮ್ಮನಿಗೆ ಹೊಳದವು

ಬೇಲಿ ಮ್ಯಾಲಿರುವುದು ದಾರಿಹೀರಿಯ ಕಾಯಿ
ಕಾಯ್ ಒಳ್ಳಿದಾರೆ ರುಚಿಯಿಲ್ಲೆ – ತಮ್ಮಯ್ಯ
ನೆಂಟರೊಳ್ಳವ್ರ್ ನೆಡ್ತಿ ಇಲ್ಲೆ

ಭಾವಯ್ಯ ಎಂಬರು ಸೀಮಿ ಸರದಾರ್ರು
ರಾಮೇಸ್ರದ್ ಮುತ್ತ ತರ್ಸಿರು – ಭಾವಯ್ಯ
ಬಾಲಿ ಮೈದಿನಿಯ ಮುಗುಳಿಗೆ – ಮಿಕ್ಕಿನ್‌ಮುತ್ತು
ವಾಂಯಾರ್ದ್ ಮಡದಿ ಮಲ್ಲಿಗೆ

ಮಾರಾಯ್ರ ಮನಿಯಲ್ಲಿ ಮಾದೊಡ್ಡ ಕೆಲಸವು
ವಕೀಲ ಪಂತಿ ಕಣನಲ್ಲಿ – ತಮ್ಮಯ್ಯ
ಸಕ್ಕರಿ ಬಳ್ಸಿ ದಣಿದನು !

ಸೆಡ್ಲಿನ ರವಿಕಿಯ ಮಿಂಚಿನ ಸೀರಿಯ
ಗಯ್ಡ ಹನುಮಂತ ಸೆರಗಿನ – ಸೀರಿಯ
ಉಡಬೇಕು ಮಗಳ ಮದುವಿಗೆ

ಅಂದವಾದಳ ಗಿಡ್ಡಿ ಚಂದವಾಳದ ಗಿಡ್ಡಿ
ಚಾವಡಿಯೊಳಗೆ ಬುರೂಡಿ ಬಿಟ್ಹಾಂಗೆ
ಗಿಡ್ಡಿ ಬಂದಾಳು ಜಗಳಕ್ಕೆ !

ಕಾಲುಂಗಿಲ್ ಕಂದ್‌ಬೆಳ್ಳಿ ವಾಲಿಮುನ್ನೂರ್ ತೂಕ
ದೊಡ್ಡವ್ರ್ ಹೆಣ್‌ಮಕ್ಳ್ ಹ್ವಾಪಂಗೆ – ಏಳು
ಹೆದ್ದಾರಿ ಧೂಳು ಸಿಡಿದಾವು

ಈ ಮನಿ ಹೆಸರು ಒಂದಲ್ಲ ಎಯ್ಡಲ್ಲ
ಪತ್ತಾಸಿನ್ ಹೆಸ್ರೇ ಪರ್ವತೊ – ನಮ್ಮನಿಯಾ
ಬತ್ತುಬೇಸ್ವನ್ಹೆಸ್ರ್ ಮಸಿಕೊಳ್ಳಿ

ಉಪದೇಶ

ಅತ್ತಿಯ ಮನಿಯಂಗೆ ಅಕ್ಕಂದಿರುವರು
ಸುಣ್ಣಂಗೆ ಕಪಟ ಬೆರಸ್ಯಾರು – ಜಾನಕಿ
ಸುಣ್ಣವ ಕಂಡು ಮೆಲಬೇಕು

ಕೂಕಾನಿ ನೆಂಟರೆ ಕೂಳಿಗೆ ಅಕ್ಕಿಲ್ಲೆ
ನಾಕುಟ್ಟು ಬತ್ತೊ ನಂದಲ್ಲ – ನೆಂಟರೆ
ಬೇಕಾರೆ ಹೋಯಿ ಹೊಳಿಗ್ಹಾರಿ

ಅಪ್ಪಯ್ಯ ಬಂದೀರ್ ಪುತ್ತುಳಿ ತಂದೀರ್
ಪಪ್ಪಿಹಣ್ಣೆಂದೇ ಹೆರಗಿಟ್ಟಿ – ಅಪ್ಪಯ್ಯ
ಅಪ್ಪಯ್ನಿಗ್ ತಿಂಬೂಕ್ ಋಣವಿಲ್ಲೆ

ಮಕ್ಕಿಯ ಗೆದ್ದಿಯ ಒಕ್ಕದಿರು ಬಸವಣ್ಣ
ಮಕ್ಕಳಂದಿಗರ ಬಡವರ – ಗೆದ್ದಿಯ
ಒಕ್ಕದೆ ಬಾರೊ ಬಸವಣ್ಣ

ಮುತ್ತಿನೇಣಿಯ ಬೆಚ್ಚಿ ಉಪ್ಪರ್ಗಿಮೆಟ್ಲಿಗೆ
ಹತ್ತಿನೋಡಿದಳೆ ತವರೂರ – ಲಕ್ಷ್ಮಮ್ಮ
ಬತ್ತಾಳೊ ತಾಯಿ ಉಳಿತಾಳೊ

ಬಡತನ ಬಂತೆಂದು ಬಿಡುವೆನು ರಾಜ್ಯವ
ಕೊಡುತಂಗಿ ಕೊರ್ಲ ಪದಕವ – ಕೊಟ್ಟರೆ
ಜೋಡಿನುಪ್ಪರ್ಗಿ ಉಳಿದಾವು

ತಂಗ್ಯ ಕಳುಹಿಸಿಕೊಟ್ಟ ಅಂಗ್ಳದಲಿ ನಿತ್ಕಂಡ್
ಉಗುರ ಕಣ್ಣೀರ ಸೆಡದನು – ಅಣ್ಣಯ್ಯ
ತಂಗಿ ನೀಬಪ್ಪ ದಿನು ಹೇಳು

ಎಣ್ಣಿಯ ಕೊಡೆತುಂಬ ಸಣ್ಣಿರುವಿ ಕವಿದ್ಹಾಂಗೆ
ಕನ್ನಿ ಕಂದಮ್ನ ಬಳಗದ – ಕಣ್ಣೀರು
ಸಣ್ಣ ಮುತ್ತಾಗಿ ಸುರಿದುವು

ಅಣ್ಣನ ಹೆಂಡತಿ ಕಣ್ಣಿಗೊಳ್ಳಿಯವಳು
ಸುಣ್ಣದ ನೀರ ಒಲಿಮುಂದೆ – ಇಟ್ಕಂಡ್
ಒಳ್ಳಿ ಹಾಲೆಂದು ಎರದಳು

ಮಾಂಗಲ್ಯ ಹ್ವಾದ್ಮ್ಯಾಲೆ ಕಾಡ್ಗಿ ಕುಂಕುಮ್ಯಾಕೆ
ಬಂಗಾರವ್ಯಾಕೆ ಬಳಿಯಾಕೆ – ಕೊರಳಿನ
ಸಿಂಗಾರ್ನ ಶಿವನೆ ಕಸ್ಕಂಡ

ಗಂಡ ಸತ್ತಮ್ಯಾಲೆ ರಂಡಿತನದ ಸಿರಿಯ
ಸುಡಬೇಕು ಏನಾದರೇನು – ಆ ಜೀಂವ
ಬಂಡಿಯ ಬಿಚ್ಚಿ ಇಟ್ಟಾಂಗ

ಅಳಿಯ ಬಂದನೆಂದು ಬೆಳಿಯ ಹಚ್ಚಡ ತಂದು
ಎಳಿಪ್ರಾಯವುಳ್ಳ ಹುಡುಗಿಯ – ಇತ್ತರೂ
ಹಳ್ಳುಂಗಿಲೆಂದು ಜರಿದನು

ಕೋಳಿಯ ಸಾಂಕೂದ್ ಬ್ಯಾಡಂದ್ರು ಕೇಣಳು
ಪಾಳ್ಯವ ಕಂಡು ಅಂಬರದ – ಗಿಡುಗನ
ಕೋಳಿ ಸಾಂಕಣಿಯೆ ಕೈದಾಯ್ತು

ನನ್ನಣ್ಣನ್ಹೆಂಡತಿ ಬಣ್ಣಗಾರತಿ ಬಲು
ಸುಣ್ಣುವ ಕೊಡ್ಲ್ ಎಲಿ ಕೊಡ್ಲ್ – ಬಣ್ಣಿಸಿ
ಉಣ್ಣೆಂಬ ಮಾತ ನುಡಿಯಳು

ಕಡಿಯಕ್ಕಿ ಕೂಳ್‌ಮಾಡಿ ಬಡಿಸಲಿ ಯಾರಿಗೆ
ಗಡಿಬಿಡಿ ಎಂಬ ಮೈದಿನ – ಆಯ್ದಕ್ಕಿ
ಇಡು ಅಟ್ಟು ನಮ್ಮ ಭೂತಕ್ಕೆ

ಬಂಡಿಯ ಹೊಡುವನ ಭಂಗವ ಕಾಣಿಸಿ
ಮಂಡಿ ಧೂಳವ್ನ ಮೈಧೂಳು – ಸಿರಸಿಯ
ಬಂಡಿ ಭಂಗಾರ ಹೊಡುವನು

ಮುತ್ತೈದಿತನ ಎಂಬ್ದ್ ಮೂರೆಳಿ ಕರಿಮಣಿ
ಅತ್ತಿಗಿ ಬ್ಯಾಡಿ ಒಳಗ್ಹೋಯ್ನಿ – ಈಗಳು
ಹೆತ್ತಮ್ನ ಮಿಕ್ಕಿ ಕೊಡ್ಲಾರಿ

ತಿಂಗಳ ದೇವರು ಸಂಗಡ ಮೂಡುವ
ಸಿಂಗರದ ಬೆಳ್ಳಿ ಎಳಿತೆಗೆದು – ಅಣ್ಣಯ್ಯ
ಹೆಂಗಳ ತಾರೋ ಕೆಲಸಕ್ಕೆ

ಎಂಟೆತ್ತಿನ್ ಮ್ಯಾಲೆ ಕುಂಟೆತ್ತಿನ್ ಬ್ಯಾಸಾಯ
ಗೆಂಟು ಮುಖದರಿಗೂ ಯಜಮಾನ್ಕಿ – ಈ ಮನಿಲಿ
ಎಂಟೆಂಟು ದಿನಕು ಜಗಳವು

ಅಪ್ಪಯ್ನ ಮನಿಯಲ್ಲಿ ಅಪ್ರೊಪ್ಡ್ ಮಲ್ಲಿಗಿ
ಅಪ್ಪನ ಸೊಸಿ ರಣಗಬ್ಬಿ – ನೀಲುವ
ಕೊಪ್ಪಿನ ಹೂಗ ಹರಿದಳು

ಕರಿಯ ಗೀಟನು ಬರದು ಬೆಳಿಯ ಕಾಗ್ದದ ಮ್ಯಾಲೆ
ದೊರಿಯೆ ಮಾವಯ್ಯ ಏನೆಂದೆ – ಕಳುಹಿದಿ
ದೊರಿತನ ಸಾಕಾ ಮನಿಬೇಕಾ

ನಂಸಲ್ದ ವೈಇನ ಕೊಂದ್‌ಕೊಡು ಯಮರಾಯ
ಇಂದಲ್ಲ ಏಳು ದಿನದಲ್ಲಿ – ನೆತ್ತ್ರಬಟ್ಟು
ತಂದಿಡು ನನ್ನ ಹಣೆಯಲ್ಲಿ

ಗಂಡ್ಸತ್ತ ಮುಂಡೇರು ಮುಡಿಲಕ್ಕ ಸಿಂಗಾರ್‍ಹೂಗ
ಹಿಡಿಲಕ್ಕ ಕಲ್ಸ ಮುಂದ್ಹೋಯಿ – ಅವಳು
ಇಡಲಕ್ಕ ಕುಂಕ್ಮ ನೆಸಲಿಗೆ

ಬಾಗಳ ಹೊಗಿಗೆ ಆಗಳೆ ಕಾಣ್ ಜಗಳು
ಆಗಳೆ ಮೂಡು ಬಿಸಿಲಿಗೆ – ಅಣ್ಣಯ್ಯ
ಜಗಳಾಡೊ ಮಡದಿ ತುರುಬಿಗೆ

ತಂಗಿಯ ಕಾಣದೆ ತಿಂಗಳ ಮ್ಯಾಲಾದೊ
ತಿಂಗಳ ದೇವ ಮೈದೀನ್ನ – ಕಾಣದೆ
ತಿಂಗ್ಳ ಮ್ಯಾಲೇಳು ದಿನವಾದೊ

ಅರ್ಸ್ನ ಮಾರುವ ಸೆಟ್ಟಿ ವರ್ಸಾರೂ ಬರಲಿಲ್ಲೆ
ವರ್ಸದ ಬಾಣ್ಸ್ತಿ ನನ್ನಕ್ಕ – ಆಯಿರೂ
ಅರಸಿನ ಬೇಕು ಚಿಗುರಿಗೂ

ವಾಲಿಗೆ ಬಯ್ಯ್ಬ್ಯಾಡಿ ಯಾರಿಗೆ ಬಯ್ದರೂ
ವಾಲಿ ನೂರ್‍ವರ್ಸೊ ಬದುಕಲಿ – ಹಂಗಾರ್‌ಕಟ್ಟಿ
ಕಾಲ ನೂರ್ವರ್ಸೊ ಕಳಿಯಲಿ

ಯಾತರಿಗ್ಹೋದಣ್ಣ ದಾತರಿ ಬತ್ತಂದ್
ಜ್ಯೋತಿ ತುಂಬೆಣ್ಣೆ ಎರದಿಟ್ಟೆ – ಅಣ್ಣಯ್ಯ
ದಾತರಿ ನಿದ್ದಿ ಮರತಿದ್ದಿ

ಕಟ್ಟಿ ಕೂಡಿದಕ್ಕಿ ಅಟ್ಟುಂಬುಕೆಡ್ಯಂದ
ಕೆಟ್ಟ ಸಮಗಾರ್ನ ಕೈಸೇರಿ – ಬಾಲಮ್ಮ
ಅಟ್ಟುಂಡಿ ಮೆಟ್ಟ ಹೊಲಗೆಂಬ

ಮಕ್ಕಳ ತಾಯಿನ ಸುಟ್ಟರೂ ಬೇಯಳು
ಮಕ್ಕಿ ಗೆದ್ದಿಲಿ ನಿತ್ಕಂಡ್ – ತಾಯಮ್ಮ
ಮಕ್ಳಿಗಿನ್ನ್ಯಾರು ಗತಿಯೆಂಬ್ಳ್

ನಾಕ್ಹೆಣ್ಣು ಹುಟ್ಟಿರೆ ನಾಕೂರಿಗ್ ಕೊಡಲಕ್ಕು
ನಾಕೂರಣ್ಣಯ್ನ ಬಳಗವು – ಬಂಧುಗಳ್
ನಾಕೂರುಂಬಳಿನೇ ಗೆಲುವರು

ಇಷ್ಟಪ ಮಗುವಿಗೆ ಅಷ್ಟೇನೆ ಅವಸರು
ದಿಷ್ಟಿ ಕುರುಜಾತ ಸುರಿಲಿಲ್ಲೆ – ಸುಸೀಲಮ್ನ
ಇಷ್ಟೇನವಸರ್ದ ಮದುವಿಯು

ಬಲ್ಲ ಬಿಲ್ಲವರ್ಹುಡುಗಿ ಬಂಗಾರಕ್ಕನ ತಂಗಿ
ಬೇಲಿ ಮ್ಯಾಲಿಂದ ಮರತೊಂಡಿ – ಹರ್ತಂದು
ಮ್ಯಾಲಾಗ್ರ ಕೂಳು ಮಾಡಿಟ್ಲು

ಕೂಳು ಮ್ಯಾಲಾಗ್ರ ಮಾಡಿಟ್ಸ್ – ಮನಿಯಕ್ಕ
ಕೋಳಿಗೆ ಗೂಡು ಕವುಂಚೆಟ್ಟು – ಮನಿಬಿಟ್ಟು
ಹಾಲಾಡಿ ಸಂತಿಗ್ಹೋಯಿದ್ಲ್

ಪಟ್ಟದ ಅರಸಿಗೆ ಹುಟ್ಟಿದಿ ನಾನೊಬ್ಳ್
ಬೆಟ್ಟದ ಬೆದರ ಕಣಿಹಾಂಗೆ – ಬಾವಯ್ಯ
ಕೆಟ್ಹೋದಳೆಂದೇ ಮರುಗ್ವರು

ಹೂಗ ಮಾರುವ ಗೊಲ್ಲ ಹೂಗ್ಯಾಕೆ ಇಲ್ತಂದಿ
ಹೂಗ್ ಕೊಂಬೊ ಮಗಳು ಮನಿಲಿಲ್ಲೆ – ಅವ್ಳ್ ತನ್ನ
ಮಾವನ ಮನಿಗೆ ನಡದಳು

ಆಚೂ ಕಬ್ಬಿನ್ ಗೆದ್ದಿ ಈಚೂ ಕಬ್ಬಿನ್ ಗೆದ್ದಿ
ನಾಚಾರ ಗೆದ್ದಿ ನಡುಗೆದ್ದಿ – ಅಣ್ಣಯ್ಯ
ಪೇಚಾಟಿಕ್ ಬಿದ್ದಿ ಅನುಗಾಲ

ಮೂರ್‌ಜನ ತೊಳ್ವಾಗ ಮೂರ್‌ನಲ್ಲೆ ಸಾಗಲಿ
ಕೆರಿಮೀವೊ ನೆಲ್ಲೆ ಬೇಗನೆ – ಕೋಟಿಸುರ್ದ್
ಕಲ್ಲೊತ್ತಿ ಮೀವೊ ಹನಿನೀರ

ಯಾರಿಂದೇನಾಪುದು ಯಾರಿಂದೇನ್ಹೋಪುದು
ಪೂರ್ವದಲಿ ನನ್ನ ಹಣಿಮ್ಯಾಲೆ – ಇಧಿದೇವ್ತಿ
ಬರದಳೋ ಯಾವ ಇಧದಲ್ಲಿ

ತುಂಬಿದ್ ದೋಣಿ ಹತ್ತಿ ಒಂದಬ್ಬಿ ಮಕ್ಕಳು
ಅಂಬಿಗ ದೋಣಿ ಹೊಯ್ಡ್‌ತ್ತ್ – ಹೊಂಗ್‌ತ್ತ್
ಲಿಂಬಿಕಾಯಿಟ್ಟು ನೆಲಿಕಾಣ್

ದೇವರ ಕೆರಿಯಲ್ಲಿ ತಾವರಿ ಗಿಡವುಂಟು
ಕಾಪ್ಲಿಗೆ ನೂರು ಜನುವುಂಟು – ತಮ್ಮಯ್ಯ
ಹೂವ ಹ್ಯಾಂಗ್ಹೋಯ್ ಒಯ್ದ್ ಬಂದಿ?

ಹಾಲ್‌ಬೇಡಿ ಹಸಿದಳು ಕೂಳ್‌ಬೇಡಿ ಕುಸಿದಳು
ನೀರ್ ಬೇಡಿ ನಿದ್ರಿಗೆಯ್ದಳು

ಮಣ್ಣ್‌ಮಾಡಿ ಎಲ್ಲಾದ್ರೂ ಈ ಸುಟ್ಟ ಜೀಂವನ್ನ
ಚಣ್ಣಕ್ಕಿ ಬೆಳಿವ ಬೂಮಿಲಿ – ಅಣ್ಣಯ್ಯ
ಮಣ್ಮಾಡು ಒಳ್ಳಿ ಗಳ್ಗಿಲಿ

ನಿನ್ನಿಗೂ ಮೊನ್ನಿಗೂ ನಿನ್ನ ಜಾನದಲಿದ್ದಿ
ಕಣ್ಣಿಗೆ ನಿದ್ದಿ ಬರಲಿಲ್ಲೆ – ಅಣ್ಣಯ್ಯ
ನಿನ್ನ ಜಾನದಲೇ ಬೆಳಗಾಯ್ತು

ಹೆಣ್ಣು ಹುಟ್ಟಿತು ಎಂದು ಎಣ್ಬ್ಯಾಡ ಅಣ್ಣಯ್ಯ
ಹೆಣ್ಣೆಂದೂ ಪರರ ಒಡವಿಯು – ತವರ್ಮನಿ
ಅಣ್ಣ ಬಾಳೆಂದು ಹರಸುಗು

ಕನ್ನಡಿ ಕೈತಪ್ಪಿ ಹನ್ನೆಯ್ಡು ಚೂರಾಯಿ
ಹೆಣ್ಣಿನ ಮನಸು ಎಯ್ಡಾಯಿ – ದಾಳಿಂಬಿ
ಹಣ್ಣಾದರೇನು ಫಲುವಿಲ್ಲೆ

ಹೆಣ್ಣಾಯ್ ಹುಟ್ಟುಕಿಂತ ಮಣ್ಣಾಯಿ ಹುಟ್ಟಿರೆ
ಮಣ್ಣ ಮ್ಯಾಲೊಂದು ಮರವಾಯಿ – ಹುಟ್ಟಿರೆ
ಪುಣ್ಯವಂತರಿಗೆ ನೆರಳಾಪಿ

ಒಕ್ಕಲಿಗೊಡಿಯನ ಬಿಟ್ಟ ಮಕ್ಕಿಗಪ್ಪನ ಬಿಟ್ಟಿ
ರೊಕ್ಕಿದ್ದವ್ನ್ ಬಿಟ್ಟಿ ಬಡವಂಗೆ – ಅಣ್ಣಯ್ಯ
ಸಿಕ್ಕ್ ಸಿಕ್ಕವ್ರ್ ಬಿಟ್ಟಿ ಅನುಗಾಲ

ಮೂಡು ಸೀಮಿಯ ಹೆಣ್ಣು ಬ್ಯಾಡ ಕಾಣಣ್ಣಯ್ಯ
ನೀಡಿದ ಕಾಲ ತೆಗಿಯಳು – ಆ ಬಾಲಿ
ಗಂಡನಿಗಂಜಿ ಬಾಳ್ಯಾಳೇ

ಚಿಂತಾಕು ಇಡಲಿಲ್ಲೆ ಚಿಂತಿ ಬಿಟ್ಟಿರಲಿಲ್ಲೆ
ಎಂಥಲ್ಲಿ ಕೊಟ್ಟಿ ಹಡದಮ್ಮ – ನಡುಮನಿ
ಜಂತಿ ಜರಿದ್ಹಾಂಗೆ ಜರಿದೆನು

ಕರಿಯ ಸೀರಿಯ ತಂದು ಕೊರ್ಲಿಗ್ಹಾರವ ಹಾಕಿ
ಕರದಲ್ಲಿ ಹಣದ ಗಂಟನು – ಇಟ್ಟರೂ
ಕಿರಿಯಳು ಮನದಿ ಮರುಗ್ಯಾಳು

ಬಯ್ದಂಥ ಬಯ್ಗಳು ಬೆನ್ಹತ್ತಿ ಬಾರವು
ಬಯ್ದವ್ವ ಕೇಳು ನನ್ಮಾತ – ಎಲೆತಾಯೆ
ಬಯ್ಗ್ಳ ಹೂಮಾಡಿ ಮುಡಿಹೋಗು

ಸರಿಗಿಪಂಚಿಯನುಟ್ಟು ಬೆರಲಿಗುಂಗಿಲುವಿಟ್ಟು
ಸರಿಯವರ ಕೂಡೆ ಬಪ್ಪಂಗೆ – ಸಾಲ್ಗಾರ
ಸೆರಗ್ಹಿಡಿದು ನಿಲಿಸಿ ಬಿಡುವನು

ಬಾಲಿ ನಮ್ಮಗುವಿನ ಕೇಂಬುಕೆ ಬಂದೀರ್
ನಲವತ್ತು ನಾಡ ಮನಿಯವರು – ಬಂದರೂ
ವಾಲಿ ಅಪ್ಪಯ್ಯಿಗ್ ಬರಲಿಲ್ಲೆ

ಅಡವಿಯಲಿರುವುದು ಗಿಡುವಿಗೊಮ್ಮಾರ್ ಹೂಗು
ಕೊಡ್ರಿ ತಂದವರೇ ಕಡಿದಿರಿ – ಅದು ನನ್ನ
ಹಡದಮ್ಮ ನೆಟ್ಟ ನೆಡಗಿಯು

ಹಾಳಾದ ಕಣ್ಣೀರು ಬೀಳೆಂದ್ರು ಬೀಳದು
ನೀಲಿ ಮಾಣಿಕದ ಕಣ್ಣಲ್ಲೂ – ಬಾಳುಮನಿ
ಹಾಳ್ಮಾಡಿ ಸುಖವ ಪಡದಳು

ಹುಲ್ಲುಕುತ್ತುರಿಯಲ್ಲಿ ಹಲ್ಲಿಯ ಮರಿಸಿಕ್ಕಿ
ಕೊಲ್ಲದಿರಯ್ಯ ಮರಿಗಳ – ಅವನಾನು
ಸಲಗುವಿ ಹಣ್ಣುಹಾಲಿನಲಿ

ನಾಕುಲೋಕದ ಮುತ್ತೆ ಯಾಕಿನ್ನೂ ಬರಲಿಲ್ಲೆ
ನಾಕು ಸಮುದ್ರ ಹಡಗಿನ – ಒಳಗಿಪ್ಪ
ಯಾಕಿನ್ನೂ ಮಗನು ಬರಲಿಲ್ಲೆ

ಏರಿಏರಿಯ ಮಾಡಿ ಜೀರ್ಗಿವಾಮ ನೆಟ್ಟು
ಹಾಲುತುಂಬದೆ ಗಿಣಿಕೊಂಡು – ನಮ್ತಾಯ
ಹರೆಯ ತುಂಬದೆ ಯಮಕೊಂಡ

ಕಳ್ಳ ಕಳಲಿಕೆ ಹೋಯಿ ಬೆಳ್ಳಿ ಸೂಲಕೆ ಬಿದ್ದ
ಕಳ್ಳನ ತಂಗಿ ಒಳಗಿರ – ನಿನ್ನಣ್ಣ
ಬೆಳ್ಳಿ ಸೂಲದಲೇ ಬೆಳಗಾದ

ಕೆರಿಯ ದಂಡಿಯ ಮ್ಯಾಲೆ ಹರಗಿ ಬಳ್ಳಿಯ ನೆಟ್ಟು
ಹರಿಯೆಂದ್ರೆ ಹ್ಯಾಂಗೆ ಹರುವುದು – ತಾಯ್ಮನಿಯ
ಮರಿಯೆಂದ್ರೆ ಹ್ಯಾಂಗೆ ಮರುವುದು?

ಉಟ್ಕಂಬ್ಕೆ ವಸ್ತ್ರಿಲ್ಲೆ ಉಂಬೂಕೆ ಕೂಳಿಲ್ಲೆ
ಕೊಟ್ಟರಪ್ಪಯ್ಯ ಕೊರಗ್ವಳು – ಆ ಊರ
ಮೆಟ್‌ಕಲ್ಲರಮನಿಯ ಕೆಲಸಕೆ

ಹತ್ತು ತಿಂಗಳ ಬಸುರಿ ತಲಿಯ ಮೇಲಿನ ಕಳ್ಸ
ಹತ್ತಕ್ಕ ಗಿರಿಯ ಇಳಿಲಕ್ಕು – ಗೋಯಿಂದ
ನಿತ್ತಲ್ಲೇ ಕೈಯ ಮುಗಿಲಕ್ಕು

ಕನ್ನಿಮ್ಯಾಲೊರಗಿದಿ ಕ್ಯಾದಿಗಿ ಹೂಗೇ
ಇನ್ನು ನೆರಿಮನಿ ತರುವಲ್ಲ – ಅಣ್ಣಯ್ಯ
ಮನಿಲಿ ಮಾಲಸ್ಮಿ ನೆರದಳು

ಪಂತುಳ್ಳನ ತಂಗಿ ಪಂತುಕ್ ನಾನುಯಿದ್ದಿದಿ
ಕಂಚಿನ ಕಂಬೊ ಮಗುಚಿದಿ – ಈ ಮನಿಯ
ಪಂತುಳ್ಳನ ಮಾನೊ ಉಳಿಸಿದಿ

ರಾಜ್ಯವಾಳಿದ್ ದೊರಿಯೇ ರಾಜ್ಯಕ್ ಹೊನ್ನಳುವರು
ತಂದ್ವೆಡ್ರಿಗ್ ಗೋಳು ಕೊಡುವರು – ಕಾಯೇರಮ್ಮ
ಇಳ್ದ್‌ಹ್ವಾರಾ ದೋಣಿ ಇಲ್ಲೊಬ್ರ್?

ನೂರೆಂಟ್ ಜನು ಇಳ್ದ್‌ಹ್ವಾರ್ ಹೊನ್ನಾವ್ರ್ದ ಹೊಳಿಯಲ್ಲಿ
ಯಾರೆಂದು ಕರುನ ಹಿಡಿಯಲಿ – ಹೆಸರ್ಥೇಳ್ರೆ
ಯಾರೆಂದು ಕರುನ ಹಿಡಿತಿದ್ದಿ

ಕೈಲಿ ಕಾಗ್ತದ್ ಕೊಡಿ ಹೆಗ್ಲಿಲಿ ಮುತ್ತಿನ್‌ಶಾಲು
ಇನ್ನೊಬ್ರ್ ದೋಣಿ ಇಳ್ದ್‌ಹ್ವಾರ್ !

ಮಾಳಿಗಿ ಮ್ಯಾಲಿಂದ ಹೇಳದೆ ಓಡ್ಬಂದಿ
ಹೇಳಿಕಿ ಬಾ ಗುಬ್ಬಿ ಹರದ್ಹೋಯಿ – ಪಂಜ್ಹಾನ್ನ
ಹಾಲಿಗೆ ಹೆಪ್ಪ ಮರತಿದ್ದಿ

ಶಿವಶಿವ ಎಂದಿರೆ ಶಿವನ ದೂರುವುದೇನು
ಶಿವನೊಳಗಿರುವ ಕಲಿಮುಂಡಿ – ಕದ್ಯಾದೇವ್ತಿ
ಯಾವೆಲ್ಲಕ್ಷರವ ಬರದಳೋ

ಅಕ್ಷಾಲಿಯಿಲ್ಲದೆ ಮುಗುಳು ಮೂಗಿತಿಯಿಲ್ಲೆ
ಲಕ್ಷಣು ಇಲ್ಲೆ ಮುಕದಂಗೆ – ಕುದ್ರಾಪ್ರ್ದ
ಅಕ್ಷಾಲಿ ನೂತ್ನ ಕಲಿಲಿಲ್ಲೆ

ಬಿಸ್ಲಲಿ ಬಂದ್ ಪುರುಸನ ಕಣ್ಣಾಭಾಯಿಯ ಕಂಡ್
ಮಸರನ್ನು ತಣ್ಣಗಿಕ್ಕಿದಳೆ – ಅವ್ವ್‌ಕೈಲಿ
ಕಸ್ಕಂಬ್ಕೆ ಹಣದ ಪೆಟ್ಟಿಗಿನೇ

ಮನಿಕಟ್ಟು ಇಂದ್ಹೋಯಿ ಹೆಂಡಿರಿಚ್ಚಿಗಾರ
ನನ್ನಿಚ್ಚಿಗಾರ ಹೆರಿಮಗ – ಬಾಬಣ್ಣ
ನನ್ನ ಚಾವಡಿಗೆ ತಳಿಹೂಡು

ಮನಿಗೆ ದಾರಂದಿಲ್ಲೆ ಹಣಿಯಿಲ್ಲೆ ಹಟ್ಟಿಗೆ
ಮನಿಯೊಡಿನ್ ಬುದ್ದಿ ಸ್ತಿರುವಿಲ್ಲೆ – ಬಾಳುವ
ಮನಿಗೆ ಬಂದರಿಗೆ ಭಯುವಿಲ್ಲೆ

ಕೆಸುವಿ ಕೆಂಬ್ಹರ್ಗಿಸಪ್ಪು ಮಸರಾಗೆ ಕರಗಿರೆ
ಹಿತವುಳ್ಳ ಪುರುಸ ಪರರಿಗೆ – ಆದನೆಂದು
ಇಸವ ಎಣ್ಣೆದಳು ಮನದಲ್ಲಿ

ಹೂಗಾಯಿ ಕರಗುವಿ ಕಾಯಾಯಿ ಬೆಳಿವೆನು
ತಾಗಿ ನಿಮ್ಮ್ ಕೈಯ ರತ್ನದುಂಗಿಲು – ಸ್ವಾಮಿ
ಹಗಳದ ಸರುವೇ ಹರಿದ್ಹೋದೋ !

ಗಂಡನ ಬೆನ್ನಟ್ಟಿ ಮಂಡಿ ಚಾಚುತ ಹೋದಿ
ಪುಂಡರು ಕೂಡಿ ಬಯಲಾಗೆ – ಸಿರಿಹರಿ
ಸಂಗ್ಡ ಕೂತೆಲ್ಲಿಯ ಮೆಲಿದ್ಹೋಪೋ

ಹಾಳಂಗ್ಡಿ ಹೊಯ್ಸಪ್ಪು ಧೂಳಂಗ್ಡಿ ಸುಣ್ಣವು
ಸೂಳೀರಂಗ್ಡಿಯ ಬೆಳಿಯಲಿ – ಬೆಟ್ಟಿಹೋಳ್
ಹಾಳ್ ಮಾಡಿದವು ಗರತಿಯ

ಪಟ್ಟದಲ್ಲರಸು ಬಿಟ್ಟು ಹೋಗ್ವರೆಂದು
ಹಟ್ಟಿಲ್ ನಿಂತವಳು ಬೆರಗಾದಿ – ಬೆನ್ನಾರೆ
ಬಿಟ್ಟು ಗಾವುದ ನಡದರು

ಯಾರುಂಬರ್ ಎಳಿಯಳೆ ಈ ಅಕ್ಕಿ ಕೂಳನ್ನು
ಊರುಣ್ಣ ಊರ ಹೊಲಿಯಣ್ಣ – ಈಮನಿ
ಊಳಿಗದನುಂಡು ಸೂಲಿಯೆಂಬ

ನಾಡೆಲ್ಲ ಬಲ್ಲಿದೊ ಯಾಜ್ಜಗಾರತಿಯೆಂದು
ಆಡುವ ಮಗಿನ ತೊಟ್ಲಗೆ – ನಿಲ್ಸಿಕಿ
ನಡದಳು ಯಾಜ್ಕಿ ಮೂರ್‌ಮನಿಗೆ

ಬೆಳಿಎಲಿ ಮೆಲಿಕಾರೆ ಬಸುರರಿಗ್ಹೋಗ್ಬೇಕು
ದಳಿಬಂದ ಸಿರಿ ಉಡ್ಕಾರೆ – ಎಲೆನಾರಿ
ಸರದಾರ್‍ರ ಕೈಯ ಹಿಡಿಬೇಕು

ಹೊತ್ತಿಲ್ಲೆ ಗೊತ್ತಿಲ್ಲೆ ಹೊತ್ತಿ ನಾ ತೊಟ್ಟಿಲ
ಹೊತ್ಹೋದರೆಲ್ಲೆ ಇಳುಗೂದು – ಕೈಪಾಡಿ
ಸತ್ಯುಳ್ಳ್ ಮಾಸ್ತಮ್ನ ತಳದಂಗೆ

ಹಾಡ್ಹೇಳಿ ಹಾಡ್ಹೇಳಿ ಬಾಯೆಲ್ಲ ಬತ್ತಿದೊ
ಹಾಡಿನ್‌ಬಾಯ್ಗೊಂದ್ ಎಲಿಯಿಲ್ಲೆ – ಗಂಗಮ್ಮ
ಬಡಿವಾರಕೊಂದು ಎಲಿಸಂಚಿ

ನಾರಿ ನಿನ್ನ್ ಸಿಟ್ಟನು ಯಾರು ತಾಳುವರ್ಹೆಣ್ಣೆ
ಬಾಲಿಲಿ ಕೈಹಿಡಿದ ಸಿರಿಹರಿ – ತಾಲಿದನೆಂದು
ಅರಗಳಿಗಿ ಅಮ್ಮ ತಡಿಯಳು

ಅರಸನ ಕಾಣದೆ ವರುಸ ಹನ್ನೆಯ್ಡಾದೊ
ಅರಸದಿ ಕ್ವಾಣಿ ಒಳಗೆಲ್ಲ – ಕಣ್ಣೀರು
ಒರಸಿದಿ ಶ್ಯಾಲಿ ಸೆರಗಿಲಿ

ನನ್ನೊಡ್ತಿ ಮಾಸ್ತ್ಯಮ್ಮ ಹೊನ್ನುಯ್ಯಲಾಡ್ವಂಗೆ
ಹಣ್ಣಡ್ಕಿ ಕೊನಿಯು ಬಲಗೈಲಿ – ಹಿಡ್ಕಂಡೆ
ಕಂಡ ಮಗಳೆಂದು ಕರದಳು

ಬೇಡಿದಳಲ್ಲೇನೂ ನಾನು ದೇವರ ಹತ್ರ
ಹೂಡುವಲ್ಲೆತ್ತು ಹುಡುಗರು – ಬೇಕೆಂದು
ಬೇಡಿ ತಿಮ್ಮಪ್ನ ಮರಿಹೋಯಿ

ಅಪ್ಪಯ್ನ ಕಣದೆ ಎಪ್ಪತ್ತೇಳ್ ವರ್ಸಾದೊ
ಅಪ್ಪಯ್ನ್ ಕಂಡಿರ್‍ಯಾ ಗಿರಿಮ್ಯಾಲೆ – ದಾಸಯ್ಯ
ಒಪ್ಪುವ ಬೀಸಣ್ಗಿ ಬಲಗೈಲಿ – ಹಿಡ್ಕಂಡ್
ತಪ್ಪಲು ಹತ್ತಿ ಇಳುವರು

ಬರದು ಕಾಗತು ಆನಿಕೊರ್‍ಳಿಗೆ ಕಟ್ಟಿ
ಧರಣಿಪಾಲಕನ ಕಳುಗಿದಿ – ಕುಂದಾಪ್ರಿಗೆ
ಕರುಣಿದ್ದರೆಪ್ಪ ಬರಬೇಕು

ಕರಗುಟ್ಟಿತು ಕಾಕಿ ಸ್ವರುಗೆಯ್ಯಿತು ಕಿಚ್ಚು
ಯಾರೊರಲ್ಲೇನೋ ಸಿವಬಲ್ಲ – ಹಣಿಯಲ್ಲಿ
ಯಾರಿಗರ ಆಯ್ಸು ಬರದನೋ

ಬಿದ್ದಿ ನಿಮ್ಮ್ ಪಾದಕೆ ಗಿಜ್ಜಿಕಾರ್ ಅಪ್ಪಯ್ಯ
ಮುದ್ದ್ಯಂಗೆ ನನ್ನ ಕೊಡ್ಬ್ಯಾಡಿ – ಅಪ್ಪಯ್ಯ
ಎದ್ದೆದ್ದು ದಂಟ ಕೊಡಲಾರಿ

ಕೂಸಾಳ್ ಕುರಿಗಳು ನಮ್ಮೊಡ್ಯರ್ ಆಳ್ಕಾಳು
ಮೀಸಿ ಬರದಿದ್ದೆ ಹುಡುಗರು – ಕಟ್ಕಂಡ್
ಭಾಸಿ ಮಾಡಿದರು ಬಯಲಲ್ಲಿ

ಉರಿಉರಿ ದೇವರೆ ಉರಿತಣ್ಣಂಗಾಗಲಿ
ಹಲವು ಹನ್ನೆಯ್ಡ್ ಜಲಧಿಯ – ಕಲ್ಮೆಟ್ಟಿ
ಉರಿದಿ ಪಾಪಿಗಳ ಎಡಿಯಲ್ಲಿ

ಬಡತನ ಎಂಬುದು ಪಾಂಡವರಿಗುಂಟು
ಬಡವಿಯು ನನ್ನ ಪಾಡೇನು – ಅಣ್ಣಯ್ಯ
ಬಿಡಲಿಲ್ಲ್ಯ ಭಂಗು ಸೀತಮ್ಮ

ಕುತ್ತಟ್ಟದಕ್ಕಿನ ಕಿತ್ತು ದೋಣಿಗೆ ತುಂಬಿ
ಮತ್ತೂ ತನ್ನಳಿನ ಕರದು – ಮಾವಯ್ಯ
ಹತ್ತ್ರದಲ್ಲ್ಹೋಯಿ ತೆಳಿ ಮಗು

ಗಂಡನ ಬಿಟ್ಟಕಿ ಮಿಂಡಿನ ಮಾಡ್ವಳ
ರುಂಡನ ಹೊಡದು ರಣುಮಾಯ – ಮಾಡುವ
ಗಂಡಿಲ್ಲ್ಯಾ ಅವಳ ಕುಲದಲ್ಲಿ?

ನಿನ್ನಿ ಬರುವಿರೆಂದು ಪನ್ನೀರು ಕಾಸಿದ್ದಿ
ಹೊನ್ನಿನ ತೆಂಗು ತರಸಿದ್ದಿ – ಮಾವಯ್ಯ
ನಿನ್ನಿ ನಿಮ್ಗೆಲ್ಲಿ ಉಳಿತಾಯ?

ಇಡಿಯಕ್ಕಿ ಕಡಿದರೆ ಕಡಿಯಕ್ಕಿ ಉಂಬೊ
ಇಡಿಯಕ್ಕಿ ಮಾರಿ ಹಣಕಟ್ಟು – ಅಣ್ಣಯ್ಯ
ಕಡ್ಮಾಡುಪ್ಪರ್ಗಿ ಮನಿಕಟ್ಟು

ಕಡಿಯಕ್ಕಿಯಿಲ್ಲದೆ ಕಡುಜಾಣ್ರಿಗೊಟಿಲ್ಲೆ
ಇಡಿಯಕ್ಕಿ ಕುಟ್ಟಿ ಕಡಿಮಾಡಿ – ನಮ್ಮನಿ
ಕಡುಜಾಣ್ರಿಗಿಂದು ಹಗಲೂಟ

ಪಟ್ಟಣದರಸರು ಬಿಟ್ಟಕ್ಕಿ ಹೋತ್ರೆಂದು
ಕಟ್ಟಿಮ್ಯಾಲ್ ಕೂತು ಬೆಳಗಾಯ್ತು – ದೇವರೆ
ಪಟ್ಣದರ್ಸ್ಯಾರು ತಡದರು?

ಶಿವಶಿವ ಎಂಬುದು ಶಿವನ್ಯಾಕೆ ದೂರೂದು
ಶಿವನಲ್ಲಿ ಪಾಪ ಉಳಿಲಿಲ್ಲೆ – ಪೂರ್ವದಿ
ನಾವ್ ಮಾಡಿದ್ ಪಾಪ ಬಿಳಿಲಿಲ್ಲೆ

ಬತ್ತಿತು ಬಾಮಿ ನೀರು ಕಟಕಟ ಕಾರ್ ತಿಂಗ್ಳಲ್
ಸತ್ಯದಿಂದ್ ನಡಿವ ಸೌಕೂರು – ಅಮ್ಮನಿಗೆ
ನಿತ್ಯದಿ ಪೂಜಿ ಸಲಿಸೂರು

ಹಾಲುಪಾಯಸು ಮಾಡಿ ಹರುವಾಣು ಮುಚ್ಚಿಟ್ಟು
ನಾರಾಯಣಸ್ವಾಮಿ ಬರುನೋಡಿ – ಬಾರ್ದಿರೆ
ಕಳಿಸುವಿ ಓದೊ ಜಗನಾತ್ನ

ಹಾಗ್ಲ್‌ಕಾಯ್ ಮುಗುವಂಗೆ ಆರೆಮ್ಮಿ ಬತ್ತ್ವಂಗೆ
ಅಗರದ ಬೂಮಿ ಹಡುಬಿದ್ದು – ಅಣ್ಣಯ್ಯ
ಆಗಳಿಕವ್ಸ್ ತಂಗಿನ್ ಕರ್ದ್‌ತಪ್ಪ

ಸೂ ಅನ್ನಿ ಬತ್ತಕು ಸೂ ಅನ್ನಿ ಅಕ್ಕಿಗು
ಸೂ ಅನ್ನಿ ಸೂರಾಲ ಹೊಳಿಯಲ್ಲಿ – ಮಡುವಾಳ
ಸೂ ಅಂದು ಮಡಿಯ ಒಗುವನು

ಅನ್ಗಳ್ಳಿ ಪ್ಯಾಟಿಲಿ ಆನಿಕೊರಲಿಗೆ ಗಂಟಿ
ಸಾಗರದ ಸಂತಿ ಸಿರಿವಂತ್ಗಿ – ಪ್ಯಾಟಿಲಿ
ಹೂಗು ಮಾರ್ವಳಿಗೂ ಬಲುಚಿಂತಿ

ಹಸಿ ಅಂಬಿನ್ ದೊರಿ ಬಂದು ಬಿಸ್ಲಲಿ ತಂಬ್ಲೊಯ್ದಿರ್
ಮತಿಗೆಟ್ಟು ನಾನು ಒಳಗಿದ್ದಿ – ಕೂಡ್ಲಲ್ಲಿ
ಹಸಿ ಅಂಬಿನ್ ದೊರಿಯು ಹಸಿದಾರು

ಪಾಪಿ ದುಷ್ಟರ ಮುಖು ದಿಷ್ಟಿಲಿ ನೋಡ್ಲಾರಿ
ಕ್ವಾಪದಲಿ ಜೀಂವ ಕರಗಿತು – ಗೋಯಿಂದ
ಪಾಪಿನ ಬಳಿಗೆ ಕರ್ಕಣಿ

ಹಾಲಂದ್ ಗಂಗಮ್ಮ ಹರದಾಡಿ ಬರುವಾಗ
ಹಾಲಂದ್ ಗೋರಿದರು ಹಲವರು – ಈ ಊರ
ನೀರ ಸೋಧನಿಯ ಅರಿಯದೆ

ಮಲ್ಲಿಗಿ ಮುಡ್ಕಂಡ್ ಎಲ್ಲಿಗ್ ಹೋತ್ರಿ ಸ್ವಾಮಿ
ಇಲ್ಲೊಂದೆ ನುಡಿನ ನುಡ್ದ್ಹೋಯ್ನಿ – ಬಾಲಿಗೆ
ಕಲ್ಲಮ್ಯಾಲ್ ಆಯ್ಸ ಬರದ್ಹೋಯ್ನಿ

ಹತ್ತ್ ತಿಂಗ್ಳ್ ಗರ್ಭಿಣಿ ಚೊಚ್ಚಲ ಬಸುರಿಯು
ಎತ್ತ್ ಹೋದಳ್ ನನ್ನ ಹೆರಿಮಗ್ಳು – ಗಾವಳಿಲಿ
ಸುತ್ತ್ಲ ಬಾಗ್ವಂತಿ ಒಳಗಿಲ್ಲೆ

ಹಾಲನ್ನ್ ಕುಡ್ಕಂಡ್ ಹಾಸ್ಗಿಮ್ಯಾಲ್ ಒರಗಿದ
ಹಾಲಕ್ಕಿ ಬಂದ ಕರ್ಕೆರಿ – ಸೋಮಯ್ನ
ಒರಗೂ ಹಾಸ್ಗಿನ ಕೊಡ್ಕೆಂದ

ನಾನೊಂದ ಹೇಳಿರೂ ನಂಗೊಂದ್ ಹೇಳೂಳಲ್ಲ
ಏ ನನ್ನ ಮನಿಯ ಗರತಿಯೇ – ಮುತ್ತುವೇ
ನಿನ್ನನ್ನು ಹ್ಯಾಂಗೆ ಕಳುಹಲಿ

ಮಕ್ಕಳಿಲ್ಲೆಂದು ದುಃಖವ ಮಾಡದಿರು
ಅಕ್ಕನ ಮಗನೇ ಅವನ್ಯಾರು – ಚಂದ್ರಯ್ಯ
ದುಃಖದಲಿ ನಿಮಗೆ ಒದಗುವ

ನೀರೊಳಗಿರುವುದು ನೀರ ಮಾಯಿನ್ಹಣ್ಣು
ಯಾರಿಗೆಂದದನ ಕುಳುಗುವಿ – ಸಾಗರಕೆ
ನೀಲದಂಡಾಡೂ ಅರಸಿಗೆ – ಸೀನಯ್ಗೆ
ನೀರೊಳಗಿದನ ಕಳುಗುವಿ

ಕಬ್ಬ್ ಸ್ಲೀ ಅಂದ್ಹೇಳಿ ಬೇರೆಲ್ಲ ಜಗಿವರಾ
ಒಬ್ಬಷ್ಟಗ್ಹೆಣ್ಣ ಕೊಡುವರಾ – ತಾಯ್ಮನಿ
ಹಬ್ಬು ಜಾತರಿಯು ನಮಗಿಲ್ಲೆ

ಕಾಮಕಸ್ತೂರಿ ಕುಟ್ಟಿ ಕೈಯೆಲ್ಲ ಬಕ್ಕಿಬಂತ್
ರಾಮದೇವರು ನನ್ನ ಹೆರಿಮಾವ – ಕೇಳಿರೆ
ನೀರ್ಮ್ಯಾಲೆ ಚಣ್ಣಕ್ಕಿ ಕಳಿಸುವ

ಅಪ್ಪಯ್ಯ ಬಳ್ಳೀರಾರೆ ಪುತ್ರಯ್ಯ ಒಳ್ಳಿನಾರೆ
ಅಪ್ಪಯ್ನ ಮನಸು ಕುಶಿಯಾರೆ – ನಿನ್ನ್‌ಮಗ್ಳ
ಅಪ್ಪಂತರಿಗೆ ಕೊಡಲಕ್ಕು

ಕಬ್ಬಿಣ್ದ ಕಣ್ತಲಿ ವಜ್ರದ ಮಾಳ್ಗಿಮನಿ
ಅಬ್ಬ್ಯೇ ನಿನ್ನಳಿನ ಬಣ್ಸಲಿ – ಒಳ್ಗಾಗಿರೂ
ಒಬ್ಬಳೇ ನಾನು ಇರಲಾರಿ

ಬಂದಬಂದವ್ರೆಲ್ಲ ಬಣ್ಣ ಚಾವ್ಡಿಗ್ಹೋಯ್ನಿ
ಇಂದು ಅಣ್ಣಯ್ನಿಗ್ ಸನಿವಾರೊ – ದೇವ್ರ್‌ಭಕ್ತಿ
ಬಂದವ್ರ್ ಸಂನ್ಯಾಸಿ ಮಟುಕ್ಹೋಯ್ನಿ

ಬಡವರ ಹೆಣ್ಣೆಂದು ಅಡಗಡಿಗೆ ನುಡಿಬ್ಯಾಡಿ
ನಡುಕಂಚಿನ್ ಮ್ಯಾಲೆ ತಳಗಿಯ – ತಂದ್ಹೆಣ್ಣ
ನುಡುವ ಬಾಯ್ ಮೊದಲೇ ನುಡಿಬೇಕು

ಅಪ್ಪಂತರ್ ಹೆಣ್ಣಿನ ಅಪರಂಜಿಗ್ ಕೊಟ್ಟೀರ್
ಉಪ್ಪಿಗೂ ಬವಣಿ ಬಿಡುವಳು – ತನ್ಮನಿಯ
ತುಪ್ಪ ಸಕ್ಕರಿಯ ನೆನುವಳು

ಬಯ್ದರೆ ಬಯ್ಗಳು ಬಯ್ದ ರೀತಿಲಿ ತಿರ್ಗ್ಲಿ
ಹೊಯ್ನೀರ ಸುಗ್ಗಿ ಬೆಳೆಯಲಿ – ಈ ಊರ
ಹೊಯ್ದರ್ ಬಾಳ್‌ರಸವು ಬದುಕಲಿ

ಸಿಟ್ಟು ಬಂದ್ಹೊತ್ತಿಗೆ ಕೆಟ್ಟ ಮಾತಾಡಿರೆ
ಬಿಟ್ಟೇನು ಜೀಂವ ಕೈಮ್ಯಾಲೆ – ಪಡುಮುಂಡ
ಸಿಷ್ಟಿಪಾಲಕರ ಹೆರಿಮಗಳು

ಎಡಿತಿಲ್ಲೆ ಅಂದ್ಹೇಳಿ ಯಾರ್ಹತ್ರ ಹೇಳೂದು
ಎಡಿತಿಲ್ಲೆ ಜೀಂವ ಮಡಿತಿಲ್ಲೆ – ದೇವ್ರುರೆ
ಒಳ್ಳಿದಿನು ಕಂಡು ಕರ್ಕಣಿ

ಬತ್ರ್ ಬತ್ರ್ ಅಂದ್ ಬಯ್ಗಂಟ ನಾಕಂಡಿ
ಬಸವ್ನ ಜೋಡೆಯ್ಡ್ ಕಳುಗಿದಿ – ಪಡುಮುಂಡ
ಅಸ್ವಂತ್ ಮಾರಾಯ್ರು ಬರಲೆಂದು

ಎಣ್ಣಿಗೆಂಟೆಂಬುದು ಬೆನ್ನಮ್ಯಾಲಿಳಿದುವು
ಪುಣ್ಯಸ್ತ್ರೀ ನನ್ನ ಹಡದಮ್ಮ – ಸಾಂಕ್ದ್‌ಕೂರ್ಸ್
ಎಣ್ಣಿ ನೀರಿಲ್ಲದುದುರಿದೊ

ದುಷ್ಟರಾಡಿದ ಮಾತು ನೆಟ್ಟು ನನ್ನ್ ಒಡಲಲ್ಲಿ
ನೆಟ್ಟ ನೀರುಳ್ಳಿ ಹಸಿಸುಂಟಿ – ಅವ್ ಎಯ್ದು
ಕಷ್ಟ ಉರಿತಾಪ ಒಡಲಲ್ಲಿ

ಜಂಗೆತ್ತಿ ಬತ್ತು ತೊಳಿಳ್ ದ್ಯನಿಒತ್ತಿ ಹಾಡ್ವೇಳ್ಲ್
ಬಾಂಗಿ ಸಟ್ಟುಗನ ಹಿಡಿದಳು – ಗುಜ್ಜಮ್ಮ
ತಂಗಿ ದೊಡ್ಡವ್ನ ಮಡದ್ಯೆಂಬ್ಳ್

ಬಳಿಇಡೂ ಹೊತ್ತಿಲಿ ಬಲಗಣ್ಣು ಕೋಣಿದುವು
ಬಳ್ಗಾರ ನನ್ನ ಕೈಬಿಡು – ಹಳ್ಳಾಡಿಲಿ
ಬಳಗವ ಕಂಡು ಬರುವೆನು

ಹೆಗ್ಡಿಕೇರಿ ಹಬ್ಬುಕೆ ಬಂದ್ಹೋಗು ಅಣ್ಣಯ್ಯ
ಕಂಡ್ಹೋಗು ನನ್ನ ಬಳಗವ – ಅಣ್ಣಯ್ಯ
ಉಂಡ್ಹೋಗು ನನ್ನ ಅಡಿಗಿಯ

ಹಕ್ಕಿ ತಿಂದ್ಹೋದುವು ಹತ್ತುಮುಡಿ ಗೆದ್ದಿನ
ಲೆಕ್ಕದ್‌ಮಲಗೆದ್ದಿ ಕಣಿಯೊಡದು – ಅಣ್ಣಯ್ನ
ದುಃಖಕಿನ್ನ್ಯಾರು ಹೊಣಿಯಾಪ್ರ್

ಬೆಳ್ಳನ ಬೆಳಿಗಿಗೆ ಬೆಳ್ಳಿ ತೂಕವ ಮಾಡಿ
ಕಳ್ಳ ಕಾಣಕ್ಕ ಅಕ್ಸಾಲಿ – ನಿನ್ ಕೆಮಿಯ
ವಾಲಿಗ್ ಹಿತ್ತಾಳಿನ್ ಬೆರಸಿದ

ಸೊಕ್ಕಿನ್ ಅಕ್ಸಾಲ್ ಗಂಡೆ ಠಕ್ಕಿನ್ ಮಾತಾಡ್ಬ್ಯಾಡ
ತಕ್ಕ್ಡಿ ತಂದಿಡು ಜಗ್ಲಿಗೆ – ಕೆಮಿವಾಲಿನ್
ಚೊಕ್ಕದಿ ತೂಗಿದರು ಹೇಳು

ಗಂಡ್ನ್ ಮನಿಗ್ಹೋಗಂದ್ರೆ ನಡುತೊಟ್ಟಿ ಹಿಡುವಳು
ಬಿಡುತಾನ ತೆರುವ ಕೊಟ್ಟವನು – ತಂಗ್ಯಮ್ಮ
ನಡಿ ಮಗು ಬಾಳೂ ಮನಿಗಾಯಿ

ತುಂಬಿದ ಕೆರಿಯಲ್ಲಿ ತಂಬಿಗಿ ಕೈತಪ್ಪಿ
ನಂಬ್‌ಬವ್ವ ನಾರಿ ಗಣಸಿನ – ಅಂವೆ ನಿನ್ನ
ನಂಬಿಸಿ ಕೊರ್‍ಲ ಕೊಯ್ದ್ ಹೋದ

ಸುರಗಿಯ ಹೂಗಿನ್ಸರು ಎಲ್ಲವ್ರ ಕೊರ್ಳಿಗೂ
ಸರದಾರ್ರ ಸೂಳಿ ನೆರಮನಿಯಂಗಿಪ್ಪಂಗೆ
ಗರುವ ಸಂತಯ್ಸೂ ಬಗಿಹ್ಯಾಂಗೆ

ನೇತ್ರಾವ್ತಿ ಹೊಳಿಯಲ್ಲಿ ನಿತ್ತು ಸಾನವ ಮಾಡಿ
ಮತ್ತೆ ಅಸ್ವಂತ್ನ ಬಲದಿಂದ – ನಮ್ಮಕ್ಕ
ಪುತ್ರ ಸಂತಾನ್ಕೆ ಸೆರಗೊಡ್ಡಿ

ಗಂಡನ ಮನಿಯಲ್ಲಿ ಗಂಧ ತೇಯೊಕ್ ಕಲ್ತು
ಹಡದಮ್ನ ಚಾನ ಮರತಳು – ವನಜಮ್ಮ
ಗಂಡಾಳೂ ರಾಜ್ಯ ತನಗೆಂದು

ಹೆಣ್ಣಿನ ಹೆತ್ತಳಿಗೆ ಹನ್ನೆಯ್ಡೆ ಜಂಜಲೊ
ಹೆಣ್ಣ ಹೆರದಿದ್ದ ಕಡುಬಂಜಿ – ಒಡಲಲ್ಲಿ
ಚಣ್ಣ ಸಾಸಿಮಿಯ ಗಿಡುಹುಟ್ಟಿ

ಕಾಗತು ಬರಿತಿರು ತೆಂಕೊಂದಸು ಬಡಗೊಂದು
ಸಾಗರಕೊಂದು ಅರಸಿಗೆ – ಭಾವಂಗೆ
ಸೀಗ್ರದಿಂದ್ವಾಲಿ ಬರಿ ಮಗನೇ

ನನ್ನ್‌ತಾಯಿ ಆಯಿರೆ ನನ್ನ್ ಹಣೆಯಲ್ ಬರಿಯಳ
ನನ್ನ್ ತಾಯಿಯಲ್ಲ ಈ ದೇವ್ತಿ – ಕಲಿಮುಂಡಿ
ನನ್ನ್ ಹಣೆಯಲೇನೋ ಬರದಳು

ಮಕ್ಕಳಿಲ್ಲೆಂದ್ಹೇಳಿ ಹೊಕ್ಕಳು ಅಡವಿನ
ಹಕ್ಕಿಪಕ್ಷಿಗಳ ಹೊಳಲಲ್ಲೆ – ಅಲ್ನಾರಿ
ಮಕ್ಕಳ ಫಲವೇ ನಿಂಗಿಲ್ಲೆ

ಅಣ್ಣ ಬಂದಿರ್ ಲೇಸು ತಮ್ಮ ಬಂದಿರ್ ಲೇಸು
ನನ್ನ ಹಿಡಿದ ಸಿರಿವರ – ಬಂದಿರೆ
ಬಣ್ಣದ ಬಳಿನೇ ಇಡಸೂರು

ಉಂಡಂಥ ಊಂಟವ ಗಂಗಾಣ ಬಲ್ಲಿತ್ತ್
ಗಂಡಾಡಿದ ಮತ ತವರಿಗೆ–ಕೊಂಡಾಡ್ರೆ
ಹೆಣ್ಣೇ ನೀಬಾಳೂ ಬಗಿ ಹ್ಯಾಂಗೆ

ಹನ್ನೆಯ್ಡ್ನೇ ವರ್ಸಕೆ ಕನ್ನಿನೆರದಳು ಎಂದು
ಕಣ್ಣಿಗ್ ನಿದ್ದಿಯು ಬರಲಿಲ್ಲೆ – ಹಡದಮ್ಗೆ
ಕನ್ನಿ ಜಾನದಲಿ ಬೆಳಗಾದೊ

ಹುಲಿಹೊಟ್ಟಿಲ್ಲಾ ಹುಟ್ಟಿ ಹುಲ್ಲ ನಾ ಮೆಯ್ಲಾರಿ
ತಲಿಮಾರಿ ನನ್ನ ಕಿರಿತಮ್ಮನೊಡಹುಟ್ಟಿ
ತಲಿಬಗ್ಗಿ ನಾನು ನಡಿಲಾರಿ

ಕೇಳ್ವರು ಮರುಗೂರು ಕಂಡವರು ಕರುಬೂರು
ಕೇಳಮ್ಮ ನನ್ನ ಬವಣಿನ – ಕಾಡಲಿಪ್ಪ
ಕೀಳು ಹೆಜ್ಜೇನು ಕಡಿದ್ಹಾಂಗೆ

ಪುಣ್ಯ ಇಲ್ಲದ ಆಕಿ ಪುರಿಸನ ದುರೂದ್ಯಾಕೆ
ಹನ್ನೆಯ್ಡು ವರ್ಸ ಅರಳಿಪೂಜೆಯ ಮಾಡಿ
ಪುಣ್ಣಿದ್ರೆ ಪುರುಸ ದೊರಕ್ವನು

ಒಡ್ಹುಟ್ಟೇ ನೀಕೇಳು ಒಡುವ ಸಿಂಗಾರ್‍ದ್ಹೊಗ್ ಕೇಳು
ಒಡ್ಹುಟ್ಟೇ ಕೇಳು ಹೆರಿಯಕ್ಕ – ನಾನಿನ್ನ
ಒಡ್ಹುಟ್ಟಿ ಏನೂ ಫಲುವಿಲ್ಲೆ

ಗೇರು ಗೇರೆಂದರೆ ಸೀರಿ ದೂಳೆಂಬರು
ದಾರಮ್ಮ ಸೂಳಿಸಿಂಗಾರ್‍ದ – ನರಿಯಳು
ಗೇರ್‍ಹೊಯ್ದು ಮನಿಗೆ ನಡದಳು

ಜಾಣ ಸಾಂಕಿದ ಕೋಳಿ ಜಾಮದಾತ್ರಿಗೆ ಕೂಗಿ
ಜಾಣನ ನಿದ್ರಿ ಕೆಡಿಸಿತು – ಆ ಕೋಳ್ಯ
ಜಾಣ ಸಾಂಬಾರ್‍ನೇ ಅರಿಯೆಂಬ

ಕಾಲಲ್ಲ್ ಬರ್‍ದ್ ಬರೊ ತೇದಿಹೋಯಿತು ಶಿವ್ನೇ
ಬಾಲಿಲಿ ನನ್ನ ಹಣೆಯಲ್ಲಿ – ಇಧಿದೇವ್ತಿ
ಹಲವು ಬಂಧನವ ಬರದಳು

ಗಂಡು ಸೀಗಿಯ ಮುಳ್ಳು ಕೊಂಡು ಸೀರಿಯ ಸೆರಗು
ದಂಡವ ಕೊಡುವಿ ಬಿಡುಮುಳ್ಳೆ – ಸೆಟ್ಟಿಯ
ಕೊಂಡರೆ ಸಿಸುನ ಹೆರುದೆಲ್ಲಿ?

ಬಯ್ದುವರು ಬಯ್ಯಲಿ ಬರ್ಪ್ರಿಗ್ ತಗಲಲಿ
ಹೊಯ್ನೀರ ಸುಗ್ಗಿ ಬೆಳೆಯಲಿ – ಗೋಯಿಂದ
ಬಯ್ದುವರ ಸಂತಾನು ಅಳಿಯಲಿ

ಕಳ್ಳರ ಕಟ್ಟಿಲಿ ಮುಳ್ಳುಹೂಗ್ ಕೊಯ್ವಂಗೆ
ಕಳ್ಳರು ಬಂದು ಕೈಕಟ್ಟಿ – ಕೊಲ್ವಂಗೆ
ಮುಳ್ಳುಹೂಗ್ ಸಾಕು ಮನಿಗ್ಹೋಪೋ

ಹೇಳದ ಮಾತನ್ನೇ ಹೇಳೂರೀ ಊರಲ್ಲಿ
ಬಾಳೆಲಿ ಮ್ಯಾಲೆ ಗಿಳಿಗೂಡು – ಹಾಕ್ತೆಂದು
ಹೇಳಿರೀ ಮಾತು ನಿಜವೇನೇ?

ಹೊಳಿಮೀನು ಹೊಲಸಾದೊ ಕೆರಿಮೀನು ಕೆಸರಾದೊ
ಹಳುಸೇರಿ ಮಿಗುವೆ ಚಂದ್ರಮ್ನ – ತಮ್ಮಯ್ಯ
ಹೆಣ್ಣೆಂಬ ಮಿಗುನ ಹೊಡಿದಿರು

ಬಡವರು ಸತ್ತರೆ ಸುಡಲಿಕೆ ಸೌದಿಲ್ಲೆ
ಒಡಲ ಕಿಚ್ಚಿನಲಿ ಹೆಣಬೆಂತೊ – ದೇವರೆ
ಬಡವಂಗೆ ಸಾವ ಕೊಡಬ್ಯಾಡ

ಉಪ್ಪಿಲ್ದ ಊಂಟವ ಒಪ್ಪತ್ತಿಗುಣಲಾರಿ
ಒಪ್ಪದ ಸೀರಿ ಉಡಲಾರಿ – ಭಾವಯ್ಯ
ತಪ್ಪಿಲ್ದೆ ಪಾದು ಹಿಡಿಲಾರಿ

ಕಾಕಿ ಕಣ್ಣಿನ್ ಬತ್ತೊ ಗೋಪಿ ಚಂದನದೊನಿಕಿ
ಅದ್ಕಂಡ್ ನಂಗೆ ಜರಬಂತ್ – ಅಣ್ಣಯ್ಯ
ಸೀಗಿ ಸಪ್ಪಿನ ಸಾರಲುಣಬೇಕು

ಮುತ್ತೈದಿತನವನ್ನು ಬೆಚ್ಚಿಕಿ ನಾ ಸತ್ತ್ರೆ
ಬೆಚ್ಚಿಡಿ ನನ್ನ ಮಣಿ ಎಂಟನಾದರೂ
ಮುಚ್ಚಿಡಿ ನನ್ನ ಮಗಳಿಗೆ

ಸಿಟ್ಟಿನ ಸಿವ್ರಾಯ ಅಕ್ಕ್ನ ಕರಿಯಲು ಹ್ವಾದ
ಕೊಟ್ಟು ನೀರ್ ಭಾವ ಹಸಿಹಾಕಿ – ಅರ್ಜುನ
ಸಿಟ್ಟಿನ ಸಿವನ ಉಣಹೇಳಿ

ತಿರುಪತಿ ತಿಮ್ಮಪ್ಪ ಕಾಣ್‌ನಮ್ಮ ಭಂಗವ
ಕಾಲಡಿ ಬತ್ತೋ ಬಲುಬ್ಯಾಗ – ನುರಿಯಾರೆ
ನಾಳಿ ಮಾಡಿಸುವಿ ಹಣ್ಕಾಯಿ

ಒಂದಕ್ಕಿ ಬೆಂದಿತ್ತ್ ಒಂದಕ್ಕಿ ಬೇಯ್ಲಿಲ್ಲೆ
ಸೌದಿ ಬೆಂಗ್ರಿದ್ ಹಿಡಿಲಿಲ್ಲೆ – ಅಣ್ಣಯ್ಯ
ಗಂಧದ ಚಕ್ಕಿ ಒಡ್ಕೊಡು

ಬಾದಿ ಕಾಯ್ ಕಂಚಿಗೆ ಬಾದಿ ಎಲಿ ಲಿಂಬಿಗೆ
ಬಾದಿ ಕಾಲುಂಗಿಲ್ ಬೆರ್ಲಿಗೆ – ಅಣ್ಣಯ್ಯ
ಬಾದಿ ನಾನಿನ್ನ ಬಳಗಕ್ಕೆ

ಜಾಗ ಕೊಂಡರ ಕೈಲಿ ಏನ್ ಹೇಳ್ವಿ ತಮ್ಮಯ್ಯ
ಜಾಗವು ನಿಮ್ದು ಹಣು ನಮ್ದು – ಕುಂದಾಪ್ರ್‌ದ್
ದಸ್ಯತು ನಿಮ್ದು ರುಜು ನಮ್ದು

ಯಾರಿಗ್ ಗಂಡರು ನಿಜ ಯಾರಿಗ್ ಮಕ್ಳ್ ನಿಜ
ಆರೇಳು ದಿನದ ಸಂಸಾರ – ನಾರಾಯ್ಣ್‌ಸ್ವಾಮಿ
ಯಾರಿಗರ್ಥಾಯ್ಸು ಬರದಿರೋ !

ಮುಂಭಾರೊ ಮೂಗುತಿ ಹಿಂಬಾರೊ ಎಣಿಗಂಟು
ಕೆಮಿಭಾರೊ ವಜ್ರದ್ ಹಯ್ಕ್ವಾಲಿ – ಅಣ್ಣಯ್ಯ
ನಾ ಭಾರೊ ನಿನ್ನ ಬಳಗಕ್ಕೆ

ಹಿತ್ಲಿಗ್ಹೋದವರ್‍ಯಾರು ಹೂಗ ಕೊಯ್ದವರ್‍ಯಾರು
ಮೆಟ್ಟಿದರ್‍ಯಾರು ಸರ್ಪನ – ಕಾಳಿಂಗ್ರ
ಎತ್ತಿದರ್‍ಯಾರು ಜಗಳವ

ಏನಂದ್ರು ಮಗಳಿಗೆ ಧಾರಿ ಎರುವಪ್ಪಯ್ಯ
ಆನಂದಪುರದ ಅಸ್ವಂತ್ನ್ – ಬಯಲಲ್ಲಿ
ಮನ್ನಿಸಿಬಿಟ್ಟಿ ಅಂದ್ರ್ ಮಗಳಿಗೆ

ನಮ್ಮಗು ಸಣ್ಣಳನ್ನು ಕೊಟ್ಟಿತು ಗಟ್ಟ್‌ದಬರಿಗೆ
ಆಮುದ್ದು ಅಳಿಯ ಕಳಿಸನು – ಅವಳಣ್ಣ
ಬಾವ್ನ ಮುದ್ದಾಡಿ ಕರ್‌ತಪ್ಪ !

ಬಂಗಾರು ಬೇಕಂತ್ವೇಳಿ ಚಿನ್ನಂಥ ತಂಗ್ಯಮ್ಮ
ತಂಗ್ಯಮ್ಮ ಬೇಡಿದಳಪ್ಪಯ್ನ – ಮರಿಹೊಗ್ಗಿ
ಬಂಗಾರ್ ಬೇಕಂತ ನಲಿದಾಡಿ

ಸಂತಾನು ಇಲ್ಲೆಂದು ಚಿಂತಿಲ್ಲೆ ಅಣ್ಣಯ್ಯ
ಸಂತಾನು ನಾನೇ ಕೊಡಿ ನಾನೇ – ಅಣ್ಣಯ್ಯ
ತಂದ ಚಿನ್ನಕ್ಕೆ ಹೊಣೆ ನಾನೇ

ತಿಂಗಳು ಮೂಡಿ ಅಂಗ್ಣದಲಿ ಬಪ್ಪಂಗೆ
ತಂಗಿ ಅಕ್ಕಂದ್ರಿಗ್ ಒಳಮಾತು – ಏನೆಂದು
ಮಗಳ ಸ್ವಾದರ್ಕಿಗ್ ಕೊಡಲಕ್ಕ?

ಅಕ್ಕಿ ಮಾರಾಟಿಲ್ಲೆ ರೊಕ್ಕ ಕೈಯಲ್ಲಿಲ್ಲೆ
ಈ ಕಾಲಕ್ಕಿಲ್ಲೆ ಮದುವಿಯು – ಅಣ್ಣಯ್ಯ
ತಂಗಿ ಮುಂಗೈಯ ಗಳಿದಳು

ಬೇಡೂಕ್ಬಂದ್ ಸಂನ್ಯಾಸಿ ಬ್ಯಾಡಂಬ ಮುಷ್ಟಕ್ಕಿ
ಕಟ್ಟಿದ್ಮಾನಿಗಿನೇ ನೆಗಿಯೆಂಬ – ಮಂದರ್ತಿ
ಬಾಳಿ ಮಂಟಪದ ಬಳ್ಗಾರ

ಚಣ್ಣಕ್ಕಿಯಳುವನು ಗಂಗೊಳ್ಳಿ ಬಂದ್ರಲ್ಲಿ
ಹೊನ್ನು ಬ್ಯಾಡವನ ಹಣುಬ್ಯಾಡ – ಅಣ್ಣಪ್ನ
ಕಣ್ಣಿಲ್ ಒಂದ್‌ಗಾಯಿ ಕಂಡ್ಕಂತಿ

ಹೆರುನ್ಹಣ್ತಿ ಹೆರಿತನಕ ಕಿರಿನ್ಹೆಣ್ತಿ ಮಕ್ಳ್‌ತಾಯಿ
ನರಬಲಿ ಹೆಣ್ತಿ ನಡ್ಗೀನವ್ನ – ಕೊಡೂರೆಂದ್
ಮರುಗೂಳು ತಾಯಿ ಸೋಕದಲಿ

ಹಿಡಿ ಹಿಡಿಯೆಂದರೆ ಹಿಂತಿರ್ಗಿ ಕಾಂಬನು
ನಡೂಕ್ ಹೋಪಂಗೆ ಮರ್ಲೇನೊ – ನಮ್ಮನಿ
ಒಡುವ ಕುಂಟ್ಹಿಡಿಯ ಹುಡುಕಿದಿ !

ಭೂಮಿಯ ಸರದಾರ್ರು ಭಾವಣ್ಣ ಎಂಬರು
ರಾಮೇಸ್ರದ್ಹೂಗ ತರಸೀರು – ಭಾವಣ್ಣ
ತಮ್ಮಡದಿಗೆಯ್ಡ್ ನಂಗೊಂದ್

ಹೆತ್ತಮ್ಮ ಕೈಲಿ ನಿತ್ತು ಮಾತ್ನಾಡ್ವೊಂದ್ರೆ
ಹತ್ತಿ ಹಾಸ್ಗಿಗಿ ಹನಿಎರ್ಗ್ಗಿ – ನಿನ್ನಳಿಯ
ಸಿಟ್ಟಿನಡ್ವ್ಯಾರು ನಿಲುವರು

ಭಾರಿ ಪಟ್ಟಿಯ ಸೀರಿ ಅಪ್ಪಯ್ಯ ತಂದದ್ದು
ಸೀರ್ಯುಂಟ್ರೆ ತಂಗಿ ಮುನುವಳು – ಅಪ್ಪಯ್ಯ
ಹೇರಿಸಿ ತನ್ನಿ ಜವಳಿಯ

ಒಳಗ್ಹೋಯಿ ಒಬ್ರೆಂದ್ ಎಸರಿಟ್ಟಿ ಇಬ್ರೆಂದ್
ತೊಳ್ದಿಟ್ಟಿ ಅಕ್ಕಿ ಮೂರೆಂದ್ – ಮಾವಯ್ಯ
ಅಳುಕಾಳೆಷ್ಟು ಜನು ಎಷ್ಟು

ಬೆಳಕುಂಟು ತಿಂಗಳ ಹೂಗುಂಟು ಹಂಗಾರ
ಒಳಗೆ ಮಗಿನಪ್ಪ ಒರಗಿರು – ಕಿಷ್ಣಯ್ಯ
ನಾಳಿನ ಕಾರ್ಯ ಕಂಡ್ಕಂಬೊ

ಅಂದು ರತ್ನಮ್ಮ ಗಂಡ ಕರಿಯಲು ಬಂದ
ಕಂದಿದ ಶಾಲಿ ಒಗಿಲಿಲ್ಲೆ – ಅವ್ನ್ ಮಾವ
ಇದೊಂದು ಪಯ್ಣ ನಿಲ್ಕಂದ

ಬೀಗಮುದ್ರಿಯ ಮಾಡಿ ಬಾಳಿಯ ಹಣ್ಣಿಗೆ
ಹೋಗುವರ ಕೈಲಿ ಕಳುಗುವಿ – ಪೆರ್ಡೂರ
ದೇವರ ಹರ್ಕ್ಕಿ ಸಲಿಸುವಿ

ರುಂಡ ತಪ್ಪಿಯೆಂದು ತಾಯ್ಗೆ ಭಾಸಿಯ ಕೊಟ್ಟ
ಕ್ವಾಣಿ ಒಳಗಿರುವ ಮಡದಿಯ – ಮಾತ್ಕೇಳಿ
ಅಣ್ಣಯ್ಯ ಮಡದು ಒಳಗ್ಹೋದ !

ಪುತ್ತಳಿ ಸರುವಾದಿ ಪುಣ್ಯವಂತರ ಸೇರಿ
ಕೆಟ್ಟ ಜನ್ನಿಗರ ಒಡಹುಟ್ಟಿ – ನಾರಾಯ್ಣ್‌ಸ್ವಾಮಿ
ಹಿತ್ತಾಳಿಗಿಂತ ಕಡಿಯಾದಿ

ನಾಕು ಪುತ್ತಳಿ ಸಾಲ ಬಾಲಿ ಮ್ಯಾಲಿನ ವಾಲಿ
ಯಾಕೆ ಅಣ್ಣಯ್ಯ ಅಳದದ್ದು – ಮೂಡಿನ
ಅಕ್ಕನ ತಂಗಿ ಬಪ್ಕೆಂದು

ಸೀರಿಕೊಂಬ್ ಹಣದಲ್ಲಿ ಸೀಮಾವು ಕೊಳಲಕ್ಕ
ಸೂರ ನಿಂಗೆಷ್ಟು ತವಕವು – ನಿನ್ಮನಿ
ಸೀರಿಉಡು ಚೆಲುವೀರ್ ಎಷ್ಟ್ ಮಂದಿ?

ತಂಗಿ ಕರಿ ಎಂದರೆ ತಿಂಗ್ಳ್ ತುಂಬಿಲ್ಲೆಂದ
ಕಂಕಣದ ಕೈಯ ಮಡದಿಯ – ಕರಿ ಎಂದ್ರೆ
ಬಿಗಿದೆದ್ದ ಕುದುರಿ ಕಡಿವಾಣ

ಗಟ್ಟಿಬತ್ತೊ ತೊಳುವುಕೆ ನಾನಾರೂ ಹೆದ್ರೂನ
ರಟ್ಟಿ ಕಾಳಿಂಗ್ನ ಹೆಡಿಹಾಂಗೆ – ಇದ್ದೀರೆ
ಪಟ್ಟದ ರಾಣಿಗ್ಹೆದರೂನ?

ಬಂಟರ ಕಾಣ್ಕಂದ್ ಬಲುದೂರಿಂದ್ ನಾ ಬಂದಿ
ಅಡ್ಡಿಂದೇಳಿನಿ ಒಳಗ್ಹೋತಿ – ಕೊಳ್ಕಿಬಯ್ಲ್
ಗೆಂಡಕ್ ಮೂರ್ ಬೊಂಡೊ ಒಡುವೆನು

ಮಜ್ಜಿಗಿ ತಿಕ್ಕೂದು ಮಜ್ಜಾನ ಅಯ್ಹೋತ್ತ್
ಇದ್ದದ್ದುಂಡ್ ಹೋಯ್ನಿ ಮೈದಿನ – ಪಡುಮುಂಡ
ಉದ್ದಕ್ಕ್ ನಾನಂಜೂ ಮಗಳಲ್ಲ !

ಕಟ್ಟಿ ಅಸ್ವಂತ್ನ ಕಿತ್ತು ನಟ್ಟವರ್ಯ್ಯಾರು
ಕಟ್ಟಿಲ್ಲ್ಯ ಅದ್ಕೆ ಮದಿ ಇಲ್ಲೆ – ಅಸ್ವಂತ್ನ
ಕಿತ್ತು ನಟ್ಟವ್ರಿಗ್ ಸ್ವರ್ಗಿಲ್ಲೆ

ಅಬ್ಲಿಹೂಗ್ ಮುಡ್ಕಂಡ್ ಅಬ್ಬಿಮನಿಗ್ಹೋಪಂಗೆ
ಅಬ್ಬಿ ನನ್ನನ್ನು ಮರತಳು – ಗಾವುಳಿಲಿ
ಕಿರಿಯಬ್ಬಿ ಕಂಡೇ ಮಗಳೆಂದು

ಊರಿನ ಹೆಣ್ಮಕ್ಳೆ ಬೆರಗಾಪೂದ್ ಯಾಕೆ
ಸೂರ್ಯಮ್ನ ಲೋಕ ಎಯ್ದುಂಟಾ – ನಿಮ್ಮಂಥ
ನಾರಿಯರುಂಟಾ ಜಗದಲ್ಲಿ?

ವಾಲಿಕುಂದ್ ಅಪ್ಪಯ್ಗೆ ಸೀರಿಕುಂದ್ ತಾಯಿಗೆ
ತಲಿ ಹ್ವಾರೆ ಕುಂದು ಅರಸಿಗೆ – ಅಣ್ಣಯ್ಯ
ಕುಲ ಮಾಡಿದ್ ಕುಂದು ನಿಂಗಾಯ್ತು

ರಾಣಿ ಇದ್ದ್ ಫಲುವೇನು ರಾಯ ಇಲ್ಲದ್ಮ್ಯಾಲೆ
ಪುಣ್ಗಿನ ಕಾಮಕಸ್ತೂರಿ – ಹಾಸ್ಗಿಲಿ
ರಾಣಿ ನೀನಿದ್ದು ಫಲುವೇನು

ಸಿಕ್ಕಿದಳು ಸಿರಿದೇವಿ ಸೀಗಿಯ ಬಲ್ಲಿಲಿ
ಮಕ್ಕ್ಳ ದುಃಖದಲಿ ನೆಗುವಳು – ದೇವರೆ
ಮಕ್ಕಳ ತಾಯ ಬಿಡಬೇಕು

ಬಿಟ್ಟೆ ಹಣಿ ಕುಂಕುಮ ಬಿಟ್ಟೆ ಬಾಯ್ ಬಳ್ಳೆಲಿ
ಬಿಟ್ಟು ನಿಮ್ಮ್ ದೊರಿಯೆ ಇರಲಾರಿ – ಗಾವುಳಿಯ
ಬಿಟ್ಟು ಹಡದಮ್ನ ಬರುವೆನು

ಬಾಳುವ ಮನಿಸುದ್ದಿ ಕೇಂಬಳು ನನ್ನ್ತಾಯಿ
ಹೇಳ್ಲಿ ಏನ್ ತಾಯಿ ಸುಖದುಃಖ – ಹಟ್ಟಿಯ
ಹಣಿಯ ಮುಂಗಾಲಿಗ್ಹೊಡದ್ವಾಂಗೆ

ಕಷ್ಟುಸುಖ ಹೇಳ್ವಂದ್ರೆ ಅಜ್ಜಿಲ್ಲೆ ಮಾವಿಲ್ಲೆ
ಇಟ್ಟಣಿ ಮರಕೆ ಅವ್ರಿಕೋಡ್ – ಒಡದಂತೆ
ಒಡ್ಲೊಳ್ಗೆ ನಮ್ಮ ಉರಿತಾಪೊ

ಅಣ್ಣನ ಕಾಣದೆ ಹನ್ನೆಯ್ಡ್ ವರ್ಸಾದೊ
ಅಣ್ಣನ ಮಡದಿ ಗುರುತನೆ – ಮರತಳು

ಹುಟ್ಟಿದ ಮಕ್ಕಳು ಹುಟ್ಟಿದ್ವಾಂಗಿದ್ದರೆ
ಕಟ್ಟಿ ಕಟಿಸುವಿ ಅರಳಗೆ – ಅಸ್ವಂತಕು
ಮುತ್ತು ಬಿಗುಸುವಿ ಎಗಿತುಂಬ

ಅಕ್ಕನ ಮಕ್ಕಳ ಹೊತ್ತಿದ್ದಿ ಬಚ್ಚಿದ್ದಿ
ಮಕ್ಳಿಗೆ ಹಾಲು ಕುಡ್ಸಿದ್ದಿ – ಅಕ್ಕ್ನಮಕ್ಳ್
ಚಿಕ್ಕಮ್ಮನೆಂದು ಕರಿಲಿಲ್ಲೆ !

ಒಂದಕ್ಕಿ ಬೆಂದಿತ್ತ್ ಒಂದಕ್ಕಿ ಬೇಯ್ಲಿಲ್ಲೆ
ಸೌದಿ ಬೆಂಗರಿದು ಹಿಡಿಲಿಲ್ಲೆ – ಅಣ್ಣಯ್ಯ
ಗಂಧದ ಚಕ್ಕಿ ಒಡ್ಕೊಂಡು

ಕೆರಿಯ ದಂಡಿಯ ಮ್ಯಾಲೆ ಮರಿಯ ಬಾಳಿ ನೆಟ್ಟಿ
ಅರಿಯೆಂದರ್‍ಹ್ಯಾಂಗೆ ಅರುವುದು – ಅಪ್ನ್ಮನಿ
ಮರಿಯೆಂದರ್‍ಹ್ಯಾಗೆ ಮರುವುದು?

ಬತ್ತೊ ತೊಳ್ಳೊ ಹೆಣ್ಮಕ್ಕೇ ಅತ್ತಿತ್ತೆ ಕಾಣ್ಬ್ಯಾಡಿ
ಬತ್ತಾರಾ ನಿಮ್ಮ ಬಗಿಯೋರು – ನನ್‌ಮಕ್ಕೇ
ತತ್ತಾರಾ ನಿಮ್ಗೆ ತೌಡ್ಡಿಟ್ಟು?

* * * * *

ಸುಖನಿವೇದನೆ

ಸುಡುಸುಡು ಅಂದರೆ ಸುರಿಗಿ ಬೇರೊಯ್ದಿತು
ತೊಳು ನನ್ನ ಒನ್ಕಿ ಕದ್ರೊಯ್ದೊ – ದೇವುರೆ
ಮುಡ್ದ್ ನನ್ನ ಹೂಗು ಫಲುಬಂದೊ

ಬಾಚಿ ಕಟ್ಟಿದ ಮಂಡೆ ಬರಿದೆ ಹೋಗುವಳೆಂದು
ಜ್ಯೋತಿ ಅಣ್ಣಯ್ಯ ಮರನೇರಿ – ಮಲ್ಲಿಗಿ ತಂದು
ಸೀತಿ, ತಂಗ್ಯಮ್ಮ ಮುಡಿಯೆಂದ

ಅಕ್ಕ ತಂಗ್ಯರು ನಾವು ಅಂಗ್ಳದಲ್ವರ್ಲ್ ಹೂಡಿ
ಚಿಕ್ಕ ಚಿಕ್ಕಣದ ಬಲಿಗಿಯ – ಹಿಡ್ಕಂಡ್
ಅಕ್ಕಿಸಾಲ್ಗೊಂಬಿ ತೊಳ್ಸುವೊ

ತಿಂಗಳ ಬೆಳಕಿಗೆ ತಂಗಿ ಮೈನೆರೆದಳು
ಸಿಂಗಾರ ಹೂಗಿನುಸಗಿಯು – ಅಣ್ಣಯ್ಯ
ಸಿಂಗಾರದರಸಿ ಬಯಕಿಯು

ಮಳಿರಾಯ ಹೊಯ್ಯಲಿ ಕೆರಿರಾಯ ತುಂಬಲಿ
ಹೆನ್ನೆಯ್ದು ಕೋಡಿ ಹರಿಯಲಿ – ನಮ್ಮೂರ
ಚಣ್ಣಕ್ಕಿ ಬಯಲು ಬೆಳಿಯಲಿ

ಕಣ್ಣಿ ಕೋಗಿಲ್ಹಕ್ಕಿ ಇಂದೆಲ್ಲಿ ಬಿಡಾರ
ಅಣ್ಣ ತಿಮ್ಮಪ್ನ ಮನಿಯಲಿ – ಆ ಹಕ್ಕಿ
ಹಣ್ಣ್ ತಿಂದ್ ಬೀಂಜ ಉಗುವುದು

ಬಾಳಿಯ ಹಣ್ಣೇ ನೀ ಬಾ ನನ್ನ ಬಾಯಿಗು
ಏಳು ಸುತ್ತಿನಲಿ ಕೆರಿಬಾಮಿ – ತಾವ್ರಿಹೂಗ್
ಬೀಳು ಬಾ ನನ್ನೆ ತುರುಬಿಗೂ

ಹಟ್ಟಿಲಿ ಕಲ್ಲೊರ್ಲ್ ಕೊಟ್ಗಿಲಿ ಸೇದೂ ಬಾಮಿ
ಎತ್ತಿ ಕುಟ್ಟಿದರೆ ಗಟ್ಟಿರೆಂದು – ಒನಿಕಿಯ
ಕೆತ್ತಿದ ಬಡಗಿ ಸುಖಬಾಳು

ಪಟ್ಟಿಯ ಉಟ್ಕಂಡ್ ತೊಟ್ಟಿಲ ಹೊತ್ಕಂಡ್
ನಟ್ಟ ಬಯಲಲ್ಲಿ ಹೋಗ್ವಳೇ – ರುಕ್ಮಿಣಿ
ತೊಟ್ಲ ಕಂದಮ್ನ ಹೊಸ್ರ್ ಹೇಳೇ

ಹೆದ್ದಾರಿ ಮನಿಯವ್ವ್ ಹೆಗ್ಗಡ್ತಿ ನನ್ನಕ್ಕ
ಮಜ್ಜಿಗಿ ದಾನ ಕೊಡುವಳು – ನನ್ನಕ್ಕ
ಗಿಜ್ಜಿಕಾಲ್ ಮಗನ ಪಡಿಯಲಿ

ಗಿಡ್ಡಿ ಗಿರಿಜಮ್ಮಂಗು ಕಡ್ಡಿ ಬಣ್ಣದ ಸೀರಿ
ಅಡ್ಡಿಂದ ಒಗುವ ಮಡುವಾಳ – ಅವ್ವಣ್ಣ
ಕಡ್ಡಿ ಅಲುಗಿದರೆ ಮರುಗ್ವನು

ಕಿರಿಗಿಯ ಉಟ್ಕಂಡ್ ಕಿರಿಜಡಿ ಹೊಯ್ಕಂಡ್
ಕಿರಿಯಣ್ಣ ಬೆನ್ನ ಹಿಡುವಳು – ಏನೆಂದು
ಕಿರಿಜಡಿಗ್ ಮುತ್ತ ಬಿಗಿಸೆಂದು

ಅಪ್ಪಯ್ನ ಮನಿಯಲ್ಲಿ ಎಪ್ಪತ್ತ್ ಚೆನ್ನಿಮಣಿ
ಎಪ್ಪತ್ತೇಳ್ ಮಂದಿ ಗೆಣಿಯರು – ನಾನಿನ್ನ
ಅಪ್ಪಯ್ಯ ಬಿಟ್ಟಿಕಿ ಇರ್ಲಾರಿ

ಆಚಾರಿಗಂಡಿಗೆ ಅರ್ಯಳಿ ಜನಿವಾರು
ಪಂಚಸೂತ್ರದ ಉಳಿಬಾಸಿ – ಹಿಡ್ಕಂಡ್
ಪಂಚೇಳು ಲೋಕ ತಿರ್‍ಗ್‌ಬಂದ

ಈಸ್ವರ ಅಪ್ಪಯ್ಯ ಬ್ಯಾಸರ ಮಾಡ್ಬ್ಯಾಡಿ
ಈ ಸೀರಿ ಮ್ಯಾಲೆ ಮನ್ಸ್ಮಾಸಿ – ಅಪ್ಪಯ್ಯ
ರೇಸಿಮಿ ಪಟ್ಟೆ ಚೌಕಿಗಿ

ಜೇನ್ನು ಬಂದಿಳಿದುವು ಬಾರ್ಕೂರ ಪ್ಯಾಟಿಲಿ
ಜಾನಿಸಬ್ಯಾಡ ಮಗನಿಗೆ – ಅಣ್ಣಯ್ಯ
ಜೇನ್ನು ತುಂಬಿದ ಹಡಗಿಗೆ

ಯಾರಮ್ಮ ಮನಿಯಲ್ಲಿ ಯಾರಮ್ಮ ಮಠದಲ್ಲಿ
ಯಾರಮ್ಮ ಹೂಗ ಕೊಯ್ಬ್ಯಾಡಿ – ನಮ್ಮನಿಯ
ಪಾರೋತಿಗ್ಬೇಕು ಹೊಡಹೂಗು

ಅಣ್ಣನ್ಹೆಂಡತಿ ಬಾರೆ ನಂಗೆ ಮೈದಿನಿ ಬಾರೆ
ಬಣ್ಮೆಣಿಸರು ಬಾರೆ ಕೊರ್ಲಿಗೆ – ಅಣ್ಣಯ್ಯ
ಪುಣ್ಯಸ್ತ್ರ ತಾರೊ ಕಲ್ಲಕ್ಕೆ

ಅಂಗ್ಡಿಯಲಿರುವುದು ತಂಗಿಯರ ಮೈಬಣ್ಣ
ಕೊಡಣ್ಣ ತಂದ ನಂಗೆಯ್ಡು – ಕೊಡಿಯಳದ
ಜೋಡೆಳಿ ಬಂದ ರವಿಕಿಗೆ

ಅರ್ಸಿನ್ ಗ್ವಾರಟಿ ಹೂಗ್ ತರ್ಸಿ ಮುಡಿಬೇಕೆಂದು
ಅರ್ಸಿ ಪದ್ಮಕ್ನ ಬಸಿರಿಲಿ – ಪದ್ಮಕ್ಕೆ
ತರ್ಲಿ ನೂರ್ ಹೂಗ ಮಡಿಸುವಿ

ಒಡನಿಗೊಂದ್ ಹೇಳಿರೆ ಉಟ್ಪ್‌ಪಟ್ಟಿ ಕೊಡುವರು
ಒಡತಿಗೂ ಹೇಳಿ ಇನ್ನೊಂದ್ – ಇಮಲಮ್ಗೂ
ಮುಡಿದ ತಾಪ್ರಿನೇ ಕೊಡುವರು

ನುರೂದು ಈಬತ್ತು ಮಾದೊಡ್ಡ ಸಂಪತ್ತಾ
ಮಾರಾಯ್ರ ಮನಿಯ ಹಣ್ಸಿಂಯ – ಹಿಡ್ಕಂಡ್
ಮಾರಾಸಿ ಬತ್ತೊ ಪುಡಿಯಾದೊ

ಕಿರಿಸೀರಿ ಉಟ್ಕಂಡ್ ಕಿರಿಜಡಿ ಹೊಯ್ಕಂಡ್
ಕಿರಿಯಣ್ಣ ಬೆನ್ನ ಹಿಡಿವಳು – ಸೊಸಿಯಮ್ಮ
ಕಿರಿಜಡಿಗೂ ಮುತ್ತ ಬಿಡಿಸೆಂದು

ಅತ್ತಿಗಿ ಮೈದಿನ ನಿತ್ತು ನೀರ್ ಮಗುವಂಗೆ
ಮುತ್ತಣ್ಣ ಕಟ್ಟಿ ಕುಸಿದವು – ಬಾವಯ್ಯ
ಎತ್ತಿಕೊಡಿ ನಮ್ಮ ಬಲಕಟ್ಟು

ದೇವರ ದಯದಿಂದ ದಾವುತಿ ನಮಗಿಲ್ಲೆ
ಹಾಂವು ಕಚ್ಚಿದರೂ ಇಸುವಿಲ್ಲೆ – ಸರ್ಪದ
ಹಾಂವು ದಾಂಟಿದರೂ ಭಯುವಿಲ್ಲೆ

ಅಕ್ಕಿಯ ತೊಳ್ಸ್ವಾಗ ಅಕ್ಕ ನಿನ್ಮಗ ಬಂದ
ಅಚ್ಚ ನೀಲಂಗಿ ಕುದುರಿಯ – ಏರ್ಕಂಡ್
ಅಕ್ಕ ಸೌಭದ್ರಿ ಮಗಬಂದ

ಊರಿಗೆ ಉಪಕಾರಿ ಮನಿಗೆ ಚಿಂತಾಮಣಿ
ಪರರುಪಕಾರಿ ಗುಣಮಾನಿ – ಅಣ್ಣಯ್ಯ
ಸೆರಿಲಿ ಬಿದ್ದವರ ತಪ್ಪಿಸುವೊ

ನಿಲ್ಲ್‌ನಿಲ್ಲೆ ದುರ್ಗಮ್ಮ ನೀರಿಗೆ ನಾಬತ್ತಿ
ನಿಲ್ಲು ಮಲ್ಲಿಗಿಯ ಬನದಲಿ – ದುರ್ಗಮ್ಮ
ವಾಲಾಡಿ ತಪ್ಪೊ ಕೊಡನೀರ

ಮನದಲ್ಲಿ ಮಲ್ಗಿ ನಟ್ಟಿ ಗುಣ್ದಲ್ಲಿ ನೀರ್ಹೊಯ್ದಿ
ಮನಿಯಾಕಿ ಬಾರೆ ಸೊಸಿ ಮುದ್ದು – ದುರ್ಗಮ್ಮ
ನಿನಗಾಯಿ ಕೊಯ್ದಿ ಹೊಸಹೂಗ

ಅರುಣಕಾದಲ್ಲಿ ಯಾರಿಗೆ ಶರಣೆಂಬಿ
ಬಾಲಿಕೈಹಿಡಿದ ಶ್ರೀಹರಿ – ಪಾದುಮುಟ್ಟಿ
ಶರಣೆಂಬಿ ಮುತ್ತಿನ್ ಬಯ್ತಲಿಯ

ದೊಡ್ಡರ್ ದೊಡ್ಡರಂದ್ರ ನಮ್ಮಿಂದ್ ದೊಡ್ಡರಲೆ
ದಿಡ್ಡಿ ಬಾಗ್ಲಿಗೂ ಸರಪಣಿ – ಮಾವಯ್ಯ
ಬಡ್ಡಿಲ್ದೆ ಹಣವ ಕೊಡುವರು

ಕೊಪ್ಪರ್ಗಿ ಕೊಡಪಾನು ತುಪ್ಪು ಬಳ್ಸುವ ಸೌಂಟು
ಅಪ್ಪ ತಾವುಂಬು ಹರುವಾಣು – ಸುಮತಿಗೆ
ಉಪ್ಪಿನ್‌ಮರ್ಗಿ ಕೊಡುವಿ ಬಳುವಳಿ

ಅಕ್ಕತಂಗ್ಯರು ನಾವು ಇಕ್ಕೇರಿ ಸಂತಿಗ್ಹೋಯಿ
ತೆಕ್ಕೊಂಬ ಬಾರೆ ಚೌಲಿಯ – ಚೆನ್ದ್‌ಕುಡ್ಕಿ
ಸಿಕ್ಕಿತು ನಮ್ಮ ತುರುಬಿಗೆ

ಹೆಣ್ಣಿನ ಪುಣ್ಯವ ಹೆತ್ತಮ್ಮ ಏನ್ ಬಲ್ಳು
ಹಣ್ಣು ಮಾರುಂಬೂ ಬಡವಂಗೆ – ಕೊಟ್ಟರೂ
ಹೊನ್ನುಯ್ಯಾಲಲ್ಲಿ ಒರ‍್ಗಂಬ

ಎಂಥೆಂಥ ಹಾಡನ್ನು ಅಂತ್ರ್ ಕಯ್ದ್ಗಿಲಿ ತುಂಬಿ
ಎಂಥವ್ಳೇ ನಾನು ಎಳಿಯಳು – ಹೇಳ್ದ್‌ಹಾಡು
ಜಂತಳ್ಸಿ ಜನರ ತಲಿದೂಗಿ

ಹತ್ತು ಸಾಯಿರ ಹಾಡ್ನ ಎತ್ತಿನ್ ಮ್ಯಾಲ್ ಕಳ್ಸಿದಿ
ಮತ್ತೆ ಸಾಯಿರವ ಕಲ್ತಿದಿ – ಎಲೆಹೆಣ್ಣೆ
ಹತ್ತು ಸಾಯಿರವ ಕಲಿಸ್ಯೇನು

ತೊಂಬತ್ತಿನ್ ಗಿಣಿರಾಯ ಉಂಬ್ವೊತ್ತಿಗ್ ಸ್ವರುಗೆಯ್ಯೊ
ರಂಬಿ ತಾಯಮ್ಮ ಮನಿಯಲ್ಲಿ – ಬಾಗ್ಲ್‌ಮುಂದೆ
ನಿಂಬಿ ಮರುಹತ್ತಿ ಸ್ವರುಗೆಯ್ಯೊ

ಗೆಣಿಯಳ ಬಿಟ್ಟಿಕಿ ಹಬ್ಬುಕ್ ನಾ ಹೋಯ್ಲಾರಿ
ಗೆಣಿಯಳು ನನ್ನ ಏನೆಂಬ್ಳ್ – ಸೂರಕ್ಕ
ಗುಣುಸಲ್ಲ ಅವಳ ಹಿತುಸಲ್ಲ

ಹೆಲ್ಸ್ನ ಹಣ್ಣ್ ಆಪಂಗೆ ಮೆಣ್ಸ್ ಕರಿ ಹಿಡ್ವಂಗೆ
ಅರ್‍ಸ್ಲೊಳು ನನ್ನ ಗೆಣಿಯಳು – ಕುಂದಾಪ್ರಿಲಿ
ಹೆಲ್ಸು ಕಿತ್ತಳಿಯ ಮರನಲ್ಲಿ

ಅಡಿಗಿಯ ಮಾಡಿಕಿ ಮಡದಿ ಚಿಂತಾಮಣಿ
ಕೊಡನೀರು ತಾರೆ ಕುಸುಮಾಲಿ – ಅಂತಯ್ನ
ಒಡಗೂಡಿ ಬಪ್ರು ಹಸಿದರು

ಬಂಟ್ರನ್ನ ಕಂಡ್ಕಂತಿ ಅಡ್ಡಿಂದೇಳ್ ಪೂಜಾರಿ
ಎಂಟೇ ಮಂಟಪದ ಒಳಗೆಲ್ಲ – ನಾನಿಂದು
ಬಂಟರ ಕಾಣ್ಕಂದೇ ಚಿವುತಿದ್ದಿ

ಆಚೇಗುಯ್ಯಾಲಾಡುವರು ದೊಂಗಬರ ಆಟವ
ಜಂತಕದ ಮ್ಯಾಲೆ ಮಿಣಿಮ್ಯಾಲೆ – ದೊಂಬ್ರ್‌ಚೆನ್ನಿ
ಪಂತಕಾಡಿದಳು ಪಗಡಿಯ

ಇಂದು ಹೇಳಿದ ಹಾಡು ಇನ್ನೇಗಳಿಕ್ವಾಡೂದು
ಮುಂದೆ ಭಾರತದ ಮೊದಲಿಗೆ
ರನ್ನ್ದ ತಿರಿ ತೆಗೆದು ತೊಳುವಂಗೆ

ಬಾಸಿಂಗಕ್ಕ್ ಹೇಳ್ಬನ್ನಿ ಬಸ್ರೂರ ಗುಡಿಗಾರ್ಗೆ
ಲೇಸುನಾರಾಯ್ಣ್ನ ಮದುವಿಗೆ – ಮುರ್ಡೇಸ್ವರ್
ಪಾತರದ ಸೂಳೇರಿಗ್ಜನು ಬಿಡಿ

ಅಕ್ಕತಂಗ್ಯರೊಳಗೆ ಆಡೂ ಪಗಡಿಯೊಳಗೆ
ಸಕ್ಕರಿಯೊಳಗೆ ಸರಿಪಾಲು – ಕೊಟ್ಟರೂ
ಅಕ್ಕ ನಿನ್ನ್ ಬಿಟ್ಟು ಇರಲಾರಿ

ಎಲ್ಲರ ಕೈಯಲ್ಲಿ ಒಳ್ಳ್ಯನೆನಿಸಿಕೊಂಡ
ನಲ್ನುಡಿಯಿಂದ ಗುಣದಿಂದ – ಸಂಕ್ರಯ್ಯ
ಬೆಲ್ಲನೀರಾದ ಜನರಿಗೆ

ನಾಕು ಮಂಚದ ಕಾಲು ಅದಕೆ ತಕ್ಕನೆ ಕೀಲು
ಸಕಲಾತಿ ಹಾಸಿ ಒರಗಿದಿ – ಗಂಡಯ್ಯ
ಯಾಕೆ ಅನುಮಾನೊ ಮಾಡೂರಿ !

ಕಡಿಯಕ್ಕಿ ಕೂಳ್ಮಾಡಿ ಇಡಿಯಕ್ಕಿ ಶಾಮ್ಗಿಮಾಡಿ
ಗುಳ್ಳದ ಕಾಯಿ ಹುಳಿಮಾಡಿ – ನಾರಾಯ್ಣ್ಸ್ವಾಮಿ
ಅಳಿಯಂದಿರಿಲ್ಲಿ ಬರಬೇಕು

ತಿರುಪತಿ ತಿಮ್ಮಪ್ಪ ಭಾರಿದೊಡ್ಡ್ ಮನುಸರು
ಕಾಲಡಿ ಬತ್ತೊ ಒದಗಲಿ – ಸೋಮಯ್ಯ
ಹರುಸವ ನಾಳಿ ಮಾಡಿಸುವೊ

ಹತ್ತೆಸ್ಲ ಸಂಪಿಗಿ ಒತ್ತೆಸ್ಲ ಸ್ಯಾಂಮಂತ್ಗಿ
ಅತ್ತಿಗಿ ನಮಗೆ ಕಳ್ಸಿಳು – ಗಾವಳಿಗೆ
ಬಿಸ್ಲಲ್ಲಿ ಬಂದ ಹೊಸ ಹೂಗು

ಆರ್ಹೊಡೂ ಗೆದ್ದಿನ ನೀನ್ಹೊಡು ನರಸಿಂಹ
ಹೇಳಿಕೊಡೂ ಮಾವ ಮನಿಲಿಲ್ಲೆ – ಏನೀಗ
ಹೋರಿನ ಕಟ್ಟಿ ಮರುದ್ಹೊಡು

ಬೆಳಗಿನ ಮೋಟ್ರ್ ಹತ್ತಿ ಬೇಗ ಬಾ ಸೋಮಯ್ಯ
ನಾಳಿ ನಿನ್ನಳಿನ ಮದುವಿಗೆ – ಚಪ್ಪರದಲ್ಲಿ
ನಿಲಬೇಕು ಸ್ವಾದ್ರ ಮಾವಯ್ಯ

ಎಳಿಯ ಸಿಂಗಾರ್ಹೊಗ ಅಂಗೈಲಿ ಹಿಡ್ಕಂಡ್
ಹುಡುಕ್ವಳು ನೆಗಿಯ ಮಾವಯ್ನ – ಬೀಚಮ್ಮ
ತೊಳಿಕೆಂದು ಗೆಮಡ ತಾನ್ಮುಂದೆ

ಹಸುರು ಗಿಂಡ್ಗಿನೀರ ಹಸಿಮಾಯಾ ಮ್ಯಾಲೆ
ಹಸುಮಗು ಬೀಚಮ್ಮ ಹಿಡ್ಡಿರು – ಅವ್ಳಪ್ಪ
ವಸ್ವಂತಕ್ಹೋಯಿ ಬರುವನು

ನೆಲ್ಲಿಕಾಯ್ ಅಪ್ಪಂಗೆ ಎಲ್ಲಿಗೂ ಚೋಜಿಗ
ಬಲ್ಲಿಯರ ಕುಲಕೆ ಅಳಿಹುಟ್ಟಿ – ಮಾವಯ್ಯ
ಬಲ್ಲಿಗೂ ಮುತ್ತು ಬಿಗಿಸೂರು

ಕಾಡಿಗಿ ಕಣ್ಣಳ ರೂಡಿ ಗಿರಿಜಮ್ಮನ
ಬೇಡಿದಳು ಬೆರ್ಮರದ ಅರಸಿಗೆ – ಅಪ್ಪ್ಯಮಾವ
ಕೊಡಿ ಎಂಬ ದಾರಿ ದೂರೆಂದು

ಕೊಲ್ಲೂರ ಘಾಟಿಲಿ ಬಿಲ್ಲವರು ಬಂದಿಳಿದರು
ಬಲ್ಲ್ಯೇನು ತಾಯಿ ಗುರುತವ – ನಿನ್ನಳಿನ
ಬಿಲ್ಲಿನ ತಲಿಗೆ ಬಿಡುಮುತ್ತು

ಹೆಣ್ಣಿನ ಹೆತ್ತಳೆ ಪುಣ್ಯಸ್ತ್ರೀ ನೀ ಬಾರೆ
ಚಣ್ಣಕ್ಕಿ ಬ್ವಾನೊ ಉಣಬಾರೆ – ನಿನ್ನ್ಮಗಳು
ಬಣ್ಣ ತಂದಳು ಉಡುಬಾರೆ

ಬೆಳ್ಳಿ ತಟ್ಟಿಗೆ ಹಾಕಿ ಮಲ್ಲಿಗ್ ಹೂಗ್ ಕೊಯ್ದು
ಕೊಟ್ಟಕಿ ಬಾ ಗಿಳಿಯೇ ನಡದ್ಹೋಯಿ – ಕಾಸಾನ್ಮಕ್ಕಿ
ಸಿಸ್ಟಿಪಾಲಕನ ಮಡದಿಗೆ

ಹೆಣ್ಣ್ ಕೇಂಬೂಕ್ ಬಂದವ್ರೆ ಹೆರಗ್ಯಾಕೆ ನಿತ್ತಿರಿ
ಬೆಳ್ಳಿ ತವಕಿಲಿ ಬೆಳಿಎಲಿ – ನಮ್ಮಣ್ಣ
ಮೆಲಿದ್ಹೋಯ್ನಿ ಕೂತು ಮಾತಾಡಿ

ಎಣ್ಣಿಯ ಹೊಳಿಯಲ್ಲಿ ಎಣ್ಣಿದರು ಕಾರ್ಯವ
ಎಣ್ಣಿ ಮಿಂಚಿನಲಿ ಮನಿಮಾರ – ಹಡದಮ್ಮ
ಎಣ್ಣಿದಳು ಮಗಳ ಮದುವಿಗೆ

ತಂಗಿನ ಕೊಡಬೇಕು ತೆಂಗಿನ ತಪ್ಲಿಗೆ
ತೆಂಗಿನ ಎಣ್ಣಿ ಹೊಡಿ ಅನ್ನು – ಉಂಬರಿಗೆ
ತಂಗಿನ ಅಲ್ಲೇ ಕೊಡಬೇಕು

ಕಾಳೂರ ಹಕ್ಕಿನ ಕೇಳಿದ್ಯಾ ತಂಗ್ಯಮ್ಮ
ಕೇಳಲಿಲ್ಲಕ್ಕ ತೆಗ್ದ್‌ಹೇಳು – ಕೊಂತದ
ಕಾಳೂರಿಗ್ ಕಾಯಿ ಕೊನಿಬೆಂಡ

ತಂದಿ ಕೂಡಿನ ತಂದಿ ಬಂದ್ರ್ ಚಿಕ್ಕಪ್ಪಯ್ಯ
ತಂದ್ರಿಯಾ ನಂಗೆ ಚೌಲಿಯ – ಚಿನ್ದ್‌ಕುರ್ಲ್
ಬಂದ್ರಿಯಾ ನನ್ನ ಕರವುಕೆ

ಸುಡುಸುಡು ಅಂದರೆ ಸುರಿಗಿ ಬೇರೊಯ್ದಿತು
ತೊಳು ನನ್ನ ಒನ್ಕಿ ಕದ್ರೊಯ್ದೊ – ದೇವುರೆ
ಮುಡ್ದ್ ನನ್ನ ಹೂಗು ಫಲುಬಂದೊ

ಬತ್ತವು ಬೆಳೆಯಲಿ ಬಾರಿ ಪೈರಾಗಲಿ
ಬತ್ತವು ಬಂದು ತುಂಬಲಿ – ಅಣ್ಣಯ್ಯ
ಅತ್ತಿಗಿ ಮುತ್ತೈದಿಯಾಗಲಿ

ಮೆಟ್ಲ ತಗ್ಗಿಳುವಂಗೆ ಅಪ್ಪನ ಮನಿಯಲ್ಲಿ
ಹಟ್ಟಿಗೆದ್ದೆಮ್ಮಿ ಗೆಲಿದವು – ಅಪ್ಪ್ನತಂಗಿ
ಮುಷ್ಟಿ ಹೊನ್ನೊಯ್ದು ಕಳುಗೂರು

ಕಿಚ್ಕೊಡು ಅಂದರೆ ಕಚ್ಕೊಂಬ ನಾಲಗಿ
ಪಚ್ಚಿಕಲ್ಲಾಣಿ ಸಿವನಾಣಿ – ದೇವರೆ
ಮಂಚ್ದ ಮ್ಯಾಲಾಡೂ ಮಗನಾಣಿ

ಅಂಟ್ಡವ್ರ್ ಬಂದು ತ್ವಾಂಟ್ದಲ್ಲಿ ಬಿಡಾರು ಬಿಟ್ರು
ಮಾತುಳ್ಳಣ್ಣಯ್ಯ ಮನಿಲಿಲ್ಲೆ – ಏನಾಯ್ತು
ಕೊಟ್ಟು ಪಡಿಯಕ್ಕಿ ಕಳುಹಿಸು

ಭೂಮಿಯ ಸುತ್ತಲೂ ಹೂಗಿನ ಪರಿಮಳು
ಭೂಮಿಯ ಒಡ್ಯ ಬಪ್ಪನು – ಅಣ್ಣಯ್ಯ
ಹೂಗಿನ ಸರುವ ಹೊತ್ಕಂಡ್

ಗಂಡನ ಮನಿಸುದ್ದಿ ಇನ್ನೇನ್ ಹೇಳಲಿ ತಾಯೆ
ಅಂಗ್ಣದಲಿ ಬಾವಿ ಅಸ್ವಂತ್ನ – ಮರದಿಂದ
ಗಾಳಿ ಬೀಸಿದರೆ ಹುಸುವಿಲ್ಲೆ

ಸುರಿಗಿಯ ಹೂಗಿನ ಸರುವ ಕಾಣೆಂದರೆ
ಬರವ ಕಂಡಳು ಅಳಿಯನ – ಸಂಗ್ತ್‌ಬಪ್ಪ
ಚೆಲುವಿಯೋ ಮಗಳು ಇನ್ನೆಷ್ಟು!

ಕರ್ಕೆರಿ ಊರ್ನಲ್ಲಿ ಕರ್ಕಿಯ ಬೆಳಿಯಲಿ
ಧರ್ಮರಾಯ ನನ್ನ ಹೆರಿಮಗನ – ಭೂಮಿಲಿ
ಸಾಲು ಚಣ್ಣಕ್ಕಿ ಬೆಳಿಯಲಿ

ಗಟ್ಟದ ಮ್ಯಾಲಿನ ಬೊಟ್ಟುಗುಳ್ಳದ ಕಾಯಿ
ಬಟ್ಟೆಣ್ಣಿ ಬಿಟ್ಟು ಹೊರವಳು – ನಮ್ತಾಯಿ
ಅಳಿಯಂಗೂ ತನ್ನ ಮಗಳಿಗೂ

ಸರಿಯೆಲಿಯೊಳಗೂ ಅದ್ದೆಲಿ ಕೊಡುವರು
ಸಿರಿಗಂಧದೊಳಗೂ ಸರಿಪಾಲು – ಕೊಡುವರು
ಸಿರಿಹರಿಯ ಬಿಟ್ಟು ಇರಲಾರಿ

ಹೆಣ್ಣುಟ್ಟಿ ಬದುಕಲಿ ಪುಣ್ಯಾಳ್ಳರ್ವಂಸಕೆ
ಗಂಡ್ಹುಟ್ಟಿ ಸಾಜ ಬಡವರಿಗೆ – ತಂಗಿಗೆ
ಉಂಡು ತಾನ್ ದಾನೊ ಕೊಡುವಳು

ಯಾಲಕ್ಕಿ ಎಳಿಸುಂಟಿ ತಾಯಿಕಟ್ಟಿದ ಬುತ್ತಿ
ಎಲ್ಲುಂಡಿ ಅಣ್ಣ ಅಗಲೂಂಟ – ಗ್ವಾಯಿಯ
ಇಳುವಂಗೆ ಬಂದರದ ಬೋಟಲಿ

ಮಂದರ್ತಿ ಮಾದೇವಿ ಮುಂದಕ್ಕೆ ನಾ ಬತ್ತಿ
ಮುಂದ್ಹುಟ್ಟಿದ್ಮಗನ ಕರ್ಕಂಡ್ – ಸಮನಾಯಿ
ಮಂದರ್ತಿ ಗೆಂಡಕ್ಕ್ ಬರುವೆನು

ಲಿಂಬಿಯ ಮರನದಿ ಗೊಂಬಿಯ ಋತುವಾಯಿ
ಲಿಂಬಿ ಹೇಳಿಕಿ ಬಾ ಒಡಿಯಂಗೆ – ಗೋಯಿಂದ್ಗೆ
ಲಿಂಗಿ ನೀಂವ್ ನೆಟ್ಟು ಫಲು ಬಂತು !

ಹೆತ್ತ ಹಿರಿಯರ ಪಾದ ಮತ್ತೆ ಗುರುಗಳ ಪಾದ
ಹೆತ್ತಮ್ಮ ಪಾದ ಸಿರಿಪಾದ – ಹಿಡ್ಕಂಡ್
ಬತ್ತಕೆ ಬಲ್ಗಿ ಹಿಡುವೆನು

* * * * *

ವರ್ಣನೆ

ಇಲ್ಲಿ ಹೇಳಿದ ಹಾಡು ದಿಲ್ಲಿಗೆ ಕೇಳಿರೆ
ದಿಲ್ಲಿ ಊರ್‌ಅರ್ಸ್ನ ತಲಿದೂಗಿ – ನಿದ್ರಿಬಂದ್
ಎಲ್ಲಿಂಥ ಹಾಡು ಪದನವು

ಕಡಿಯಕ್ಕಿ ಕೂಳ್‌ಚೆಂದೊ ಕಡೆದ ಮಜ್ಜಿಗಿ ಚೆಂದೊ
ಕಡಲಲಿ ಬಪ್ಪ ತೆರಿ ಚೆಂದೊ – ಬಸುರೂರ
ಸೂಳೇರ ಚಣ್ಣ ನೆರಿ ಚೆಂದೊ

ಹಾಡಿನ ದ್ಯನಿಕೇಂಡ್ ಬೀಡಿಗ್ಹೋದ್ ಅಣ್ಣಂದ
ಹಾಡ್ಹೇಳೆ ತಂಗಿ ದ್ಯನಿಸುದ್ದೊ – ಉಡುಪಿಯ
ಕೊಳಲು ಕಿಷ್ಟದೇವ್ರು ಉರ್‍ಸ್ವಾಂಗೆ !

ಬಡವರ ಮಗಳಲ್ಲೆ ನಡುವೊಂದು ಹಿಡಿಯಲ್ಲೆ
ನಡೆದರೆ ಬಾಳಿಸುಳಿಯಲ್ಲೆ – ತಂಗ್ಯಮ್ಮ
ನುಡಿದರೆ ಕೋಗ್ಲಿ ದ್ಯನಿಯಲ್ಲೆ

ಮುಂಜಾನಿ ಎದ್ದರೆ ಮುಂದೆ ಹಂದರ ಚೆಂದೊ
ಮುಂದೋಡಿ ಹರುವ ಹೊಳಿಚೆಂದೊ – ಕಂದನ
ಸಂದ್ಯಾನು ಮಾಡೂ ಕೈಚೆಂದೊ

ಅಡ್ಡಗುಡ್ಡಿ ಚೆಂದೊ ದೊಡ್ಡರಳಿ ಮರಚೆಂದೊ
ಗಿಡ್ಡಗಿನ ಕೈಯ ಬಳಿಚೆಂದೊ – ಎಲೆಹೆಣ್ಣೆ
ಒಡ್ಯಾಣ ಚೆಂದೊ ನಡುವಿಗೆ

ಅಂಗಡ್ಯಂಗಡಿಗಿಂತ ಗಂಧದಂಗಡಿ ಚೆಂದೊ
ಬಂಗಾರದಂಥ ಬಳಿಚೆಂದೊ – ಅದಕಿಂತ
ತಂಗ್ಯಮ್ಮ ಕರುವ ಧ್ವನಿ ಚೆಂದೊ

ಹೆಸರು ನಾಗರಕನ್ನಿ ಸಂಗಾತಿ ಸಂಪನ್ನಿ
ಕುಸಲ ಕಾಣವಳ ಕೊಡಿಹುಬ್ಬು – ಕಣ್ಣಿನ್ ಭಾವ
ಹೊಸಮನಿಗೆ ರ‍್ಯಾಖಿ ತೆಗದ್ವಾಗೆ !

ಸಂಗಾತಿ ಹೆಣ್ಣು ಜಂಬು ನೇರಳಿಹಣ್ಣು
ಮುಂಗಯ್ಯ ಹಿಡಿದು ನಗುಸುವಳು – ಮುಖಭಾವ
ಮುಂಗಾರ ಮಿಂಚು ಹೊಳದ್ವಾಂಗೆ

ಅಂಬು ಕೊಡುವವನೆ ಗೊಂಬಿ ಹಚ್ಚಡದವನೆ
ರಂಭಿ ತೊಡಿ ಮ್ಯಾಲೆ ಮಳಿರಾಯ – ಮಳಿಯನ್ನು
ಅಂಬರದಿಂದ ಕರುಣಿಸು

ಕೆರಿಯ ಕೋಡಿಲಿ ಬಿರಾಂಬ್ರ್ ಹದಿನೆಂಟು
ಕೆರಿಯಲ್ಲಿ ನೀರ ಮಗುವವಳ – ಮುಖಕಂಡ್
ಮರತರು ಜಪವ ಜಗದೀಶ್ನ

ಕಾರೆಂಬ ಕತ್ತಲಿ ಭೋರೆಂಬ ಅಂಬರು
ಭೋರಿಟ್ಟು ಬಂದ ಮಳಿರಾಯ – ರಂಭಿ ನಿನ್ನ
ವಾರಿ ಸೆರಗನ್ನು ಮರಿಮಾಡೆ

ಗುಡುಗುಡು ಗುಟ್ಟಿತು ನಡುಬಾಣ ಮಿಂಚಿತು
ಮೂಡಾದ್ರಿ ಅಂಬುದಂಡಿನ – ಕುದ್ರಿಮ್ಯಾಲೆ
ಚೆಂಡಾಡಿ ಹೊಯ್ಕೊ ಮಳಿರಾಯ

ಕೂಡಿ ಮುತ್ತೈದೇರು ಹಾಡಿ ಬತ್ತೊಳ್ವಂಗೆ
ಜೋಡೊನ್ಕಿ ಮ್ಯಾಲೆ ಗಿಣಿರಾಮ – ಕೂಕಂಡ್
ಹಾಡಿಗುತ್ತುರುವ ಕೊಡುತಿಪ್ಪ

ಬಾರಣ್ಣ ಬಳಿಗಾರ ಏರಣ್ಣ ಜಗಲಿಗೆ
ತೋರಣ್ಣ ನಿನ್ನ ನಡುತೋಳ – ಬಾಮಕ್ಕೆ
ಬಾರ್ಕೂರ ಜೋಗಿ ಬಳಿತಪ್ಪ

ಅಕ್ಕಿ ಕೊಂಬರೆಲ್ಲ ರುಕ್ಕುಮನಿಗೆ ಬನ್ನಿ
ಅಕ್ಕಿ ಮ್ಯಾಲೊಂದೂ ಗೆರಿಇಲ್ಲೆ – ಸಾವ್ಕಾರ
ಅಕ್ನ ಬಂಗಾರಕ್ಕರಗಿಲ್ಲೆ

ಅಕ್ಕಿಯ ಕೊಂಬವರೇ ರುಕ್ಕುಮನಿಗೆ ಬನ್ನಿ
ಅಕ್ಕಿಯ ಮ್ಯಾಲೊಂದೂ ಗೆರಿಇಲ್ಲೆ – ನೀಂವ್ ಕೊಡುವ
ರೊಕ್ಕದ ಮ್ಯಾಲೊಂದು ಗೆರಿ ಉಂಟು

ಜೋಡು ತೆಂಗಿನಮರ ಬಾಮಿಯ ಕಟ್ಟಿಲಿ
ಗಾಳಿಗ್ವಾಲಾಡೂ ಗಜಲಿಂಬಿ – ಮರನಲ್ಲಿ
ಗೂಡುಕಟ್ಟಿದುವು ಗಿಣಿರಾಮ

ಅಡಕಿಯ ಮರಚೆಂದೊ ಅದಕ ಸಿಂಗಾರ್ಹೂಗ್ ಚೆಂದೊ
ನಡುಚೆಂದೊ ಗಯ್ದಿ ಮನಿಚೆಂದೊ – ಚಂದ್ರಯ್ಯ
ನುಡಿದರೆ ಚೆಂದೊ ಸಭಿಯಲ್ಲಿ !

ಎಳ್ಳಿನ್ ಕಾಳಷ್ಟು ಎಳಿಬಸುರಿ ನಮ್ಮಕ್ಕ
ಹಳ್ಳ ದಾಂಟಲಿಕೆ ಅಳುಕುವಳು – ಪುರುಸನು
ಮೆಲ್ಲಗೆ ನಾಚ್ಕಿ ತೆಗಿಯೆಂಬ

ಆರೊರ್ಲ್ಲ್ ಬತ್ತೊಳ್ಕಂಡ್ ಊರೆಲ್ಲ ನೆನ್ಕಂಬಿ
ಊರೆಲ್ಲ ನನ್ನ ಒಡಹುಟ್ಟು – ತೆಂಗಿನ
ಬೇರು ಬಿಟ್ಹಾಂಗೆ ಬಳಗವು

ಪಟ್ಟಿ ಸೀರಿಯುಟ್ಟು ಹಟ್ಟಿಗೆಜ್ಜೆಯನಿಟ್ಟು
ಕಟ್ಟಿದ ತುರುಬು ಬಿಗಿದುಟ್ಟು – ತಂಗ್ಯಮ್ಮ
ಹಟ್ಟಿಯ ಬಿಟ್ಟು ಬರುತಿದ್ಲು

ಸೂರ್‌ದೇವ್ರ್ ಹೆಣ್ತಿಗೆ ಚಿನ್ನು ಗೆಯ್ಸೀರಂತೆ
ಗಿರಿಜಮ್ಮ ಅಗಸಿ ಅಗಸಿಗೆ – ಬಿಡುಮುತ್ತು
ತರಬೇಕು ಗಿರಿಜ್ನ ಮದುವಿಗು

ಕೊಕ್ಕಾಣಿ ಹೊಳಿಯಲ್ಲಿ ಕುಕ್ಕುತ್ತ್ ಮಿಂಚುತ್ತ್
ಭಾಂಗೋತ್ರಣ್ಣಯ್ಯ ಕೆಮಿ ಒಂಟಿ – ಬೆಳಕಿಗೆ
ಅಕ್ಕ ಕಾಂಗ್ತನೇ ಬರದಳು

ಚಣ್ಣ ಸ್ಯಾಮಂತ್ಗಿ ಹೂಗ್ ಎಣಿಗೆಂಟಿನ್ ಮ್ಯಾಲೆ
ಕನ್ನಡಿ ಮ್ಯಾಲೆ ಕಳ್ಸವು – ದೊಡ್ಡಕ್ನ
ಹೊನ್ನ್ ವಾಲಿಮ್ಯಾಲೆ ಹೊಸವಜ್ರೊ

ಒಳ್ಳೊಳ್ಳಿ ಕ್ಯಾದ್ಗಿ ಮುಳ್ಳ ಮ್ಯಾಲ್ಯಾಕಿಪ್ಪಿ
ಬಲ್ಲಿಗರು ನನ್ನ ಬಗಿಯರು – ಕೇಳಿರೆ
ಸರುಬೆಚ್ಚಿ ನಿನ್ನ ಮುಡುಗುವರು !

ಹಾದಿಮ್ಯಾಲ್ ಚೊಲ್ಲಿದಿ ಹಾಡ್ಹೇಳಿ ಹಾಡ್ಹೇಳಿ
ಆದ್ರಿಮಳಿ ಹೊಯ್ದ್ ಚಿಗುರಿತು – ಹೆಣ್ಣ್‌ಮಕ್ಳು
ಪಚ್ಚಿತೆನಿಯೆಂದು ಮುಡಿದರು !

ದಂಡಿಗಿ ಸುತ್ತುಲೂ ದುಂಡ್‌ಮಲ್ಲಿಗ್ಗಿ ಹೊಯ್ದ್ಹಂಗೆ
ದಂಡಿಗಿ ಸುತ್ತ ಬಳಗವು – ಮಾವ್‌ದಿಕ್ಕ್
ದಂಡಿಗಿ ಬಳಿನೇ ಹಿಡುವರು

ಹೂಗು ಬೇಲಿ ಮ್ಯಾಲೆ ಬೇರೆಲ್ಲ ಪರಿಮಳು
ದೇವರಂಥವನು ಮೈದಿನ – ತಂದ್ಹೂಗು
ದೇವ್ರಿಗೂ ನಂಗೂ ಸರಿಪಾಲು

ನಾಗರ ನಾಗಪ್ಪ ಹೋಗಪ್ಪ ಹುಂತಿಗೆ
ಸುಗ್ಗಿ ಮೊದಲಿಗೆ ಬಾ ಅಪ್ಪ – ನಮ್ಮನಿಯ
ನಾಗಮಂಡಲಕೆ ಹೆಡಿ ಎತ್ತಿ !

ಅಳಿಯ ಎಂಬುವನ್ಯಾರು ಒಳಗೆ ಉಂಬವನ್ಯಾರು
ಒಳಗೆಲ್ಲ ಗಮನ ಗಂಧದ – ದೊಡ್ಡಬ್ಬಿ
ಅಳಿಯ ಉಂಡ್‌ಬಾಯ ತೊಳದನು

ಹಳಿಯರು ಮಳಿಯರು ಇರ್‍ಕ್ ಈ ಮನಿಯಲ್ಲಿ
ಹೊಳಿಯಲ್ಲಿ ಅರಳಿ ಮರನ್ಹಾಂಗೆ – ನನ್ನ್ ತಾಯಿ
ಹೊಳ್ಹಾಡಿರ್ ಸಾಕು ಮನಿಯಲ್ಲಿ

ಆಟಗಾರನ ಗೊಂಬಿ ಆಡುಬಾಗಿಲ ಮುಂದೆ
ನಾಟಕದಣ್ಣ ಒಳಗಿಲ್ಲೆ – ಗೊಂಬಿನ
ಆಡ್ಸೊ ನಾಳ್ಬಂದು ನಯಿಲಾಟೊ

ಮಲ್ಲಿಗಿ ಹೊಕೊಯ್ದು ಅಲ್ಲಿಟ್ಟಿ ಇಲ್ಲಿಟ್ಟಿ
ಕಲ್ಲ ಮ್ಯಾಲಿಟ್ಟಿ ಕೈಬಿಟ್ಟಿ – ಬೈಂದೂರ
ತೇರ ಮ್ಯಾಲಿಟ್ಟಿ ಕೈಮುಗ್ದಿ

ಮೆಟ್ಟು ಮೆಟ್ಕಲ್‌ಲಿ ಚೆಂದೊ ಹಟ್ಟಿಹಣಿಯಲಿ ಚೆಂದೊ
ಬೆಟ್ಟದಲಿ ಬೆದರ ಕೊಡಿ ಚೆಂದೊ – ಅಣ್ಣಯ್ಯ
ದಟ್ಟಿ ಸುತ್ತಿದರೆ ನಡುಚೆಂದೊ

ಮೀಸಲಾರದ ಗುಂಡಿ ದಾಂಟಲಾರದ ಹೊಳಿ
ಮಾನ್ಸ್‌ಸೌಂದ್ರ್‌ದಾಚಿ ತವರ್ಮನಿ – ಒಳಗಿನ
ಬಾಸಿಂಗ್ದ ಬಿಸಿಲು ಹೊಳದವು

ಅಕ್ಕತಂಗ್ಯರ ಆಂಟ ಅರಳಿ ಕಟ್ಟೆಲಿ ಕೂಟ
ದ್ಯಕ್ಕ್ಯರ ಆಂಟ ಜಗ್ಲಿಲಿ – ಉಡುಪಿಯ
ಸಿರಿಕಿಷ್ಣ್ನ ಆಂಟ ಮಠದಲ್ಲಿ

ಸುಗ್ಗಿಯ ಬತ್ತವು ಮುಗ್ಗಿದರೆ ಕೆಡುವುದೆ
ಹೆಗ್ಡೇರ ತಂಗ್ಯ ಬಡವಂಗೆ – ಕೊಟ್ಟರೆ
ನುಗ್ಗಿಹೂ ಹಾಂಗೆ ನಗುವಳು

ಎಲ್ಲರ ಮಕ್ಳ್ ಹಾಂಗೆ ಅಲ್ಲಕಾಣ್ ನನ್ನಯ್ಯ
ನಲ್ಲರಳುಗಣ್ಣು ನೆಗಿಮುಕು – ಕಾಮನ
ಬಿಲ್ಲು ಹೋಲ್ತಾವೆ ಕೊಡಿಹುಬ್ಬು !

ಸಿಕ್ಕಿತು ಅರಗಿಣಿ ಸೀಗಿಯ ಮೆಳಿಯಲ್ಲಿ
ಕೊಕ್ಕೆಲ್ಲ ಮುತ್ತುನವರತ್ನ – ಅರಗಿಣಿ
ಸಿಕ್ಕಿತು ಶಿವನ ದಯದಿಂದ

ತ್ವಾಟಕ್ಹೋದ್ ಪುಟ್ಟಯ್ಯ ಊಂಟಕ್ಕ್ ಬರಲಿಲ್ಲೆ
ತ್ವಾಟದ ಹೂಗ ತಲಿತುಂಬ – ಮುಡ್ಕಂಡ್
ಊಂಟದ್ಹಂಬಲವ ಮರತನು

ನೆಲ್ಲಿನ ಅಕ್ಕಿಲಿ ಕುಸುಮವ ತೆಗಿಯೋಳ
ನೆಲ್ಲಿಕಾಯೊಳಗೆ ಒಳನಾರ – ತೆಗಿಯೋಳ
ಎಲ್ಲಿ ತಂದ್ಯಣ್ಣ ಚೆಲುವಿಯ

ಮಳಿಯು ಹೋಯಿತು ಎಂದು ಮಳಿರಾಯ್ನ ಬಯ್ಬ್ಯಾಡ
ಸೆರಗಿಲಿ ಹೊನ್ನ ಒಕ್ಕಳ – ಕಟ್ಕಂಡ್
ಮಳಿರಾಯ ಸಾಲಕ್ಹೋಗಿಹನು

ಮಾಯಿನ ಹೂಗಿಗೆ ಯಾವ ಕಳ್ಳನು ಬಂದ
ದೇಯೇಂದ್ರ ತನ್ನ ಮಡದಿಯ – ತುರುಬಿಗೆ
ಮಾಯ್ದಿಂದ ಮುಗಿಲ ಕಳುಹಿದ

ಹಚ್ಚಿಕೊಂಡಬ್ಬಿಗೆ ಚೊಚ್ಚಲ ಮಗಳಾದಿ
ಬಿಚ್ಚ್ಯಾಡಿಕೊಳುವ ವೈರಿಯ – ಮನಿಮುಂದೆ
ಬಿಚ್ಚುಗತ್ತ್ಯಾಗಿ ಹೊಳದೇನು

ಬಣ್ಣಬಣ್ಣದ ಹೂಗೆ ಬಾಡಿ ಹಾಳಾಗ್ದಿರು
ಸಣ್ಣ ಕಂದಮ್ಮ ನೆರಿವಳು – ಆ ಹೂಗ
ಪನ್ನೀರಿಗದ್ದಿ ಮುಡಿಸೇನು

ಅಕ್ಕಿ ಚೊಕ್ಕದಿ ಚೆಂದೊ ಬಿಕ್ಕಿ ಬೆಳಿವುದು ಚೆಂದೊ
ನಕ್ಷತ್ರು ಚೆಂದೊ ಅನುರಾಧಿ – ಅಣ್ಣಯ್ನ
ಮಕ್ಳಲಿ ಚೆಂದೊ ಹೆರಿಮಗ

ಕಸವ ಗುಡಿಸುವ ಹೆಣ್ಣೆ ಹಸನಾಯ್ತು ನಿನ್ನೊಟ್ಟಿ
ಹಸುಗೂಸಿನ್ಹಾಂಗೆ ನಿನ್ನ್ ತಿಪ್ಪಿ – ದಿನದಿನಕು
ಹಸುರು ಬಂಗಾರ ತುರುತಿಪ್ಪೊ

ಹಾಸುಕಲ್ಲಿನ್ ಮ್ಯಾಲೆ ವಾಸವಾಗಿರು ಸ್ವಾಮಿ
ಸಾಸಿರನಾಮ್ದ ಒಡಿಯರು – ತಿಮ್ಮಪ್ಪ
ವಾಸವಾಗ್ಯಾರು ಗಿರಿಮ್ಯಾಲೆ

ಬರುಕ್ಹೋದ್ಮಗುವಿನ ಕುರು ಏನಹೇಳಲಿ
ಬರುವಾಲಿ ಕಂಟೊ ಬಲಗೈಲಿ – ಹಿಡ್ಕಂಡ್
ಬರುವ ಬಲ್ಲಿಗರ ನಡೂಕಿರುವ

ಅರವತ್ತ್ ಗಿಣಿಬಂದು ಎರಗಿ ನೀರ್ ಕುಡುವಂಗೆ
ಅರವತ್ತಂಕರ್ಕಿ ಕುಸಿದವು – ಅಪ್ಪಯ್ಯ
ಅರುಕಲ್ಲ ನಿತ್ತು ಕಡಿಯಿಸಿ

ಬೆನ್ನಾಹ್ಕಿ ನಡದರೂ ಬೆನ್ನ ಬಾಮವ ಕಾಣಿ
ಬೆನ್ನೊಳಗಿಪ್ಪ ಸುಳಿಕಾಣಿ – ನಮ್ಮಗುವಿನ
ಬೆನ್ನಿಹ್ಂದೆ ಬಪ್ಪೊ ಜನುಕಾಣಿ

ಬಳ್ಳುವ ನಡುವಿಗೆ ಕೊಳ್ಳಿನ್ಯಾಗಳ ಇಟ್ಟು
ಬಳ್ಳುತ್ತ ಬಸ್ಲಿ ನೆಡುವನು – ಅಣ್ಣಯ್ಯ
ಕೊಳ್ಕಿ ತಪ್ಪಿದ್ದು ತೆಳಿಲಿಲ್ಲೆ

ಕಡದ ಗಾಜಿನ ಬಳಿನ ನಡಗಿ ನಾಗನ ಹೆಡಿ
ನಡದರೆ ಗಮ್ಮುಗೈಲೆಂದು – ಬಾವಯ್ಯ
ಮಡದಿ ಮೆಟ್ಲಿಳುವ ಸಡಗರ

ಅರ್ಸ್ನಗ್ವಾರ್ಟಿ ಹೂಗ ತರ್ಸಿ ಜಡಿಯ ಹೊಯ್ಸಿ
ಅರಸು ಭೂಪಾಲ್ರ ಮಡದಿ – ತಂಗ್ಯಮ್ಮಗೆ
ಚರಸಿ ಮಲ್ಗಿಯ ಮುಡ್ಸೂವ

ಅರಸು ಬಪ್ರ್ ಅಂತ್ಹೇಳಿ ಹೆಲಸೆಲ್ಲ ಹಣ್ಣಾದೊ
ವರ್ಸದ ನಿಂಬಿ ಫಲುಬಂದೊ – ಅಣ್ಣಯ್ಯ
ಅರಸಲ್ಲ ನಿನ್ನ ಹೆರಿಯಣ್ಣ

ಕಡಗದ ಕೈಯಳು ನುಡಿದಳು ನ್ಯಾಯವ
ಬಡಗಿನ ಬಾಳಿ ತನಗೆಂದು – ತಂಗ್ಯಮ್ಮ
ನುಡಿದಳ್ ಅಪ್ಪಯ್ನ ದಯದಿಂದ

ಕ್ವಾಟೆಯ ಸುತ್ತಲೂ ರಾಟಿ ಬಿರುಸನು ಹೂಡಿ
ಲೂಟಿ ಕಾಣ್ತಾಯಿ ನಿನ್ಮಗ – ತಮ್ಮಯ್ಯ
ಕ್ವಾಟೆ ಒಡ್ಕಂಡ್ ಬರುವನು

ತಿರುಗಿರೆ ಹಗಲಗೆ ಅಗಲಿನ ಪರಿಮಳು
ಇರುಳೆದ್ದು ತಮ್ಮ ತಿರುಗಿರೆ – ಗಂಧದ
ಬರಣಿಯ ಬಾಯ ತಗದ್ಹಾಂಗ

ಬಲ್ಲಿಗನ ಮನಿಯ ಬಳ್ಳಿಯ ಹೆಸರೇನು
ಬೆಳ್ಳಿಯ ಹಯ್ಣಿ ಬಿಡುನೀರು – ಬಿಡುಬಳ್ಳಿ
ಬಲ್ಲಿಗ ಮೆಲುವ ಚಿಗುರೆಲಿ

ಹಂಗಾರ್ಹೂಗಿನ ಬಣ್ಣೊ ಸಿಂಗಾರ್ಹೂಗಿನ ಸುದ್ದೊ
ಸಂಗಡ ಕೂಡಿ ನಿಲದಿರು – ಬಾಲಯ್ಯ
ಕಂಗಳ ದಿಷ್ಟಿ ಒಳಗ್ಹೋಗು

ಮೂಡಿನ ಸೂರ್ಯಮ್ಮ ಮೂಡುವರು ನಾ ಬಲ್ಲಿ
ಮೂಡಿನ ಬೆದರ ಕಣಿಯಡ್ಡೆ – ಸೂರ್ಯಮ್ಮ
ಮುಳುಗುವರು ಕಡಲ ತೆರಿಯಡ್ಡೆ

ಪಂತುಳ್ಳರ್ ಕ್ವಾಟಿಲಿ ಮಿಂಚ್ತ್ ಬೀಮ್ನ್ಬಿಲ್ಲು
ಪಂತುಳ್ಳರ್ ಕ್ವಾಟಿ ನಗರವು – ಹೆದ್ದಾರಿಲಿ
ಮಿಂಚಿತಣ್ಣಯ್ನ ಮಣಿತೋಳು

ಗುಡುಗಿತು ಮಿಂಚಿತು ಸೆಡ್ಲ್‌ಮಿಂಚು ಎರಗಿತು
ನಡುಗಟ್ಟದಲ್ಲಿ ಆಗುಂಬಿ – ಮಳಿಹೊಯ್ದ್
ಬಡಗಿನ ಹೇರು ನೆನ್ದ್ ಹೋದೋ

ಅಣ್ಣಗೂ ತಮ್ಮಗೂ ಅಂಬುಬಿಲ್ಲಿನ ಕೋವಿ
ಅಣ್ಣ ನೀ ಮುಂದೆ ನಡಿಯೆಂಬ – ತಮ್ಮಯ್ಯ
ಬೆನ್ನಿಗ್ಹಾರಿಸಿದ ಕುದುರಿಯ

ಹೊನ್ನಳದು ಹೊನ್ನಳದು ಬೆನ್ನುನೊಂದಿತು ಎಂದು
ಹೊನ್ನಳ್ದ ಕಳ್ಸಿಗ್ಗ ತಲಿದಿಂಬ್ – ಹಾಸ್ಗಿಲಿ
ಅಣ್ಣ ಗೋಯಿಂದ ಒರಗೀರು

ಈ ಕೋಳಿ ಕೂಗಿರೆ ಈ ರಾಜ್ಯು ಬೆಳ್ಗಕ್ಕ
ಈ ಕೋಳಿಯಲ್ಲ ನಯಿಲ್ಹಿಂಡು – ನಾರಾಯ್ಣ್‌ಸ್ವಾಮಿ
ನೀ ಕೂಗಿ ರಾಜ್ಯು ಬೆಳ್ಗಾಯ್ತು

ಕಲ್ಲ್‌ಮ್ಯಾಲೆ ನಿತ್ಕಂಡ್ ನಲ್ಲನು ನಲಿವಂಗೆ
ಕಲ್ಲ್ ಕಾದು ಪದು ಬೆಗರಾದೊ – ಎಲೆನಾರಿ
ನಲ್ಲ ಚಾಪ್ದಿಲಿ ಒರಗೆಂದ

ಅಳಿ ಒರ್‍ಗ್ನ ಜಗ್ಲಿಗೆ ಏನ್ಹಾಕಿ ಒರದಿರಿ
ನೆಲ ಗಂಧನ್ಹಾಕಿ ಒರದಿರಿ – ಕಮಲಮ್ಮ
ಅಳಿ ಬಂದರಲ್ಲೇ ಒರಗಲಿ

ಗಂಡನ ಮನಿಯಲ್ಲಿ ಕಂಡಿರ‍್ಯಾ ಜಲಜಮ್ಮ
ಗಿಂಡಿಗಿ ಹಾಲು ಕರುವಳು – ಅವಳ್ಕೈಯ
ಕಂಡಿರ‍್ಯಾ ಕಡಗು ಒಯ್ಕೀಲು

ತಾರಿಕಿ ಬೆಳಕಿಗೆ ತೋರಿತು ಸತ್ತಿಗಿ
ಊರು ಕುಂದಾಪ್ರ್ದ ಬಯಲಲ್ಲಿ – ದೇವರು
ನೀರಿಗೆ ಹೋಯಿ ಬಪ್ಪಂಗೆ

ಮುತ್ತು ಮಾರುತ ಬಂದ ಕೇರಿ ಕೇರಿಯ ಮ್ಯಾಲೆ
ಮುತ್ತು ಮಾರ‍್ವನ ಮುಕುಚೆಂದೊ – ಅಣ್ಣಯ್ಯ
ಮುತ್ತುಗಳಿಗಿಂತ ನೀ ಚೆಂದೊ

ದುಂಡುಮಲ್ಲಿಗಿ ಹೂಗ ಚೆಂಡ್ಕಟ್ಟಿ ಮುಡ್ಕಂಡ
ದಿಂಡೀರ್ ಕಾಣಣ್ಣ ಬಯ್ಲಲ್ಲಿ – ಅಣ್ಣಯ್ಯ
ಚೆಂಡಾಡಿ ಗೆಂಡೊ ತೊಳುವರು

ಹೂಗಿನ ಪರಿಮಳು ಭೂಮಿಯ ಸುತ್ತೆಲ್ಲ
ಜಾಗ ಕೊಟ್ಟೊಡ್ಯ ಬಪ್ಪರು – ಒಡಿಯರ
ಹೂಗಿನ ವಲ್ಲಿ ಹಗಲಲ್ಲಿ

ಸಾಸ್ಮಿ ತ್ವಾರದ ಚಿನ್ನು ಸೂಸ್ಮದ ಒರಗಲ್ಲು
ನೂತ್ನದಕ್ಸಾಲಿ ಗೆಯ್ದ್ಕಂಡು – ಗಿಜ್ಜಿತಿಕ್ಕೂ
ಬಸ್ವಮ್ನ ಗಿಡ್ಡ ಕೊರ‍್ಲಿಗೆ

ಬಿರುಸು ಬಾಣವ ಹುಗಿದು ಬಾಮಿಯ ಕಟ್ಟಿಲಿ
ಅರಸು ಭೋಜಯ್ಯ ಬಳಿಮಿಂದು – ಅವ್ನ್‌ಭಾವ
ಸರಮಲ್ಲಿಗಿಲಿ ಬೆಗರುದ್ದಿ

ಅಡಗುವ ಮಗಳಲ್ಲ ಯಾರ‍್ಯರೂ ಬಂದ್ರೂ ನಾ
ಚೋಡಿನ ಕುದುರಿ ಕಿರಿಮಗ – ಬಂದರೆ
ಅಡಗುವಿ ಹಾಲನೊರಿ ಹಾಂಗೆ

ಕಂಡಿರ್‍ಯಾ ಬಯಲಂಗೆ ಕಂಡಿರ್‍ಯಾ ಚೋಜಿಗ
ಗಂಡಿನ ತಂಗಿ ಬಪ್ಪಳು – ಎಂದ್‌ಕೇಂಡ್
ಕಯ್ಡಳು ಸಗ್ಣಿ ಬಾಗ್ಲಿಗೆ

ಕರದವನ್ಯಾರಾಳ ಕೊಲ್ಲೂರ ಘಾಟಿಲಿ
ಸೇರು ನ್ಯಾಗಳದ ನಡುವೋನು – ಭೋಜಯ್ಯ
ಕರದನು ಆಳ ಬಣ್ಣಿಸಿ

ಹಟ್ಟಂಗ್ಡಿ ದಾರಿ ಮ್ಯಾಲ್ ಸಾಲುಸಂಪಿಗಿ ಮರ
ಕಟ್ಟಿ ಕಟ್ಟಿಸುವಿ ಬುಡುಕೆಲ್ಲ – ಚಿನ್ನದ
ಮಿಟ್ಟಿ ಕೂಡಿಸುವಿ ಎಗಿಮ್ಯಾಲೆ !

ಬಯ್ಬಯ್ ಆಪಂಗೆ ಬಯ್ಲಲ್ ಬಪ್ಪವನ್ಯಾರು
ಬಯ್ಯಿನ ಮಲ್ಗಿ ಮುಡ್ಕಂಡ್ – ಅಣ್ಣಯ್ಯ
ಹೋಯಿ ದೊರಿಮನಿಗೆ ಬರುವನು

ಇಸ್ಕೂಲಿಗ್ಹೋಪ್ ಮಗಿಗೆ ಬಿಸಿಗಂಜಿ ಹಸಿನ್‌ಹಾಲು
ಹಸುರಂಗಿ ಮ್ಯಾಲೆ ಗಡಿಯಾಳ – ಕಾಗ್ತ್‌ಕೊಡಿ
ಇಸೂಲಿಗ್ಹೋದ ಮಗ ಬಂದ

ಎಲ್ಲರ ಮಾತ್‌ಕೇಂಡ್ ಬೆಲ್ಲು ಮಟ್ಟಿಲಿ ಕಟ್ಟಿ
ಒಳ್ಳಿಯ ಸೀರಿ ಕಲಿಯಾದೊ – ಮಡುವಾಳ
ಎಳ್ಳು ನೀರಿನಲಿ ಮಡಿಮಾಡು

ಗಂಡಹೆಂಡಿರ ಮಾತು ಗುಂಡು ಹೊಡದ ಹಾಂಗೆ
ಹೆಡಿ ಬಿಚ್ಚಿ ಹಾಂವು ಎಣಿಯಾಡಿ – ತಲಿದೂಗಿ
ಗಡಗುಟ್ಟಿ ಕಂಚಿನ್ ಹೆಬ್ಬಾಗ್ಲು

ಕೋಳಿಯ ಕಾಳಗ ಸಲುವುದು ಯಾರಿಗೆ
ಬಾಳಿಮಂಟಪದ ಭೈರವಗೆ – ಸಿರ್ಸಿಯ
ಕೋಳಿ ಕಾಳಗ ಸಲುವುದು

ಬಂದ್ರಬಂದರಕಾಯಿ ಬಂದ್ರಗಂಗೊಳ್ಳಿ ಚೆಂದೊ
ಬಂದ್ರಲ್ಲಿ ಕೂತ ದೊರಿಚೆಂದೊ – ಬಾಬಣ್ಣ
ಬಂದಿರೆ ಚೆಂದೊ ದೊರಿ ಮುಂದೆ

ತೇರಿನ್ ಕೊಡಿಮ್ಯಾಲೆ ತೋರಿತು ಸತ್ತಿಗಿ
ಊರು ಕುಂದಾಪ್ರ್‌ದ್ ಬಯಲಿಗೂ – ದೇವರು
ತೀರುತಕ್ ಹೋಯಿ ತಿರುಗೀರು

ಯಾತರಲಿ ಗಟ್ಟಿಗ ಆಚಾರಿ ಅಂತಯ್ಯ
ಸೀತಿ ಸಿರಿರಾಮ ಒರಗೂ – ಮಂಚದ ಮ್ಯಾಲೆ
ಮಾತಿನರಗಿಳಿನೇ ಬರದನು

ಹಳಿಯಳು ಹಾಡ್ಹೇಳ್ರೆ ಹಲಗಿ ಬಾರಸಿದ್ಹಾಂಗೆ
ಎಳಿಯಳು ಕಿನ್ರ ಉರ್ಸ್‌ದ್ಹಾಂಗೆ – ಲಕ್ಷ್ಮಮ್ಮ
ಎಳಿಯಳು ಹೇಳು ದ್ಯನಿಯೆಳ್ದು

ಹಳಿಯರು ಮಳಿಯರು ಇಪ್ಪರೀ ಮನಿಯಲ್ಲಿ
ಹೊಳಿ ಹೊನ್ನಾವ್ರ್‌ದ್ ಸಸಿಹಾಂಗೆ – ಗಂಗಮ್ಮ
ಹೊಳ್ದಾದಿರ್ ಸಾಕು ಮನಿಯಲ್ಲಿ

ಹಸ್ರ್‌ಕೆಂಪಿನೊಳಗೆ ಹಸ್ರ್‌ಕೆಂಪು ಗೌರಮ್ಮ
ಬಸ್ರ್ ಬಂದ್ರ್ ಹ್ಯಾಂಗೆ ನಡಿವರು – ಸುಗ್ಗಿಯ
ಕೆಸ್ರ್ ಗೆದ್ದಿಲ್ ಬಸವ ನಡದ್ಹಾಂಗೆ

ಅಕ್ಕಿಕಲ್ಲ್ ಹೆಕ್ದ್ ಹಾಂಗೆ ಮಕ್ಳು ನಮ್ಮಕ್ಕಂಗೆ
ಬುಕ್ಕಿ ಹೂಗ್ ಮುಡುವ ಸೊಸಿಯರು – ಎಡನಡೊಕ್
ಮಕ್ಕಳು ತುಂಬ ಹೂಗ್ ಮುಡುವ

ಪರಿಮಳದ್ಹೂಗೇ ಇರುಳೆಲ್ಲಿಗ್ಹೋಯಿದ್ದಿ
ಸರಸೋತಿ ನಿನ್ನ ಹುಡುಕೀರು – ಕುಂದಾಪ್ರಿಲಿ
ಅರವತ್ತಂಗಡಿಯ ಒಳಗೆಲ್ಲ

ಹೂಗು ಹೂಗಿನ ಕತ್ತಿ ಹೂಗಿನ ಗಿಜ್ಕತ್ತಿ
ಯಾವೂರ ಗರತಿ ಬರುವಳು – ಲಕ್ಷ್ಮಮ್ಮ
ಅವಳ್ಹಿಂದೆ ಮುಂದೆ ತೊಟ್ಟಿಲು

ಉತ್ತುಮರ ನಾ ಕಂಡಿ ಉಪ್ಪರ್ಗಿ ಮ್ಯಾಲೆ
ಮುತ್ತು ಮುಕ್ಕಳಿಸಿ ಉಗಿದರು – ಮಾರಾಯ್ರೇ
ಉತ್ತುಮರ ಕಂಡಿ ಸಭಿಯೊಳಗೆ

ಅತ್ತಿತ್ತ ಕಂಡರೂ ಅಪ್ಪಿಮಾಯಿನ ಮರ
ಎತ್ತುಂಟಣ್ಣಯ್ನ ಅರಮನಿ – ಹೆಬ್ಬಾಗ್ಲಿಲಿ
ಪಚ್ಚೆಕುಂಬುಂಟು ಹದಿನಾರು

ತೆಂಕಿನಕ್ಸಲಿ ಗಂಡು ಕಂಕ್ಣನೆಯ್ಯೊದ್ ಚೆಂದೊ
ತೆಂಕಿನ್ ಬಲ್ಲಿಗರ ಮಗಳಿಗೆ – ಗುಲಾಬಿಗೆ
ಕಂಕ್ಣ ಇಡುವಲ್ಲಿ ಕೈಚಣ್ಣ

ಕ್ವಾಟ ಕೋಟೇಸುರೊ ನಾಟ್ಕದ ಗಂಗೊಳ್ಳಿ
ಪ್ಯಾಟ ಪಟ್ಟಣದ ಬಸುರೂರು – ಹೆಣ್ಮಕ್ಳು
ನಾಟಕದ ನೆಗಿಯ ನೆಗುವರು !

ಹಂಡಿಯ ಹಿಡ್ಕಂಡ್ ಹುಂಡಿ ಬಾರೆಂದಳು
ಬಂಡಿ ಸಾವ್ಕಾರ್ನ ಕಿರಿತಂಗಿ – ಪಾರೋತಿ
ಹಂಡಿ ತುಂಬಿದಳು ನೊರಿಹಾಲು

ನಾಗನ ಕಲ್ಮೆಟ್ಟಿ ಹೂಗ ಕೊಯ್ವರ್‍ಯಾರು
ನಾಗೇಂದ್ರ್ನ ಅಳಿಯ ಪದುಮಯ್ಯ – ಕೊಯ್ದ್‌ಹೂಗ
ನಾಗಕನ್ನೀರು ಮುಡುವರು !

ಎಮ್ಮಿಯ ಕರುಬಂದು ಕೆಮ್ಮಣ್ಣು ತೊಳಿದುವು
ದಮ್ಮಯ್ಯ ಅಮ್ಮ ಕರುಕಟ್ಟು – ಸಿರ್ಸಿಯ
ಅಮ್ಮನವ್ರ್ ಚಾವ್ಡಿ ಕೆಸರಾದೊ

ಆಚಾರಿ ಸಾಲಿಲಿ ಆಚಿ ಕೂತವನ್ಯಾರೆ
ಆ ತಂಗಿ ಗಂಡ ಮೈದಿನ – ಕೂಕಂಡ್
ಆಚಾರಿ ಕೆಲ್ಸ ಮಾಡ್ತಿದ್ದ

ದೇವರ ಮಗನೆಂದು ದೇವರ ಹೆಸರಿಟ್ಟು
ದೇವರ ವಜ್ರ ಕೆಮಿಗಿಟ್ಟು – ಚಂದ್ರಯ್ಯ
ದೇವರ ಮಗನೆ ಸುಖಬಾಳು

ತಂಗಿ ಗಂಡನ ಹೆಸರು ಒಂದಲ್ಲ ಎಯ್ಡಲ್ಲ
ಗಂಗ ಗಾರಯ್ಯ ಗಣಪಯ್ಯ – ಕುಂದಾಪ್ರ್‌ದ್
ಲಿಂಗದಾರಯ್ಯ ಮೈದಿನ

ದಡ್ಡುಬುಡ್ಡೆಂಬುದು ದೊಡ್ಡರಾಳುವ ಸೀಮಿ
ಗುಡ್ಡಿಮ್ಯಾಲಾದೊ ನಗರವು – ಅಬ್ಬಿಗೆ
ಬಿಡುಮುತ್ತು ವಾಲಿ ಮ್ಯಾಲಾದೊ

ಅಕ್ಸಾಲಿ ಇಲ್ದೆ ಮುಗುಳು ಮೂಗುತಿ ಇಲ್ಲೆ
ಲಕ್ಷಣು ಇಲ್ಲೆ ಮುಖದಂಗೆ – ಈ ಊರ
ಅಕ್ಸಾಲಿ ನೂತ್ನ ಕಲಿಲಿಲ್ಲೆ

ದೂರಿಂದ ಬಪ್ಪಂಗೆ ದೂಳೆಲ್ಲ ಪರಿಮಳು
ಸೂರಣ್ಣ ಕ್ಯಾದ್ಗಿ ಮುಡ್ಕಂಡ್ – ಅಣ್ಣಯ್ಯ
ಸೂರಿದೇವ್ರ್ ಹಾಂಗೆ ಬರುವರು

ಚಣ್ಣಬಣ್ಣದ ಸೂರ್ಯ ಮೂಡಿಂದ ಮೂಡುವರು
ಕಾಣೂಕೆ ನಿಮ್ಮ ತೆರಪಿಲ್ಲೆ – ನೀಂವ್‌ಕೊಟ್ಟ
ಹೊನ್ನಂಥ ಮನಿಯ ಕೆಲಸವು

ನೋಡಿನಿ ನೋಡಿನಿ ಗ್ವಾಡಿಯ ಚೆಂದವ
ಸೇಡಿ ಇನ್ಯಾರೆ ಬರದರು – ನಮ್ಮನಿಯ
ಗ್ವಾಡಿಗಕ್ಸರವ ಬರದ್ವಾಂಗೆ

ನೀಲದೊಂಟಿಯನಿಟ್ಟಿ ತಾನು ಕರಿಯನೆಂದು
ಹಾಲೊಳು ಗಂಧ ತೆಗದಿಟ್ಟ – ಮಾವಯ್ಯ
ಕುಲಕೆ ನಮ್‌ಕರಿಯ ಅಪುರೂಪು

ಉದುರುದುರು ಮಲ್ಲಿಗಿ ಉದುರು ನಮ್ಮಂಗಳಕೆ
ಚದುರಂಗನಾಡಿ ಬಪ್ಪಂಗೆ – ಇಲ್ಲಿಗೆ
ಉದುರು ನಾರಾಯ್ಣ್ಣ ಸೆರಗಿಗೆ

ಗಿಜ್ಜಿಕಾಲ್ ಜಲಜಮ್ಮ ಮಜ್ಗಿ ಬೇಡಲು ಹೋಯಿ
ಗಿಜ್ಜಿಗೆ ಸೆಡಿದು ಕೊನಿಮುಳ್ಳು – ಮಾವ್ನ್‌ಕೈಲಿ
ಗುಜ್ಜಾಯಿ ಕಳ್ಳಿ ನೆಡ್ಕಂಡ್ಲ್

ಗೌಜುಗದ್ದಲವೇನು ಕೋಳಿಯ ಪಡಿಯಲ್ಲಿ
ಮುದ್ದು ನಾರಾಯ್ಣ್ಣ ಕೈತಟ್ಟಿ – ನಗ್ವಂಗೆ
ವಜ್ರದುಂಗುರದ ಹೊಳ ಕಾಣಿ

ಕತ್ತಲಿ ಮನಿಯಲ್ಲಿ ಯಾತಕೆ ಕೈಬೆಳಕು
ವಜ್ರದ ಮುಡಿಯ ಸೊಸಿಬಂದು – ತಿರ್ಗ್ವಾಗ
ಕತ್ತಲಿ ಮನಿಯು ಬೆಳಕಕ್ಕು

ನಿಲ್ಲುನಿಲ್ಲಂದರೆ ನಿಲ್ಲದೆ ಸರಸೋತಿ
ಎಲ್ಲರಿಗಿಂತ ಪತಿವ್ರತಿ – ತಿಂಗ್ಳ್‌ದೇವ್ರ್
ಎಲ್ಲರಂಗುಳಕೆ ಒಲಿದರು

ಚಣ್ಣನು ಸೇಕರ ಚೀಣಿ ಆಡಿದ ಕೊಪ್ಪು
ಕಿನ್ನೇರಿದಾಚಿ ನಗರವು – ಕೊಪ್ಪ್‌ತಾಗಿ
ಹೆಣ್ಮಕ್ಳ ಮುತ್ತು ಉದುರಿತು

ಕಲ್ಲುಕಟ್ಟಿದ ಬಾಮಿ ಬೆಲ್ಲದಂಥ ಪನ್ನೀರು
ಎಲ್ಲವರುಂಡು ಉಗುಳೀರು – ನಮ್ತಾಯ
ಅಳಿದಿಕ್ಕಳುಂಡು ಒರಗೀರು

ಎಲ್ಲ ದೇವರಿಗೂ ನೆಲ್ಲಿಕ್ಕಿ ನೇವೇದ್ಯ
ಕಲ್ಲಗುಡ್ಡಟ್ಟಿನ್ ಗಣ್ಪತಿಗೆ – ಅಣ್ಣಯ್ಯ
ಹಾಲು ಹಣ್ಣಿನಲಿ ನೇವೇದ್ಯ

ಯಾರೆಂದು ನಾ ಕಾಣಿ ಮೂರಾಗಿ ಬರುತಾರೆ
ನಾರಾಯಣ ಒಬ್ಬ ಹರಿ ಒಬ್ಬ – ನಮ್ಮಕ್ಕ
ವಾಲಿ ಓದಿಸುವ ಮಗದೊಬ್ಬ

ಅತ್ತಿಯ ಮರನಡಿ ನಿತ್ತು ಪುಸ್ತುಕುಬಿಚ್ಚಿ
ಅತ್ತಿಮರ ಚಿಗುರಿ ಮುಖಬೆಗರಿ – ನಾರಾಯಣ
ಹೊತ್ತ್ಹೋರೂ ಸಂಧಿ ಬಿಳಿಲಿಲ್ಲೆ

ಹೊತ್ತು ಮೂಡೂಕಿರೆ ಹೊಸ್ತಿಲದಾಂಟ್ಕಿರೆ
ಎತ್ತಿಂದ ಏಳು ಕದಿಕೇಂಡು – ಸೀರೂರಿಂದ
ಉತ್ತುಮರು ಮನಿಗೆ ಬರುತಾರೆ

ಕಾಶಿ ಯಾತ್ರಿಗ್ಹೋಯಿ ದೇಸ್ದ್ ಮ್ಯಾಲೆ ಬಪ್ಪಂಗೆ
ಕಾಸ್ ಕೊಟ್ರೂ ಉದಕ ಸಿಕ್ಕಿಲ್ಲೆ – ತಮ್ಮಯ್ನ
ಹೆಸ್ತ್ರೇಳಿರ್‍ಯಾಲುದ್ಕ ಸಿಕ್ಕಿತು

ಯಾಲಕ್ಕಿ ಮರನೆ ಎಲಿಗೊಂದ್ ಕಾಯಾಗು
ತಲಿಬಾಗು ಮರನೆ ಗಂದದ – ಮದರ್ತಿಲಿ
ನೆಳಲಾಗು ದ್ಯಕ್ಕಿ ಕುಣುವಲಿ

ಕಡಿಯಕ್ಕಿ ಕೂಳ್ಮಾಡಿ ಇಡಿಯಕ್ಕಿ ಶಾಮ್ಗಿಮಾಡಿ
ನಡುಮದ್ದಿನ್ ಅಕ್ಕಿ ಸಜ್ಜಿಗಿ – ಮಾಡಿಕಿ
ನಡ್ಗಿನ್ ಬಾಪ್ನಿಗೆ ಉಣಹೇಳಿ

ಕಡಿದು ತುಂಡನು ಮಾಡಿ ಕರಿಯ ಕಬ್ಬಿನ ಕೋಲ
ಇಲ್ಲಿಂದ ಕ್ವಾಟಕ್ಕ್ ತಳಿಹೂಡಿ – ನಮ್ತಾಯಿ
ತಳಿಯಡ್ಡೆ ಅಳಿನ ಮುಕುನೋಡಿ

ಬರುಕ್ಹೋಪ ಮಗುವಿಗೆ ಭಾರತ ಪುಸ್ತುಕು
ಬಾಲಪುರಿ ಸಂದ ಐಗಳು – ಚಂದ್ರಯ್ಗೆ
ಭಾರತದ ಕಥಿಯ ಕಲಿಸೂರು

ಸಾಪ್ಕಾರ ಹೊದಿವುದು ಸೌಕೂರ ಸಕಲಾತಿ
ಸಬ್ಕಾರ ಹಾಕಿ ಮಡಿಮಾಡಿ – ನಾರಾಯ್ಣ್ನ
ಸಾಪ್ಕಾರ ಎಂದು ಕರದರು

ಊಂಟಕ್ಕೆ ಹೇಳ್ಬನ್ನಿ ಉಂಗಿಲ್ ಕೈಯಾತಂಗೆ
ಎಂಟೆಂಟು ತಾತಿ ಕೊರಳವ್ಳೇ – ಗಿರಿಜಮ್ಮ
ಊಂಟಕ್ಕಾವಂಗೆ ಹೇಳ್ಬಾರೆ

ಬೀಸುವ ಗಾಳಿಯೆ ಬೀಸು ನಮ್ಮ್ ಜಗಲಿಗೂ
ವಾಸುದೇವ್ರ್ ಅಳಿಯ ಒರಗೀರು – ಭಾವಯ್ಯ
ಬೀಸಿ ಕುಂಕುಮದ ತನಿಗಾಲಿ

ಉಪ್ಪರ್ಗಿ ಮನಿಹೆಣ್ಣು ಒಪ್ಪಿದಿ ತಮ್ಮಯ್ನಿಗೆ
ಕೊಪ್ಪರ್ಗಿ ತಕ್ಕು ಬಳುವಳಿ – ಆ ಹೆಣ್ಣು
ತುಪ್ಪಕ್ಕೆ ತಕ್ಕು ದ್ಯನುಕರು

ಎಳ್ಳೂರ ಗೆದ್ದಿಲಿ ಎಳಿಬಿಸಿಲ ಕಾವನೆ
ಏಳೆನ್ನ ಮುದ್ದು ಮುಖದವನೆ – ಚಂದ್ರಯ್ಯ
ಎಳಿಯ ಜವ್ವನಕೆ ಬಿಸಿಲಾದೊ

ಇಂದ್ರಲೋಕದ ಮಾವ ಇಂದೇನು ಕಳುಹಿದ
ಚಂದ್ರಾವಳಿ ಪಟ್ಟಿ ಚೌಲಿಯ – ಚಿನ್ದ್‌ಗೊಂಡಿ
ಇಂದ್ರಾಣಿಗ್ ಮಾವ ಕಳುಹಿದ

ಒಬ್ಬಳೇ ತಾಯಿಗೆ ಒಬ್ಬಳೇ ಮಗಳೆಂದು
ಕಬ್ಬುನೆಟ್ಟೆ ಹಿಳ್ಳಿ ಒಡದ್ವಾಂಗೆ – ಸುಮತಿಯೆ
ಒಬ್ಬಳೇ ಸಾಕು ಕುಲಕೆಲ್ಲ

ಕೊರ್‍ಲ ತಾತಿಯಬಟ್ಟು ತೋಳಿನ ನಡುಕಟ್ಟು
ಮಾರಾಯ್ರು ನನ್ನ ಮೈದಿನ – ಬಸೂರೂರಿಗ್
ಬರುವರು ಹಾರಿ ಓಕುಳಿ

ಪುತ್ತುಳಿ ಮುಖದ ಪುತ್ರಯ್ಯ ಎಲ್ಹೋದ
ಹಿತ್ಲಿಗೆ ನೀರ ಬಿಡುವೆಲ್ಲಿ – ಪುತ್ರಯ್ನ
ಪುತ್ತುಳಿ ಮುಖಕೆ ಬಿಸಿಲ್ಹಂಬಿ

ಹೆದ್ದಾರಿ ಮನಿಯಳು ಬೀಚಮ್ಮ ಹೆಗ್ಗಡ್ತಿ
ಮಜ್ಜಿಗಿ ದಾನಕೊಡುವಳು – ಏನಂದ್
ಗಿಜ್ಜಿಕಾಲ್ ಮಗನ ಪಡಿಕೆಂದ್

ತಿಂಗಳ ದೇವರ ಸಂಗ್ಡ ಮೂಡುವ ಬೆಳ್ಳಿ
ಸಿಂಗಾರದೆಳಿಯ ತೆಗದ್ವಾಂಗೆ – ಸೀನಯ್ಯ
ಸಂಗ್ಡ ನಿನ್ನಳಿಯ ತಿರುಗಿರೆ

ಹಿತ್ಲಿನ ಹೂಗ ಗುತ್ತ್ಹಾಕಿ ಕೊಯ್ವರ್ಯಾರು
ಮುತ್ತೈದಿ ನನ್ನ ಹೆರಿಮಗ್ಳ – ಗಂಡಗೆ
ಗುತ್ತಿಗಿ ಕೆಲಸ ನಗರ್ದಾಗೆ

ಸೀರಿಯ ಉಡಬೇಕು ಸಿರಿಯಾರ್ದ ಮಳಿಗಿಯ
ಕಾಲಗೆ ಜಲಧಿ ಜರಿಬಂದ – ಉಡಬೇಕು
ಸೀರಿಯ ಶಿವ್ನ ಮದುವಿಗೆ

ಬಸ್ರಿಯಲೆ ಬಾಲಮ್ಮ ಬಯ್ಕಿಯನಿಕ್ಕಿಸುವೊ
ಹೊಸಬಣ್ಣದೆಯ್ಡ್ ರವಿಕಿಯ – ತೊಡಿಸುವಿ
ಬಸ್ರಿಯಲೆ ಗಂಡು ಕುಮರನ

ಇಕ್ಕೇರಿ ಪರ್ಸಿಯ ಕಿತ್ತೆದ್ದು ಹೋಪಂಗೆ
ಮುಕ್ಕರಿಸಿ ಗಿರಿಯೇ ಕುಸಿದವು – ತಿಮ್ಮಪ್ಪ
ಮುತ್ತ್ ಹೊಯ್ಸಿ ಗಿರಿಯ ಬಿಗ್ಸೀರ್

ಕೋಳಿಯ ಪಡಿಯಲ್ಲಿ ಯಾರೆಲ್ಲಿ ನಿತ್ತೀರ್
ಕೀಲ ಜೋಡೊಂಟಿ ಕೆಮಿಯನು – ಆನಂದು
ಕೋಳಿ ಗೆದ್ದನೆ ಅಯ್ನೂರು

ಎಣಿಗೆಂಟಿನ ಮ್ಯಾಲೆ ಕೊಲ್ಲೂರ ಅಮ್ಮನ
ಚೆನ್ನದ್ ಶ್ಯಾಮಂತ್ಗಿ ಅರಳಿತ್ತ್ – ಅಕ್ಸಾಲಿ
ಹೊನ್ನ ಕ್ಯಾದ್ಗಿಯ ಗೈತಿಯಾ?

ಕಂಡಿರ್ಯಾ ನಮ್ಮಬ್ಬಿ ಪಡುಮುಂಡ ಅಳಿಯನ
ಉಂಡು ನೊರೆಲಿಒಯ ಮೆಲುವರ – ಹಲ್ಲ್‌ಬಾಯಿ
ದುಂಡುಮಲ್ಗಿಯ ಮಿಟ್ಹ್ಯಾಂಗೆ

ಪಾಪಿ ಗಂಡನ ಕೈಲಿ ಕ್ವಾಪದ ಮಾತೇನ
ಭೂಪಾಲ್ನ ಕಂಡು ನೆಗಿಯೇನ – ಹಿತ್ತಿಲ
ಸಂಪಿಗಿ ಕಂಡು ಮನಸಿಲ್ಲೆ

ಉಪ್ಪರ್ಗಿ ಮ್ಯಾಲೆ ಹಪ್ಪಳು ಕಾಸ್ವಂಗೆ
ಅಪ್ಪ ಬಂದದ್ದು ಅರಿಯಳು – ಗಿರಿಜಮ್ಮ
ಅಪ್ಪಯ್ನ ಪಾದು ತೊಳುವಳು

ಹೆಣ್ಣೈದು ಗಂಡೈದು ತಾಯಿ ನಮ್ಮಬ್ಬಿಗೆ
ಕನ್ನಡಿ ಐದು ಕಳ್ಸೈದು – ಹೆಗ್ಡಿಕೇರಿ
ಕೊನಿಯೈದು ಎಳಿಯ ಸಿಂಗಾರ್ದ

ಆರಾರು ಮೂಗುತಿ ತಾಯಿ ನನ್ನಬ್ಬಿಗೆ
ಅರಿ ಒಳ್ಗಿನ್ ಜ್ಯೋತಿ ಉರಿದ್ಹಾಂಗೆ – ಪಡುಮುಂಡ
ಅಳಿ ಕಂಡ್ ಚೋಜಿಗ್ ಬಿಡುವನು

ಬುದ್ವೊಂತ್ರ ಮಗಳು ಬಿದ್ದಿಗ್ ಬಪ್ಪುದು ಚೆಂದೊ
ಗಿಜ್ಜಿಕಾಲ್ಮಗಳ ನಡಸುತ್ತ – ಗುಜ್ಜಮ್ಮ
ಬಿದ್ದಿಗ್ ಸಿರ್ದೇವಿ ಹೊಯ್ಟಳು

ಬಾಲಯ್ನ ನೆಕ್ಕಂಡ್ ಬಾಗ್ಲಗೆ ನಿತ್ಕಂಡ್
ಬರವ ನೋಡುವಳು ಬಗಿಯವ್ರ – ನಿಂಗಮ್ಮ
ಬಾಲ್ನ ಕರ್ಕೆರಿ ತಡಿಯದೆ

ಇಸ್ತ್ರಾಣ್ದ ಬಳಿಬಂತ್ ಸುಕ್ರ್ವಾರ್ದ ದಿನದಲ್ಲಿ
ಮಿಸ್ತ್ರಿ ಗಿರಿಜಮ್ಮ ಹೆರಹೊಯ್ಡ್ – ನಿನ್ನ್ಕೈಗೆ
ಇಸ್ತ್ರಾಣ್ದ ಬಳಿಯ ಇಡ್ಸುವಿ

ಹೆಬ್ಬಾಗ್ಲ ಚೆಂದಕೆ ಗುಬ್ಬಿ ಗೂಡ್ಕಟ್ಟಿತು
ಅಬ್ರದಿಂದ್ವೋದ ಕಡ್ಮಾಡ್ಗೆ – ಅಣ್ಣಯ್ನ
ಅಬ್ರಕೆ ಎದ್ದೊ ಜನುನೂರು !

ಉಂಗಿಲ್‌ಕೈ ಬೀಸುತ್ತ ಒಂಟಿಕೆಮಿ ಅಲ್ಸುತ್ತ
ನ್ಯಾಗಳದ ನಡುವ ಬಳಕುತ್ತ – ಅಣ್ಣಯ್ಯ
ಬಾಗ್ಲಲಿ ಬಪ್ಪ ಸಭಿಗ್ಹೋಯಿ

ಹಾಗ್ಲ ಚಪ್ಪರಕೆ ಹೋಗದಿರು ಗುಜ್ಜಮ್ಮ
ಹಾಗ್ಲ ಹಣ್ಹಾಂಗೆ ಮೈಬಣ್ಣೊ – ಗಿರಿಜಮ್ಮ
ಹಾಗ್ಲ ಹಣ್ಣೆಂದೇ ಗಿನಿಮೆಂದೊ

ಅಕ್ಕಿ ರಾಸಿಯ ಮ್ಯಾಲೆ ಅಕ್ಕೇನೇ ಬರದಳು
ಇಕ್ಕೇರಿ ಹೊಲನ ನಯಿಲ್ಹಿಂಡ – ಬರದಕಿ
ಅಕ್ಕ ಯಾತರಿಗೆ ನಡದಳು

ತೆಂಗಿನ ಮರಕೆ ತಿಂಗ್ಳಿಂದ ನೀರಿಲ್ಲೆ
ತಿಂಗ್ಳ ಬಾಣಸ್ತಿ ಹೆರಿಯಕ್ಕ – ಮಿಂದ್ನೀರು
ತೆಂಗಿನ ಮರಕೆ ಫಲಬಂದು

ಕಂಬ್ಳ ಕಂಬ್ಳಗಿಂತ ವಂಡಾರ್ ಕಂಬ್ಳ ಚೆಂದೊ
ಅಂಬಾರಿಲ್ ಕೂತ ದೊರಿ ಚೆಂದೊ – ಮಾವಯ್ಯ
ಉಂಬಲ್ಲಿ ಚೆಂದೊ ಹರ್ವಾಣು

ಕರಿಕರಿ ಕಬ್ಬಾರೆ ಕಾನೆಲ್ಲ ಕಡಿಬ್ಯಾಡ
ಹೋರ್‍ಯೆಮ್ಮಿ ಮೇವು ಮಿಗಮೇವು – ಅಣ್ಣಯ್ಯ
ಸಾಲಕ್ಕ್ ಬಂದೆಮ್ಮಿ ಹನಿಮೇವು

ಸೇರಿಗಾರಂಗೆ ಸೇರಿನ ಉಂಗಿಲು
ಸೇರ್‍ಗಾರ ನನ್ನ ಹೆರಿಯಣ್ಣ – ಬಸ್ರೂರಿಲಿ
ಸೇರಿಸಿ ಜನರ ಕಳುಗುವ

ಎತ್ತಿನ್ ಮ್ಯಾಲ್ ಹೋಪವ್ನೆ ಗಜ್ಜಿನ್ ಮುಂಡಾಸಿನವ್ನೆ
ಎತ್ತಿಕೊ ನಮ್ಮ ಮಗುವಿನ – ಗಿರಿಜಮ್ಮ
ಎತ್ತಿನ್ ಕೋಡುದ್ದೊ ಮಗು ಜ್ವಾಕಿ

ಎಲ್ಲವ್ರ ಮಾತ್ ಕೇಂಡ್ರ್ ಹುಲ್ಲಿನ ಬೆಂಕಿ ಹಾಂಗೆ
ಬಲ್ಲಿಗ ಮಾವ ನುಡುಮಾತ – ಕೇಳಿರೆ
ಕಲ್ಲಮ್ಯಾಲಕ್ಸರನ ಬರದ್ಹಾಂಗೆ

ಉದುರುದುರು ಮಲ್ಲಿಗಿ ಉದುರೆಮ್ಮ ಗುಣುಗಳಿಗೆ
ಚದುರಂಗನಾಡಿ ಬರುವನು – ತಮ್ಮಯ್ಯ
ಉದುರುವನು ಮೊಲಿಯ ಸೆರಗಿಗೆ

ಹಳ್ಳಿ ಮ್ಯಾಲಿನ ಹಳ್ಳ ಹಳ್ಳದಲಗ್ರಾರ
ಬೆಳ್ಳಿ ತೀರುತಕೆ ತಿರುಗಣಿ – ತಿರುಪತಿಲಿ
ಬೆಳ್ಳಿ ತೋರಣದ ಅರಮನಿ

ಜರಿಅಂಗಿ ಹಾಯ್ಕಂಡ್ ಜರಿಶಾಲ ಸುತ್ಕಂಡ್
ದೂರ ನೀ ಹೊಯ್ಸಿ ಅಣ್ಣಯ್ಯ – ಎಲ್ಲಿಗೆ
ಕುರುಕ್ಹೋಪಿ ಕಟ್ಕೆರಿ ಗಿರಿಜಕ್ನ

ದೇವರ ಕಾಣ್ಕೆಂದ್ ದೇವಲ್ಯಕ್ ನಾ ಹೋದಿ
ದೇವ್ರು ದೇವಲ್ಯದೊಳಗಿಲ್ಲೆ – ಮಾರ್‍ಸ್ವಾಮಿ
ದೇವ್ರಿದ್ದೀರ್ ಹೊಳಿಯ ಜಪದಲ್ಲಿ

ಹಾಡ ಹೇಳಲು ಬಲ್ಲಿ ಸೇಡಿ ಬರಿಯಲು ಬಲ್ಲಿ
ಕಾಡೊಳು ಕಂಚಿ ಕಾಯ್ ಬಲ್ಲಿ – ಗಾವುಳಿಲಿ
ನೀಡೂ ತಂಗ್ಯಮ್ನ ಗುಣು ಬಲ್ಲಿ

ಬರುಬರೂ ಎಂದರೆ ಬರು ಯಾರು ಬಲ್ಲರು
ಬರು ಬಲ್ಲ ನನ್ನ ಮೈದಿನ – ಬಾರ್ದಿರೆ
ಕರಿಲಿಕೆ ಜನುವ ಕಳುಗುವಿ

ಸ್ವಾಮಿ ಸಂಕ್ರ್‍ಗಂಡ ಭೂಮ್ತಾಯಿ ಸಿರಿದೇವಿ
ಅಂಬಲಿನ ನಾನೇ ಕುಡಿಲಾರಿ – ಸಂಕ್ರ್‍ಗಂಡ
ನಮ್ಮ ಚೊಲ್ಲ್ಯಾಡ್ಲಿ ಬಳಗೆಲ್ಲ

ಸ್ವಾಮಿ ಹೊತ್ತೀರ್ ಭೂಮಿ ಭೂಮಿ ಹೊತ್ತೀರ್ ಗಂಗಿ
ನಮ್ಗೆ ನೀರೆಂಬ್ದ್ ಜಲದುರ್ಗ – ಅಣ್ಣಯ್ಯ
ಭೂಮಿಲಿ ಎಲ್ಲಿ ಜನಿಸಿದ

ಆರಿಸಿನ ಸೀರಿನ ಅರವತ್ತು ನೆರಿಬೆಚ್ಚಿ
ಪುರಿಸ್ನ ಸತ್ತಿಗಿಯ ನೆಳಲಡ್ಡೆ – ನಮ್ಮಕ್ಕ
ವರ್ಸಕ್ಕೊಂದ್ ಸರ್ತಿ ಬಪ್ಪಳು

ಈ ಮನಿ ಅಂದಕೆ ಈ ಮನಿ ಚೆಂದಕೆ
ಈ ಮನಿಗ್ಹೆಣ್ಣ ಕೊಡ್ಕೆಂದು – ಮೈಸೂರರ್ಸ
ನಿಮಿಸಕೊಂದ್ವಾಲಿ ಬರದನು !

ಉಂಗಿಲ್‍ಕೈ ಮಂಜಯ್ಯ ಉಂಡಲಿ ಮೆಲುವಂಗೆ
ತಂಗಿ ಬೇಡಿದಳು ತಂಬುಲ – ಗಿರಿಜಮ್ಮ
ಅಂಗೈಗೆ ಉಗಿದ ಸೆರಿಹೊನ್ನ !

ಅಳಿಯನೆಂಬುವನ್ಯಾರು ಒಳಗೆ ಉಂಬವನ್ಯಾರು
ಬೆಳಗಿನ ಬೆಳ್ಳಿ ಮುಕದವನು – ಬಾಲಯ್ಯ
ಒಳಗುಂಡೇ ಬಾಯ ತೊಳದನು

ಲಿಂಗಿಕಾಯ್ ಸುಣ್ದ್‍ಲ್ಲು ಕಂಚಿಕಾಯ್ ಕೈಮರ್‍ಗಿ
ಶಂಭಾಚಾರಿ ಕಡದ ಕಡುಗಲ್ಸ್ – ಮ್ಯಾಲ್‍ಕೂತು
ರಂಭಿ ಸಂಭಾರ್ನ ಕಡದಳು

ಬಸುರಿ ಎಣ್ಣಿದಳೆ ಬಸುರೂರ ಮಲ್ಲಿಗಿ
ಹೊಸತ ಎಣ್ಣಿದಳೆ ಮನದಲ್ಲಿ – ತಂಗ್ಯಮ್ಮ
ಎಸಳ ಕ್ಯಾದ್ಗಿನ ಮುಡಿಕೆಂದು

ಬೆಳ್ಳಿಯ ಕ್ವಾಟಿಯ ಗೆದ್ದು ಬಂದನೆಂದು
ಹೇಳಿಬಿಡು ಅವನ ಮಡದಿಗೆ – ಬಸ್ರೂರಲಿ
ಕೇಳಿ ಸಂತಸನೇ ಬಿಡುವಳು

ಉಪ್ಪರ್‍ಗಿ ಮನಿಬೇಕ ಕೊಪ್ಪರ್‍ಗಿ ಹಣಬೇಕ
ಅಪ್ಪಯ್ಯನೆಂಬ ಮಗಬೇಕ – ಈ ಮನಿಗೆ
ತುಪ್ಪು ಬಡಿಸುವ ಸೊಸಿಬೇಕ

ಅರಸರ ಮಕ್ಕಳು ಕೆಲಸ ಮಾಡೂದ್ ಚೆಂದೊ
ಎಲ್ಸಂದಿ ಕೋಡ ಮುರಿದ್ಹಾಂಗೆ – ಗಿರಿಜಮ್ಮ
ಕೆಲಸ ಕಂಡ್ ಮಾಯಿ ಕಳುಗೂರು

ಏಳು ಬಾಳಿಯೊಳಗೆ ಕೇಳುಬಾಳಿಯ ಕಿರ್ದ್
ಹೇಳಿ ಬಿಡ ಬಾಳಿ ಒಡತಿಗೆ – ನಾಗಮ್ಮಂಗೆ
ಬಾಲಿ ಜಾಜೂಡೂ ಕೊನಿಬಂದು

ಕೆರಿಯ ಏರಿಯ ಮ್ಯಾಲೆ ಕರಿಯ ಕಾಗ್ತದ್ ಕೊಡಿ
ಬರುವನಾ ತಮ್ಮ ನಿನ್ನ್‌ಭಾವ – ತಿಮ್ಮಯ್ಯ
ಕರಿಯಿಳ್ದ್ ಮುಖವ ತೊಳುವನು

ಅರನೆಲ್ಲಿ ಮರನೆಲ್ಲಿ ಗಟ್ಟದ ಮ್ಯಾಲೆ
ಹರುಹಾವು ತೆಕ್ಕಿ ಹೊಯ್ದ್ಹಾಂಗೆ – ತಿಮ್ಮಯ್ಯ
ಅರಸಿಗೆ ಮಲ್ಗಿ ಮುಡಿಸಿದ

ಭಟ್ಕಳ ಮಲ್ಗಿಹೂಗ್ ಚೊಟ್ಟೆಲ್ಲ ಪರಿಮಳು
ಕಟ್ಟಿ ಮುಡುವೆಂದ್ರೆ ತೆರುಪಿಲ್ಲೆ – ಅಣ್ಣಯ್ಯ
ಕಟ್ಟಿಲಯ್ಯೂರೇ ಕಳುಹಿಸು

ಕೋಳಿಯು ಕೂಗಿದೂ ಕುಂಬಳ ಹೂಗಿಗೆ
ಗಾಳಿ ಕೂಗಿದೆಓ ಬೆದರಿಗೆ – ಅಣ್ಣಯ್ನ
ಸೂಳಿ ಕೂಗಿದಳು ದುಡ್ಡಿಗೆ

ಗಟ್ಟಕ್ಕೂ ಬೆಟ್ಟಕ್ಕೂ ಕಿಚ್ಚಿ ಕೊಟ್ಟವರ್ಯಾರು
ಮಟ್ಟಿ ಬೆಂದದದೆದರ ಮರಿಬೆಂದೊ – ಮಾಸೇಸ್ನ
ಕಟ್ಟಿದ ಜಿಡಿಗೂ ಹೊಯಿಸುತ್ತಿ

ಹೆಣ್ಣು ಸಣ್ಣದೆಂದು ಎಣ್ಣದಿರು ಅಣ್ಣಯ್ಯ
ಹೆಣ್ಣಿಗ್ ಹನ್ನೆಯ್ಡು ವರ್ಸವು – ನಿನ್ಮನಿಯ
ಎಣ್ಣಿನೀರಿನಲಿ ನೆರವಳು !

ಅರಳು ಮುತ್ತಿನ ರಾಶಿ ನೆರಸೂಸಿ ಮುಗಿಲಲ್ಲಿ
ಹೊರಳಿ ನೋಡಿದರೆ ಸೂರಿಯ – ಚಂದ್ರರ
ತೆರಗಣ್ಣು ಹೇಳೆ ನೆಗಿಯಕ್ಕಿ

ಚೆಂದಕೆ ಚಲುವೀರು ಉದ್ದಕೆ ಗಿಡ್ಡಿಯರು
ಗಂಧ ಬೀಸಣ್ಗಿ ಮನಿಯರು – ನಮ್ಮಮ್ಮ
ಗಂಧೀಳ್ಯ ಕೊಟ್ಟೇ ಕರುವರು

ಬಂದ್ರ್ ಬಂದ್ರ್ ಕಾಣಿ ಭಾನುವಾರದ ಮ್ಯಾಲೆ
ಕುಂದಾಣಿ ಮ್ಯಾಲೆ ಕುದ್ರಿನ – ಹೇರ್ಕಂಡ್
ಬಂದ ಕಾಣಕ್ಕ ನಿನ್ನ್ ಮಗ

ಅಂತರಾಟದ ಮ್ಯಾಲೆ ಆನಿಕೊಂಬಿನ ಮ್ಯಾಲೆ
ಜಂತಕದ ಮ್ಯಾಲೆ ಉಳಿಮ್ಯಾಲೆ – ತಮ್ಮಯ್ಯ
ಪಂತಕಾಡಿದನೆ ಪಗಡಿಯ

ವಾಲಿಕೆಮಿಯಕ್ಕಮ್ಮ ಒಳಗೇನೆ ಮಾಡುವಿ
ಹೆರ್ಗ್ ಕಾಣೆ ನಿನ್ನ ಮಗನಾಟ – ಚಂದ್ರಯ್ಯ
ಗುರ್ಗುಂಜಿ ಮರಕೆ ಹುಯ್ಕಿಟ್ಟ

ಏಳು ಮೆಟ್ಟಿಲಿನೇಣಿ ಆ ಏಣಿ ಈ ಏಣಿ
ಕಾಳಾಚಾರಿ ಕಡಿದ ಹೊಸಏಣಿ – ಮೆಟ್ಟಮ್ಮ
ಏಳೇ ನಾಗಮ್ಮ ರತುವೇರಿ

ಸೂಳಿಯ ಮನೆಯಲ್ಲಿ ಸುತ್ತೆಲ್ಲ ಪಾಗಾರ
ಸೂಳಿ ನೆಟ್ಟಳೆ ಸುರಿಗಿಯ – ಸ್ಯಾಮಂತ್ಗಿ
ಮ್ಯಾಲೊ ಆಡ್ವರಿಗೆ ಪರಿಮಳು

ದ್ಯಕ್ಕಿ ದ್ಯಕ್ಕಿಗಿಂತ ದ್ಯಕಿಮಂಡಲು ಚೆಕಿದೊ
ದ್ಯಕ್ಕ್ಯರಿಗಿಂತ ದೆಯ್‌ಚೆಂದೊ – ಮಾರ್ನ್‌ಕಟ್ಟಿ
ಮಕ್ಳಲಿ ಚೆಂದೊ ಸಿರಿಯಾಸೊ

ಹಸುರಂಗಿ ತೋಳೋಳೆ ಹಸುರು ಮೂಗಿತಿಯವ್ಳೆ
ಹೆಸರ್ಧೇಳೆ ನಿನ್ನ ಪುರುಸನ – ಮಾರಾಯ್ರ
ಹೆಸರೇನೆ ಹೇಳ್ಳಿ ದೊರಿಯಕ್ಕಿ

ನಂದಿ ಎಂಬ ಎತ್ತು ಬಂದಿದೆ ಬಾಗ್ಲಿಗೆ
ತಂದಿಡ ನಂದಿ ಮರ್ಗೀನ – ಅಣ್ಣಾ ಎತ್ತ್
ಬಂದು ಮೋರಿತು ಹಣಿನೀರ

ಗುರುಗುಂಜಿ ನೆರಿಯವ್ಳೇ ನನ್ನಿಂದ ಕಿರಿಯವ್ಳೇ
ಇರುಳೆದ್ದು ನೀರ ಮಗುವವ್ಳೇ – ತಂಗ್ಯಮ್ಮ
ಗುರುಗುಂಜಿ ನೆರಿಗೆ ಹನಿಕೂತೊ

ಸುರಿಗಿ ಸ್ಯಾಮಂತ್ಗಿಯ ಸರಿಬೆರ್ಸಿ ಮುಡ್ಕಂಡ್
ಸರುವರಿಗೂ ಕೈಯ ಮುಗುವಳು – ತಾಯಮ್ಮ
ಎರುಕೆಂದು ಧಾರಿ ಮಗಳಿಗೆ

ಹಳ್ಳಿಮ್ಯಾಲಿನ ಹುಡುಗ ಬೆಳ್ಳಗೆ ಹಲ್ಲೆಲ್ಲ
ಬೆಳ್ಳುಳ್ಳಿ ಜಡಿಯೇ ಬಗಲಲ್ಲಿ – ಇಟ್ಕಂಡ್
ಮಳ್ಳು ಮಾಡಿದನೆ ಹುಡುಗಿನ

ಇಲ್ಲಿ ಹೇಳಿದ ಹಾಡು ದಿಲ್ಲಿಗೆ ಕೇಳಿರೆ
ದಿಲ್ಲಿ ಊರ್‌ಅರ್ಸ್ನ ತಲಿದೂಗಿ – ನಿದ್ರಿಬಂದ್
ಎಲ್ಲಿಂಥ ಹಾಡು ಪದನವು !

ಎಂಥ ಉಪ್ಪಿನಕಾಯಿ ಅಮ್ಮ ನಿಮ್ಮನಿಯಲಿ
ಕಾನೊಳಗಿಪ್ಪ ಕಡ್ಗಿಯುಪ್ಪಿನಕಾಯಿ
ಮಿನುಗುತ್ತ ಬಂದ ಮಿಡಿಹೋಳು

ಮುತ್ತ್ ಸೀರಿ ಸೆರಗಿಗೆ ಮುತ್ತ್‌ವಾಲಿ ವಂಕಿಗೆ
ಮುತ್ತು ವಾಯ್ಲಾರ್ದ ಮಾತಿಗೆ – ಸರೋಜಮ್ಮ
ಮುತ್ತಿನ್ ಮೂಗುತಿ ಜಗಜ್ಯೋತಿ !

ಭೂಮಿಯ ಮ್ಯಾಲಿಳಿದ ಹಾಸುಕಾಲಣ್ಣಯ್ಯ
ಭೂಮ್ತಾಯಿ ಬಾಯ ಬಿಡುವಳು – ಏನೆಂದು
ಭೂಮಿಗ್ ಭೂಪತಿ ಇಳಿದನು !

ಗೋಳಿಮರ ಹಾಸ್ತ್ ಗಾಳಿಮರ ಬೀಸ್ತ್
ಇಳಿಯೊ ಬಂದಲ್ಲೇ ಬಳ್ಗಾರ – ನಮ್ಮನಿಯ !
ಬಾಣಂತಿ ಕೈಗೆ ಬಳಿ ಇಡು

ಕಾಡಿಗಿ ಕಣ್ಣವ್ವ ಕೂಡು ಹುಬ್ಬಿನವ್ವ
ಕೋಡಿಲಿ ನೀರ ಮಗುವವ್ವ – ಕಂಡ್ಕಂಡ್
ಕೋಡಗ ಮೇವ ಮರತವು

ಅರಿದಿದ್ದೂರಿಗ್ ಕಿರಿಮಗಿನ ಕೊಟ್ಟಿತ್
ಅರಿಯಳು ನಾಡ ಕೆಲಸವ – ಅವಳಿಗೆ
ಕುರುವೇನ ಕೊಟ್ಟು ಕಳುಗಿದಿ – ನಮ್ಮಗಿಗೆ
ತುರುಬು ಹಗ್ಗದ ಹಯ್ಯಾವ್ವಲಿ

ನಡಿಗೆ ಪಟ್ಟಿಯಗೈಸಿ ಅಕ್ಸಾಲಿಯ ಕರಸಿ
ಹೆಡಿ ನಾಗ್ನ ಬರಸಿ ಮಣಿತಿದ್ದಿ – ಬಾಲಮ್ಮ
ನಡುಗೊತ್ತಿ ಕೀಲ ಸಡಲಿಸಿ

ನುಗ್ಗಿಯ ಕಾಯ್ದಾಂಗೆ ಗಬ್ಬಿಯ್ತಿಗಿಯ
ಬಗ್ಗಿ ಬಾ ಜಲಜ ಒಡನಾಡಿ – ಜಲಜಮ್ಮ
ಬಗ್ಗಿ ಬಾ ಬಾಳಿ ಸುಳಿ ಹಾಂಗೆ

ಎಗ್ಲಿಗ್ ಮುಟ್ಟಿತು ತೇರು ಮುಗ್ಲಿಗ್ ಮುಟ್ಟಿತು ಕಳ್ಸ
ಜಲದೊಡ್ಡ ಕೇಳು ಜಲಕಂಟ – ಸೌಕೂರ್ ತೇರು
ನೆಲನ ಜಂತಳ್ಸಿ ನೆಲಿಯಾದೊ

ಈ ಮನಿ ಜ್ಯೋತಿಗೆ ಯಾರಣ್ಣೆ ಎರದರು
ಕಾಮಕಂಟಕದ ನೆರಿಯವರು – ಸಿರ್ದೇವಮ್ಮ
ನೀವೆರದೆಣ್ಣೆ ನಿಜವಾದೊ

ಕಡಿದಿಕಿ ಕಾನನ್ನು ನೆಡಲಕ್ಕು ಏನೆಲ್ಲ
ಕಾಡಳ್ಳ ಕರಿಯ ಹೊರೊಳಿಯ – ತೋಳಾರ್ಬಳಿ
ಜಾನ ಜೀರ್ಗಿನ ಬೆಳದನು

ಬಣ್ಣದ ಬಾಗ್ಲದಾಂಟಿ ಚಿನ್ನದ ಹೊಸ್ಲದಾಂಟಿ
ಅಣ್ಣಯ್ಯ ಒಡಿಯ ತಿಮ್ಮಪ್ನ – ಗಿರಿದಾಂಟಿ
ಹೊನ್ನು ತುಂಬಿಸಿದ ಕಣಜಕ್ಕೆ

ಹಟ್ಟಿ ಹೋರಿಯ ಸೊಕ್ಕಿ ಕಟ್ಟಿದ್ ಬಳ್ಳಿಯು ಹರ್ದ್
ಮೆಟ್ಟಿ ಬಂದ್ ಹಣಿಯ ಮುರಿದವು – ಅಣ್ಣಯ್ಯ
ಗಟ್ಟಿನೇಣಿನಲಿ ಬಿಗ್ದ್‌ಹಾಕು

ನಡುದಾತ್ರಿಯಲೆದ್ದು ಜ್ಯೋತಿ ಮಲ್ಲಿಗಿ ಕೊಯ್ದು
ಚೆಂಡು ಕಟ್ಟಿಸಿದ ಹದಿನಾರು – ತಮ್ಮಯ್ಯ
ಗಂಡುಳ್ಳ ಗರತಿ ಮುಡಿಮ್ಯಾಲೆ

ಎಲ್ಲವ್ರು ಮಾತಾಡ್ರೆ ಹಲ್ಲ್ ಬೆಂಕಿ ಎದ್ದಾಂಗೆ
ಬಲ್ಲ ಮಾವಯ್ನ ಮಾತನು – ತಮ್ಮಯ್ಯ
ಗಂಡುಳ್ಳ ಗರತಿ ಮುಡಿಮ್ಯಾಲೆ

ಎಲ್ಲವ್ರು ಮಾತಾಡ್ರೆ ಹಲ್ಲ್ ಬೆಂಕಿ ಎದ್ದಾಂಗೆ
ಬಲ್ಲ ಮಾವಯ್ನ ಮಾತನು – ಕೇಂಡರೆ
ಕಲ್ಲ ಮ್ಯಾಲಕ್ಷರ್ನ ಬರ್ದ್ಹಾಂಗೆ
ದಿಂಡೇರು ತೊಳ್ದಕ್ಕಿ ತುಂಡು ಮೂರಾಗೂದು
ದಿಂಡೆಯರೆಡ್ಯಗೆ ಮುದುಕಿಯು – ತೊಳ್ದಕ್ಕಿ
ಗೆಂಡಸಂಪಿಗಿಯ ಎಸಳ್ದಾಂಗೆ

* * * * *

ಉಪದೇಶ

ಬಯ್ಯಿನ ಹೊತ್ತಿಲಿ ಬಯ್ಯಾಬ್ಯಾಡಿ ಮಕ್ಕಳೆ
ಹೊಯ್ಯಾಬ್ಯಾಡಿ ಗಂಟಿಕರ‍್ಗಳ – ಬಳ್ಳಿಮ್ಯಾಲೆ
ಉಯ್ಯಾಲಾಡುವಳು ಸಿರಿದೇವಿ !

ಅನ್ನವಸ್ತ್ರದ ದಾನ್ದ್ ಪುಣ್ಯ ಪರರಿಗಾದೊ
ಹೆಣ್ಣುಟ್ಟಿ ಧಾರಿ ಎರದಂಗೆ – ಅಪ್ಪಯ್ಯ
ಪುಣ್ಯ ಬಕ್ಕೇಳು ಜನುಮಕ್ಕೂ

ಅತ್ತಿಯ ಕಂಡರೆ ಎತ್ತಿ ಮಾತಾಡ್ದಿರು
ಹತ್ತಕೊಂದುತ್ತ್ರ ಕೊಡದಿರು – ಜಾನಕಿ
ತವರಿಗೆ ಬಾಗ್ಯ ತರಬೇಕು

ಹಣೆಯಲ್ಲಿ ಕುಂಕುಮ ಹಳಸಿತು ಎನಬ್ಯಾಡ
ಬಣ್ಣದ ಬಟ್ಟು ಬೆಗರಿದ್ರೂ – ಜಾನಕಿ
ಹಾಳ್ಹಣಿಯ ಬಿಟ್ಟು ತಿರ್‍ಗ್ಬ್ಯಾಡ

ಬಡಿದಾಟ ಸೇರದು ಒಡಹುಟ್ಟಿದವರಿಗೆ
ಬಾಲ ಬಂಗಾರ ಮುರಿದೀತು – ಜಾನಕಿ
ಬಾಳ ಬೆಳಕಾಯಿ ಬೆಳ್ಗ್ಸಮ್ಮ

ಹೇಳಿಕೊಟ್ಟ್ ಮಾತು ಕಟ್ಟಿಕೊಟ್ಟ್ ಬುತ್ತಿ
ಏಳುಮಾರುದ್ದ ಬರಬವ್ವು – ಜಾನಕಿ
ಬೆಳಸಮ್ಮ ಬದುಕ ನೀ ಕಂಡು

ಹೊತ್ತಾರೆ ಮುಂಚೆದ್ದು ಪತಿಯ ಸ್ಯಾವಿಯ ಮಾಡಿ
ಅತ್ತಿಮಾವನಿಗೆ ಶರಣೆಂದು – ನನ್‍ಮಗಳೆ
ಮುತ್ತೈದಿಯಾಗಿ ಬಾಳಮ್ಮ

ಸೂಳಿಮನಿಗ್ಹೋಗವ್ನೆ ಸುಡು ನಿನ್ನ ಜನ್ಮವ
ಸೂಳಿ ಕಟ್ಟೆಲಿಯ ಮಲೆಬ್ಯಾಡ – ಅಣ್ಣಯ್ಯ
ಸುಣ್ಣದಲಿ ಮದ್ದ ಸೆಡಿವಳು

ನಂಟರ ಮನಿಯಲ್ಲಿ ಎಂಟೆಮ್ಮಿ ಕರುವರು
ಎಂಟು ದಿನದ್ಹೆಚ್ಚು ನಿಲ್ಬ್ಯಾಡ – ಅಣ್ಣಯ್ಯ
ಕೊಡುವರು ಹಾಲ ಹೆಂಗಸಿ

ಅತ್ತ ಕೆಡಿಯಲು ಬ್ಯಾಡ ಅಕ್ಕಿಯ ಕಲ್ಲೆಕ್ಕಿ
ಉತ್ತರವ ಮಾಯ್ಗೆ ಕೊಡಬ್ಯಾಡ – ಸಂಕಮ್ಮ
ಹೆತ್ತಮಗಳೆಂದೇ ಸಲಗುವರು

ತಾಯಿಗೆ ಬಯ್ಯುವ ನಾಯಿಸೋಳೀರ್ಮಗನೆ
ತಾಯಿ ನಮ್ತಾಯಿ ಸಿರಿದೇವಿ – ಬಯ್ದರೆ
ಗೋವಿನ ಕಾಲು ಸೆಡಿಯಕ್ಕು

ನೀತಿಗೆ ಪ್ರಭುವಾಗು ಆಚಾರಕರಸಾಗು
ಮಾತಿನಲಿ ಚೂಡಾಮಣಿಯಾಗು – ನಮ್ಮಗು
ಜ್ಯೋತಿಯೆ ಆಗು ಜಗಕೆಲ್ಲ

ಉಂಡತ್ತ ಊಂಟವು ಗಂಗಾಣವೆಲ್ಲಿತ್ತು
ಗಂಡನ ದೂರು ತವರಲ್ಲಿ – ಆಡಿರೆ
ಹೆಣ್ಣೆ ನಿನ್ನ್ ಬಾಳು ಹಾಳಕ್ಕು

ಕಂಡಿ ಎಂಬುದಕಿಂತ ಕಾಣಿ ಎಂಬುದೆ ಲೇಸು
ಭಂಡತನವೆಷ್ಟೇ ಗರತಿಗೆ – ಹಿತ್ತಿಲ
ತೊಂಡಿಹೂಗ್ನಾಂಗೆ ಇರಬೇಕು

ಅರಸ ಒಳ್ಳ್ಯವರಂತ ವಿರಸವಾಡಲು ಬ್ಯಾಡ
ವರುಸದ ಮಾತು ಮನದಂಗೆ – ಇಟ್ಕಂಡ್
ಪರ್ಸಿಗ್ಹೋದಲ್ಲಿ ತೆಗದಾರು

ಬಂಗಾರು ಬಳಿ ಇದ್ರೆ ಬಯ್ಬ್ಯಾಡ ಬಡವರಿಗೆ
ಬಂಗಾರು ನಿಂಗೆ ಸ್ಥಿರುವಲ್ಲ – ಮಜ್ಜಾನ್ದ
ಬ್ಯಾಗಿ ಹೊಳ್ಳುವುದು ತಡುವಲ್ಲ

ಯಾಲಕ್ಕಿ ಎಲಿಕರ್ದು ಜೀರ್ಗಿ ಮೆತ್ತಿ ಕರ್ದು
ಮೂರ್ಹೊತ್ತೂ ಮೆಲುವ ಎಲಿಕರ್ದು – ಅಣ್ಣಯ್ಯ
ಕರ್ದೆಂದು ಹೆಣ್ಣ ಬಿಡಬ್ಯಾಡೆ

ಬಟ್ಟಲ ಕೂಳನ್ನು ಬರ್ಗಿ ಉಣ್ ರುದ್ರಮ್ಮ
ಸಿಟ್ಟನಂತವನು ನಿನ್ಮಾವ – ಕೇಳಿರೆ
ಕುಟ್ಟುವ ಕುದ್ರಿ ಚಬುಕಿಲಿ

ಹ್ಯಾಗ್ಹ್ಯಾಂಗೋ ಕರದರೆ ಹೋಗದಿರು ತಮ್ಮಯ್ಯ
ಜಾಗವ ಕೊಟ್ಟ ಧನಿಗಳು – ಕರೆದರೆ
ಹೋಗಿ ಬಾ ಸತ್ಗಿ ನೆಳಲಡ್ಡೆ

ಇದ್ದಿಬುದ್ದಿಯ ಕಲಿಯೊ ಸಿದ್ದಿಜಾನವ ಮರಿಯೊ
ಎದ್ದೆದ್ದು ಬರಿಯೊ ಹಲಗಿಯ – ಸಂಕಯ್ಯ
ಬದ್ದೊಂತನಾಗೊ ಬರದಲ್ಲಿ

ಅಡ್ಡ ಬಯ್ತಲಿ ಬ್ಯಾಡ ನೀಟ ಕುಂಕುಮ ಬ್ಯಾಡ
ದೊಡ್ಡವ್ರ ಹೆಣ್ಣ ತರಬ್ಯಾಡ – ಅಣ್ಣಯ್ಯ
ಬಡವರ ಹೆಣ್ಣು ಬಲುಸುಕೊ

ಹೆಣ್ಣಿನ ಕೊಡ್ಕಾರೆ ಮನಿಯ ಕಾಣಲುಬೇಕು
ಮನಿಹತ್ತರಿರುವ ಅರಳಿ ಪಾರಾಣ್ದುಕ್ಕಿ
ದ್ಯನಿಕೇಂಡ್ ಮಗಿನ ಕೊಡಬೇಕು

ಕಣ್ಣಿನ ಕಾಡಿಗಿ ನನ್ನ ಮಾತನು ಕೇಣ್
ಚೆನ್ನಿಗನ ಕಂಡು ತಲಿಬಾಂಗದಿದ್ದರೆ
ಹೆಣ್ಣೆಂಬ ಕುಲಕೆ ಅಪವಾದೊ

ಕೋಳಿ ಸಾಂಕಿದ ಮನಿ ಹಾಳಾಯಿ ಹೋಪುದು
ಮಾಲಕ್ಸ್ಮಿ ಎಂಬ್ಯ ದ್ಯನಕರು – ಸಾಂಕಿರೆ
ಕೊಟ್ಗಿಲ್ ತುಂಬೀತು ಕರುಮೆರಿ

ಹೆಣ್ತಿ ಸತ್ತಮನಿಗೆ ಹೇಳಮ್ಮ ಬುದ್ದೀನ
ಗಂಡ ಸತ್ತಳನೇ ತರದಿರ – ಅವ್ಳ್ ತನ್ನ
ಹಳಿಯ ಬಾಳಿಕಿನೇ ನೆನುವಳು

ಕಾಲಲಿಪ್ಪ ಮೆಟ್ಟು ಕಾಲಲಿದ್ದರೆ ಚೆಂದೊ
ತಲಿಮ್ಯಾಲಲದನು ಹೊರಬ್ಯಾಡ – ತಮ್ಮಯ್ಯ
ಸಲಿಗಿ ಮಡದಿಗೆ ಕೊಡಬ್ಯಾಡ

ದುಂಡುಮಲ್ಗಿ ಹೂಗ್ ಚೆಂಡ್ಮಾಡಿ ಮುಡ್ಕಂಡ್
ಗಂಡ ಗೋಪಾಲ್ನ ಹಸಿಮ್ಯಾಲೆ – ಕೂಕಂಡ್
ಹಡದವ್ರ ಜಾನ ಮರಿಮಗು

ಬಯ್ಯಿನ ಹೊತ್ತಿಲಿ ಬಯ್ಯ್ಬ್ಯಾಡಿ ಮಕ್ಕಳೆ
ಹೊಯ್ಯ್ಬ್ಯಾಡಿ ಗಂಟಿಕರ್ಗಳ – ಬಳ್ಳಿಮ್ಯಾಲೆ
ಉಯ್ಯಾಲಾಡುವಳು ಸಿರಿದೇವಿ

* * * * *

ಪ್ರಣಯ

ಹುಣ್ಸ್ಕಕ್ಕಿ ಹೆದ್ದಾರಿಲಿ ಸಾಲು ಸಂಪಿಗಿ ಮರ
ಕಟ್ಟಿಕಟ್ಟಿದರು ಬುಡುಕೆಲ್ಲ – ಮಾವಯ್ಯ
ಜುಟ್ಟಗೈದ್ಹೊಗ ಮುಡಿದರು – ಹುಣ್ಸ್ಕಕ್ಕಿ
ಮಡದಿ ಕೇಳಿರೆ ಮುಡಿಸೂಕೆ !

ಹಾಗ್ಲ ಹಣ್ಣಾಪಂಗೆ ಆರೆಮ್ಮಿ ಕರುವಂತೆ
ಆಗರದ ಭೂಮಿ ಬೆಳುವಂಗೆ – ನಮ್ಮಣ್ಣ
ಹೋಗೂನು ಕರುಕೆ ಮಡದಿಯ

ತಂಗುಳ ಕೂಳಾಸಿ ಎಮ್ಮಿಯ ಮೊಸರಾಸಿ
ತಿಂಗಳಿಗೊಂದ್ ಗಾಯ್ ತವರಾಸಿ – ಭೋಜಯ್ಯ
ನಂಗೆ ನಿನ್ನಾಸಿ ಅನುಗಾಲ

ಒನ್ಕಿಗೂ ಒರ್ಳಿಗೂ ಕನಕ ಮುತ್ತಿನ ಜಲ್ಲಿ
ನಾಗೇರೂ ಗೆರ್ಸಿ ಬಯ್ತಲಿ – ಚಾಮುಕಂಡ್
ನಾಗೂರ ದೊರಿಯು ಬಿಡಲಿಲ್ಲೆ

ಅಂಗ್ಯೆ ಚೆಂದೊ ಕಂಡ್ ಮುಂಗಯ್ಯ ಹಿಡಿದನು
ರಂಗು ಮಾಣಿಕದ ಕಡಗವು – ಪುಡಿಯಾರೂ
ರಂಗಿ ನಿನ್ ತೋಳ ಬಿಡಿಯೆಂಬ

ಹೆಣ್ಣನೊಬ್ಬಳ ಕಂಡು ಅಲ್ಲೇ ಬಿಡಾರು ಬಿಟ್ಟ
ಮೊನ್ನಿನ ಪೋರ ಚದುರನು – ಭೋಜಯ್ಯ
ಹೊನ್ನುಂಗಿಲ್ ಕೊಟ್ಟೇ ಒಳಗ್ಹೋದ !

ಎಂಕಪ್ಪೆಂಬೆತ್ತಿನ ಕುಂಕಮದ್ಹೇರನ್ಹೇರಿ
ಬಂಕಾಪುರದಾಚೆ ಹೊಡದೆಬ್ಬಿ – ಕೊಂಕ್ಣೇರ್ ಪೋರಿ
ಕುಂಕ್ಮ ಬೇಕೆಂದು ಗೆಲಿದಳು !

ತೋರು ಗುಡ್ಡಿಯ ಮ್ಯಾಲೆ ಸಾರ್ತ ಕೂತವನ್ಯಾರು
ತಾರಕ್ಕೆ ಮೂರೆಲಿಯ ಕೊಡುವನು – ಕೊಂಕ್ಣೇರ್ ಪೋರ
ತ್ವಾರ್ಣ ಹೂಡಿದನು ಮಡದಿಗೆ

ಗೋಮೇಸೂ ಗೊಲ್ಸ್ರ ಹುಡುಗ ನಮ್ಮೂರ್ ಬೆರ್ಮಾರ್ರ್ಹುಡುಗ
ನಿಮ್ಮಕ್ಕ ಹ್ಯಾಂಗೆ ಇರುವಳು?
ನಿಮ್ಹಾಂಗೆ ತೋಳಳು ನಿಮ್ಹಾಂಗೆ ತೊಡಿಯಳು
ನಿಮ್ಹಾಂಗೆ ಮುದ್ದು ಮುಖದಳು – ಮುಟ್ಟಿಮ್ಯಾಲೆ
ನಮ್ಮಕ್ಕ ನಿದ್ರಿ ಗೈವಳು

ಮುತ್ತ್ನಂಥ ಬೆಗ್ರ್ ಬಂದೊ ಸೊಕ್ಕಡಕಿಯ ತಿಂದು
ಬೀಸ್ಹೆಣ್ಣೆ ಶ್ಯಾಲಿ ಸೆರಗಿಲಿ – ಮಾವ್ನಮಗಳೇ
ಸತಿಯೆ ಸಾಕ್ಹೆಣ್ಣೆ ಬಳಲಿದಿ

ಕೆಟ್ಟ ಕಣ್ಣಿನ ಪೋರ ದಿಟ್ಟ್ಸ ನೋಡಲು ಬ್ಯಾಡ
ಕೆಟ್ಹೋಕ್ಕ್ ನಮ್ಮ ಮೆಯ್ಬಣ್ಣ – ಉಡುಪಿಯ
ಪಟ್ಟಕ್ಕ್ ನಮ್ಹೆಸರ ಬರುಸೋರು

ಕಲ್ಲಿಯ ದರಲಿಗೆ ಬಿಲ್ಲರ್ರ್ಹುಡ್ಗಿ ಬಪ್ಪಳು
ನಿಲ್ಲುನಿಲ್ಲ್ಹೆಣ್ಣೆ ಗುಣವಂತಿ – ತುರುಬಿಗೆ
ಮಲ್ಲಿಗಿ ಅಚ್ಚ ಮುಡಿಸುವಿ

ಅಸಿಯ ಪ್ರೀತಿಯು ಆಚಿ ಒಬ್ಬಳ ಮ್ಯಾಲೆ
ಈಚಿಗಾಡಿದನೆ ಬರಮಾತು – ದರ್ಭಿಲಿ
ರಸವುಂಟಾ ನುಪ್ಪಿ ಹಿಂಡಿದರೂ

ಎಡಗೈಲಿ ಮೆದ್ದಿಯೇ ಎಲಿಚಣ್ಣದೆಂದು
ಬಡಗಂಡನೆಂದು ಮುನಿದಿಯಾ – ಎಲೆಹೆಣ್ಣೆ
ಬಡವನಲ್ಲುಂಟು ಬಕುತಿಯು

ನಮ್ಮನಿಗ್ ಬರಬ್ಯಾಡಿ ನೆರಮನಿ ಮಕ್ಕಳೇ
ನಮ್ಮಣ್ಣ ಕಚ್ಚ್ವ ನಡುಕಚ್ಚ್ವ – ಮಕ್ಕಳೇ
ನಿಮ್ಮೊಲಿ ಹಿಡುವ ಎಲಿಕೊಟ್ಟು !

ಅಂಕಿಯಿಲ್ಲದ ಪೋರ ಸಂಜ್ಯಪ್ಪಂಗೇನ್ ಬಂದಿ
ಅಂಗಿ ಇಲ್ಲ್ಯಾಲೆ ಮೆಯ್ಯಿಲ್ಲೆ – ನಮ್ಮಂಥ
ತಂಗ್ಯೇರಿಲ್ಲೇನ ಮನಿಯಲ್ಲಿ

ಅಂಗಿಮ್ಯಾಲಿನ ಅಂಗಿ ಸಂಗೀತ್ಗಾರನ ತಂಗಿ
ಅಂಗಿ ಬೇಡಿದಳೆ ಚದುರಂಗಿ – ಭಾವಯ್ಯ
ತೋಳ ಬೇಡಿದಳೆ ತಲಿದಿಂಬು

ಸರಸನಾದಿತು ಗುಬ್ಬಿ ಹೆಲ್ಸಿನ ಎಲಿಮ್ಯಾಲೆ
ಅರಸು ಬಲ್ಲಿಗರ ಮಗಳಿಗೆ – ತಂಗ್ಯಮ್ಮ
ತಲಸು ಮಾಡಿದನು ದೊರಿಮಗ

ನೀಲಿ ಬಾವುಲಿ ಇಟ್ಟಿ ಏನೇ ಗಾಣಿಗರ್ಹುಡುಗಿ
ವಾಲಾಡ್ತ ಎಣ್ಣಿ ಅಳಿವಳೇ – ಗಾಣಿಗರ್ಹುಡ್ಗಿ
ತೋಳಮ್ಯಾಲೊರಗೂ ಮನಸಾಯ್ತು

ಏನು ಗಾಣಿಗರ್ಹುಡುಗಿ ಎಲ್ಲ ಮಾತನು ಗೆದ್ದಿ
ಇನ್ನು ನನ್ನೇನು ಗೆಲುವಿಯಾ – ಗಾಣಿಗರ್ಹುಡುಗಿ
ನೆನುವಿಯಾ ತಾಯಿ ತಂದಿಯಾ?

ಮಡದಿಗೇನ್ ಹೇಳೀರ್ ನಾರಾಯ್ಣ ದೇವರು
ಅಳಬ್ಯಾಡ ಉಣೆ ಇರಬ್ಯಾಡ – ಎಂದ್ಹೇಳಿ
ನಡೆದರು ಕಾಂಬೂಕ್ ತಾನೊಬ್ರ

ಗಂಡು ಗಂಡಿನೊಳಗೆ ಗಂಡ್ಗಾರ ಅಣ್ಣಯ್ಯ
ದುಂಡುಮಲ್ಗಿಯೆ ಮರನೇರಿ – ತಂದ್ಹೂಗ
ಗಂಡುಳ್ಳ ಗರತಿ ಮುಡಿಮ್ಯಾಲೆ

ಆಚೆ ಕೇರಿಲಿ ನೀನು ಈಚೆ ಕೇರಿಲಿ ನಾನು
ಭಾಸಿ ಕೊಟ್ಟ್ಯಲ್ಲೋ ಬಲಗೈಲಿ – ಎಲೆಜಾಣ
ಆಸಿ ಬಿದ್ದೋಯ್ತು ನಿನ್ಮ್ಯಾಲೆ

ಹುಣ್ಸಿಕ್ಕಿ ಹೆದ್ದಾರಿಲಿ ಸಾಲು ಸಂಪಿಗಿ ಮರ
ಕಟ್ಟಿ ಕಟ್ಸಿದರು ಬುಡುಕೆಲ್ಲ – ಮಾವಯ್ಯ
ಜುಟ್ಟಿಗ್ಯೆದ್ದೂಗ ಮುಡಿದರು – ಹುಣ್ಸಿಕ್ಕಿ
ಮಡದಿ ಕೇಳಿರೆ ಮುಡಿಸೂಕೆ !

ಅತ್ತಿಲ್ಲೆ ಮಾವಿಲ್ಲೆ ಬಳ್ಗಾರ ಬಳಿತಂದ
ಮತ್ತೆ ಕೈಹಿಡಿದ ಪುರಸಿಲ್ಲೆ
ಅತ್ತ್ಯಾಕೆ ಮಾವ್ಯಾಕೆ ಬಣ್ದ್‌ಬಳಿ ಇಡೂಕೆ
ಮತ್ತೆ ಕೈಹಿಡಿದ ಪುರುಸ್ಯಾಕೆ

ಬಾಗ್ಲಗೇ ನಿತ್ಕಂಡ್ ಬಾಲ ಮಡದಿಯ ಕರೆದು
ಮಗನು ಬಾಯ್ರನ್ನ ಕೊಡು ಎಂಬ – ಅವ್ವ್ಯತನ್ನ
ನೆಗಿಯ ಕುಸಲದ ನೆಗುವಳು

* * * * *

ರಾಮಾಯಣ

ಹುಲಿಹುಲ್ಲು ಮೇವುದ ಮೊಲ ನೀರು ಕುಡಿವುದ
ಜಲದೊಳಗೆ ಜ್ಯೋತಿ ಉರುವುದ – ಪಟ್ಟಕ್ಕೆ
ಒಲುವಳಾ ಸೀತಿ ರಾವಣನ?

ಅಂದು ಸೀತಮ್ನೋರು ಚೆಂದೊ ಮಾತಾಡ್ವಂಗೆ
ಬಂದ ಮಾಯಕದಿ ಮುರುಗನ – ಕೊಂದ್ ನೀಂವ್
ತಂದ್ಕೊಡಿ ಸ್ವಾಮಿ ಸರಳಿಂದ

ನಾರಿ ಸಿಕ್ಕುವಳಲ್ಲ ರಾವ್ಣ ಬಿಡುವನಲ್ಲ
ಆರುಣ್ಯದಲ್ಲಿ ಅವಧಿಯು – ಸೀತಮ್ನ
ಸೆರಗು ಮುಟ್ಟಿದರೆ – ಉರಿದ್ಹೋಪ

ಅರುಣ್ಯಕ್ಹೋಪಂಗೆ ರಾಮಲಚುಮಣರಿಬ್ರ್
ನಾರಿ ಬಂದ್ ಸೆರಗ ಹಿಡಿದಳು – ಏನೆಂದು
ನಾರಿ ನಾಬತ್ತಿ ನೆಳಲಡ್ಡೆ

ಹೊಟ್ಟಿಲಾರ್ ತಿಂಗಳು ಬಪ್ಪುಕೆ ಬರಲಕ್ಕು
ಪುತ್ರಯ್ನ ಹ್ಯಾಂಗೆ ಸಲುಗುವಿ?
ಅತ್ತಿಯ ಮರನಡಿ ಹೆತ್ತು ತೊಟ್ಟಿಲ ಕಟ್ಟಿ
ಮುತ್ತುಗನೆಲಿಯ ನೆಲಕ್ಹಾಸಿ – ಏಸ್ವಾಮಿ
ಪುತ್ರಯ್ನ ಅಲ್ಲೇ ಸಲಗುವಿ

ಸೀತಿಯ ತರಬೇಕು ಸೇತುವಿ ಕಟ್‌ಬೇಕು
ಇತ್ತ ರಾವಣನ ಕೊಲಬೇಕು – ಅಂತ್ಹೇಳಿ
ಹೊತ್ತನೆ ಭಾಸಿ ಶ್ರೀರಾಮ

ಸೀತಿಯ ತಪ್ಪುಕೆಂದು ಸೇತುಕಟ್ಟಿರು ಸ್ವಾಮಿ
ಆತ ರಾವಣನ ಕೊಲ್ಕೆಂದು – ರಾಮ್ದೇವ್ರು
ಸೇತು ಕಟ್ಟಿದರು ಕಡಲಲ್ಲಿ

ರಾಮ್‌ದೇವ್ರ ಮಡದಿಯ ರಾವಣ ಕದ್ದೊಯ್ವಂಗೆ
ರಾಮ್‌ರಾಮ ಎಂದು ಮರ್ಕಿದ್ಲು – ಏನೆಂದು
ರಾಮ್‌ದೇವ್ರು ಇಲ್ಲೆ ವನದಲ್ಲಿ

ಆರುಣ್ಯಕ್ ಹೋಪಂಗೆ ಆರುತಿಂಗಳ ಬಸುರಿ
ಅರುಣ್ಯ ಕಳೆದು ಬಪ್ಪಂಗೆ – ಸೀತಮ್ಗೆ
ಲವಕುಸರೆಂಬ ಮಕ್ಕೈಬ್ರ್

ಹುಲಿಹುಲ್ಲು ಮೇವುದ ಮೊಲನೀರು ಕುಡಿವುದ
ಜಲದೊಳಗೆ ಜ್ಯೋತಿ ಉರುವುದ – ಪಟ್ಟಕ್ಕೆ
ಒಲುವಳಾ ಸೀತಿ ರಾವಣನ?

* * * * *

೧. ಕೊಲ್ಲೂರ ಮೂಕಾಂಬಿ ಕೊಡುತಾಯೆ ಮಕ್ಕಳ
ಕೊಡುತಾಯೆ ಮಕ್ಕಳ ಕೊಲ್ಲೂರ ಮೂಕಾಂಬಿ.

೨. ಮುದ್ದು ನಮ್ಮಗುವಿಗೆ ಇಬ್ಬರು ಮಾವಂದ್ರ
ಇಬ್ಬರು ಮಾವಂದ್ರು ಮುದ್ದು ನಮ್ಮಗುವಿಗೆ.

೩. ಮನಿಸುತ್ತ ಮಲ್ಲಿಗಿ ಕೆರಿಸುತ್ತ ಕೇದಿಗಿ
ಕೆರಿಸುತ್ತ ಕೇದಿಗಿ ಮನಿಸುತ್ತ ಮಲ್ಲಿಗಿ.

೪. ಹರಿದು ಬಾ ಚೆನ್ನಿ ಹಾವಿನ ಮರಿ ಹಾಂಗೆ
ಹರಿದು ಬಾ ಚೆನ್ನಿ ಮರಿ ಹಾವಿನ ಹಾಂಗೆ.

೫. ಹಡದಮ್ಮ ಬರಲೆಂದು ಹರದಿಲಿ ನೀರಿಟ್ಟಿ
ಬರಲೆಂದು ಹಡದಮ್ಮ ಹರವಿಲಿ ನೀರಿಟ್ಟಿ.

೬. ಹಾದಿಯು ಕೆಸರೆಂದು ಹೋಗದೆ ನಮ್ಮತ್ತು
ಕೆಸರೆಂದು ಹಾದಿಯು ಹೋಗದೆ ನಮ್ಮತ್ತು.

೭. ಬತ್ತದ ಕಡನ್ಹೇಳು ಅಕ್ಕಿಯ ಕಡನ್ಹೇಳು
ಕಡನ್ಹೇಳು ಬತ್ತದ ಕಡನ್ಹೇಳು ಅಕ್ಕಿಯ.

೮. ಅಣ್ಣಯ್ನ ಹೆಂಡತಿ ಬಲುಬಣ್ಣಗಾರತಿ
ಅಣ್ಣಯ್ನ ಹೆಂಡತಿ ಬಣ್ಣಗಾರತಿ ಬಲು.

೯. ಸೂಳಿಗೆ ಸುತ್ತಿನ್ವ್ಯಾಲಿ ನಾರಿಗೆ ಮುತ್ತಿನ್ವಾಲಿ
ಸುತ್ತಿನ್ವಾಲಿ ಸೂಳಿಗೆ ಮುತ್ತಿನ್ವಾಲಿ ನಾರಿಗೆ.

೧೦. ಈ ಸುಟ್ಟ ಜೀಂವನ ಎಲ್ಲಾದ್ರೂ ಮಣ್ಮಾಡಿ
ಮಣ್ಮಾಡಿ ಎಲ್ಲಾದ್ರೂ ಈ ಸುಟ್ಟ ಜೀಂವನ.

೧೧. ನಾನು ದೇವರ ಹತ್ರ ಏನೂ ಬೇಡಿದಳಲ್ಲ
ಬೇಡಿದಲ್ಲೇನೂ ನಾನು ದೇವರ ಹತ್ರ.

೧೨. ಹಾಸ್ತ್ತ್ ಗೋಳಿಮರ ಬೀಸ್ತ್ತ್ ಗಾಳಿಮರ
ಗೋಳಿಮರ ಹಾಸ್ತ್ತಾ ಗಾಳಿಮರ ಬೀಸ್ತ್ತ್.

೧೩. ಕೊಲ್ಲೂರ ಘಾಟಿಲಿ ಆಳ ಕರದವನ್ಯಾರು
ಕರದವನ್ಯಾರಾಳಾ ಕೊಲ್ಲೂರ ಘಾಟಿಲಿ.

೧. ಕೊಲ್ಲೂರ ಮೂಕಾಂಬಿ ಕೊಡುತಾಯೆ ಮಕ್ಕಳ
ನಂಗಲ್ಲ ನನ್ನ ಒಡಹುಟ್ಟಿನ್ – ಅಕ್ಕಮ್ಗೆ
ಕೊಡುತಾಯೆ ಗಂಡು ಶಿಶುವೊಂದ ॥

* * * *

ಕೊಡುತಾಯೆ ಮಕ್ಕಳ ಕೊಲ್ಲೂರ ಮೂಕಾಂಬಿ
ಒಡಹುಟ್ಟಿನ್ ನನ್ನ ಅಕ್ಕಮ್ಗೆ – ನಂಗಲ್ಲ
ಕೊಡುತಾಯೆ ಗಂಡು ಶಿಶುವೊಂದ ॥

೨. ಎಲ್ಲರ ಮನಿಮಕ್ಳು ಬೆಲ್ಲ ಎಂದಳುತಿಕ್ಕು
ನಮ್ಮನಿಲೊಂದು ಕಿರುಬಾಲ – ಅಳುತಿಕ್ಕು

* * * *

ಎಲ್ಲರ ಮನಿಮಕ್ಕು ಬೆಲ್ಲ ಎಂದಳುತಿಕ್ಕು
ಅಳುತಿಕ್ಕು ನಮ್ಮ ಮನಿಲೊಂದು – ಕಿರಿಬಾಲ

೩. ತೂಗುವ ತೊಟ್ಲಿಗೆ ತುಂಬ ಗೆಜ್ಜಿಯ ಕಟ್ಟಿ
ನಾ ತೂಗಿ ನನದ ಗಿಣಿತೂಗಿ – ನಮ್ಮಗಿನ

* * * *

೪. ಶೃಂಗೇರಿ ಊರ್ವೆಂದೊ ಬೇಳೂರ್ ಕೇರಿಚೆಂದೊ
ಶಾರ್ದಾಂಬಿ ಚೆಂದೊ ಜಗಕೆಲ್ಲ – ಬಾಲಯ್ಯ

* * * *

೫. ಕೋಗಿಲೆ ಕೂಗಿತ್ತು ಕುಂಬಳದ ಹೂಗಿಗೆ
ಬೆಟ್ಟ ಕೂಗಿತ್ತು ಬೆದರಿಗೆ – ನಮ್ಮನಿಯ

* * * *

ಕೂಗಿತ್ತು ಬೆಟರಟ ಬಿದಿರಿಗೆ – ನಮ್ಮನಿಯ

೬. ತೊಟ್ಟಿಲ ಹೊತ್ಕಂಡ್ ತೌರ್ಬಣ್ಣು ಉಟ್ಕಂಡ್
ಅಪ್ಪ ಕೊಟ್ಟೆಮ್ಮಿ ಹೊಡ್ಡಂಡ್ – ತವರೂರ
ತಿಟ್ಹತ್ತಿ ನಿತ್ತು ನೋಡ್ಯಾಳು

* * * *

ತೊಟ್ಟಿಲ ಹೊತ್ಕಂಡ್ ತೌರ್ಬಣ್ಣು ಉಟ್ಕಂಡ್
ಕೊಟ್ಟಿಮ್ಮಿ ಅಪ್ ಹೊಡ್ಕಂಡ್ – ತವರೂರ

* * * *

ಉಟ್ಕಂಡ್ ತೌರ್ಬಣ್ಣು ಹೊತ್ಕಂಡ್ ತೊಟ್ಟಿಲ
ಹೊಡ್ಕಂಡ್ ಅಪ್ಪ ಕೊಟ್ಟೆಮ್ಮಿ – ತವರೂರ
ತಿಟ್ಟತ್ತಿ ನಿತ್ತು ನೋಡ್ಯಾಳು

೭. ಕಣ್ಣು ಕಾಣುವ ತನಕ ಬೆನ್ನುಬಾಗುವ ತನಕ
ತವರೆನಗಿರಲಿ ಎಂದೆಂದೂ – ಎನ್ನಮ್ಮ

* * * *

ಎನ್ನಮ್ಮ ತವರು ಎನಗಿರಲಿ – ಎಂದೆಂದೂ

೮. ಸೀರಿಯ ಹರಿದರೆ ಸೇರಿಸಿ ಉಡಲಕ್ಕು
ಮಡದಿ ತಪ್ಪಿದರೆ ತರಲಕ್ಕು – ಅಣ್ಣಯ್ಯ
ಒಡಹುಟ್ಟಿನೆಲ್ಲಿ ತರುವುದು ॥

೯. ಕಾಸಂಡಿ ತೆಕ್ಕೊಂಡು ಕೈಲಿ ಕರಿಲಿಕ್ಹೋದಿ
ಏನೇ ಕೈಲಮ್ಮ ಒರಗಿದಿ – ನಿನ್ನೊಡ್ಯ
ಹಾಲಿಲ್ಲದೂಟ ಉಣಲಾರ್ರು ॥

* * * *

೧೦. ಬಾವನೂ ನೆಂಟನೂ ಕಾಂಬೂಕ್ಹೋಷಂಗ್ಹೆಣ್ಣ
ಕೋಡೊಡದು ಬಿದ್ದೊ ಗುರುಗಂಜಿ – ಬಾವಯ್ಯ
ಆ ಬಣ್ಣ ಹೆಣ್ಣ ತರಬೇಕು ।

* * * *

೧೧. ಆರೇಳು ದಂಡ್ಗಿಯೊಳ್ಗೆ ಹಗ್ಗದ್ ದಂಡ್ಗಿ ನಮ್ದು
ಗಾಳಿ ಮಾಮರದ ಹಲಗಿಯ – ದಂಡ್ಗಿಯೊಳ್ಗೆ
ಕಣ್ಣಿಗೊಪ್ಪಿದನೇ ಒರಗಿದ ॥

* * * *

೧೨. ಬಾಣಂತಿ ಮನಿಮುಂದೆ ಬಾಳಿಯ ನೆಟ್ಟದ್ದಿ
ಬಾಗ್ಲಿಗೆ ಬಾರೋ ಬಳಗಾರ – ನಮ್ಮನಿ
ಬಾಣಂತಿ ಕೈಗೆ ಬಳಿ ಇಡು ॥

* * * *

ಬಳಗಾರ ಬಾರೋ ಬಾಗ್ಲಿಗೆ – ನಮ್ಮಾನಿ

೧೩. ಸೂಳ್ಗಾರ ತಮ್ಮಯ್ಯ ಸೂಳಿಗೇನ್ ಕೊಟ್ಟಿದ್ದ್ಯೊ
ಕೊಟ್ಟಿ ಕಾಣಕ್ಕ ಸೆರಿಹೊನ್ನ – ಆ ಸೂಳಿ
ಮತ್ತೆ ಬೇಡಿದಳೆ ಕೆಮಿವಂಟಿ !

* * * *

ಕಾಣಕ್ಕ ಕೊಟ್ಟ ಸೆರಿಹೊನ್ನ – ಆ ಸೂಳಿ
ಬೇಡಿದಳಿ ಮತ್ತೆ ಕೆಮಿವಂಟಿ !

೧೪. ಬತ್ತವ ಕಡನ್ತೇಳು ಅಕ್ಕಿಯ ಕಡನ್ತೇಳು
ಮೆಂತಿ ಜೀರ್ಗಿಯ ಕಡನ್ತೇಳು – ಆದರೆ
ಮಡದಿಯ ಕಡವ ಕೊಡುದಿಲ್ಲೆ !

* * * *

೧೫. ಗಂಡ್‌ಬಿಟ್ ಗಜಾರಿನ್ ಕೊಂಡ್ಹೋಗೊ ಯಮರಾಯ
ನಂಗೆಲಯ್ಯ ಜಗದಂಡಿ – ಜಾಣರ ಸೂಳಿ
ಕೊಂಡೋದಿ ಯಲನೇ ಬೆಳಗ್ವಳು ॥

* * * *

ಎಡ್ಯಲಬ್ಬ್ಯೇ ನಂಗೆ ಜಗದಿಂಡಿ – ಜಾಣರ ಸೂಳಿ

೧೬. ಬೇಡತಿ ಬೇಡ್ವಳು ಬೇಡ್ದಿದ್ದ ವಸ್ತುವ
ದೇವರ ಕೊರಳ ಪದಕವ – ಬೇಡ್ವಳು
ಬೇಡತಿ ಅಲ್ಲ ಬಿಡು ಸೂಳಿ ॥

* * * *

ಬೇಡ್ವಳು ಕೊರಳ ಪದಕವ – ದೇವರೆ

೧೭. ಅಣ್ಣನ್ಹೆಂಡತಿ ಕೈಲಿ ತಂಗಳು ಉಣ್ಣಂಬಿ
ತಂದ ಮಲ್ಲಿಗೆನ ಮುಡಿಯೆಂಬು – ಅತ್ತಿಗಿ
ಉಂಡು ನೋಡೆಂಬಿ ಕೆಲಸವ ॥

* * * *

ಅಣ್ಣನೆಂಡತಿ ಕೈಲಿ ಉಣ್ಣಂಬಿ ತಂಗಳು
ಮುಡಿಯೆಂಬಿ ತಂದ ಮಲ್ಲಿಗಿನ – ಅತ್ತಿಗಿ

೧೮. ಉಂಬೂಕೆ ಕೂತ್‌ಮ್ಯಾಲೆ ಒಂಬತ್ತ್ ವಾಲಿ ಬಂತು
ಉಂಡು ಕೈಬಾಯ ತೊಳೆದಾಗ – ಸಂಕ್ರಯ್ಗೆ
ತೊರಬತ್ತಿನ್ ಸೂಳಿ ಜನುಬಂತು ॥

* * * *

ಕೈಬಾಯ ಉಂಡು ತೊಳಿದಾಗ – ಸಂಕ್ರಯ್ಗೆ

೧೯. ಬೆಳ್ಳಿ ಮುಕದಣ್ಣಯ್ಯ ಬೆಳ್ಗಾಪಗೇನ್ಬಂದಿ
ಮದ್ವಿ ಕಾಣ್ತಂಗಿ ಮನಿಯಲ್ಲಿ – ನೀನದ್ರ
ಕಳ್ಸ ಹಿಡೂಕೆಂದು ಕರಿಬಂದಿ ॥

* * * *

ಕಾಣ್ತಂಗಿ ಮದ್ವಿ ಮನಿಯಲ್ಲಿ – ನೀನದ್ರ

೨೦. ಅತ್ತ್ಯಮ್ಮ ಬಯ್ವುದ ಅಣ್ಣ ಕೇಳುತ ಬಂದ
ಬೀಳಿಗೆ ಕಾಯಿ ಹೊರಿಯೇನೇ – ಅತ್ತ್ಯಮ್ಮ
ಸಂಗ್ತೆ ತಂಗ್ಯಮ್ನ ಕಳುಗಿನಿ ॥

* * * *

ಅತ್ತ್ಯಮ್ಮ ಕಾಯಿ ಬೀಳಿಗೆ – ಹೊರಿಯೇನೇ

೨೧. ಹುಲ್ಲ್‌ಬತ್ತದಕ್ಕಿ ಕೂಳ್ ಹುಣ್ಸಿಹಣ್ಣಿನ್ ಬಜ್ಜಿ
ನೆರಮನಿ ನಾಗಪ್ಪ ಬಿದ್ದಿನ – ಉಣ್ಕಂತ
ಹೆಂಡ್ರ್ ಮಕ್ಕಳಿಗೂ ಹಾಕ್ಕಂತ – ನಾಗಪ್ಪ
ಬೆಳ್ಗಿಂಗೆ ತಂಗ್ಳು ಇಡ್ಕಂತ ॥

* * * *

ಹುಣ್ಸಿಹಣ್ಣಿನ್ ಬಜ್ಜಿ ಹುಲ್ಲ್‌ಬತ್ತಕ್ಕಿಕೂಳ್
ಉಣ್ಕಂತ ಮನಿಯ ಬಿದ್ದಿನ – ನಾಗಪ್ಪ

೨೨. ಹಕ್ಕಿ ಕೊಕ್ಕನ್ಹಕ್ಕಿ ಪಕ್ಕವಗೇಡಿ ಬಣ್ಣ
ಏರಿತುಪ್ಪರ್ಗಿ ಕಡುಮಾಡ – ಆ ಹಕ್ಕಿ
ಕುಕ್ಕಿತು ಮಾವ್ನ ಮಣಿತೋಳ ॥

* * * *

ಹಕ್ಕ್ಯೇರ್ತುಪ್ಪರ್ಗಿ ಕಡ್ಮಾಡ – ಆ ಹಕ್ಕಿ

೨೩. ಅಮ್ಮ ನಿಮ್ಮ್ ಕುಂಡಿ ಮಂದರ ಪರ್ವತು
ಹ್ಯಾಂಗ್ ಬಂದ್ರಿ ಅಮ್ಮ ನಡ್ಕಂಡ್ – ನಿಮ್ಮ
ಮಣಭಾರು ಕುಂಡಿ ಹೊತ್ಕಂಡ್ ॥

* * * *

ಅಮ್ಮ ಹ್ಯಾಂಗ್ ಬಂದ್ರಿ ನಡ್ಕಂಡ್ – ಮಣಭಾರು
ಅಮ್ಮ ನಿಮ್ಮ್ ಕುಂಡಿ ಹೊತ್ಕಂಡ್ ॥

೨೪. ಕಾಲ ಗಗ್ಗರದ ಕೀಲು ಜಾರಿತೆಂದು
ಬ್ಯಾಡ ತಮ್ಮಯ್ಯ ಒಳಊಂಟ – ನಿನ್‌ಮಾವ
ಕೀಲಿನ ಕೂಲಿ ತಾಳ್ಲಾರ್ನ?

* * * *

ಒಳ ಊಂಟ ಬ್ಯಾಡ ತಮ್ಮಯ್ಯ – ನಿನ್ನ್ ಮಾವ
೨೫. ಕೋಳಿಯ ಸಾಂಕೂದ್ ಬ್ಯಾಡಂದ್ರು ಕೇಣಳು
ಅಂಬರದ ಮ್ಯಾಲೆ ಗಿಡುಗನ – ಪಾಳ್ಯವ ಕಂಡು
ಕೋಳಿ ಸಾಂಕಣಿಯೆ ಕೈದಾಯ್ತು ॥

* * * *

ಪಾಳ್ಯವ ಕಂಡು ಅಂಬರದಡಿ – ಗಡುಗನ
೨೬. ತಿಂಗಳ ದೇವರು ಸಂಗಡ ಮೂಡುವ
ಬೆಳ್ಳಿ ಸಿಂಗರದ ಎಳಿತೆಗೆದು – ಅಣ್ಣಯ್ಯ
ಹೆಂಗಳ ತಾರೋ ಕೆಲಸಕ್ಕೆ ॥

* * * *

ಸಿಂಗರದ ಬೆಳ್ಳಿ ಎಳಿತೆಗೆದು – ಅಣ್ಣಯ್ಯ
೨೭. ಬಾಗಳ ಹೂಗಿಗೆ ಜಗಳು ಕಾಣ್ ಅಗಳೆ
ಮೂಡಿನ ಬಿಸಿಲಿಗೆ ಆಗಳೆ – ಅಣ್ಣಯ್ಯ
ಜಗಳಾದೊ ಮಡದಿ ತುರುಬಿಗೆ ॥

* * * *

ಬಾಗಳ ಹೂಗಿಗೆ ಆಗಳೆ ಕಣ್ ಜಗಳು
ಅಗಳೆ ಮೂಡು ಬಿಸಿಲಿಗೆ – ಅಣ್ಣಯ್ಯ
೨೮. ಒಂದಕ್ಕಿ ಬೆಂದಿತ್ತ್ ಒಂದಕ್ಕಿ ಬೇಯ್ಲಿಲ್ಲೆ
ಬೆಂಗರಿ ಸೌದಿ ಹಿಡಿಲಿಲ್ಲೆ – ಅಣ್ಣಯ್ಯ

* * * *

ಸೌದಿ ಬೆಂಗ್ರಿ [ದು) ಹಿಡಿಲಿಲ್ಲೆ – ಅಣ್ಣಯ್ಯ
೨೯. ಕಾಕಿ ಕರಗುಟ್ಟಿತ್ತು ಕಿಚ್ಚು ಸರುಗೆಯ್ಯಿತು
ಯಾವೂರಲ್ಲೇನೋ ಸಿವಬಲ್ಲ – ಹಣಿಯಲ್ಲಿ
ಯಾರಿಗರ ಆಯ್ಸು ಬರದನೋ ॥

* * * *

ಕರಗುಟ್ಟಿತು ಕಾಕಿ ಸರುಗೆಯ್ಯಿತು ಕಿಚ್ಚು
ಯಾ[ರೂ)ರಲ್ಲೇನೋ ಸಿವಬಲ್ಲ – ಹಣಿಯಲ್ಲಿ
೩೦. ಅಪ್ಪಯ್ಯ ತಂದದ್ದು ಭಾರಿ ಪಟ್ಟಿಯ ಸೀರಿ
ನಾನುಟ್ರೆ ತಂಗಿ ಮುನುವಳು – ಅಪ್ಪಯ್ಯ
ಹೇರಿಸಿ ತನ್ನಿ ಜವಳಿಯ ॥

* * * *

ಭಾರಿಪಟ್ಟೆಯ ಸೀರಿ ಅಪ್ಪಯ್ಯ ತಂದದ್ದು
[ಸೀರ‍್ಯಟ್ರೆ) ತಂಗಿ ಮುನುವಳು – ಅಪ್ಪಯ್ಯ
ಹೇರಿಸಿ ತನ್ನಿ ಜವಳಿಯೆ ॥

೩೧. ಒಡಿನಿಗೊಂದ್ ಹೇಳಿರೆ ಉಟ್‌ಪಟ್ಟಿ ಕೊಡುವರು
ಇನ್ನೊಂದ ಹೇಳಿ ಒಡತಿಗೂ – ವಿಮಲಮ್ಮೊ
ಮುಡಿದ ತಾವ್ರೀನೇ ಕೊಡುವರು ॥

* * * *

ಒಡತಿಗೂ ಹೇಳಿ ಇನ್ನೊಂದು – ವಿಜಲಮ್ಮೊ

೩೨. ಅಳಿಯ ಎಂಬವನ್ಯಾರು ಒಳಗೆ ಉಂಬವನ್ಯಾರು
ಗಂಧದ ಗಮನ ಒಳಗೆಲ್ಲ – ದೊಡ್ಡಬ್ಬಿ

* * * *

ಒಳಗೆಲ್ಲ ಗಮನ ಗಂಧದ – ದೊಡ್ಡಬ್ಬಿ

೩೩. ನುಗ್ಗಯ ಕಾಯ್ದಾಂಗೆ ಬಗ್ಗಿ ಬಾ ಜಲಜಮ್ಮ
ಗಬ್ಬಿಹತ್ತಿಗಿಯ ಒಡನಾಡಿ – ಜಲಜಮ್ಮ
ಬಗ್ಗಿ ಬಾ ಬಾಳಿಸುಳಿ ಹಾಂಗೆ ॥

* * * *

ನುಗ್ಗಿಯ ಕಾಯ್ದಾಂಗೆ ಗಬ್ಬಿಯತ್ತಿಗಿಯ
ಬಗ್ಗಿ ಬಾ ಜಲಜ ಒಡನಾಡಿ – ಜಲಜಮ್ಮ

೩೪. ಉಂಗಿಲ್‌ಕೈ ಮಂಜಯ್ಯ ಉಂಡೆಲಿ ಮೆಲುವಂಗೆ
ತಂಬ್ಲ ಬೇಡಿದಳು ನಿನ್ನ್ ತಂಗಿ – ಗಿರಿಜಮ್ಮ
ಅಂಗೈಗೆ ಉಗಿದ ಸರಿಹೊನ್ನ!

* * * *

ತಂಗಿ ಬೇಡಿದಳು ತಂಬುಲವ – ಗಿರಿಜಮ್ಮ

೩೫. ಅಕ್ಕಿಯ ಕಲ್ಹೆಕ್ಕಿ ಅಂಗ್ಣದಲ್ ಕೆಡಿಬ್ಯಾಡ
ಮಾಯಿಗುತ್ತರವ ಕೊಡಬ್ಯಾಡ – ಸಂಕಮ್ಮ
ಹೆತ್ತ ಮಗಳೆಂದೇ ಸಲಗುವರು ॥

* * * *

ಅತ್ತ ಕೆಡಿಯಲು ಬ್ಯಾಡ ಅಕ್ಕಿಯ ಕಲ್ಹೆಕ್ಕಿ
ಉತ್ತರವ ಮಾಯ್ಗೆ ಕೊಂಡ್ಯಾಡ – ಸಂಕಮ್ಮ
ಹೆತ್ತ ಮಗಳೆಂದೇ ಸಲಗುವರು ॥

೩೬. ವಾಲಿ ವಾಲಿಗೆ ಶರಣು ವಾಲಿ ಕಂಟಕ ಶರಣು
ವಾಲಿ ಓದ್ದುವ ಐಗ್ಳ್ಪಾದಕ ಶರಣು
ಬಾರೊ ಭಾರತವ ಕಲ್ತ್ಕಂಬೋ ॥

* * * *

ಕಲ್ತ್ಕಂಬೋ ಬಾರೊ ಭಾರತವ ॥

೩೭. ನೆನಿಯಕ್ಕಿ ನೆನಿಗಡುಬು ಕೊನಿಬಾಳಿಯ ಹಣ್ಣು
ನೆನಿವಳಾ ತಾಯಿ ನೆನಿಯಳಾ – ಕುಂದಾಪ್ರಿಲಿ
ಹೋಗ್ದಿದ್ರೆ ಜನುನ ಕಳುಹೂಳು ॥

* * * *

ಜನುನ ಹೋಗ್ದಿದ್ರೆ ಕಳುಹೂಳು ॥

೩೮. ತಾಯ್ನನ್ನಬ್ಬಿಗೆ ಜಾನವು ನನ್ಮ್ಯಾಲೆ
ಜೀನಸು ತುಂಬಿ ಹಡಗಿಗೆ – ಕುಂದಾಪ್ಡ್
ಮಗಳಿಗೆ ಜಾನ್ಸಿ ಕಳುಹೂಳು ॥

* * * *

ಜಾನ್ಸಿ ಮಗಳಿಗೆ ಕಳುಹೂಳು ॥

೩೯. ಹುಂಡಿ ಕರುಹಾಕಿರೆ ಹಂಡಿಲ ಕರಿವನು
ಹುಂಡಿಯ ಮಗಳೆ ಬಯ್ಲ್ಮಂಡಿ – ಕರುಹಾಕೀರ್
ಬೆಳ್ಳಿ ಗಿಂಡ್ಗಿಲಿಕರಿವೆನು ॥

* * * *

ಗಿಂಡ್ಗಿ ಬೆಳ್ಳಲಿ ಕರಿದನು ॥

೪೦. ಅತ್ತಿತ್ತ ನೋಡಿದರೂ ಅತ್ತೆಮ್ಮೆ ಮಗನಿಲ್ಲೆ
ಮುತ್ತಿನ ಕ್ವಾಣಿ ಗೆಲುವಿಲ್ಲೆ – ಅತ್ತೆಮ್ಮೆ
ದಾಂಟ್ನಿ ನನ್ನನ್ನು ತೌರಿಗೆ ॥

* * * *

ಮುತ್ತಿನ ಕ್ವಾಣಿ ಗೆಲುವಿಲ್ಲೆ – ನನ್ನನ್ನು
ಅತ್ತೆಮ್ಮ ದಾಂಟ್ಸಿ ತೌರಿಗೆ ॥

೪೧. ದಂಡಿನ ಹಾದಿಲಿ ಗೊಂಡಿಯ ಮಾರೋಳ
ಕೊಂಡುಕೊಂಡೇನು ಬೆಲಿ ಹೇಳೆ – ಮಾವ್ನ್‌ಮಗಳೆ
ತಂದುಕೊಂಡೇನು ತೆರುಹೇಳೆ ॥

* * * *

ಕೊಂಡೇನು ತಂದು ತೆರುಹೇಳೆ ॥

೪೨. ನುರಿನುರಿಬತ್ತಕೆ ಬೆರಗಾಪ್ರಿ ನೀವ್ಯಾಕೆ
ಕರುಬಕ್ಕಂಗಣನೆ ನಿಸುಬುಕ್ಕ್ – ಎಲೆಸ್ವಾಮಿ
ನೀಂವ್ ಒಪ್ರಿ ಮ್ಯಾಟಿ ಬಲದಿಗೂ ॥

* * * *

ಬಲದಿಗೂ ಒಬ್ಬ ಮ್ಯಾಟಿ [ಯ] ॥

೪೩. ಹಗ್ಲಿಗೆ ದರ್ಗಮ ಬ್ಯಾಟಿ ದಾತ್ರಿಗೆ ಮುರುಗನ ಬ್ಯಾಟಿ
ಸಾರಂಗ್ದ ಬ್ಯಾಟಿ ಸನಿವಾರೊ – ಅಣ್ಣಪ್ಗೆ
ನಿತ್ಯವೂ ಬ್ಯಾಟ ನೆರಮನಿ ॥

* * * *

ಹರ್ಗನ ಬ್ಯಟ ಹಗ್ಲಿಗೆ ಮುರುಗ ಬ್ಯಾಟಿ ದಾತ್ರಿಗೆ
ಸಾರಂಧ್ಧ .... ಸನಿವಾರೊ – ಅಣ್ಣಪ್ಗ
ನೆರಮನಿ .... ನಿತ್ಯವೂ ॥

೪೪. ಕಾಳಿಂಗ್ದ ಕಂಡು ತೋಳ್ಗೆ ಬಂದಿಯ ಮಾಡಿ
ಸೂಳಿಗ್ ಭೋಜಯ್ಯ ಕಳುಹಿದ – ಆ ಸೂಳಿ
ಏ ಜಾಣನೆಂದು ಕರದಳು ॥

* * * *

ಸೂಳಿಗ್ ಭೋಜಯ್ಯ ಕಳುಹಿದ – ಆ ಸೂಳಿ
ಜಾನ ಏನೆಂದು ಕರದಳು ॥

೪೫. ಹೊಳಿಯ ಹತ್ತಿರ ಹೋಯಿ ಎಳಿಯ ಸೂಳಿಯ .....
ಇಳಿಯಬೇಕೆಂಬ ಕುದುರಿನ – ಅಣ್ಣಯ್ಯ
ಸೆರಗ ಬಿಡೆಂಬ ಮಡದಿನ ॥

* * * *

ಮಡದಿನ ಸೆರಗ ಬಿಡು ಎಂಬ ॥

೪೬. ಬತ್ತು ತೊಳು ಗೆಯ್ದಿಗೆ ಬಪ್ಪವ್ರ್ ಗಡಿಯಿಲ್ಲೆ
ಅತ್ತ್ ಕಾಣ್ ಗಿರಿಜಾ ನಿನ್ನ್ ಗಂಡ–ಚಂದಯ್ಯ
ಚಂಡಿ ಕಟ್ಟಿದನೆ ಹದಿನಾರು ॥

* * * *

ಕಟ್ಟಿದನೆ ಚಂಡಿ ಹದಿನಾರು ॥

೪೭. ಅಕ್ಕನ ಕೊಟ್ಟಿತ್ತು ಮಕ್ಕಿಲಿ ಬಿಟ್ಟಿತ್ತು
ಹೊಟ್ಕಣ್ಣೆಮ್ಮಿ ಬಳುವಳಿ – ಕೊಟ್ಟರೂ
ಮತ್ತ್ಯಾಕೆ ಬಂದೆ ಮರ್ಲ್‌ಭಾವ?

* * * *

ಯಾಕ್ ಮತ್ತೆ ಬಂದ ಮರ್ಲ್‌ಭಾವ?

೪೮. ಸುಬ್ರಾಯರೆಂಬರಿಗೆ ಇಬ್ಬರು ಹೆಂಡರು
ಸಿಬ್ಬಲು ಮಂಡಿ ಸಿರಿಬಾಯಿ – ಅದ್ರಿಬ್ರೇ
ಬಡಗ್ಹೋಗು ದಂಡ್ನ ತಡೆದರು !

* * * *

ಸಿಬ್ಬಲು ಮಂಡಿ ಸಿರಿಬಾಯಿ – [ಆ ಹೆಂಡ್ರು]
ಇಬ್ಬರೇ ದಂಡ್ನ ತಡೆದರು !

* * * *

೪೯. ಹಾಡ್ ನಿಂಗೆ ಬಾರದ ಹಾಡ್ ನಿಂಗೆ ಸೊಲ್ಲದ
ಹಾಡ್ಹೇಳಿರ್ ಮುತ್ತು ಉದುಂದ – ಗಿರಿಜಮ್ಮ
ಆ ಮುತ್ತು ನಿನ್ನ ಕೊರ್ಳಿಗೆ ॥

* * * *

[ಹಾಡಿನ] ಮುತ್ತು ಕೊರ್ಳಿಗೆ ॥

೫೦. ಅಣ್ಣನು ಇಲ್ಲೆಂದು ಮಣ್ಣಿನಣ್ಣನ ಮಾಡ್ಯೆ
ಮಳಿ ಬಂದಲ್ಲಣ್ಣ ತೊಳ್ದ್ ಹ್ವಾದ !

* * * *

ಅಣ್ಣ ಮಳಿಬಂದಲ್ಲ್ ತೊಳ್ದ್ ಹ್ವಾದ !

೫೧. ಗಂಡಸತ್ತಮ್ಯಾಲೆ ರಂಡಿತನದ ಸಿರಿಯ
ಸುಡಬೇಕು ಏನು ಆದ್ರೇನು – ಅಜೀಂವ
ಬಿಟ್ಟ ಬಂಡಿ ಇದ್ಹಾಂಗೆ ॥

* * * *

ಬಂಡಿಯ ಬಿಚ್ಚಿ ಇಟ್ಹಾಂಗೆ ॥

೫೨. ಯಾರಿಂದೇನಾಪುದು ಯಾರಿಂದನ್ಪೋಪುದು
ಪೂರ್ವದಲಿ ನನ್ನ ಹಣೆಮ್ಯಾಲೆ – ಇಧಿದೇವ್ತಿ
ಯಾವ ಇಧದಲ್ಲಿ ಬರೆದಳೋ ॥

* * * *

ಬರದಳೋ ಯಾವ ಇಧದಲ್ಲಿ ॥

೫೩. ಈ ಸುಟ್ಟ ಜೀಂವನ ಎಲ್ಲಾದ್ರೂ ಮಣ್ಮಾಡಿ
ಚಣ್ಣಕ್ಕಿ ಬೆಳೆವ ಭೂಮಿಲಿ – ಅಣ್ಣಯ್ಯ
ಮಣ್ಮಾಡು ಒಳ್ಳಿ ಗಳ್ಗಿಲಿ ॥

೫೪. ನಾಕುಲೋಕದ ಮುತ್ತೆ ಯಾಕಿನ್ನೂ ಬರಲಿಲ್ಲೆ
ನಾಕುಸಮುದ್ರ ಹಡಗಿನ – ಒಳಗಿಪ್ಪ
ಮಗನೆ ಇನ್ನ್ಯಾಎ ಬರಲಿಲ್ಲೆ ॥

* * * *

ಯಾಕಿನ್ನೂ ಮಗನು ಬರಲಿಲ್ಲೆ ॥

೫೫. ನಾಡೆಲ್ಲ ಬಲ್ಲಿದೊ ಯಾಜ್ಜಗಾರತಿಯೆಂದು
ಆಡುವ ಮಗಿನ ತೊಟ್ಲಗೆ – ನಿಲ್ಸೀ
ಯಾಜ್ಜಕ್ ಮೂರ್ ಮನಿಗೆ ನಡೆದಳು ॥

* * * *

ನಡದಳು ಯಾಜ್ಜಕ್ ಮೂರ್‌ಮನಿಗೆ ॥

೫೬. ಹಾಲುಪಾಯಸು ಮಾಡಿ ಹರವಾಯಿ ಮುಚ್ಚಿಟ್ಟು
ನಾರಾಯಣ ಸ್ವಾಮಿ ಬರುನೋಡಿ – ಬಾರ್ದಿರ
ಓದೂ ಜಗನಾತ್ನ ಕಳಿಸುವಿ ॥

* * * *

ಕಳಿಸುವಿ ಓದೂ ಜಗನಾತ್ನ ॥

೫೭. ಲಿಂಬಿಯ ಮರನಡಿ ಗೊಂಬಿಯ ಋತುವಾಯಿ
ಲಿಂಬಿ ಹೇಳಿಕಿ ಬಾ ಒಡಿಯಂಗೆ – ಗೋಯಿಂದ್ಗೆ
ನೀಂವ್ ನೆಟ್ಟ ಲಿಂಬಿ ಫಲಬಂತು !

* * * *

ಲಿಂಬಿ ನೀಂವ್ ನೆಟ್ಟು ಫಲಬಂತು !

೫೮. ಅಕ್ಕತಂಗ್ಯರು ನಾವು ಅಂಗ್ಣದಲೋರ್ಲ್ ಹೂಡಿ
ಚಿಕ್ಕ ಚಿಕ್ಕಣದ ಬಲಿಗಿಯ – ಹಿಡ್ಕಂಡ್
ಗೊಂಬಿ ಸಾಲಕ್ಕಿ ತೊಳ್ಸುವ ॥

* * * *

ಅಕ್ಕಿ ಸಾಲ್ಗೊಂಬಿ ತೊಳ್ಸುವ ॥

೫೯. ಅಪ್ಪಯ್ನ ಮನಿಯಲಿ ಎಪ್ಪತ್ತ್ ಚೆನ್ನಿಮಣಿ
ಎಪ್ಪತ್ತೇಳ್ ಮಂದಿ ಗೆಣಿಯರು – ಅಪ್ಪಯ್ಯ
ನಿನ್ನ್ ಬಿಟ್ಟಕಿ ನಾನ್ ಇರ್ಲಾರಿ ॥

* * * *

ಎಪ್ಪತ್ತೇಳ್ ಮಂದಿ ಗೆಣಿಯರು – ನಾನಿನ್ನ
ಅಪ್ಪಯ್ಯ ಬಿಟ್ಟು ಇರ್ಲಾರಿ ॥

೬೦. ಕಾಡಿಗಿ ಕಣ್ಣಳ ರೂಡಿ ಗಿರಿಜಮ್ಮನ
ಬೇಡಿಳ್ ಬೆರ್ಮರದ ಅರಸಿಗೆ – ಅಪ್ಪ್ಯಮಾವ
ದಾರಿ ದೂರೆಂದು ಕೊಡಿ ಎಂಬ ॥

* * * *

ಕೊಡಿ ಎಂಬ ದಾರಿ ದೂರೆಂದು ॥

೬೧. ಮಂದರ್ತಿ ಮಾದೇವಿ ಮುಂದಕ್ಕೆ ನಾ ಬತ್ತಿ
ಮುಂದ್ಹುಟ್ಟಿದ್ಮಗನ ಕರ್ಕಂಡ್ – ಮಂದರ್ತಿ
ಗೆಂಡಕ್ಕ್ ಸುಮ್ನಾಯಿ ಬರುವೆನು ॥

* * * *

ಮುಂದ್ಹುಟ್ಟಿದ್ಮಗನ ಕರ್ಕಂಡ್ – ಸಮನಾಯಿ
ಮಂದರ್ತಿ ಗೆಂಡ್ಕೆ ಬರುವೆನು ॥

೬೨. ಹೆಣ್ಣ ಕೇಂಬೂಕ್ ಬಂದವ್ರ ಹೆರಗ್ಯಾಕೆ ನಿತ್ತಿರಿ
ಬೆಳ್ಳಿ ತಬಕಿಲಿ ಬೆಳಿಎಲಿ – ನಮ್ಮಣ್ಣಾ
ಕೂತು ಮಾತಾಡಿ ಮೆಲಿದ್ಹೋಯ್ನಿ ॥

* * * *

ಮೆಲಿದ್ಹೋಯ್ನಿ ಕೂತು ಮಾತಾಡಿ ॥

೬೩. ಕಾಳೂರ ಹರ್ಕಿನ ಕೇಳಿದ್ಯಾ ತಂಗ್ಯಮ್ಮ
ಕೇಳಲಿಲ್ಲಕ್ಕ ತೆಗ್ದ್‌ಹೇಳು – ಕಾಳೂರಿಗ್
ಕೊಂತದ ಕಾಯಿ ಕೊನಿಬೆಂಡ ॥

* * * *

ಕೇಳಲಿಲ್ಲಕ್ಕ ತೆಗ್ದ್ ಹೇಳು–ಕೊಂತದ
ಕಾಳೂರಿಗ್ ಕಾಯಿ ಕೊನಿಬೇಡ ॥

೬೪. ಕಡಿಯಕ್ಕಿ ಕೂಳ್ ಚೆಂದೊ ಕಡೆದ ಮಜ್ಜಿಗಿ ಚೆಂದೊ
ಕಡ್ಲಲಿ ಬಪ್ಪ ತೆರಿಚೆಂದೊ – ಬಸುರೂರ
ಸಣ್ಣ ಸೂಳೇರ ನೆರಿ ಚೆಂದೊ ॥

* * * *

ಸೂಳೇರ ಸಣ್ಣ ನೆರಿಚೆಂದೊ ॥

೬೫. ಹಾಡಿನ ದ್ವನಿ ಕೇಂಡ್ ಬೀಡಿಗ್ಹೋದ್ ಅಣ್ಣಂದ
ಹಾಡ್ಹೇಳೆ ತಂಗಿ ದ್ವನಿ ಸುದ್ದೊ – ಉಡುಪಿಯ
ಕಿಷ್ಟ ದೇವ್ರು ಕೊಳಲು ಉರ್ಗ್ಗಾಣ್ಗೆ ॥

* * * *

ಕೊಳಲು ಕಿಷ್ಟದೇವ್ರು ಉರ್ಸ್ಸುದ್ದಾಂಗೆ ॥

೬೬. ಸಾಸ್ಮಿ ತ್ವಾರದ ಚೆನ್ನು ಸೂಸ್ಮದ ಒರಗಲ್ಲು
ನೂತ್ನದಕ್ವಾಲಿ ಗೆಯ್ದ್ದಕ್ಕಡು – ಗಿಜ್ಜಿತಿಕ್ಕೂ
ಗಿಡ್ಡ ಬಸ್ವಮ್ನ ಕೊರ್ಲಿಗೆ ॥

* * * *

ಬಸ್ವಮ್ನ ಗಿಡ್ಡ ಕೊರ್ಲಿಗೆ ॥

* * * * *